

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ …… ವ್ಹಿ. ಪಿ. ಯಿಂದ ೩-೫-೦ …… ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಜನವರಿ ೧೯೪೦	೯ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಈ ಸಲದ ಕ. ಸಾ. ಸಮ್ಮೇಳನದ ಅಧ್ಯಕ್ಷರು (ಮೇಲೋಲೆಯ ಚಿತ್ರ)	.. ..	ಮೇಲೋಲೆ
ಕುಣಿತದ ಹೆಣ್ಣಿಗೆ (ವಿಚಾರತರಂಗ)	ಶ್ರೀ. ' ಸಾಮಾಜಿಕ '	೫೬೯
ನರ್ತನದ ಒಂದು ಭಂಗಿ (ಚಿತ್ರ)	ಶ್ರೀ. ಬಾಬಲಿ, ಹೈದರಾಬಾದ'	೫೬೯
ಸಂಪಾದಕೀಯ	ಸಂಪಾದಕರು	೫೭೦
ಮಂಗಸ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೫೭೧
ವಿನ್‍ಸ್ಟನ್ ಚರ್ಚಿಲ್ (ವ್ಯಕ್ತಿ ಪರಿಚಯ)	ಶ್ರೀ. ' ಚಾರ್‌ಮಿಸಿಯ ನೆರಂಗ್ '	೫೭೩
ಕಿವಿಮಾತು	ಸಂಪಾದಕ ಮಂಡಲಿ	೫೭೬
ಹೋರಿಕರು ಎತ್ತಾಗದೆ? (ಸಣ್ಣ ಕಥೆ)	ಶ್ರೀ. ಬಿ. ಕೆ. ರಾಮಚಂದ್ರರಾವ್ ಬಿ.ಎ., ಎಲ್‌ಎಲ್.ಬಿ.	೫೭೭
ನಾನು ಕಂಡ ತಿರುವಾಂಕೂರು (ಪ್ರದೇಶ ಪರಿಚಯ)	ಶ್ರೀ. ಬನ್ನಂಜೆ ರಾಮಾಚಾರ್ಯರು	೫೮೧
ಕ್ರಿಮಿಕುಲ ವಿಮರ್ಶೆ (ಕವನ)	ಶ್ರೀ. ' ಆನಂದಕಂದ '	೫೮೪
ಹೀಗೂ ಉಂಟೇ? (ಸಣ್ಣಕಥೆ)	ಶ್ರೀಮತಿ ಟಿ. ವಿ. ಸರ್ವಮಂಗಳಾಂಬಾ	೫೮೫
ಪಂಚಾಂಗ ಪರಿಚಯ (ಜಾತಕ ಸಿದ್ಧಾಂತ)	ವಿದ್ವಾನ್ ಎಂ. ಜಿ. ವೆಂಕಟೇಶಯ್ಯ ಎಂ. ಎ.	೫೮೯
ಅಮೃತಮಥನ (ಕವನ)	ಶ್ರೀ. ಶ್ರೀಧರಶರ್ಮ ಮೈಸೂರು	೫೯೨
ಮಳೆ (ಕವನ)	ಶ್ರೀ. ' ಶ್ರೀಹರ್ಷ '	೫೯೨
ದೇಶಭ್ರಷ್ಟರು (ಸಣ್ಣ ಕಥೆ)	ಶ್ರೀ. ' ಕುಮಾರ ಮಾಧವ '	೫೯೩
ಕರ್ನಾಟಕದಲ್ಲಿ ಮರದ ಕೈಗಾರಿಕೆ (ಪರಿಚಯಾತ್ಮಕ)	ಶ್ರೀ. ಎ. ಎನ್. ಸುಬ್ಬರಾವ, ಕಲಾಮಂದಿರ	೫೯೭
ಕನ್ನಡಿಗನ ಹುಚ್ಚು (ನಡೆದಸಂಗತಿಯೊಂದು)	ಶ್ರೀ. ಇನಾಮತಿ ಹನುಮಂತರಾಯರು, ಮುಂಬೈ	೫೯೯
ಪುನಃಪೂಜಾ (ಸಣ್ಣ ಕಥೆ)	ಶ್ರೀ. ಎಚ್. ಎ. ಭಟ್ ಬಿ. ಎಸ್‌ಸಿ.	೬೦೩
ಮುದವೀಡು ಕೃಷ್ಣರಾಯರ ಸಾಹಿತ್ಯಸಾಮರ್ಥ್ಯ (ಪರಿಚಯಾತ್ಮಕ)	ಶ್ರೀ. ಚಿಕ್ಕೋಡಿ ಅನಂತರಾಯರು	೬೦೭
ಕನಕಾಚಾರ್ಯರು ಕಮ್ಯೂನಿಸ್ಟರಾದರೆ? (ಸ್ವಲ್ಪದರಲ್ಲಿ ಸ್ವಾರಸ್ಯ)	ಶ್ರೀ. ' ಶ್ರೀರಂಗ '	೬೧೧
ಪುಸ್ತಕವಿಮರ್ಶೆ	ಬೇರೆ ಬೇರೆ ವಿಮರ್ಶಕರು	೬೧೩
ಸಾದರಸ್ವೀಕಾರ	.. ..	೬೧೬
ನಗೀಗೆ ನೇವಿದ್ಯ	ಶ್ರೀ. ' ಸಕಲೇ ನಾರಾಯಣಾಚಾರಿ '	೬೧೭
ಜೋಡುಗುಂಡಿಯ ಅಂಗಿ (ಕೊಲಿಗೆಯ ಲೇಖನ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.	೬೨೦
ನಾಲ್ಕು ನಿಟ್ಟಿನ ನೋಟ	' ನಿರೀಕ್ಷಕರು '	೬೨೧
ಕನ್ನಡಿಗರ ಕೀರ್ತಿ	.. .. ..	೬೨೪

ಸಂಚಿಕೆ ೯
ಜನವರಿ



ವರ್ಷ ೨
೧೯೪೦

ಕುಣಿತದ ಹೆಣ್ಣಿಗೆ

ಕುಣಿತದ ಹೆಣ್ಣೆ, ಎಷ್ಟೊಂದು ಚೆನ್ನಾಗಿ ಕುಣಿವೆ ನೀನು? ನಿಲುವಿನ ರೀತಿಗಳೇನು, ಚೆಲುವಿನ ಹಾವ-ಭಾವಗಳೇನು, ಗೆಲುವಿನ ನಗೆ-ಮುಗುಳೇನು, ಯಾರ ಮನವನ್ನೂ ಸೂರೆಮಾಡಿ ಮೈಯ ಮರೆಯಿಸುವಂತಿವೆ!

ನಿನ್ನ ಚೆಲುವಿಕೆ ಕಣ್ಣ ಸೆಳೆಯುತ್ತಿದೆ; ನಿನ್ನ ಸಾಭಿನಯ ಸುಮಧುರ ಗೀತ-ಝಿಲ್ಲಾಣಗಳು ಕಿವಿಗಳನ್ನು ಎಳೆಯುತ್ತಲಿವೆ; ಅಡಿಯ ಪೆಂಡೆಯದ ಉಲುಹು ಗಂಡೆದೆಯನ್ನೂ ದಿಂಡುಗೆಡಿಸುತ್ತಲಿದೆ.

ಯಾರಿಗಾಗಿ ನಿನ್ನ ಈ ಕುಣಿತ, ಯಾರಿಗಾಗಿ ನಿನ್ನ ಈ ಮಣಿತ? ಈ ಕುಣಿತ ನಿನ್ನನ್ನು ನಿನ್ನ ಗುರಿಯ ಬಳಿ ಒಯ್ಯುವುದೆ? ನಿಂತಲ್ಲಿಯೆ ನಿಲ್ಲಿಸುವ ಕುಣಿತವಿದು ನಿನ್ನನ್ನು ಮುಂದುವರಿಯೆ ಬಿಡುವುದಾದರೂ ಎಲ್ಲಿ?

ಹೆಜ್ಜೆಗಳಿಗೊಂದು ಗತಿಯಿದೆ; ಕೈ-ಮೈ ಅಲ್ಲಾಡಿ ಚೈತನ್ಯವನ್ನು ಸೂಚಿಸುತ್ತಿವೆ. ಹಾಡುತಿರುವ ಗೀತ ಸಂಸ್ಕಾರವನ್ನು ಹೊರಹೊಮ್ಮಿಸುತ್ತಿದೆ. ಆದರೆ ನಿನ್ನ ಬದುಕಿಗಿರುವ ಮುಂದುವರಿತವೆ ಯಾರಿಗೂ ತೋರದಿದೆ!

ಬದುಕಿನ ಕೊನೆಯ ವರೆಗೂ ಕುಣಿಯುತ್ತ ನಿಲ್ಲುವುದೆ ನಿನ್ನ ಗುರಿಯೆ! ಆದರೆ ಮೈಯ ಹಸಿವು ನಿನ್ನ ಗುರಿಯನ್ನು ಮರೆಮಾಡಬಹುದಲ್ಲ! ಮೈಯ ಹಸಿವನ್ನು ಕಳೆಯುವ ಶಕ್ತಿ ನಿನ್ನ ಕುಣಿತದಲ್ಲಿದ್ದರೆ, ಕಲಿಸು—ಜೀವಕುಲಕ್ಕೆಲ್ಲ ಕಲಿಸು ನಿನ್ನ ಕುಣಿತದ ಕಲೆಯನ್ನು!

ಏನು? ನಿನ್ನ ಕುಣಿತದಲ್ಲಿ ಹಸಿವನ್ನು ಹರಿಯಿಸುವ ಶಕ್ತಿಯಿರದಿದ್ದರೂ ಮರೆಯಿಸುವ ಶಕ್ತಿಯಿದೆಯೆನ್ನುವೆಯೆ? ಸರಿ, ಆದರೆ ಬದುಕಿ-ಬಾಳಬೇಕಾದ ಜೀವಕುಲ ಹಸಿವನ್ನು ಎಷ್ಟು ವೇಳೆ ಮರೆತೀತು? ಕುಣಿತದಾಶೆಗಿಂತಲೂ ಕೂಳಿನಾಶೆ ಹಿರಿಯದು! ಯಾವುದೂ ಅದನ್ನು ಹರಿಯಿಸಲಾರದು. ಅನ್ನವಿದ್ದಾಗಲ್ಲವೆ ತನ್ನಾನಾ ತೋಂ?

ನರ್ತನದ ಒಂದು ಭಂಗಿ

...ನೃತ್ಯಲಾಸ್ಯದಿನಾರನೊಲಿಸುತಿರುವೆ?



ಕನ್ನಡ ಪತ್ರಿಕೆಗಳಿಗಿರುವ ತೊಂದರೆಗಳು

ಹಿಂದೊಮ್ಮೆ ಇದೇ ವಿಷಯವನ್ನೆತ್ತಿ ಬರೆಯುವಾಗ ಕರ್ಣಾಟಕದ ಛಿನ್ನ-ವಿಛ್ಛಿನ್ನತೆಯ ಮೊದಲನೆಯ ಮುಖ್ಯ ಕಾರಣವನ್ನೆತ್ತಿ ಹೇಳಲಾಗಿದ್ದಿತು. ಈಗ ಇನ್ನೊಂದು ಮುಖ್ಯ ಕಾರಣವನ್ನೆತ್ತಿ ಹೇಳಬೇಕೆಂದಿದ್ದೇವೆ.

> 'ರಾಮಾನುಜಾಚಾರ್ಯ, ಶಂಕರಾಚಾರ್ಯ, ಜಿನ,
> ಶ್ರೀಮಧ್ವಾನಂದತೀರ್ಥಾಚಾರ್ಯರು,
> ಆ ಮಹಾ ಬಸವೇಶ್ವರಾದಿ ಸದ್ಗುರುವರರು
> ಹೇ ಮಾತೆ ನಿನ್ನುದರದಲ್ಲಿ ಜನಿಸಿಹರೆ !'

ಎಂದು ನಾವಿಂದು ಅಭಿಮಾನದಿಂದ ಕನ್ನಡ ತಾಯಿಯನ್ನು ಕೊಂಡಾಡುತ್ತಿದ್ದರೂ, ಇಂದಿನ ನಮ್ಮ ನಾಡಿನ ಹೃದಯ-ಭಿನ್ನತೆಯ ದುರ್ದಶೆಯನ್ನು ನೋಡುತಿರುವಾಗ, ಉದ್ವೇಗಗೊಂಡು 'ಅಯ್ಯೋ ! ಆ ಮತಾಚಾರ್ಯರೆಲ್ಲ ಕನ್ನಡನಾಡಿನಲ್ಲಿಯೆ ಏಕೆ ಹುಟ್ಟಿಬೆಳೆದರೊ!' ಎಂದು ವಿಷಾದಪಡಬೇಕಾಗಿದೆ. ಏಕೆಂದರೆ ಸಂಪ್ರದಾಯ, ಮತಾಚಾರದ ಅಂಧಾನುಕರಣಗಳ ಮೂಲಕ, ಬೇರೆಬೇರೆ ಮತಾನುವರ್ತಿಗಳಲ್ಲಿ — ಅವರು ಎಷ್ಟೊಂದು ಸುಶಿಕ್ಷಿತರೆನಿಸಿಕೊಳ್ಳುತ್ತಿದ್ದರೂ—ಪರಸ್ಪರ ಸೌಮನಸ್ಯಕ್ಕೆ ಅವಕಾಶವೆ ಇಲ್ಲವಾಗಿದೆ. ಬ್ರಾಹ್ಮಣರು ಹೊರಡಿಸಿದ ಕನ್ನಡ ಪತ್ರಿಕೆಗೆ ಬ್ರಾಹ್ಮಣೇತರರಿಂದ ಸಹಾಯ ಸಿಕ್ಕುವಂತಿಲ್ಲ; ಬ್ರಾಹ್ಮಣೇತರರು ಹೊರಡಿಸಿದ ಪತ್ರಿಕೆಗಳನ್ನು ಬ್ರಾಹ್ಮಣರ ಕೈಮುಟ್ಟುವಂತಿಲ್ಲ. ಬ್ರಾಹ್ಮಣರಲ್ಲಿ ಬಹುಸಂಖ್ಯಾಕರು ಸಾಕ್ಷರರಿದ್ದರೂ, ಅವರಲ್ಲಿ ಬಡತನ ಹೆಚ್ಚು; ಹೊಸ ಕಾಲದಲ್ಲಿಯೂ ಹಳೆಯ ರೀತಿ-ನೀತಿಗಳನ್ನೆ ಕಾಯ್ದುಕೊಂಡು ಹೋಗಬೇಕೆಂಬ ಪೂರ್ವಾಚಾರ ಪ್ರೀತಿ ಹೆಚ್ಚು! ಓದಬೇಕೆಂದು ಮನಸ್ಸಿದ್ದ ಅನೇಕರಿಗೆ ದುಡ್ಡಿನ ಅನುಕೂಲತೆಯಿರದು. ದುಡ್ಡಿನ ಅನುಕೂಲತೆಯಿರುವ ಕೆಲವೆ ಜನರಿಗೆ ಓದಬೇಕೆಂಬ ಬುದ್ಧಿಯಿರದು. ಏನಿದ್ದ ಜಗತ್ತಿನ ರಹಸ್ಯವೆಲ್ಲ ನಮ್ಮ ಸನಾತನ ಗ್ರಂಥಗಳಲ್ಲಿದೆ; ಹೊಸ ಕಾಲದ ಲೇಖಕರು ಹೆಚ್ಚಿನದೇನನ್ನು ಹೇಳಬಲ್ಲರೆಂಬ ಆಚಾರ್ಯ-ಭಟ್ಟ ಮನೋವೃತ್ತಿಯೂ ಬ್ರಾಹ್ಮಣರಲ್ಲಿ ಸಾಕಷ್ಟು ಕೆಲಸ ಮಾಡುತ್ತಲಿದೆ. ಇಷ್ಟೇ ಅಲ್ಲದೇ ಬ್ರಾಹ್ಮಣರಲ್ಲಿಯೂ ಮತ್ತೆ ಸ್ಮಾರ್ತ-ವೈಷ್ಣವ-ಶ್ರೀವೈಷ್ಣವ ಭೇದಗಳು. ಈ ಭೇದದ ಮುಳ್ಳುಬೇಲಿಗಳು ಎಲ್ಲರ ಎದೆಯಲ್ಲಿಯೂ ಸಾಕಷ್ಟು ಬಲಿದು ನಿಂತಿವೆ. ಎಂತಲೆ ಪತ್ರಿಕೆಯ ಸಂಪಾದಕ ವೈಷ್ಣವನಿದ್ದರೆ, ಅದು ವೈಷ್ಣವ ವಾಚಕರಿಂದಲೆ ಜೀವಹಿಡಿಯಬೇಕು; ಸ್ಮಾರ್ತ-ಶ್ರೀವೈಷ್ಣವರಿದ್ದರೆ ಸ್ಮಾರ್ತ-ಶ್ರೀವೈಷ್ಣವ ವಾಚಕರಿಂದಲೆ ಪೋಷಣೆ ಪಡೆಯಬೇಕು.

ಬ್ರಾಹ್ಮಣೇತರರಲ್ಲಿ ಅಕ್ಷರವಸ್ತರಿತವಾಗೇ ಕಡಿಮೆ. ಅರಿತ ಸಮಾಜದಲ್ಲಿ 'ಕರ್ನಾಟಕ' 'ಕನ್ನಡ' ಭಾವನೆಗಳಿಗಿಂತ ಜಾತಿ-ಮತ-ಪಂಥಗಳ ಭಾವನೆಯೆ ಹೆಚ್ಚಾಗಿ ಬೆಳೆಯುವುದರಲ್ಲಿದೆ. ಇಂದಿನ ವೈಚಿತ್ರ್ಯಪೂರ್ಣ ರಾಜಕೀಯ ಪರಿಸ್ಥಿತಿಯು, ಆ ಭಾವನೆಯ ಬೆಳವಣಿಗೆಗೇ ಎಣ್ಣೆಬೆಣ್ಣೆಗಳನ್ನು ಊಡುತ್ತಲಿದೆ. ಇಷ್ಟೆ ಅಲ್ಲದೆ, ಆ ಸಮಾಜದಲ್ಲಿಯೂ ಪೂರ್ವಾಚಾರ ಪ್ರೀತಿಯವರು ಕಡಿಮೆಯಿಲ್ಲ. ಆದುದರಿಂದಲೆ ರಾಷ್ಟ್ರಾಭಿಮಾನವೆ ಆಗಲಿ, ದೇಶಾಭಿಮಾನವೆ ಆಗಲಿ, ಭಾಷಾಭಿಮಾನವೆ ಆಗಲಿ ಆ ಸಮಾಜದಲ್ಲಿಯ ಬಹುಸಂಖ್ಯಾಕರ ಹೃದಯವನ್ನು ಮಿಡಿಯುತ್ತಿಲ್ಲ; ಭವಿಷ್ಯದ ಬದುಕಿನ ದರ್ಶನವನ್ನು ಅವರು ಪಡೆಯುತ್ತಿಲ್ಲ. ಇಂದು ನಮ್ಮಲ್ಲಿ ಎಂತಹ ವಿಶ್ವ-ಬಾಂಧವ್ಯದ ಗುರಿಯಿಟ್ಟುಕೊಂಡು ಹೊರಟ ಪತ್ರಿಕೆಗಳಿಗೂ ಆ ಪತ್ರಿಕೆಗಳ ಸಂಪಾದಕರ ಜಾತಿ ಅಡ್ಡವಾಗಿ ನಿಂತು, ಬೇರೆ ಜಾತಿಯವರ ಮನಸ್ಸು-ದೃಷ್ಟಿಗಳನ್ನೆ ಅತ್ತಕಡೆಗೆ ಸುಳಿಯಗೊಡುತ್ತಿಲ್ಲ. ವಸ್ತುಸ್ಥಿತಿ ಹೀಗಿರುವಾಗ, ನಮ್ಮ ಪತ್ರಿಕೆಗಳಿಗೆ ಅಖಿಲ ಕರ್ನಾಟಕದಿಂದ ಪರಿಪೋಷಣೆ ಹೇಗೆ ಸಿಕ್ಕಬೇಕು? ಹಾಗೆ ಪರಿಪೋಷಣೆ ಸಿಕ್ಕದಿದ್ದರೆ ಪತ್ರಿಕೆಗಳ ಬೆಳವಣಿಗೆ ಸರ್ವತೋಮುಖವಾಗಿ ಹೇಗೆ ಆಗಬೇಕು? ಈ ಪರಿಸ್ಥಿತಿಯನ್ನು ಪರಾಮರ್ಶಿಸಿ ತಿಳಿಯದೆ 'ಕನ್ನಡಪತ್ರಿಕೆಗಳು ಇಂಗ್ಲಿಷ್‌ಪತ್ರಿಕೆಗಳಂತಿಲ್ಲ, ಬಂಗಾಲಿ ಪತ್ರಿಕೆಗಳಂತಿಲ್ಲ, ಮರಾಟಿ ಪತ್ರಿಕೆಗಳಂತಿಲ್ಲ' ಇತ್ಯಾದಿಯಾಗಿ ಮೂದಲಿಸಿ ನುಡಿಯುವ ಬರಿಗೈಯ ಬಂಟರ ಬಿರುನುಡಿಗಳು ನಮಗೆ ಬೇಕಾದಷ್ಟು ಕಿವಿಗೆ ಬೀಳುವುವು. ನಾವೀಗ ಬರಿಗೈಯ ಬಾಯಿಬಂಟರನ್ನು ಹೀಗೆ ಕೇಳುವೆವು:—

"ಇಂಗ್ಲಿಷ್ ಜನರಂತಹ ದೇಶಾಭಿಮಾನ ನಿಮ್ಮಲ್ಲಿದೆಯೆ? ಬಂಗಾಲಿಗಳಂತಹ ಭಾಷಾಭಿಮಾನ ನಿಮ್ಮಲ್ಲಿದೆಯೆ? ಮಹಾರಾಷ್ಟ್ರರಂತಹ ಸಾಮಾಜಿಕಸಂಘಟನೆ ನಿಮ್ಮಲ್ಲಿದೆಯೆ?"

ಇಲ್ಲವೆಂದೆ ನಮ್ಮ ಪತ್ರಿಕೆಗಳಿಗೆ ಸಾಕಷ್ಟು ನೆರವು ದೊರೆಯುತ್ತಿಲ್ಲ; ನೆರವು ದೊರೆಯುತ್ತಿಲ್ಲವೆಂತಲೆ ಅವು ಸರ್ವತೋಮುಖವಾಗಿ ವಿಕಾಸ ಹೊಂದುತ್ತಿಲ್ಲ. ಕನ್ನಡಿಗರೆಲ್ಲ ಒಂದೆ ಬಗೆಯ ಗುರಿಯಿಂದ, ಒಂದೆ ಸತ್ಯಪಂಥದ ಅಭಿಮಾನದಿಂದ, 'ನಾವು ಕನ್ನಡಿಗರು; ಇನ್ನೇನೂ ಅಲ್ಲ' ಎಂಬ ವಿಶಾಲಭಾವನೆಯಿಂದ ನಡೆಯತೊಡಗಿದರೆ ಆಗ ನೋಡಿ, ನಮ್ಮ ನಾಡಿನ ಪತ್ರಿಕಾಪ್ರಪಂಚದ ದಿವ್ಯವೈಭವವನ್ನು! ಆಗ ನಮ್ಮ ಪತ್ರಿಕೆಗಳು ಮುಕ್ಕ ಭಾಷೆಯ ಪತ್ರಿಕೆಗಳನ್ನು ಮೀರಿಸಲ್ಲವು ವೆಂದು ಹೇಳಲಾಗದಿದ್ದರೂ, ಸರಿಗಟ್ಟಿ ನಿಲ್ಲುವುವೆಂಬುದನ್ನು ಸಂದೇಹವಿಲ್ಲದೆ ಹೇಳಬಹುದು.

—ಸಂಪಾದಕರು

ನಮ್ಮ ಚಂದಾದಾರರಿಗೆ ಬಿನ್ನಹ

★

ಮೊದಲನೆಯ ವರ್ಷ ಚಂದಾದಾರರಾಗಿದ್ದುಕೊಂಡು ಜಯಂತಿಗೆ ನೆರವಿತ್ತ ಹಲವು ಜನ ಮಹಾಶಯರಿಗೆ, ಅವರು ಮುಂದೆಯೂ ಚಂದಾದಾರರಾಗಿ ಇರಬಲ್ಲರೆಂಬ ಭರವಸೆಯಿಂದ, ಇದುವರೆಗಿನ ಎರಡನೆಯ ವರ್ಷದ ಎಲ್ಲ ಸಂಚಿಕೆಗಳನ್ನೂ ಸಲ್ಲಿಸುತ್ತ ಬಂದಿದ್ದೇವೆ. ಅವರಿಂದ ೨ನೆಯ ವರ್ಷದ ವರ್ಗಣಿಯ ಹಣ ೩-೦-೦ ಕಾರ್ಯಾಲಯಕ್ಕೆ ಸಲ್ಲಬೇಕಾಗಿದೆ. ವ್ಹಿ. ಪಿ. ಮಾಡಿದರೆ ರೆಜಿಸ್ಟ್ರೇಶನ್ನಿಗಾಗಿ ಒಬ್ಬೊಬ್ಬರ ತಲೆಯ ಮೇಲೂ ಮೂರಾಣೆ ಹೆಚ್ಚಿನ ಹೊರೆ ಬೀಳುವುದು. ಅಲ್ಲದೆ ಪೋಸ್ಟಮನ್ನರ ಅಲಕ್ಷ್ಯದಿಂದಲೊ, ಔದಾಸೀನ್ಯದಿಂದಲೊ ವ್ಹಿ. ಪಿ. ಗಳು ಮಾಲಕರಿಗೆ ಸರಿಯಾಗಿ ತಲ್ಪದೆ, ಸಾರ್ಟ್‌ಪೇಡಾಗಿ ಬಂದು ಜಯಂತಿಯನ್ನು ಎರಡೊಂದು ರೀತಿಯಲ್ಲಿ ನಷ್ಟದಲ್ಲಿ ನೂಕುತ್ತಿರುವುದು ನಮ್ಮ ಅನುಭವದ ಸಂಗತಿಯಾಗಿದೆ. ಆದುದರಿಂದಲೆ ಇದುವರೆಗೂ ಚಂದಾ ಸಲ್ಲಿಸದಿದ್ದವರು ವ್ಹಿ. ಪಿ. ಯ ದಾರಿಯನ್ನು ಕಾಯದೆ, ಜನವರಿ ೨೫ನೆಯ ತಾರೀಖಿನೊಳಗಾಗಿ ತಲ್ಪುವಂತೆ ೩-೦-೦ ಗಳನ್ನು M. O. ನಿಂದ ಕಳುಹುವ ಉಪಕಾರ ಮಾಡಬೇಕು.

ದೇವಾ! ಏನು ನಿನ್ನ ದುರ್ದೈವ!

ಸನ್ ೧೯೩೯ರ ಡಿಸೆಂಬರ್ ೨೨, ಶುಕ್ರವಾರದ ಪ್ರಾತಃಕಾಲದ ಸಮಯ, ಭಗವಾನ್ ಶೇಷಶಾಯಿಯೂ ಆದೇ ನಿದ್ದೆಯಿಂದೆದ್ದು ಕಣ್ಣೊರಸುತ್ತ ಕೆಳಗಿನ ಕ್ಷೀರವನ್ನು ನೋಡುತ್ತಲಿದ್ದಾನೆ. ಅಷ್ಟರಲ್ಲಿ ಮರ್ತ್ಯಲೋಕದಿಂದ ಗಂಭೀರವಾದ-ಭಕ್ತಿಭಾವಾವೇಶಪೂರಿತವಾದ ಧ್ವನಿಯೊಂದು ಕೇಳಬಂದಿತು. 'ಹೇ, ಚಕ್ರಪಾಣೀ ಅರ್ಥಾತ್ ನನ್ನ ಒಳಗಿನ ಧ್ವನೀ, ನಿನ್ನ ಆಜ್ಞೆಯಂತೆ ಭೂಲೋಕದ ಭರತಖಂಡದಲ್ಲಿಯ ಕಾಂಗ್ರೆಸ್ ಮಂತ್ರಿಮಂಡಳಗಳಿಗೆ ರಾಜೀನಾಮೆ ಕೊಡಲು ಹುಕುಂ ಹೊರಡಿಸಿದ್ದೇನೆ.' ಈ ಗೌರವದ ಮಾತಿಗೆ ಮೆಚ್ಚಿ ಭಗವಂತನು ಹೆಮ್ಮೆಯಿಂದ ಮೀಸೆಯನ್ನು ಹುರಿಮಾಡತೊಡಗಿದನು. ಕೂಡಲೆ ಅದೇ ಮರ್ತ್ಯಲೋಕದಿಂದ ಇನ್ನೊಂದು ಆರ್ತನಿನಾದವು ದಿಗಂತವನ್ನು ವ್ಯಾಪಿಸಿ, ಪರಮಾತ್ಮನ ಶ್ರವಣಪಟಲಕ್ಕಪ್ಪಳಿಸಿತು. 'ಹೇ ಅಲ್ಲಾ, ಇಂದು ನನಗ ನಿನ್ನ ಹೊರತು ಯಾರೂ ಇಲ್ಲಾ. ನಿನ್ನ ಆಜ್ಞೆಯಂತೆ ಇಂದು ಪಾಳು ಕಾಂಗ್ರೆಸಿನವರ ಗೋಳು ತಪ್ಪಿತೆಂದು ಸಂತೋಷ—ಅಲ್ಲ, ಸಮಾಧಾನದಿಂದ—ಲಕ್ಷಾವಧಿ ಧರ್ಮಬಾಂಧವರಿಗೆ, ನಿನಗೆ ಕೈಮುಗಿಯಲು ಫರ್ಮಾನು ಹೊರಡಿಸಿರುವೆ.' ಇದನ್ನು ಕೇಳಿದಾಕ್ಷಣ ಶೇಷಾಸನ ಕುಸಿಬಿದ್ದಿತು, ಮೀಸೆಯ ಹುರಿ ತಪ್ಪಿ ಬಾಯಲ್ಲಿ ಬಿದ್ದಿತು. ಇನ್ನೇನು—ಪುರುಷೋತ್ತಮನು ಮೀಸೆಯನ್ನು ತಿಂದೇಬಿಡುವನೆನುವಷ್ಟರಲ್ಲಿ ಭೂಲೋಕದಿಂದ ಇಡಿಯ ವಿಶ್ವವನ್ನು ನಡುಗಿಸುವ ಗರ್ಜನೆ ಕೇಳಬಂದಿತು. 'ಭೋ-ಭೋ-ರಾಕ್ಷಸಾಂತಕಾ—ನಿನ್ನ ಆಜ್ಞೆಯಂತೆಯೆ ಪವಿತ್ರ ಭರತವರ್ಷದ ಪುನರುತ್ಥಾಪನೆಗಾಗಿ ಎಲ್ಲ ಯವನರನ್ನೂ ಇಲ್ಲಿಂದ ಹೊಡೆದೋಡಿಸುವ—' ಗರ್ಜನೆಯ ಅಲ್ಲೋಲಕಲ್ಲೋಲದಿಂದ ಸಮುದ್ರನೂ ಶೇಷನೂ ಬುಡಮೇಲಾದುದರಿಂದ, ಕ್ಷೀರದ ಮಡುವಿನೊಳಗೆ ಮುಳುಗಿದ ಪರಮಾತ್ಮನಿಗೆ ಮುಂದಿನ ಮಾತು ಕೇಳಿಸಿತೊ ಇಲ್ಲವೊ!

ಅಂದು ಶುಕ್ರವಾರ, ತಾ॥ ೨೨, ಡಿಸೆಂಬರ್, ೧೯೩೯.

'ಜನ-ಜೀವಾಹರ' ಮಾತು

ಹಹ! ವಾಚಕರೆ, ಮೋಸಹೋದಿರಲ್ಲವೆ? 'ಜಿನಾ-ಜವಾಹರ' ಎಂಬುದು ಮಂಗರಾಯನ ಕೈತಪ್ಪಿ ಮೇಲಿನಂತೆ ಬರೆಯಲ್ಪಟ್ಟಿದೆ ಎಂಬ ಭ್ರಾಂತಿಯಿಂದ ಒಂದರೆಕ್ಷಣವಾದರೂ ನೀವು ಮರುಳುಗೊಂಡಿರಲು ಸಾಕು. ಆದರೇನು? ಅದು ಅಚ್ಚಿನ ದೋಷದ ಭಾಷೆ ಅಲ್ಲ, ಚುಟ್ಟಿದ ಮಾತಿನ ತಮಾಷೆ— ಅಥವಾ ಮಂಗರಾಯನ ಶೈಲಿಯ ರೂಪರೇಷೆ—ಎನ್ನಿರಿ. ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ, ಸರಿಯಾಗಿ, ವಿವೇಚಕವಾಗಿ ಒಂದೇಒಂದು ಶಬ್ದದಲ್ಲಿ ಬಣ್ಣಿಸಲು ಮಂಗರಾಯನು ಮಾಡಿದ ಬುದ್ಧಿಮಂಥನದಿಂದ ಹೊರಹೊರಟ ರತ್ನವದು! ಆ ಪರಿಸ್ಥಿತಿ ಯಾವುದೆನ್ನುವಿರಾ? ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿ ಜಿನಾ-ಜವಾಹರರು ನಡೆಯಿಸಬೇಕಾಗಿದ್ದ, ನಡೆಯಿಸದಿದ್ದ ಮಾತುಕತೆಗಳಿಂದ ಉದ್ಭವಿಸಿದ ಪರಿಸ್ಥಿತಿ. ಆ ಮಾತು-ಕತೆಗಳ ಪ್ರಾರಂಭ ಹೀಗೆ:—

ಜವಾಹರ:— ಹಿಂದು-ಮುಸಲ್ಮಾನರ ಐಕ್ಯ ಆಗಲೇ ಬೇಕು.

ಜಿನಾ:—ಅಹುದು, ಇಲ್ಲವಾದರೆ ಈ ಉನ್ಮತ್ತ ಕಾಂಗ್ರೆಸಿನವರ ಉರಿದಾಟವೆ ಹೆಚ್ಚಾಗುವುದು.

ಜವಾಹರ:—ಅಹುದು, ಐಕ್ಯವಾಗಲೆ ಬೇಕು. ಇಲ್ಲವಾದರೆ ಜಿನಾ ಅಂತಹರ ಜಾತಿದ್ವೇಷಪೂರಿತದ ದೊಡ್ಡಸ್ತನ ಬೆಳೆಯುವುದು.

ಜಿನಾ:— ಅಹುದು, ಐಕ್ಯವಾಗಲೇ ಬೇಕು—ಇಲ್ಲವಾದರೆ ಕಾಂಗ್ರೆಸಿಗಷ್ಟೆ ಸ್ವರಾಜ್ಯ ಕೊಟ್ಟಾರು ಬ್ರಿಟಿಶರು.

ಜವಾಹರ:— ಬ್ರಿಟಿಶರು ಹೊರಗಿನವರು!

ಜಿನಾ:— ಅದಕಾಗಿಯೆ ಅವರಿಗೆ ಮಧ್ಯಸ್ಥಿಕೆಯನ್ನೊಪ್ಪಿಸೋಣ!

ಜವಾಹರ:— ವಂದೇ ಮಾತರಂ!

ಜಿನಾ:—Down with Congress.

ಮುಂದಿನ ಮಾತು ಮುಂದಿನ ಸಂಚಿಕೆಯಲ್ಲಿ—ಅರ್ಥಾತ್ ಮುಂದಾಳುಗಳ ಇಂತಹ ಮಾತು-ಕತೆಗಳಿಂದ ಜನರು ಜೀವದಿಂದುಳಿದಿದ್ದರೆ.

*   *   *

ಸಾಹಿತ್ಯ ಸಮ್ಮೇಳನದ ಹೊಸ ಸ್ವರೂಪ

ಕರ್ನಾಟಕದ ಉತ್ತರದಲ್ಲಿದ್ದ—ಅಲ್ಲಲ್ಲ—ಉತ್ತರ ಕರ್ನಾಟಕದಲ್ಲಿದ್ದ ಬೆಳಗಾಂವಿಯಲ್ಲಿ ಜರುಗಿದ ಸಮ್ಮೇಳನದ ನಿಯೋಜಿತ ಅಧ್ಯಕ್ಷರನ್ನು ಅನೇಕ ಸಂಸ್ಥೆ-ಸಂಘಗಳು ಸನ್ಮಾನಿಸಿದುವೆಂಬ ಸುದ್ದಿಯನ್ನೋದಿ, ಅನೇಕ ವಾಚಕರು ಮತಿಭ್ರಾಂತರಾಗಿದ್ದಾರೆ. 'ಇದೇನು ಹೊಸ ಪ್ರಕಾರ—ಇದೇನು ಸಾಹಿತಿಗಳ ವೈಭವ! ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರನ್ನು ಈ ಪರಿ ಜನರು ಸನ್ಮಾನಿಸುವುದನ್ನು ನಾವು ಕಂಡಿಲ್ಲ, ಕನಸು-ಮನಸುಗಳಲ್ಲೂ ಕಾಣುವಂತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಘಟನೆಯಲ್ಲಿಯೆ ಈ ರೀತಿ ಬದಲಾವಣೆಯಾಗಿದೆಯೆ— ಅಥವಾ ಜನರೆ—' ಎಂದು ಏನೇನೊ ಶಂಕೆ-ಸಲಹೆಗಳನ್ನು ಮಂಗರಾಯನೆದುರು ಮಂಡಿಸಿದ್ದಾರೆ. ಆದರೆ ಮಂಗರಾಯನಿಗೆ ಈ ವಿಷಯ ಮಾತನಾಡಲು ಹೆದರಿಕೆ. ಕ. ಸಾ. ಪರಿಷತ್ತು ಸಾರ್ವಜನಿಕ ಸಂಸ್ಥೆಯೊ ಬರಿಯೆ ಶ್ರೀಮಂತ ಸಾಹಿತಿಗಳ ಮನೆಯ ಮಹಡಿಯಲ್ಲಿದ್ದ ಸಂಸ್ಥೆಯೊ ಎಂಬುದೆ ಮಂಗರಾಯನಿಗೆ ನಿಶ್ಚಿತವಾಗಿ ತಿಳಿದಿಲ್ಲ. ಆದರೆ ಅಲ್ಲಲ್ಲಿ ಮಾತನಾಡುವುದನ್ನು ಮಾತ್ರ ಮಂಗರಾಯನ ಸ್ವಂತ ಸುದ್ದಿಗಾರರು ಸಂಗ್ರಹಿಸಿದ್ದಾರೆ. ಕ. ಸಾ. ಪರಿಷತ್ತಿನ ಘಟನೆಯಲ್ಲಿ ಬದಲಾವಣೆಯೂ ಇಲ್ಲ, ಜನರ ತೂಕವೂ ತಪ್ಪಿಲ್ಲ; ಆದೇನೊ ಇದುವರೆಗೆ ಪರಿಷತ್ತಿನವರು ಚುನಾಯಿಸುತ್ತಿದ್ದ ಅಧ್ಯಕ್ಷರನ್ನು ಈ ಸಲ ಜನರೆ ಚುನಾಯಿಸಿರುವರೆಂದು—ಅಥವಾ, ನಿಮಗೆ ಗೊತ್ತಿರಬಹುದಲ್ಲ, ಬಾತ್ಮೀದಾರರ ಅಭಿಪ್ರಾಯಕ್ಕೆ ಬರೆದವರು ಜವಾಬ್ದಾರರಲ್ಲ ಎಂದು?

*   *   *

ಮೌಲಾನಾ ಮಂಗರಾಯ!

ಬ್ಯಾ. ಜಿನಾ ಅವರು ೨೨ನೆಯ ಡಿಸೆಂಬರಿಗೆ ಕಾಂಗ್ರೆಸ್ ಸರಕಾರಗಳಿಂದ ಬಂಧವಿಮೋಚನೆ

ಯಾಯಿತೆಂದು ಪ್ರಾರ್ಥನಾದಿನವಾಗಿ ಆಚರಿಸಲು ಮುಸಲ್ಮಾನರನ್ನು ಕೇಳಿಕೊಂಡಿರುವರಷ್ಟೆ! ಜಿನ್ನಾ ಅವರ ಸೂಚನೆಯು ಡಾ. ಅಂಬೇಡಕರರಿಗೂ ಅತ್ಯಂತ ಮಾನ್ಯವಿದೆ ಎಂಬ ಸುದ್ದಿ ಪ್ರಕಟವಾ ದಂದಿನಿಂದ ಮಂಗರಾಯನಿಗೂ ಒಂದು ಸೂಚನೆ ಸ್ಫೂರ್ತಿಸಿದೆ. ತಾ. ೨೩ಕ್ಕೆ ಅಥವಾ ಅನುಕೂಲ ವೆನಿಸಿದಾಗ ಇಂಡಿಯಾ ದೇಶವು ಜಿನಾ-ಅಂಬೇಡಕರ 'ಬುದ್ಧಿವಿನೋದನ' ದಿನವೊಂದನ್ನು ಆಚರಿಸಿ, ಆ ವರಿಗೆ ಧನ್ಯವಾದಗಳನ್ನರ್ಪಿಸಬೇಕು. ಅಥವಾ-ತಡೆಯಿರಿ; ಪರಿಸ್ಥಿತಿಯನ್ನು ತುಸು ಸೂಕ್ಷ್ಮವಾಗಿ ವಿವೇಚಿಸೋಣ: ಕಾಂಗ್ರೆಸ್‌ಮಂತ್ರಿಮಂಡಳಗಳಲ್ಲಿ ಮುಸಲ್ಮಾನರಿಗೆ ಒಂದು ಜಾಗೆ ಸಿಕ್ಕಂತೆ ಪರಿಜನರಿಗೆ ಸಿಕ್ಕಿಲ್ಲವಲ್ಲ! ಅದಕಾಗಿ ಒಂದು ವೇಳೆ ಎಲ್ಲ ಪರಿಜನರೂ ಒಂದುಗೂಡಿ 'ಕಾಂಗ್ರೆಸ್ ವಿಮೋಚನ' (ಎಂದರೆ ಕಾಂಗ್ರೆಸನ್ನು ಬಿಟ್ಟುಕೊಡುವ) ದಿನವನ್ನಾಚರಿಸಿದರೆ? ಕಾಂಗ್ರೆಸಿನಲ್ಲಿದ್ದು ಅಧಿಕಾರಪದವಿಗಳಿಗೆ ಅಸ್ಪೃಶ್ಯರೆನಿಸುವುದಕ್ಕಿಂತ ಕಾಂಗ್ರೆಸ ಬಿಟ್ಟು, ಅಧಿಕಾರ ಪಟ್ಟು, ವ್ಯವಹಾರಕ್ಕೆ ಅಸ್ಪೃಶ್ಯರೆನಿಸುವುದು ಲೇಸು ಎಂದರೆ? ಆನೆಗಳ ಕಾದಾಟದಲ್ಲಿ ನಾಯಿ ನುಗ್ಗಾದಂತೆ ಬ್ರಾಹ್ಮಣ-ಬ್ರಾಹ್ಮಣೇತರರ ವಾದದಲ್ಲಿ ಪರಿಜನರು ನುಗ್ಗಾದರೆ? ಅನರ್ಥ—ಅನರ್ಥ! ಅಜ್ಞಾನಿ ಪರಿಜನರಿಗೆ ಇಂತಹ ಅವಿಚಾರ ತೋಚಿದರೆ ಅನರ್ಥ! ಕಾಂಗ್ರೆಸು ಪ್ರಜಾಪ್ರಭುತ್ವ (democracy)ದ ಸಂಸ್ಥೆ; ಪ್ರಜಾಪ್ರಭುತ್ವವೆಂದರೆ ವೋಟು (vote) ಹಾಕುವವರ ರಾಜ್ಯ? ಅದಕಾಗಿ ಕಾಂಗ್ರೆಸು ಪರಿಜನರಿಗೆ vote ಹಾಕುವ ವಿದ್ಯೆಯನ್ನೆ ಕಲಿಸುತ್ತಿರುವಾಗ, ಅಧಿಕಾರಪದವಿಗಳ ಮಾತೇಕೆ? ಅದ್ದರಿಂದ ಅಂಬೇಡಕರರಿಗೆ ಧಿಕ್ಕಾರ, ಜಿನ್ನಾರಿಗೆ ಹಾಹಾಕಾರ. ಅದಕಾಗಿಯೆ 'ಬುದ್ಧಿವಿಮೋಚನೆ' ಎಂಬ ದಿನವನ್ನಾಚರಿಸಬೇಕೆಂದು ಮಂಗರಾಯನ ನಮ್ರ ಸೂಚನೆ.

* * *

ಮಂಗನ ಒರಟೆಗಳು

ಅ ಕಾರ್ಯಕ್ಕೆ ಮುಂಚೆ ಕಾರಣಬೇಕು ಕಾರ್ಯಪುರುಷಕ್ಕೆ ಮುಂಚೆ ಕಾರಣ ಪುರುಷಬೇಕು. ಎಂದರೆ ಕರ್ನಾಟಕದಲ್ಲಿ ಕಾರ್ಯವಾಗಬೇಕಾದರೆ ಕಾರಣ ಪುರುಷ ಬೇಕು, ಸ್ತ್ರೀಪಿನಾಕಾರಣ ಪುರುಷ ಬೇಕು,

(ಆ) ಗೋ=ಎತ್ತು
ಸ್ಥಾ=ನಿಲ್ಲು
ಗೋಷ್ಠಿ=(ಕೊಟ್ಟಿಗೆ) ಎತ್ತು ನಿಲ್ಲುವ ಸ್ಥಾನ.

ಉದಾ:— ಸಾಹಿತ್ಯಗೋಷ್ಠಿ, ನಾಟ್ಯಗೋಷ್ಠಿ ಮುಂ. ಮುಂ.

(ಇ) ಕ. ಸಾ. ಪರಿಷತ್ತು ಪ್ರಗತಿ ಹೊಂದಬೇಕಾದರೆ ಅದರ ಕಾರ್ಯಧುರದಲ್ಲಿ ಅನುಭವ ಉಳ್ಳವರು ಬೇಕು. ಅನುಭವ ಯಾರಿಗಿದೆ? ಅರ್ಥಾತ್ ಈಗ ಅದರ ಕಾರ್ಯಧುರದಲ್ಲಿದ್ದವರಿಗೆ ಮಾತ್ರ, ಹೊಸಬರಿಗೆ ಅಲ್ಲವೇ ಅಲ್ಲ.

∴ ಕ ಸಾ. ಪರಿಷತ್ತು ಪ್ರಗತಿ ಹೊಂದುವುದಕ್ಕೆ ಈಗಿದ್ದ ಅಧಿಕಾರಿಗಳನ್ನೆ ಜಗತ್ತು ಸಾಗುವವರೆಗೂ ಚುನಾಯಿಸಿರಿ!

(ವಿಶೇಷ ಮಾಹಿತಿ ಬೇಕಾದಲ್ಲಿ 'ಕನ್ನಡ ನುಡಿ' ಎಂಬ ಹಸ್ತಪತ್ರಿಕೆಯನ್ನು ನೋಡಬಹುದು.)

(ಈ) ಕರ್ನಾಟಕವು ಪ್ರಬುದ್ಧವಾದದ್ದೆಲ್ಲಿ? ಮೈಸೂರಲ್ಲಿ,
,, ತರುಣವಾದದ್ದೆಲ್ಲಿ? ಹುಬ್ಬಳ್ಳಿಯಲ್ಲಿ,
,, ಸಮ್ಮೇಳನವಾದದ್ದೆಲ್ಲಿ? ಬೆಳಗಾಂವಿಯಲ್ಲಿ!

* * *

ಹೆಚ್ಚಿನದಕ್ಕಾಗಿ ಹಾದಿಕಾಯುತ್ತಿರು!

ಮಂಗರಾಯನಿಗೊಂದು ಕಾಗದ ಬಂದಿದೆ; ಅದರಲ್ಲಿ ಬರೆದಿರುವುದೇನೆಂದರೆ:—

"ಏನು ಮಂಗಣ್ಣಾ, ಕನ್ನಡ ವೃತ್ತಪತ್ರಿಕೆಗಳಲ್ಲಿಯ ಜಾತಿಜಗಳದ ಮಸಾಲೆ ಕಡಿಮೆಯಾಗಿದೆಯಲ್ಲ! ಇದಕ್ಕೆ ಕಾರಣವೇನು? ಜನರಲ್ಲಿಯ ಜಾತಿಯ ಅಭಿಮಾನದ ಕಾವು ಒಮ್ಮೆಲೆ-ಚಳಿಗಾಲವಾದುದರಿಂದ- ಇಳಿದು ಹೋಯಿತೋ, ಇದ್ದುದಿದ್ದಂತೆಯೆ ಜಾತಿಗಳೆಲ್ಲ ರಸಾತಳಕ್ಕಿಳಿದುವೋ, ಅಥವಾ ನಿಜವಾಗಿಯೂ ಜನರಲ್ಲಿ ಜಗಳವಾಡಬಾರದೆಂಬ ಸದ್ಬುದ್ಧಿ ಉಂಟಾಗಿದೆಯೊ?"

ಈ ಪತ್ರಕ್ಕೆ ಮಂಗರಾಯ ಬರೆದ ಉತ್ತರ ಹೀಗಿದೆ:—

"ಅಯ್ಯಾ, ನಿನ್ನ ಪತ್ರ ಕರಗತವಾಗಿ, ಅದರರ್ಥ ವಿದಿತವಾಯಿತು. ಜಾತಿಯ ಜಗಳ ಅಂಬೂವಂಥಾದ್ದೇನದ ಅಲ್ಲಾ, ಅದು ನೋಡು, ಹುಗುಳು-ನೆಗಡಿ, ಮಲೇರಿಯಾ, ಟೈಫಾಯಿಡುಗಳಂತೆ ಒಂದು ಸೋಂಕುರೋಗ. ಒಂದೊಂದು ಋತುಮಾನ (ಸೀಝನ್) ದಲ್ಲಿ ಆ ರೋಗಕ್ರಿಮಿಗಳು ಜಾಗೃತವಾಗುವುವು. ಕಾಂಗ್ರೆಸ್ಸಿನ ಅಧಿಕಾರ ಸ್ವೀಕಾರವೆಂದರೆ ಅಂತಹದೊಂದು ಋತುಮಾನ. ಹಿಂದೆ ಎಂದೆಂದೂ ಕಾಣದ ಕಸುವು ಇಂದಿನ ಜಾತಿಜಗಳದ ರೋಗಕ್ರಿಮಿಗಳಲ್ಲಿ ಬಂದಿತು. ಯುದ್ಧದ ಬಿರುಗಾಳಿ ಋತುಮಾನವನ್ನು ಒಮ್ಮೆಲೆ ಬದಲಾಯಿಸಿತು. ನಮ್ಮ ಜನವೆಲ್ಲ ಅಧಿಕಾರದಿಂದ ಹೊರಕ್ಕೆ ಬಂದಿತು; ರೋಗಕ್ರಿಮಿಗಳ ಕಸುವು ಒಮ್ಮೆಲೆ ಕುಗ್ಗಿಹೋಯಿತು. ಕಸುವು ಕುಗ್ಗಿ ಹೋದರೂ ಆ ಕ್ರಿಮಿಗಳು ಸಾಕಷ್ಟು ತತ್ತಿಗಳನ್ನು ಇರಿಸಿಯೆ ಹೋಗಿರುವುವು. ಇನ್ನೊಂದು ಸೀಝನ್ನು ಬರಲಿ, ನೋಡು ಆ ತತ್ತಿಗಳಿಂದ ಹೊರಬಿದ್ದ ಹುಳುಗಳ ಹೊಸಹುರುಪನ್ನು! ಯಾಕೆ? ಜಾತಿಜಗಳದ ಮಸಾಲೆಯಿರದುದರಿಂದ ಪತ್ರಿಕೆಗಳು ನಿನಗೆ ರುಚಿಯಾಗಿ ತೋರುತ್ತಿಲ್ಲವೇನು? ತಡೆ, ಸ್ವಲ್ಪಕಾಲ ತಡೆ! ಹಿಂದುಸ್ಥಾನದಲ್ಲಿ ಜಾತಿಗಳಿರುವವರೆಗೆ ಆ ಮಸಾಲೆಗೆ ಏನು ಕೊರತೆ? ಅದುವರೆಗೆ ಜಿನ್ನಾಸಾಹೇಬ-ಕಾಂಗ್ರೆಸ್ಸಿನ ಜಗಳಾಟದ ಮಸಾಲೆ ನಿನಗೆ ಸಿಕ್ಕುವುದಲ್ಲ! ಏಕೆ, ಆ ಮಸಾಲೆ ವಿದೇಶೀಯವಾಗಿ ಎನಿಸುವುದೇನು? ಕೊನೆಗೆ ಹಡಗುಮುಳುಗುವ ಸುದ್ದಿಗಳ ಒಗ್ಗರಣೆಯಿಂದ ಸಮಾಧಾನ ಹೊಂದುತ್ತಿರು; ಹಾದಿಕಾಯುತ್ತಿರು ಹೆಚ್ಚಿನದಕ್ಕಾಗಿ!

ಬಯಕೆ ಬರುವುದರ ಕಣ್ಣನ್ನೆ ಕಾಣು!
ಬಂದೆ ಬರುವುದು ಜಾತಿಜಗಳವಿನ್ನೂ!

* * *

ಮಾಡಿರೈ ಪ್ರಾರ್ಥನೆಯು!

ಇತ್ತೀಚೆಗೆ ಮಂಗರಾಯನ ಅಭಿಪ್ರಾಯಕ್ಕೆ ಬೆಲೆ ತುಂಬ ಬಂದುಬಿಟ್ಟಿದೆ. ಎಂತಲೆ ಆತನಿಗೆ ಬರುವ ಪತ್ರಗಳ ಹೊರೆಯನ್ನು ಹೊರಲಾರದೆ ಪೇನ್‌ಶನ್ ಸಮೀಪಕ್ಕೆ ಬಂದ ಪೋಸ್ಟ್‌ಮನ್ನನೊಬ್ಬ ಫಲೋರಜೆಯ ಮೇಲೆ ಹೋದ. ಅವನ ತರುವಾಯ ಬಂದ ಇನ್ನೊಬ್ಬ ನಾಳೆಯಿಂದ 'ಸಿಕ್‌ಲೀವ್' ಪಡೆಯಬೇಕೆಂದು, ಎಂ. ಬಿ. ಬಿ. ಎಸ್. ಡಾಕ್ಟರೊಬ್ಬರ ಕಡೆಯಿಂದ ಸರ್ಟಿಫಿಕೇಟ್ ಪಡೆದಿರುವನೆಂದು ಇಂದೆಯೆ ಹೇಳಿ ಹೋದ. ಮಂಗರಾಯನದೊಂದು ಎಲ್ಲರಿಗೂ ಪ್ರಾರ್ಥನೆಯೇನೆಂದರೆ:—ಪೋಸ್ಟ್‌ಖಾತೆಗೆ ಲಾಭ ಅತಿಯಾಗಿ ಆಗುತ್ತಿದ್ದುದರಿಂದ, ಬಂದ ದುಡ್ಡನ್ನು ಇಡಲು ಅದಕ್ಕೆ ಟ್ರೆಝರಿಗಳು ಸಾಲದಿವೆಯಂತೆ. ಹೊಸತಾಗಿ ಟ್ರೆಝರಿಗಳಿಗೆ ಆರ್ಡರು ಕೊಡಬೇಕೆಂದರೆ, ಯುದ್ಧದ ಉಪಕರಣಗಳ ಸಿದ್ಧತೆಯಲ್ಲಿ ತೊಡಗಿದುದರಿಂದ, ಇಂಗ್ಲಂಡಿನ ಯಾವ ಕಾರ್ಖಾನೆಗೂ ಪುರಸತ್ತಿಲ್ಲದಂತಾಗಿದೆ. ಆದುದರಿಂದ ಯುದ್ಧ ಮುಗಿಯುವ ವರೆಗೂ ಮಂಗರಾಯನ ಜೊತೆಗೆ ಪತ್ರವ್ಯವಹಾರ ಮಾಡುವುದನ್ನು ನಿಲ್ಲಿಸಬೇಕು; ಅದಿಲ್ಲದೆ ಹೋದರೆ ಕಾರ್ಡು-ಪಾಕೀಟುಗಳ ಬೆಲೆಯನ್ನು ತಗ್ಗಿಸುವಂತೆ ಹಿಂದುಸ್ಥಾನದ ಸರಕಾರಕ್ಕೆ ಪ್ರೇರಣೆಯನ್ನುಂಟುಮಾಡೆಂದು ಹಿಂದುಗಳು ತಂತಮ್ಮ ಹಲವು ದೇವರನ್ನೂ, ಮುಸಲ್ಮಾನರು ತಮ್ಮ ಒಬ್ಬನೆ ಅಲ್ಲಾನನ್ನೂ, ಕ್ರೈಸ್ತರು ಆಕಾಶದಲ್ಲಿಯ ತಂದೆಯನ್ನೂ ಹೊಸವರ್ಷದ ಮೊದಲನೆಯ ದಿನ ಗುಡಿ-ಮಸೀದೆ-ಚರ್ಚುಗಳಿಗೆ ಹೋಗಿ ಪ್ರಾರ್ಥನೆ ಮಾಡಿಕೊಳ್ಳಬೇಕು. ಅಂದಿನ ಪ್ರಾರ್ಥನೆಗಾಗಿ ಮಂಗರಾಯ ಒಂದು ಗೀತಖಂಡವನ್ನು ರಚಿಸಿದ್ದಾನೆ ನೋಡಿ:—

"ಕಾರ್ಡು ಪಾಕೀಟುಗಳ ಕಿಮ್ಮತ್ತು ಇಳಿವಂತೆ ಮಾಡುವುದಯ್ಯ ನಮ್ಮನು ಮಾಡಿದವನೆ!"

ಇಂಗ್ಲಂಡಿನ ಹೆಚ್ಚಳವನ್ನು ಹುರಿಗೊಳಿಸುವ ವೀರ

ವಿನ್‌ಸ್ಟನ್ ಚರ್ಚಿಲ್

★

ಹಿಟ್ಲರನ ನೆಲೆಯನ್ನರಿತ ನೆಲೆಗಾರ!

ಜಾರ್ಮನೆಯ ‘ನೆರಂಗ’ರು ಬರೆದುದು.

ಚರ್ಚಿಲನು ಭಾರತರಾಜಕಾರಣವನ್ನೆತ್ತಿ ಆಡು-ತ್ತಿರುವಾಗಿನ ಮಾತೆಂದರೆ ಎಲ್ಲರಿಗಿಂತಲೂ ಬಿರುಸಾದುದಲ್ಲವೆ? ಆದರೆ ಅದೇ ಬ್ರಿಟಿಷರ ಅಂತರಾಳದ ಮಾತು. ನಡೆಯಂತೆ ನುಡಿಯಿದ್ದ ಚರ್ಚಿಲ್ ನಮಗೆ ನಿಷ್ಠುರನಾಗಿ ಕಾಣುತ್ತಿದ್ದಾನೆ. ಇಷ್ಟೇ ಅಲ್ಲ, ಈ ಗುಣದ ಮೂಲಕವಾಗಿಯೆ ಅವನು ತನ್ನ ದೇಶದ ಜನರಿಗೂ ವಿಲಕ್ಷಣನಾಗಿ ಪರಿಣಮಿಸಿದ್ದಾನೆ.

★

ವಿನ್‌ಸ್ಟನ್ ಚರ್ಚಿಲ್

ಈ ಜಗತ್ತಿನಲ್ಲಿ ಕಣ್ಣಿಗೆ ಕಂಡದ್ದು ಕಂಡ ಹಾಗೆಯೆ ಇರುವು
ಂತಲ್ಲ. ಹೊರಗಣ್ಣಿಗೆ ಕಾಣುವುದೆ ಅದರ ನಿಜವಾದ ಸ್ವರೂಪ
ಂದು ಹೇಳಲಾಗುವುದಿಲ್ಲ. ಸಾಮಾನ್ಯವಾಗಿ, ಜಗತ್ತಿನ ಬಹು
ನರಿಗೆ, ಒಳಗಿನ ಮರ್ಮವನ್ನು ತಿಳಿದುಕೊಳ್ಳುವಷ್ಟು ತಿಳಿ-
ನೋಟ ಇರುವುದಿಲ್ಲ. ಹೊರಗೆ ಒರಟನಾಗಿ ಕಂಡರೂ ಒಳಗೆ
ಮೆತ್ತಗಿನ ಮನಸ್ಸು ಇರಬಹುದು; ಹೆಡ್ಡನಂತೆ ಕಂಡರೂ ಬುದ್ಧಿ-
ಶಾಲಿ ಇರಬಹುದು; ಹುಚ್ಚನಂತೆ ಕಂಡರೂ ಹಿರಿಮೆ ಇರಬಹುದು.
ಒಮ್ಮೊಮ್ಮೆ ಇದರ ವಿಪರೀತವೂ ಸಂಭವಿಸಬಹುದು. ಯಾವು
ದನ್ನೂ ತಿಳಿನೋಟದಿಂದ ತಿಳಿಯದೆ ಅಭಿಪ್ರಾಯ ಕೊಡುವುದು
ಹಿತಕರವಾದುದಲ್ಲ.

ಸತ್ಯವು ಸಾಮಾನ್ಯವಾಗಿ ಕಟುವಾಗಿರುವುದು. ಕಹಿಯಾದುದು
ಬಹುಮಂದಿಗೆ ಹೇಗೆ ಸೇರೀತು? “ಪರಿಣಾಮೇ ಅಮೃ
ತೋಪಮಂ’ ಎಂಬುದನ್ನರಿತವರು ಮಾತ್ರ ಕಹಿಯಿದ್ದರೂ
ಅದನ್ನು ಗುಣಗ್ರಾಹಕ ಬುದ್ಧಿಯಿಂದ ತೆಗೆದುಕೊಳ್ಳುವರು.
ಅದಕ್ಕೆಂದೆ ಚರ್ಚಿಲ್‌ನಂತಹ ಮುತ್ಸದ್ದಿಯ ಮಾತನ್ನು ಕೂಡ
ಹಿಯೆಂದು ಉಗುಳುವರು ಮೊದಲು; ಆದರೆ, ಕಾಲಮಾನದಿಂದ
ಅವನ ಮಾತು ಸತ್ಯವಾಗಿ ಪರಿಣಮಿಸಿದರೆ ಉಗುಳು ನುಂಗುವ
ಪರಿಸ್ಥಿತಿಯು ಬರುವುದು ಅವರಿಗೆ!

ಮಹಾಯುದ್ಧದ ಮಾತೆತ್ತಿದರೆ, ಚರ್ಚಿಲನ ಹೆಸರು ಅಲ್ಲಿ ಬಾರದೆ ಇರಲಾರದು. ಚರ್ಚಿಲ್ ಇಲ್ಲದ ಯುದ್ಧವಿಲ್ಲ— ಅಥವಾ ಚರ್ಚಿಲನಿದ್ದಲ್ಲಿ ಯುದ್ಧವಿದೆಯೆಂದು ಹೇಳಿದರೂ ತಪ್ಪಾಗಲಾರದು. ಅಷ್ಟು ಮೈಗೂಡಿಕೊಂಡಿದೆ ಅವನ ವ್ಯಕ್ತಿತ್ವ. ಭವಿಷ್ಯದ ಬಗೆಗೆ ಅವನು ಸ್ವಭಾವಕ್ಕನುಸರಿಸಿ ವಿಲಕ್ಷಣವಾಗಿ— ವಿಪರೀತವಾಗಿ—ಹೇಳಿದರೆ, ತಲೆತಿರುಕನೆಂಬ ಮುದ್ರೆಯೊತ್ತಿ ಅವನನ್ನು ತೆಗಳುವರು. ಈ ಹುಚ್ಚ ತಲೆತಿರುಕನ ಭವಿಷ್ಯವು ವರ್ತಮಾನದಲ್ಲಿ ಭೂತಾಕಾರವನ್ನು ತಾಳಿದರೆ, ಇವನ ಕಾಲು ಹಿಡಿದುಕೊಳ್ಳದೆ ಗತ್ಯಂತರವಿಲ್ಲ. ವಿಷಯ ವಿಂಗಡಣೆಯಲ್ಲಿ ಚರ್ಚಿಲನದು ವಿಲಕ್ಷಣ ತೀಕ್ಷ್ಣಬುದ್ಧಿ. ಇಂಗ್ಲಂಡಿನ ಪ್ರತಿಗಾಮಿ (Conservatives)ಗಳು, ಹಿಟ್ಲರನ “ನನ್ನ ಹೋರಾಟ” ಪುಸ್ತಕದಲ್ಲಿಯ ವಿಚಾರವು ತಮ್ಮ ತತ್ತ್ವದಂತೆಯೆ ಇದೆಯೆನ್ನುವವರೂ ಬ್ರಿಟಿಶ್-ಜರ್ಮನ್ ಬಾಂಧವ್ಯದ ಬಗ್ಗೆ ಹಿಟ್ಲರನ ಮಾತಿನಲ್ಲಿ ವಿಶ್ವಾಸವಿಟ್ಟವರೂ ಆಗಿದ್ದರು. ಆದರೆ ಒಬ್ಬನೆ ಇದ್ದರೂ ಚರ್ಚಿಲನು, ನಾಜಿಗಳನ್ನು ಆಳವಾಗಿ ಅಭ್ಯಸಿಸಿ, ಅವರು ಹೇಳುವುದೆಲ್ಲ ಜೊಳ್ಳು—ಪೊಳ್ಳು—ಸೋಗು ಎಂದು ಉಸುರಿದನು. ಇಡಿಯ ದೇಶಕ್ಕೆ ದೇಶವೇ ಒಂದು ಮತವಾಗಿದ್ದರೆ ಚರ್ಚಿಲನದೇ ಒಂದು ಮತ. ಮೊದಲುಮೊದಲು ಇವನ ಮಾತು ಬರಿಯ ಗಾಳಿಯಲ್ಲಿಯೆ ಉಳಿಯಿತು.

ಎಚ್ಚರಿಕೆ ಕೊಡುವುದು ತನ್ನ ಕರ್ತವ್ಯವೆಂದು ಮನಗಂಡಿದ್ದರಿಂದ ಜನತೆಯ ಮನದಟ್ಟಾಗುವಂತೆ ಚರ್ಚಿಲನು ಬಿಚ್ಚಿ ಹೇಳಿದ: “ಬಂಧುಗಳೆ, ಹಿಟ್ಲರನ ಈ ಸೋಗಿಗೆ ಮರುಳಾಗಬೇಡಿ ಹಿಟ್ಲರನು ರಶಿಯದ ಸಂಘವಾದಕ್ಕೆ ವಿರೋಧಿಯಾದಾಕ್ಷಣ, ಇಂಗ್ಲಂಡಿನ ತತ್ತ್ವದ ಸಮೀಪಕ್ಕೆ ಬಂದನೆಂದು ತಿಳಿಯುವುದು ದಡ್ಡತನವಲ್ಲವೆ? ಹಿಟ್ಲರನು ಏರಾಟಿಕೆಯ (Aggression) ಹವಣಿಕೆಯಲ್ಲಿದ್ದಾನೆ. ಅವನ ಭ್ರಾಂತಿ(?)ವ್ಯದ ಮಾತಿನ ಮೆಚ್ಚಿಗೆ ಬಿದ್ದರೆ ಸಂಕಟಕ್ಕೀಡಾಗುವಿರಿ. ನಿಮ್ಮ ಶಕ್ತಿಯನ್ನು ಬೆಳೆಯಿಸಿರಿ. ಯಾರು ಎಷ್ಟೇ ಅನುಕೂಲರಿದ್ದರೂ ಯುದ್ಧಸಮಯದಲ್ಲಿ ಯಾರು ಯಾರ ಪಕ್ಷ ಕಟ್ಟುವರೊ ತಿಳಿಯುವುದಿಲ್ಲ. ಜೋಕೆ! ಮೊದಲು ಮೈಮರೆತು ಹಿಂದುಗಡೆ ಪೇಚಾಡಬೇಕಾದೀತು! ಎಚ್ಚರಿಕೆ!”

ಈ ರೀತಿ ಗುಡುಗಿದೊಡನೆ, ಜನತೆಯಲ್ಲಿ ಅದೇನೊ ತಿಳಿವಳಿಕೆ ತೋರಲಾರಂಭಿಸಿತು. ಚರ್ಚಿಲನ ಮಾತುಗಳಲ್ಲಿ ಭವಿಷ್ಯದ ಖಚಿತತೆ ಇರುವುದು ಎಂದು ಅವರಿಗೆ ಮನದಟ್ಟಾಗಿದೆ. ಅವನನ್ನು ಒದರುಬುರುಕನೆಂದು ಅಲಕ್ಷಿಸುತ್ತಿದ್ದರೂ, ಕಳವಳದಿಂದ ಅಂತರಾಳದಿಂದ ಬಂದ ಮಾತುಗಳಿದ್ದರೆ ಭವಿಷ್ಯವಾದಿಯೆಂದು ಮನ್ನಿಸುತ್ತಾರೆ. ಇಂದು ಬ್ರಿಟನ್ನು ಯುದ್ಧಕ್ಕೆ ಸಜ್ಜಾದುದು ಚರ್ಚಿಲನ ಎಚ್ಚರಿಕೆಯ ಅಬ್ಬರದಿಂದಲೆ. ಅಂದಿನಿಂದಲೆ ಯುದ್ಧ-ಸಾಮಗ್ರಿಗಳನ್ನು ಹೆಚ್ಚಿಸುವ, ಕಲೆಹಾಕುವ ಸಿದ್ಧತೆಯನ್ನು ಮಾಡಹತ್ತಿದುದರಿಂದ, ಹಿಟ್ಲರನು ಎಷ್ಟು ಉರಿದಾಡಿದರೂ ಇಂದು ಅಂಜುವಂತಿಲ್ಲವಿಷ್ಟೇ ಅಲ್ಲ, ಹಿಟ್ಲರನನ್ನು ಮಣ್ಣುಪಾಲುಮಾಡುವ ಹಟವೂ ಒಂವಿದೆ. ಈ ಹಿರಿಮೆಗೆ ಕಾರಣ ಚರ್ಚಿಲನು: ಅವನ ವಿಲಕ್ಷಣ ಭವಿಷ್ಯವಾಣಿಯು!

ಚರ್ಚಿಲನು ನಿಜವಾಗಿಯೂ ಅಸಾಧಾರಣವ್ಯಕ್ತಿಯು. ಇವನು ಹುಟ್ಟಿದುದು ಘನವಂತರ ಮನೆತನದಲ್ಲಿ: ಇವನ ತಂದೆಯು,—ಲಾರ್ಡ ರುಡೊಲ್ಫ್ ಚರ್ಚಿಲನು, ತನ್ನ ಕಾಲದಲ್ಲಿ ಇಂಗ್ಲಂಡಿನ ಘನತೆಗಾಗಿ ಹೆಣಗಿದವರಲ್ಲಿ ಒಬ್ಬನು, “ಇಂಗ್ಲಂಡನ್ನು ಆಳಿ, ಅದರ ಕೀರ್ತಿಯನ್ನು ದಿಗಂತದಲ್ಲಿ ಹಬ್ಬಿಸಲು ಪ್ರಯತ್ನಪಟ್ಟ—ಪಡುತ್ತಿದ್ದ—ನೂರು ಕುಟುಂಬಗಳಲ್ಲಿ ಚರ್ಚಿಲನದೂ ಒಂದು” ಇವನು ೧೮೭೪ರಲ್ಲಿ ಜನ್ಮತಾಳಿ, ‘ಹ್ಯಾರೊ’ ಶಾಲೆಯಲ್ಲಿ ಶಿಕ್ಷಣ ಹೊಂದಿದನು. ಆ ಮೇಲೆ ಕೆಲವು ವರ್ಷ—ಸೈನ್ಯದಲ್ಲಿ ಸೇರಿಕೊಂಡನು; ಬೋಅರ್ ಯುದ್ಧದಲ್ಲಿ ಇವನು ದಳಪತಿಯಾಗಿದ್ದನು. ಬರೆವಣಿಗೆಯಲ್ಲಿ ಕುಶಲನಿದ್ದುದರಿಂದ, ದಕ್ಷಿಣಆಫ್ರಿಕದ ಯುದ್ಧದಲ್ಲಿ ಯುದ್ಧದ ವಿಶೇಷಸುದ್ದಿಗಾರನೆಂದು ಕೆಲಸಮಾಡುತ್ತಿದ್ದಾಗ, ಇವನು ಬಂಧಿಸಲ್ಪಟ್ಟನು. ತಿಂಗಳು ಕಳೆಯುವುದರೊಳಗೆಯೆ, ನುಸುಳಿ ಪಾರಾಗಿಹೋದನು. ಇವನು ಇಂತಹ ಕ್ಷೇತ್ರದಲ್ಲಿ ಕಾರ್ಯ ಮಾಡಿಲ್ಲವೆಂತಿಲ್ಲ. ಕೆಲದಿನ ಸೈನಿಕ, ಕೆಲದಿನ ಸುದ್ದಿಗಾರ, ಬರಹಗಾರ, ಮಾತುಗಾರ—ಮುತ್ಸದ್ದಿ. ಯಾವುದರಲ್ಲಿ ಕೈಹಾಕಿದರೂ ಮೇಲುಗೈ ಇವನದು!

ಇವನ ಜೀವನದ ಸನ್ನಿವೇಶಗಳೂ ವಿಚಿತ್ರವಾಗಿಯೆ ಇವೆ. ಅದಕ್ಕಾಗಿಯೆ ಇವನ ಸ್ವಭಾವ ವಿಲಕ್ಷಣವಾಗಿದೆಯೊ ಅಥವಾ ವಿಲಕ್ಷಣ ಸ್ವಭಾವದ ಮೂಲಕ ಇವನ ಜೀವನ ಸನ್ನಿವೇಶಗಳು ವಿಲಕ್ಷಣವಾಗಿವೆಯೊ ತಿಳಿಯದು. ಹುಟ್ಟಿದ್ದು ಘನವಂತರ ಮನೆತನದಲ್ಲಾದರೂ ಸಾಮಾನ್ಯ ಮನುಷ್ಯರಂತೆ, ಯೂನಿಯಾನಿಸ್ಟ ಪಂಗಡದಿಂದ ೧೯೦೦ರಲ್ಲಿ ಪಾರ್ಲಿಮೆಂಟಿಗೆ ಆರಿಸಿಬಂದನು. ಇದು ಮೊದಲು ರಾಜಕಾರಣದಲ್ಲಿವನು ಕಾಲಿಟ್ಟುದು. ನಡುವೆ ಎರಡುವರ್ಷ ಮಾತ್ರ ಬಿಟ್ಟು, ಅಂದಿನಿಂದ (೧೯೦೦) ಇಂದಿನ ವರೆಗೆ ಪಾರ್ಲಿಮೆಂಟಿನಲ್ಲಿದ್ದು — ಸರಕಾರದ ಒಂದಿಲ್ಲೊಂದು ಸ್ಥಾನವನ್ನು ಅಲಂಕರಿಸಿ, ತನ್ನ ಸೂಕ್ತ—ವಿಲಕ್ಷಣಕಂಡರೂ—ಸಲಹೆಗಳನ್ನು ಕೊಟ್ಟು, ಇಂಗ್ಲಂಡಿನ ಮಾನವನ್ನು ಮೆರೆಯಿಸಿದ್ದಾನೆ. ಕೆಲಕಾಲ ವ್ಯಾಪಾರಿಸಂಘದ ಅಧ್ಯಕ್ಷನಾಗಿಯೂ, ಗೃಹಮಂತ್ರಿಯಾಗಿಯೂ, ನೌಕಾಖಾತೆಯ ಮಂತ್ರಿಯಾಗಿಯೂ, ಯುದ್ಧಮಂತ್ರಿಯಾಗಿಯೂ, ಹಣಕಾಸಿನ ಮಂತ್ರಿಯಾಗಿಯೂ ಕಾರ್ಯನಿರ್ವಹಿಸಿದ್ದರಿಂದ, ಇವನ ಮಾತಿನಲ್ಲಿ ವ್ಯಾವಹಾರಿಕ ಅನುಭವವೂ ಜಾಣಾಕ್ಷತನವೂ ಇದೆಯೆಂದು ಇಂದು ಜನತೆಯು ಭಾವಿಸಹತ್ತಿದೆ. ಎಷ್ಟೋ ಜನರಿಗೆ ಆಶ್ಚರ್ಯಕಂಡರೂ ಯುದ್ಧ ಪ್ರಾರಂಭವಾದ ಕೂಡಲೆ, ಎಲ್ಲರ ಲಕ್ಷ್ಯವೂ ಚರ್ಚಿಲನ ಕಡೆಗೆ ಹೋಯಿತು—ಮತ್ತು ಇದೀಗ ಅವನು ಮತ್ತೆ ನೌಕಾಶಾಖೆಯ ಮಂತ್ರಿಯಾಗಿದ್ದಾನೆ. ಇಂತಹ ಅಸಾಧಾರಣವ್ಯಕ್ತಿಯು, ಸುಮಾರು ೪೦ ವರುಷ ರಾಜಕೀಯ ಕಾರ್ಯಕ್ಷೇತ್ರದಲ್ಲಿ ಅವ್ಯಾಹತವಾಗಿ ದುಡಿದಿದ್ದರೂ, ಮುಖ್ಯಮಂತ್ರಿಯ ಸ್ಥಾನಕ್ಕೆ ಏಕೆ ಬಂದಿರಲಿಕ್ಕಿಲ್ಲವೆಂದು ಅದೆಷ್ಟೋ ಜನರು ಆಶ್ಚರಿಪಡುತ್ತಿರಬಹುದು. ನಿಜ, ಅದಕ್ಕೆ ಇವನ ಸ್ವಭಾವವೇ ಕಾರಣ. ತನ್ನ ಮನಸ್ಸಿಗೆ ಸರಿಕಂಡುದನ್ನು ಸಿರುವುದು ಇವನ ಸ್ವಭಾವ. ಹೇಳುವುದಾದರೂ ಮೆತ್ತಗಲ್ಲ, ಮಾರ್ಮಿಕವಾಗಿ, ಕಟುವಾಗಿ, ಚುಚ್ಚುವಂತೆ—ಒಮ್ಮೊಮ್ಮೆ ಎರಡನೆಯವರ ಎದೆಬಿರಿಯುವಂತೆ— ಹೇಳುವುದರಿಂದ ಹೊಣೆಗಾರಿಕೆಯ ಸ್ಥಾನವಾದ ಮುಖ್ಯಮಂತ್ರಿಯ ಪದವಿಯು ಸಿಕ್ಕಿಲ್ಲ. ಆ ಸ್ಥಳದಲ್ಲಿದ್ದವರು ತಮ್ಮ ಅಭಿಪ್ರಾಯವನ್ನು ಒಮ್ಮೆಲೆ ತಮ್ಮ ಮನಸ್ಸಿಗೆ ಬಂದಂತೆ ಹೊರಗೆಡಹಲಾಗದು. ಇದು ಚರ್ಚಿಲನ ಸ್ವಭಾವಕ್ಕೇ ತೀರ ಅಸಮ್ಮತ. ಅದಕ್ಕೆ ಕಾರಣವೂ ಉಂಟು.

ಇವನ ಮುಖ್ಯ ಧ್ಯೇಯವಾವುದೆಂದರೆ ನಾಡಿನ ಘನತೆ, ಹಿರಿಮೆ ನಾಡಿನ ಏಳ್ಗೆಗಾಗಿ ಯಾರ ಹಿತಸಂಬಂಧವನ್ನೂ ನೋಡುವದಿಲ್ಲ. ಮೊದಲು ನಾಡು. ಪಕ್ಷ-ಪಂಗಡಗಳು ನಾಡಿನ ಉನ್ನತಿಗಾಗಿ ಹೆಣಗುವ ಸಾಧನಗಳು. ಚರ್ಚಿಲನು ಸಾಧನ—ಸಾಧ್ಯಗಳನ್ನು ನಿಜವಾಗಿ ತಿಳಿದವನು. ನಾಡಿನ ಹಿತಕ್ಕೆ ಧಕ್ಕೆ ತಗಲುವುದೆಂದು ತಿಳಿದರೆ. ಅವನು ತನ್ನ ಪಕ್ಷವನ್ನೆ ಬೈಯಲೂ, ಟೀಕಿಸಲೂ ಹಿಂದುಮುಂದು ನೋಡುವುದಿಲ್ಲ. ಪಂಗಡದ ವ್ಯಾಪ್ತಿ ಚಿಕ್ಕದು- ನಾಡು ಹಿರಿಯದು. ನಮ್ಮ ನಾಡವರಿಗೆ, ಚರ್ಚಿಲನ ಈ ಗುಣವು ಆದರ್ಶವಾಗಿದೆ. ಪಕ್ಷ-ಪಂಗಡಗಳ ಸಂಕೋಲೆಯಲ್ಲಿ ಸಿಲುಕಿ, ತಮ್ಮ ಧ್ಯೇಯವನ್ನೆ ಸಂಕುಚಿತವನ್ನಾಗಿ ಮಾಡಿಕೊಂಡ ಮೇಲೆ ವಿಶಾಲವಾದ—ಹಿರಿಯದಾದ ಗುರಿ—ನಾಡಿನ ಏಳ್ಗೆ—ಯನ್ನು ಹೇಗೆ ಸಾಧಿಸುವರೊ ನಾನು ಕಾಣೆ.

ಯಾವುದಕ್ಕೂ ಬೆದರಿ ದೂರಸರಿಯುವುದು ಚರ್ಚಿಲನ ಸ್ವಭಾವವಲ್ಲ. ಈಗಿನ ಮುಖ್ಯಮಂತ್ರಿಯಾದ ಚೇಂಬರಲೇನರಿಗೂ ಇವನಿಗೂ ಅದೆಷ್ಟು ಅಂತರ! ಅವರು ವ್ಯವಹಾರಿಕನ ರೀತಿಯಂತೆ, "ಇಂದಿನ ಸಾವು ನಾಳೆ" ಎಂದು ಗಂಡಾಂತರಗಳನ್ನು ಮುಂದೂಡುವವರು. ಚರ್ಚಿಲನೂ, ಸಂಕಟಗಳನ್ನು ಕಂಡುಹಿಡಿದು, ಅವುಗಳಲ್ಲಿ ಹೊಕ್ಕು, ತನ್ನ ಶಕ್ತಿಸಾಮರ್ಥ್ಯದಿಂದ ಅವುಗಳ ಪ್ರಭಾವವನ್ನು ತಗ್ಗಿಸಿ, ಜಯಶಾಲಿಯಾಗಿ ಬರುವ—ಅಂತಹ ಸಾಹಸೀ ಸ್ವಭಾವ ಅವನದು. "ಹುಚ್ಚ—ತಲೆತಿರುಕ" ಎಂಬುದು ಅವನಿಗೆ ಇದಕ್ಕಾಗಿ ದೊರೆತ ಬಹುಮಾನ.

ವಿವಿಧಕ್ಷೇತ್ರದಂತೆ ವಿ ವಿ ಧ ರೀ ತಿ ಯಿಂದಲೂ ಕಾರ್ಯಮಾಡಬಲ್ಲ ಚರ್ಚಿಲ್. ಸ್ಮ ಜಾಣನಾಗಿ, ಕುಶಲರೀತಿಯಿಂದ ವನಚರಿತೆಯನ್ನು ಬರೆಯಬಲ್ಲ. ಮಾತುಗಾರಿಕೆಯಿಂದ ಜನತೆಯನ್ನು ಮಂತ್ರಮುಗ್ಧರನ್ನಾಗಿ ಮಾಡಬಲ್ಲ. ಎದುರಾಳುಗಳನ್ನು ತನ್ನ ಚುಚ್ಚುಮಾತಿನಿಂದ ಬೆಚ್ಚಿ ಳುವಂತೆ ಮಾಡಲು ಶಕ್ತ. ನಗೆಮಾತಿದಲೂ ಕಟು.ವಿನೋದೋಕ್ತಿಗಳಿಂದಲೂ ತಹ ಸಂಯಮಿಗಳನ್ನೂ ನಗಿಸಬಲ್ಲ. ಕೇನು ಹೆಗ್ಗಳಿಕೆಯೊ—ಹುಚ್ಚುತನವೊ! ಗೂ ಅನ್ನುವುದು ಜನತೆ.

ನಾಜಿಗಳು ಪುಂಡಾಟಿಕೆಯಲ್ಲಿ ಒಂದು ಂಡು ಮಾತನಾಡಿದರೆ, ಅವನ್ನು ತುಂಡು ಾಡುವ ಗಂಡುಶೈಲಿಯ ಉತ್ತರ ರ್ಚಿಲನದು. ಹಿಟ್ಲರನನ್ನು ಹೆದರಿಸಲು ರ್ಚಿಲನು ಬೇಕು. ಹಿಟ್ಲರನ ಮಾತಿನ ರ್ಮ ಚರ್ಚಿಲನಿಗೆ ತಿಳಿವಂತೆ,ಚರ್ಚಿಲನ ತ್ತರವಾದರೂ ಹಿಟ್ಲರಿಗೆ ಮನವುಟ್ಟುದು— ಮನಬಿಚ್ಚುವುದು. 'ತುಂಟಂಟರಿಗೆ ಗಂಟುಬಿದ್ದಿದೆ.' ನಾಜಿಗಳ ಬಡಿರವನ್ನೂ ಬೂಟಾಟಿಕೆಯನ್ನೂ ಹುಡಿಾಗಿ ಹಾರಿಸಬಲ್ಲನು ಚರ್ಚಿಲ್. ಈ ಕ್ತಿಗಾಗಿ ಹಿಟ್ಲರನಿಗೆ ಬ್ರಿಟಿಶ್ ಮಂತ್ರಿಂಡಲದಲ್ಲಿ ಚರ್ಚಿಲ್ಲನು ಬೇಡ. ಅದೇ ಕ್ತಿಸಾಮರ್ಥ್ಯಕ್ಕಾಗಿ, ಅವನು ಮಂತ್ರಿಂಡಲದಲ್ಲಿ ಬಂದುದು; ಇದುವೆ ರುನು!

ಇದುವರೆಗೆ ಆಗಿಹೋದ ರಾಜಕಾರಣಿಲ್ಲಿ ಇವನಷ್ಟು ಬಲಶಾಲಿಗಳೂ,ಜನರನ್ನು ರ್ಷಿಸಿಕೊಂಡವರೂ ಬಹಳ ಕಡಿಮೆ. ಸರೀತವಾಗಿ ಕಂಡರೂ, ವಿಲಕ್ಷಣವಾಗಿ ತೋರಿದರೂ ಭವಿಷ್ಯವಾದಿಯಂತೆ ಇವನ ಮಾತಿಗೆ ಬೆಲೆ ಇದೆ. ಇವನನ್ನು ಮುಂದೆ ತಂದುದು ಇವನ ಮಾತೇ! ಮಾತೃಭೂಮಿಯ ಉತ್ಕಟಪ್ರೇಮವೆ ಇವನ ಕಾರ್ಯದ ಜೀವಾಳ. ಬರಿಯ ಮಾತಿನ ಮಲ್ಲನಲ್ಲ; ಕಾರ್ಯಮಾಡಿದ ಕರ್ತೃತ್ವಶಾಲಿ. ಈಗ ಇವನಿಗೆ ೬೫ ವರುಷಗಳು ಮಿಕ್ಕಿದ್ದರೂ ಹರಯದ ಹುಡುಗನಂತೆ, ಪುಟಿದೆದ್ದು ಕಾರ್ಯಮಾಡುತ್ತಿರುವ.



ನೀವು ಯಾವಾಗ ಅನ್ನುವಿರಿ?

ಅದು ತಿರುಗಿ ಬರುವದಿಲ್ಲವೆಂದು ಖಾತ್ರಿ ಆದಾಗ ಅಲ್ಲವೆ?
ಆದರೆ ನಿಮಗೆ ಎಂದಾದರೂ ಹೀಗೆ ಖಾತ್ರಿ ಅನಿಸಿರುವದೋ ಹೇಗೆ?

ದಮ್ಮಿನ ಬಾಧೆಯು ಬಹು ತ್ರಾಸದಾಯಕವಿದ್ದುದರಿಂದ ಅದನ್ನು ನಿವಾರಿಸಿಕೊಳ್ಳುವ ಸಹಜ ಮಾರ್ಗವನ್ನು ಬಿಟ್ಟು ದಮ್ಮು ಹತ್ತಿದವನು ಆರಾಮದ ಆಶೆಯಿಂದ ಬೇರೆ ಬೇರೆ ಉಪಾಯಗಳಿಗೆ ಮೊರೆ ಹೋಗುತ್ತಾನೆ. ಐದು ಹತ್ತು ಮಿನಿಟುಗಳಲ್ಲಿ ದಮ್ಮನ್ನು ನೆಟ್ಟಗೆ ಮಾಡುವ ಪ್ರತಿಜ್ಞೆಯ ಪೇಟೆಯಲ್ಲಿಯ ಪೇಟೆಂಟ ಔಷಧಗಳು ಅವನನ್ನು ಸಹಜವಾಗಿ ಮೋಹಗೊಳಿಸುವವು. ಔಷಧ ಪುಡಿ, ಎಫೆಡ್ರಿನ್‌ದ ಗುಳಿಗೆಗಳಂಥ ಕ್ಷಣಿಕ ಗುಣಕಾರಿ ಮತ್ತು ತಾತ್ಪೂರ್ತಿಕ ಉಪಾಯದ ನಾದದಿಂದ ನೀವು ಅದರ ಗುಲಾಮರಾಗಿ ಕಾಯಂ ದಮ್ಮಿನವರಾಗಿ ಉಳಿದದ್ದು ಬಹಳ ತಡ ಮಾಡಿ ಲಕ್ಷಕ್ಕೆ ಬರುತ್ತದೆ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೆ ಕೆಟ್ಟಿರುತ್ತದೆ. ದಮ್ಮು ಕೇವಲ ಬಾಹ್ಯ ಲಕ್ಷಣ. ಆದ್ದರಿಂದ ಹಾಹಾ ಅನ್ನುವುದರಲ್ಲಿ ಗುಣಮಾಡಿಕೊಳ್ಳುವ ಆಶೆ ಹಿಡಿಯುವದು ಹುಚ್ಚುತನವೇ ಸರಿ. ಉಬ್ಬರಾಡಿಸುವದನ್ನು ನಿಯಮಿತ ಮತ್ತು ದಸ್ತ ಸ್ಪಷ್ಟ ಮಾಡುವ ಔಷಧಗಳೇ ದಮ್ಮನ್ನು ಗುಣಪಡಿಸಬಲ್ಲವು. ಆದರೆ ಈ ಔಷಧಿಗಳು ಗುಣಕಾರಿಯಾಗಬೇಕಾದರೆ ಅವುಗಳೊಂದಿಗೆ ನಿಯಮಿತ ಶೌಚ ಶುದ್ಧಿಯಾಗಿ ಪಚನಶಕ್ತಿಯು ಸುಧಾರಿಸುವ ಮತ್ತು ಶಕ್ತಿಯನ್ನು ಹೆಚ್ಚಿಸುವ ಯೋಜನೆಯು ಆಗಲಿಕ್ಕೆ ಬೇಕು.

ಪುರೋಹಿತ ಶ್ವಾಸಹಾರಿ (ಕಂಪೌಂಡ) ಯಲ್ಲಿ ಈ ತರದ ಕಫ್ಫಾಗದಂಥ ಮತ್ತೂ ಸಮತೋಲ ಮಿತ್ರಣವು ಸಾಧ್ಯವಾಗಿದ್ದರಿಂದ, ದಮ್ಮಿನ ನಿವಾರಣವನ್ನು ಹುಡುಕಿ ಅದರ ಮೇಲೆ ತನ್ನ ಪ್ರಭಾವವನ್ನು ಬೀರಿ, ದಮ್ಮನ್ನು ಮೆಲ್ಲ ಮೆಲ್ಲನೆ ಆದರೆ ಖಂಡಿತವಾಗಿ ನೆಟ್ಟಗೆ ಮಾಡುವ ಶಾಸ್ತ್ರೀಯ ಔಷಧವಿಲ್ಲಿ ಇದು ಅನೇಕ ವರ್ಷಗಳಿಂದ ಅಗ್ರೇಸರತ್ವ ಪಡೆದಿದೆ. ದಮ್ಮು, ತೇರು, ಬೆಳಗು ಮುಂಜಾನೆ ಉಸಿರುಗಟ್ಟುವದು, ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಯಾವತ್ತೂ ವಿಕಾರಗಳಿಗೆ ಅದರಿಂದ ಗುಣವಾಗುವದು.

ರೂ. ೨, ರೂ. ೧-೮-೦, ರೂ. ೬ ಈ ಕಿಮ್ಮತ್ತುಗಳಲ್ಲಿ ಸಣ್ಣ ದೊಡ್ಡ ಬಾಟಲಿಗಳು ಸರ್ವತ್ರ ದೊರೆಯುತ್ತವೆ.

ಕರಿಸಿಕೊಳ್ಳುವ ವಿಳಾಸ:

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಅಥವಾ ಮುಂಬಯಿಯ ಯಾವದೇ ಔಷಧದ ಅಂಗಡಿಕಾರರ ಕಡೆಯಿಂದ

ಪುರೋಹಿತ ಶ್ವಾಸಹಾರಿ



ವಿ. ಸೂ: ನಮ್ಮಲ್ಲಿ ಬಂದು ಅಸ್ವೀಕೃತವಾದ ಲೇಖನಗಳ ಲೇಖಕರಿಗೆ ಸಂಪಾದಕಮಂಡಲಿ ಮಾಡಿದ ಸೂಚನೆಗಳಿವು. ಲೇಖಕರಲ್ಲದವರು ಇದನ್ನು ಬೇಕಾದರೆ ಓದಲಿ, ಬೇಡವಾದರೆ ಬಿಡಲಿ!

ಬಾ ಎನ್ನ ಮನದನ್ನೆ (ಕವನ)

ನಿಮ್ಮ ಮನದನ್ನೆಯು 'ಮನದೊಲವು ಮೂಗಿನಲಿ ಹನಿಹನಿಯ ಕಣವಾಗಿ' ಹೇಗೆ ಜಿನುಗುವುದೋ ನಮಗೇನೂ ಗೊತ್ತಾಗಲಿಲ್ಲ. ನೆಗಡಿಯಾಗಿರಬಹುದೇ ಆಕೆಗೆ?

ಭಯದ ನಗೆ (ಒಂದು ದೃಶ್ಯ)

ಪ್ರಕಟಿಸಲಿಕ್ಕಾಗದು, ಕ್ಷಮಿಸಿ!

ಹುಲ್ಲು ಹೂ! (ಕವನ)

'ನಿಸ್ವಾರ್ಥ ಸೇವೆಯಿದು, ವ್ಯಕ್ತಿಯ ವಿಚಿತ್ರ!'

ಸತ್ಯಾಂಧಸಾಧು (ಪತ್ತೇದಾರಿ ಕತೆ)

'ಸರ್, ಎ. ಕಾನಾನ್ ಡೊಯಲ್ ಅವರ ಪತ್ತೇದಾರಿ ಕತೆಗಳ ಪರಿಚಯವಿದ್ದುದನ್ನು ತಮ್ಮ ಕತೆಯ ಪ್ರಾರಂಭದಲ್ಲಿಯೆ ಹೇಳಿದ್ದೀರಿ. ತಮ್ಮ ಪತ್ತೇದಾರಿ ಕತೆಯಂತೆಯೆ ಅವನ ಪತ್ತೇದಾರಿ ಕತೆಗಳು ಇದ್ದರೆ, ಅವನ ಹೆಸರನ್ನು ಯಾರಾದರೂ ಎತ್ತುತ್ತಿದ್ದರೆಂದು ನಮಗೇನೂ ಎನಿಸಲಾರದು.

ಮುಗ್ಧ ಬಾಲೆ (ಕವನ)

ನಿಮ್ಮ 'ಮುಗುಧ ಬಾಲೆ'ಯ ಪರಿಚಯ ನಮಗಾಯಿತು. ಅವಳನ್ನು ಬೇಗ ಪಡೆಯಬೇಕೆಂಬ ಅಪೇಕ್ಷೆಯಿದ್ದರೆ ೬ ಪೈಗಳ ಅಂಚೆಯ ಚೀಟಿ ಕಳುಹಿಸಿ. ಒಂದೊಂದು ಸಲ ಬೆಲೆಯಿಲ್ಲದ ವಸ್ತುಗಳಿಗೂ ಬೆಲೆಯನ್ನು ಕೊಡಬೇಕಾಗುವುದಲ್ಲವೆ?

ಮಾನವ ಪಶು! (ಸಣ್ಣ ಕತೆ)

ನೀವು ಶಸ್ತ್ರಸಂನ್ಯಾಸ ಸಂಘದ ಮೆಂಬರರಷ್ಟೇ ಇದ್ದೀರೊ, ಜರ್ಮನರ ವಿರುದ್ಧ ಪ್ರಚಾರದ ಹಣವನ್ನೂ ಕೊಟ್ಟಿದ್ದೀರೊ? ಸೈನಿಕರೆಂದರೆ ಹೇಳಿ-ಕೇಳಿ ಪಶುಗಳು. ಯುದ್ಧ ನಡೆಯದಿರುವಾಗಲೂ ಅವರು ಬೇಕಾದುದನ್ನು ಮಾಡಬಲ್ಲರೆಂಬುದಕ್ಕೆ ನಮ್ಮ ಹಿಂದುಸ್ತಾನದಲ್ಲಿ ನಡೆದ ಅನೇಕ ಘಟನೆಗಳೂ ದೃಷ್ಟಾಂತವಾಗಿ ನಿಲ್ಲಬಲ್ಲವು. ಆ ಘಟನೆಗೆ ಕಾರಣರಾದವರು ಜರ್ಮನ್ ದಂಡಾಳುಗಳಲ್ಲ, ಬ್ರಿಟಿಷ್ ದಂಡಾಳುಗಳು! ತಮ್ಮ ಪ್ರಚಾರದ ಬಣ್ಣ ಏಕಪಕ್ಷೀಯವಾಗಿ ಕಾಣುತ್ತಲಿದೆ.

(೬೩೪ ನೆಯ ಪುಟದಿಂದ ಮುಂದುವರಿದುದು)

ಗಡುಚಾದ ಶಾಖೆಯಾದ ಸಂಖ್ಯಾಶಾಸ್ತ್ರದಲ್ಲಿ (statistics) ಸಂಶೋಧನ ಕಾರ್ಯವನ್ನೆಸಗುವುದಕ್ಕಾಗಿ ಇಂಗ್ಲಂಡಿಗೆ ೧೯೩೬ರಲ್ಲಿ ತೆರಳಿದರು. ಅಲ್ಲಿ ಆರ್ಥಿಕ ಔದ್ಯೋಗಿಕ ಸಂಖ್ಯಾಶಾಸ್ತ್ರದ ಅಧ್ಯಯನವನ್ನು ಮುಂದುವರಿಸಿ ಮಾಡಿದ ಸಂಶೋಧನಕ್ಕಾಗಿ, ಇವರಿಗೆ ಈಗ ಲಂಡನ್ ವಿಶ್ವವಿದ್ಯಾಲಯದವರು ಎಮ್. ಎಸ್‌ಸಿ. ಪದವಿಯನ್ನು ಸಲ್ಲಿಸಿರುವರು. ಪ್ರಾಥಮಿಕ ಪೀಯರಸನ್ ಮತ್ತು ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸದಲ್ಲಿಯ ಡಾ. ಬ್ರೋಡ್ಸ್ ಇವರ ನೇತೃತ್ವದಲ್ಲಿ ಸಂಶೋಧನೆಗೈದು ಸದ್ಯ, ಲಂಡನ್ ಸ್ಕೂಲ ಆಫ್ ಎಕಾನಾಮಿಕ್ಸದಲ್ಲಿ "ಜನಸಂಖ್ಯೆ (Population statistics) ಪ್ರಮೇಯ"ದ ಮೇಲೆ ಕೆಲಸ ನಡೆಯಿಸಿರುವರು. ಅಲ್ಲಿಯು ಕೂಡಾ ಒಳ್ಳೇ ಕುಶಾಗ್ರಬುದ್ಧಿಯ ತರುಣರೆಂದು ಖ್ಯಾತಿಗೊಂಡದ್ದು, ಇಡಿ ಕರ್ನಾಟಕಕ್ಕೇ ಗೌರವ ಸಂಗತಿಯಾಗಿದೆ.

ಪ್ಯಾರಿಸನಗರದಲ್ಲಿ ಅಂತರರಾಷ್ಟ್ರೀಯ ಪ್ರದರ್ಶನ ನಡೆದಾಗ ೮೦೦ ಅಡಿ ಗೋಪುರದ ಮೇಲಿಂದ ಆಕಾಶಬುಟ್ಟಿಯ (Parachute) ಸಹಾಯದಿಂದ ಹಾರಿದ ಧೈರ್ಯ ತೋರಿದ್ದಕ್ಕಾಗಿ, ಮೆಚ್ಚಿಗೆಯ ಪ್ರಶಸ್ತಿಪತ್ರವೂ ದೊರೆತಿದೆಯಂತೆ. ಇದಲ್ಲದೆ, ಚದುರಂಗದಾಟದಲ್ಲಿಯ ತಮ್ಮ ಕುಶಲತೆಯನ್ನು ಅಲ್ಲಿ ತೋರಿಸಿರುವರಂತೆ.

ಲಾವಣ್ಯವೇ ಸೌಖ್ಯದ ಸೋಪಾನ



★

ನಿಮ್ಮ ಮೈ ಮೊಗ ಮಲ್ಲಿನಂತೆ ಹೊಳೆಯಬೇಕೆ?

ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಗಂಧದ ಸಾಬೂನನ್ನು ಉಪಯೋಗಿಸಿ!

★

ಮೈಸೂರು ಗಂಧದ ಸಾಬೂನು

ಎಲ್ಲೆಲ್ಲಿಯೂ ಸಿಗುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಹೋರಿಕರು ಎತ್ತಾಗದೆ?

ಶ್ರೀ. " ರಾಮು "

ಅವರಿಂದ

ಅಷ್ಟರಲ್ಲಿಯೆ ಅವನ ಹಿಂದಯಿದ್ದ ಇನ್ನೊಂದು ಕರುವು...ಸಿದ್ದಪ್ಪನ ಬೆನ್ನಿಗೆತಲೆಹಾಕಿ ಗುದ್ದಿತು.

ಎಲ್ಲರೂ ಏನೇನನೋ ವ್ಯವಹಾರ ಮಾಡಿ ಲಾಭ ಪಡೆಯುತ್ತಾರೆಂದು, ವಕೀಲ ಕೃಷ್ಣರಾಯರೂ ಒಂದು ವ್ಯವಹಾರಮಾಡಲು ಹವಣಿಸಿದರು. ಮೂರುತಿಂಗಳ ವರೆಗೆ ಅವರಿಗೂ ಅವರ ಸಂಬಂಧಿಕರಿಗೂ ವಿಧವಿಧದ ಅಡಚಣೆಗಳು. ಮೂರು ತಿಂಗಳಾದಮೇಲೆ ಹಿಂಡುವ ಎಮ್ಮೆಯೊಂದು ಸಾಲದ ಹಣಕ್ಕೆ ಆಹುತಿ!

★

ವಕೀಲರ ಸಂಘದ ಕೊಠಡಿಯಲ್ಲಿ ಕುಳಿತುಕೊಂಡು ನಾವು ಕೆಲವು ಜನ ವಕೀಲರು ಹರಟೆ ಹೊಡೆಯುತ್ತಿದ್ದೆವು. ಹೊಸದಾಗಿ ವಕೀಲವೃತ್ತಿಯನ್ನು ಪ್ರಾರಂಭಿಸಿದ್ದ ಮರುಳಪ್ಪನವರು ಸರಸರನೆ ಒಳಗೆ ಬಂದು, ಬೇಸರದಿಂದ ಕಟ್ಟುಗಳನ್ನು ಮೇಜಿನ ಮೇಲೆ ಬಿಸಾಡಿ, ಕುರ್ಚಿಯೊಂದನ್ನೆಳೆದು ಕುಳಿತುಕೊಂಡು "ಇದೆಲ್ಲಿಯ ವಕಾಲತ್ತು ಕೆಲಸ ಬಿಡಿರಿ; ಇದರ ಬದಲು ನಾಲ್ಕು ಸಾವಿರ ತೆಂಗಿನ ಗಿಡದ ತೋಟವನ್ನು ಹಿಡಿದರೆ ಮನಸ್ಸಾರೆ ದುಡಿಯಬಹುದು; ಇವ್ಯಾವ ಕೆಲಸ ತೆಗೀರಿ!" ಎಂದರು.

ಕೃಷ್ಣರಾಯರು—ಹಳೆಯ ಅನುಭವಸ್ಥ ವಕೀಲರು— ತಲೆ ತಗ್ಗಿಸಿಕೊಂಡು ವೃತ್ತಪತ್ರಿಕೆಯನ್ನೋದುತ್ತಿದ್ದವರು ಮರುಳಪ್ಪನವರ ಮಾತನ್ನು ಕೇಳಿ ತಲೆಯೆತ್ತಿ, ಕನ್ನಡಕವನ್ನು ತೆಗೆದು, 'ಹಾಗೆಲ್ಲಾ, 'ಇದು ಹೆಚ್ಚು ಇದು ಕಡಿಮೆ' ಎಂದು ಹೇಳುವುದ ಕ್ಕಾಗುವುದಿಲ್ಲ.. ಉದ್ಯೋಗಗಳಲ್ಲಿ. ಎಲ್ಲಾ ವೃತ್ತಿಗಳಲ್ಲಿಯೂ ಕೀಳು-ಮೇಲುಗಳಿರುತ್ತವೆ. ಉತ್ತಮ ಕನಿಷ್ಠ ದರ್ಜೆಯ ದುಡಿಮೆ ಗಳಿರುತ್ತವೆ. ಎಲ್ಲಾ ಅವರವರ ಅದೃಷ್ಟ ಅಷ್ಟೆ!" ಎಂದರು.

"ಇಟ್ಕೊಳ್ಳೀಡಿ ಕೃಷ್ಣರಾಯರೆ, ನಿಮ್ಮ ಅದೃಷ್ಟ ಗಿದೃಷ್ಟ ಎಲ್ಲಾ ತೆಗೆದಿಡಿರಿ. ಪುರುಷಪ್ರಯತ್ನ ಬೇಕು.. ಅದು ಮುಖ್ಯ!" ಎಂದು ಹೊಸ ಹುರುಪಿನ, ಹೊಸ ವಕೀಲರಾದ ಮರುಳಪ್ಪನವರು ಜವಾಬು ಹೇಳಿದರು.

ಕೃಷ್ಣರಾಯರು ಶಾಂತರಾಗಿಯೆ ಇದ್ದರು. ಅವರ ಸ್ವಭಾವವೇ ಹಾಗೆ. ನಿಧಾನವಾಗಿ, ಕುಗ್ಗಿಸಿದ ಧ್ವನಿಯಲ್ಲಿಯೆ "ಅದು ಸರಿ ಬಿಡಪ್ಪ; ಪುರುಷಪ್ರಯತ್ನ ಮಾಡಬೇಕು, ಸರಿ! ಅದು ಮುಖ್ಯ, ಸರಿ! ಪುರುಷಪ್ರಯತ್ನ ಕೂಡದೂ ಅಂತ ನಾನು ಹೇಳಿದೆನೆ? ನಾವು ಪ್ರಯತ್ನ ಮಾಡಬೇಕು ಸರಿ! ಆದರೆ ಪ್ರಯತ್ನದ ಫಲ ಅವರವರ ಅದೃಷ್ಟದ ಮೇಲಿದೆ. ಈಗ ನೋಡು; ನಾನು ಇಷ್ಟು ವರ್ಷ ವಕೀಲಿಯ ವೃತ್ತಿ ಮಾಡಿ ಅನುಭವ ಪಡೆದು, ಯಾವಾವುದು ಹೇಗೆ ಹೇಗೆ ಎಂದು ವಿಮರ್ಶಿಸಿ ಕೆಲಸ ಮಾಡುವ ಅಭ್ಯಾಸದವನಾಗಿದ್ದರೂ, ಆ ಕೃಷ್ಣರಾಯರ—(ಇವರೂ ನಮ್ಮ ಊರಿನ ಹಿರಿಯ ಗಣ್ಯರಾದ ವಕೀಲರು)— ಹತ್ತಿರ ಎರಡು ಹೋರಿಕರು ವ್ಯಾಪಾರಮಾಡಿದ ಕಥೆಯನ್ನು ಕೇಳಿದರೆ ಏನು ಹೇಳುತ್ತೀಯೊ, ಏನೋ. ಅದನ್ನು ಕೇಳಿದರೆ ನಿನಗೆ ಗೊತ್ತಾಗುತ್ತೆ; ಪ್ರಯತ್ನ ಏನು, ಫಲ ಏನು, ಅದೃಷ್ಟ ಏನು, ಎನ್ನುವುದು!" ಎಂದರು.

ಕೃಷ್ಣರಾಯರು ಕಥೆ ಹೇಳುತ್ತಾರೆಂದರೆ ನಮಗೆಲ್ಲರಿಗೂ ಸುಗ್ಗಿ. ಅನುಭವಗಳನ್ನೂ, ವಿಷಯಗಳನ್ನೂ ಕಥಿಸುವುದರಲ್ಲಿ ಅವರು ಚತುರರು. ಬಹಳ ಸ್ವಾರಸ್ಯವಾಗಿ ಹೇಳುತ್ತಾರೆ. ನಾವುಗಳು ಎಂದಾದರೂ, ಹೊರಬೀಡು, ತಿಂಡಿ, ಭೋಜನ, ಹೀಗೇನಾದರೂ ವಿಶೇಷ ಕಾರ್ಯವನ್ನಿಟ್ಟರೆ, ಕೃಷ್ಣರಾಯರೂ ಅವರ ಕಥೆಗಳೂ ಇಲ್ಲದಿದ್ದರೆ ಅವುಗಳಿಗೆ ಕಳೆಯೇ ಇರುತ್ತಿರಲಿಲ್ಲ. ಈ ವಿಷಯದಲ್ಲಿ ಕೃಷ್ಣರಾಯರು ವೈಶಿಷ್ಟ್ಯವುಳ್ಳ ವ್ಯಕ್ತಿ. ಅವರೇನಾದರೂ ಶೀಘ್ರಲಿಪಿಯವನೊಬ್ಬನನ್ನು ಸಂಬಳಕ್ಕಿಟ್ಟುಕೊಂಡು, ತಾವು ಹೇಳುವ ಕಥೆ, ಹರಟೆ, ಅನುಭವಗಳನ್ನು ಬರೆಯಿಸಿ ಬಿಟ್ಟರೆ, ಅವು ಉತ್ತಮ ಸಾಹಿತ್ಯವಾಗುವುದರಲ್ಲಿ ಸಂದೇಹವಿಲ್ಲ.

ಆದ್ದರಿಂದ ನಾವುಗಳೆಲ್ಲರೂ ನಮ್ಮ ನಮ್ಮ ಕುರ್ಚಿಗಳನ್ನು ಅವರ ಹತ್ತಿರ ಎಳೆದುಕೊಂಡು "ಹೇಳ್ರಿ ಕೃಷ್ಣರಾಯರೇ, ನಿಮ್ಮ ವ್ಯಾಪಾರದ ಕಥೆ!" ಎಂದೆವು.

ಕೈಯಲಿದ್ದ ವರ್ತಮಾನಪತ್ರಿಕೆಯನ್ನು ಮೇಜಿನ ಮೇಲೆ ಬಿಸಾಡಿ, ಕನ್ನಡಕವನ್ನು ಗೂಡಿನಲ್ಲಿ ಸೇರಿಸಿ, ನಶ್ಯವನ್ನು ಸೇವಿಸಿದ ನಂತರ ಕೃಷ್ಣರಾಯರು ಹೇಳತೊಡಗಿದರು:—

"ಸಿಂಗಾಪುರದಲ್ಲಿ ನಮ್ಮವು ಕೆಲವು ಜಮೀನುಗಳಿವೆಯಲ್ಲಾ, ಅವನ್ನೆಲ್ಲಾ ಕೋರಿಗೆ ಕೊಟ್ಟಿದ್ದೇನೆ. ಸ್ವಂತ ಮಾಡುವುದು ಎಲ್ಲಾಗುತ್ತೆ... ಈ ವಕಾಲತ್ತು ಕಟ್ಟಿಕೊಂಡ ಮೇಲೆ? ಎರಡೂ ಹಾಳಾಗುತ್ತೆ, ಅಷ್ಟೆ! ಆದ್ದರಿಂದಲೆ ಕೋರು ಸಾಗುವಳಿಗೆ ಕೊಟ್ಟಿದ್ದೇನೆ. ಚಾನುಕೊಂಡದ ಸಿದ್ದಪ್ಪ ನಮ್ಮ ಜಮೀನುಗಳನ್ನು ಮಾಡುತ್ತಾನೆ. ಅವನ ಹತ್ತಿರ ಒಂದೇ ಒಂದು ಜತೆ ಎತ್ತು ಇತ್ತು. ಬೇಸಾಯಕ್ಕೂ, ಬಿತ್ತುವುದಕ್ಕೂ, ಒಂದು ಜತೆ ಎತ್ತು ಸಾಲುತ್ತಿರಲಿಲ್ಲವಾದ್ದರಿಂದ ಇನ್ನೊಂದು ಜತೆ ಎತ್ತನ್ನು ಬಾಡಿಗೆಗೆ ತರುತ್ತಿದ್ದನು. ಎಂದರೆ, ಬಾಡಿಗೆಯ ಖರ್ಚು ಅರ್ಧವಾದರೂ ನನ್ನ ತಲೆಯ ಮೇಲೆ ಬೀಳುತ್ತಿತ್ತಲ್ಲಾ! ಆದ್ದರಿಂದ ಯಾವಾಗಲಾದರೂ, ನಾನೇ ಸ್ವಂತವೆಂದು ಒಂದು ಜತೆ ಎತ್ತು ಖರೀದಿ ಮಾಡೋಣ ಎಂತಲೇ ಇದ್ದೆ. ಇದು ಆ ಕೃಷ್ಣರಾಯರಿಗೂ,—(ಇನ್ನೊಬ್ಬ ಗಣ್ಯ ವಕೀಲರೆಂದು ಒಂದೆಯೇ ಹೇಳಿದೆಯಷ್ಟೆ)— ಗೊತ್ತಿತ್ತು.

ಅವರು, ಈಗ ಮೂರು ವರ್ಷಗಳ ಕೆಳಗೆ ಯಾವನೋ ಒಬ್ಬ ಅಪರಾಧಿಗೆ ಹಾಜರಾಗಿ, ಅವನನ್ನು ಖುಲಾಸೆ ಮಾಡಿಸಿದ್ದರು. ಆ ಕೇಸಿಗೆ ಸಂಬಂಧಪಟ್ಟಿದ್ದ ಒಂದು ಜತೆ ಹೋರಿಕರುಗಳು ಅಪರಾಧಿಗೇ ಸೇರತಕ್ಕದ್ದೆಂತಲೂ ತೀರ್ಮಾನವಾಗಿತ್ತು. ಅವರ ಕಕ್ಷಿಗಾರನು, ತಾನು ಅವರಿಗೆ ಕೊಡಬೇಕಾಗಿದ್ದ ಬಾಕಿಯಾದ ಅರುವತ್ತು ರೂಪಾಯಿ ಫೀಜಿಗೆ ಆ ಜತೆ ಹೋರಿಕರುಗಳನ್ನು ಅವರಿಗೇ ಬಿಟ್ಟು ಹೊರಟು ಹೋದನು. ಆದ್ದರಿಂದ ಅವರು ನನಗೆ 'ಏನ್ರೀ, ಕೃಷ್ಣರಾಯರೆ, ಈ ವರ್ಷವಲ್ಲದಿದ್ದರೂ ಇನ್ನು ಮೂರು ನಾಲ್ಕು ವರ್ಷಕ್ಕಾದರೂ ಒಂದು ಜತೆ ಎತ್ತು ನಿಮಗೆ ಬೇಕು ಎನ್ನುತ್ತಿದ್ದಿರಿ; ನಿಮಗೆ ಮೂರು ನಾಲ್ಕು ವರ್ಷಗಳವರೆಗೇನೂ ಜರೂರಾಗಿ ಎತ್ತುಗಳು ಬೇಕಾಗಿಲ್ಲ. ಮುಂದೆ ಮುನ್ನೂರೋ, ನಾಲ್ಕುನೂರೋ ಕೊಟ್ಟು ಎತ್ತುಗಳನ್ನು ದುಬಾರಿ ಖರೀದಿಗೆ ತೆಗೆದುಕೊಳ್ಳುವುದರ ಬದಲು, ನನ್ನ ಹತ್ತಿರವಿರುವ ಒಂದು ಜತೆ ಹೋರಿಕರುಗಳನ್ನು ಈಗಲೇ ಸುಲಭಕ್ರಯಕ್ಕೆ ನೀವು ಖರೀದಿಗೆ ತೆಗೆದುಕೊಂಡರೆ, ಮೂರು ನಾಲ್ಕು ವರ್ಷಗಳಿಗೆ ಅವು ಅನಾಯಾಸವಾಗಿ ಭಾರಿ ಎತ್ತುಗಳಾಗುತ್ತವೆ' ಎಂದರು. ಈ ಸಲಹೆ ನನಗೂ ಸಮಂಜಸವಾಗಿ ತೋರಿತು. ನಲವತ್ತಕ್ಕೋ ಐವತ್ತಕ್ಕೋ ಆ ಜತೆ ಹೋರಿಕರುಗಳನ್ನು ಕೊಂಡುಕೊಂಡು, ಹಳ್ಳಿಯಲ್ಲಿ ನಮ್ಮ ಸಿದ್ದಪ್ಪನ ರಾಸುಗಳ ಜತೆ ಬಿಟ್ಟರೆ, ಹಸುರಿದ್ದಲ್ಲಿ ಮೇದು, ಬೆಚ್ಚಗಿದ್ದಲ್ಲಿ ಮಲಗಿ ಅನಾಯಾಸವಾಗಿ ಮೂರು ನಾಲ್ಕು ವರ್ಷಗಳಲ್ಲಿ ಕೈಗೆ ಬರುತ್ತವೆ, ಹಣವೂ ಮಿಗುತ್ತೆ, ಸುಲಭದರಲ್ಲಿ ಆಗುತ್ತೆ, ಯೋಜನೆ ಇರುವುದಿಲ್ಲ.... ಎಂದು ಎಲ್ಲಾ ವಿಧದಲ್ಲೂ ಯೋಚಿಸಿ, 'ಎಷ್ಟಕ್ಕೆ ಕೊಡುತ್ತೀರಿ?' ಎಂದು ಕೇಳಿದೆನು. ಅವರು 'ನೋಡ್ರಿ, ಪುಟ್ಟಾಚಾರ್ಯರು ನಲವತ್ತಕ್ಕೆ ಕೇಳಿದ್ದರು. ಈಗೇನೋ ಅವರಿಗೆ ಬೇಡವಂತೆ; ಅವರ ಎರಡು ಹಸುಗಳೂ ಎರಡು ಹೋರಿ ಕರುಗಳನ್ನು ಈದಿವೆಯಂತೆ' ಎಂದರು. ಪುಟ್ಟಾಚಾರ್ಯರನ್ನು ಕೇಳಿ ಬೆಲೆ ನಿಷ್ಕರ್ಷಿಸಬೇಕೆಂದು ಯೋಚಿಸಿ, ಅವರನ್ನು ಕೇಳಿದ್ದಕ್ಕೆ ಅವರು "ಹೌದಪ್ಪಾ, ನಲ್ವತ್ತಕ್ಕೆ ಕೇಳಿದ್ದೆ. ಈಗ ನನಗೇನೂ ಬೇಕಿಲ್ಲ. ಅದಕ್ಕೆ ಸುಮ್ಮನಾದೆ." ಎಂದರು. ಮರುದಿವಸ ಬೆಳಗಿನಲ್ಲಿ ದಾರಿಯಲ್ಲಿ ಕೃಷ್ಣರಾಯರು ಸಿಕ್ಕಾಗ ನಾನು ಅವರಿಗೆ "ಸ್ವಾಮಿ, ನಮಗೆ ನಿಮಗೆ ಚೌಕಾಸಿ ಏಕೆ? ಅದೇ ನಲ್ವತ್ತು ನಾನು ಕೊಡುತ್ತೇನೆ; ಹೋರಿಕರುಗಳು ನಮಗಿರಲಿ! ಆದರೆ ಹಣ ಈ ಕೂಡಲೆ ಕೊಡುವುದಿಲ್ಲ. ಮೂರು ತಿಂಗಳಿಗೆ ಕೊಡುತ್ತೇನೆ" ಎಂದೆನು. ಅವರು ಅನುಮಾನಿಸುತ್ತಾ, "ನೀವು ಮೂರು ತಿಂಗಳ ಮುಂದೆ ಹಣ ಕೊಡುವುದರಲ್ಲಿ ನನಗೆ ಸಂದೇಹವಿಲ್ಲ; ಆದರೂ ಯೋಚಿಸಿ ಹೇಳಿಕಳುಹಿಸುತ್ತೇನೆ" ಎಂದು ಮನೆಗೆ ಹೋದರು.

ಆ ಕೂಡಲೆ ನನ್ನ ಷರತ್ತಿಗೆ ಒಪ್ಪಿದ್ದರೆ ನನಗೆ ಅನುಮಾನವಾದೀತೆಂದು ಅವರು ಹಾಗೆ ಯೋಚಿಸಿ ಹೇಳುತ್ತೇನೆಂದರೋ ಏನೋ! ಅಂದು ಎರಡು ಗಂಟೆಗಳ ಕಾಲವಾದಮೇಲೆ ನಾನು ನಮ್ಮ ಮನೆಗೆ ಹಿಂದಿರುಗಿದಾಗ, ನನಗೇನೋ ಹಾಗೆಯೆ ತೋರಿತು. ನಮ್ಮ ಮನೆಯ ಮುಂದೆ ಅವರ ಮನೆಯ ಆಳು ಎರಡು ಪ್ರಾಣಿಗಳನ್ನು ಹಿಡಿದುಕೊಂಡು ನಿಂತಿದ್ದ. ಹೋರಿಕರುಗಳಿದ್ದಂತೆಯೇ ಕಾಣಿಸಿದುವು ಹತ್ತಿರ ಬಂದಮೇಲೆ. ಒಂದೊಂದು ಕೂದಲಿಗೆ ಒಂದೊಂದು ಉಣ್ಣೆ ಇತ್ತು, ನೋಡಿ, ಆ ಕರುಗಳ ಮೈಮೇಲೆ. ಒಂದು ತಿಂಗಳ ಕಾಲ ಪಟ್ಟಾಗಿ, ದಿನಾಗಲೂ ಪಂಜೇರು ಹರಳೆಣ್ಣೆಯನ್ನು ಹಚ್ಚಿ ತಿಕ್ಕುತ್ತಿದ್ದರೂ ಅವು ಉದುರುವ ಹಾಗಿರಲಿಲ್ಲ. ಅಲ್ಲದೆ ಅವು ನಪ್ಪೆಯ, ಹುಲ್ಲಿನ ರುಚಿಯನ್ನೇ ಕಂಡಿದ್ದುವೊ ಇಲ್ಲವೋ; ನಾನು ಅವುಗಳನ್ನು ನೋಡುತ್ತಾ ಅವುಗಳ ಪಕ್ಕದಲ್ಲಿ ನಿಂತಿದ್ದರೆ, ನನ್ನ ಪಂಚೆಗೇ ಅವು ಬಾಯಿ ಹಾಕಿದುವು. ನಾನು ಆ ಜವಾನನಿಗೆ 'ಈ ಕರುಗಳನ್ನು ವಾಪಸ್ ಹೊಡೆದುಕೊಂಡು ಹೋಗು; ನಿಮ್ಮ ರಾಯರ ಹತ್ತಿರ ನಾನು ಆ ಮೇಲೆ ಮಾತನಾಡುತ್ತೇನೆ' ಎಂದೆನು. ಆ ಜವಾನನು,- ಬಹಳ ಸ್ವಾಮಿಭಕ್ತ ಅಂತ ಕಾಣುತ್ತೆ-, 'ಇಲ್ರೀ; ರಾಯರು ಹೇಳ್ಯಾರ: ಅಲ್ಲೇ ಬಿಟ್ಟು ಬಂದು ಬಿಡು ಅಂತ. ಹಣಾನ ನೀವು ಹೇಳಿದ ಹಾಗೇ ಕೊಡಬಹುದಂತೆ' ಎಂದವನು ಅಲ್ಲಿ ನಿಲ್ಲಲೇ ಇಲ್ಲ. ಕರುಗಳನ್ನು ರಸ್ತೆಯಲ್ಲಿ ನನ್ನೆದುರಿಗೆ ಬಿಟ್ಟು ಹೊರಟೇ ಹೋದನು. ಆ ದಿವಸ ನಮ್ಮ ಆಳು ಬಂದಿರಲಿಲ್ಲ. ಕಛೇರಿಗೆ ಆಗಲೇ ಹೊತ್ತಾಗಿತ್ತು. ಮನೆಯಲ್ಲಿ ಒಂದು ಹಗ್ಗ ಇಲ್ಲ, ಒಂದು ಗೂಟ ಇಲ್ಲ. ಸಪ್ಪೆ, ಹುಲ್ಲು, ಕೇಳಬೇಡ್ರಿ. ಆ ದಿನ ಆ ಕರುಗಳನ್ನು ಕಟ್ಟಿ ಕಛೇರಿಗೆ ಬಂದಾಗ ಎರಡುಗಂಟೆಯಾಗಿತ್ತು.

ಸೋಮವಾರ ಸಂತೆಯ ದಿವಸ, ನಮ್ಮ ಹಳ್ಳಿಯಿಂದ ಸಿದ್ದಪ್ಪ ಬಂದನು. ಅವನ ಹಿಂದೆಯೇ ಆ ಹೋರಿಕರುಗಳನ್ನು ಹಳ್ಳಿಗೆ ಹೊಡೆಯಿಸಿಬಿಟ್ಟೆನು. ಅನಂತರ ಅವುಗಳನ್ನು ಕಟ್ಟಿದ್ದ ಜಾಗದಲ್ಲಿ ಹುಲ್ಲು ಹಾಕಿ ಸುಡಿಸಿದೆನು— ಕೆಳಗೆ ಬಿದ್ದಿದ್ದ ಉಣ್ಣೆಗಳು ಮನೆಯ ಒಳಗೆ ಬಾರದಹಾಗೆ.

ಸಿದ್ದಪ್ಪನು ಆ ಎರಡು ಹೋರಿಕರುಗಳನ್ನೂ ಆ ಮಧ್ಯಾಹ್ನವೆ ತನ್ನ ಹಳ್ಳಿಗೆ ಹೊಡೆದುಕೊಂಡು ಹೋದನು. ಅವನು ಮನೆ

ಕಲುಪಿದಾಗ ಅವನ ಹಿರಿಯ ಮಗನು ಅವರ ರಾಸುಗಳೆಲ್ಲವನ್ನೂ ಮೇಯಿಸುವದಕ್ಕೆ ಕಾಡಿಗೆ ಹೊಡೆದುಕೊಂಡು ಹೋಗಿದ್ದನು. ಕರುವೆರಡನ್ನೂ ಆಹೊತ್ತು ಮನೆಯಲ್ಲಿಯೇ ಕಟ್ಟಿದರು. ಸ್ವಲ್ಪ ಹೊತ್ತಿನಲ್ಲಿಯೆ ಒಂದು ಕರುವು—ಅದೇನು ಹಗ್ಗ ಕಾಲಿಗೆ ಸುತ್ತಿಕೊಂಡಿತೋ, ಅಥವಾ ಕುತ್ತಿಗೆಗೆ ಉರುಲು ಬಿದ್ದಿತೋ—ಒದ್ದಾಡ ಲಾರಂಭಿಸಿತು. ಸಿದ್ದಪ್ಪನ ಎರಡನೆಯ ಮಗನು ಅದರ ಹತ್ತಿರ ಬಂದು, ಚಪ್ಪರಿಸಿ, ಹಗ್ಗವನ್ನು ಸರಿಮಾಡಲು ಬಗ್ಗಲು, ಆ ಕರುವು ಅವನ ಎದೆಗೆ ಸುಗ್ಗಿ ಗುದ್ದಿತು. ಬಹಳ ಪೆಟ್ಟು ಬಿದ್ದುದರಿಂದ ಹುಡುಗನು ಕೂಗಿಕೊಂಡು ಕೆಳಗೆ ಬಿದ್ದನು. ಸಿದ್ದಪ್ಪನು ಹೊರಗಡೆ ಇದ್ದವನು, ಕೂಡಲೆ ಒಳಗೆ ಬಂದು ಹುಡುಗನನ್ನು ಎತ್ತಿ ದೂರ ಮಲಗಿಸಿದ; 'ಕರು ಏನು ಮಾಡುತ್ತೆ, ಬಿಡು' ಎಂದು ಸಮಾಧಾನ ಹೇಳಿ, ಒದ್ದಾಡುತ್ತಿರುವ ಕರುವಿನ ಬಳಿ ಬಂದು ಬಳಿತುಕೊಂಡು, ಉಪಾಯದಿಂದ ಹಗ್ಗವನ್ನು ಸರಿಮಾಡುತ್ತಿದ್ದ. ಅಷ್ಟರಲ್ಲಿಯೆ ಅವನ ಹಿಂದಿದ್ದ ಇನ್ನೊಂದು ಕರುವು—ಅದಕ್ಕೇನು ಬುದ್ಧಿಬಂದಿತೋ ಏನೋ— ಇದ್ದಕ್ಕಿದ್ದ ಹಾಗೆ ಸಿದ್ದಪ್ಪನ ಬೆನ್ನಿಗೆ ತಲೆಹಾಕಿ ಗುದ್ದಿತು. ಆಕಸ್ಮಾತ್ ಬಿದ್ದ ಗುದ್ದಿಗೆ, ಸಿದ್ದಪ್ಪನು ಮೂರು ಉರುಳು ಹಾಕಿದನು—ಮುಖ ಮೋರೆ ಎಲ್ಲಾ ತರಚಿಕೊಂಡು, ತಲೆಬುರುಡೆ ಒಡೆಯುವುದೊಂದು ಬಾಕಿ ಇತ್ತು. ಅವನ ಮನೆಯವರಿಗಾರಿಗೂ ಈ ಕರುಗಳು ಒಚಿಸಲಿಲ್ಲ; ಬಂದೊಡನೆ ಅಪಶಕುನವಾಯಿತೆಂದರು. ಆಮೇಲೆ ಅವುಗಳನ್ನು ಮನೆಯಲ್ಲಿ ಸಹ ಇಟ್ಟುಕೊಳ್ಳಲಿಲ್ಲ. ಆ ಕೂಡಲೆ ಅವನ್ನು ಕೋಗೆ ತಂದು, ಅವರ ಮನೆಯ ಕೆಲಸವನ್ನೂ, ಅವರ ಸ್ವಂತ ಜಮೀನಿನ ಕೆಲಸವನ್ನೂ ಮಾಡುತ್ತಿದ್ದ ಬೇಗಾರ್ರವನಿಗೆ ಕೊಟ್ಟುಬಿಟ್ಟರು—ಮೇಯಿಸಿ ಸಾಕುವುದಕ್ಕೆ. ಮುಂದಿನ ಸಂತೆ ದಿನವೆಲ್ಲವನ್ನೂ ಘಾಯಮಾಡಿಕೊಂಡು ದೂರದಲ್ಲಿ ಬರುತ್ತಿದ್ದ ಸಿದ್ದಪ್ಪನನ್ನು ನಾನು ನೋಡಿ, ಒಹುಶಃ ಅವನಿಗೂ ಅವನ ಪ್ರತಿ-ಪಕ್ಷಿ ದ್ಯಾಮಣ್ಣನಿಗೂ ಹೊಡೆದಾಟವಾಗಿರಬಹುದೆಂದು ಊಹಿಸಿ, ಹೊಸ ಕ್ರಿಮಿನಲ್ಲು ಮೊಖದ್ದಮೆ ಬಂದಿತೆಂದು ತಿಳಿದುಕೊಂಡು, ಎಷ್ಟು ಫೀಜು ಕೇಳಲೆಂದು ಯೋಚಿಸುತ್ತಿರುವಾಗ, ಸಿದ್ದಪ್ಪನು ಬಂದು ನನ್ನ ಹೋರಿಕರದಿಂದ ತನಗೆ ಈ ಗತಿಯಾಯ್ತೆಂದು ಎಲ್ಲವನ್ನೂ ತಿಳಿಸಿದನು. ಅನಂತರ ಅವನೆ 'ಪರವಾ ಇಲ್ಲ ಸ್ವಾಮಿ; ಬೇಗಾರ್ರವನು ಚೆನ್ನಾಗಿ ಸಾಕ್ತಾನೆ. ಅವನ ಹತ್ತಿರ ಇನ್ನ್ಯಾವ ದನಾನೂ ಇಲ್ಲ, ನಿಮ್ಮದು ಎರಡೇ. ನಾನು ಖುದ್ದು ವಿಚಾರಿಸಿ ಕೊಳ್ಳುತ್ತಿರುತ್ತೇನೆ" ಎಂದನು.

ಬೇಗಾರ್ರವನು ಕರುಗಳನ್ನು ಚೆನ್ನಾಗಿಯೆ ಸಾಕುತ್ತಿದ್ದನಂತೆ, ಎರಡು ತಿಂಗಳಲ್ಲಿ ಅರ್ಧ ಉಣ್ಣೆಗಳು ಸಹ ಹೋಗಿದ್ದುವಂತೆ, ಕರುಗಳು ಬಲಿಯುತ್ತಿದ್ದುವಂತೆ. ಇದನ್ನೆಲ್ಲಾ ಸಿದ್ದಪ್ಪನು ನನಗೆ ಪ್ರತಿವಾರವೂ ವರದಿ ಮಾಡುತ್ತಿದ್ದನು.

* * *

ಒಂದು ದಿನ ನಾನು ನನ್ನ ಆಫೀಸಿನಲ್ಲಿ ಕುಳಿತಿದ್ದಾಗ, ನನ್ನ ಹಳೆಯ ಕಕ್ಷಿಗಾರನಾದ ದ್ಯಾಮಣ್ಣನು ಬಂದು, ಅಲ್ಲಿಗೆ ಸುಮಾರು ಮೂರು ವರ್ಷಗಳ ಹಿಂದೆ ನನ್ನ ಮೂಲ್ಕ ಅಜ್ಜಪ್ಪನ ಮೇಲೆ ಪಡೆದಿದ್ದ ಡಿಕ್ರಿಯನ್ನು ಮುಂದೆ ಕ್ರಮನಡೆಯಿಸಬೇಕಾಗಿ ಕೇಳಿದನು. "ನಾನಾಗಲೇ ಆ ಡಿಕ್ರಿಯ ಹಣ ಕೈಬಿಟ್ಟುಬಿಟ್ಟಿದ್ದೆ ಸ್ವಾಮಿ; ಅಜ್ಜಪ್ಪನ ತಾವ ಏನೂ ಇರಲಿಲ್ಲ. ಈಗ ಒಂದೆರಡು ರಾಸು ಮಾಡಿಕೊಂಡಿದ್ದಾರೆ. ಅದು ಜಪ್ತಿಮಾಡಿಸಿ, ಹರಾಜು ಮಾಡಿಸಿರಿ" ಎಂದನು. ನಾನು ನನ್ನ ಗುಮಾಸ್ತರಿಗೆ ಅಮುಲ್ದಾರಿ ಅರ್ಜಿಯನ್ನು ಬರೆಯಬೇಕೆಂದೂ, ದ್ಯಾಮಣ್ಣನಿಗೆ ರಾಸುಗಳ ಪಟ್ಟಿಯನ್ನು ಗುಮಾಸ್ತರ ಹತ್ತಿರ ಬರೆಯಿಸಬೇಕೆಂದೂ ಹೇಳಿ ಊಟಕ್ಕೆ ಹೋದೆನು. ಆ ದಿನ ದ್ಯಾಮಣ್ಣನ ಜಾರಿಕ್ರಮವು ದಾಖಲಾಯಿತು. ಮೂರು ದಿವಸಗಳಲ್ಲಿಯೆ ಜಪ್ತಿಯವಾರೆಂಟೂ ಹೋಯಿತು.

ಆದರೆ ಅಜ್ಜಪ್ಪ ಎನ್ನುವವನು, ನನ್ನ ಹೋರಿಕರುಗಳನ್ನು ಸಾಕುತ್ತಿದ್ದ ಸಿದ್ದಪ್ಪನ ಬೇಗಾರನೆಂದು ನನಗೆ ಹೇಗೆ ತಿಳಿಯಬೇಕು? ಸಿದ್ದಪ್ಪನ ಬೇಗಾರನ ಹೆಸರೇ ನನಗೆ ಗೊತ್ತಿರಲಿಲ್ಲ. ದ್ಯಾಮಣ್ಣನು ಅವನ ಮೇಲೆ ಡಿಕ್ರಿಪಡೆದು ಎರಡು ವರ್ಷ ಎಂಟು ತಿಂಗಳಾಗಿತ್ತು. ಈಗ ಅಜ್ಜಪ್ಪನು, ನನ್ನ ಹೋರಿಕರುಗಳನ್ನು ಪ್ರತಿನಿತ್ಯ ಹೊಲದಿಂದ ಮನೆಗೆ, ಮನೆಯಿಂದ ಹುಲ್ಲುಗಾವಲಿಗೆ, ಓಡಾಡಿಸುತ್ತಿರುವುದನ್ನು ದ್ಯಾಮಣ್ಣನು ನೋಡಿ, ಬೆಳ್ಳಗಿದ್ದ ಆ ಹೋರಿಕರುಗಳನ್ನು ಅಜ್ಜಪ್ಪನವೆಂದು ತಿಳಿದು, ನನ್ನ ಮೂಲ್ಕ ಜಪ್ತಿಮಾಡಿಸಿದನು. ಈ ವಿಷಯ ಸಿದ್ದಪ್ಪನಿಗೆ ತಾನೆ ಏನು ಗೊತ್ತು? ಆದುದರಿಂದ ನನ್ನ ಹೋರಿಕರುಗಳನ್ನು ಜಪ್ತಿಮಾಡಿ ಅಜ್ಜಪ್ಪನ ಸ್ವಾಧೀನದಿಂದ ಜಾಮೀನುದಾರನ ಸ್ವಾಧೀನಕ್ಕೆ ಕೊಡಿಸಿದರೆಂದು ಗೊತ್ತಾದ ಕೂಡಲೆ, ಸಿಟ್ಟಿನಮೇಲೆ, ಜಾಮೀನುದಾರನ ಮನೆಗೆ ಹೋಗಿ, ಉಡಾಫೆಮಾಡಿ, "ನಮ್ಮ ರಾಯರ ಹೋರಿಗಳನ್ನು ಯಾವ ಬೋ—ಗ ಜಪ್ತಿಮಾಡಿಸಿದ್ದು" ಎಂದು ಬಲತ್ಕಾರದಿಂದ ಆ ಕರುಗಳನ್ನು ಹೊಡೆದುಕೊಂಡುಹೋಗಿ ಪುನಃ ಅಜ್ಜಪ್ಪನ ವಶಕ್ಕೆ ಕೊಟ್ಟನು. ಹಾಗೆ ಮಾಡುವುದು ಕಾನೂನುರೀತ್ಯಾ ಕಳವು ಆಗುತ್ತೆಂದು ಅವನ ತಲೆಗೆ ಹೇಗೆ ಹತ್ತಬೇಕು ಹೇಳಿ. ಜಾಮೀನು-ದಾರನು ಸಿದ್ದಪ್ಪನ ಮೇಲೆ ಫಿರ್ಯಾದು ಕೊಡಬೇಕು ಎಂದು ಏರ್ಪಾಡುಮಾಡುತ್ತಿದ್ದನು. ಸಿದ್ದಪ್ಪನು ನನಗೆ ಇದೆಲ್ಲವನ್ನೂ ಆ ಕೂಡಲೆ ಬಂದು ತಿಳಿಸಿದನು.

ನಾನು ಆಗ ಏನು ಮಾಡಬೇಕಾಗಿತ್ತು ಹೇಳಿ? ನಾನು ದ್ಯಾಮಣ್ಣನ ವಕೀಲನಾಗಿ ನನ್ನ ಆಫೀಸು ಮೂಲ್ಕ ಅಜ್ಜಪ್ಪನ ಹತ್ತಿರಿದ್ದ ಹೋರಿಕರುಗಳನ್ನು ಜಪ್ತಿಮಾಡಿಸಿ, ಈಗ ನಾನೇ ಪಾರ್ಟಿಯಾಗಿ ಬಾಧ್ಯತೆಯ ಅರ್ಜಿಹಾಕಬೇಕಾಗಿತ್ತೆ, ಸಿದ್ದಪ್ಪನ ಮೇಲೆ ಜಾಮೀನುದಾರನು ಹಾಕುತ್ತೇನೆಂದು ಹೇಳುತ್ತಿದ್ದ ಕೇಸನ್ನು ಫೀಜು ಇಲ್ಲದೆ ಸಿದ್ದಪ್ಪನ ಪರ ನಡೆಯಿಸಲೆ? ಅಥವಾ ಹೋರಿಕರುಗಳು ಹೋದರೆ ಹೋಗಲಿ— ಎಂದು ಕೈಬಿಡಲೆ? ನೀವೇ ಹೇಳಿ. ಆ ಮೇಲೆ ಆ ಜಾಮೀನುದಾರನನ್ನು ಹಿಡಿತರಿಸಿ, ಸಿದ್ದಪ್ಪನಿಗೂ ಅವನಿಗೂ ರಾಜಿಮಾಡಿಸಿದೆ. ದ್ಯಾಮಣ್ಣನನ್ನೂ ಅಜ್ಜಪ್ಪನನ್ನೂ ಕರೆಕಳುಹಿಸಿ ಪಂಚಾಯಿತಿ ನಡೆಯಿಸಿದೆ.

ದ್ಯಾಮಣ್ಣನು "ಸ್ವಾಮಿ, ನಿಮ್ಮ ರಾಸು ಎಂದು ಗೊತ್ತಿದ್ದರೆ ನಾನು ಜಪ್ತಿಮಾಡಿಸುತ್ತಿರಲಿಲ್ಲ. ಈಗಲಾದರೂ ಏನಾಯ್ತು ಸ್ವಾಮಿ, ನನ್ನ ಹಣ ನೀವೇ ಕೊಟ್ಟು ಜಪ್ತೀ ರದ್ದುಮಾಡಿಸಿ" ಎಂದನು. ಕಡೆಗೆ ಒಂದು ಹೋರಿಕರು ದ್ಯಾಮಣ್ಣನಿಗೆ ಕೊಟ್ಟು ಅಜ್ಜಪ್ಪನ ಡಿಕ್ರಿ ಸಮಾಧಾನಮಾಡಿಸಿದೆನು. ಅನಂತರ ಅಜ್ಜಪ್ಪ ನನ್ನು "ಏನಪ್ಪಾ, ನಿನ್ನ ಹಣಕ್ಕೆ ಇಪ್ಪತ್ತೈದು ಬಾಳೋ ನನ್ನ ಕರು ಕಟ್ಟಿಕೊಟ್ಟೆ. ಆ ಹಣಕ್ಕೆ ನೀನು ಏನು ಹೇಳುತ್ತೀ?" ಎಂದೆನು. ಅವನು ಎರಡು ಕೈಗಳನ್ನೂ ಜೋಡಿಸಿ ಕೈಮುಗಿದು "ನಾನರ್ಧ, ನೀವರ್ಧ ಹಾಕಿಕೊಳ್ಳೋಣ ಸ್ವಾಮಿ. ನಾನು ನಿಮಗೆ ಕೊಡಬೇಕಾಗುವ ಅರ್ಧಕ್ಕೆ ನಿಮ್ಮ ಇನ್ನೊಂದು ಕರು ವನ್ನು ಇನ್ನು ನಾಲ್ಕು ವರ್ಷ ಮುಫತ್ತಾಗಿ ಸಾಕಿ ದೊಡ್ಡದು ಮಾಡುತ್ತೇನೆ, ನನ್ನೊಡೆಯಾ" ಎಂದನು. ಅದಕ್ಕೆ ಒಪ್ಪಿಕೊಳ್ಳ ದಿದ್ದರೆ ನನಗೆ ಬೇರೆ ಮಾರ್ಗವೇ ಇರಲಿಲ್ಲ.

ಇಷ್ಟಾದದ್ದು ಹೆಚ್ಚಿಗೆ ತೊಂದರೆಗೆ ಇಟ್ಟುಕೊಂಡಿತು. ನಾನು ಏನು ಮಾಡಿದ ಹಾಗಾಯ್ತು! ಬೇಸಾಯ ಮುಂತಾದ ಕೆಲಸ ಗಳಿಗೆ ಒಂದು ಜತೆ ಹೋರಿಕರುವನ್ನು ಖರೀದಿಗೆ ತೆಗೆದು ಕೊಂಡಿದ್ದೆ. ಈಗ ಅದರಲ್ಲಿ ಒಂದು ಹೋಗಿ ಒಂದು ಉಳಿಯಿತು. ಆದ್ದರಿಂದ ಉಳಿದ ಇನ್ನೊಂದು ಹೋರಿಕರಕ್ಕೆ ಬೇರೊಂದು ಜತೆ ಯನ್ನು ಹುಡುಕುವ ಆವಶ್ಯಕತೆ ಬಂದಿತು.

* * *

ಒಂದುದಿವಸ ನಾನು ಸಿಂಗಾಪುರದಿಂದ ಹಿಂದಿರುಗಿ ಬರುತ್ತ ಇರುವಾಗ ದಾರಿಯಲ್ಲಿ ಕುರುಬರ ಹಟ್ಟಿಯಲ್ಲಿ, ಭಜಂತ್ರಿ ನಾಗಪ್ಪನ ಮನೆಯ ಮುಂದೆ ಕಟ್ಟಿದ್ದ ಹೋರಿಯ ಕರುವೊಂದನ್ನು ನೋಡಿದೆನು. ಅದು ನನ್ನಲ್ಲಿದ್ದ ಕರುವಿಗೆ ಸರಿಯಾದ ಜತೆಯಾಗಿ ಕಂಡಿತು. ಸರಿ, ಅಲ್ಲೇ ಇಳಿದು, ಆ ಹೋರಿಕರು ಯಾರದು? ಎಂದು ತನಿಖೆಮಾಡಿದೆನು. ಅಲ್ಲಿಗೆ ಈಗ ಎರಡುದಿವಸಗಳ ಹಿಂದೆ ವ್ಯಾಪಾರಕ್ಕೆಂದು ಬಂದಿದ್ದ ಹೊಸದುರ್ಗದ ಮಾದಪ್ಪನಿಗೆ ಆ ಕರು ಸೇರಿದುದೆಂದು ತಿಳಿಯಿತು. ಅವನು ಆ ಹಳ್ಳಿಗೆ ಬರುತ್ತಿರು ವಾಗ ದಾರಿಯಲ್ಲಿ ತಿಮ್ಮನಹಳ್ಳಿಯಲ್ಲಿ ಅದನ್ನು ಮೂವತ್ತಕ್ಕೆ ಖರೀದಿಗೆ ತೆಗೆದುಕೊಂಡಿದ್ದನಂತೆ. ಅವನದು ಒಂಟಿ ಎತ್ತಿನ ಗಾಡಿ. ಆ ಗಾಡಿಯನ್ನು ಎಳೆಯುತ್ತಿದ್ದ ಎತ್ತಿಗೆ ರಿಟೈರಿಂಗ್ ವಯಸ್ಸಾಗಿದ್ದರೂ, ಉದಾರಹೃದಯನಾಗಿದ್ದ ಮಾದಪ್ಪನು ಮತ್ತೆ ಐದುವರ್ಷಗಳ ಜೀವದಾನಮಾಡಿದ್ದನಂತೆ. ಐದುವರ್ಷ ಗಳನಂತರ ತನ್ನ ಗಾಡಿಗೆ ಬೇರೆ ಎತ್ತು ಬೇಕಾಗುತ್ತದೆಂದು ಅವನು ಆ ಹೋರಿಕರುವನ್ನು ಕೊಂಡಿದ್ದನಂತೆ. ನಾನು ಅವನಿಗೆ "ನೋಡಪ್ಪಾ, ನನ್ನ ಹತ್ತಿರ ಒಂದು ಹೋರಿಕರು ಇದೆ. ಅದಕ್ಕೆ ಜತೆ ಬೇಕು. ಇಲ್ಲಾ, ನೀನೇ ನನ್ನ ಕರುವನ್ನು ಖರೀದಿಗೆ ತೊಗೋ; ಅಥವಾ ಈ ನಿನ್ನ ಕರುವನ್ನು ನನಗೆ ಕೊಡು" ಎಂದೆನು. ನಾನ್ಯಾರು ಎಂಬುದು ಅವನಿಗೆ ಗೊತ್ತಿತ್ತು ಎಂದು ಕಾಣುತ್ತೆ. ಅವನು, "ವಕೀಲರೆ, ನಿಮ್ಮ ಮಾತಿಗೆ ಅಡ್ಡಹೇಳುವುದಕ್ಕೆ ಆಗುತ್ತದೆಯೆ? ಒಂಟಿ ಕರು ನನಗೆ ಯಾವಾಗ ಬೇಕಾದರೂ ಸಿಗುತ್ತೆ; ಈ ಕರು ನಿಮ್ಮದಕ್ಕೆ ಜತೆ ಆಗುವುದಿದ್ದರೆ ನೀವೇ ತೊಗೊಳ್ಳಿರಿ" ಎಂದನು. ನನ್ನ ಹತ್ತಿರ ಒಂದು ಆಕಳು ಇತ್ತು. ಅದಕ್ಕೆ ಐದನೆಯ ಸೂಲು ಆಗಿತ್ತು. ಹುರುಳಿ, ಹತ್ತಿಕಾಳು, ಹಿಂಡಿ, ಇವೆಲ್ಲಾ ಮುಂದಿಟ್ಟು, ಕಾಲು ಕಟ್ಟಿದರೇ ಅದು ಹಾಲು ಕರೆಯು ವುದು. ತಿಂಡಿ ಮುಗಿದ ಕೂಡಲೆ ಧಪ್ಪನೆ ಕುಳಿತುಬಿಡುತ್ತಿತ್ತು, ಅಥವಾ ಎರಡೂ ಕಾಲನ್ನು ಎತ್ತಿ ಝಾಡಿಸುತ್ತಿತ್ತು. ನಾನು ಅವನಿಗೆ ನನ್ನ ಹಸುವನ್ನು ಆ ಕರುವಿಗೆ ಸಾಟಿಮಾಡುವುದಾಗಿ ಹೇಳಿದೆನು. ಅವನು ಹಸುವನ್ನು ನೋಡಿ ಮಾತುಹೇಳುತ್ತೇ ನೆಂದು ಆ ಕರುವನ್ನು ನನ್ನ ಹಿಂದೆಯೇ ಊರಿಗೆ ಹೊಡೆದುಕೊಂಡು ಬಂದು, ಹಸುವನ್ನು ನೋಡಿ ಅನುಮಾನಿಸಿ, ಅನುಮಾನಿಸಿ, ಕಡೆಗೆ ಸಾಟಿಮಾಡಿಕೊಂಡು ಹೋದನು.

ಆದಾದ ಮುಂದಿನ ವಾರ ನಾನು ಸಿಂಗಾಪುರಕ್ಕೆ ಹೋಗು ವಾಗ ಈ ಕರುವನ್ನು ಹೊಡೆಯಿಸಿಕೊಂಡು ಹೋದೆನು. ಸಿದ್ದಪ್ಪನು ಕರುವನ್ನು ಪರೀಕ್ಷಿಸಿ, ಯಾರಿಂದ ಕೊಂಡುಕೊಂಡೆನೆಂಬುದನ್ನು ವಿಚಾರಿಸಿ, "ಬಲು ಮೋಸಮಾಡಿದಾನೆ ಸ್ವಾಮಿ, ಅವನು. ಏನಾತಿಕಳ್ಳ ಇರಬೇಕು ಅವನು. ಎಲ್ಲಾದರೂ ಉಂಟೇ ಸ್ವಾಮಿ. ಇದರ ಬೆನ್ನ ಮೇಲೆ ಪರಕೆಸುಳಿ ಇದೆ; ಯಾವ ಒಕ್ಕಲುತನದವರೂ ಇದನ್ನು ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ, ಜವಿನಾಸಿನಲ್ಲಿ ಸೇರಿಸು ವುದಿಲ್ಲ. ಇದು ಕಾಲಿಟ್ಟಲ್ಲಿ ಹಾಳು. ಕಟುಕರ ಅಂಗಡಿಗೇ ಸರಿ ಇದು" ಎಂದುಬಿಟ್ಟನು. ಆ ಹಳ್ಳಿಯಲ್ಲಿ ಯಾರೂ ಇದನ್ನು ಅನುಮೋದಿಸಲಿಲ್ಲ. ಸಾಕುವುದಾಗಿ ಒಪ್ಪಲಿಲ್ಲ. ಯತ್ನವಿಲ್ಲದೆ, ಮತ್ತು ಎಲ್ಲರ ಮಾತಿಗೆ ವಿರೋಧವಾಗಿ ನಡೆಯಲಾರದೆ ಆ ಹೋರಿಯನ್ನು ಕೈಬಿಟ್ಟು ಬಂದೆನು. ತುಂಟ ಆಕಳು ಹೋಗಿ ಚೆಲೋ ಹೋರಿಕರು ಬಂತೆಂದು ನಾನೂ, ಕೆಟ್ಟ ಹೋರಿಕರು ಹೋಗಿ ಒಳ್ಳೆಯ ಆಕಳು ಬಂತೆಂದು ಮಾದಪ್ಪನೂ, ಇಬ್ಬರೂ ಮೋಸಹೋದೆವು.

ಆ ಮೇಲೆ ಇನೆಲ್ಲಾ ಸರಿಹೋಗಲಿಲ್ಲವಾದ್ದರಿಂದ, ನಾಲ್ಕು ವರ್ಷದ ಮೇಲೇ ಒಳ್ಳೆಯ ಎತ್ತುಗಳನ್ನೇ ಖರೀದಿಮಾಡುವುದು ಉತ್ತಮವೆಂದೂ, ಅಲ್ಲಿಯವರೆಗೂ ಈ ಹೋರಿಕರುಗಳ ತಾಪ ತ್ರಯವೇ ಬೇಡವೆಂದೂ ನಿರ್ಧರಿಸಿ, ಅಜ್ಜಪ್ಪನ ಹತ್ತಿರಿದ್ದ ಒಂಟಿ ಕರುವನ್ನು ಸಿಂಗಾಪುರದ ರಾಮನ ಹತ್ತಿರಿದ್ದ ಗಬ್ಬದ ಎಮ್ಮೆಗೆ ಸಾಟಿಮಾಡಿ, ಅದನ್ನು ಮನೆಗೆ ಹೊಡಿಸಿಕೊಂಡು ಬಂದೆನು ಮನೆಗೆ ಬಂದ ಮೂರು ದಿವಸಕ್ಕೇ ಅದು ಕಿರುಬನ ಪಾಲಾಯ್ತು.

ಅಯ್ಯೋ? ಇಷ್ಟೆಲ್ಲಾ ಆಗುವಹೊತ್ತಿಗೆ ಮೂರು ತಿಂಗ ಗಡುವು ಮುಗಿಯುತ್ತಾ ಬಂದಿತು. ಹೋರಿಕರುಗಳ ಹಣವನ್ನು ಕೊಡದಿದ್ದರೆ, ಕೃಷ್ಣರಾಯರು ಸುಮ್ಮನಿರುತ್ತಾರೆಯೆ? ಮನೆ ಯಲ್ಲಿದ್ದ ಹಾಲು ಕರೆಯುತ್ತಿದ್ದ ಒಂದು ಸೂಲಿನ ಎಮ್ಮೆಯನ್ನು ಮಾರಿ, ಅವರಿಗೆ ರುಪಾಯಿ ಕೊಟ್ಟೆ!"

ನಾನು ಕಂಡ ತಿರುವಾಂಕೂರು

★

ಶ್ರೀ. ಬನ್ನಂಜೆ ರಾಮಾಚಾರ್ಯರು ಅವರಿಂದ

ಒಂದೆ ವೈದಿಕ ಸಂಸ್ಕೃತಿಯವರೆಂದು ಹೇಳಿಕೊಳ್ಳುತ್ತಲಿದ್ದರೂ ಭಾರತದ ಪ್ರಾಂತ-ಪ್ರಾಂತಗಳಲ್ಲಿಯ ಜನರ ಆಚಾರ-ವಿಚಾರಗಳಲ್ಲಿ ಎಷ್ಟೊಂದು ಭೇದಗಳು! ನಾವು ತಿರುವಾಂಕೂರತ್ತ ಹೋಗಿ ನೋಡಿದರೆ 'ಇದೂ ಒಂದು ಹಿಂದುಸ್ಥಾನದ ಭಾಗವೇ?' ಎನಿಸದಿರದು. ಪ್ರಕೃತಿಯಲ್ಲಿ, ಪಟ್ಟಣ-ಗ್ರಾಮಗಳಲ್ಲಿ, ಜನತೆಯಲ್ಲಿ ಇಲ್ಲಿ ಚೆಲುವು ನೆಲೆಮಾಡಿಕೊಂಡು ನಿಂತಿದೆ!

ತಿರುವಾಂಕೂರಿನ ಹೆಸರು ಈಚೀಚೆಗೆ ತುಂಬ ವ್ಯಾಪ್ತಿಗೆ ಬಂದಿದೆ. ಅಲ್ಲಿಯ ರಾಜಕಾರಣವು ಹಿಂದೀ ಜಗತ್ತಿನ ಜನಾಂಗವನ್ನು ತನ್ನ ಕಡೆಗೆ ಸೆಳೆದುಕೊಂಡಿವೆ. ಹೀಗಿದ್ದರೂ ತಿರುವಾಂಕೂರಿನ ಸಮಗ್ರ ಭೂಸ್ಥಿತಿ-ಸಂಸ್ಕೃತಿಗಳ ಪರಿಚಯ ಮಾಡಿಕೊಂಡವರು ವಿರಳವೇ ಎನಬೇಕಾಗಿದೆ.

ನಮ್ಮ ನಾಡಿಗೆ ತೀರ ತೆಂಕಣಭಾಗದಲ್ಲಿ ತಿರುವಾಂಕೂರು ಸಂಸ್ಥಾನವಿದೆ. ಅನೊಂದು ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿರುವ ಸಂಸ್ಥಾನ. ಆಲ್ಲೊಬ್ಬ ಮಹಾರಾಜ ಸಿಂಹಾಸನ; ರಾಜ್ಯದ ಭರಣ-ನಿರ್ವಹಣಕ್ಕಾಗಿ 'ನಿಯಮ ಸಭೆ' ಎಂಬ ಶಾಸನಶಾಲೆಯಿದೆ. ಅದಕ್ಕೆ ದಿವಾನನೇ ಅಧ್ಯಕ್ಷನು. ಅದರಲ್ಲಿ ಲೋಕನಿಯುಕ್ತರಿಗೇ ಬಹುಮತವಿದೆ. ವರಿಷ್ಠನ್ಯಾಯಮಂದಿರ (High Court) ಕೂಡ ಇದೆ. ರಾಜನಿಗೆ ಸೇನೆಯನ್ನಿಡುವ ಅಧಿಕಾರವಿದೆ. ತಿರುವಾಂಕೂರು ವಿಶ್ವವಿದ್ಯಾಲಯ ಕೂಡ ಇದೆ. ರಾಜಾದಾಯವು ಸುಮಾರು ಒಂದು ಕೋಟಿಗೆ ಸಮೀಪವಿದೆ. ಬ್ರಿಟಿಷರಿಗೆ ೮ ಲಕ್ಷ ರೂಪಾಯಿ, ಪೊಗದಿಯೆಂದು ಈ ಸಂಸ್ಥಾನದಿಂದ ಸಲ್ಲುತ್ತಿದೆ.

ಇಲ್ಲಿಯ ಅರಸರು 'ನಾಯರ್' ಎಂಬ ಜಾತಿಗೆ ಸೇರಿದವರು. ಅವರಿಗೆ ಉಪನಯನಾದಿ ಸಂಸ್ಕಾರಗಳನ್ನು ಮಾಡಿ ಕ್ಷತ್ರಿಯತ್ವವನ್ನು ತಂದುಕೊಡುತ್ತಾರೆ ಬ್ರಾಹ್ಮಣರು. ಇಲ್ಲಿ ಅಳಿಯಸಂತಾನವು ರೂಢಿಯಲ್ಲಿದೆ. ಆದುದರಿಂದಲೆ ಮಹಾರಾಜನ ಮಕ್ಕಳಿಗೇನೂ ಗದ್ದುಗೆ ದೊರೆಯುವಂತಿಲ್ಲ. ಮಹಾರಾಜರ ಸೋದರಿಯ ಮಗನಿಗೆ ಪಟ್ಟದ ಅಧಿಕಾರ ಸಲ್ಲುತ್ತದೆ. ಇಲ್ಲಿ ರಾಜಮಹಿಷಿಯರಿಗೆ ಪರದಾಪದ್ಧತಿಯಿಲ್ಲ. ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಅವರು ಬಂದು ಭಾಗ ವಹಿಸುವ ದೃಷ್ಟಾಂತಗಳಿಗೇನು ಕಡಿಮೆಯಿಲ್ಲ. ಸರಿ; ಇದಿಷ್ಟು ಪೂರ್ವಕಥಾನುವಾದ.

* * *



ತಿರುವನಂತಪುರ (ತ್ರಿವೇಂದ್ರಂ)ದ ಶ್ರೀಅನಂತಪದ್ಮನಾಭಸ್ವಾಮಿಯ ದೇವಾಲಯವು

ದಕ್ಷಿಣ ಕನ್ನಡದಿಂದ ಮಲಬಾರವನ್ನು ದಾಟಿ ಕೊಚ್ಚಿಯ ಮಾರ್ಗವಾಗಿ ತಿರುವಾಂಕೂರಿಗೆ ಬರಬೇಕಾಗುವುದು. ಕೊಚ್ಚಿಯ ರಾಜಧಾನಿಯಾದ ಎರ್ಣಾಕುಳಂ ಎಂಬಲ್ಲಿಯವರೆಗೆ S. I. R. ಕಂಪನಿಯ ಉಗಿಬಂಡಿಯ ಮಾರ್ಗವಿದೆ. ಬಳಿಕ "ಕೊಲ್ಲಂ" ಎಂಬಲ್ಲಿಯವರೆಗೆ ನದಿಯಲ್ಲಿ ಉಗಿಹಡಗಿನ ಸಹಾಯದಿಂದ ಬರಬೇಕಾಗುವುದು. ಅಲ್ಲಿಂದ ತಿರುವಾಂಕೂರಿನ ರಾಜಧಾನಿಯಾದ ತ್ರಿವೇಂದ್ರಮ್ಮಿನ ಕಡೆಗೂ ರೈಲು ದಾರಿಯಿದೆ. ಮದ್ರಾಸಿನಿಂದ ಹೊರಟರೆ ನೆಟ್ಟಗೆ ತಿರುವಾಂಕೂರಿಗೆ ಬರುವುದಕ್ಕೆ ರೈಲಿನ ಅನುಕೂಲತೆಯಿದೆ.

ಸೃಷ್ಟಿಸುಂದರಿಯ ಚೆಲುವನ್ನು ಮನದಣಿಯೆ ನೋಡಬೇಕೆನ್ನುವವರು ತಿರುವಾಂಕೂರಿಗೆ ಹೋಗಲೇಬೇಕೆಂದು ನನ್ನ ಅಭಿಪ್ರಾಯ. ಏಕೆಂದರೆ ಎಲ್ಲೆಲ್ಲೂ ಹರಿವ ಹೊಳೆಗಳು—ಎಲ್ಲೆಲ್ಲೂ ಹಸಿರು ಹಸಿರಾದ

ಹೊಳೆಗಳು—ಅಲ್ಲಲ್ಲಿ ಕಾಣಸಿಗುವ ಕಾಡುಗಳು—ಹೀಗೆ ಸೃಷ್ಟಿಯ ಸೊಗಸು ಇಲ್ಲಿಯೆ ಮನೆ ಮಾಡಿ ನಿಂತಂತಿವೆ. ಮದ್ರಾಸಿನಿಂದ ಬರುವಾಗ-ನಮಗೆ ತಿರುವಾಂಕೂರಿನಲ್ಲಿ ಪ್ರವೇಶಿಸುವಾಗ- ದಾರಿಯಲ್ಲಿ 'ಶಿಂಕೊಟ್ಟೆ' ಎಂಬ ಘಟ್ಟ ಸಿಗುತ್ತದೆ; ಇದೇ ಪಶ್ಚಿಮ ಘಟ್ಟದ ಕೊನೆಯ ಪ್ರಾಂತ. ಆದರೆ ಇಲ್ಲಿಯ ಚೆಲುವೇ ಬೇರೆ ರೀತಿಯದು. ಬಂಡೆಗಳ ನಡುನಡುವೆ ಸುಸುಳಿ ಹರಿವ ಹೊನಲುಗಳ ಮಧುಗಾನಕ್ಕೆ ಕೋಗಿಲೆ ದನಿಗೂಡಿಸಿ ಹಾಡದ ಸಮಯವೇ ಇಲ್ಲಿಲ್ಲ, ತರಂಗಿಣಿಯು ಸ್ವತಂತ್ರತೆಯಿಂದ ಹರಿವಾಗ ದಾರಿಯಲ್ಲಿ ಅಡ್ಡಾಗಿರುವ ಒಂಡೆಗೆ ಬಡಿದು ಮುನ್ನಡೆವಾಗ, ಅಲ್ಲೆಲ್ಲ ವ್ಯಾಪಿಸಿರುವ ಧವಳತುಷಾರವು ನಮ್ಮ 'ಕಾರಂಜಿ'ಯನ್ನು ನಕಲಿ ಮಾಡುತ್ತಿವೆಯೋ ಎನ್ನಿಸುವಂತಿದೆ. ತಲೆಯೆತ್ತಿ ನಿಂತ ತರುರಾಜಿಯು—ಜಡವಾದರೂ—ಸ್ವಾತಂತ್ರ್ಯ, ಸ್ಫೂರ್ತಿಯನ್ನು ಕೊಡುತ್ತಿವೆ. ಈ ಸೌಂದರ್ಯ ಸೌಭಾಗ್ಯಕ್ಕೆ ಪ್ರೋಷಕವಾಗಿ ಗಜ-ಸಮೂಹ ಬೇರೆ ಇದೆ. ಇಲ್ಲಿ ತಿರುವಾಂಕೂರು ಸರಕಾರದವರು ತೇಗಿನಮರಗಳನ್ನು ಬೆಳೆಯಿಸಿ ಸೃಷ್ಟಿಯ ಚೆಲುವಿಗೆ ಪುಷ್ಟಿಯನ್ನಿತ್ತಿದ್ದಾರೆ. ಇಲ್ಲಿಯ ನೀರಿನಲ್ಲಿ ಸತ್ವವಿದೆ. ಗಾಳಿಯಲ್ಲಿ ಬಲವಿದೆ. ಅಲ್ಲಿಂದ ಮುಂದೆ ಬಂದರೆ 'ಕೊಲ್ಲಂ' ಸಿಗುವುದು. ಇದೊಂದು ವ್ಯಾಪಾರದ ಕೇಂದ್ರ. ಇಲ್ಲಿಂದ ಮುಂದಕ್ಕೆ ರಾಜಧಾನಿಯನ್ನು—'ತಿರುವನಂತಪುರ' (Trivendrum)ವನ್ನು—ತಲುಪಬೇಕಾಗುವುದು. ತಿರುವಾಂಕೂರಿನಲ್ಲೇ ದೊಡ್ಡದಾದ ಪಟ್ಟಣವಿದು. ಹಿಂದುಸ್ಥಾನದಲ್ಲಿ ಪ್ರಖ್ಯಾತವಾದ ಪದ್ಮನಾಭ ದೇವಸ್ಥಾನವಿರುವುದು ಇಲ್ಲಿಯೆ.

ತಿರುವನಂತಪುರವು ಸಾಕಷ್ಟು ಪ್ರಗತಿ ಹೊಂದಿದ ಪಟ್ಟಣ. ಇಲ್ಲಿಯ ಜನರೆಲ್ಲ ಸುಶಿಕ್ಷಿತರೇ ಆಗಿದ್ದಾರೆ. ಸ್ತ್ರೀಶಿಕ್ಷಣದ ಮಟ್ಟಿನಲ್ಲಿಂತೂ ದಕ್ಷಿಣಭಾರತದಲ್ಲಿ ತಿರುವಾಂಕೂರಿಗೆ ವಿಶೇಷ ಸ್ಥಾನ ದೊರೆಯಬೇಕಾಗಿದೆ. ಸಂಸ್ಕೃತವನ್ನು ಇಲ್ಲಿ ಸರ್ವೇಸಾಧಾರಣ ಎಲ್ಲರೂ ಅರಿತಿರುತ್ತಾರೆ. ಸಂಸ್ಕೃತವನ್ನು ಇಲ್ಲಿ ಸ್ತ್ರೀ-ಪುರುಷರಾದಿಯಾಗಿ ಸಾಮಾನ್ಯ ಎಲ್ಲರೂ ಅರಿತಿರುತ್ತಾರೆ. ಇಲ್ಲಿ ಮಳೆಯಾಳವೇ ರಾಜಭಾಷೆಯಾದರೂ ತಮಿಳು ತಿಳಿಯದವರಿಲ್ಲ. ದೊಡ್ಡ ದೊಡ್ಡ ಹುದ್ದೆಯಲ್ಲಿ ತಮಿಳರೇ ಇದ್ದಾರೆ.

* * *

ಮಳೆಯಾಳ ಸಂಸ್ಕೃತಿಯು ನಮ್ಮ ಕರ್ನಾಟಕ ಸಂಸ್ಕೃತಿಗೆ ತೀರ ಭಿನ್ನವಾಗಿ ಇದೆ. ಮೊದಲಾಗಿ ನೋಡುವವರಿಗಂತೂ ಅದು ತೀರ ವಿಲಕ್ಷಣವೆನಿಸುವಂತಿದೆ. ಎದುರು ಜೊಟ್ಟು-ಳ ಮೊಳದ 'ಮುಂಡ'ನ್ನು ಅಡ್ಡ ಸುತ್ತುವುದು—ನಾಸಿಕೋಚ್ಚಾರಕ್ಕೆ ಪ್ರಾಧಾನ್ಯವಿರುವ ಮಳಯಾಳ ಭಾಷೆ-ಮಾತನಾಡುವಾಗ ಮುಖ ಮತ್ತು ಕೈಗಳಲ್ಲಿ ಅಭಿನಯಿಸಿ ತೋರಿಸುವ ಆ ಭಂಗಿ-ಇವೆಲ್ಲ ನಮಗೆ ಮೊದಲಿಗೆ ನಗೆ ಹುಟ್ಟಿಸುವಂತಿರುವುವು. ಇಲ್ಲಿಯ ಸ್ತ್ರೀಯರ ಉಡುಗೆಯೂ ಹಾಗೆಯೆ. ಒಂದು ಬಿಳಿಯ ಮುಂಡನ್ನು ಸುತ್ತಿ ಬರಿಯೆ ಒಂದು ಜಾಕಿಟನ್ನು ಹಾಕಿರುತ್ತಾರೆ. ಜಡೆಯನ್ನು ಎದುರುಗಡೆ ಸುತ್ತಿ ಬಿಡುವುದೂ ಇದೆ. ಇಲ್ಲವಾದರೆ ಉದ್ದವಾಗಿ ಜಡೆ ಹೆಣೆದುಕೊಳ್ಳುವುದೂ ಇದೆ. ಮಳೆಯಾಳವನ್ನು ಸೌಂದರ್ಯದ ಕೇಂದ್ರವೆನಬಹುದು. ಇಲ್ಲಿಯ ಸ್ತ್ರೀಯರಲ್ಲಿ ಅಲೌಕಿಕವಾದ ಒಂದು ಶಾಂತಸೌಂದರ್ಯವಿದೆ.

ಕೇರಳದಲ್ಲಿ ನಾವು ಕಲಿಯಬೇಕಾದ ಇನ್ನೊಂದು ಅಂಶವಿದೆ. ಅದೇ ನೈರ್ಮಲ್ಯ. ನೈರ್ಮಲ್ಯ ಜೀವನವನ್ನು ನಡೆಯಿಸುವುದರಲ್ಲಿ ಇವರು ನಿಪುಣರು. ದಿನಂಪ್ರತಿ ಎರಡು ಹೊತ್ತು ಸ್ನಾನ ಮಾಡಿ,ನಿತ್ಯವೂ ಅಗಸನಿಗೆ ಕೊಟ್ಟ ಬಟ್ಟೆಯನ್ನೇ ಉಡುತ್ತಾರೆ. ಶುಭ್ರವಲ್ಲದ ಉಡುಗೆಯನ್ನವರು ಎಂದಿಗೂ ತೊಡುವುದಿಲ್ಲ. ಮಳೆಯಾಳಿಗಳು ತೀರ ಶಾಂತಮನೋಗತಿಯವರು. ಧಾರ್ಮಿಕ ಭಾವನೆಯಲ್ಲಿ ಶುದ್ಧ ಶ್ರದ್ಧೆಯುಳ್ಳವರು. ದಯಾ—ವಿನಯಪರರು. ವಿಲಾಸಿಗಳು. ಜ್ಯೋತಿಷ್ಯ — ಆಯುರ್ವೇದದಲ್ಲಿ ತುಂಬ ವ್ಯವಸಾಯಶೀಲರಾದ ಪಂಡಿತರು ಇಲ್ಲಿ ಬಹುಮಂದಿ ಇದ್ದಾರೆ.

ಪ್ರಧಾನವಾಗಿ ಭತ್ತ—ತೆಂಗಿನಕಾಯಿ ಚಹಾ- ರಬ್ಬರು— ಸಾಗವಾನಿ ಮರಗಳು ಇಲ್ಲಿ ಬೆಳೆಯುತ್ತವೆ. ಸಂಪತ್ತೆಲ್ಲ ಹೆಚ್ಚಾಗಿ ಬ್ರಾಹ್ಮಣ, ನಾಯರು ಈ ಜಾತಿಗಳಲ್ಲಿ ಸೇರಿಸಿದೆ. ಇಲ್ಲಿ ಮನೆಯಲ್ಲಿ ಆನೆಗಳನ್ನು ಸಾಕುವುದೊಂದು ಸಂಪತ್ತಿನ ಕುರುಹು. ಮಳೆಯಾಳಿಗಳು ಆಡಂಬರಪ್ರಿಯರಲ್ಲ. ಸಾದಾಜೀವಿಗಳು. ಇವರ ಸಂಪತ್ತಿನ ಪರಿಮಾಣವನ್ನು ಇಲ್ಲಿ ಇವರು ತೊಡುವ ಉಡುಗೆಗಳಿಂದ ಅಳೆಯಲಿಕ್ಕೆ ಬರುವಂತಿಲ್ಲ.

ಮಳೆಯಾಳಕ್ಕೆ ಸ್ವತಂತ್ರವಾದ ಸಂಗೀತವೊಂದು ಇದ್ದಂತೆ ಇಲ್ಲ. ಬೇರೆ ಬೇರೆ ಸಂಗೀತದ ಧಾಟಿಯನ್ನೇ ಅವಲಂಬಿಸುತ್ತಾರೆ. ಅವರ "ಸ್ವತಂತ್ರಗೀತೆ"ಯೆಂದರೆ "ಕಥಕ್ಕಳಿ'ಯೆಂದು ಕರೆವ ಅವರ ಜಾನಪದ ದೃಶ್ಯಕಾವ್ಯಗಳಲ್ಲಿ ಉಪಯೋಗಿಸುವುದೆ ಸರಿ. ಅವರ ಆಚಾರ-ವಿಚಾರಗಳೂ ಒಂದು ತೆರನಾದದ್ದಿದ್ದು, ಮೊದಲಾಗಿ ನಾವು ಪ್ರವೇಶಿಸುವಾಗ ದ್ವೀಪಾಂತರವನ್ನು ಹೊಕ್ಕಂತೆ ಎನಿಸುವುದು. ತಿರುವಾಂಕೂರಿನಲ್ಲಿ ಬ್ರಾಹ್ಮಣ-ನಾಯರ್-ಕ್ರೈಸ್ತ ಸಮಾಜಗಳು ತುಲ್ಯಬಲವಾಗಿವೆ ಎನಬಹುದು. ಆದರೆ ಅವರ ಸಂಬಂಧದಲ್ಲಿ 'ಸಮ್ಮತಿ'ಯಿದೆಯೆಂದು ಹೇಳುವ ಧೈರ್ಯ ಸಾಲದು.

ತಿರುವಾಂಕೂರಿನಲ್ಲಿ ಹಳ್ಳಿಗಳು ಹೆಚ್ಚಾಗಿವೆ. ಜನಸಂಖ್ಯೆಯಂತೂ ವಿಪರೀತ ಮಿಗಿಲಾಗಿಯೆ ಇದೆ. ಬಡತನಕ್ಕೆ ತಿರುವಾಂಕೂರಿನಲ್ಲಿ ಸರ್ವಸ್ವಾತಂತ್ರ್ಯವಿದೆ. ಹಳ್ಳಿಗಳಲ್ಲಿ ಗಡ್ಡೆಗೆಣಸುಗಳಿಂದ ಹೊಟ್ಟೆಯನ್ನು ತುಂಬಿಸಿಕೊಳ್ಳುವವರ ಸಂಖ್ಯೆಗೇನೂ ಕಡಿಮೆಯಿಲ್ಲ.

ಆಹಾರದಲ್ಲಿ ಕೂಡ ಕೇರಳೀಯರು ತೀರ ಸಾಧಾರಣದವರು. ಒಂದು 'ಕುಚ್ಚಿಲಕ್ಕಿ' ಅನ್ನ; ಒಂದು "ಮುಸರು ಪಳ್ದ" ಆದರೆ ಆಯಿತು. ಇನ್ನು ಜತೆಗೆ ಹಪ್ಪಳವೊಂದನ್ನು ಸೇರಿಸಿದರೆ ದೊಡ್ಡ ಮದುವೆಯ ಊಟ ಕೂಡ ಆಗುವುದು!

ಹೆಂಗುಸರು ಕೂಡ ಆಭರಣವನ್ನು ಕುರಿತು— ನಮ್ಮ ಕರ್ನಾಟಕದ ಸ್ತ್ರೀಯರಂತೆ—ಬಡಬಡಿಸುವವರಲ್ಲ. ಹಿಂದಿನ ಕಾಲದ ಸಂಪ್ರದಾಯದಂತೆ ಅವರು ಕೈತುಂಬ ಬಳೆಗಳನ್ನೂ ಕುತ್ತಿಗೆ ತುಂಬ ಸರಗಳನ್ನೂ

ಹಾಕುವುದವಶ್ಯವಿತ್ತು. ಕಿವಿಗೆ ಬೃಹತ್ತಮವಾದ ಓಲೆಯನ್ನು ಧರಿಸಿಕೊಳ್ಳಬೇಕಾಗಿತ್ತು. ಈಗ ಅವೆಲ್ಲ ಮಾಯವಾಗಿವೆ. ಕೈಗೊಂದೊಂದು ಬಳೆ, ಕಿವಿಗೊಂದು 'ಲೋಲಕು' ಕುತ್ತಿಗೆಗೊಂದು ಹೊಸ ತರದ ಚೈನು, ಇವಿಷ್ಟನ್ನೇ ಹಾಕುತ್ತಾರೆ. ಉಡಲಿಕ್ಕೆ ನೂರಾರು ರೂಪಾಯಿ ಬೆಲೆಯ ಬಟ್ಟೆಯ ಆವಶ್ಯಕತೆಯಿಲ್ಲ. ಒಂದು ಬಿಳಿಯ ಜಾಕೀಟು, ೩ ರೂಪಾಯಿಗಿಂತ ಕೆಳಗಿನ ಬೆಲೆಯ ಬಿಳಿಯ ಅರಿವೆಯೊಂದು– ಇಷ್ಟಿದ್ದರೆ ತೀರಿತು.

ಬ್ರಾಹ್ಮಣರ ಹೆಂಗುಸರಿಗೆ ಇಲ್ಲಿ ಸೂರ್ಯದರ್ಶನವಿಲ್ಲ; ಪರದಾಪದ್ಧತಿ–'ಅಸೂರ್ಯಂಪಶ್ಯಾನಾಃ ವಿಪ್ರದಾರಾಃ' ಎನ್ನುವ ನೀತಿ. ಸುಧಾರಣೆಯ ಹಾದಿಯಿಂದ ತೀರ ದೂರ ಇರುವುದೆಂದರೆ ಇಲ್ಲಿ ಬ್ರಾಹ್ಮಣ ಸಮಾಜ. ಅಂಗಿಯನ್ನು ಧರಿಸುವುದು ಮಹತ್ಪಾತಕನೆಂದು ಬಗೆವ ನಿಷ್ಠಾವಂತ 'ಶ್ರೋತ್ರಿಯ'ರೇ ಇಲ್ಲಿ ಕಣ್ಣಿಗೆ ಬೀಳುವರು. ಇಲ್ಲಿಯ ಬ್ರಾಹ್ಮಣರ ರೀತಿ-ನೀತಿಗಳು ವಿಮರ್ಶಕನ ಕಣ್ಣಿಗೆ ಬಹಳ ತಮಾಷೆಯವಾಗಿ ತೋರಬಹುದು. 'ಪುರುಷಾಯತ' ಎಂಬ ಕಾಮಶಾಸ್ತ್ರದ ಬಗೆಯೇ ಇಲ್ಲಿ ಪ್ರಚಾರದಲ್ಲಿದೆಯಂತೆ! ಒಂದು ಜಾತಿಯ ಅಸವರ್ಣ ವಿವಾಹವೂ ಇಂದು ಇಲ್ಲಿ ಪ್ರಚಾರದಲ್ಲಿದೆ; ಅದಕ್ಕೆ ತಡೆಯಿಲ್ಲ.

ಆದರೆ ಇಲ್ಲಿಯ ಜನರು ಶುದ್ಧ ಸಾತ್ವಿಕರು, ನಿಷ್ಕಪಟಿಗಳು, ಉದಾರಿಗಳು, ಪರೋಪಕಾರಕ್ಕೆಂದು ತಮ್ಮ ಕೈಯಲ್ಲಾದಷ್ಟು ಯತ್ನಿಸುವವರು, ಧೀರ ಸ್ವಭಾವದವರು.

ಇಲ್ಲಿಯ ಹವೆಯನ್ನು ಕುರಿತು ಹೇಳಬೇಕಾಗಿದೆ ಈಗ. ಇಲ್ಲಿ ನೀರು ಧಾರಾಳವಾಗಿದೆ. ಮಳೆ ಬೇಕಷ್ಟು ಬೀಳುತ್ತದೆ. ಒಳ್ಳೆಯ ನೆಲ, ಒಳ್ಳೆಯ ಜಲ, ಸಮೃದ್ಧ ಪ್ರದೇಶ, ಋತುಧರ್ಮಗಳು ಚ್ಯುತಿಯಿಲ್ಲದೆ ಕಾಣಿಸಿಕೊಳ್ಳುವುವು. ಪ್ಲೇಗು–ಕಾಲರಾ ಮುಂತಾದ ವಿಷಮವ್ಯಾಧಿಗಳನ್ನು ಅಪರೂಪವೆಂದು ಹೇಳಬಹುದು. ಆದರೆ "ಆನೆಯ ಕಾಲು" ಎಂಬ ರೋಗವೊಂದು ಇಲ್ಲಿ ಪ್ರಬಲವಾಗಿದೆ. ನೂರಕ್ಕೆ ೬೦ ಮಂದಿ ಈ ಬೇನೆಗೆ ತುತ್ತಾಗದಿಲ್ಲ. ನೋಡಲು ತೀವ್ರ ಅಸಹ್ಯವಾಗಿ, ಕೈಯೋ–ಕಾಲೋ – ಇನ್ನೇನೋ – ಮಿತಿಗೆಟ್ಟು ಬಾತು ಹೋಗಿ– ಜೀವವನ್ನೇ ಹಿಂಸೆಯನ್ನನುಭವಿಸಲು ವಿಹಾಸಲಿರಿಸಬೇಕಾಗುವ ಸಂದರ್ಭಕ್ಕೆ ತುತ್ತಾದ ಮಂದಿಯನ್ನು ನೋಡುವಾಗ ವ್ಯಥೆಯಾಗುತ್ತದೆ. ಸುಮಾರು ೨೫ ವರ್ಷಗಳಿಂದ ಈಚೆಗೆ ನೂರು ಮೈಲು ದೂರದಲ್ಲಿರುವ 'ಪೂರ್ಣಾ' ನದಿಯ ನೀರನ್ನು ತಂದು ಪಟ್ಟಣದಲ್ಲಿ 'ನಳ್ಳಿ'ಗೆ ಉಪಯೋಗಿಸುವ ವ್ಯವಸ್ಥೆಯನ್ನು ಸರಕಾರದವರು ಕೈಕೊಂಡು – ಸ್ಥಳೀಯ ನೀರನ್ನು ಉಪಯೋಗಿಸ ಕೂಡದೆಂದು ಸಾರಿದ್ದರಿಂದ, ಈಚೀಚೆಗೆ ಆ ರೋಗ ಸ್ವಲ್ಪ ಕಮ್ಮಿಯಾಗಿದೆಯೆನ್ನುತ್ತಾರೆ. ಮೊದಲಿನ ಪರಿಮಿತಿಯನ್ನರಿಯದ ನಾನು, ಸರಕಾರದವರ ಈ ಕಾರ್ಯಭಾಗವು ಎಷ್ಟು ಯಶಸ್ವಿಯಾಗಿದೆಯೋ ಹೇಳಲಾರೆ. 'ಮೈಲಿ'ಯ ರೋಗಕ್ಕಂತೂ ಈ ಭಾಗದ ಜನರು ತೀರ ಬೆದರುತ್ತಾರೆ. ಈ ಬೇನೆಯನ್ನು ದೈವೀಕೋಪವೆಂದು ಬಗೆಯುತ್ತಾರೆ. ಈ ರೋಗವಿರುವ ಮನೆಯನ್ನು 'ದೇವಿ ಬಂದಿರುವ ಮನೆ' ಎನ್ನುತ್ತಾರೆ. 'ಮಸೂರಿ ಬಂದಿದೆ'ಯೆಂದರೆ ಕೆಲವು ಪ್ರಾಜ್ಞಮನೋಗತಿಯವರು ಓಡುವುದೊಂದು ವಿನೋದದ ವಿಚಾರವಾಗಿದೆ.

ಸರಕಾರವನ್ನು ಕುರಿತು ಬರೆಯುವುದಾದರೆ ಇದು ಸುಸಂಸ್ಕೃತವಾದ ಸಂಸ್ಥಾನವೇ ಎಂದು ಹೇಳಬಹುದು. ಪ್ರಜಾಸೌಕರ್ಯಕ್ಕೆ ತಕ್ಕ ಲಕ್ಷ್ಯವನ್ನಿಲ್ಲಿ ತೆಗೆದುಕೊಳ್ಳಲಾಗುವುದು. ಆಡಳಿತವು ತೃಪ್ತಿಕರವೆಂದು ಕೆಲವರು ಹೇಳುತ್ತಾರೆ. ಭಿನ್ನಧರ್ಮೀಯರ ಅನುಕೂಲತೆಯ ಕಡೆಗೂ ಸರಕಾರ ಜಾಗ್ರತೆ ತೆಗೆದುಕೊಳ್ಳುತ್ತದೆಯೆಂದು ಹೇಳಲಾಗಿದೆ. ಈ ಸಂಸ್ಥಾನದಲ್ಲಿ ದೇವಾಲಯಗಳೆಲ್ಲ ಸರಕಾರದ ವಶವಿದ್ದು, ಸರಕಾರದ ಪರೀಕ್ಷೆಯಲ್ಲಿ ಪಾಸಾದವರೆ ಅಲ್ಲಿ ಪೂಜಾರಿಗಳಾಗುತ್ತಾರೆ. ಅವರಿಗೆಲ್ಲ ಸರಕಾರವೇ ವೇತನಕೊಡುತ್ತದೆ. ಆದಾಯವೆಲ್ಲ ಸರಕಾರಕ್ಕೆ. 'ದೇವಸ್ವಂ ಕಮಿಟಿ' ಎಂಬ ಒಂದು ಇಲಾಖೆಯೇ ಬೇರೆ ಇದೆ. ಶಿಕ್ಷಣದ ಕಡೆಗೆ ಸರಕಾರವು ತುಂಬ ಲಕ್ಷ್ಯವನ್ನು ಕೊಡುತ್ತಿದೆ. ಸರಕಾರದ ದೇವಾಲಯಗಳಲ್ಲಿ ಅಸವರ್ಣರಿಗೂ ಪ್ರವೇಶವಿರುವ ಸಂಗತಿ ಜನಜನಿತವಾಗಿಯೇ ಇದೆ.

ಆದರೆ ಆಡಳಿತದಲ್ಲಿ ಜನರಿಗೆ ತೀವ್ರ ಅತೃಪ್ತಿಯಿದೆ ಎನ್ನುವುದು ಈಚೆಗೆ ಅಲ್ಲಿ ನಡೆಯುತ್ತಿರುವ ಚಳವಳಿ, ಪ್ರಭು-ಪ್ರಜೆಗಳ ಘರ್ಷಣವನ್ನು ನೋಡುವಾಗ ಗೊತ್ತಾಗುತ್ತದೆ. ಅದರ ವಿಮರ್ಶೆಯು ಇಲ್ಲಿ ಅಪ್ರಕೃತ.

* * *

ಇಲ್ಲಿಯ ಅನಂತಪದ್ಮನಾಭ ದೇವಾಲಯದಲ್ಲಿ ವರ್ಷಕ್ಕೆ ಎರಡು ಬಾರಿ ಉತ್ಸವ ನಡೆಯುವುದು. ಆ ಕಾಲದಲ್ಲಿ ಜನರು ತುಂಬ ನೆರೆಯುವರು. ಕೇರಳಸಂಸ್ಕೃತಿಯ ಚಿಹ್ನೆಗಳಾದ ಹಲವು ಕುಶಲವಿದ್ಯೆಗಳನ್ನು ಬಲ್ಲವರು ಬಂದು, ದೇವರ ಸೇವೆಯೆಂದು ಆಗ ಪ್ರದರ್ಶಿಸುತ್ತಾರೆ. ಉತ್ಸವದ ಕೊನೆಯ ದಿನ ದೇವರನ್ನು ಅವಭೃತಕ್ಕೆಂದು ಸುಮಾರು ೩॥ ಮೈಲು ದೂರದಲ್ಲಿರುವ ಸಮುದ್ರಕ್ಕೆ ಒಯ್ಯುತ್ತಾರೆ. ಜತೆಗೆ ಸಕಲ ರಾಜವೈಭವದೊಡನೆ ಮಹಾರಾಜನೂ ನಡೆದುಹೋಗುತ್ತಾನೆ. ಮಹಾರಾಜನ ಹುಟ್ಟುಹಬ್ಬ— ಮಾನವಮಿ — ಸಾಸ್ತಮಂಗಲ ಯಾತ್ರೆ ಈ ಎರಡು ಉತ್ಸವಗಳಲ್ಲಿ ರಾಜವೈಭವೋಪೇತನಾದ ಮಹಾರಾಜನು ಕಾಣಿಸುತ್ತಾನೆ. ಉಳಿದ ದಿನಗಳಲ್ಲೂ ದೇವದರ್ಶನಕ್ಕೆಂದು ದಿನವೂ ಗುಡಿಗೆ ಬರುವುದರಿಂದ, ಆಗ ನೋಡಬಹುದು. ಆದರೆ ದೇವರ ದರ್ಶನಕ್ಕೆ ಬರುವಾಗ ಅರಸನು ಯಾವ ರಾಜಕೀಯ ಉಡುಗೆಯನ್ನೂ ಧರಿಸುವುದಿಲ್ಲ. 'ರಾಜ್ಯವು ದೇವರದು—ತಾನು ಆತನ ದಾಸನಾಗಿ ರಾಜ್ಯಭಾರ ನಡೆಯಿಸುವೆನು'ಎಂಬ ಭಾವನೆಗಾಗಿ, ಬರಿಮೈಯಲ್ಲಿ ತಲೆಗೊಂದು ಟೊಪ್ಪಿಯಿಟ್ಟುಕೊಂಡು ದೇವರಲ್ಲಿಗೆ ಬರುತ್ತಾನೆ. ಆ ಟೊಪ್ಪಿಯಲ್ಲಿ ಪದ್ಮನಾಭದೇವರ ಪಾದಗಳೂ — ಶ್ರೀಪದ್ಮನಾಭದಾಸನೆಂಬ ಅಕ್ಷರಗಳೂ ಇರುತ್ತವೆ.

ಪದ್ಮನಾಭದೇವಸ್ಥಾನದಲ್ಲಿ ಆರುವರುಷಗಳಿಗೊಮ್ಮೆ 'ಮುರಜಪ' ಎಂಬ ಒಂದು

ಬ್ರಾಹ್ಮಣ ಮಹಾಸಮಾರಾಧನೆಯು ನಡೆಯುವುದು. ಅದು ೬೮ ದಿನಗಳ ಸಮಾರಾಧನೆ. ರಾಜ್ಯದ ಅನಿಷ್ಟ ಪರಿಹಾರಕ್ಕೆಂದು ಆ ಉತ್ಸವವನ್ನು ನಡೆಯಿಸಲಾಗುವುದಂತೆ. ಬ್ರಾಹ್ಮಣರು ಆ ದಿನಗಳಲ್ಲೆಲ್ಲ ವೇದಜಪಮಾಡುತ್ತಿರಬೇಕು. ರಾಜನು ನಿತ್ಯವೂ ಮೂರು ನಾಲ್ಕು ಬಾರಿ ಜಪನಿಷ್ಠ ಬ್ರಾಹ್ಮಣಪರಿಷತ್ತಿಗೆ ಬಂದು, ವಂದಿಸಿ ಹೋಗುವ ಸಂಪ್ರದಾಯವಿದೆ. ಅವರೆಲ್ಲರಿಗೂ ೬೮ ದಿನಗಳಲ್ಲಿ, ರಾಜಭೋಜನ-ವಸತಿಯ ಏರ್ಪಾಡುಗಳನ್ನೆಲ್ಲ ಸರಕಾರವೇ ನೋಡಿಕೊಳ್ಳುತ್ತದೆ. ಕೊನೆಯ ದಿನ ಆ ಬ್ರಾಹ್ಮಣರಿಗೆಲ್ಲ ೬೦ ರೂಪಾಯಿಗಳನ್ನು ದಕ್ಷಿಣೆಯನ್ನಾಗಿ ಕೊಡುತ್ತಾರೆ! ಇದರಲ್ಲಿ ಮಲೆಯಾಳದ ನಂಬೂದಿರಿ ಬ್ರಾಹ್ಮಣರಿಗೂ ದಕ್ಷಿಣಕನ್ನಡ ಜಿಲ್ಲೆಯ ಬ್ರಾಹ್ಮಣರಿಗೂ ಮಾತ್ರ ಪ್ರವೇಶವಿದೆ. ಈ ಸಮಾರಂಭಕ್ಕೆ ಎಂಟುಲಕ್ಷ ರೂಪಾಯಿ ಖರ್ಚಾಗುವುದಂತೆ. ಆದುದರಿಂದಲೇ ಆ ವರುಷ ಬ್ರಿಟಿಷ್ ಸರಕಾರಕ್ಕೆ ಕೊಡಬೇಕಾಗುವ ಪೊಗದಿಯನ್ನು ಕೂಡ ಕೊಡಬೇಕಾಗಿಲ್ಲ. ರಾಜರ ಜೀವಮಾನದಲ್ಲೊಮ್ಮೆ ಸ್ವರ್ಣ ತುಲಾಭಾರ ನಡೆಯಿಸಿ ಆ ಚಿನ್ನವನ್ನು ಬ್ರಾಹ್ಮಣರಿಗೆಲ್ಲ ಹಂಚಿಕೊಡಬೇಕೆಂಬ ನಿಯಮವಿದೆಯಂತೆ. ಪ್ರಕೃತದ ಅರಸರ ಜೀವಮಾನದಲ್ಲಿ ಅದಿನ್ನೂ ನಡೆದಿಲ್ಲ. ಪದ್ಮನಾಭ ದೇವಾಲಯದಲ್ಲಿ, ಇಡಿಯ ತಿರುವಾಂಕೂರು ಸಂಸ್ಥಾನವು (೫೦ ಲಕ್ಷ ಪ್ರಜೆಗಳು) ಕ್ಷಾಮಕ್ಕೆ ತುತ್ತಾದರೆ, ಅರ್ಧಶತಮಾನದ ವರೆಗೂ ತಮ್ಮ ಆರ್ಥಿಕ ಪ್ರವೃತ್ತಿಗಳ ವಿನಿಯೋಗಕ್ಕೆ ಬೇಕಾಗುವಷ್ಟು ಧನಕನಕ ಸಂಗ್ರಹವಿದೆಯೆಂದು ಅಲ್ಲಿ ವದಂತಿಯಿದೆ.

*   *   *

ನಾವು ಪ್ರಧಾನವಾಗಿ ತಿಳಿದುಕೊಳ್ಳಬೇಕಾದ ಅಂಶ ಬೇರೆಯೇ ಇದೆ. ಅದು ನಮಗೆ ಮುಖ್ಯವೂ ಹೊಣೆಗಾರಿಕೆಯದೂ ಆಗಿದೆ. ಅದೆಂದರೆ ತಿರುವಾಂಕೂರಲ್ಲಿ ನೆಲಸಿರುವ ಕನ್ನಡಿಗರ ವಿಚಾರ. ಅದನ್ನು ಇನ್ನೊಂದು ಲೇಖನದಲ್ಲಿ ವಿದಿತಪಡಿಸಬೇಕೆಂದಿದ್ದೇನೆ.

ಕ್ರಿಮಿಕುಲ ವಿಮರ್ಶೆ

'ಆನಂದಕಂದ'

೧

ಒಳ್ಳೆ ಪೈರುಗಳ ತಿಂದು ಪೊಳ್ಳುಬೊಳ್ಳಾಗಿಸುತ
ಬರಗಾಲ ತರುವುದಾ ಜಿಟ್ಟೆಯ ಹುಳ!
ಹಳ್ಳಿಗರ ಸಂತಸವ ಕೊಳ್ಳೆ ಹೊಡೆಯುತ್ತಿಹುದು-
ಕರಿಗಾಲುಗುಣದ ಜಳಿಬಟ್ಟೆಯ ಹುಳ!

೨

ಇರುಳಿನಲಿ ಕಿರುಬೆಳಕ ಮೆರೆಯಿಸುತ ಮಿರುಗಿಸುತ
ಹಾರುವುದು ಮುಗಿಲೊಳಗೆ ಹೊನ್ನೆಯ ಹುಳ!
ಗರುವ ಹೆಮ್ಮೆಗಳಿಂದ ಕೊರಳೆತ್ತಿ ಬಡವರನು
ತೂರುವುದು ಹುಡಿಯೊಳಗೆ ಹೊನ್ನಿನ ಹುಳ!

೩

ನೀರ ಹರಿಯೊಳಗಿದ್ದು ಊರೊಳಗೆ ಚಳಿಯುರಿಯ
ಬೀರುವುದು ಹಾರಿ ಗುಂಗಾಡಿಯ ಹುಳ!
ಊರ ಬೆಂಕಿಯ ಕಿಡಿಯ ಊರಿಗೂರನೆ ಸುಟ್ಟು
ಬಾರುವುದು ಕಿಡುಗೇಡಿ ಜಾತಿಯ ಹುಳ!

೪

ಹಸಿರು ಉಣುತಿರುವಾಗ ಹಸಿಯನ್ನದಲಿ ಕಂಡು
ಕಸಪುಸಿಯಗೊಳಿಸುವುದು ಬಾಲದ ಹುಳ!
ಕಸಿದು ಕೊಳುವುದು ಬದುಕಿನೊಸಗೆಯನು-ಹಗಲಿರುಳು-
ಬಸಿರೊಳಗೆ ಜುಂಜ್ಜುತಿಹ ಸಾಲದ ಹುಳ!

೫

ಉರಿವ ದೀಪವ ಒಡೆದು ಹರಡುವುದು ಕತ್ತಲೆಯ
ಪರಪೀಡಕನು ಪೂರ್ಣ ಪಕ್ಷದ ಹುಳ!
ಅರುಹಿನೊಳುಬೆಳಕನ್ನು ಮರೆಯಲಿ ಮಾಳ್ಪುದು
ಕುರುಡು ಧರ್ಮಾಚಾರ ಕೊಕ್ಕೆಯ ಹುಳ!

೬

ಮುದ್ದು ಮುದ್ದೊಡವೆಗಳ ಮುದ್ದು ಮಣಾ-ಮಾಡುವುವು
ಗುಡ್ಡನೊಳಗಡಗಿರುವ ಗೆದ್ದಲುಹುಳ!
ಇದ್ದ ಬುದ್ಧಿಯ ಮಾರಿ ಮೊದ್ದುತನ ಕೊಳ್ಳುವುದು-
ಕೋಣೆಯೊಳೆ ಕುಳಿತಿರುವ ಪುಸ್ತಕ ಹುಳ!

ಹೀಗೂ ಉಂಟೇ?

ಶ್ರೀಮತಿ ★ ಟಿ. ವಿ. ಸರ್ವಮಂಗಳಾಂಬಾ (ಅಪರ್ಣ)

ನಮ್ಮ ಸಾಂಪ್ರದಾಯಿಕ ಸಮಾಜದಲ್ಲಿ ಗಿರಿಜಮ್ಮನಂತಹರ ವಿಷಮಸಂಸಾರಗಳು, ಈ ಇಪ್ಪತ್ತನೆಯ ಶತಮಾನದಲ್ಲಿಯೂ ಸಾಕಷ್ಟು ಕಣ್ಣಿಗೆ ಬೀಳುವುವು. ಮಹಾದೇವ ಶಾಸ್ತ್ರಿಗಳಂತಹ ಮಧ್ಯಸ್ಥರ ಬುದ್ಧಿ, ಶಂಕರಪ್ಪನಂತಹ ಸಿರಿವಂತರನ್ನು ಸಮಾಜ-ಕಲ್ಯಾಣದ ಕಡೆಗೆ ತಿರುಗಿಸುವುದರಲ್ಲಿ ಉಪಯೋಗವಾದರೆ ಎಷ್ಟೊಂದು ಚೆನ್ನಾದೀತು? ಆದರೇನು.... ...!

★

"ಏಕೆ ಶಂಕರಪ್ಪನವರೆ, ಮಾಘಮಾಸ ಮುಗಿದು ಎರಡು ತಿಂಗಳುಗಳಾದರೂ, ವೈಶಾಖ ಅರ್ಧ ಮುಗಿದರೂ ನೀವು ಏನು....?"

"ಇನ್ನು ಮೇಲೆ ಆ ಸುದ್ದಿಯನ್ನೇ ಎತ್ತಬೇಡಿ ಶಾಸ್ತ್ರಿಗಳೆ.. ನನ್ನ ಮುಂದೆ! ಮನಸ್ಸಿಗೆ ತುಂಬ ಬೇಜಾರವೆನಿಸಿದೆ!"

"ನೀವು ನಿಮಗಾದ ವ್ಯಸನದ ಮೂಲಕ ಹೀಗೆ ಹೇಳುತ್ತಿರುವುದು ಸ್ವಾಭಾವಿಕ; ಆದರೆ ಏನು ಮಾಡುವುದಿದೆ? ಸತ್ತವರ ಹಿಂದೆ ಯಾರೂ ಸಾಯುವಂತಿಲ್ಲ! ನೀವೇ ಯೋಚಿಸಿ ನೋಡಿ..; ಅವರಿಗೆ ಮಣ್ಣು ಮರೆ, ನಮಗೆ ಅನ್ನಮರೆ! ಅದೇ ದುಃಖ ಹಾಗೆಯೆ ಉಳಿದರೆ ಪ್ರಪಂಚ ನಡೆದೀತೇನು? ಎಲ್ಲೋ ನಿಮಗೊಂದು ಹುಚ್ಚು! ಆಳೂ-ಬೀಳೂ, ಒಡ್ಡೀ-ಬಾಕೀ, ಎಲ್ಲಾ ವಿಚಾರಿಸಿ ರೋಸಿಕೊಂಡು ಮನೆಗೆ ಬಂದರೆ, ನಿಮ್ಮ ಸುಖ-ದುಃಖ ವಿಚಾರಿಸುವವರು ಮನೆಯೊಳಗೆ ಒಬ್ಬರಿಲ್ಲದೆ ಹೋದರೆ, ಎಷ್ಟು ಇದ್ದರೂ ಏನು ಪ್ರಯೋಜನ ಹೇಳಿ! ಏನೋ ಬಡಜನರಾದರೆ ಸಾಲದ ಶೂಲ-ಕ್ಕಂಜಿ ಕೂತಲ್ಲೇ ಕುದಿಯುತ್ತಾ ಇರಬಹುದು. ನಿಮ್ಮಂಥವರಿಗೇ ಆ ವ್ಯಸನ? ನಿಮ್ಮ ವಯಸ್ಸೆಷ್ಟಿದೆಯೋ ಅಷ್ಟು ಕನ್ಯೆಯರನ್ನು ತಂದು ನಿಮ್ಮ ಅಂಗಳದಲ್ಲಿ ನಿಲ್ಲಿಸೇನು ನನಗೆ ಹೇಳಿದರೆ!"

"ನಿಜ, ನಿಮಗೆ ಹೇಳಿದರೆ ತಂದು ನಿಲ್ಲಿಸುವವರೇ ಇದ್ದೀರಿ; ಆದರೆ ನಮ್ಮ ಚಿರಂಜೀವಿ ಶಿವಕುಮಾರನೂ ವಯಸ್ಸಿಗೆ ಬಂದಿದ್ದಾನೆ, ಅವನಿಗೆ ಮದುವೆಮಾಡಿ ಮನೆಮಾರೆಲ್ಲಾ ಒಪ್ಪಿಸಿಕೊಟ್ಟು 'ಶಿವ ಶಿವ' ಎಂದು ಕಾಲಕಳೆಯಬಹುದು ನಾನು!"

"ಅವನ ವಿದ್ಯಾಭ್ಯಾಸ ಪೂರ್ಣ ಮುಗಿಯುವುದಕ್ಕೆ ಇನ್ನೂ ಎರಡು ಮೂರು ವರ್ಷಗಳಿವೆ. ಏಕೆ ಅಷ್ಟು ಅವಸರ?.. ಮಗನಿಗೆ ಮದುವೆಮಾಡಿದರೆ, ಸೊಸೆ ಮನೆಗೆ ಬಂದಾಗ ಮನೆಗೆಲಸ ತೋರಿಸಿ ಕೊಡುವುದಕ್ಕೆ ನುರಿತವರೊಬ್ಬರು ಬೇಕೋ ಬೇಡವೋ? ಇಬ್ಬರೂ ಸಣ್ಣವರಾದರೆ ಮನೆಯ ರೀತಿ-ನಡತೆ ಹೇಗೆ ಗೊತ್ತಾಗ

....ಸೂರ್ಯರಶ್ಮಿಯಿಂದ ತುಂಬಿ, ನೋಡಲಿಕ್ಕೆ ಬಾರದಂತಹ ಆಕಾಶದಲ್ಲಿ ಅರುಂಧತಿಯನ್ನು ತೋರಿಸಿದರು ಶಾಸ್ತ್ರಿಗಳು,

ಬೇಕು ಅವರಿಗೆ? ಮೊದಲು ನೀವು ಮದುವೆಯಾದರೆ ಈಗ ಬಂದವರಿಗೆ ಎರಡು ವರ್ಷ ಮನೆಯ ನಡೆವಳಿ-ನುಡಿವಳಿಯೆಲ್ಲಾ ಗೊತ್ತಾಗಿರುತ್ತದೆ; ಆ ಮೇಲೆ ಬಂದ ಸೊಸೆಗೂ ಹೇಳುವವರಾಗುತ್ತಾರೆ. ಹೌದೋ ಅಲ್ಲವೋ, ಆಲೋಚನೆಮಾಡಿ! ಅದೋ, ಈಗ ಏನೋ ಹೇಳಿದಿರಲ್ಲ! ಹಾಂ! ಶಿವಶಿವ ಎಂದು ಕಾಲಕಳೆಯಬಹುದೆಂದಲ್ಲಾ ನೀವು ಹೇಳಿದ್ದು? ಅಲ್ಲಾ ಎಂಥಾ ಹುಚ್ಚು ನಿಮಗೆ! ಮದುವೆಮಾಡಿಕೊಂಡರೆ ಶಿವಶಿವ ಎನ್ನುವುದಕ್ಕೆ ಬರುವುದಿಲ್ಲವೆಂದುಕೊಂಡಿರುವಿರೇನು ನೀವು? ಶಿವನಿಗೇನು ಸಂಸಾರವಿಲ್ಲವೇನು? ಆತನಿಗೂ ಇಬ್ಬರಿದ್ದಾರೆ ಹೆಂಡಿರು! ಇಬ್ಬರು!! ಸಂಸಾರಿಗರು ಸಂಸಾರಿಗಳನ್ನು ಅರಿತುಕೊಳ್ಳುತ್ತಾರೆಯಲ್ಲದೆ ಸಂನ್ಯಾಸಿಗಳನ್ನು ಸನ್ಮಾನಿಸಬಹುದೇ ಆ ಸಂಸಾರಿಗರು? ಆಲೋಚನೆ ಇಲ್ಲದಲೆ 'ತಾವು ನಡೆದುದೇ ಹೆದ್ದಾರಿ' ಎನ್ನುವವರಿಗೆ ಹೇಳುವುದು ಸಾಧ್ಯವಿಲ್ಲ ಶಂಕರಪ್ಪಾ!"

"ನೋಡಿ ಶಾಸ್ತ್ರಿಗಳೇ, ನಾನೇನೋ ನಿರ್ಧಾರಮಾಡಿಕೊಂಡಿರುವುದು ಮದುವೆಯಾಗಬಾರದೂ ಎಂದು; ಆದರೆ ಹಲಕೆಲವು ಜನರು ಓದು ನಿಮ್ಮಹಾಗೆ ಹೇಳುತ್ತಾರೆ. ಏನು ಮಾಡುವುದಕ್ಕೂ ತೋಚದಹಾಗೆ ಮನಸ್ಸು ಅಂ..ದು..ರಿ..ದಾ..ಡು..ತ್ತ..ದೆ!"

"ಹರಿದಾಡುವುದೇಕೆ ಶಂಕ್ರಪ್ಪಾ, ನಿರ್ಧಾರಮಾಡಿರಿ! 'ಶುಭಸ್ಯ ಶೀಘ್ರಂ' ಅಂತೆ. ನಾಳೆಯ ಸಪ್ತಮಿ ಸೋಮವಾರ ಶುಭಮುಹೂರ್ತವಿದೆ; ಈ ರಾತ್ರಿಯೇ ಹೊರಡುತ್ತೇನೆ ನಾನು. ಹುಡಿಗಿ ನೋಡುವುದಕ್ಕೆ ಲಕ್ಷಣವಾಗಿದ್ದರೆ ಸರಿ, ಬಣ್ಣದಲ್ಲೇನಿದೆ? 'ಕೆಂಪು ಮೂರು ಡೊಂಕು ಮುಚ್ಚಿತು' ಎಂದು. ನಾನೆಲ್ಲಾ ನೋಡಿ ಮಾತುಕತೆ ಮುಗಿಸಿಕೊಂಡೇ ಬರುತ್ತೇನೆ; 'ಕನ್ಯಾಶುಲ್ಕ'ದ ಮಾತು ಒಂದುವೇಳೆ ಬಂದರೆ ಐದುನೂರಕ್ಕಾದರೂ 'ಹೂಂ' ಎಂದು ಬಿಡಲೇನು?"

* * *

ಶಂಕರಪ್ಪನವರು ಮೂರಿಪ್ಪತ್ತು ವರ್ಷಗಳನ್ನು ದಾಟಿ ಮುಗ್ಗರಿಸುವುದರಲ್ಲಿದ್ದರು. ಅವರಿಗೆ ಮೊದಲನೆಯ ಹೆಂಡತಿ ಮಹಾಕಾಳಮ್ಮನವರು ತೀರಿದ್ದರು. ಸಂಸಾರವನ್ನೂ, ಶಂಕರಪ್ಪನವರನ್ನೂ ದರ್ಪದಿಂದ ನಡೆಯಿಸಿಕೊಂಡು ಹೋಗುತ್ತಿದ್ದ ದಾಕ್ಷಾಯಣಮ್ಮನವರು ತಮ್ಮ ಹೆಸರಿಗ ಹದಿನಾರು ವರ್ಷದ ಚಿ॥ ಶಿವಕುಮಾರನನ್ನು ಬಿಟ್ಟು, ಕ್ಷಯದ ಕುಂಡದಲ್ಲಿ ಬಿದ್ದು ಭಸ್ಮವಾಗಿಹೋಗಿದ್ದರು. ಶಂಕರಪ್ಪನವರು ವಿರಕ್ತಿಯನ್ನು ತಾಳಿ ಗುಡ್ಡಗಾಡನ್ನು ಸೇರದೆ, ತಮ್ಮ ಸ್ವಂತದ ಗಡಿನಾಡಿನಲ್ಲೇ ಇದ್ದು, ಧರ್ಮಕರ್ಮಗಳನ್ನು ನಡಸಿಕೊಂಡು ಹೋಗುತ್ತಿದ್ದರು. ಯಾರಾದರೂ ಮತ್ತೊಂದು ವಿವಾಹದ ವಿಷಯ ಎತ್ತಿದರೆ, ಅರೆಮನಸ್ಸಿನಿಂದ ಹೊರಡುತ್ತಿದ್ದ ಅವರ ಉತ್ತರವೆಂದರೆ "ಇನ್ನೇಕೆ ಆ ಮಾತು?" ಎಂದು. ಮಿಸಾ ರಾಮತಿಲಕ (ಸಿನಿಮಾ ಸ್ಟಾರ್) 'ಸತೀ ಸಾವಿತ್ರಿ' ಆದ ಹಾಗೆ. ನಿಜವಿಲ್ಲದಿದ್ದರೂ ನಟನೆಗೆ ಮಾತ್ರ ಹೇಳಿ ಜನರ ಮನದ ಗುಟ್ಟನ್ನು ತಿಳಿದುಕೊಳ್ಳುತ್ತಿದ್ದರು. ಧನವಿದ್ದ ಮಹಾರಾಯರಿಗೆ ಮದುವೆ ಬೇಡವೆಂದು ಹೇಳುವ ಮಾನವರು ಯಾರು? ನಾರದರಂತಹ ಮಧ್ಯಸ್ಥಿಕೆಯ ಮಹಾದೇವಶಾಸ್ತ್ರಿಗಳ ಆಗಮನವಾಗಿ ಗಿರಿಜೆಯನ್ನು ಹುಡುಕಿ ತರುವುದಕ್ಕೆ ಟೊಂಕಕಟ್ಟಿದ ಮೇಲೆ, ಶಂಕರಪ್ಪನವರಿಗೆ ಹೊಸ ವಧುವನ್ನು ಕಾಣುವ ಮುದಿವ್ಯಾಮೋಹವು ಹೆಚ್ಚಿ, 'ಎಷ್ಟಾದರೂ ಎರಡು ಕೈಗಳಿಗೆ ನಾಲ್ಕು ಕೈಗಳಾದರೆ ಆ ಸುಖವೇ ಬೇರೆ!' ಎಂದುಕೊಂಡು 'ರಾಮಯ್ಯಾ! ಸೀತಮ್ಮನನ್ನು ಮದುವೆಯಾಗುತ್ತೀಯಾ?' ಎಂದರೆ 'ಹುಂ! ಹುಂ!' ಎಂದು ತಲೆಹಾಕುವಂತೆ, ಶಂಕರಪ್ಪನವರು ಗಂಗೆ(ಕೌಲೆ)ತ್ತಾದುದೇನು ಆಶ್ಚರ್ಯವಲ್ಲ.

ಶಂಕರಪ್ಪನವರ ಮನೆಯ ಮುಂದೆ ಮಂಗಳವಾದ್ಯಗಳು ಮೊಳಗುತ್ತಿವೆ. ವಾದ್ಯಗಳ ಗಲಾಟೆಯೊಳಗೆ ತಪ್ಪೋ-ಒಪ್ಪೋ ಮರೆತ ಮಂತ್ರಗಳ ಸುರಿಮಳೆಯು ಸುರಿಯುತ್ತಿದೆ ಶಾಸ್ತ್ರಿಗಳ ಬಾಯಿಂದ. ಶಾಸ್ತ್ರಿಗಳು ಮಾಡಿಸುವ ಪ್ರಮಾಣಗಳೆಗೆಲ್ಲಾ ತಿಳಿದೋ, ತಿಳಿಯದೆಯೋ (!) ಒಪ್ಪಿಕೊಳ್ಳುತ್ತಿದ್ದಾರೆ ವಧೂವರರು. ಹಸುರುಮಂಟಪದಲ್ಲಿ ಅವರು ಕುಳಿತರು; 'ಸುಮುಹೂರ್ತೇ ಸಾವಧಾನ' ಸಮಿತಾಪಕ್ಕೆ ಬಂದಿತು. ಸಂಸಾರ ಎಷ್ಟು ಭಾರವಾದರೂ ಸಾಗಿಸಿಕೊಂಡು ಹೋಗಲೆಬೇಕೆಂಬ ಆಜ್ಞೆಯ ಗುದ್ದಿ ಶಂಕರಪ್ಪನವರ ಕೈಯಿಂದ, ದೇವರಿಗೆ ಬಿಟ್ಟ ಕರುವಿನಹಾಗೆ ಇದ್ದ ಹದಿನೈದು ವರ್ಷದ ಗಿರಿಜೆಯ ಕೊರಳಿಗೆ **ಗುಳದಾಳಿ** (ತಾಳಿ)ಯ ರೂಪವಾಗಿ ಬಿದ್ದಿತು. ಬೇಡವಾದ ಭಾರ ಕೊರಳಿಗೆ, ಬಿದ್ದುದಕ್ಕಾಗಿ ಕಣ್ಣುಗಳಿಂದ ನೀರು ಸುರಿಸುತ್ತಿದ್ದಳು ಗಿರಿಜೆ. ಮಾಂಗಲ್ಯಧಾರಣ ಮುಕ್ತಾಯವಾದಮೇಲೆ, ಸೂರ್ಯರಶ್ಮಿಯಿಂದ ತುಂಬಿ ನೋಡಲಿಕ್ಕೆ ಬಾರದಂತಹ ಆಕಾಶದಲ್ಲಿ, ಅರುಂಧತಿಯನ್ನು ತೋರಿಸಿ ನೀನೂ (ಅರುಂಧತಿಯು) ಹಾಗೆಯೇ ಇರಬೇಕೆಂಬ ಅರ್ಥದಿಂದ ಗಿರಿಜೆಗೆ ತಿಳಿಹೇಳಿದರು ಶಾಸ್ತ್ರಿಗಳು. "ಅರುಂಧತಿ ಇಲ್ಲದ ಆಕಾಶವನ್ನು ಅರ್ಧಮಧ್ಯಾಹ್ನದಲ್ಲಿ ಬೊಟ್ಟುಮಾಡಿ ತೋರಿಸಿದಿರಲ್ಲಾ ಶಾಸ್ತ್ರಿಗಳೇ! ಇಷ್ಟು ಜನರೆದುರಿಗೆ ನೀವೇ ಇಷ್ಟು ಸುಳ್ಳಾಡಿದಮೇಲೆ ನನ್ನ ನಡತೆಯಲ್ಲಿಯೂ ಸುಳ್ಳಾದರೆ ತಪ್ಪೇನು!" ಎಂದೆಂದುಕೊಂಡಿರಬಹುದು ಗಿರಿಜೆ ಮನದೊಳಗೆ. ವಧೂ-ವರರನ್ನು ಮುತ್ತೈದೆಯರಿಗೊಪ್ಪಿಸಿಕೊಟ್ಟು, ತಮಗೆ ಬರುವ ಅಕ್ಕಿ, ಕೊಬ್ಬರಿ, ದಕ್ಷಿಣೆ ಮೊದಲಾದುವನ್ನು ಮೂಟೆಕಟ್ಟಿಕೊಂಡು ಹೋಗುವಾಗ "ಶತಸಂವತ್ಸರಂ ದೀರ್ಘಮಾಯುಃ" ಎಂದು ವಧೂವರರನ್ನು ಆಶೀರ್ವದಿಸಿ ಹೊರಟು ಹೋದರು ಶಾಸ್ತ್ರಿಗಳು. ಇಂತಹ ಶಾಸ್ತ್ರಿಗಳ ಆಶೀರ್ವಾದದ ಪ್ರಭಾವವನ್ನು ಪಡೆದುಕೊಂಡ ವಧೂವರರೆಷ್ಟು ಜನರು-ಎನ್ನುವುದೇ ಸಂಶಯ! ಹದಿನಾರನೆಯ ದಿನದ ನಾಗೋಲಿ ಆಗುವ ಮುಂಚಿತವಾಗಿಯೇ 'ನಾನು ನಿನ್ನವನೇ ಶಿವಶಿವ!' ಎಂದು ನಾಲಗೆಚಾಚಿ ನೀರು ಬಿಡಿಸಿಕೊಂಡು ಸಾಯುವ ಮುದುಕನಿಗೂ ಅದೇ ಆಶೀರ್ವಾದವನ್ನೇ ಮಾಡುವುದು! ಆಶೀರ್ವಾದವೆಂದರೆ ಅದರಲ್ಲಿ ಸ್ವಲ್ಪಮಟ್ಟಿಗಾದರೂ ನಿಜವಿರಬೇಕು! ದಕ್ಷಿಣೆಯ ಆಶೆಗೆ ಮಾಡಿದ ಆಶೀರ್ವಾದವು ಅಶುಭವಾದೀತೇ ಹೊರತು ಆಶೀರ್ವಾದವಾಗಬಹುದೆ? ಅರ್ಧಶತವರ್ಷಗಳನ್ನು ಕಳೆದ

ಶಂಕರಪ್ಪನವರು ಹದಿನೈದು ವರ್ಷದ ಗಿರಿಜೆಯು ಕೂಡ ಶತವರ್ಷ ಬಾಳುವುದು ಹೇಗೆ? ಯಾತ್ರೆಗೆ ಮುಂಚಿತವಾಗಿಯೆ ಟಿಕೀಟು ತೆಗೆದುಕೊಳ್ಳುವವರು ಶಂಕರಪ್ಪನವರೇ ಎಂದು ಅದರ ಅರ್ಥ ಮೇಲೆಯೆ ಇದೆ. ಅಂತು ಇಂತು ಗಿರಿಜಮ್ಮನವರಿಗೆನೋ ತಪ್ಪಿದ್ದಲ್ಲ . . . . . ., ಅಥವಾ ಆಶೀರ್ವಾದದ ಪ್ರಭಾವ! 'ಇದೆಲ್ಲಾ ಹೀಗಿದ್ದರೂ ನೀವು ಹಾಗೆ ಹೇಳಿದಿರಲ್ಲಾ ಶಾಸ್ತ್ರಿಗಳೇ?' ಎಂದು ಯಾರಾದರೂ ಕೇಳಿದರೆ, 'ಅಯ್ಯೋ ತಲೆಹೋಕ! ಹಾಗೆ ಹೇಳುವುದೇ ನಮ್ಮ ಧರ್ಮ; ಯಾರಿದ್ದೇನು, ಆ ಹೊತ್ತೇ ಯಾರು. . ನಮಗೇನು? ಬಿದ್ದಿದೆ ಹಾಗೆ ಹೇಳುವ ರೂಢಿ; ಹೇಳಲೇ ಬೇಕು!' ಎನ್ನುವವರೇ ಶಾಸ್ತ್ರಿಗಳು. ಆದಿಶಕ್ತಿಗಿಂತಲೂ ಮೊದಲು ಅವತಾರ ತಾಳಿದ ರೂಢಿಗೆ ರುಮಾಲು ಇಡುವವರೇ ಪ್ರತಿಯೊಬ್ಬರು. ಮುಂದುವರಿದ ರಾಷ್ಟ್ರಗಳ ಮುಂದಾಳುಗಳೇ ಅದಕ್ಕೆ ಮುಂಡಾಸ ಸುತ್ತುತ್ತಿರುವಾಗ, ನಮ್ಮ ಬಡ ಶಾಸ್ತ್ರಿಗಳ ಕೈಯಿಂದ ಆದೀತೇ ಅದರ ಮೇಲೆ ಸಣ್ಣ-ನೀರು ಸುರಿಯುವುದು? ಪಾಪ' ಅವರೂ ಒಂದು ಮುಂಡಾಸ ಸುತ್ತುವವರೇ ಅದಕ್ಕೆ!

ಮದುಮಕ್ಕಳನ್ನು ಮಧ್ಯದಲ್ಲಿಯೆ ಬಿಟ್ಟು ಆಡಬಾರದ ಅಪಲಕ್ಷಣದ ಮಾತುಗಳನ್ನು ಮದುವೆಯ ಮನೆಯಲ್ಲಿ ಆಡಿದುದಕ್ಕಾಗಿ ಕ್ಷಮಿಸಿ! ಸಿಟ್ಟು ಬಂದರೆ ಶಿಕ್ಷಿಸಿ! ಮುತ್ತೈದೆಯರು ಉರುಟಣಿ, ಉಡುಗೊರೆ ಜರುಗಿಸುತ್ತಿದ್ದರು. ಅಲ್ಲಿಯೆ ಮುಂದೆ ಕುಳಿತು ನೋಡುತ್ತಿದ್ದ ನಾಲ್ಕು ವರ್ಷದ ಮಗು, ಇದ್ದಕ್ಕಿದ್ದಹಾಗೆ ಅಂಜಿ ಅಳುತ್ತಾ ತನ್ನ ತಾಯಿಯ ಕಡೆ ಹೋಯಿತು. ತಾಯಿ 'ಏನು ಮಗು, ಅಳುವುದೇಕೆ?' ಎಂದು ಎತ್ತಿ ಮುದ್ದಿಸುತ್ತಾ ಕೇಳಿದ್ದಕ್ಕೆ "ಅಲ್ಲೆ (ಹಸೆಯಮೇಲೆ) ಕೂತ ತಾತ ಅಂಜಿಸಿದರು!" ಎಂದು ಹೇಳುತ್ತಾ ಹಲ್ಲು ತುಟಿಯಮೇಲೆ ಬಂದು ತೋರಿಸಿತು ಮಗು. "ಅಂಜಿಸಿಲ್ಲಪ್ಪಾ! ಕಟ್ಟಿಸಿಕೊಂಡ ಹಲ್ಲುಗಳು ಅವು ಹಾಗೆಯೇ; ಆಕಳಿಸಿದರೆ ಸರಿದಿರಬಹುದು" ಎಂದು ಮುಸುಕು ಮರೆಮಾಡಿ ಮಗುವಿಗೆ ತಿಳಿಹೇಳಿ, ಮನಸಿನಲ್ಲೇ ನಕ್ಕರು ನಾಗಮ್ಮನವರು. "ಏನು ಹುಡುಗರೇ ತಾಯಿ! ಇಲ್ಲದ ಪ್ರಶ್ನೆ ಕೇಳಿ ಇದ್ದುದನ್ನೆಲ್ಲ ಹೊರಗೆಡಹುತ್ತವೆ ನೋಡು, ಈ ಹುಡುಗರು!" ಎಂದರು ಪಕ್ಕದಲ್ಲೇ ಕುಳಿತ ಪಾರ್ವತಮ್ಮನವರು. ಅವರಿಬ್ಬರ ಅಣಕದ ಮಾತಿಗಾಗಿ ಉದರದಲ್ಲೇ ಉರಿಯನ್ನಡಗಿಸಿಕೊಂಡು, "ಪೂರ್ವದಲ್ಲೆಲ್ಲಾ ಗಂಡನ ಎಪ್ಪತ್ತನೆಯ ವರ್ಷ ಮುಗಿದರೆ, ಹೆಂಡತಿಯ ಇಪ್ಪತ್ತನೆಯ ವರ್ಷ ಮುಗಿಯುತ್ತಿತ್ತಂತೆ; ಎರಡು ಮಕ್ಕಳ ತಾಯಿ. ಯಾದ ಕೆಂದರೆ ಅರ್ಥ ಮುದಿತನವೇ ಆಳುತ್ತದೆ ಹೆಣ್ಣನ್ನು!" ಎಂದರು ಮುದಿ ಅಳಿಯಂದಿರಿದ್ದ ಆತ್ತೆಯರ ಗುಂಪಿಗೆ ಸೇರಿದ ಸಾವಿತ್ರಮ್ಮನವರು. "ಹಡೆಯದ



ಮಕ್ಕಳು, ದುಡಿಯದ ಬಂಗಾರ ಯಾರಿಗುಂಟು ಯಾರಿಗಿಲ್ಲ? ಅದಕ್ಕೂ ಹಿಂದಿನ ಪುಣ್ಯಬೇಕು!" ಎಂದರು ಬಡತನದಲ್ಲಿಯೇ ಬಂಜೆತನವನ್ನು ಅನುಭವಿಸಿದ ಭವಾನಮ್ಮನವರು. ಜನರಿಗೇನೋ ಅಪಹಾಸ್ಯ, ಗಿರಿಜೆಯ ಜನ್ಮಕ್ಕೇನೋ ಅಮಾವಾಸ್ಯೆ. ಯಾರು ಹೇಗಾದಿ ಕೊಂಡರೇನು, ಬಿಟ್ಟರೇನು, ನಿಲುವಂಗಿಯ ಶಂಕರಪ್ಪನವರ ಅರ್ಧಾಂಗಿಯಾಗಿಹೋದಳು ಗಿರಿಜೆ!

* * *

ಗಿರಿಜೆ ಮನೆಗೆ ಬಂದು ಕೆಲವು ತಿಂಗಳುಗಳಾದುವು. ಶಂಕರಪ್ಪನವರಿಗೆ ಗಿರಿಜೆಯ ಮನದ ಗುಟ್ಟೇ ತಿಳಿಯಲಿಲ್ಲ. ಅವರು ಹಿತ್ತಿಲುಬಾಗಿಲಿಗೆ ಹೋದರೆ ಇವಳು ತಲೆಬಾಗಿಲಿಗೆ ಬರುತ್ತಿದ್ದಳು; ಅವರು ತಲೆಬಾಗಿಲಿಗೆ ಬಂದರೆ, ಇವಳು ಹಿತ್ತಿಲು ಬಾಗಿಲಿಗೆ ಹೋಗುತ್ತಿದ್ದಳು. ಸೂರ್ಯ ಪಶ್ಚಿಮಾಂಬುಧಿಗೆ ಇಳಿಯುತ್ತಲೆ ಗಿರಿಜೆ ಶಯನಾಂಬುಧಿ ಸೇರುತ್ತಿದ್ದಳು. ತಲೆಶೂಲೆ, ಉದರಶೂಲೆ, ಜ್ವರ, ಯಾವುದಾದರೂ ಕಾಯಿಲೆಯ ನೆಪ ಕಾದಿರುತ್ತಿದ್ದಿತು ಅವಳನ್ನು. "ಏನು, ಏಕೆ ಮಲಗಿದ್ದಿಯಾ?" ಎಂದು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲ ಶಂಕರಪ್ಪನವರಿಗೆ; ಆದರೆ ಮಲಗಿದ ಕೋಣೆಯೊಳಗೆ ಹೋಗುವ ಧೈರ್ಯವಿರಲಿಲ್ಲ. ಧೈರ್ಯವಿರಲಿಲ್ಲವೆಂದಲ್ಲ, ಕೈಹಿಡಿದ ಹೆಂಡತಿಯ ಕೋಣೆಗೆ ಹೋಗುವುದಕ್ಕೆ ಯಾರ ಅಪ್ಪಣೆಯಾದರೂ ಬೇಕೇ ಎಲ್ಲಾದರೂ? 'ಗಂಡ ಹೆಂಡತೀನ ಬಡಿದರೆ ಗೌಡ ಯಾರು ಕೇಳಲಿಕ್ಕೆ?' ಎನ್ನುವ ಮಾತೇನೋ ನಿಜ! ಆದರೆ ಹೋದ ಮೇಲೆ ಆಗುತ್ತಿದ್ದ ಮನಸ್ಸಿನ ಅಸಮಾಧಾನಕ್ಕೆ ಅಂಜುತ್ತಿದ್ದರು ಅವರು. ಪ್ರಭಾತದವರ 'ದುನಿಯಾ ನ ಮಾನೇ' ನೆನಪಿಗೆ ಬಂದು ಮನಸ್ಸು ಅಲ್ಲೋಲಕಲ್ಲೋಲವಾಗಿ "ಒಂದು ವೇಳೆ ಅದನ್ನು ಈ ಹುಡುಗಿ ನೋಡಿರಬಹುದೇ? ನೋಡಿದ್ದರೆ ಹೇಗೆ?" ಎನ್ನುವ ಪ್ರಶ್ನೆಯು, ಭೇತಾಳನ ರೂಪದಿಂದ ಬಾಯಿತೆರೆದು ನಿಂತಂತೆ ಕಾಣುತ್ತಿದ್ದಿತು ಅವರಿಗೆ. ಮತ್ತೆ ತಮಗೆ ತಾವೇ ಸಮಾಧಾನ ಮಾಡಿಕೊಳ್ಳುತ್ತಿದ್ದರು. "ಹಳ್ಳಿಗಾಡಿನಲ್ಲಿ ನೋಡುವುದಾದರೂ ಹೇಗೆ? ನೋಡಿರಲಿಕ್ಕಿಲ್ಲ! ಸಣ್ಣ ವಯಸ್ಸು, ತಾಯಿಯ ಸಲುಗೆಯಿಂದ ಬೆಳೆಸಿದ ಮಂಕು ಇನ್ನೂ ಹೋಗಿಲ್ಲ! ಹೇಗಾದರೂ ಆಗಲಿ, ಮನೆಗೇನೋ ಬಂದಿರುವಳಲ್ಲಾ! ಇನ್ನೂ ಕೆಲವು ದಿನಗಳು ಹೋಗಲಿ! ಸಲಿಗೆಕೊಟ್ಟು ನೋಡಿ ಆಯಿತು; ಇನ್ನು ಶಿಕ್ಷಿಸಿ ನೋಡೋಣ! ಶಿಕ್ಷಿಸುವುದಾದರೂ ಹೇಗೆ? ದುಡ್ಡಿನ ಬಲೆಬೀಸಿ ಬಲೆಗೆಬಿದ್ದ ಇಂತಹ ಎಷ್ಟೋ ಹೆಣ್ಣುಗಳನ್ನು ಪಳಗಿಸಿದ ನನಗೆ, ಈ ಹುಡುಗಿಯು ಎದುರಾಗಿದೆ ಎಂದು ಜನರಿಗೆ ತಿಳಿದರೆ ಅಪಹಾಸ್ಯಕ್ಕೆ ಗುರಿಯಾಗೇನಲ್ಲಾ! ಹೇಗಾದರೂ ಇದ್ದುಕೊಳ್ಳಲಿ, ಇರುತ್ತ

ಇರುತ್ತಾ ತನಗೆ ತಾನೇ ತಿಳಿದು ಕೊಂಡಾಳು!" ಎಂದೆಂದುಕೊಂಡು ಸಂಸಾರವನ್ನು ಸಾರವಿಲ್ಲದೆ ಸಾಗಿಸಿಕೊಂಡು, ದಿನಕ್ಕೆದಿನ ಸಮಾಧಾನಹೊಂದುತ್ತಿದ್ದರು ಶಂಕರಪ್ಪನವರು.

(" ನಿದ್ದಂತಿ ಮುದುಕಂಗೆ | ಮುದ್ದು ಹೆಂಡತಿ ಯಾಕೆ | ಗದ್ದೆಯಾ ಹಸುರು ತಿನ ಹೋಗಿ ಮುದಿಕೋಣ | ಬಿದ್ದು ಸತ್ತಂತೆ ಸರ್ವಜ್ಞ")

ಎಂಬ ಸರ್ವಜ್ಞ ಕವಿಯ ವಚನಕ್ಕೆ ಸರಿಯಾಗಿಯೆ. ಹೋಲುತ್ತಿದ್ದಿತು ಅವರ ಬಾಳುವೆ.

* * *

ಗಿರಿಜೆಯನ್ನು ಬೀಳ್ಕೊಡುವಾಗ ತಾಯಿ ಹೇಳಿದ ಸಮಾಧಾನದ ಮಾತೆಂದರೆ—

ಗದ್ದೆ ತೋಟಗಳುಂಟು | ಉದ್ಯೋಗ ಮೊದಲುಂಟು | ಭದ್ರದಲಿ ದ್ರವ್ಯ ಉಂಟೇ | ಅವ್ವಾ | ಕೊಟ್ಟರೇನೇ ಮುದುಕಗೆ || ತಾಳೆ ಮೊಲೆ ಬ್ಯಾಳಿಮಣಿಸಾಕೇ! ಅವ್ವಾ | ಬಹಳ ಪ್ರಾಯದ ಗಂಡ ಬೇಕೇ | ನಿನ್ನ | ಕೊಟ್ಟರೇನು ಮುದುಕಗೆ ||

ಈ ಹಳೆಯ ಹಾಡಿನಲ್ಲಿ ಅಡಗಿರುವ ಅರ್ಥವೇ ಮಗಳಿಗೆ ಹೇಳಿದ ತಾಯಿಯ ಸಮಾಧಾನದ ನೀತಿ. ತಾಯಿಯ ನೀತಿಗೆ ಬೆಂಬಲವಾಗಿ ಮಹತ್ವದ ಮಾತನ್ನೇ ಹೇಳಿದ್ದರು ತಂದೆಯವರು. "ಕೊಟ್ಟ ಮನೆಗೂ ಹುಟ್ಟಿದ ಮನೆಗೂ ಕೀರ್ತಿಕರ ಬೇಕಪ್ಪಾ ಹೆಣ್ಣಾಗಿ ಹುಟ್ಟಿದ ಮೇಲೆ. ಜನರೇನು, ಹೇಗಿದ್ದರೂ ಅಂದುಕೊಳ್ಳುವವರೇ; ಸಣ್ಣ ವಯಸ್ಸಿನ ಪೋಲಿ ಗಂಡನಾಗುವುದಕ್ಕಿಂತಲೂ ಅನುಭವಸ್ಥ ಗಂಡನಾಗುವುದೆ ಉತ್ತಮ! ನಿನ್ನ ಹಿತಕ್ಕಾಗಿಯೇ ಹೆಣಗುವವರು ನಾವು, ಅಷ್ಟು ಆಲೋಚನೆ ಇಲ್ಲದಲೆ ಮಾಡೇವೇನು? ನಾವು ಮಾಡುವದೆಂಬುದು ತೋರಿಕೆಗೆ ಮಾತ್ರ; ಬಾಳ್ವೆ ನಿನ್ನ ಅದೃಷ್ಟ! ಅದನ್ನು ತಪ್ಪಿಸಲಿಕ್ಕೆ ಯಾರಿಗೆ ಸಾಧ್ಯ ನೀನೆ ಹೇಳು! 'ಪಾಲಿಗೆ ಬಂದದ್ದು ಪಂಚಾಮೃತ'! ಹೇಗಿದ್ದರೂ ಅವರು ನಿನಗೆ ದೈವಸಮಾನರು. ಅವರು ಏನು ಹೇಳಿದರೂ 'ಚಾ ಚು' ತಪ್ಪದೆ ಪ್ರೀತಿ-ಶ್ರದ್ಧೆಗಳಿಂದ ನಡೆಯಿಸಿಕೊಂಡು ಹೋಗುವುದೇ ನಿನಗೆ ಶುಭ, ನಮಗೆ ಕೀರ್ತಿ" ಹೀಗೆಯೆ ಇನ್ನೂ ಕೆಲವು ನೀತಿಗಳನ್ನು ಗಿರಿಜೆಗೆ ತಿಳಿ ಹೇಳಿ ಕಳುಹಿಸಿದ್ದರು. ತಮ್ಮ ತಪ್ಪಿನ ಮುಚ್ಚಿಗೆ ಅವಳ ದೈವದ ಟಾರ್ಚನ್ನು ಬಿಡಿಸಿ, ತಾವೇನೋ ಬೆಳಕಿಗೆ ಬಿದ್ದು, ಅವಳನ್ನು ಮುಚ್ಚಿಗೆ ತಳ್ಳಿದರು ಅವಳ ಮಾತಾಪಿತೃಗಳು. ಗಿರಿಜೆಯ ಹಿಡಿತಕ್ಕೆ ಸಿಲುಕದ ಹಾಗೆ—ಹಿಡಿಯಲಿಕ್ಕೆ ಹೋದಷ್ಟು ಕಿವಿಗೆ ಗಾಳಿ ಹೊಕ್ಕ ಎಳೆಗರುವಿನ ಹಾಗೆ—ಜಿಗಿಯುತ್ತಿದ್ದಿತು ಅವಳ ಮನಸ್ಸು. ನೋಡಬೇಕೆಂಬ ಸಾಹಸದಿಂದ ಬಾಗಿಲ ಮರೆಯಲ್ಲಿ ನಿಂತು ನೋಡುತ್ತಲೆ ಆ ನೆರೆಯ ಕೂದಲು, ಸುಕ್ಕಿದ ಮುಖ, ಸಂಸಾರದ ಸುಖ-ದುಃಖಗಳಿಗೆ ಸವೆದ ಸೊಣಕಲು ಮೈಕಟ್ಟು, ಮುಪ್ಪಿಗೆ ಸ್ನೇಹವಾದ ಉಬ್ಬಸ, ಆ ಉಬ್ಬಸಕ್ಕೆ ತಡಿಯಲಾರದೆ ಹಾರುತ್ತಿರುವ ಪಕ್ಕೆ ಇದೆಲ್ಲಾ ಒಂದೇ ಸಾರಿ ಪ್ರತ್ಯಕ್ಷವಾಗುತ್ತಲೆ ಮನಸ್ಸು ವ್ಯಥೆಗೊಂಡು, ತಡೆಯಲಾರದ ದುಃಖ ತಾಳ್ಮೆಗೆ ಬರುವವರೆಗೂ ಕಂಬನಿಗರೆಯುತ್ತಿದ್ದಳು ಗಿರಿಜೆ. ಅಕ್ಕಪಕ್ಕದ ಬಡ ಸಂಸಾರಿಗರು ಬೀಸುವಾಗ ಹೇಳುತ್ತಿದ್ದ:—

" ಚಂದರಾಮಗ ಚುಕ್ಕಿ ಇಂಬಾಗಿ ಇರಬೇಕು | ರಂಬೀಗೆ ಪುರುಷ ವರನಾಗಿ | ರಂಬೀಗೆ ಪುರುಷ ವರನಾಗಿ ಇದ್ದ್ಹರ ಬಂಗಾರ ಸೇನು ಮಾಡಬೇಕು ?" /

ಎಂಬ ಹಾಡು ಆಗಾಗ ಕೇಳಿಸುತ್ತಿದ್ದಿತು ಗಿರಿಜೆಗೆ. 'ತಾನೂ ಸಮವರವುಳ್ಳ ಬಡ ಸಂಸಾರಿಯಾಗಿದ್ದರೆ?' ಎನ್ನುವ ಪ್ರಶ್ನೆಯು ತಾಂಡವವಾಡುತ್ತಿದ್ದಿತು ಅವಳ ಮುಂದೆ. "ಹೇಗಿದ್ದರೂ ಅವರು ನಿನಗೆ ದೈವದ ಸಮಾನರು" ಎಂದು ತಂದೆ ಹೇಳಿದ ನೀತಿಯನ್ನು ನೆನಸಿಕೊಂಡು ಎಚ್ಚರುಗೊಳ್ಳುತ್ತಿದ್ದಳು ಅವಳು. "ದೇವನನ್ನು ಶ್ರದ್ಧೆಯಿಂದ ಪೂಜಿಸು (ಉಪಚರಿಸು)ವೆನಲ್ಲದೆ, ಪ್ರೇಮಿಸಲಾರೆ! ತನಗಾಗಿ ಬಂದವರಿಗೆಲ್ಲಾ ಪ್ರೇಮವನ್ನು ಹರಿದು ಹಂಚಿ, ಛಿನ್ನವಿಛಿನ್ನವಾಗಿ ಪತನ ಹೊಂದಿದ ಅವರ ಪ್ರೇಮಕ್ಕೆ ನನ್ನ ಪವಿತ್ರವಾದ ಪ್ರೇಮವನ್ನು ಕೊಟ್ಟು ಎಂದೂ ಅಪವಿತ್ರಪಡಿಸಿಕೊಳ್ಳಲಾರೆ! ದೇವನಿಗೆ ದ್ರೋಹ ಮಾಡುವುದು ಪಾಪಕ್ಕೆ ಸೋಪಾನವೇ ಹೊರತು, ಪ್ರೇಮಿಸದೆ ಹೋದರೆ ಪಾಪವಿಲ್ಲ!" ಎಂದು ನಿರ್ಧಾರ ಮಾಡಿ, ಹೇಗೋ ಒಂದು ತನ್ನ ಹದಿನೈದು ವರ್ಷದ ಬಾಳನ್ನು ಏಪತ್ರಕ್ಕೆ ತಂದುಕೊಂಡು, ಬಲವಂತದಿಂದ ಬರುವ ದಿನಗಳನ್ನು ಬೇಸರದಿಂದ ತಳ್ಳುತ್ತಿದ್ದಳು ಗಿರಿಜೆ.

* * *

ಯುಗಾದಿಯ ಹಬ್ಬಕ್ಕೆ ಭವಿಷ್ಯ ಹೇಳುವ ಕೇಳುವ ರೂಢಿ ಇದೆಯಲ್ಲಾ ನಮ್ಮಲ್ಲಿ; ಎಂತಲೇ ಶಾಸ್ತ್ರಿಗಳ ಸವಾರಿಯೂ ಬಂದಿತು ಶಂಕರಪ್ಪನವರ ಮನೆಗೆ. ಭವಿಷ್ಯ ಹೇಳುವುದಕ್ಕೆ ಪ್ರಾರಂಭಿಸಿದರು ಶಾಸ್ತ್ರಿಗಳು. "ಶಂಕರಪ್ಪಾ, ನಿಮಗೆ ಮೂರನೆಯ ಶನಿ, ಗಿರಿಜಮ್ಮನವರಿಗೆ ಎರಡನೆಯ ಗುರುವು; ಕೇಳುವುದೇನಿದೆ! 'ಸುಪುತ್ರವತೀಭವ' ಆಗಲೇಬೇಕು ಈ ವರ್ಷ ಗಿರಿಜಮ್ಮನವರು. ಶಂಕರ-ಗಿರಿಜೆಯರ ಕಲ್ಯಾಣದ ಕುರುಹನ್ನು ಎಂದರೆ ಕುಮಾರಸ್ವಾಮಿಯನ್ನು ನೋಡಬೇಡವೇ ಇಷ್ಟೆಲ್ಲಾ ಮಾಡಿದ ನಾನು!" ಎಂದು ಉತ್ಸಾಹದ ಮೇಲ್ನಗೆ ನಕ್ಕು ಹೇಳಿದರು ಶಾಸ್ತ್ರಿಗಳು. "ಎರಡನೆಯ ಗುರುವೇಕೆ! ನನ್ನ, ನಿನ್ನ, ಮತ್ತು ಅವರ (ಶಂಕರಪ್ಪನವರ) ಗುರುವು ಬಂದು ಹೇಳಿದರೂ ಈ ವರ್ಷ ಒಂದೇ ಅಲ್ಲ, ಇನ್ನೂ ಹತ್ತು ವರ್ಷ.. ಮರೆತೆ! ಆ ಜನ್ಮ ಪುತ್ರವತಿಯಾಗಲಾರೆ!" ಎಂಬ ನಿರ್ಧಾರದ ನಗು ನಕ್ಕಳು ಗಿರಿಜೆ ಮನದೊಳಗೆ. ಅವರ ಭವಿಷ್ಯ ಪೂರ್ತಿಯಾಗಬಹುದೇ ನೀವೇ ಹೇಳಿ! 'ಯಾರೀಗೆ ಯಾರಿಲ್ಲ ಜೀವವೆ' ಎಂದು ಸಂ.... ವಿಲ್ಲದ ಸಂಸಾರವನ್ನು ನಡೆಯಿಸಿಕೊಳ್ಳುತ್ತಿದ್ದ ಅವರ ಮನಸ ಪಿಶಾಚಿಯು, ಅವರಿಗೆ ಸುಪುತ್ರನನ್ನು ಕಾಣಿಸುವುದೆಂದರೇನು? ಹೀಗೂ ಉಂಟೇ!

— o —

ಶ್ರೀ. ವಿದ್ವಾನ್ ಎಂ. ಜಿ. ವೆಂಕಟೇಶಯ್ಯ
ಎಂ. ಎ., ಬಿ. ಟಿ., ಬಳ್ಳಾರಿ
ಅವರಿಂದ

ಜಾತಕ ಸಿದ್ಧಾಂತ

★

ಇಂದು ನಾಡಿನಲ್ಲಿ ಎಲ್ಲ ಜನರಿಗೂ ಭವಿಷ್ಯದ ಹುಚ್ಚು ಹೊಕ್ಕಿದೆ. ಕುರುಡರಂತೆ ಬರಿಯೆ ಭವಿಷ್ಯದ ಬೆನ್ನನ್ನು ಹತ್ತುವುದಕ್ಕಿಂತ, ಮೊದಲು ಭವಿಷ್ಯಕ್ಕೆ ಮೂಲವಾದ ಜಾತಕಸಿದ್ಧಾಂತದ ಪರಿಚಯವನ್ನು ಮಾಡಿಕೊಳ್ಳುವುದು ಒಳ್ಳೆಯದು !

★

ನಮ್ಮಲ್ಲಿಯ ಜ್ಯೋತಿಷದ ಪ್ರಾಚೀನತೆ

'ಬ್ರಹ್ಮವಿದ್ಯೆಯ ಸಂಪ್ರದಾಯವನ್ನು ಮೊಟ್ಟಮೊದಲು ತಂದವನು ದೇವತೆಗಳಲ್ಲೆಲ್ಲ ಹಿರಿಯವನಾದ ಹಿರಣ್ಯಗರ್ಭನು. ಆ ಹಿರಣ್ಯಗರ್ಭನಿಂದ ಅಥರ್ವನು, ಅಥರ್ವನಿಂದ ಅಂಗಿರಸನು, ಅವನಿಂದ ಭಾರದ್ವಾಜನು, ಭಾರದ್ವಾಜನಿಂದ ಅಂಗಿರಸ್ಸು—ಹೀಗೆ ಈ ವಿದ್ಯೆಯನ್ನು ಪರಂಪರೆಯಿಂದ ಕಲಿತುಕೊಂಡರು.

" ಶೌನಕನೆಂಬ ಮಹಾಗೃಹಸ್ಥನೊಬ್ಬನು ಈ ಅಂಗಿರಸ್ಸಿನಲ್ಲಿಗೆ ಶಿಷ್ಯನಾಗಿ ಬಂದು 'ಸ್ವಾಮಿ, ಯಾವುದೊಂದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತಾಗುವುದು ?' ಎಂದು ಕೇಳಿದನು.

" ಆಗ ಅಂಗಿರಸ್ಸು ಹೇಳಿದ್ದೇನೆಂದರೆ—

ದ್ವೇ ವಿದ್ಯೇ ವೇದಿತವ್ಯೇ ಇತಿಹಸ್ಮಯದ್ ಬ್ರಹ್ಮವಿದೋವದನ್ತಿ ಪರಾ ಚೈವಾಪರಾಚ ॥ ೪ ॥

ತತ್ರಾಪರಾ:— ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾಕಲ್ಪೋ ವ್ಯಾಕರಣಂ ನಿರುಕ್ತಂ ಛನ್ದೋಜ್ಯೋತಿಷಮಿತಿ !

ಮುಂಡಕೋಪನಿಷತ್—ಪ್ರಥಮಂ ಮುಣ್ಡಕಮ್

" ಎರಡು ವಿದ್ಯೆಗಳು ತಿಳಿಯತಕ್ಕುವು; ಹೀಗೆಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಪರಾವಿದ್ಯೆ, ಅಪರಾವಿದ್ಯೆ— ಇವೇ. ಇವುಗಳಲ್ಲಿ ಅಪರಾ (ವಿದ್ಯೆ ಯಾವುದೆಂದರೆ); ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ (ಇವು). * "

* ಮುಂಡಕೋಪನಿಷತ್—ವ್ಯೆ. ಸುಬ್ಬರಾಯರು ಆಧ್ಯಾತ್ಮಪ್ರಕಾಶ ಕಾರ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಇದರಿಂದ ಜ್ಯೋತಿಷವು ವೇದಾಂಗವೆಂಬುದು ನಮಗೆ ವ್ಯಕ್ತವಾಗುವುದು. ಇದರಲ್ಲಿ ಸಾಮಾನ್ಯವಾಗಿ ಐದುಭಾಗಗಳು— ೧. ಸಿದ್ಧಾಂತ ೨. ಪಂಚಾಂಗ ೩. ಮುಹೂರ್ತ ೪. ಪ್ರಶ್ನೆ ೫. ಜಾತಕ. ಇವಲ್ಲದೆ ಗೃಹವಾಸ್ತುವಿಗೆ ಸಂಬಂಧಪಟ್ಟ ಜ್ಯೋತಿಷವೂ ಉಂಟು. ಹಸ್ತಸಾಮುದ್ರಿಕೆಯು ಬೇರೆಯಾಗಿದ್ದರೂ ಈಚೆಗೆ ಹಸ್ತಸಾಮುದ್ರಿಕೆಗೂ ಜ್ಯೋತಿಷಕ್ಕೂ ಸಂಬಂಧವಿರಬೇಕೆನ್ನುವಂತೆ ಬರೆದಿರುವ ಹಲವು ಗ್ರಂಥಗಳು ಕೆಲವರ ಕೈಗೆ ಸಿಕ್ಕಿವೆ.

ಸಿದ್ಧಾಂತ (Indian Astronomy)

ಆಂಗ್ಲೇಯ ಪದದೊಡನೆ 'ಸಿದ್ಧಾಂತ'ವೆಂದರೆಯೇ ನಮಗೆ ಸಿದ್ಧಾಂತವೆಂದರೆ ಇಂತಹದೆಂಬುದು ಗೊತ್ತಾಗುವುದು. ಎಂದರೆ ನಮ್ಮ ಸಿದ್ಧಾಂತದ ಸ್ಥಿತಿ ಎಲ್ಲಿಗೆ ಬಂದಿದೆಯೆಂಬುದನ್ನು ಹೆಚ್ಚು ವಿವರಿಸಬೇಕಾದುದಿಲ್ಲ.

ಹಿಂದೂ ಸಿದ್ಧಾಂತವು ಯಾವಾಗ ಮೊದಲಾಯಿತೆಂದು ಹೇಳುವುದು ಸುಲಭವಲ್ಲ. ವೇದಗಳ ಕಾಲದಲ್ಲಿ, ತಂದೆಯಿಂದ ಮಗನಿಗೆ ಬಾಯಿಪಾಠದ ಮೂಲಕ ನಮ್ಮ ಶಾಸ್ತ್ರಗಳು ಬರುತ್ತಿದ್ದ ಕಾಲದಲ್ಲಿ ಈ ಸಿದ್ಧಾಂತವೂ ಬಂದಿರಬೇಕೆಂದರೆ ತಪ್ಪಾಗಲಾರದು. ಹದಿನೆಂಟು ಸಿದ್ಧಾಂತಗಳು ನಮ್ಮಲ್ಲಿದ್ದಂತೆ ಕಂಡುಬರುತ್ತದೆ.

೧. ಪರಾಶರ	೨. ಗಾರ್ಗ್ಯ	೩. ಬ್ರಹ್ಮ	೪. ಸೂರ್ಯ
೫. ವ್ಯಾಸ	೬. ವಸಿಷ್ಠ.	೭. ಅತ್ರಿ	೮. ಕಾಶ್ಯಪ
೯. ನಾರದ	೧೦. ಮರೀಚಿ	೧೧. ಮನು	೧೨. ಅಂಗೀರಸ
೧೩. ರೋಮಕ	೧೪. ಪ್ರಲೀಪ	೧೫. ಚ್ಯವನ	೧೬. ಯವನ
	೧೭. ಭೃಗು	೧೮. ಸೋಮ.	

ಡೋಂಗರೇ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಇವುಗಳಲ್ಲಿ ಮೊಟ್ಟಮೊದಲು ಪ್ರಚಾರದಲ್ಲಿದ್ದುವು ಪರಾಶರ ಮತ್ತು ಗಾರ್ಗ್ಯಸಿದ್ಧಾಂತಗಳು. ಈಗ ಈ ಹದಿನೆಂಟು ಸಿದ್ಧಾಂತಗಳಲ್ಲಿ ಐದು ಮಾತ್ರ ನಮಗೆ ಸ್ವಲ್ಪಮಟ್ಟಿಗೆ ಉಳಿದಿರುವುವು. ಮಿಕ್ಕವು ವರಾಹಮಿಹಿರನ ಕಾಲದಲ್ಲಿಯೆ ಮಾಯವಾಗಿದ್ದಂತೆ ತೋರುತ್ತವೆ. ನಿಂತಿದ್ದ ಐದು ಸಿದ್ಧಾಂತಗಳನ್ನು ಸೇರಿಸಿ ವರಾಹಮಿಹಿರಾಚಾರ್ಯನು ತನ್ನ 'ಪಂಚ ಸಿದ್ಧಾಂತಿಕ' ಗ್ರಂಥವನ್ನು ಬರೆದನು.

ಸುಮಾರು ೪೭೬ರಲ್ಲಿಯೇ ಆರ್ಯಭಟ್ಟನು ತನ್ನ ಸಿದ್ಧಾಂತ ಗ್ರಂಥವನ್ನು ಬರೆದನು. ಅದು ಸಿದ್ಧಾಂತವಿಚಾರದಲ್ಲಿ ಗಣನೆಗೆ ಬರಬೇಕಾದದ್ದೇ ಹೊರತು ಜ್ಯೋತಿಷಕ್ಕೆ ಅದನ್ನು ಯಾರೂ ಉಪಯೋಗಿಸಲಿಲ್ಲವಾದ ಕಾರಣ, ಜ್ಯೋತಿಷವಿಚಾರದಲ್ಲಿ ನಮಗನುಕೂಲವಾದ ಮೊದಲನೆಯ ಗ್ರಂಥವೆಂದರೆ 'ಪಂಚಸಿದ್ಧಾಂತಿಕ'. ವರಾಹಮಿಹಿರಾಚಾರ್ಯನು ವಿಕ್ರಮಾದಿತ್ಯನ ಕಾಲದವನು. ಈತನ ನಿಜವಾದ ಹೆಸರು ನಮಗೆ ಗೊತ್ತಿಲ್ಲ; ವರಾಹಮಿಹಿರ— ಎಂಬುದು ಈತನ ಬಿರುದೆಂದು ಹಲವರು ಹೇಳುತ್ತಾರೆ.

ವರಾಹಮಿಹಿರನ ಕಥೆ

ಈತನು ಬ್ರಾಹ್ಮಣ. ಆ ಕಾಲದ ಜ್ಯೋತಿಷಸಿದ್ಧಾಂತಗಳಿದ್ದ ಸ್ಥಿತಿಯನ್ನು ನೋಡಿ, ಈತನು ಮನದಲ್ಲಿ ಮರುಗಿ, ಹಿಂದಿನ ಆರ್ಯಸಂಸ್ಕೃತಿಯನ್ನು ಪುನಃ ಸಂಪಾದಿಸಬೇಕೆಂಬ ಮಹದ್ಯೋಜನೆಯಿಂದ ಕೆಲಸಕ್ಕೆ ಕೈಹಾಕಿದನು. ಮಹಮ್ಮದೀಯ ಮತ್ತು ಇತರ ಜನಾಂಗದವರ ಹಾವಳಿಯಿಂದ ಆರ್ಯಸಂಸ್ಕೃತಿಗೆ ಸಂಬಂಧಪಟ್ಟ ಶಾಸ್ತ್ರಗ್ರಂಥಗಳೆಲ್ಲವೂ ನಾಶವಾದಂತೆ ನಾವು ಊಹಿಸಬಹುದು. ಜ್ಯೋತಿಷವೂ ಹಾಳಾಯಿತು; ಇದ್ದ ಸ್ವಲ್ಪ ಭಾಗಗಳು ಅನ್ಯಜನರ ವಶದಲ್ಲಿ ಸಿಕ್ಕಿಬಿದ್ದುವು. ಅವನ್ನು ಪುನಃ ಹಿಂದುಸ್ಥಾನಕ್ಕೆ ತರಲು ವರಾಹಮಿಹಿರನು ಹೊರಟನು.

ಆಗಿನ ವಾತಾವರಣವನ್ನು ತಿಳಿದವರಿಗೆ, ಊಹಿಸಿದವರಿಗೆ ಇದು ಎಂತಹ ಪ್ರಯತ್ನವೆಂಬುದು ಗೋಚರವಾಗದಿರದು. ಸಮುದ್ರಯಾನಮಾಡಿದ ಬ್ರಾಹ್ಮಣನನ್ನು ಪುನಃ ಗುಂಪಿನೊಳಗೆ ಸೇರಿಸುವುದೇ! ಗುಂಪಿನಿಂದ ಹೊರಗೆಹೋಗಿ ತನ್ನ ಗುಂಪಿಗೆ ಸಹಾಯಮಾಡಬೇಕೆನ್ನುವ ಸಾಹಸಿಗಳು ಎಷ್ಟುಮಂದಿ? ಒಂದು ಸಭೆಯನ್ನು ಏರ್ಪಡಿಸಿದಂತೆ ಕಾಣುತ್ತದೆ. ಆ ಸಭೆಯಲ್ಲಿ ಮೊಟ್ಟಮೊದಲು ವರಾಹಮಿಹಿರನಿಗೆ ಅನುಕೂಲವಾಗಿ ಬ್ರಾಹ್ಮಣರು ಮಾತನಾಡದಿದ್ದರೂ, ಆತನ ವಾಕ್ಚಾತುರ್ಯಕ್ಕೂ ಬುದ್ಧಿಗೂ ಹುರುಪಿಗೂ ಮನಸೋತು, ನಾಲ್ಕು ಅಥವಾ ಐದು ವರ್ಷ ಕಾಲದೊಳಗಾಗಿ ಆತನು ಹಿಂತಿರುಗಿ ಬಂದಲ್ಲಿ ಆತನನ್ನು ತಮ್ಮ ಕುಲದಿಂದ ಆಚೆಗೆ ತಳ್ಳುವುದಿಲ್ಲವೆಂದು ಒಪ್ಪಿಕೊಂಡರು.

ಹಿಡಿದ ಕೆಲಸ ಪೂರೈಸುವವರೆಗೂ ವರಾಹಮಿಹಿರನು ಹಿಂತಿರುಗಲಿಲ್ಲ: ಅದು ಐದುವರ್ಷದೊಳಗಾಗಲಿಲ್ಲ. ಅರಬ್ಬೀದೇಶದಲ್ಲಿದ್ದ ಹಿಂದೂಶಾಸ್ತ್ರವನ್ನು ಸಂಪಾದಿಸಲು ಅತಿ ಪ್ರಯಾಸಪಟ್ಟಂತೆಯೂ, ಯಾವುದಕ್ಕೂ ಸಗ್ಗದಿರಲು ಅಲ್ಲಿಯೇ ಮೇಧಾವಿಯಾದ ಈತನ ಯಜಮಾನಿಯಾಗಿದ್ದ ಒರ್ವ ಯುವತಿಯನ್ನು ಪರಿ ಅವಳ ಮೂಲಕ ಜಾತಕಪದ್ಧತಿಗಳನ್ನು ಪುನಃ ಶೇಖರಿ ಹಿಂದುಸ್ಥಾನಕ್ಕೆ ತಂದನೆಂತಲೂ ವದಂತಿ. ಹಿಂತಿರುಗಿ ಬಂ ಮೇಲೆ ಬ್ರಾಹ್ಮಣರು ಈತನನ್ನು ಕುಲಕ್ಕೆ ಸೇರಿಸಲಿಲ್ಲ. ಆದ ರಾಜಾಶ್ರಯವು ದೊರಕಿತು.

ರಾಜಕುಮಾರನ ಜಾತಕದ ವಿಚಾರವು ಬಂತು. ರಾಜ ಈತನನ್ನು ಕೇಳಲು ಈತನು 'ನಿನ್ನ ಕುಮಾರನು ಕಾಡುಹಂದಿ ಕೊಂಬಿನಿಂದ ಸಾಯುತ್ತಾನೆ' ಎಂದು ಹೇಳಿದನು. ದೊರೆಯ ಕಾಡುಹಂದಿಯ ಬೇಟೆ ಮುಂತಾದುವುಗಳಿಗೆ ತನ್ನ ಮಗನನ ಕರೆದುಕೊಂಡು ಹೋಗುತ್ತಿದ್ದನು. ಇದನ್ನು ಕೇಳಿದ ಕೂಡ ಮಗನನ್ನು ಭದ್ರವಾಗಿರಿಸಿ, ತಾನೇ ಬೇಟೆಗೆ ಹೋಗಿ ಕಾಡುಹಂ ಯನ್ನು ಬೇಟೆಯಾಡಿ ತರಲಾರಂಭಿಸಿದನು. ಹೀಗೆಯೇ ಒಂ ಸಲ ಬೇಟೆಯಾಡಿ ಬಾಗಿಲಲ್ಲಿ ಹಂದಿಯನ್ನು ತಂದುಹಾಕಿದನ ಆರತಿಯನ್ನೆತ್ತಿ ರಾಜನನ್ನು ಒಳಗೆ ಕರೆದುಕೊಂಡು ಹೋಗುವುದ ಪದ್ಧತಿ. ಆರತಿಯನ್ನು ತರುವುದರೊಳಗಾಗಿ ರಾಜಕುಮಾರ ಮಹಡಿಯ ಮೇಲಿಂದ— ಆ ಹಂದಿಯನ್ನು —ನೋಡಲು ಪ್ರಯ ಪಟ್ಟನು. ಎಲ್ಲರೂ ನೋಡುತ್ತಿದ್ದಂತೆಯೆ ರಾಜಕುಮಾರ ಬಗ್ಗಿ ಮೇಲಿನಿಂದ ಲಾಗಹೊಡೆದು ಆ ಹಂದಿಯ ಮೇಲೆ ಬಿದ್ದ

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರೆಜಿಸ್ಟ್ರೇಶನ್ನಿನ ಬಗ್ಗೆ
ಸಿ. ಜಿ. ಅನುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ಇವರಿಗೆ ಬರೆಯಿರಿ.
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ಕೋರೆಹಲ್ಲುಗಳು ರಾಜಕುಮಾರನ ಹೊಟ್ಟೆಯೊಳಕ್ಕೆ ಹೋದುವು. ಅಂದಿನಿಂದ ಈತನಿಗೆ ವರಾಹಮಿಹಿರಾಚಾರ್ಯನೆಂದು ಹೆಸರಾಯಿತು.

ವರಾಹಮಿಹಿರಾಚಾರ್ಯನ ತರುವಾಯ ಬ್ರಹ್ಮಗುಪ್ತನು ಬ್ರಹ್ಮಸ್ಫುಟಸಿದ್ಧಾಂತವನ್ನು ನಿರೂಪಿಸಿದನು. ಇದು ಸುಮಾರು ೬೪೦ರಲ್ಲಿ. ಅಲ್ಲಿಂದಾಚೆಗೆ ಭಾಸ್ಕರಾಚಾರ್ಯನ ಲೀಲಾವತೀ– (೧೨ನೆಯ ಶತಮಾನ)ಗ್ರಂಥದ ವರೆಗೂ ಅಂಧಕಾರವೆಂದೇ ಹೇಳಬೇಕು.

ಇದು ಹಿಂದಿನ ಕತೆ. ಈಗ ಬೇರೆ ಬೇರೆಯ ನೂರಾರು ಪಂಚಾಂಗಗಳನ್ನು ತೆರೆದು ನೋಡಿದರೆ ನಮ್ಮ ಸಿದ್ಧಾಂತದ ಸ್ಥಿತಿ ಹೇಗಿದೆ ಎಂಬುದು ನಮಗೆ ಗೊತ್ತಾಗುತ್ತದೆ. ಸಿದ್ಧಾಂತದಿಂದ, ಯಾವ ಯಾವ ಗ್ರಹಗಳು ಯಾವ ಯಾವ ಕಾಲದಲ್ಲಿ ಮೇಷಾದಿ ರಾಶಿಗಳಲ್ಲಿ ಎಲ್ಲೆಲ್ಲಿದ್ದುವು; ಮತ್ತೆ ಮುಂದೆ ಎಲ್ಲೆಲ್ಲಿಗೆ ಬರುತ್ತವೆ— ಎಂಬುವುಗಳನ್ನು ತಿಳಿದುಕೊಳ್ಳುವುದೇ ಅದರ ಉಪಯೋಗ. ಶಂಕುಸ್ಥಾಪನೆ ಮಾಡಿ ಸುಮಾರು ೩೦೦ ವರ್ಷಗಳಾಗಿರಬಹುದು. ಆದ್ದರಿಂದ ಈಗ, ಅದೇ ಮುನ್ನೂರು ವರ್ಷಗಳ ಹಿಂದೆ ಹಾಕಿದ ತಳಹದಿಯಮೇಲೆ ನಮ್ಮ ಗಣಿತವನ್ನು ಇಟ್ಟರೆ, ಎಷ್ಟರ ಮಟ್ಟಿಗೆ ನಮಗೆ ನಿಜಸ್ಥಿತಿ ತಿಳಿಯುವುದೆಂಬುದನ್ನು ನಾವು ಬತ್ತಿ ಕೇಳಬೇಕಾದದ್ದಿಲ್ಲ.

ಹಿಂದು—ಇಂದು

ಹಿಂದಿನ ಸಿದ್ಧಾಂತವು ಜ್ಯೋತಿಷಕ್ಕೆ ಪತ್ರಿಕಟ್ಟಿತ್ತು; ಈಗಿನ ಸಿದ್ಧಾಂತದ ನ್ಯೂನತೆಗಳು ಜ್ಯೋತಿಷಕ್ಕೆ ಆಪತ್ತುಗಳನ್ನು ತರುತ್ತಿವೆ. ಸ್ವಾಮಿಕಣ್ಣು ಪಿಳ್ಳೆಯವರು ತಮ್ಮ "**ಪಂಚಾಂಗ ಮತ್ತು ಜಾತಕ** * (Panchang and Horoscope)' ಎಂಬ ಪುಸ್ತಕದಲ್ಲಿ ಶ್ರೀರಾಮಚಂದ್ರನ ಜಾತಕವನ್ನು ಉತ್ಪ್ರೇಕ್ಷಾಲಂಕಾರದಲ್ಲಿ ಸೇರಿಸಿರುವರು. ಶ್ರೀರಾಮಚಂದ್ರನ ಜಾತಕದಲ್ಲಿ ವರ್ಣಿಸಿರುವಂತೆ ಆಯಾಯ ಗ್ರಹಗಳು ಆಯಾ ಸ್ಥಳಗಳಲ್ಲಿರಬೇಕಾದರೆ ಕ್ರಿ.ಪೂ.೩.೨೦೫೬; ಕ್ರಿ.ಪೂ. ೨೪೧೨೭: ಅಥವಾ ಕ್ರಿ. ಪೂ. ೪೦೫೬ ಆಗಿರಬೇಕೆಂದು ಲೆಕ್ಕಸಹಿತವಾಗಿ ತೋರಿಸಿದ್ದಾರೆ P. ೯೫-೯೬) (ಇನ್ನೂ ಹಲವು ವಿಚಾರಗಳನ್ನು ಚರ್ಚಿಸುತ್ತಾ ಎಷ್ಟರ ಮಟ್ಟಿಗೆ ನಮ್ಮ ಸಿದ್ಧಾಂತಕ್ಕೂ ಜಾತಕಕ್ಕೂ ಸಂಬಂಧವಿದೆಯೆಂಬ ವಿಚಾರವನ್ನು ತಿಳಿಸಿರುವರು. ಇದರ ವಿಚಾರವಿಮರ್ಶೆ ಸ್ವಲ್ಪ ಮಟ್ಟಿಗೆ '**ಭಾರತಿ**'ಯಲ್ಲಿದೆ (**ಭಾರತಿ**ಯಲ್ಲಿ ಪ್ರಕಟಿಸಿರುವ ಜ್ಯೋತಿಷ. ೨–P. ೨೨೭–೨೨೮ ನೋಡಿದರೆ ನನ್ನ ಮತವು ತಿಳಿಯುವುದು).

ಇದು ಇಷ್ಟಕ್ಕೇ ನಿಂತಿಲ್ಲ. ಜಾತಕಭಾವವೂ—ಸಿದ್ಧಾಂತಾದಿಗಳೂ ನಮ್ಮಲ್ಲಿರಲಿಲ್ಲವೆಂದೂ, ಗ್ರೀಕರಿಂದ ನಾವು ಅವುಗಳನ್ನು ತೆಗೆದುಕೊಂಡೆವೆಂದೂ ಅದೇ '**ಪಂಚಾಂಗ ಮತ್ತು ಜಾತಕ** (Panchang and Horoscope. p. 1.)' ದಲ್ಲಿ ಹೇಳಿದ್ದಾರೆ. ವರಾಹಮಿಹಿರನಿಗಿಂತ ಮುಂಚೆ ನಮ್ಮಲ್ಲಿ ಸಿದ್ಧಾಂತವಿತ್ತು. ವರಾಹಮಿಹಿರನು ಮೊದಲು ಗ್ರೀಕ ಹೆಸರುಗಳನ್ನು ಹೇಳಿದ್ದಾನೆ. ಆದ್ದರಿಂದ ನಾವು ಗ್ರೀಕರಿಂದ ಹಿಂದೂಸಿದ್ಧಾಂತವನ್ನು ತೆಗೆದುಕೊಂಡಿದ್ದೇವೆ ಎಂಬ ತರ್ಕವು ಎಷ್ಟರ ಮಟ್ಟಿಗೆ ಸರಿ! ಹಿಂದೂಸಿದ್ಧಾಂತಿಗಳು ಕೆಲವರು ಚೈನಾದೇಶದ ಅರಸರ ಕೈಕೆಳಗೆ ಕೆಲಸಮಾಡುತ್ತಿದ್ದರೆಂದು ವದಂತಿ. **ಸೂಯ್ ಷೂ** (Sui Shoo) ಪುಸ್ತಕದ XXXIV ನೆಯ ಭಾಗದಲ್ಲಿ ಹಿಂದೂ-ಸಿದ್ಧಾಂತದ ವಿಚಾರವಿದೆ ಎಂದು ತಿಳಿದು ಬಂದಿದೆ.

ಇಷ್ಟೇ ಅಲ್ಲ, ಜಾತಕಪದ್ಧತಿಗಳ ವಿಚಾರವನ್ನು ತೆಗೆದುಕೊಂಡಲ್ಲಿ ಎಷ್ಟರ ಮಟ್ಟಿಗೆ ಹಿಂದೂಪದ್ಧತಿಗಳಿಗೂ ಇತರ ಪದ್ಧತಿಗಳಿಗೂ ಸಂಬಂಧವಿದೆ ಎಂಬುದು ತಿಳಿಯಬಹುದು. ಇದನ್ನು ಜಾತಕಪದ್ಧತಿಗಳ ವಿಚಾರ ಬರೆಯುವಾಗ, ವಿಶದವಾಗಿ ಚರ್ಚಿಸಬಹುದು.

ಸದ್ಯಕ್ಕೆ ನಮ್ಮ ಸಿದ್ಧಾಂತಕ್ಕಿರುವ ಅಪವಾದಗಳು ತಪ್ಪಬೇಕಾದರೆ ಅನೇಕ ಕೆಲಸಗಳು ನಡೆಯಬೇಕಾಗಿವೆ. ಜನಸಾಮಾನ್ಯದ ಬೆಂಬಲದಿಂದ ನಡೆಯುವುದು ಕಷ್ಟ; ಹಿಂದೆ ಬೆಳೆದಂತೆ ಈ ಶಾಸ್ತ್ರವು ರಾಜಾಶ್ರಯದಿಂದಲೆ ಬೆಳೆಯಬೇಕಾಗಿದೆ.

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



೪ ಆಣೆಗೆ ೧೦ ಬ್ಲೇಡು!

* Panchang and Horoscope, Grant and Co., Madras 1925 p. 95.

—o—

ಅಮೃತಮಥನ

ಶ್ರೀ. ಶ್ರೀಧರಶರ್ಮ

ಆತ್ಮಾಂಬುರಾಶಿಯಲಿ ಅರಿವಿನಮೃತವ ಕಡೆಯೆ
ಮನವೆಂಬ ಮಂದರದ ನೆರವು ಬೇಕು;
ತಾತ್ತ್ವಿಕವಿಚಾರಪರಿಶೋಧನಾಶಕ್ತಿ ಬಂ-
ದಾತು ಶೇಷನ ಪಾತ್ರ ವಹಿಸಬೇಕು! ॥ ೧ ॥

ಗತಕಾಲಕರ್ಮವನು ತುಳಿದುನಿಂದಿರಲದ್ರಿ
ಪಕ್ವವದ ಕಲ್ಪತರು ಜನಿಸದಿರದು;
ದ್ರುತಗತಿಯ ಮಂಥಾನದೆಸಕದಿಂದುರುಸಾಹ-
ವೆನಿಪ ಕೊಡುವನು ಮಯ್ಯ ತೋರದಿರದು ॥ ೨ ॥

ಬಗೆಬಗೆಯ ಕಿರುಸೊಗಗಳುಜ್ವಳಿಸೆ ಪ್ರೌಢಕರಿಸಿ
ಪೆರೆ-ಸಿರಿ-ತುರಂಗ-ಕರಿಗಳನು ಪೋಲ್ತು,
ಗಗನತಳವನು ಬಳಿಕ ಫಕ್ಕನಾವರಿಸುವುದು
ಕೊರಗು; ಹಾಲಹಲವದನ್ಯಮಲ್ತು! ॥ ೩ ॥

ಭೋಗೆಚ್ಛೆಮುಗಿಲ್ದೇರನಿಂಗಡಲಸುತೆಯರಸು
ಭೋಗಸಾಧನಯುಕ್ತಿ; ದಗ್ಧಮಾರಂ
ಭೋಗಬಂಗದ ಗರಳನೆತ್ತಿ ಕುಡಿಯುವ ಶಕ್ತಿ,
ಯೋಗಸಿದ್ಧಿ ಸಹಾಯನಂಚೆದೇರಂ! ॥ ೪ ॥

ಮತಿಯ ಕಾರಣ ಫಣಾಪಟ್ಟದೊಳಗೀಡೆಂಬ
ರತುನ ಬಾನ್ಮಣಿಯಂತೆ ಬೆಳಗುತಿರಲು,
ಅತಿದಾರ್ಢ್ಯಮಯವಾದ ಸಂಯಮದ ಶೈಲಗಳ
ಮೆಯ್ಗೊಂಡು ಮನವೊತ್ತಿ ತಿರುಗುತಿರಲು— ॥ ೫ ॥

ಅರಿವಿನಮರ್ದನ ಬುಗ್ಗೆ ಹರಿಯೆ ಪಾಲ್ಸರಿಯಂತೆ
ಇಹದ ಮರೆಪೆಂಬ ಮೋಹಿನಿಯು ನೋಡು!
ನೆರೆದರನು ನರೆದೋರದರನಾಗಿಸುವಳವಳ
ಮರೆದವರೆ ರಾಹು-ಕೇತುಗಳ ಜೋಡು! ॥ ೬ ॥

ಮಬ್ಬಿಗರು ಮತಿಯ ಹೆಡೆಯಿಂದ ಮುಕ್ಕಳಿಸಿ ಬಹ
ಬೇಸರದ ಬಿಸುಸುಯ್ಲು ವಿಷಕೆ ತುತ್ತು!
ಕಬ್ಬಿಗರು ಜನ್ನಗೊಳರು ಮತಿಯ ವಾಲಧಿಯ
ತಬ್ಬಿ ದುಡಿವರದಮೃತವವರ ಸೊತ್ತು! ॥ ೭ ॥

ಉಣ್ಣದರ ಬೀಯವಿದನುಣ್ಣಬಯಸುವರೆಲ್ಲ
ಬನ್ನಿರೊಮ್ಮೊದಲಣ್ಮುದಳಿದು ಸುಗ್ಗಿ,
ಕಣ್ಣ ತೆರೆದಾತ್ಮಶೋಧನೆಯ ಕೆಯ್ಕೊಂಡರೇ-
ನೆನ್ನುವಿರಿ, ನಿಮಿಷಾರ್ಧದೊಳಗೆ ಸುಗ್ಗಿ! ॥ ೮ ॥

ಮಳೆ

★

" ಶ್ರೀಹರ್ಷ "

೧

ನೀಲಾಕಾಶವು ನೀರನು ಹೀರಿ
ಬೆಳ್ಳಗಾಗಿತ್ತು,
ಹಿರಿನೆಲೆಯಿದ್ದ ಸಾಗರನೀಲಿ
ಮಾಯವಾಗಿತ್ತು!

೨

ಪಚ್ಚೆಯ ತೆರದ ಹಸಿರನು ನೋಡಿ
ಸ್ವಲ್ಪ ನಕ್ಕಿತ್ತು,
ಆಗಸದೇವಿಗೆ ಸಂತಸವಾಗಲು
ಬಾಷ್ಪವುದುರಿತ್ತು!

೩

ಮನುಜರ ಪಾಡ ನೋಡುತ ಬಾನು
ಮೆಲ್ಲನತ್ತಿತ್ತು,
ಯುದ್ಧಾಘಾತವ ನೋಡುತ ಬೆಚ್ಚಿ
ರಕ್ತ ಸುರಿಸಿತ್ತು!

೪

ಹೊಲಸಾಯಿತು ಬುವಿ ಎನ್ನುತ ಬಂದು
ಸೊಯ್ಯನೆಸೆದಿತ್ತು,
ಮಾನವ ಹೃದಯವ ತಾನೇ ತೊಳೆಯಲು
ನೀರ ತಂದಿತ್ತು!

ಹುಡುಗಿ ಅವನನ್ನು ನೋಡುತ್ತಿದ್ದ ಹಾಗೆಯೆ ನಾಚಿಕೆಯಿಂದ ನಗುತ್ತಿದ್ದಳು.

ದೇಶಭ್ರಷ್ಟರು

★

ಶ್ರೀ. ಕುಮಾರ ಮಾಧವ *

ಪರಾಧೀನತೆಯನ್ನು ಸಹಿಸದೆ ಪೋಲರು ದೇಶಭ್ರಷ್ಟರಾಗಿ ವಿದೇಶಗಳಲ್ಲಿ ಬಾಳಬೇಕಾಯಿತು. ಪರಾಧೀನತೆಗಾಗಿಯೆ ನಾವೆಲ್ಲ ಭಾರತೀಯರು ಇಂದು ದೇಶದಲ್ಲಿಯೆ ದೇಸಿಗರಾಗಿ ಬಾಳಬೇಕಾಗಿದೆ. ಆದರೂ ರೋಮನ್‌ನಲ್ಲಿಯೂ ಅವನ ಕುಟುಂಬದವರಲ್ಲಿಯೂ ಹೊರಹೊಮ್ಮುತ್ತಿದ್ದ ಸ್ವದೇಶಪ್ರೀತಿ, ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತಿದೆ?

★

(ಇಪ್ಪತ್ತನೆಯ ಶತಮಾನದಲ್ಲಿಯ ರುಮಾನಿಯಾದ ಉತ್ತಮ ಕತೆಗಾರನೆಂದರೆ ಮಿಚೆಲ್ ಸಾಡೊವೀನು. ಇವನಿಗೂ ಇವನ ಕಥೆಗಳಿಗೂ ವಿಶ್ವಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಬ್ರಾಟೆಸ್ಕು ವಾಯನೆಸ್ಕಿಯ ನಂತರ ಇವನಷ್ಟು ಖ್ಯಾತಿವೆತ್ತ ಕಥೆಗಾರನು ರುಮಾನಿಯಾದಲ್ಲಿ ಇನ್ನೊಬ್ಬನಿಲ್ಲ. ಮಿಚೆಲನು ಅನೇಕ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾನೆ, ಆದರೆ ಅವುಗಳಲ್ಲಿ, ಕೊನೆಯದಾದ 'A Mill on the Siret' ಅತ್ಯುತ್ತಮವಾಗಿದೆಯೆಂದು ನಿರಾತಂಕವಾಗಿ ಹೇಳಬಹುದು.

ತನ್ನ ನಾಡಿನ ಹಳ್ಳಿಯ ಚಿತ್ರಗಳನ್ನು ಮಿಚೆಲ್ ಬಲು ಸರಸವಾಗಿ ಚಿತ್ರಿಸಿದ್ದಾನೆ. ಇವನ ಆ ಪ್ರೇಮಸನ್ನಿವೇಶಗಳೂ ವರ್ಣನಾಕೌಶಲ್ಯವೂ, ಸಾಧಾರಣವಾಗಿ ಎಲ್ಲ ಕಥೆಗಳಲ್ಲಿಯೂ ಕಂಡುಬರುವುವು. ಇವನ ವಿಶಿಷ್ಟವಾದ ಶೈಲಿ ಮನಸ್ಸಿನ ಮೇಲೆ ತುಂಬ ಪರಿಣಾಮ ಮಾಡುವಂತಹದಿದ್ದು, ಸನ್ನಿವೇಶಗಳೂ ತುಂಬಾ ಸರಳವಾಗಿದ್ದರೂ—'ಅದ್ಭುತ'ವೆಂದು ಭಾವಿಸುವ ಹಾಗಾಗುತ್ತದೆ. ಪ್ರಸ್ತುತ ಕಥೆಯಲ್ಲಿ ಇವನು ನಿರ್ಭಾಗ್ಯ ಪೋಲರ ದುರಂತಚಿತ್ರವೊಂದನ್ನು ಚೆನ್ನಾಗಿ ಚಿತ್ರಿಸಿದ್ದಾನೆ. ಇದರಲ್ಲಿಯ ಘಟನೆಗಳು ಸುಮಾರು ಒಂದು ಶತಮಾನಕ್ಕೆ ಮೊದಲು ನಡೆದುವಾದರೂ ಇಂದಿನವೆ ಇವಿರಬಹುದೆಂದು ಯಾರೂ ಸಹಜವಾಗಿ ಭಾವಿಸಬಹುದಾಗಿದೆ. ಸದ್ಯದ ಮಹಾಯುದ್ಧವು ಪರಿಸಮಾಪ್ತಿಯಾದನಂತರ, ಆ ಕಾಲದಂತೆ— ಎಂದರೆ ಸುಮಾರು ೧೮೧೪ರಲ್ಲಿಯಂತೆ—ಪುನಃ ವಿಭಜನೆಯಾಗಿ ಪೋಲಂಡವು ನಿರ್ನಾಮವಾದರೆ, ಕೆಲವು ವರ್ಷಗಳಲ್ಲಿಯೆ ಮಿಚೆಲ್ ಚಿತ್ರಿಸಿದಂತೆ ಆಗಬಹುದಾಗಿದೆ.

ಮಿಚೆಲ್‌ನ ಸುಂದರ ಕಥಾನಿರ್ಮಾಣವನ್ನೂ, ಭವಿಷ್ಯಕಥನವನ್ನೂ, ಸುಂದರವಾದ ವರ್ಣನೆಗಳನ್ನೂ, ದೇಶಪ್ರೀತಿಯನ್ನೂ ನಾವು ಇಲ್ಲಿ ಕಾಣಬಹುದಾಗಿದೆ.)

ಒಂದು ಮನೆ, ಪೇಟೆ ಮತ್ತು ಊರಿನ ಇನ್ನಿತರ ಪ್ರಮುಖ ಸ್ಥಾನಗಳಿಂದ ದೂರವಾಗಿದ್ದು ತೋಟವೊಂದರ ಮಧ್ಯದಲ್ಲಿದ್ದಿತು. ಸಮೀಪದಲ್ಲಿ ಇನ್ನಾವ ಮನೆಗಳೂ ಇರಲಿಲ್ಲ.

* ರುಮಾನಿಯಾ ದೇಶದ ಪ್ರಖ್ಯಾತ ಕತೆಗಾರನಾದ 'ಮಿಚೆಲ್ ಸಾಡೋವಿನ್' ಎಂಬವನ ಒಂದು ಕತೆಯ ಅನುವಾದವಿದು. ಲೇಖಕ.

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚುಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು !
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರ
ಬೇಕೆಂಬುವದನ್ನು ಕೂಡಲೆ ತಿಳಿಸಿರಿ !
ಬಣ್ಣಬಣ್ಣದ ಎನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು !
ಬೆಲೆ ಸುಲಭ ! * ತೃಪ್ತಿಕರವಾದ ಕೆಲಸ !!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು!

ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಮನೆಯು ಹಳೆಯದಾಗಿದ್ದು ಸುತ್ತಲಿನ ಕಟ್ಟೆಯು ಅಗಲವಾಗಿಯೂ ಎತ್ತರವಾಗಿಯೂ ಇದ್ದಿತು. ಎದುರಿಗೆ ಸುಣ್ಣಹಚ್ಚಿದ ಕಂಬಗಳೆರಡು ನಿಂತಿದ್ದುವು. ಎತ್ತರವಾಗಿದ್ದ ಆ ಮನೆಯ ಮೇಲ್ಭಾಗಕ್ಕೆ ಹಂಚುಗಳನ್ನು ಹೊದ್ದಿಸಿದ್ದರು. ಕಟ್ಟೆಯ ಮುಂಭಾಗದಲ್ಲಿ—ದಕ್ಷಿಣ ದಿಕ್ಕಿಗೆದುರಾಗಿ—ಸುಂದರವಾದ ಕಂಚಿಯ ಮರಗಳೆರಡು ಎತ್ತರವಾಗಿಯೂ ದುಂಡಗಾಗಿಯೂ ಬೆಳೆದಿದ್ದು, ತಮ್ಮ ಛಾಯೆಗಳನ್ನು ಸಾಕಷ್ಟು ದೂರಕ್ಕೆ ಪಸರಿಸಿದ್ದುವು.

ಆಗಸ್ಟ್ ತಿಂಗಳಲ್ಲೊಂದು ದಿನ, ಮನೆಯ ಯಜಮಾನನಾದ ವ್ಲಾಡಿಮಿರ್ ಸಾವಿಕಿಯು ತನ್ನ ಹೆಂಡತಿಯಾದ ಅನಾಳೊಂದಿಗೆ, ಕಟ್ಟೆಯ ಮೇಲೆ ಹಾಕಿದ್ದ ಕುರ್ಚಿಯಲ್ಲಿ ಕುಳಿತುಕೊಂಡಿದ್ದ. ಇಬ್ಬರೂ ತುಂಬ ವೃದ್ಧರಾಗಿದ್ದು, ಜೀವನದಲ್ಲಿಯ ಕಷ್ಟಗಳಿಂದಲೂ, ದೇಶಪರಿಭ್ರಮಣದಿಂದಲೂ ಬೆಂದು ಬಳಲಿದವರಾಗಿದ್ದರು. ಮುದುಕನಿಗೆ ಉದ್ದವಾದ ಬಿಳಿಯ ಗಡ್ಡಗಳಿದ್ದುವು. ತಲೆಗೂದಲುಗಳು ಚೆನ್ನಾಗಿ ನರೆತಿದ್ದುವು. ಅವುಗಳನ್ನು ಸರಿಯಾಗಿ ಬಾಚಿಕೊಂಡು ನಡುವೆ ಬೈತಲೆ ತೆಗೆದಿದ್ದ; ಉದ್ದವಾದ ಹುಕ್ಕವನ್ನೆಳೆಯುತ್ತಿದ್ದ. ಕಣ್ಣುಗಳು ನೀಲವರ್ಣದಿಂದ ಹೊಳೆಯುತ್ತಿದ್ದು ಸೂರ್ಯಾಸ್ತವನ್ನೀಕ್ಷಿಸುತ್ತಿದ್ದುವು. ಮುದುಕಿಯು ಪುಷ್ಪಗುಚ್ಛವೊಂದನ್ನು ಹಿಡಿದುಕೊಂಡು, ವಾಸನೆಯನ್ನು ಆಘ್ರಾಣಿಸುತ್ತಿದ್ದಳು. ಮುದುಕ ಎತ್ತರನಾಗಿದ್ದು ಸದೃಢನಾಗಿದ್ದ; ಮುದುಕಿ ಒಡಕಲುಧ್ವನಿಯವಳೂ ಮೆಲ್ಲನೆಯವಳೂ ಆಗಿದ್ದಳು. ನಾಲ್ವತ್ತು ವರುಷಗಳಿಗೆ ಹಿಂದೆ ನಾಶವಾಗಿದ್ದ ಪೋಲಂಡನ್ನು ಬಿಟ್ಟು ಬಂದು, ಅವರು ಪ್ರವಾಸಿಯಾದಲ್ಲಿ ವಾಸಿಸುತ್ತಿದ್ದರು. ಅವರಿಗೊಬ್ಬ ಸಾಕುಮಗಳಿದ್ದುದಲ್ಲದೆ, ಮೂವತ್ತು ವರುಷದ ಮದುವೆಯಿಲ್ಲದ ಮಗನಿದ್ದ. ಕಳೆದ ಮೂವತ್ತು ವರುಷಗಳಿಂದಲೂ ಅವರು ಈ ಮನೆಯಲ್ಲಿ ವಾಸಿಸುತ್ತಿದ್ದು, ತೋಟದಲ್ಲಿ ಬೆಳೆಯುತ್ತಿದ್ದ ಪದಾರ್ಥಗಳನ್ನು ಪೇಟೆಯಲ್ಲಿ ಮಾರಿ ಜೀವಿಸುತ್ತಿದ್ದರು. ಸದ್ಯ ಅವರ ಹತ್ತಿರ ಸಾಕುಮಗಳಾದ ಮ್ಯಾಗ್ಡಲೀನಳೊಬ್ಬಳೇ ಇರುತ್ತಿದ್ದಳು; ಮಗನಾದ ರೋಮನ್ ಹತ್ತು ವರುಷಗಳಿಂದಲೂ ದೇಶಪರಿಭ್ರಮಣ ಮಾಡುತ್ತಿದ್ದ.

ವ್ಲಾಡಿಮಿರನು ತನ್ನ ಹುಕ್ಕಾವನ್ನೆಳೆಯುತ್ತ, ಹೊಗೆಯನ್ನು ಬಿಡುತ್ತ, ಗಡ್ಡದ ಮೇಲೆ ಕೈಯಾಡಿಸಿಕೊಂಡ. ಮಧ್ಯಾಹ್ನದಲ್ಲಿಯ ಬಿಸಿಲು ಅವನ ನೀಲವರ್ಣದ ಜಾಕೆಟ್ಟನ್ನು ದೂರದಲ್ಲಿರಿಸುವಂತೆ ಮಾಡಿದ್ದಿತು. ಅನಾ ಹೂಗಳನ್ನಾರಿಸಿದ್ದು, ವಾಸನೆನೋಡಿ ಆನಂದಿಸುತ್ತ ಮಾಲೆಕಟ್ಟುತ್ತಿದ್ದಳು. ತೋಟದಲ್ಲಿಯ ಫಲವೃಕ್ಷಗಳೊಳಗಿಂದಲೂ ಹೂಬಳ್ಳಿಗಳೊಳಗಿಂದಲೂ ನುಳಿದುಬರುವ ಗಾಳಿಯು ತನಿಗಂಪನ್ನು ಸೂಸುತ್ತಿದ್ದಿತು. ಅಸ್ತಂಗತನಾಗಲಿದ್ದ ರವಿಯ ಕಿರಣಗಳು ಕಂಚಿಯ ಗಿಡದ ಹಸಿರೆಲೆಗಳ ಮೇಲೆ ಆಟವಾಡುತ್ತಿದ್ದುವು. ಗಾಳಿಯ ಮೂಲಕ ಅಲ್ಲಾಡುತ್ತಿದ್ದ ಮೃದುವಾದ ಎಲೆಗಳ ಮೃದುಮರ್ಮರವು, ಶಾಂತಿಗೆ ನೆಲೆಯಾಗಿದ್ದ ಆ ಕಟ್ಟೆಯವರೆಗೂ ಕೇಳಿಸುತ್ತಿದ್ದಿತು. ನಡುವೆಯೊಮ್ಮೆ ತೆರೆದಿದ್ದ ಕಿಟಕಿಯ ಮಾರ್ಗವಾಗಿ ಗೀತವೊಂದರ ಮೃದುಸ್ವರವೂ ಕೇಳಬರುತ್ತಿದ್ದಿತು.

ಒಮ್ಮೆಲೆ—ಕರ್ಕಶವಾದ ಶಬ್ದವೊಂದರಿಂದ—ಅಲ್ಲಿಯ ಶಾಂತತೆಯೆಲ್ಲವೂ ಸರಿದುಹೋಯಿತು. ಅದಾವುದು ? ಬಂಡಿಯೊಂದರ ಚಕ್ರಗಳ ಚೀತ್ಕೃತಿ !...ಮುದುಕ ತನ್ನ ಕೈಯಲಿದ್ದುದನ್ನು ಕೆಳಗಿಟ್ಟು ಹೊರಡಲಣಿಯಾದ. ಮುದುಕಿಯೂ ತಾನು ಹೊದ್ದುಕೊಂಡಿದ್ದ ಬಿಳಿಯ ಶಾಲನ್ನು ಸರಿಪಡಿಸಿಕೊಂಡಳು. ಕರಿಯ ಯಹೂದಿಯಿಂದ ನಡೆಯಿಸಲ್ಪಡುತ್ತಿದ್ದ ಗಾಡಿಯು ಬಂದು ಮನೆಯ ಎದುರಿನಲ್ಲಿ ನಿಂತುಕೊಂಡಿತು. ಶಕ್ತಿವಂತನಾದ—ಉಬ್ಬಿದ ಎದೆಯ—ನಿಡುದೋಳಿನ—ತರುಣನೊಬ್ಬ, ಬಲಗೈಯಲ್ಲಿ ಗಂಟನ್ನೂ ಎಡಗೈಯಲ್ಲಿ ಪೆಟ್ಟಿಗೆಯನ್ನೂ ಹಿಡಿದುಕೊಂಡು ಕೆಳಕ್ಕಿಳಿದ.

"ಯಾರು? ರೋಮನಾ ! ರೋಮನ್ !" ಎಂದು ಆ ಮುದುಕಿಯು ತಗ್ಗಿದ ಸ್ವರದಲ್ಲಿ ಕೂಗಿದಳು; ಬಳಿಕ ಎದ್ದುನಿಲ್ಲಲು ಯತ್ನಿಸಿದಳು. ಆದರೆ ಅದೇಕೋ ಸಾಧ್ಯವಾಗದೆ ಆಕೆ ಹಾಗೆಯೆ ಪುಷ್ಪಗಳ ಹತ್ತಿರ ಕುಳಿತು ಬಿಟ್ಟಳು.

"ಅಲ್ಲಿ— ಅಲ್ಲಿ, ರೋಮನಾ ಬರುತ್ತಿದ್ದಾನೆ !" ಎಂದು ನಗುಮುಖದಿಂದ ಹೇಳುತ್ತ ಮುದುಕ ಕಟ್ಟೆಯನ್ನಿಳಿದು ಕೆಳಕ್ಕೆ ಹೋದ.

"ರೋಮನ್ !" ಎಂದು ಕೋಮಲ ಸ್ವರವೊಂದು ಕೂಗಿತು; ಮ್ಯಾಗ್ಡಲೀನಳ ಸುಂದರವಾದ ಮೊಗವು ಕಿಟಕಿಯಲ್ಲಿ ಹಣೆಯಿಕ್ಕಿದುದು ಕಂಡಿತು.

"ರೋಮನಾ ! ರೋಮನಾ !" ಎನ್ನುತ್ತ ಮುದುಕ ತನ್ನ ಮಗನನ್ನು ಎದೆಗಪ್ಪಿಕೊಂಡ. "ರೋಮನಾ !" ಇದಕ್ಕೂ ಹೆಚ್ಚಿಗೆ ಮಾತನಾಡಲು ಮುದುಕನಿಗೆ ಸಾಧ್ಯವಾಗಲಿಲ್ಲ.

"ಅಮ್ಮಾ, ನಾನು ನಿನ್ನನ್ನು ನೋಡದೆ ಹತ್ತುವರುಷಗಳಾದುವಲ್ಲವೆ?" ಎಂದು ವಿಚಾರಿಸುತ್ತ ರೋಮನ್ ತನ್ನ ತಾಯಿಯ ಹತ್ತಿರ ಹೋದ. ಅವಳು "ಅಹುದು ದೊರೆ".. ಎಂದು ಸಂತೋಷದ ಧ್ವನಿಯಲ್ಲಿ ಹೇಳಿದಳು. ಮಗನು ತಾಯಿಯನ್ನು ತನ್ನ ಎದೆಗೆ ತಬ್ಬಿಕೊಂಡಿದ್ದ; ತಂದೆ ಅವರ ಸುತ್ತಲೂ ತಿರುಗುತ್ತಿದ್ದು ಗಡ್ಡದ ಮೇಲೆ ಕೈಹಾಕುತ್ತ ತನ್ನಲ್ಲಿಯೇ ಹೇಳಿಕೊಳ್ಳುತ್ತಿದ್ದ:

"ಹೌದು ! ಹೌದು ! ನಮ್ಮ ಪ್ರೀತಿಯ ರೋಮನ್ !"

ರೋಮನ್ ಸಾವಿಕಿಯು ಎದ್ದುನಿಂತು ಸುತ್ತಲೂ ಕಣ್ಣು ಹಾಕಿದಾಗ, ನೀಲನಯನಗಳಿಂದೊಡಗೂಡಿದ್ದ ಸುಂದರವಾದ

ಬಿಳಿಯ ಮುಖವೊಂದು ಬಾಗಿಲ ಬಳಿ ಕಾಣಿಸಿತು. ಅವನು ಬೆರಗು ಪಟ್ಟು ನಿಂತುಕೊಂಡ; ಹುಡುಗಿ ಅವನನ್ನು ನೋಡುತ್ತಿದ್ದ ಹಾಗೆಯೆ ನಾಚಿಕೆಯಿಂದ ನಗುತ್ತಿದ್ದಳು.

"ಹಾ! ಹಾ!" ಎಂದು ಮುದಿನಾವಿಕಿಯು ನಕ್ಕ. "ಏನು? ನಿಮ್ಮಿಬ್ಬರಿಗೂ ಪರಸ್ಪರ ಪರಿಚಯವಿಲ್ಲವೆ? ಏಕೆ ದೂರ ದೂರ ದಲ್ಲಿಯೆ ನಿಂತುಕೊಂಡಿದ್ದೀರಿ? ರೋಮನ್ ನೀನು, ಮ್ಯಾಗ್ಡಲೀನಳು ಹುಡುಗಿ ಇರುವಾಗಿನಿಂದಲೂ ನೋಡಿಲ್ಲವೆ?"

ತರುಣ-ತರುಣಿಯರು ನಗುತ್ತ ನಿಧಾನವಾಗಿ ಹತ್ತಿರ ಹತ್ತಿರ ಸಾರುತ್ತಿರಲು, ಮ್ಯಾಗ್ಡಲೀನಳು ಕಣ್ಣುಗಳನ್ನು ಕೆಳಕ್ಕೆ ಹಾಕಿ ತನ್ನ ತಳಿಗೈಯನ್ನು ಅವನಿಗೆ ಒಪ್ಪಿಸಿದಳು. ರೋಮನ್ ಅದಕ್ಕೆ ನವಿಮುತ್ತೊಂದನ್ನು ಕೊಟ್ಟ.

"ನನಗೆ ಒಮ್ಮೆಲೆ ಗುರುತೇ ಸಿಕ್ಕಲಿಲ್ಲ; ಬಹಳ ಬೆಳೆದಿದ್ದಾಳೆ!"

"ರೋಮನ್, ನೀನು ಕೂಡ ಹಾಗೆಯೇ ಬೆಳೆದಿಲ್ಲವೆ? ಬೆಳೆಯುವುದರೊಂದಿಗೆ ಹೆಚ್ಚಿಗೆ ಸುಂದರನೂ ಆಗಿರುತ್ತೀಯೆ!" ಎಂದು ಅವನ ತಾಯಿ ಹೇಳಿದಳು.

"ನಿಜವಾಗಿಯೂ ರೋಮನ್ ಸುಂದರ ತರುಣ!" ಎಂದು ಮುದುಕ ಹೇಳಿದ.

ತಾಯಿ ತನ್ನ ಮಗನನ್ನು ಪುನಃ ಮುದ್ದಿಟ್ಟಳು. ಅನಂತರ ರೋಮನ್ ಅಲ್ಲಿಯೆ ಕುರ್ಚಿಯೊಂದರಲ್ಲಿ ಕುಳಿತ. ಮುದುಕ ಅವನ ಬಲಭಾಗವನ್ನಾಕ್ರಮಿಸಿದ, ಮುದುಕಿ ಎಡಬದಿಯನ್ನು ಹಿಡಿದಳು; ಅವರಿಬ್ಬರ ನಯನಗಳೂ ಅವನಲ್ಲಿಯೇ ನೆಟ್ಟಿದ್ದುವು.

"ಅಮ್ಮಾ, ನಾನು ನಿನ್ನನ್ನು ಬಹಳ ದಿನಗಳಿಂದಲೂ ನೋಡಿರಲಿಲ್ಲ!"

ಮಗನ ಮಾತಿಗೆ ಪ್ರತ್ಯುತ್ತರವಾರಿಂದಲೂ ಬರಲಿಲ್ಲ; ಎಲ್ಲರೂ ತನ್ಮಯರಾಗಿ ಕುಳಿತುಕೊಂಡಿದ್ದರು. ಕಂಚಿಯ ಗಿಡಗಳಿಂದ ಬರುತ್ತಿದ್ದ ತಂಗಾಳಿಯಿಂದ ಬಿಸಿಲಿನ ಪ್ರಭಾವವೆಷ್ಟೋ ಕಡಿಮೆಯಾಗಿದ್ದಿತು.

"ರೋಮನ್, ನೀನೀಗ ಬಂದಿರುವುದೆಲ್ಲಿಂದ?"

"ವಾರ್ಸಾದಿಂದ!" ತರುಣ ತನ್ನ ತಲೆಯನ್ನೆತ್ತುತ್ತ ಹೇಳಿದ.

ಮುದುಕ ತನ್ನ ಕಣ್ಣುಗಳನ್ನು ಅಗಲವಾಗಿ ತೆರೆದು ಆನಾಳೆಡೆ ತಿರುಗಿ ಹೇಳಿದ:

"ಕೇಳಿದೆಯಾ?..ವಾರ್ಸಾದಿಂದ ಬಂದಿದ್ದಾನಂತೆ!"

ಅವಳು ತಲೆ ಹಾಕಿದಳು; ಅನಂತರ ಆಶ್ಚರ್ಯದಿಂದ ಕೇಳಿದಳು

"ಏನು ವಾರ್ಸಾದಿಂದಲೇ?"

"ಹುಂ, ವಾರ್ಸಾದಿಂದ!" ರೋಮನ್ ಮಾತನ್ನು ಮುಂದುವರಿಸಿದ: "ನಾನು ನಮ್ಮ ಪೋಲಂಡಿನಲ್ಲೆಲ್ಲಾ ತಿರುಗಿದೆ; ದುಃಖದಿಂದ ಸಂತಪ್ತಳಾಗಿ ಗೋಳಿಡುತ್ತಲಿದ್ದ ಪೋಲ್‌ದೇವಿಯನ್ನು ನೋಡಿದೆ. ತಲೆಯೆಲ್ಲಾ ಅಕರಾಳ ವಿಕರಾಳವಾಗಿದ್ದಿತು. ಮುಖದ ಮೇಲೆ ಶುಭಚಿಹ್ನಗಳಿರಲಿಲ್ಲ. ಕಣ್ಣುಗಳೆರಡು ನದಿಗಳು—ವಿಶ್ಚುಲಾ ನದಿಗಿಂತಲೂ ಹೆಚ್ಚಾಗಿ ದೊಡ್ಡವು—ಹರಿಯುತ್ತಿದ್ದುವು. ಉಟ್ಟ ತೊಟ್ಟ ಬಟ್ಟೆಯೆಲ್ಲ ಹರಿದು ಹೋಗಿದ್ದಿತು.. ಅಮ್ಮಾ!.. ಇಷ್ಟೇ ಅಲ್ಲದೆ, ನಾನು ಅಜ್ಞಾತವಾಸಿಗಳಾದ ಮತ್ತು ಅರಣ್ಯವಾಸಿಗಳಾದ ಪೋಲರನ್ನು ನೋಡಿದೆ. ದೇಶಭ್ರಷ್ಟರಾಗಿ ಪರಿಭ್ರಮಣ ಮಾಡುತ್ತಿದ್ದ ಪೋಲದೇಸಿಗರನ್ನು ನಾನು ಪೃಥ್ವಿಯ ಎಲ್ಲಾ ಭಾಗಗಳಲ್ಲಿಯೂ ನೋಡಿದೆ...."

ಅವನ ಗಂಡುಸ್ವರದಲ್ಲಿ ಆಳವಾದ ದುಃಖವು ಸೇರಿಕೊಂಡಿದ್ದಿತು. ಮುದುಕ-ಮುದುಕಿಯರು ಆಶ್ಚರ್ಯದಿಂದ ಅವನನ್ನು ನೋಡುತ್ತ ಕುಳಿತುಕೊಂಡಿದ್ದರು; ಅವರಿಗಾವುದೂ ತಿಳಿದಿರಲಿಲ್ಲ; ಹೆಚ್ಚಿಗೆ ದುಃಖವೂ ಆಗಿರಲಿಲ್ಲ; ಯಾಕೆಂದರೆ ಅವರ ಹೃದಯಗಳಲ್ಲಿದ್ದ ತಾಯಿನಾಡಿನ ವಿಷಯಕ ಪ್ರೇಮವೆಲ್ಲಾ ಬಣಗಿ ಹೋಗಿದ್ದಿತು. ರೋಮನನ ಸುಂದರವಾದ ಮುಖ, ಉದ್ದವಾದ ಕೇಶ, ಮತ್ತು ನೀಳನಾಸಿಕಗಳನ್ನು ನೋಡುತ್ತ ಅವರು ನಗುತ್ತ ಕುಳಿತಿದ್ದರು.

ತರುಣ ಪುನಃ ಮಾತನಾಡುವುದಕ್ಕಾರಂಭಿಸಿದ. ನಿಧಾನವಾಗಿ ಅವನ ಸ್ವರವು ಮೇಲಿನ ಮಟ್ಟಕ್ಕೇರುತ್ತಿದ್ದಿತು; ಅದು ಸಂತಾಪದಿಂದಲೂ ದುಃಖಾತಿರೇಕದಿಂದಲೂ ತುಂಬಿಕೊಂಡಿದ್ದಿತು. ರೋಮನ್ ಜಗತ್ತಿನಲ್ಲೆಲ್ಲಾ ತಿರುಗಿದ್ದ; ಎಲ್ಲೆಡೆಗೂ, ಅಪರಿಚಿತರಲ್ಲಿ ಬಿದ್ದುಕೊಂಡಿರುವ ಸ್ಥಾನಭ್ರಷ್ಟ ಪೋಲರನ್ನು—ತಾಯಿನಾಡನ್ನೇ ಕುರಿತು ಯಾವಾಗಲೂ ಕನಸರಿಸುತ್ತಿದ್ದ ಪೋಲರನ್ನು—ಕಂಡಿದ್ದ. ಎಲ್ಲೆಲ್ಲಿಯೂ ಅದೇ ಆಶೆಯೂ, ಅದೇ ದುಃಖವೂ ತುಂಬಿಕೊಂಡಿದ್ದಿತು. ವಿದೇಶೀಯ ಕ್ರಾಂತಿಕಾರರು ಆ ನಾಡನ್ನಾಳುತ್ತಿದ್ದರು; ಅರಾಜಕತೆಯು ತುಂಬಿಹೋಗಿದ್ದಿತು; ದೇಶದ ರಾಜಕಾರಣ-ತಜ್ಞರು ಕಬ್ಬಿಣ ಬೇಗಳಿಂದ ಸಹಿತರಾಗಿ ಹಾಳುಮನೆಗಳಲ್ಲೋ ದೂರದ ಸೈಬೀರಿಯದ ಗುಹೆಗಳಲ್ಲಿಯೋ ಬಿದ್ದುಕೊಂಡಿದ್ದರು; ದೇಶದ ಜನರೆಲ್ಲ ತಮ್ಮ ತಮ್ಮ ಪೂರ್ವಜರ ಮನೆಗಳನ್ನು ಬಿಟ್ಟು ಹೊರಕ್ಕೋಡಿ ಹೋಗುತ್ತಿರುವಂತೆಯೆ ಪರದೇಶೀಯರು ಅವರ ಆ ಮನೆಗಳಲ್ಲಿ ಬಂದು ನುಗ್ಗುತ್ತಿದ್ದರು.

"ರೋಮನ್..ರೋಮನ್!.. ನೀನೆಷ್ಟು ಚೆನ್ನಾಗಿ ಮಾತನಾಡುತ್ತಿರುವೆಯಲ್ಲಾ!" ಆ ಮುದುಕಿಯ ಕಣ್ಣುಗಳಲ್ಲಿ ನೀರೂರಿ ನಿಂತಿದ್ದುವು.

ವಾಡಿವಿರ್ ನಾವಿಕಿಯು ಹೇಳಿದ:

"ನಮ್ಮ ರೋಮನ್ ಚೆನ್ನಾಗಿ ಮಾತನಾಡುತ್ತಿದ್ದಂತೆಯೆ, ನಮಗೆ ದುಃಖವಾಗುವಂತೆಯೂ ಮಾತನಾಡುತ್ತಿದ್ದಾನೆ!"

ಮುದುಕನಿಗೆ ತನ್ನ ಹಳೆಯ ಆಶೆ, ದೇಶಪ್ರೇಮ ಮೊದಲಾದುವುಗಳೆಲ್ಲವೂ ನೆನಪಿಗೆ ಬಂದು, ಹೃದಯವನ್ನು ಸುಡಲಾರಂಭಿಸಿದುವು.

ಕೊಲ್ಹಾಪುರದಲ್ಲಿಯ

ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು

ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್

ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.

❋ ಎಲ್ಲ ನಮೂನೆಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯ ಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಬಾಗಿಲ ಹತ್ತಿರ ಮ್ಯಾಗ್ಡಲೀನಳು ನಿಂತುಕೊಂಡಿದ್ದು, ಅವಳ ನಯನಗಳು ಬೆರಗು–ಅಳಲು–ಕಂಬನಿಗಳನ್ನು ತುಂಬಿಕೊಂಡು ರೋಮನ್‌ನನ್ನೇ ನಿರೀಕ್ಷಿಸುತ್ತಿದ್ದುವು.

ಒಮ್ಮೆಲೇ ಇಬ್ಬರು ಅಲ್ಲಿ ಪ್ರವೇಶಿಸಿದರು. ಅವರಲ್ಲಿ ಒಬ್ಬನ ಕೂದಲೆಲ್ಲಾ ನರೆತುಹೋಗಿದ್ದು, ಇನ್ನೊಬ್ಬನ ಉದ್ದವಾದ ಗಡ್ಡಗಳಲ್ಲಿ ಅರ್ಧಕ್ಕಿಂತ ಹೆಚ್ಚು ರಜತತಂತುಗಳು ಸೇರಿಕೊಂಡಿದ್ದುವು. ಅವರನ್ನು ನೋಡಿದೊಡನೆಯೆ ಸಾವಿಕಿ ಆನಂದದಿಂದ ಕೂಗಿದ.

"ಅಹಾ! ಪಾಲ್ಟವಿಕಿ ಬಾ.. ರುಜಂಕೋವಸ್ಕಿ!.. ನಮ್ಮ ರೋಮನಾ ಬಂದಿದ್ದಾನೆ!'

ರುಜಂಕೋವಸ್ಕಿ ಹೇಳಿದ :

"ಹೌದು. ಅವನು" ಬರುತ್ತಿರುವುದನ್ನು ನಾವು ಆಗಲೇ ನೋಡಿದ್ದೇವೆ."

"ಹೌದು, ಹೌದು !" ಪಾಲ್ಟವಿಕಿಯೂ ಧ್ವನಿಕೂಡಿಸಿದ.

ಇಬ್ಬರೂ ಹತ್ತಿರ ಬಂದು, ಆನಂದದಿಂದ ರೋಮನ್‌ನ ಕಂಗಳನ್ನಲ್ಲಾಡಿಸಿದರು.

"ಆಹಾ ಆನಂದ! ರೋಮನ್, ಸುಸ್ವಾಗತ ನಿನಗೆ! ನೋಡು, ಸದ್ಯ ಈ ಊರಿನ ಪೋಲರೆಲ್ಲಾ ಒಂದೆಡೆಯಲ್ಲಿಯೇ ಸೇರಿದ್ದೇವೆ!" ರುಜಂಕೋವಸ್ಕಿ ಹೇಳಿದ.

"ಅಂs ಏನು ?—" ರೋಮನಾ ಪ್ರಶ್ನಿಸಿದ; "ಏನು ? ಸದ್ಯ ಉಳಿದವರು ಇಷ್ಟೇ ಜನರೆ ? "

"ಹೌದು, ಉಳಿದವರ ವ್ಯವಸ್ಥೆ ಮುಗಿದುಹೋಯಿತು!" ಸಾವಿಕಿ ದುಃಖದಲ್ಲಿ ಹೇಳಿದ.

"ಹೌದು ಹೌದು.. ಅವರೆಲ್ಲಾ ಹೊರಟುಹೋಗಿದ್ದಾರೆ. ತಿರುಗಿ ಬರುವಂತಿಲ್ಲ." ಪಾಲ್ಟವಿಕಿ ತನ್ನ ನರೆಗೂದಲಿನ ಮೇಲೆ ಕೈಯಾಡಿಸುತ್ತ ಹೇಳಿದ.

ಸ್ವಲ್ಪ ವೇಳೆ ನೀರವ.

"ಮುದುಕಿ.. ಅನಾ.. ಹೋಗು; ಒಳಕ್ಕೆ ಹೋಗಿ ದ್ರಾಕ್ಷಾರಸ ಮತ್ತು ತಿನ್ನುವುದಕ್ಕೇನನ್ನಾದರೂ ತೆಗೆದುಕೊಂಡು ಬಾ; ರೋಮನ್ ಹಸಿದಿರಬಹುದು...ಅಂs ಎಲ್ಲಿರುವೆ?.. ಮ್ಯಾಗ್ಡಲೀನಾ, ಎಲ್ಲಿ ಹೋಗಿದ್ದಾಳವಳು!" ಎಂದು ಸಾವಿಕಿ ವಿಚಾರಿಸಿದ.

"ತೊಂದರೆಪಟ್ಟುಕೊಳ್ಳಬೇಡ; ಅವುಗಳನ್ನು ತರಲೆಂದೇ ಒಳಕ್ಕೆ ಹೋಗಿದ್ದಾಳೆ!" ತರುಣಿ ಮೃದುಹಾಸ್ಯದಿಂದ ಹೇಳಿದಳು.

"ಒಳ್ಳೆಯದು...ಒಳ್ಳೆಯದು." ಎಂದು ಹೇಳುತ್ತ ಅವನು ಆ ಪೋಲರೆಡೆ ತಿರುಗಿದ. "ರೋಮನ್ ಹೇಗೆ ಮಾತನಾಡುವ ನೆಂಬುದು ನಿಮಗೆ ಗೊತ್ತಿಲ್ಲ....ಅವನು ಹೇಳುವುದನ್ನು ನೀವು ಕೇಳಲೇ ಬೇಕು.. ರೋಮನ್ ನೀನು ಈಗ ಹೇಳಿದುದನ್ನು ಇನ್ನೊಂದು ಬಾರಿ ಹೇಳುತ್ತೀಯಾ ? "

ಮುದುಕಿ ಮದಿರೆಯನ್ನೂ ತಂಗುಳು ಮಾಂಸವನ್ನೂ ತಂದಳು. ಮದಿರೆಯನ್ನು ಹಿರಿಯರೆದುರಿಗೆ ಸರಿಸುತ್ತಿದ್ದ ಹಾಗೆಯೆ ಮಾಂಸವನ್ನು ರೋಮನನೆದುರಿನಲ್ಲಿರಿಸಿದಳು. ಎಲ್ಲರೂ ಮಾತನಾಡಲಾರಂಭಿಸಿದರು. ರೋಮನ್‌ನ ಸ್ವರವು ಕುಗ್ಗಿತು. ಅವರು ಅವನ ಆರೋಗ್ಯಕ್ಕಾಗಿ ಮೊದಲು ಕುಡಿದು, ಆಮೇಲೆ ತಮ್ಮಲ್ಲಿ ಪ್ರತಿಯೊಬ್ಬರ ಹೆಸರಿನಿಂದ ಸುರಿಯಲು ಆರಂಭಿಸಿದರು.

"ಪೋಲಂಡಕ್ಕೆ !" ಎಂದು ರೋಮನ್ ಆಸ್ಥೆಯಿಂದ ತನ್ನ ಮುಷ್ಟಿಯನ್ನು ಮೇಜಿಗೆ ಬಡಿದು ಮಾತನಾಡಲು ಮೊದಲು ಮಾಡಿದ.

"ಬೀಳ್ಗೊಳಿಯಲ್ಪಟ್ಟ ಜನರು, ಮಾತನಾಡಲಿಕ್ಕೂ ಕಾರ್ಯೋನ್ಮುಖರಾಗಲಿಕ್ಕೂ ಹೇಗೆ ಹೇಗೆ ಯತ್ನಿಸುತ್ತಿರುವರೆನ್ನುವುದು ನಿಮಗೆ ಗೊತ್ತಿದೆಯೆ ? ಬೇಗನೆ ಭಯಂಕರವಾದ ಕಿಚ್ಚೊಂದು ಉದ್ಭವಿಸಿ ಕಾರಾಗೃಹದ ಗೋಡೆಗಳನ್ನೆಲ್ಲಾ ಕೆಡವಿದೊಡನೆಯೆ ನಮ್ಮ ಮಾತೃಭೂಮಿಯ ಸ್ವಾತಂತ್ರ್ಯದ ರಣಭೇರಿ ಮೊಳಗುವುದು! ದೇಶಭ್ರಷ್ಟರಾದ ಪೋಲರೆಲ್ಲಾ ಪುನಃ ಒಂದೆಡೆ ಸೇರುವರು....! ಅಬ್ಬಾ ! ಅಲ್ಲಿರುವ ಕಷ್ಟಗಳನ್ನೂ ದುಃಖಾತಿರೇಕಗಳನ್ನೂ ನೀವು ಬಲ್ಲಿರಾ ? ಅಪರಿಚಿತ ವೈರಿಗಳ ಆಕ್ರಮಣದಿಂದ ಎಲ್ಲವೂ ವಿಧ್ವಂಸವಾಗಿ ಹೋಗಿದೆ. * ಕೋಸ್ಕಿಯಸ್ಕೋ ಸತ್ತಂದಿನಿಂದ ನಮ್ಮ ದೇಶವೆಲ್ಲಾ ನಾಶವಾಗಿದೆ; ಜನರು ಅಜ್ಞಾತವಾಸಗಳನ್ನು ಮಾಡಲು ಬೇಕಾಗಿದೆ.. ಅಮ್ಮಾ!" ರೋಮನ್ ತನ್ನ ತಾಯಿಯೆಡೆ ತಿರುಗಿ ಹೇಳಿದ: "ಆ ಪೆಟ್ಟಿಗೆಯನ್ನು ಕೊಡುವೆಯಾ? ನಾನೀಗ ನಿನಗೆ ಕೆಲವು ಗೀತಗಳನ್ನು ಹಾಡಿ ತೋರಿಸುತ್ತೇನೆ"

ರೋಮನ್ನನ ಕಣ್ಣುಗಳಲ್ಲಿ ನೀರು ಸುರಿಯಲಾರಂಭಿಸಿತು. ಮುದುಕರೆಲ್ಲರೂ ಅವನನ್ನೇ ನೋಡುತ್ತ, ಒಂದು ವಾಕ್ಯವನ್ನು ಕೂಡ ಆಡದೆ, ತಮ್ಮ ತಲೆಗಳನ್ನು ಹೃದಯಗಳ ಮೇಲೆ ಚೆಲ್ಲಿಕೊಂಡರು. ಆ ಮನೆಯಲ್ಲಿ ಮೌನದ ಪ್ರಭಾವವು ತೋರಿದುದಲ್ಲದೆ, ತೋಟದಲ್ಲೆಲ್ಲಾ ಅದು ಪಸರಿಸಿದಂತೆ ಭಾಸವಾಗುತ್ತಿದ್ದಿತು. ಕೆಂಪನೆಯ ಸೂರ್ಯನು ಅವರನ್ನೇ ನೋಡುತ್ತ ಪಶ್ಚಿಮದಿಕ್ಕಿನ ವನಗಳಲ್ಲಿ ಅಡಗಿಕೊಳ್ಳಲು ಯತ್ನಿಸುತ್ತಿದ್ದ. ಅವನ ಬಂಗಾರದ ಕಿರಣಗಳು ರೋಮನನ ಕೂದಲುಗಳ ಮೇಲೆ ಬಿದ್ದುದರಿಂದ ಅವು ಹೊಳೆಯಲಾರಂಭಿಸಿದುವು.

ಅವನ ತಾಯಿ ಪೆಟ್ಟಿಗೆಯನ್ನು ತಂದಿತ್ತಳು. ರೋಮನ್ ಹೇಳಿದ :

"ಒಳ್ಳೆಯದು, ನಾನು ನಮ್ಮ ದುಃಖವನ್ನು ಕುರಿತು ಹಾಡುತ್ತೇನೆ."

ಆ ಮೇಲೆ ರೋಮನ್ ಪಿಟೀಲನ್ನು ತೆಗೆದುಕೊಂಡು, ತಂತಿಗಳನ್ನು ಅಲ್ಲಾಡಿಸುತ್ತ ಹಾಡಲಾರಂಭಿಸಿದ. ಅವನು ಗಾಯನದ

* ಥಾಡೆಯಸ್ ಕೊಸ್ಕಿಯಸ್ಕೋವು ೧೭೪೬ ರಲ್ಲಿ ಹುಟ್ಟಿದ. ಇವನು ಪೋಲಂಡಿನ ಸುಪ್ರಸಿದ್ಧನಾದ ಸೇನಾನಾಯಕನೂ ರಾಜಕಾರಣಪಟುವೂ ಆಗಿದ್ದ. ಇವನು ಬೆಳಕಿಗೆ ಬಂದುದು ೧೭೯೪ ರಲ್ಲಿ, ಪೋಲರ ದಂಗೆಗಾರರ ಗುಂಪುಗಳನ್ನೂ ರಶಿಯದ ವಿರುದ್ಧ ಯುದ್ಧಕ್ಕೆ ನಿಲ್ಲಿಸಿದಾಗ. ಸೋಲಿನ ನಂತರ ಸ್ವಿಟ್ಝರ್ಲೆಂಡಿನಲ್ಲಿದ್ದು ೧೮೧೭ ರಲ್ಲಿ ಮೃತಪಟ್ಟ. (ಅನುವಾದಕ.)

(೫೯೯ ನೆಯ ಪುಟ ನೋಡಿರಿ)

ಕರ್ನಾಟಕದಲ್ಲಿ ಮರದ ಕೈಗಾರಿಕೆ

ಚೌಕಟ್ಟು ಕಂಬಿಗಳು ★ ★ ಪದರದ ಹಲಗೆಗಳು

ಶ್ರೀ. ಎ. ಎಸ್ ಸುಬ್ಬರಾವ್
ಕಲಾಮಂದಿರ

ಅವರಿಂದ

ಮನುಷ್ಯಶ್ರಮದಿಂದಲೆ ಸಿದ್ಧವಾಗಿ ನಮ್ಮಲ್ಲಿಗೆ ಹಲವು ವಿದೇಶದ ಪದಾರ್ಥಗಳು ಬರುತ್ತಲಿವೆ. ಮನುಷ್ಯಶ್ರಮ ಸಾಧ್ಯವಾದುವುಗಳಿಂದ ಮೇಲೆ ಅವೇ ಪದಾರ್ಥಗಳನ್ನು ನಮ್ಮ ಜನರ ಶ್ರಮ ಮಾಡಲಾರದೆ? ಚೌಕಟ್ಟು ಕಂಬಿ, ಪದರದ ಹಲಗೆಗಳಿಗೆ ಬೇಕಾಗುವ ಮರಗಳನ್ನು ಒದಗಿಸಿಕೊಡಲು ಕನ್ನಡತಾಯಿಯ ಪುತ್ರ ಸಹ್ಯರಾಜನು ಸಿದ್ಧನಾಗಿ ನಿಂತಿದ್ದಾನೆ.

ಪದರದ ಹಲಗೆ (Ply-wood) ಮತ್ತು ಚೌಕಟ್ಟುಕಂಬಿ (Picture Mouldings) ಈ ಪದಾರ್ಥಗಳು ಬಹು ಸಾಮಾನ್ಯವೆಂದು ಸ್ಥೂಲವಾಗಿ ನೋಡುವರಿಗೆ ಕಂಡುಬರುವುದು. ಆದರೆ ಈ ಪದಾರ್ಥಗಳಿಗಾಗಿ ಎಷ್ಟು ದ್ರವ್ಯವನ್ನು ಪರದೇಶಗಳಿಗೆ ತೆರುತ್ತಿದ್ದೇವೆಯೆಂಬುದು ಗೊತ್ತೇ ?

ಚೌಕಟ್ಟುಕಂಬಿಗಳಿಗಾಗಿ ವರ್ಷಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳನ್ನೂ, ಪದರದ ಹಲಗೆ ಮತ್ತು ಟೀ ಪೆಟ್ಟಿಗೆಗಳಿಗೆ ವರ್ಷಕ್ಕೆ ಸುಮಾರು ಒಂಭತ್ತು ಲಕ್ಷ ರೂಪಾಯಿಗಳನ್ನೂ ತೆರುತ್ತಿದ್ದೇವೆ. ಇದಲ್ಲದೆ ಮಡಿಸುವ ಮಂಚ, ಆಳತೆಯ ಮರದ ಸಲಕರಣೆಗಳು ಇದಕ್ಕೆ ಕೂಡ ಲಕ್ಷಾಂತರ ರೂಪಾಯಿಗಳು ಪರದೇಶಕ್ಕೆ ಹರಿದು ಹೋಗುತ್ತಿವೆ.

ನಾನು ಹಿಂದೆ ೧೯೧೬ ರಲ್ಲಿ, ಸರ್ ವಿಶ್ವೇಶ್ವರಯ್ಯನವರು ಮುಖ್ಯ ಸಚಿವರಾಗಿರುವಾಗ, ಪಂಪದಭ್ಯುದಯ ಸಮಾಜದ ಒಂದು ಸಭೆಯಲ್ಲಿ ಹೇಳಿದುದು ಇಂದು ನೆನಪಾಗುತ್ತಿದೆ: "ಪದಾರ್ಥವು ಎಂತಹುದೇ ಆಗಿರಲಿ, ಅದು ಮನುಷ್ಯಕೃತವಾದ ಮೇಲೆ, ನಮ್ಮ ಕರ್ನಾಟಕದ ಜನರೂ ಅದನ್ನು ತಯಾರು ಮಾಡಬಹುದು. ಅವರಂತೆಯೆ ನಾವೂ ಮನುಷ್ಯರು. ಅವರಿಗೆ ಸಾಧ್ಯವಾದುದು ನಮಗೂ ಸಾಧ್ಯವಾಗಲೆಬೇಕು" ಎಂದು ತಿಳಿಸಿದ್ದೆನು. ಈ ಇಪ್ಪತ್ತು ವರ್ಷಗಳಲ್ಲಿ ಆದರ ಸತ್ಯಾಂಶವು ನಮ್ಮ ಭಾರತೀಯರಿಗೆ ಬಹುಮಟ್ಟಿಗೆ ಮನಗಾಣಿಕೆಯಾಗಿದೆ. ನಾನು ಅದೇ ಅಭಿಪ್ರಾಯವನ್ನು ಈಗ ಒತ್ತಿಹೇಳಲು ಬಯಸುವೆನು. ಆದರೆ ಅಂದಿಗಿಂತ ಇಂದು ಕಾಲಸ್ಥಿತಿಯು ಪರಿಪಕ್ವವಾಗಿದೆ. ಸೌಕರ್ಯಗಳು ಹೆಚ್ಚುತ್ತಾ ಬಂದಿವೆ. ಆದುದರಿಂದಲೆ ಆರ್ಥಿಕ ಮುಗ್ಗಟ್ಟಿನ ಈ ಕಷ್ಟಕಾಲದಲ್ಲಿ ಧೈರ್ಯಮಾಡಿ, ನಾವು ಈ ಕೈಗಾರಿಕೆಯನ್ನಾರಂಭಿಸಲು ನಿರ್ಧರಿಸಿರುವೆವು.

ಪಿಕ್ಚರ್ ಫ್ರೇಮುಗಳು:—ಸಾಮಾನ್ಯವಾಗಿ ಇವು ಜರ್ಮನಿ ಬೆಲ್ಜಿಯಂ ಇಟಲಿ, ಜಪಾನ್ ಈ ದೇಶಗಳಿಂದ ಬರುತ್ತವೆ. ಅಮೇರಿಕಾದಿಂದ ಬರುವವು ಕೊಂಚ ಹೆಚ್ಚಿನ ಬೆಲೆಯವು. ಅವುಗಳಿಗಿಂತ ಇತರ ದೇಶದ ಕಂಬಿಗಳಿಗೇ ಹೆಚ್ಚು ಗಿರಾಕಿಯುಂಟು. ಏಕೆಂದರೆ ಇದರಲ್ಲಿ ಏರುಗುವ ಬಣ್ಣ, ಗಿಲೀಟು ಇವೆಲ್ಲಾ ಇರುವವು. ಇದರ ತಯಾರಿಕೆಯು ಬಹು ಸುಲಭ. ಬೇಕಾಗುವ ಮರವನ್ನು ಹದವಾಗಿ ಒಣಗಿಸಿ, ಒಂಬತ್ತು ಅಡಿ ಉದ್ದಕ್ಕೆ ಬೇಕಾದ ಗಾತ್ರಕ್ಕೆ ಕೊಯ್ದು, ಗೋಟು ಮಾಡುವ ಯಂತ್ರಗಳಲ್ಲಿ ಕೊಟ್ಟು, ಹೊಳಹುಗಳಿಂದ ಕೂಡಿದ ಗೋಟುಕಂಬಿಗಳನ್ನು ಮಾಡಿಕೊಂಡು, ಅದರ ಮೇಲೆ 'ಪ್ಲಾಸ್ಟರಿಂಗ್' ಎಂದು ಕರೆಯುವ "ಕಾಂಪೋ" ಸಂಯೋಜನೆಯನ್ನು ಬಲವಾಗಿ ಕೂರಿಸಿದ ನಂತರ, ಬಣ್ಣಗಳಿಂದ ಅಥವಾ ಬೆಳ್ಳಿ-ಭಂಗಾರದ ವರ್ಕಗಳಿಂದ ಹೊಳಪು ಕೊಡುವುದು; ನಮೂನೆಗಳ ಅಚ್ಚೊತ್ತುವುದು. ಈ ರೀತಿಯಲ್ಲಿ ತಯಾರಿಸಿದರೆ ಮಾರಾಟಕ್ಕೆ ಸಿದ್ಧವಾಗುವುದು. ಸುಮಾರು ಹನ್ನೆರಡು ಆಣೆ ಬೆಲೆ ಬಾಳುವ ಒಂದು ಘನ ಅಡಿ ಮರದಿಂದ ೪-೮-೦ ರೂಪಾಯಿ ಬೆಲೆಯ ಚೌಕಟ್ಟು ಕಂಬಿಗಳನ್ನು ತಯಾರಿಸಲು ಬಹುದು. ಈ ಚೌಕಟ್ಟು ಕಂಬಿಗಳನ್ನು ಸರಿಯಾಗಿ ತಯಾರಿಸುವ ಕಾರ್ಖಾನೆಯು ಇಂಡಿಯಾದಲ್ಲಿ ಒಂದಾದರೂ ಇದುವರೆಗೆ ಆರಂಭವಾಗಿಲ್ಲ. ನಮ್ಮದೊಂದು ಯೋಜನೆಯ ಆರಂಭದಲ್ಲಿ, ವರ್ಷಕ್ಕೆ ಒಂದೂವರೆ ಲಕ್ಷ ರೂಪಾಯಿಗಳಷ್ಟು ಚೌಕಟ್ಟು ಕಂಬಿಗಳನ್ನು ತಯಾರಿಸಬೇಕೆಂದು ಯೋಚಿಸಲಾಗಿದೆ. ಈ ಕಾರ್ಖಾನೆಯು ಬೆಂಗಳೂರು ಅಥವಾ ಶಿವಮೊಗ್ಗೆಯಲ್ಲಿ ಆರಂಭವಾಗುವುದು. ಕ್ರಮೇಣ ಈ ಕೈಗಾರಿಕೆಯನ್ನು ಕನ್ನಡನಾಡಿನ ಗ್ರಾಮಕೈಗಾರಿಕೆಯನ್ನಾಗಿ ಮಾರ್ಪಡಿಸುವ ಆಲೋಚನೆಯುಂಟು.

ಕರ್ನಾಟಕದ ಪದರದ ಹಲಿಗೆ (Karnataka Ply-wood) ಪದರದ ಹಲಗೆಯ ಉಪಯೋಗವು ದಿನದಿನಕ್ಕೆ ಹೆಚ್ಚುತ್ತಾ ಬಂದಿದೆ. ಕರ್ನಾಟಕವು ಈ ಕೈಗಾರಿಕೆಗೆ ಅತ್ಯುತ್ತಮವಾದ ಕೇಂದ್ರವೆಂದು ಡೆಹರಾಡೂನಿನ ನಿಪುಣರು ಅಭಿಪ್ರಾಯಪಟ್ಟಿರುವರು. ಈ ಕೈಗಾರಿಕೆಯೂ ನಮ್ಮವರಿಗೆ ಹೊಸದು. ಆದರೆ ದಕ್ಷಿಣ ಭಾರತದ ಮಲೆಯಾಳ ಪ್ರಾಂತದಲ್ಲಿ ಒಂದು ಕಾರ್ಖಾನೆಯಿದ್ದು, ಸುಮಾರು ಒಂದು ಲಕ್ಷ ರೂಪಾಯಿಗಳ ಸರಕನ್ನು ತಯಾರಿಸುತ್ತಿದೆ. ಹಿಂದುಸ್ಥಾನಕ್ಕೆ ಬೇಕಾದ ಸರಕಿನಲ್ಲಿ ಇದು ಎಂಬತ್ತನೆಯ ಒಂದು ಪಾಲು ಮಾತ್ರ.

ಈ ಕೈಗಾರಿಕೆಯ ಕಾರ್ಯವು ಸುಲಭವೇ ಸರಿ! ಆದರೆ ಸರಿಯಾದ ಶಾಸ್ತ್ರೀಯ ಜ್ಞಾನದ ಮತ್ತು ಉತ್ತಮ ಸಲಕರಣೆಗಳ ಅವಶ್ಯಕತೆಯುಂಟು. ಹಸಿಯ ಮರವನ್ನು ಕಡಿದು, ತೊಗಟೆಯನ್ನು ಸುಲಿದು, ಐದು ಆರು ಅಡಿ ಈ ರೀತಿ ಬೇಕಾದ ಅಳತೆಗೆ ದಿಮ್ಮಿಗಳನ್ನು ಕತ್ತರಿಸಿ "ವಿನೀರ್ ಕಟಿಂಗ್ ಲೇತ್" ಗೆ ಕೊಟ್ಟರೆ ಬಟ್ಟೆಯ ಥಾನು ಬಿಚ್ಚಿದಂತೆ ಮರವನ್ನು ಸುಲಿದು ತೆಳುವಾದ ಹಲಗೆಯನ್ನು ಕೊಡುವುದು. ಈ ಹಲಗೆಯ ಸುರುಳಿಯನ್ನು ಆನೆಯಿಂದ ಆರಿಸಿ, ಬೇಕಾದ ಅಳತೆಗೆ ಕತ್ತರಿಸಿ, ಉದ್ದವಾದ ಎರಡು ಹಲಗೆಗಳ ಮಧ್ಯದಲ್ಲಿ ಒಂದು ಹಲಗೆಯನ್ನು ಅಡ್ಡವಾಗಿ ಇಟ್ಟು, ಸಿದ್ಧಗೊಳಿಸಿದ ಸರಿ(ಅಂಟು)ಯನ್ನು ಹರಡಿ, ಮೂರು ಅಥವಾ ಐದು ಹಲಗೆಗಳ ಪದರುಗಳನ್ನು ಅಂಟಿಸಿ, ಭಾರವಾದ ಅಚ್ಚುಗಳಲ್ಲಿ ಒತ್ತಿಟ್ಟಿದ್ದು, ಅನಂತರ ಆವಿಗೆಯ ಹಬೆಯಲ್ಲಿ ಒಣಗಿಸಿ ಪದರದ ಹಲಗೆಗಳನ್ನು ವ್ಯಾಪಾರಕ್ಕೆ ಸಿದ್ಧಗೊಳಿಸುವರು. ಈ ಹಲಗೆಗಳು ಇನ್ನೂ ಹಸಿಯಾಗಿರುವಾಗ, ಇವುಗಳ ಮೇಲೆ ಕಬ್ಬಿಣದ ನಮೂನೆಗಳನ್ನು ಕಾಯಿಸಿ ಒತ್ತುವುದರಿಂದ ಒಗಬಗೆಯ ಚಿತ್ರಗಳು ಕಂಡುಬಂದು, ಸೀಲಿಂಗ್ ಹಲಗೆ ಮತ್ತು ಕುರ್ಚಿಯ ತಳದ ಚೌಕು ಇವುಗಳನ್ನು ತಯಾರಿಸಬಹುದು.

ಹಿಂದುಸ್ಥಾನದಲ್ಲಿ ತಯಾರಾಗುತ್ತಿರುವ ಪದರದ ಹಲಗೆಗಳು ಪರದೇಶದಿಂದ ಬರುವ ಹಲಗೆಗಳಿಗಿಂತ ಕೆಲವುಭಾಗಗಳಲ್ಲಿ ಉತ್ತಮವಾಗಿರುವವೆಂದು ಕೆಲಸಗಾರರು ಅಭಿಪ್ರಾಯಪಡುವರು. ಹಿಂದುಸ್ಥಾನದಲ್ಲಿ ಇರುವ ಉತ್ತಮ ಮರಗಳೇ ಇದಕ್ಕೆ ಮುಖ್ಯ ಕಾರಣ. ಈ ಕೈಗಾರಿಕೆಯಲ್ಲಿ ಕೂಡ ನೂರಕ್ಕೆ ನೂರರಷ್ಟು ಲಾಭವುಂಟು. ಈ ಪದರದ ಹಲಗೆಯ ಕೈಗಾರಿಕೆಯನ್ನು **ಶರಾವತಿಯ** ದಡದಲ್ಲಿ ಸಮುದ್ರಕ್ಕೆ ಹದಿನಾರು ಮೈಲಿ ದೂರದಲ್ಲಿರುವ, ಕಾರವಾರ ಜಿಲ್ಲೆಯ ಗೇರುಸೊಪ್ಪೆಯಲ್ಲಿ ಆರಂಭಿಸಿ, ವರ್ಷ ಒಂದಕ್ಕೆ ಎರಡು ಲಕ್ಷ ರೂ.ಗಳ ಪದರದ ಹಲಗೆಗಳನ್ನು ತಯಾರಿಸಬೇಕೆಂದು ನಿಶ್ಚಯಿಸಲಾಗಿದೆ.

ಈ ನಮ್ಮ ಯೋಜನೆಗೆ ಮೈಸೂರು ಸರ್ಕಾರದವರೂ ವರ್ಷ ಒಂದಕ್ಕೆ ಇಪ್ಪತ್ತು ಸಾವಿರ ಘನ ಅಡಿ ಹಗುರಾದ ಮರವನ್ನು, ಅಡಿ ಒಂದಕ್ಕೆ ಆರುಕಾಸಿನಂತೆ ಐದು ವರ್ಷಗಳವರೆಗೆ ಕೊಡಲು ಒಪ್ಪಿರುವರು. ಇದಲ್ಲದೆ ಕಾರ್ಖಾನೆಗೆ ಉಚಿತಸ್ಥಳ, ರಿಯಾಯತೀದರದಲ್ಲಿ ವಿದ್ಯುಚ್ಛಕ್ತಿ, ಮತ್ತು ಇತರ ಕಚ್ಚಾ ಮಾಲುಗಳನ್ನೂ ಕೊಡಲು ಒಪ್ಪಿರುವರು. ಬೊಂಬಾಯಿ ಸರ್ಕಾರದವರು ಕೂಡ ಈ ಯೋಜನೆಗೆ ಸಹಾಯಮಾಡಲು ಭರವಸೆ ಇತ್ತಿರುವರು.

ಪ್ರಕೃತ ಕೈಗಾರಿಕೆಯ ಮಾತೆತ್ತಿದರೆ ಕೆಲವರು ಯುದ್ಧವನ್ನು ಮುಂದೆ ತಂದೊಡ್ಡುವರು. ಯುದ್ಧವು ಒಂದು ಅನಿಷ್ಟವೇ ಸರಿ. ಆದರೆ ಧೈರ್ಯದಿಂದ ಮುಂದೆಬಂದು ಪೂರ್ಣಸಿದ್ಧತೆಯಿಂದ ಕೈಗಾರಿಕೆಯನ್ನು ಆರಂಭಿಸಿದರೆ ಅವುಗಳಿಗೆ ಯುದ್ಧದಿಂದ ಒಂದು ಬಗೆಯ ಉಪಕಾರವಾದಂತೆಯೇ ಆಗುವುದು. ಏಕೆಂದರೆ ಯುದ್ಧದಲ್ಲಿ ಆಸಕ್ತರಾದ ಅಥವಾ ಸಂಬಂಧಿಸಿದ ರಾಷ್ಟ್ರಗಳು ಈಗ ಅಗ್ಗವಾಗಿ ಮಾಲು ತಯಾರಿಸಿ ಇಲ್ಲಿಯ ಕೈಗಾರಿಕೆಗಳೊಂದಿಗೆ ಪೇಲಾಟವನ್ನು ನಡೆಯಿಸಲಾರವು. ಒಂದು ಬಾರಿ ಹಿಂದುಸ್ಥಾನದಲ್ಲಿಯೇ ಅಂತಹ ಸರಕುಗಳನ್ನು ತಯಾರಿಸಿ, ವ್ಯಾಪಾರವನ್ನು ನಮ್ಮ ಸ್ವಾಧೀನಮಾಡಿಕೊಂಡರೆ ಮುಂದಿನ ಕೆಲಸವು ಸುಲಭವಾಗುವುದು.

ಚೌಕಟ್ಟುಕಂಬಿಗಳಿಗೆ ಬೇಕಾಗುವ ಯಂತ್ರಗಳು ಹಿಂದುಸ್ಥಾನದಲ್ಲಿಯೇ ಇವೆ. ಕೆಲವು ಸಣ್ಣ ಸಣ್ಣ ಯಂತ್ರಗಳನ್ನು ಇಲ್ಲಿಯೇ ತಯಾರುಮಾಡಲು ಏರ್ಪಡಿಸಲಾಗಿದೆ. ಪದರದ ಹಲಗೆಗೆ ಬೇಕಾದ ಯಂತ್ರಗಳನ್ನು ತಾಟಸ್ಥ್ಯ ರಾಷ್ಟ್ರಗಳಿಂದ ತರಿಸಿಕೊಡಲು ಪ್ರಮುಖ ವರ್ತಕರು ಮುಂದೆ ಬಂದಿರುವರು. ಎಂದಮೇಲೆ ಕೈಗಾರಿಕೆಯನ್ನಾರಂಭಿಸಲು (ಯಂತ್ರಗಳ ಬಾಬಿನಲ್ಲಿ) ಅಡ್ಡಿಬರುವುದಿಲ್ಲ. ಇಂದು ಬೇಕಾಗಿರುವುದು ಜನರ ಬೆಂಬಲ, ಧನದ ಬೆಂಬಲ! ಇದೂ ಸಾಕಾದಷ್ಟು ದೊರೆಯುವುದೆಂದು ನಮಗೆ ಭರವಸೆಯುಂಟು; ಆದರೆ ಕನ್ನಡನಾಡಿನ ಜನರು ಕೈಮಿಂಚಿ ಹೋಗುವುದಕ್ಕೆ ಮೊದಲು ಪ್ರಯೋಜನಪಡೆಯಬೇಕು. ಈ ಕೈಗಾರಿಕೆಯನ್ನು ಕನ್ನಡನಾಡಿನ ಕೈಗಾರಿಕೆಯನ್ನಾಗಿ ಮಾಡಬೇಕು ಎಂಬುದೇ ನನ್ನ ಆಶೆ. ನಾವೀಗ ಕಾರ್ಯೋನ್ಮುಖರಾಗಿ ನಡೆದರೆ ಅಖಿಲ ಭರತಖಂಡವೇ ಕನ್ನಡಿಗರತ್ತ ತಿರುಗಬಹುದು!

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೫ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೪ ಆಣೆ.

ಕನ್ನಡಿಗನ ಹುಚ್ಚು

(ನಡೆದ ಸಂಗತಿ)

★

ಶ್ರೀ. ಇಮಾರತಿ ಹನುಮಂತರಾಯರು, ಮುಂಬಯಿ

ಇದರಲ್ಲಿಯ ಶ್ರೀ. ಕಬ್ಬೂರ ಕೃಷ್ಣರಾಯರ ಮಾತುಗಳೆಂದರೆ ಅವು ಬರಿಯೆ ಒಂದು ವ್ಯಕ್ತಿಯ ಮಾತುಗಳಲ್ಲ. ಕರ್ನಾಟಕದಲ್ಲಿ ಈ ಬಗೆಯ ವಿಚಾರದವರದೊಂದು ಜಾತಿಯೆ ಇದೆ. ಆ ಜಾತಿಯ ಜನರ ಉದಾರಬುದ್ಧಿ-ಯೆನ್ನಿ, ಔದಾಸೀನ್ಯವೆನ್ನಿ— ಕರ್ನಾಟಕಕ್ಕೆ ಹುಳು ಹತ್ತಿಸಿದಂತೆ ಮಾಡಿದೆ. ಈ ಹುಳು-ವನ್ನು ಹೊಡೆದೋಡಿಸದಿದ್ದರೆ ಕನ್ನಡಕ್ಕೆ ಉಳಿಗಾಲವೆ ಇಲ್ಲ !

★

ತಾಯಿನಾಡನ್ನು ಬಿಟ್ಟು ಅದೆಷ್ಟೋ ಜನ ಕನ್ನಡಿಗರು, ಉದ್ಯೋಗ, ವ್ಯವಹಾರ, ಸೇವಾವೃತ್ತಿ ಮುಂತಾದ ಕಾರಣ ಗಳಿಂದ ಸಮಸ್ತ ಭಾರತ ದೇಶದ ಇತರ ಪ್ರಾಂತಗಳಲ್ಲಿ ನೆಲಸಿರು ವರು; ಇದು ಎಂದಿನಿಂದಲೂ ನಡೆಯುತ್ತ ಬಂದ ವಿಷಯ. ಹೀಗೆಯೆ ಮುಂದೆ ಸಾಗುವುದರಲ್ಲಿಯೂ ಸಂಶಯವಿಲ್ಲ. ಪರಪ್ರಾಂತ ಗಳಲ್ಲಿ ನೆಲಸಿದ ಕನ್ನಡಿಗರಲ್ಲಿಯೆ ನಾನೊಬ್ಬ. ಕನ್ನಡನಾಡನ್ನು ಬಿಟ್ಟಂದಿನಿಂದಲೂ "ಕನ್ನಡಿಗರ ಕನ್ನಡತ್ವವು ವಿದೇಶಗಳಲ್ಲಿ ಉಳಿಯುವುದು ಹೇಗೆ ?" ಎಂಬ ಪ್ರಶ್ನೆಯು ನನ್ನೆದುರು ನಿಲ್ಲುತ್ತದೆ. ಈ ಪ್ರಶ್ನೆಯನ್ನು ಅವರ ಎಲ್ಲ ಬದಿಗಳಿಂದಲೂ, ನನ್ನ ಬುದ್ಧಿಯ ಅಲ್ಪಶಕ್ತಿಗನುಸಾರವಾಗಿ ವಿಚಾರಿಸಿದ್ದೇನೆ. ಆದರೆ ಈ ಲೇಖವು ಮಾತ್ರ ಈ ಪ್ರಶ್ನೆಯನ್ನು ವಿಚಾರಿಸುತ್ತಿದ್ದಾಗ ಬರೆದು ದಲ್ಲ; ಆಕಸ್ಮಿಕವಾಗಿ ಒದಗಿಬಂದ ಒಂದು ಘಟನೆಯೆ ಮೂಲಾಧಾರವಾಗಿದೆ ಈ ಬರೆಹಕ್ಕೆ. ಆ ಘಟನೆಯು ಒದಗಿದುದು ಹೀಗೆ:—

ಕಳೆದ ದೀಪಾವಳಿಯ ಹಬ್ಬಕ್ಕೆ ಇನ್ನೂ ಎರಡು ದಿನಗಳಿದ್ದುವು. ಆಗ ಇಲ್ಲಿಯ ನನ್ನ ವಯೋವೃದ್ಧ ಕನ್ನಡ ಮಿತ್ರರೊಬ್ಬರು ನನ್ನ ಬಳಿ ಬಂದು "ಬರುವ ದೀಪಾವಳಿಯಲ್ಲಿ ಶ್ರೀಮಾನ್ ಕಬ್ಬೂರ ಕೃಷ್ಣರಾಯರು ಕೆಲವು ಜನ ಕನ್ನಡಿಗರನ್ನು ಪಗಡೆಯಾಟದ ಸಲುವಾಗಿ ನಿಮಂತ್ರಿಸಲು ಹೇಳಿದ್ದಾರೆ; ಆ ಆಟದ ಔತಣವು ನಿಮಗೂ ಇದೆ" ಎಂದು ಹೇಳಿದರು. ನಾನು ಸಂತೋಷದಿಂದ ಆ ಔತಣವನ್ನು ಸ್ವೀಕರಿಸಿದೆ.

*   *   *

ಶ್ರೀಮಾನ್ ಕಬ್ಬೂರ ಕೃಷ್ಣರಾಯರು ಅಚ್ಚ ಕನ್ನಡಿಗರು, ಕೆಜ್ಜೆಸೆಯುವರು. ಇವರ ಪರಿಚಯವು ಈಗಾಗಲೆ "**ಜಯಂತಿ**'ಯ

(೫೬೩ ನೆಯ ಪುಟದಿಂದ ಮುಂದುವರಿದುದು)

ಮಧ್ಯದಲ್ಲಿ ಮುಂದಕ್ಕೆ ಹಿಂದಕ್ಕೆ ಒಲೆದಾಡುತ್ತಿದ್ದ ಹಾಗೆಯೆ ಮುದುಕರು ಪ್ರಜ್ಞಾರಹಿತರಾಗಿ ಅವನ ಸುತ್ತಲೂ ಕುಳಿತು ಕೊಂಡರು.

ದುಃಖಗೀತದ ಸ್ವರವು ಆ ಮನೆಯನ್ನೆಲ್ಲಾ ತುಂಬಿದ್ದಿತು. ಅದವು ಸೂರ್ಯಾಸ್ತದಲ್ಲಿ ಪಕ್ಷಿಗಳು ಹಾರಾಡುತ್ತಿದ್ದಾಗಿನ ಧ್ವನಿಯಂತೆ ಭಾಸವಾಯಿತು.

ಮುದುಕರ ಹೃದಯಗಳಲ್ಲಿ ಹಳೆಯ ದುರ್ಭಾಗ್ಯಗಳ ಬೇಗೆ ಸಸು ಪ್ರಜ್ವಲಿತವಾಗಿ ಉರಿಯಲಾರಂಭಿಸಿತು. ಗೀತವು ಒಳ್ಳೆಯ ಸ್ವಾತಂತ್ರ್ಯದ ವಿನಾಶವನ್ನು ಕುರಿತು ಪ್ರಲಾಪಿಸುತ್ತಿದ್ದುದರಿಂದ, ಎಲ್ಲರೂ ದುಃಖಾಂತ ನಾಟಕಗಳನ್ನು ನಿರೀಕ್ಷಿಸುತ್ತಿರುವಾಗಿ ನಂತೆ, ತಮ್ಮ ನಾಡಿಗಾಗಿ ದುಃಖಿಸಲು ಆರಂಭಿಸಿದರು. ಯುದ್ಧದಿಂದ ಜರ್ಜರಿತನಾಗಿದ್ದ, ರಕ್ತಮಯನಾದ ಕೋಸ್ಕಿಯ-ಸ್ಕೀವು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು, ಬಗ್ಗಿನಿಂತಿರುವ ಚಿತ್ರವು ಅವರೆಲ್ಲರ ಕಣ್ಣುಗಳೆದುರಿನಲ್ಲಿ ಕಟ್ಟಿದಂತಾಯಿತು.

Finish Poloniae ! ಪೋಲಂಡಿನ ಇತಿಶ್ರೀಯಾಯಿತು !

ಎಲ್ಲೆಡೆಗೂ ನಾಶ, ಮರಣಗಳು; ದುಃಖದಾಯಕ ಕೂಗುಗಳು; ಎಳೆಯಮಕ್ಕಳೆಲ್ಲಾ ತಮ್ಮ ದುರ್ದೈವೀ ರಾಷ್ಟ್ರದಿಂದ ಹೊರ-ದೂಡಲ್ಪಟ್ಟು, ಅನ್ಯ ದೇಶಗಳಲ್ಲಿ ಬಿಕ್ಕೆಬೇಡಬೇಕಾಯಿತು !

ದುಃಖಮಯವಾದ ಗಾಯನವು ಸೂರ್ಯಾಸ್ತದ ಶಾಂತ ಸಮಯದಲ್ಲಿ ಸಾಗಿಹೋಯಿತು ಆಲಿಸಿದವರು ಶಿಲಾಪ್ರತಿಮೆ ಗಳಾದಂತೆ ಕಾಣಿಸಿದರು. ರೋಮನ್ ತನ್ನ ಕೈಗಳ ಮೇಲೆ ತಲೆ ಬಾಗಿಸಿದ; ನೋವಿನಿಂದ ನರಳುತ್ತಿದ್ದ ನಯನಗಳು ಸೂರ್ಯಾಸ್ತ ದೆಡೆ ತಿರುಗಿದುವು. ಅವನ ಗದ್ದವು ನಡುಗಿತು. ಮನದಲ್ಲೆಲ್ಲಾ ಕಷ್ಟದಾಯಕವಾದ ನೆನಹುಗಳು ತುಂಬಿಕೊಂಡಿದ್ದುವು. ಮುದುಕರು ಚೇತನಾರಹಿತರಾಗಿದ್ದರು. ಮುದುಕಿ ತನ್ನ ಮಗನನ್ನು ನೋಡುತ್ತ ಅಳಲಾರಂಭಿಸಿದಳು. ರೋಮನ್ ದುಃಖದಿಂದ ಬಾಗಿಲೆಡೆ ತಿರುಗಿದಾಗ, ವ್ಯಾಗ್ದಲೀನಳ ಶ್ಯಾಮನಯನಗಳಲ್ಲಿ ಎರಡು ದೊಡ್ಡ ಹನಿಗಳು ಕಾಣಿಸಿದುವು. ಸುದೀರ್ಘವಾದ ಶಾಂತತೆ ಯಲ್ಲಿ ಅವನ ಕಣ್ಣುಗಳು ಆ ತರುಣಿಯ ಕಣ್ಣುಗಳಲ್ಲಿ ಸೇರಿದ್ದಾಗ, ಸೂರ್ಯನ ಕೊನೆಯ ಕಿರಣವು ಅರಣ್ಯದಲ್ಲಿ ಬಿದ್ದು ಮಾಯ ವಾಗುತ್ತಿದ್ದಿತು.

ಮುಖಾಂತರ ಕನ್ನಡಿಗರಿಗೆ ಆಗಿದೆ. ಚಿಕ್ಕ ವಯಸ್ಸಿನಲ್ಲಿಯೆ ಪರದೇಶಗಳನ್ನು ಸುತ್ತುಹಾಕಿ ಬಣ್ಣದ ವ್ಯವಸಾಯವನ್ನು ಕಲಿತರು. ತಮ್ಮ ಅಸಾಮಾನ್ಯವಾದ ಬುದ್ಧಿಬಲದಿಂದ ತಮ್ಮ ವ್ಯವಸಾಯವನ್ನು ಬಲಿಸಿದರು. ಜಗತ್ತಿನ ದೊಡ್ಡ ಪೇಟೆಗಳಲ್ಲಿ ಗಿರಾಕಿಗಳನ್ನು ದೊರೆಕಿಸಿದರು. ಈಗ ಇವರು ಮುಂಬಯಿಯಲ್ಲಿಯೆ ತಮ್ಮ ಬಣ್ಣದ ಉದ್ಯೋಗವನ್ನು ನಡೆಯಿಸುತ್ತಲಿದ್ದಾರೆಂಬುದನ್ನು ಅನೇಕರು ಅರಿತಿರಬಹುದಾಗಿದೆ.

*   *   *

ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಈ ಎರಡೂ ಪದ್ಧತಿಗಳಿಂದ ಸುಸಜ್ಜಿತವೂ, ಗಾಳಿ-ಬೆಳಕುಗಳಿಂದ ಪ್ರಶಸ್ತವೂ ಇದ—ಶ್ರೀಮಾನ್ ಕಬ್ಬೂರರವರ—ಮನೆಯಲ್ಲಿ,ನಿಮಂತ್ರಿತ ಕನ್ನಡಿಗರೆಲ್ಲರೂ ಗೊತ್ತು ಮಾಡಿದ ಹೊತ್ತಿಗೆ ಕಲೆತೆವು. ಬಂದ ಜನರಲ್ಲಿ ಆಟಕ್ಕಾಗಿ ಇಬ್ಬಣಗಳನ್ನು ಮಾಡಲಾಯಿತು. ಆಟವಾಡುವಾಗ ಸಹಜವಾಗಿ ಉಂಟಾಗುವ ಹುಸಿಜಗಳ, ಈರ್ಷೆ,ವಿನೋದ, ವ್ಯಂಗ್ಯಮಾತುಗಳು, ಹಾಸ್ಯ ಮುಂತಾದುವುಗಳಿಂದ ಒಡಗೂಡಿದ ಒಂದು ಆಟವು, ಯಾವ ಒಣದವರಿಗೂ ಸೋಲು-ಗೆಲವುಗಳಿಲ್ಲದೆ ಕೊನೆಗಂಡಿತು. ಎಲ್ಲರೂ ಪಾಶ್ಚಾತ್ಯ ಪದ್ಧತಿಯ ಸುಖಾಸನಗಳಲ್ಲಿ ಕುಳಿತು ಎಲೆಯಡಿಕೆಗಳನ್ನು ಮೆಲ್ಲತೊಡಗಿದೆವು. ಕೆಲಹೊತ್ತಿನ ತನಕ ನಮ್ಮ ಮಾತು ಗೊತ್ತು-ಗುರಿಗಳಿಲ್ಲದೆ ಸಾಗಿದ್ದುವು. ಅಷ್ಟರಲ್ಲಿ ಶ್ರೀಮಾನ್ ಕೃಷ್ಣರಾಯರು "ನೀವು ಏನೇ ಅನ್ನಿರಿ, ವಿಜಾಪುರದ ಜಿಲ್ಲೆಯ ಕನ್ನಡಿಗರೇ ಹೆಚ್ಚು ಮುಂದುವರಿದವರು" ಎಂದೆದರು. ಆಗ ನನಗೆ ಔತಣ ಹೇಳಲು ಬಂದ ಹಿರಿಯ ಮಿತ್ರರು "ಹೀಗೆ ಅನ್ನುವುದರಿಂದ ಉಳಿದ ಕನ್ನಡ ಜಿಲ್ಲೆಗಳ ಜನರ ಬಗ್ಗೆ ತಪ್ಪು ಕಲ್ಪನೆಯಾಗುವ ಸಂಭವವಿದೆ" ಎಂದು ಮೆತ್ತನ್ನ ಉತ್ತರವಿತ್ತರು. ಕನ್ನಡಿಗರೆಲ್ಲರನ್ನೂ ಕನ್ನಡದ ನೋಟದಿಂದ ನೋಡುವವನಾದ ನನಗೆ ಇದು ಸಹಿಸದ ಮಾತೆನಿಸಿತು. "ನಿಮ್ಮ ತಿಳಿವಳಿಕೆ ತಪ್ಪಿದೆ, ಉಳಿದ ವಿಷಯದ ಮಾತು ಬೇರೆ, ಆದರೆ 'ಕರ್ನಾಟಕ' 'ಕನ್ನಡ' ಈ ದೃಷ್ಟಿಯಿಂದ ವಿಚಾರಿಸಲು, ವಿಜಾಪುರದವರು ಹಿಂದುಳಿದವರೆಂದೇ ಹೇಳಬೇಕಾಗಿದೆ. ಕಬ್ಬೂರರವರು ಈ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ನಾನೀಗ ಮಾತನಾಡುವುದು ವೈಯಕ್ತಿಕವಾಗಿ ಅಲ್ಲ. ಕಬ್ಬೂರರವರ ವಿಷಯಕ್ಕೆ ನನ್ನಲ್ಲಿ ತುಂಬ ಆದರವಿದೆ. ಅವರು ಕನ್ನಡಿಗರೆಂಬ ಅಭಿಮಾನವಿದೆ" ಎಂದೆ.

"ನಾನು ವಿಜಾಪುರದವನಲ್ಲ, ನನ್ನದು ಬೆಳಗಾಂವಿ ಜಿಲ್ಲೆ" ಎಂದರು ಕಬ್ಬೂರ ಕೃಷ್ಣರಾಯರು.

"ಬೆಳಗಾಂವಿ ಮತ್ತು ವಿಜಾಪುರ ಜಿಲ್ಲೆಗಳ ಜನಗಳಲ್ಲಿ ನನಗಂತೂ ಅಷ್ಟೇನೂ ಹೆಚ್ಚುಕಡಿಮೆ ತೋರುವುದಿಲ್ಲ. ಒಂದು ಹಾಸು; ಮತ್ತೊಂದು ಹೊಕ್ಕು. ಕನ್ನಡ ಸಂಸ್ಕೃತಿ, ಕನ್ನಡ ನುಡಿ, ನಾಡು ಇವುಗಳ ವಿಷಯವಾಗಿ ಕನ್ನಡಿಗರಿಗೆ ವಿಚಾರಿಸಲು ಹಚ್ಚಿದ ಶ್ರೇಯಸ್ಸು ಧಾರವಾಡದವರಿಗಿದೆ. ನಾಡದೇವಿಯ ಆರಾಧನೆಯ ಮೊದಲನೆಯ ಪಾಠಗಳನ್ನು ಮೊದಲು ಕಲಿಸಿದವರು ಧಾರವಾಡ ಜಿಲ್ಲೆಯವರು" ಎಂದು ಕೊಂಚ ಗಟ್ಟಿಯಾಗಿಯೆ ಹೇಳಿದೆ.

ಶ್ರೀಮಾನ್ ಕೃಷ್ಣರಾಯರು ತಮ್ಮ ಹೊಳಪಿನ ಕಣ್ಣುಗಳಿಂ ನನ್ನನ್ನು ದಿಟ್ಟಿಸಿದರು. ಸ್ವಲ್ಪ ಮುಂದೆ ಸರಿದು ತಮ್ಮೆದುರು ಕುಳಿತುಕೊಳ್ಳಲು ನನಗೆ ಹೇಳಿದರು. ಒಬ್ಬರಿಗೊಬ್ಬರು ಎದುರು ಬದುರಾಗಿ ಕುಳಿತೆವು. ಆಮೇಲೆ ಚರ್ಚೆಗೆ ಮೊದಲಾಯಿತು.

*   *   *

"ವಿಜಾಪುರ—ಬೆಳಗಾಂವಿ ಜಿಲ್ಲೆಗಳ ಜನರಲ್ಲಿ ಕನ್ನಡನಾಡ ನುಡಿಗಾಗಿ ಅಭಿಮಾನವಿಲ್ಲವೆಂದು ನೀವು ಹೇಗೆ ಹೇಳುವಿರಿ?" ಎಂದು ಕೃಷ್ಣರಾಯರು ಸವಾಲುಹಾಕಿದರು.

"ಅಚ್ಚಕನ್ನಡಿಗನ ನೋಟದಿಂದ ಈ ಜಿಲ್ಲೆಗಳ ಬಹುಜನ ನಡೆ-ನುಡಿ-ಧ್ಯೇಯ ಮೊದಲಾದುವುಗಳನ್ನು ಸ್ವಲ್ಪ ಆಳವಾ ನೋಡಲು, ಈ ಮಾತಿನ ಸತ್ಯತೆಯು ಕಂಡುಬರುವಂತಿದೆ. (ಜಿಲ್ಲೆಗಳಲ್ಲಿಯ ಬಹುಸಂಖ್ಯಾಕರು ಕನ್ನಡ ಕಲಿತಿಲ್ಲ; ಇಷ್ಟೆ ಅಲ್ಲ, ಇದಕ್ಕೂ ಅಪಾಯಕರವಾದ ಸಂಗತಿಯೊಂದಿದೆ. ಇವರ ಕನ್ನಡವನ್ನು ಮನೆಮಾತನಾಗಿ ಇರಗೊಡಿಸದೆ, ಕನ್ನಡೇತರ ಭಾಷ ಯನ್ನು ವಿಶೇಷವಾಗಿ 'ಮರಾಠಿ'ಯನ್ನು ಬಳಕೆಯ ತಂದು, ತಮ್ಮದನ್ನು ಬಿಟ್ಟು ಹೆರವರದಕ್ಕೆ ಕೈಯೊಡ್ಡಿರುವರು ಈ ಜಿಲ್ಲೆಗಳ ಮುಂದಾಳುಗಳೆನಿಸಿಕೊಳ್ಳುವವರೂ ಈ ಬಗೆ ವಿಶೇಷ ವಿಚಾರಿಸಿದಂತೆ ತೋರುವುದಿಲ್ಲ. ಈ ಜಿಲ್ಲೆಯ ವಾಸಿಸುವವರ ಸ್ಥಿತಿಯೇ ಹೀಗಿರುವಾಗ, ಅಲ್ಲಿಂದ ಹೊರಬಿದ್ದು ಕನ್ನಡೇತರ ಪ್ರಾಂತಗಳಲ್ಲಿ ನೆಲಸಿರುವ ಜನರ ಇರವು ಹೇಗಿರಬಹು ದೆಂಬುದನ್ನು ಸ್ಪಷ್ಟವಾಗಿ ಕಂಡುಹಿಡಿಯುವಂತಿದೆ."

"ಅಂದರೆ, ಕನ್ನಡನುಡಿಯನ್ನು ಬಿಟ್ಟುಕೊಟ್ಟ ಮಾತ್ರ ಕ ಅವರು ಕನ್ನಡಿಗರಲ್ಲವೇ?"

"ಈ ಮಾತಿನ ಉತ್ತರವು ಸ್ಪಷ್ಟವೇ ಇದೆ. ಯಾವ ನುಡಿ ಮೇಲೆ ನಾಡು ನೆಲಸಿದೆಯೊ, ಅಂತಹದನ್ನೇ ಚೆಲ್ಲಿಕೊಟ್ ತಿರುಗಿ ತಾವು ಅದೇ ನಾಡಿನವರೆಂದು ಹೇಳಿಕೊಳ್ಳುವುದು ನಿರ ಮಾನದ ಲಕ್ಷಣವಾಗಿದೆ. ಇಂಥವರನ್ನು ನಾಮಧಾರಿ ಕನ್ನಡಿ ರೆಂದೇ ಕರೆಯಬೇಕಾಗುವುದು. ಇಂಗ್ಲೆಂಡಿನವನೆಂದು ಹೇ ಕೊಂಡು ಇಂಗ್ಲಿಷ್ ಮಾತನಾಡದಿರುವುದೂ, ಬಂಗಾಲಿಗಳೆಂ ಜಂಭಕೊಚ್ಚಿ ಬಂಗಾಲಿಯನ್ನು ತ್ಯಜಿಸುವುದೂ ಅವರ ಅಭಿಮಾ ಶೂನ್ಯತೆಯ ದ್ಯೋತಕವಲ್ಲದೆ ಬೇರೆಯೇನಿದೆ?"

"ಒಳ್ಳೆಯದು ನಿಮ್ಮಂತೆಯೇ ಆಗಲಿ; ಒಬ್ಬ ಕನ್ನಡಿ ಪ್ರೋಚುರ್ಗಲ್‍ದಲ್ಲಿರುವನೆಂದು ತಿಳಿಯುವಾ. ಅಲ್ಲಿ ಅವ ಕನ್ನಡ ಮಾತನಾಡುವುದು ಸಾಧ್ಯವಿಲ್ಲ. ನಿರ್ವಾಹವಿಲ್ಲದೆ ಕನ್ನ ನುಡಿಯನ್ನು ಬಿಡಬೇಕಾಗಿ ಬರುತ್ತದೆ. ಆದರೆ ಅವನು ಕನ್ನ ನೆಂದು ತನ್ನನ್ನು ಎಣಿಸಿಕೊಂಡಲ್ಲಿ ನಿಮ್ಮದೇನಾದರೂ ಇದೆಯೆ?"

"ಅಪರಿಹಾರ್ಯ ಕಾರಣಗಳ ಮೂಲಕ ಕನ್ನಡಮಾತ ಬಿಡಬೇಕಾಗಿ ಒಂದು— ಕನ್ನಡವನ್ನು ಓದುಬರೆಯುವುದು ಸಾ ವಾಗದೆಯೂ—ತಾನು ಕನ್ನಡಿಗನೆಂದು ಹೇಳಿಕೊಳ್ಳುವವನು ವಾಗಿಯೂ ಕನ್ನಡಿಗರಿಗೆ ಅಭಿಮಾನಶಾಲಿಯಾದ ವ್ಯಕ್ತಿ. ಆದರೆ

ತರದ ಉದಾಹರಣೆಗಳು ತೀರ ವಿರಳ. ಆದರೂ, ಇಂಗ್ಲಂಡ್, ಜಪಾನ್, ಅಮೇರಿಕಾ ದೇಶಗಳಲ್ಲಿ ವಾಸಿಸುವ ಕೆಲವು ಕನ್ನಡಿಗರು ಅಲ್ಲಿ ಕೂಡ ತಮ್ಮ ಕನ್ನಡತ್ವವನ್ನು ಕಾಯ್ದುಕೊಂಡಿರುವರು. ಅವರು ಕನ್ನಡಿಗರಿಗೆ ಹೆಮ್ಮೆಯ ವ್ಯಕ್ತಿಗಳು. ಆ ಮಹನೀಯರ ಕೂಗುಗಳು ಸಾವಿರಾರು ಮೈಲು ದೂರದ ಸಮುದ್ರದಾಚೆ ಯಿಂದಲೂ ಆಗಾಗ ಕೇಳಬರುತ್ತವೆ. ಹೀಗಿರುವುದಕ್ಕೆ ದೇಶ-ಪ್ರೇಮ ತುಂಬ ಇರಬೇಕಾಗುವುದು. ನಾನೀಗ ಹೇಳುವುದು ಪರದೇಶಗಳಲ್ಲಿ ನೆಲಸಿರುವವರ ವಿಷಯವಲ್ಲ; ಭಾರತದ ಇತರ ಪ್ರಾಂತಗಳಲ್ಲಿ ನೆಲಸಿರುವ ಕನ್ನಡಿಗರ ಬಗೆಗೆ. **ಏನೂ ಕಾರಣವಿಲ್ಲದೆ ಇವರು ಕನ್ನಡವನ್ನು ತೊರೆಯುತ್ತಿರುವರು. ತೊರೆದು ಮರೆಯುತ್ತಿರುವರು. ಮರೆತು ಜರಿಯುತ್ತಿರುವರು.** ಇಂತಹರನ್ನು ಕಂಡು ನನಗೆ ಮರುಕ ಉಂಟಾಗುವುದು."

"ಮುಂಬಯಿ ಪುಣೆಯಲ್ಲಿಯ ಕನ್ನಡ ಜನರನ್ನೇ ತೆಗೆದುಕೊಳ್ಳೋಣ. ಇಲ್ಲಿ ಕನ್ನಡ, ಕನ್ನಡ ಎಂದು ಕೂಗಾಡಿದರೆ ನಿಮ್ಮನ್ನು ಕೇಳುವವರಾರು? ನೀವು ಅನ್ಯಭಾಷೆಯನ್ನು ಕಲಿಯಬೇಕಾಗುವುದು. ಇಲ್ಲದಿದ್ದರೆ ಉದ್ಯೋಗ, ವ್ಯವಹಾರಗಳು ನಡೆಯುವದು ಹೇಗೆ?"

"ಇಲ್ಲಿ ನೆಲಸಿರುವವರು ಅನ್ಯಭಾಷೆಯನ್ನು ಆಡಕೂಡದೆಂದೂ ಕಲಿಯಬಾರದೆಂದೂ ನಾನು ಹೇಳುವುದಿಲ್ಲ. ಮತ್ತು ಹಾಗೆ ಹೇಳುವುದು ಮೂರ್ಖತನವೇ ಸರಿ! ನಾನು ಹೇಳುವುದರ ಅರ್ಥ ಇಷ್ಟೇ: **ಎಲ್ಲಿದ್ದರೂ ಕನ್ನಡಿಗನ ಮನೆಮಾತು ಕನ್ನಡವೇ ಇರಬೇಕು.** ಇದಕ್ಕೆ ಯಾವ ತೊಂದರೆಗಳೂ ಬರಲಾಗದು. ಮನೆಯಲ್ಲಿ ಹೆಂಡಿರು-ಮಕ್ಕಳೊಡನೆ ಕನ್ನಡವನ್ನೇ ಬಳಸಬೇಕು. ಇದನ್ನು ಬಿಟ್ಟು ಹಸುಮಕ್ಕಳಿಗೆ ಒತ್ತಾಯದಿಂದ ಕನ್ನಡೇತರ ನುಡಿಗಳನ್ನು ಕಲಿಸುವ ಎಷ್ಟೋ ಕನ್ನಡಿಗರನ್ನು ನಾವು ಕಾಣಬಹುದು. ಏನೂ ಅರಿಯದ ಮಗುವು ಯಾವ ನುಡಿಯನ್ನು ಕಲಿಸಿದರೂ ಕಲಿಯುವುದು, ಅಲ್ಲದೆ ಚಿಕ್ಕಂದಿನಲ್ಲಿ ಕಲಿತ ನುಡಿಗಾಗಿಯೇ ಆ ಮಗುವಿನಲ್ಲಿ ಅಭಿಮಾನವು ಬೇರೂರುವುದು ಸಹಜ. ಇಂತಹ ನಿರಪರಾಧಿ ಮಕ್ಕಳಿಗೆ ಕನ್ನಡೇತರ ಭಾಷೆಗಳ ದೀಕ್ಷೆಕೊಟ್ಟರೆ ಕನ್ನಡ ಜನಾಂಗದ ಬಳ್ಳಿಯ ತುದಿಗೆ ಕೊಡಲಿಯೇಟು ಕೊಟ್ಟಂತೆ ಸೈ! ಇದರ ಪರಿಣಾಮವಾಗಿ ಕನ್ನಡ ಮನೆತನಗಳು ಮಾಯವಾಗಿ ಕನ್ನಡೇತರದವುಗಳಾಗಿ ಹೋಗುವವು. ಹೀಗೆ ಆದ ಉದಾಹರಣೆಗಳು ಬೇಕಾದಷ್ಟಿವೆ. ಆದುದರಿಂದ ಕನ್ನಡಿಗನ ಆದ್ಯಕರ್ತವ್ಯವು ಕನ್ನಡತ್ವವನ್ನು ಕಾಯ್ದುಕೊಳ್ಳುವುದೇ ಆಗಿರುವುದೆ. ಯಾವ ದೇಶವೇ ಇರಲಿ, ಆ ದೇಶಭಾಷೆಯ ಅವಶ್ಯಕತೆಯು ಎಷ್ಟೇ ತೀಕ್ಷ್ಣವಿರಲಿ, ಮನೆಯೊಳಗೆ ಆ ಭಾಷೆಯನ್ನು ಬರಗೊಡದಿರುವುದು ಕನ್ನಡಿಗನ ಅಭಿಮಾನದ ಲಕ್ಷಣ. ವ್ಯವಹಾರಕ್ಕೆ ಬೇಕಾಗುವ ಭಾಷೆಗಳನ್ನು ಕಲಿಯಲು ಮಾತೃಭಾಷೆಯು ಅಡ್ಡ ಬರುವುದಿಲ್ಲ. ಆದರೆ ಏನಾದರೊಂದು ಕುಂಟುನೆಪ ಮುಂದೆಮಾಡಿ, ತಾಯ್ನುಡಿಯನ್ನು ಮರೆತರೆ ಅದು ಸ್ವಾಭಿಮಾನ ಶೂನ್ಯತೆಯೇ ಸರಿ!"

"ಕನ್ನಡದೇಶದಲ್ಲಿ ನೆಲಸಿದ ಬೇರೆ ದೇಶದವರು ಕನ್ನಡವನ್ನು ಕಲಿತಿಲ್ಲವೇ? ಇನ್ನೂ ಕಲಿಯುತ್ತಿಲ್ಲವೇ? ಹಾಗೆಯೆ ನಮ್ಮವರು ಅನ್ಯಭಾಷೆಗಳನ್ನು ಕಲಿಯಬೇಕು. ಅವುಗಳನ್ನು ತಿರಸ್ಕರಿಸಬಾರದು!"

"ಅನ್ಯಭಾಷೆಗಳನ್ನು ತಿರಸ್ಕರಿಸುವುದು ಕನ್ನಡಿಗರ ಸ್ವಭಾವದಲ್ಲಿ ಇಲ್ಲವೆ ಇಲ್ಲ. ನಾನು ಕನ್ನಡಿಗ. ಬೇರೆ ಭಾಷೆಗಳಲ್ಲಿ ನನಗೆ ಆದರವಿದೆ. ನಾನು ತಿರಸ್ಕರಿಸುವುದು ಕನ್ನಡಿಗರ ಔದಾಸೀನ್ಯ ವೃತ್ತಿಯನ್ನು, ಹೆರವರ ಭಾಷೆಗೆ ಮರುಳು ಹೋಗುವ ಅವರ ದಾಸ್ಯ ವೃತ್ತಿಯನ್ನು. ಕನ್ನಡನಾಡಿನಲ್ಲಿ ನೆಲಸಿದ ಕನ್ನಡೇತರ ಪ್ರಾಂತದ ಜನರು ಕನ್ನಡವನ್ನು ಕಲಿಯುತ್ತಾರೆ, ಮಾತನಾಡುತ್ತಾರೆ; ಆದರೆ ತಮ್ಮ ತಾಯ್ನುಡಿಯನ್ನು ಮರೆಯುವುದಿಲ್ಲ. ಅವರು ಮನೆಯಲ್ಲಿ ಬೇರೆ ಭಾಷೆಯನ್ನು ಮಾತನಾಡುವುದಿಲ್ಲ. ಅಲ್ಲದೆ ಅವರಲ್ಲಿಯ ಕೆಲವು ಕುಹಕರು ಉಂಡಮನೆಗೆರಡುಬಗೆದು, ಕರ್ನಾಟಕ ಮತ್ತು ಕನ್ನಡಿಗರ ಬಗೆಗೆ ಅಪಪ್ರಚಾರವನ್ನೂ ನಡೆಯಿಸಿದರು; ನಡೆಯಿಸುತ್ತಿರುವರು. ತಮ್ಮ ಭಾಷೆಯನ್ನು ಹೆರವರ ಮೇಲೆ ಹೇರಲು ಹಾತೊರೆಯುತ್ತಿರುವರು. ಅಪಪ್ರಚಾರವನ್ನು ತಡೆಯಹೋದ ಕನ್ನಡಿಗರು ಜಗಳಗಂಟರೆಂದೆನಿಸಿಕೊಂಡಿದ್ದಾರೆ."

"ಈ ಬಗೆಯ ಪ್ರಾಂತೀಯತೆಯು ದೇಶದಲ್ಲಿ ವಿಘಾತುಕವಾದದ್ದು. ನಾನು ನಿಮ್ಮನ್ನು ಕರ್ನಾಟಕದ 'ಜಿನ್ನಾ' ಎಂದೇಕೆ ಕರೆಯಬಾರದು?"

"ಪ್ರಾಂತದ ಮತ್ತು ಪ್ರಾಂತಭಾಷೆಯ ಅಭಿಮಾನವು ದೇಶ-ಸೇವೆ ಮಾಡಲಿಕ್ಕೆ ಅಡ್ಡಿಯನ್ನೊಡ್ಡುವುದು ತೀರ ಅಸಂಭವವು. ಅಖಿಲಭಾರತ ರಾಷ್ಟ್ರೀಯ ಸಭೆಯವರು ಕೂಡ ನುಡಿಗನುಸಾರವಾದ ಪ್ರಾಂತರಚನೆಯನ್ನೊಡ್ಡಿದ್ದಾರೆ. ಮಹಾತ್ಮಾ ಗಾಂಧಿಯವರಿಗೆ ಗುಜರಾತಪ್ರಾಂತ ಮತ್ತು ಗುಜರಾತಿನುಡಿಯೆಂದರೆ ಪಂಚಪ್ರಾಣ. ತಮ್ಮ ಆತ್ಮಚರಿತ್ರೆಯನ್ನು ಕೂಡ ಅವರು ತಾಯ್ನುಡಿಯಲ್ಲಿಯೆ ಬರೆದಿದ್ದಾರೆ. ಅವರ ದೇಶಾಭಿಮಾನ ಕುಂದುಳ್ಳದ್ದೇ? ವಿಶ್ವವೇ ಒಂದು ಕುಟುಂಬವೆಂಬ ವಿಶಾಲ-ದೃಷ್ಟಿಯ **ಠಾಕೂರ ರವೀಂದ್ರರು** ಕೂಡ ಬಂಗಾಲದ ನುಡಿಗೆ ಹೆಚ್ಚು ಮಹತ್ತ್ವಕೊಡುವುದು ಎಲ್ಲರಿಗೆ ಗೊತ್ತಿದ್ದಮಾತು. "ನೋಬೆಲ್ ಪ್ರಾಯಿಜ್" ಪಡೆದ ಅವರ ಗೀತಾಂಜಲಿ ಕೂಡ ಬಂಗಾಲಿಯಲ್ಲಿಯೇ ಬರೆಯಲ್ಪಟ್ಟಿಲ್ಲವೆ? ಎಂದಮೇಲೆ ನಾನು ನನ್ನ ತಾಯ್ನಾಡು, ತಾಯಿನುಡಿ ಇವುಗಳ ಅಭಿಮಾನಹಿಡಿದರೆ **ಜಿನ್ನಾ** ಹೇಗೆ ಆಗುವೆನು? ಜಿನ್ನಾ ಅವರಿಗೆ ಮುಸಲ್ಮಾನರಲ್ಲಿ ಒಗ್ಗಟ್ಟನುಂಟುಮಾಡಬೇಕೆಂಬ ಹಂಬಲವಿದೆ. ಅದರಂತೆ ಕನ್ನಡಿಗರಲ್ಲಿ ಒಗ್ಗಟ್ಟು ಬೆಳೆಯಬೇಕು, ಹರಿದು ಹಂಚಿಹೋದ ಕನ್ನಡನಾಡು ಒಂದಾಗಬೇಕು, ಮುಂದಾಗಬೇಕು ಸರಿ! ಆದರೆ ಅದರಿಂದ ಜಿನ್ನಾರವರ ಚಳವಳಿಯ ಮುಂದಿನ ಪರಿಣಾಮದಂತೆ ಸ್ವಾತಂತ್ರ್ಯ ಸಾಧನೆಗೆ ಅಡ್ಡಿಬರಲಾರದು. ಹಿಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದನ್ನು ಕರ್ನಾಟಕವು ತೋರಿಸಿದೆ; ಇನ್ನೂ ತೋರಿಸಲಿದೆ. ಇದು ಸ್ವಾತಂತ್ರ್ಯಸಾಧನೆಗೆ ಪೂರಕವಿದೆಯಲ್ಲದೆ ಜಿನ್ನಾರವರ ನೀತಿಯಂತೆ ಮಾರಕವಿಲ್ಲ."

“ಕನ್ನಡವು ಅಂದಚೆಂದದ ನುಡಿ; ಅದರ ಮೇಲೆ ನನಗೆ ತುಂಬಾ ಅಕ್ಕರೆ. ಇದು ಮನೆಮಾತಾಗಿರಬೇಕು. ಆದರೆ ಗಡಿನಾಡು ಗಳಲ್ಲಿ ವಾಸಿಸುವ ಕನ್ನಡಿಗರಿಗೆ, ಪರನಾಡಿನ ಅನೇಕ ಬಗೆಯ ಸಂಬಂಧವುಂಟಾಗುವುದರಿಂದ, ಕನ್ನಡ ನುಡಿಯನ್ನೇ ಅವಲಂಬಿಸಿರುವುದಾಗುವುದಿಲ್ಲ. ಇಂತಹ ಹಲಕೆಲವರು ಬೇರೆ ಭಾಷೆಯಾಡಿದರೆ ಕರ್ನಾಟಕಕ್ಕೆ ಒದಗುವ ಹಾನಿಯೇನೂ ಇಲ್ಲ!”

“ಕನ್ನಡ ನುಡಿಯ ಬಗೆಗೆ ತಮ್ಮಲ್ಲಿರುವ ಆದರ-ಪ್ರೀತಿಗಳನ್ನು ಕಂಡು ನನಗೆ ಆನಂದವಾಗಿದೆ. ಇನ್ನು ಗಡಿನಾಡಿನಲ್ಲಿಯ ಕನ್ನಡಿಗರು ಬೇರೆಯ ಭಾಷೆಯನ್ನು ಅವಲಂಬಿಸಬೇಕಾಗುವುದೆಂಬ ತಮ್ಮ ಸಂಶಯವು ಹುರುಳಿಲ್ಲದುದಾಗಿದೆ. ಕನ್ನಡಿಗರು ಅನ್ಯಭಾಷೆಯನ್ನು ಅವಲಂಬಿಸುವಂತೆ ಇತರರು ಕನ್ನಡವನ್ನೇಕೆ ಅವಲಂಬಿಸಬಾರದು? ನಮ್ಮವರೇ ನಮ್ಮ ನುಡಿಯನ್ನು ಬಿಡುವಾಗ, ಪರಕೀಯರೇಕೆ ಇದರ ಗೋಜಿಗೆ ಬರಬೇಕು? ಗಡಿನಾಡಿನ ಜನರಲ್ಲುಂಟಾಗುವ ಸಂಬಂಧಗಳಲ್ಲಿ ವಿವಾಹಸಂಬಂಧವೊಂದಿದೆ. ಕನ್ನಡಿತಿಯು ಅನ್ಯ ಪ್ರಾಂತೀಯನನ್ನು ಮದುವೆಯಾದರೆ ಆವಳು ಗಂಡನ ನುಡಿಗೆ ಶರಣುಹೋಗಬೇಕು. ಆದರೆ ಕನ್ನಡಿಗನು ಅನ್ಯದೇಶದ ಕನ್ನೆಯನ್ನು ಮದುವೆಯಾದರೆ ಆವನು ಹೆಂಡತಿಯ ನುಡಿಗೇ ಪ್ರಾಧಾನ್ಯ ಕೊಡುವನು. ಅಂತೂ ಕನ್ನಡಕ್ಕೇ ಬರುವುದು ಅಳಿಗಾಲ. ಇದೇನು ಪ್ರೇಯಸಿಯ ಒಲವಿನ ಪರಿಣಾಮವೋ, ಇಲ್ಲವೇ ಕನ್ನಡಿಗರ ಅಭಿಮಾನ್ಯ ಶೂನ್ಯತೆಯ ಕುರುಹೊ? ಇದೇ ಪ್ರಕಾರ ಕನ್ನಡಿಗರ ಸಂಖ್ಯೆ ಕ್ಷಯಿಸುತ್ತಾ ನಡೆದರೆ ಹಾನಿ ಕರ್ಣಾಟಕಕ್ಕೇ. ಎಂಬುದನ್ನು ಬೇರೆ ಹೇಳಬೇಕೆ? ಒಂದು ದೊಡ್ಡ ಮನುಷ್ಯ-ಶರೀರದಲ್ಲಿಯ ಸಣ್ಣ ವಿಭಾಗಗಳಾದ ಬೆರಳು, ಮೂಗು, ಕಿವಿ ಇವುಗಳಲ್ಲಿ ಯಾವುದೊಂದನ್ನೇ ಕತ್ತರಿಸಿದರೂ ಆ ದೇಹಕ್ಕೆ ಹಾನಿಯಿಲ್ಲವೇ? ಅಪಾಯವಿಲ್ಲವೇ? ಇದನ್ನು ತಡೆಗಟ್ಟುವುದು ಬುದ್ಧಿಯ ಕೆಲಸ. ಅದರಂತೆಯೇ ಕನ್ನಡಿಗರು ಅಂದಗೇಡಿಗಳಾಗದಂತೆ ನೋಡುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಅನ್ಯ ಪ್ರಾಂತೀಯನು ತನ್ನ ಭಾಷೆಯನ್ನು ಇತರರ ಮೇಲೆ ಹೇರಿದರೆ ಅದು ಅವನ ಭಾಷಾಭಿಮಾನ; ಆದರೆ ಕನ್ನಡಿಗರು ಕನ್ನಡತ್ವವನ್ನು ಉಳಿಸಿಕೊಳ್ಳಹೋದರೆ ಮಾತ್ರ ಅದು ದುರಭಿಮಾನ”

“ಹಾಗಾದರೆ ನಿಮ್ಮ ಅಂಬೋಣವೇನು?”

“ನನ್ನ ಹಂಬಲವಿಷ್ಟೇ: ಕನ್ನಡಿಗನು ಕಡೆಯವರೆಗೂ ಕನ್ನಡಿಗನಾಗಿಯೆ ಉಳಿಯಬೇಕು. ತನ್ನ ಪೀಳಿಗೆಯು ಕೂಡ ಮುಂದೆ ಕನ್ನಡದ್ದಾಗಿಯೇ ಉಳಿಯುವಂತೆ ಮಾಡಬೇಕು. ಜಾತಿ-ಮತಗಳೂ ನಮಗೆ ಬೇಡ. ನಮಗೆ ಬೇಕು ಕನ್ನಡ. ಕನ್ನಡದ ಮುನ್ನಡೆಗಾಗಿ ದೇಹ ಸವೆಯಿಸುವವರು ಬೇಕು. ನಾನೊಬ್ಬ ಕನ್ನಡ ‘ಮಿಶನರಿ’; ನನ್ನನ್ನು ನಾನೇ ನೇಮಿಸಿಕೊಂಡಿದ್ದೇನೆ! ಇಂದಿನ ನನ್ನ ‘ಮಿಶನ್’ ಮುಗಿದಂತಾಯಿತು. ನನ್ನ ಈ ವಿಚಾರಗಳನ್ನು ಕೇಳಿ ನೀವು ನನ್ನನ್ನು “ಹುಚ್ಚ” ನೆನ್ನಬಹುದು. ಈಗಾಗಲೆ ಎಷ್ಟೋ ಜನರು ಹಾಗೆ ನನ್ನನ್ನು ಕರೆದಿದ್ದಾರೆ. ಹಾಗೆ ಕರೆಯಿಸಿಕೊಳ್ಳುವುದರಲ್ಲಿ ನನಗೆ ಆನಂದವಿದೆ. ಈ ಹುಚ್ಚು ಎಲ್ಲ ಕನ್ನಡಿಗರಿಗೆ ಹಿಡಿಯಬೇಕೆಂದು ಬಯಸಿದ್ದೇನೆ. ಈಗಾಗಲೆ ಕೆಲವರಿಗೆ ಹುಚ್ಚು ಹಿಡಿದಿದೆ; ಅದನ್ನು ನೋಡಿ ನನಗೂ ಆನಂದ.

ಇಷ್ಟು ಮಾತು ಕತೆಯನ್ನು ಮುಗಿಸುವ ಹೊತ್ತಿಗೆ ಶ್ರೀಮಾನ್ ಕಬ್ಬೂರರ ತುಟಿಯಿಂದ ವಿಶಾಲವಾದ ನಗೆಯೊಂದು ಹೊರಬಿದ್ದಿತು. “ನಿಮ್ಮಲ್ಲಿ ಇದ್ದ ಬಿದ್ದ ಶಕ್ತಿ, ಜಾಣತನವನ್ನು ಹುಚ್ಚು ಹಿಡಿಸುವುದರಲ್ಲಿಯೇ ಉಪಯೋಗಿಸುವಿರಾ?” ಎಂದರು.

“ಅಹುದು, ನನ್ನಲ್ಲಿಯದಷ್ಟೇ ಅಲ್ಲ, ಉಳಿದ ಜನರ ಶಕ್ತಿ ಜಾಣತನಗಳನ್ನೂ ಈ ಕೆಲಸಕ್ಕೆ ಕಡತರಲು ಸಿದ್ಧನಿದ್ದೇನೆ” ಎಂದೆ. ಎಲ್ಲರೂ ಘೊಳ್ಳೆಂದು ನಕ್ಕರು.

ಆಮೇಲೆ ಹೊರತನಕ ಬಂದು ನಮ್ಮೆಲ್ಲರನ್ನೂ ಬೀಳ್ಕೊಟ್ಟರು ಕೃಷ್ಣರಾಯರು.

ಆ ದಿನ ರಾತ್ರಿಯೆಲ್ಲ ನನ್ನ ತಲೆಯಲ್ಲಿ ಒಂದೇ ವಿಚಾರ “ಈ ನನ್ನ ಹುಚ್ಚು ಎಲ್ಲರಿಗೂ ಹಿಡಿದರೆ....?”

> ಕನ್ನಡಿಗರಲ್ಲಿ ಕನ್ನಡದ ಹುಚ್ಚನ್ನು ಹರಡುವುದೇ
> **ಜಯಂತಿಯ ಗುರಿ!**
> ಅಂತಹ ಹುಚ್ಚು ಹಿಡಿದರಲ್ಲದೆ ನಮಗೆ ಕನ್ನಡಿಗರಾಗಿ ಬಾಳುವ ಜೀವನವಿಲ್ಲ! ಆದುದರಿಂದಲೇ ಎಲ್ಲರೂ ‘ಜಯಂತಿ’ ಯನ್ನು ಓದಿರಿ!

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರ ಮಾಸಪತ್ರಿಕೆ

ಪನವೇಲದ ಧೂತಪಾಪೇಶ್ವರ ಕಂಪನಿಯ ಕನ್ನಡ ಮುಖಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಎಜೆನ್ಸೀಜ್, ಹುಬ್ಬಳ್ಳಿ.

ಪುನಃ ಪೂಜಾ

ಶ್ರೀ. ಎಚ್. ಎ. ಭಟ್ಟ ಬಿ. ಎಸ್‌ಸಿ.

ಅವರಿಂದ

ಕೊನೆಗೂ ಚಿನ್ನಯ್ಯನ ಪರೀಕ್ಷೆಯಲ್ಲಿ ಚೆನ್ನಿ ಇಳಿದಳು. ರಾಮಯ್ಯನೆ ಚಿನ್ನಯ್ಯನೆಂದು ಗೊತ್ತಾದಾಗ ಚೆನ್ನಿಗಾದ ಸಂಭ್ರಮವು ಎಂತಹದು? ಚೆನ್ನಿ ಮತ್ತೆ ಚಿನ್ನಯ್ಯನ ಬಗೆಗೊಳದ ರಾಜಹಂಸಿಯಾದಳು!

★

ಚೆನ್ನಯ್ಯನ ಕಬ್ಬಿನ ಹಿತ್ತಲಲ್ಲಿ ಈಚೀಚೆಗೆ ಕಳ್ಳತನ ತುಂಬ ಹೆಚ್ಚಾಗುತ್ತಿತ್ತು. ಬೇಲಿಗೆ ಎಷ್ಟು ಮುಳ್ಳು ಹಾಕಿದರೂ ಪ್ರಯೋಜನವಿಲ್ಲದೆ ಹೋಗುತ್ತಿತ್ತು. ಬೆಳಗಾಗಿ ಎದ್ದು ನೋಡುವಾಗ ಹತ್ತೆಂಟು ಕಬ್ಬಿನ ಕೋಲುಗಳು 'ಕಾಣೆ'ಯಾಗಿ ಬಿಡುತ್ತಿದ್ದುವು. ಹದಿನೈದು ದಿವಸದಲ್ಲಿ ಒಂದು 'ಪಟ'ವೇ ಬಯಲಾಗಿ ಹೋಗಿತ್ತು. ಇದನ್ನು ಕಂಡು ಚಿನ್ನಯ್ಯನಿಗೆ ಹೊಟ್ಟೆ ಕಿವುಚಿದಂತಾಯಿತು. ತನ್ನ ಮೈಬೆವರ ನೀರಿಂದ ಅವು ಬೆಳೆದಿದ್ದುವು. ಅರಗಿಳಿಯಂತೆ ಇದ್ದ ಅವನ ಹೆಂಡತಿ ಚೆನ್ನಿ ಸಹ, ಬಿಸಿಲ ಬೇಗೆಯಲ್ಲಿ ಅದಕ್ಕೆ ಗೊಬ್ಬರ ಹೊತ್ತಿದ್ದಳು; ನೀರು ಹೊಯ್ದಿದ್ದಳು. ಮನೆಗಿನ್ನೂ ಹೊಸತಾಗಿ ಕರೆತಂದ ಹೆಣ್ಣು, ತನ್ನೊಡನೆ ಸರಿಸಮಾನವಾಗಿ ದುಡಿದಿದ್ದರಿಂದ ಆ ಕಬ್ಬಿನ ಹಿತ್ತಲಿನ ಮೇಲಿದ್ದ ಅವನ ಮಮತೆ ಇನ್ನೂ ಹೆಚ್ಚಿದ್ದಿತು. ಶ್ರಮಕ್ಕೆ ಪ್ರತಿಫಲವಾಗಿ ಕೋಲುಗಳು ಸೊಗಸಾಗಿ ಬೆಳೆದು ನಿಂತಿದ್ದುವು. ಅದರ ಮಧ್ಯದಲ್ಲಿ ಸೋಗೆ ಉದುರಿಸಲು ಚೆನ್ನಿಯೊಡನೆ ನುಗ್ಗಿ ಹೋಗುವಾಗ ಅವನಿಗೆ ಅತ್ಯಾನಂದವಾಗುತ್ತಿದ್ದಿತು. ಬೆಲ್ಲದ ಬೆಲೆಯೂ ಏರುತ್ತಿದ್ದಿತು. ಇಂತಹ ಹಿತ್ತಲು ಕಳ್ಳರ ಪಾಲಾಗುವುದನ್ನು ಯಾವ ಒಕ್ಕಲಿಗ ತಾನೇ ಸಹಿಸಿಯಾನು? ಕೃತ ನೂರಾರು ರೂಪಾಯಿಗಳನ್ನೂ ಕಳೆದು ಕೊಂಡಾನು. ಆದರೆ ತಾನು ನೆಟ್ಟ ಒಂದು ಕೆಲಸಕ್ಕೆ ಬಾರದ ಗಿಡ ಅನ್ಯಾಯವಾಗಿ ಸತ್ತರೆ ಅವನಿಗೆ ಆಗುವ ವ್ಯಸನವನ್ನು ತಡೆದುಕೊಳ್ಳಲಾರನು. ರಾತ್ರಿಯಲ್ಲಿ ಹೋಗಿ ಕಬ್ಬಿನ ಹಿತ್ತಲಲ್ಲಿ ಉಳಿಯೋಣವೆಂದರೆ ಮನೆಯಲ್ಲಿ ಚೆನ್ನಿಯೊಬ್ಬಳೇ; ಅಲ್ಲದೆ ಆ ಸುಖ-ಜೀವನದ ಆರಂಭದಲ್ಲಿ, ವೈವಾಹಿಕ ಜೀವನದ ಪ್ರಭಾತದಲ್ಲಿ ನಲ್ಲೆಯನ್ನಗಲಿ ರಾತ್ರಿಯನ್ನು ಕಳೆಯುವುದು ಚಿನ್ನಯ್ಯನಿಗೆ ಅಸಾಧ್ಯವಾದ ವಿಷಯವಾಗಿತ್ತು. ಆದಕ್ಕೋಸ್ಕರ ಚಿನ್ನಯ್ಯ ಕೋವಿ ಕಟ್ಟುವುದಾಗಿ ಹೇಳಿದ: ಪ್ರಚಾರಮಾಡಿದ. ಹಂದಿ ಮೊದಲಾದ ಪ್ರಾಣಿಗಳು ಬರುವದಾರಿಯಲ್ಲಿ ಬಳ್ಳಿಯನ್ನು ಅಡ್ಡಕಟ್ಟಿ, ಅದರ ತುದಿಯನ್ನು ಕೋವಿಯ ಕುದುರೆಗೆ ಸಿಕ್ಕಿಸುತ್ತಾರೆ. ಪ್ರಾಣಿ ನುಗ್ಗಿದ ಕೂಡಲೆ 'ಈಡಾಗಿ' ಗುಂಡು ಅದಕ್ಕೆ ಬೀಳುತ್ತದೆ. ಇದಕ್ಕೆ ಬಹಳ ಬುದ್ಧಿವಂತಿಕೆ ಬೇಕು. ಚಿನ್ನಯ್ಯನ ಭಯಪ್ರದರ್ಶನದಿಂದ ಪ್ರಯೋಜನವೇನೂ ಆಗಲಿಲ್ಲ. ಕೊನೆಗೊಂದು ದಿವಸ ಕೋವಿ ಕಟ್ಟಿಯೇ ಬಿಟ್ಟ.

'ರಾಮಯ್ಯಾ, ನನ್ನ ಮನೆಯ ಅನ್ನ ಉಂಡು ನನ್ನೊಡನೇ ಜಗಳಕ್ಕೆ ನಿಲ್ಲೀಯಲ್ಲಾ!'

ಕೋವಿಯನ್ನೇನೋ ಕಟ್ಟಿದ್ದಾಯಿತು. ಆದರೆ ಚಿನ್ನಯ್ಯನ ಮನಸ್ಸಿಗೆ ಸಮಾಧಾನವಿಲ್ಲ. ಯಾವ ಸಣ್ಣ ಶಬ್ದವಾದರೂ ಕೋವಿಯ ಶಬ್ದವೇನೋ ಎಂದು ಎದ್ದು ನೋಡುವನು. ಕನ್ನವಸಿಗೆ ಏಕ್ಕೆ ಕೊಡುವವ

ವೆರಿದ್ದಾನೆ. ತನಗೇಕೆ ಆ ಹವ್ಯಾಸ ಎಂದುಕೊಳ್ಳುವನು. ತನ್ನ ತಪ್ಪೇನಿಲ್ಲ. 'ಮಾಡಿದ್ದುಣ್ಣೋ ಮಹಾರಾಯ' ಎಂದು ಸಮಾಧಾನ ಹೇಳಿಕೊಳ್ಳುವನು. ತಾನು ಪೂರ್ವಭಾವಿಯಾಗಿ ಗ್ರಾಮದಲ್ಲೆಲ್ಲಾ ಕೋವಿಕಟ್ಟುವುದಾಗಿ ಪ್ರಚಾರಮಾಡಿದ್ದ. ಈಗ ಗುಂಡಿನೇಟು ಬಿದ್ದು ಸತ್ತರೆ ತಾನದಕ್ಕೆ ಜವಾಬ್ದಾರನಲ್ಲ. ತನ್ನನ್ನು ಯಾರೂ ಬಂದರೆ ಪಡಿಸಲಾರರು— ಎಂದು ಹೇಳಿಕೊಳ್ಳುವನು. ಆದರೆ ಕಬ್ಬನ್ನು ಇನ್ನೊಮ್ಮೆ ಬೆಳೆಯಬಹುದು, ದುಡ್ಡನ್ನು ಸಂಪಾದಿಸಬಹುದು, ಮನುಷ್ಯ ಸತ್ತರೆ? ಅವನ ಮನಸ್ಸು ಮನುಷ್ಯನೊಬ್ಬ ಸತ್ತು ತನ್ನ ಹಿತ್ತಲ ಬಾಗಿಲಲ್ಲಿ ಬಿದ್ದಿರುವ ದುರಂತ ದೃಶ್ಯವನ್ನು ಚಿತ್ರಿಸಿಕೊಂಡಿತು. ಇಲ್ಲಿ ಮನುಷ್ಯರ ಮುಂದೆ ತನ್ನ ನಿರಪರಾಧಿತ್ವವನ್ನು ಸ್ಥಾಪಿಸಿಕೊಳ್ಳಬಹುದು; ಆದರೆ ಯಮಧರ್ಮರಾಯನ ಮುಂದೆ! ಒಂದು ಕೋಳಿಕೆ ಕೊಲ್ಲುವಾಗ ಅವನ ಕರುಳು 'ಚುರುಕ್' ಎನ್ನುತ್ತಿತ್ತು. ಅವನು ಹುಡುಕಿಯಾದ ಮಾತ್ರಕ್ಕೆ ಮನುಷ್ಯ ಪ್ರಾಣಿಯಲ್ಲವೇ? ಎಷ್ಟು ಆಶೆಯಿಂದ ಬಂದ ಪ್ರಾಣ, ಕ್ಷಣಮಾತ್ರದಲ್ಲಿ ಎಲ್ಲ ಬಿಟ್ಟು ಕೊರಟು ಹೋಗಬೇಕೆ? ಅವನಿಗೆ ಶಿಕ್ಷೆ ಕೊಡಲು ತಾನಾರು!—ಹೀಗೆ ವಿಚಾರತರಂಗಗಳಲ್ಲಿ ಸಿಕ್ಕಿ, ಕೊನೆಗೆ ಕೋವಿಯನ್ನು ನೋಡೋಣವೆಂದು ಎದ್ದು ಹೊರಗೆ ಬಂದ. ಚೆನ್ನಿಯು ತಬ್ಬನ್ನು ಹಿಡಿಸಿಕೊಂಡು, ಅವಳಿಗೆ ಎಚ್ಚರವಾಗದಂತೆ ಅವಳ ಕೈ ಕೆಳಕ್ಕಿಟ್ಟು ಹೊರಗೆ ಬಂದ. ನಾಲ್ಕಾರು ಮಾರು ಹೋಗುವುದಕ್ಕಿಲ್ಲ. ಅಷ್ಟರಲ್ಲಿಯೆ ಗುಂಡಿನ ಶಬ್ದ ಕಿವಿಯನ್ನೊಡೆಯುವಂತೆ ಕೇಳಿಸಿತು. ಚಿನ್ನಯ್ಯ ಅಲ್ಲಿಯೇ ಕುಳಿತುಬಿಟ್ಟನು. ಸ್ವಲ್ಪಹೊತ್ತಿನ ಮೇಲೆ ಚೇತರಿಸಿಕೊಂಡೆದ್ದು ಮುಂದೆ ಹೋದನು.

ಚಂದ್ರನು ಆಗ ತಾನೆ ಹುಟ್ಟುತ್ತಿದ್ದ. ಚಂದ್ರನ ಮಸುಕು ಮಸುಕು ಬೆಳಕಿನಲ್ಲಿ ಒಂದು ಮನುಷ್ಯಾಕಾರವು ತನ್ನ ಹಿತ್ತಲ ಮುಂದೆ ಬಿದ್ದಿರುವುದು ಕಂಡಿತು. ಚಿನ್ನಯ್ಯನ ಮೈಮೇಲೆ ಬಿಸಿನೀರೆರಚಿದಂತಾಯಿತು. ಮೈಯೆಲ್ಲಾ ನಡುಗಲಾರಂಭವಾಯಿತು. ಬೆವರು ಕೋಡಿಹರಿಯಿತು. ಹೆಜ್ಜೆಯನ್ನು ಎತ್ತಿಡಲಾರದಂತಾಯಿತು. ಹೇಗೋ ಹೇಗೋ ಏಳುತ್ತ ಮನೆಗೆ ಬಂದನು. ಮನೆಯಲ್ಲಿ ಚೆನ್ನಿ ಗಾಬರಿಯಿಂದ ಎದ್ದು ಕುಳಿತಿದ್ದಳು. ಮೇಲುಸಿರು ಬಿಡುತ್ತ ಚಿನ್ನಯ್ಯ ಬಂದು ಎದುರಿಗೆ ನಿಂತನು. ಅವನ ಮುಖದಲ್ಲಿ ಪ್ರೇತಕಳೆ ಕುಣಿಯುತ್ತಿತ್ತು. ಮುಖ ಬಿಳಿಚಿಕೊಂಡಿತ್ತು. ಮಾತೇ ಹೊರಡದು. ಚೆನ್ನಿ ಎದ್ದು ನಿಂತು 'ಏನು!' ಎಂದು ಗಾಬರಿಯಿಂದ ಕೇಳಿದಳು; ಉತ್ತರವಿಲ್ಲ. 'ಏನು? ಏನಾಯಿತು?' ಎಂದು ಚೆನ್ನಿ ಕಿರಿಚಿಕೊಂಡಳು. ಜವಾಬಿಲ್ಲ. ಚಿನ್ನಯ್ಯ ಕಲ್ಲಿನಂತೆ ನಿಂತು ಬಿಟ್ಟಿದ್ದಾನೆ. ಅವನ ಭುಜವನ್ನು ಹಿಡಿದು ಅಲುಗಿಸಿ ಚೆನ್ನಿ 'ಏನಾಯಿತು? ಏನಾಯಿತು?' ಎಂದು ಅಳುತ್ತ ಕೂಗಿದಳು. ಅವನು ಅಲ್ಲಿಯೇ ಕುಳಿತುಬಿಟ್ಟನು. ಚೆನ್ನಿ ಅವನ ತಲೆಗೆ ನೀರು ಹಾಕಿ ತಟ್ಟಿದಳು; ಗಾಳಿ ಬೀಸಿದಳು. ಸ್ವಲ್ಪ ಸಮಯದ ಮೇಲೆ ಚಿನ್ನಯ್ಯ ಮಾತಾಡಿದ; ನಡೆದ ವಿಷಯವನ್ನೆಲ್ಲಾ ಹೇಳಿದ. ಕೊನೆಗೆ ತಾನು ಮನೆಯಿಂದ ಓಡಿ ಹೋಗುವುದೇ ಉತ್ತಮವೆಂದೂ ಹೇಳಿದ. ಇಲ್ಲದಿದ್ದರೆ ಪೋಲೀಸಿನವರು ಬಂದು ಚಿತ್ರಹಿಂಸೆ ಕೊಟ್ಟು ಪೀಡಿಸುವರೆಂದು ಸಮಾಧಾನ ಹೇಳಿದ. ಓಡಿಹೋದರೆ ಮುಂದೇನು ಎಂಬುದನ್ನು ಯಾರೂ ಯೋಚಿಸಲಿಲ್ಲ. 'ಬೀಸುವದೊಣ್ಣೆಯ ಏಟು ತಪ್ಪಿದರೆ ಸಾವಿರ ವರ್ಷ ಆಯುಸ್ಸು' ಎಂಬಂತೆ ಬಂದ ಗಂಡಾಂತರ ಕಳೆದುಕೊಳ್ಳುವುದೇ ಅವರ ಉದ್ದೇಶ. ವ್ಯವಹಾರಜ್ಞಾನವಿಲ್ಲದ ಚೆನ್ನಿ ಅದಕ್ಕೊಪ್ಪಿದಳು. ಸ್ವಲ್ಪದಿವಸ ಕಳೆದಮೇಲೆ ತಾನು ಹಿಂದಿರುಗಿ ಬಂದು ಅವಳನ್ನು ಕರೆದು ಕೊಂಡು ಹೋಗುವುದಾಗಿ ಚಿನ್ನಯ್ಯ ಭರವಸೆ ಇತ್ತನು. ನಾಲ್ಕಾರು ಪುಡಿಗಾಸು ಕಟ್ಟಿಕೊಂಡು, ಚೆನ್ನಿಗೆ ತಕ್ಕ ಎಚ್ಚರಿಕೆ ಹೇಳಿ, ಚಿನ್ನಯ್ಯ ಹೊರಟನು. ಚೆನ್ನಿ ಕಂಬನಿಗರೆಯುತ್ತ ಅವನನ್ನು ಬೀಳ್ಕೊಟ್ಟಳು; ಮರಳಿ ಬಂದು ಬಾಗಿಲು ಹಾಕಿಕೊಂಡು ಅತ್ತಳು.

* * *

ವರುಷಗಳು ಹನ್ನೆರಡು ಕಳೆದಿವೆ. ಚೆನ್ನಿ ಒಬ್ಬಳೇ ಆದ್ದರಿಂದ ಸಂಬಂಧದ ಒಂದು ಮುದುಕಿಯನ್ನು ಕರೆತಂದು ಜೊತೆಯಲ್ಲಿಟ್ಟುಕೊಂಡಿದ್ದಾಳೆ. ತಾನೇ ಆಳುಕಾಳಿಟ್ಟು ಗದ್ದೆ ಸಾಗಿಸಿದಳು. ಆದರೆ ಅನುಭವ ಸಾಲದ್ದರಿಂದಲೂ, ಧಾರಣೆವಾಸಿಗಳು ತಗ್ಗಿದ್ದರಿಂದಲೂ, ನಷ್ಟವಾಗಿ, ಸಾಲವಾಗಿ ಗದ್ದೆಯೆಲ್ಲಾ ಕೈಬಿಟ್ಟು ಹೋಗಿದೆ. ಹರಾಜಿನಲ್ಲಿ ಗದ್ದೆಯನ್ನು ಪಡೆದುಕೊಂಡ ತಿಮ್ಮಯ್ಯನು ಧರ್ಮಭೀರುವಾದ್ದರಿಂದ, ಸ್ವಲ್ಪ ಗದ್ದೆಯನ್ನು ಚೆನ್ನಿಗೋಸ್ಕರ ಬಿಟ್ಟು ಮನೆಯನ್ನೂ ಬಿಟ್ಟಿದ್ದಾನೆ. ಹಸುಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ಕೂಲಿ ಮಾಡಿ ಚೆನ್ನಿ ಹೇಗೋ ಜೀವನ ಮಾಡುತ್ತಿದ್ದಾಳೆ. ಪೋಲೀಸರು ವಿಚಾರಣೆ ನಡೆಯಿಸಿ ಚಿನ್ನಯ್ಯ ನಿರಪರಾಧಿಯೆಂದು ತೀರ್ಮಾನಿಸಿದ್ದಾರೆ. 'ಅವನು' ಸತ್ತದ್ದು ಆಕಸ್ಮಾತಾ ಎಂದು ನಿರ್ಣಯವಾಗಿದೆ. ಆದರೆ ಚಿನ್ನಯ್ಯನಿಗೆ ಇದು ತಿಳಿಯುವ ಬಗೆ ಹೇಗೆ? ಅವನೆಲ್ಲಿದ್ದಾನೆಂಬುದು ಯಾರಿಗೂ ತಿಳಿಯದು. ಕಾಗದಗೀಗದ ಬರೆಯಿಸಿದರೆ ತಾನಿರುವುದು ತಿಳಿಯುವುದು ಎಂದೇನೋ, ಅವನು ಕಾಗದ ಬರೆಯಿಸಿರಲಿಲ್ಲ. ಚೆನ್ನಿಗೆ ಸೀರುಡಿಕೆ (ಪುನರ್ವಿವಾಹ) ಮಾಡಿಕೊಳ್ಳಬೇಕೆಂದು ಅನೇಕರು ಒತ್ತಾಯಪಡಿಸಿದರು. ಆದರೆ ಆಕೆ ಒಪ್ಪಲಿಲ್ಲ. ವರುಷ ಹನ್ನೆರಡಾದರೂ ಚಿನ್ನಯ್ಯನ ಚಿತ್ರ ಅವಳ ಮನಸ್ಸಿನಿಂದ ಅಳಿಸಿ ಹೋಗಲಿಲ್ಲ. ಅವನು ಬಂದೇ ಬರುವನು ಎಂದು ಅವಳು ನಂಬಿದ್ದಾಳೆ.

* * *

ಒಂದು ದಿನ ಸಂಜೆಯ ಹೊತ್ತಿನಲ್ಲಿ ಸುಮಾರು ೩೫ ವರ್ಷದ ತರುಣನೊಬ್ಬನ, ಚೆನ್ನಿಯ ಮನೆಯ ಬಾಗಿಲಿಗೆ ಬಂದು ನಿಂತನು. ತಾನು ಪರದೇಶದವನೆಂದೂ ಕತ್ತಲೆಯಾದ್ದರಿಂದ ರಾತ್ರಿ ಉಳಿಯಲು ಸ್ಥಳ ಕೊಡಬೇಕೆಂದೂ ಕೇಳಿಕೊಂಡನು. ಚೆನ್ನಿ ಒಬ್ಬೊಂಟಿಗಳಾದರೂ ಆ ಕತ್ತಲೆಯ ಸಮಯದಲ್ಲಿ ಆಶ್ರಯ ಬೇಡಿದವನಿಗೆ ಇಲ್ಲವೆನ್ನಲಾಗಲಿಲ್ಲ. ಅವನನ್ನ ಅವನುಂಡು ಹೋಗುವನೆಂದು ಸಮಾಧಾನ ತಾಳಿ, ಒಂದವನಿಗೆ ಅಂಬಲಿ ಮಾಡಿ ಬಡಿಸಿದಳು. ಅವನು ಅದನ್ನು ಸುರಿಯುತ್ತಿರುವಾಗ ಅನಿವಾರ್ಯವಾಗಿ, ಮಾತು ಅವನ ಪೂರ್ವೋತ್ತರದ ಕಡೆಗೆ ತಿರುಗಿತು. ತನಗಾರೂ ತನ್ನವರೇಬವರು ಇಲ್ಲವೆಂತಲೂ, ಎಲ್ಲಿಯಾದರೂ

ಕೆಲಸ ಸಿಗುವುದಾದರೆ ನಿಲ್ಲುವುದಾಗಿಯೂ ಅವನು ಹೇಳಿದನು. ಗಂಡನು ಸಂಪಾದಿಸಿಟ್ಟ ಆಸ್ತಿಯನ್ನು ಚೆನ್ನಿ ಕಳೆದಿದ್ದಳು. ಅದನ್ನು ಪುನಃ ಸಂಪಾದಿಸಬೇಕೆಂಬಾಶೆ ಅವಳ ಮನಸ್ಸಿನಲ್ಲಂಕುರಿಸಿತು. ಮುಂದೆ ಮಾತಾಡುತ್ತಾ ಹೋದಂತೆ ಅವನು ಸಂಬಳವನ್ನೇನೂ ಅಪೇಕ್ಷಿಸುವವನಲ್ಲವೆಂತಲೂ, ಅನ್ನ-ಬಟ್ಟೆಗಳಿಗೆ ದೊರೆತರೆ ಮನೆಯವರ ಶ್ಲೊಬ್ಬನಂತೆ ಹೊಂದಿಕೊಂಡಿರುವುದಕ್ಕೆ ಇಷ್ಟವಿರುವುದಾಗಿಯೂ ತಿಳಿಯಿತು. ಂಬಲಿಯೂಟ ಮುಗಿವ ಹೊತ್ತಿಗೆ ಅವನು ಲ್ಲಿ ಕೆಲಸಕ್ಕೆ ನಿಲ್ಲುವುದೆಂದು ನಿಶ್ಚಿತವಾತ್ತು. ಅವನಿಗೆ ಹುಲ್ಲು ಹಾಸಿಗೆ ಮಾಡಿ ಹೊದೆಯಲು ಕಂಬಳಿ ಕೊಟ್ಟಳು. ಹೊರಗೆ ಂಗುಲಿಯ ಮೇಲೆ ರಾಮಯ್ಯ, ಒಳಗೆ ಚೆನ್ನಿ. ಇಷ್ಟು ದಿನವೂ ಸ್ವಸ್ಥವಾಗಿದ್ದ ಚೆನ್ನಿಯ ಮನಸ್ಸು ಇಂದು ಅಸ್ವಸ್ಥವಾಗಿತ್ತು. ಕಾರಣವನ್ನು ಎಷ್ಟು ಯೋಚಿಸಿದರೂ ಗೆಹರಿಯಲಿಲ್ಲ. ಅವನ ನೋಟದಿಂದಲೇ ಾಗಾಗಿರಬಹುದೆ? ತನ್ನ ಗಂಡನು ಹೊರಟು ಹೋಗಿ ಅನೇಕ ವರ್ಷಗಳಾನೂ ತನ್ನ ಹೃದಯ ತನಗೆಂದೂ ಅವಿಧೇಯವಾಗಿ ವರ್ತಿಸಿರಲಿಲ್ಲ. ಇಂದೆಯೂ ವರ್ತಿಸರದು.

ಅಂದಿನಿಂದ ರಾಮಯ್ಯ ಕೆಲಸದ ಎಲ್ಲಾ ಾರವನ್ನೂ ವಹಿಸಿಕೊಂಡು, ಮನೆಯೇ ನ್ನದೆಂಬುವಷ್ಟು ಉತ್ಸಾಹದಿಂದ ಕೆಲಸ ಾರಂಭಿಸಿದನು; ಪೈರುಗಳು ಹುಲುಸಾಗಿ ೆಳೆದುವು. ಚೆನ್ನಿಯೂ ಸಹಾಯಕ್ಕೆ ಹೋಗುತ್ತಿದ್ದಳು. ಒಂದು ಮನೆಯ ಲ್ಲಿಯೆ ಇರುವಾಗ ಸ್ವಾಭಾವಿಕವಾಗಿ ಲುಗೆ ಬೆಳೆಯಿತು. ಅದಕ್ಕೆ ತಕ್ಕಂತೆ ಮುದುಕಿಯೂ ಸತ್ತು ಹೋಯಿತು. ಳ್ಳಿಯ ಕೆಲಸವು ಇಬ್ಬರನ್ನೂ ಒಟ್ಟಿಗೆ ುತ್ತಿದ್ದಿತು. ಗೊಬ್ಬರ ತುಂಬಿ ಹೊರುಾಗ ಅವನ ಮೈ ಇವಳಿಗೆ ತಾಗಿದರೆ ೈಯೆಲ್ಲಾ ಪುಳಕಿತವಾಗುತ್ತಿದ್ದಿತು. ಹೊರೆಯನ್ನು ಹೊರಿಸುವಾಗ ಅವನ ್ಪರ್ಶವಾದರೆ ಒಂದು ತರದ ವಿಚಿತ್ರ ನುಭವವಾಗುತ್ತಿದ್ದಿತು. ಒಂದು ಮನೆ ಲ್ಲಿ ಗಂಡನಿಲ್ಲದ ಒಬ್ಬ ಹೆಂಗುಸೂ ಂಡತಿಯಿಲ್ಲದ ಒಬ್ಬ ಗಂಡುಸೂ ಒಟ್ಟಿಗೆ ಇದ್ದರೆ ಜನರು ಸುಮ್ಮನೆ ಹೇಗಿದ್ದಾರು? ಹಳ್ಳಿಯವರು ಗುಸಗುಸ ಮಾತಾಡಹತ್ತಿದರು. ಇದು ಚೆನ್ನಿಯ ಕಿವಿಗೆ ಬೀಳದಿರಲಿಲ್ಲ. ಅದನ್ನು ಕೇಳಿ ಅವಳಿಗೆ ಗಾಬರಿಯಾಯಿತು. ಇನ್ನೊಬ್ಬರ ಬಾಯಿಂದ ಆ ವಿಚಾರ ಬರುವವರೆಗೆ ತಾನವನನ್ನು ಪ್ರೀತಿಸುತ್ತಿದ್ದೇನೆಂಬುದರ ಅರಿವಿಲ್ಲದೆ ಅವನನ್ನು ಪ್ರೀತಿಸುತ್ತಿದ್ದಳು. ಈಗ ತನ್ನಲ್ಲಾಗಿದ್ದ ಮಾರ್ಪಾಟಿನ ಕಾರಣ ತಿಳಿಯಿತು. ಮೊದಲಿನಂತೆ ಚಿನ್ನಯ್ಯನ ಯೋಚನೆ ಹೆಚ್ಚಾಗಿ ಬರುತ್ತಿರಲಿಲ್ಲ. ಅವನು ಪ್ರಾಯಶಃ ಸತ್ತಿರಬಹುದೆಂಬ ವಿಷಯವನ್ನು ಯೋಚಿಸಲು ಮನಸ್ಸು ಮೊದಲಿನಂತೆ ಹಿಂಜರಿಯುತ್ತಿರಲಿಲ್ಲ. ತಮ್ಮಿಬ್ಬರ ಪ್ರೀತಿಯನ್ನು ನೆನಪಿಗೆ ತರುತ್ತಿದ್ದ ಪ್ರದೇಶಗಳು ಮೊದಲಿನಂತೆ ಅವಳನ್ನು ಆಕರ್ಷಿಸುತ್ತಿರಲಿಲ್ಲ. ತಾನು ತನ್ನ ಗಂಡನಿಗೆ ದ್ರೋಹ ಮಾಡುತ್ತಿದ್ದೇನೆಂದು ಅವಳು ನಿಶ್ಚಯಿಸಿಬಿಟ್ಟಳು. ಏನಾದರೂ ಆಗಲಿ, ತನ್ನೊಡನೆ ತಾನೇ ಹೋರಾಡಬೇಕೆಂದು ಮನಸ್ಸು ಗಟ್ಟಿ ಮಾಡಿದಳು. ರಾಮಯ್ಯನ ವರ್ತನೆಯು ಸಂಶಯಾಸ್ಪದವಾಗಿತ್ತು. ಒಂದು ದಿನ ಮಾತಿನ ಮಧ್ಯದಲ್ಲಿ 'ಚಿನ್ನಯ್ಯ ಸತ್ತಿರಬಹುದು. ನೀನೇಕೆ ಬೇರೆ ಮದುವೆ ಮಾಡಿಕೋಬಾರದು?' ಎಂದು ಕೇಳಿದ್ದ. ಅವಳೇನೂ ಉತ್ತರ ಕೊಟ್ಟಿರಲಿಲ್ಲ. ಆ ಎರಡನೆಯ ಮದುವೆಯ ಮದುಮಣಿಗನು ತಾನೇ ಎಂಬುದನ್ನು ಅವನು ಬಾಯಿ ಬಿಟ್ಟು ಹೇಳಬೇಕಾಗಿರಲಿಲ್ಲ. ಆದ್ದರಿಂದ ರಾಮಯ್ಯ ಮನೆಯಲ್ಲಿಯೆ ಇದ್ದರೆ, ಎಂದಾದರೊಂದು ದಿನ ತನ್ನ ಮನಸ್ಸು ಹತೋಟಿ ಮೀರಿ ಹೋಗುವುದು ನಿಶ್ಚಯವೆಂದು ಚೆನ್ನಿ ಕಂಡುಕೊಂಡಳು.

ರಾಮಯ್ಯ ಕಬ್ಬಿನ ಹಿತ್ತಲಲ್ಲಿ ಕಬ್ಬಿಗೆ ಮಣ್ಣು ಹಾಕುತ್ತಿದ್ದನು. ಹಿತ್ತಲಲ್ಲಿ ಬೆಳೆದ ತರಕಾರಿ ತರಲು ಚೆನ್ನಿಯೂ ಅಲ್ಲಿಗೆ ಹೋದಳು. ಕೆಲಸದಲ್ಲಿದ್ದ ರಾಮಯ್ಯ ತಲೆಯೆತ್ತಿ ನೋಡಿ ಸಣ್ಣಗೆ ನಕ್ಕನು. ಚೆನ್ನಿ ಎಂತಹ ಗಟ್ಟಿ ಮನಸ್ಸು ಮಾಡಿದ್ದರೂ ಸಣ್ಣ ನಗು ಅವಳ ಮುಖದಲ್ಲಿಯೂ ಸುಳಿದು ಹೋಯಿತು. ರಾಮಯ್ಯ ಒಂದು ಕ್ಷಣ, ಮಾಡುತ್ತಿದ್ದ ಕೆಲಸಬಿಟ್ಟು, ಅವಳ ಕಡೆಗೆ ನೋಡಿದನು. ಅವಳಿಗೆ ಮರುಕ್ಷಣದಲ್ಲಿಯೆ ತಾನು ಮಾಡಿದ್ದಕ್ಕೆ ಬಹಳ ಸಂಕಟವಾಯಿತು. ತನ್ನ ಯತ್ನವಿಲ್ಲದೆ ಅವನ ನಗೆಗೆ ಅದರ ಹಿಂದಿರುವ ಆಹ್ವಾನಕ್ಕೆ ಅವಳು ಪ್ರೋತ್ಸಾಹಕೊಟ್ಟಿದ್ದಳು. ಅದರಿಂದ ಅವಳಿಗೆ ತನ್ನ ಮೇಲೆ ತಡೆಯಲಾರದ ಸಿಟ್ಟು ಬಂದಿತು. ಅದು ಕೂಡಲೆ ರಾಮಯ್ಯನ ಮೇಲೆ ತಿರುಗಿತು. ಇದಕ್ಕೆಲ್ಲಾ ಕಾರಣ ಅವನೆ. ಇದೇ ಸ್ಥಳದಲ್ಲಿ ಚಿನ್ನಯ್ಯ ಕೆಲಸಮಾಡುತ್ತಿದ್ದಾಗ ತಾನು ಬಂದು ನಿಂತು ನಕ್ಕು ನಗಿಸಿ ಅವನ ಕೆಲಸವನ್ನು ಹಗುರುಮಾಡುತ್ತಿದ್ದಳು. ಆದರೆ ಈಗ? ಚೆನ್ನಿ, ಗಂಭೀರವಾಗಿ "ರಾಮಯ್ಯ, ನೀನು ನಾಳೆಯೇ ನಮ್ಮ ಮನೆಯಿಂದ ಹೊರಟು ಹೋಗಬೇಕು" ಎಂದಳು.

ರಾಮಯ್ಯ ತಮಾಷೆಗೆ ಹೇಳುತ್ತಿರಬಹುದೆಂದು ಅವಳ ಮುಖದಕಡೆ ನೋಡಿದನು; ತಮಾಷೆಯಲ್ಲ!

ಪುನಃ ತನ್ನ ಕೆಲಸದಲ್ಲಿ ತೊಡಗಿ "ಯಾಕೆ?" ಎಂದು ಕೇಳಿದನು.

'ನಿನ್ನ ಕೆಲಸ ಇನ್ನುಂದೆ ಬೇಕಾಗಿಲ್ಲ!'

'ನಾನೇನು ಅಂತಹ ತಪ್ಪುಮಾಡಿದ್ದು?'

'ತಪ್ಪೂ ಇಲ್ಲ ಗಿಪ್ಪೂ ಇಲ್ಲ, ನನಗೆ ನೀನಿರುವುದು ಇಷ್ಟವಿಲ್ಲ!'

'ಆದಾಗದು, ಕಾರಣ ತಿಳಿಯಬೇಕು!'

'ನಾನು ಒಬ್ಬೊಂಟಿಗಳಾದ ಹೆಂಗುಸು, ನೀನಿರುವುದು ಸರಿಯಲ್ಲ'

ರಾಮಯ್ಯನು ನಕ್ಕನು.

'ಅದು ಗೊತ್ತಾದ್ದು ಇಂದೇನೋ?' ಎಂದನು; ಚೆನ್ನಿಗೆ ಸಿಟ್ಟು ಬಂದಿತು.

'ಇಂದೋ ಎಂದೋ, ನೀನು ಹೊರಡಬೇಕು' ಎಂದಳು.

'ಹೊರಡದಿದ್ದರೆ?' ರಾಮಯ್ಯ ಕೇಳಿದ.

ಇದನ್ನು ಕೇಳಿ ಚೆನ್ನಿಗೆ ಸಿಡಿಲು ಬಡಿದಂತಾಯಿತು. ಹೊರಡದಿದ್ದರೆ! ಬಲಾತ್ಕಾರ! ರಾಮಯ್ಯನ ದುರುದ್ದೇಶ ಸ್ಪಷ್ಟವಾಗಿ ಕಾಣುತ್ತಿದ್ದಿತು. 'ಹೊರಡದಿದ್ದರೆ! ಪೋಲೀಸು.... ನೆರೆಯವರನ್ನು ಕರೆಯುತ್ತೇನೆ' ಎಂದು ಚೆನ್ನಿ ಕಿರಿಚಿದಳು. ರಾಮಯ್ಯ ಶಾಂತನಾಗಿಯೇ ಹೇಳಿದ: 'ತಡೆ, ಯಾರು ಹೊರಡಬೇಕು ಗೊತ್ತಾಗುತ್ತೆ!'

ದೇವರಿದ್ದಾನೆ. ತನಗೇಕೆ ಆ ಹವ್ಯಾಸ ಎಂದುಕೊಳ್ಳುವನು. ತನ್ನ ತಪ್ಪೇನಿಲ್ಲ. 'ಮಾಡಿದ್ದುಣ್ಣೋ ಮಹಾರಾಯ' ಎಂದು ಸಮಾಧಾನ ಹೇಳಿಕೊಳ್ಳುವನು. ತಾನು ಪೂರ್ವಭಾವಿಯಾಗಿ ಗ್ರಾಮದಲ್ಲೆಲ್ಲಾ ಕೋವಿಕಟ್ಟುವುದಾಗಿ ಪ್ರಚಾರಮಾಡಿದ್ದ. ಈಗ ಗುಂಡಿನೇಟು ಬಿದ್ದು ಸತ್ತರೆ ತಾನದಕ್ಕೆ ಜವಾಬ್ದಾರನಲ್ಲ. ತನ್ನನ್ನು ಯಾರೂ ತೊಂದರೆ ಪಡಿಸಲಾರರು—ಎಂದು ಹೇಳಿಕೊಳ್ಳುವನು. ಆದರೆ ಕಬ್ಬನ್ನು ಇನ್ನೊಮ್ಮೆ ಬೆಳೆಯಬಹುದು, ದುಡ್ಡನ್ನು ಸಂಪಾದಿಸಬಹುದು, ಮನುಷ್ಯ ಸತ್ತರೆ? ಅವನ ಮನಸ್ಸು ಮನುಷ್ಯನೊಬ್ಬ ಸತ್ತು ತನ್ನ ಹಿತ್ತಲ ಬಾಗಿಲಲ್ಲಿ ಬಿದ್ದಿರುವ ದುರಂತ ದೃಶ್ಯವನ್ನು ಚಿತ್ರಿಸಿಕೊಂಡಿತು. ಇಲ್ಲಿ ಮನುಷ್ಯರ ಮುಂದೆ ತನ್ನ ನಿರಪರಾಧಿತ್ವವನ್ನು ಸ್ಥಾಪಿಸಿಕೊಳ್ಳಬಹುದು; ಆದರೆ ಯಮಧರ್ಮರಾಯನ ಮುಂದೆ! ಒಂದು ಮೇಕೆ ಕೊಲ್ಲುವಾಗ ಅವನ ಕರುಳು 'ಚುರುಕ್' ಎನ್ನುತ್ತಿತ್ತು. ಅವನು ಕಿಡುಕಿಯಾದ ಮಾತ್ರಕ್ಕೆ ಮನುಷ್ಯ ಪ್ರಾಣಿಯಲ್ಲವೇ? ಎಷ್ಟು ಆಶೆಯಿಂದ ಬಂದ ಪ್ರಾಣಿ, ಕ್ಷಣಮಾತ್ರದಲ್ಲಿ ಎಲ್ಲ ಬಿಟ್ಟು ಹೊರಟು ಹೋಗಬೇಕೆ? ಅವನಿಗೆ ಶಿಕ್ಷೆ ಕೊಡಲು ತಾನಾರು!—ಹೀಗೆ ವಿಚಾರ ತರಂಗಗಳಲ್ಲಿ ಸಿಕ್ಕಿ, ಕೊನೆಗೆ ಕೋವಿಯನ್ನು ಬಿಚ್ಚೋಣವೆಂದು ಎದ್ದು ಹೊರಗೆ ಬಂದ. ಚೆನ್ನಿಯ ತಬ್ಬನ್ನು ಬಿಡಿಸಿಕೊಂಡು, ಅವಳಿಗೆ ಎಚ್ಚರವಾಗದಂತೆ ಅವಳ ಕೈ ಕೆಳಕ್ಕಿಟ್ಟು ಹೊರಗೆ ಬಂದ. ನಾಲ್ಕಾರು ಮಾರು ಹೋಗುವುದಕ್ಕಿಲ್ಲ. ಅಷ್ಟರಲ್ಲಿಯೆ ಗುಂಡಿನ ಶಬ್ದ ಕಿವಿಯನ್ನೊಡೆಯುವಂತೆ ಕೇಳಿಸಿತು. ಚಿನ್ನಯ್ಯ ಅಲ್ಲಿಯೇ ಕುಳಿತು ಬಿಟ್ಟನು. ಸ್ವಲ್ಪಹೊತ್ತಿನ ಮೇಲೆ ಚೇತರಿಸಿಕೊಂಡೆದ್ದು ಮುಂದೆ ಹೋದನು.

ಚಂದ್ರನು ಆಗ ತಾನೆ ಹುಟ್ಟುತ್ತಿದ್ದ. ಚಂದ್ರನ ಮಸುಕು ಮಸುಕು ಬೆಳಕಿನಲ್ಲಿ ಒಂದು ಮನುಷ್ಯಾಕಾರವು ತನ್ನ ಹಿತ್ತಲ ಮುಂದೆ ಬಿದ್ದಿರುವುದು ಕಂಡಿತು. ಚಿನ್ನಯ್ಯನ ಮೈಮೇಲೆ ಬಿಸಿನೀರೆರಚಿದಂತಾಯಿತು. ಮೈಯೆಲ್ಲಾ ನಡುಗಲಾರಂಭವಾಯಿತು. ಬೆವರು ಕೋಡಿಹರಿಯಿತು. ಹೆಜ್ಜೆಯನ್ನು ಎತ್ತಿಡಲಾರದಂತಾಯಿತು. ಹೇಗೋ ಹೇಗೋ ಏಕುತ್ತ ಮನೆಗೆ ಬಂದನು. ಮನೆಯಲ್ಲಿ ಚೆನ್ನಿ ಗಾಬರಿಯಿಂದ ಎದ್ದು ಕುಳಿತಿದ್ದಳು. ಮೇಲುಸಿರು ಬಿಡುತ್ತ ಚಿನ್ನಯ್ಯ ಬಂದು ಎದುರಿಗೆ ನಿಂತನು. ಅವನ ಮುಖದಲ್ಲಿ ಪ್ರೇತಕಳೆ ಕುಣಿಯುತ್ತಿತ್ತು. ಮುಖ ಬಿಳಿಚಿಕೊಂಡಿತ್ತು. ಮಾತೇ ಹೊರಡದು. ಚೆನ್ನಿ ಎದ್ದು ನಿಂತು 'ಏನು!' ಎಂದು ಗಾಬರಿಯಿಂದ ಕೇಳಿದಳು; ಉತ್ತರವಿಲ್ಲ. 'ಏನು? ಏನಾಯಿತು?' ಎಂದು ಚೆನ್ನಿ ಕಿರಿಚಿಕೊಂಡಳು. ಜವಾಬಿಲ್ಲ. ಚಿನ್ನಯ್ಯ ಕಲ್ಲಿನಂತೆ ನಿಂತು ಬಿಟ್ಟಿದ್ದಾನೆ. ಅವನ ಭುಜವನ್ನು ಹಿಡಿದು ಅಲುಗಿಸಿ ಚೆನ್ನಿ 'ಏನಾಯಿತು? ಏನಾಯಿತು?' ಎಂದು ಅಳುತ್ತ ಕೂಗಿದಳು. ಅವನು ಅಲ್ಲಿಯೇ ಕುಳಿತುಬಿಟ್ಟನು. ಚೆನ್ನಿ ಅವನ ತಲೆಗೆ ನೀರು ಹಾಕಿ ತಟ್ಟಿದಳು; ಗಾಳಿ ಬೀಸಿದಳು. ಸ್ವಲ್ಪ ಸಮಯದ ಮೇಲೆ ಚಿನ್ನಯ್ಯ ಮಾತಾಡಿದ; ನಡೆದ ವಿಷಯವನ್ನೆಲ್ಲಾ ಹೇಳಿದ. ಕೊನೆಗೆ ತಾನು ಮನೆಯಿಂದ ಓಡಿ ಹೋಗುವುದೇ ಉತ್ತಮವೆಂದೂ ಹೇಳಿದ. ಇಲ್ಲದಿದ್ದರೆ ಪೋಲೀಸಿನವರು ಬಂದು ಚಿತ್ರಹಿಂಸೆ ಕೊಟ್ಟು ಪೀಡಿಸುವರೆಂದು ಸಮಾಧಾನ ಹೇಳಿದ. ಓಡಿಹೋದರೆ ಮುಂದೇನು ಎಂಬುದನ್ನು ಯಾರೂ ಯೋಚಿಸಲಿಲ್ಲ. 'ಬೀಸುವದೊಣ್ಣೆಯ ಏಟು ತಪ್ಪಿದರೆ ಸಾವಿರ ವರ್ಷ ಆಯುಸ್ಸು' ಎಂಬಂತೆ ಬಂದ ಗಂಡಾಂತರ ಕಳೆದುಕೊಳ್ಳುವುದೇ ಅವರ ಉದ್ದೇಶ. ವ್ಯವಹಾರ ಜ್ಞಾನವಿಲ್ಲದ ಚೆನ್ನಿ ಅದಕ್ಕೊಪ್ಪಿದಳು. ಸ್ವಲ್ಪದಿವಸ ಕಳೆದಮೇಲೆ ತಾನು ಹಿಂದಿರುಗಿ ಬಂದು ಅವಳನ್ನು ಕರೆದು ಕೊಂಡು ಹೋಗುವುದಾಗಿ ಚಿನ್ನಯ್ಯ ಭರವಸೆ ಇತ್ತನು. ನಾಲ್ಕಾರು ಪುಡಿಗಾಸು ಕಟ್ಟಿಕೊಂಡು, ಚೆನ್ನಿಗೆ ತಕ್ಕ ಎಚ್ಚರಿಕೆ ಹೇಳಿ, ಚಿನ್ನಯ್ಯ ಹೊರಟನು. ಚೆನ್ನಿ ಕಂಬನಿಗರೆಯುತ್ತ ಅವನನ್ನು ಬೀಳ್ಕೊಟ್ಟಳು; ಮರಳಿ ಬಂದು ಬಾಗಿಲು ಹಾಕಿಕೊಂಡು ಅತ್ತಳು.

* * *

ವರುಷಗಳು ಹನ್ನೆರಡು ಕಳೆದಿವೆ. ಚೆನ್ನಿ ಒಬ್ಬಳೇ ಆದ್ದರಿಂದ ಸಂಬಂಧದ ಬಂಧು ಮುದುಕಿಯನ್ನು ಕರೆತಂದು ಜೊತೆಯಲ್ಲಿಟ್ಟುಕೊಂಡಿದ್ದಾಳೆ. ತಾನೇ ಆಳು ಕಾಳಿಟ್ಟು ಗದ್ದೆ ಸಾಗಿಸಿದಳು. ಆದರೆ ಅನುಭವ ಸಾಲದ್ದರಿಂದಲೂ, ಧಾರಣೆವಾಸಿಗಳು ತಗ್ಗಿದ್ದರಿಂದಲೂ, ನಷ್ಟವಾಗಿ, ಸಾಲವಾಗಿ ಗದ್ದೆಯೆಲ್ಲಾ ಕೈಬಿಟ್ಟು ಹೋಗಿದೆ. ಹರಾಜಿನಲ್ಲಿ ಗದ್ದೆಯನ್ನು ಪಡೆದುಕೊಂಡ ತಿಮ್ಮಯ್ಯನು ಧರ್ಮಭೀರುವಾದ್ದರಿಂದ, ಸ್ವಲ್ಪ ಗದ್ದೆಯನ್ನು ಚೆನ್ನಿಗೋಸ್ಕರ ಬಿಟ್ಟು ಮನೆಯನ್ನೂ ಬಿಟ್ಟಿದ್ದಾನೆ. ಹಸುಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ಕೂಲಿ ಮಾಡಿ ಚೆನ್ನಿ ಹೇಗೋ ಜೀವನ ಮಾಡುತ್ತಿದ್ದಾಳೆ. ಪೋಲೀಸರು ವಿಚಾರಣೆ ನಡೆಯಿಸಿ ಚಿನ್ನಯ್ಯ ನಿರಪರಾಧಿಯೆಂದು ತೀರ್ಮಾನಿಸಿದ್ದಾರೆ. 'ಅವನು' ಸತ್ತದ್ದು ಆಕಸ್ಮಾತ್ ಎಂದು ನಿರ್ಣಯವಾಗಿದೆ. ಆದರೆ ಚಿನ್ನಯ್ಯನಿಗೆ ಇದು ತಿಳಿಯುವ ಬಗೆ ಹೇಗೆ? ಅವನೆಲ್ಲಿದ್ದಾನೆಂಬುದು ಯಾರಿಗೂ ತಿಳಿಯದು. ಕಾಗದಗೀಗದ ಬರೆಯಿಸಿದರೆ ತಾನಿರುವುದು ತಿಳಿಯುವುದು ಎಂದೇನೋ, ಅವನು ಕಾಗದ ಬರೆಯಿಸಿರಲಿಲ್ಲ. ಚೆನ್ನಿಗೆ ಸೀರುಡಿಕೆ (ಪುನರ್ವಿವಾಹ) ಮಾಡಿಕೊಳ್ಳಬೇಕೆಂದು ಅನೇಕರು ಒತ್ತಾಯಪಡಿಸಿದರು. ಆದರೆ ಆಕೆ ಒಪ್ಪಲಿಲ್ಲ. ವರುಷ ಹನ್ನೆರಡಾದರೂ ಚಿನ್ನಯ್ಯನ ಚಿತ್ರ ಅವಳ ಮನಸ್ಸಿನಿಂದ ಅಳಿಸಿ ಹೋಗಲಿಲ್ಲ. ಅವನು ಬಂದೇ ಬರುವನು ಎಂದು ಅವಳು ನಂಬಿದ್ದಾಳೆ.

* * *

ಒಂದು ದಿನ ಸಂಜೆಯ ಹೊತ್ತಿನಲ್ಲಿ ಸುಮಾರು ೩೫ ವರ್ಷದ ತರುಣನೊಬ್ಬನು, ಚೆನ್ನಿಯ ಮನೆಯ ಬಾಗಿಲಿಗೆ ಬಂದು ನಿಂತನು. ತಾನು ಪರದೇಶದವನೆಂದೂ ಕತ್ತಲೆಯಾದ್ದರಿಂದ ರಾತ್ರಿ ಉಳಿಯಲು ಸ್ಥಳ ಕೊಡಬೇಕೆಂದೂ ಕೇಳಿಕೊಂಡನು. ಚೆನ್ನಿ ಒಬ್ಬೊಂಟಿಗಳಾದರೂ ಆ ಕತ್ತಲೆಯ ಸಮಯದಲ್ಲಿ ಆಶ್ರಯ ಬೇಡಿದವನಿಗೆ ಇಲ್ಲವೆನ್ನಲಾಗಲಿಲ್ಲ. ಅವನನ್ನ ಅವನುಂಡು ಹೋಗುವನೆಂದು ಸಮಾಧಾನ ತಾಳಿ, ಬಂದವನಿಗೆ ಅಂಬಲಿ ಮಾಡಿ ಬಡಿಸಿದಳು. ಅವನು ಅದನ್ನು ಸುರಿಯುತ್ತಿರುವಾಗ ಅನಿವಾರ್ಯವಾಗಿ, ಮಾತು ಅವನ ಪೂರ್ವೋತ್ತರದ ಕಡೆಗೆ ತಿರುಗಿತು. ತನಗಾರೂ ತನ್ನವರೆಂಬವರು ಇಲ್ಲವೆಂತಲೂ, ಎಲ್ಲಿಯಾದರೂ

ಕೆಲಸ ಸಿಗುವುದಾದರೆ ನಿಲ್ಲುವುದಾಗಿಯೂ ಅವನು ಹೇಳಿದನು. ಗಂಡನು ಸಂಪಾದಿಸಿಟ್ಟ ಆಸ್ತಿಯನ್ನು ಚೆನ್ನಿ ಕಳೆದಿದ್ದಳು. ಅದನ್ನು ಪುನಃ ಸಂಪಾದಿಸಬೇಕೆಂಬಾಶೆ ಅವಳ ಮನಸ್ಸಿನಲ್ಲಂಕುರಿಸಿತು. ಮುಂದೆ ಮಾತಾಡುತ್ತ ಹೋದಂತೆ ಅವನು ಸಂಬಳವನ್ನೇನೂ ಅಪೇಕ್ಷಿಸುವವನಲ್ಲವೆಂತಲೂ, ಅನ್ನ-ಬಟ್ಟೆಗಳಿಗೆ ದೊರೆತರೆ ಮನೆಯವರ ಒಬ್ಬನಂತೆ ಹೊಂದಿಕೊಂಡಿರುವುದಕ್ಕೆ ಇಷ್ಟವಿರುವುದಾಗಿಯೂ ತಿಳಿಯಿತು. ಅಂಬಲಿಯೂಟ ಮುಗಿವ ಹೊತ್ತಿಗೆ ಅವನು ಅಲ್ಲಿ ಕೆಲಸಕ್ಕೆ ನಿಲ್ಲುವುದೆಂದು ನಿಶ್ಚಿತವಾಯಿತ್ತು. ಅವನಿಗೆ ಹುಲ್ಲು ಹಾಸಿಗೆ ಮಾಡಿಕೊಡೆಯಲು ಕಂಬಳಿ ಕೊಟ್ಟಳು. ಹೊರಗೆ ಜಗುಲಿಯ ಮೇಲೆ ರಾಮಯ್ಯ, ಒಳಗೆ ಚೆನ್ನಿ. ಇಷ್ಟು ದಿನವೂ ಸ್ವಸ್ಥವಾಗಿದ್ದ ಚೆನ್ನಿಯ ಮನಸ್ಸು ಇಂದು ಅಸ್ವಸ್ಥವಾಗಿತ್ತು. ಕಾರಣವನ್ನು ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಅವನ ನೋಟದಿಂದಲೇ ಹೀಗಾಗಿರಬಹುದೆ? ತನ್ನ ಗಂಡನು ಹೊರಟು ಹೋಗಿ ಅನೇಕ ವರ್ಷಗಳಾದರೂ ತನ್ನ ಹೃದಯ ತನಗೆಂದೂ ಅವಿಧೇಯವಾಗಿ ವರ್ತಿಸಿರಲಿಲ್ಲ. ಇಂದೆಯೂ ವರ್ತಿಸಲಾರದು.

ಅಂದಿನಿಂದ ರಾಮಯ್ಯ ಕೆಲಸದ ಎಲ್ಲಾ ಭಾರವನ್ನೂ ವಹಿಸಿಕೊಂಡು, ಮನೆಯೇ ತನ್ನದೆಂಬುವಷ್ಟು ಉತ್ಸಾಹದಿಂದ ಕೆಲಸ ಆರಂಭಿಸಿದನು; ಪೈರುಗಳು ಹುಲುಸಾಗಿ ಬೆಳೆದುವು. ಚೆನ್ನಿಯೂ ಸಹಾಯಕ್ಕೆ ಹೋಗುತ್ತಿದ್ದಳು. ಒಂದು ಮನೆಯಲ್ಲಿಯೆ ಇರುವಾಗ ಸ್ವಾಭಾವಿಕವಾಗಿ ಸಲಿಗೆ ಬೆಳೆಯಿತು. ಅದಕ್ಕೆ ತಕ್ಕಂತೆ ಸಂಕೋಚವೂ ಸತ್ತು ಹೋಯಿತು. ಹೊಲದ ಕೆಲಸವು ಇಬ್ಬರನ್ನೂ ಒಟ್ಟಿಗೆ ಸೇರಿಸುತ್ತಿದ್ದಿತು. ಗೊಬ್ಬರ ತುಂಬಿ ಹೊರುವಾಗ ಅವನ ಮೈ ಇವಳಿಗೆ ತಾಗಿದರೆ ಮೈಯೆಲ್ಲಾ ಪುಳಕಿತವಾಗುತ್ತಿದ್ದಿತು. ಹೊರೆಯನ್ನು ಹೊರಿಸುವಾಗ ಅವನ ಸ್ಪರ್ಶವಾದರೆ ಒಂದು ತರದ ವಿಚಿತ್ರ ಅನುಭವವಾಗುತ್ತಿದ್ದಿತು. ಒಂದು ಮನೆಯಲ್ಲಿ ಗಂಡನಿಲ್ಲದ ಒಬ್ಬ ಹೆಂಗುಸೂ ಹೆಂಡತಿಯಿಲ್ಲದ ಒಬ್ಬ ಗಂಡುಸೂ ಒಟ್ಟಿಗೆ ಇದ್ದರೆ ಜನರು ಸುಮ್ಮನೆ ಹೇಗಿದ್ದಾರು? ಹಳ್ಳಿಯವರು ಗುಸಗುಸ ಮಾತಾಡಹತ್ತಿದರು. ಇದು ಚೆನ್ನಿಯ ಕಿವಿಗೆ ಬೀಳದಿರಲಿಲ್ಲ. ಅದನ್ನು ಕೇಳಿ ಅವಳಿಗೆ ಗಾಬರಿಯಾಯಿತು. ಇನ್ನೊಬ್ಬರ ಬಾಯಿಂದ ಆ ವಿಚಾರ ಬರುವವರೆಗೆ ತಾನವನನ್ನು ಪ್ರೀತಿಸುತ್ತಿದ್ದೇನೆಂಬುದರ ಅರಿವಿಲ್ಲದೆ ಅವನನ್ನು ಪ್ರೀತಿಸುತ್ತಿದ್ದಳು. ಈಗ ತನ್ನಲ್ಲಾಗಿದ್ದ ಮಾರ್ಪಾಡಿನ ಕಾರಣ ತಿಳಿಯಿತು. ಮೊದಲಿನಂತೆ ಚೆನ್ನಯ್ಯನ ಯೋಚನೆ ಹೆಚ್ಚಾಗಿ ಬರುತ್ತಿರಲಿಲ್ಲ. ಅವನು ಪ್ರಾಯಶಃ ಸತ್ತಿರಬಹುದೆಂಬ ವಿಷಯವನ್ನು ಯೋಚಿಸಲು ಮನಸ್ಸು ಮೊದಲಿನಂತೆ ಹಿಂಜರಿಯುತ್ತಿರಲಿಲ್ಲ. ತಮ್ಮಿಬ್ಬರ ಪ್ರೀತಿಯನ್ನು ನೆನಪಿಗೆ ತರುತ್ತಿದ್ದ ಪ್ರದೇಶಗಳು ಮೊದಲಿನಂತೆ ಅವಳನ್ನು ಆಕರ್ಷಿಸುತ್ತಿರಲಿಲ್ಲ. ತಾನು ತನ್ನ ಗಂಡನಿಗೆ ದ್ರೋಹ ಮಾಡುತ್ತಿದ್ದೇನೆಂದು ಅವಳು ನಿಶ್ಚಯಿಸಿಬಿಟ್ಟಳು. ಏನಾದರೂ ಆಗಲಿ,ತನ್ನೊಡನೆ ತಾನೇ ಹೋರಾಡಬೇಕೆಂದು ಮನಸ್ಸು ಗಟ್ಟಿ ಮಾಡಿದಳು. ರಾಮಯ್ಯನ ವರ್ತನೆಯು ಸಂಶಯಾಸ್ಪದವಾಗಿತ್ತು. ಒಂದು ದಿನ ಮಾತಿನ ಮಧ್ಯದಲ್ಲಿ 'ಚೆನ್ನಯ್ಯ ಸತ್ತಿರಬಹುದು. ನೀನೇಕೆ ಬೇರೆ ಮದುವೆ ಮಾಡಿಕೋಬಾರದು?' ಎಂದು ಕೇಳಿದ್ದ. ಅವಳೇನೂ ಉತ್ತರ ಕೊಟ್ಟಿರಲಿಲ್ಲ. ಆ ಎರಡನೆಯ ಮದುವೆಯ ಮದುವಣಿಗನು ತಾನೇ ಎಂಬುದನ್ನು ಅವನು ಬಾಯಿ ಬಿಟ್ಟು ಹೇಳಬೇಕಾಗಿರಲಿಲ್ಲ. ಆದ್ದರಿಂದ ರಾಮಯ್ಯ ಮನೆಯಲ್ಲಿಯೆ ಇದ್ದರೆ, ಎಂದಾದರೊಂದು ದಿನ ತನ್ನ ಮನಸ್ಸು ಹತೋಟಿ ಮೀರಿ ಹೋಗುವುದು ನಿಶ್ಚಯವೆಂದು ಚೆನ್ನಿ ಕಂಡುಕೊಂಡಳು.

ರಾಮಯ್ಯ ಕಬ್ಬಿನ ಹಿತ್ತಲಲ್ಲಿ ಕಬ್ಬಿಗೆ ಮಣ್ಣು ಹಾಕುತ್ತಿದ್ದನು. ಹಿತ್ತಲಲ್ಲಿ ಬೆಳೆದ ತರಕಾರಿ ತರಲು ಚೆನ್ನಿಯೂ ಅಲ್ಲಿಗೆ ಹೋದಳು. ಕೆಲಸದಲ್ಲಿದ್ದ ರಾಮಯ್ಯ ತಲೆಯೆತ್ತಿ ನೋಡಿ ಸಣ್ಣಗೆ ನಕ್ಕನು. ಚೆನ್ನಿ ಎಂತಹ ಗಟ್ಟಿ ಮನಸ್ಸು ಮಾಡಿದ್ದರೂ ಸಣ್ಣ ನಗು ಅವಳ ಮುಖದಲ್ಲಿಯೂ ಸುಳಿದು ಹೋಯಿತು. ರಾಮಯ್ಯ ಒಂದು ಕ್ಷಣ, ಮಾಡುತ್ತಿದ್ದ ಕೆಲಸಬಿಟ್ಟು ಅವಳ ಕಡೆಗೆ ನೋಡಿದನು. ಅವಳಿಗೆ ಮರುಕ್ಷಣದಲ್ಲಿಯೆ ತಾನು ಮಾಡಿದ್ದಕ್ಕೆ ಬಹಳ ಸಂಕಟವಾಯಿತು. ತನ್ನ ಯತ್ನವಿಲ್ಲದೆ ಅವನ ನಗೆಗೆ ಅದರ ಹಿಂದಿರುವ ಆಹ್ವಾನಕ್ಕೆ ಅವಳು ಪ್ರೋತ್ಸಾಹಕೊಟ್ಟಿದ್ದಳು. ಆದ ರಿಂದ ಅವಳಿಗೆ ತನ್ನ ಮೇಲೆ ತಡೆಯಲಾರದ ಸಿಟ್ಟು ಬಂದಿತು. ಅದು ಕೂಡಲೆ ರಾಮಯ್ಯನ ಮೇಲೆ ತಿರುಗಿತು. ಇದಕ್ಕೆಲ್ಲಾ ಕಾರಣ ಅವನೆ. ಇದೇ ಸ್ಥಳದಲ್ಲಿ ಚೆನ್ನಯ್ಯ ಕೆಲಸಮಾಡುತ್ತಿದ್ದಾಗ ತಾನು ಬಂದುನಿಂತು ನಕ್ಕು ನಗಿಸಿ ಅವನ ಕೆಲಸವನ್ನು ಹಗುರುಮಾಡುತ್ತಿದ್ದಳು. ಆದರೆ ಈಗ? ಚೆನ್ನಿ, ಗಂಭೀರವಾಗಿ "ರಾಮಯ್ಯ, ನೀನು ನಾಳೆಯೇ ನಮ್ಮ ಮನೆಯಿಂದ ಹೊರಟು ಹೋಗಬೇಕು" ಎಂದಳು.

ರಾಮಯ್ಯ ತಮಾಷೆಗೆ ಹೇಳುತ್ತಿರಬಹುದೆಂದು ಅವಳ ಮುಖದಕಡೆ ನೋಡಿದನು; ತಮಾಷೆಯಲ್ಲ!

ಪುನಃ ತನ್ನ ಕೆಲಸದಲ್ಲಿ ತೊಡಗಿ "ಯಾಕೆ?" ಎಂದು ಕೇಳಿದನು.

'ನಿನ್ನ ಕೆಲಸ ಇನ್ಮುಂದೆ ಬೇಕಾಗಿಲ್ಲ!'

'ನಾನೇನು ಅಂತಹ ತಪ್ಪುಮಾಡಿದ್ದು?'

'ತಪ್ಪೂ ಇಲ್ಲ ಗಿಪ್ಪೂ ಇಲ್ಲ, ನನಗೆ ನೀನಿರುವುದು ಇಷ್ಟವಿಲ್ಲ!'

'ಅದಾಗದು, ಕಾರಣ ತಿಳಿಯಬೇಕು!'

'ನಾನು ಒಬ್ಬೊಂಟಿಗಳಾದ ಹೆಂಗುಸು, ನೀನಿರುವುದು ಸರಿಯಲ್ಲ'

ರಾಮಯ್ಯನು ನಕ್ಕನು.

'ಅದು ಗೊತ್ತಾದದ್ದು ಇಂದೇನೋ?' ಎಂದನು; ಚೆನ್ನಿಗೆ ಸಿಟ್ಟು ಬಂದಿತು.

'ಇಂದೋ ಎಂದೋ, ನೀನು ಹೊರಡಬೇಕು' ಎಂದಳು.

'ಹೊರಡದಿದ್ದರೆ?' ರಾಮಯ್ಯಕೇಳಿದ.

ಇದನ್ನು ಕೇಳಿ ಚೆನ್ನಿಗೆ ಸಿಡಿಲು ಬಡಿದಂತಾಯಿತು. ಹೊರಡದಿದ್ದರೆ! ಬಲಾತ್ಕಾರ! ರಾಮಯ್ಯನ ದುರುದ್ದೇಶ ಸ್ಪಷ್ಟವಾಗಿ ಕಾಣುತ್ತಿದ್ದಿತು. 'ಹೊರಡದಿದ್ದರೆ! ಪೋಲೀಸು.... ನೆರೆಯವರನ್ನು ಕರೆಯುತ್ತೇನೆ' ಎಂದು ಚೆನ್ನಿ ಕಿರಿಚಿದಳು. ರಾಮಯ್ಯ ಶಾಂತನಾಗಿಯೇ ಹೇಳಿದ: 'ತಡೆ, ಯಾರು ಹೊರಡಬೇಕು ಗೊತ್ತಾಗುತ್ತೆ!'

'ರಾಮಯ್ಯ, ನನ್ನ ಮನೆಯ ಅನ್ನ ಉಂಡು ನನ್ನೊಡನೆ ಜಗಳಕ್ಕೆ ನಿಲ್ಲುತ್ತೀಯಲ್ಲಾ!' [ಅ]ವಳ ಧ್ವನಿಯಲ್ಲಿ ಸ್ವಲ್ಪ ಧೈರ್ಯವೂ [ಸ]ೇರಿತ್ತು.

'ಚೆನ್ನಿ, ಈ ಜಮೀನೆಲ್ಲಾ ನನ್ನದು; [ಇ]ದನ್ನು ನಾನು ವಾರಸುದಾರರಿಂದ [ಕ್ರ]ಯಕ್ಕೆ ತೆಗೆದುಕೊಂಡಿದ್ದೇನೆ. ಮನೇನೂ [ಕ್ರ]ಯಕ್ಕೆ ಕೊಂಡಿದ್ದೇನೆ. ನಿನಗಿಷ್ಟವಿಲ್ಲ[ದಿ]ದ್ದರೆ ನೀನೇ ಹೊರಡಬಹುದು!'

ಚೆನ್ನಿಗೆ ಅವನು ಹೇಳಿದ್ದು ನಿಜವೆಂದು ತೋರಿತು. ಆ ಗದ್ದೆಗೆ 'ಗತಿ' ಅವನು [ಕ]ೊಡುತ್ತಿರಲಿಲ್ಲ. ಆಗಾಗ ಪಟೇಲರು [ಶ]ಾನುಭೋಗರ ಮನೆಗೆ ಹೋಗಿ ಬರು[ತ್ತಿ]ದ್ದನು. ಅವನಿಗೆ ದುಡ್ಡೆಲ್ಲಿಂದ ಬರ[ಬೇ]ಕು? ಏನೋ ಅದು ತನಗೇಕೆ? ಈಗ [ಜೀ]ವನದಲ್ಲಿ ಒಂದು ನಿಶ್ಚಯವಾಗಬೇಕಿತ್ತು. ಒಂದೇ ಹೊರಡಬೇಕು, ಇಲ್ಲವೆ ರಾಮಯ್ಯ[ನಿ]ಗೆ ಹೆಂಡತಿಯಾಗಬೇಕು. ಎಲ್ಲಿಗೆ ಹೋಗುವುದೆಂಬುದು ಅವಳಿಗೆ ಗೊತ್ತಿರ[ಲಿ]ಲ್ಲ. ಆದರೂ ಹೊರಡುವೆನೆಂದು 'ಆಗಲಿ, ಹೊರಡುತ್ತೇನೆ' ಎಂದು ಮನೆಯ ಕಡೆಗೆ ಹೊರಟಳು. ರಾಮಯ್ಯನೂ ಅವಳ ಹಿಂದೆಯೇ ಮನೆಗೆ ಹೋದನು.

ಚೆನ್ನಿ ತನ್ನ ಸಾಮಾನನ್ನು ಸಣ್ಣದೊಂದು ಗಂಟುಕಟ್ಟಿ ಹೊರಗೆ ತಂದಿಟ್ಟಳು. ಆದರೆ ಮನೆಯನ್ನು ಬಿಡುವುದು ಅಷ್ಟು ಸುಲಭವಾಗಿರಲಿಲ್ಲ. ನಾಲ್ಕಾರು ಸಾರೆ ಒಳಕ್ಕೆ ಹೋಗಿ ಬಂದಳು. ಏನೋ ಯೋಚಿಸುತ್ತ ನಿಂತಳು. ಕೊನೆಗೆ ಧೈರ್ಯ ಮಾಡಿ ಹೊರಟಳು. ಕಣ್ಣಲ್ಲಿ ನೀರು ತುಂಬಿ ಹರಿಯುತ್ತಿತ್ತು. ಕೋಪವೆಲ್ಲಾ ಮಾಯವಾಯ್ತು. ರಾಮಯ್ಯ ಎಲ್ಲಾ ನೋಡುತ್ತ ಜಗುಲಿಯ ಮೇಲೆ ಅಡಿಕೆಲೆ ಜಗಿಯುತ್ತ ಕುಳಿತಿದ್ದನು. ಅವನ ಮುಖದಲ್ಲಿ ತುಂಟ-ನಗು ಕುಣಿಯುತ್ತಿತ್ತು.

ಚೆನ್ನಿ ಮನೆಯ ಕಡೆಗೊಮ್ಮೆ ನೋಡಿದಳು. ಅದುವರೆಗೆ ಸುಮ್ಮನಿದ್ದ ರಾಮಯ್ಯ. 'ಅಲ್ಲಾ, ಹಸುಗಳನ್ನೇನು ಮಾಡುತ್ತೀಯಾ?' ಎಂದು ಕೇಳಿದ. ಆ ವಿಷಯವನ್ನು ಚೆನ್ನಿ ಯೋಚಿಸಿರಲಿಲ್ಲ. ಎಲ್ಲಿಗೆ ಹೋಗುವುದೆಂಬುದು ಗೊತ್ತಿಲ್ಲದವಳಿಗೆ ಹಸು ಏನು ಮಾಡುವುದೆಂಬುದೇನು ಗೊತ್ತು? ಮಾತಿಲ್ಲದೆ ನಿಂತುಬಿಟ್ಟಳು. ರಾಮಯ್ಯನೆಂದ. 'ನೋಡು, ಇಷ್ಟು ಮಾಡಿ ಹೊರಡುವುದೇಕೆ? ಇಲ್ಲೇ ಇರು!' ಚೆನ್ನಿಗೆ ಮಾತಿಲ್ಲ. 'ಹಾಗೆಲ್ಲಾ ಜನರೆಂದುಕೊಳ್ಳುತ್ತಾರೆಂದಿದ್ದರೆ ಇಬ್ಬರೂ ಮದುವೆ ಮಾಡಿಕೊಳ್ಳೋಣ' ಎಂದ ಮಾತಿಗೆ ಆದ ಚೆನ್ನಿಯ ಮುಖದ ಬದಲಾವಣೆ ನೋಡಿ ರಾಮಯ್ಯ ಕೂಡ ಹೆದರಿದ. 'ಹಸುಗಳೂ ನಿನಗಿರಲಿ; ನಾನು ಸೂಳೆಯಲ್ಲ' ಎಂದವಳೇ ಚೆನ್ನಿ ನಡೆದುಬಿಟ್ಟಳು. 'ಚೆನ್ನಿ' ನಿನ್ನ ಗಂಡ ಈಗ ಬದುಕಿಲ್ಲ, ಇದರಲ್ಲಿ ತಪ್ಪೇನಿದೆ?' ಚೆನ್ನಿ ಮಾತನಾಡದೆ ಮುಂದೆ ನಡೆದಳು. ರಾಮಯ್ಯ ಹೋಗಿ ಹಾದಿಗಡ್ಡ ನಿಂತನು. ಚೆನ್ನಿ 'ಬಿಡು ಕೂಗಿಕೊಳ್ಳೇನೆ ನೋಡು!' ಎಂದಳು. ರಾಮಯ್ಯ 'ನಿನ್ನ ಮೇಲೆ ಬಲಾತ್ಕಾರ ಯಾರು ಮಾಡ್ತಾರೆ? ನನ್ನ ಮಾತು ಕೇಳಿ ಹೋಗು!' ಎಂದನು.

'ನನಗೆ ಬೇಕಾಗಿಲ್ಲ!'

'ಕೇಳು, ಆಮೇಲೆ ನಿನ್ನ ಅಭಿಪ್ರಾಯ ಹೇಳು!'

'ಹಾಗಾದರೆ ಬೇಗ ಬೊಗಳಿ ದಾರಿ ಬಿಟ್ಟಿಡು.'

'ಚೆನ್ನಿ! ಇಷ್ಟು ದಿನ ಜೊತೆಗಿದ್ದರೂ ನೀನು ನನ್ನನ್ನು ಗುರುತಿಸದೆ ಹೋದೆ!'

'ಗುರುತಿಸಿದ್ದೇನೆ, ಮಹಾಪಾಪಿಯೆಂದು!'

'ಇಲ್ಲ, ನಿನ್ನ ಗಂಡನೆಂದು ಗುರುತಿಸಿಲ್ಲ.'

'ಈ ಬುದ್ಧಿವಂತಿಕೆ ನನ್ನಲ್ಲಿ ನಡೆಯೋಲ್ಲ!'

'ನಾನು ಬ್ರಾಹ್ಮಣರ, ನೆಂಟರ ಸಾಕ್ಷಿಯಾಗಿ ಕೈಹಿಡಿದ ನಿನ್ನ ಗಂಡ ಚಿನ್ನಯ್ಯ!'

'ಆಯ್ತಲ್ಲ, ಬಿಡು ಇನ್ನು!'

'ನಿನಗೆ ನನಗೆ ನಂಬಿಕೆಯಾಗಲಿಲ್ಲ ಅಂತ ಕಾಣುತ್ತೆ. ನೋಡು, ಮೊದಲು ನಿನ್ನ ಜಾತ್ರೆಯಲ್ಲಿ ಸಂಧಿಸಿದೆ. ನಿನ್ನ ಅಪ್ಪ ಅಮ್ಮನ ಕಣ್ಣು ತಪ್ಪಿಸಿ ಮಣಿಸರ ಕೊಂಡು ಕೊಟ್ಟಿದ್ದು ನೆನಪಿದೆಯೇನು? ಆ ಮೇಲೆ ನಾನು ತೆರಲಾಗದ ತೆರ ನಿಮ್ಮಪ್ಪ ಕೇಳಿದಾಗ ನಿಮ್ಮ ಮನೆಯ ಹತ್ತಿರದ ಕೇದಗಿಯ ಕಾಡಿನಲ್ಲಿ ನಾವಿಬ್ಬರೂ ಸೇರಿ ಅತ್ತಿದ್ದು? ನಿನ್ನ ಮದುವೆಯಾಗಿ ಮನೆ ತುಂಬಿಸಿಕೊಂಡಿದ್ದು? ದನ ಕಾಯೋಕೆ ಇಬ್ಬರೂ ಗುಡ್ಡಕ್ಕೆ ಹೋದಾಗ ಹುಲಿ ಕೂಗಿ ನೀನು ಕೂಗಿಕೊಂಡದ್ದು? ಕೌಲಿ ದನ ಸತ್ತಾಗ ನೀನು ಅತ್ತಿದ್ದು? ಗೋಕುಲಾಷ್ಟಮಿಯ ದಿನ ತೆಂಗಿನ ಗಿಡ ನೀನು ನೆಟ್ಟಿದ್ದು? ಹಾರುವಯ್ಯನೋರ ಹೆಂಗಸ್ರು ಉಡುವಂಥಾ ಸೀರೆ ತಂದಾಗ, ನಿನಗೆ ಉಡಲು ಬರದೆ ಕತ್ತರಿಸಿ ಉಟ್ಟಿದ್ದು? ನಾನು ಗಿಲ್ಟಿನ ಅಡ್ಡಿಸರ ತಂದು ಅದು ಕಪ್ಪಾದಾಗ ನೀನು ವ್ಯಾಜ್ಯ ಮಾಡಿದ್ದು? ಆ ದಿವಸ ರಾತ್ರಿ ಅವನು ಸತ್ತಾಗ ನಾನು ನೀನು ಅತ್ತಿದ್ದು! ಎಲ್ಲಾ ಮರೆತಿಯೇನು?'

'ಇದೆಲ್ಲಾ ನಿಜ ಆದರೆ...'

'ಚೆನ್ನಿ, ಇನ್ನೂ ಅಪನಂಬಿಕೆಯೇ? ನಿನ್ನ ಗಂಡನಿಗೆ ತೊಡೆಯಲ್ಲೊಂದು ಮಚ್ಚೆ ಇತ್ತು!'

'ಹೌದು, ಅದು ಏನಾಸಂಗೆ ಇತ್ತು!'

'ಹಾಗಾದರೆ ರಾಮಯ್ಯ ಯಾರು ನೋಡು!'

ಮರುಕ್ಷಣದಲ್ಲಿ ರಾಮಯ್ಯ ಚೆನ್ನಿ ಒಂದೇ ತಕ್ಕೆಯಲ್ಲಿದ್ದರು. ಕಾಮದೇವನನ್ನು ಪುನಃ ಪೂಜಿಸಲು ಅವರಿಬ್ಬರೂ ಕಂಕಣತೊಟ್ಟಿದ್ದರು.

ಮೈಸೂರು ಆರ್ಟ್ಸ್, ಫ್ರೇಂ ಆ್ಯಂಡ್ ಉಡ್ ಇಂಡಸ್ಟ್ರೀಸ್ ಲಿಮಿಟೆಡ್.

ಷೇರುಗಳನ್ನು ಕೊಳ್ಳಿರಿ!

ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ!

ಮೆಸರ್ಸ್ ಶ್ರೀನಿವಾಸ ಆ್ಯಂಡ್ ಕಂಪನಿ, ಹಲಸೂರು ಗೇಟ್ ಬೆಂಗಳೂರು

ಪಟ್ಟದ ರಾಯರು ಪಟ್ಟಕ್ಕೆ ಬಂದರು.

★



ಶ್ರೀ ಮುದುವೀಡು ಕೃಷ್ಣರಾಯರ ಸಾಹಿತ್ಯಸಾಮರ್ಥ್ಯ

★

" ಬಾಕೀ ವರ್ತಮಾನಪತ್ರಾ ಓದಿದರ ಕನ್ನಡ ಅಕ್ಷರದಾಗ ಇಂಗ್ಲೀಷೋ ಮರಾಠೀನೋ ಬರದಾರಂತನಸತಽದ, ಕನ್ನಡದ ಶೈಲೀ ನೋಡಬೇಕು ಕೃಷ್ಣರಾಯರಲ್ಲೆ! "

—ಒಬ್ಬ ಸಂಪಾದಕರು

" ಏನ್ ನಿಮ್ಮ ಕೃಷ್ಣರಾಯಾ! ಆಹಾಹಾಹಾ! ತನ್ನ ಭಾಷಣದ ಬಲದಿಂದ ಬಂಡಾಯ ಮಾಡಿಸೂ ಅಂತಂದರೂ ಮಾಡಿಸೇ ಬಿಡಾಂವ ನೋಡ್ರಿ! "

—ಒಬ್ಬ ಮಾತರಿವರು

ಸವಿನಯ ಶಾಸನಭಂಗದ ಸಮರದಲ್ಲಿ ಮೊದಲನೆಯ ಕಾಳೆಗದ ಕಾಲ; ೧೯೩೦ರ ಆಗಸ್ಟ್ ತಿಂಗಳು ಇದ್ದಿರಬೇಕು. ಹಿಂಡಲಿಗೆಯ ಸೆರೆಮನೆಯಲ್ಲಿ 'ಬಿ' ಕ್ಲಾಸಿನ ಕೆಲವು ಕೈದಿಗಳು ನಿತ್ಯದಂತೆ ಸಾಯಂಪ್ರಾರ್ಥನೆಯನ್ನು ಮುಗಿಸಿಕೊಂಡು, ಹೊರಗೆ ಬೀಗ ಬಿಗಿಯಲ್ಪಟ್ಟಿದ್ದ ಆ ಫೀಮೇಲ್-ವಾರ್ಡಿನ ಒಳಶಾಲೆಯಲ್ಲಿಯೇ ಚಿತ್ತಿತ್ತ ನೂರಡಿಯಿಡುತ್ತಲಿದ್ದರು. ಹೊರಗಣ ಜಗತ್ತಿನ ಬಗೆಗೆ ಆ ದಿನದಲ್ಲಿ ತಿಳಿದುಬಂದಿರಬಹುದಾದ ಸುದ್ದಿ-ಸಂಗತಿಗಳ ಸಂಬಂಧವಾಗಿ ಹರಟೆನಡೆಯುತ್ತಿದ್ದುದು ಸಾಮಾನ್ಯವಾಗಿ ಇದೇ ಹೊತ್ತಿನಲ್ಲಿ. "ಈ ಸಲದ ಸಾಹಿತ್ಯಸಮ್ಮೇಲನವು ಮೈಸೂರಿನಲ್ಲಿ ಕೂಡುವುದಂತೆ, ಆಲೂರ ವೆಂಕಟರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ!" ಎಂದರು ದಿವಾಕರ ರಂಗರಾಯರು. ಸುದ್ದಿಯನ್ನು ಕೇಳಿ ಸರ್ವರಿಗೂ ಸಂತೋಷವಾಯಿತು. ಸಾಹಿತ್ಯಸಮ್ಮೇಲನದ ವಿಷಯವು ಆ ಶತಪಥಿಕ ಸಮುದಾಯದಲ್ಲಿ ಹಾಗೆಯೆ ಮುಂದುವರಿದಾಗ, ದಿವಾಕರರಾಯರ ಮುಖದಿಂದಲೆ ಹೀಗೊಂದು ಉದ್ಗಾರವು ಹೊರಟಿತು: "ಆಲೂರ ವೆಂಕಟರಾಯರೇನು, ಮುದುವೀಡು ಕೃಷ್ಣರಾಯರೇನು, ಇವರಿಬ್ಬರಿಗೂ ಸಾಹಿತ್ಯಸಮ್ಮೇಲನದ Presidentship has been long overdue.. "

ಸಾಹಿತ್ಯಸಮ್ಮೇಲನದ ಅಧ್ಯಕ್ಷತೆಯ ಮಾತು ಹೊರಟಾಗಲೆಲ್ಲ ನನಗೆ ಮೇಲ್ಕಾಣಿಸಿದ ದಿವಾಕರರಾಯರ ಮಾತು ನೆನಪಾಗುತ್ತ ಬಂದಿದೆ. ಲೇಖನ, ಭಾಷಣ, ಕವನ, ಕೀರ್ತನ, ನಟನ, ಅನುವಾದನವೇ ಮೊದಲಾದ ವಿವಿಧರೂಪಗಳಿಂದಲೂ ಮುದವೀಡು ಕೃಷ್ಣರಾಯರು ಈಗ ನಲವತ್ತು ವರ್ಷಗಳಿಂದ ಅಖಂಡವಾಗಿ ಕನ್ನಡ ಸರಸತಿಯ ಸೇವೆಗೈಯುತ್ತಿದ್ದಾರೆ. ಇವುಗಳಲ್ಲಿ ಯಾವೊಂದೇ ವಿಭಾಗದಲ್ಲಿಯ ಕೃಷ್ಣರಾಯರ ಸೇವೆಯನ್ನು ಗಣಿಸಿದರೂ ಅವರಿಗೆ ಅಧ್ಯಕ್ಷಪಟ್ಟವು ಈ ಮೊದಲೆ ದೊರೆಯಬೇಕಾಗಿತ್ತು ಎಂದೆನ್ನಿಸುವುದು. ಈ ವಿವಿಧ ಕ್ಷೇತ್ರಗಳಲ್ಲಿ ಕೃಷ್ಣರಾಯರು ಕೈಗೂಡಿಸಿದ ಅದ್ಭುತಕಾರ್ಯಗಳ ಬೆಲೆಯನ್ನು ಸ್ವಂತವಾಗಿ ಕಟ್ಟುವ ಸಾಹಸಮಾಡದೆ, ಆಯಾ ವಿಷಯಗಳಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಮಹನೀಯರ ಅಭಿಪ್ರಾಯಗಳನ್ನೆಲ್ಲ ಇಲ್ಲಿ ಉದಹರಿಸಬೇಕೆಂದಿದ್ದೇನೆ. ಈಗ ಹನ್ನೆರಡು ವರ್ಷಗಳಿಂದಲೂ ನಾನು ಒಂದಿಲ್ಲೊಂದು ಬಗೆಯಿಂದ ವೃತ್ತಪತ್ರ ವ್ಯವಸಾಯದಲ್ಲಿ ತೊಡಗಿರುವುದರಿಂದ, ನೂರಾರು ಜನರೊಡನೆ ಅನೇಕ ವಿಷಯಗಳನ್ನು ಚರ್ಚಿಸುವ ಸಂದರ್ಭಗಳೂ ಬೇರೆಯವರ ಚರ್ಚೆಗಳನ್ನು ಕೇಳುವ ಪ್ರಸಂಗಗಳೂ ನನಗೆ ದೊರೆತಿವೆ. ಇಂತಹ ಸಂದರ್ಭಗಳಲ್ಲಿ ಮುದವೀಡುರಾಯರ ಸಾಹಿತ್ಯಯೋಗ್ಯತೆಯ ಬಗೆಗೆ ಪ್ರತ್ಯಕ್ಷ ಕಂಡು ಕೇಳಿದ ಸಂಗತಿಗಳನ್ನೇ ಇಲ್ಲಿ ಕೊಡುತ್ತಿದ್ದೇನೆ. ನಾನು ಹೇಳುವುದಕ್ಕಿಂತ ಹೆಚ್ಚಿನ ಗೌರವೋದ್ಗಾರಗಳು ಕೃಷ್ಣರಾಯರ ವಿಷಯಕ್ಕೆ ಕನ್ನಡ ನಾಡಿನಲ್ಲೆಲ್ಲ ಕೇಳಬರುವುವೆಂಬುದನ್ನು ಚೆನ್ನಾಗಿ ಬಲ್ಲೆನು. ಆದರೆ ನಾನು ಸ್ವತಃ ಕಂಡುಕೇಳಿದುದನ್ನಷ್ಟೇ ಬರೆಯಬೇಕೆಂಬುದು ನನ್ನ ಉದ್ದೇಶವಾಗಿದೆ.

ಕೃಷ್ಣರಾಯರ ಲೇಖನಕಾರ್ಯದಲ್ಲಿ ಪತ್ರಿಕಾವ್ಯವಸಾಯವು ಗ್ರಹಮಂಡಲದಲ್ಲಿ ಸೂರ್ಯನಿದ್ದಂತೆ. ಮೂರು ತಪಗಳವರೆಗೆ ಎಡೆಬಿಡದೆ ನಡೆಯಿಸಿದ ಸಂಪಾದಕೀಯ ಲೇಖನದ ರಾಶಿಯ ಸುತ್ತಲೂ ಅವರ ಬೇರೆ ಬಿಡಿಬರೆಹಗಳ ಉಪರಾಶಿಗಳಿವೆ. ಮುದುವೀಡುರಾಯರ ಸಂಪಾದಕೀಯ ಕೌಶಲವನ್ನು ಕುರಿತು ನುರಿತ ಸಂಪಾದಕರಿಬ್ಬರು ಆಡಿದ ಮಾತುಗಳನ್ನು ನೋಡೋಣ:

ಶ್ರೀ. ಚಿಕ್ಕೋಡಿ ಅನಂತರಾಯರು

ನಾನೊಮ್ಮೆ ಪಂಡಿತಪ್ಪ ಚಿಕ್ಕೋಡಿಯವರ ಸಂದರ್ಶನಕ್ಕೆಂದು ಹೋಗಿದ್ದೆ. "ಕರ್ನಾಟಕವೃತ್ತ" ದ ಪ್ರತಿನಿಧಿಯೆಂದು ಹೇಳಿದಕೂಡಲೆ ಪಂಡಿತಪ್ಪನವರು "ಮುದವೇಡಕರರ ವರ್ತಮಾನಪತ್ರವಲ್ಲವೆ? ಬಹಳ ಒಳ್ಳೆಯ ಪತ್ರಿಕೆ. ಇತ್ತಿತ್ತಲಾಗಿ ಕರ್ನಾಟಕದಲ್ಲಿ ಅನೇಕಪತ್ರಿಕೆಗಳು ಹುಟ್ಟುತ್ತಲಿವೆ, ಆದರೆ ಮುದವೇಡಕರರಂಥ ಭಾವಾಭಿವ್ಯಕ್ತಿಸಾಮರ್ಥ್ಯವು (Power of expression) ಒಬ್ಬರಲ್ಲಿಯೂ ಇಲ್ಲ" ಎಂದರು. ಸ್ವತಃ ಪಂಡಿತಪ್ಪನವರು ಹಲವು ವರ್ಷಗಳವರೆಗೆ 'ವಿಭಾಕರ' ಪತ್ರಿಕೆಯ ಸಂಪಾದಕರಾಗಿದ್ದರೆಂಬುದನ್ನು ಕನ್ನಡಿಗರಿಗೆ ಹೊಸದಾಗಿ ಹೇಳಿಕೊಡಬೇಕಾಗಿಲ್ಲ. ಇನ್ನೊಂದು ಪ್ರಸಂಗವು ಕೈ. ವಾ. ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠರಿಗೆ ಸಂಬಂಧಿಸಿದೆ. ೧೯೨೦ರ ಮೇ ತಿಂಗಳಲ್ಲಿ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಅಧಿವೇಶನವು ಧಾರವಾಡದಲ್ಲಿ ಕೂಡಿದಾಗಿನ ಮಾತಿದು. ಟಂಗಿನಕಾಯಿಯವರ ಪ್ರೆಸ್ಸಿನ (ಪರಿಷತ್ತಿನ ಸ್ಥಳ) ಬಾಗಿಲಲ್ಲಿ ಹಾಯ್ದು ಕೃಷ್ಣರಾಯರು ಒಳಕ್ಕೆ ಹೊರಟಿದ್ದರು. ಗದಿಗೆಯ್ಯನವರು ಸ್ವಲ್ಪದೂರದಿಂದಲೆ ಕೃಷ್ಣರಾಯರನ್ನು ಕೂಗಿ ತಡೆದರು. ಒಬ್ಬರೊಬ್ಬರು ಸಮೀಪಕ್ಕೆ ಬಂದಕೂಡಲೆ ಸ್ವಾಮಿಗಳು — "ಏನ್ರೀ ರಾಯರ ನಿಮ್ಮ ವರ್ತಮಾನಪತ್ರಾ ಬೆಳಗಾಂವಿಗೆ ಒಯ್ದುಬಿಟ್ರೀ ; ನಮಗ ಬಂದಿದ್ದು ತಡಾಆಗಿ ಮುಟ್ಟಲಿಕ್ಕೆ ಹತ್ತೈತ್ರಿ. ನಿಮ್ಮ ಲೇಖ ಓದದಿದ್ದರs ನನಗ ಚೈನs ಬೀಳೂದಿಲ್ಲ್ರೀ. ಬಾಕಿ ವರ್ತಮಾನಪತ್ರಾ ಓದಿದರ ಕನ್ನಡ ಅಕ್ಷರದಾಗ ಇಂಗ್ಲೀಷೊ ಮರಾಠೀನೋ ಬರದಾಂಗನಸತಾsದ ; ಕನ್ನಡದ ಶೈಲೀ ನೋಡಬೇಕು ನಿಮ್ಮಲ್ಲೇ ! 'ಶುಭೋದಯ' ಹೋದಬಳಿಕ ಶುದ್ಧಕನ್ನಡಭಾಷಾಪದ್ಧತಿಯ ವರ್ತಮಾಪತ್ರ ನಿಮ್ಮದೊಂದs ಉಳೀತಿರಿ" ಎಂದರು. ಗದಿಗೆಯ್ಯನವರು ಸ್ವತಃ 'ಚಂದ್ರೋದಯ' ದ ಸಂಪಾದಕರಾಗಿದ್ದರು. ಈ ಸಂಭಾಷಣವು ನಡೆದಕಾಲಕ್ಕೆ ಮಾತ್ರ ಅವರ ಪತ್ರಿಕೆಯು ಇದ್ದಿರಲಿಲ್ಲ.

* * *

ಭಾಷಣಶೈಲಿಯ ವಿಷಯದಲ್ಲಂತೂ ನಾಡಿಗೆ ನಾಡೇ ಕೃಷ್ಣರಾಯರನ್ನು ಹೊಗಳುತ್ತಲಿದೆ. ತಮ್ಮ ವಿಲಕ್ಷಣವಾದ ವಾಕ್‌ಸಾಮರ್ಥ್ಯದಿಂದ ರಾಯರು ಕನ್ನಡ ಜನತೆಗೆ ಹುಚ್ಚು ಹಿಡಿಸಿಬಿಟ್ಟಿದ್ದಾರೆ. ನಾಮಾನ್ಯ ಜನರಂತೆಯೆ ಮುಖಂಡರು ಕೂಡ ಮುದವೀಡುರಾಯರ ಭಾಷಣಗಳಿಗೆ ಮುಗ್ಧರಾಗಿದ್ದಾರೆ. ದೇಶಪಾಂಡೆ ಗಂಗಾಧರರಾಯರು ಅಖಂಡ ಭರತಖಂಡದಲ್ಲಿ ಹೆಸರು ಹೊಂದಿದ ವಾಗ್ಮಿಗಳಷ್ಟೆ ? ಅವರು ಕೂಡ ಕೃಷ್ಣರಾಯರ ಭಾಷಣದಿಂದ ಬೆಪ್ಪಾಗಿ ಹೋದ ಪ್ರಸಂಗವೊಂದು ನನ್ನ ನೆನಪಿನಲ್ಲಿದೆ. ೧೯೨೦ ರ ಮಾತು; ಬಾಗಿಲುಕೋಟೆಯ ರೈತಪರಿಷತ್ತನ್ನು ಮುಗಿಸಿಕೊಂಡು ಗಂಗಾಧರರಾಯರು ಆಗ ತಾನೆ ಬೆಳಗಾಂವಿಗೆ ಹಿಂದಿರುಗಿದ್ದರು. ಹನ್ನೆರಡು ಗಡಗಡಿಯ ಬಾವಿಯ ಬಳಿಯಲ್ಲಿ ಹಾಯ್ದು ಅವರು ತಮ್ಮ ಮನೆಯ ಕಡೆಗೆ ಹೊರಟಿದ್ದರು. ನಾನು "ಕರ್ನಾಟಕ ವೃತ್ತ" ಕಾರ್ಯಾಲಯದಿಂದ ಹನುಮನ ಬೀದಿಯ ಕಡೆಗೆ ಹೊರಟಿದ್ದೆನು. ನನ್ನನ್ನು ನೋಡಿದ ಕೂಡಲೆ 'ಸಿಂಹ'ರು "ಏನ್ರೀ, ಮುದವೇಡಕರ್ ಬಂದ್ರೇನ್" ಎಂದು ಕೇಳಿದರು. "ಇನ್ನೂ ಬಂದಿಲ್ಲ" ಎಂದು ಹೇಳಿದೆ. ಅಂದು ಗಂಗಾಧರರಾಯರು ಕೃಷ್ಣರಾಯರ ವಿಷಯಕ್ಕೆ ಅತ್ಯಂತ ಆದರಪರವಶರಾಗಿದ್ದುದರಿಂದ, ಮುಂದಿನ ಮಾತುಗಳಲ್ಲಿ ಶಿಷ್ಟೋಪಚಾರದ ಬಹುವಚನವನ್ನು ಬಿಟ್ಟು, ಆತ್ಮೀಯಭಾವನೆಯ ಏಕವಚನದಲ್ಲಿಯೇ ಹೇಳಹತ್ತಿದರು: "ಏನ್ ನಿಮ್ಮ ಕೃಷ್ಣರಾಯಾ, ಆಹಾಹಾಹಾ ! ತನ್ನ ಭಾಷಣಬಲದಿಂದs ಬಂಡುಮಾಡಸೂ ಅಂತಂದರೂ ಮಾಡಿಸೇ ಬಿಡಾಂವ ನೋಡ್ರಿ! ಏನ್ರೀ ನಿನ್ನೆ ಬಾಗಲಕೋಟೀವೊಳಗ ಮಾತಾಡಿದಾ ! ನಾ ಅಂತೂ ಹುಚ್ಚಾಗಿ ಹ್ವಾದೆ. ಅಂವ ಮಾತಾಡಿದ ಮ್ಯಾಲ ನನಗ ಮಾತಾಡೋದs ಪಂಚೇತಿ ಆತರೀ ! ಎಷ್ಟೋ ವರ್ಷದಿಂದs ಅವನ ಮಾತು ಕೇಳತೇನು ಖರೇ; ನಿನ್ನಿನ ಹಾಂಗ್ ಎಂದೂ ಯಾರದೂ ಭಾಷಣ ಕನ್ನಡದಾಗ ಕೇಳಿದ್ದಿಲ್ರೆಪಾ !" ಆ ಬಾವಿಯಿಂದ ಆರಂಭ ಮಾಡಿದವರು ತಮ್ಮ ಮನೆಯವರೆಗೂ ಕೃಷ್ಣರಾಯರನ್ನು ಹೊಗಳುತ್ತಲೇ ಇದ್ದರು. ಈ ಕಾಲಕ್ಕೆ ಬೆಳಗಾಂವಿಯಲ್ಲಿ ಕನ್ನಡ–ಮರಾಠೀ ವಾದವು ಪ್ರಖರವಾಗಿದ್ದುದರಿಂದ, ಕೃಷ್ಣರಾಯರ "ಕರ್ನಾಟಕವೃತ್ತ"ವು ಗಂಗಾಧರರಾಯರ ಮೇಲೆ ವಾರವಾರಕ್ಕೂ ತೀಕ್ಷ್ಣವಾದ ಟೀಕಾಸ್ತ್ರಗಳನ್ನೆಸೆಯುತ್ತಿದ್ದಿತೆಂಬುದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ.

ಇತ್ತಿತ್ತಲಾಗಿ ಬೆಳಗಾಂವಿಯಲ್ಲಿ ಕೂಡಿದ್ದ ಒಂದು ಪರಿಷತ್ತಿನ ಪ್ರಾರಂಭಕ್ಕೇ ಕಾರಣಾಂತರದಿಂದ ಬೇಜಾರು ಹುಟ್ಟಿದ್ದರಿಂದ ಬಹಳ ಗೊಂದಲವಾಯಿತು. ಅಂದಿನ ಕೆಲಸವು ಮುಗಿದ ಬಳಿಕ ಸಭಿಕರು ಹೊರಗೆ ಬರುತ್ತಿರುವಾಗ ಅಣ್ಣಾಸಾಹೇಬ ಲಟ್ಟೆಯವರು "ಅಲ್ಲರೀ, ಇಂಥಾ ಹೊತ್ತಿನಲ್ಲಿ ನೀವು ಮುದವೇಡಕರರಿಗೇಕೆ ಮಾತಾಡಲು ಹೇಳುವದಿಲ್ಲ? ಅವರು ನಿಂತಕೂಡಲೆ ಜನರಿಗೆ ಮಂತ್ರಹಾಕಿದಂತೆಯೇ ಆಗಿಬಿಡುತ್ತದೆ !" ಎಂದರು.

ಏಕೀಕರಣ ಪರಿಷತ್ತಿನ ಮೊನ್ನೆಯ ಅಧಿವೇಶನವು ಧಾರವಾಡದಲ್ಲಿ ಕೂಡಿದ್ದಿತಷ್ಟೆ! ಅದು ಮುಗಿಯುವ ಹೊತ್ತಿಗೆ ಅಧ್ಯಕ್ಷ ಕಾರಂತರು "ಕೃಷ್ಣರಾಯರೆಲ್ಲಿದಾರೆ, ನೋಡಿ" ಎಂದರು "ಅದೇತಕ್ಕೆ ?" ಎಂದು ಕೇಳಿದೆ. "ಮುಕ್ತಾಯದ ಭಾಷಣವನ್ನು ಅವರಿಂದಲೇ ಮಾಡಿಸಬೇಕೆಂದು ನನ್ನ ಇಚ್ಛೆಯಿದೆ ಇಷ್ಟೊಂದು ಯಶಸ್ವಿಯಾದ ಪರಿಷತ್ತಿನ ಮುಕ್ತಾಯಭಾಷಣ ಅತ್ಯಂತ ಸ್ಫೂರ್ತಿಯುಕ್ತವಾಗಿರಬೇಕು. ಅದು ನನ್ನಿಂದಾಗದು ಕೃಷ್ಣರಾಯರನ್ನೇ ಕರೆಯಿರಿ !" ಎಂದು ಹೇಳಿದರು.

* * *

ಅನ್ಯಭಾಷೆಗಳಲ್ಲಿ ನಡೆಯುವ ಭಾಷಣಗಳನ್ನು ಅಲ್ಲಿಂದಲ್ಲಿಯೆ ಕನ್ನಡಕ್ಕೆ ಅನುವಾದಿಸಿ ಹೇಳುವಲ್ಲಿ ಕೃಷ್ಣರಾಯರ ಕೌಶಲ್ಯವು ಅಸದೃಶವೇ ಸರಿ. ಈ ಸಂದರ್ಭದಲ್ಲಿಯೂ ದಿವಾಕರರಾಯರ ಉದ್ಗಾರಗಳನ್ನು ಉದಹರಿಸುವ ಮೋಹವನ್ನು ತಡೆಯಲಾರೆ "ಬೇರೆಯವರ ಭಾಷಾಂತರಕ್ಕೂ ಕೃಷ್ಣರಾಯರ ಭಾಷಾಂತರಕ್ಕೂ ಈ ಭೇದವಿದೆ ನೋಡಿರಿ : ಕೆಲವರು, ಅಭ್ಯಾಗತ ಭಾಷಣಕಾ

ಾಷಣದೊಳಗಿನ ಅಲ್ಲೊಂದು ಇಲ್ಲೊಂದು ಶಬ್ದವನ್ನಷ್ಟೆ ಡಿದುಕೊಂಡು ಭಾಷಾಂತರದ ಹೊತ್ತಿಗೆ ತಮ್ಮ ಸ್ವಂತಲೆಕ್ಕರನ್ನೇ ಡಿದು ಬಿಡುತ್ತಾರೆ. ಕೃಷ್ಣರಾಯರದು ಹಾಗಲ್ಲ; ಶಬ್ದಕ್ಕೆ ಶಬ್ದ, ಾಕ್ಯಕ್ಕೆ ವಾಕ್ಯ, ಸ್ವರಕ್ಕೆ ಸ್ವರ, ಭಾವಕ್ಕೆ ಭಾವವನ್ನು ಕೂಡ ನ್ನಡಕ್ಕೆ ಇಳಿಸಿ ಬಿಡುತ್ತಾರೆ; ಇದು ಅದ್ಭುತ! '' ಎಂದರು ಂಗರಾಯರೊಮ್ಮೆ.

ಕೃಷ್ಣರಾಯರ ಈ ತ್ವರಿತಾನುವಾದನದ ಕೀರ್ತಿಯ ಕಳಸವೆಂದರೆ ೆಕ್ಕೇರಿಯಲ್ಲಿ **ಪಟ್ಟಾಭಿಸೀತಾರಾಮಯ್ಯನವರ** ಭಾಷಣ ನ್ನು ಕನ್ನಡಿಸಿದ ಪ್ರಸಂಗವೆಂದೇ ಹೇಳಬಹುದು. ಮೈಲುದ್ದ ಾಕ್ಯಗಳು, ಮೈತುಂಬ ಅಲಂಕಾರಗಳು, ಉದ್ದುದ್ದವಾಗಿ ಳಿಯುವ ಉಪಮಾನ-ಉಪಮೇಯ-ಉತ್ಪ್ರೇಕ್ಷೆಗಳು, ಇಂಗ್ಲಿಶ್ ಾಷೆಗೇ ಮೀಸಲಾಗಿರುವ ವಿಶಿಷ್ಟ ವಿಲಕ್ಷಣ ವಾಕ್‌ಪ್ರಚಾರಗಳು ೆಲ್ಲವುಗಳಿಂದೊಡಗೂಡಿ, ತುಂಬಾ ವೇಗದಿಂದ ಸಾಗಿದ್ದ ಪಟ್ಟಾಭಿ ುವರ ಆ ಅನುಪಮವಾದ ವಾಗ್ಝರಿಯನ್ನು ಅಲ್ಲಿಂದಲ್ಲಿಯೆ ಅದ- ತೆಯೆ ಕನ್ನಡದಲ್ಲಿ ಹರಿಸಿಬಿಟ್ಟು, ಎಂತೆಂತಹರಿಂದಲೂ ತಲೆದೂಗಿಸಿ ಂಡರಿವರು. ಪಟ್ಟಾಭಿಯವರಾದರೂ ಕನ್ನಡವನ್ನು ತಿಳಿಯ ಬ್ಬವರಾದುದರಿಂದ ಕೃಷ್ಣರಾಯರನ್ನು ಅಲ್ಲಿಯೆ ಮುಕ್ತಕಂಠ ಾಗಿ ಹೊಗಳಿದರು. ಕನ್ನಡವನ್ನು ಚೆನ್ನಾಗಿಯೇ ಅರಿತುಕೊಳ್ಳಬಲ್ಲ **ಕ್ರವರ್ತಿ ರಾಜಗೋಪಾಲಾಚಾರ್ಯರು** ಕೂಡ ಕೃಷ್ಣರಾಯರ ುವಾದನ ಚಾತುರ್ಯವನ್ನು ಮನವಾರೆ ಕೊಂಡಾಡಿದ್ದನ್ನು ಯಾರೆ ಕೇಳಿದ್ದೇನೆ.

* * *

ನಾಟ್ಯವಿಷಯದಲ್ಲಿಯೂ ಕೃಷ್ಣರಾಯರ ಕೈ ಮೇಲಾಗಿಯೆ ಿದೆ. '**ಪ್ರೇಮಭಂಗ**' ನಾಟಕವನ್ನು ಬರೆದುದು, ಚುರಮುರಿ ೇಷಗಿರಿರಾಯರ ಶಾಕುಂತಲವನ್ನು ರಸವತ್ತಾಗಿ ವಿಮರ್ಶಿಸಿ ುದು, ಇದಂತೂ ಸರಿಯೆ. **ಭರತಕಲೋತ್ತೇಜಕ ನಾಟ್ಯ** ಮಾಜದಲ್ಲಿ ಪ್ರತ್ಯಕ್ಷ ನಟರಾಗಿಯೂ ನಾಟ್ಯಸೇವೆ ಮಾಡಿದ್ದಾರೆ. ಂದಿಗೂ ಬಾಗಿಲುಕೋಟೆಯ ವಾಸುದೇವ ನಾಟ್ಯವಿನೋದಿನಿ ಭೆಗೆ ಕಾರ್ಯಕಾರಿ ಮಾರ್ಗದರ್ಶಕರಾಗಿದ್ದಾರೆ. ಕರ್ನಾಟಕ ಾಟಕಾಲಂಕಾರ ಗರುಡ ಸದಾಶಿವರಾಯರು, ನಾಟ್ಯವಿಷಯಕ ವಿಧ ವಿಭಾಗಗಳ ಬಗೆಗೆ ಇವರಿಂದ ಆಗಾಗ ಸಲಹೆ ಪಡೆಯು ುದನ್ನು ನಾನು ಹತ್ತಾರು ಸಲ ನೋಡಿದ್ದೇನೆ.

* * *

ಕೃಷ್ಣರಾಯರ ಕಾವ್ಯಪ್ರತಿಭೆಯ ಪರಿಚಯವನ್ನು ಪಡೆಯ ಬಯಸುವವರು ಅವರ '**ಮುದ್ದುಮೋಹನ**' ಮುದ್ರಾಂಕಿತವಾದ ಾವುದೇ ಪದ್ಯವನ್ನು ನೋಡಬಹುದು. ರಾಜಕೀಯ ಆಂದೋಲನ ಲ್ಲಿ ಕವಿತ್ವಶಕ್ತಿಗೆ ಉಕ್ಕು ಬಂದಂತಾಗಿದ್ದಿತು. '' ಯೋಗನಿದ್ರೆಯ ಳಿದು ಬೇಗನೇಳೋ '' ಇದೇ ಮೊದಲಾದ ಭಕ್ತಿರಸ ಸಂಪೂರಿತ ದ ಹೃದ್ಯ ಪದ್ಯಗಳು, ಯೆರೋಡೆಯ ಸೆರೆಮನೆಯಲ್ಲಿಯೇ ಸಿವೆ. ಇಂತಹ ಪದ್ಯಗಳೇ ಪ್ರಮುಖವಾಗಿದ್ದ ಹರಿಕೀರ್ತನೆ ನ್ನು ಅಸಹಕಾರದ ಆಂದೋಲನ ಕಾಲದಲ್ಲಿ ಕೃಷ್ಣರಾಯರು, ಗಾಂವಿಯ ಆ ಸುಪ್ರಸಿದ್ಧವಾದ ರಾಜಕೀಯ ದೇವಾಲಯದಲ್ಲಿ (ಹನುಮನ ಗುಡಿಯಲ್ಲಿ) ನಡೆಯಿಸಿದ ಪ್ರಸಂಗವನ್ನು ಬೆಳಗಾಂವಿಯವರು ಮರೆತಿರಲಿಕ್ಕಿಲ್ಲ. ಕೀರ್ತನಾರಂಭಕ್ಕೆ ಮೊದಲು ಗಂಗಾಧರರಾಯರು, ಕೀರ್ತನಕಾರ ಕೃಷ್ಣರಾಯರ ಪರಿಚಯಾತ್ಮಕ ಭಾಷಣಮಾಡಿದುದೂ, ಕೀರ್ತನೆಯು ನಡೆದಾಗ ಶ್ರೋತೃಸಮುದಾಯವು ತಲ್ಲೀನವಾಗಿ ತಲೆದೂಗುತ್ತಿದ್ದುದೂ ನನಗೆ ಸಂಪೂರ್ಣವಾಗಿ ಸ್ಮರಣೆಯಲ್ಲಿದೆ. ಪಂಡಿತಮಾನ್ಯವಾಗಿರುವ ಪದ್ಯಗಳಂತೆ ಸಾಮಾನ್ಯರಿಗೆ ರಂಜಕ ಹಾಗೂ ಬೋಧಕವಾಗುವ ಪದಗಳನ್ನೂ ಲಾವಣಿಗಳನ್ನೂ ಕೃಷ್ಣರಾಯರು ಬರೆದಿದ್ದಾರೆ. **ಜೈಮಿನಿಭಾರತ, ಗದುಗಿನ ಭಾರತ, ವಾಸವಾಜ್ಞ್ಯಯ, ಚುರಮುರಿ ಶಾಕುಂತಲ** ಮೊದಲಾದುವುಗಳನ್ನು ಹೃದಯಂಗಮವಾಗಿ ಹಾಡಿತೋರಿಸಿ ಕನ್ನಡನಾಡಿನ ನಾಲ್ಕೂ ನಿಟ್ಟಿನ ಜನರನ್ನೂ ದಂಗುಬಡಿಸಿದ್ದಾರೆ.

* * *

''ಇಂತಹ ಪರಿಪರಿಯಿಂದ ಕನ್ನಡಕ್ಕೆ ಸೇವೆಯನ್ನು ಸಲ್ಲಿಸಿ ಕನ್ನಡದ ಉತ್ಕರ್ಷಕ್ಕಾಗಿ ಒಂದು ಬಗೆಯ ತಪಸ್ಸನ್ನೇ ಆಚರಿಸುತ್ತಿರುವ ಮಾನ್ಯ ಮುದವೀಡುರಾಯರಿಗೆ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯು ಇದುವರೆಗೂ ಏಕೆ ದೊರೆತಿರಲಿಕ್ಕಿಲ್ಲ ? '' ಎಂಬ ವಿಚಾರವು ಮನಸ್ಸಿನಲ್ಲಿ ಸುಳಿದಾಗಲೆಲ್ಲ '' ಭಾರತ ರಾಷ್ಟ್ರದ ಉದ್ಧಾರಕ್ಕಾಗಿ ಹಗಲಿರುಳು ಹೆಣಗಾಡಿ, ಕಾಂಗ್ರೆಸ್ಸಿನ ಉನ್ನತಿಯ ಬಗೆಗೆ ಅವಿಶ್ರಾಂತವಾಗಿ ಶ್ರಮವಹಿಸಿದ ಟಿಳಕರಿಗೆ ಆ ಕಾಂಗ್ರೆಸ್ಸಿನ ಅಧ್ಯಕ್ಷಪದವನ್ನಲಂಕರಿಸುವ ಯೋಗವು ಕೊನೆಯ ವರೆಗೂ ಅದೇಕೆ ಕೂಡಿಬಂದಿರಲಿಕ್ಕಿಲ್ಲ ? '' ಎಂಬುದಾಗಿ ನನ್ನ ಮನಸ್ಸಿಗೆ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ ಧನವಟೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಜಾತ್ರಿಯ ಸೀರೆಗಳು
ಯೋಗ್ಯ ಬೆಲೆಗೆ ಸಿಕ್ಕುತ್ತವೆ.

ಲಕ್ಷ್ಮೀ ವಸ್ತ್ರಭಾಂಡಾರ ಧಾರವಾಡ

(ಮೋಟಾರ್ ಸ್ಟ್ಯಾಂಡಿನ ಬಳಿಯಲ್ಲಿ)

ನಮ್ಮಲ್ಲಿ, ಎಂತಹ ಬಟ್ಟೆ ಬೇಕೋ ಅಂತಹ ಬಟ್ಟೆ ಯೋಗ್ಯವಾದ ಬೆಲೆಗೆ ಸಿಕ್ಕುವುದು. ಹೊಸ ಹೊಸ ಫ್ಯಾಶನೇಬಲ್ ಬಟ್ಟೆ ಬೇಕಾದವರು ಇಲ್ಲಿಗೇ ಬರಬೇಕು.

ಪ್ರಾಮಾಣಿಕತನವೇ ನಮ್ಮ ಶೀಲ !

ನಾನೇ ಮುದುಸವಾಲು ಹಾಕಿಕೊಂಡಿದ್ದೇನೆ. ಇಂದು ಮಾತ್ರ ನನಗೆ ಹೀಗೆನ್ನಿಸುತ್ತಿದೆ: " ಗಾಂಧಿಯವರು ಕಾಂಗ್ರೆಸ್ಸಿನ ನಿಜನಾಯಕರಾಗಿ ಕೆಲವು ವರ್ಷಗಳು ಸಂದ ಬಳಿಕವೆ ಅವರಿಗೆ ರಾಷ್ಟ್ರಾಧ್ಯಕ್ಷ ಪದವಿಯು ದೊರೆಯಿತು. ಜನತೆಯ ಹೃದಯದಲ್ಲಿ ಗಾಂಧಿಯವರು, ಅದಕ್ಕೂ ಮೊದಲು ಎಂದೋ ರಾಷ್ಟ್ರಾಧ್ಯಕ್ಷ ಪದವಿಯನ್ನು ಕೂಡ ವಿರಾರಿಬಿಟ್ಟಿದ್ದರು. ೧೯೨೪ ರಲ್ಲಿ ಬೆಳಗಾಂವಿಯ ಭಕ್ತಿ ಬಲುಮೆಯಿಂದಲೆ ಅವರು ಕಾಂಗ್ರೆಸ್ಸಿನ ಅಧ್ಯಕ್ಷಪೀಠವನ್ನೇರಲಿಲ್ಲವೆ ? ಅದೇ ಮೇರೆಗೆ ಜನತೆಯ ದೃಷ್ಟಿಯಿಂದ ಸಾಹಿತ್ಯ-ಸಮ್ಮೇಲನದ ಅಧ್ಯಕ್ಷಪದವಿಯನ್ನು ಅದೆಂದೋ ವಿರಾರಿ ಹೋಗಿರುವ ಮುದವೀಡುರಾಯರನ್ನು ವಿಧಿಯುಕ್ತವಾಗಿ ಪಟ್ಟವನ್ನೇರಿಸುವ ಶ್ರೇಯಸ್ಸು ಬೆಳಗಾಂವಿಯ ಪಾಲಿನದೆಂದೇ ಅದು ಇಂದಿನ ವರೆಗೆ ವಿರಾಸಲಾಗಿ ಉಳಿದಿರಬಾರದೇಕೆ ?

ಒಂದು ರೀತಿಯಿಂದ ಬೆಳಗಾಂವಿಯು ಕೃಷ್ಣರಾಯರ ಕರ್ಮಭೂಮಿಯಾಗಿರುವುದೆಂದರೂ ಸಲ್ಲುವಂತಿದೆ. ಹಳೆಯ ಕಾಲದ ಕಥೆಯಂತೂ ಇರಲಿ, ೧೯೩೭ರಿಂದೀಚೆಗೆ ಎಂದರೆ ಕನ್ನಡವೀರ ಕಡಪಾರಾಯರು ಬೆಳಗಾಂವಿಯಲ್ಲಿ ದೇಹವಿಟ್ಟಂದಿನಿಂದ, ಕೃಷ್ಣರಾಯರು ಬೆಳಗಾಂವಿಯ ಕನ್ನಡತನದ ಬೆಳವಣಿಗೆಯ ವಿಷಯದಲ್ಲಿ ಉತ್ಕಟವ ಕಕ್ಕುಲತೆಯಿಂದ ಕಾರ್ಯಮಾಡಿದ್ದಾರೆ. ಮೊದಲನೆಯ ಕಡಪಾ ದಿನಾಚರಣೆಯಂತೂ ಬೆಳಗಾಂವಿಯಲ್ಲಿ ದೇಶಭಕ್ತ (ಅಗಿನ ರಾವ ಬಹಾದ್ದೂರ್) ಅಂಗಡಿ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಕೃಷ್ಣರಾಯರ ವ್ಯಾಖ್ಯಾನದಿಂದಲೆ ಸಾಂಗವಾಯಿತು. ಅಂದಿನಿಂದ ಇಂದಿನ ವರೆಗೂ ಕೃಷ್ಣರಾಯರಿಗೆ ಬೆಳಗಾಂವಿಯ ಕರೆಯು ಹೋದಾಗಲೆಲ್ಲ, ತಮ್ಮ ಸಾವಿರ ಕೆಲಸಗಳನ್ನೂ ಬದಿಗೊತ್ತಿ ಅವರು ಧಾವಿಸಿಬಂದಿದ್ದಾರೆ. ಕನ್ನಡದ ಚಟುವಟಿಕೆಗೆ ಬೆಳಗಾಂವಿಯಲ್ಲಿ ಇಂದಿನಂತಹ ಪ್ರತಿಷ್ಠೆಯಿಲ್ಲದೆ ಕೇವಲ ಅಪ್ರತಿಷ್ಠಿತರ ಉಸಾಬರಿಯೆಂದಾಗಿರುವಾಗ, ಬೆಳಗಾಂವಿಯ ಬಡತರುಣರ ಬಿನ್ನಹವನ್ನು ಮನ್ನಿಸಿ ಕೃಷ್ಣರಾಯರು ಅಲ್ಲಿಗೆ ಬಂದಾಗ, ಕಾಲಕಾಲಕ್ಕೆ ಅವರು ಪಟ್ಟಿರುವ ಬವಣೆಯನ್ನು ನೆನೆದರೆ ಇಂದಿಗೂ ಬಿಸಿಯುಸಿರು ಇಳಿದು ಬರುತ್ತದೆ. ಪುರಾಣದೊಳಗಿನ ಶ್ರೀಕೃಷ್ಣನು ಆ ಬಡ ಸುದಾಮನ ಹಿಡಿಯವಲಕ್ಕಿಯಿಂದಲೆ ಸಂತುಷ್ಟನಾಗಿದ್ದನಂತೆ. ಈ ನಮ್ಮ ಕೃಷ್ಣನಾದರೂ ಬೆಳಗಾಂವಿಗೆ ಬಂದಾಗ ಕೇವಲ ಅವಲಕ್ಕಿಯಿಂದಲೇ ಸಂತುಷ್ಟನಾಗಿ ಧಾರವಾಡಕ್ಕೆ ಮರಳಿ, ಮನೆಗೆ ಹೋದ ಮೇಲೆಯೆ ಊಟ ಮಾಡಿದ ಪ್ರಸಂಗಗಳು ನನ್ನ ನೆನಪಿನಲ್ಲಿ ನಾಕಷ್ಟಿವೆ.

ಬೆಳಗಾಂವಿಯಲ್ಲಾದ ಕರ್ನಾಟಕವೃತ್ತದ ಆತ್ಮಾಹುತಿಯೆಂದರೆ ಇಲ್ಲಿಯ ಕನ್ನಡಸೇವೆಯಲ್ಲಿ ಕೃಷ್ಣರಾಯರು ನೀಡಿದ ಪೂರ್ಣಾಹುತಿಯೇ ಸರಿ. ಬೆಳಗಾಂವಿಯು ಅನ್ಯಾಕ್ರಾಂತವಾಗಿ ಕರ್ನಾಟಕದ ಕೈಬಿಡುವ ದುರ್ಧರ ಪ್ರಸಂಗವೊದಗಿದಾಗ, ಕೃಷ್ಣರಾಯರು 'ವೃತ್ತ' ಸಹಿತರಾಗಿ ಬೆಳಗಾಂವಿಗೆ ಬಂದು, ಆಯಕಟ್ಟಿನ ಸಮಯದಲ್ಲಿ ಅತ್ಯದ್ಭುತವಾದ ಕಾರ್ಯವನ್ನು ಜರುಗಿಸಿದರು. ಇಂದು ಬೆಳಗಾಂವಿಯಲ್ಲಿ ಕಂಡುಬರುವ ಕನ್ನಡಜಾಗೃತಿಯ ಶ್ರೇಯಸ್ಸಿನ ಬಹುಭಾಗವು ಕರ್ನಾಟಕವೃತ್ತದ ಅಂದಿನ ಮಹತ್ಕಾರ್ಯಕ್ಕೇ ಸಲ್ಲುವುದೆಂದು ಧಾರಾಳವಾಗಿ ಹೇಳಬಹುದು.

"ವೃತ್ತ"ವು ಬೆಳಗಾಂವಿಗೆ ಸ್ಥಲಾಂತರಿತವಾದ ಹೊತ್ತಿಗೆ, ಕರ್ನಾಟಕದ ಕುಲಪುರೋಹಿತರು ತಮ್ಮ ಜಯಕರ್ನಾಟಕದಲ್ಲಿ ಬರೆದಂತೆ, ನಿಜವಾಗಿಯೂ 'ಬೆಳಗಾಂವಿಯ ವಿಷಯಕ್ಕೆ ಕನ್ನಡಿಗರ ಚಿಂತೆ ಕಡಿದುಹೋಯಿತು'. ಆದರೆ ದುರ್ದೈವದಿಂದ ಕುಲಪುರೋಹಿತರ ಮತ್ತೊಂದು ಭವಿಷ್ಯವು ಮಾತ್ರ ನಿಜವಾಗಲಿಲ್ಲ. ಸ್ಥಲಾಂತರಿತವಾದ ಸಸಿಗಳ ಬೆಳೆಗೆಯು ಚೆನ್ನಾಗಿ ನಡೆದು ಅವು ಹೆಮ್ಮರವಾಗಿ ಬಾಳುವಂತೆ (theory of transplantation) ಧಾರವಾಡದಿಂದ ಬೆಳಗಾಂವಿಗೆ ಹೋಗಿರುವ "ವೃತ್ತ" ವೂ ಉತ್ತರೋತ್ತರವಾಗಿ ಬೆಳೆದು ಬಹುಕಾಲ ಬಾಳುವುದೆಂದು ಕುಲಪುರೋಹಿತರು ಹಾರಯಿಸಿದ್ದರು. ಆದರೆ ಭವಿತವ್ಯತೆಯು ಬೇರೆ ಬಗೆಯಾಗಿದ್ದಿತು. ಈ ಸಸಿ-ಬೆಳೆಗಳ ಮಾತು ಹೊರಟಾಗ ನನಗೆ ಮತ್ತೊಂದು ಉಪಮೆಯು ಹೊಳೆಯುತ್ತಿದೆ. ಮುಂದಿನ ಬೆಳೆಗಳು ರಭಸದಿಂದ ಬೆಳೆಯಬೇಕೆಂಬ ಉದ್ದೇಶದಿಂದ ಸಣಬಿನ ಬೆಳೆಯನ್ನು ಅರ್ಧಕ್ಕೇ ಮುರಿದು ಕಾಲಿಗೆ ಮಾಡುವ ಪರಿಪಾಠವು ಕೆಲವೆಡೆಗಳಲ್ಲಿ ಕಂಡುಬರುತ್ತದೆ. ಘನತರದ ದಿನಪತ್ರಿಕೆಯು ಬೆಳಗಾಂವಿಯಲ್ಲಿಯೆ ಹುಟ್ಟುವುದಿದ್ದುದರಿಂದ, ಅದಕ್ಕೆ ಗೊಬ್ಬರವೆಂದೇ "ವೃತ್ತ"ವು ಭೂಮಿಪಾಲಾಗಿರಬಾರದೇಕೆ ? ಅದೇನೆ ಇರಲಿ, ಅಂದು "ವೃತ್ತ"ವು ಮಾಡಿದ ಆತ್ಮತ್ಯಾಗದ ಬಲದಿಂದಲೆ ಇಂದು ಬೆಳಗಾಂವಿಯಲ್ಲಿ ಕನ್ನಡಕ್ಕೆ ವೈಭವಯೋಗವು ಒದಗಿಬಂದಿದೆ.

ಕನ್ನಡದ ಹೆಚ್ಚಳಕ್ಕೆಂದು ಇಂದಿನವರೆಗೂ ತಪಂಗೈದಿರುವ ಕೃಷ್ಣರಾಯರನ್ನು ಅಧ್ಯಕ್ಷಪಟ್ಟಕ್ಕೆ ನಿಯೋಜಿಸಿ ಸಾಹಿತ್ಯ ಸಮ್ಮೇಲನವು ತನಗೇ ಒಂದು ಅಪೂರ್ವವಾದ ಗೌರವವನ್ನು ಮಾಡಿಕೊಂಡಿದೆ. ಇವರ ಅಧ್ಯಕ್ಷತನದ ಜೀವನವೆಲ್ಲ ಕನ್ನಡದ ಕಾರ್ಯಕ್ಕಾಗಿಯೆ ಮುಡುಪಾಗಿರುವುದೆಂಬುದರಲ್ಲಿ ಯಾರೂ ಯಾವ ಸಂಶಯವನ್ನೂ ತಳೆಯಲಾರರೆಂದು ನನ್ನ ಭರವಸೆ !

— ೦ —

ಸ್ವಲ್ಪದರಲ್ಲಿ ಸ್ವಾರಸ್ಯ

ಇಲ್ಲವೆ

ಕನಕಾಚಾರ್ಯರು ಕಮ್ಯುನಿಸ್ಟ (Communist) ರಾದರೆ ?

ಫಿನ್‌ಲಾಂಡೆಂದರೆ ಒಂದು ಬಟ್ಟಿನಗಲ ದೇಶ; ಇಷ್ಟೇ ಅಲ್ಲ, ಸ್ವತಂತ್ರ ದೇಶ! ಕನಕಾಚಾರ್ಯರು ಇದನ್ನು ಕಂಡುಕೊಂಡಾಗ ತಮ್ಮ ಅಭಿಪ್ರಾಯ ಹೀಗೆ ಹೇಳಿದರು:— ಜಗತ್ತಿನ ತುಂಬಿ ಇಂಥಾ ರಾಜ್ಯ ಅಂದ್ರ ಮನೆತುಂಬಿ ಹೆಂಗಸರ ಕಾರಭಾರ ಇದ್ಹಾಂಗ .... ಅದೆಲ್ಲಾ ಹುಚ್ಚು.... !

★

ಮೊನ್ನೆ ನಮ್ಮ ಅಂಗಡಿಯಲ್ಲಿ ನಡೆದ ಮೋಜನ್ನು ನೋಡಿದ್ದರೆ ನೀವೇನೆನ್ನುತ್ತಿದ್ದಿರೊ? ಒಂದು ಇಂಗ್ಲಿಶ್ ದಿನಪತ್ರಿಕೆಯನ್ನು ಹಿಡಿದುಕೊಂಡು ನಮ್ಮ ಕನಕಾಚಾರ್ಯರ ತೇಜೋಮೂರ್ತಿಯು ಕಣ್ಣಿಗೆ ಕನ್ನಡಕ ಏರಿಸಿ ಕುಳಿತಿದೆ! ಆ ಕನ್ನಡಕದ ಹಿಂದೆ ಕಣ್ಣುಗಳು ಮುಚ್ಚಿದ್ದುವೇನೊ! ಯಾಕೆಂದರೆ, ಆಚಾರ್ಯರಿಗೆ ಇಂಗ್ಲಿಷ್ ಅಕ್ಷರಗಳೆಂದರೆ ಸಾಹೇಬರ ಚಿತ್ರಗಳು—ಎನ್ನುವಷ್ಟು ಆ ಭಾಷೆಯ ಜ್ಞಾನ. ಇಷ್ಟೇಕೆ—ಒಮ್ಮೆ ಇಂಗ್ಲಿಷ ಪುಸ್ತಕವನ್ನು ತಲೆ ಕೆಳಗಾಗಿ ಹಿಡಿದಾಗ, 'ಹಾಗಲ್ಲ, ಆಚಾರ್ಯರೆ; ಇದು ನೋಡಿರಿ, ಈ ತಲೆ ಕೆಳಗಾದ ಚಿತ್ರದಿಂದಾದರೂ ತಿಳಿಯಬಾರದೆ?' ಎಂದಾಗ, 'ಸಾಹೇಬರಿಗೆ ತಲೆ ಬೇರೆ, ಕಾಲು ಬೇರೆ ಏನಪ್ಪಾ, ನಮ್ಮ ಹಾಗೆ? ತಲೆಗೂ ಚೀಲ, ಕಾಲಿಗೂ ಚೀಲ ಹಾಕುವವರು ಅವರು, ಅವರಿಗೆ ಹೇಗೆ ನಿಂತರೂ ಅಷ್ಟೆ; ಬರಿಗಾಲಿನ ನಮ್ಮ ಜನಕ್ಕೆ ತಲೆ ಮೇಲೆ, ಕಾಲ ಕೆಳಗೆ ಇರಲೇ ಬೇಕಾದದ್ದು' ಎಂದಿದ್ದರು! ಈಗ ಅದೇ ಆಚಾರ್ಯರು ಇಂಗ್ಲಿಷ ದಿನಪತ್ರಿಕೆಯನ್ನು ಮುಂದಿಟ್ಟುಕೊಂಡು, ಅಂತರಿಕಚಕ್ಷುವಿನಿಂದ ನೋಡುತ್ತಲಿದ್ದಾರೆ. ಅಷ್ಟೊಂದು ಕುತೂಹಲ ಅವರಿಗೆ—ದಿನಾಲು ಕೇಳಬರುವ ಆ 'ಫಿನ್‌ಲಾಂಡ್' ಎಲ್ಲಿದೆ ಎಂದು. ಕೊನೆಗೆ ಆಚಾರ್ಯರು ಹತಾಶರಾಗಿ—'ನಾನೇನಪ್ಪಾ, ನಕಾಶೆ ಏನೊ! ಅದನ್ನ ನೋಡೋದು ಹೇಗೊ! ನಿಮಗ ಯಾರಿಗಾದರೂ ಕಾಣಿಸೋದೇನು ಫಿನ್‌ಲಾಂಡ ಎಲ್ಲಿದೆ ಅಂತ?' ಎಂದರು. ನಕಾಶೆಯ ಒಂದು ಮೂಲೆಗೆ ಕೈ ಹಚ್ಚಿ ಮುಂದಿದ್ದವನೊಬ್ಬ ತೋರಿಸಿದ. ಆಚಾರ್ಯರು ಒಮ್ಮೆಲೆ ನಕ್ಕು 'ಅದೇ ಅಂತೀನಿ! ಬೆರಳಿಟ್ಟರೆ ಮುಚ್ಚಿಹೋಗೋದು. ಈ ಅನಾಹುತ ಅರುವತ್ತು ವರ್ಷದ ಮುದುಕಗ ಹೇಗೆ ಕಾಣಬೇಕು?' ಎಂದರು—ಕೂಡಲೆ, ಏನೋ ಹೊಳೆದವರಂತೆ ಪ್ರಶ್ನಾರ್ಥಕವಾಗಿ 'ಎಲಾ ರಂಡೇದ್ದ!' ಎಂದವರೇ ನಸ್ಯದ 'ಗಂಗಾಪ್ರವಾಹ'ದಲ್ಲಿ ಧುಮುಕಿ ಮುಳುಗಿದರು.

ಭಕ್ತಿಪರವಶವಾಗಿ ನಾವೆಲ್ಲರೂ ಮೌನತಾಳಿ ನಿಂತೆವು; ಆಚಾರ್ಯರಿಗೆ ಯಾವುದೊ ಒಂದು ಅಪೂರ್ವ ವಿಚಾರ ಹೊಳೆದಿದೆ ಎಂಬುದರ ವಾಸನೆಯು ನಸ್ಯದ ವಾಸನೆಯೊಡನೆಯೆ ನಮಗೆ ತಟ್ಟಿತು. ಆದರೇನು? ಆಚಾರ್ಯರು ಆ ಸಮಾಧಿಯಿಂದಿಳಿದು ತಾವೇ ಹೇಳಿದಾಗಲ್ಲವೆ ನಮಗೆ ಆ ವಿಚಾರ ಯಾವುದೆಂದು ತಿಳಿಯುವುದು? ಅದಕಾಗಿ ಅನಿವಾರ್ಯವಾಗಿ, ಆತುರರಾಗಿ ಅರೆಮುಚ್ಚಿದ ಕಣ್ಣುಗಳ, ಅರೆತೆರೆದ ಬಾಯಿಯ, ಅದೇ ಚುಟುಕರಿಸಿದ ಬೆರಳುಗಳ ಆಚಾರ್ಯರ ದೇಹಭಂಗಿಯನ್ನು ಎವೆಯಿಕ್ಕದೆ ನೋಡತೊಡಗಿದೆವು. ಕೊನೆಗೆ ದೇಹ ಸಡಿಲಿಸಿತು, ಕಣ್ಣು ತೆರೆದುವು; ತುಟಿ ಮುಚ್ಚಿದುವು—ಮತ್ತೆ ಬಿಚ್ಚಿದುವು; ಕನಕಾಚಾರ್ಯರ ಕರುಣಾರ್ದ್ರ ಹೃದಯಾಕಾಶದ ಬಿದಿಗೆಯ ಚಂದ್ರನಂತಹ ಮುಗುಳ್ನಗೆ ಮೂಡಿತು: ಕ್ಷಣಾರ್ಧದಲ್ಲಿ ಮತ್ತೆ 'ಎಲಾ ರಂಡೇದ್ದ!' ಎಂದು ಉತ್ತರ ವಾಕ್ಯವನ್ನು ಉಸುರಿದರು. ಅಷ್ಟರಲ್ಲಿ ನಾವೆಲ್ಲರೂ ಆತುರರಾಗಿ ಅಲ್ಲಿಯೆ ಕುಳಿತದ್ದು ಅವರ ಲಕ್ಷ್ಯಕ್ಕೆ ಬಂದಿತೇನೊ 'ನನಗ ಒಂದು ಮಾತು ನೆನಪಾಯಿತು' ಎಂದರು. ಭಕ್ತವೃಂದವು ತಲೆದೂಗಿತು. ಆಚಾರ್ಯರು ಮುಂದುವರಿಸಿದರು— 'ಮೊನ್ನೆ ನಮ್ಮ ವೆಂಕ್ಯಾ ಮತ್ತು ಸುಬ್ಯಾ ಶಾಲೆಯಿಂದ ಬರೋವಾಗ, ಕಣ್ಣು ಬಾಯಿಸಿಕೊಂಡು ತುಟಿ ಒಡೆದುಕೊಂಡು ಮೈ ಕೈ ಮಣ್ಣುಧೂಳಾಗಿ

ಶ್ರೀರಂಗ

ಬಂದರು. ಕೇಳ್ಕೋಣೇನು ? ಇಬ್ಬರೂ ಹಾದಿಗುಂಟ ಬಡಿದಾಡ್ತಾನೇ ಬಂದಾರ! ಯಾಕ ಬಡಿದಾಡಿದಿರಿ–ಅಂದರೆ ಹೇಳವೊಲ್ಲರು!.. ಹೇಳಲಿಕ್ಕೆ ಅಷ್ಟೊಂದು ನಾಚಿಕೆ...ಯಾಕಂದರೆ, ಅವರ ಬಡಿದಾಟಕ್ಕ ಕಾರಣ ಅಂದರ ಒಂದಿಷ್ಟು ಚೂರು ಪೆನ್ಸಿಲು ! ' ಎಂದು ಕೈ ಬೆರಳಿನಿಂದ ತೋರಿಸುತ್ತ, ಈಗ ನೀವು ನಕಾಶೆಯ ಮೇಲೆ ಬೆರಳಿಟ್ಟ ಕೂಡಲೆ ಆ ಪೆನ್ಸಿಲಿನ ಮಾತೇ ನನಗ ನೆನಪಾಯಿತು. ಒಂದು ಚೂರು ಪೆನ್ಸಿಲಿನಷ್ಟೆ ಅದ ಅಲ್ಲ ಈ ಫಿನ್‌ಲಾಂಡ ! ' ನಿಮ್ಮ ಜಗಳ ಬೇಡ, ಆ ಹಾಳು ಪೆನ್ಸಿಲ್ ಬೇಡ ' ಅಂದವನೆ ಆ ಪೆನ್ಸಿಲ್ ನನ್ನ ಕಡೆಗೆ ಕಸಿದುಕೊಂಡು ಬಿಟ್ಟೆ. ಅದೇ ಹೇಳತೀನಲ್ಲ; ಅದರ ಹಾಗೇ ಈ ಬೋಡಿ ಫಿನಾಲಾಂಡ ಒಂದನ್ನ ಯಾರಾದರೊಬ್ಬರು ದೊಡ್ಡವರು ಕಿಸೇಕ್ಕ ಹಾಕಿಕೊಂಡರ ಈ ಹುಡುಗಾಟದ ಜಗಳೇ ನಿಂತು ಹೋಗತದ ' ಎಂದರು. ಅಷ್ಟರಲ್ಲಿ ಅವರಿಗೇ ಸ್ಮರಣೆಗೆ ಬಂದು,— ' ಯಾರವೂ ಹೆಸರು ಹೇಳಿದಿರಲ್ಲ ? ' ಎಂದರು. ರಶಿಯಾ ದೇಶವು ಫಿನಾಲಾಂಡನ್ನು ' ಕಿಸೆಗೆ ಸೇರಿಸಿದೆ ' ಎನ್ನಲು ಮತ್ತೆ ನಕಾಶೆಯನ್ನು ನೋಡಿ ' ಏನೂ ಅಡ್ಡಿ ಇಲ್ಲ; ನಕಾಶೆ ತುಂಬಿ ಕಾಣಿಸೋದು ರಶಿಯಾನೇ ಅಲ್ಲ ?' ಎಂದರು.

ಆಚಾರ್ಯರು ಬೋಲ್‌ಶೆವ್ಹಿಸ್ಟ ಎನಬಹುದೆ ? ನಮಗೆಲ್ಲರಿಗೂ ದಿಗಿಲು ! ಅಥವಾ ಆಚಾರ್ಯರಿಗೆ ರಾಜಕಾರಣದ ಇದೊಂದೂ ತೊಡಕು ತಿಳಿಯದೆ ? ಕೊನೆಗೆ ಈ ಪ್ರಶ್ನೆಯನ್ನು ಬಿಡಿಸಿಕೊಳ್ಳಲೇ ಬೇಕೆಂದು ಕೆಲವರು ಧೈರ್ಯದಿಂದ ಹಟತೊಟ್ಟರು. ' ರಶಿಯಾ ಅಂದರೆ ಬೋಲ್‌ಶೆವಿಸ್ಟ ' ಎಂದು ಒಬ್ಬ ಗುಣುಗುಟ್ಟಿದ. ಆಚಾರ್ಯರಿಗೆ ಪೂರ್ತಿಯಾಗಿ ಕೇಳಿಸಿತೊ ಇಲ್ಲವೊ ! ' ಬಲುಶೈವ ಇರಬೊಲ್ಲದ್ಯಾಕ, ವೀರಶೈವ ಇರವೊಲ್ಲದ್ಯಾಕ ' ಎಂದರು. ಮತ್ತೊಬ್ಬ ' ಕಮ್ಯುನಿಸ್ಟ ' ಎಂದ ; ಆಚಾರ್ಯರಿಗೆ ' ಕಣ್ಮುಟ್ಟ ' ಎಂದು ಕೇಳಿಸಿತು ಕೊನೆಗೆ ನಮ್ಮಲ್ಲಿಯ ಒಬ್ಬ ಬೃಹಸ್ಪತಿ ಉಪನ್ಯಾಸ ಕೊಡುವವನಂತೆ ಆರಂಭಿಸಿದ: ' ಅಲ್ಲ, ಆಚಾರ್ಯರೆ, ರಶಿಯಾ ಅಂಬೋದು ಒಂದು ಕುಲಗೆಟ್ಟ ರಾಷ್ಟ್ರ—' ಎನ್ನುವಷ್ಟರಲ್ಲಿ 'ಮ್ಲೇಚ್ಛರಿಗೆ ಮತ್ತೆಲ್ಲಿ ಕುಲ ತಂದಿ, ಅವಿವೇಕಿ ಗುಂಡೇದ್ದು!' ಎಂದು ಅಷ್ಟ ಮಾತನಾಡಿದರು. ಅಂತೂ ರಶಿಯಾದ ರಾಜನೀತಿಯ ತಿರುಳನ್ನು ತಿಳುಹಿಸುವ ಬುದ್ಧಿಭಾಗ್ಯ ನಮಗೆ ದೊರೆಯುವುದೆ ಸಂಶಯಾಸ್ಪದವಾಯಿತು.

ಆಚಾರ್ಯರ ಹಿರಿತನದ ಮುಂದೆ ಯಾರ ಮಾತೂ ನಡೆಯದು. ನಿಮಗೆ ಆಶ್ಚರ್ಯವೆನಿಸಬಹುದು, ಈ ಪುರಾಣಮತವಾದದ ಗೊಡ್ಡುಗೊಂಬೆಯ ಮುಂದೆ ಕಲಿತವರಾದ ನಾವು ಕೈಮುಗಿವುದೆಂದರೆ ನಿಮಗೆ ಆಶ್ಚರ್ಯವಲ್ಲದೆ ಅಸಹ್ಯವೂ ಎನಿಸುತ್ತಿರಬಹುದು. ಆದರೇನು ? ಎಷ್ಟೋ ಸಲ ನಾನು ಹೇಳಿರುವೆನಲ್ಲವೆ? ಆಚಾರ್ಯರ ಬುದ್ಧಿಸಂಸ್ಕಾರದ ಎದುರಿನಲ್ಲಿ ನಮ್ಮ ಶಿಕ್ಷಣಸಂಸ್ಕಾರಕ್ಕೆ ನಿಲ್ಲುವ ತ್ರಾಣವೇ ಇದ್ದಿರಲಿಲ್ಲ. ಅಂದಿನ ಮಾತಂತೂ ಹೋಗಲಿ, ಮುಂದೆ ಮತ್ತೊಮ್ಮೆ ಅದೇ ಸಂದರ್ಭದೊರೆತಾಗ ' ರಶಿಯಾದಲ್ಲಿ ಸ್ವಂತದ ಆಸ್ತಿ ಎಂಬುದಕ್ಕೆ ಅಧಿಕಾರವೇ ಇಲ್ಲ ' ಎಂದಾಗ ' ಮ್ಲೇಂಚ್ಛರೊಳಗ ಬ್ರಾಹ್ಮಣರ ಜಾತಿ ಏನು ಇವರದು ? ' ಎಂದರು. ಕೆಲ ಹೊತ್ತು ಸುಮ್ಮನಿದ್ದು ' ಶ್ರೀಹರೀ, ಇದೆಲ್ಲ ನಿನ್ನದೇ ಆಪಾ, ಎಂದರು ! ನೋಡಿದರಾ ! ಬೋಲ್‌ಶೆವಿಝಮ್ಮಕ್ಕೂ ಬ್ರಾಹ್ಮಣ್ಯಕ್ಕೂ ಸಂಬಂಧವನ್ನು ಸಹಜವಾಗಿ ಕಲ್ಪಿಸಿಕೊಂಡ ಕನಕಾಚಾರ್ಯರ ಕಲಾಹೃದಯವನ್ನು ? ' ಹುಡುಗರಿರಾ, ನಿಮಗ ನಗೆ ಬರೋದಿಲ್ಲವೆ ?.. ನನಗ ಗೊತ್ತು, ನೀವು ಯಾಕೆ ನಗತಾ ಇದ್ದೀರಿ ಅಂಬೋದು..! ತಾ, ಇಲ್ಲಿ..ಯಾರು ತೆಗೆದಿಟ್ಟರು ನನ್ನ ನಶ್ಯದ ಡಬ್ಬಿಯನ್ನ—?....ಎಲಾ, ಎರಡುಕಾಲಿನ ಆಂಜನೇಯಾ ! .. ತಾ ಇಲ್ಲಿ ಆ ಡಬ್ಬಿಯನ್ನ....!ಎಲ್ಲಾ ಶ್ರೀಹರಿಯದು ಅನ್ನೋವಾಗ ನಶ್ಯದ ಡಬ್ಬಿ ನನ್ನದು ಅಂತ ಅನಿಸಬೇಕಂತೀಯಾ ನನ್ನ ಕಡೆಯಿಂದ! ..ನನ್ನದು ಅಂದರೇನು ? .. ನಾನೇ ಸ್ವತಃ ಶ್ರೀ ಹರಿಯ ಸೂತ್ರದ ಗೊಂಬೆ..ನನ್ನದು ಅಂದರೆ ಕಡೆಗೆ ಅವನದೆ..ಈಗ ಏನೋ ಹೇಳಿದೆಯಲ್ಲ—ಕಾಮುಣೀಜು—ಅಂತ ಅಂದರೇನು ?.. ಎಲ್ಲಾ ಶ್ರೀಹರಿಯದು ಅಂತ..ಇರೋತನಕ ನನ್ನದು..ಆವ್ಯಾಲೆ ಏನಿದೆ ? ..ಅದಕ್ಕೇ ಹೇಳೋದಿಲ್ಲವೇ—ನಾಹಂಕರ್ತಾ, ಹರಿಃ ಕರ್ತಾ " ಎಂದರು; ನಶ್ಯದ ಮಂದಮಾರುತನನ್ನು ಬೀರಿದರು.

ಇದೆಲ್ಲ ಕೇಳಿದ ನಿಮಗೆ ನಮ್ಮ ಕನಕಾಚಾರ್ಯರು ನಿಜವಾಗಿಯೆ ಬೋಲ್‌ಶೆವ್ಹಿಸ್ಟ ಎಂಬ ಭಾವನೆಯಾದೀತು. ಅದಕ್ಕಾಗಿ ನಮ್ಮ ತರುಣ ಚಳವಳಿಗಾರನೊಬ್ಬನ ಅನುಭವವನ್ನು ತಮಗೆ ಹೇಳುವೆ. ಒಂದು ದಿನ ಸಾಯಂಕಾಲ, ಈ ತರುಣ ಎಲ್ಲಿಯೊ ಉಪನ್ಯಾಸ ನಡೆಯಿಸಿದ್ದನಂತೆ. ಅದನ್ನು ಮುಗಿಸಿಕೊಂಡು ಬರುವಾಗ ದಾರಿಯಲ್ಲಿ ಕನಕಾಚಾರ್ಯರು ಅವನನ್ನು ಕಂಡರು. ಮಾತಿಗೆ ಮಾತು ಬೆಳೆದು 'ನಾನೊಂದು ಉಪನ್ಯಾಸವನ್ನು ಕೊಟ್ಟೆ' ಎಂದನಂತೆ ಆ ತರುಣ. ' ಸಂಜೆಯ ಹೊತ್ತಿನೊಳಗ ಹಾಂಗ ಸಿಕ್ಕ ಸಿಕ್ಕದ್ದನ್ನ ಕೊಡಬಾರದಪಾ ' ಎಂದರಂತೆ ಆಚಾರ್ಯರು. ತರುಣನಿಗೆ ಅವಮಾನವಾಯಿತೇನೊ— ' ಉಪನ್ಯಾಸ ಅಂದರೆ ಲೆಕ್ಚರ' ; ಈಗ ನಾನು ಒಂದು ವಿಷಯದ ಮೇಲೆ ಭಾಷಣಮಾಡಿ ಬಂದೆ' ಎಂದನಂತೆ. ' ಏನೇನು ಹೇಳಿದೆ ಹೇಳು ನೋಡೋಣ ' ಎಂದು ಸಾಹಜಿಕವಾದ ಹಿರಿಯತನದಿಂದಲೆ ಕೇಳಿದರು ಆಚಾರ್ಯರು ' ಇಂದು ಧನವಂತರ ರಾಜ್ಯವಿದೆ, ನಮ್ಮ ಹಕ್ಕುಗಳನ್ನೆಲ್ಲ— ಎನ್ನುವಷ್ಟರಲ್ಲಿ ಆಚಾರ್ಯರು, ಕೈಬೆರಳುಗಳನ್ನು ಮೂಗಿನ ತುದಿಗೆ ಕಣ್ಣನ್ನು ಅವನ ಕಡೆಗೆ ಹೊರಳಿಸಿ " ಏನಂದೆ ? ಯಾವ ರಾಜ್ಯ ಹುಡುಗಾ, ನಿನಗಿನ್ನೂ ಮದುವೆ ಆಗಿಲ್ಲ, ಆ ಮ್ಯಾಲೆ ತಿಳದೀತು! ಪರೀಕ್ಷಾದ ಅಭ್ಯಾಸಮಾಡು, ವರದಕ್ಷಿಣೆ ಹೆಚ್ಚು ಸಿಕ್ಕೀತು ಎಂದು ಬೆನ್ನು ಚಪ್ಪರಿಸಿ, ತಪ್ಪದೆ ಕೂಡ ತಿರುಗಿ ನೋಡದೆ ಹೊರಟು ಹೋದರಂತೆ !

ಹಾಗೆ ನೋಡಿದರೆ ಆಚಾರ್ಯರ ಜೀವನದಲ್ಲಿ ರಾಜಕಾರಣಕ್ಕಾಗಲಿ, ಆರ್ಥಿಕದೃಷ್ಟಿಗಾಗಲಿ ಮಹತ್ವವೇ ಇಲ್ಲ. ' ರಾಜಕಾರಣಾನೇ ಆಗಲಿ—ಮತ್ತೇನೇ ಆಗಲಿ—ಎಲ್ಲಾದರ ತಳಕ್ಕೆ ನೀತಿಶಾಸ್ತ್ರ ಇದೆ ಅಂತ ನಿಮ್ಮ ಮಹಾತ್ಮಾ ಗಾಂಧೀ ಹೇಳತಾನಲ್ಲ ಅದೇನೂ ಹೊಸದಲ್ಲ, ಆದರೆ ನಿಮ್ಮ ಮಹಾತ್ಮಗೂ ಕೂಡ ವ್ಯವಹಾರದ ಅನುಭವ ಇಲ್ಲ ಅಂಬೋ ಮಾತೇ ಸಿದ್ಧ ಆಗತದೆ ಎಂದು ಒಮ್ಮೆ ನಮಗೆ ಹೇಳಿದ್ದರು. ಕನಕಾಚಾರ್ಯರೆಷ್ಟೆ

(೩೧೭ ನೆಯ ಪುಟ ನೋಡಿರಿ)

೪೫. ಶ್ರೀಶಾಂತೀಶ್ವರಚರಿತಂ

ಸಂ:— ಶ್ರೀ. ಎಂ. ನೇಮಿರಾಜ ಶಾಸ್ತ್ರಿಗಳು
ಮೈಸೂರು ಶ್ರೀಪದ್ಮಾವತೀ ಗ್ರಂಥಮಾಲೆಯ
೧ನೆಯ ಪುಷ್ಪ

ಈ ಸಾಂಗತ್ಯಗ್ರಂಥವನ್ನು ಬರೆದ ಕವಿಯ ಹೆಸರು 'ಶಾಂತಿಕೀರ್ತಿಮುನಿ' ಎಂದು. ಈತ ತನ್ನ ಗ್ರಂಥವನ್ನು "ತೌಳವ ದೇಶದೊಳಗಣ ವೇಣುಪುರ (ಮೂಡುಬಿದರೆ)ದ ವೃಷಭಜಿನಾಲಯದಲ್ಲಿ ಶಕ ಸಂ. ೧೬೫೩ (ಕ್ರಿ. ಶ. ೧೭೩೧) ನೆಯ ವಿರೋಧಿಕೃತ್ ಸಂವತ್ಸರದ ಆಶ್ವಿಜ ಶುದ್ಧ ದಶಮಿ ಬುಧವಾರದಲ್ಲಿ" ಬರೆದು ಮುಗಿಸಿದುದಾಗಿ ಹೇಳಿದ್ದಾನೆಯೆಂಬುದು ಈ ಗ್ರಂಥದ ಕೊನೆಯ ಭಾಗದಿಂದ ತಿಳಿಯುವುದು. ಕನ್ನಡ ಕವಿಚರಿತ್ರಕಾರರು ಮಿ. ರೈಸ್ ಅವರು ಪಟ್ಟ ಅಭಿಪ್ರಾಯವನ್ನೇ ಪುರಸ್ಕರಿಸಿ, ಈ ಕವಿ ಬಾಳಿದ ಕಾಲ ೧೫೧೯ನೆಯ ಇಸವಿ ಎಂದು ಹೇಳಿದ್ದಾರೆ. ಮುದ್ರಿತವಾಗಿರುವ ಈ ಪುಸ್ತಕ ಕೇವಲ ೧೧ ಸಂಧಿಗಳನ್ನು ಒಳಗೊಂಡಿದೆ. ಆದರೆ ಮಿ. ರೈಸ್ ಅವರು ಇದರಲ್ಲಿ ೨೩ ಸಂಧಿಗಳಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಗ್ರಂಥದ ಕೊನೆಯಲ್ಲಿರುವ

ಧರಣಿಪ ಶಕಕಾಲ ಸಂದೊಂದು ಸಾವಿರ-
ದರುನೂರೈವತ್ತುಮೂರನೆಯ
ವಿರೋಧಿಕೃತ್ ಸಂವತ್ಸರಾಶ್ವಿಜಶುದ್ಧ ಭಾ-
ಸುರ ದಶಮಿಯ ಬುಧವಾರ....

ಎಂಬುದಾಗಿ ಸ್ಪಷ್ಟವಾಗಿ ಹೇಳಿರುವುದರಿಂದ, ಈ ಶಾಂತಿಕೀರ್ತಿ ಮುನಿಗಳ ಕಾಲದ ಬಗ್ಗೆ ಸಂದೇಹ ಪಡಬೇಕಾದುದೇ ಇಲ್ಲ. ಮೇ. ರೈಸ್ ಅವರ ಕಣ್ಣುತಪ್ಪಿನಿಂದ ಕಾಲದ ವಿಷಯಕವಾಗಿ ಹೀಗೆ ತಪ್ಪಾಗಿರುವ ಸಂಭವವಿದೆ. ಏಕೆಂದರೆ ಕೈಬರೆಹದ ತಾಳೆಗರಿಯ ಗ್ರಂಥಗಳನ್ನು ಎರಡೋ ಮೂರುಮೂರೊ ಕೂಡಿಸಿ ಎರಡು ಹಲಗೆಗಳ ನಡುವೆ ಇರಿಸಿ ಕಟ್ಟಿಡುವುದುಂಟು. ಸ್ಥೂಲವಾಗಿ ನೋಡುವವರಿಗೆ ಪ್ರಾರಂಭದ ಗ್ರಂಥ ಒಂದೇ ಅದರಲ್ಲಿರುವುದೆಂದು ಭಾವನೆಯಾಗುವ ಸಂಭವವಿರುವುದು. ಈ ಈ ಗ್ರಂಥದಲ್ಲಿರುವ ೧೧, ೨೩ ಸಂಧಿಗಳಗೊಂದಲವನ್ನು ನೋಡಿದರಂತೂ ಹೀಗೆಯೆ ಆಗಿರಬಹುದೆಂದು ಎನಿಸುವುದು.

ಪೊನ್ನ, ಕಮಲಭವರು ಚಂಪೂರೂಪದಲ್ಲಿ ಬರೆದ ಶಾಂತಿನಾಥತೀರ್ಥಂಕರರ ಚರಿತ್ರೆಯನ್ನೆ ಶಾಂತಿಕೀರ್ತಿಮುನಿ–ಸಾಮಾನ್ಯರ ತಿಳವಳಿಕೆಗಾಗಿ ಇರಬಹುದು– ಸಾಂಗತ್ಯದಲ್ಲಿ ರಚಿಸಿದ್ದಾನೆ. ಇದರ ಮೂಲಮಾತೃಕೆ ಆರಾಪಟ್ಟಣದ 'ಜೈನಸಿದ್ಧಾಂತಭವನ'ದಲ್ಲಿ ದೊರೆಯಿತು. ಅದನ್ನು ಶ್ರೀಮಾನ್ ಕೆ. ಭುಜಬಲಶಾಸ್ತ್ರಿಗಳ ಪ್ರೇರಣೆಯಿಂದ ಸಂಪಾದಕರು ತೆಗೆದುಕೊಂಡು ಬಂದು, ಸಾಲಿಗ್ರಾಮದ ಶ್ರೀಮತಿ ಪದ್ಮಾವತಮ್ಮನವರ ಧರ್ಮದ್ರವ್ಯದ ನೆರವಿನಿಂದ ಅಂದವಾಗಿ ಮುದ್ರಿಸಿ ಪ್ರಕಟಿಸಿದ್ದಾರೆ. ಗ್ರಂಥದ ಮೊದಲು, ಸುಲಭ ಭಾಷೆಯಲ್ಲಿ ಕಥಾಸಾರವನ್ನೂ ಕೊಟ್ಟಿದ್ದಾರೆ. ಮೂಲಲೇಖಕ ಇದನ್ನು ಕಾವ್ಯಬುದ್ಧಿಯಿಂದ ಬರೆದಿರದೆ ಧರ್ಮಪ್ರಚಾರ ಬುದ್ಧಿಯಿಂದ ಬರೆದಿರುವನು. ಎಂತಲೆ ಇದರಲ್ಲಿ ಅಷ್ಟಾದಶ ವರ್ಣನೆ, ಅರ್ಥಾಲಂಕಾರ, ಶಬ್ದಾಲಂಕಾರಗಳಿಗೆ ಅವಕಾಶವನ್ನೆ ಕೊಟ್ಟಿಲ್ಲ. ಎಂತಲೆ ಇಲ್ಲಿ ಕವಿಯು:

ಛಂದೋಲಂಕಾರ ಲಕ್ಷಣ ಗಣಗಳ
ಕುಂದನೋಡದೆ ಪುಣ್ಯಕಥೆಯ
ಒಂದನೆ ನೋಡಿಮುರುಟುಚಂದನ
ದೊಳು
ಗಂಧವೆ ಮುಖ್ಯವೆಂತಂತೆ!

ಎಂದು ಬಿನ್ನವಿಸಿಕೊಂಡಿರುವನು. ಅಲ್ಲದೆ ಕಾವ್ಯಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ಮಿಸಿ ತೋರಿಸುವ ಕವಿಗಳ ಬಗೆಗೆ ಈ ಗ್ರಂಥಕಾರನ ಅಭಿಪ್ರಾಯವು ಹೀಗಿದೆ:—

ದುಷ್ಟಕಷ್ಟದ ಮದ-ಮಾತ್ಸರ್ಯಾನ್ವಿತ
ಗುಣ-
ಭ್ರಷ್ಟರ ಕ್ರೂರ ಕಥೆಗಳ
ಸೃಷ್ಟಿಸಿ ಪಲವು ರಚನೆಯಿಂದ ಸನ್ಮಾರ್ಗ-
ನಷ್ಟರಾಗುವರದರಿಂದ!

ಸಾಂಪ್ರದಾಯಿಕ ಬುದ್ಧಿಯ ಅಭಿಪ್ರಾಯ ಹೀಗೆಯೆ ಆಗುವುದೆಂಬುದನ್ನು ಮತಾಭಿಮಾನಿಗಳ ಯಾವ ಕೃತಿಯಲ್ಲಿಯೂ ಕಾಣಬಹುದಾಗಿದೆ.

ಜೈನಮತಾನುವರ್ತಿಗಳಿಗೂ, ಶಾಂತೀಶ್ವರರ ಪರಿಚಯ ಮಾಡಿಕೊಳ್ಳಬೇಕೆನ್ನುವವರಿಗೂ ವಾಚನೀಯವಾದ ಗ್ರಂಥವಿದು. ಈ ಪದ್ಮಾವತೀ ಗ್ರಂಥಮಾಲೆಯು ಇದರಂತೆಯೆ ಜೈನಸಾಹಿತ್ಯದ ಬೇರೆ ಅಪ್ರಕಾಶಿತ ಗ್ರಂಥಗಳನ್ನೂ ಬೆಳಕಿಗೆ ತರುತ್ತಿರಲೆಂದು ನಮ್ಮ ಕೋರಿಕೆ.

—ಬೆಟಗೇರಿ ಕೃಷ್ಣಶರ್ಮ

೪೬. ನಾಮಧಾರಿ

ಶ್ರೀಮಾನ್ ರಂ. ಶ್ರೀ. ಮುಗಳಿ ಎಂ. ಎ. ಬಿ. ಟಿ. ಅವರು ಬರೆದು ಪ್ರಕಟಿಸಿದುದು.

ಇದೊಂದು ಮೂರು ಅಂಕಗಳುಳ್ಳ ಸಾಮಾಜಿಕ ನಾಟಕ. ಸರಕಾರದಿಂದ ಸಿಕ್ಕುವ ಬಿರುದು-ಬಾವಲಿಗಳ ಮೆಚ್ಚಿಗಾಗಿ, ಅಜ್ಞಾನಿಗಳಾದ ಹಳ್ಳಿಯ ಸಿರಿವಂತ ರೈತರು ಹೇಗೆ ಬಲಿಗೆ ಈಡಾಗುವರಾಗಿ ನಿಲ್ಲುವರೆಂಬುದನ್ನು ತೋರಿಸುವ ಉದ್ದೇಶದಿಂದ ಈ ನಾಟಕವನ್ನು ಬರೆದಿದ್ದಾರೆಂದು ತೋರುವುದು.

ನಾಟಕಕ್ಕೆ ನಾಯಕ 'ಕಂಗಾಲೂರ' ಕೆಂಚನಗೌಡ. ಸದ್ಯ ತನ್ನ ಹಳ್ಳಿಯನ್ನು ಬಿಟ್ಟು ಪಟ್ಟಣದಲ್ಲಿ ವಾಸಿಸುತ್ತಿರುವನು. ಅಲ್ಲಿಯ ಜಾಗಿರದಾರ ಕಲ್ಯಾಣರಾಯರು, ಗೌಡನ ಅಜ್ಞಾನದ ಪ್ರಯೋಜನ ಪಡೆಯ

ಬೇಕೆಂದು, ಆತನಿಗೆ 'ಬೆಂಚ್ ಮ್ಯಾಜಿಸ್ಟ್ರೇಟ್', 'ರಾವ್‌ಸಾಹೇಬ' ಪದವಿಗಳ ಹುಚ್ಚನ್ನು ಹಚ್ಚಿ, ಅವನ ಮನೆಯ ಸಿರಿಯನ್ನು ತನ್ನ ಮನೆಗೆ ತುಂಬಿಕೊಳ್ಳುತ್ತಿರುವರು. ಕಲ್ಯಾಣರಾಯರಿಗೆ ಮಕ್ಕಳಿರಲಿಲ್ಲ. ಅವರ ಹೆಂಡತಿ ಕೌಸಲ್ಯಾಬಾಯಿಗೆ ಮಕ್ಕಳ ಹುಚ್ಚು. ಈಕೆಯ ಹುಚ್ಚಿನ ಪ್ರಯೋಜನವನ್ನು ಪುರೋಹಿತ ಗುಂಡಾಚಾರಿ ಪಡೆಯುತ್ತಿರುವನು. ಕೆಂಚನಗೌಡನ ಮನೆಯೆಲ್ಲ ಬರಿದಾಗಿ ಸಾಲಗಾರರು ಆತನ ಹೊಲ-ಮನೆಗಳನ್ನೆಲ್ಲ ಜಪ್ತಿಮಾಡಿಸುತ್ತಿರುವಾಗಲೆ—ಆತನಿಗೆ ರಾವಸಾಹೇಬ ಪದವಿ ಸಿಕ್ಕ ಸುದ್ದಿ ಗೊತ್ತಾಗುವುದು. ಆದರಿಂದುಂಟಾದ ಗೌಡನ ಆನಂದೋನ್ಮತ್ತಾವಸ್ಥೆಯಲ್ಲಿಯೆ ನಾಟಕ ಕೊನೆಗೊಳ್ಳುವುದು. ನಾಟಕದ ವಸ್ತುವನ್ನು ಬೆಳೆಯಿಸುವುದಕ್ಕಾಗಿಯೂ ಮುಂದುವರಿಸುವುದಕ್ಕಾಗಿಯೂ ಬರುವ ಇನ್ನಿತರ ಪಾತ್ರಗಳಲ್ಲಿ, ಗುಂಡಾಚಾರ್ಯರ ಪೋಲಿಮಗ ಮಾಧ್ವಾ, ಕೆಂಚನಗೌಡರ ಅವಿಚಾರದ ಬೊಂಬೆ ಚಂದ್ರಿ, ನಿರುದ್ಯೋಗಿ ಪದವೀಧರನಾದ ನಂದೀಶ ಇವರು ಮುಖ್ಯರು. ಲೇಖಕರು ತಮ್ಮ ಮುನ್ನುಡಿಯಲ್ಲಿ 'ಮುಖ್ಯವಾಗಿ ಇದನ್ನು ಪಾತ್ರಪ್ರಧಾನವಾದ ಸಾಮಾಜಿಕ ವಿನೋದನಿಷ್ಠ ನಾಟಕ' ಎಂದು ಹೇಳಿರುವರಲ್ಲದೆ 'ಇಲ್ಲಿಯ ಆಯಾ ಪಾತ್ರಗಳನ್ನು ಹಾಸ್ಯವಾಗಿ ಚಿತ್ರಿಸುವಾಗ ವಿಕೃತಿಯ (Caricature) ರೀತಿಯನ್ನು ಅನುಸರಿಸಿದೆ. ವಾಸ್ತವಜೀವನದ ಸಂಪರ್ಕವನ್ನು ಇಟ್ಟುಕೊಂಡಿದೆ' ಎಂದೂ ತಿಳುಹಿರುವರು.

ಉದ್ದೇಶಸಾಧನೆಗಾಗಿ ಹೊರಟ ನಾಟಕವಿದು. ಆದುದರಿಂದಲೆ ಇದರಲ್ಲಿಯ ಪಾತ್ರಗಳೆಲ್ಲ ಲೇಖಕರ ಕೈಗೊಂಬೆಗಳಾಗಿ ಬೇಕಾದ ಹಾಗೆ ಬಣ್ಣಬಳಿದುಕೊಂಡು ಕುಣಿಯುತ್ತ ನಡೆದಿರುವುವಲ್ಲದೆ, ಪಾತ್ರಪ್ರಧಾನನಾಟಕಗಳಲ್ಲಿರುವಂತೆ ಪ್ರತಿಪಾತ್ರವೂ ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ತೋರಿಸುತ್ತಿಲ್ಲ. ಕೆಂಚನಗೌಡನಲ್ಲಿರುವಂತಹ ಆಶೆಯನ್ನು ನಾವು, ಸುಶಿಕ್ಷಿತರೆನಿಸಿಕೊಳ್ಳುವ ಅನೇಕರಲ್ಲಿಯೂ ಕಾಣಬಹುದು. ಆದರೆ ಅವನಲ್ಲಿರುವಂತಹ ಅಸಂಸ್ಕೃತತೆಯನ್ನೂ ಮೂರ್ಖತನವನ್ನೂ ಬೆಂಚ್ ಮ್ಯಾಜಿಸ್ಟ್ರೇಟರಾದ— ರಾವ್‌ಸಾಹೇಬರಾದ ಬಹುಜನರಲ್ಲಿ ಕಾಣಲಾರೆವು. ಜಾಗಿರ್‌ದಾರ್ ಕಲ್ಯಾಣರಾಯರಿಗೆ ಅವರದೆನ್ನುವ ಒಂದು ಸ್ವಭಾವವಿರುವುದೆನ್ನಬಹುದಾದರೂ, ಆ ಸ್ವಭಾವವು ಬೆಳೆದು ನಿಲ್ಲುವಂತಹ ಹರಿದಾಟಕ್ಕೆ ನಾಟಕದ ವಸ್ತುವಿನಲ್ಲಿ ಆಸ್ಪದವೇ ಇಲ್ಲ. ಕಲ್ಯಾಣರಾಯರಂತಹರ ಹೆಂಡತಿ—ಪಟ್ಟಣದಲ್ಲಿ ಬಳೆದು ಬಾಳುವಾಕೆ—ಸಂಪ್ರದಾಯವಂತರಾದ ಹೆಣ್ಣುಮಕ್ಕಳಿಗೆ ಆಚಾರ-ವಿಚಾರಗಳೆಷ್ಟೊ ತಿಳಿದಿರುವುವು— ಆದರೂ ಗುಂಡಾಚಾರ್ಯರು ಹೇಳಿದ 'ಸೂಕರಯಜ್ಞ'ವನ್ನು ಅವಳು ಮಾಡುವಳು. ಗುಂಡಾಚಾರ್ಯರ ಕುಟಿಲತನ ಹೊರಗೆಡಹಲಿಕ್ಕೆ ಇತರರು ಕೂಡ ಏತಕ್ಕೆ ಶಕ್ತರಾಗಲಿಲ್ಲವೊ! ಮಾಧ್ವ್ಯಾನ ಪಾತ್ರವಂತೂ ಸ್ಪಷ್ಟವಾಗಿ ಮೂಡಿಯೆ ಇಲ್ಲ. ಅವನಿಗೆ ಆಗಾಗ 'ಚಾ-ಪುರಿ' ಗಳಿಗೆ ಎಲ್ಲಿಂದ ಅನುಕೂಲತೆ ದೊರೆಯುತ್ತಿದ್ದಿತೋ! ತಾನು ಸಾಕಷ್ಟು ತಿನ್ನುವನಲ್ಲದೆ ಚಂದ್ರಿಯಂತಹರಿಗೂ ಸಾಕಷ್ಟು ಕೊಡುತ್ತಿರುವನು. ಚಂದ್ರಿಯ ಪಾತ್ರವು ತೇಪೆಹಚ್ಚಿದಂತಾಗಿದೆ. ಆಕೆಯ ವಯಸ್ಸು, ಮನಸ್ಸು, ಸಂಸ್ಕಾರ ಎಲ್ಲವೂ ಆಭಾಸಮಯವೆ! ಲೇಖಕರ ಅಭಿಪ್ರಾಯದಂತೆ ಇವೆರಡೂ ಪಾತ್ರಗಳು ಆದರ್ಶವೆನಿಸಿಕೊಳ್ಳುವುವು. ಆದರೆ ಲೇಖಕರ ಮನಸ್ಸಿನಲ್ಲಿ ಮೂಡಿನಿಂತಿರುವಂತೆ ಅವು ನಾಟಕದಲ್ಲಿ ಮೂಡಿರಲಾರವಾಗಿ ನಮಗೆನಿಸುವುದು. ಮಧುರಯ್ಯನ ಮಾತುಗಳ ಮೂಲಕ ಕೆಂಚನಗೌಡನ ಪೂರ್ವಚರಿತ್ರೆಯನ್ನು ಹೊರಕ್ಕೆ ಹಾಕಬೇಕೆಂದು ಹವಣಿಸಲಾಗಿದೆ. ಆದರೆ ಪ್ರತ್ಯಕ್ಷವಾಗಿ ಕಾಣುತ್ತಿರುವ ಗೌಡನ ಅಜ್ಞಾನವು ರಸಿಕವಾಚಕರಲ್ಲಿಯೂ ಪ್ರೇಕ್ಷಕರಲ್ಲಿಯೂ ಮರುಕವನ್ನುಂಟುಮಾಡಿ, ಆತನ ದೌಷ್ಟ್ಯದ ಶಕ್ತಿಯನ್ನೇ ಕಡಿಮೆಮಾಡುವುವು. ಅಜ್ಞಾನಿಯ ದೌಷ್ಟ್ಯಕ್ಕೆ ಕಾರಣ ಅಜ್ಞಾನವೇ ಸರಿ! ಎಂತಲೆ ಅಜ್ಞಾನಿಯ ಅಪರಾಧಗಳ ವಿಷಯದಲ್ಲಿ ತಿಳಿದವರೆಂದೂ ಸಂತಪ್ತರಾಗರು.

ಬುದ್ಧಿವಂತವ್ಯಕ್ತಿಯ ಆಕಸ್ಮಿಕವಾದ ಅಜ್ಞಾನವೂ, ಅಂತಹ ಅಜ್ಞಾನಮೂಲಕವಾದ ವಿಕೃತಿಗಳೂ ವಿನೋದದ ಹುಟ್ಟಿಗೆ ಮೂಲ, ಬೆಳವಣಿಗೆಗೆ ಕಾರಣ. ತನ್ನ ಅಜ್ಞಾನದ ತಿಳಿವಳಿಕೆ ಆ ವ್ಯಕ್ತಿಗಾಗಿ ಪಶ್ಚಾತ್ತಾಪಪಡುವುದರಲ್ಲಿಯೆ ಹಾಸ್ಯರಸದ ಕೇಂದ್ರವಿರುವುದು. ಆದರಂತೆಯೆ ಮೂರ್ಖನ ಜ್ಞಾನಾಭಾಸದಲ್ಲಿಯೂ ನಗೆಯಿರುವುದು. ವಿಕಾರವಾದ ಬಣ್ಣ ಬಳಿದುಕೊಂಡು ಹುಚ್ಚುಪಿಚ್ಚಾಗಿ ಮಾತನಾಡುತ್ತ ಬರುವ ವೇಷಗಳು ಜನಸಾಮಾನ್ಯರ ವಿನೋದಕ್ಕೆ ಕಾರಣವಾಗಬಹುದಾದರೂ ರಸಿಕರಿಂದ ನಿಜವಾದ ನಗೆಯ ಕಾಣಿಕೆಯನ್ನವು ಪಡೆಯಲಾರವು. ಇದಕ್ಕೆ ಉದಾಹರಣೆಗಳೆಂದು ಇಂದಿನ ಕಂಪನಿಯ ನಾಟಕಗಳಲ್ಲಿಯ ವಿದೂಷಕ ಪಾತ್ರಗಳನ್ನೇ ಎತ್ತಿ ಹೇಳಬಹುದಾಗಿದೆ. "ಜನಸಾಮಾನ್ಯವನ್ನು ಮೆಚ್ಚಿಸಬೇಕೆಂಬುದು ಸಾಮಾಜಿಕ ನಾಟಕದ ಸೂತ್ರವಾಗಿರಬೇಕು" ಎಂಬುದೊಂದು ಮಾತನ್ನೂ ಲಕ್ಷ್ಯದಲ್ಲಿಟ್ಟು ಈ ನಾಟಕವನ್ನು ಲೇಖಕರು ಬರೆದಿದ್ದಾರೆ. ಎಂತಲೇ ಇದರಲ್ಲಿ ೩–೪ ಪಾತ್ರಗಳನ್ನು ಬಿಟ್ಟರೆ ಮಿಕ್ಕೆಲ್ಲ ಪಾತ್ರಗಳೂ ನಗಿಸುವುದಕ್ಕಾಗಿಯೆ ಬರುತ್ತವೆ. ನಗಿಸಲಾರದಿದ್ದ ಪಾತ್ರಗಳು ಸ್ವಭಾವಪರಿಪುಷ್ಟಿಯನ್ನು ಹೊಂದದೆ ನಿರ್ಜೀವವಾಗಿ ಕಾಣುತ್ತಿವೆ.

ಶ್ರೀಮಾನ್ ಮುಗುಳಿಯವರ ರಸಿಕತೆಯಲ್ಲಿಯೂ ಅವರ ಲೇಖನಕಲೆಯ ಒಳ್ಳೆಯ ಭವಿಷ್ಯದಲ್ಲಿಯೂ ನಮಗೆ ತುಂಬ ಭರವಸೆಯಿದೆ. ಅವರ ಲೆಕ್ಕಣಿಕೆಯಿಂದ ಒಳ್ಳೆಯ ನಾಟಕಗಳು ಹೊರಕ್ಕೆ ಬಂದು ಕನ್ನಡ ರಂಗಭೂಮಿಗಿರುವ ಕೊರತೆ ಹಿಂಗಲೆಂದು ನಮ್ಮ ಹಾರಯಿಕೆಯಿದೆ.

—H. S. K.

೧. ಕಾಶ್ಮೀರ ಯಾತ್ರೆ

ಶ್ರೀಮಾನ್, ಗುರುನಾಥ ಜೋಶಿಯವರು ಬರೆದುದು.

ಪ್ರೇಮ ಪ್ರಕಟನಾಲಯದ ೧೨ನೆಯ ಪ್ರಕಟನೆ

ಇದೊಂದು ಪ್ರವಾಸವರ್ಣನೆಯನ್ನೊಳಗೊಂಡ ಗ್ರಂಥ. ೮ ಭಾಗಗಳಲ್ಲಿ ವಿಭಾಗಿಸಲಾಗಿದ್ದು, ಮೊದಲಿನ ಏಳು ಭಾಗಗಳು ಕಾಶ್ಮೀರದಲ್ಲಿಯ ಬೇರೆ ಬೇರೆ ಪ್ರದೇಶಗಳ ಪರಿಚಯವನ್ನು ಸುಲಭವಾಗಿ ವಿವರಿಸಲಾಗಿದೆ. ೮ನೆಯ ಭಾಗದಲ್ಲಿ ಕಾಶ್ಮೀರ

ಇತಿಹಾಸದ ಬಗೆಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ೧. ಶ್ರೀನಗರದ ಒಂದು ಬೀದಿ, ೨. ಡಲ್ ಸರೋವರ, ೩. ಹಿಮಾಲಯದ ಒಂದು ದೃಶ್ಯ, ಹೀಗೆ ಮೂರು ಬೇರೆ ಬೇರೆ ಚಿತ್ರಗಳನ್ನೂ ಸೇರಿಸಲಾಗಿದೆ.

ಇತ್ತೀಚೆಗೆ ಪ್ರವಾಸಸಾಹಿತ್ಯ ಕನ್ನಡದಲ್ಲಿ ಬೆಳೆಯುತ್ತಿರುವುದು ಆನಂದದ ಸಂಗತಿ. ಬರೆಯುವವ ಹದಗಾರಿಕೆಯಿಂದ ಬರೆದರೆ, ಲಲಿತಸಾಹಿತ್ಯವನ್ನೋದಿದ ಮನೋರಂಜನದ ಫಲವೂ ಸಿಕ್ಕಬಹುದು; ಲೋಕಪರಿಚಯವನ್ನು ಮಾಡಿಕೊಟ್ಟ ಬಹುಶ್ರುತತ್ವದ ಫಲವೂ ಸಿಕ್ಕಬಹುದು. ಹದಗಾರಿಕೆಯಿಲ್ಲದೆ ಬರೆದರೆ ಪಾಠಶಾಲೆಯಲ್ಲಿ ಓದಿಸಬಹುದಾದ ನೀರಸ ಭೂಗೋಲ ಪಾಠದಂತೆನಿಸಿ, ಪ್ರಯೋಜನವು ಸಾಕಷ್ಟಾಗದೆ ಹೋಗುವುದು. ಶ್ರೀ. ಗುರುನಾಥ ಜೋಶಿಯವರು ಹದಗಾರಿಕೆಯಿಂದ ಬರೆಯಬೇಕೆಂದು ಹವಣಿಸಿದುದು ಇದರಲ್ಲಿ ಸ್ಪಷ್ಟವಾಗಿ ಮೂಡಿದೆ. ಕಾಶ್ಮೀರವನ್ನು ನೋಡದಿದ್ದರೂ ಅದರ ಪರಿಚಯ ಮಾಡಿಕೊಳ್ಳಬೇಕಾದುದು ತುಂಬ ಅವಶ್ಯ. ಎಲ್ಲರೂ ಇದನ್ನೋದಬೇಕು.

—ಸಂ.....ಕ.

೨. ಭಾರತೀಯ ಸ್ವಾತಂತ್ರ್ಯದ ಹೆಜ್ಜೆಗಳು

ಶ್ರೀಮಾನ್, ಬಿಂದುಮಾಧವ ಬುರ್ಲಿಯವರು ತಮ್ಮ ಮಿಂಚಿನಬಳ್ಳಿಯಲ್ಲಿ ೬ನೆಯ ವರ್ಷದ ೧ನೆಯ ಕುಡಿಯನ್ನಾಗಿ ಪ್ರಕಟಿಸಿರುತ್ತಾರೆ.

ಕಾಂಗ್ರೆಸ್ಸಿನ ಜನ್ಮದಾರಭ್ಯದಿಂದ ಇಂದಿನ ವರೆಗೂ ನಡೆದಿರುವ ಸ್ವಾತಂತ್ರ್ಯದ ಹೋರಾಟವನ್ನು ವಿವರಿಸಿ, ಅದರಲ್ಲಿಯ ಮುಖ್ಯ ಮುಖ್ಯ ಮಹಾತ್ಮರ ಪರಿಚಯವನ್ನು ಮಾಡಿಕೊಡಲು ಇದರಲ್ಲಿ ಹವಣಿಸಿದ್ದಾರೆ. ಹಿಂದಿನ ಕಾಲದಲ್ಲಿ ಲಾಲ, ಬಾಲ, ಪಾಲ, ಈ ತ್ರಿಮೂರ್ತಿಗಳೂ ಸೇರಿ ಮಾಡಿದ ರಾಜಕೀಯ ಆಂದೋಲನವನ್ನು ಸ್ಪಷ್ಟವಿಶದವಾಗಿ ಚಿತ್ರಿಸದೆ, ಲೋಕಮಾನ್ಯರೊಬ್ಬರ ರಾಜಕಾರಣವನ್ನಷ್ಟೇ ಇದರಲ್ಲಿ ಎತ್ತಿಹಿಡಿದು ಬರೆದದ್ದೇಕೆಂಬುದು ಗೊತ್ತಾಗಲಿಲ್ಲ. ಅಲ್ಲದೆ ಘಟನಾತ್ಮಕ ವಿಷಯಗಳ (constitutional problems) ಮೇಲೆ ಚರ್ಚಿಸುವಲ್ಲಿ, ಪರಮಪೂಜ್ಯ ಕೈ. ವಾ. ಮೋತಿಲಾಲರನ್ನೂ ವಿಠ್ಠಲಭಾಯಿಯವರನ್ನೂ ನಿರ್ದೇಶಿಸದೆ ಬಿಟ್ಟಿರುವುದು ಸ್ವಲ್ಪ ಆಶ್ಚರ್ಯದ ಮಾತಾಗಿದೆ. ಈ ಗ್ರಂಥದ ೧ರಿಂದ ೧೧೭ರ ವರೆಗಿನ ಪುಟಗಳಲ್ಲಿ ಐತಿಹಾಸಿಕ ದೃಷ್ಟಿಯಿಂದ ಮಾಡಿದ ಸ್ವಾತಂತ್ರ್ಯದ ಹೆಜ್ಜೆಗಳ ವಿವೇಚನೆಯು ಮಾರ್ಮಿಕವಾಗಿಯೂ ಹೃದಯಂಗಮವಾಗಿಯೂ ಇದೆ. ಪುಟ ೧೧೭ರಿಂದ ಕೊನೆಯ ವರೆಗೂ ಈ ಗ್ರಂಥವು ಈ ೨೦ ವರ್ಷಗಳ (ಗಾಂಧಿಯುಗದ) ಹೋರಾಟದ ಹೆಜ್ಜೆಗಳನ್ನೊಳಗೊಂಡಿದೆ. ಇದರಲ್ಲಿಯ ವಿಷಯ ವಿವೇಚನೆಯನ್ನು ನೋಡಿದರೆ ಐತಿಹಾಸಿಕ ದೃಷ್ಟಿಗಿಂತಲೂ ಭಾವನಾತ್ಮಕ ದೃಷ್ಟಿಯು ಹೆಚ್ಚಿದೆಯೆಂದೆನಿಸುವುದು. ಪ್ರಚಾರಕ ಸಾಹಿತ್ಯದಲ್ಲಿ ಅದು ತಪ್ಪೆನಿಸಲಾರದು; ಭಾವನಾತ್ಮಕವಾಗಿ ಬರೆದುದರಿಂದಲೆ ಈ ಭಾಗವು ಸ್ಫೂರ್ತಿದಾಯಕವಾಗಿದೆ.

ಪುಟ ೩೧-೩೨ ರಲ್ಲಿ ಬಂದಿರುವ 'ನಮ್ಮ ಮುಂದಿನ ಹೋರಾಟ'ದ ಚಿತ್ರವು ಮಾತ್ರ ಅಷ್ಟು ಸಮಂಜಸವೆನಿಸದು. ಈಗಿನ ಭಾರತೀಯ ಮುತ್ಸದ್ದಿಗಳಿಗೆ ಇದೇ ಒಂದು ತೋಡಕಾಗಿಲ್ಲವೆ? ಅವರಿಗೆ ಕೂಡ ಇನ್ನೂ ಯಾವ ಮುನ್ನೋಟವೂ (vision) ನಿಶ್ಚಿತವಾಗಿ ಕಂಡಿಲ್ಲ. ಇಂತಹ ಸಮಯದಲ್ಲಿ ಮುಂದಿನ ಹೋರಾಟದ ಬಗೆಗೆ ನಿರ್ದಿಷ್ಟವಾಗಿ ಬರೆಯುವುದು ಅಷ್ಟೊಂದು ಪ್ರಯೋಜನಕಾರಿಯೆನಿಸದಲ್ಲವೆ?

ಈ ಗ್ರಂಥದಲ್ಲಿ ಮಹರ್ಷಿ ದಾದಾಭಾಯಿ ನವರೋಜಿ, ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ ನೆಹರೂ ಈ ನಾಲ್ವರ ಚರಿತ್ರ-ವಿಸ್ತಾರವೂ ಒಳಗೊಂಡಿದೆ. ಒಟ್ಟಿನ ಮೇಲೆ ನೋಡಿದರೆ ಈ ಪುಸ್ತಕವು ಕನ್ನಡ ಸಾಹಿತ್ಯಕ್ಕೆ ತುಂಬ ಆವಶ್ಯಕವಾದ ಕಾಣ್ಕೆಯಾಗಿದೆ.

—ವ್ಹಿ. ಎಸ್. ಓಂಕಾರ

೧೯. ಸುಳಿವು-ಹೊಳವು

ಬೇರೆ ಬೇರೆ ಲೇಖಕರು ಬರೆದ ೨೬ ಪ್ರಬಂಧಗಳ ಸಂಗ್ರಹ, ಮನೋಹರ ಗ್ರಂಥಮಾಲೆಯ ೩೫ನೆಯ ಪ್ರಕಟನೆ.

ಪ್ರೊ. ಗೋಕಾಕ ಅವರು ಬರೆದ ಈ ಗ್ರಂಥದ ಮುನ್ನುಡಿಯಲ್ಲಿ, ಪ್ರಬಂಧಲೇಖನ ಪದ್ಧತಿಯ ಚರ್ಚೆ ಅನೇಕಮುಖದಿಂದ ಆಗಿರುವುದರಿಂದ ಅದು ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ. ಇಲ್ಲಿಯ ೨೬ ಪ್ರಬಂಧಗಳನ್ನು ಬರೆದವರಲ್ಲಿ ಈಗಾಗಲೆ ಕನ್ನಡ ಸಾಹಿತ್ಯದಲ್ಲಿ ತಮ್ಮದೊಂದು ಸ್ಥಾನ ಪಡೆದುಕೊಂಡ ಲೇಖಕರು ಅನೇಕರಿರುವರು. ಅಲ್ಲದೆ 'ಶಾಂತಿ,' 'ಇತಿಹಾಸ,' 'ನೌಕಾಚಂದ್ರ,' 'ಇನ್ನೊಂದು ಪುರಾಣ,' 'ಸಾವಿನ ಕೂಡ ಸರಸ' ಮೊದಲಾದ ಪ್ರಬಂಧಗಳು ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿ ಹಲವರಿಗೆ ಪರಿಚಿತವಾದುವು ಗಳಿವೆ. ಮಿಕ್ಕವುಗಳಲ್ಲಿ 'ಹೋಟಲುಗಳು' (ಎ. ಎನ್. ಮೂರ್ತಿರಾವ್) 'ಏನೆ ಯಮನನ್ನೇ ಹೆದರಿಸಿತು' (ಗೊರೂರು ರಾ. ಸ್ವಾ. ಅಯ್ಯಂಗಾರ್) 'ಇಜಾರ' (ಕೆ. ಸಂಪದ್ಗಿರಿರಾವ್) 'ಬರೆಹಗಾರನ ಬಜೆಟ್ಟು' (ಪ್ರೊ. ಜಾಗೀರದಾರ್) ಮೊದಲಾದ ಲಲಿತಪ್ರಬಂಧಗಳು ಚೆನ್ನಾಗಿ ಇವೆ. ಆಧುನಿಕ ಕನ್ನಡ ಲೇಖಕರ ಲೇಖನ ಶೈಲಿಯ ವೈವಿಧ್ಯವನ್ನೂ ವ್ಯಕ್ತಿತ್ವವನ್ನೂ ಒಂದೆಡೆಯಲ್ಲಿ ನೋಡಬೇಕೆನ್ನುವವರಿಗೆ ಈ ಸಂಗ್ರಹ ನಿಜವಾಗಿಯೂ ಸಹಕಾರಿಯಾಗಿದೆ. ಮಾಧ್ಯಮಿಕ ಪಾಠಶಾಲೆಗಳಲ್ಲಿ ಇದನ್ನು ಪಠ್ಯಪುಸ್ತಕವನ್ನಾಗಿಯೂ ನಿಯಮಿಸಬಹುದು.

—ಸಂಪಾದಕರು

ದಾಕ್ಷಿಣ್ಯ-ಪಕ್ಷಪಾತಗಳ ಸೋಂಕು ಇಲ್ಲದೆ ಮಾಡುವ ಗ್ರಂಥವಿಮರ್ಶೆಗಳೆ ಜಯಂತಿಯಲ್ಲಿ ಪ್ರಕಟವಾಗುವುವು !

ಸಾದರ ಸ್ವೀಕಾರ

೬೬. **ಬ್ಯಾ. ಸಾವರಕರರ ಜೀವನ ಚರಿತ್ರೆ:**—ಬರೆದವರಾರೆಂಬುದು ಗೊತ್ತಿಲ್ಲ. ಶ್ರೀ. ಶಂ. ವಾ. ಜಠಾರ, ಕನಕಾದಿತ್ಯ ಪ್ರೆಸ್, ಧಾರವಾಡ ಅವರು ಮುದ್ರಿಸಿ ಪ್ರಕಟಿಸಿದ್ದಾರೆ. ಕ್ರಾ. ಅ ೩೨ ಪುಟ; ಬೆಲೆ ೦-೨-೦.

ಹಿಂದುಸ್ಥಾನದ ಸ್ವಾತಂತ್ರ್ಯಯುದ್ಧೋದ್ಯಮದಲ್ಲಿ ಬ್ಯಾ. ಸಾವರಕರರಿಗೊಂದು ವಿಶಿಷ್ಟವಾದ ಸ್ಥಾನವುಂಟು. ಈ ಸ್ವಾತಂತ್ರ್ಯ ವೀರನ ಚರಿತ್ರೆ ರೋಮಹರ್ಷಕವಾದುದಾಗಿದೆ. ಮಹಾರಾಷ್ಟ್ರ ಭಾಷೆಯಲ್ಲಿ ಸಾವರಕರರು ತಾವೇ ಬರೆದ ‘ಮಾಝಾ ಜನ್ಮಠೇಪ’ ಎಂಬ ಆತ್ಮಚರಿತ್ರಾತ್ಮಕ ಗ್ರಂಥವು, ಒಂದೊಂದು ವಾಕ್ಯದಲ್ಲಿಯೂ ಉತ್ಸಾಹವನ್ನು ಸೂಸುವಂತಹದಿರುವುದು. ಈ ತೇಜಸ್ವಿಯ ವೀರಜೀವನದ ಕತೆ ಕನ್ನಡಿಗರೆಲ್ಲ ಓದಬೇಕಾದಂತಹದು. ಸ್ವಲ್ಪದರಲ್ಲಿಯೆ ಇರಲಿ, ಕನ್ನಡಿಗರಿಗೆ ಅವರ ಭಾಷೆಯಲ್ಲಿ ಇದನ್ನು ಒದಗಿಸಿಕೊಟ್ಟ ಲೇಖಕ-ಪ್ರಕಾಶಕರು ಅಭಿನಂದನೀಯರು. ಶ್ರೀ ಮಾ ನಾ ಆಲೂರ ವೆಂಕಟರಾಯರು ಚಿಕ್ಕದಾಗಿ ಮುನ್ನುಡಿ ಬರೆದಿದ್ದಾರೆ.

೬೭. **ನಾಡಗುಡಿ** (ಪಕ್ಷಪತ್ರಿಕೆ):—ಪ್ರಧಾನ ಸಂಪಾದಕರು: ಶ್ರೀ. ಪಿ. ಮುರಹರಿರಾವ್, ಸಂಪಾದಕರು: ಶ್ರೀ. ಗು. ಕೃ. ದೇಶಪಾಂಡೆ. ಪ್ರಧಾನ ಸಂಪಾದಕರು ಮಂಗಳೂರಿನ ಆನಂದ ಪಾವರ್ ಪ್ರೆಸ್ಸಿನಲ್ಲಿ ಪ್ರಕಟಿಸುವರು. ಕ್ರಾ. ೪. ೨೮ ಪುಟ. ವಾ. ಚಂ. ೧-೧೪-೦.

ಒಳ್ಳೊಳ್ಳೆಯ ಲೇಖನ ಪ್ರಕಟವಾಗಿ, ಪತ್ರಿಕೆ ಕಳೆಗೊಂಡು ಬಹುಕಾಲ ಬಾಳಲೆಂದು ನಮ್ಮ ಹಾರಯಿಕೆ.

೬೮. Federal Observer (ಸಚಿತ್ರ ಇಂಗ್ಲಿಷ್ ವಾರಪತ್ರಿಕೆ): — ಮುಂಬಯಿಯಲ್ಲಿ ಹೊಸದಾಗಿ ಹೊರಡತೊಡಗಿದೆ. ಸಂಪಾದಕರು ಶ್ರೀಮಾನ್ ದೀನದಯಾಳ ಆರ್. ಮಹದೇಶ್ವರ. ಪ್ರಕಾಶಕರು ಮೆಟ್ರೊಪೊಲಿಟನ್ ನ್ಯೂಜ್‌ಪೇಪರ್ಸ್ ಲಿಮಿಟೆಡ್, ಶಾಂತಿಸದನ ಫ್ರೆಂಚ್‌ಬ್ರಿಜ್, ಬಾಂಬೆ.

೬೯. **ಶಿಕ್ಷಣದ ಮೂಲತತ್ತ್ವಗಳು** (ಶೈಕ್ಷಣಿಕ ತತ್ತ್ವಗ್ರಂಥ):—ಲೇಖಕರು ಶ್ರೀ. ತ. ನಾ. ಅಮ್ಮಿನಭಾವಿ ಸೇನ್ಸರ್ ಶಿಕ್ಷಕರು, ಹೆಣ್ಣುಮಕ್ಕಳ ಕಾಲೇಜು, ಧಾರವಾಡ. ಪ್ರಕಾಶಕರು: ಪ್ರಾಥಮಿಕ ಶಿಕ್ಷಣಪ್ರಸಾರ ಮಂಡಲ, ಧಾರವಾಡ. ಕ್ರಾ. ಅ. ೧೦+೨೨೮ ಪುಟ. ಬೆಲೆ ೧-೦-೦.

೭೦. **ಮುಂದುವರಿದ ಜಪಾನು** (ಪರಿಚಯಾತ್ಮಕ ಗ್ರಂಥ):— ಲೇಖಕರು: ಶ್ರೀ. ಕೆ. ಎಲ್. ಸಂಜಪ್ಪ ವಾಣಿಜ್ಯ ವಿ. ವಿ. ನಿಲಯ ಟೋಕಿಯೊ—ಜಪಾನ್. ಧಾರವಾಡದ ವಿಂಚಿನ ಬಳ್ಳಿಯ ೨ನೆಯ ವರ್ಷದ ಮೂರನೆಯ ಕುಡಿ. ಕ್ರಾ. ಅ. ೧೪೪ ಪುಟ. ಬೆಲೆ ೧-೦-೦.

೭೧. **ಸುಬ್ರಹ್ಮಣ್ಯ ಮಹಿಮೆ** (ಸಚಿತ್ರ):— ಬೆಂಗಳೂರು ಬಸವನಗುಡಿಯ ಶ್ರೀಕುಮಾರಸ್ವಾಮಿ ಶೈಲದಲ್ಲಿಯ ಸ್ವಾಮಿಸೇವಾ ನಿರತರಾದ ಧರ್ಮಕರ್ತರಿಂದ ಪ್ರಕಾಶಿತವಾದುದು. ಕ್ರಾ. ಅ. ೫೪ ಪುಟ. ಬೆಲೆ ೦-೮-೦.

ಸುಬ್ರಹ್ಮಣ್ಯ ಸ್ವಾಮಿಯ ಭಕ್ತರು ಓದಬೇಕಾದುದು. ಆವಶ್ಯಕತೆಯಿದ್ದವರು ತರಿಸಿಕೊಳ್ಳಬಹುದು !

೭೨. **ಸಂಗೀತರತ್ನಾವಳಿ** (ಪದ್ಯ-ಸಂಗ್ರಹ):— ಬರೆದವರು ಶ್ರೀಮಾನ್ ಬೆನಗಲ್ಲು ರಾಮರಾಯರು ಎಂ. ಎ., ಎಲ್. ಎಲ್. ಬಿ. ಮಲ್ಲೇಶ್ವರಂ, ಬೆಂಗಳೂರು. ಪ್ರಕಾಶಕರು ಕರ್ಣಾಟಕ ಏಕೀಕರಣ ಸಂಘ ಬೆಂಗಳೂರು. ಡೆ. ಅ. ೧೦ ಪುಟ.

ಕರ್ಣಾಟಕದ ಅಭಿಮಾನವನ್ನು ಜಾಗೃತಗೊಳಿಸುವಂತಹ ಸುಂದರವಾದ ಹಾಡುಗಳು ಇದರಲ್ಲಿ ಸಂಗ್ರಹಿತವಾಗಿರುವುವು. ಪ್ರತಿಯೊಂದು ಹಾಡಿನಲ್ಲಿಯೂ ರಾಯರು ತಮ್ಮ ಕನ್ನಡ ಮಮತೆಯ ಹೊನಲನ್ನು ಹರಿಸಿದ್ದಾರೆ. ಮೇಳ – ನಗರಸಂಕೀರ್ತನಗಳಿಗೆ ಇಲ್ಲಿಯ ಗೀತಗಳು ತುಂಬ ಉಪಯುಕ್ತವಾಗಿವೆ.

೭೩. **ತುಟಿಮೀರಿದುದು:**– (ಹಾಸ್ಯಪ್ರಬಂಧಸಂಗ್ರಹ) ಬರೆದವರು ಶ್ರೀಮಾನ್ ‘ರಾ. ಶಿ.’ ಬೆಂಗಳೂರು. ಧಾರವಾಡದ ಮನೋಹರ ಗ್ರಂಥಮಾಲೆಯ ೩೮ನೆಯ ಪ್ರಕಟನೆ. ಕ್ರಾ. ಅ. ೧೪೪ ಪುಟ. ಬೆಲೆ ೦-೧೪-೦ ಗಳು.

೭೪. **ಜೀವನ** (ಹೊಸ ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ದ. ರಾ. ಬೇಂದ್ರೆ ಎಂ. ಎ. ಮತ್ತು ಪ್ರೊ. ವಿ. ಕೆ. ಗೋಕಾಕ ಎಂ. ಎ., ಪ್ರಕಾಶಕರು ಶ್ರೀ. ಶೇಷಗಿರಿ ರಾವ್ ಕುಲಕರ್ಣಿ, ಸಾಧನಮುದ್ರಣಾಲಯ ಧಾರವಾಡ. ಕ್ರಾ. ೪ ದ ೬೪ ಪುಟಗಳು. ವಾ. ಚಂ. ೪-೦-೦. ಬಿಡಿಸಂಚಿಕೆಗೆ ೫ ಆಣೆಗಳು.

‘ಗೀತಾಂಕ’ವೆಂದು ಹೊರಟ ಎರಡನೆಯ ಸಂಚಿಕೆಯೂ ನಮ್ಮ ಕಡೆಗೆ ಬಂದಿದೆ. ಶ್ರೀಯುತರುಗಳಾದ ಆಲೂರ, ಮಾಸ್ತಿ, ಸಾಲಿ, ಬೇಂದ್ರೆ, ಮುಗುಳಿ, ದೇಶಪಾಂಡೆ, ಮನೋಹರರಾವ್, ಮುಧೋಳಕರ ವಾಮನರಾವ್ ಮೊದಲಾದವರ—ಗೀತೆಯ ವಿಷಯಕವಾದ—ಲೇಖನಗಳು ಅದರಲ್ಲಿ ಪ್ರಕಟವಾಗಿವೆ.

೭೫. **ನವಚೇತನ** (ಹೊಸ ಮಾಸಪತ್ರಿಕೆ) ಸಂಪಾದಕರು ಶ್ರೀ. ರಾ. ವೆಂ. ವಾಲಗಳ್ಳಿ, ವೈದ್ಯ ಶಿರಸಿ. ಸಂಪಾದಕರೇ ಪ್ರಕಾಶಕರು. ಫೂಲ್ಸ್‌ಕ್ಯಾಪ್ ೪ ದ ೩೪ ಪುಟಗಳು. ವಾ. ಚಂ. ೧-೮-೦. ಬಿಡಿಸಂಚಿಕೆ ೦-೧-೬.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಸಪತ್ರಿಕೆಗಳಿಲ್ಲದಿರುವ ಕೊರತೆಯನ್ನು ತುಂಬಲು ಈ ಪತ್ರಿಕೆ, ಕಳೆದ ವಿಜಯದಶಮಿಯಿಂದ ಶಿರಸಿಯಲ್ಲಿ ಪ್ರಕಟವಾಗತೊಡಗಿದೆ. ಸಂಪಾದಕರ ಪ್ರಯತ್ನ ಪ್ರಯೋಜನಕಾರಿಯಾಗಿ ಪರಿಣಮಿಸಿ, ಉ. ಕ. ಜಿಲ್ಲೆಯ ಸಾಹಿತ್ಯಿಕರ ಕೃತಿಗಳೆಲ್ಲ ನವಚೇತನದ ಮುಖಾಂತರ ಹೊರಕ್ಕೆ ಬರಲಿ ಎಂದು ಅಪೇಕ್ಷಿಸುವೆವು.

೭೬. **ಧುರೀಣ** (ಮಾಸಪತ್ರಿಕೆ). ಸಂಪಾದಕರು ಶ್ರೀ ಯುತರುಗಳಾದ ಆರ್. ಎಸ್, ಶೆಣೈ ಮತ್ತು ಬನ್ನಂಜೆ ರಾಮಾಚಾರ್ಯರು ಉಡುಪಿ. ಡೆ. ೧/೮ ದ ೨೮ ಪುಟ. ಬಿಡಿ ಸಂಚಿಕೆಗೆ ೦-೨-೦.

ಮೊದಲು 'ವರ್ತಕ ಧುರೀಣ' ಎಂದಿದ್ದುದೇ ಈಗ 'ಧುರೀಣ'ವಾಗಿ ಮಾರ್ಪಟ್ಟು, ವಿವಿಧಮುಖವಾದ ವಾಙ್ಮಯಕ್ಷೇತ್ರದಲ್ಲಿಯೂ ಕಾರ್ಯ ಮಾಡಬೇಕೆಂದು ಮುಂದುವರಿಯುತ್ತಲಿದೆ. ಧುರೀಣ, ದೀರ್ಘಾಯುಷಿಯಾಗಿ ಬಾಳಲಿ !

೭೭. Haveri Municipal High School Miscellany (ವರ್ಷಪತ್ರಿಕೆ). ಇದೇ ಮೊದಲನೆಯ ವರ್ಷ. ಸಂಪಾದಕರು ಶ್ರೀಮಾನ್ ಪಿ. ವ್ಹಿ. ಜೋಗಳೇಕರ್ ಬಿ.ಎ., ಎಸ್.ಟಿ.ಸಿ. ಮತ್ತು ಸಿ.ಸಿ. ಕಂಬೀಮಠ ಬಿ, ಎ., ಎಸ್. ಟಿ. ಸಿ, ಡ. ಅ. ೨೨+೪೨ ಪುಟಗಳು, ಬೆಲೆ ವಿದ್ಯಾರ್ಥಿಗಳಿಗೆ ೦-೩-೦, ಇತರರಿಗೆ ೦-೪-೦.

ವಿದ್ಯಾರ್ಥಿಗಳು ಪ್ರಬುದ್ಧರಾಗುವುದರೊಳಗಾಗಿಯೆ ಅವರಲ್ಲಿ ಲೇಖನ-ವಾಚನಗಳ ಕೂಢಿ ಬೆಳೆಯುವಂತೆ ಮಾಡುವುದು ಪ್ರತಿಯೊಂದು ಮಾಧ್ಯಮಿಕ ಶಾಲೆಯ ಕರ್ತವ್ಯವಾಗಿದೆ. ಹಾವೇರಿಯ ಮ್ಯುನಸೀಪಲ್ ಹೈಸ್ಕೂಲು ತನ್ನ ಕರ್ತವ್ಯದ ಬಗೆಗೆ ಜಾಗೃತವಾಗಿ ಮುಂದೆ ಬಂದುದು ತುಂಬ ಸಂತೋಷದ ಸಂಗತಿಯಾಗಿದೆ.

೭೮. ಸಿನಿಮಾ:— (ಮಾಸಪತ್ರಿಕೆಯ ದೀಪಾವಳಿಯ ಸಂಚಿಕೆ). ಸಂಪಾದಕರು ಶ್ರೀ. ಪಂಚಾಕ್ಷರಯ್ಯ ಹಿರೇಮಠ, ಗದಗು. ಪ್ರಕಾಶಕರು ಶ್ರೀ. ಜೆ. ಎೀ. ಹಿರೇಮಠ ಗದಗು. ಕ್ರಾ. ೧/೮ ದ ೩೮ ಪುಟ. ಸಂಚಿಕೆಯ ಬೆಲೆ ೦-೨-೦

ಸಿನೇಮಾ ಪ್ರಪಂಚಕ್ಕೆ ಸಂಬಂಧಿಸಿದ ಬೇರೆ ಬೇರೆ ಸಚಿತ್ರ ಲೇಖನಗಳಲ್ಲದೆ ಸಣ್ಣ ಕತೆಗಳೂ ಇರುವುವು. ಮೇಲೋಲೆಯ ಮೂರುಬಣ್ಣದ ಚಿತ್ರ ಆಕರ್ಷಕವಾಗಿದೆ.

೭೯. **ಮಧುರವಾಣಿ** (ಸಂಸ್ಕೃತ ಪಕ್ಷ ಪತ್ರಿಕೆ). ಸಂಪಾದಕರು, ಶ್ರೀ. ಗಲಗಲಿ ರಾಮಾಚಾರ್ಯರು. ಸಹ ಸಂಪಾದಕರು ಶ್ರೀ. ಬುರ್ಲಿ ಶ್ರೀನಿವಾಸಾಚಾರ್ಯರು. ಪ್ರಕಾಶನಸ್ಥಳ; ಬೋಗಾರ ಅಗಸಿ ಬೆಳಗಾಂವಿ. ಕ್ರಾ.ಫೋ. ೧೦ ಪುಟ; ವಾ. ಚಂ. ೨-೪-೦.

ಸಂಸ್ಕೃತ ಮೃತಭಾಷೆಯೆಂದೆನಿಸಿಕೊಳ್ಳುತ್ತಿದ್ದರೂ ಅದು ಭಾರತೀಯ ಸಂಸ್ಕೃತಿ ಜೀವಿಸಿರುವವರೆಗೂ ಸಜೀವ ಭಾಷೆಯು. ಏಕೆಂದರೆ ನಮ್ಮ ಪ್ರಾಚೀನ ಸಂಸ್ಕೃತಿಯ ಮಹತ್ತ್ವದ ಭಾಗವೆಲ್ಲ ಸಂಸ್ಕೃತಭಾಷೆಯಲ್ಲಿಯೆ ಹುದುಗಿಕೊಂಡು ನಿಂತಿದೆ. ಎಂತಲೆ ಪ್ರತಿಯೊಬ್ಬ ಸುಸಂಸ್ಕೃತ ಮನುಷ್ಯನಿಗೂ ಸಂಸ್ಕೃತ ಭಾಷೆಯ ನಿತ್ಯಪರಿಚಯವಿರಬೇಕಾದುದು ಅಗತ್ಯ. ಅದಕ್ಕಾಗಿ ಸಂಸ್ಕೃತ-ಭಾಷೆಯಲ್ಲಿ ನಿಯತಕಾಲಿಕಗಳು ಹೊರಟರೆ ಅವಶ್ಯವಾಗಿ ಬೇಕು. ಮಧುರವಾಣಿಯಾಗ ಮುಂದೆ ಬಂದು ಗೀರ್ವಾಣಭಾಷೆಯ ಸಹಜ ಪರಿಚಯ ಮಾಡಿಕೊಡಲು ಹವಣಿಸುತ್ತಿದೆ. ಎಲ್ಲರೂ ಇದರ ಪ್ರಯೋಜನ ಪಡೆದು ಸಂಪಾದಕರ ಕಾರ್ಯವನ್ನು ಸಫಲಗೊಳಿಸಬೇಕು.

೮೦. **ಕೈಗನ್ನಡಿ** (ಸಾಮುದ್ರಿಕ ಗ್ರಂಥ). ಲೇಖಕರು ಶ್ರೀ. ಕಲಮದಾನಿ ಗುರುರಾಜರು. ಧಾರವಾಡದ ಸಮಾಜ ಕಾರ್ಯಾಲಯದ ಪ್ರಕಟನೆ. ಕ್ರಾ. ೧/೮ ದ ೧೫೨ ಪುಟ. ಬೆಲೆ ಸಾದಾ ೧-೦-೦; ಒಳ್ಳೆಯದು ೧-೨-೦.

೮೧. **ಕಾಂಗ್ರೆಸ್ ಹಾಗೂ ಸಂಸ್ಥಾನಗಳು**:— ಕರ್ನಾಟಕ ಕಾಂಗ್ರೆಸ್ ಸಮಿತಿಯ ಪರವಾಗಿ ಡಾ. ಎನ್. ಎಸ್. ಹರ್ಡಿಕರರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಬರೆಯಿಸಿ ಪ್ರಕಟಿಸಿದ ಹಸ್ತಪುಸ್ತಕವಿದು. ಡೆ. ಅ. ೧೨-೧೨ ಪುಟಗಳು; ಬೆಲೆ ೦-೨-೦.

೮೨. ಮೈಸೂರು ಸತ್ಯಾಗ್ರಹ:— (ಬುಲೇಟಿನ್ ನಂ ೧)

೮೩. ,, (,, ೨)

ಇವುಗಳನ್ನೂ ಕೆ. ಪಿ. ಸಿ. ಸಿ. ಯ ಪರವಾಗಿ ಡಾ. ಹರಡೀಕರರು ಪ್ರಕಟಿಸಿದ್ದಾರೆ. (ಇಂಗ್ಲಿಷ್ ಭಾಷೆಯಲ್ಲಿ).

೮೪. **ವೇದಾಂತದ ಒಳದಾರಿ** (ಉಪನ್ಯಾಸಗಳ ಸಂಗ್ರಹ) ಶ್ರೀಮಾನ್ ಕುಲಕರಣಿ ನಾರಾಯಣರಾವ್ ಎಂ. ಎ, ಎಲ್ ಎಲ್. ಬಿ. ಅವರು ಬರೆದುದು. ಹುಬ್ಬಳ್ಳಿಯ ಅವಧೂತ ಗ್ರಂಥಮಾಲೆಯ ಪ್ರಕಟನೆ. ಕ್ರಾ.ಅ. ೯೪ ಪುಟ; ಬೆಲೆ ೦-೬-೦

೮೫. ಕುಮಾರವ್ಯಾಸ (ಕವಿ-ಕಾವ್ಯ ವಿಮರ್ಶೆ). ಶ್ರೀಮಾನ್ ಎಸ್. ವಿ. ರಂಗಣ್ಣ ಎಂ. ಎ. ಅವರು ಬರೆದುದು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೬ ನೆಯ ಪ್ರಕಟನೆ. ಫೂ. ೧/೮ ದ ೮೪ ಪುಟ. ಬೆಲೆ ೦-೨-೦.

(೬೧೨ ನೆಯ ಪುಟದಿಂದ ಮುಂದುವರಿದುದು)

ರ್ಮಯೋಗಿಗಳೆಲ್ಲಿ ?..ಎಂದು ನಿಮ್ಮಂತೆ ನಮಗೂ ಒಮ್ಮೆ ನಿಸಿತ್ತು. ಆದರೆ ಆಚಾರ್ಯರ ತರ್ಕಪ್ರವಾಹ ಮಾತ್ರ ಅಗಾಧವಿದ್ದು. 'ಇಲ್ಲಿ ನೋಡು, ಎಲ್ಲಾರೂ ಜಗತ್ತಿನೊಳಗ ಗಾಂಧಿರಬೇಕು, ಕಡೆಗೆ ಗಂಡಸರಾದರೂ ಇರಬೇಕು. ಆಗ ಆ ಶಾಸ್ತ್ರ ಈಸ್ತ್ರ ! ಜಗತ್ತಿನ ವ್ಯವಹಾರ ಅಂದರೆ ನೂರಕ್ಕೆ ತೊಂಭತ್ತು ಬುದ್ಧಿಸ್ಕಾರ ಇಲ್ಲದ ಹೆಂಗುಸರ ಜೋಡಿ ಸಂಸಾರ ಅನ್ಯೋನ್ಯಸ್ಥಿತಿ ಇರುಗ—ಶಾಸ್ತ್ರ ನಡೆದೀತು ಹ್ಯಾಗ ನೋಡು. ಈಗ ನೋಡು—ಲ್ಲರನ ಮಾತು ಚೇಂಬರ್ಲೀನಾಗ ತಿಳಿಯೋದಿಲ್ಲ, ಇವನ ಮಾತುನಿಗೆ ಅರ್ಥ ಆಗೋದಿಲ್ಲ..ಇವರಿಬ್ಬರ ವ್ಯವಹಾರಕ್ಕೆ ಯಾವ ಶಾಸ್ತ್ರ ಪಚ್ಚು ವೆ?..ಹೆಂಗುಸರ ಕೈ ಬಕ್ಕರೆ ಬಡೆಧಾಂಗ ನಮ್ಮ ಕೈ ಹೆಂಗುಸರನ್ನು ಬಡೆದರೆ—ಅಲ್ಲ, ನೀ ಏನೇ ಅನ್ನು—ನಿಮ್ಮ ರಶಿಯಾ ಆ ಬೊಟ್ಟಿನಗಲ ಫಿನ್‌ಲಾಂಡನ್ನ ಹೊಡೆದು ಹಾಕೋದೆ ಯೋಗ್ಯ ಅನಿಸ್ತದ..ಜಗತ್ತಿನ ತುಂಬ ಇಂಥಾ ರಾಜ್ಯ ಅಂದ್ರ ಮನೆತುಂಬ ಹೆಂಗುಸರ ಕಾರಭಾರ ಇದ್ದಾಂಗ..ಅದೇ ಹುಚ್ಚು; ಮನೆ ಸುರಳೀತ ಸಾಗಬೇಕಾದರೆ ಒಬ್ಬ ಗಂಡಸು ಅದಕ್ಕ ಯಜಮಾನ ಆಗಿರಬೇಕು..ಎಲೊ ! ಎಷ್ಟು ಹೊತ್ತಾಯಿತೊ !' ಎಂದವರೆ ಎದ್ದು ಹೊತ್ತ ದೋತರ ನೆಲಕ್ಕೆ ಎಳೆಯುವ ಪರಿವೆ ಇಲ್ಲದೆ ಸಾಗಿತು ಕನಕಾಚಾರ್ಯರ ಗಾಡಿ ಸಂಸಾರ ಸ್ಟೇಶನ್ನಿಗೆ.

ನಗೀಗೆ ನೈವಿದ್ಯಾ

ಪ್ರಾಮಾಣಿಕ ಕಾರಕೂನ

“ಏನ್ರೀ, ಮಿಸ್ಟರ್ ನಾಯಿಕ್! ನೀವು ಮುಂಜಾನೆ ಬರುವಾಗ ತಡಾಮಾಡಿ ಬಂದ್ರಿ! ಆದರ ಈಗ ಸಂಜೀಕಡೆ ನೋಡಿದರ ಎಲ್ಲರಿಗಿಂತಾ ಮುಂದ ನೀವs ಇದ್ದೀರಲಾ!”

“ಹ ಹ ಹ.... ಹೌದು ರಾಯರ, ಮುಂಜಾನೆ ತಪ್ಪು ಆಗಿತ್ತು; ಮತ್ತ ಸಂಜೀ ಮುಂದ ಅದs ತಪ್ಪು ಮಾಡಬಾರದಂತ ಅನಿಸಿತು. ಒಂದs ದಿನದಾಗ ಎರಡೆರಡು ತಪ್ಪು ಮಾಡಿದರ, ಕ್ಷಮಿಸಬೇಕಂತ ತಮ್ಮನ್ನ ಕೇಳೂದ್ಹೆಂ ಹ್ಯಾಂಗ ರಾಯರs?”

* * *

ಯಾರಕೂಡ ಲಗ್ನ?

“ನೋಡು. ನಮ್ಮ ಲಗ್ನ ಆತಲ್ಲಾ ಆಗs ‘ನಾ ಒಬ್ಬ ಬ್ಯಾಂಕಿನ ಕಾರಕೂನನ ಹೆಂಡತಿ ಆದೆ’ ಅಂತಂಬೂದು ನಿನಗ ಗೊತ್ತಾಗಿರಬೇಕಲ್ಲs?”

“ಗೊತ್ತಾಗದೇನು? ಆಯಿತು; ಮುಂದೇನು?”

“ಏನೂ ಇಲ್ಲ. ನನಗನಿಸಿತು ಬ್ಯಾಂಕಿನ ಜೋಡೀನs ನಿನ್ನ ಲಗ್ನ ಆಗೇದಂತ ಎಲ್ಲ್ಯೋ ನಿನಗ ತಿಳುವಳಿಕಿ ಆಗಿರಬೇಕೂ ಅಂತ! ಅದಕ್ಕs ಕೇಳಿದೆ.”

* * *

ಗಂಡ-ಹೆಂಡಿರ ಕರಾರು

ಪಶುಪತಿರಾವ್:— ನನ್ನುದೂ ನನ್ನ ಹೆಂಡತೀದೂ ಎಂದೂ ಜಗಳ ಆಗೂದಿಲ್ಲ ನೋಡ್ರಿ. ಹಾಂಗ ಕರಾರನs ಮಾಡಿಕೊಂಡು ಬಿಟ್ಟದೀವಿ ನಾವಿಬ್ಬರೂ! ಅಂಥಾ ಇಂಥಾ ಸಾಮಾನ್ಯ ಪ್ರಸಂಗದೊಳಗೆಲ್ಲಾ ಆಕೀ ಮಾತಿನಂತೆ ನಾವು ನಡಿಯೂದು; ಏನಾದರೂ ಮಹತ್ತ್ವದ ಪ್ರಸಂಗ ಇದ್ದಾಗ ನನ್ನ ಮಾತಿನಂತೆ ಆಕಿ ನಡಿಯೂದು!

ಶಶಿಧರರಾವ್:— ಹಿಂಗೇನು? ಭಲೆ, ಹಾಂಗಾದರ ಮಹತ್ತ್ವದ ಪ್ರಸಂಗದೊಳಗೆಲ್ಲಾ ನಿಮ್ಮ ಹೆಂಡತಿ ನಿಮ್ಮ ಮಾತಿನಂತೆ ನಡೀತಾರಲ್ಲ?

ಪಶುಪತಿರಾವ್:— ಅದನ್ನ ಪರೀಕ್ಷಾ ಮಾಡೂ ಸಂದರ್ಭನs ಬಂದಿಲ್ಲ! ಯಾಕಂದರ ನಮ್ಮ ಮದಿವಿ ಆದವ್ಯಾಲ ಇಂದಿನವರೆಗೆ ಮಹತ್ತ್ವದ ಪ್ರಸಂಗ ಅಂತ ಒಂದೂ ಬಂದೇ ಇಲ್ಲ ನಮಗ!

* * *

ಎಮ್ಮಿ ಯಾವ ಊರಿನದು?

ರಮಾಬಾಯಿ:— ಅಲ್ರೀ ಗುಂಡಕ್ಕಾ, ನೀವು ಹೊಸದಾಗಿ ಎಮ್ಮಿ ಕರಿಸೀದೀರಲಾ, ಎಷ್ಟು ಟೊಣ್ಯಾ ಅದs ಅದು? ಆ ಎಮ್ಮಿ ಯಾವ ಊರಿನದಂದಿರಿ?

ಗುಂಡಕ್ಕ:— ಕೃಷ್ಣಾ ತೀರದ್ದು; ಅಲ್ಲೆಲ್ಲೋ ಜನಾಪೂರಾ ಅಂತ ಅದs ಅಂತರೆವ್ವಾ, ಅಲ್ಲೀದು!

“ಹಂ ಹಂ! ಗೊತ್ತಾತು ಬಿಡ್ರಿ! ನಮ್ಮ × × × ಮೂನಸೂಪರ ಹೇಣತೀ ತೌರಮನೀನೂ ಜನಾಪೂರs ಅಂತ; ಗೊತ್ತಿಲ್ಲೇನು ನಿಮಗ?”

* * *

ಬಾರೀ ನೋಡಿದರಾತು!

ಒಬ್ಬ:— ನಿಜವಾಗಿ ನೋಡಿದರ ಟ್ರಾಮ್ ಗಾಡೀ ಬೆನ್ನುಹತ್ತಿ — ಹೆಣ್ಣಿನ ಬೆನ್ನುಹತ್ತಿ — ಗಡಬಡಿಯಿಂದ ಓಡಿಹೋಗಬೇಕಾಗೂ ಕಾರಣವಿಲ್ಲೇನ್ರಪಾ!

ಇನ್ನೊಬ್ಬ:— ಅಂದರೇನ್ರೀ?

ಒಬ್ಬ:— ಯಾಕ, ಗೊತ್ತಾಗಲಿಲ್ಲೇನು ನಿಮಗ? ಒಂದೋ ಎರಡೋ ಮಿನೀಟು ನಿಂತು ದಾರೀ ನೋಡಿದರಾತು. ಇದಿಲ್ಲಾ ಮತ್ತೊಂದು ಬಂದು ಮುಂದ ನಿಂತೇ ನಿಲ್ಲತದ!

* * *

ಬಡಿತಕ್ಕೆ ಕಾರಣ

ಮಾಸ್ತರ್:— ಎಲೋ ಗುಂಡ್ಯಾ, ಈಗ ನಿನ್ನ ನಾ ಯಾಕ ಬಡದೇ ಅಂಬೂದು ಗೊತ್ತಾತೇನು ನಿನಗ?

ಗುಂಡ್ಯಾ:— (ಅಳುತ್ತ) ಗೊತ್ತಾತರಿ!

ಮಾಸ್ತರ್:— ಯಾಕ ಹೇಳು ಹಾಂಗಾದರ?

ಗುಂಡ್ಯಾ:— ನೀವು ನನಗಿಂತಾ ದೊಡ್ಡವರಿದ್ದೀರಿ ಮಾಸ್ತರs, ಅದಕ್ಕs ಬಡದಿರಿ ಮಾಸ್ತರ!

* * *

ಏನು ಮಾಡಬಹುದು?

ಗಂಡ:— ಏನs, ನಿನಗ ಅಡಿಗೀ ಚೆನ್ನಾಗಿ ಮಾಡಲಿಕ್ಕೆ ಬರೂದಿಲ್ಲಾ ಅಂತ ಯಾರಾದರೂ ಅಂದರ, ಏನು ಮಾಡಬಹುದು ನೀನು?

ಹೆಂಡತಿ:— ಏನು ಮಾಡಬಹುದು? ಅಂದವರ ಹಲ್ಲು ಅವರ ಬಾಯಾಗ ಉಳಿದಾವೇನು?

ಗಂಡ:— ಇಷ್ಟು ಸಿಟ್ಟಿಗೇಳತೀ ಏನು? ಹೋಗಲಿ ಬಿಡು, ನಾ ಏನೂ ಹಾಂಗ ಅನ್ನೂದಿಲ್ಲ ಹಾಂಗಾದರ!

* * *

ಗಣಪತಿಯ ಪ್ರಸಾದ

ಹುಡುಗರೆಲ್ಲರೂ ಸೇರಿ ಶಾಲೆಯಲ್ಲಿ ಗಣಪತಿಯನ್ನು ಕೂಡಿಸಿದ್ದರು. ಬಂಡಾಚಾರ್ಯರು ಮಂಗಳಾರತಿ ಮಾಡಿ, ಪ್ರಸಾದವನ್ನು ಹುಡುಗರೆದುರು ಇಟ್ಟು ಹೇಳಿದರು:

“ಗಣಪ್ಪನ ಪ್ರಸಾದಾ ತೊಗೊಳ್ರ್ಯೋ ಹುಡುಗೂರಿರ್ಯಾ! ಗಣಪ್ಪನ ಪ್ರಸಾದಾ ತಿಂದರ: ಬುದ್ಧಿ ಬರತದ ಬುದ್ಧಿ!”

ಹಿರಿಯ ವಿದ್ಯಾರ್ಥಿಯೊಬ್ಬ ಹೇಳಿದ “ತಡೀರ್ಯೋ ತಡೀರ್ಯೋ! ಮೊದಲ ಮಾಸ್ತರಿಗೆ ಕೊಡರೀ ಆಚಾರs, ಪ್ರಸಾದ!”

* * *

ಹೇಳಬೇಕಾಗಿ ಬಂತು!

“ನಿಮ್ಮ ಹೆಂಗುಸರ ಬಾಯೊಳಗ ಮಾತ ನಿಲ್ಲೂದಿಲ್ಲ ನೋಡು! ನಂದೂ ನಿಂದು ಮದಿವಿ ಆಗೂ ವಿಷಯಾನ ಈಗಲೇ ಎಲ್ಲೂ ಹೊರಗ ಹಾಕಬ್ಯಾಡಾ ಅಂತ ಹೇಳಿದ್ದಿಲ್ಲs?”

“ಹೌದು, ಹೇಳಿದ್ರೆಲ್ಲಾ ಖರೆ, ಆದರ ಮಾಡಬೇಕೇನು? ನಮ್ಮ ನೆರೆಮನೀ ಗೋದಾವರೀ ಇಲ್ಲs? ಆಕೀ ಮುಂದ ಸುಮ್ಮನs ಮಾತಾಡತೀರೂವಾಗ ‘ಈ ಸಾರೆ ನನ್ನ ಮದಿವೀ’ ಅಂತ ಹೇಳಿದೆ. ಆಗ ಆಕಿ ಏನನಬೇಕು? ‘ನಿನ್ನ ಮದಿವೀ ಮಾಡಿಕೊಳ್ಳಂವಗ ಕಣ್ಣs ರೆ ಇರಲಿಕ್ಕಿಲ್ಲ, ಅಥವಾ ಬುದ್ಧಿಯರೆ ಇರಲಿಕ್ಕಿಲ್ಲ’ ಅಂದಳು. ನನಗ ಸಿಟ್ಟು ಬಂದು, ನೀವು ನನ್ನ ಕೈಹಿಡೀಲಿಕ್ಕೆ ಸಿದ್ಧರಾಗಿರೂ ಸಮಾಚಾರ ಹೇಳಬೇಕಾಗಿ ಬಂತು!”

*   *   *

ಪುರಸತ್ತು ಇರಬೇಕು ಹ್ಯಾಂಗ ?

ಆತ:— ಅಲ್ಲs ಅಖಂಡ ಒಂದೂವರೀ ತಾಸಾತು ನೋಡತೀನಿ, ಪಾಪ ಆ ಪ್ರಾಣಿನ್ನ ಬಾಗಲದ್ಹೊರಗs ನಿಲ್ಲಿಸಿ ಬಿಟ್ಟೀದೀ.. ಮಾತನಾಡಿಕೋತs! ಒಳಗs ದೀ ಕರೀ ಬಾರದs ಆಕಿನ್ನ?

ಆಕೆ:—ನಾ ಏನ್ ಬ್ಯಾಡಂದ್ನೇನು? ಒಳಗ ಬರಲಿಕ್ಕ ಆಕೆಗೆ ಫುರಸತ್ತs ಇದ್ದಿದ್ದಿಲ್ಲ!

*   *   *

ದಾಕ್ಷಿಣ್ಯವೃತ್ತಿ

“ಇದೇನ್ರೆಪಾ, ಹೊರಗ ನೋಡಿದರ ಕಗ್ಗತ್ತಲಿ ಮುಸುಕಿಬಿಟ್ಟsದ! ಮಳೀಯಂತೂ ಒಂದsಸಮನs ಸುರೀಲಿಕ್ಕೆ ಹತ್ತೇದ!

“ಹಾಂಗಾದರ ಈಗ ಮನೀಗ್ಯಾಕ ಹೋಗೂದು? ಇಲ್ಲೇ ಉಂಡು ಮಲಗಿ-ಕೊಂಡು ಬಿಡ್ರೀ ಆತು!”

“ಏನು? ಹೀಗಂತೀರಿ? .. ಅಂ .. ಆಯ್ತು ಹಾಂಗs ಆಗಲಿ! ಆದರ ಮನೀಗೆ ಹೋಗಿ ಹೊತ್ತುಗೊಳ್ಳಲಿಕ್ಕೆ ಶಾಲು, ತಲಿಗಿಂಬು ತೊಗೊಂಡು ಬರಲಿಕ್ಕಬೀ ಬ್ಯಾಡs?”

*   *   *

ತಲೀ ಹ್ಯಾಂಗ ಒಡೀತು

ರಾಯರು ದವಾಖಾನೆಗೆ ಹೋದಾಗ, ಲ್ಲಿಯ ಬೆಂಚಿನ ಮೇಲೆ ಒಬ್ಬ ಗೃಹಸ್ಥ ಲೆಗೆ ಬ್ಯಾಂಡೇಜು ಕಟ್ಟಿಸಿಕೊಂಡು ಕುಳಿತಿದ್ದ. ವನೊಡನೆ ರಾಯರು ಮಾತನಾಡುತಿರು ಗ ಕೇಳಿದರು:

“ನಿಮ್ಮ ಮದಿವಿ ಆಗಿರಬೇಕು ಕಾಣಸ್ತದ, ಏನು?”

“ಎಲ್ಲೀದರೀ ಇನ್ನೂ ಆಗಿಲ್ಲ!”

“ಆಗಿಲ್ಲಂತೀರಿ? ಹಿಂಗೇನು? ಮತ್ತ ತಲೀ ಹ್ಯಾಂಗರೆಪಾ ಒಡೀತು ನಿಮ್ಮದು?”

*   *   *

ನೆರೆಹೊರೆಯ ಅಂಜಿಕೆ

ಆಕೆ:— ಅಲ್ಲಾ, ಇದೇನೂ ಅಂತೀನಿ ನಿಮ್ಮ ರೀತಿ? ನಾ ಹಾಡಲಿಕ್ಕೆ ಸುರೂ ಮಾಡಿದ ಕೂಡಲೆ ನೀವು ಹೊರಗ ಹೊರಟು ಹೋಗತೀರಲ್ಲಾ?

ಆತ:—ಹಾಂಗಾದರ ಏನು ಮಾಡಂತೀ? ನಾ ನಿನ್ನ ಹೊಡೀತೇನಿ ಅಂತ ನೆರೆಹೊರೀಯವರಿಗೆ ಸಂಶಯ ಬರಬಾರದು! ಅದಕ್ಕಂತs ಹೊರಟುಹೋಗತೀನಿ!

*   *   *

ಅಜೀರ್ಣಕ್ಕೆ ಔಷಧಿ

ಗಿರಾಕಿಯೊಬ್ಬನು ನಡುರಾತ್ರಿಯಲ್ಲಿ ಬಂದು, ಔಷಧದ ಅಂಗಡಿಯವನನ್ನು ಎಬ್ಬಿಸಿದನು. ಆಗ ಅಂಗಡಿಯವನು ಬೇಸತ್ತವನಾಗಿ ಹೇಳಿದನು.

“ಏನ್ರೆಪಾ, ಅಜೀರ್ಣ ಸ್ವಲ್ಪ ಆದದ್ದಕ್ಕ ಎಷ್ಟು ಮಹತ್ವಕೊಟ್ಟಿದ್ದಿರೀ? ಎರಡು ಬಿಲ್ಲೀ ಸೋಡಾದ ಸಲುವಾಗಿ ಬಂದು ನಡು-ನಿದ್ದೀ ಒಳಗ ನನ್ನ ಎಬ್ಬಿಸಿದಿರಲಾ! ಒಂದು ಪಂಚಪಾತ್ರೀ ತುಂಬಾ ಬಿಸಿನೀರು ಕುಡಿದು ಮಲಗಿದ್ದರ ಆಗತಿದ್ದಿಲ್ಲ? ಮುಂದಿಗೆಷ್ಟು ತ್ರಾಸ ನೋಡ್ರಿ!”

“ಏನೂ? ಬಿಸಿನೀರು ಕುಡಿದರ ಅಜೀರ್ಣ ಕಡಿಮೆ ಆಗತsದ ಅಂದ್ರೆಲ್ಲs? ನೋಡ್ರಿ, ನನಗಿದು ಗೊತ್ತಿದ್ದಿಲ್ಲ! ನೀವಿನ್ನ ಮಲಗಿಕೊಳ್ರಿ, ಸೋಡಾ ಕೊಡುವ ತ್ರಾಸೇನೂ ಬ್ಯಾಡ ನಿಮಗ ಪಾಪ!”

*   *   *

ಗುಂಡನ ತಂದೆಗೆ ಕೊಟ್ಟ ಗಣಿತ



ತಂದೆ:—ಅಲ್ಲೋ ಗುಂಡ್ಯಾ, ಈ ಲೆಖ್ಖಾ ಮಾಡಿಕೊಂಡು ಬಾ ಅಂತ ನಿನಗ ಹೇಳ್ಯಾರs ನಿಮ್ಮ ಮಾಸ್ತರು?

ಗುಂಡ:— ನನಗಲ್ಲೋ ಅಪ್ಪಾ, ನಿನಗ!

ತಂದೆ:— ನನಗ? ನನಗೇನು ಹೇಳತಾರೋ ಮೂರ್ಖ!

ಗುಂಡ:— ಹಾಂಗಲ್ಲೋ ಅಪ್ಪಾ! ನನಗ್ನೀಳೂ ಲೆಖ್ಖಾ ದಿನಾ ನೀವs ಹಿಡಿಸಿಕೊಡೂದಿಲ್ಲೇನು? ಅದನ್ನ ಮಾಸ್ತರಿಗೆ ನಾ ಹೇಳಿದೆ; ಆಗ ಅವರು ‘ಹಾಂಗಾದರ ಇಂದಿನಿಂದ ನಿನಗಂತೇನೂ ಲೆಖ್ಖಾ ಕೊಡೂದಿಲ್ಲ; ನಿಮ್ಮ ತಂದಿಗೆ ಅಂತಲೆ ಕೊಡತಾ ಹೋಗತೇನಿ, ತಿಳೀತೇನು?’ ಅಂತ ಹೇಳಿದರು.

ಜೋಡುಗುಂಡಿಯ ಅಂಗಿ

(ಪೆಟೀಕೋಟು)

★

ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.

★

ಜೋಡು ಗುಂಡಿಯ ಅಂಗಿಯ ಉಪಯೋಗ

ಚಳಿಯ ದಿನಗಳಲ್ಲಿ ಮಗುವಿನ ಮೈ ಬೆಚ್ಚಗಿರುವುದಲ್ಲದೆ, ಮುಂಬದಿಗೆ ಜೋಡುಪದರು ಬರುವುದರಿಂದ ಎದೆಯನ್ನೂ ಬೆಚ್ಚಗಿಡುವುದಕ್ಕಾಗಿ ಈ ಜೋಡುಗುಂಡಿಯ ಅಂಗಿಯು ತುಂಬ ಉಪಯುಕ್ತವಾದುದು. ಹೆಚ್ಚಾಗಿ ಉಣ್ಣೆಯ ಬಟ್ಟೆಯಿಂದಲೇ ಇದನ್ನು ತಯಾರಿಸುವರು. ದಪ್ಪನೆಯ ಕೋಟಿನ ಬಟ್ಟೆಯಿಂದಲೂ ತಯಾರಿಸಿ ತೊಡಿಸಬಹುದು. ಇದಕ್ಕೆ ತೋಳು ಹಚ್ಚುವಂತಿಲ್ಲ. ಒತ್ತುವ ಗುಂಡಿ (ಪ್ರೆಸ್ ಬಟನ್) ಹಚ್ಚುವುದರಿಂದ ಹಾಕುವುದಕ್ಕೂ ತೆಗೆಯುವುದಕ್ಕೂ ತೊಂದರೆಯಾಗಲಾರದು.

ಅಳತೆ :— ೩೦ ಇಂಚು ಎದೆ; ೧೭ ಇಂಚು ಉದ್ದ.

ಚಿತ್ರಿಸುವುದು :— ಅ, ಬ, ಕ ಕಾಟಕೋನ.

ಹಿಂಭಾಗ

ಅ, ತ=೧೦¼" ಎಂದರೆ ಎದೆಯ ೧/೩.

ಅ, ಷ=೫" ಎಂದರೆ ಎದೆಯ ೧/೬.

ಅ, ಕ=೧೭" ಉದ್ದ.

ತ, ಷ, ಕ ಬಿಂದುಗಳನ್ನು ಮುಂದೆ ಎಳೆ.

ಅ, ಇ=೧೦¼" ಎಂದರೆ ಎದೆಯ ೧/೩".

ಅ, ಡ=೩/೪".

ಡ, ಇ ಕೂಡಿಸು.

ಇ, ನ=೩¾" ಎಂದರೆ ಎದೆಯ ೧/೮".

ನ ಕೆಳಕ್ಕೆ ಸರಳವಾಗಿ ಗ ಕ್ಕೆ ಕೂಡಿಸು.

ಷ, ಜ =೬" ಎಂದರೆ ಎದೆಯ೧/೬+೧".

ನ, ಜ ಬಾಗನ್ನು ಚಿತ್ರದಂತೆ ಕೂಡಿಸು.

ಮುಂಭಾಗ

ಅ, ಬ=೧೫" ಎಂದರೆ ಎದೆಯ ೧/೨.

ಬ ವನ್ನು ಕೆಳಕ್ಕೆ ಸರಳವಾಗಿ ಎಳೆ.

ಬ, ಟ=೩/೪".

ಟ ವನ್ನು ಕೆಳಕ್ಕೆ ಸರಳವಾಗಿ ಎಳೆ (ಗುಂಡಿಯ ಪಟ್ಟಿ.)

ಟ, ಚ=೩¾" ಎಂದರೆ ಎದೆಯ ೧/೮.

ಥ ವು ಟ, ಚ ದ ಮಧ್ಯ.



ಥ, ರ=೨" ಎಂದರೆ ಎದೆಯ ೧/೧೫+೦".

ಚ, ರ, ಟ ಚಿತ್ರದಂತೆ ಕೊರಳು ತೆಗೆ.

ಚ, ಝ=೩¾" ಹಿಂಭಾಗದ ಇ, ನ ದಷ್ಟು.

ಝ, ಮ=೧".

ಚ, ಮ ಕೂಡಿಸು.

ಜ, ದ=೧¾".

ದ, ಲ=೧".

ಮ, ಲ ಕೂಡಿಸು.

ಮ, ಲ, ಜ ಚಿತ್ರದಂತೆ ಬಗಲಿನಬಾಗನ್ನು ತೆಗೆ.

ಕತ್ತರಿಸುವುದು :- ೩೦" ಅಗಲವುಳ್ಳ ಬಟ್ಟೆಯನ್ನು ೧೭¾" ಉದ್ದ (೧೭" ಉದ್ದ+¾" ಹೊಲಿಗೆಗೆ) ತೆಗೆದುಕೊಂಡು, ಅಗಲದಲ್ಲಿ ಮಡಿಕೆ ಮಾಡಿ ಇಡಬೇಕು. ಮಡಿಕೆ ಅ, ಕ ದ ಕಡೆಗೆ ಬರುವಂತೆ ಇಡು. ಎರಡೂ ಪದರುಗಳನ್ನು ಡ, ಇ, ನ, ಜ, ಲ, ಮ, ಚ, ರ, ಟ ಗಳನ್ನು ಕತ್ತರಿಸು.

ಹೊಲಿಯುವುದು :- ಇದಕ್ಕೆ ಪೂರ್ಣ ಒಳವಸ್ತ್ರವನ್ನು ಹಾಕಬೇಕು. ಮೇಲ್ಭಾಗ ಒಳವಸ್ತ್ರಗಳನ್ನು ಭುಜದ ಭಾಗಗಳೆರಡನ್ನೂ ಬಿಟ್ಟು, ಸುತ್ತಲೂ ಹೊಲಿದು, ಭುಜದ ಪೊಳ್ಳಿನಲ್ಲಿ ತಿರುವಿಕೊಂಡು ಬಿಡಬೇಕು. ಚಿತ್ರದಲ್ಲಿ ಗುರುತುಮಾಡಿ ತೋರಿಸಿದಂತೆ ನಾಲ್ಕು ಗುಂಡಿಗಳನ್ನು ಹಚ್ಚಬೇಕು.

ಬೇಕಾಗುವ ಅರಿವೆ :- ೩೦" ಅಗಲವುಳ್ಳ ಅರಿವೆ ೧೭¾" ಬೇಕು. ಒಳವಸ್ತ್ರಕ್ಕೂ ಇಷ್ಟೇ ಅರಿವೆ ಸಾಕು.

———೦———



ಅಜ್ಞಾತವಾಸಕ್ಕೆ ಆರಂಭ

ವರ್ಕಿಂಗ್ ಕಮಿಟಿಯು ಎರಡು ತಿಂಗಳ ಹಿಂದೆ ಸ್ವೀಕರಿಸಿದ ಘೋರಣೆಯನ್ನನುಸರಿಸಿ ಸದ್ಯಕ್ಕೆ ಎಲ್ಲ ಕಾಂಗ್ರೆಸ್ ಮಂತ್ರಿಮಂಡಳಗಳೂ ಅಧಿಕಾರಪದವನ್ನು ಬಿಟ್ಟುಕೊಟ್ಟಿವೆ. ಆರು ಪ್ರಾಂತಗಳಂತೂ ಖಂಡಿತವಾಗಿ ಯಾವ ಪಕ್ಷವೂ ಮಂತ್ರಿಮಂಡಳವನ್ನು ಸ್ಥಾಪಿಸುವುದು ಶಕ್ಯವಿಲ್ಲದ್ದರಿಂದ, ಆಯಾ ಪ್ರಾಂತದ ಗವ್ಹರ್ನರರೆ ಕಾರ ಸೂತ್ರವನ್ನು ವಹಿಸಿಕೊಂಡಿದ್ದಾರೆ. ಪ್ರಾಂತದ ಆಡಳಿ ಯಾವ ಬಗೆಯಿಂದಲೂ ಆತಂಕವಿಲ್ಲ. ಮುಂಬಯಿಯ ಅರ್ಥ-ವರಾಗಿದ್ದ ಶ್ರೀ. ಲಠ್ಠೆಯವರು ಮೇಲಿಂದ ಮೇಲೆ ಹೇಳುತ್ತಿರುತೆ ಇದೊಂದು ಅತ್ಯಂತ ಸೋಜಿಗದ ಸಂಗತಿಯಾಗಿದೆ. ಪ್ರಜೆಗಳ ಮೇವಾದ್ವಿತೀಯ ಪ್ರತಿನಿಧಿ ಎನಿಸಿದ, ಬಲವುಳ್ಳ ರಾಜಕೀಯ ವಾದ ಕಾಂಗ್ರೆಸ್ ಮಂತ್ರಿಮಂಡಳಗಳು ರಾಜೀನಾಮೆಯನ್ನು ಟ್ಟರೆ, ದೇಶದಲ್ಲಿ ನಿಟ್ಟುಸಿರಿನ ಬಿರುಗಾಳಿ ಕೂಡ ಇಲ್ಲ! ಬೇರೆ ಶಗಳಲ್ಲಿ ಇಂತಹ ಪರಿಸ್ಥಿತಿಯು ಕ್ರಾಂತಿಗೆ ಕಾರಣವಾಗಬಹು ಗಿತ್ತಂತೆ ; ಆದರೆ ನಮ್ಮಲ್ಲಿ ಕಾಯಿಪಲ್ಲೆಯ, ಹಬ್ಬ-ಹುಣ್ಣಿಯ ದೈನಂದಿನ ಜೀವನವು ಎಂದಿನಂತೆಯೆ ನಡೆದಿದೆ! ಇದಕ್ಕೆ ರಣವೇನು? ಕಾಂಗ್ರೆಸ್ ಸಂಸ್ಥೆಯ ತ್ರಿಶಂಕು ತತ್ತ್ವಗಳೆ ಕಾರಣ ದರೆ ಮುಂದಾಳುಗಳು ಕೋಪಿಸುವರು; ಜನತೆಯ ದೌರ್ಬಲ್ಯ ರಣವೆಂದರೆ ಕಾಂಗ್ರೆಸ್ ಚಳವಳದ ಇತಿಹಾಸವೆ ಅದನ್ನು ಗಳೆಯುವುದು. ಆದರೆ ಕಾರಣ ಮಾತ್ರ ಇರಲೇ ಬೇಕಲ್ಲವೆ? ಡು ವರ್ಷಗಳ ವರೆಗೆ ಬ್ರಿಟಿಶರಿಂದಲೂ ಹೊಗಳಿಸಿಕೊಂಡು ಜ್ಯ ನಡೆಯಿಸಿದ ಪ್ರಜಾಪಕ್ಷವು ಅಜ್ಞಾತವಾಸದಲ್ಲಿ ಅಡಗಿದರೂ ಲ್ಲೋಲಕಲ್ಲೋಲವಿಲ್ಲ! ಇದಕ್ಕೆ ಕಾರಣವೇನು?

ನಮ್ಮ ರಾಜಕಾರಣದ ವೈಶಿಷ್ಟ್ಯ

ನಮ್ಮ ರಾಜಕೀಯ ಜೀವನದ ವೈಶಿಷ್ಟ್ಯವೆ ಇದಕ್ಕೆ ಕಾರಣ ಗಿದೆ ಎಂದು ನಮ್ಮ ತರ್ಕ. ಆ ವೈಶಿಷ್ಟ್ಯವೆಂದರೆ ಯಾವುದು? ಜಕೀಯ ತತ್ತ್ವಗಳ ಅರಿವು ನಮ್ಮ ಜನಾಂಗದಲ್ಲಿ ಸಾಕಷ್ಟು ಲ್ಲದಿರುವುದೆ ಆ ವೈಶಿಷ್ಟ್ಯ. ಒಂದು ದೃಷ್ಟಿಯಿಂದ ನಮಗೆ ಜಕೀಯ ಜೀವನವೆ ಇಲ್ಲ, ರಾಜಕಾರಣಕ್ಕೆ ನಮ್ಮ ಜೀವನದಲ್ಲಿ ಸ್ಥಾನವೆ ಇಲ್ಲ ಎಂದು ಹೇಳಬಹುದು. ನಾವು ಮುಂದೆ ಹೇಳುವ ೀತಿಗಾಗಿ ಅನೇಕರು ನೊಂದುಕೊಳ್ಳಬಹುದು. ಆದರೆ ಪ್ರತಿ ಬ್ಬನೂ ಈ ಮಾತನ್ನು ತನ್ನ ಬುದ್ಧಿಯ ಒರೆಗೆ ಹಚ್ಚಿ ನೋಡಬೇಕೆಂಬ ಒಂದೇ ಉದ್ದೇಶದಿಂದಲ್ಲದೆ, ನಮ್ಮ ಜಾಣತನದ ಪ್ರದರ್ಶನವೆಂದು ನಾವು ಹೇಳುವುದಿಲ್ಲ— ಎಂಬುದನ್ನು ದಯೆಯಿಟ್ಟು ಎಲ್ಲರೂ ಲಕ್ಷ್ಯದಲ್ಲಿಡಬೇಕು. ನಮಗೆ ಜೀವನದಲ್ಲಿ ನಾಗರಿಕತೆಗಿಂತ ಜಾತಿ-ಮತ-ಪಂಥಗಳ ದೃಷ್ಟಿ ಹೆಚ್ಚು ಮಹತ್ತ್ವದ್ದೆನಿಸುವುದು. ವಿಶ್ವದ ಸಮಕಾಲೀನ ವ್ಯವಹಾರಕ್ಕಿಂತ ನೀತಿಶಾಸ್ತ್ರದ ವಿಧಾನವೇ ನಮಗೆ ಹೆಚ್ಚು ಇಷ್ಟವೆನಿಸುತ್ತಿದೆ; ತಿಳಿದುಕೊಂಡ ತತ್ತ್ವಗಳಿಗಾಗಿ ಸಂಘಟಿತರಾಗುವುದಕ್ಕಿಂತ ಮುಂದಾದ ವ್ಯಕ್ತಿಯ ಉಪಾಸಕರಾಗಿ ತಾಳಗಳನ್ನು ಕುಟಿಯಲು ನಮ್ಮ ಸ್ವಭಾವಕ್ಕೆ ಸಹಜವೆನಿಸುವುದು ; ಮತಭಿನ್ನತೆಯು ಸತ್ಯಶೋಧನೆಗೆ ಸಾಧಕವಾಗದೆ ಭೇದ-ಬಹಿಷ್ಕಾರಗಳಲ್ಲಿ ಪರಿಣಮಿಸುವುದೇ ನಮ್ಮ ಘೋರಣೆಯ ಅನಿವಾರ್ಯ ಫಲವಾಗಿದೆ. ರಾಜಕೀಯ ಜೀವನಕ್ಕೆ, ರಾಜಕಾರಣದ ಪಕ್ಷ-ಪಂಗಡಗಳಿಗೆ, ದೇಶದ ಪ್ರಗತಿಗೆ ಸಹಾಯಕವಾಗಬೇಕಾದ ವಿಚಾರದ ಇಲ್ಲವೆ ಆಚಾರದ ಘಟಕಗಳು ನಮ್ಮಲ್ಲಿ ಕಡಮೆ.

ಸದ್ಯದ ದೃಷ್ಟಾಂತ

ಸದ್ಯದ ನಮ್ಮ ರಾಜಕಾರಣದ ಪರಿಸ್ಥಿತಿಯನ್ನೆ ಈ ಸಂದರ್ಭದಲ್ಲಿ ದೃಷ್ಟಾಂತವೆಂದು ನೋಡಬಹುದು. ಸಾಮಾನ್ಯ ನಾಗರಿಕನಿಗೆ ಅರ್ಥವಾಗದ ಅನೇಕ ಸಂನಿವೇಶಗಳು ಇದರಲ್ಲಿ ಅಡಕವಾಗಿವೆ. ಮೊದಲು ಕಾಂಗ್ರೆಸಿನ ಕತೆ. ಇಲ್ಲಿ ಮುಂದಾಳಿನಿಂದ ಮಹಾತ್ಮಾ ಗಾಂಧಿಯವರಿಗೆ ಸತ್ಯ ಮತ್ತು ಅಹಿಂಸೆಗಳಲ್ಲದೆ ಬೇರೆ ಯಾವ ತತ್ತ್ವಗಳೂ ಒಗ್ಗುವಂತಿಲ್ಲ. ಅಸಹಕಾರ, ಅಧಿಕಾರಸ್ವೀಕಾರ, ಈಗ ಅಧಿಕಾರತ್ಯಾಗ—ಈ ಮೂರೂ ಸಂದರ್ಭಗಳನ್ನು ಅವರು ಬೇರೆ ಬೇರೆ ಕಾಲಕ್ಕೆ ಸತ್ಯಾಗ್ರಹ ತತ್ತ್ವಗಳಿಗೆ ಹೊಂದಿಸಿ ಸಮರ್ಥಿಸಿದ್ದಾರೆ. ಯುದ್ಧದಲ್ಲಿ ಇಂಗ್ಲಂಡಕ್ಕೆ ಸಹಾಯ ಮಾಡಲೇಬೇಕು ಎಂದು ಮೊತ್ತಮೊದಲಿನ ಅಭಿಪ್ರಾಯ; ಇಂಗ್ಲಂಡಕ್ಕೆ ಸಹಾಯ ಮಾಡುವುದು ಸುತರಾಂ ಶಕ್ಯವಿಲ್ಲ, ಸಮಂಜಸವೂ ಅಲ್ಲ ಎಂದು ಈಗಿನ ಅಭಿಪ್ರಾಯ. ಅವರ ಲೇಖನಗಳನ್ನೋದುವಾಗ ಪ್ರಜಾಪ್ರಭುತ್ವಕ್ಕೆ ಅನೇಕ ಅರ್ಥಗಳಿದ್ದಂತೆ ಕಂಡುಬರುವುವು. ನಿಸ್ವಾರ್ಥಬುದ್ಧಿಯ ದೇಶಸೇವಕರ ಆಳಿಕೆ ಪ್ರಜಾಪ್ರಭುತ್ವ, ಬಹುಮತದವರ ಆಳಿಕೆಯೆ ಪ್ರಜಾಪ್ರಭುತ್ವ, ಇಂದಿನ ಕಾಂಗ್ರೆಸ್ ಪಕ್ಷದ ಆಳಿಕೆ ಪ್ರಜಾಪ್ರಭುತ್ವ, ಸತ್ಯ-ಅಹಿಂಸೆಗಳ ಆಳಿಕೆಯೆ ಪ್ರಜಾಪ್ರಭುತ್ವ—ಹೀಗೆ ಸಾಮಾನ್ಯನಿಗೆ ಗೊಂದಲವನ್ನು

ಎಬ್ಬಿಸುವ ಭಿನ್ನಭಿನ್ನ ಸಿದ್ಧಾಂತಗಳಿವೆ. ಮಹಾತ್ಮರು ತಾವು ತಿಳಿದ ನೀತಿಶಾಸ್ತ್ರವೇ ಎಲ್ಲ ವ್ಯವಹಾರಕ್ಕೆ ತಳಹದಿ ಎಂದೂ, ಅನಿವಾರ್ಯವಾಗಿ ನಡೆದ ಎಲ್ಲವನ್ನೂ ಅದಕ್ಕೆ ಅನ್ವಯಿಸಿ ಸಮರ್ಥಿಸಬೇಕೆಂದೂ ಹಟ ತೊಡುವುದೇ ಈ ವಿಚಾರಗೊಂದಲಕ್ಕೆ ಕಾರಣ ಎಂದು ಹೇಳಬಹುದಲ್ಲವೆ?

ಸದ್ಯದ ದುರದೃಷ್ಟ ಒಂದು

ಇತ್ತ ಮಹಾತ್ಮರು ತಾವು ತಿಳಿದ ಧರ್ಮಕ್ಕೆ ಎಷ್ಟೆಷ್ಟು ಮಹತ್ತ್ವವನ್ನು ಕೊಡುವರೋ ಅಷ್ಟಷ್ಟೇ ಮಹತ್ತ್ವವನ್ನು ಇಂದು ಮಿಕ್ಕವರು ತಾವೂ ತಿಳಿದುಕೊಂಡ ಧರ್ಮಕ್ಕೆ ಕೊಡತೊಡಗಿದ್ದಾರೆ. ಕಳೆದ ಒಂದು ತಿಂಗಳಿಂದ ಮುಸ್ಲಿಂ ಲೀಗದ ಅಧ್ಯಕ್ಷರಾದ ಬ್ಯಾ. ಜಿನ್ನಾ ಇವರು ಪ್ರಕಾಶವಾಗಿ ತಾಳುತ್ತಿರುವ ಧೋರಣೆ ಈ ಮಾತಿಗೆ ಉದಾಹರಣೆ. ಬಹುಮತದ ಆಳಿಕೆ, ಪ್ರಜಾಪ್ರಭುತ್ವ ಎಂದರೆ ಅದು ಬರಿಯ ಹಿಂದುಗಳ ಆಳಿಕೆ ಎನ್ನುವರು ಜಿನ್ನಾರವರು; ಸತ್ಯ-ಅಹಿಂಸೆಗಳ ಆಳಿಕೆಯೆ ಪ್ರಜಾಪ್ರಭುತ್ವ ಎಂದಾಗ ಎಲ್ಲರಿಗೂ ಮತಾಧಿಕಾರವನ್ನು ಕೊಟ್ಟು ನೋಡಿರಿ ಎನ್ನುವರು ಅದೇ ಜಿನ್ನಾ ಸಾಹೇಬರು; ಕಾಂಗ್ರೆಸಿನ ಆಳಿಕೆಯೆ ಪ್ರಜಾಪ್ರಭುತ್ವ ಎಂದರೆ ಮಿಕ್ಕ ಪಕ್ಷಗಳನ್ನು ಅಲಕ್ಷ್ಯಮಾಡುವ ಈ ವೃತ್ತಿ ಸರ್ವಾಧಿಕಾರಿತ್ವ, ಪ್ರಜಾಪ್ರಭುತ್ವವಲ್ಲ ಎನ್ನುವರು ಜಿನ್ನಾ ಪ್ರಭೃತಿಗಳು. ಹೀಗೆ ಮಾತಿಗೆ ಮಾತು ಉತ್ತರಕೊಟ್ಟು ಕೊನೆಗೆ ಮುಸಲ್ಮಾನರ ಹಕ್ಕುಬಾಧ್ಯತೆಗಳನ್ನು ಭದ್ರವಾಗಿ, ವಿಶಿಷ್ಟವಾಗಿ ಉಳಿಸಿ ಬೆಳೆಯಿಸಿಕೊಳ್ಳುವ ಪದ್ಧತಿಯೆ ನಿಜವಾದ ಪ್ರಜಾಪ್ರಭುತ್ವ ಎಂದು ಬ್ಯಾ. ಜಿನ್ನಾ ಅವರು ತಮ್ಮದೊಂದು ವ್ಯಾಖ್ಯೆಯನ್ನು ಹೊರಡಿಸಿದ್ದಾರೆ. ಇಷ್ಟೇಕೆ? ಕಾಂಗ್ರೆಸ್ ಮಂತ್ರಿಮಂಡಳಗಳು ರಾಜೀನಾಮೆಯನ್ನು ಕೊಟ್ಟುದು ಮುಸಲ್ಮಾನರಿಗೆ ಬಂಧವಿಮೋಚನೆಯಾದಂತೆ ಎಂದೂ, ಅದಕ್ಕಾಗಿ ಸಾರ್ವಜನಿಕವಾಗಿ ಹಿಂದುಸ್ಥಾನದ ಮುಸಲ್ಮಾನರೆಲ್ಲ ದೇವರಿಗೆ ಕೃತಜ್ಞತೆಯನ್ನು ಅರ್ಪಿಸಬೇಕೆಂದೂ ಲೀಗದ ಅಧ್ಯಕ್ಷರೆಂದು ಜಿನ್ನಾ ಅವರು ಆಜ್ಞೆಯನ್ನು ಹೊರಡಿಸಿದ್ದಾರೆ! ಕಾಂಗ್ರೆಸಿನ ಎದುರಾಗಿ ನಿಂತು, ಕಾಂಗ್ರೆಸ್ಸೊಂದೇ ಭಾರತೀಯರ ಪ್ರತಿನಿಧಿಯಲ್ಲ ಎಂದು ತೋರಿಸಬೇಕೆನ್ನುವ ಹಟದ ಪರಮಾವಧಿಯಲ್ಲವೆ ಇದು?

ಮಿಕ್ಕವರ ಗಣನೆ ಎಲ್ಲಿ?

'ಭಾರತೀಯರ ಪ್ರತಿನಿಧಿ' ಎಂಬ ಪದವಂತೂ ಉಳಿಯಲಿ, 'ಭಾರತೀಯ' ಎಂಬ ಶಬ್ದವನ್ನಾದರೂ ಉಪಯೋಗಿಸಬಹುದೆ ಎಂದು ಸಾಮಾನ್ಯ ಮನುಷ್ಯನಿಗೆ ಸಂದೇಹ ಉಂಟಾಗುವುದು. ಯಾಕಾಗಬಾರದು? ಸತ್ಯ-ಅಹಿಂಸೆಗಳಲ್ಲಿ ವಿಶ್ವಾಸವನ್ನಿಟ್ಟು ಕಾಂಗ್ರೆಸ್ ಸೇರಿದರೆ ಮಹಾತ್ಮರ ಲೆಕ್ಕದಲ್ಲಿ ನಮ್ಮ ಗಣನೆಯಾಗುವುದು; ಮುಸಲ್ಮಾನನೆನಿಸಿ ಮುಸ್ಲಿಂ ಲೀಗದ ಸದಸ್ಯನಿದ್ದರೆ ಮಾತ್ರ ಬ್ಯಾ. ಜಿನ್ನಾ ಅವರ ಲೆಕ್ಕದಲ್ಲಿ ನಮ್ಮ ಗಣನೆಯಾಗುವುದು? ನೀತಿಶಾಸ್ತ್ರದ ದೃಷ್ಟಿಯಿಂದ ಒಬ್ಬರು ನಮ್ಮನ್ನು ನೋಡಿದರೆ, ಜಾತಿ-ಮತ-ಪಂಥಗಳ ದೃಷ್ಟಿಯಿಂದ ಇನ್ನೊಬ್ಬರು ನಮ್ಮನ್ನು ನೋಡುವರು. ಬರಿಯ 'ಭಾರತೀಯ' ಎಂದು ಹೇಳಿಕೊಂಡಮಾತ್ರಕ್ಕೆ ಯಾರ ಲೆಕ್ಕದಲ್ಲೂ ನಮಗೆ ಗಣನೆಯೆ ಇಲ್ಲ! ಆದರೂ ಇಂದಿನ ವ್ಯವಹಾರದಲ್ಲಿ ನಮ್ಮಂಥ ಸಾಮಾನ್ಯರು ಬರಿಯ 'ಭಾರತೀಯ'ರಲ್ಲದೆ ಮತ್ತೇನೆಂದು ಹೇಳಿಕೊಳ್ಳಬಹುದು? ದಿನದಿನಕ್ಕೆ ಊಟ-ಉಡಿಗೆ, ಆಚಾರ-ವಿಚಾರ, ಸಂಪ್ರದಾಯ-ಸಮಾರಂಭ, ಕೂಡಿ ವ್ಯವಹಾರ— ಇವುಗಳಿಗಾಗಿ ನಮ್ಮ ಜಾತಿ-ಮತ-ಪಂಥಗಳ ದೃಷ್ಟಿಯ ಜೀವನವು ಹಿಂದೆ ಬೀಳುತ್ತಿರುವಾಗ, ನಾವು ಹೆಚ್ಚಾಗಿ ಬರಿಯ 'ಭಾರತೀಯ'ರೆ ಅಲ್ಲವೆ? ಆದರೆ ನಮ್ಮ ಮುಂದಾಳುಗಳ ದೃಷ್ಟಿ ಮಾತ್ರ ಹೀಗೇಕೆ ಸಂಕುಚಿತ ಏಕಾಗ್ರತೆಯಿಂದ ನೋಡುತ್ತಿದೆ? ಬ್ಯಾ. ಜಿನ್ನಾ ಅವರಿಗಾಗಿ ಎಷ್ಟು ಜನ ಯುವಕ ಮುಸಲ್ಮಾನರು ಕೈಕಟ್ಟಿ ನಿಂತಿದ್ದಾರೆ? ಬ್ಯಾ. ಸಾವರಕರರನ್ನು ಎಷ್ಟು ಜನ ಯುವಕ ಹಿಂದುಗಳು ಆಧುನಿಕ ಗೋಬ್ರಾಹ್ಮಣ ಪರಿಪಾಲಕ ಶಿವಾಜಿ ಎಂದು ತಿಳಿದಿದ್ದಾರೆ? ಮಹಾತ್ಮರ ಧರ್ಮರಾಜ-ರಾಜಕಾರಣವನ್ನು ಎಷ್ಟು ಜನರು ಭೀಮಾರ್ಜುನಾದಿಗಳಂತೆ ಶಿರಸಾವಹಿಸಲು ಸಿದ್ಧರಿದ್ದಾರೆ? ಈ ಪ್ರಶ್ನೆಗಳ ಉತ್ತರಗಳು ನಮ್ಮ ರಾಜಕೀಯ ಜೀವನದ ಪ್ರಗತಿ-ಅಧೋಗತಿಗಳನ್ನು ಸೂಚಿಸಬಲ್ಲವು. ಮೇಲೆ ಹೇಳಿದಂತೆ ಸದ್ಯಕ್ಕೆ ನಮಗೆ ರಾಜಕೀಯ ಜೀವನವಿಲ್ಲ, ಅದಕ್ಕೆ ಅವಶ್ಯವಿದ್ದ ಸಂಸ್ಕಾರ—ತಳಹದಿಯೂ ಇಲ್ಲ.

ಕಿವಿಮಾತು

ಬ್ಯಾ. ಜಿನ್ನಾ ಅವರ ಧೋರಣವು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಿದೆ— ಬಹುಶಃ ಎಲ್ಲರಿಗೂ ಅಸಹ್ಯವೆನಿಸಿದೆ— ಎಂಬುದು ನಿರ್ವಿವಾದವಾಗಿದೆ. ದಿನದಿನಕ್ಕೆ ಮುಸಲ್ಮಾನೇತರರನ್ನು ಹೆಚ್ಚಾದ ಅವಿಶ್ವಾಸದಿಂದ ನೋಡುವುದರಲ್ಲಿ ಲೀಗದ ಅಧ್ಯಕ್ಷರ ಇಂಗಿತವೇನಿರಬಹುದು? ಇಂಗಿತವೇನೆ ಇರಲಿ, ಅವರ ಮನೋವೃತ್ತಿಯನ್ನು ಹಳಿಯುವ ಅಧಿಕಾರವು ಕರ್ನಾಟಕದ ರಾಜಕಾರಣಪಟುಗಳಿಗೆ ಎಷ್ಟರ ಮಟ್ಟಿಗೆ ಇದೆ ಎಂಬುದೊಂದು ಕುತೂಹಲದ ಪ್ರಶ್ನೆಯಾಗಿದೆ. ಬಹುಮತದ ಆಳಿಕೆಯೆ ಪ್ರಜಾಪ್ರಭುತ್ವವೆಂದಲ್ಲಿ ಬ್ರಾಹ್ಮಣೇತರರ ಪ್ರಾಬಲ್ಯ ಬೆಳೆಯಬಹುದೆಂದು ಬ್ರಾಹ್ಮಣ ಮುಂದಾಳುಗಳು, ಮಹಾತ್ಮರ ಕಾಂಗ್ರೆಸ್ ರಾಜ್ಯವೆಂದರೆ ಬ್ರಾಹ್ಮಣರ ರಾಜ್ಯ ಎಂದು ಬ್ರಾಹ್ಮಣೇತರ ಮುಂದಾಳುಗಳು ಸಂಶಯಗೊಂಡು (ಗಾಬರಿಗೊಂಡು—ಎಂದರೂ ಸಲ್ಲುವುದು) ಪರಸ್ಪರ ಅಸಹ್ಯ-ಅಸೂಯೆ-ಅವಿಶ್ವಾಸಗಳಿಂದ ವರ್ತಿಸುತ್ತಿರುವಾಗ, ಮುಸಲ್ಮಾನರನ್ನು ಹಳಿಯಲು ನಮಗೆ ಯಾವ ಅಧಿಕಾರ? ಒಂದೇ ಪ್ರಾಂತ, ಒಂದೇ ಭಾಷೆ, ಒಂದೇ ಇತಿಹಾಸ—ಇವುಗಳ ದ್ವಾರಾ, ಬ್ರಾಹ್ಮಣ-ಬ್ರಾಹ್ಮಣೇತರ ಐಕ್ಯ ಇದುವರೆಗೂ ಘಟಿಸಲೊಲ್ಲದು! ಯಾಕೆ? ಮೇಲಿನ ಕಾರಣವನ್ನೆ ಇಲ್ಲಿಯೂ ತೋರಿಸಬಹುದು. ನಮಗೆ ಇನ್ನೂ **ರಾಜಕಾರಣವೆಂದರೆ ಧರ್ಮ ಜಾತಿಗಳಿಗೆ ಸಂಬಂಧಿಸಿದ ಧೋರಣೆ, ನಾಗರಿಕ ಅಥವ ಆರ್ಥಿಕ ದೃಷ್ಟಿಗೆ ಸಂಬಂಧಿಸಿದ್ದಲ್ಲ ಎಂಬ ತಪ್ಪು ತಿಳಿವಳಿ** ಇದೆ. ಮಹಾತ್ಮರ ಧಾರ್ಮಿಕ ಧೋರಣೆಯ ಅಪಾರ್ಥವಿದ ಎಂದರೂ, ವಸ್ತುಸ್ಥಿತಿ ಇದು—ಎಂಬುದನ್ನು ಮರೆಯುವಂತಿಲ್ಲ

ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ಜ್ಯಾ. ಜಿನ್ನಾ ಅವರಿಗೆ ಬುದ್ಧಿ ಹೇಳುವ ಮುಂಚೆ ನಮ್ಮ ಮುಂದಾಳುಗಳು ಮೊದಲು ತಮ್ಮ ಮನೆಯಲ್ಲಿಯ ವ್ಯವಹಾರವನ್ನೆ ನೋಡಿಕೊಂಡರೆ, ಪ್ರಾಂತಕ್ಕೆ—ತನ್ಮೂಲಕ ದೇಶಕ್ಕೆ—ದೊಡ್ಡ ಹಿತ ಬಗೆದಂತಾಗುವುದು.

ಯುರೋಪಿನ ಯಮಲೋಕಪಟ

ಯುರೋಪಿನಲ್ಲಿ ಹಿಟ್ಲರನು ಯುದ್ಧಜ್ವಾಲೆಯನ್ನು ಹೊತ್ತಿಸಿ ಇಂದಿಗೆ ನಾಲ್ಕು ತಿಂಗಳು ಕಳೆದುವಷ್ಟೆ! ಆ ಜ್ವಾಲೆಗೆ ಮೊದಲು ಆಹುತಿಯಾದ ಪೋಲಾಂಡು ಈಗ ಪೂರ್ತಿಯಾಗಿ ಭಸ್ಮಸಾತ್ತಾಗಿದೆ. ಇತ್ತೀಚೆಗೆ ಜ್ವಾಲೆಯ ದಾಹಕ್ಕಿಂತ ಹೊಗೆಯ ಮೋಹವೆ ಹೆಚ್ಚಾಗಿ ಮುಸುಕಿದಂತಾಗಿದೆ. ಇಷ್ಟೇಕೆ—ಹೊಗೆಯ ಮುಸುಕಿನಲ್ಲಿ ಮೂಲ ಬೆಂಕಿಯೆ ಮುಚ್ಚಿದಂತಾಗಿದೆ...ಎಂದು ಹೇಳಬಹುದು. ಆ ಹೊಗೆ ಎಂದರೆ ರಶಿಯಾದ ರಾಜಕಾರಣ. ಪೋಲಾಂದಿನ ಶವವನ್ನು ಸ್ಮಶಾನಕ್ಕೆ ಮುಟ್ಟಿಸುವಲ್ಲಿ ಸಹಾಯಮಾಡಿ, ಶವದ ಬಟ್ಟೆ-ಬಂಗಾರಗಳನ್ನು ಸ್ಟಾಲಿನ್ನನು ಸೆಳೆದುಕೊಂಡನು. ಅಂದಿನಿಂದ ಇಂದಿನವರೆಗೆ ಪೂರ್ವ ಯುರೋಪಿನಲ್ಲಿ ರಶಿಯಾದ ದರ್ಪರಾಜ್ಯ ಬೆಳೆಯುತ್ತಲಿದೆ. ಈಗ ತನ್ನ ಸುತ್ತಲಿದ್ದ ಫಿನ್‌ಲಾಂಡು ಮೊದಲಾದ ಚಿಕ್ಕ ರಾಷ್ಟ್ರಗಳನ್ನು ರಶಿಯಾ ದೇಶವು ತನ್ನ ಅಧಿಕಾರಜಾಲದೊಳಗೆ ಬಂಧಿಸಲು ಯತ್ನಿಸುತ್ತಲಿದೆ. ಇತ್ತಿತ್ತಲಾಗಿ ಹಿಟ್ಲರಿಗಿಂತ ಸ್ಟಾಲಿನನೆ ಸೈತಾನನಾಗಿ ವೃತ್ತಪತ್ರಗಳಲ್ಲಿ ಮುಖ ತೋರಿಸುತ್ತಲಿದ್ದಾನೆ. ರಶಿಯಾದ ಈ ರಾಜಕಾರಣಗೂಢವು ಶತ್ರುಗಳನ್ನು ಸಂತೋಷಗೊಳಿಸಿದೆ, ಮಿತ್ರರನ್ನು ಮತಿಭ್ರಾಂತರನ್ನಾಗಿ ಮಾಡಿದೆ.

೧. ಧನಸತ್ತೆ (Capitalistic)ಯ ರಾಷ್ಟ್ರಗಳು ತಂತಮ್ಮೊಳಗೆ ಹೋರಾಡುವ ಸಂಧಿಯನ್ನು ಸಾಧಿಸಿ, ಸ್ಟಾಲಿನನು ತನ್ನ ಸಾಮ್ರಾಜ್ಯಲಾಲಸೆಯನ್ನು ಪೂರಯಿಸಿಕೊಳ್ಳುತ್ತಿದ್ದಾನೆ ಎಂಬುದೊಂದು ತರ್ಕ;

೨. ಅಗತಿಕರಾದ ಚಿಕ್ಕ ಪುಟ್ಟ ರಾಷ್ಟ್ರಗಳು ತನ್ನ ನೆರೆಯಲ್ಲಿರುವುದು ಮುಂದೆ ಕಲಹಕ್ಕಾಗಲಿ, ಅನ್ಯ ಬಲಾಢ್ಯ ರಾಷ್ಟ್ರದ ದುರಾಶೆಗಾಗಲಿ ಕಾರಣವೆನಿಸಬಹುದಾದ್ದರಿಂದ ಅಂತಹ ರಾಷ್ಟ್ರಗಳನ್ನು ತನ್ನ ಅಧಿಕಾರದ ಕೆಳಗಿರಿಸಬೇಕೆಂಬ ಸ್ಟಾಲಿನನ ದೂರದರ್ಶಿತ್ವವಿದು, ಎಂದು ಇನ್ನೊಂದು ತರ್ಕ;

೩. ಧನಸತ್ತೆಯು ಅಂತಃಕಲಹಕ್ಕೆ ಗುರಿಯಾದ ಈ ಸಮಯದಲ್ಲಿ, ಜನಸತ್ತೆ (Proletarian)ಯ ಕ್ಷೇತ್ರವನ್ನು ವಿಶಾಲಗೊಳಿಸುವ, ಭದ್ರವಾಗಿ ಬೆಳೆಯಿಸುವ ತತ್ತ್ವದ ಹಟವಿದು ಎಂದು ಮೂರನೆಯ ತರ್ಕ;

೪. ಇಂದಿಲ್ಲ ನಾಳೆ ಇಂಗ್ಲಂಡ್-ಫ್ರಾನ್ಸ್-ಜರ್ಮನಿಗಳು ಒಂದುಗೂಡಿ ರಶಿಯಾದ ಜನಸತ್ತಾ ತತ್ತ್ವವನ್ನು ಎದುರಿಸುವುದು ಖಂಡಿತವೆಂದು ತಿಳಿದು, ಉತ್ತರ ಸಮುದ್ರದೆಡೆಯಲ್ಲಿಯೂ ಪೂರ್ವ ಯುರೋಪಿನಲ್ಲಿಯೂ ತನ್ನ ಸ್ಥಾನ-ಶಕ್ತಿ-ಸಂಪತ್ತುಗಳನ್ನು ರಶಿಯಾ ದೃಢೀಕರಿಸುತ್ತಲಿದೆ, ಎಂಬುದೂ ಒಂದು ತರ್ಕ.

ಸಮಂಜಸವಾದ ಸಿದ್ಧಾಂತ

ಮೇಲಿನ ನಾಲ್ಕು ತರ್ಕಗಳಲ್ಲಿ ಕೊನೆಯದೆ ಹೆಚ್ಚು ಸಯುಕ್ತಿಕವೆಂದು ಇತ್ತೀಚಿನ ಘಟನೆಗಳಿಂದ ಒಡೆದು ಕಾಣುವುದು. ಸದ್ಯಕ್ಕೆ ಮಿತ್ರರಾಷ್ಟ್ರಗಳು ಹಿಟ್ಲರನನ್ನು ಹಿಮ್ಮೇಳದಲ್ಲಿರಿಸಿ ರಶಿಯಾದ ವಿರುದ್ಧವೆ ಹೆಚ್ಚಾಗಿ ಪ್ರಚಾರಸುದ್ದಿಗಳನ್ನು ಪ್ರಕಟಿಸುತ್ತಲಿವೆ. ಮುಖ್ಯಪ್ರಧಾನರಾದ ಚೇಂಬರಲೇನರ ಮನೋವೃತ್ತಿಗೆ ಹಿಟ್ಲರನೆಂಬ ವ್ಯಕ್ತಿಗಿಂತ ಬೋಲಾಶೆವ್ಹಿಜಂ ಎಂಬ ತತ್ತ್ವವೆ ಹೆಚ್ಚು ಅಸಹ್ಯವಾಗಿದೆ. ಸದ್ಯಕ್ಕೆ ರಾಷ್ಟ್ರಸಂಘದಲ್ಲಿ ರಶಿಯಾದ ವಿರುದ್ಧವಾಗಿಯೆ ಚರ್ಚೆ-ತೀರ್ಮಾನುಗಳು ನಡೆಯುತ್ತಲಿವೆ. ಇದೆಲ್ಲವನ್ನು ನೋಡಿದರೆ ಒಂದೇ ಒಂದು ಸಿದ್ಧಾಂತ ಹೊರಡುವುದು. ಇಂಗ್ಲಂಡ್‌ದಲ್ಲಿ ಚೆಂಬರಲೇನರೆ ಮುಖ್ಯ ಪ್ರಧಾನರಾಗಿ, ತಮ್ಮ ಪಕ್ಷದಲ್ಲಿ ಬಹುಮತವನ್ನು ಕಟ್ಟಿಕೊಂಡು ಉಳಿದರೆ ಇಂಗ್ಲಂಡ್-ಜರ್ಮನಿಗಳ ಯುದ್ಧವು ಇನ್ನು ಸ್ವಲ್ಪಾವಧಿಯಲ್ಲಿಯೆ ಕೊನೆಗಾಣಬಹುದು. ಯಾಕೆಂದರೆ, ಹಿಟ್ಲರನಿಗೆ ಕೂಡ ತನ್ನ ಅಧಿಕಾರ ಉಳಿಸಿಕೊಳ್ಳುವ ದೃಷ್ಟಿಯಿಂದ ಬೋಲ್‌ಶೆವ್ಹಿಜಂದ ಹೆದರಿಕೆ ಹೆಚ್ಚಾಗಿದೆ. ಆ ಹೆದರಿಕೆಗಾಗಿ ಹಿಟ್ಲರನು ಪೋಲಾಂದಿನ ಪುನರುತ್ಥಾಪನೆಗೆ ಒಪ್ಪಿಕೊಂಡರೆ, ಇಂಗ್ಲಂಡ್-ಫ್ರಾನ್ಸ್‌ಗಳು ವಸಾಹತ ರಾಜ್ಯದಲ್ಲಿ ಕೆಲವನ್ನು ಹಿಟ್ಲರನಿಗೆ ಬಿಟ್ಟುಕೊಡಲು ಹಿಂದುಮುಂದು ನೋಡಲಿಕ್ಕಿಲ್ಲ. ಆ ಪರಿಸ್ಥಿತಿ ಬಂದರೆ ಮಾತ್ರ, ಜಗತ್ತು ಎಂದೂ ಅನುಭವಿಸದ ಯುದ್ಧಕ್ಕೆ ಆಹುತಿಯಾಗುವುದು. ಒಂದು ಕಡೆ ಜನಸತ್ತೆಯ ತತ್ತ್ವ, ಇನ್ನೊಂದು ಕಡೆ ಧನಸತ್ತೆಯ ದರ್ಪ; ಆತ್ಮರಕ್ಷಣೆಗಾಗಿ ಎರಡೂ ಪಕ್ಷದವರು ಎಲ್ಲದರ ಹಂಗುದೊರೆದು ಕಾದಬಹುದು. ಹಿಟ್ಲರನದು ಮುಗಿಯಬಹುದಾದ ಯುದ್ಧವೆನಿಸಿದರೆ, ಸ್ಟಾಲಿನನದು ಬಗೆಹರಿಯದ ಯುದ್ಧವಾಗುವುದು. ದೇಶ-ದೇಶಗಳ ಯುದ್ಧವಲ್ಲದೆ ತತ್ತ್ವತಾರತಮ್ಯಗಳ ಯುದ್ಧವಾಗಿ—ಕೊನೆಗೆ ಯಾವ ಪಕ್ಷ ಗೆದ್ದರೂ—ಮಾನವಸಮಾಜವು ಕ್ರಾಂತಿಗೆ ತುತ್ತಾಗಿ ಕಳವಳಗೊಳ್ಳುವುದರಲ್ಲಿ ಸಂದೇಹವಿಲ್ಲ.

ಬೆಳಗಾಂವಿಯ ಅಧಿವೇಶನ

ಇಪ್ಪತ್ತುನಾಲ್ಕನೆಯ ಸಾಹಿತ್ಯಸಮ್ಮೇಳನದ ಸಮಯದಲ್ಲಿ ವಾಡಿಕೆಯಂತೆ ಕ. ಸಾ. ಪರಿಷತ್ತಿನ ವಾರ್ಷಿಕ ಅಧಿವೇಶನವೂ ನೇರುವುದು. ಸಾಮಾನ್ಯವಾಗಿ ಪರಿಷತ್ತಿನ ಸದಸ್ಯರು ಸೇರಿ ವಾರ್ಷಿಕ ಕಾರ್ಯವಿವರವನ್ನು ಚರ್ಚಿಸುವುದೆಂದರೆ ವರ್ಷದಲ್ಲಿ ಇದೊಂದೇ ಸಲ. ವರ್ಷಕ್ಕೆ ೩ ರೂಪಾಯಿ.ಗಳ ಚಂದಾಹಣವನ್ನು ಕೊಟ್ಟರೂ ಇಡಿಯ ವರ್ಷದಲ್ಲಿ ಒಮ್ಮೆ ಮಾತ್ರ ತಮ್ಮ ಸದಸ್ಯತ್ವದ ಅಧಿಕಾರವನ್ನು ನಡೆಯಿಸುವುದು ಘಟನೆಯ ದೋಷವೊ ಸದಸ್ಯರ ದುರ್ಭಾಗ್ಯವೊ—ತಿಳಿಯದು. ಇತ್ತಿತ್ತಲಾಗಿ ಬೇಸಗೆಯ ರಜೆಯಲ್ಲಿ ಬೆಂಗಳೂರಿನಲ್ಲಿ ಕೂಡಿಸುವ ವಿಶೇಷೋತ್ಸವಕಾಲಕ್ಕೆ ಪರಿಷತ್ತಿನ ವಾರ್ಷಿಕ ಅಧಿವೇಶನ ನಡೆಯುತ್ತಿರುವುದಂತೆ; ಇದಿನ್ನೂ ಹೊಸ ಪ್ರಯೋಗವಿದ್ದುದರಿಂದ ಅದರ ಉಪಯುಕ್ತತೆ ಎಷ್ಟೆಂಬುದನ್ನು ಈಗಲೆ ಹೇಳಲಾಗದು. ವಾರ್ಷಿಕ ಅಧಿವೇಶನದಲ್ಲಾದರೂ ಸದಸ್ಯರು ತಮ್ಮ ಅಧಿಕಾರವನ್ನು ಎಷ್ಟರ ಮಟ್ಟಿಗೆ ನಡೆಸಬಲ್ಲ

ರೆಂಬುದು ಕೆಲವು ಸೂಕ್ಷ್ಮಗಳನ್ನು ಅರಿತುಕೊಂಡರೆ ವಿಶದವಾಗುವುದು. ಈ ಅಧಿವೇಶನದಲ್ಲಿ ಮೊದಲು ವಾರ್ಷಿಕ ವರದಿಯ ಚರ್ಚೆಯಾಗಬೇಕು. ಆದರೆ— ಪಾಪ !—ಸದಸ್ಯರಿಗೆ ಒಮ್ಮೊಮ್ಮೆ ವರದಿಯನ್ನು ಚರ್ಚೆಯ ಮುಂಚೆ ನೋಡಲು ಕೂಡ ಶಕ್ಯವಾಗುವುದಿಲ್ಲ. ಪರಿಷತ್ತಿನಂತಹ ಸಂಸ್ಥೆಯಲ್ಲಿ ವರದಿಯು ಏನಿಲ್ಲೆಂದರೂ ವಾರ್ಷಿಕ ಅಧಿವೇಶನಕ್ಕೆ ೧೫ ದಿನಗಳಾದರೂ ಮುಂಚಿತವಾಗಿ ಕೈಸೇರಬಾರದೇಕೆ ? ಅನೇಕ ಪುಟಗಳ ಹೊತ್ತಿಗೆಯಂತಿದ್ದ ವರದಿ, ಆಯ-ವ್ಯಯದ ಪಟ್ಟಿ, ಅಂದಾಜುಪಟ್ಟಿ ಇವೆಲ್ಲವುಗಳನ್ನೂ ಮುಂಚೆಯೆ ನಿಧಾನವಾಗಿ ನೋಡಿಕೊಳ್ಳಲಾಗದ ಸದಸ್ಯರಿಂದ, ಎಂತಹ ಉಪಯುಕ್ತ ಇಲ್ಲವೆ ಸಹಾಯಕ ಚರ್ಚೆಯಾಗಬಹುದು ? ಪರಿಷತ್ತಿನ ಟೀಕೆಯಲ್ಲ ಇದು, ಸಾರ್ವಜನಿಕಸಂಸ್ಥೆಗಳು ಅವಶ್ಯವಾಗಿ ಮಾಡಬೇಕಾದ ಕೆಲಸವಿದು ಎಂದು ತೋರಿಸಿಕೊಡುವುದಿಷ್ಟೆ ನಮ್ಮ ಉದ್ದೇಶವಾಗಿದೆ.

‘ಪರಿಷತ್ತು’ ಮತ್ತು ‘ಸಮ್ಮೇಲನ’

ಇವೆರಡೂ ಒಂದರಿಂದೊಂದು ಬೇರೆಯಾಗಿವೆ ಎಂಬುದು ಎಷ್ಟೋ ಸಮ್ಮೇಳನಾಧ್ಯಕ್ಷರಿಗೆ ಕೂಡ ಗೊತ್ತಿರಲಿಲ್ಲ, ಮಿಕ್ಕವರ ಮಾತೇನು? ಇಡಿಯ ವರ್ಷ ಕಾರ್ಯವನ್ನು ನಡೆಯಿಸುವ ಸಂಸ್ಥೆ ‘ಪರಿಷತ್ತು’ ಇದರ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯನಿರ್ವಾಹಕ ಮಂಡಲಿ— ಇವು ನಿಯಮಗಳಿಗನುಸರಿಸಿ ನಿಶ್ಚಿತವಾಗುವವು ; ೩-೪ ದಿನದ ಜನಜಾತ್ರೆಯು ಸಾಹಿತ್ಯ ‘ಸಮ್ಮೇಳನ’, ಇಲ್ಲಿಯ ಹಿರಿಮ ಸೋಗಿಂಗಾರ ‘ಸಮ್ಮೇಳನಾಧ್ಯಕ್ಷ’. ಈ ಅಧ್ಯಕ್ಷನಿಗೂ ಪರಿಷತ್ತಿಗೂ ಯಾವ ವಿಧದಿಂದಲೂ ಸಂಬಂಧವಿಲ್ಲ ! ಲೋಕಾದರಕ್ಕೆ ಪಾತ್ರನಾಗಿ, ಏಕಮತದಿಂದ ಚುನಾಯಿತನಾಗಿ ಸಮ್ಮೇಳನದ ಅಧ್ಯಕ್ಷನಾದ ವ್ಯಕ್ತಿ ೩-೪ ದಿವಸಗಳಲ್ಲಿ ಪರಿಷತ್ತಿಗೆ ನಿರುಪಯೋಗಿ ಎನಿಸಬೇಕಾಗುವುದು ! ಇದೊಂದು ಘಟನೆಯ ದೋಷ, ಪರಿಷತ್ತಿನ ಕಾರ್ಯಪ್ರಪಂಚಕ್ಕೆ ಹಾನಿ; ಇದನ್ನು ಸುಧಾರಿಸಿಕೊಳ್ಳಬೇಕು ಎಂದು ನಾಲ್ಕಾರು ವರ್ಷಗಳಿಂದ ಎಬ್ಬಿಸಿದ ಕೂಗು ಇಂದು ಬಹುಜನರಿಗೆ ಸಮ್ಮತವೆನಿಸುತ್ತಲಿದೆ. ಅದಕಾಗಿ ಪರಿಷತ್ತಿನ ಘಟನೆಯಲ್ಲಿ ಯೋಗ್ಯ ಬದಲಾವಣೆಯನ್ನು ಮಾಡುವದವಶ್ಯ. ಸಮ್ಮೇಳನದ ಅಧ್ಯಕ್ಷ ಪದವಿಯನ್ನಲಂಕರಿಸಿದಂತಹ ಮಹಾವ್ಯಕ್ತಿಗೆ ಇಡಿಯ ವರ್ಷದ ವರೆಗೆ ಕಾ. ನಿ. ಮಂಡಳದ ನೇತೃತ್ವವನ್ನು ಒಪ್ಪಿಸಬೇಕು: ಸದ್ಯಕ್ಕಿದ್ದ ಉಪಾಧ್ಯಕ್ಷ ಜಾಗೆಯನ್ನು ತೆಗೆದು, ಅದರ ಬದಲಾಗಿ ಕಾರ್ಯಾಧ್ಯಕ್ಷ (Chief Secretary) ಎಂಬ ಜಾಗೆಯನ್ನು ನಿರ್ಮಿಸಿ, ಕಾರ್ಯದ ಅನುಕೂಲತೆಗಾಗಿ ಬೆಂಗಳೂರಿನವರನ್ನೆ ಆ ಜಾಗೆಯಲ್ಲಿರಿಸಬೇಕು. ಕಾರ್ಯ ಬೆಳೆಸುವುದು ಮಹತ್ವದ್ದಲ್ಲದೆ ಗೌರವ ಉಳಿಸುವುದಲ್ಲ ಎಂಬ ಮಾತನ್ನು ಸಾರ್ವಜನಿಕ ಜೀವನದಲ್ಲಿ ಮರೆಯಲಾಗದು.

ಸಾಹಿತ್ಯಸಮ್ಮೇಳನದ ಸವಿಸ್ತಾರ ವರದಿ ಮುಂದಿನ ಸಂಚಿಕೆಯಲ್ಲಿ ಬರುವುದು.

ಕನ್ನಡಿಗರ ಕೀರ್ತಿ

ಶ್ರೀ. ದಾತಾರ ಭಗವಂತರಾಯರು.

ದೇ. ಭ. ದಾತಾರ ಬಳವಂತರಾಯರ ತಮ್ಮಂದಿರಾದ ಭಗವಂತರಾಯರು ಲಂಡನ್ ವಿಶ್ವವಿದ್ಯಾಲಯದ, ಎಮ್. ಎಸ್‌ಸಿ. ವಿಮೆಯ ಸಂಖ್ಯಾಶಾಸ್ತ್ರ (Actuarial Statistics) ಪರೀಕ್ಷೆಯಲ್ಲಿ ತೇರ್ಗಡೆಯಾದರೆಂದು ತಿಳಿಸಲು ತುಂಬಾಸಂತೋಷವಾಗುತ್ತದೆ.

ಶ್ರೀ. ದಾತಾರ ಭಗವಂತರಾಯರು, ಚಿಕ್ಕಂದಿನಿಂದಲೂ ತುಂಬ ಚುರುಕುಬುದ್ಧಿಯವರು. ಇವರು ತಮ್ಮ ಸ್ವಂತ ಪರಿಶ್ರಮದಿಂದಲೆ ಮುಂದೆ ಬಂದಿರುವರು. ಇವರ ಮುಕ್ಕಾಲುಪಾಲು ವಿದ್ಯೆಯು ಶಿಷ್ಯವೃತ್ತಿ, ವಿ. ವೇತನದಿಂದಲೇ ಸಾಗಿದೆ. ಇವರು ೧೯೨೮ರಲ್ಲಿ ಮುಧೋಳ ಹಾಯಸ್ಕೂಲಿನಿಂದ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ತಮ್ಮ ಪ್ರಿಯವಿಷಯವಾದ ಗಣಿತದಲ್ಲಿ ಪ್ರಶಸ್ತಿಯನ್ನು ಪಡೆದರು. ಕರ್ನಾಟಕ ಕಾಲೇಜಿನಲ್ಲಿ ಪ್ರಥಮಪರೀಕ್ಷೆಯಲ್ಲಿ (F. A.) ಎರಡನೆಯ ಶ್ರೇಣಿಯಲ್ಲಿ ಪಾಸಾದರು. ಸರ್ ಪರಶುರಾಮಭಾವು ಕಾಲೇಜಿನಿಂದ ಇಂಟರ್ ಸಾಯನ್ಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಮುಂಬಯಿಯ ವಿಜ್ಞಾನಶಾಸ್ತ್ರದ ಹಿರಿಯ ಶಿಕ್ಷಣಸಂಸ್ಥೆಯಾದ ರಾಯಲ್ ಇನ್ಸ್ಟಿಟ್ಯೂಟನ್ನು ಸೇರಿ, ಗಣಿತ ವಿಷಯವನ್ನೆ ಮುಖ್ಯವಾಗಿಟ್ಟುಕೊಂಡು, ೧೯೩೩ರಲ್ಲಿ ಬಿ.ಎಸ್‌ಸಿ. ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಪ್ರಶಸ್ತಿಯೊಂದಿಗೆ ಪಾಸಾದರು. ಮುಂದೆ ಅಲ್ಲಿಯೆ ಫೆಲೋಗಳಾಗಿ ೧೯೩೫ರಲ್ಲಿ ಎಮ್. ಎಸ್‌ಸಿ., ಡಿಗ್ರಿಯನ್ನು ಸಂಪಾದಿಸಿದರು. ಇವರು ಮೊದಲಿನಿಂದಲೂ ತುಂಬಾ ಕುಶಲಬುದ್ಧಿಯ ತರುಣರೆಂದು ಖ್ಯಾತಿಗೊಂಡಿದ್ದರು. ಪ್ರಿನ್ಸಿಪಾಲ್, ರ್‍ಯಾಂಗಲರ್ ಕಟ್ಟಿಯವರ ಪಟ್ಟಶಿಷ್ಯರಲ್ಲಿ ಇವರೊಬ್ಬರು. ಅದೇ ವರುಷ ಇವರಿಗೆ ಧಾರವಾಡ ಸರದಾರ ಆಕಬರನೀಸ ಭೀಮರಾಯರ ಶಿಷ್ಯವೃತ್ತಿವೇತನವು ಇಂಗ್ಲಂಡಿನಲ್ಲಿಯ ಸಂಶೋಧನ ಶಿಕ್ಷಣಕ್ಕಾಗಿ, ವಿಶ್ವವಿದ್ಯಾಲಯದಿಂದ ದೊರೆಕಿತು.

ಅಲ್ಲಿಯೂ ಈ ತರುಣ ಕನ್ನಡಿಗರು ತಮ್ಮ ಯಶೋದುಂದುಭಿಯನ್ನು ಮೊಳಗಿಸದೇ ಬಿಡಲಿಲ್ಲ. ಗಣಿತಶಾಸ್ತ್ರದ ಅತಿ

(೩೭೬ನೆಯ ಪುಟ ನೋಡಿರಿ)

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಸ್ವದೇಶೀಯ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ಪಂಕಪ್ರಭಾ' 'ಅಭ್ಯಂಗಚೂರ್ಣ'ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವವು.
ಬಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವವು.

JAYANTI January 1940 R. No. B. 4116

It is Wise to Advertise

IN

JAYANTI

★

Because

- ★ Jayanti is the Leading Kannada Magazine.
- ★ Jayanti reaches all parts of Karnatak.
- ★ Jayanti is read in all the towns of Karnatak.
- ★ Jayanti is the delight of all classes of readers,
- ★ Jayanti is a Monthly run on Sound and Modern Lines.
- ★ Jayanti stands for High Quality.

For Rates & Particulars

Apply to :—

THE MANAGER JAYANTI, DHARWAR

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ...... ವ್ಹಿ. ಪಿ. ಯಿಂದ ೩–೫–೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು   ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ | ಫೆಬ್ರುವರಿ ೧೯೪೦ | ೧೦ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಬೆಳುಗಾಲದಲ್ಲಿಯೂ ಛಪಣಿ (ವಿಚಾರತರಂಗ)	ಶ್ರೀ. 'ಸಾಮಾಜಿಕ'
ಒಕ್ಕಲಿಂಮುಗಳು (ಚಿತ್ರ)	ಶ್ರೀ. ಬಾಬಲಿ, ಹೈದರಾಬಾದ್
ಸಂಪಾದಕೀಯ	ಸಂಪಾದಕರು
ಮಂಗನ ಮಲ್ಲಿನಾಥತನ	ಶ್ರೀ. 'ಮಲ್ಲಿನಾಥ'
ರಸಿಯದ ರಕ್ಷಾಕವಚ (ವ್ಯಕ್ತಿಪರಿಚಯ)	ಶ್ರೀ. 'ಜಾರ್ಮನಿಯ ಹೆಜ್ಜೇಶ್'
ಕಿವಿಮಾತು	ಸಂಪಾದಕ ಮಂಡಲಿ
ಪಾತ್ರಪಟು (ನಾಗಪ್ಪನ ಕಥೆ)	ಪ್ರೊ. ಎಂ ಎಸ್. ಕುಲಕರ್ಣಿ, ಎಂ. ಎ.
ಪೇದಮ್ಮ ಈಶ್ವರನ ಪ್ರೇಮಸಂದೇಶ (ವಿಚಾರಪ್ರಚೋದಕ)	ಶ್ರೀ. ಎಂ. ಜಯತೀರ್ಥಶರ್ಮ
ಇರಲಿ (ಕವನ)	ಶ್ರೀ. 'ಶ್ರೀಹರ್ಷ' ಬೆಂಗಳೂರು
ಪ್ರೇಮಪ್ರವಾಹ (ಸಣ್ಣಕತೆ)	ಶ್ರೀ. 'ಕೃಷ್ಣಮೂರುತಿ' ಸಾಗರ
ತಿರುವಾಂಕೂರಿನಲ್ಲಿ ಕನ್ನಡಿಗರು (ಅನುಭವಕಥನ)	ಶ್ರೀ. ಬನ್ನಂಜೆ ರಾಮಾಚಾರ್ಯರು ಉಡುಪಿ
ಕನ್ಯಾಪಿತನ ಗೋಳು (ಗೋಳಿನ ಹಾಡು)	ಶ್ರೀ. ಶಾಮಸುಂದರ ಪುಣೆ, ಬಿ. ಎಜಿ.
ಹೆಣ್ಣಿನ ಹರಕೆ (ವ್ಯಂಗ ಕವಿತೆ)	ಶ್ರೀ. 'ಶ್ರೀಕೃಷ್ಣ' ಶಾರದಾಮಂಡಲ
ಕವಿತಾದೇವಿಯಲ್ಲಿ ಕೊನೆಯ ಪ್ರಾರ್ಥನೆ (ಕವಿತೆ)	ಶ್ರೀ. ಟಿ. ವ್ಹಿ. ಶೆಟ್ಟಿ
ನವಮತವಾದದ ನವನೀತಿವಾದ (ವಿಚಾರಪ್ರಚೋದಕ)	ಶ್ರೀ. ಜೋಗಳೇಕರ ಪಾಂಡುರಂಗರಾಯರು ಬಿ.ಎ.
ರತ್ನಮಣಿ (ಪತ್ತೇದಾರಿ ಕಥೆ)	ಶ್ರೀ. ಎನ್. ಸೂರಪ್ಪ ಚಿತ್ರದುರ್ಗ
ನಾಟ್ಯಸಮ್ಮೇಳನಾಧ್ಯಕ್ಷರ ಭಾಷಣ	ಪ್ರೊ. ಆರ್. ಎ. ಜಾಗೀರದಾರ ಎಂ. ಎ., (ಲಂಡನ್)
ಪ್ರಶ್ನೆ (ಕವನ)	ಶ್ರೀ. ಗುಡಗುಡಿ ಶ್ರೀನಿವಾಸ ಆಭೋಣಾ
ಕಲಾಸೇವೆ (ಸಣ್ಣ ಕತೆ)	ಶ್ರೀ. 'ಗೋಪಬಾಲ' ಆರೋಗ್ಯವರಂ
ಹೊಸಬಗೆಯ ಬಂಪರು (ಹೋಳಿಗೆಯ ವಿಷಯ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.
ಪುಸ್ತಕವಿಮರ್ಶೆ	ಬೇರೆ ಬೇರೆ ವಿಮರ್ಶಕರು
ಸಾದರಸ್ವೀಕಾರ	.. ..
ಈ ಸಲದ ಸಾಹಿತ್ಯ ಸಮ್ಮೇಳನ (ಕಿರಿಯ ವರದಿ)	ಶ್ರೀ. 'ವಿಹಂಗಮ'
ನಗೀಗೆ ನೇವಿದ್ಯ	ಶ್ರೀ. 'ನಕಲೀ ನಾರಾಯಣಾಚಾರಿ'
ನಾಲ್ಕು ನಿಟ್ಟಿನ ನೋಟ	'ನಿರೀಕ್ಷಕರು'

ಸಂಚಿಕೆ ೧೦
ಫೆಬ್ರುವರಿ



ವರ್ಷ ೨
೧೯೪೦

ಒಕ್ಕಲುಮಗಳು

"ಬೆಳೆಯೇನೋ ಬೇಕಾದಹಾಗಿದೆ. ಕೊಯಿದು ಒಕ್ಕುವವರದೆ ಕೊರತೆ"

ಬೆಳುಗಾಲದಲ್ಲಿಯೂ ಭವಣೆ

ಮಳೆಗಾಲ ಕಳೆದು ಬೆಳುಗಾಲ ಬಂದಿತು. ಮೋ[illegible] ಮುಸುಕಿನಲ್ಲಿ ಮರೆಯಾಗಿದ್ದ ನೇಸರು ತೊಳತೊಳಗುವ ತನ್ನ ಸಾವಿ[illegible]ಗಳಿಂದ ಹಗಲನ್ನು ಅಪ್ಪಿಕೊಂಡ. ಕಾರ್ಗತ್ತಲೆಯ ಕಾಲ ಮುಗಿದು ಬೆಳುದಿಂಗಳು ಇರುಳಿಗೆ ಬಣ್ಣ ಬರೆಯತೊಡಗಿತು. ಬೆಟ್ಟ-ಬಯಲುಗಳೆಲ್ಲವೂ ಬೆಳೆಗಳಿಂದ ತುಂಬಿದುವು.

ಬೀಜಬಿತ್ತಿ ಸಸಿನೆಟ್ಟು ಮಲಗಿದ ಒಕ್ಕಲುಮಕ್ಕಳೆಲ್ಲರಿಗೂ ಕಣ್ಣು ತೆರೆಯಲಾಗದಂತಹ ಕಡುನಿದ್ದೆ. ಹಾಲುಗಾಳು ಬಲಿತು ಹುರಿಗಾಳಾದುವು. ಕಸುಗಾಯಿ ಮಾಗಿ ಹಣ್ಣಾದುವು. ಕಾಳು ಒಕ್ಕುವವರಿಲ್ಲ; ಹಣ್ಣು ಕೊಯ್ಯುವವರಿಲ್ಲ.

ಹಿರಿಯರಿಗೆಲ್ಲ ನಿದ್ದೆ; ಎಚ್ಚತ್ತು ಆಡುವ ಕಿರಿಯರಿಗೆ ಹಸಿವೆ. ಬರಿಹೊಟ್ಟೆಯ ಸಂಕಟ ಕಿರುಮಕ್ಕಳನ್ನು ಕೂಗಿಕೊಳ್ಳಲು ಹಚ್ಚಿತು. ಬೆದರಿ ಎಚ್ಚತ್ತ ಹಿರಿಯರಿಗೆ ತಂತಮ್ಮ ಗಳಗೆ-ಕಣಜ- ಉಗ್ರಾಣಗಳೆಲ್ಲ ತೆರಹು-ತೆರಹಾಗಿದ್ದುದು ಕಣ್ಣಿಗೆ ಬಿದ್ದಿತು. ಮಾಡುವುದೇನೆಂಬುದು ತಿಳಿಯದೆ ಗಾಬರಿಗೊಂಡು ಕುಳಿತುಬಿಟ್ಟರು.

ಬೆಟ್ಟಬಯಲು ಬೆಳೆ-ಬೆಳಸುಗಳಿಂದ ತುಂಬಿದೆ. ಒಕ್ಕುವ ಕಾಲವನ್ನು ಕಾಯುತ್ತಿದ್ದ ಮನೆ ಬಕ್ಕಂಬಯಲಾಗಿದೆ. ಆದರೆ ಬೆಳೆಯನ್ನೊಕ್ಕುವ ಒಕ್ಕಲಿಗರು ಬೇಕಲ್ಲವೆ? ಎಚ್ಚತ್ತಿರುವ ಒಕ್ಕಲಿಗರಿಗೆ ಒಕ್ಕುವ ಬುದ್ಧಿ ಬೇಕಲ್ಲವೆ? ಆ ಬುದ್ಧಿಯಿರುವವರಿಗೆ ತಕ್ಕ ಉಪಕರಣಗಳು ಬೇಕಲ್ಲವೆ?

ಇದ್ದ ಒಂದು ಕುಡುಗೋಲನ್ನು ಹಿಡಿದು ಬೆಳೆಯನ್ನೊಕ್ಕಲು-ಹೊರಟ ಒಕ್ಕಲುಮಗಳೊಬ್ಬಳು ಅನುಭವಗೀತವೊಂದನ್ನು ಹೀಗೆ ಹಾಡುತ್ತಲಿದ್ದಾಳೆ :

"ಎಲ್ಲ ಬಲ್ಲವರಿಲ್ಲ; ಬಲ್ಲವರು ಬಹಳಿಲ್ಲ;
ಬಲ್ಲಿದರು ಇದ್ದು ಬಲವಿಲ್ಲ; ಸಾಹಿತ್ಯ-
ವೆಲ್ಲರಿಗೆ ಇಲ್ಲ ಸರ್ವಜ್ಞ !"



ಕನ್ನಡ ಪತ್ರಿಕೆಗಳಿಗಿರುವ ತೊಂದರೆಗಳು

ಕನ್ನಡ ಪತ್ರಿಕೆಗಳ ಪ್ರಗತಿಯ ದಾರಿಯಲ್ಲಿ ಇನ್ನೊಂದು ದೊಡ್ಡ ತೊಡಕು ಯಾವುದೆಂದರೆ ಇಂದಿನ ಕಲಿತ ಜನರಲ್ಲಿಯ ರುಚಿವೈಷಮ್ಯ. ನಮ್ಮಲ್ಲಿಯ ಕಲಿತ ಜನರಲ್ಲಿ ಕೇವಲ ಕನ್ನಡ ಕಲಿತವರು, ಇಂಗ್ಲಿಷ್ ಕಲಿತವರು ಎಂದು ಎರಡು ಭಾಗಗಳನ್ನು ಮಾಡಬಹುದು. ಇದುವರೆಗೂ ಕನ್ನಡದಲ್ಲಿ ವಿಶಾಲ ಲೋಕದ ಸರ್ವತೋಮುಖವಾದ ಪರಿಚಯ ಮಾಡಿಕೊಡಬಲ್ಲ ಗ್ರಂಥಗಳೇ ಇರದುದರಿಂದ, ಬರಿಯ ಕನ್ನಡ ಕಲಿತವರ ಜ್ಞಾನದ ಪರಿಧಿ ತೀರ ಸಂಕುಚಿತವಾಗಿರುವುದು. ಎಂತಲೆ ಇಂದಿನ ಹೊಸಹೊಸ ಸಂಶೋಧನ, ಪ್ರಯೋಗಗಳಿಂದ ಕಂಡುಹಿಡಿದ ಸತ್ಯದ ತಳಹದಿಯ ಮೇಲೆ ನಿರ್ಮಾಣವಾಗುತ್ತಿರುವ ಸಾಹಿತ್ಯವು ಅವರಿಗೆ ವಿದೇಶೀಯವೆನಿಸುವುದು. ವಿಶ್ವಬಾಂಧವ್ಯದ ಮಾತು ಅವರಿಗೆ ಹುಚ್ಚುತನದ್ದಾಗಿ ಕಾಣುವುದು. ಮತ-ಧರ್ಮಗಳ ಸಮನ್ವಯವು ಅವರ ಮನಸ್ಸನ್ನೇ ಮುಟ್ಟಲಾರದು. ವಿಜ್ಞಾನವು ಕಂಡುಹಿಡಿದ ಅನೇಕ ಸತ್ಯಗಳನ್ನವರು ಒಪ್ಪುವುದಕ್ಕೆ ಸಿದ್ಧರಾಗರು. ಅವರ ಆದರ್ಶ-ಸಾಹಿತ್ಯವೆಂದರೆ ಅವರು ಓದಿದ ಹಳೆಯ ಕಾವ್ಯಗಳು, ಪುರಾಣಗಳು. ಇಂದಿನ ಕಾದಂಬರಿ-ಸಣ್ಣಕತೆಗಳಲ್ಲಿಯ ಪಾತ್ರ-ಪರಿಪುಷ್ಟಿಯೂ, ಮಾನವನ ಮನಸ್ಸಿನ ಹೋರಾಟ-ಹೋರಾಟದ ಸೂಕ್ಷ್ಮತೆಗಳೂ ಅವರಿಗೆ ನಪದಾ ಅರಣ್ಯ. ಇಂದಿನ ಕವನ-ಭಾವಗೀತಗಳು ಅವರ ಜುಗುಪ್ಸೆಗೆ ಪಾತ್ರವಾಗಿವೆ. ಲೋಕದ ಆಸಕ್ತಿಯು ವಾಸ್ತವಚಿತ್ರವನ್ನು ತೋರಿಸಿದರೆ 'ಇದೇನು? ಅಶ್ಲೀಲ ಸಾಹಿತ್ಯ! ತುಚ್ಛ ಶೃಂಗಾರ!!' ಎಂದು ಗುಲ್ಲೆಬ್ಬಿಸುವರು. ಪತ್ರ ಪುಸ್ತಕಗಳ ಭಾಷಾಶೈಲಿಯನ್ನು ಬಿಟ್ಟರೆ ಇನ್ನೊಂದು ಭಾಷಾಶೈಲಿ ಇವರ ಕಿವಿಗೆ ಒಗ್ಗುವುದೇ ಇಲ್ಲ. ಹಾಗೆ ಬೇರೆ ಭಾಷಾಶೈಲಿ ಇವರ ನಿರೀಕ್ಷೆಯಲ್ಲಿ 'ಅಶುದ್ಧ' ಎಂದೋ 'ವಿಲಕ್ಷಣ' 'ವಿಚಿತ್ರ' 'ಕ್ಲಿಷ್ಟ' ಎಂದೋ ಪದವಿಯನ್ನು ಪಡೆಯುತ್ತದೆ. ಈ ದಿನ ಕಾಲದಲ್ಲಿ ರೂಢವಾದ ವೃತ್ತಗಳಲ್ಲಿ ಯಾವ ವಿಷಯವನ್ನು ಹೆಣೆದರೂ ಇವರಿಗದು ಕವಿತೆ; ಹಾಗೆ ಇರದುದು ಎಂತೆಂತಹ ಭಾವ-ರಾಗ-ಚಿತ್ರಕತೆಗಳಿಂದ ಕೂಡಿದರೂ ಕವಿತೆಯಲ್ಲ. ಕೂಪ-ಮಂಡೂಕದಂತಹದು ಇವರಬುದ್ಧಿ; ತಮಗೆ ಗೊತ್ತಿದ್ದುದನ್ನಲ್ಲದೆ ಇನ್ನೊಂದರ ಅಸ್ತಿತ್ವವನ್ನು ಒಪ್ಪಲಿಕ್ಕೇ ಇವರು ಸಿದ್ಧರಾಗರು.

ಇನ್ನು ಇಂಗ್ಲಿಷ್" ಕಲಿತ ಕನ್ನಡಿಗರ ವಿಷಯ: ನಿನ್ನೆ ಮೊನ್ನೆಯವರೆಗೂ ಇವರು ಕನ್ನಡ ಭಾಷೆಯತ್ತ ಕಣ್ಣುಬಿಟ್ಟು ನೋಡುತ್ತಿರಲೆ ಇಲ್ಲ. ಸ್ವದೇಶಾಭಿಮಾನದ ಗಾಳಿಬೀಸಿ ಅನೇಕರನ್ನು ಎಚ್ಚರಿಸಿ, ಅವರ ಕಣ್ಣೆದುರು ಕನ್ನಡವನ್ನು ತಂದು ನಿಲ್ಲಿಸಿತು. ಅಂತಹ ಜನರು ಕನ್ನಡವನ್ನು ಉನ್ನತಿಯ ಪಟ್ಟಕ್ಕೆ ಏರಿಸಬೇಕೆಂದು ಬಾಯಿಂದ ಮಾತನಾಡತೊಡಗಿದ್ದಾರಲ್ಲದೆ, ತಮಗೆ ಓದಬೇಕೆಂದು ಎನಿಸಿದಾಗ ಇಂಗ್ಲಿಷ್ ಗ್ರಂಥಗಳನ್ನೆ ಓದುವರು, ಇಂಗ್ಲಿಷ್ ಪತ್ರಿಕೆಗಳನ್ನೇ ಓದುವರು. ತಮ್ಮ ಪ್ರಾಚೀನ ಸಾಹಿತ್ಯ, ಇತಿಹಾಸ, ಕಲೆ, ಸಂಸ್ಕೃತಿಗಳ ಪರಿಚಯ ಇವರಿಗೆ ಬೇಕಾಗಿಯೆ ಇಲ್ಲ. ಒಮ್ಮೆಲೆ ಇವರಿಗೆ ಕನ್ನಡ ಷೆಲ್ಲಿ- ಕನ್ನಡ ಕೀಟ್ಸ್- ಕನ್ನಡ ಬ್ರಾವುನಿಂಗ್, ಕನ್ನಡ ಬೈರನ್ನರೆ ಹುಟ್ಟಿಬಂದು ಇವರಿಗೆ ಕವಿತೆಗಳನ್ನೊದಗಿಸಿಕೊಡಬೇಕು. ಷೇಕ್ಸ್‌ಪೀಯರ್, ಇಬ್ಸೇನ್, ಬರ್ನಾರ್ಡ್‌ಶಾ ಇವರಂತಹ ನಾಟಕಕಾರರೇ ಕನ್ನಡದಲ್ಲಿ ಕಾಣಿಸಬೇಕು. ಕನ್ನಡ ಇಮರ್ಸನ್, ಬಟ್ರ್ರಾಂಡ್‌ರಸೆಲ್ಲರು ಹುಟ್ಟಿದಾಗಲೆ ಇವರು ಕನ್ನಡ ಪುಸ್ತಕ-ಪತ್ರಿಕೆಗಳನ್ನು ಕೊಂಡು ಓದುವವರು. ಕನ್ನಡವನ್ನು ಓದುವ ಜನರು ಎಷ್ಟು ಎಂಬ ಲೆಕ್ಕ ಇವರಿಗಿದ್ದರೂ ನಮ್ಮ ಮಾಸ-ಪತ್ರಿಕೆಗಳು 'ಮಾಡರ್ನ್‌ರಿವ್ಯೂ'ಗಳಾಗಿಯೆ ಇವರ ಕೈಗೆ ದೊರೆಯಬೇಕಂತೆ; ದೈನಿಕ ಪತ್ರಿಕೆಗಳು 'ಲಂಡನ್ ಟೈಮ್ಸ್'ಗಳಷ್ಟು ವಿಷಯವೈವಿಧ್ಯದಿಂದ ಕೂಡಿಕೊಂಡಿರಬೇಕಂತೆ. ಹಾಗೆ ಇಲ್ಲದ ಪತ್ರಿಕೆಗಳನ್ನು ಕೈಯಲ್ಲಿ ಹಿಡಿಯುವುದೆಂದರೆಯೆ ಇವರಿಗೆ ನಾಚಿಕೆ. ಕನ್ನಡ ಸಾಹಿತ್ಯ ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿ ಹೋಗಬೇಕಾಗಿದೆಯೆಂಬ ತಿಳಿವಳಿಕೆಯ ತಾಳ್ಮೆಯನ್ನು ತಳೆಯಲಿಕ್ಕೆ ನಮ್ಮ ಇಂಗ್ಲಿಷ್ ಪೂಜಾರಿಗಳು ಸಿದ್ಧರಾಗರು.

ಇಂತಹ ಸ್ಥಿತಿಯಲ್ಲಿ ಪತ್ರಿಕೆಗಳ ಸಂಪಾದಕರು ಏನು ಮಾಡಬೇಕು? ಒಂದೊಂದಾಗಿ ಹೆಜ್ಜೆಯಿಡುತ್ತ ಸಾಗಿದರೆ ಕನ್ನಡ ಸಾಹಿತ್ಯವೂ ಪತ್ರಿಕೆಗಳೂ ಆದರ್ಶಸ್ಥಾನದಲ್ಲಿ ಹೋಗಿ ನಿಲ್ಲಬಲ್ಲವೆಂಬ ನಂಬುಗೆಯಿಂದಲೆ ಹಲವು ಜನ ಸಂಪಾದಕರು ಈಗ ಕಾರ್ಯೋನ್ಮುಖರಾಗಿರಬಹುದು. ಆದರೆ ಬಹುಜನಸಮಾಜವನ್ನು ಗುರಿಯಿಟ್ಟು ಅವರು ತಮ್ಮ ಕಾರ್ಯಕ್ಕೆ ತೊಡಗಿದರೆ, ಇಂಗ್ಲಿಷ್ ಶಿಕ್ಷಣವನ್ನು ಪಡೆದ ಸಿರಿವಂತರ ವರ್ಗಕ್ಕದು ಬೇಡವಾಗುವುದು. ಸಿರಿವಂತರ ಸಹಾನುಭೂತಿಯನ್ನಪೇಕ್ಷಿಸಿ ಅವರ ಮೆಚ್ಚಿಕೆಯನ್ನು ಪಡೆಯುವ ಹಾದಿಯನ್ನು ಹಿಡಿದರೆ ಜನಸಾಮಾನ್ಯರು ಅಂತಹ ಪತ್ರಿಕೆಯಿಂದ ದೂರವಾಗಿ ಬಿಡುವರು. ಇಷ್ಟೇ ಅಲ್ಲ; ಸಮಾಜಶಿಕ್ಷಣವೇ ಕರ್ತವ್ಯವಾಗಿ ಇರುವ ಪತ್ರಿಕೆಗಳು ತಮ್ಮ ಕರ್ತವ್ಯದಲ್ಲಿ ಚ್ಯುತಿಯನ್ನು ತಂದುಕೊಳ್ಳಬೇಕಾಗುವುದು. ಪರಿಸ್ಥಿತಿ ಹೀಗೆ ಇರುವುದರಿಂದ, ಇಬ್ಬರಿಂದಲೂ ಸಹಾಯ-ಸಹಾನುಭೂತಿಗಳನ್ನು ಪಡೆಯುವುದು ನಮ್ಮ ಪತ್ರಿಕೆಗಳಿಗೆ ಅಸಾಧ್ಯವಿಷಯವಾಗಿ ಕುಳಿತಿದೆ.

—ಸಂಪಾದಕರು

ನಮ್ಮ ಚಂದಾದಾರರಿಗೆ ಬಿನ್ನಹ

★

ಮೊದಲನೆಯ ವರ್ಷ ಚಂದಾದಾರರಾಗಿದ್ದುಕೊಂಡು ಜಯಂತಿಗೆ ನೆರವಿತ್ತ ಹಲವು ಜನ ಮಹಾಶಯರಿಗೆ, ಅವರು ಮುಂದೆಯೂ ಚಂದಾದಾರರಾಗಿ ಇರಬಲ್ಲರೆಂಬ ಭರವಸೆಯಿಂದ, ಇದುವರೆಗಿನ ಎರಡನೆಯ ವರ್ಷದ ಎಲ್ಲ ಸಂಚಿಕೆಗಳನ್ನೂ ಸಲ್ಲಿಸುತ್ತ ಬಂದಿದ್ದೇವೆ. ಅವರಿಂದ ೨ನೆಯ ವರ್ಷದ ವರ್ಗಣಿಯ ಹಣ ೩-೦-೦ ಕಾರ್ಯಾಲಯಕ್ಕೆ ಸಲ್ಲಬೇಕಾಗಿದೆ. ವ್ಹಿ. ಪಿ. ಮಾಡಿದರೆ ರೆಜಿಸ್ಟ್ರೇಶನ್ನಿಗಾಗಿ ಒಬ್ಬೊಬ್ಬರ ತಲೆಯ ಮೇಲೂ ಮೂರಾಣೆ ಹೆಚ್ಚಿನ ಹೊರೆ ಬೀಳುವುದು. ಅಲ್ಲದೆ ಪೋಸ್ಟ್‌ಮನ್ನರ ಅಲಕ್ಷ್ಯದಿಂದಲೊ, ಔದಾಸೀನ್ಯದಿಂದಲೊ ವ್ಹಿ. ಪಿ. ಗಳು ಮಾಲಕರಿಗೆ ಸರಿಯಾಗಿ ತಲ್ಪದೆ, ನಾಟ್‌ಪೇಡಾಗಿ ಬಂದು ಜಯಂತಿಯನ್ನು ಎರಡೊಂದು ರೀತಿಯಲ್ಲಿ ನಷ್ಟದಲ್ಲಿ ನೂಕುತ್ತಿರುವುದು ನಮ್ಮ ಅನುಭವದ ಸಂಗತಿಯಾಗಿದೆ. ಆದುದರಿಂದಲೆ ಇದುವರೆಗೂ ಚಂದಾ ಸಲ್ಲಿಸದಿದ್ದವರು ವ್ಹಿ. ಪಿ. ಯ ದಾರಿಯನ್ನು ಕಾಯದೆ, ಜನವರಿ ೨೫ನೆಯ ತಾರೀಖಿನೊಳಗಾಗಿ ತಲುಪುವಂತೆ ೩-೦-೦ ಗಳನ್ನು M. O. ನಿಂದ ಕಳುಹುವ ಉಪಕಾರ ಮಾಡಬೇಕು.

ಭಾಪು-! ಅರ್ಥಾತ್-ಭಾಪು !

ಆರು ದಿವಸ ಅವಿಶ್ರಾಂತ ಜಗದುದ್ಧಾರ ಕಾರ್ಯವನ್ನೆಸಗಿ ಏಳನೆಯ ದಿವಸ ವಿಶ್ರಾಂತಿಯನ್ನು ಪಡೆದನಂತೆ ಕ್ರೈಸ್ತ ಧರ್ಮವೀರ; ಆರು ದಿವಸ ಅವಿಶ್ರಾಂತ ಆತ್ಮೋದ್ಧಾರದ ಧ್ಯಾನದಲ್ಲಿ ನಿರತನಾಗಿ ಏಳನೆಯ ದಿವಸ ಕಾರ್ಯಕ್ಕೇಳುವನು ಕನ್ನಡ ಕರ್ಮವೀರ! ಭಾಪುರೆ ಭಾಪು! ಕಲಿಯುಗದ 'ಭಾಪು' ! ಇನ್ನು ಕರ್ನಾಟಕದಲ್ಲಿ ನಿಷ್ಕರ್ಮಕಾಮದ- ಅಲ್ಲಲ್ಲ, ನಿಷ್ಕಾಮಕರ್ಮದ- ಹೊಸಹುರುಪಿನ ಸೈನ್ಯವು ಕಾಲುದೂಳಿಯಿಂದ ದಿಗಂತವನ್ನು ಮುಚ್ಚಿ, ಕಣ್ಣನ್ನು ಚುಚ್ಚಿ, ದಿಗ್ವಿಜಯಕ್ಕೆ ಹೊರಡುವುದು ! ಅದಕ್ಕಾಗಿ, ಸ್ಫೂರ್ತಿಗಾಗಿ ಕಾಯುತ್ತಿರುವ ಕವಿಗಳಿರಾ, ಕೀರ್ತಿಗಾಗಿ ಕಳವಳಗೊಳ್ಳುತ್ತಿರುವ ತರುಣರಿರಾ, 'ಟಸಕ್' ಎನ್ನದೆ ಕಣ್ಣುಮುಚ್ಚಿ ಕುಳಿತುಕೊಳ್ಳಿರಿ. 'ಟಸಕ್' ಎಂದರೇನೆಂದು ಮಂಗರಾಯನನ್ನು ಕೇಳಬೇಡಿರಿ. ಸಾಹಿತ್ಯ ಮತ್ತು ರಾಜಕಾರಣಗಳ ಸಂಯೋಗದಿಂದುದ್ಭವಿಸಿದ ಹಂಡಬಂಡ ಎಳೆಗನ್ನಡ ಶಬ್ದವಿದು. ರಸಿಕನಾದ ಮಂಗರಾಯನಿಗೆ ಕೂಡ ಈ ನಾಲ್ಕಾಣೆ ಸಂನ್ಯಾಸದ ಸಂಯೋಗ ಶೃಂಗಾರದ ಅರ್ಥವಾಗಿಲ್ಲ ಎಂದು ಒಪ್ಪಲೇಬೇಕಾಗಿದೆ.

* * *

ಸಮ್ಮೇಳನಕಾರರಿಗೆ ಸೂಚನೆ

ಇವಳ ನುಡಿಗೆ ಅವಳ ಪ್ರೇಜ
ಆ್ಯಡ ಬಯಸಿದೆ
ಅವಳಿಗಿವಳ ಟ್ರಾನ್ಸಲೆಶನ್
ಫ್ಯಾಡ (fad) ವಹಿಸಿದೆ'

—ಇಂಗಯ್ಯನ ಮಂಗ್ಲಿಶ್ ಗೀತಗಳು

ಪ್ಲಿಕ್ಚರಿ, ಕನ್ನಡ ಮಾತಿಗೆ ! ಟು ಕನ್ನಡ ಮಾತು, ಗೆಲುವಾಗಲಿ ! ಇದೀಗ ಕನ್ನಡ ಭಾಷೆಯ ಪ್ರಗತಿಯ ದ್ಯೋತಕವಲ್ಲವೆ? ಇಪ್ಪತ್ತಾಲ್ಕು ಸಮ್ಮೇಳನಗಳಾದರೇನು, ನೂರಿಪ್ಪತ್ತು ಸಂಘಗಳಾದರೇನು? ಇಂದಿನ ಜೀವನಕ್ಕನುಸರಿಸಿ ಕನ್ನಡಭಾಷೆಯ 'ಇಯತ್ತೆಯನ್ನು ಎತ್ತರಿಸುವುದು' ಸಾಧ್ಯವಾಗಿರಲಿಲ್ಲ. ಅದೇ ನಮ್ಮ ವೃತ್ತಪತ್ರಿಕೆಗಳು ಬೆಳಗು ಬೆಳಗಿಗೆ ಕನ್ನಡವನ್ನು 'ಎಲ್ಲ ನಾಲ್ಕರ (on all fours) ಮೇಲೂ' ಸಂವರ್ಧಿಸುತ್ತಲಿವೆ. ಇದೆಂತಹ ಭಾಷೆ— ಎನಬೇಡಿ. 'ಇಂದಿನ ಜೀವನಕ್ಕನುಸರಿಸಿ' ಎಂದು ಅದಕ್ಕಾಗಿಯೆ ಮೇಲೆ ಹೇಳಿದೆ. ಇಂದಿನ ಜೀವನ ಇಂಗ್ಲಿಶ ಭಾಷೆಯಲ್ಲಿ ನಡೆದದ್ದು; ಆದಕಾಗಿ ಇಂದಿನ ಕನ್ನಡವೂ ಇಂಗ್ಲಿಶೀಕೃತವಾದದ್ದು. ಉದಾ-

> **ಎಚ್ಚರಿಕೆ !**
>
> ಪ್ರಚಾರಕರೆಂದುಕೊಳ್ಳುವವರನ್ನಾಗಲಿ ಅಪಪ್ರಚಾರಕರನ್ನಾಗಲಿ ನಂಬಬೇಡಿರಿ!
>
> **ಜಯಂತಿಯು**
>
> ಯಾವ ಪಕ್ಷವನ್ನೂ ಕಟ್ಟಿಕೊಂಡಿಲ್ಲ ; ಯಾವ ಪಕ್ಷವನ್ನೂ ಮೆಟ್ಟಬೇಕೆಂದಿಲ್ಲ.
>
> ಪಕ್ಷ-ಪಂಗಡ-ಚುನಾವಣೆಗಳ ಹೊಟ್ಟೆಬೇಗೆ ಇಲ್ಲದ, ಅಜ್ಞಾನ-ಅನಾಸಕ್ತಿ-ಆಲಸ್ಯಗಳಿಂದ ಬಳಲದೆ ಇದ್ದ ಮಧ್ಯಮವರ್ಗದವರ ವೃಷ್ಟಿ; ತನ್ನ ದೃಷ್ಟಿ;
>
> ಕನ್ನಡದ ಸೇವೆ-ಏಕೀಕರಣ-ರಾಷ್ಟ್ರ ಸ್ವಾತಂತ್ರ್ಯ ಎಂಬ ತ್ರಿವರ್ಣ-ವೈಜಯಂತಿಯೆ ತನ್ನ ದ್ಯೋತಕ.. ......ಎಂದು
>
> 'ಜಯಂತಿ'ಸಾರಿದೆ,ಸಾರುತ್ತಲಿದೆ

ಹರಣೆ ನೋಡಿ, ಆ ಮೇಲೆ ಮಾತನಾಡಿ '....ಈ ಸಮಸ್ಯೆ ಒಂದು ಕಾದಂಬರಿ '= This question a Fiction' 'ಸತ್ತ ಕೀಲಿಗಳನ್ನು ನಿರ್ಮಿಸಿದರು'= created deadlocks; 'ಅವರಿಗೆ ಉದ್ದಹಗ್ಗವನ್ನು ಕೊಡಲು ಹೇಳಿದರು' etc., etc. ಮೇಲಿನ ಕನ್ನಡ ವಾಕ್ಯಗಳು ಕಾಲ್ಪನಿಕವಲ್ಲ; ದೇಶಸೇವೆಯಂತೆ ಭಾಷಾಸೇವೆಯನ್ನೂ ಗುರಿಯಾಗಿಟ್ಟುಕೊಂಡ ಒಂದು ಕನ್ನಡ ದಿನಪತ್ರಿಕೆಯಲ್ಲಿ ಧಾಳವಾಗಿ ಅಚ್ಚಾದುವು! ಇಂದಿನ ಈ 'ಸಂಯುಕ್ತ ಕನ್ನಡ'ವೆ ಅಧಿಕೃತವಾಗಿ ಬಳಕೆಯಲ್ಲಿ ಬಂದಿರಬಹುದೆಂಬ ಹೆದರಿಕೆಯಿಂದಲೊ ಏನೊ, ಒಬ್ಬ ಮಹನೀಯರು ಪರಿಷತ್ತಿಗೆ 'ಅಚ್ಚ ಇಂಗ್ಲಿಶಿ'ನಲ್ಲಿಯೆ ತಮ್ಮ ಗೊತ್ತುವಳಿಯನ್ನು ಸೂಚಿಸಿದರಂತೆ! ಯಾರಿಗೆ ಗೊತ್ತು— ಈ ಭಾಷೆ ಸಂಯುಕ್ತಕನ್ನಡವೊ, ಅಯುಕ್ತ ಇಂಗ್ಲಿಶೊ ? ಹೀಗೆಯೆ ನಡೆದರೆ ಕೂಡಲೆ ವೃತ್ತಪತ್ರಿಕಾಕರ್ತರ ಸಮ್ಮೇಳನವನ್ನು ಕೂಡಿಸಬೇಕಾಗುವುದೆಂದು ಮಂಗರಾಯನ ಗ್ರಹಿಕೆ.

* * *

ಜನಮರುಳೊ – ಜಾತ್ರೆಮರುಳೊ ?

ಮಂಗರಾಯನ 'ಪುಚ್ಛಶೃಂಗಾರ'ದಿಂದ (ತನ್ನ) ಲಂಕಾನಗರಕ್ಕೆ ಬೆಂಕಿಹತ್ತಿತೆಂದು ಒಬ್ಬ ವೈಭವೋದ್ದಾಮ (ಬ್ರಹ್ಮ) ರಾಕ್ಷಸನು ಕಿರಚುತ್ತಲಿದ್ದಾನೆ; ಮಂಗರಾಯನು ತಮ್ಮವನು ಎಂದು ಬ್ರಾಹ್ಮಣೇತರ ವಾಚಕನೊಬ್ಬನು ಪ್ರಶಂಸಾಪತ್ರವೊಂದನ್ನು ಬರೆದಿದ್ದಾನೆ! ಪಾಪ ! ಈ ಮಾನವಕುಲದ ಬುದ್ಧಿಗೆ ಎಂತಹ ಭ್ರಮೆ ಇದೆ! ತನಗೆ ಜಾತಿ ಇದೆ ಎಂದು ಇಡಿಯ ಪ್ರಾಣಿವರ್ಗಕ್ಕೇ ಜಾತಿ ಇದೆ ಎಂದೂ ತಿಳಿದಿದ್ದಾನೆ! ನಮ್ಮ— ಮಂಗಗಳ — ಕುಲದಲ್ಲಿ ಜಾತಿಪದ್ಧತಿ ಇಲ್ಲ. ನೋಡಿರಿ; ಜಾತಿವೈಷಮ್ಯದಿಂದ ಕರ್ನಾಟಕ ಹಾಳಾಗುತ್ತಿದೆ ಎನ್ನುವಿರಲ್ಲ! ನಿಮ್ಮ ಪ್ರಾಂತವನ್ನು ಉಳಿಸುವ ಕಳಕಳಿ ನಿಮಗಿದ್ದರೆ 'ಮಂಗ ಮಹಾರಾಜಕೀ ಜೈ' ಎನ್ನಿರಿ, ಮಂಗತನ ಸ್ವೀಕರಿಸಿರಿ! ತತ್ಕ್ಷಣ- ಕೇಳುವುದೇನು?- ಪರಮಾತ್ಮನೆದುರು ಪಾಪಿಗಳು ಚೆದರಿದಂತೆ ಎಲ್ಲ ಜಾತಿಗಳೂ ಹಾರುವುವು, ಕರ್ನಾಟಕದ ಸ್ಥಿತಿ ಏರುವುದು ! ಯಾಕೆ ? ಒಪ್ಪಿಗೆಯೆ ? ಹಾಗಾದರೆ ಮುಂದಿನ ಸಲದೊಳಗಾಗಿ ಮಂಗತನದ ಫಾರ್ಮಿಗಾಗಿ ವಾಚಕರು ಅರ್ಜಿಕೊಟ್ಟರೆ, ಅವರನ್ನು 'ಮಂಗೀಕರಿಸು'ವೆವು. ಯಾರಿಗಾದರೂ ಭಯ-ಸಂಶಯಗಳಿದ್ದರೆ ಅವರು ಪತ್ರ ಬರೆಯಬಹುದು; ಮಂಗರಾಯನು ಅವುಗಳ ನಿರಾಕರಣವನ್ನು ಮಾಡುವನು. ಅಂತೂ ತಾತ್ಪರ್ಯವೇನೆಂದರೆ,

ಹಾರಿಸಿ, ತೋರಿಸಿ, ಮಂಗಪಟ
ಕರ್ನಾಟಕ- ನಿಃಸಂಗ- ಮಠ!

ಒಂದು ಕತೆ

ಒಂದಾನೊಂದು ಊರಿನಲ್ಲಿ, ಒಬ್ಬಾನೊಬ್ಬ ಮುದುಕನಿದ್ದ. ಆವನಿಗೆ ಇಬ್ಬಾನಿಬ್ಬರು ಹೆಂಡಿರಿದ್ದರು. ಒಬ್ಬರಿಗೂ ಮಕ್ಕಳಿಲ್ಲ, ಇತ್ತ ಮುದುಕ ಸಾಯುವಲ್ಲ. ಆದಕ್ಕೆ ಇಬ್ಬರೂ ಹೆಂಡಂದಿರೇ ಬೇಸತ್ತು, ಒಂದೇಸವನೆ ಒಬ್ಬರೊಬ್ಬರು ಜೈದಾಡಿ ಕಾದಾಡಿ ಹೊತ್ತುಗಳೆಯುತ್ತಿದ್ದರು. ಆವರ ಆನೇಕ ಜೈಗುಳೊಳಗೆ ಒಂದು ಬಹಳೇ ಮೋಜಿನದಿತ್ತು. ಅದೇನೆಂದರೆ, ಒಬ್ಬಾಕೆ ಇನ್ನೊಬ್ಬಾಕೆಗೆ 'ನಿನ್ನ ಹಣೆಗೆ ಅಂಗಾರ ಬಡಿದದ್ದು ಎಂದು ನೋಡೇನು ನಾನು' ಅಂದಳು! ಕತೆ ಹೇಳುವ ಕಾರಣವೇನೆಂದರೆ, ಕೆಲವು ಮುಂದಾಳುಗಳು ಕಾರ್ಯಸಂನ್ಯಾಸ ಕೈಕೊಂಡು 'ಹೇಳಿಕೆ' ಗಳನ್ನು ಪ್ರಕಟಿಸಿರುವರು, ಆ 'ಹೇಳಿಕೆ' ಗಳ ಬಗ್ಗೆ ಮಂಗರಾಯನ ಅಭಿಪ್ರಾಯ ಏನೂ ಅಂತ ಕೇಳಿದ್ದರು, ಆ ಸಂದರ್ಭದೊಳಗೆ ಈ ಕತೆ ನೆನಪಾಯಿತು—ಅಲ್ಲಲ್ಲ—ಛೂ! ತಪ್ಪಿತು!—ಸಂನ್ಯಾಸಿಗಳಿಗೆ ಸಂಸಾರವೂ ಇಲ್ಲ, ಜಾತಿಯೂ ಇಲ್ಲ ಅನ್ನೋದು ಮರೆತೇ ಹೋಯಿತು ಮಂಗರಾಯನಿಗೆ. ಕ್ಷಮಿಸಬೇಕು.

ಯದ್ರೋಚತೇ ತತ್‌ಗ್ರಾಹ್ಯಂ
ಯನ್ನ ರೋಚತೇ ತತ್ ತ್ಯಾಜ್ಯಂ!

* * *

ಈಸ್ಟ್ ಇಂಗ್ಲೆಂಡಿನ ನಿರ್ಮಾಣಕಾರ್ಯ

ಧಾರವಾಡ ಜಿಲ್ಲಾ ಬೋರ್ಡಿನ ಅಧಿಕಾರ ಈಗ ಕಾಂಗ್ರೆಸ್ ಪಕ್ಷದ ಕಡೆಗೆ ಇರುವುದು ಸರ್ವಶ್ರುತವಾದ ವಿಷಯ. ಮಂಗರಾಯನಿಗೆ ಇದುವರೆಗಿನ ಭಾವನೆಯೆಂದರೆ ಈ ಜಿಲ್ಲಾ ಬೋರ್ಡು ಕರ್ನಾಟಕದಲ್ಲಿಯ ಕನ್ನಡ ಶಾಲೆಗಳನ್ನೆಲ್ಲ ತೆಗೆದುಹಾಕಿ ಹಿಂದೀ ಶಾಲೆಗಳನ್ನು ತೆರೆಯುವುದೆಂದು. ಆದರೆ ಆ ಮಾತು ತಪ್ಪೆಂಬುದು, ಮೊನ್ನೆ ಮೊನ್ನೆಯ ಮಾನ್ಯ ಲಠ್ಠೆಯವರಿಗೆ ಕೊಟ್ಟ ಮಾನಪತ್ರದ ಸಭೆಯ ಸಂಗತಿಯಿಂದ ವಿದಿತವಾಗಿ ಹೋಯಿತು. ಕರ್ನಾಟಕದಲ್ಲಿಯ ಕಾಂಗ್ರೆಸಿಗರಿಗೆ ಕನ್ನಡ ಮೊದಲು ಬೇಡ; ಆಮೇಲೆ ಹಿಂದೀ ಬೇಡ. ಎಲ್ಲರ ಹೃದಯವೂ ಅಪೇಕ್ಷಿಸುತ್ತಿರುವುದು ಸಾಮ್ರಾಜ್ಯ ಸರಕಾರದ ಸಮ್ಮೋಹಕ ನುಡಿಯಾದ ಇಂಗ್ಲೀಷನ್ನು. ಆದುದರಿಂದಲೆ ಧಾರವಾಡ ಜಿಲ್ಲಾ ಬೋರ್ಡಿನವರು ತಮ್ಮ ಎಲ್ಲ ಕಾರ್ಯಕಲಾಪವನ್ನೂ ಇಂಗ್ಲಿಷಿನಲ್ಲಿಯೆ ಸಾಗಿಸುವುದಾಗಿ ನಿರ್ಣಯಿಸಿ, ಮೊನ್ನೆಯ ಸಭೆಯಲ್ಲಿ ಅದನ್ನು ಜಾರಿಯಲ್ಲಿಯೂ ತಂದುಬಿಟ್ಟರು. ಕನ್ನಡಿಗರಾದ ಅಧ್ಯಕ್ಷರು ಮಾನಪತ್ರವನ್ನು ಇಂಗ್ಲೀಷಿನಲ್ಲಿ ಓದಿದರು; ಕರ್ನಾಟಕದ ಪ್ರತಿನಿಧಿಗಳಾಗಿ ಮುಂಬಯಿ ಆಸೆಂಬ್ಲಿಗೆ ಹೋಗಿ ಮಂತ್ರಿಗಳಾಗಿದ್ದ ಶ್ರೀ. ಲಠ್ಠೆಯವರು ಇಂಗ್ಲಿಷಿನಲ್ಲಿಯೆ ತಮ್ಮ ಉಪನ್ಯಾಸ ಕೊಟ್ಟದರು. 'ಥ್ಯಾಂಕ್ಸ್ ಗಿವ್ವಿಂಗೂ' ಇಂಗ್ಲಿಷಿನಲ್ಲಿಯೆ ಆಯಿತು. ಇನ್ನು ಕನ್ನಡ ಶಾಲೆಗಳೂ ಒಂದೊಂದಾಗಿ ಇಂಗ್ಲೀಷ ಆಗಿ ಸ್ವತಂತ್ರಭಾರತದಲ್ಲಿಯ ಕರ್ನಾಟಕವು 'ಈಸ್ಟ್ ಇಂಗ್ಲಂಡ್' ಆಗಿ ಮೆರೆಯಲಿರುವುದಂತೆ. ಭಾಷೆಯನ್ನು ಬದಲಿಸಿಕೊಂಡ ನಮ್ಮ ಜಿಲ್ಲಾ ಬೋರ್ಡಿನ ಅಧಿಕಾರಿಗಳೂ ಶ್ರೀ. ಲಠ್ಠೆಯವರೂ ತಂತಮ್ಮ ಹೆಸರುಗಳನ್ನೂ ಬದಲಿಸಿಕೊಂಡಿರುವರೆಂದು ಮಂಗರಾಯನಿಗೆ 'ಬಾತ್ಮೀದಾರ' ರು ಪತ್ರ ಬರೆದು ತಿಳಿಸಿದ್ದಾರೆ. ಆದರೆ ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಮಂಗರಾಯನು ಜವಾಬ್ದಾರನಲ್ಲ!

ಭಲಬಲರೆ ಧಾರ್ವಾಡ ಡಿಸ್ಟ್ರಿಕ್ಟ್ ಬೋರ್ಡ್!
ಕನ್ನಡದ ಬೆನ್ನಲ್ಲಿ ಹಾಕಿದೆಯೆ ಕೋರ್ಡ್!

* * *

ಪ್ರತಿಜ್ಞಾ ರೋಗಂಧರಾಯಣರಿಗೆ :—

"ಸ್ವಾತಂತ್ರ್ಯದಿನದ ಪ್ರತಿಜ್ಞೆಯನ್ನು ನಾವು ಅಂದು ತಿಳಿಯದೆ ಮಾಡಿಬಿಟ್ಟೆವೆ; ವಿಚಾರಮಾಡಿ ನೋಡಿದಾಗ ಅದರಲ್ಲಿಯ ನೂಲುವುದೂ ಖಾದಿಯನ್ನೆ ಪೂರ್ಣವಾಗಿ ಧರಿಸುವುದೂ ಅಸಾಧ್ಯವೆಂದೂ ನಿರರ್ಥಕವೆಂದೂ ಕಂಡುಬಂದಿದೆ. ಅಂದೇನೊ ಪ್ರತಿಜ್ಞೆಯನ್ನು ಭಾವನಾವಶರಾಗಿ ಮಾಡಿಬಿಟ್ಟೆವು; ಈಗ ನಮಗೆ ನಮ್ಮ ತಪ್ಪುತಿಳಿವಳಿಕೆಯ ಮನವರಿಕೆಯಾಗಿದೆ. ಈಗ ನಾವೇನು ಮಾಡಬೇಕು?" ಎಂದು ಮಂಗರಾಯನ ಸಲಹೆಗಾಗಿ ಅನೇಕರಿಂದ ಕಾಗದ ಬಂದಿವೆ. ಎಲ್ಲರಿಗೂ ವೈಯಕ್ತಿಕವಾಗಿ ಕಾಗದ ಬರೆಯಲು ಅಸಾಧ್ಯವಾದುದರಿಂದ ಮಂಗರಾಯ ಈ ಕೆಳಗಿನ ಪ್ರಕಟನೆಯ ಮೂಲಕ ಹೀಗೆ ತಿಳಿಸುತ್ತಾನೆ:

"ಕೇಳಿರಿ, ಎಲ್ಲರೂ ಕೇಳಿರಿ! ಇಂದಿನ ಹಿಂದುಸ್ತಾನದಲ್ಲಿ ಪ್ರತಿಜ್ಞೆಗಳು ಬರೀ ಉಚ್ಚರಿಸಲಿಕ್ಕಿರುವುವಲ್ಲದೆ ಆಚರಿಸಲಿಕ್ಕಿರುವುದಿಲ್ಲ. ಹಾಗಿದ್ದುದಾಗಿದ್ದರೆ ಎಂದೂ ಯಾವಾಗಲೂ ನಿನ್ನನ್ನು ಬಿಡಲಾರೆನೆಂದು 'ಭೂಸುರಾಗ್ನಿ' ಗಳ ಸಾಕ್ಷಿಯಿಂದ ಪ್ರತಿಜ್ಞೆಮಾಡಿ ಕೈಹಿಡಿದ ಗಂಡಂದಿರ ಹಿಂಡು ಹೆಂಡಂದಿರನ್ನೆಲ್ಲಿ ಬಿಡುತ್ತಿತ್ತು? ಆದರಂತೆಯೆ ಹೆಂಡಂದಿರು ಗಂಡಂದಿರನ್ನೆಲ್ಲಿ ಬಿಡುತ್ತಿದ್ದರು? ಪ್ರತಿಜ್ಞೆ ಮುರಿಯಲು ಗಂಡಂದಿರಿಗೆ ಸನಾತನ ಸಂಪ್ರದಾಯಗಳ ಬೆಂಬಲವಿದೆ. ಹೆಂಡಂದಿರಿಗೆ ಹೊಸಕಾಲದ ಸುಧಾರಕ ಜಗತ್ತಿನ ಬೆಂಬಲವಿದೆ. ಸ್ವಾತಂತ್ರ್ಯಪ್ರತಿಜ್ಞೆಗೂ ಇದೇ ಮಾತು ಅನ್ವಯಿಸುವುದು. ಸನಾತನ ರಾಜಕೀಯ ಪಕ್ಷದವರು ಮಾಡಲು ಹೇಳುವರು; ಸುಧಾರಕ ರಾಜಕೀಯ ಪಕ್ಷದವರು ಬೇಡವೆಂದು ಹೇಳುವರು. ನೀವು ಹೇಗೂ ಪ್ರತಿಜ್ಞೆ ಮಾಡಿಬಿಟ್ಟಿದ್ದೀರಿ. ಮಾಡಿದ್ದನ್ನು ಬೇಕಾದಾಗ ಮುರಿಯಲಿಕ್ಕೆ ಬರುವುದೆಂಬ ಮಾತು ಮೇಲೆ ಹೇಳಿದ ನಮ್ಮ ಮದುವೆಯ ಪ್ರಕರಣದಿಂದಲೆ ಸಿದ್ಧವಾಗುತ್ತದೆ. ಆದರೆ ತಡೆಯಿರಿ, ಹಾಗೆ ಒಮ್ಮೆಲೆ ಮುರಿದೆವೆಂದು ಹೇಳಿ ಮೂರ್ಖರಾಗಬೇಡಿರಿ. ನಿಮಗೆ ಏನಾದರೂ ಮನದ ಮಹತ್ವಾಕಾಂಕ್ಷೆಗಳು ಇದ್ದರೆ, ಮಾಡಿರುವ ಪ್ರತಿಜ್ಞೆ ನಿಮಗೆ ಸಹಾಯಕವಾಗುವ ಸಂದರ್ಭವೂ ಬರಬಹುದು. ತೊಡಕಾಗಿ ಕಂಡು ಬಂದಾಗ ಪ್ರತಿಜ್ಞೆಯನ್ನು ಮಾಡದಿದ್ದವರ ಗುಂಪಿನಲ್ಲಿ ಹೋಗಿ ಸೇರಲೂ ಬರುವುದು. ಹಿರಿಯರಿಗೆ ನಮಸ್ಕಾರ, ಕಿರಿಯರಿಗೆ ಆಶೀರ್ವಾದ, ನಡುವಿನವರಿಗೆ ನಮರ್ವಾದ!"

* * *

ಲಠ್ಠೆಯವರ ಲಾಂಗ್‌ಸಾಯಿಟು

ಮಾನ್ಯ ಲಠ್ಠೆಯವರಿಗೂ ಕನ್ನಡನಾಡಿಗೂ ಎಂದೂ ಯಾವ ಸಂಬಂಧವೂ ಇಲ್ಲವೆಂದು ಮಂಗರಾಯನು ಸಾಕ್ಷಿ ನುಡಿಯಲು ಬಂದಿದ್ದಾನೆ: ಅವರು ಬೆಳಗಾಂವಿ ಜಿಲ್ಲೆಯಿಂದ ಅಸೆಂಬ್ಲಿಯ ಸದಸ್ಯರಾಗಿ ಆಯ್ಕೆ ಹೊಂದಿದರು. ಮುಂಬಯಿ ಇಲಾಖೆಯ ಮಂತ್ರಿಗಳಾಗಿ ಅಧಿಕಾರವಹಿಸಿದ್ದರು. ಇದಕ್ಕೂ ಮೊದಲಿನ ವಿಷಯ ನಿಮಗನೇಕರಿಗೆ ಗೊತ್ತಿದೆಯೋ ಇಲ್ಲವೊ. ಅವರು ಹುಟ್ಟಿದುದು ಜಗತ್ತಿನಲ್ಲಿ ಅಲ್ಲದೆ ತಂದೆತಾಯಿಗಳ ಮನೆಯಲ್ಲಿ ಎಂದು ಹೇಳುವುದು ಸರಿಯಲ್ಲ; ಅವರು ಕುಡಿಯುವ ನೀರು ಆಕಾಶದಿಂದ ಬಿದ್ದುದು. ಉಣ್ಣುವ ಅನ್ನ .... ಅಂ .... ಎಲ್ಲಿಂದ ಎಂದು ಹೇಳಲಿ ..? ಹುಂ! ಭೂಮಿತಾಯಿ ಕೊಟ್ಟುದು. ಆದುದರಿಂದಲೇ ಅವರ ಆದರ್ಶ ದೂರವಾದುದು. ದೇವರು ಅವರ ಕಣ್ಣಿನ ಕಾಜುಗಳನ್ನು ನಮ್ಮ ನಿಮ್ಮ ಹಾಗೆ, ಸಮೀಪದುದನ್ನೂ ಕಾಣುವಂತಹ ಸಂಕುಚಿತ ದೃಷ್ಟಿಯವುಗಳನ್ನು ಹಾಕಿಲ್ಲ. ಶ್ರೀ. ಲಠ್ಠೆಯವರಿಗೆಲ್ಲ ಕಾಣುವುದು ಬರಿ ದೂರದುದ! ಪೋಲಾಂಡಿನ ಸ್ವಾತಂತ್ರ್ಯಾಪಹರಣ ಅವರಿಗೆ ಸ್ಪಷ್ಟ ಕಾಣುತ್ತದೆ; ಹಿಟ್ಲರ್ ಸ್ಟಾಲಿನರ ಅನ್ಯಾಯ ಸ್ಪಷ್ಟವಾಗಿ ಅವರಿಗೆ ತಿಳಿಯುತ್ತದೆ. ಆದರೆ ಕರ್ನಾಟಕದ ನೂರಾರು ಆಡಳಿತದ ಪರಾಧೀನ ಜೀವನ ಅವರಿಗೆ ಎಂದೂ ಕಾಣದು. ಕನ್ನಡಿಗರ ಮೇಲೆ ಅನ್ಯಾಯ ಮಾಡುವ ದೇಶೀಯ ಹಿಟ್ಲರ್ ಸ್ಟಾಲಿನ್ನರು ಲಠ್ಠೆಯವರ ವಿಶಾಲ ದೃಷ್ಟಿಯ ಹಿಂದೆ ಬೇಕಾದ ಹಾಗೆ ಹುಟ್ಟಿ ಬೆಳೆಯುತ್ತಿದ್ದಾರೆ. ಜಗತ್ತಿನ ಪ್ರತಿನಿಧಿಗಳಾಗಿ ಹುಟ್ಟಿದ ಲಠ್ಠೆಯವರಿಂದ ಜಗತ್ತಿನ ಉದ್ಧಾರವಾದರೂ ಕರ್ನಾಟಕ ಹಾಗೇ ಉಳಿಯುವುದು. ಲಠ್ಠೆಯವರ ಜ್ಞಾನದೀಪ ತ್ರಿಲೋಕವನ್ನು ಬೆಳಗಿದರೂ ಏನಾಯಿತು, ದೀಪದ ಬುಡಕ್ಕೆ ಕತ್ತಲೆಯೆ ಅಲ್ಲವೆ? ಲಠ್ಠೆಯವರ ಈ ದೂರದೃಷ್ಟಿ ತಪ್ಪೆಂದು ಹೇಳುವುದು ಶುದ್ಧ ತಪ್ಪು.

ರಸಿಯದ ರಕ್ಷಾಕವಚ

ಪತ್ರವ್ಯವಹಾರ ಖಾತೆಯ ಪ್ರಭು !
ಪರರಾಷ್ಟ್ರ ಪ್ರಧಾನ !
ಎಂ. ಮೊಲೋಟೋವ್

★

ಮೊಲೋಟೋವ್ನನು ಮೊದಲು ಝಾರನ ಆಡಳಿತದ ಪಕ್ಷಪಾತಿಯೆಂದು ಯಾರಾದರೂ ಹೇಳಿದರೆ ಇಂದು ನಂಬಬೇಕು ಯಾರು ? ಸ್ಟಾಲಿನನ ಪಂಚಪ್ರಾಣಗಳಲ್ಲಿ ಮೊಲೋಟೋವ್ನೆಂಬ ವ್ಯಕ್ತಿಯೊಂದು. ಇಂದು ಜರ್ಮನಿ ರಸಿಯಗಳಲ್ಲಿ ಸ್ನೇಹದೆಳೆಯನ್ನು ತೊಡಕಿಸಿದವನು ಈ ವಿಭೂತಿ ಪುರುಷನೇ !

ಜಾರ್‌ಮನೆಯ 'ಹೆಜ್ಜೇಶ್' ರು ಬರೆದುದು.

★

ಎಂ. ಮೊಲೋಟೋವ್

ರಸಿಯ ಎಂದರೇನು ?' ಎಂಬ ಪ್ರಶ್ನೆಯನ್ನು ಕೇಳಿದರೆ 'ಅದೊಂದು ದೇಶ !' ಎಂದು ಯಾರಾದರೂ ಥಟ್ಟನೆ ಹೇಳಬಹುದು; ಆದರೆ 'ರಸಿಯ ಎಂಬ ಶಬ್ದದ ಸೂಚ್ಯಾರ್ಥವನ್ನು ಒಂದು ನಿಘಂಟುವಿನಲ್ಲಿ ಏನೆಂದು ಕಾಣಿಸಬೇಕು ?' ಎಂದು ಕೇಳಿದರೆ 'ರಸಿಯ ಎಂದರೆ ರಹಸ್ಯ' ಎಂಬ ಅರ್ಥವನ್ನು ಬರೆಯಬೇಕಾಗುವುದು. ಆ ದೇಶದಲ್ಲಿ ಕಳೆದ ಇಪ್ಪತ್ತು ವರುಷಗಳಿಂದಲೂ ಸಂಭವಿಸುತ್ತಿರುವ ಸಂಗತಿಗಳನ್ನು ಕಂಡರೆ ಆ ಅರ್ಥವು ಸಾರ್ಥಕವಾದುದೆನಿಸುವುದು; ಅದರಲ್ಲಿ ಈ ಮೂರು-ನಾಲ್ಕು ತಿಂಗಳುಗಳ ಅದರ ಚಟುವಟಿಕೆಗಳನ್ನು ಅಭ್ಯಸಿಸಿದರೆ, ಅದೇ ಅರ್ಥವು ಯೋಗ್ಯವಾದುದು ಎಂಬ ಹಟವನ್ನು ತೊಡಬೇಕೆನಿಸುವುದು. ಪರರಾಷ್ಟ್ರಗಳಲ್ಲಿರುವ ಪಿಕ್ಕವರಿಗಾಗಲಿ, ಪಾರತಂತ್ರ್ಯ ರಾಷ್ಟ್ರಗಳಲ್ಲಿರುವ ನಮಗಾಗಲಿ, ಅದರ ವಿಷಯವಾಗಿ ಇನಿತೊಂದು ಗುಂಭವು ಬೀಳಲು ಕಾರಣವೆಂದರೆ, ಆ ದೇಶದ ಆಡಳಿತಗಾರರು ಹೊರಗಿನ ರಾಷ್ಟ್ರಗಳೊಡನೆ ನಡೆಯಿಸಿದ ಪತ್ರವ್ಯವಹಾರವನ್ನು ಗುಪ್ತವಾಗಿಟ್ಟುಕೊಂಡಿದ್ದ ರೀತಿ; ಬೇರೆ ರಾಷ್ಟ್ರಗಳೊಡನೆ ಬೆಳೆಯಿಸಿದ ತಮ್ಮ ಸಂಬಂಧಗಳನ್ನು ಗೂಢವಾಗಿರಿಸಿದ ಪರಿ ! ಆದರೆ ಇದಕ್ಕೆಲ್ಲಕ್ಕೂ ಹೊಣೆಗಾರನಾದ ಒಬ್ಬನೆ ಒಬ್ಬ ವ್ಯಕ್ತಿಯೆಂದರೆ ಮಹಾಮೂರ್ತಿ **ಮೊಲೋಟೋವ್ !**

೧೯೨೪ನೆಯ ಇಸವಿಯಲ್ಲಾದ ಲೆನಿನ್‌ನ ಮರಣಾನಂತರ, ರಸಿಯವು ವಿಚಿತ್ರವಾಗಿ, ವಿಕ್ಷಿಪ್ತವಾಗಿ ಹೊಸರೂಪವನ್ನು ತಾಳುತ್ತಿರುವುದು. ಜರ್ಮನರನ್ನು ನಾವು ಮಾತಿನ ಮಲ್ಲರೆಂದೂ, ಇಂಗ್ಲಿಷರನ್ನು ಹಂಚಿಕೆಯ ಹಂಬಲಿಗರೆಂದೂ ಕರೆದರೆ, ಇಂದು ರಸಿಯದ ರಾಜ್ಯಾಡಳಿತವನ್ನು ನಡೆಯಿಸಿದವರನ್ನು ಕೃತಿಯ ಕರ್ಮವೀರರೆಂದು ಕರೆಯಬೇಕಾಗುವುದು. ಅವರ ಹೆಗ್ಗಡೆಯಾದ ಸ್ಟಾಲಿನನಿಗೆ ಬಹಳ ಮಾತು ಬೇಡ; ವರೊಶಿಲೋವ್‌ನಿಗಾದರೂ ಆಡುವುದಕ್ಕಿಂತ ಮಾಡುವುದರಲ್ಲಿಯೆ ಆಸಕ್ತಿ ಬಹಳ; ಲಿಟ್ವಿನಾಫ್‌ನೂ ತುಸು ಮಾತನಾಡುವವನೆ; ಇನ್ನು ಕೇವಲ ಮಾತನಾಡಲಿಕ್ಕೆಂದೇ ನಿಯಮಿಸಿದ ಪ್ರಚಾರಸಚಿವನಾದ ಝ್ಡಾನೋವ್‌ನಿಗೆ ಸಹ ವೈಯಕ್ತಿಕವಾಗಿ ಬಹಳ ಮಾತನಾಡುವವರನ್ನು ಕಂಡರೆ ಹೇಸಿಕೆ ; ಕೊನೆಯವನಾದರೂ ಆಯುಧದ ಮೊನೆಯಷ್ಟು ಮಹತ್ತ್ವದವನಾದ ಪರರಾಷ್ಟ್ರ ಪ್ರಧಾನ ಎಂ. ಮೊಲೋಟೋವ್‌ನೂ ಮಿತಭಾಷಿ ! ಹೀಗಾಗಿ ನವೀನ ರಸಿಯವನ್ನು ಲೆನಿನ್, ಟ್ರಾಟ್ಸ್ಕಿ ಮೊದಲಾದವರ ತತ್ತ್ವಗಳ ತಿಕ್ಕಾಟದೊಳಗಿಂದ ಪಾರುಮಾಡಿ ಹಿಡಿದೆತ್ತಿ, ತನ್ನ ಕಾಲ ಮೇಲೆ ತಾನು ಹುಮ್ಮಸಿನಿಂದ, ಹುರುಪಿನಿಂದ ನಟಿದು ನಿಲ್ಲುವಂತೆ ಮಾಡಿದುದೆಂದರೆ ಈ ಮಿತಭಾಷಿಗಳ ಮಂಡಲ !

ರಸಿಯದ ಇಂದಿನ ನಡೆವಳಿಕೆಯು, ಪ್ರಪಂಚದ ಎಂತೆಂತಹ ವಿಚಾರವಂತರನ್ನೂ ಬೆರಗುಗೊಳಿಸಿ ಬಿಟ್ಟಿದೆ. ಲೆನಿನರ ಎಲ್ಲ ತತ್ತ್ವಗಳನ್ನು ಅಭ್ಯಸಿಸಿ, ಅರೆದು ಕುಡಿದು, 'ಪ್ರಪಂಚದ ಪರಿಪರಿಯ ಕಷ್ಟಕಾರ್ಪಣ್ಯಗಳನ್ನೆಲ್ಲ ಬಗೆಹರಿಸಲು ಅಂತರರಾಷ್ಟ್ರೀಯ

ಸಾಮ್ಯವಾದವೊಂದೇ ಸರಿಯಾದ, ಸಮರ್ಪಕವಾದ ಉಪಾಯವು' ಎಂಬ ಅವರ ಪ್ರತಿಪಾದನೆಯನ್ನು ಎತ್ತಿಹಿಡಿದ **ಬರ್ನಾರ್ಡ್ ಶಾ**ರವರಿಗೆ ಸಹ ರಶಿಯದ ಇಂದಿನ ಚಟುವಟಿಕೆಗಳು ನಿಚ್ಚಳವಾಗಿ ತಿಳಿಯದಂತಾಗಿವೆ. ಹಿಟ್ಲರನು ಪೋಲಾಂಡಿನ ಮೇಲೆ ದಂಡು-ದಳಗಳನ್ನೆತ್ತಿ ಹೋಗಿ, ಅದರ ಪರಿಸಮಾಪ್ತಿಯನ್ನು ಮಾಡಿ, ಗುಳಿಗೆಯನ್ನು ನುಂಗಿ ಅದನ್ನು ದಕ್ಕಿಸಿಕೊಳ್ಳಲು ನೀರಿನ ಆಶ್ರಯವನ್ನು ಪಡೆಯುವವರಂತೆ, ಆತ್ಯಾತುರದಿಂದ ರಸಿಯದ ರಕ್ಷಾ-ಕವಚವನ್ನು ತೊಟ್ಟುಕೊಂಡಾಗ, ಬರ್ನಾರ್ಡ್‌ಶಾರವರಿಗೆ ಅತ್ಯಾನಂದವಾಯಿತು. "ಇನ್ನೇನು ಹೆದರಿಕೆಯಿಲ್ಲ ; ಇನ್ನು ಮೇಲೆ ವಿಶ್ವವು ರಸಿಯದ ಕೈಯಲ್ಲಿ ನಿಶ್ಚಿಂತವಾಗಿಯೂ, ಸುರಕ್ಷಿತವಾಗಿಯೂ ಉಳಿಯುವುದು" ಎಂಬ ಉದ್ಗಾರವನ್ನು ಅವರು ತೆಗೆದರು. ಆದರೆ ಅದೇ ಅವರು, ಮೊನ್ನೆ ಮೊನ್ನೆ ಮಾಡಿದ ಮೊಲೋಟೋವ್ಹರವರ ಭಾಷಣಗಳೆರಡನ್ನು ಕೇಳಿ, ಬಾಯ್ದೆರೆದಂತೆ ಆಗಿರುವುದು ಸೋಜಿಗವಲ್ಲವೆ ?

'ರಸಿಯವು ಫಿನ್‌ಲಂಡಿನ ಮೇಲೆ ದಾಳಿ ಮಾಡಿತು ; ಅದನ್ನು ಸುಮ್ಮಸುಮ್ಮನೆ ನುಗ್ಗುಮಾಡುತ್ತಿರುವುದು' 'ಜರ್ಮನಿಗೆ ರಸಿಯವು ಪರೋಪರಿಯಿಂದ ಸಹಾಯಮಾಡಹತ್ತಿರುವುದು' ಎಂದು ಜಗತ್ತಿನ ಉಳಿದ ಜನರು ಸಾರಿ ಕಿರುಚುತ್ತಿರುವಾಗ ಕೂಡ ಶಾಂತಚಿತ್ತದಿಂದ 'ರಸಿಯವು ಇಂದಿಗೂ ಯಾರ ಮೇಲೆಯೂ ನುಗ್ಗಿಲ್ಲ; ಇನ್ನು ಮೇಲೆಯೂ ನುಗ್ಗುವುದಿಲ್ಲ. ಅದು ಎಂದಿಗೂ ತಟಸ್ಥವಾಗಿದ್ದ ರಾಷ್ಟ್ರ : ಅದಕ್ಕೆ ಎಲ್ಲರೂ ಆಪ್ತ!' ಎಂದು ಹೇಳಿಕೆಯನ್ನು ಹೊರಡಿಸುವ ಮೊಲೋಟೋವ್ಹನ ಮಾತುಗಳು ಧಾಷ್ಟ್ರ್ಯದ್ಯೋತಕವೆನಿಸಿದರೆ "ನಿಜವಾಗಿ ನೋಡಿದರೆ ಬ್ರಿಟಿಶರೆ ಜಗಳಗಂಟರು; ಜಗಳ ಹೂಡಿ, ಬೆಂಕಿಹಚ್ಚಿ ಹಾರಾಡುವವರು. ಬ್ರಿಟಿಶರೆ ಈ ಪಿರಿಗಾಲಗದ ಬೇರುಗಳು, ಬ್ರಿಟಿಶರೇ ಇಷ್ಟೆಲ್ಲ ಅನರ್ಥಕ್ಕೆ ಕಾರಣರೂ ಮತ್ತು ಹಾಗೆ ನೋಡಿದರೆ ಹಿಟ್ಲರನು ಹಿರಿಯ ಶಾಂತಿದೂತ" ಎಂಬ ಮೊಲೋಟೋವ್ಹನ ಮಾತುಗಳು ಮೋಜಿನವೆನಿಸುವುದಿಲ್ಲವೆ ?

ಈ ಬಗೆಯ ಮಾತುಗಳು ತೋರಿಕೆಗೆ ಮೋಜಿನವೆನಿಸಿದರೂ, ಅವುಗಳಿಗೆ ತತ್ತ್ವದ ತಳಹದಿಯಿರಲಿಕ್ಕೆ ಶಕ್ಯವೇ ಇಲ್ಲ ಎಂದು ಯಾರಾದರೂ ಖಾತರಿಯಾಗಿ ಹೇಳಬಹುದೆ? ಆದರೂ ಇಂತಹ ಬಗೆಯ ಮಾತುಗಳನ್ನಾಡುವುದಕ್ಕಿಂತ ಮುಂಚೆ, ಅವುಗಳಿಗೆ ಕಾರ್ಯಸ್ವರೂಪವನ್ನು ತಂದುಕೊಟ್ಟೇವೆಂಬ ಆತ್ಮವಿಶ್ವಾಸವು ಬರಲು, ಕಳೆದ ೧೫ ವರುಷ ಅವರು ತಮ್ಮತಮ್ಮೊಳಗೆ ಅದೆಂತಹ ಸಂಯಮವನ್ನು ಸಾಧಿಸಬೇಕಾಯಿತು ! ತಮ್ಮ ನಾಡಿನ ಧುರೀಣರ ತಾತ್ತ್ವಿಕ ವಿಚಾರಗಳಲ್ಲಿ ಏನು ಹೆಚ್ಚುಕಡಿಮೆಯಾಗಿರುವುದು, ಯಾವ ಸುಧಾರಣೆಯಾಗಬೇಕಾಗಿರುವುದು, ಎಂತಹ ತಿದ್ದುಪಾಟುಗಳಾಗಬೇಕಾಗಿರುವುವು ಎಂಬುದರ ವಿಷಯವಾಗಿ ಹೊರಗಿನವರಿಗೆ ತುಸು ಕೂಡ ವಾಸನೆಯನ್ನು ಹಚ್ಚಗೊಡದೆ, ಕೇವಲ ದೇಶದ ಅಂತರ್ವ್ಯವಸ್ಥೆಯಲ್ಲಿ ತಲೆ ಕೆಳಗೆ ಹಾಕಿ ದುಡಿಯಲು ಮೊಲೋಟೊವ್ಹನನ್ನೊಳಗೊಂಡ ನಾಲ್ಕಾರು ಜನ ಸಂಯಮಿಗಳಿದ್ದರಿಂದೇ ಸಾಧ್ಯವಾಯಿತು.

ಮೊನ್ನೆಯ ಯುದ್ಧ ಪ್ರಾರಂಭವಾದ ಕೆಲಕಾಲದನಂತರ ರಸಿಯದ ಗೆಳೆತನವನ್ನು ಸಂಪಾದಿಸಿಕೊಂಡ ವಿಷಯವಾಗಿ, ವಿಶ್ವದ ಜನರೆಲ್ಲರೂ ಜರ್ಮನಿಯ ಪರರಾಷ್ಟ್ರ ಮಂತ್ರಿಯಾದ **ಹರವಾನ್ ರಿಬೆನ್‌ಟ್ರಾಪ್‌**ನನ್ನು ಮೇರೆ ಮೀರಿ ಕೊಂಡಾಡಿದರು. 'ಬ್ರಿಟಿಷರ ಪರರಾಷ್ಟ್ರ ಮಂತ್ರಿಯು ಮಾಸ್ಕೋ ನಗರದಲ್ಲಿ, ಸ್ಟಾಲಿನನ ಮನೆಯ ಹೊಸತಿಲಿನಲ್ಲಿ ತಿಂಗಳುಗಟ್ಟಲೆ ಬೀಡುಬಿಟ್ಟುಕೊಂಡು ಕುಳಿತಿದ್ದರೂ, ಒಂದೇ ಒಂದು ಕ್ಷಣದಲ್ಲಿ ಅವರನ್ನು ಬದಿಗೊತ್ತಿ ತಾನು ಆ ಕೆಲಸವನ್ನು ಸಾಧಿಸಿದ ಆ ಚತುರ' ಎಂಬ ಉದ್ಗಾರಗಳು ಎಲ್ಲೆಡೆಗಳಿಂದಲೂ ಹೊರಬಿದ್ದುವು. ಆದರೆ ಪರಿಸ್ಥಿತಿಗಳನ್ನು ನಾವು ಕೊಂಚ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅಥವಾ ಇತ್ತೀಚೆಗೆ ರಶಿಯದ ಮುಂದಾಳುಗಳು ಆಡುತ್ತಿರುವ ಒಂದೆರಡು ಮಾತುಗಳ ಬೆನ್ನೆಲುಬಿನಂತಿರುವ ಅವರ ತತ್ತ್ವಗಳ ತಿರುಳನ್ನು ತಿಳಿದುಕೊಂಡರೆ, ಆ ಮನ್ನಣೆಗೆ, ಅದರಕ್ಕೆ ಅಥವಾ ಅಗ್ಗಳಿಕೆಗೆ ತಕ್ಕವರಾರು ಎಂಬುದು ಕನ್ನಡಿಯಂತೆ ನಿಚ್ಚಳವಾಗುವುದು.

ಅರ್ಧಕ್ಕಿಂತ ಹೆಚ್ಚಾಗಿ ಫಿನ್‌ಲಂಡನ್ನು ಕೈವಶಮಾಡಿಕೊಂಡಿದ್ದರೂ, ಇನ್ನುಳಿದುದನ್ನು ಅಲ್ಪಾವಕಾಶದಲ್ಲಿಯೆ ತಮ್ಮೊಳಗೆ ಸೇರಿಸಿಕೊಳ್ಳುವ ಸಿದ್ಧತೆಯನ್ನು ತಾವು ಮಾಡಿದ್ದರೂ, 'ನಾವು ಫಿನ್‌ಲಂಡಿಗೆ ದಂಡೆತ್ತಿ ಹೋಗಿಲ್ಲ; ನಾವು ಯಾವಾಗಲೂ ತಟಸ್ಥರಿದ್ದೇವೆ. ಯುದ್ಧಸಾಮಗ್ರಿಗಳ ಪೂರೈಕೆಮಾಡಲು ನಾವು ಜರ್ಮನರಿಗಷ್ಟೆ ಒಪ್ಪಿಲ್ಲ; ಆದರೆ ಒಂದು ತಟಸ್ಥರಾಷ್ಟ್ರವು ಆಚರಿಸುವಂತೆ ನಾವು ಎಲ್ಲರನ್ನೂ ಒಂದೇಬಗೆಯಿಂದ ನೋಡುತ್ತೇವೆ' ಎಂದು,ಜರ್ಮನಿಯ ಸಂಗಡ ನಡೆದ ಕರಾರು ಪತ್ರದಲ್ಲಿ ಸಹಿಗಳಾದ ಮೇಲೆ ಕೂಡ ಈ ಮಾತುಗಳನ್ನು ಆಡಿ, ಮೊಲೋಟೋವ್ಹನು ಎಲ್ಲರ ಮೇಲೆ ಮತ್ತೊಂದು ಆಶ್ಚರ್ಯದ ಮೋಹನಾಸ್ತ್ರವನ್ನು ಒಗೆದನು. ಎಲ್ಲರಿಗೂ ದಿಕ್ಕುತಪ್ಪಿದಂತಾಯಿತು. ಈ ಪ್ರಕಾರವಾಗಿ, ಹೊರಗಿನವರಿಗೆ ತಮ್ಮ ದೇಶದಾಡಳಿತದ ನೆಲೆಯನ್ನು ಸ್ವಲ್ಪ ಕೂಡ ತಿಳಿಯಗೊಡದೆ, ತಮ್ಮ ನಾಡು ಹೊರಗೆಲ್ಲ ಹೆಸರಾಗುವುದಕ್ಕಿಂತ ಮೊದಲು, ಒಳಗಿಂದೊಳಗೆ ತಾನು ಭದ್ರವಾಗಿರುವುದು ಉಚಿತ ಎಂಬ ತಮ್ಮ ತತ್ತ್ವಗಳ ಮೇರೆಗೆ, ಹೊರಗಿನವರಿಗೆ ಅದರ ಬಗೆಗೆ ಎಳ್ಳಷ್ಟಾದರೂ ಗೊತ್ತು ಹತ್ತಗೊಡದೆ, ಇಂಗ್ಲಂಡ್,ಜರ್ಮನಿಗಳ ರಾಯಭಾರಿಗಳು ಮಾಸ್ಕೊದಲ್ಲಿ ತಮ್ಮ ತಮ್ಮ ಕಾಗದಪತ್ರಗಳೊಂದಿಗೆ ಬಂದು ತನ್ನ ಬಾಗಿಲಲ್ಲಿ ಕುಳಿತಾಗ, ಮನೆಯ ವಿಷಯವಾಗಿ ಸಂಪೂರ್ಣವಾದ ವಿಚಾರವುಳ್ಳ, ಮಾತುಗಳ ಬಗೆಗೆ ಸಾಕಷ್ಟು ಸಂಯಮವಿರುವ ಮೋಲೋಟೋವ್ಹನು,ಕೈಯಲ್ಲಿ ಜಾಣತನದ ತಕ್ಕಡಿಯನ್ನು ಹಿಡಿದು, ಆಗಿನ ವ್ಯಾಪಾರವನ್ನು ತನಗೆ ಲಾಭವಾಗುವಂತೆ ಮಾಡಿಕೊಂಡನು. ಅದಕ್ಕೆ ಮತ್ತು ಅದರ ಯಶಕ್ಕೆ ರಿಬೆನ್‌ಟ್ರಾಪನು ಕಾರಣನಲ್ಲ !

ಮೊಲೋಟೋವ್ಹನು ಒಳ್ಳೆ ಕುಲದಲ್ಲಿ ಜನ್ಮತಾಳಿದ್ದಾನೆ. ಇವನ ನಿಜವಾದ ಹೆಸರು ಸ್ಕ್ರಿಯಾಬಿನ್ ಎಂದು. ರಶಿಯದ ಪ್ರಸಿದ್ಧ ಪದ್ಯಕಾರನಾದ ಅಲೆಕ್ಝಾಂಡರ್ ಸ್ಕ್ರಿಯಾಬಿನ್‌ನ ಅಣ್ಣನ ಮಗನಿವನು. ಇವನ ಇಂದಿನ ವಯಸ್ಸು ಸುಮಾರು ೪೯. ಇವನು

ಮದುವೆಯಾದುದು ಒಬ್ಬ ಜರ್ಮನ್ ಸ್ತ್ರೀಯೊಂದಿಗೆ. ಮೊದಲು ರಾಜಕೀಯ ರಂಗದಲ್ಲಿ ಕಾಲಿಟ್ಟುದು, ರಾಜನಿಷ್ಠ ಘೋರಪಕ್ಷವಾದಿಯಾಗಿ— ಆ ಪಕ್ಷದ ಪತಿಯಿಂದಲೇ ಪಾರ್ಲಿಮೆಂಟಿಗೆ ಆರಿಸಿ ಬಂದ ಸದಸ್ಯನು. ಇಂದು ಜನರು ಇವನನ್ನು "ಸ್ಟಾಲಿನ್‌ನ ಪ್ರತಿಧ್ವನಿ" ಎನ್ನುವಷ್ಟು ಹೊಸ ತತ್ತ್ವಗಳನ್ನು ಮೈಗೂಡಿಸಿಕೊಂಡಿದ್ದಾನೆ. ಇವನ ಮುಖ್ಯ ಉದ್ದೇಶ ದೇಶಹಿತದ ದೃಷ್ಟಿ; ಸರಕಾರನಿಷ್ಠೆ. 'ಸರಕಾರದ ಪದ್ಧತಿ ಏನೆ ಇದ್ದರೂ ಯೋಗ್ಯರೀತಿಯಿಂದ ಜನತೆಯ ಹಿತದೃಷ್ಟಿಯಿಂದ ಕಾರ್ಯಮಾಡಿದರೆ ಯಾವುದೂ ಒಳ್ಳೆಯದು' ಎಂಬುದರಲ್ಲಿ ಸಂಪೂರ್ಣ ವಿಶ್ವಾಸ— ಈ ವಿಶ್ವಾಸಕ್ಕಾಗಿಯೆ ಹೋದ ವಸಂತಕಾಲದಲ್ಲಿ ಇವನಿಗೆ, ರಸಿಯಾದ ಪರರಾಷ್ಟ್ರ ಪ್ರಧಾನಸ್ಥಾನವು ದೊರೆಯಿತು. ಇಡಿಯ ಜಗತ್ತನ್ನು ಇಂದು ರಹಸ್ಯಮಯವಾಗಿ ಮಾಡಿದುದು ಇವನ ರಾಜಕಾರಣ ನೈಪುಣ್ಯ.

ಮೊಲೋಟೋವ್‌ನೆಂದರೆ ನೋಡಲೇಬೇಕಾದಂತಹ ಒಂದು ವ್ಯಕ್ತಿ. ದುಂಡು ದುಂಡಾದ ಅವಯವಗಳುಳ್ಳ ದೇಹ; ವಿಚಾರಗಳ ಆಳವನ್ನು ವಿಶದಗೊಳಿಸುವಂತಹ ಏರುಹಣೆ; ನೋಟದ ಹದನವನ್ನು ತಿಳಿಸುವ ಆ ಕಣ್ಣುಗಳು ! ಇಂದು ಅವನ ಯಶಕ್ಕೆ ಇವಷ್ಟೆ ಕಾರಣ ಎನ್ನುವಂತಿದ್ದರೆ ಅದೆಷ್ಟೋ ಜನರಿಗೆ ಅಂತಹ ಸನ್ಮಾನವು ದೊರೆಯಬಹುದು. ಆದರೆ ಇವು ಇದ್ದು, ಅವನಿಗೇ ಅಂತಹ ಪದವಿಯು ದೊರೆತು, ಪದವಿಗೆ ತಕ್ಕ ಮರ್ಯಾದೆಯು ದೊರೆಯಲು ಕಾರಣವಾದ ಮತ್ತೊಂದು ವಿಷಯವೆಂದರೆ ಅವನ ಅಪಾರವಾದ ಬುದ್ಧಿಸಂಪತ್ತು. ಶಕ್ತಿ, ಅನುಭವ, ವಿಚಾರ ಈ ಮೂರೂ ಉಪಕರಣಗಳನ್ನು ಅಣಿಗೊಳಿಸಿಕೊಂಡು, ತನ್ನ ನಾಡಿನ ಇಂದಿನ ಪರಿಸ್ಥಿತಿಗೆ ತಕ್ಕಂತೆ, ತಾವೆಲ್ಲರೂ ಯಾವ ಉಪಾಯಗಳನ್ನು ಕಂಡಿರುವರು ಎಂಬುದನ್ನು ಚೆನ್ನಾಗಿ ಅರಿತುಕೊಂಡು, ದಕ್ಷನು ಸಾರವಾಗಿರುವ ಯಶಸ್ವಿಯಾದ ಆಚರಣೆಯನ್ನಿಟ್ಟುಕೊಂಡ ರಸಿಯದ ಇಂದಿನ ಮುಂದಾಳುಗಳಲ್ಲಿ ಇವನು ಸ್ಟಾಲಿನನ ಬಲಗೈ !

ಜರ್ಮನಿಯಂತೆ ಏಕ್ಕ ಎಲ್ಲ ರಾಷ್ಟ್ರಗಳ ಕಡೆಗೂ ನಾವು ಸಮಾನ ದೃಷ್ಟಿಯನ್ನು ಇಟ್ಟಿರುವೆವು ಎಂದು ಹೇಳಿಯಾದ ಮೇಲೆ ಫಿನ್‌ಲಂಡಿನ ಮೇಲೆ ಕೈಹಾಕಿದುದನ್ನು ನೋಡಿ, ಪ್ರಪಂಚದ ಚಿಂತಕರು ವಿಚಾರಮಗ್ನರಾದರು. ಮತ್ತು ಆ ವಿಚಾರದ ಸಾರಾಂಶವೆಂದು 'ರಸಿಯವು ಕ್ರಾಂತಿಯನ್ನೆಬ್ಬಿಸಿ ಪ್ರಪಂಚದಲ್ಲೆಲ್ಲ ಸಾಮ್ಯವಾದವನ್ನು ಹರಡಬೇಕೆಂದು ಸಾರಿ, ಹಾಗೆ ಆದರೆ ಮಾತ್ರ ಭೂಮಿಯಲ್ಲಿಯೂ ಚಿರವಾದ ಸ್ಥಿರವಾದ ಶಾಂತಿಯು ನೆಲೆಗೊಳ್ಳುವದು ಎಂದು ಮುಂತಾದ ದೊಡ್ಡ ದೊಡ್ಡ ಮಾತುಗಳನ್ನು ಕೊಚ್ಚಿ, ಈಗ ಮಾತ್ರ ಅದು ಮತ್ತೆ ಆ ಅಂತರರಾಷ್ಟ್ರೀಯ ಸಾಮ್ಯವಾದದ ಜಂಭದ ಮಾತಿನ ಜೊಂಜಾಟವನ್ನು ತೊರೆದು ಜರ್ಮನಿಯಂತೆ ಶುದ್ಧವಾದ ರಾಷ್ಟ್ರೀಯ ಸಾಮ್ಯವಾದಕ್ಕೆ ನಿಂತಿರುವುದು' ಎಂದು ಮುಂತಾಗಿ ಒಡನುಡಿಯಹತ್ತಿರುವರು. ಬರ್ನಾರ್ಡ್ ಶಾ ಅಂತಹರು ಸಹ ಜರ್ಮನಿಯಲ್ಲಿ ನಾಝಿ ಸೋಶಾಲಿಝಮ್ ಬೆಳೆಯಿತು; ಇಟಲಿಯಲ್ಲಿ ಫ್ಯಾಸಿಸ್ಟ ಸೋಶಾಲಿಝಮ್ ನೆಲೆ ನಿಂತಿತು; ಈಗ ರಶಿಯದಲ್ಲಿ ಸೋವ್ಹಿಯಟ್ ಸೋಶಾಲಿಝಮ್ ತಳವೂರತೊಡಗಿದ ಎಂದು ಸಾರಿ, ಒಟ್ಟು ಎಲ್ಲವೂ ಹಸನಾದ ರಾಷ್ಟ್ರೀಯ ಸಾಮ್ಯವಾದದ ಸ್ವರೂಪಗಳೇ ಎಂದು ನುಡಿದುಬಿಟ್ಟರು. ಇದೂ ಒಂದು, ರಸಿಯವು ಹಾಗೂ ರಸಿಯದ ಪರರಾಷ್ಟ್ರ ಮಂತ್ರಿ ಮೊಲೋಟೋವ್‌ನು ಜಾಣತನದಿಂದ ಕಾದಿಟ್ಟುಕೊಂಡ ರಹಸ್ಯದ ಪರಿಣಾಮವೆ ; ಹಾಗೆ ರಹಸ್ಯವನ್ನಿಟ್ಟು, ಮುಂದಿನ ಹೆಜ್ಜೆಯನ್ನು ಸುಲಭಸಾಧ್ಯಮಾಡಿಕೊಂಡ ಮೊಲೋಟೋವ್‌ನ ಜಾಣ್ಮೆಯ ದ್ಯೋತಕವೆ !

'ಅದು ಹೇಗೆ?' ಎಂದು ಯಾರಾದರೂ ವಿಚಾರಮಾಡುತ್ತ ಬೆರಳನ್ನು ಬಾಯಲ್ಲಿರಿಸಿಕೊಂಡರೆ, ಅದೇ ಬೆರಳನ್ನು ಕಚ್ಚಿಕೊಳ್ಳುವಂತಹ ಕೃತಿಗಳನ್ನು ಈಗಾಗಲೆ ರಸಿಯವು ಅದೆಷ್ಟೊ ಮಾಡಿರುವುದು. 'ಫಿನ್‌ಲಂಡನ್ನು ನೀನು ನುಂಗುತ್ತಿರುವೆ' ಎಂದು ಎಲ್ಲರೂ ಬೊಟ್ಟುಮಾಡಿ ರಸಿಯಕ್ಕೆ ತೋರಿಸುತ್ತಿದ್ದರೂ, ನಿಜವಾಗಿಯೂ ಜಗತ್ತಿನ ಸ್ವಾತಂತ್ರ್ಯದ ಮೇಲೆ ಗದೆಯನ್ನೆತ್ತಿದವರು ನೀವು ಬ್ರಿಟಿಶರು, ನಿಜವಾಗಿಯೂ ವಿಶ್ವಶಾಂತಿಯನ್ನು ನುಚ್ಚುನುಚ್ಚಾಗಿಸಿದವರು ನೀವು' ಎಂದು ಬಿಗುಹಿನಿಂದ ಬ್ರಿಟಿಶರಿಗೆ ಹೇಳಿ, ಅಷ್ಟೆ ವಿಶ್ವಾಸದಿಂದ ಜರ್ಮನಿಯನ್ನು ತನ್ನ ಬಗಲಲ್ಲಿ ಕರೆದುಕೊಂಡು, ಈಗ ಹೊಟ್ಟೆಗೆ ಕೊಡುತ್ತಿರುವುದರ ರಹಸ್ಯವೇನಿದೆ? ಮೂಲತಃ, ತತ್ತ್ವತಃ ಬ್ರಿಟಿಶರು ರಸಿಯದ ಸಾಮ್ಯವಾದದ ವಿರೋಧಕರು; ಇತ್ತ ಈಗ ಐದು ವರುಷಗಳಿಂದ ಜರ್ಮನಿ, ಇಟಲಿ, ಜಪಾನುಗಳು "ಸಾಮ್ಯವಾದ ವಿರೋಧಕ ಒಪ್ಪಂದ"ವನ್ನು ಮಾಡಿಕೊಂಡಿರುವುವು. ಇವೆಲ್ಲ ರಾಷ್ಟ್ರಗಳು ಒಂದಿಲ್ಲೊಂದು ಪರಿಯಲ್ಲಿ ಬಂಡವಲುವಾದವನ್ನು ಬೆನ್ನೊಳಗಿನ ರೋಗದಂತೆ ಮುಚ್ಚಿಟ್ಟುಕೊಂಡ ರೋಗಿಗಳು. ಆದರೆ ಅವರಲ್ಲಿಯ ತಾನು ಜರ್ಮನಿಗೆ ಈ ರೀತಿಯಾಗಿ ಸಹಾಯ-ಸಲಕರಣೆ-ಸಲಹೆಗಳನ್ನೀಯುವುದರಲ್ಲಿ ಏನು ಗೂಢವಿದೆ?

ಇವೆಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಶೋಧಿಸಿ ತೆಗೆದರೆ ಎಲ್ಲ ಅಚ್ಚರಿಯು ನಿಚ್ಚಳವಾಗುವುದು; ಮುಚ್ಚಿದ್ದುದೆಲ್ಲ ಬಿಚ್ಚಿ ಬೀಳುವುದು. ಆ ಮೇಲೆ ಮನೆಗೆದ್ದು ಮಾರುಗೆದೆಯಲು ರಸಿಯಕ್ಕೊಂದಕ್ಕೆ ಸಾಧ್ಯ; ವಿಶ್ವದಲ್ಲಿ ಶಾಂತಿ, ಪ್ರೇಮ, ಬಾಂಧವ್ಯಗಳನ್ನು ಹರಡುವುದು ರಸಿಯದ ಸಾಮ್ಯವಾದವೊಂದಕ್ಕೆ ಸಹಜ ಎಂಬುದು ಮನವರಿಕೆಯಾಗುವುದು. ಆದರೆ ಇದನ್ನು ತಿಳಿಸಗೊಡದಿರುವುದೆ ರಸಿಯದ ರಹಸ್ಯ; ಆ ರಹಸ್ಯವನ್ನು ಕಾಯ್ದಿಟ್ಟುಕೊಂಡಿರುವುದೆ ಅದರ ಆಡಳಿತದ ಗುಟ್ಟು; ಮತ್ತು ಆ ಗುಟ್ಟನ್ನು ಗಟ್ಟಿಯಾಗಿಟ್ಟುಕೊಂಡ ಜಾಣ್ಮೆಯ ಮೂರ್ತಿಯೆ ಮೊಲೋಟೋವ್ !

ಒಟ್ಟು ವಿಶ್ವಶಾಂತಿಯೆ ಎಲ್ಲರ ಪ್ರಯತ್ನಗಳ ಗುರಿ; ಆದರೆ ಈಗ ಅದನ್ನು ಸಾಧ್ಯವಾಗಿಸಿ ತೋರಿಸುವುದು ಸಾಮ್ಯವಾದದ ಸ್ವಾರಸ್ಯವನ್ನು ಜಗತ್ತಿಗೆ ತಿಳಿಸಿದ ರಸಿಯದ ಹೊರೆ; ಮತ್ತು ಅದರ ಗುಟ್ಟನ್ನು ರಟ್ಟಾಗಿಸದೆ, ಅದನ್ನು ಸಾಧಿಸುವುದಕ್ಕೆ ಕಾರಣವಾಗುವ ರಸಿಯದ ಮುಂದಾಳುಗಳಲ್ಲಿ ಮೊಲೋಟೋವ್‌ನೊಬ್ಬ ದೊಡ್ಡದೊರೆ !



ವಿ. ಸೂ: ನಮ್ಮಲ್ಲಿ ಬಂದು ಅಸ್ವೀಕೃತವಾದ ಲೇಖನಗಳ ಲೇಖಕರಿಗೆ ಸಂಪಾದಕಮಂಡಲಿ ಮಾಡಿದ ಸೂಚನೆಗಳಿವು. ಲೇಖಕರಲ್ಲದವರು ಇದನ್ನು ಬೇಕಾದರೆ ಓದಲಿ, ಬೇಡವಾದರೆ ಬಿಡಲಿ!

ಒರ್ವ ನವವಿದ್ಯಾರ್ಥಿ (ಸ್ವಚರಿತ್ರ ಕಥನ)

ವಿದ್ಯಾರ್ಥಿಗಳು ಏನನಾದರೂ ಬರೆಯಬೇಕಾದರೆ ತಮ್ಮ ಅನುಭವದ ಆಳವಿನೊಳಗಿನ ಸಂಗತಿಯನ್ನೆ ಬರೆಯುತ್ತಿರಬೇಕು. ನಿಮ್ಮ ಲೇಖನದೊಳಗಿನ 'ನಾನು' ಎಂಬ ವ್ಯಕ್ತಿ ನಿಜವಾಗಿಯೆ ಒಂದು ವಾಸ್ತವವ್ಯಕ್ತಿಯಾಗಿದ್ದಲ್ಲಿ, ಧಾರವಾಡದ ಹುಚ್ಚರ ಆಸ್ಪತ್ರೆಯಲ್ಲೊಂದು ಹುಚ್ಚನ ಸಂಖ್ಯೆ ಹೆಚ್ಚಾಗುತ್ತಿದ್ದಿತು.

ಕನ್ನಡಿಗರ ಕೊರತೆ (ಕವನ)

ತಮ್ಮ ಕನ್ನಡದ ಅಭಿಮಾನ ಪ್ರಶಂಸನೀಯವಾದುದು, ಆದರೆ ಬರಿಯ ಅಭಿಮಾನವೊಂದೇ ಕವನರಚನೆಗೆ ಸಹಕಾರಿಯಾಗದು.

ಕಲಿಮಹಿಮೆ ಈಗ ಇದೇ ಅದೆ!

ನಮಗೂ ಗೊತ್ತಿದೆ. ಏಕೆಂದರೆ ತಾವು ಕಳುಹಿದ ಕವನ ತಮ್ಮ ಸ್ವಂತದ ರಚನೆಯಲ್ಲ. 'ಹೀಗೆ ಮುಂದಿನ ಸಂಚಿಕೆಯಲ್ಲಿ ಎರಡನೇ ಹಾಡು ಕೊಡುವ' ತೊಂದರೆಯನ್ನೇನೂ ತೆಗೆದುಕೊಳ್ಳಬೇಕಾದ ಕಾರಣವಿಲ್ಲ.

ಮುದುಕಾ-ಮುದುಕಿ (ನಾಟ್ಯಛಟಾ)

ನಿಮ್ಮ 'ಮುದುಕಾ ಮುದುಕಿ' ಹುಡುಗಾ ಹುಡುಗಿಯರಾಗಿ ಹೊಸಕಾಲದಲ್ಲಿ ಬರಲಿ. ಆ ಮೇಲೆ ನಮ್ಮ ವಾಚಕರಿಗೆ ಅವರ ಪರಿಚಯ ಮಾಡಿಕೊಡೋಣ!

ಚಂದ (ಕವನ)

ನಿಮ್ಮ ಕವಿತೆಯ ಮಾದರಿಯ ಚರಣಗಳಿವು:

"ಬಸವನು ಕೋಡುಗಳಿಂದೆಸೆಯಲು ಚಂದ!
ಬಸವನನೆಸೆವಂತೆ ಮಾಡಿದಾ ಕೋಡುಗಳೆ ಚಂದ ||"

ನಿಮ್ಮ ಕವಿತೆಯ ಧಾಟಿಯ ನಮ್ಮ ಕವಿತೆಯಿದು:

"ಇಂಥ ಕವಿತೆಯ ಕಳಿಸದಿರುವುದು ನಿಮಗೆ ಚಂದ|
ಅಂಥಿಂಥಾದೆಲ್ಲಾ ಪ್ರಕಟಿಸದಿರುವುದು ನಮಗೆ ಚಂದ||"

ಥಂಡಿಗೇ ಏಳು! (ನಾಟ್ಯಛಟಾ)

ನಿಮ್ಮ ಯಮುನಾಬಾಯಿಯ ಮೂರ್ಖತನವನ್ನು, ಸೌ. ಇಂದುಮತಿಯು ಮಗಳಾಗಿ ಹುಟ್ಟಿದ ತಪ್ಪಿಗಾಗಿ ತಡೆದುಕೊಂಡಿರಬಹುದು. ಪಾಪ, ನಮ್ಮ ವಾಚಕರು ಯಾವ ತಪ್ಪು ಮಾಡಿರುವರೆಂದು ಅವರಿಗೆ ಯಮುನಾಬಾಯಿಯ ಮಾತನ್ನು ಕೇಳುವ ಶಿಕ್ಷೆ ವಿಧಿಸೋಣ?

ಉದಯ (ಕವನ)

ನೋಡುವ ಕಣ್ಣದೆ; ಹೇಳುವುದಕ್ಕೆ ಮಾತುಗಳಿಲ್ಲ. 'ಮೂಕ ಕಂಡ ಕನಸಿನಂತೆ ಕಾಣಯ್ಯಾ!'

ಕಿವಿಮಾತು (ಸಣ್ಣ ಕತೆ)

ನೀವೇ ಹೇಳಿ, ನಿಮ್ಮ ಕತೆಯೊಳಗಿನ ಕಿವಿಮಾತಿಗೂ 'ಜಯಂತಿ'ಯಲ್ಲಿಯ ಕಿವಿಮಾತಿಗೂ ಯಾವ ಸಂಬಂಧ?

ಬಡವಿ ತಿರುಕಿ (ಕವನ)

"ನಿನ್ನ (ಕವಿತೆಯ)ನಿಲ್ಲಿ ಮೆಚ್ಚುವವರಿಲ್ಲ,
"ನಿನ್ನ (ಕವನಕೆ) ತಣಿದು ಕೊಂಡಾಡುವವರಿಲ್ಲ!
"ಗುಣವಿಹೀನರಿಗಿಲ್ಲಿ ಸ್ಥಾನವೇ ಇಲ್ಲ!
"ಯಾವ ಯುಗವೇನಿದಕೆ ಬಂದೆ ಎಲ್ಲ!

ಪಾಪಿಗೆ ತಕ್ಕ ಪ್ರಾಯಶ್ಚಿತ್ತ (ಸಣ್ಣ ಕತೆ)

ಅಲ್ರೀ, ನಿಮ್ಮ ಕಥಾನಾಯಕ ಉರುಲು ಹಾಕಿಕೊಂಡು ಸತ್ಮ್ಯಾಲ, ಈ ಕಥೀ ತಾನs ಹ್ಯಾಂಗ ಹೇಳತಾನ? ದೆವ್ವಾಗಿನ್ನ ಆಗ್ಯಾನೋ ಏನು ಮತ್ತ?

ಲಾವಣ್ಯವೇ ಸೌಖ್ಯದ ಸೋಪಾನ



ನಿಮ್ಮ ಮೈ ಮೊಗ ಮಲ್ಲಿನಂತೆ ಹೊಳೆಯ ಬೇಕೆ?

ನೀವು ಲಾವಣ್ಯ ಮೂರ್ತಿಗಳಾಗಬೇಕೆ ಹಾಗಾದರೆ ನಮ್ಮ ಗಂಧದ ಸಾಬೂನನ್ನು ಉಪಯೋಗಿಸಿ!

ಮೈಸೂರು ಗಂಧದ ಸಾಬೂನು

ಎಲ್ಲೆಲ್ಲಿಯೂ ಸಿಗುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಪಾತ್ರಪಟು

★

ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.,
ಬನಾರಸ ಹಿಂದೂ ಯುನಿವ್ಹರ್ಸಿಟಿ

★

"ಇದೇ ಅಪರಾಧ ನೋಡಿ ನಿಮ್ಮದು.. ಇದಕ್ಕೂ ದೊಡ್ಡದೇನಾದರೂ...."

ಬರಿಯ ಓದುಬರೆಹ ಬಂದರೇನಾಯಿತು, ಹೊಟ್ಟೆ ತುಂಬಿಕೊಳ್ಳುವ ಕೆಲಸಕ್ಕಾಗಿ ಮನುಷ್ಯನಲ್ಲಿ ವಿಶಿಷ್ಟವಾದುದೊಂದು ಶಕ್ತಿ ಬೇಕಾಗುತ್ತದೆ. ಅದು ಇದ್ದಿತೆಂತಲೆ ಸುಬ್ಬು ಬಾಳಿನ ಪಣದಲ್ಲಿ ಗೆದ್ದ. ಸುಮ್ಮ-ಸುಮ್ಮಗೆ ಹೊರೆಹೊರೆ ಅರ್ಜಿಬರೆಯುತ್ತ ಕುಳಿತಿದ್ದರೆ ಅವನಿಂದ ಏನಾಗುತ್ತಿದ್ದಿತು?

★

"ಏನು ವಿದೂಷಕನ ಪಾರ್ಟು ಕಣ್ರೀ ಅದು! ನಕ್ಕು ಹೊಟ್ಟೆ ಹುಣ್ಣಾತು" ಎಂದು 'ವಿಶ್ರಾಂತಿ ಗೃಹ' ದಲ್ಲಿಯ ಒಬ್ಬ ಗಿರಾಕಿ ಇನ್ನೊಬ್ಬ ಗಿರಾಕಿಗೆ ಹೇಳುತ್ತಿದ್ದ.

"ನಿನ್ನಿನ ನಾಟಕದ ಸುದ್ದೀ ಹೇಳ್ತೀರಾ? ಅಹುದು ಸ್ವಾಮಿ ಮರೆಯದ ವಿಷಯು ಅದು!" ಎಂದು ಎರಡನೆಯ ಗಿರಾಕಿ ನಾಟಕದ ವಿಷಯವನ್ನು ನೆನೆದು ನಕ್ಕು, ಚಹವನ್ನು ತಪ್ಪು ದಾರಿಯಿಂದ ಕುಡಿದು ಕೆಮ್ಮಹತ್ತಿದ.

"ಸಾವಧಾನ ಸ್ವಾಮಿ, ಸಾವಧಾನ. ಹೇಳಿಯಾದರೂ ನಗರಿ, ಇಲ್ಲವೆ ನಕ್ಕಾದರೂ ಹೇಳ್ರಿ. ಆಸ್ಪತ್ರೆ ದೂರದಲ್ಲಿದೆ" ಎಂದು ನಾಗಪ್ಪ ಮೂದಲಿಸಿ ನುಡಿದ.

ಗಿರಾಕಿಗಳು ನಾಗಪ್ಪನನ್ನು ಕಂಡಿದ್ದಿಲ್ಲ; ಡಿಕ್ಕಿಯೊಂದಿಗೆ ಆಟ ಮಾಡುತ್ತ ತನ್ನ ಸ್ಟೂಲಿನ ಮೇಲೆ ಗಿರಾಕಿಗಳ ವಿನೋದವೃತ್ತಿಯನ್ನು ಅವಲೋಕಿಸುತ್ತಲೆ— ನಾಗಪ್ಪ ಕುಳಿತಿದ್ದ.

"ಅದೇನ್ರೀ, ನಾಗಪ್ನೋರು ನಿನ್ನೆ ನಾಟಕಕ್ಕೆ ಬಂದಿದ್ದಿಲ್ಲವ್ರೋ!" ಎಂದು ಊರ ಜನರೆಲ್ಲ ನಾಟಕ ನೋಡಲೇಬೇಕೆಂದು ತಿಳಿದಿದ್ದ ಒಬ್ಬ ಗಿರಾಕಿ ಆಶ್ಚರ್ಯದಿಂದ ಕೇಳಿದ.

"ಎಲ್ಲೀ ನಾಟಕಾ ಸ್ವಾಮಿ, ಇಲ್ಲಿ ನಡೆಯುವ ದೈನಂದಿನ ನಾಟಕ ಏನು ಕಮ್ಮಿ ಇರುತ್ತದೆಯೆ? ಸೂಕ್ಷ್ಮಾವಲೋಕನೆಯಿಂದ ಜೀವನದ ಎಲ್ಲ ಸನ್ನಿವೇಶಗಳಲ್ಲಿಯೂ ನಾಟಕವು ನಡೆದೇ ಇದೆ! ಇರಲಿ ಬಿಡಿ, ತಮ್ಮ ನಾಟಕ ಯಾವುದು? ಏನು ಅಂಥಾ ಹಾಸ್ಯದ ವಿಷಯು?" ಎಂದು ನಾಗಪ್ಪ ಕೇಳಿದ.

"ನಮ್ಮೂರ ಭುವನೇಶ್ವರೀ ಥೇಟರಿಗೆ ಬಂದಿದೆಯಲ್ರೀ ಆ 'ಕಲೋತ್ತೇಜಕ' ಕಂಪನಿ! ನಿನ್ನೆ ರಾತ್ರಿ ಅವರು 'ಜಾನಕೀ ಪರಿಣಯು' ಎಂಬ ನಾಟಕ ಆಡಿದರು. ಮೂರನೆಯ ಅಂಕದಲ್ಲಿ ಜನಕರಾಜನ ದರ್ಬಾರು ನಡೆದಾಗ ರಾಜವಿದೂಷಕನು ಒಂದು ಮೋಜು ಮಾಡಿಬಿಟ್ಟ. ಅವನ ಅಣ್ಣಾ..." ನಾಟಕದ ನೆನಪು ಆದ ಕೂಡಲೆ ಆ ಗಿರಾಕಿ ಪುನಃ ಪುನಃ ಗಹಗಹಿಸಿ ನಗತೊಡಗಿದ. ಅವನಿಗೆ ಮಾತನಾಡಲಿಕ್ಕೇ ಬಾರದಂತಾಯಿತು.

"ಸ್ವಲ್ಪ ಸಾವಧಾನವಾಗಿ ಹೇಳಿಬಿಡ್ರಿ ಸ್ವಾಮಿ, ಅದೆಂತಹ ಮೋಜು?" ನಾಗಪ್ಪ ಕೇಳಿದ.

"ಹೇಳ್ತೀನಿ, ಸ್ವಾಮಿ ಹೇಳ್ತೀನಿ. ವಿದೂಷಕನಿಗೆ ಒಂದು ಪಾತ್ರ 'ನಿಮ್ಮ ತಂದೆ ಪ್ರಾಮಾಣಿಕನೋ!' ಅಂತ ಕೇಳಿತು. ವಿದೂಷಕ 'ಹೌದ್ರೀ' ಅಂತ ಉತ್ತರ ಕೊಟ್ಟ. 'ಅದಕ್ಕೆ ಪುರಾವೇ ಏನು?' ಎಂದು ಪುನಃ ಪಾತ್ರ ಕೇಳಿತು. 'ನಮ್ಮಪ್ಪ ಮುನಿಸಿಪಲ್ ಚುನಾವಣೆಗೆ ನಿಂತಾಗ ಆರಿಸಿಬರಲಿಲ್ಲ' ಅಂತ ವಿದೂಷಕ ಹೇಳಿದ. ಸರಿ, ಥೇಟರಿನ ತುಂಬಾ ಗೊಂದಲ. ಜನರು ನಕ್ಕೂ ನಕ್ಕೂ ಹಣ್ಣಾಗಿ ಬಿಟ್ಟರು. ಸಿಗರೇಟ್ ಸೇದುವವರು ಹೆಚ್ಚು ಕೆಮ್ಮಹತ್ತಿದರು. ತಂಬಾಕು ತಿನ್ನುವವರು ಗಂಟಲಿಗೆ

ಹಚ್ಚಿಕೊಂಡರು. ಅದೊಂದು ದೊಡ್ಡ ಪ್ರಕರಣವೇ ಆಗಿ ಹೋಯಿತು" ಎಂದು ಹೇಳಿತು ಗಿರಾಕಿ.

ನಾಗಪ್ಪನಿಗೆ ಈ ಪ್ರೇಕ್ಷಕವೃಂದದ ಹಾಸ್ಯರಸಸೇವನೆ ತಿಳಿಯಲಿಲ್ಲ.

"ಅಲ್ರೀ 'ಜಾನಕೀಪರಿಣಯ'ಕ್ಕೂ ಮುನಿಸಿಪಲ್ ಚುನಾವಣೆಗೂ ಏನು ಸಂಬಂಧ?" ಎಂದು ಕೇಳಿದ.

"ಅದ್ಯಾತಕ್ಕೆ ಸಂಬಂಧ ಬೇಕ್ರೀ! ವಿದೂಷಕ ಅಂದ್ರೆ ನಗಿಸುವ ಕೆಲಸ ಮಾಡೋವವ. ಅಷ್ಟು ಮಾಡಿದಾ ತೀರಿತು" ಎಂದು ಗಿರಾಕಿ ಒಳ್ಳೇ ಸಾಹಿತ್ಯಜ್ಞಾನಿಯಂತೆ ಹೇಳಿಬಿಟ್ಟ.

"ಸಂದರ್ಭವಿಲ್ಲದೆ ಹಾಸ್ಯರಸದ ಪರಿಣಾಮ ವಿಚಾರಿಗಳಿಗೆ ಸರಿಬರುವುದಿಲ್ಲ ಸ್ವಾಮಿ! ನಮ್ಮ ರಗಿನ ಪ್ರೇಕ್ಷಕವೃಂದಕ್ಕೆ ಏನಾದರೂ ನಗಲಿಕ್ಕೆ ಸಿಕ್ಕರಾಯಿತು, ನಕ್ಕು ಬಿಡುತ್ತಾರೆ. ಆದರೆ ಅದರಲ್ಲಿ ಸಾರಾಸಾರ ವಿಚಾರವಿರುವುದಿಲ್ಲ. ನೀವು ನಿಜವಾಗ ಹಾಸ್ಯಸಂದರ್ಭವನ್ನು ಕೇಳಲಿಚ್ಛಿಸಿದರೆ ನಾನು ಹೇಳಬಲ್ಲೆ; ಆದರೆ ತಮಗೆ ರುಚಿಸುವುದೋ...."

"ಇದೇನು ಮಾತ್ರೀ ನಾಗಪ್ನೋರೆ? ತಮ್ಮ ಕಥೀ ಎಂದಾದರೂ ಕೇಳದ್ಹಾಂಗ ಇರತಾವ್ರೆ?" ಎಂದು ಗಿರಾಕಿ ಹೇಳಿತು.

"ನಾನು ಈಗ ಹೇಳುವುದು ಕತೆಯಲ್ಲ ಸ್ವಾಮಿ! ನಮ್ಮ ತಂಗಿಯ ಮಗ ಸುಬ್ಬೂಗೆ ಸಿಕ್ಕ ಅನುಭವ!" ಎಂದು ನಾಗಪ್ಪ ಪುನಃ ತಾಂಬೂಲ ಸೇವಿಸುತ್ತ ಹೀಗೆ ಹೇಳಿದ :

"ನಮ್ಮ ತಂಗಿ ಚಿಕ್ಕಂದಿನಲ್ಲಿಯೆ ವಿಧವೆಯಾಗಿಬಿಟ್ಟದ್ದರಿಂದ ನನ್ನಲ್ಲಿಯೆ ಇರುತ್ತಿದ್ದಳು. ಅವಳಿಗೆ ಸುಬ್ಬೂ ಒಬ್ಬನೆ ಮಗ. ಸುಬ್ಬೂ ಕನ್ನಡ ಸಾಲೆಗೆ ಹೋಗುತ್ತಿದ್ದಾಗಲೆ ಅವನು ತನ್ನ ಭಾವೀ ಜೀವನದ ಮಾದರಿ ತೋರಿಸಹತ್ತಿದ. ಸಾಲೆಯಲ್ಲಿ ಎಲ್ಲ ಶಿಕ್ಷಕರ ಫಾರ್ಸು ಮಾಡುವುದು ಅವನಿಗೆ ಸ್ವಾಭಾವಿಕವಾಗಿಯೇ ಸಾಧಿಸಿತ್ತು. ಅಂತೆಯೆ ಮಿತ್ರಮಂಡಳಿಯಲ್ಲಿ ತುಂಬಾ ಆದರಕ್ಕೆ ಪಾತ್ರನಾಗಿದ್ದ. ಶಿಕ್ಷಕರು ಕ್ಲಾಸಿಗೆ ಬರುವುದು ತಡವಾಯಿತೆಂದರೆ ತೀರಿತು; ಸುಬ್ಬೂ ಅವರ ಕೆಲಸ ಸಾಗಿಸಿಬಿಡುತ್ತಿದ್ದ. ಇಂಗ್ಲೀಷ್ ಸಾಲೆಗೆ ಬಂದ ಮೇಲಂತೂ ಈ ಪಾತ್ರಸಾಧನೆ ತುಂಬಾ ಅಭ್ಯಾಸಮಾಡಿಬಿಟ್ಟಿದ್ದ. ಅವನ ಗೆಳೆಯರೆಲ್ಲ ಈ ವಿದ್ಯೆಗಾಗಿ ಆತನಿಗೆ 'ಪಾತ್ರಪಟು' ಎಂದು ಬಿರುದು ಕೊಟ್ಟಿದ್ದರು. ಸ್ಕೂಲ್ ಗ್ಯಾದರಿಂಗಿನಲ್ಲಿ ಆಗುವ ಎಲ್ಲ ನಾಟಕಗಳಲ್ಲಿಯೂ ಸುಬ್ಬೂ ವಿನೋದಪಾತ್ರ ವಹಿಸುತ್ತಿದ್ದ. ಐದನೆಯ ಈಯತ್ತೆಗೆ ಬರುವಷ್ಟರಲ್ಲಿ ಸಾಲೆಯ ಅಭ್ಯಾಸ ಬಿಟ್ಟು ಪಾತ್ರಪಟುತ್ವದಲ್ಲಿಯೆ ಹೆಚ್ಚು ವೇಳೆ ಕಳೆಯುತ್ತಿದ್ದ. ನಮ್ಮ ತಂಗಿ, ಮಗನ ವಿಷಯವಾಗಿ ತುಂಬಾ ಚಿಂತೆಯುಳ್ಳವಳಾಗಿದ್ದಳು. ಮೇಲಿಂದ ಮೇಲೆ ನನಗೆ 'ಎಲ್ಲಿಯಾದರೂ ಸಾಹೇಬರಿಗೆ ಹೇಳಿ ಒಂದು ವಿಲೇಜ ಪೋಸ್ಟಮನ್ ಕೆಲಸ ಕೊಡಿಸು' ಅಂತ ಹೇಳುತ್ತಿದ್ದಳು. ಸುಬ್ಬೂ ಸಾಲೆಯಲ್ಲಿ ಏನೂ ಕಲಿಯುತ್ತಿರಲಿಲ್ಲ. ತಾಯಿಯ ಮುಂದೆ ಏನನಾದರೂ ಹೇಳಿ ದುಡ್ಡು ಬಿಚ್ಚುತ್ತಿದ್ದ. ಪಾಪ, ಅವಳಿಗೇನು ಗೊತ್ತು? ಮಗಾ ಇಂಗ್ರಜಿ ಕಲೀತಾನೇ ಅಂತ ಅಲ್ಲಲ್ಲಿ ಕೂಡಿಟ್ಟ ಎಲ್ಲ ಹಣ ಕೊಟ್ಟುಬಿಡುತ್ತಿದ್ದಳು. ಸುಬ್ಬೂಗೆ ಚಹದ ಚಟ ಬಹಳ. ತಾಯಿಗೆ ಅವನು ತಿಂಗಳಿಗೊಮ್ಮೆ ಪುಸ್ತಕದ ಯಾದೀ ಮಾಡಿ ಹೇಳುತ್ತಿದ್ದ. ಒಂದು ದಿನ ತಂಗಿ ನನಗೆ ಆ ಯಾದೀ ತೋರಿಸಿದಳು. 'ತಿಂಗಳಿಗೊಮ್ಮೆ ಪುಸ್ತಕ ಬದಲಾಗುತ್ತವೇನು?' ಎಂದು ಕೇಳಿದಳು. ಸರಿ, ಯಾದಿಯಲ್ಲಿ ನನಗೂ ಕೂಡ ಓದಲಿಕ್ಕೆ ಬಾರದ ಅಕ್ಷರದಲ್ಲಿ ಏನೇನನೋ ಬರೆದಿದ್ದ. ನನ್ನ ಕೆಲಸ ನಿಮಗೆ ಗೊತ್ತಿದೆಯಷ್ಟೇ? ಸಾವಿರಾರು ತರದ ಜನರ ಕೈಬರೆಹವನ್ನು ನಾನು ಪತ್ರ ಹಂಚುವಾಗ ಓದಬೇಕಾಗುತ್ತದೆ; ಆದರೂ ನನಗೆ ಏನೂ ತಿಳಿಯಲಿಲ್ಲ. **"ಕಿರಾತಾರ್ಜುನೀ ಯುದ್ಧ", "ಸೆಕ್ಸಪೀರ ನಾಟಕ", "ಇಂಟ್ರೆಂಡಂಟ್"** ಅಂತ ಏನೇನೋ ಬರೆದುಬಿಟ್ಟಿದ್ದ. ನನಗೂ ಇಂಗ್ಲೀಷಿನಲ್ಲಿ ಅಷ್ಟು ಜ್ಞಾನವಿರಲಿಲ್ಲ. ಇದ್ದರೂ ಇದ್ದಿದ್ದಾವು ಪುಸ್ತಕ, ಅಂತ ಶಿಕ್ಷಕರನ್ನು ವಿಚಾರಿಸಿದಾಗ ಸುಬ್ಬೂನ ಸೋಗು ಹೊರಬಿತ್ತು. ಇನ್ನು ಇವನನ್ನು ಸಾಲೆಗೆ ಕಳಿಸಿ ಉಪಯೋಗವಿಲ್ಲವೆಂದು ತಿಳಿದು ನಮ್ಮ ತಂಗಿ, ಸುಬ್ಬೂನ್ನ ಎಲ್ಲಿಯಾದರೂ ಅಂಗಡಿಯಲ್ಲಿ ಕೆಲಸಕ್ಕೆ ಹಚ್ಚಬೇಕೆಂದು ನನಗೆ ಹೇಳಿದಳು.

"ಆ ಕಾಲಕ್ಕೆ ನಮ್ಮೂರಿಗೆ ಒಂದು ನಾಟಕ ಕಂಪನಿ ಬಂದಿತ್ತು. ಸುಬ್ಬೂ ಯಾವ ಮಾಯೆಯಿಂದಲೋ ಹೋಗಿ ಅದರ ಬೆನ್ನು ಹತ್ತಿಬಿಟ್ಟಿದ್ದ. ನಾನು ಹೋಗಿ ಎಷ್ಟು ತಿಳಿಸಿ ಹೇಳಿದರೂ ಕೇಳಲಿಲ್ಲ; ಕಂಪನಿಯ ಕೂಡ ಹೊರಟುಬಿಟ್ಟ. 'ಎಲ್ಲಿಯಾದರೂ ದುಡಿಯುವುದು. ಅಂಗಡಿಯೇನು, ಕಂಪನಿಯೇನು?' ಎಂದು ನಾನು ತಂಗಿಗೆ ಸಮಾಧಾನ ಹೇಳಿದೆ. ಅವಳಿಗೆ ಸ್ವಲ್ಪ ಸಮಾಧಾನವಾಯಿತು. ಸುಬ್ಬೂ ಮೇಲಿಂದಮೇಲೆ ಪತ್ರ ಬರೆಯುತ್ತಿದ್ದ. ತನ್ನ ಕಂಪನಿಯಲ್ಲಿ ತನಗೆ ಒಳ್ಳೇ ಸಂಬಳ ಸಿಗಹತ್ತಿದೆಯೆಂದೂ, ಎಲ್ಲರೂ ತನ್ನ ಪಾತ್ರಪಟುತ್ವಕ್ಕೆ ಮೆಚ್ಚಿಬಿಟ್ಟಿರುವರೆಂದೂ ಬರೆಯುತ್ತಿದ್ದ. 'ಸುಬ್ಬೂ ದಾರಿಗೆ ಹತ್ತಿಕೊಂಡ' ಎಂದು ನಮಗೆಲ್ಲ ಪೂರ್ಣ ಸಮಾಧಾನವಾಗಿತ್ತು. ಹೀಗಿರುವಾಗ ಒಂದು ದಿನ ಸುಬ್ಬೂನ ಪತ್ರ ಬಂತು. ಅದರಲ್ಲಿ ತಾನಿರುವ ಕಂಪನಿಯು ಯಾವುದೋ ಕಾರಣದಿಂದ ಒಡಕು-ಒಡಕಾಗಿ, ತನ್ನ ನೌಕರಿಗೆ ಬಾಧೆ ಬಂದಿದೆ ಎಂದು ಬರೆದಿದ್ದ. ನಮ್ಮ ನಾಟಕ ಕಂಪನಿಗಳ ವಿಷಯ ತಮಗೆ ಗೊತ್ತೇ ಇದೆಯಷ್ಟೇ? ಅದೇನೋ ಹೇಳುತ್ತಾರಲ್ಲ ಭೂಗೋಲಿಕ ಶಾಸ್ತ್ರಜ್ಞರು: ಈ ನಮ್ಮ ಪೃಥ್ವಿಯು ಮೊದಲು ಒಂದೇ ಒಂದು ಉರಿಯುವ ಸೂರ್ಯನ ಭಾಗವಾಗಿತ್ತಂತೆ. ಅನಂತರ ಜೋರಾಗಿ ತಿರುಗುತ್ತ ಅನೇಕ ಗ್ರಹಗಳೂ ಅದರ ಕೂಡ ಪೃಥ್ವಿಯೂ ಆದುವಂತೆ. ಅದರಂತೆಯೇ ನಮ್ಮ ಕಂಪನಿಗಳು ಊರೂರು ತಿರುಗುತ್ತ ಹೋದಹಾಗೆ, ಅವಕ್ಕೂ ಗ್ರಹಚಾರವೊದಗಿ ಒಂದಿದ್ದಲ್ಲಿ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಸೊನ್ನೆ ಅಂತ ಎಲ್ಲಾ ಬಯಲಾಗಿ ಬಿಡುತ್ತವೆ. ಅದು ಏನೇ ಇರಲಿ, ಸುಬ್ಬೂನಿಗೆ ಮಾತ್ರ ನಿರುದ್ಯೋಗ ಬಂತು. ಅಂದರೆ ನಮ್ಮ ಸುಬ್ಬೂ ಉದ್ಯೋಗಿ ಅಂತ ಹೇಳಿದಂತಾಗಲಿಲ್ಲ; ಪಾತ್ರಪಟುತ್ವ ಒಂದು ಬಿಟ್ಟು ಉಳಿದ ಯಾವ ಉದ್ಯೋಗದಲ್ಲಿಯೂ ಅವನಿಗೆ ಮನಸ್ಸಿರಲಿಲ್ಲ. ಈಗಲಾದರೂ ಆ

ಉದ್ಯೋಗ ಅವನಿಗೆ ಸಿಕ್ಕದಂತಾಯಿತು. ಬೇರೆಯ ಕಂಪನಿಗಳಿಗೆ ಹೋದರೂ ಅವೂ ಹೀಗೆಯೇ ಗ್ರಹಗತಿಯಿಂದ ಬಯಲಾಗುವುವೇ ಎಂದು ತಿಳಿದು ನಮ್ಮ ತಂಗಿ, ಮಗನಿಗೆ ಮನೆಗೆ ಬರಲಿಕ್ಕೆ ಬರೆಯಿಸಿಬಿಟ್ಟಳು. ಸುಬ್ಬ್ಯಾ ಬಂದ-ಬಿಟ್ಟ.

ಆಗ ಸುರುವಾಯಿತು ಸುಬ್ಬ್ಯಾನ ನಿಜವಾದ ಪರೀಕ್ಷೆ. ದಿನಾಲು ಮುಂಜಾನೆ ಎದ್ದವನೇ ಅಂಗಡಿಗಳಿಗೆಲ್ಲ ಹೋಗಿ ಅರ್ಜಿ ಮಾಡುವುದು. ನೌಕರಿ ಇದೆ ಎಂದು ಎಲ್ಲಿ ಸುದ್ದಿ ಹತ್ತುವುದೋ ಅಲ್ಲಿ ಹೋಗಿಬಿಡುವುದು. ಯಾವ ಸ್ಥಳದಲ್ಲಿಯೂ ಯಶಸ್ಸು ಬರಲಿಲ್ಲ. ಮೂರು ತಿಂಗಳ ವರೆಗೆ ಹುಡುಕಿದರೂ ಸುಬ್ಬ್ಯಾಗೆ ಎಲ್ಲಿಯೂ ಉದ್ಯೋಗ ಸಿಕ್ಕಲಿಲ್ಲ. ಹೋದ ಅಂಗಡಿಗಳಲ್ಲೆಲ್ಲ ಇವನಿಗೆ ಶುದ್ಧ-ಬರೆಹ ಹೇಳುತ್ತಿದ್ದರಂತೆ. ಸರಿ, ಸುಬ್ಬ್ಯಾ ಬರೆಯುವ ಅಕ್ಷರ ನನಗೂ ಓದಲಿಕ್ಕೆ ಸಾಧ್ಯವಿಲ್ಲವೆಂದು ನಿಮಗೆ ಈ ಮೊದಲೇ ಹೇಳಿದ್ದೇನಷ್ಟೇ? ಅಂಧಮೇಲೆ ಅಂಗಡಿಯ ಕಾರಕೂನಿಕೆ ಸಿಗುವುದು ಹೇಗೆ? ಅವನ ಅಕ್ಷರಗಳ ಕಲ್ಪನೆಯನ್ನು ನಿಮಗೆ ಕೊಡಬೇಕಾದರೆ ಸ್ವಲ್ಪ ಕಷ್ಟ. ನಮ್ಮ ಮುಸಲ್ಮಾನ್ ಬಾಂಧವರ ಮನೆಗಳ ಹೊರಗೋಡೆಗಳಿಗೆ ಕೆಮ್ಮಣ್ಣು ಹಚ್ಚಿ ಮೇಲೆ ಸುಣ್ಣದ ಅರಿವೆಯಿಂದ ನಿಂಪಡಿಸಿರುವುದನ್ನು ತಾವು ನೋಡಿರಬಹುದು. ನಮ್ಮ ಸುಬ್ಬ್ಯಾನ ಅಕ್ಷರಗಳು ಸಣ್ಣ ಪ್ರಮಾಣದ ಮೇಲೆ ಅಂತಹ ಚಿಹ್ನಗಳು. ಅಂತೂ ಇಂತೂ ಸುಬ್ಬ್ಯಾಗೆ ಉದ್ಯೋಗ ಸಿಗುವ ಯೋಗ ಕಾಣಿಸಲಿಲ್ಲ. ಈ ರೀತಿ ನಿರಾಶೆಯಿಂದ ಸುಬ್ಬ್ಯಾ ಒಂದು ದಿನ ಸಾಯಂಕಾಲ ಮನೆಗೆ ಬಂದಾಗ, ವರ್ತಮಾನಪತ್ರದಲ್ಲಿಯ ಒಂದು ಜಾಹೀರಾತನ್ನು ನೋಡಿದ:

"ಚಪಲನೂ, ಅಚ್ಚುಕಟ್ಟಾದವನೂ, ಸ್ವಲ್ಪ ಇಂಗ್ರೇಜಿ ಜ್ಞಾನವಿದ್ದವನೂ ಆದ ಒರ್ವ ತರುಣನು ಬೇಕಾಗಿದ್ದಾನೆ. ಸಂಬಳ ತಿಂಗಳಿಗೆ ಇಪ್ಪತ್ತು ರೂಪಾಯಿ. ಕೆಳಗಿನ ವಿಳಾಸಕ್ಕೆ ಬರೆಯಬೇಕು

ಮೆಸರ್ಸ ದಿಲ್‌ಖುಷ್ ಆ್ಯಂಡ ಕಂಪನಿ, ದಾದರ, ಬಾಂಬೆ"

ಸುಬ್ಬ್ಯಾಗೆ ನಮಸ್ಕಾರು ಸಾಕಾಗಿತ್ತು. ಮೊದಲೇ ಕಂಪನಿಯ ಕೂಡ ಊರೂರು ತಿರುಗಿ ಅವನಿಗೆ ಒಂದೇ ಜಾಗೆಯಲ್ಲಿರುವುದು ಸೇರುತ್ತಿರಲಿಲ್ಲ. ತಾಯಿಗೆ ಏನೇನನೋ ಹೇಳಿ ಗಾಡಿಯ ಚಾರ್ಜಿಗೆ ರೊಕ್ಕ ಬಿಚ್ಚಿಸಿ, ಮುಂಬಯಿಗೆ ಹೊರಟುಬಿಟ್ಟ. ದಾದರ್ ಸ್ಟೇಷನ್ನಿಗೆ ಬಂದು '**ದಿಲ್‌ಖುಷ್ ಆ್ಯಂಡ್ ಕಂಪನಿ**'ಯ ಕಡೆಗೆ ಹೊರಟ. ನಿಮಗೆ 'ದಿಲ್‌ಖುಷ್' ಕಂಪನಿಯ ಪರಿಚಯ ಮಾಡಿಕೊಡುವುದು ಅವಶ್ಯವಿದೆ. ಮೆಸರ್ಸ ದಿಲ್‌ಖುಷ್ ಕಂಪನಿಯವರು ಬೊಂಬಾಯಿಯ ಶ್ರೀಮಂತರಿಗೆ ಬೇಕಾಗುವ ಎಲ್ಲ ಸಾಮಾನುಗಳನ್ನೂ ಒದಗಿಸಿಕೊಡುವ ಏಜಂಟರು. ಮೋಟಾರ್‌ಕಾರಿನಿಂದ ಟೂಥ್‌ಬ್ರಶ್‌ವರೆಗೆ ಯಚ್ಚಾವತ್ ಪದಾರ್ಥಗಳನ್ನು ಸುಧಾರಕ ಶ್ರೀಮಂತವರ್ಗಕ್ಕೆ ನಿಯಮಿತ ವೇಳೆಗೂ ಗ್ಯಾರಂಟಿಯಾಗಿಯೂ ಒದಗಿಸಿಕೊಡುತ್ತಿದ್ದರು. ಅಂತೆಯೇ ಅವರ ಕಂಪನಿಯು ಬೊಂಬಾಯಿಯ ಎಲ್ಲ ದೊಡ್ಡ ಮನುಷ್ಯರ ಆದರಕ್ಕೂ ವಿಶ್ವಾಸಕ್ಕೂ ಪಾತ್ರವಾಗಿತ್ತು. ದಿನಾಲು ಗಿರಾಕಿಗಳ ಜಾತ್ರೆಯೆ ನೆರೆಯುತ್ತಿತ್ತು. ಎಷ್ಟು ಗಿರಾಕಿಗಳು ಬಂದರೂ ವೇಳೆಯನ್ನು ಹಾನಿ ಮಾಡದೆ, ಅವರಿಗೆ ಬೇಕಾದ ಪದಾರ್ಥಗಳನ್ನು ನೀಟಾಗಿ ಪ್ಯಾಕ್ ಮಾಡಿ, ತಮ್ಮ ಹಮಾಲರಿಂದಲೇ ಗಿರಾಕಿಗಳ ಮನೆಗೆ ತಲ್ಪಿಸಿ ಬಿಡುತ್ತಿದ್ದರು. ಇಂಥ ದೊಡ್ಡ ಕಂಪನಿಯ ಈ ಎಲ್ಲ ಕಾರ್ಯವೂ ಸುಸೂತ್ರವಾಗಿ ಸಾಗಲಿಕ್ಕೆ ಒಬ್ಬ ವ್ಯಕ್ತಿಯೇ ಜವಾಬ್ದಾರ. ಅವನ ಹೆಸರು ಖುಶೀರಾಮ. ಖುಶೀರಾಮನು ಕಂಪನಿಯ ಚೀಫ್ ಸ್ಟೋರ್‌ಕೀಪರ್. ಅವನಲ್ಲಿ ಕಂಪನಿಯವರ ವಿಶ್ವಾಸವೂ ಆದರವೂ ಬಹಳ. ಏಕೆಂದರೆ ಖುಶೀರಾಮನ ಕಾರ್ಯದಕ್ಷತೆಯೇ ಹಾಗಿತ್ತು. ಅವನು ಕೆಲಸಮಾಡುವ ರೀತಿ ಅನುಕರಣೀಯವಾದದ್ದು. ಎಲ್ಲ ಸಾಮಾನುಗಳ ಖರೀದಿಯಾಗಿ ಗಿರಾಕಿಗಳು ಹೊರಟಾಗ, ಖುಶೀ-ರಾಮನು ಕೊನೆಯ ಪರೀಕ್ಷೆ ಮಾಡಿ ಅವುಗಳನ್ನು ಗಿರಾಕಿಗಳಿಗೆ ಕಳಿಸುತ್ತಿದ್ದ. ಅಂತೆಯೇ ಕಂಪನಿಯವರು ಖುಶೀರಾಮನಿಗೆ ಕೈತುಂಬ ಸಂಬಳ ಕೊಟ್ಟಿಟ್ಟಿದ್ದರು. ಏಕೆಂದರೆ, ಬೊಂಬಾಯಿಯ ಶ್ರೀಮಂತ ಗಿರಾಕಿಗಳು ತುಂಬಾ ಚಿಗುಹಿನ ಜನರು. ತಾವು ಕೊಟ್ಟ ಆರ್ಡರಿನಲ್ಲಿ ಸ್ವಲ್ಪವಾದರೂ ಹೆಚ್ಚು ಕಡಿಮೆಯಾದರೆ ಅವರು ರುದ್ರರೂಪಿಗಳಾಗುತ್ತಿದ್ದರು; ಅಲ್ಲದೆ ಕಂಪನಿಯ ಆಶ್ರಯದಾತೃಗಳ ಯಾದಿಯಿಂದ ತಮ್ಮ ಹೆಸರನ್ನು ಮರಳಿ ತೆಗೆದುಕೊಂಡು ಬಿಡುತ್ತಿದ್ದರು. ಈ ವಿಷಯ ಪೂರ್ಣವಾಗಿ ಗೊತ್ತಿದ್ದ ಕಂಪನಿಯವರು ಖುಶೀ-ರಾಮನ ದಕ್ಷತೆಯಿಂದಲೆ ತಮ್ಮ ಕಂಪನಿಯು ಪ್ರಗತಿಯಾಗಿದೆಯೆಂದು ಭರವಸೆ ಇಟ್ಟು, ಅವನನ್ನು ಬಲವಾಗಿ ಉತ್ತೇಜಿಸುತ್ತಿದ್ದರು.

ಸುಬ್ಬ್ಯಾ ಕಂಪನಿಗೆ ಹೋದಾಗ ಖುಶೀರಾಮನನ್ನೇ ಕಂಡ; ತಾನು ಬಂದ ಕೆಲಸ ತಿಳಿಸಿದ. 'ಕಂಪನಿಯ ಮಾಲೀಕರು ಈಗ ಬರುವವರಿದ್ದಾರೆ' ಎಂದು ಹೇಳಿ ಖುಶೀರಾಮ ತನ್ನ ಕೆಲಸಕ್ಕೆ ಹೊರಟುಹೋದ. ಸುಬ್ಬ್ಯಾ ಕಂಪನಿಯ ಭವ್ಯವಾದ ಕಟ್ಟಡವನ್ನೂ ಅಲ್ಲಿರುವ ಬಗೆಬಗೆಯ ಪದಾರ್ಥಗಳನ್ನೂ ಬಾಂಬೇ ಪಟ್ಟಣದ ಶೃಂಗಾರವನ್ನೂ ನೋಡುತ್ತ ಕುಳಿತುಕೊಂಡ. 'ಇಂಥ ದೊಡ್ಡ ಕಂಪನಿಯಲ್ಲಿ ಕೆಲಸ ಸಿಗಬಹುದೇ ತನಗೆ?' ಎಂದು ಜಾಹೀರಾತಿನಲ್ಲಿದ್ದ ಮಾಹಿತಿಯನ್ನು ಪುನಃ ಓದಿಕೊಂಡ. "ಚಾಪಲ್ಯ, ಅಚ್ಚುಕಟ್ಟು" ತನ್ನಲ್ಲಿತ್ತು; ಆದರೆ ಆಂಗ್ಲಭಾಷೆಯ ಜ್ಞಾನ? ಸರಿ, ತಾನು ಶಾಲೆಯಲ್ಲಿದ್ದಾಗ '**ಪಾತ್ರಪಟುತ್ವ**' ಬಿಟ್ಟು ಇಂಗ್ಲಿಷ್ ಯಾಕೆ ಕಲಿಯಲಿಲ್ಲ ಎಂದು ಪಶ್ಚಾತ್ತಾಪಪಡಹತ್ತಿದ. ಆದರೂ ಅಷ್ಟರಮಟ್ಟಿಗೆ ಇಂಗ್ಲಿಷ್ ಬರುತ್ತದಲ್ಲಾ ಅಂತ ಧೈರ್ಯ ಹೇಳಿಕೊಂಡ. 'ಮುಖ್ಯ ಬರೆಯುವ ಕೆಲಸವಿರದಿದ್ದರಾಯಿತು, ಹೇಗಾದರೂ ಸಾಗಿಸಲು ಬಂದೀತು' ಎಂದು ಆಶಿಪಡುತ್ತ ಕುಳಿತುಕೊಂಡಾಗ ಒಂದು ಹೊಸ ಕಾರಿನಲ್ಲಿ ಇಬ್ಬರು ಗೃಹಸ್ಥರು ಕಂಪನಿಗೆ ಬಂದರು. 'ಮ್ಯಾನೇಜರು' ಅಂತ ಬರೆದ ಖೋಲಿಯಲ್ಲಿ ಹೊಕ್ಕರು. ಸರಿ, ಇವರೇ ತನಗೆ ಕೆಲಸ ಕೊಡುವವರು ಎಂದುಕೊಂಡು ಸುಬ್ಬ್ಯಾ ಅವರಲ್ಲಿ ಹೊರಟ, ಖೋಲಿಯ ಬಾಗಿಲಲ್ಲಿ ಹೋಗಿ 'ಇನ್ನು ಒಳಗೆ ಬರಲೇ?' ಎಂದು ಕೇಳುವಷ್ಟರಲ್ಲಿ ಒಬ್ಬ ಶ್ರೀಮತಿಯವರು ಮ್ಯಾನೇಜರರ ಆಫೀಸ್ ರೂಮಿನಲ್ಲಿ ಹೊಕ್ಕರು. 'ಇದಾವ ಗ್ರಹ ಬಂತಪ್ಪಾ ನೌಕರೀ ಹುಡುಕೋ ಕಾಲಕ್ಕೆ!' ಅಂತ ಸುಬ್ಬ್ಯಾ ಬಾಗಿಲಲ್ಲಿಯೇ ನಿಂತುಬಿಟ್ಟ. ಶ್ರೀಮತಿಯವರು

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ತುಂಬಾ ಕೋಪದಲ್ಲಿದ್ದರು. ಆಫೀಸಿನಲ್ಲಿ ಬಂದವರೇ ಮೇಜಿನ ಮೇಲಿಟ್ಟ ಗಂಟೆಯನ್ನು ಗಟ್ಟಿಯಾಗಿ ಬಾರಿಸಿಬಿಟ್ಟರು. ಮ್ಯಾನೇಜರನು ಬರುವುದು ಸ್ವಲ್ಪ ತಡವಾದ್ದರಿಂದ ಪುನಃ ಪುನಃ ಗಂಟೆಯನ್ನು ಬಾರಿಸುತ್ತ ಕಾಲಲ್ಲಿದ್ದ ವೇಸ್ಟ್‌ಪೇಪರ್ ಬುಟ್ಟಿಯನ್ನು ಒದ್ದು ಬಿಟ್ಟರು. ಅವರ ಮೋರೆಯ ಮೇಲೆ ಬಹಳೇ ಕೋಪದ ಕಳೆ ಇತ್ತು. ಏನೋ ನಿರ್ಧರಿಸಿಕೊಂಡು ಬಂದವರಂತೆ ಮ್ಯಾನೇಜರರನ್ನು ಕಾಣಲಿಕ್ಕೆ ಹವಣಿಸುತ್ತ ನಿಂತಿದ್ದರು. ಅಷ್ಟರಲ್ಲಿಯೆ ಮ್ಯಾನೇಜರರು ಬಂದರು.

"ಶ್ರೀಮತಿಯವರು ಕುಳಿತುಕೊಳ್ಳಬೇಕು. ನಾನು ಬರುವುದು ಸ್ವಲ್ಪ ತಡವಾದದ್ದಕ್ಕೆ ಕ್ಷಮೆ ಇರಲಿ" ಎಂದು ಮ್ಯಾನೇಜರನು ತುಂಬಾ ಭಯಭಕ್ತಿಯಿಂದ ಹೇಳಿ, ಒಂದು ಖುರ್ಚಿಯನ್ನು ತಾನೇ ಎತ್ತಿ ತಂದಿಟ್ಟನು.

"ನಾನು ಬಂದದ್ದು ಕೂಡಲಿಕ್ಕಲ್ಲ, ನಿಮ್ಮನ್ನು ಓಡಿಸಲಿಕ್ಕೆ!" ಎಂದು ಶ್ರೀಮತಿಯವರು, ತಂದಿಟ್ಟ ಖುರ್ಚಿಯನ್ನು ಒದ್ದು ಕೆಡಹಿ ಬಿಟ್ಟರು.

ಸುಬ್ಬ್ಯೂ ಬಾಗಿಲಲ್ಲಿ ನಿಂತು ಈ ನಾಟಕವನ್ನು ನೋಡಹತ್ತಿದ. ಮ್ಯಾನೇಜರನು ಸ್ವಲ್ಪ ಕೂಡ ಸಿಟ್ಟಿಗೇಳದೆ ಪುನಃ ಖುರ್ಚಿಯನ್ನು ಎತ್ತಿಟ್ಟು ತನ್ನಿಂದೇನಾದರೂ ತಪ್ಪಿದರೆ ಕ್ಷಮಿಸಬೇಕೆಂದು ಶ್ರೀಮತಿಯವರಿಗೆ ವಿನಂತಿಮಾಡಿಕೊಂಡ.

"ತಮಗೆ ಕಳುಹಿದ ಸಾಮಾನು ಬಂದು ಮುಟ್ಟಿದೆಯೇ? ಕಳಿಸುವುದು ಸ್ವಲ್ಪ ತಡವಾಯಿತು" ಎಂದು ಶ್ರೀಮತಿಯವರನ್ನು ಕೇಳಿದ.

"ಸಾಮಾನು ಮುಟ್ಟಿದೆ; ಆದರೆ ನಾನು ಆ ಸಾಮಾನು ಮುಟ್ಟುವಂತಿಲ್ಲ. ಅಹಹ! ಎಂಥಾ ಕಂಪನಿ ನಿಮ್ಮದು? ಒಳ್ಳೇ ಜಾಗ್ರತೆಯಾಗಿ ಆರ್ಡರು ಒದಗಿಸುತ್ತಾರೆಂದು ಬಲು ಛಾಪು ಹಾಕಿದ್ದೀರಿ ಜನರ ಮೇಲೆ. ಇದೇ ದಿನ ಟಾಯಿಮ್ಸ್ ಪತ್ರದಲ್ಲಿ ನಿಮ್ಮ ಕಂಪನಿಯ ರೀತಿಯನ್ನು ಬರೆದುಬಿಡುತ್ತೇನೆ. ಸೇಫ್ಟೀ ರೇಝರ್? ಸೇವ್ಹಿಂಗ್ ಸ್ಟಿಕ್? ವಾ.." ಅಂತ ಶ್ರೀಮತಿಯರು ಕೋಪದಲ್ಲಿ ಮತ್ತಿಷ್ಟು ಸಂದಿಗ್ಧರೀತಿಯಲ್ಲಿ ಮಾತನಾಡಹತ್ತಿದರು.

ಮ್ಯಾನೇಜರನಿಗೆ ಇವರ ಮಾತಿನ ಅರ್ಥವೇ ಆಗಲಿಲ್ಲ; ಶ್ರೀಮತಿಯವರು ತಮ್ಮ ಕಂಪನಿಯ ದೊಡ್ಡ ಆಶ್ರಯದಾತೃಗಳು. ಅವರು ಕಂಪನಿಗೆ ಬಾಯ್‌ಕಾಟ್ ಮಾಡಿದರೆ ಗತಿ? ಅಲ್ಲದೆ ಟಾಯಿಮ್ಸ್‌ನಲ್ಲಿಯೂ ಏನೋ ಬರೆಯುತ್ತಾರಂತೆ? ಏನಿದೆಲ್ಲ ಸಮಾಚಾರವೆಂದು ತುಂಬಾ ಭಯ-ಕುತೂಹಲಗಳಿಂದ ಶ್ರೀಮತಿಯವರನ್ನು ಪ್ರಶ್ನಿಸಿದ:

"ಶ್ರೀಮತಿಯವರು ಸಿಟ್ಟಾಗಬಾರದು. ತಮ್ಮ ಮಾತಿನ ಅರ್ಥವಾಗಲಿಲ್ಲ. ದಯವಿಟ್ಟು ಆದ ಅಪರಾಧವನ್ನು ತಿಳುಹಬೇಕು."

"ಇದೇ ಅಪರಾಧ ನೋಡಿ ನಿಮ್ಮದು; ಇದಕ್ಕೂ ದೊಡ್ಡದೇನಾದರೂ ಅಪರಾಧ ಮಾಡಲು ಶಕ್ಯವಿದೆಯೇ ನೀವೇ ವಿಚಾರಿಸಿರಿ" ಎಂದು ಕೈಯಲ್ಲಿಯ ಒಂದು ಪ್ಯಾಕನ್ನು ಮೇಜಿನ ಮೇಲೆ ಒಗೆದರು.

ಸುಬ್ಬ್ಯೂ ಇಣಿಕಿ ನೋಡುತ್ತಿದ್ದ; ಮ್ಯಾನೇಜರನು ಪ್ಯಾಕ್ ತೆಗೆದು ನೋಡಿದ. ಅದರಲ್ಲಿ ಒಂದು ಸೇಫ್ಟೀ ರೇಝರ್, ಶೇವಿಂಗ್ ಸ್ಟಿಕ್, ಬ್ರಷ್ ಮೊದಲಾದ ಚೌಲಕರ್ಮದ ಸಾಮುಗ್ರಿಗಳಿದ್ದುವು. ಮ್ಯಾನೇಜರು ಗಾಬರಿಗೊಂಡ.

"ನೋಡಿದಿರಾ ನಿಮ್ಮ ಅಪರಾಧ? ನಾನು ನಿನ್ನೆ ಕೊಟ್ಟ ಆರ್ಡರಿಗೆ ಈ ಸಾಮಾನು ಬಂದಿವೆ. ಅವು ಬಂದಾಗ ನಾನೊಬ್ಬಳೇ ಇದ್ದಿದ್ದರೆ ಅಷ್ಟು ಚಿಂತೆಯಿರಲಿಲ್ಲ. ನಮ್ಮ ಮಿತ್ರಮಂಡಳಿ ಚಹಾ ಪಾರ್ಟಿಗೆ ಬಂದಿದ್ದರು. ಅದೇ ಕಾಲಕ್ಕೆ ನಿಮ್ಮ ಹಮಾಲ ಈ ಪ್ಯಾಕ್ ತಂದುಕೊಟ್ಟ. ಒಳಗಿದ್ದ ಪದಾರ್ಥದ ಜ್ಞಾನವಿಲ್ಲದೆ ಪ್ಯಾಕು ಅಲ್ಲಿಯೆ ಒಡೆದು ನೋಡಿದೆ. ರೇಝರು! ಬ್ರಷ್! ಆಗ ನೋಡಬೇಕಾಗಿತ್ತು ನೀವು ನನ್ನಸ್ಥಿತಿ. ನಮ್ಮ ಮಿತ್ರಮಂಡಳಿಯೆಲ್ಲ ಕುಸು-ಕುಸು ಮಾತನಾಡಹತ್ತಿದರು. 'ಶ್ರೀಮತಿಯವರು ಎಂದಿನಿಂದ ಈ ಸಾಮಾನಿನ ಉಪಯೋಗ ಸುರುವು ಮಾಡಿದ್ದಾರೆ' ಅಂತ ಒಬ್ಬರು; 'ಶ್ರೀಮತಿಯರು ಶ್ರೀಮಾನರನ್ನೂ ಹುಡುಕಿದಂತೆ ಕಾಣುತ್ತದೆ' ಅಂತ ಮತ್ತೊಬ್ಬರು; 'ಛೇ, ಛೇ, ಇಂಥಾ ಆಕಾರ-ವಿಕಾರವುಳ್ಳವರಿಗೆ ಇನ್ನೂ ವಿವಾಹದ ಹುಚ್ಚೇ' ಎಂದು ಮೂರನೆಯವರು; 'ಆದರಲ್ಲೇನ್ರಿ, ಅವರ ಆಕಾರಕ್ಕೇನು ಬಂದಿದೆ? ದುಡ್ಡಿದೆಯಲ್ಲಾ ದುಡ್ಡು; ಅದಕ್ಕೆ ವರರು ಸಿಗುತ್ತಾರೆ' ಅಂತ ಇನ್ನೊಬ್ಬರು. ಹೀಗೇ ಕೂಡಿದ ಗೆಳೆಯರೆಲ್ಲ ನನ್ನ ವಿಡಂಬನ ಮಾಡಿ

ಬಿಟ್ಟರು. ಈ ಅಬ್ದುಲುಕ್ಸಾನು ಏನು ಕೊಟ್ಟರೆ ತುಂಬಿ ಬಂದೀತು.... " ಎಂದು ತುಂಬಾ ಕೆಂಪಾದ ಕಣ್ಣಿನಿಂದ ಮ್ಯಾನೇಜರನನ್ನು ನುಂಗಿಬಿಟ್ಟರು.

" ಶ್ರೀಮತಿಯವರು ಸಮಾಧಾನ ತಳೆಯಬೇಕು; ಎಲ್ಲಿಯೋ ಪ್ಯಾಕು ತಪ್ಪಿ ತಮಗೆ ಬಂದಿದೆ. ಇದೇ ಈಗ ವಿಚಾರಿಸುವೆನು. ಸ್ವಲ್ಪ ಕುಳಿತುಕೊಳ್ಳಬೇಕು " ಎಂದು ಪುನಃ ಖುರ್ಚಿಯನ್ನು ತಂದಿಟ್ಟ.

" ನಿಮ್ಮ ಚೀಫ್ ಸ್ಟೋರ್ಸ್ ಇನ್ಸ್‌ಪೆಕ್ಟರ್ ಯಾರು? " ಎಂದು ಶ್ರೀಮತಿಯರು ಪುನಃ ಖುರ್ಚಿಯನ್ನು ಒದೆದು ಟೊಂಕದ ಮೇಲೆ ಕೈಯಿಟ್ಟುಕೊಂಡು ತುಂಬಾ ಬಿಗುಹಾಗಿ ನಿಂತುಕೊಂಡು ಕೇಳಿದರು.

" ಮಿಸ್ಟರ್ ಖುಶೀರಾಮ ಎಂಬವರು " ಎಂದು ಮ್ಯಾನೇಜರು ಹೇಳಿದ.

" ಅವನನ್ನು ಇದೇ ಕ್ಷಣ ನನ್ನೆದುರಿನಲ್ಲಿಯೇ ಕೆಲಸದಿಂದ ಕಿತ್ತಿ ಹಾಕಿದ ವಿನಾ ನಾನು ಇಲ್ಲಿಂದ ಹೊರಡುವುದಿಲ್ಲ. ಇಲ್ಲವಾದರೆ . . . ." ಎಂದು ಶ್ರೀಮತಿಯವರು ಗುಡುಗಿದರು.

ಆಗಿನ ಮ್ಯಾನೇಜರನ ಮುಖವನ್ನು ನಮ್ಮ ಸುಬ್ಬ್ಯಾ ವರ್ಣಿಸಿ ಹೇಳಿದಾಗ ನಾವೆಲ್ಲ ನಕ್ಕು ನಕ್ಕು ಬಿಕ್ಕಹತ್ತಿದ್ದೆವು.

" ಆದರೆ ಶ್ರೀಮತಿಯವರೆ, ಖುಶೀರಾಮ ಹೋದರೆ ನಮ್ಮ ಕಂಪನಿಯೇ ಬಂದು! ಏನಾದರೂ ದಂಡ ಮಾಡಿರಿ; ಆದರೆ ಕೆಲಸದಿಂದ ಮಾತ್ರ ಅವನನ್ನು ತೆಗೆಯುವ ಹಾಗಿಲ್ಲ! " ಎಂದು ಮ್ಯಾನೇಜರನು ದೈನ್ಯದಿಂದ ಹೇಳಿದ.

" ನಿಮಗೆ ಖುಶೀರಾಮ ಬೇಕೋ, ನನ್ನ ಆರ್ಡರು ಬೇಕೋ ? ಈ ಪ್ರಶ್ನೆಗೆ ಉತ್ತರ ಮೊದಲು ಬರಲಿ!" ಎಂದು ಶ್ರೀಮತಿಯವರು ಕೊನೆಯ ಮಾತೆಂದು ಕೇಳಿಬಿಟ್ಟರು.

ಇದಕ್ಕೇನು ಉತ್ತರ ಕೊಡಬೇಕೆಂದು ಮ್ಯಾನೇಜರನು ವಿಚಾರದಲ್ಲಿದ್ದಾಗ ಮತ್ತೊಂದು ಗಿರಾಕಿ ಪ್ರವೇಶಿಸಿತು. ಬಂದವರು ತೆಳುವಾದ ಮೈಯ ಸಾಹೇಬರು. ಬಲ್ಲೆಯ ಆವೇಶದಿಂದ ಒಳ ಹೊಕ್ಕರು. ಕೂಡಲೆ ಕೈಯಲ್ಲಿದ್ದ ಪ್ಯಾಕ್ ಒಂದನ್ನು ಮ್ಯಾನೇಜರನ ಮುಖದ ಮೇಲೆ ಒಗೆದುಬಿಟ್ಟರು.

" ಇದೇನು ಕಾಣುತ್ತದೋ ನಿಮಗೆ? " ಎಂದು ಹೊಸ ಗಿರಾಕಿ ತುಂಬಾ ಸಿಟ್ಟಿನಿಂದ ಕೇಳಿದ.

ಮ್ಯಾನೇಜರನಿಗೆ ಹುಚ್ಚು ಹಿಡಿದಂತಾಯಿತು. ಶ್ರೀಮತಿಯವರು ಕೊಟ್ಟ ಆರ್ಡರು ಸಾಹೇಬರಿಗೆ ಹೋಗಿರಲಿಕ್ಕೆಬೇಕು ಎಂದು ಕೂಡಲೇ ತಿಳಿದುಕೊಂಡು ಪ್ಯಾಕ್ ಒಡೆದುಬಿಟ್ಟರು. ಸರಿ, ತರ್ಕ ಸತ್ಯವಿತ್ತು. " Slimming Pills " ದ ನಾಲ್ಕು ಬಾಟ್ಲಿಗಳಿದ್ದುವು. ತಮಗೆ ಗೊತ್ತಿರಬಹುದು ಈ ಪಿಲ್ಸ್ ಎಂಥವು ಅಂತ. ಸಣ ಹೆಚ್ಚಾಗಿ ಭೂಭಾರವಾಗಿದ್ದ ಮಾನವರನ್ನು ಸೀರಾಗಿ ಮಾಡುವ ಪೇಟೆಂಟ್ ಗುಳಿಗೆ ಅವು! ಸುಬ್ಬ್ಯಾ, ಶ್ರೀಮತಿಯವರ ಆಕಾರ ನೋಡಿ ಗುಳಿಗೆಗೆ ಆರ್ಡರು ಮಾಡಿದ್ದು ಸಹಜವೇ ಎಂದು ಹೇಳಿಕೊಂಡ. ಅಷ್ಟರಲ್ಲಿ ಸಾಹೇಬರು ಗರ್ಜಿಸಿದರು.

" ಈ ಗುಳಿಗೆಯನ್ನು ತಿಂದು ನಾನು ಇನ್ನೆಷ್ಟು ಸೀರಾಗಬೇಕೆಂದು ಮಾಡಿದ್ದೀರಿ ನೀವು? ಈಗಾಗಲೇ ನಮ್ಮ ಡಾಕ್ಟರರು ನನಗೆ ಸ್ವಲ್ಪ ಲಠ್ಠವಾದರೆ ಒಳ್ಳೆಯದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಗುಳಿಗೆ ತಿಂದುಬಿಟ್ಟರೆ ನನಗೆ ಏರೋಪ್ಲೇನ್ ಕೂಡ ಬೇಕಾಗಿಲ್ಲ. ಸಹಜವಾಗಿ ಆಕಾಶದಲ್ಲಿ ಹಾರಿಹೋಗಬಹುದು. ಏನಿದರ ಅರ್ಥ? " ಎಂದು ಶ್ರೀಮತಿಯವರ ಕಡೆಗೆ ನೋಡಿದರು.

' ಒಹೋ ' ಎಂದುಕೊಂಡರು. ಮೇಜಿನ ಮೇಲಿದ್ದ ಪ್ಯಾಕ್ ಪುನಃ ತೆಗೆದುಕೊಂಡು, ಶ್ರೀಮತಿಯವರಿಗೆ ಕೊಟ್ಟು ಹೀಗೆಂದರು.

" ಕ್ಷಮಿಸಬೇಕು ಶ್ರೀಮತಿಯವರು. ಈ ನನ್ನ ಚಿಕ್ಕ ಪಾರಿತೋಷಕದಿಂದ ತಮಗೆ ಹಿತವಾಗಬಹುದು " ಎಂದುಬಿಟ್ಟರು.

ಶ್ರೀಮತಿಯವರು ಮತ್ತಿಷ್ಟು ರೇಗಿದರು. ಏಕೆಂದರೆ ಸ್ವತಃ ದಪ್ಪವಾಗಿದ್ದರೂ ತಾವು ಔಷಧಿ ತೆಗೆದುಕೊಳ್ಳುತ್ತಿದ್ದೇವೆಂಬುದು ಜನರಿಗೆ ತಿಳಿಯಬಾರದೆಂದು ಅವರ ಇಚ್ಛೆ. ಈಗಲಾದರೋ ತಮ್ಮ ಗೌಪ್ಯಟ್ರೀಟ್‌ಮೆಂಟ್ ಪ್ರಸಿದ್ಧವಾಗಿಬಿಟ್ಟಿತು.! ಇನ್ನು ತಡೆಯುವುದಾಗಲಿಲ್ಲ. ಯಾವುದಕ್ಕಾದರೂ ಮಿತಿ ಇದೆ ನೋಡಿ, ಶ್ರೀಮತಿಯವರ ಸಹನಕ್ಕೆ ಇನ್ನು ಆಸ್ಪದ ಉಳಿಯಲಿಲ್ಲ.

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರ ಮಾಸಪತ್ರಿಕೆ

ಪನವೇಲದ ಧೂತಪಾಪೇಶ್ವರ ಕಂಪನಿಯ ಕನ್ನಡ ಮುಖಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಏಜೆನ್ಸೀಜ್, ಹುಬ್ಬಳ್ಳಿ.

" ಆ ಗುಳಿಗೆಯನ್ನು ತಿಂದು ನೀವು ಹಾರಿಹೋದರೆ ಪೃಥ್ವಿಯಲ್ಲಿ ಒಬ್ಬ ನಿರ್ಲಜ್ಜ ಮಾನವನ ಸಂಬರು ಇಲ್ಲದಂತಾಗುವುದು. ಅದು ನಾಗರಿಕತೆಗೆ ಕ್ಷೇಮವೇ! " ಎಂದು ಪುನಃ ಪ್ಯಾಕನ್ನು ಸಾಹೇಬರ ಮೋರೆಗೆ ಒಗೆದು, ಶ್ರೀಮತಿಯವರು ಮ್ಯಾನೇಜರನನ್ನು ಗದ್ದರಿಸಿದರು.

" ಏನಂದಿರಿ ನನ್ನ ಪ್ರಶ್ನೆಗೆ ? ನಾನು ಬೇಕೋ, ನಿಮ್ಮ ಹುಶೀರಾಮ ಬೇಕೋ ? "

" ಖುಶೀರಾಮ ಅವನ ಹೆಸರು ಶ್ರೀಮತಿಯವರೇ." ಎಂದು ಮ್ಯಾನೇಜರನು ಸೂಚಿಸಿದ.

" ಯಾವ ರಾಮನೇ ಇರಲಿ, ನನ್ನ ಪ್ರಶ್ನೆಗೆ ಉತ್ತರ?" ಎಂದು ಹಟಕ್ಕೇ ನಿಂತರು.

ಮ್ಯಾನೇಜರನು ವಿಚಾರಿಸಿದ: 'ಖುಶೀರಾಮನಂಥವನನ್ನು ಹುಡುಕುವುದು ದುಃಸಾಧ್ಯವಾದರೂ ಅಸಾಧ್ಯವಲ್ಲ' ಅಂದುಕೊಂಡ. 'ಆದರೆ ಶ್ರೀಮತಿಯವರಂಥ ಗಿರಾಕಿ? ಛೇ, ಛೇ, ಐವಂಕಿಯ ಚಿಕ್ಕನ ಗಿರಾಕಿ ಇದು. ಬಿಟ್ಟರೆ ಹೇಗಾದೀತು' ಎಂದು ಕಷ್ಟದಿಂದ ನಿರ್ಧರಿಸಿ, ಉಪಾಯವಿಲ್ಲವೆಂದು ಖುಶೀರಾಮನನ್ನು ಫೋನಿನಲ್ಲಿ ಕರೆದ.

" ಹಾಜರ್ ಹುಜೂರ್ "ಎಂದು ಉತ್ತರ ಬಂತು; ಅದರೊಂದಿಗೆ ಸ್ಟೋರ್ಸ್‌ಮನ್ ಬಂದ.

" ಇವನೇ ನಿಮ್ಮ ಸ್ಟೋರ್ಸ್‌ಮನ್ ? " ಎಂದು ಶ್ರೀಮತಿ ಕೇಳಿದರು.

" ಅಹುದು ಶ್ರೀಮತಿಯವರೇ. ಅವರೂ ದಯೆಯಿಟ್ಟು. . . .'

" ದಯೆ-ಮಾಯೆ ನಿಮ್ಮಲ್ಲಿ ತೋರಿದರೆ ನಮ್ಮ ಮರ್ಯಾದೆ ಎಲ್ಲಿ? ಹೂ, ಬರಲಿ ನಿಮ್ಮ ಆರ್ಡರು ಬರತರ್ಫಿನದು " ಎಂದು ಶ್ರೀಮತಿಯವರು ಪುನಃ ಗರ್ಜಿಸಿದರು.

" ಖುಶೀರಾಮ, ನೀನು ಇಂದಿನಿಂದ ಕಂಪನಿಯ ನೌಕರನಲ್ಲ. ನಿನ್ನ ದುರ್ಲಕ್ಷ್ಯದಿಂದ ಶ್ರೀಮತಿಯವರ ಹಾಗೂ ಸಾಹೇಬರ ಮರ್ಯಾದೆ ಹೋಗಿದೆ. ನಿನ್ನ ಸಂಬಳದ ಚೆಕ್ಕು ತೆಗೆದುಕೋ" ಎಂದು ಮ್ಯಾನೇಜರು ಚೆಕ್ಕು ಬರೆದುಕೊಟ್ಟು ಉಸ್ಸೆಂದು ಕುಳಿತುಬಿಟ್ಟ. 'ಇಲ್ಲಿಗೆ ಮುಗಿಯಿತು ನಮ್ಮ ಕಂಪನಿಯ ಪ್ರಗತಿ' ಎಂದುಕೊಂಡು ದೀರ್ಘವಾದ ಚಿಂತೆಯಲ್ಲಿ ಬಿದ್ದ.

" ಆಗಬಹುದು ಹುಜೂರ್ " ಎಂದು ಖುಶೀರಾಮ ಹೊರಟು ಹೋದ.

ಶ್ರೀಮತಿಯವರೂ-ಸಾಹೇಬರೂ ಸಮಾಧಾನವಾಗಿ ತಂತಮ್ಮ ಮೋಟಾರು ಹತ್ತಿದರು.

ಅಷ್ಟರಲ್ಲಿ ಖುಶೀರಾಮನು ಲಗುಬಗೆಯಿಂದ ಬಂದು " ಏತಕ್ಕೆ ಕರೆದದ್ದು ಹುಜೂರ್, ಬರಲಿಕ್ಕೆ ತಡವಾಯಿತು " ಎಂದು ಮ್ಯಾನೇಜರನನ್ನು ಕೇಳಿದ. ಮ್ಯಾನೇಜರನಿಗೆ ಪುನಃ ದಿಗಿಲು ಬಿತ್ತು. ಇದೇ ಈಗ ನೌಕರಿಯಿಂದ ಬರತರ್ಫು ಮಾಡಿಸಿಕೊಂಡ ಖುಶೀರಾಮ ಪುನಃ ಹೇಗೆ ಬಂದ? ತಮ್ಮ ತಲೆ ನೆಟ್ಟಗಿದೆಯೋ ಇಲ್ಲವೋ ಎಂದು ಮುಟ್ಟಿಕೊಂಡು ನೋಡಿದರು. ಇದ್ದಲ್ಲಿಯೇ ಇತ್ತು ತಲೆ. ಇದೇನು ಕನಸೋ ಎಂದುಕೊಂಡರು. ಶ್ರೀಮತಿಯವರು ಒಗೆದ ಖರ್ಚಿ ಹಾಗೆಯೇ ಬಿದ್ದಿತ್ತು. ಸರಿ ಇದು ಕನಸಲ್ಲ ಎಂದು ನಿರ್ಧರಿಸಿಕೊಂಡರು. ಖುಶೀರಾಮನನ್ನು ದಿಟ್ಟಿಸಿನೋಡಿ ಪ್ರಶ್ನಿಸಿದನು.

" ನಿನಗೆ ಅಣ್ಣ ತಮ್ಮಂದಿರೆಷ್ಟು ಜನ ? "

" ನಾನೊಬ್ಬನೇ ಮಗ ಹುಜೂರ್ ನಮ್ಮ ತಂದೆತಾಯಿಗಳಿಗೆ " ಎಂದು ಖುಶೀರಾಮ ಹೇಳಿದ.

" ಹಾಗಾದರೆ ಇದೇ ಈಗ ಇನ್ನೊಬ್ಬ ಖುಶೀರಾಮನನ್ನು ಬರ್ತರ್ಫುಮಾಡಿ ಕಳಿಸಿದೆನಲ್ಲಾ ? "

ಆಗ ಹಾಜರ್ ಆದವ ಸುಬ್ಬೂ. ಶ್ರೀಮತಿಯವರ ನಾಟಕವನ್ನು ನೋಡಿಕೊಂಡು ಮ್ಯಾನೇಜರನನ್ನು ಉಳಿಸಿಕೊಳ್ಳುವುದಕ್ಕೆ ಖುಶೀರಾಮನ ವೇಷ ಧರಿಸಿ ಬಾಮಬಿಟ್ಟಿದ್ದ. 'ಪಾತ್ರಪಟುತ್ವ' ಸಂಪೂರ್ಣ ಸಾಧಿಸಿಬಿಟ್ಟಿದ್ದ. ಮ್ಯಾನೇಜರನಿಗೂ ಖುಶೀರಾಮನಿಗೂ ಯಾರಿಗೂ ತಪ್ಪು ತೆಗೆಯಲು ಬರುವಂತಿರಲಿಲ್ಲ. ಅಷ್ಟೊಂದು ಬದಲಿಸಿಬಿಟ್ಟಿದ್ದ.

" ನೀನು ಯಾರು ? " ಎಂದು ಮ್ಯಾನೇಜರು ಕೇಳಿದ.

ಆಗ ಸುಬ್ಬೂ ತಾನು ಬಂದ ಕಾರ್ಯವನ್ನೂ, ನೋಡಿದ ನಾಟಕವನ್ನೂ, ಅದರಲ್ಲಿ ತಾನು ವಹಿಸಿದ ಪಾತ್ರವನ್ನೂ ವಿಸ್ತರಿಸಿ ಹೇಳಿದ. ಮ್ಯಾನೇಜರನಿಗೆ ಹಿಡಿಸಲಾರದ ಆನಂದ. 'ಖುಶೀರಾಮನೂ ಉಳಿದ, ಶ್ರೀಮತಿಯವರೂ ಉಳಿದರು' ಅಂದುಕೊಂಡ. ಸುಬ್ಬೂನಿಗೆ ದೊಡ್ಡ ಜಾಗೆಯನ್ನೇ ಕೊಟ್ಟುಬಿಟ್ಟ. ಈಗ ಸುಬ್ಬೂ ಅದೇ ಕಂಪನಿಯಲ್ಲಿ ಅಸಿಸ್ಟಂಟ್ ಸ್ಟೋರ್‌ಕೀಪರ್ ಆಗಿದ್ದಾನೆ. ಮೊನ್ನೆ ಪತ್ರಬಂದಿದೆ: ನೂರು ರೂಪಾಯಿ ಸಂಬಳವಂತೆ " ಎಂದು ಹೇಳಿ ನಾಗಪ್ಪ ಸುಬ್ಬೂನ 'ಪಾತ್ರಪಟುತ್ವ' ಮುಗಿಸಿದ.

ಗಿರಾಕಿಗಳು ನಾಗಪ್ಪನ ಕತೆಗೆ ತುಂಬಾ ಮೆಚ್ಚಿ ಮತ್ತೊಂದು ಟೀ ಆರ್ಡರು ಮಾಡಿಬಿಟ್ಟರು. ಡಿಕ್ಕಿಗೂ ಬಿಸ್ಕೀಟು ಸಿಕ್ಕವು. ಎಲ್ಲರೂ ನಿಧಾನವಾಗಿ ಚಹಕುಡಿದು ತಮ್ಮ ಮನೆಗೆ ಹೊರಟರು.

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !



೪ ಆಣೆಗೆ ೧೦ ಬ್ಲೇಡು !

ವೇದವು ಈಶ್ವರನ ಪ್ರೇಮ ಸಂದೇಶ!

★

ಶ್ರೀ. ಎಂ. ಜಯತೀರ್ಥಶರ್ಮಾ
ಸುರಪುರ

ಅವರಿಂದ

ಸುಧಾರಕರೊಬ್ಬರ ಪೂರ್ವ ಪಕ್ಷಕ್ಕೆ ಸನಾತನಿಗಳೊಬ್ಬರು ಕೊಟ್ಟ ಉತ್ತರವಿದು! ವೇದಗಳ ವಿಷಯದಲ್ಲಿ ಸನಾತನಿಗಳ ಅಭಿಪ್ರಾಯವೇನಿರುವುದೆಂಬುದನ್ನು ಅರಿತುಕೊಳ್ಳುವುದೂ ಪ್ರತಿಯೊಬ್ಬ ಸುಶಿಕ್ಷಿತನ ಕರ್ತವ್ಯವಾಗಿದೆ. ಇಂದಿನ ಸಂಕ್ರಮಣ ಕಾಲದಲ್ಲಿ ಪ್ರತಿಯೊಂದು ವಿಚಾರವನ್ನೂ ಮಂಥನ ಮಾಡಬೇಕಾಗಿದೆ; ಹಾಗೆ ಮಂಥನ ಮಾಡಲಿಕ್ಕೆ ಬಲಗೈ ಎಡಗೈ ಎರಡೂ ಬೇಕೇ ಬೇಕು!

★

ಜಗತ್ತಿನಲ್ಲಿ ಸತ್ಯವಸ್ತುವೊಂದೇ; ಅದು ನಿತ್ಯ; ಪ್ರೇಮಸ್ವರೂಪ; ವಿಜ್ಞಾನಮಯ. ಅದರ ಸ್ವರೂಪವನ್ನು ಅನೇಕರು ಅನೇಕ ರೀತಿಯಿಂದ ಪ್ರೇಮಮಯವಾಗಿಯೇ ಕಾಣುತ್ತಾರೆ. ಒಬ್ಬ ಕಂಡ ಸತ್ಯ ಇನ್ನೊಬ್ಬನಿಗೆ ಅಸತ್ಯವಾಗಿ ಕಂಡರೂ ಅವನು ಕಂಡ ನಿತ್ಯವಸ್ತು ಸತ್ಯವೇ! ಅದರ ಸಂದೇಶ ಯಾವ ಪರಿಸ್ಥಿತಿಯಲ್ಲಿಯೂ ಸತ್ಯ! ಪ್ರೇಮಮಯ! ಸನಾತನ!!! ಇವನಿಗದು ಭ್ರಾಂತಿ, ಕಲ್ಪನೆ; ಇವನ ದೃಷ್ಟಿಗದು ಅಸತ್ಯ.

ಮೇ ತಿಂಗಳಿನ 'ಜಯಂತಿ' ಸಂಚಿಕೆಯಲ್ಲಿ ಶ್ರೀಯುತ ರಂಗನಾಥ ನೆಗಳೂರರು "ಅಪೌರುಷೇಯಾಃ ವೇದಾಃ" ಎಂಬ ತಲೆಬರೆಹದ ಕೆಳಗೆ ವೇದಗಳ ನಿರುಪಯುಕ್ತತೆಯನ್ನು ಸಿದ್ಧಾಂತಪಡಿಸಿದ್ದಾರೆ. ವೇದಗಳು ಉಪಯೋಗಕ್ಕೆ ಬಾರದುವುಗಳೆಂದು ತಮ್ಮ ದೃಷ್ಟಿಯಿಂದ ವಿವೇಚನೆ ಮಾಡಿ ಸಮಾಜದ ಮುಂದಿಟ್ಟಿದ್ದಾರೆ. ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನೂ, ನನ್ನ ವಿಚಾರವನ್ನೂ, ನಾನೂ ಸಮಾಜದ ಮುಂದಿಡಬಯಸುತ್ತೇನೆ.

ವೇದದ ಅಪ್ಪಣೆಯನ್ನು ಪಾಲಿಸುವುದು ನಮಗೀಗ ಬಹು ದುಃಸಾಧ್ಯದ ಕೆಲಸವಾಗಿದೆ. ಆದರಂತೆ ನಡೆಯುವುದು ದಡ್ಡತನವೆಂದು 'ಯಾರೂ ಹೇಳಿಲ್ಲ;' ನಮಗೇ ತಿಳಿದಿದೆ. ಇದಕ್ಕೆ ಮುಖ್ಯಕಾರಣವೆಂದರೆ ನಮ್ಮ ಶಿಕ್ಷಣ ಮತ್ತು ಸಹವಾಸ. ನಮ್ಮನ್ನು ಅಡ್ಡಹಾದಿ ಹಿಡಿಸಲಿಕ್ಕೆ ಇವೆರಡೇ ಸಾಕು. ಇದರಿಂದ ನಮ್ಮ ವಾತಾವರಣವೇ ಕೆಟ್ಟಂತಾಗಿದ್ದು, ನಮ್ಮ ಸಮಾಜದ ಬಿಗುಹು ಸಡಿಲಿಹೋಗಿದೆ. ನಮ್ಮ ಆಚಾರ-ವಿಚಾರಗಳು ಧರ್ಮದ ಕಟ್ಟಳೆಗಳನ್ನು ಎಂದೋ ಬೀಸಾಡಿಬಿಟ್ಟಿವೆ. ವಿಚಾರಕ್ರಾಂತಿ ಹೆಚ್ಚಾಗಿ, ಹೃದಯದೌರ್ಬಲ್ಯ ಬೆಳೆದು, ಯಾವನಿಗೆ ಎಷ್ಟು ತಿಳಿಯುವುದೋ ಅಷ್ಟನ್ನೇ ಆಡಿಬಡುವ ಪದ್ಧತಿ ಹೆಚ್ಚಾಗಿಹೋಗಿದೆ. ಒಳಹೊಕ್ಕು ತತ್ತ್ವವನ್ನು ಕಾಣುವ ಮಹಾಸಾಹಸ ಕೈಲಾಗದಾಗಿದೆ. ಚಾಂಚಲ್ಯವು ಬೇರೂರಿದೆ. ಮುಂಜಾನೆ ನಾಸ್ತಿಕನೂ, ಮಧ್ಯಾಹ್ನ ಚಾರ್ವಾಕನೂ, ಸಾಯಂಕಾಲ ಸನಾತನಿಯೂ ಆಗುವ ಮಹನೀಯರು ಮನಸ್ವೀ ಬೆಳೆದಿದ್ದಾರೆ. ಮಗ ಹುಟ್ಟಿದರೆ ನನ್ನ ಸಾಹಸವೆಂದಲೂ ಸತ್ತರೆ ದೇವರ ಇಚ್ಛೆಯೆಂತಲೂ ಹೇಳಿಕೊಳ್ಳುವ ವೈಜ್ಞಾನಿಕ ವೈರಾಗ್ಯಶಾಲಿಗಳು ವಿಶೇಷವಾಗಿದ್ದಾರೆ. ಒಂದರಲ್ಲಿಯೂ ವಿಶ್ವಾಸವಿಲ್ಲ. 'ಅವರೆಂದದ್ದು ನಾನು" ಇದೇ ಸುಧಾರಣೆ! ಇದರಿಂದಲೆ ಇಂದಿನ ಚಾಕು ಬೆಳಕಿನಿಂದ ಸಾಗುತ್ತಲಿದೆ. ಎಂದ ಮೇಲೆ ಹಾಳು ವೇದಾಧ್ಯಯನವನ್ನು ಯಾರು ಮಾಡಬೇಕು? "ಇಂದಿನ ನವಯುಗದ ಆಶೋತ್ತರ ಕಾಂಕ್ಷೆಗಳಿಗೆ ತಕ್ಕಂತೆ ದೈನಂದಿನ ಕಾರ್ಯಕ್ರಮವನ್ನು ಆ ವೇದಗಳನ್ನೆ ಅನುಸರಿಸಿ ಹಾಕಿಕೊಡಲಿ; ಹಾಗಿದ್ದರೆ" ಎಂದು ಆಹ್ವಾನಮಾಡಿದ ಲೇಖಕರಿಗೆ ನವಯುಗದ ಆಶೋತ್ತರ ಕಾಂಕ್ಷೆಗಳು ಇಂತಹವೇ ಎಂದು ತಿಳಿದಿದೆಯೇ? ಅದರಲ್ಲೇನೂ ಮತಭೇದವಿಲ್ಲವೇ? ಆ ವೇದಗಳನ್ನೇ ಹಿಡಿದು "अहरहःसंध्यामुपासीत" ಎಂಬ ವಿಧಿವಾಕ್ಯದಂತೆ ಒಂದು ನಿತ್ಯಕರ್ಮವನ್ನು ಅವಶ್ಯ ಆಚರಿಸಬೇಕೆಂದು ಹೇಳಿದರೆ "ಈ ಕಾಲಕ್ಕೆ ಅಂತಹ ವಿಧಿವಾಕ್ಯಗಳ ಆವಶ್ಯಕತೆಯಿಲ್ಲ; 'अहरहश्चक्षुपिबेत्' ಎಂದಿದ್ದರೆ ಈಗಿನ ಸಮಾಜದ ಮೈಗೊಳ್ಳುತ್ತಿದ್ದು" ಎನ್ನುವವರು ಹೊರಟರೆ ಹೇಗೆ? ಮತ್ತು "ಸಮಾಜದ ತಿಕ್ಕಾಟ-ಹೇಸಿತನಗಳನ್ನು ನೋಡಿ ಆ ವೇದಗಳು ಏಕೆ ನಮ್ಮನ್ನು ರಕ್ಷಿಸಲು ಬರಲೊಲ್ಲುವು?' ಎಂಬ ಮಾತು. ಇದೊಂದು ವಿಚಿತ್ರತರ ಪ್ರಶ್ನೆ. ವೇದಗಳೆಂದರೆ ಅವೇನು ನಮ್ಮನ್ನು ರಕ್ಷಿಸಲು ನಿಯಮಿಸಿದ ಪೋಲೀಸರೆಂದು ತಿಳಿದಿದ್ದಾರೋ ಏನೋ! ಇಬ್ಬರು ಜಗಳವಾಡುತ್ತಿರುವಾಗ ಆ ಪೋಲಿಸರು ಕೂಡ ಬರುವುದಿಲ್ಲ; ಇಬ್ಬರಲ್ಲಿ ಒಬ್ಬನು ನೆಲಕ್ಕುರುಳಿದ ಮೇಲೆ ಬಿಳಿಯ ಕಾಗದ ಕಪ್ಪುಮಾಡಲು ಬರುತ್ತಾನೆ. ವೇದಗಳು ಇಂತಹ ರಕ್ಷಕಕೋಟಿಯಲ್ಲಿ ಸೇರಿದುವುಗಳಲ್ಲ. ಅಧ್ಯಯನ ಮಾಡಿ ವೇದೋಕ್ತ ಆಚರಣೆಮಾಡಿದರೆ, ಫಲವು ತಪ್ಪದೆ ದೊರೆಯುವುದು. ಈಗಲೂ ಮಂತ್ರಸಿದ್ಧರನ್ನು ನಾವು ಕಾಣಬಹುದು. ನಾವು ಆಚರಿಸದೆ ಕಣ್ಣಿಗೆ ಕಾಣದ ಅದೃಷ್ಟ ಪದಾರ್ಥವನ್ನು ಕುರಿತು ನಿಂದೆಮಾಡುವುದು ಎಂತಹ ಸಮಂಜಸತನವೋ; ಎಂತಹ ದೂರದರ್ಶಿತ್ವವೋ! 'ಸಕ್ಕರೆ' ಎಂದು

ನುಡಿದಮಾತ್ರಕ್ಕೆ ಬಾಯಿ ಸಿಹಿಯಾಗಬಹುದೇ? ಬ್ರಹ್ಮಾಸ್ತ್ರ ಗಾಯತ್ರಿ, ಪ್ರತ್ಯಂಗಿರಾದಂತಹ ಮಹಾಮಂತ್ರಗಳು ಉಪಾಸಕರ ಇಷ್ಟಾರ್ಥಸಿದ್ಧಿಗಾಗಿ ಕಾದುಕೊಂಡಿವೆ. ಅವುಗಳ ಆಚರಣೆಯಿಂದ ಎಷ್ಟೋ ಮಹನೀಯರು ಲೋಕೋಪಕಾರ ಮಾಡುತ್ತಿದ್ದಾರೆ. ವೇದೋಕ್ತ ಆಚರಣೆಯನ್ನು ಮಾಡುವ ಶಕ್ತಿಯು ನಮ್ಮಲ್ಲಿದ್ದರೆ ಸಾಮ್ರಾಜ್ಯವನ್ನು ಸ್ಥಾಪಿಸಬಹುದು. ಅಂತಹ ಶಕ್ತಿಯನ್ನು ಸಂಪಾದಿಸಲು ಪ್ರಯತ್ನಪಡಬೇಕಲ್ಲದೆ, ವೇದವನ್ನೇ ಅಲ್ಲಗಳೆದರೆ ನೊಣಕುಳಿತುದಕ್ಕಾಗಿ ಮೂಗನ್ನೇ ಕೊಯಿದುಕೊಂಡಂತಾಗುತ್ತದೆ. ಮುನ್ನೂರು ವರ್ಷಗಳಿಗೆ ಹಿಂದೆ ಆಗಿಹೋದ ಶ್ರೀರಾಘವೇಂದ್ರಸ್ವಾಮಿಗಳು ಮಂತ್ರಸಿದ್ಧಿಯುಳ್ಳವರಾಗಿದ್ದರು. ಅವರು ಅಗ್ನಿಸೂಕ್ತ ಪಠಿಸುತ್ತ ತೆಗೆದ ಗಂಧವನ್ನು ಜನರು ಮೈಗೆ ಹಚ್ಚಿಕೊಂಡರು. ಮೈಯೆಲ್ಲ ಉರಿಯುತ್ತಿತ್ತು. ಆಗ ಆ ಮಹಾತ್ಮರನ್ನು ಗುರುತಿಸಿ ಪ್ರಾರ್ಥನೆ ಮಾಡಿದರು. ಅವರು ಪುನ ವರುಣಸೂಕ್ತದಿಂದ ಉಳಿದ ಗಂಧ ಅಭಿಮಂತ್ರಿಸಿ ಕೊಟ್ಟರು. ಕೂಡಲೆ ಜನರ ಮೈಯೆಲ್ಲ ತಣ್ಣಗಾಯಿತು. ಎಂದ ಮೇಲೆ ಅಗ್ನಿಸೂಕ್ತದಲ್ಲಿ ಕಂಡ ಸತ್ಯ ಇಂದು ಕಾಣದಿದ್ದುದು ನಮ್ಮ ದೋಷ. ಅಂದಿನ ಸತ್ಯ ಎಂದೂ ಸತ್ಯವೇ. ಆ ವಾಕ್ಯಗಳಲ್ಲಿ ಏನೂ ದೋಷವಿಲ್ಲ. ದೋಷ ನಮ್ಮಲ್ಲಿ. ನಾವು ಕಾಲು ಮುಂದೆ ಮಾಡಿ ಮೊಗವನ್ನೇ ಹಿಂದೆ ದೂಡಿದ್ದೇವೆ. ರಾಜ್ಯವನ್ನು ಕಳೆದುಕೊಂಡು ಪರದಾಸ್ಯಕ್ಕೆ ನಾಚಿ ಮೊಗ ತೋರಿಸದವರಾಗಿದ್ದೇವೆ. ಮೊಗವಿಲ್ಲದೆ ಕೈಕಾಲುಗಳೇ ಮುಂದೆ ನಡೆಯುತ್ತಿವೆ.

" ಪೂಜ್ಯ ಸಾಯಣಾಚಾರ್ಯರನ್ನು ಬಿಟ್ಟರೆ ವೇದಗಳಿಗೆ ಅರ್ಥ ಹಚ್ಚಲಿಕ್ಕೆ ಹೋದ ಒಬ್ಬರೇ ಇಲ್ಲ!' ಇದೂ ಒಂದು ಸಂಶೋಧನೆಯ ವಿಷಾದ. ಐದುಸಾವಿರ ವರ್ಷಗಳಿಗೆ ಹಿಂದಿನ ವೇದಗಳ ಬಾಲ್ಯಾವಸ್ಥೆಯಲ್ಲಿದ್ದ ಭಾಷೆ ಐದುನೂರು ವರುಷಗಳಿಗೆ ಮೊದಲಿನ ಸಾಯಣಾಚಾರ್ಯರೊಬ್ಬರಿಗೆ ಹೇಗೆ ತಿಳಿಯಿತೋ? ಪೂರ್ವಾಪರ ಸಂಬಂಧವಿಲ್ಲದ ಮಾತುಗಳಿಗೆ ಉತ್ತರವಿಲ್ಲ. ನಿಯಮಬದ್ಧ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದು. ಧರ್ಮದ ನಿರ್ಬಂಧಗಳು ಸರಿಯಾಗಿ ನಡೆಯಬೇಕಾದರೆ ರಾಜಾಜ್ಞೆಯು ಅವಶ್ಯಬೇಕು. ಮಹಾಭಾರತದ "राजा कालस्य कारणम्" ಎಂಬ ವಚನವು ಇದನ್ನೇ ಬೋಧಿಸುತ್ತದೆ. ಒಂದು ನಿರ್ಬಂಧಕ್ಕೆ ಒಳಪಡಬೇಕಾದರೆ ಅಂಜಿಕೆ ಇರದ ಹೊರತು ಅದು ಸಾಧ್ಯವಿಲ್ಲವೆಂಬುದನ್ನು ಕಾಯದೆ ಪಂಡಿತರಿಗೆ ಒತ್ತಿ ಹೇಳಬೇಕಿಲ್ಲ. ಈ ನಿಯಮದಂತೆ ನಡೆಯದಿದ್ದರೆ ವೇದವು ಇಂದಿಗೆ ನಿರ್ನಾಮವಾಗಿ ಹೋಗುತ್ತಿತ್ತು. ಜೈನ-ಬೌದ್ಧರು ಭಾರತದ ತುಂಬೆಲ್ಲ ಬೆಳೆದು ವೇದಮತವನ್ನು ನಾಶಗೊಳಿಸುತ್ತಿರುವಾಗ ಕುಮಾರಿಲಭಟ್ಟರು ಜನ್ಮ ತಾಳಿದರು. ಆಗಿನ ಕಾಲಕ್ಕೆ ವೇದಮತವನ್ನು ಪ್ರಚಾರಗೊಳಿಸಬೇಕಾದರೆ, ಎಷ್ಟೋ ಜನರ ತಲೆಗಳು ಗಾಣದಲ್ಲಿಹಾಕಿ ತಿರುವಲ್ಪಟ್ಟುವು.

(कुमारिलमृगेन्द्रेण हतेषु जिनहस्तिषु ।
निष्प्रत्यूहमवर्धन्त श्रुतिशाखाः समन्ततः ॥

ಅ॥ ಕುಮಾರಿಲನೆಂಬ ಸಿಂಹವು ಜೈನರೆಂಬ ಆನೆಗಳನ್ನು ಕೊಲ್ಲುತ್ತಿರಲು ವೇದಗಳು ಸುತ್ತಲೂ ಬೆಳೆಯತೊಡಗಿದುವು.")

ಒಂದು ನಿಯಮಕ್ಕೆ ಒಳಗಾಗದ ಹೊರತು ನಮಗೆ ಸುಖವಿಲ್ಲ. ಶಾಸ್ತ್ರನಿಯಮಗಳನ್ನು ಕಡಿದೊಗೆದು ಮನಬಂದಂತೆ ನಡೆದರೆ ಕಲ್ಲು-ಕಂಟಿಗಳಿಗೆ ಬಲಿಯಾಗುವರೆಂಬ ಭಾವನೆ ಬಲು ಬೇಗ ಬರುವುದು. ಬರಬರುತ್ತ ಅಜ್ಞಾನವು ಆವರಿಸುವುದು. ಆದುದರಿಂದ ಈ ಮಾರ್ಗವು ಒಳ್ಳೆಯದಲ್ಲ. ನಮ್ಮ ಆಪ್ತರ, ನಮ್ಮ ಹಿತವನ್ನು ಬಯಸುವ ಮಹನೀಯರ ಮಾತನ್ನು ನಾವು ನಂಬಲೆಬೇಕು. ಇಲ್ಲವಾದರೆ ನಮ್ಮ ತಂದೆ-ತಾಯಿಗಳನ್ನು ಗುರುತಿಸುವುದೂ ಕಠಿನವಾದೀತು. ವೇದವ್ಯಾಸರ ವಾಕ್ಯವು ನಮಗೆ ಮಹಾಪ್ರಮಾಣ. ವೇದಗಳ ವಿಷಯದಲ್ಲಿ ಅವರು ಹೀಗೆ ಹೇಳಿದ್ದಾರೆ:

अनादि निधना नित्या वागुत्सृष्टा स्वयंभुवा ।
आदौ वेदमयी दिव्या यतः सर्वाः प्रवृत्तयः ॥

(ಅ॥ ಯಾವುದರಿಂದ ಸಕಲ ಶಾಸ್ತ್ರಗಳು ರೂಪುಗೊಂಡವೋ ಅದೇ ಈ ವೇದವಿದ್ಯೆಯು, ಇದು ಹುಟ್ಟು-ಸಾವುಗಳಿಲ್ಲದ ಬ್ರಹ್ಮನಿಂದ ಆವಿರ್ಭವಿಸಿದುದೂ ಆಗಿದೆ.)

ಮೇಧಾತಿಥಿ ಋಷಿಗಳೂ "नैव वेदाः प्रलीयन्ते महाप्रलयेऽपीति" ಎಂದಿದ್ದಾರೆ.

ಇವೇ ಮೊದಲಾದ ಎಷ್ಟೋ ಪ್ರಮಾಣಗಳಿಂದ ವೇದಕ್ಕೆ ಅಪೌರುಷೇಯತ್ವವು ಸಿದ್ಧವಾಗುತ್ತದೆ. ಈಶ್ವರನಿಯಮದಂತೆ ಮನುಷ್ಯನ ಆಧ್ಯಾತ್ಮ, ಆಧಿದೈವ, ಅಧಿಭೂತ ಶೋಧನೆಗಾಗಿಯೆ ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ ಹೀಗೆ ಮೂರು ಭಾಗಗಳನ್ನು ಮಾಡಲಾಗಿದೆ. 'त्रयोऽर्थाः सर्ववेदेषु' (ಮೂರು ಅರ್ಥಗಳುಂಟೆಂದು), ಎಂದು ಮಧ್ವಭಾಷ್ಯದಲ್ಲಿ ಹೇಳಲಾಗಿದೆ. ಪೂಜ್ಯಬುದ್ಧಿಯಿಂದ, ಒಳಹೊಕ್ಕು ತತ್ತ್ವವಿಚಾರ ಮಾಡಿದರೆ, ವೇದದಲ್ಲಿ ಎಲ್ಲವೂ ಇದೆ. ಏನು ಬೇಕಾದರೂ ಅದು ಇದೆ. ಇದರಲ್ಲೇನೂ ಸಂಶಯವಿಲ್ಲ. "ನಮ್ಮ ಉಪನಿಷತ್ತಿನ ಚಿಕ್ಕ ಕತೆಗಳೇ ಯೇಸುವಿನ ಕಂಠದಿಂದ ಹೊರಟು ಬೈಬಲ್ಲಿನಲ್ಲಿ ಇಳಿದಿವೆ" ಎಂದು ಬಾಬು ಅರವಿಂದಘೋಷರು ಅಭಿಪ್ರಾಯಪಟ್ಟಿದ್ದಾರೆ. ಆದರೆ ನಮಗೆ ಅಷ್ಟು ಶ್ರಮಪಡಲು ವೇಳೆಯಿಲ್ಲ. "ಸ್ವಲ್ಪ ಸಮಯದಲ್ಲಿ ಬಹಳ ಕೆಲಸ ಮಾಡುವುದಿದೆ" ಮಾಡಲಿ, ವೇದವು ಅಡ್ಡ ಬರುವುದೇ? ಅಡ್ಡ ಬರುವುದು ನಮ್ಮ ಸಂಸಾರ; ನಮ್ಮ ಕ್ಷಣಿಕ ಸುಖದ ಆಶೆ. ರಾಣಾ ಪ್ರತಾಪನ ವೀರಭೂಮಿಯ ವೀರಮಕ್ಕಳು ಸುಖದ ಪಿಪಾಸೆಯಿಂದಲೇ ಹೇಡಿಗಳಾದರು. ಕಷ್ಟಪಾತಕ್ಕೆ ಅಂಜಿದರು. ಪರದಾಸ್ಯ ಸ್ವೀಕರಿಸಿ, ಅಭಿಮಾನವೊಂದನ್ನು ಬಿಟ್ಟು ಸುಖದಿಂದ ಬಾಳಿದರು. ಇವರ ದೃಷ್ಟಿಯಿಂದ ರಾಣಾ ಪ್ರತಾಪನು ಮೂರ್ಖನಲ್ಲದೆ ಮತ್ತೇನು? ಇದರಂತೆಯೆ ನಮ್ಮ ಸ್ಥಿತಿಯಾಗಿದೆ. ನಮ್ಮ ದೇಶದ ಧರ್ಮವಾದ ವೇದದ ಆಜ್ಞೆಯನ್ನು ನಾವು ಪಾಲಿಸದಿದ್ದುದಕ್ಕಾಗಿ ನಮ್ಮ ಆರೋಗ್ಯ ಕೆಟ್ಟಿದೆ. ಅಲ್ಪಾಯುಷ್ಯ ಇದರಿಂದಲೆ ನಮ್ಮಲ್ಲಿ ಹೆಚ್ಚಿದೆ. ರೋಗವೊಂದಿದ್ದರೆ ಔಷಧ ಬೇರೊಂದನ್ನು ಕೊಡುತ್ತಿದ್ದೇವೆ ನಾವು. "ಕಾಲಗತಿಯ ಮಡುವಿನಲ್ಲಿ ಸಿಕ್ಕು ಸಮಾಜವು ಒದ್ದಾಡ

ತ್ತಿರುವುದು" ಎಂದು ಅಭಿಪ್ರಾಯ ಪಡುವ ಲೇಖಕರಿಗೆ ಬೇರೆಯೇನು ಹೇಳಬೇಕು. "ಕಾಲಾಯ ತಸ್ಮೈ ನಮಃ"

'ಚೇಳಿನ ಮಂತ್ರ ಬಾರದೆ ಹಾವಿನ ಬುಟ್ಟಿಯಲ್ಲಿ ಕೈಯಿಟ್ಟರಂತೆ' ಎಂಬ ನಾಣ್ನುಡಿ ಎಲ್ಲರಿಗೂ ಗೊತ್ತು. ಯೋಗ್ಯತೆಯಿಲ್ಲದೆ ವೇದಾರ್ಥ ಮಾಡುವುದು ಹೇಗೆ ತಾನೇ ಸಾಧ್ಯ? ನಿಜವೇ! ಜ್ಞಾನವಿಲ್ಲದವರು ಮಾಡುವುದೇನು? ಇದೂ ವೇದದ ತಪ್ಪೆ? ನಮ್ಮ ದೇಶದಲ್ಲಿ ಒಂದೇ ಮತ, ಒಂದೇ ಭಾಷ್ಯ, ಒಂದೇ ತತ್ತ್ವ ಎಂದೂ ಇಲ್ಲ. ಈಗ ಬೇಸರಿಕೆ ಬಂದಂತೆ ಹಿಂದಿನ ಕಾಲದಲ್ಲಿ ಅನೇಕ ಸಾರೆ ಅನೇಕ ಜನರಿಗೆ ಬಂದಿತ್ತು. ಬಹು ಜನರು ಎದುರಿಸಿದರು; ತಾವೇ ನಾಶಹೊಂದಿದರು. ವೇದಧರ್ಮ ಅಮರವಾಯಿತು. ಮಧ್ವಭಾಷ್ಯ ಮುಂತಾದ ವೇದಭಾಷ್ಯಗಳಿದ್ದರೂ ಸಾಯಣಾಚಾರ್ಯರು ಭಾಷ್ಯ ಬರೆದರು; ರಾಘವೇಂದ್ರ ಸ್ವಾಮಿಗಳು ಬರೆದರು. ಇವೆಲ್ಲ ಇರುತ್ತಿದ್ದರೂ, ದಯಾನಂದ ಸರಸ್ವತಿಗಳು ಎಲ್ಲ ಮತಗಳನ್ನೂ ಖಂಡಿಸಿ ತನಗೆ ಅನುಕೂಲವಾಗುವಂತೆ ಭಾಷ್ಯ ಬರೆದರು. ಈಗ ನಮಗೆ ಅರ್ಥಮಾಡುವ ಯೋಗ್ಯತೆಯಿದ್ದರೆ ಅವಶ್ಯಮಾಡಬಹುದು. ಮೂರು ಅರ್ಥಗಳು ವೇದದಲ್ಲಿ ಅಡಕವಾಗಿರುವುವೆಂಬ ತತ್ತ್ವವನ್ನು ಮುಂದಿಟ್ಟುಕೊಂಡು, ಅಧಿಭೌತಿಕ ಪ್ರಾಧಾನ್ಯ ಅರ್ಥಮಾಡಬಹುದು; ಹಿಂದೀ ವೈಜ್ಞಾನಿಕ ಹೊಸ ಯುಗವನ್ನು ಸ್ಥಾಪಿಸಬಹುದು. ನಾವು ಯಾವುದನ್ನೂ ವಿಚಾರಿಸದೆ ವೇದಕ್ಕೆ ಕಪ್ಪು ಬಳಿದರೆ ಅದು ನಮ್ಮ ತಪ್ಪೇ ಹೊರತು ಮತ್ತೇನೂ ಅಲ್ಲ. "नैष स्थाणोरपराधो यदेनमंधो न पश्यति" ಎಂಬ ಯಾಸ್ಕ ವಚನವನ್ನು ನೋಡಬೇಕು. ವೇದದಲ್ಲಿ ಪೃಥ್ವಿಯ ಪರಿಭ್ರಮಣವನ್ನು ಹೇಳಲಾಗಿದೆ. ಅದು ಸ್ಪಷ್ಟವಿದ್ದರೂ ಸಂಪ್ರದಾಯದ ಒಲಿಗೆ ಬಿದ್ದು ಮುಚ್ಚಿಡುತ್ತೇವೆ. ಈ ಶ್ರುತಿಯನ್ನು ಗಮನಿಸಿರಿ—

महत्सधस्थं महती बभूविथ महान्वेग एजथुर्वेपथुष्टे । महांस्त्वेन्द्रो रक्षत्यप्रमादम् ॥ सानो भूमे प्ररोचय हिरण्यस्येव संदृशि मानोद्विक्षत कश्चन ॥ अथ. का १२-२-१८

ವೇದದಲ್ಲಿ ತಾಮ್ರದ ಹೊರತು ಉಳಿದ ಧಾತುಗಳೇ ಇಲ್ಲವೆನ್ನುವುದು ಸಂಕುಚಿತ ದೃಷ್ಟಿಯ ಕುರುಹು. ಧಾತುಗಳೆಲ್ಲ ಅಗ್ನ್ಯಾತ್ಮಕವೆಂದು ಅಗ್ನಿವ್ಯಾಪ್ತಿ ಹೇಳುವಾಗ—

"याते अग्ने अयः शयातनू रजः शयातनू हरिशया तनूः ।
ततोऽसुरा एषुलोकेषु पुरश्चक्रिरेऽयस्मयीमेवा स्मिँल्लोके रजतामन्तरिक्षे हारिणीं दिवि ॥

ಹೀಗೆ ಹೇಳಲಾಗಿದೆ.

ಹಾರಿಣಿ ಎಂದರೆ ಬಂಗಾರ; ಸತ್ತ್ವ-ರಜಸ್ತಮೋಗುಣಗಳ ಚಿಹ್ನವಾಗಿ ಬಂಗಾರ, ಬೆಳ್ಳಿ, ಲೋಹ ಇವುಗಳಲ್ಲಿ ಅಗ್ನಿಯನ್ನು ಪ್ರತ್ಯಕ್ಷ ಕಂಡು ಸ್ತೋತ್ರಮಾಡಲಾಗಿದೆ. ಆಕ್ಸಿಜನ್-ಹೈಡ್ರೋಜನ್‌ಗಳ ಕಲ್ಪನೆ ಹೊಸದಲ್ಲ, ಪ್ರಯೋಗ ಹೊಸತು. ನಮ್ಮ ಪೂರ್ವಜರಿಗೆ ಪ್ರಯೋಗ ಮಾಡುವ ಅವಸರವಿದ್ದಿಲ್ಲ. ಅಧ್ಯಾತ್ಮಿಕ ಉನ್ನತಿಯನ್ನು ಪಡೆದು, ಅದರಿಂದ ಏನು ಬೇಕಾದುದನ್ನೂ ಸಾಧಿಸಿ, ಪರರಿಗೆ ಸುಖ ಕೊಟ್ಟು ತಾವೂ ಶಾಂತರಾಗುತ್ತಿದ್ದರು. ಒಟ್ಟಿನಲ್ಲಿ ಅನೇಕ ವಿಚಿತ್ರವಿಜ್ಞಾನ ವೇದದಲ್ಲಿದೆ. ಇನ್ನೊಮ್ಮೆ ಈ ವಿಷಯವನ್ನೂ ವಿಸ್ತಾರವಾಗಿ ಬರೆಯುವೆನು. ಅಸ್ತು, ವೇದಗಳ ಏಳ್ಗೆಯೇ ನಮ್ಮ ಏಳ್ಗೆಯು. ಸಮಾಜದಲ್ಲಿಯ ಕ್ಷುದ್ರ ತೊಡಕುಗಳಿಗಾಗಿ, ನಮ್ಮ ದೇಶಧರ್ಮವಾದ ವೇದವನ್ನು ಅಲ್ಲಗಳೆಯುವುದು ಎಂದೂ ಸರಿಯಲ್ಲ. ವೇದವೇ ನಮ್ಮ ರಕ್ಷಕ, ವೇದವೇ ನಮ್ಮ ಪೋಷಕ!!

वेदं वेद न कोऽपि भूधरदरी लीना मुनीनां गिरः
स्वच्छं म्लेच्छमतं जनास्तदनुगा कासाम धर्म्याक्रिया ।
मद्यं हृद्यमतीव वार वनिताः सेव्या नगुर्वादय:
किं कार्यं परिशिष्टमस्ति भवतो जानामिनाहं कले ॥

ಇರಲಿ!

ಶ್ರೀ. "ಶ್ರೀಹರ್ಷ" ಬೆಂಗಳೂರು.

೧

ಮುಗ್ಧಮನೋಹರ ಶಿಶುಗಣಹಾಸವು
ಎಲ್ಲೆಡೆ ಪಸರಿಸಲಿ,
ಸುರಸುಂದರ ಮನ ಮುಗ್ಧಾಲಾಪವು
ಬಾನಲಿ ಬೆರೆತಿರಲಿ!

೨

ವಿಶ್ವಪ್ರೇಮದ ಸುರಸ ವಿಚಾರವ
ಅನಿಬರು ಅರಿತಿರಲಿ,
ಸ್ವಾರ್ಥತ್ಯಾಗದ ಸರಿಸಂಬಂಧವು
ನರುವರ ಬೆಸೆದಿರಲಿ!

೩

ಚಿರಸುಖಶಾಂತಿಯ ವೀಣೆಯು ಹೃದಯದಿ
ಮಂಜುಳವಾಗಿರಲಿ,
ವಿಮಲಾನಂದದ ಅಮಲಸುಧಾಕರ
ಕೌಮುದಿಯೆರಚಿರಲಿ!

೪

ಸತ್ಯಾರ್ಥದ ಬಗೆ ನಾಕವನೇರುತ
ಮಂಗಳವಾಗಿರಲಿ,
ವಿಮಲಾತ್ಮದ ನಗೆ ದಿನಕರನಾಗುತ
ಲೋಕವ ಬೆಳಗಿರಲಿ!

ಸಣ್ಣ ಕತೆ

ಪ್ರೇಮಪ್ರವಾಹ

★

ಮಾನವನ ಮಮತೆಗೊಂದು ಸ್ಥಲನಿದ್ದಾಗಲೆ ಆತನ ಜೀವನಕ್ಕೊಂದು ಪೂರ್ಣತೆಯಿರುವುದು. ಬೆಕ್ಕು-ನಾಯಿ-ಗಿಗರಿ-ಹಸುಗಳನ್ನು ಸಾಕಿ ಮಕ್ಕಳ ಮಮತೆಯಿಂದ ಅವುಗಳನ್ನು ಸಲಹುವ ಸಾಧು-ಸಂನ್ಯಾಸಿಗಳೆಷ್ಟು ಜನರು ಇರುವುದಿಲ್ಲ? ಭಟ್ಟರ ಮಮತೆಗೆ ಪಾರಿವಾಳಗಳು ಆಶ್ರಯಸ್ಥಾನವಾಗಿ, ಅವರ ದುಃಖಮಯ ಜೀವನದ ಮೇಲೆ ಆನಂದದ ತೆರೆಯನ್ನು ಹಾಕಿದ್ದುವು.

★

ಶ್ರೀ. "ಕೃಷ್ಣಮೂರುತಿ" ಸಾಗರ

ಅವರಿಂದ

ಪಾರಿವಾಳಗಳು ನೋಡಲು ಬಲು ಮುದ್ದು. ಅವುಗಳ ಕಂಠದಲ್ಲಿ ಸ್ವರದ ಮಾಧುರ್ಯವಿರದಿದ್ದರೂ, ಅವುಗಳ ವರ್ಣದಲ್ಲಿ ಲಾವಣ್ಯವಿರದಿದ್ದರೂ, ಅವುಗಳ ಮಂದಗಮನದಲ್ಲಿ ಗಾಂಭೀರ್ಯವಿದೆ, ಠೀವಿ ಇದೆ. ಕತ್ತನ್ನು ಹಿಂದಕ್ಕೆ ಒತ್ತಿ, ಗುಟುಗುಟು ಶಬ್ದಮಾಡುತ್ತ, ಅಲ್ಲಿಂದಿಲ್ಲಿಗೆ ಹಜ್ಜೆ ಇಡುವುದನ್ನು ಪ್ರತಿ ಸೌಂದರ್ಯೋಪಾಸಕನೂ ನೋಡಬೇಕು.

* * *

ಪಕ್ಷಿಪ್ರಪಂಚದಲ್ಲಿ ನನಗೆ ಕುತೂಹಲ, ಉತ್ಸಾಹ ಉಂಟಾದದ್ದು ನಾನು ಮಂಗಳೂರಿಗೆ ಹೋದಾಗ. ನಾನು ಬೀಡು ಮಾಡಿದುದು ಒಂದು ಛತ್ರದಲ್ಲಿ. ಅಲ್ಲಿ ನಿರ್ಭಯವಾಗಿ ಅನೇಕ ಪಾರಿವಾಳಗಳು ಇದ್ದುವು. ಅವುಗಳಿಗೆ ಮರದ ಗೂಡುಗಳು ನಿರ್ಮಿಸಲ್ಪಟ್ಟಿದ್ದುವು. ಆ ಗೂಡುಗಳಿಗೆ ಚಿಕ್ಕ ಬಾಗಿಲುಗಳು. ರಾಗಿ, ಅಕ್ಕಿಯ ನುಚ್ಚು ಮುಂತಾದ ಆಹಾರಪದಾರ್ಥಗಳು ಆ ಗೂಡುಗಳಲ್ಲಿ ಸಂಗ್ರಹೀತವಾಗಿದ್ದುವು.

ಪ್ರತಿ ಮುಂಜಾನೆ ದೇಗುಲದ—ಛತ್ರದ ಒಳಪಾರ್ಶ್ವದಲ್ಲೊಂದು ದೇಗುಲವಿದೆ—ಅರ್ಚಕನು ದೈನಿಕ ಕೆಲಸಗಳನ್ನು ನಿರ್ವಹಿಸಿಕೊಂಡು, ಗೂಡುಗಳ ಬಾಗಿಲುಗಳನ್ನು ತೆರೆಯುವನು, ಹಕ್ಕಿಗಳಿಗೆ ತಿನಿಸನ್ನು ನೀಡುವನು. ಅವನನ್ನು ಹಕ್ಕಿಗಳು ಅಪರಿಚಿತನಂತೆ ಭಾವಿಸವು. ಕೇವಲ ಆ ಪ್ರಸಂತೆ ಕಾಣುವುವು, ಅವನ ಸುತ್ತಲೂ ಹಾರಾಡುವುವು; ಸಂತೋಷವನ್ನು ಸೂಸುವ, ಸೂಚಿಸುವ ಧ್ವನಿಯಿಂದ ಕೂಗುವುವು. ಅವನ ಮೈಯಮೇಲೆ ಕೂಡುವುವು. ಅವನು ಸಹ ಅವೆಲ್ಲವುಗಳನ್ನು ಮೈದಡಹುವನು, ಮುದ್ದಿಡುವನು. ಅವುಗಳೊಡನೆ ಅವನ ವರ್ತನೆಯು ಮನುಷ್ಯರೊಡನಿದ್ದಂತೆ, ಮಕ್ಕಳೊಡನಿದ್ದಂತೆ. "ರಾಮಾ, ಇಲ್ಲಿ ಬಾ"; "ಎಲೇ ಕಳ್ಳಾ, ನನ್ನ ತಲೆಯ ಮೇಲೆ ಕೂಡುವೆಯೇನು?" "ಯಾಕೆ, ಪುಟ್ಟು, ರಾಗಿ ರುಚಿಸೋದಿಲ್ಲ?" "ಆಗಲಿ ಆಗಲಿ, ನಿನಗೂ ಗೆಜ್ಜೆ ಉಂಗುರ ಮಾಡಿ ಸೋಣ"—ಹೀಗೆಲ್ಲಾ ಅವನು ಒಂದೊಂದು ಪಾರಿವಾಳವನ್ನೂ ಕೈಯಲ್ಲಿ ಎತ್ತಿಕೊಂಡು ಮುದ್ದಿಡುತ್ತಾ ಮಾತಾಡುವನು. ಇದು ನನಗೆ ಆಶ್ಚರ್ಯವನ್ನುಂಟುಮಾಡಿತು. ಅಲ್ಲದೆ, ಆ ಹಕ್ಕಿಗಳು ಸಹ ಅವನನ್ನು ತಮ್ಮವ

ಬಸವ ಭಟ್ಟರು ಇಬ್ಬರೂ ಮುಗಿಲಕಡೆಗೆ ಮುಖವೆತ್ತಿ ನೋಡುತ್ತಿದ್ದರು.

ನೆಂದು ಗೆಳೆಯನೋಪಾದಿಯಲ್ಲಿ ಸಲುಗೆಯಿಂದ ಕಾಣುವುದು ನನಗೆ ಭ್ರಾಂತಿಯನ್ನುಂಟುಮಾಡಿತು. ಅವೆಲ್ಲವೂ ಆಹಾರ ತಿಂದಮೇಲೆ 'ಹುಶ್' ಎಂಬ ಅವನ ಆಜ್ಞೆಯ ಅರ್ಥವನ್ನರಿತ ಹಕ್ಕಿಗಳೆಲ್ಲವೂ ಹಾರಿಹೋದುವು.

ಕರ್ತವ್ಯವನ್ನು ಪೂರೈಸಿದ ಅಭಿಮಾನದಿಂದ ಅರ್ಚಕನು ಒಂದು ತಡವೆ ನಭೋಮಂಡಲದ ಕಡೆಗೆ ನೋಡಿದನು; ವರ್ತುಲಾಕಾರವಾಗಿ ಹಾರುವ ಹಕ್ಕಿಗಳನ್ನೆ ಕಂಡು ಮುಗುಳುನಗೆ ನಕ್ಕನು. ಮೆಲುದನಿಯಲ್ಲಿ ದಾಸರಪದವೊಂದನ್ನು ಹಾಡುತ್ತಾ ಗೂಡುಗಳ ಧೂಳು ಹೊಡೆದು, ಕಸ-ಕಡ್ಡಿಗಳನ್ನು ತೆಗೆದುಹಾಕಿದನು. ಹೊರಗಡೆ ಮೂರು ತಟ್ಟೆಗಳಲ್ಲಿ ನೀರು ಹಾಕಿ, ಸ್ವಕಾರ್ಯನಿಮಿತ್ತ ಹೋದನು.

ಅರ್ಚಕನ ಮತ್ತು ಹಕ್ಕಿಗಳ ಗೆಳೆತನವು ನನಗೊಂದು ಸಮಸ್ಯೆಯಾಯಿತು. ಮಾನವವರ್ಗಕ್ಕೂ ಪಕ್ಷಿವರ್ಗಕ್ಕೂ ಹೀಗೆ ಸಖ್ಯವಿರಲಾದೀತೆ? ಅರ್ಚಕನು ಅವುಗಳೊಂದಿಗೆ ಮಾತಾಡುವುದು, ಅವು ಅವನ ಅಭಿಪ್ರಾಯ ಗ್ರಹಣಮಾಡಿದಂತೆ ಕಂಡುದು, ಅವು ಆಹಾರ ತಿಂದು ಹೋದುದನ್ನು ನೋಡಿ ಅವನ ಮುಖದಲ್ಲಿ ಮಿಂಚಿದ ಮುಗುಳುನಗೆ, ಅವುಗಳ ಗೂಡು ಶುದ್ಧಿ ಮಾಡುವಲ್ಲಿ ಅವನ ಶ್ರದ್ಧೆ ಇವೆಲ್ಲ ವಿಷಯಗಳು ನನ್ನ ಮನಸ್ಸನ್ನು ಕಲಕಿದುವು.

* * *

ದೇವತಾರ್ಚನೆ ಮುಗಿಸಿ, ಸುಮಾರು ಹನ್ನೆರಡು ಘಂಟೆಯ ಸಮಯದಲ್ಲಿ ಅರ್ಚಕನು ಪ್ರಾಂಗಣಕ್ಕೆ ಬಂದನು. ಮಂತ್ರೋಚ್ಚಾರಮಾಡುತ್ತಾ ಇರಲು, ಕೆಲಹೊತ್ತಿನಲ್ಲಿ ಪಾರಿವಾಳಗಳು ಇಳಿಯಲಾರಂಭಿಸಿದುವು. ಅವನ ಬಳಿ ಸಾರುವುವು; ಸ್ವಾಗತಿಸಲು ಕೈಯೆತ್ತಿದೊಡನೆ ಮೇಲೆ ಹಾರುವುವು. "ಗಿಲ್, ಗಿಲ್" ಗೆಜ್ಜೆ ಶಬ್ದವಾದರೆ ಅರ್ಚಕನಿಗೊಂದು ಆನಂದ. ಅವುಗಳ ಮಧ್ಯಾಹ್ನದ ಆಹಾರ ತಿನ್ನುವುದು ಮುಗಿದ ಮೇಲೆಯೆ ಅರ್ಚಕನಿಗೆ ಉದರದ ಯೋಚನೆ.

ಸಂಜೆಯ ಕಾರ್ಯಕ್ರಮದಲ್ಲೊಂದು ವಿಶೇಷ. ಹಕ್ಕಿಗಳು ಎಣಿಸಲ್ಪಡುವುವು ಎಲ್ಲವೂ ಗೂಡು ಸೇರಿ ಕಾಳುತಿಂದ ಮೇಲೆ, ವೈರಿವರ್ಗದ ಆಕ್ರಮಣಕ್ಕೆ ತಡೆಮಾಡಲು ಬಾಗಿಲುಗಳು ಹಾಕಲ್ಪಡುವುವು. ಪುನಃ ಪುನಃ ಗೂಡುಗಳ ಕಡೆಗೆ ನೋಡುತ್ತಾ ಅರ್ಚಕನು ಹೋಗುವನು.

ಒಂದೂ ನ್ಯೂನತೆಯಿರದೆ ಈ ರೀತಿಯ ಕ್ರಮವಿದ್ದುದು ನನಗೆ ವಿಸ್ಮಯವೆನಿಸಿತು. 'ಚಾಚೂ' ತಪ್ಪದೆ ಅವುಗಳ ಆರೈಕೆಯಲ್ಲಿ ಇವನು ನಿರತನಾಗಿರುವನಲ್ಲಾ? ಅವುಗಳಿಗೆ ಇವನು ಅಷ್ಟು 'ಹಚ್ಚಿಕೊಂಡಿ'ರುವನಲ್ಲಾ? ಅವುಗಳ ಹೊಟ್ಟೆತುಂಬಿದ ಮೇಲೆ ಇವನ ಹೊಟ್ಟೆಯ ಯೋಚನೆ. ಸಂಜೆ ಅವುಗಳ ಸಂಖ್ಯಾಗಣನೆಮಾಡಿ, ಎಲ್ಲವೂ ಬಂದಿವೆಯೆಂದು ಎಷ್ಟು ಸಂತಸ ಅವನಿಗೆ?

* * *

ರಾತ್ರಿ ಪೂಜೆಯಾದಾಗ ಭಕ್ತರೊಬ್ಬರು ಮಂಗಳಾರತಿ ತಟ್ಟೆಯಲ್ಲೊಂದು ಕಾಲಾಣೆ ಹಾಕಿದರು. ಅದು ಅರ್ಚಕನಿಗಾಗಿ. ಆದರೆ ಅವನು ಅದನ್ನು ಕಾಣಿಕೆಯ ಡಬ್ಬಿಗೆ ಹಾಕಿದನು. ಇದೂ ನನಗೆ ವಿಶೇಷವಾಗಿ ತೋರಿತು. ಹಣದ ಆಶೆ ಅವನಿಗಿಲ್ಲವೇ? "ನನಗ್ಯಾಕೆ, ದುಡ್ಡು ದೇವರ ವಿನಿಯೋಗಕ್ಕಿರಲಿ, ನನಗೆ ನನ್ನ ಪಾರಿವಾಳಗಳಿಗೆ ಸಾಕಷ್ಟು ಇದ್ದೇ ಇದೆ" ಎಂದನು ಅರ್ಚಕ ನಾನು ಪ್ರಶ್ನಿಸಿದಾಗ.

ಸರಿ, ಅವನ ಸಂಸಾರವೆಂದರೆ, ಅವನ ಪ್ರಪಂಚವೆಂದರೆ ಅವನು, ಪಾರಿವಾಳಗಳು. ಹೆಂಡತಿ ಮಕ್ಕಳಿರದಿರಬಹುದು. ಅವನ, ಆ ಪಾರಿವಾಳಗಳ ಜೀವನಕ್ಕೆ ಸಾಕಷ್ಟು ದೊರೆಯುತ್ತಿರಬಹುದು. . ದೇವಾಲಯದ ಅರ್ಚಕತನದ ಸಂಭಾವನೆಯಿಂದ.

ಈತನ ವಿಷಯ ಹೆಚ್ಚಾಗಿ ಅರಿಯಲು, ಹೆಚ್ಚಾದ ಆಶೆಯಾಯಿತು. ಛತ್ರದ ಪರಿಚಾರಕ ಬಸವನೊಂದಿಗೆ ಆ ಮಾತು ಈ ಮಾತು ಆಡುತ್ತಾ ಪಾರಿವಾಳಗಳ ಪ್ರಸ್ತಾಪ ತೆಗೆದೆ.

"ಏನಯ್ಯಾ, ಇಲ್ಲಿ ಎಷ್ಟೊಂದು ಪಾರಿವಾಳಗಳು ಇವೆ. ನನಗೆ ಬಹಳ ಖುಷಿ ಆಗಿದೆ, ಅವನ್ನು ನೋಡಿ!"

"ಹೌದು ಸ್ವಾಮಿ, ಭಟ್ಟರು ಸಾಕಿದ್ದಾರೆ ಅವನ್ನು. ಯಾವಾಗಲೂ ಅವುಗಳ ಯೋಚನೇನೆ ಸೈ ಅವರಿಗೆ! ಹಕ್ಕಿಗಳಿಂದ ಪ್ರತಿಯೊಬ್ಬರಿಗೂ ಖುಷಿ ಸ್ವಾಮಿ!"

"ಅಲ್ಲಾ, ಅವರಿಗೂ ಆ ಪಾರಿವಾಳಗಳಿಗೂ ಅಷ್ಟೊಂದು ಹಚ್ಚಿಕೊಂಡಿರೋಕೆ ಏನಯ್ಯಾ ಕಾರಣ?"

"ಸ್ವಾಮಿ, ಅದೊಂದು ದೊಡ್ಡಕೈತೆ ಕತೆ!"

ಅದೊಂದು ದೊಡ್ಡ ಕತೆ! ಅದನ್ನು ತಿಳಿಯಲು ತವಕಪಟ್ಟೆ. ಇಬ್ಬರ ಅಂತರ್ಯದ ವಿಷಯ ಅರಿಯಲು ನನಗೊಂದು ಹುಚ್ಚು. ಇದು ಅಕ್ಷಮ್ಯವಿರಬಹುದು. ಬಸವ ಕತೆ ಪ್ರಾರಂಭಿಸಿದ :—

"ನನಗೆ ತಿಳಿದಮಟ್ಟಿಗೆ, ಸುಮಾರು ಹತ್ತು ಹನ್ನೆರಡು ವರುಷದಿಂದ ಭಟ್ಟರು ಇಲ್ಲಿದ್ದಾರೆ. ಆವಾಗ ಮದುವೆಯಾಗಿ ಅವರಿಗೆ ಒಂದು ಗಂಡು ಮಗು ಇತ್ತು. ಮಗುವಿಗೆ ಮೂರು ವರ್ಷ ಸ್ವಾಮಿ; ಮಗೂಂದ್ರೆ ಅಂತಿಂತ ಮಗು ಅಲ್ಲ; ಒಳ್ಳೆ ಚುರುಕು, ಒಳ್ಳೆ ಮುದ್ದು. ರಾಜರ ಮನೇಲಿ ಹುಟ್ಟೋ ಮಗು ಸ್ವಾಮಿ. ಊರ ಮಾತ್ನೆಲ್ಲಾ ಆಡ್ತಿತ್ತು. ಛತ್ರಕ್ಕೆ ಬಂದೋರ್ನೆಲ್ಲಾ ನಗಿಸ್ತಿತ್ತು. ಅವರೆಲ್ಲಾ ಅದ್ಕೆ ತಿಂಡೀ ಸಾಮಾನು, ಆಟದ ಸಾಮಾನು

ಪ್ರೀತಿಯಿಂದ ಕೊಡ್ತಿದ್ರು. ಗಿಳಿ ಇದ್ದಂತೆ ಇತ್ತು.''

"ಅದಕ್ಕೆ ಹೆಸರೇನಿಟ್ಟಿದ್ದರಯ್ಯಾ?'' ಮಧ್ಯೆ ನಾನು ಕೇಳಿದೆ.

"ಪುಟ್ಟು ಅಂತ ಸ್ವಾಮಿ; ಭಟ್ರ ಸಂಸಾರ ಅಂದ್ರೆ ಜನ ಮೆಚ್ಚೋಹಾಗಿತ್ತು. ಭಟ್ಟರ ಜೀವ ಅಂದ್ರೆ ಆ ಮಗು ಆಗಿತ್ತು. ಆದರೆ, ಏನು ಮಾಡೋದು ಸ್ವಾಮಿ, ದೈವ ಅನ್ನೋದೈತಲ್ಲಾ! ಇದ್ದಕ್ಕಿದ್ದಂತೆ ಮಗು ಕಾಹಿಲೆ ಮಲಗಿತು. ಎಲ್ಲಾ ಸಮೂನೆಯ ಔಷಧ, ಹರಕೆ, ಮಂತ್ರ, ಬೂದಿ ಎಲ್ಲಾ ಮಾಡ್ಯಾತು, ಸ್ವಾಮಿ. ದೇವರ ಮನಸು ಬರಲಿಲ್ಲ: ಹೂಸಂತೆ ಬಾಡಿತು. ತೀರಿ ಹೋಯ್ತು!''

ಬಸವನ ಕಣ್ಣಿನಲ್ಲಿ ನೀರಿಳಿಯತೊಡಗಿತು. ನನಗೂ ಹಾಗೆಯೆ. ಮತ್ತೆ ಬಸವ ಹೇಳತೊಡಗಿದ: "ಸ್ವಾಮಿ, ಅದೇ ವ್ಯಥೆಯಿಂದ ಭಟ್ಟರ ಹೆಂಡ್ತೀನೂ ಸತ್ತುಹೋದರು. ಭಟ್ಟರ ದುಃಖ ಅನ್ನೋದು ಬಂದಿದ್ದದ್ದು ಎರಡಾಯ್ತು. ಅಂದಿನಿಂದ ಈ ರೀತಿ ವಿಚಿತ್ರ ಸಂಸಾರ ಭಟ್ಟರದ್ದು ಸ್ವಾಮಿ!"

ನಾನು ಏನೋ ಸಮಾಧಾನದ ಮಾತಾಡುವಂತೆ ಎಂದೆ: "ಅಲ್ಲಯ್ಯಾ, ಅದೆಲ್ಲಾ ದೈವನಿಯಮ; ಆದರೆ ಭಟ್ಟರು ಬೇರೆ ಮದುವೆ ಮಾಡಿಕೊಳ್ಳಲಿಲ್ಲವೇಕೆ?''

"ಎಲ್ಲೀ ಮಾತು ಸ್ವಾಮಿ, ಅಂಥ ಹೆಂಡ್ತಿ ಅಂಥ ಮಗು ಇನ್ನೆಲ್ಲಿ ಸಿಕ್ಕಾವು. ಈಗಂತೂ ಈ ಪಾರಿವಾಳಗಳನ್ನು ಮಕ್ಕಳಂತೆ ಸಾಕ್ತಾರೆ. ತಮ್ಮ ಮಗು ಎಂತ ತಿಳಿತಾರೆ ಎಲ್ಲಾವನ್ನೂ" ಎಂದೆನ್ನುತ್ತಾ ಬಸವ ಹೊರಟು ಹೋದ.

* * *

ಭಟ್ಟರ ವಿಚಿತ್ರಜೀವನಕ್ಕೆ ತಕ್ಕಕಾರಣ. ಪ್ರೇಮವೆಂಬುದು ಜೀವನಪುಷ್ಪದ ಮಧು. ಅದು ಪವಿತ್ರವಾದುದು. ಮಾನವನ ಹೃದಯಕಮಲದಲ್ಲಿ ಪ್ರೇಮಾಮೃತವಿರಬೇಕು. ಪ್ರೇಮಕ್ಕೆ ಪಾತ್ರ ಬೇಕು ಯೋಗ್ಯ ಪಾತ್ರ ಬೇಕು. ತಮ್ಮ ಏಕಮಾತ್ರ ಮುದ್ದುಮಗುವಿನಲ್ಲಿ ಭಟ್ಟರು ಪ್ರೇಮವನ್ನಿಟ್ಟಿದ್ದರು. ಆ ಮಗು ವಿಧಿವಿಲಾಸದಿಂದ ಅಳಿಯಿತು. ಆದರೆ ಪ್ರೇಮ? ಪ್ರೇಮದ ಅನಿರುದ್ಧವಾಹಿನಿಯು ಮಾನವೇತರ ವರ್ಗವಾದ ಪಕ್ಷಿಗಳ ಕಡೆಗೆ ಪ್ರವಹಿಸಿತು. ನಿರರ್ಗಳವಾಗಿ ಹರಿದು ಸೌಜನ್ಯಯುಕ್ತ ಪರಿಣಾಮವನ್ನು ಮಾಡಿತು. ಭಟ್ಟರ ಬಾಳಿನಲ್ಲಿ ಶಾಂತಿಮಯವಾತಾವರಣವನ್ನು ಕಲ್ಪಿಸಿತು.

* * *

"ಬಸವಾ, ಬಸವಾ, ಪುಟ್ಟು ಇನ್ನೂ ಬರಲಿಲ್ಲವಲ್ಲೊ! ಸಂಜೆಯಾಗುತ್ತಾ ಬಂತು. ಸ್ವಲ್ಪ ಹೊರಗೆ ನೋಡಪ್ಪಾ'' ಎಂದು ಅತಿ ಆತುರದಿಂದ ಅರ್ಚಕರು ಪರಿಚಾರಕನನ್ನು ಕೂಗುತ್ತಾ ಗಡಿಬಿಡಿಯಿಂದ ಹೋಗುತ್ತಿದ್ದರು. ಮುಗಿಲಕಡೆ ಅವರ ನೋಟ ನೆಟ್ಟಿತ್ತು. ಆ ಮುಖದಲ್ಲೊಂದು ಚಿಂತೆ; ಮಹಾವಸ್ತು ಕಳೆದಿದೆ, ಎಂಬ ಹೆದರಿಕೆ; ಆ ವಸ್ತುವು ಮರಳಿ ದೊರೆಯುವುದೊ ಇಲ್ಲವೊ ಎಂಬ ಸಂದೇಹ, ಎದೆಗುದಿ; ಮಾತಿನಲ್ಲಿ ಆತುರ; ಓಡಾಟದಲ್ಲಿ ಅವಸರ— ಎಲ್ಲವೂ ಎದ್ದು ತೋರುತ್ತಿದ್ದುವು. ಬಸವ ಭಟ್ಟರು ಇಬ್ಬರೂ ಮುಗಿಲಕಡೆ ಮುಖ ಎತ್ತಿ ನೋಡುತ್ತಲಿದ್ದರು.

'ಪುಟ್ಟು' ಎಂಬ ಹಕ್ಕಿ ಗೂಡಿಗೆ ಬಂದಿರಲಿಲ್ಲ. 'ಇನ್ನೂ ಬರಲು ಹೊತ್ತಿದೆ. ಅಥವಾ ಅದು ಬಾರದಿದ್ದರೆ ಏನು ನಷ್ಟ? ಏನು ಸೂರೆ ಹೋಗುತ್ತೆ? ಇನ್ನೂ ಪಾರಿವಾಳಗಳಿವೆಯಲ್ಲಾ, ಅಯ್ಯೋ ಮನುಷ್ಯ' ಎಂದು ನನ್ನಷ್ಟಕ್ಕೆ ನಾನೆ ಎಂದುಕೊಂಡೆ. ಆದರೆ ಇನ್ನೊಂದು ಶೀಘ್ರವಾದ ಆಲೋಚನೆ ಹೊಳೆಯಿತು. ಆ ಪುಟ್ಟು ಮುಂದ್ದಾದುದು. ಪುಟ್ಟುವಿನಲ್ಲಿ ಭಟ್ಟರು ತಮ್ಮ ಮಗ ಪುಟ್ಟುವಿನ ನಷ್ಟವನ್ನು ಮರೆಯಲು ಸಮರ್ಥರಿದ್ದರೆ ಆ ಮಗುವಿನ ಕಲ್ಪನೆಯನ್ನು ಹಕ್ಕಿ ಪುಟ್ಟುವಿನಲ್ಲಿ ತರುತ್ತಿದ್ದರು. ಮಗುವನ್ನು ಯಾವ ರೀತಿ ಪ್ರೀತಿಸಿದರೋ ಹಾಗೆ ಹಕ್ಕಿ ಪುಟ್ಟುವನ್ನು ಪ್ರೀತಿಸಿದರು. ಪುಟ್ಟುವು ಮರಳದಿದ್ದರೆ? ಭಟ್ಟರಮೇಲೆ ಗಗನ ಕವಿದಂತೆ ಅವರ ದುಃಖ ಇಮ್ಮಡಿಸುತ್ತದೆ; ಪುಟ್ಟು ಎಂಬ ಮಗುವನ್ನು ಕಳೆದುಕೊಂಡಿದ್ದೊಂದು— ಪುಟ್ಟುವಿನ ಪ್ರತಿರೂಪ ಪಾರಿವಾಳ ಪುಟ್ಟುವನ್ನು ಕಳೆದುಕೊಂಡದ್ದೊಂದು.

ಇಷ್ಟರಲ್ಲಿಯೆ ಬಸವ, ಪಾರಿವಾಳವು ಮರಳಿದ ವಾರ್ತೆಯನ್ನು ಹೇಳಿದ. ಭಟ್ಟರು ಓಡಿಹೋಗಿ ಪಾರಿವಾಳವನ್ನು ಹಿಡಿದುಕೊಂಡು ಕುಣಿದಾಡತೊಡಗಿದರು; ಮುದ್ದಾಡತೊಡಗಿದರು.

ಅವರ ಹರುಷಕ್ಕೆ ಪಾರವಿರಲಿಲ್ಲ.

———o———

ಲಕ್ಷ್ಮೀ ವಸ್ತ್ರಭಾಂಡಾರ ಧಾರವಾಡ

(ಮೋಟಾರ್ ಸ್ಟ್ಯಾಂಡಿನ ಬಳಿಯಲ್ಲಿ)

ನಿಮಗೆ ಎಂತಹ ಬಟ್ಟೆ ಬೇಕೋ ಅಂತಹ ಬಟ್ಟೆ ನಮ್ಮಲ್ಲಿ ಯೋಗ್ಯವಾದ ಬೆಲೆಗೆ ಸಿಕ್ಕುವುದು. ಹೊಸ ಹೊಸ ಫ್ಯಾಶನೇಬಲ್ ಬಟ್ಟೆ ಬೇಕಾದವರು ಇಲ್ಲಿಗೇ ಬರಬೇಕು.

ಪ್ರಾಮಾಣಿಕತನವೇ ನಮ್ಮ ಶೀಲ!

ಕೊಲ್ಹಾಪುರದಲ್ಲಿಯ

ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು

ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್

ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.

* ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ತಿರುವಾಂಕೂರಿನಲ್ಲಿ ಕನ್ನಡಿಗರು

★

ತಿರುವಾಂಕೂರಿನಲ್ಲಿ ಅರುವತ್ತು ಸಾವಿರಕ್ಕೆ ಮಿಕ್ಕಿ ಕನ್ನಡಿಗರಿದ್ದಾರೆ. ಆದರೆ ತಾವು ಕನ್ನಡಿಗರೆಂಬ ಅರಿವನ್ನವರು ಕಳೆದುಕೊಂಡಿದ್ದಾರೆ. ಕನ್ನಡಿಗರ ಹಾಗೆಯೆ ಈ ಸೀಮೆಯಲ್ಲಿ ನೆಲೆಮಾಡಿರುವ ತಮಿಳರು, ಮಲೆಯಾಳಿಗಳಲ್ಲಿಯೂ ತಮಿಳಿನ ಪ್ರೀತಿಯ ಪ್ರಚಾರ ನಡೆಯಿಸಿದ್ದಾರೆ; ಆದರೆ ಕನ್ನಡಿಗರು ತಮ್ಮ ನುಡಿಯನ್ನೆ ಬಿಡುತ್ತ ಹೊರಟಿದ್ದಾರೆ.

★

ತಿರುವಾಂಕೂರಿನಲ್ಲಿ ಕನ್ನಡಿಗರ ಸಂಖ್ಯೆ ಸಾಕಷ್ಟು ಇದೆ. ದೇವಸ್ಥಾನದಲ್ಲಿ ಪೂಜಿಸುವುದೆ ಪ್ರಧಾನವೃತ್ತಿ ಅವರಿಗೆ. ಅದೂ ಅಲ್ಲದೆ ಉಚ್ಚ ರಾಜಕೀಯಾಧಿಕಾರಿಗಳೂ ಇದ್ದಾರೆನ್ನಿ. ನಾನು ಕೇಳಿದ ಮಟ್ಟಿಗೆ ಇಡಿಯ ತಿರುವಾಂಕೂರಲ್ಲಿ ಮಾತ್ರವೆ (ಕೊಚ್ಚಿ ಮಲಬಾರನ್ನು ಬಿಟ್ಟು) ೬೦ ಸಾವಿರಕ್ಕೆ ಮೇಲ್ಪಟ್ಟು ಕನ್ನಡಿಗರಿದ್ದಾರೆ. ಆದರೆ ಅವರನ್ನು ಕನ್ನಡಿಗರೆಂದು ಕರೆಯುವುದು ನನ್ನದೊಂದು ದೊಡ್ಡ ಸಾಹಸವೇ ಸರಿಯೆಂದು ಒಪ್ಪಿಕೊಳ್ಳಬೇಕಾಗಿದೆ. ಅವರಲ್ಲಿ ಕನ್ನಡ ಸಂಸ್ಕೃತಿಯ ಕುರುಹುಗಳೆ ನಮಗೆ ಕಂಡುಬರುವುದಿಲ್ಲ. ಮಲೆಯಾಳಿಗಳೋ ತಮಿಳರೋ ಆಗಿ 'ರೂಪಾಂತರ'ಗೊಂಡಿದ್ದಾರೆ. ಕನ್ನಡಭಾಷೆ-ಸಂಸ್ಕೃತಿಗಳನ್ನೆಲ್ಲ ಮರೆತುಬಿಟ್ಟಿದ್ದಾರೆ. ಈ ಮಾತನ್ನು ಬಲು ವಿಷಾದದಿಂದ ಬರೆಯುತ್ತಿದ್ದೇನೆ: ನನಗೊಬ್ಬ ಕನ್ನಡಿಗ ಸಿಕ್ಕಿದ—ಅವನ ತಂದೆ ಕನ್ನಡಿಗರು. "ನಿನ್ನ ಊರು ಯಾವುದು?" ಎಂದು ಕೇಳಿದ ನನ್ನನ್ನು ತಮಿಳಿನಲ್ಲಿ. "ಮಂಗಳೂರು" ಎಂದೆ ನಾನು ಅರೆತಮಿಳಿನಿಂದ. "ಅರೆ, ತಮಿಳು ಬರೋದಿಲ್ಲೇನು ನಿನಗೆ?" ಅವನೆಂದ.

"ಇಲ್ಲ" ನಾನೆಂದೆ.

"ಮಲೆಯಾಳಿ?"

"ಇಲ್ಲ!"

ಅವನು ಗಟ್ಟಿಯಾಗಿ ನಕ್ಕು ಕೇಳಿದ "ಹಾಗಾದರೆ ಮಂಗಳೂರಿನಲ್ಲಿ ಎಲ್ಲರೂ ಹೇಗೆ ಮಾತಾಡುತ್ತಾರೆ?" ಹೀಗೆ ಅವನು ಪ್ರಶ್ನಿಸುವಾಗ ತುಂಬ ಆಶ್ಚರ್ಯದ ಭರದಲ್ಲಿದ್ದಂತೆ ಕಂಡನವ.

ಎಂತಹ ವಿಲಕ್ಷಣ ಪ್ರಶ್ನೆಯಿದು! ಅವನಂತೆಯೇ ನನಗೂ ಆಗಿತ್ತೆನ್ನಿ! "ಕನ್ನಡ ಮಾತನಾಡುತ್ತಾರೆ— ಏಕೆ ಈ ಊರಲ್ಲಿ ಕನ್ನಡವಿಲ್ಲವೆಂದು ಯಾರೂ ಮಾತನಾಡುವ ಪದ್ಧತಿಯಿಲ್ಲವೆ? ಹಾಗೆಯೆ ನಮ್ಮಲ್ಲಿ" ಎಂದೆ ನಾನು.

"ಕನ್ನಡ ಭಾಷೆ ಏನೂ ಚೆನ್ನಾಗಿಲ್ಲ; ಓಗ್ತಾನೆ-ನೋಡುಣ-ಹಾಕ್ತಾರೆ-ಏನೇನೋ ಒರಟೊರಟು ಶಬ್ದಗಳಷ್ಟೆ ಅದರಲ್ಲಿ! ಇಲ್ಲಿ 'ಸಂಸಾರನೌಕಾ' ಫಿಲಿಂ ಬಂದಿತ್ತು. ಥೂ— ಕನ್ನಡ ಏನು ಸುಟ್ಟ ಭಾಷೆಯೊ! ತಮಿಳು ಎಂತಹ ಸೊಗಸಾದ ಭಾಷೆಯೆನ್ನುತ್ತಿ! ಅದರಲ್ಲಿ ದಿನಪತ್ರಿಕೆಗಳೇನು—ಕತೆ-ಕಾದಂಬರಿಗಳೇನು, ಫಿಲ್ಮುಗಳೇನು, ಸಂಗೀತವೇನು; ತಮಿಳು ಸರ್ವಾಂಗಸುಂದರ ಭಾಷೆ" ಎಂದು ಸಿದ್ಧಾಂತ ಮಾಡಿದ ಆ ಕನ್ನಡಿಗ ಮಹಾರಾಯ! ನನಗೆ ಹೇಗೋ ಎನಿಸಿತು. ಮನಸ್ಸಿನಲ್ಲಿ ಒಂದು ಬಗೆಯ ಆವೇಶ ಆಟವಾಡತೊಡಗಿತು. "ನೀನೇನು ಬಲ್ಲೆ ಕನ್ನಡದ ಸೊಗಸು!" ನಾನು ಹೇಳತೊಡಗಿದೆ. "ತಮಿಳಿಗಿಂತ ಚೆನ್ನಾಗಿದೆ ಕನ್ನಡ. ನೀನು ಕನ್ನಡಿಗ ಆಗಿ ಹೀಗೆನ್ನುತ್ತೀಯಾ? ನಮ್ಮ ಕನ್ನಡ ನಾಡಿನಲ್ಲಿರುವ ತಮಿಳರಾರೂ ನಿನ್ನ ಹಾಗೆ 'ಪರಿವರ್ತಿತ'ರಾದ ಉದಾಹರಣೆಯನ್ನು ನಾನು ತಿಳಿದಿಲ್ಲ. ನೀನೇಕೆ ಕನ್ನಡ ಕಲಿಯಬಾರದು? ಈ ಊರಲ್ಲಿ ತಮಿಳರು ನಿಮ್ಮೆಲ್ಲರ ಮೇಲೆ ತಮಿಳನ್ನು ತೂರಿದಂತೆ ಕನ್ನಡವೂ ಒಂದು ಭಾಷೆ, ಕನ್ನಡಿಗರಿಗೂ ಒಂದು ಒಳ್ಳೆಯ ಸಂಸ್ಕೃತಿಯಿದೆ ಎಂದು ನೀನೇಕೆ ಪ್ರಚಾರಮಾಡಬಾರದು?"

"ನಮಗೇಕಪ್ಪಾ ಕನ್ನಡ? ನಮ್ಮ ಅನ್ನ-ಪ್ರಾಶನಕ್ಕೆ ಮೊದಲುಗೊಂಡು ಪಿಂಡಪ್ರದಾನದ ವರೆಗೆ ನಮಗೆ ಇಲ್ಲೇ; ಏನಾದರೂ ಅನ್ನಬ್ರಹ್ಮನ ವರದಾನವೂ ಇಲ್ಲಿಯೇ ಸಿಗಬೇಕಾದದ್ದು. ಹೀಗಿರುವಾಗ ನಮಗೆ ಕನ್ನಡ ಕಲಿತು ಸಿಗಬೇಕಾದ್ದೇನಪ್ಪಾ? ಕನ್ನಡ-ಪ್ರಚಾರ ಮಾಡಿದರೆ ಏನಾದರೂ ಹೊಟ್ಟೆ ತುಂಬುತ್ತದೆಯೇ?" ಎಂದನಾತ. ಇದೊಂದು ನಡೆದ ಸಂದರ್ಭದ ಸಂಕ್ಷೇಪಕಥನ. ನಾನು ಅವನೊಡನೆ ಸುಮಾರು ಮೂರು ಘಂಟೆಯ ಕಾಲ ಚರ್ಚೆ ನಡೆಯಿಸಿದ್ದೇನೆ. ಮಧ್ಯೆ ಮಧ್ಯೆ ನಮ್ಮ ನಡುವೆ ಬಿರುಸಾದ ಸಂಭಾಷಣೆಯೂ ನಡೆದಿದೆ. ಕನ್ನಡಿಗರ ರಕ್ತದಿಂದ ಬೆಳೆದಿರುವ ಈತನ ಈ ಚಿತ್ತವೃತ್ತಿಯು ನನಗೆ ಸಾವಿನ ನೋವನ್ನಿಕ್ಕಿತು.

ಶ್ರೀ. ಬನ್ನಂಜೆ ರಾಮಾಚಾರ್ಯರು, ಉಡುಪಿ

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚುಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು !
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರ
ಬೇಕೆಂಬುವನ್ನು ಕೂಡಲೆ ತಿಳಿಸಿರಿ !
ಬಣ್ಣಬಣ್ಣದ ಏನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು !
ಬೆಲೆ ಸುಲಭ ! ★ ತೃಪ್ತಿಕರವಾದ ಕೆಲಸ !!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು !

ಗೋನಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

'ಏನೋ ಇವನೊಬ್ಬ ಹೀಗಾದರೆ ನಮಗೇನು?' ಎಂದು ಸಮಾಧಾನ ಮಾಡಿಕೊಳ್ಳೋಣವೆಂದರೆ ಕನ್ನಡಿಗರೆನಿಸುವವರಲ್ಲಿ ನೂರಕ್ಕೆ ತೊಂಬತ್ತು ಮಂದಿಯೂ ಹೀಗೆಯೆ ಇದ್ದಾರೆಂಬ ಸತ್ಯಸಂಗತಿಯು ತಿಳಿದಾಗ ಯಾರಿಗೆ ದುಃಖವಾಗದೆ ಇದ್ದೀತು ?

ಶ್ರೀ. ಪದ್ಮನಾಭ ಕುಕ್ಕಿಲ್ಲಾಯರೆಂಬ ಕನ್ನಡಿಗರು ತಿರುವಾಂಕೂರು ಸರಕಾರದ ವಕೀಲರಾಗಿದ್ದಾರೆ; ಮುಂದೆ ದಿವಾನರಾದಾರೆಂದೂ ಪ್ರತೀತಿಯಿದೆ. ಡಾ. ದಾಸಣ್ಣಾಚಾರ್ಯ (M. B. B. S.) ರವರು ಸರಕಾರಿ ಡಾಕ್ಟರರಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಕನ್ನಡಿಗರು ಅಲ್ಲಿ ಸರಕಾರದ ಅಧಿಕಾರದಲ್ಲಿ ಇದ್ದಾರೆ. ಭಂಡವಾಳದಾರರಾದ ಕನ್ನಡಿಗರ ಸಂಖ್ಯೆಗೂ ಅಲ್ಲಿ ಕಡಮೆಯಿಲ್ಲ. ಹೀಗಿದ್ದರೂ ಕನ್ನಡಿಗರ ಸರನಾಡಿಗಳಲ್ಲಿ ಹುದುಗಿರುವ ಪ್ರಬಲ ಜಾಡ್ಯವು ಕನ್ನಡನಾಡನ್ನು ಅವರ ದೃಷ್ಟಿಯಿಂದ ಮರೆಯಿಸಿದೆ.

ಕನ್ನಡಿಗರಲ್ಲಿ ಸ್ವಾಭಿಮಾನಶೂನ್ಯತೆಯೊಂದು ದೊಡ್ಡ ಕೊರತೆ. ಅವರು ಎಲ್ಲಿ ಹೋದರೋ ಅಲ್ಲಿಯವರ ವೇಷಹಾಕಿಕೊಂಡು ಬಿಡುತ್ತಾರೆ. ಕ್ರಮೇಣ ತನ್ನ ಆತ್ಮನ ಅವ್ಯಭಿಚಾರಿ ಧರ್ಮವಾಗಿ 'ಸಂಸ್ಕೃತಿಪ್ರಿಯತನ'ವನ್ನು ಕಳೆದುಕೊಂಡು ಬಿಡುತ್ತಾರೆ. ತಿರುವಾಂಕೂರಿನಲ್ಲಿ ತಮಿಳರು ಇರುವವರು ಅಲ್ಪಸಂಖ್ಯಾಕರಾದರೂ, ತಮ್ಮ ಆದರ್ಶವಾದ ಭಾಷಾಭಿಮಾನದಿಂದ ತಿರುವಾಂಕೂರಿನ ಮೂಲೆ ಮೂಲೆಯಲ್ಲಿ ಅವರು ತಮಿಳು ಬಾವುಟವನ್ನೇರಿಸಿಬಿಟ್ಟಿದ್ದಾರೆ. ತಮಿಳನ್ನು ಒಳ್ಳೆಯ ಭಾಷೆಯೆಂದು ಜನರಿಗೆ ಬೋಧಿಸಿ, ತಾವು ಸತತ ಪರಿಶ್ರಮದಿಂದ ಇತರರಿಗೂ ಕಲಿಸಿದ್ದಾರೆ. ತಮಿಳು ದಿನಪತ್ರಿಕೆಗಳು ಹೋದ ಹೋದಲ್ಲಿ ಸಿಗುತ್ತವೆ. ಎಲ್ಲಿ ನೋಡಿದರೂ ತಮಿಳಿನ ಕೋಲಾಹಲ. ಮಲೆಯಾಳ ರಾಜ್ಯದಲ್ಲಿ ತಮಿಳುಸಂಸ್ಕೃತಿ ನೆಲಸಕೂಡದೆಂದೇನೂ ನನ್ನ ವಾದವಲ್ಲ; ಅವಶ್ಯವಾಗಿ ನೆಲಸಲಿ, ಅವರಿಂದ ಕನ್ನಡಿಗರೇಕೆ ಪಾಠ ಕಲಿಯಕೂಡದು ಎಂಬುದೇ ನನ್ನ ಜಿಜ್ಞಾಸೆ.

ನಮ್ಮ ಊರಲ್ಲಿ ಒಬ್ಬರು ತಮಿಳರು ನನಗೆ ಭೆಟ್ಟಿಯಾಗಿದ್ದರು. ಅವರು ಮಂಗಳೂರಿನ ಕಾಲೇಜಿನಲ್ಲಿಯೆ ಶಿಕ್ಷಣಹೊಂದಿದ್ದರು; ಚೆನ್ನಾಗಿ ಕನ್ನಡ ಬಲ್ಲವರಿದ್ದರು. ನನಗೆ ಅವರು ಸಿಕ್ಕಿದಾಗ ಅವರ ಕೈಯಲ್ಲಿ "ಆನಂದವಿಕಟನ್" ಪತ್ರಿಕೆಯ ಸಂಚಿಕೆಯಿತ್ತು.

"ಏನ್ರೀ, ನಮ್ಮ ಊರಿನಲ್ಲಿದ್ದರೂ ನೀವು ತಮಿಳನ್ನು ಮರೆಯಲಾರಿರಲ್ಲಾ ?" ಎಂದೆ ನಾನು.

"ಯಾಕ್ರೀ ಹಾಗೆನ್ನುತ್ತೀರಿ ? ನಮ್ಮ ಭಾಷೆ ನಮಗೆ ದೊಡ್ಡದು! " ಎಂದರವರು.

"ಏನೋ ಅಪ್ಪ.... ನಮ್ಮ ಕನ್ನಡದೊಳಗೇನಾದರೂ ಒಳ್ಳೆಯ ಪತ್ರಿಕೆ ಕೊಂಡುಕೊಳ್ಳಬಾರದಿತ್ತೇ ?" ಎಂದೆ ಪುನಃ ನಾನು.

"ಪ್ರತಿಯೊಂದು ಭಾಷೆಯೂ ಒಂದೊಂದು ಸೊಗಸಿನಿಂದ ಕೂಡಿರುತ್ತದೆ. ಅವರವರ ಮಾತುಗಳು ಅವರವರಿಗೆ ವಿಶೇಷ ಚೆನ್ನಾಗಿ ಕಾಣುತ್ತವೆ." ಎಂದವರು ಮುಂದೆ ನಡೆದರು.

ದೂರದ ಕನ್ನಡದಲ್ಲಿ ಹೊಟ್ಟೆಯ ಪಾಡಿಗಾಗಿ ನೆಲಸಿದ ಆ ತಮಿಳರಲ್ಲಿ ನೆಲಸಿರುವ ನಾಡನುಡಿಯ ಮೇಲಿನ ನಿರತಿಶಯ ಅಭಿಮಾನ, ಸಮಂಜಸವಾದ ಆ ಭಾವನೆ ಅವನ್ನೆಲ್ಲ ನೆನಸಿಕೊಂಡಾಗ ನನಗೇ ಆಶ್ಚರ್ಯವಾಗುತ್ತದೆ. ತಿರುವಾಂಕೂರು ಕನ್ನಡಿಗರಲ್ಲಿ ಒಬ್ಬರಾದರೂ ಇಂತಹವರು ದೊರೆತರೆ ಆಗ ನನಗೆ ಎಷ್ಟೋ ಸಮಾಧಾನವೆನಿಸುತ್ತಿತ್ತು. ಆ ಭಾಗ್ಯ ಕನ್ನಡಿಗರಲ್ಲಿಲ್ಲ!

ಈ ಅನುಕರಣಪ್ರಿಯ—ಸ್ವಾಭಿಮಾನಶೂನ್ಯ - ಮನೋವೃತ್ತಿಯಿಂದಾಗಿ ಕನ್ನಡಿಗರು ಇದುವರೆಗೆ ತಮ್ಮ ಪತನವನ್ನು ತಾವೇ ತಂದುಕೊಂಡಿದ್ದಾರೆ. ಜಗತ್ತೇ ಎಚ್ಚೆತ್ತ ಈ ಕಾಲದಲ್ಲಿ ಕನ್ನಡಿಗರು ತಮ್ಮ ತಪ್ಪನ್ನು ತಿದ್ದಿಕೊಳ್ಳುವಷ್ಟು ಸುಧಾರಿಸಿಲ್ಲವೆಂದು ಹೇಳಲು ನಾಚಿಕೆ ಬರುತ್ತದೆ.

ಕರ್ನಾಟಕದ ಬಾವುಟವನ್ನು ತಿರುವಾಂಕೂರಿನಲ್ಲಿ ಸ್ಥಾಪಿಸುವ ಹಂಬಲದಿಂದ ನಾನು ಕೆಲಕಾಲ ದುಡಿದೆ. ಆದರೆ ಬೆಂಬಲವಿಲ್ಲದೆ ನನ್ನ ಉದ್ಯೋಗವು ಅಲ್ಲಿಯೊಂದು ಚೇಷ್ಟೆಯಾಗಿ ಪರಿಣಮಿಸಿತು. ಈ ಎಲ್ಲ ವಿಚಾರವನ್ನೂ ನಾನು ಸ್ವತಃ ಸಹಜವಾಗಿ ಅನುಭವಿಸಿ ಬರೆದಿದ್ದೇನೆ. ತೆಂಕಣ ಮೂಲೆಯಲ್ಲಿ ನೆಲೆಯಾಗಿ ಕನ್ನಡವನ್ನು ಮರೆತ ನಮ್ಮ ನಾಡಬಂಧುಗಳಲ್ಲಿ ತಕ್ಕ ಜಾಗ್ರತಿಯಾಗುವ ಹಾಗೆ ಏನಾದರೂ ತಕ್ಕ ವಿಧಾಯಕ ಕಾರ್ಯಕ್ರಮವನ್ನು ಧುರೀಣರು-ಅನುಕೂಲವಿರುವವರು— ಕೈಕೊಂಡು ತಕ್ಕ ಜಾಗ್ರತೆ ಕೈಕೊಳ್ಳದಿದ್ದರೆ-ಉದಾಸೀನ ಮಾಡಿದರೆ ಕನ್ನಡ ತಾಯಿಯ ಮಕ್ಕಳಾದ ಆ ೬೦ ಸಾವಿರಕ್ಕೆ ಮಿಕ್ಕಿದ ಕನ್ನಡ ಪ್ರಜೆಗಳು ಅನ್ಯಾಯವಾಗಿ ಮಲೆಯಾಳಿಗಳೋ- ತಮಿಳರೋ ಅಥವಾ ಇನ್ನೇನೋ ಆಗುತ್ತಾರೆ.

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರೆಜಿಸ್ಟ್ರೇಶನ್ನಿನ ಬಗ್ಗೆ

ಸಿ. ಜಿ. ಅನುಂಡ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ

ಇವರಿಗೆ ಬರೆಯಿರಿ.
ವೆಚ್ಚ ಕಡಿಮೆ ! ಹೆಚ್ಚಿನ ಸಂರಕ್ಷಣೆ !

ಕನ್ಯಾಪಿತನ ಗೋಳು

ಶ್ರೀ. ಶ್ಯಾಮಸುಂದರ ಪುಣೆ

ಮಗಳು ಶರಣಾರ್ಥಿ ಆಂದಳು ಸಾಲಿಗೆ
ಬಂತು ಚಿಂತೆಯು ಗಂಟೆನ್ನ ಪಾಲಿಗೆ !

ಆದೆ ಗಿರಾಕಿ ವರನೆಂಬ ವ್ಹಾಲಿಗೆ;
ಬಂತು ಎಡತಾಕುಬೇನೆಯು ಕಾಲಿಗೆ !

ದಾರಿ ಬೆಚ್ಚಿತು ಸಾಯಕಲ್–ಗಾಲಿಗೆ
ಇಲ್ಲ ವಿಶ್ರಾಂತಿ ನೀರಿನ ಥಾಲಿಗೆ !

ಮಾಡಿ ಬಿನ್ನಹ ಸೋತಿತು ನಾಲಿಗೆ
ಬಂದೇ ಶಬ್ದದ ಉತ್ತರ ಪಾಲಿಗೆ !

ಕೆಲರು ಗುಲಾಬಿ ಅಂದರು ಜಾಲಿಗೆ
ಗಂಜಿ ತೋರ್ದರು ಹೋಗಲು ಹಾಲಿಗೆ !

ಮತ್ತೆ ಕೇಳಬೇಕಾಯ್ತು 'ವಶೀಲಿ'ಗೆ
ತೂತು ಬಿದ್ದಿತು ದುಡ್ಡಿನ ಚೀಲಿಗೆ !

ಹೊತ್ತು ಎಳ್ಳಷ್ಟು ಸಿಗಲಿಲ್ಲ ಕೂಳಿಗೆ
ಎಣಿಕೆ ಇಲ್ಲ ಕನ್ಯಾಪಿತನ ಗೋಳಿಗೆ !

* * *

ಊರಿಽ ಊರಿಽ ಜನರಿಗಾಯ್ತು ಹೋಳಿಗೆ
ಗಂಡುಮಕ್ಕಳ ಕೈಗಂದೇ ಜೋಳಿಗೆ !

ಹೆಣ್ಣಿಗೆ ಹರಕೆ *

ಶ್ರೀ. 'ಶ್ರೀಕೃಷ್ಣ' ಶಾರದಾಮಂಡಲ

೧

ಗಂಡ ಉದ್ಯೋಗವಿಲ್ಲದೆ ಬರಿದೆ ಅಲೆದರೂ
ಹಿರಿಯರಾ ಘನಸಾಲ ಶೂಲದಂತೆನಿಸಿದರು
ಮುಂಬರುವ ಜೀವನಕೆ ಸುಖವು ಕನಸಾದರೂ
ಎಂಟುಮಕ್ಕಳ ತಾಯಿಯಾಗು ಮಗಳೆ !

೨

ಹುಟ್ಟಲಿಹ ಮಕ್ಕಳಿಗೆ ಬಟ್ಟೆಯಿರದಿದ್ದರೂ
ಹಸಿವು ಹಸಿವೆಂದು ಅವು ಹೊಟ್ಟೆಬಡಕೊಂಡರೂ
ಹಲವು ರೋಗಗಳಿಂದ ಬಳಬಳಲಿ ಸತ್ತರೂ
ಎಂಟುಮಕ್ಕಳ ತಾಯಿಯಾಗು ಮಗಳೆ !

೩

ದೇಶವಂತಹರಿಂದ ತುಂಬಿತುಳುಕಾಡಿದರು
ಪರನಾಡಿಗರು ಅವರ ಹೆಣವೆಂದು ಕರೆದರೂ
'ಪರ'ವು ಮೃಗಜಲವಾಗಿ 'ಇಹ' ನರಕವಾದರೂ
ಎಂಟುಮಕ್ಕಳ ತಾಯಿಯಾಗು ಮಗಳೆ !

* ವಿಜಾಪುರದ ತರುಣರು ಹೊರಡಿಸುವ 'ಧರ್ಮವೀರ' ಎಂಬ ಕೈಬರೆಹದ ಪತ್ರಿಕೆಯ 'ಮಧುವನ'ದಿಂದ ಆಯ್ದುದಿದು.
— ಸಂ. ಜ.

ಕವಿತಾದೇವಿಯಲ್ಲಿ ಕೊನೆಯ ಪ್ರಾರ್ಥನೆ

ಶ್ರೀ. ಟಿ. ವ್ಹಿ. ಕಟ್ಟಿ

ಕವಿಯಾಗಬೇಕೆಂಬ ಹಂಬಲವು ನನ್ನ
ಸಲೆಬಾಧೆ ಪಡಿಸುವುದು ಸಹಿಸೆನೀ ಬನ್ನ ! ೧

ಅಕ್ಕರವ ಬರೆದಳಿಸಿ ಬೇಜಾರವಾಯ್ತು,
ಶಬ್ದಗಳ ಹೆಣೆ ಹೆಣೆದು ಸಾಕು ಸಾಕಾಯ್ತು ! ೨

ಬರೆಬರೆದು ಪೆನ್ಸಿಲ್ಲು ಸವೆದು ಸಣ್ಣಾಯ್ತು,
ಹರಿದೊಗೆದು ಕಾಗದವು ಬುಟ್ಟಿತುಂಬಾಯ್ತು ! ೩

ಪ್ರೋಸ್ಟಿನವರಿಗೆ ಕೊಟ್ಟು ಹಣವೆಷ್ಟೊ ಹೋಯ್ತು,
ಇಷ್ಟಾದರೂ ಕವಿತೆ ಆಚ್ಛಾಗವಾಯ್ತು ! ೪

ಬಿಟ್ಟು ಬಿಡುವೆನು ಇನ್ನು ಈ ಹಾಳು ಹಂಬಲವ
ಕೊಟ್ಟುಬಿಡು ದೇವಿ ನೀ ನನಗೊಂದು ವರವ ! ೫

ನಡಸಿಕೊಡು ನನ್ನವ್ವ ಕೊನೆಯ ಪ್ರಾರ್ಥನೆಯೊಂದು
ಹರಸು ಕವಿತೆಯಿದೊಂದು ಅಚ್ಛಾಗಲೆಂದು ! ೬

ನವಮತವಾದದ ನವನೀತಿವಾದ

★

ಶ್ರೀ. ಜೋಗಳೇಕರ ಪಾಂಡುರಂಗರಾಯರು, ಬಿ. ಎ.

ಅವರಿಂದ

★

ಬರಿಯೆ ಮನಸ್ಸೆಂದರೆ ಮಾನವನಲ್ಲ; ಬರಿಯೆ ದೇಹವೆಂದರೂ ಮಾನವನಲ್ಲ. ಮಾನವನು ಮನೋದೇಹಿ! ಮನದ ಪರಿಣಾಮ ದೇಹದ ಮೇಲೆ, ದೇಹದ ಪರಿಣಾಮ ಮನದಮೇಲೆ ಆಗುವುದು ಕಂಡುಂಡ ಮಾತು. ಇವೆರಡರ ನೈಸರ್ಗಿಕ ವಿಕಾಸವೆ ನವಮತವಾದಿಗಳ ಗುರಿಯಾಗಿದೆ. ಇದನ್ನು ಅರಿತುಕೊಳ್ಳದೆ 'ಹೊಸದೆಲ್ಲ ಹಾಳಿಗೆ ಹಾದಿ' ಎಂದು ಹಳಿಯುತ್ತ ಹೋಗುವುದು ಸಮಂಜಸತನವೆನಿಸದು!

★

ಬಂದಿದೆಯಾಗಿದೆ ಹೊಸಯುಗವು! ತಂದಿದೆ ತಂದಿದೆ ಈ ಯುಗವು,
ಕಾಲಕೆ ತಕ್ಕ ಜೀವನ ಒಲವು!

ಹಿಂದುಮುಂದಿನ ಬಾಳುವನು | ತಂದೆಯಾ ನೆಳಲಾಗಿ |
ಮುಂದುಮುಂದೆ ತಂದೆಯಂ ಮೀರಿ ಆತನಿಂ
ಮುಂದುವರಿಯುವನು; ಸರ್ವಜ್ಞ ||

The old order changeth yielding place to new
Lest one good custom should corrupt the World.
—*Lord Tennyson.*

ಸಮಾಜದಲ್ಲಿ ಸಾಧಾರಣವಾಗಿ ಹೊಸಬರು ಮತ್ತು ಹಳಬರು ಎಂಬ ಎರಡು ಹೆಗ್ಗುಂಪುಗಳು ಎಂದಿಗೂ ಕಂಡು ಬರುವುದುಂಟು. ಧರ್ಮ, ನೀತಿ, ರಾಜಕಾರಣ, ಅರ್ಥಕಾರಣ, (Economics), ಸಾಹಿತ್ಯ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ನವಮತವಾದಿಗಳ ಮತ್ತು ಸನಾತನಿಗಳ ತಾಕಲಾಟವು ತಪ್ಪಿದ್ದಲ್ಲ. ಆಂಗ್ಲ ಶಿಕ್ಷಣದ ಪರಿಣಾಮವಾಗಿ ಇತ್ತೀಚಿಗೆ ಮಾತ್ರ ನಮ್ಮ ಭಾರತದಲ್ಲಿ ಹಳಬರನ್ನು ಎದುರಿಸುವ ಹೊಸ ಮತವು ತಲೆದೋರಿದೆಯೆಂದು ಜನಸಾಮಾನ್ಯರು ನಂಬುವುದುಂಟು. ಪಾಶ್ಚಿಮಾತ್ಯರ ಪರಿಚಯದಿಂದ ನಮ್ಮ ನವಮತವಾದಕ್ಕೆ ತೀವ್ರ ಪ್ರಚೋದನೆಯಾಗಿರುವುದೇನೋ ನಿಜ; ಆದರೆ ಪಡುವಣಿಗರು ನಮ್ಮಲ್ಲಿ ಬರುವ ಮುನ್ನ ಭಾರತದಲ್ಲಿ ಹೊಸ-ಹಳಬರ ಹೋರಾಟವು ಇರಲೇ ಇಲ್ಲವೆಂದು ಹೇಳುವಲ್ಲಿ ಮಾತ್ರ ಹುರುಳಿಲ್ಲ. ಸಾವಿರಾರು ವರ್ಷಗಳಾಚೆಯಲ್ಲಿ ತನ್ನ ದಿವ್ಯವಾದ ನಾಟ್ಯಪ್ರತಿಭೆಯಿಂದ ಭಾರತೀಯ ರಸಿಕರನ್ನು ನವರಸಗಳಿಂದ ನಲಿದಾಡಿಸಿದ ಮಹಾಕವಿ ಶ್ರೀ ಭವಭೂತಿಯ ಕಾಲದಲ್ಲಿಯೂ ವೃದ್ಧ-ತರುಣರ ಜಗಳವು ನಡೆದೇ ಇದ್ದಿತೆಂಬುದಕ್ಕೆ **ಮಾಲತೀ-ಮಾಧವ ನಾಟಕವೇ ಸಾಕ್ಷಿ!** ಒಬ್ಬರನ್ನೊಬ್ಬರು ಮೆಚ್ಚಿದ ತರುಣ ಮಾಲತೀ-ಮಾಧವರನ್ನು, ಮಾಲತಿಯ ಅಧಿಕಾರಲುಬ್ಧ ಮುದಿ ತಾತನು ಕೂಡಗೊಡಲಿಲ್ಲ. ಆ ವೃದ್ಧಕಪಿಯು

ಮಾಲತಿಗೆ ಸಲ್ಲದ ಮತ್ತೊಬ್ಬ ವರನಿಗೆ ಅವಳ ಸಮ್ಮತಿ ಇಲ್ಲದೆ ಆಕೆಯನ್ನು ಕೊಡಲೊಪ್ಪಿದುದಕ್ಕಾಗಿ, ಮಾಲತಿಯು ಈ ರೀತಿ ತಂದೆಯನ್ನು ನಿಷೇಧಿಸುವಳು : 'ರಾಜಾರಾಧನಂ ಖಲು ತಾತಸ್ಯ ಗುರುಕಂ ನತ್ವಹಮಾಲತೀ' ಮುಪ್ಪಿನಮೂಲಕ ಕಣ್ಣಿಗೆ ಪರೆಬಂದುದರಿಂದಲೇನೊ, ತರುಣರ ಆಶೆ-ಆಕಾಂಕ್ಷೆಗಳು ಸ್ವಾರ್ಥಪರಾಯಣ ವೃದ್ಧರಿಗೆ ಕಾಣುವುದೇ ಇಲ್ಲ. ಕೊನೆಯಲ್ಲಿ ಸ್ವಾರ್ಥಾಂಧ ಮುದಿಕಪಿಗಳನ್ನು ಪ್ರತಿಭಟಿಸಿ, ಮೋಸಗೊಳಿಸಿ, ತಮ್ಮ ಬಯಕೆಯಂತೆ ಮಾಲತೀ-ಮಾಧವರು ವಿವಾಹಿತರಾಗಿಯೇ ತೀರಿದರು. ಯೋಗ-ಪ್ರಭಾವದ ಹಲಕೆಲವು ಸನ್ನಿವೇಶಗಳನ್ನಷ್ಟು ಬಿಟ್ಟುಕೊಟ್ಟರೆ ಮಾಲತೀ-ಮಾಧವ ನಾಟಕವು ವಾಸ್ತವತೆಯಲ್ಲಿ ರಮ್ಯತೆಯನ್ನು ಬೆರಸುವ ಅಸಾಧಾರಣ ಜಾಣ್ಮೆಯುಳ್ಳ ಒರ್ವ ಆಧುನಿಕ ನಾಟಕಕಾರನ ಹೊಸ ಬಿಸಿ ಕೃತಿಯಾಗಿರುವ್ರದೇನೊ ಎಂದು ಭಾಸವಾಗುವಷ್ಟು ಅದು ವಸ್ತುಸ್ಥಿತಿನಿರೂಪಕ ಕಾವ್ಯವಾಗಿದೆ. ಪುರಾಣ-ಮತವಾದಿಗಳ ಪುರಾಣಪ್ರಿಯತೆಗೆ ಕಾಲಿದಾಸನು ಕೂಡ ಬೇಸತ್ತು 'ಪುರಾಣಮಿತ್ಯೇವ ನ ಸಾಧು ಸರ್ವಂ' ಎಂಬುದಾಗಿ ಹಳಬರನ್ನು ಎಚ್ಚರಿಸಿದ್ದಾನೆ. ಮುದುಕರ ಬೇಕು-ಬೇಡಗಳನ್ನು ಲೆಕ್ಕಿಸದೆ, ಯುವಕ-ಯುವತಿಯರು ಪ್ರಾಚೀನಕಾಲದಲ್ಲಿಯೂ ಪಾಣಿಗ್ರಹಣಮಾಡುತ್ತಿದ್ದರೆಂಬುದನ್ನು, ಉಷಾ-ಅನಿರುದ್ಧ . . ಅರ್ಜುನ-ಸುಭದ್ರಾ ಮುಂತಾದ ರಮ್ಯದಂಪತಿಗಳ ದಿವ್ಯ ಉದಾಹರಣೆಗಳು ಸ್ಪಷ್ಟವಾಗಿ ಸಿದ್ಧಪಡಿಸುವುದಿಲ್ಲವೇ ?

ಅಂತೂ, ವೃದ್ಧರೂ ತರುಣರೂ ಎಂದಿನಿಂದಲೂ ಜಗಳವಾಡುತ್ತ ಬಂದಿರುವರು; ಮುಂದಾದರೂ ಜಗಳವಾಡುವರು. ಹಿರಿ-ಕಿರಿಯರ ಜಗಳಾಟದ ಮೂಲಕಾರಣವು ಅವರವರ ಮನೋಧರ್ಮದಲ್ಲಿಯೆ ಅಡಕವಾಗಿರುವುದೆಂಬುದು ಮನೋವಿಜ್ಞಾನ (Phychology) ದಿಂದ ಚೆನ್ನಾಗಿ ತಿಳಿದುಬರುವುದು. ಮಾನವನಲ್ಲಿರುವ ಅನೇಕ ಪ್ರವೃತ್ತಿಗಳಲ್ಲಿ ಸಂಗ್ರಾಹಕ (Conservative) ಪ್ರವೃತ್ತಿ ಮತ್ತು ಪುರೋಗಮನ (Progressive) ಪ್ರವೃತ್ತಿ ಎಂಬ ಎರಡು ಚಟುವಟಿಕೆಗಳು ಅತಿ ಪ್ರಬಲವಾಗಿರುವುವು. ತುಳಿದ ದಾರಿಯನ್ನೇ ತುಳಿಯುವುದು; ಮಾಡಿದ್ದನ್ನೇ ಮಾಡುವುದು; ಆಡಿದ್ದನ್ನೇ ಆಡುವುದು ಇದು ಮೊದಲನೆಯ ಪ್ರವೃತ್ತಿಯ ಹೆಗ್ಗುರುತು. ಒಂದು ವಿಶಿಷ್ಟ ಮಿತಿಯಲ್ಲಿ ಈ ಸಂಗ್ರಾಹಕ ಪ್ರವೃತ್ತಿಯು ಮಾನವನ ಸಂರಕ್ಷಣೆಗೆ, ಅದೇಕೆ ಪ್ರಗತಿಗೂ, ಅತ್ಯವಶ್ಯವಾದುದು. ಮಾಡಿದ್ದನ್ನೆ ಮಾಡಿಯೇ ಮಾನವನು ಕಜ್ಞನಾಗುವುದುಂಟು. ಆದರೆ, ಈ ಸಂಗ್ರಾಹಕ ಪ್ರವೃತ್ತಿಯು ಮಿತಿಮೀರಿ ಪ್ರಭಾವಿಯಾಯಿತೆಂದರೆ ಮಾತ್ರ ಅದು ನಮ್ಮ ನಾಶಕ್ಕೆ ಕಾರಣವಾಗುವುದು. ಮನುಷ್ಯನು ಬೆಳೆಯುತ್ತ ಹೋದಂತೆ ಅವನಲ್ಲಿ ಕಸುವು ಕಡಿಮೆಯಾಗುತ್ತ ಹೋಗುವುದು. ಆಗ ಅವನು ಹೆಚ್ಚು ಗಳಿಸುವ ಗೊಡವೆಗೆ ಹೋಗದೆ ಗಳಿಸಿದುದನ್ನು ಉಳಿಸಲಿಕ್ಕೆ ಯತ್ನಿಸುವನು. ಹೊಸ ದಾರಿ ತುಳಿಯುವ ಸಾಹಸಕ್ಕೆ ಅವನು ಅಣಿಯಾಗನು. ಮಧ್ಯವಯಸ್ಸಿನಲ್ಲಿ ಮಾನವನಲ್ಲಿ ಸಂಗ್ರಾಹಕ ಮತ್ತು ಪುರೋಗಮನ ಪ್ರವೃತ್ತಿಗಳೆರಡೂ ಸಮಬಲವಾಗಿರುವುವು. ತರುಣರಲ್ಲಿ ಕಸುವು ಹೊರಸೂಸಿ ಹರಿಯುವ ಮೂಲಕ ಹೊಸ ಹೊಸ ಸಂಗತಿಗಳ ತಿರುಳನ್ನು ಅನುಭವಿಸಿಬಿಡಬೇಕೆಂಬುದರ ಹಸಿವು ಅವರನ್ನು ಯಾವಾಗಲೂ ಮುಂದೂಡುವುದು. ಒಂದೇ ಒಂದು ವ್ಯಕ್ತಿಯ ಜೀವನಚರಿತ್ರವನ್ನು ನಾವು ನೋಡಿದರೂ, ಅವನು ಯೌವನದಲ್ಲಿ ಪುರೋಗಾಮಿಯಾಗಿ ಮೆರೆದವನಾದರೆ, ವಾರ್ಧಕ್ಯದಲ್ಲಿ ಪ್ರತಿಗಾಮಿಯಾಗಿ ತೋರಬಹುದು. ಇಂಗ್ಲ-ಕವಿವರ್ಯ ವರ್ಡ್ಸ್‌ವರ್ಥನು ಪ್ರಾಯದ ಅಬ್ಬರದಲ್ಲಿ ಫ್ರೆಂಚ್ ಕ್ರಾಂತಿಯ ಪ್ರಶಸ್ತಿಯನ್ನು ಹಾಡಿದ್ದಾದರೆ, ಮುಂದೆ ಇಳಿವಯಸ್ಸಿನಲ್ಲಿ ಕ್ರಾಂತಿವಿರೋಧಕ ಶಾಂತಿಮಂತ್ರವನ್ನು ಹೇಳತೊಡಗಿದನು. ಅಷ್ಟು ದೂರ ಹೋಗುವುದೇಕೆ? ಮೊನ್ನೆ ಮೊನ್ನೆ ಭಯಂಕರ ಕ್ರಾಂತಿಕಾರರೆಂದು ಖ್ಯಾತಿಗೊಂಡ ನಮ್ಮ ಗಾಂಧೀಜಿಯವರು ಈಗ ತಮ್ಮ ಅರುವತ್ತು ಮೀರಿದ ಅರೆಮರೆವಿನಲ್ಲಿ ದೇಶಗೌರವ ಬೋಸ, ಭಾಯಿ ಮಾನವೇಂದ್ರರಾಯ ಮುಂತಾದ ಪುರೋಗಾಮಿಗಳ ಕ್ರಾಂತಿಯ ಕಹಳೆಯನ್ನು ಕೇಳಬೇಡಿರೆಂದು ನಮಗೆ ಹೇಳುತ್ತಿದ್ದಾರೆ. ವ್ಯಕ್ತಿಗಳಂತೆ ಜನಾಂಗಗಳೂ ಮುಂದುಮತಿಗಳೂ, ಹಿಂದುಮತಿಗಳೂ ಆಗುವುದುಂಟು. ಒಟ್ಟಿನ ಮೇಲೆ ನಮ್ಮ ಭಾರತವು ಹಿಂದುಮತಿಗಳ ದೇಶವಾಗಿದೆ. ಯಾಕೆಂದರೆ, ನಮ್ಮಲ್ಲಿಯ ತರುಣರ ಕಣ್ಣಿಗೂ, ಹಳಬರ ದುಷ್ಟ ಸಂಸ್ಕಾರಗಳ ಮೂಲಕ ಒಂದು ತೆರದ ಪರೆ ಬಂದಿರುವುದು. ನಮ್ಮಲ್ಲಿ ರೂಢಿಮೂಢ ವೈದಿಕರ ಪ್ರಾಬಲ್ಯವು ಹೇಗೊ, ಹಾಗೆಯೆ, ಗ್ರೇಟ್‌ಬ್ರಿಟನ್‌ದಂತಹ ಸಂಗ್ರಾಹಕಪ್ರವೃತ್ತಿ ಪ್ರಧಾನ ದೇಶಗಳಲ್ಲಿ ಹಿಂದುಮತಿ-

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ್

ಗೋವಾ ಮಲಮ

GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಗಳಾದ ಸಿರಿವಂತರ ಹಾಗು ಅವರ ಡೊಳ್ಳುಬಡಿಯುವ ಕ್ರೈಸ್ತ ವೈದಿಕರ ಪ್ರಭಾವವು ಕಂಡುಬರುವುದು. ಆದರೆ, ರಸಿಯಾದಂತಹ ದೇಶಗಳು ಹಿಂದುಮತಿಗಳಾಗುವ ಸಿರಿವಂತರನ್ನೂ, ಅವರ ಬಾಲ ಬಡಿಯುವ ದೇವರ ದಲಾಲರನ್ನೂ (ಅರ್ಥಾತ್ ವೈದಿಕರು) ಮತ್ತು ಸನಾತನಿಗಳ ಮೂಲಾಧಾರವಾದ ವಿಶ್ವದ ಸುಲ್ತಾನನನ್ನೂ ಬೇರು ಸಹಿತ ಕಿತ್ತೊಗೆದು, ಹೊಸಯುಗದ ಹೊಸ ಆಚಾರಕ್ಕೆ ಮುನ್ನುಗ್ಗುತ್ತಿರುವುವು.

ಹೊಸಬರ ಹಾಗು ಹಳಬರ ದೃಷ್ಟಿಯಲ್ಲಿ ಈ ರೀತಿ—ಅವರ ಭಿನ್ನ ಅಂತಃಪ್ರವೃತ್ತಿಗಳ ಮೂಲಕ ಅವರು—ಎಂದೂ ಕೂಡಿ ನಡೆಯ ದಷ್ಟು ಅಂತರವಿರುವುದು. ಹಳಬರು ತಪ್ಪಿ, ಎಡವಿ ಆಶಾಭಗ್ನ ರಾದ ಮೂಲಕ ಅವರಿಗೆ ಇಹಲೋಕದಲ್ಲಿ ಏನೂ ಅರ್ಥವಿಲ್ಲವೆಂದು ಎನಿಸುತ್ತದೆ. ತಮ್ಮಲ್ಲಿ ಕಸುವಿಲ್ಲದ ಮೂಲಕ, ತಮಗೆ ಕಸುವು ಕೊಡುವ ಯಾವುದಾದರೊಂದು ವ್ಯಕ್ತಿ ಯಾವುದಾದರೊಂದು ಲೋಕದಲ್ಲಿ ಇರಬೇಕೆಂದು ಬಯಸುವರು ಅವರು. ಈ ಕಾಲ್ಪನಿಕ ವ್ಯಕ್ತಿಗೆ ಅವರು ದೇವರೆನ್ನುವರು, ಮತ್ತು ಅಂತಹ ಆ ಕಾಲ್ಪನಿಕ ದೇವರ ಸ್ವರ್ಗವೆಂಬ ಕಾಲ್ಪನಿಕ ಲೋಕವನ್ನು ತಲ್ಪುವುದಕ್ಕಾಗಿ ಕಾಲ್ಪನಿಕ ಮಾರ್ಗವನ್ನು ಹಿಡಿಯುವರು. ಮತ್ತು ಕಾಡುಸ್ಥಿತಿ ಯಲ್ಲಿದ್ದ ನಮ್ಮ ಹಿಂದಿನ ಹಿರಿಯರು ನಮಗಿಂತ ಜಾಣರೆಂದು ಪ್ರತಿಪಾದಿಸುವರು. “‘ಜೀರ್ಣರೇ ಜಾಣರು’; ‘ಹಳೆಯದೇ ಹೊನ್ನು’; ‘ಹಿಂದಿನ ಅಂದವೇ ಚೆಂದ’, ಎಂಬಿವೇ ಮೊದಲಾದ ನಂಬುಗೆಗಳಿಗೆ ತುತ್ತಾಗುವರು. ಆದರೆ ಹೊಸಬರ ಮಾತು ಬೇರೆ. ಹಳಬರಿಗೆ ಗೊತ್ತಿದ್ದುದೆಲ್ಲವೂ ಹೊಸಬರಿಗೆ ಗೊತ್ತಿರುವುದು. ಅಲ್ಲದೆ, ತಾವು ಸ್ವಂತ ಶ್ರಮದಿಂದ ಗಳಿಸಿದ ಜ್ಞಾನ-ವಿಜ್ಞಾನಗಳೂ ಇವರಲ್ಲಿರುವುವು. ಆದುದರಿಂದ, ಹಿಂದಿನ ಚೆಂದದಿಂದ ಇವರು ಅಂಧರಾಗದೆ, ಹಿಂದಿನ ಅಂದವನ್ನು ಉಂಡು, ಮುಂದು ವಿಗಿಲಾ ದುದರಿಂದ ಅದೇ ಎಲ್ಲಕ್ಕೂ ಚೆಂದವಾದುದೆಂದು ಅವರು ನಂಬುವರು. ಹಳಬರು ಬರಿಯ ವಯೋವೃದ್ಧರೆ; ಹೊಸಬರು ನಿಜವಾದ ಜ್ಞಾನವೃದ್ಧರು. ವಯಸ್ಸಿನಲ್ಲಿ ಕಿರಿಯರಾದರೂ, ಜ್ಞಾನ ದಲ್ಲಿ ಹಿರಿಯರು. ಸುವಿಖ್ಯಾತ ಆಂಗ್ಲತತ್ತ್ವಜ್ಞನಾದ **ಲಾರ್ಡ್** ಬೇಕನ್ನನು “ನಾವು ಈಗಿನವರೇ ನಿಜವಾದ ಪುರಾತನರು! (ಜ್ಞಾನವೃದ್ಧರು)” ಎಂದು ಪ್ರತಿಪಾದಿಸುವುದರ ಮರ್ಮ ವಾದರೂ ಇದೆ.

ಇದು ಕಾರಣ ಹಿಂದಿನ ಹಿರಿಯರ ಹೇಳಿಕೆಗಳನ್ನು ಅರಿತುಕೊಂಡು, ಅವುಗಳೊಳಗಿನ ಗ್ರಾಹ್ಯಭಾಗಗಳನ್ನು ಗ್ರಹಿಸಲು ತರುಣರು ಸಿದ್ಧರಿದ್ದೂ, ಅವರ ಆ ಹಳೆಯ ಹೇಳಿಕೆಗಳೇ ಪ್ರಮಾಣವಾದುವು ಗಳೆಂದು ನಂಬಿ, ಅವರು ತೋರಿಸಿದ ಹೆದ್ದಾರಿಯನ್ನೇ ಹಿಡಿದು, ಹಳಬರ ನೆಳಲಾಗಿ ನಡೆಯಲಿಕ್ಕೆ ಅವರು ಎಂದೂ ಸಮ್ಮತಿಸಲಾರ ರೆಂಬುದು ಸ್ಪಷ್ಟ.

ಹಳೆಯದೆಲ್ಲದು ಹೊನ್ನೆ? । ಎಳೆಯದೆಲ್ಲವು ಮಣ್ಣೆ? ।
ಬೆಳೆದು ಹಣ್ಣಾದ ಎಲೆಗಳಳಿಯದೆ ಹೋಗೆ ।
ಬೆಳೆವುದೇ ಮರವು? ಸರ್ವಜ್ಞ! ॥

ಜೀರ್ಣವಾದುದು ನಷ್ಟವಾಗದಿದ್ದರೆ ಎಳೆಯದೆಂಬುದೆಲ್ಲ ಬೆಳೆಯದೆ ಅಳಿದುಹೋಗಬಹುದಲ್ಲವೆ? ಹಳೆಯದಂತೂ ಎಂದೋ ಅಳಿದಿರುವುದು. ಹೀಗಾದರೆ ಸಮಾಜವು ಬದುಕುವುದಾದರೂ ಹೇಗೆ? ಆದರೂ, ಹಳಬರಿಗೆ ಹಳೆಯ ಸಂಗತಿಗಳ ಪ್ರೀತಿ ತಪ್ಪುವು ದಿಲ್ಲ. ಯಾಕೆಂದರೆ:

ಕಳೆಗುಂದಿದಾ ಹಿಂದು ಹಳಬಂಗೆ ಕಡುಚೆಂದ ।
ಕೊಳೆತ ಕರುಳುಗಳ ಕಡುಪ್ರೀತಿಯಿಂ ಸೆಳೆವ ।
ಹಳೆಹದ್ದು ನೋಡು ಸರ್ವಜ್ಞ! ॥

ಸನಾತನಿಗಳಿಗೆ ಐತಿಹಾಸಿಕ ದೃಷ್ಟಿಯೆ ಇರುವುದಿಲ್ಲ. ಹತ್ತಾರು ಸಾವಿರ ವರ್ಷಗಳಾಚೆಯಲ್ಲಿದ್ದ ಸಮಾಜವು ಈಗಿನ ಸಮಾಜಕ್ಕಿಂತ ಎಷ್ಟೋ ಹಿಂದುಳಿದುದು; ಆಗಿನ ಕಲ್ಪನೆಗಳು ಆಗಿನ ಕಾಡು ಸ್ಥಿತಿಗೆ ಮಾತ್ರ ಸಲ್ಲುವಂತಹವು. ಆಗಿನ ಧಾರ್ಮಿಕ, ಸಾಮಾಜಿಕ, ನೈತಿಕ ಕಟ್ಟು-ಗುರಿಗಳು ಆಗಿನ ದಲಿತಸ್ಥಿತಿಗೆ ಅನುಗುಣವಾಗಿ ಇದ್ದುವು. ಆದರೆ ಸಮಾಜದ ಆಗಿನ ರಚನೆ, ಉದಾಹರಣಾರ್ಥ ಚಾತುರ್ವರ್ಣ ಮತ್ತು ಆ ರಚನೆಗೆ ತಕ್ಕಂತೆ ಆಯಾ ವರ್ಣಗಳಿಗೆ ಅವರು ಹಾಕಿಕೊಟ್ಟ ಕರ್ಮಗಳು, ಈಗಿನ ತೀರ ಭಿನ್ನ ರೀತಿಯಿಂದ ರಚಿತವಾದ ನಮ್ಮ ಸಮಾಜಕ್ಕೆ ಹೊಂದುವುವೋ? ಇದರ ವಿಚಾರ ವನ್ನೆ ಸನಾತನಿಗಳು ಮಾಡುವುದಿಲ್ಲ. ಕಾಲವು ಬದಲಾದಂತೆ ಸಮಾಜದ ರಚನೆಯೂ ಬದಲಾಗುವುದು. ಚಾತುರ್ವರ್ಣವನ್ನು ದೇವರೇ ಮಾಡಿದ್ದು ನಿಜವಿದ್ದುದಾದರೆ, ಆ ತೆರದ ವರ್ಣವ್ಯವಸ್ಥೆಯು ಎಂದೂ ಅಳಿಯದಂತೆ ಅವನು ತಕ್ಕ ಏರ್ಪಾಡನ್ನು ಮಾಡುತ್ತಿರ ಲಿಲ್ಲವೇ? ಯಾವ ವರ್ಣಸಂಕರವಾಗಬಾರದೆಂದು ಭಗವಂತನು ಮತ್ತೆ ಮತ್ತೆ ಅವತರಿಸಿ ಶಿಷ್ಟರ ಪಾಲನೆ ಮತ್ತು ದುಷ್ಟರ ದಮನ ಮಾಡಿದನೆಂದು ಮೂಢಭಾವಿಕರು ಹೇಳುವರೋ ಅದೇ ಆ ವರ್ಣಸಂಕರವು ಈಗ ಸಾವಿರಾರು ವರ್ಷಗಳಿಂದ ಆಗಿಬಿಟ್ಟಿರಲು, ಆ ಬುದ್ಧಿಗೇಡಿ ಭಗವಂತನು ವಿಶ್ವದ ಯಾವ ಮೂಲೆಯಲ್ಲಿ ನಿದ್ರಿಸು ತ್ತಿರುವನೆಂಬುದನ್ನು ಸನಾತನಿಗಳೆ ದಯೆಯಿಟ್ಟು ಹೇಳಬೇಕು. ಭಗವಂತನು ಬುದ್ಧಿಗೇಡಿ ಎಂಬುದಕ್ಕೆ ಇದೊಂದೇ ಮಾತು ಸಾಕು. ಗುಣ-ಕರ್ಮಗಳಿಗನುಗುಣವಾಗಿ ಸಮಾಜದಲ್ಲಿ ನಾಲ್ಕು ವರ್ಣ ಗಳನ್ನು ರಚನೆಮಾಡಿದ ಭಗವಂತನಿಗೆ, ತಾನು ಮಾಡಿದ ರಚನೆಯಲ್ಲಿ ಎಂದೂ ಬದಲಾಗಬಾರದಂತೆ ಶಾಶ್ವತವಾದ ಏರ್ಪಾಡುಮಾಡಲಿಕ್ಕೆ ಬಾರದಿದ್ದುದು ಸನಾತನಿಗಳ ದುರ್ದೈವ! ಶಿಷ್ಟರನ್ನು ಪೀಡಿಸು ವಂತೆ ದುಷ್ಟರನ್ನು ಮೊದಲು ಹಳ್ಳಿಸಿಕೊಟ್ಟು, ಅನಂತರ ಶಿಷ್ಟರ ಪಾಲನಕ್ಕಾಗಿ ಅವತಾರ ತಾಳಿ ದುಷ್ಟರನ್ನು ದಮನಿಸುವ ಭಗವಂತನ ಬುದ್ಧಿಗೆ ಬೆಲೆ ಇಲ್ಲ!! ಇಂತಹ ಬುದ್ಧಿಗೇಡಿ ದೇವರಿಂದ ರಚಿತವಾದ ಸಮಾಜರಚನೆಯು ಹಿಂದಿನಂತೆಯೆ ಈಗಲೂ ಸಾಗಬೇಕೆಂಬ ಹಳಬರ ಮತಿಗೂ ಮಿತಿಯಿಲ್ಲ!

ಹಳಬರ ನೀತಿವಾದವು ಹಳೆಯ ಕಾಲದ, ಹಳೆಯ ಸ್ಥಿತಿಗೆ ಹೊಂದುವ, ಹಳೆಯ ವಿಚಾರಗಳ ಮೇಲೆ ಊರಿನಿಂತಿದೆ. ಆಗಿನವರಿಗೆ ವಿಜ್ಞಾನದ ಅಭಾವದ ಮೂಲಕ ಮಾನವನ ಪೂರ್ಣಸ್ವರೂಪದ ವಿಷಯದಲ್ಲಿಯೂ, ಇಹಲೋಕದ ಅಂದ-ಚೆಂದದ ವಿಷಯದಲ್ಲಿಯೂ

ಗಾಢವಾದ ಅಜ್ಞಾನವಿದ್ದವುೂಲಕ ಅವರು ಇಹಲೋಕವನ್ನು ಕುರಿತು ನಿರಾಶರಾದರು. ಹಲವರು ನಮ್ಮ ಭಾರತದೊಳಗಿನ ಚಾರ್ವಾಕನಂತೆ ಅಥವಾ ಪಡುವಣಿಗರ ಎಪಿಕ್ಯುರಸ್‌ನಂತೆ ಬರಿಯೆ ಭೌತಿಕ ಸುಖವಾದಿಗಳಾಗಿ 'ಸಾಲವಮಾಡಿಯಾದರೂ ತುಪ್ಪ ಕುಡಿಯಬೇಕು!' 'ಸತ್ತಮೇಲೆ ಮತ್ತಾವ ಜನ್ಮಬರುವುದೆಂಬುಗನ್ನು ಕಂಡವರಾರು?' ಹೀಗೆ ಬೋಧಿಸತೊಡಗಿದರು ಆ ಭೌತಿಕ ಸುಖವಾದಿಗಳು. ಅವರು ಆ ತುದಿಗೆ ಹೋದರೆ, ನಮ್ಮ ಅಧ್ಯಾತ್ಮವಾದಿಗಳು ಮತ್ತೊಂದು ತುದಿಗೆ ಹೋಗಿಬಿಟ್ಟರು. ಮಾನವನೆಂದರೆ, ಪಾಶವೀವಾಸನೆಯ ಒಂದು ಪ್ರಾಣಿ ಎಂದು ಭೌತಿಕವಾದಿಗಳು ಹೇಗೆ ತಿಳಿದರೊ, ಹಾಗೆಯೆ ಪರಲೋಕದ ಆಶೆ ಹಿಡಿದ ಈ ಅಧ್ಯಾತ್ಮವಾದಿಗಳು, ಮಾನವನು ಬರಿಯೆ ಬುದ್ಧಿಮಯ ಅಥವಾ ಭಾವನಾಮಯ ಪ್ರಾಣಿಯೆಂದು ತಿಳಿದು, ದೇಹವನ್ನು ಮತ್ತು ಅದರ ಭೌತಿಕ ಸುಖಸಾಧನೆಗಳನ್ನು ತುಚ್ಛೀಕರಿಸಿ, ಕಣ್ಣಿಗೆ ಕಾಣದ ದೇವರೆಂಬ ಒಂದು ಕಾಲ್ಪನಿಕ ವ್ಯಕ್ತಿಯ ಕಾಲ್ಪನಿಕ ಪ್ರಸಾದದಿಂದ, ಸ್ವರ್ಗವೆಂಬ ಆವನ ಕಾಲ್ಪನಿಕ ನಿವಾಸವನ್ನು ತಲ್ಪುವುದಕ್ಕಾಗಿ, ಒಂದು ಕಾಲ್ಪನಿಕ ಮಾರ್ಗವನ್ನು ಮಾನವನ ಹೆಚ್ಚಿನ ಗುರಿಯೆಂಬುದಾಗಿ ಅವರು ಪ್ರತಿಪಾದಿಸತೊಡಗಿದರು. ಇವೆರಡೂ ಆತ್ಯಂತಿಕ ಸಂಪ್ರದಾಯಗಳಾಗುವುದರ ಮುಖ್ಯಕಾರಣವೆಂದರೆ, ಅವರಿಗೆ ಮಾನವನ ಪೂರ್ಣಸ್ವರೂಪದ ಪೂರ್ಣಜ್ಞಾನವು ಇದ್ದಿಲ್ಲ.

ಮಾನವನು ಮನವಲ್ಲ । ಮಾನವನು ತನುವಲ್ಲ ।
ಮಾನವನು ತಾ ಮನೋದೇಹಿಯೆಂದರಿತವನೆ-
ಜ್ಞಾನಿಕೇಳೆಂದ ಮರ್ಮಜ್ಞ ! ॥

ಇತ್ತೀಚಿಗೆ ಮನೋವಿಜ್ಞಾನದಲ್ಲಿ ಬಹಳೇ ಶ್ಲಾಘನೀಯ ಪ್ರಗತಿಯಾಗಿದೆ. ಅದರ ಪರಿಚಯವನ್ನು ಸನಾತನಿಗಳೂ, ನವಮತವಾದಿಗಳೂ ಅವಶ್ಯವಾಗಿ ಮಾಡಿಕೊಳ್ಳಬೇಕು. ಮಾನಸಶಾಸ್ತ್ರದ ಪರಿಚಯವಿಲ್ಲದೆ, ರಾಜಕಾರಣ, ಅರ್ಥಕಾರಣ, ನೀತಿಶಾಸ್ತ್ರ, ಶಿಕ್ಷಣಶಾಸ್ತ್ರ ಮುಂತಾದುವುಗಳು ತಿಳಿಯಲಿಕ್ಕೆ ಶಕ್ಯವಿಲ್ಲ. ನಮ್ಮವೈದ್ಯರಿಗೆ ಕೂಡಅಜಾಗ್ರತ ಮಾನಸಶಾಸ್ತ್ರ (Psychology of the Un-conscious) ದ ಜ್ಞಾನವು ಅತ್ಯವಶ್ಯವಾದುದು. ಯಾಕೆಂದರೆ, ಎಷ್ಟೋ ರೋಗಗಳು ಮನೋಜನ್ಯವಾಗಿರುವುವು. ಅವುಗಳಿಗೆ ಕಾಯಿಕರೋಗಗಳಿಗೆ ಪ್ರಭಾವಿಯಾದ ಔಷಧಗಳಿಂದ ಯಾವ ಪ್ರಯೋಜನವೂ ಇಲ್ಲ. ಅಂತೂ ಮಾನವನು ಬರಿಯೆ ಮನವಲ್ಲ; ಅಥವಾ ಕೇವಲ ತನುವಲ್ಲ; ಅವನು ಮನೋದೇಹಿಯು. ಮನದ ಪರಿಣಾಮವು ದೇಹದಮೇಲೆ; ಮತ್ತು ದೇಹದ ಪರಿಣಾಮವು ಮನದಮೇಲೆ ಆಗುತ್ತಿದ್ದು ಮಾನವನ ಸುಸ್ಥಿತಿಯು ಅವನ ಯಾವತ್ತೂ ಅಂಗಗಳ ಸೌಹಾರ್ದಿಕ ಚಟುವಟಿಕೆಯನ್ನು ಅವಲಂಬಿಸಿದೆ. ದೇಹವನ್ನು ಕುಗ್ಗಿಸಿ, ಮನವನ್ನು ಹಿಗ್ಗಿಸಬೇಕೆನ್ನುವವನು ಅರಣ್ಯಪಂಡಿತನೆ ಸರಿ!

ತನುವೆಂಬ ದೀಪದೊಳು । ಮನವೆಂಬ ಜ್ಯೋತಿಯಿದು ।
ತನುವ ಕುಗ್ಗಿಸುತ ಮನಹಿಗ್ಗಿಸುವ ಮೂಢ- ।
ಜನರೀತಿ ನೋಡು ಮರ್ಮಜ್ಞ! ॥

'ಅನಿತ್ಯ ದೇಹವಿದಯ್ಯಾ' ಎಂದು ದೇಹವನ್ನು ತುಚ್ಛೀಕರಿಸುವವರು ಈ ದೇಹದ ರಚನೆ, ಮತ್ತು ಆರೋಗ್ಯ ಇವುಗಳನ್ನೆ ನಮ್ಮ ಬುದ್ಧಿಯ ತರಗತಿ ಮತ್ತು ಆರೋಗ್ಯಗಳು ಆಶ್ರಯಿಸಿರುವುವು ಎಂಬ ಮಾತನ್ನು ಮರೆತುಬಿಡುತ್ತಾರೆ. ಮಿದುಳಿನಮೇಲೆ ಚೆನ್ನಾಗಿ ಏಟುಕೊಟ್ಟರೆ 'ಮಿದುಳು ಜಡ; ಅದರಲ್ಲಿ ಅರ್ಥವಿಲ್ಲ' ಎಂದು ಸಾರುವವನ ಬುದ್ಧಿಯು ಎಲ್ಲಿಯೋ ಅಡಗಿಹೋಗುವುದು. ದೇಹ ಮತ್ತು ಮನ ಇವೆರಡೂ ಮಾನವನ ಮುಖ್ಯಾಂಗಗಳಿದ್ದುದರಿಂದ ಅವುಗಳಲ್ಲಿ ಒಂದನ್ನು ಉಪೇಕ್ಷಿಸಿ ಮತ್ತೊಂದನ್ನು ಅಪೇಕ್ಷಿಸುವುದಾಗಲಿ, ಒಂದನ್ನು ಚೆನ್ನಾಗಿ ಪೋಷಣೆಮಾಡಿ ಮತ್ತೊಂದನ್ನು ದುರ್ಲಕ್ಷಿಸುವುದಾಗಲಿ ಮಾನವನ ಪೂರ್ಣವಿಕಾಸಕ್ಕೆ ವಿಘಾತುಕವಾದ ಮಾತು. ಅಂತೂ ಮಾನವನ ವ್ಯಕ್ತಿತ್ವದ ಪೂರ್ಣಸ್ವರೂಪವು ತಿಳಿಯದೆ ಹೋದುದರಿಂದ ಹಳಬರ ನೈತಿಕ ಗೊತ್ತು-ಗುರಿಗಳೂ, ಅವುಗಳನ್ನು ತಲ್ಪುವ ಮಾರ್ಗಗಳೂ, ಏಕಾಂಗಿಯಾಗಿ ಅಂತೆಯೇ ಸದೋಷವಾಗಿ ಪರಿಣಮಿಸಿದುವು.

ಹಳಬರ ನೈತಿಕ ಧ್ಯೇಯವು ಪಾರಲೌಕಿಕವಿದ್ದಿತು; ಆದರೆ, ಹೊಸಬರ ನೈತಿಕ ಗುರಿಯು ಮಾನವನು ಪೂರ್ಣವಿಕಾಸವನ್ನು ಹೊಂದಿ ಈ ಲೋಕದಲ್ಲಿಯೆ ತನ್ನ ಬುದ್ಧಿ, ಭಾವನೆ ಮತ್ತು ಶರೀರ ಇವುಗಳಿಗೆ ಸರಿಯಾಗಿ ಆನಂದವಾಗುವಂತೆ ಸರ್ವಾಂಗಪೋಷಕ ಸುಖವನ್ನು ಪಡೆಯಬೇಕೆಂಬುದಿರುವುದು. ಈ ಲೋಕವನ್ನೇ ಚೆನ್ನಾಗಿಅರಿಯದ ನಾವು ಅದನ್ನು ಧಿಕ್ಕರಿಸಿ, ಯಾವುದೋ ಒಂದು

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ
ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ
ರಜಿಸ್ಟರ್ಡ್ ಚಮನ ಟ್ರೇ. ಮಾ.
CHAMAN
ಇದರಿಂದ ಹಸಿವೆಯಾಗಿ ಪಚನಶಕ್ತಿಯು
ಬೆಳೆಯುತ್ತದೆ; ಮತ್ತು ದುರ್ಘಟ
ಅಜೀರ್ಣವನ್ನು ಗುಣಪಡಿಸುತ್ತದೆ.
ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ,
ಅಪಚನ, ಕೆಮ್ಮು, ದಮ್ಮು, ಕಫ
ಮುಂತಾದುವುಗಳ ಮೇಲೆ
ಚಮನವು
ಅತ್ಯಂತ ಗುಣಕಾರಿಯಿದೆ.
ಸ್ಟಾರ್ ಕಂಪನಿ, ಬೆಳಗಾಂವ

ಕಾಲ್ಪನಿಕ ಪರಲೋಕಕ್ಕೆ ಮರುಳಾಗುವುದೇಕೆ ? ದೇವರಲ್ಲಿ ನಂಬಿಗೆ ಇಲ್ಲದ ಹೊರತು ನೀತಿಯೇ ಉಳಿಯಲಾರದೆಂದು ಸಾಂಪ್ರದಾಯಿಕ ನೀತಿವಿಶಾರದರೂ ಹೇಳುವರು. ಇವರು ಅನ್ನುವುದೇನೆಂದರೆ; ನೀತಿವಂತರಿಗೆ ಪಾರಿತೋಷಕವನ್ನೂ, ನೀತಿಶೂನ್ಯರಿಗೆ ತಕ್ಕ ದಂಡವನ್ನೂ ವಿಧಿಸುವ ದೇವರಂತಹ ಒಂದು ವ್ಯಕ್ತಿ ಇರುವುದೆಂದು ನಂಬಿದ ಹೊರತು ಯಾವನೂ ನೀತಿವಂತನಾಗಲು ಪ್ರವೃತ್ತನಾಗಲಾರ. ಈ ಹೇಳಿಕೆಯಲ್ಲಿ ತಥ್ಯಾಂಶವಿದೆ. ಆದರೆ, ಅದು ಅಸಂಸ್ಕೃತ ಸಮಾಜಕ್ಕೆ ಅನ್ವಯಿಸುವುದು. ಅಂತಹ ಸಮಾಜದ ಜನರು ಕೇವಲ ದೇವರ ಅಂಜಿಕೆಯಿಂದಲೆ ನೀತಿಯನ್ನು ಆಚರಿಸುತ್ತಿದ್ದರು. ನೀತಿಯ ಸಿಹಿಫಲ ಮತ್ತು ಅನೀತಿಯ ಕಹಿಫಲ ಇಲ್ಲಿ–ಇದೇ ಜನ್ಮದಲ್ಲಿ-ನಮಗೂ, ನಮ್ಮವರಿಗೂ ಸಿಕ್ಕುತ್ತದೆಂಬ ಮಾತು ಆವರಿಗೆ ತಿಳಿಯಲು ಕಷ್ಟವಾಗಿತ್ತು. ಅಂತೆಯೆ ಆಗಿನ ನೀತಿವಿದರು ದೇವರ ಬೆದರಿಕೆ ತೋರಿಸಿ, ಆಗಿನ ಅಜ್ಞಜನರನ್ನು ನೀತಿಯ ಹಾದಿಯಲ್ಲಿ ನಡೆಯಿಸುತ್ತಿದ್ದರು. ದೇವರು ಇರುವನೆಂದು ನಂಬುವುದು ತಪ್ಪು ಎಂದು ತಿಳಿದರೂ ಆಗಿನ ಎಷ್ಟೋ ಪಂಡಿತರು, ಆಸ್ತಿಕವಾದವು ಜನಸಾಮಾನ್ಯರನ್ನು ನೀತಿಪ್ರವೃತ್ತರನ್ನಾಗಿ ಮಾಡಲಿಕ್ಕೆ ಉಪಯುಕ್ತವಾಗಬಹುದೆಂದು ನಂಬಿ, ಶಿಷ್ಟರನ್ನು ಸ್ವರ್ಗಕ್ಕೆ ಸತ್ಕರಿಸಿ ದುಷ್ಟರನ್ನು ನರಕಕ್ಕೆ ದಬ್ಬುವ ದೇವರ ಅಸ್ತಿತ್ವವನ್ನು ಅದ್ಭುತ ಚಮತ್ಕಾರಗಳಿಂದಲೂ, ದಂತಕಥೆಗಳಿಂದಲೂ, ಆಪ್ತವಚನಗಳಿಂದಲೂ, 'ಸಿದ್ಧ' ಮಾಡಿದರು. ಪ್ರಮಾದವು ಉಪಯುಕ್ತವಾಗುವ ಸಂಭವವನ್ನು ಕಂಡುಹಿಡಿದು, ಆಯಾ ಕಾಲದ ಪಂಡಿತರು ಆಯಾ ಪ್ರಮಾದಗಳನ್ನು ಎತ್ತಿಹಿಡಿದಿರುವರು. ಈ ವಿಷಯವನ್ನು ಜಾನ್ ಮೋರ್ಲೇ ಅವರು ತಮ್ಮ 'The Compromise' ಎಂಬ ಗ್ರಂಥದಲ್ಲಿ– ಅದರಲ್ಲಿಯೂ 'The Possible Utility of error' ಎಂಬ ಪ್ರಕರಣದಲ್ಲಿ– ಚೆನ್ನಾಗಿ ವಿವೇಚಿಸಿರುವರು. ತಪ್ಪುಕಲ್ಪನೆಯು ಕೆಲಕಾಲ ಅನುಕೂಲವಾಗುವುದೆಂಬದಾಗಿ ಅದನ್ನು ಗೌರವಿಸುವ ಮೋಹಕ್ಕೆ ಒಟ್ಟಿನ ಮೇಲೆ ನಾವು ಒಳಗಾಗದಿರುವುದೇ ಕ್ಷೇಮ. ದೆವ್ವನ ಅಂಜಿಕೆ ತೋರಿಸಿ ಮೂರ್ಖ ತಾಯಂದಿರು ಅಳುವ ಚಿಕ್ಕ ಮಕ್ಕಳನ್ನು ಸುಮ್ಮನಿರಿಸುವುದಿಲ್ಲವೇ? ಅಷ್ಟರಮಟ್ಟಿಗೆ ದೆವ್ವದ ಈ ಅಂಜಿಕೆಯು ಉಪಯುಕ್ತವಾದುದು. ಆದರೆ, ಅವರಿಂದ ಚಿಕ್ಕಮಕ್ಕಳ ಜೀವನದ ಮೇಲೆ ಬಹಳ ಕೆಟ್ಟ ಪರಿಣಾಮವಾಗುವುದಿಲ್ಲವೇ ? ದೊಡ್ಡವರಾದ ಮೇಲೆ ಕೂಡ ಎಷ್ಟೋ ಜನರು ಕತ್ತಲೆಯಲ್ಲಿ ಹೋಗಲು ಅಂಜುವರು. ವಾಸ್ತವಿಕವಾಗಿ ಕತ್ತಲೆಗೆ ನಾವು ಅಂಜುವ ಕಾರಣವಿಲ್ಲ. ಆದರೆ, ಕತ್ತಲೆಗೂ, ದೆವ್ವಕ್ಕೂ ಸಂಬಂಧವಿರುವುದೆಂಬ ತಪ್ಪುಕಲ್ಪನೆ ಚಿಕ್ಕವಯಸ್ಸಿನಲ್ಲಿಯೆ. ಆದುದರಿಂದ, ಆ ಸಂಸ್ಕಾರಗಳು ಮುಂದಾದರೂ ಹಾಗೆಯೆ ಉಳಿದು ಬಿಡುತ್ತವೆ. ಇದೇ ಮಾದರಿಯ ಎಷ್ಟೋ ತಪ್ಪುಕಲ್ಪನೆಗಳು ಮಾನವ-ಜಾತಿಯ ಬಾಲ್ಯದಲ್ಲಿ ರೂಢವಾಗಿದ್ದುದರಿಂದ ಅವುಗಳ ಬಾಧೆಯು ನಮಗೆ ಈಗಲೂ ತಗಲುತ್ತಲಿದೆ.

> ಈಶನಿರದಿರೆ ನೀತಿ ನಾಶಹೊಂದುವುದಂತೆ !।
> ಈಶನಾಕಾಣಿಕೆಗೆ ಮರುಳು ಹೋಹುದದು ।
> ನಾಶದಾನೀತಿ ! ಮರ್ಮಜ್ಞ ॥

ಜನರನ್ನು ನೀತಿವಂತರನ್ನಾಗಿ ಮಾಡಲಿಕ್ಕೆ ಅವರಿಗೆ ನೀತಿಯಿಂದಾಗುವ ಒಳ್ಳೆಯ ಪರಿಣಾಮಗಳ ಜ್ಞಾನವನ್ನು ಮಾಡಿಕೊಡಬೇಕು. 'ಜ್ಞಾನವೇ ಸದ್ಗುಣದ ತಾಯಿ' ಎಂದು ಗ್ರೀಕ ತತ್ತ್ವಜ್ಞನಾದ ಸಾಕ್ರೇಟೀಸನು ಎನ್ನುವನು. ನಾಸ್ತಿಕನಾದ ನವಮತವಾದಿಯು ನೀತಿಶೂನ್ಯನಾಗಲಾರ. ಯಾಕೆಂದರೆ, ಅವನು ನೀತಿವಂತನಾಗುವುದು ದೇವರ ಅಂಜಿಕೆಯಿಂದಲ್ಲ; ಸ್ವರ್ಗದ ಆಶೆಯಿಂದಲ್ಲ; ನರಕದ ಬೆದರಿಕೆಯಿಂದಲ್ಲ. ಅವನಿಗೆ ನೀತಿಯ ಯಥಾರ್ಥ ಕಲ್ಪನೆ ಇರುವುದು. ತನ್ನ ಸಂಪೂರ್ಣ ವಿಕಾಸವಾಗಬೇಕಾದರೆ, ತನ್ನ ನಡೆವಳಿಗೆ ತಾನೆ ನಿರ್ಮಿಸಿದ ಹಲವು ನಿರ್ಬಂಧಗಳು ಅರ್ಥಾತ್ ನೈತಿಕ-ನಿಯಮಗಳು ಅತ್ಯವಶ್ಯವಾಗಿ ಬೇಕೆಂಬುದನ್ನು ಅವನು ಮನಗಂಡಿರುವನು. ಕಾಲುಬಂಡಿ (Cycle)ಗೆ ತಡೆಗಳು(Brakes) ಹೇಗೆ ಬೇಕೊ, ಹಾಗೆಯೆ, ನಮ್ಮ ಸ್ವಾತಂತ್ರ್ಯವು ಸ್ವೈರಾಚಾರದಿಂದ ನಷ್ಟವಾಗಬಾರದೆಂಬುದಾಗಿ ನಾವೇ ನಮ್ಮ ಸಲುವಾಗಿ ಉಂಟುಮಾಡಿದ ಹಲವು ಕಟ್ಟುಗಳು ನಮ್ಮ ಸ್ವಾತಂತ್ರ್ಯವನ್ನು ಉಳಿಸುವುವಲ್ಲದೆ, ನಮ್ಮ ಸರ್ವಾಂಗಸುಂದರ ವಿಕಾಸಕ್ಕೂ ಅವು ಅಪರಿಹಾರ್ಯವಾಗುವುವು. ಉದಾ:— ನವಮತವಾದಿಯು ವ್ಯಭಿಚಾರಕ್ಕೆ ಏಕೆ ಪ್ರವೃತ್ತನಾಗುವುದಿಲ್ಲ ! ಅವನು ನರಕಕ್ಕೆ ಅಂಜುವುದಿಲ್ಲ ! ಆದರೆ, ವ್ಯಭಿಚಾರದಿಂದುಂಟಾಗುವ ದುಷ್ಪರಿಣಾಮಗಳಿಗೆ ಅಂಜುತ್ತಾನೆ. ಯಾವುದೇ ಸುಖವನ್ನು ಪಡೆದರೂ, ಅದರಿಂದ ತನ್ನ ಯಾವ ಅಂಗಕ್ಕೂ ಬಾಧೆಯುಂಟಾಗಬಾರದೆಂಬುದರ ಎಚ್ಚರಿರುವುದು ಅವನಿಗೆ. ಯಾವಾಗಲೂ ವ್ಯಭಿಚಾರದಿಂದ ತನ್ನ ಕಾಯಿಕ ಅಂಗಕ್ಕೆ ಮಾತ್ರ ಒಂದು ಗಳಿಗೆ ಸುಖವಾಗುವಾಗುವುದು; ಆದರೆ, ಅದರಿಂದ ತನ್ನ ಕಾಯವು ಕೆಡುವುದಲ್ಲದೆ ತನ್ನ ಸ್ವಾಭಿಮಾನಕ್ಕೆ ಪೆಟ್ಟು ತಗಲಿ ತನ್ನ ಭಾವನಾಮಯ ಅಂಗವು ನೋಯುವುದು. ಅಲ್ಲದೆ, ತನ್ನ ಬುದ್ಧಿಮಯ ಅಂಗಕ್ಕೂ ಬುದ್ಧಿವಿಕಾಸಕ್ಕೆ ತಡೆಯುಂಟಾಗುವ ಮೂಲಕ ದೊಡ್ಡ ಆಘಾತ ತಗಲುವುದೆಂದು ಅವನು ಮನಗಂಡಿರುವನು; ಅಲ್ಲದೆ, ಹೆರವರ ಎಂಜಲ ತಿನ್ನಲಿಕ್ಕೆ ಅವನಿಗೆ ಎಷ್ಟು ಹೇಸಿಗೆ ಬರುವುದೊ, ಅಷ್ಟೇ ಪರೋಪಭುಕ್ತ ವ್ಯಕ್ತಿಯನ್ನು ಉಪಭೋಗಿಸುವಲ್ಲಿಯೂ ಅವನಿಗೆ ತಿರಸ್ಕಾರ. ಮತ್ತು 'ಯಾವುದೇ ಕಾರ್ಯವನ್ನು ಮಾಡಿದರೂ, ಅದನ್ನು ಅಂಜಿಕೆಯಿಲ್ಲದೆ ಮಾಡಬೇಕು !' ಎಂಬ ಅವನ ಮುಖ್ಯತತ್ತ್ವಕ್ಕೂ ಅನೀತಿಯಿಂದ ಬಾಧೆಯುಂಟಾಗುತ್ತದೆ. ಈ ರೀತಿ ತನ್ನ ವ್ಯಕ್ತಿತ್ವದ ಯಾವತ್ತೂ ಅಂಗಗಳ (Aspects) ಹಿತಾಹಿತದ ವಿಚಾರವನ್ನು ಮಾಡುವುದರಿಂದ ನವಮತವಾದಿಯು ಅನೀತಿಯಿಂದ ನಿವೃತ್ತನಾಗುವನು. ಇಂತಹ ಜ್ಞಾನವು ಯಾರಿಗೆ ಇರುವುದಿಲ್ಲವೊ ಅವರೇ ಅನೀತಿಯ ಮಾರ್ಗವನ್ನು ಹಿಡಿಯುವರು. ಅಂತಹರನ್ನು ನೀತಿಯ ಹಾದಿಗೆ ತರಲಿಕ್ಕೆ ಅವರ ಅಜ್ಞಾನವನ್ನು ಹೋಗಲಾಡಿಸಿ, ಅವರಿಗೆ ಸುಜ್ಞಾನವನ್ನು ನೀಡುವುದೇ ನೀತಿಪ್ರಚಾರದ ಶ್ರೇಷ್ಠವಾದ ಮಾರ್ಗವು. ಸಟಿಯಾದ ಸ್ವರ್ಗದ ಆಶೆ ತೋರಿಸುವಲ್ಲಿಯೂ, ಸುಳ್ಳು ನರಕದ ಬೆದರಿಕೆ ಹಾಕುವಲ್ಲಿಯೂ ಅರ್ಥವಿಲ್ಲದೆಂಬುದು ಎಲ್ಲರ ಅನುಭವಕ್ಕೂ ಬಂದ ಮಾತು. ಯಾಕೆಂದರೆ, ದೇವರಲ್ಲಿ

ನಂಬುಗೆಯುಳ್ಳವರು ಕೂಡ ಬಹುಸಂಖ್ಯಾಕರು ಅನೀತಿಗೆ ಪ್ರವೃತ್ತರಾಗುತ್ತಿರುವುದನ್ನು ಪ್ರತಿಯೊಂದು ಊರಲ್ಲಿ ಪ್ರತಿಯೊಂದು ಓಣಿಯಲ್ಲಿ ಎಲ್ಲರೂ ಕಾಣುವ ಮಾತು. ಹಗಲಿನಲ್ಲಿ ಭಕ್ತಿಯಿಂದ ರುದ್ರಾಭಿಷೇಕವನ್ನು ಮಾಡಿ, ರಾತ್ರಿಯಲ್ಲಿ ಕಳ್ಳನಂತೆ ರುದ್ರವ್ವನೆಂಬ ವೇಶ್ಯೆಯ ಸಹವಾಸವಾಸಕ್ಕೆಳಸಹೋಗುವ ವೈದಿಕರು ಯಾವ ಕಾರಣ ವ್ಯಭಿಚಾರಕ್ಕೀಡಾಗುತ್ತಿರಬಹುದು? ಕಾರಣವು ಸ್ಪಷ್ಟವಾಗಿದೆ. ತಂಡಜೀವನದ ಕಾಡುಜನರಿಗೆ ಸಲ್ಲುವ ಹಿಂದಿನವರ ಸ್ವರ್ಗ—ನರಕಾದಿಗಳ ಕಲ್ಪನೆಗಳಲ್ಲಿ, ಸುಸಂಸ್ಕೃತರಾದ ಇವರಿಗೆ ಅಷ್ಟೊಂದು ವಿಶ್ವಾಸವಿರುವುದಿಲ್ಲ. ನರಕದ ಭಯದಿಂದಲೇ ಅವರು ಅನೀತಿಯಿಂದ ನಿವೃತ್ತರಾಗುವವರು. ಆದರೆ, ಆ ಅಂಜಿಕೆಯು ಸಡಿಲಾದ ಮೇಲೆ ಮತ್ತು ಅನೀತಿಯಿಂದ ಒದಗುವ ದುಷ್ಪರಿಣಾಮಗಳ ಯಥಾರ್ಥಕಲ್ಪನೆಯೂ ಅವರಿಗೆ ಇರದ ಕಾರಣ ಅವರು ಸ್ವಾಭಾವಿಕವಾಗಿಯೆ ನೀತಿಶೂನ್ಯರಾಗುವರು. 'ದೇವರಾಣೆಮಾಡಿ ಸತ್ಯಮಾತಾಡುವೆ' ಎಂದು ಸಾರಿ, ಮನಬಂದಂತೆ ಸುಳ್ಳು ಹೇಳುವ ಸಾಕ್ಷೀದಾರರನ್ನು, ಕೋರ್ಟು, ಕಚೇರಿಗಳಲ್ಲಿ ದಿನಂಪ್ರತಿ ಬೇಸಗು ಬರುವಷ್ಟು ನಾವು ಕಾಣಬಹುದು. ಈ ಸಾಕ್ಷೀದಾರರಲ್ಲಿ ಬಹಳಮಾಡಿ ಎಲ್ಲರೂ ಭಾವಿಕರೇ! ಹೀಗಿದ್ದು ದೇವರ ಸಾಕ್ಷಿಯಾಗಿ ಈ ಭಾವಿಕ ಮಹಾಶಯರು ಸುಳ್ಳು ಸಾಕ್ಷಿ ಹೇಳುವ ಕಾರಣವೇನು? ಕಾರಣವು ಸ್ಪಷ್ಟವಾಗಿದೆ. ಮಾನವರ ವ್ಯವಹಾರದಲ್ಲಿ ಕೈಹಾಕುವಂತಹ ದೇವರು ಸುಳ್ಳೇಸುಳ್ಳು ಎಂಬುದು ಅವರಿಗೆ ಒಳಗಿಂದೊಳಗೆ ಅಸ್ಪಷ್ಟವಾಗಿ ತಿಳಿದುಬಂದಿದೆ. ಆ ಸುಳ್ಳು ದೇವರು ಸತ್ಯವಂತರಿಗೆ ಸುಖವನ್ನೂ ನೀಡುವುದಿಲ್ಲ; ಮತ್ತು ಸುಳ್ಳು ಸಾಕ್ಷಿ ಹೇಳುವವರಿಗೆ ದುಃಖವನ್ನೂ ನೀಡುವುದಿಲ್ಲ ಎಂಬುದರ ಮನವರಿಕೆಯಾಗಿದೆ. .ಆ ಧೂರ್ತ ಸುಸಂಸ್ಕೃತ ಭಾವಿಕ ಸಾಕ್ಷೀದಾರರಿಗೆ. ಇದರ ಮೇಲಿಂದ ನಿಃಸಂದೇಹವಾಗಿ ಸಿದ್ಧವಾಗುವ ಮಾತೇನೆಂದರೆ, ಜ್ಞಾನವೇ ನೀತಿಯ ತಾಯಿಯು! ಅಜ್ಞಾನವೇ ಅನೀತಿಯ ತಾಯಿಯು.

ಅಂತೂ, ನಾಸ್ತಿಕ ನವಮತವಾದಿಗಳು ನೀತಿಶೂನ್ಯರಾಗಬಹುದೆಂಬುದರಲ್ಲಿಯೂ, ಆಸ್ತಿಕ ಸನಾತನಿಗಳು ನೀತಿವಂತರಾಗಿ ಉಳಿಯುವರೆಂಬುದರಲ್ಲಿಯೂ ಹುರುಳಿಲ್ಲ. ಸನಾತನಿಗಳ ಪಾರಲೌಕಿಕ ದೃಷ್ಟಿಯಿಂದಲೂ, ಮಾನವನ ವ್ಯಕ್ತಿತ್ವದ ಬಗೆಗೆ ಅವರು ಮಾಡಿಕೊಂಡ ತಪ್ಪು ಕಲ್ಪನೆಯಿಂದಲೂ, ಅವರ ಐಹಿಕ ಜೀವನವು ಹೇಗೆ ಮಿಥ್ಯಾಚಾರಕ್ಕೀಡಾಗುವುದೆಂಬುದನ್ನು ಇದೀಗ ತೋರಿಸಿದ್ದಾಯಿತು. ಹಳೆಯ ಕಾಲದ ಅಪೂರ್ಣ ಮನೋವಿಜ್ಞಾನದ ತಳಹದಿಯ ಮೇಲೆ ಊರಿದ ಅವರ ಅಪೂರ್ಣ ನೀತಿವಾದವು ಇದೀಗಿನ ಪ್ರಾಜ್ಞಸಮಾಜಕ್ಕೆ ಎಷ್ಟೂ ಸಲ್ಲುವಂತಹದಿಲ್ಲ. ಅವರ ಕರ್ಮಪ್ರಧಾನ ಅಥವಾ ಜ್ಞಾನಪ್ರಧಾನ ಅಥವಾ ಭಕ್ತಿಪ್ರಧಾನ ಉಪಾಸನಾ ಪದ್ಧತಿಯು, ಈಗಿನವರಿಗೆ ಏಕಾಂಗಿಯಾಗಿ ತೋರುವಲ್ಲಿ ಆಶ್ಚರ್ಯವೇನು? ಮತ್ತು ಇಹಲೋಕದ ಜ್ಞಾನವಿಲ್ಲದೆ, ಇಹಲೋಕವನ್ನು ದುರ್ಲಕ್ಷಿಸಿ ಬಿಸಿಲ್ಗುದುರೆಯಂತಿರುವ ಪರಲೋಕದ ಒಡೆಯನಾದ ಜೊಳ್ಳುಜಗದೀಶನನ್ನು ಸಂತಯಿಸುವುದೇ 'ಫಲವಿದು ಬಾಳ್ದುದಕೆ!' ಎಂಬ— ಚಿಕ್ಕಮಕ್ಕಳಿಗೂ ನಗೆ ಬರುವಂತಹ—ಅವರ ನೈತಿಕ ಗುರಿಯಾದರೂ ಇದೀಗಿನ ಪ್ರಾಜ್ಞ-ಸಮಾಜಕ್ಕೆ ಸರಿದೋರುವುದೇ? ಗೀತೆಯಲ್ಲಿಯೆ ಹೇಳಿದಂತೆ ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು; ನಮ್ಮ ಮಿತ್ರರೂ ನಾವೇ, ನಮ್ಮ ಶತ್ರುಗಳೂ ನಾವೇ; ಆದ್ದರಿಂದ ಕಾಯ, ಬುದ್ಧಿ, ಭಾವನೆಯೆಂಬ ನಮ್ಮ ವ್ಯಕ್ತಿತ್ವದ ಮೂರೂ ಅಂಗಗಳ ವಿಕಾಸವಾಗುವಂತೆ ತಕ್ಕ ಕಟ್ಟುಗಳಿಂದ ನಡೆಯುವುದೇ ಶ್ರೇಷ್ಠ ನೀತಿಯು. ನಮ್ಮ ಜಗತ್ತಿನೊಳಗಿನ ಕುಂದು-ಕೊರತೆಗಳಲ್ಲಿ ಹಲವು ನಿಸರ್ಗನಿರ್ಮಿತವಾದುವುಗಳಾದರೆ, ಹಲವು ಮಾನವನಿರ್ಮಿತವಾಗಿವೆ. ಉದಾ: ಬಡತನ; ರೋಗ ಮುಂತಾದುವುಗಳು ನಮ್ಮ ಪ್ರಯತ್ನದಿಂದ ಮಾಯವಾಗುವುವು. ಸಂಚಿತ ಪಾಪದಿಂದ ಬಡತನವು ಬಂದಿಲ್ಲ; ಸಂಚಿತಪುಣ್ಯದಿಂದ ಸಿರಿವಂತಿಕೆಯು ಬಂದಿಲ್ಲ. ಮಾನವನಿರ್ಮಿತವಾದ ವಿಷಮ ಆರ್ಥಿಕಘಟನೆಯಿಂದಲೆ ಬಡತನ, ಸಿರಿವಂತಿಕೆಗಳು ಉಂಟಾಗಿವೆ. ಅದಕ್ಕೆ ದೇವರು ಹೊಣೆಯಲ್ಲ, ಕರ್ಮವೂ ಹೊಣೆಯಲ್ಲ. ಹಲವರನ್ನು ಸುಖದಲ್ಲಿ ಉರುಳಾಡಿಸಿ, ಉಳಿದವರನ್ನು ದುಃಖದಲ್ಲಿ ಗೋಳಾಡಿಸುವವರು ನಾವೇ ಮಾನವರು. ಈ ವೈಷಮ್ಯವನ್ನು

(೬೫೫ನೆಯ ಪುಟ ನೋಡಿರಿ)

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

"ರಜಿಸ್ಟರ್ಡ"

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

"ರತ್ನಮಣಿ"

ಪತ್ತೇದಾರಿ ಕಥೆ *

★

ಪ್ರಕಾಶನ ಡ್ರೈವರನಿಗೊಂದು ಹಳೆಯ ಟೊಪ್ಪಿಗೆ, ಒಂದು ಕೋಳಿ ಸಿಕ್ಕಿದುವು; ಅವುಗಳ ಬೆಂಬತ್ತಿ ಒಂದು ಕಳವಿನ ಕಜ್ಜಿಯೆ ಮನೆಗೆ ಬಂದಂತಾಯಿತು. ಪ್ರಕಾಶನಿಲ್ಲದೆ ಹೋಗಿದ್ದರೆ ರತ್ನವು ರಾಣಿಗೆ ಸಿಕ್ಕುತ್ತಿರಲಿಲ್ಲ; ಪಾಪ, ನಿರಪರಾಧಿ ಆರ್ಮುಗಂನಿಗಾದ ಶಿಕ್ಷೆಯು ತಪ್ಪುತ್ತಿರಲಿಲ್ಲ!

★

ಶ್ರೀ. ಎನ್. ಸೂರಪ್ಪ ಚಿತ್ರದುರ್ಗ



ಪ್ರಕಾಶನ ಶಾಸ್ತ್ರೋಕ್ತ ತನಿಖೆಯ ರೀತಿಗಳನ್ನು ಮೊದಲಿನಿಂದ ಕೊನೆಯ ವರೆಗೂ ತಿಳಿದುಕೊಳ್ಳಬೇಕೆಂಬ ಆಶೆ ನನಗೆ ತುಂಬ ಇದೆ. ಆದರೆ ಯಾವಾಗ ಏನು ಕೆಲಸಬಂದರೂ, ಸಮಸ್ಯೆಗೆ ಸಿಕ್ಕಿಕೊಂಡರೂ, ಪ್ರಕಾಶನು ಅದನ್ನು ಸಮರ್ಪಕವಾಗಿ ಪೂರಯಿಸಿದ ನಂತರವೆ ನನಗೆ ಅರ್ಥವಾಗುತ್ತಿದ್ದಿತು. ಇದಕ್ಕೆ ಬುದ್ಧಿ ಮತ್ತು ಗ್ರಹಣಶಕ್ತಿಗಳ ಭೇದ-ಭಾವವೇ ಕಾರಣ. ಪ್ರಕಾಶನ ಅದ್ವಿತೀಯವಾದ ಸೂಕ್ಷ್ಮದೃಷ್ಟಿಯೂ ಮೆದುಳಿನಲ್ಲಿಯ ಬುದ್ಧಿಯೂ ಇತರರಿಗೆ ಸಾಮಾನ್ಯವಾಗಿ ಬರಲಾರವು. ಆದುದರಿಂದಲೆ ಅವನು ಅಷ್ಟು ಹೆಸರುವಾಸಿಯಾದ ಪತ್ತೇದಾರನಾದ. ಇಷ್ಟಾದರೂ ತನಗೆ ಏನೂ ತಿಳಿಯದೆಂದೂ, ಪ್ರತಿ ಮಾನವನಿಗೂ ಇರುವಂತೆಯೆ ತನಗೂ ಬುದ್ಧಿಯಿರುವುದೆಂದೂ, ಮೇಧಾವಿಗಳು ಹೇಳುವಂತೆ ಬಾಹ್ಯಾ-ಡಂಬರಕ್ಕೆ ಒಳಗಾಗದೆ ಇರುತ್ತಿದ್ದನೆ ವಿನಾ ತನ್ನ ಹೆಸರನ್ನು ಹೊಗಳಿದರಾಗಲಿ, ಕೊಂಡಾಡಿದರಾಗಲಿ, ಅವನಿಗೆ ಸ್ವಲ್ಪವೂ ಒಗ್ಗುತ್ತಿರಲಿಲ್ಲ. ಆತನ ಭಾವಮೈದುನನೂ ಬಾಲ್ಯಮಿತ್ರನೂ ನಾನಾಗಿರುವುದರಿಂದ, ಅವನ ರೀತಿಯನ್ನೂ, ಶಾಸ್ತ್ರವನ್ನೂ ಅರಿಯಲು ನನಗೆ ತುಂಬಾ ಅನುಕೂಲ. ತಾನಾಗಿ ತನ್ನ ಹೆಸರನ್ನು ಹೊರಗೆಡಹಲು ಪ್ರಕಾಶನು ಇಷ್ಟಪಡುವುದಿಲ್ಲವಾದುದರಿಂದ, ಸಮಯ ದೊರೆತಾಗಲೆಲ್ಲಾ ನಾನೆ, ಅವನ ಕಾರ್ಯಗಳನ್ನು ಬರೆದು ಇಡುತ್ತಿದ್ದೇನೆ.

ಹೋದ ವರ್ಷ ಕ್ರಿಸ್‌ಮಸ್ ಹಬ್ಬದ ದಿವಸ ರಜಾ ಇದ್ದುದರಿಂದ, ಬೆಳಗಿನ ೭ ಘಂಟೆಗೆ ಪ್ರಕಾಶನ ಮನೆಗೆ ಹೋದೆ. ನನ್ನ ಭಾವ ತನ್ನ ಕೋಣೆಯಲ್ಲಿ ಸಿಗರೇಟು ಸೇದುತ್ತಾ ಕಾಲು ಚಾಚಿಕೊಂಡು ಸೋಫಾದ ಮೇಲೆ ಕುಳಿತಿದ್ದ. ಅವನ ಎದುರಿಗೆ ಒಂದು ಚಿಕ್ಕ ಮೇಜು; ಅದರ ಮೇಲೆ ಒಂದು ಹಳೆಯ ಟೋಪಿ; ಪಕ್ಕದಲ್ಲಿ ಭೂತಕನ್ನಡಿ, ಸಿಗರೇಟು ಪೆಟ್ಟಿಗೆ ಇತ್ಯಾದಿ ಸಾಮಾನುಗಳು ಬಿದ್ದಿದ್ದುವು. ಟೋಪಿಯನ್ನು ಮೇಜಿನ ಮೇಲೆ ಇಟ್ಟಿದ್ದ ರೀತಿಯನ್ನು ನೋಡಿದರೆ 'ಅದು ಪ್ರಕಾಶನ ಪರೀಕ್ಷೆಗೆ ಸಿಕ್ಕಿದೆ' ಎಂದು ಕೂಡಲೆ ನನಗೆ ಭಾಸವಾಯಿತು. "ಏನಪ್ಪಾ, ಬೆಳಗಿನಲ್ಲಿ ಏಳುತ್ತಲೂ ಯಾವುದೋ ಹರಕಲು ಟೋಪಿಯನ್ನು ಮುಂದಿಟ್ಟುಕೊಂಡು ಪರಿಶೋಧನೆ ಮಾಡುತ್ತಿರುವಂತೆ ಕಾಣುತ್ತದೆ?" ಎಂದು, ಅವನ ಪಕ್ಕದಲ್ಲಿ ಕುಳಿತುಕೊಂಡೆ. ಅವನು ನಗುತ್ತಾ "ಪ್ರಭೂ, ಈ ಟೋಪಿಯೂ, ಒಂದು ಚೆನ್ನಾಗಿ ಬಲಿತಿದ್ದ ಕೋಳಿಯೂ ನಮ್ಮ ಡ್ರೈವರ್ ತಿಮ್ಮನಿಗೆ ಪೇಟೆಯಲ್ಲಿ ಸಿಕ್ಕಿವೆ. ಅವನು ಅವೆರಡನ್ನೂ ನನ್ನ ಹತ್ತಿರಕ್ಕೆ ತೆಗೆದುಕೊಂಡು ಬಂದ. ಆ ಕೋಳಿಯ ಕಾಲಿಗೆ ನೋಡು, ಈ ಚೀಟಿಯನ್ನು ಕಟ್ಟಿತ್ತು" ಎಂದು, ಒಂದು ಸಣ್ಣ ರಟ್ಟಿನ ತುಂಡನ್ನು ಮೇಜಿನಿಂದ ತೆಗೆದು ನನ್ನ ಕೈಗೆ ಕೊಟ್ಟ. ಅದರಲ್ಲಿ "ಸಂ. ೨೪ ಡೇವಿಡ್ ಲೋಕನಾಥನ್" ಎಂದು ಬರೆದಿತ್ತು. ನಾನು ಅದನ್ನು ಎರಡು ಬಾರಿ ನೋಡಿ ಪುನಃ ಮೇಜಿನ ಮೇಲೆ ಬಿಸಾಡಿದೆ. ಅನಂತರ ನನ್ನ ಭಾವನು "ಕೋಳಿಯನ್ನು ಬಹುಶಃ ಆತನು ಕ್ರಿಸ್‌ಮಸ್ ಹಬ್ಬಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದನೆಂದು ತೋರುತ್ತದೆ. ದಾರಿಯಲ್ಲಿ ಯಾರೋ ಕೆಲವು ಜನ ಹುಡುಗರು ಗಲಾಟೆ ಮಾಡುತ್ತಾ, ಈ ಕೋಳಿಯನ್ನು ತೆಗೆದುಕೊಂಡು ಹೋಗುತ್ತಿದ್ದವನ ಮೇಲೆ ಬಿದ್ದರಂತೆ. ಅವನು ಹುಡುಗರನ್ನು ಹೊಡೆಯಬೇಕೆಂದು ಕೈಯಲ್ಲಿದ್ದ ಬೆತ್ತವನ್ನು ಎತ್ತಲು ಹಿಂದೆ ಇದ್ದ ಒಂದು ಅಂಗಡಿಯ ಕಿಟಕಿಯ ಗಾಜು ಒಡೆದುಹೋಯಿತು. ಅಷ್ಟು ಹೊತ್ತಿಗೆ ಕಾರು ಬಿಟ್ಟುಕೊಂಡು ಹೋಗುತ್ತಿದ್ದ ತಿಮ್ಮನು, ಗಲಾಟೆ ಏನೆಂಬುದನ್ನು ವಿಚಾರಿಸಬೇಕೆಂದು ಅವರ ಹತ್ತಿರ ನಿಲ್ಲಿಸಿದ. ಇವನನ್ನು ನೋಡಿ ಆ ಹುಡುಗರು, ಎಲ್ಲಿಯೊ ಪೋಲೀಸಿನವನಿರಬೇಕೆಂದು ಓಡಿದರು. ಕೋಳಿಯನ್ನು ಇಟ್ಟುಕೊಂಡಿದ್ದ ಮನುಷ್ಯನು ಕೂಡ, ಅಂಗಡಿಯ ಗಾಜು ಒಡೆದದ್ದಕ್ಕೆ ಇವನೇನು ಮಾಡುವನೋ ಎಂಬ ಭಯದಿಂದ ಓಡಿಹೋಗುವ ಅವಸರದಲ್ಲಿರುವಾಗ, ಕೈಯಲ್ಲಿದ್ದ ಕೋಳಿಯೂ ತಲೆಯ ಮೇಲಿದ್ದ ಟೋಪಿಯೂ ಕೆಳಕ್ಕೆ ಬಿದ್ದು ಹೋಯಿತು. ತಿಮ್ಮನು ಕೋಳಿಯನ್ನೂ ಟೋಪಿಯನ್ನೂ ಮನೆಗೆ ತಂದ. ನಾನು ಕೋಳಿಯನ್ನು ಅವನಿಗೇ ಕೊಟ್ಟು, ಟೋಪಿಯನ್ನು ಮೇಜಿನ ಮೇಲಿಟ್ಟೆ. ಯಾವ ವಸ್ತುವನ್ನೇ ಆಗಲಿ ಸರಿಯಾಗಿ ನೋಡಿದರೆ, ಎಷ್ಟು ವಿಷಯಗಳು ಕಣ್ಣಿಗೆ ಬೀಳುತ್ತವೆ ಎನ್ನುವುದನ್ನು, ಈ ಟೋಪಿಯ ದೃಷ್ಟಾಂತದಿಂದ ತಿಳಿದುಕೊಳ್ಳಬಹುದು. ಪ್ರಭೂ, ನೀನೂ ನೋಡು, ಈ ಟೋಪಿಯಿಂದ ಆ ಮನುಷ್ಯನ ವಿಷಯಗಳೇನು ತಿಳಿಯುತ್ತವೆ?" ಎಂದು ಪ್ರಕಾಶನು ಟೋಪಿಯು ಸಿಕ್ಕಿದ ಬಗೆಯನ್ನು ಹೇಳಿ, ಆದರ ವಿಷಯವಾಗಿ ನನ್ನನ್ನು

Sir A. Connon Doyle ರವರ "The Blue Carbuncle" ಎಂಬ ಕತೆಯ ಅನುಸರಣೆಯ ಫಲವಿದು.

ಪ್ರಶ್ನಿಸಿದ. ನಾನು ಟೋಪಿಯನ್ನು ತಿರುಗಿಸಿ ತಿರುಗಿಸಿ ನೋಡಿದೆ. ಅದು ಮುಹಮ್ಮದೀಯರು ಹಾಕಿಕೊಳ್ಳುವ ಫೆಜ್ (Fez) ಟೋಪಿ. ಹಳೆಯದೇ ಎನ್ನಬಹುದು. ತುಂಬಾ ಕೊಳೆಯಾಗಿತ್ತು. ಎಷ್ಟು ಹೊತ್ತು ನೋಡಿದರೂ ಹೆಚ್ಚಿಗೆ ಏನು ಹೇಳಲೂ ನನಗೆ ತೋರಲಿಲ್ಲ. ತಿಳಿದುದನ್ನು ಪ್ರಕಾಶನಿಗೆ ಹೇಳಿದೆ. ಅವನು ಸ್ವಲ್ಪ ಹೊತ್ತು ಯೋಚಿಸಿ "ಪ್ರಭೂ, ನೀನು ಹೇಳಿದುದು ಸಾಲದು. ಅದನ್ನು ಹಾಕಿಕೊಳ್ಳುವ ಮನುಷ್ಯನ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳಬಹುದು; ನೋಡು. ಇದನ್ನುಪಯೋಗಿಸುವ ಮನುಷ್ಯನಿಗೆ ಸುಮಾರು ೩೦-೩೫ ವರ್ಷಗಳಿರಬಹುದು. ಈಗ ೪-೫ ದಿವಸಗಳ ಹಿಂದೆ ಕ್ರಾಪ್ ಕತ್ತರಿಸಿಕೊಂಡಿದ್ದಾನೆ. ಬುದ್ಧಿಯಲ್ಲಿ ಚುರುಕಾಗಿದ್ದರೂ, ಈಗ ಬೇಜಾರಿನಿಂದಲೊ ಅಥವಾ ಜುಗುಪ್ಸೆಯಿಂದಲೊ ಸ್ವಲ್ಪ ಸೋಮಾರಿಯಾಗಿದ್ದಾನೆ. ಆದರೆ ಆತ್ಮಗೌರವವು ಸಂಪೂರ್ಣವಾಗಿದೆ. ಒಳ್ಳೆ ಆರೋಗ್ಯದ ದೇಹವುಳ್ಳವನು. ಈಗ ೪-೫ ವರ್ಷಗಳ ಹಿಂದೆ ಒಳ್ಳೆಯ ಸ್ಥಿತಿಯಲ್ಲಿದ್ದವನು, ಸದ್ಯ ಹಣವಿಲ್ಲದೆ ತಾಪತ್ರಯದಲ್ಲಿದ್ದಾನೆ" ಎಂದು ಉದ್ದಕ್ಕೆ ತರ್ಕವನ್ನು ಮಾಡುತ್ತಾ, ಉಪನ್ಯಾಸವನ್ನು ಕೊಡುತ್ತಿರುವಂತೆ ಹೇಳಿದ. ನನಗೆ ಆಶ್ಚರ್ಯವುಂಟಾಯಿತು. ಒಂದು ಹಳೆಯ ಟೋಪಿಯನ್ನು ನೋಡಿದ ಮಾತ್ರದಿಂದಲೆ ಇವೆಲ್ಲಾ ಹೇಗೆ ತಿಳಿಯುತ್ತವೆ ಎಂದು ವಿಸ್ಮಿತನಾಗಿ "ಪ್ರಕಾಶ!" ಎಂದೆ. ಯೋಚನೆಯಲ್ಲಿಯೇ ಮಗ್ನನಾಗಿದ್ದವನು ನನ್ನ ಕಡೆಗೆ ತಿರುಗಿ "ಅವನ ಹೆಂಡತಿ ಅವನನ್ನು ಅಷ್ಟಾಗಿ ಪ್ರೀತಿಸುತ್ತಿಲ್ಲ. ಮತ್ತೂ.." ಎಂದು ಹೇಳುತ್ತಿರುವಷ್ಟರಲ್ಲಿ "ಸರಿಹೋಯ್ತು, ಟೋಪಿಯಿಂದ ಅವನ ಸಂಸಾರವನ್ನೂ ತಿಳಿದುಕೊಂಡು ಬಿಟ್ಟೆಯಾ? ನೀನು ಆ ಷೆರ್ಲಾಕ್ ಹೋಂಸ್ಗೆ ಏನೇನೂ ಕಮ್ಮಿಯಿಲ್ಲಪ್ಪಾ. ಇನ್ನೂ ಅವನೇ ನಿನ್ನಲ್ಲಿ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಬಹುದು. ಅದಿರಲಿ, ಈಗ ನೀನು ಹೇಳಿದುದಕ್ಕೆ ಆಧಾರಗಳು?" ಎಂದು ಒಂದು ಸಿಗರೇಟನ್ನು ಹಚ್ಚಿದೆ. ಪ್ರಕಾಶನು ಮೇಜಿನ ಮೇಲೆ ಇದ್ದ ಭೂತಕನ್ನಡಿಯಿರಿದ ಟೋಪಿಯನ್ನು ನೋಡುತ್ತಾ "ಇಲ್ಲಿ ನೋಡು ಪ್ರಭೂ, ಒಳಗೆ ಹೊಸದಾಗಿ ಕತ್ತರಿಸಿದ ಸಣ್ಣ ಸಣ್ಣ ಕೂದಲು ಅಂಟಿಕೊಂಡು, ಒಳ್ಳೆ ಸೇಂಟಿನ ವಾಸನೆ ಬರುತ್ತಾ ಇದೆ. ಇದಕ್ಕೆ ಕಾರಣ ೩-೪ ದಿನಗಳ ಹಿಂದೆ ಕ್ರಾಪ್ ಕತ್ತರಿಸಿಕೊಂಡಾಗ, ಸೆಲೂನಿನವನು ಪ್ಯಾಸ್ ಲೈನ್ ಹಾಕಿ ಬಾಚಿದ್ದುದು. ಬುದ್ಧಿಯಲ್ಲಿ ಚುರುಕು ಎನ್ನುವುದಕ್ಕೆ, ಈ ಟೋಪಿ ಸ್ವಲ್ಪ ದೊಡ್ಡದು. ಅವನು ಸೋಮಾರಿ ಎನ್ನಲು ಟೋಪಿಯ ಕಡೆಗೆ ಲಕ್ಷ್ಯಕೊಡದೆ ಬಿಟ್ಟಿರುವುದೊಂದೇ ಸಾಕು. ಇನ್ನು ೪-೫ ವರ್ಷಗಳ ಹಿಂದೆ ಹಣವಂತನಾಗಿದ್ದನೆನ್ನುವುದು, ಈ ಟೋಪಿಯನ್ನು ನೋಡುತ್ತಲೆ ಹೇಳಬಹುದು. ಟೋಪಿಯ ಒಳಗಡೆ ಕೊಂಡ ತಾರೀಖೂ ಅಂಗಡಿಯ ಹೆಸರೂ ಇದೆ. ಅಂಗಡಿಯು ಬಹಳ ಉತ್ತಮವಾದದ್ದು. ಟೋಪಿಯು ಸಹ ಸಾಧಾರಣವಾದುದಲ್ಲ. ಸುಮಾರು ೮-೧೦ ರೂಪಾಯಿಗಳದಾಗಬಹುದು. ಈಗ ನಾಲ್ಕೈದು ವರ್ಷಗಳ

(೬೫೩ನೆಯ ಪುಟದಿಂದ ಮುಂದುವರಿದುದು)

ಬೇರು ಸಹಿತ ಕಿತ್ತಿ ಬಿಡುವ ಸಾಮರ್ಥ್ಯವು ನಮ್ಮಲ್ಲಿಯೆ ಉಂಟೆಂಬುದನ್ನು ರಸಿಯಾದ ವೀರ ಸಮತಾವಾದಿಗಳು ಸ್ಪಷ್ಟವಾಗಿ ಸಿದ್ಧಮಾಡಿದ್ದಾರೆ. ವಿಜ್ಞಾನದ ಸಹಾಯದಿಂದ ರೋಗಾದಿಗಳ ನಿರ್ಮೂಲವನ್ನೂ ನಾವು ಮಾಡಬಹುದಾಗಿದೆ. ಅಂತೂ, ಮಾನವನ ಪೂರ್ಣವಿಕಾಸವು ಮಾನವನ ಕೈಯಲ್ಲಿಯೆ ಇದೆ. ಹಿಂದಿನವರು ಬೀರಿದ ವೈಷಮ್ಯ, ಮತ್ಸರ, ದ್ವೇಷ, ಅಜ್ಞಾನ ಮುಂತಾದುವುಗಳನ್ನೆಲ್ಲ ಬಿಟ್ಟುಕೊಟ್ಟು 'ಮಾನವರೆಲ್ಲರೂ ಒಂದೇ! ಅವರಲ್ಲಿ ಮೇಗಿಲ್ಲ; ಕೆಳಗಿಲ್ಲ. ಎಲ್ಲರೂ ಬಂಧುಗಳೇ. ಅವರಲ್ಲಿ ಯಾವನೂ ಆ ಹುಸಿಬೊಮ್ಮನ ಮುಖದಿಂದ ಹುಟ್ಟಿಲ್ಲ; ಪಾದದಿಂದಲೂ ಹುಟ್ಟಿಲ್ಲ. ಎಲ್ಲರೂ ನಿಸರ್ಗದ ಉದರದಲ್ಲಿಯೆ ಹುಟ್ಟಿದವರು; ಅದರಲ್ಲಿಯೆ ಅಳಿಯುವವರು; ಮತ್ತೂ ಹುಟ್ಟುವವರು. ತಾಳ್ಮೆಯಿಂದ, ಪ್ರಯತ್ನದಿಂದ, ಬಂಧುಭಾವದಿಂದ, ಸಹಕಾರದಿಂದ ನಮ್ಮ ಕುಂದು-ಕೊರತೆಗಳನ್ನು ಹೋಗಲಾಡಿಸಿ, ಆದರ್ಶ ನೀತಿಯ ಮಾರ್ಗದಿಂದ, ಪೂರ್ಣವಿಕಾಸದ ನಮ್ಮ ನೈತಿಕ ಧ್ಯೇಯವನ್ನು ತಲುಪುವುದು ನಮ್ಮ ಕೈಯಲ್ಲಿದೆ' ಎಂಬುದೇ ನವಮತನಾದಿಗಳ ನವನೀತಿವಾದ.

ಅರಿಯುವಾ ತಲೆಯಿಂದ | ಹಸವಾದ ಎದೆಯಿಂದ |
ನೆರವಕೊಡಬಲ್ಲ ಕೈಯಿಂದ ಪೂರ್ಣನಾ |
ನರನೆ ವಿದ್ವಾಂಸ ಮರ್ಮಜ್ಞ | ||

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರ ಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೈಲ
ಅರ್ಧಿತವಾಯು, ಕೈ-ಕಾಲು-ಮೋರೆ ನಡುಗುವುದು,
ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು
ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ;
ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ಹಿಂದೆ ಇಷ್ಟು ಬೆಲೆಬಾಳುವ ಟೋಪಿಯನ್ನು ಕೊಳ್ಳಬೇಕಾದರೆ ಅವನ ಆರ್ಥಿಕ ಸ್ಥಿತಿ ಚೆನ್ನಾಗಿದ್ದೇ ಇರಬೇಕು. ಇಷ್ಟು ವರ್ಷಗಳಾಗಿ ಅದು ಕೆಟ್ಟಿದ್ದರೂ ಈಗಲೂ ಅದನ್ನೇ ಧರಿಸಬೇಕಾಗಿರುವುದಕ್ಕೆ ಅವನ ಈಗಿನ ಬಡತನವೇ ಕಾರಣ. ಆತ್ಮಗೌರವ ವಿದೆ ಎನ್ನಲಿಕ್ಕೂ, ಇಲ್ಲಿ ನೋಡು, ಟೋಪಿಯು ಒಂದು ಕಡೆ ಸ್ವಲ್ಪ ಹರಿದು ಬಿಳಿಯ ಬಣ್ಣ ಕಾಣುತ್ತದೆ; ಅದು ಕಾಣವೆ ಇರಲಿ ಎಂದು ಕೆಂಪು ಇಂಕಿಯನ್ನು ಬಳೆದಿದ್ದಾನೆ. ಅವನು ಟೋಪಿಯನ್ನು ನಿತ್ಯವೂ ಒರಸಿ ಶುಭ್ರವಾಗಿ ಇಟ್ಟುಕೊಳ್ಳದೆ ಹೋದರೆ, ಅವನ ಹೆಂಡತಿಯಾದರೂ ನಿತ್ಯವೂ ಆ ಕೆಲಸವನ್ನು ಮಾಡಬಹುದಾಗಿತ್ತು. ಮಾಡದೆ ಇರುವುದಕ್ಕೆ ಅವಳ ಅಲಕ್ಷ್ಯ ಮತ್ತು ಪ್ರೀತಿ ಇಲ್ಲದುದೇ ಕಾರಣ. ಪ್ರಭೂ, ಒಂದು ವೇಳೆ ನೀನು ಕೊಳಕುಬಟ್ಟೆ ಹಾಕಿಕೊಂಡು ಹೊರಗೆ ಹೊರಟಾಗ ನಿನ್ನ ಹೆಂಡತಿಯೂ ಸುಮ್ಮನೆ ಇದ್ದರೆ ಆಗ ಈ ಮಾತನ್ನು ನಿನಗೂ ಹೇಳಬೇಕಾಗುತ್ತೆ" ಎಂದ. ಅವನ ಮಾತುಗಳನ್ನು ಕೇಳಿ ನನಗೆ ಏನನ್ನೂ ಹೇಳಲಾರದಂತೆ ಆಯಿತು. ಅಷ್ಟರಲ್ಲಿ ತಿಮ್ಮನು ಗಾಬರಿಯಿಂದ ನಾವಿದ್ದ ಕೋಣೆಗೆ ಓಡಿಬಂದು, "ರಾಯ್ರೆ..ರಾಯ್ರೆ..ಕೋಳಿ" ಎಂದ. ಪ್ರಕಾಶನು "ಏನೋ? ಕೋಳಿ ಕತ್ತರಿಸಿದ ಮೇಲೆ ಜೀವಬಂದು ಹಾರಿಹೋಯ್ತೇನೊ?" ಎಂದ. ಅವನು "ಇಲ್ಲ ರಾಯ್ರೆ, ಕೋಳಿ, ನನ್ನ ಹೆಂಡತಿ ಕತ್ತರಿಸಿದ್ಲು; ಒಳಗೆ ನೋಡಿ" ಎನ್ನುತ್ತಾ ತನ್ನ ಕೈಯಲ್ಲಿದ್ದ ಒಂದು ಮಣಿಯನ್ನು ತೋರಿಸಿದ. ಅದು ಬಹಳ ಪ್ರಕಾಶಮಾನವಾಗಿತ್ತು. ನನ್ನ ಭಾವನು ತಕ್ಷಣ ಅದನ್ನು ಅವನ ಕೈಯಿಂದ ತೆಗೆದುಕೊಂಡು, ಚೆನ್ನಾಗಿ ನೋಡಿ "ಓಹೋ ಇದು ಸಾಮಾನ್ಯ ಕೋಳಿಯಲ್ಲ. ತಿಮ್ಮ, ನೀ ಹೋಗು ಮಣಿ ಇಲ್ಲೇ ಇರಲಿ" ಎಂದು ನನ್ನ ಹತ್ತಿರ ಬಂದು "ಪ್ರಭೂ, ನೋಡಿದೆಯಾ? ಈ ಮಣಿ ನಮ್ಮ ಕೈಗೆ ಸಿಕ್ಕಿದ ಬಗೆ. ಇದರಲ್ಲಿ ಏನೋ ಸ್ವಾರಸ್ಯವಿದ್ದೇ ಇರಬೇಕು." ಎಂದು ಹೇಳುತ್ತಾ ಮಣಿಯನ್ನು ಮೇಜಿನ ಮೇಲಿಟ್ಟು, ತನ್ನ ಬೀರುವಿನ ಬಾಗಿಲನ್ನು ತೆಗೆದು, ವೃತ್ತ-ಪತ್ರಿಕೆಗಳನ್ನು ಹುಡುಕಲಾರಂಭಿಸಿದ. ನಾನು ಉತ್ಸುಕತೆಯಿಂದ ಮಣಿಯನ್ನು ಕೈಯಲ್ಲಿ ತೆಗೆದುಕೊಂಡೆ. ಒಳ್ಳೆಯ ಜಾತಿಗೆ ಸೇರಿದುದೇ ಎಂದು ನನಗೆ ತೋರಿತು. ಆದರೆ ಅದೇನು ವಜ್ರವೇ ವೈಡೂರ್ಯವೇ ಎನ್ನುವದು ಮಾತ್ರ ತಿಳಿಯಲಿಲ್ಲ. "ಪ್ರಕಾಶ, ಇದೇನು ವಜ್ರವೇ?" ಎಂದೆ. ಅವನು ಒಂದು ಹಳೆಯ ಪತ್ರಿಕೆಯನ್ನು ನೋಡಿ "ಪ್ರಭೂ, ಇದು ಸಾಮಾನ್ಯವಾದುದಲ್ಲ; ಸುಮಾರು ೫೦-೬೦ ಸಾವಿರ ರೂಪಾಯಿಗಳ ಬೆಲೆಯುಳ್ಳದ್ದು. ಇದರ ಹೆಸರು 'ರತ್ನಮಣಿ'. ಸ್ವಲ್ಪ ಹೆಚ್ಚು ಕಡಮೆ 'ಕೋಹಿನೂರ್' ಎಂಬ ವಜ್ರದಷ್ಟೇ ಹೆಸರುವಾಸಿಯಾದುದು. ಪ್ರಪಂಚದಲ್ಲಿ ಎಲ್ಲೋ ೪-೫ ಇಂತಹ ಮಣಿಗಳಿರಬಹುದು. ಇದನ್ನು ....ಪುರದ ಮಹಾರಾಣಿಯವರು ಪರದೇಶಕ್ಕೆ ಹೋಗಿದ್ದಾಗ ತೆಗೆದುಕೊಂಡರಂತೆ. ಇದು ಇದ್ದ ಕಡೆಗಳಲ್ಲೆಲ್ಲಾ ಕೊಲೆ, ಖೂನಿ, ದರೋಡೆಗಳಿಗೆ ಲೆಕ್ಕವೇ ಇರುವುದಿಲ್ಲ. ಈ ಬೆಲೆಬಾಳುವ ಆಭರಣಗಳ ಗತಿಯೇ ಹೀಗೆ. ಎಷ್ಟು ರಕ್ತಪಾನ ಮಾಡಿದರೂ ತೃಪ್ತಿಯಾಗುವುದಿಲ್ಲ." ಎಂದು ಪ್ರಕಾಶನು ರತ್ನ-ಮಣಿಯ ಚರಿತ್ರೆಯನ್ನು ಸೂಕ್ಷ್ಮವಾಗಿ ಹೇಳಿ "ಆ, ಇಲ್ಲಿ ನೋಡಯ್ಯಾ" ಎಂದು ಒಂದು ವೃತ್ತಪತ್ರಿಕೆಯನ್ನು ನನ್ನ ಮುಂದೆ ಎಸೆದ. ಪತ್ರಿಕೆ ಕೇವಲ ಒಂದು ವಾರಕ್ಕೆ ಹಿಂದಿನದು. ಅದರಲ್ಲಿ ಒಂದು ಕಡೆ ಈ ರೀತಿ ಇತ್ತು:

"ಕಳವಾಗಿದೆ. ಪತ್ತೆಹಚ್ಚಿ ಕೊಟ್ಟವರಿಗೆ ೨೦೦ ರೂ. ಗಳ ಬಹುಮಾನ. ನೆನ್ನೆಯ ರಾತ್ರಿ ೯ ಘಂಟೆಯ ಹೊತ್ತಿನಲ್ಲಿ .... ಪುರದ ಮಹಾರಾಣಿಯವರ 'ರತ್ನಮಣಿ'ಯು ಹಿಂದೂ ಹೋಟಲಿನಲ್ಲಿ ಕಳವಾಗಿ ಹೋಗಿದೆ. ಮಣಿಯು ಸಿಕ್ಕಿದರೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಬಹುಮಾನ ಹೊಂದಬಹುದು.

ಪ್ರೊಪ್ರೈಟರ್ ಹಿಂದೂ ಹೋಟೆಲ್"

ನಾನು ಓದಿ ಮುಗಿಸುವಷ್ಟರಲ್ಲಿ, ಪ್ರಕಾಶನು ಪುನಃ ಇನ್ನೊಂದು ಪತ್ರಿಕೆಯನ್ನು ನನ್ನ ಕೈಗೆ ಕೊಟ್ಟ. ಅದರಲ್ಲಿ:—

"....ಕೋಳಿಯ ಹೊಟ್ಟೆಯಲ್ಲಿ ಮಣಿ ಹೇಗೆ ಬಂತು? ಹೇಳಿದೆಯೊ ಬದುಕಿದೆ; ಇಲ್ಲದೆ ಹೋದರೆ ಸುಟ್ಟುಬಿಡುತ್ತೇನೆ."

"ನೆನ್ನೆ 'ರತ್ನಮಣಿ'ಯ ಕಳವಿನ ಸಂಬಂಧವಾಗಿ ಆರ್ಮುಗಂ ಎಂಬ ವಿದ್ಯುಚ್ಛಕ್ತಿ ಕೆಲಸಗಾರನ ಮೇಲೆ ಅನುಮಾನ ಬಂದು, ಪೋಲಿಸಿನವರು ಅವನನ್ನು ಬಂಧಿಸಿರುತ್ತಾರೆ. ಮಹಾರಾಣಿಯವರು 'ರತ್ನಮಣಿ'ಯನ್ನು ತಾವು ಮಲಗುವ ಕೋಣೆಯಲ್ಲಿಟ್ಟು, ಸ್ನಾನಕ್ಕೆಂದು ಬೇರೆ ಕೊಠಡಿಗೆ ಹೋಗಿದ್ದಾಗ, ಆರ್ಮುಗಂ ವಿದ್ಯುಚ್ಛಕ್ತಿ ದೀಪವನ್ನು ಸರಿಮಾಡಲು, ಆ ಕೋಣೆಗೆ ಹೋಗಿದ್ದನಂತೆ. ೫ ನಿಮಿಷಗಳನಂತರ ಮಹಾರಾಣಿಯವರು ಹೋಗಿ ನೋಡಲು, ರತ್ನಮಣಿಯು ಮಾಯವಾಗಿ ಪೆಟ್ಟಿಗೆ ಮಾತ್ರ ಕೆಳಗೆ ಬಿದ್ದಿತ್ತು. ಕೂಡಲೆ ಪೋಲಿಸಿನವರಿಗೆ ವರ್ತಮಾನ ತಿಳಿಸಿದರು. ಆರ್ಮುಗಂ ನನ್ನು ಬಂಧಿಸಿ ವಿಚಾರಿಸಲು,

ಆತನು ತಪ್ಪಿತಸ್ಥನಲ್ಲವೆಂದೂ, ಮಣಿಯ ವಿಷಯವಾಗಿ ತನಗೇನೂ ತಿಳಿಯದೆಂದೂ; ತಾನು ೮-೩೦ ಘಂಟೆಯ ಹೊತ್ತಿನಲ್ಲಿ, ಹೋಟೇಲು ಮಾಲಿಕರ ಅಪ್ಪಣೆಯ ಮೇರೆಗೆ ದೀಪವನ್ನು ಸರಿಮಾಡಿ ಕೆಳಗೆ ಬಂದೆನೆಂತಲೂ; ಮೆಟ್ಟಲಿನ ಹತ್ತಿರ ರಾಣಿಯವರ ಸೇವಕಿಯು ಸಿಕ್ಕಿದಳೆಂದೂ ತಿಳಿಸಿರುತ್ತಾನೆ. ಆರ್ಮುಗಂ ಹಿಂದೆ ಒಂದು ಬಾರಿ ಯಾವುದೋ ಕಳವಿಗಾಗಿ ಶಿಕ್ಷೆ ಹೊಂದಿದವನಾದುದರಿಂದ, ಪೋಲೀಸಿನವರು ಆವನೇ ಈ ಕಳ್ಳತನ ಮಾಡಿರುವನೆಂದು ದೃಢವಾಗಿ ನಂಬಿ ಆತನನ್ನು ಲಾಕಪ್ಪಿನಲ್ಲಿಟ್ಟು, ಮಣಿಯು ಎಲ್ಲಿದೆ ಎಂಬುದನ್ನು ಹುಡುಕುತ್ತಿದ್ದಾರೆ. ಮಣಿಯು ಮಾತ್ರ ಆವನ ಹತ್ತಿರವಾಗಲಿ ಆತನ ಮನೆಯಲ್ಲಾಗಲಿ ಇನ್ನೂ ಸಿಕ್ಕಿಲ್ಲ" ಎಂದು, ನಡೆದ ಸಂಗತಿಯೆಲ್ಲಾ ವಿಶದವಾಗಿತ್ತು. ಎರಡು ಮೂರು ವಾರಗಳಿಂದ ಪತ್ರಿಕೆಗಳನ್ನು ನಾನು ನೋಡಿರಲಿಲ್ಲ. ಬಹು ಬೆಲೆಯುಳ್ಳ ರತ್ನಮಣಿಯ ಕಳವಿನ ವಿಚಾರ ನನಗೆ ಆಗಲೇ ತಿಳಿದದ್ದು. ಪ್ರಕಾಶನು ಮೇಜಿನ ಮೇಲಿದ್ದ ಟೆಲಿಫೋನಿನ ಮುಖಾಂತರ ಹಿಂದೂ ಹೋಟೇಲಿನ ಯಜಮಾನನಿಗೂ ಮಹಾರಾಣಿಯವರಿಗೂ ರತ್ನಮಣಿಯು ಸಿಕ್ಕಿರುವುದೆಂದೂ, ಅದನ್ನು ಕಳುಹಿಸಿ ಕೊಡಲಾಗುವುದೆಂದೂ ತಿಳಿಸಿದ. ನಾನು ಸ್ವಲ್ಪ ಹೊತ್ತು ಯೋಚಿಸಿ "ಪ್ರಕಾಶ, ರತ್ನಮಣಿ ಹಿಂದೂ ಹೋಟೇಲಿನಲ್ಲಿ ಕಳವಾಗಿದ್ದು, ಈ ಕೋಳಿಯ ಹೊಟ್ಟೆಯಲ್ಲಿ ಹೇಗೆ ಬಂದಿತು? ಈ ಡೇವಿಡ್ ಲೋಕನಾಥನ್ ಎಂಬವನೇ ಕದ್ದು, ಯಾರಿಗೂ ತಿಳಿಯದಿರಲೆಂದು ಕೋಳಿಯಿಂದ ನುಂಗಿಸಿರಬಹುದೇ?" ಎಂದು ಪ್ರಶ್ನಿಸಿದೆ. ಅವನು "ಪ್ರಭೂ, ನನಗೆ ಈ ಡೇವಿಡ್ ಎಂಬವನ ಮೇಲೆ ಸ್ವಲ್ಪವೂ ಸಂಶಯವಿಲ್ಲ. ಯಾಕೆಂದರೆ ತಾನು ಹೊತ್ತಿರುವ ಕೋಳಿಯು ಅಷ್ಟು ಬೆಲೆ ಬಾಳುವಂತಹದು ಎಂದು ಅವನಿಗೆ ತಿಳಿದಿದ್ದರೆ, ಅದನ್ನೆಂದಿಗೂ ತನ್ನ ಪ್ರಾಣ ಹೋಗುವಂತಿದ್ದರೂ- ಕೆಳಗೆ ಬಿಟ್ಟು ಹೋಗುತ್ತಿರಲಿಲ್ಲ. ಇದು ಬಹಳ ಸ್ವಾರಸ್ಯವಾಗಿದೆ. ಇದನ್ನು ತಿಳಿಯಲೇ ಬೇಕು. ಹೇಗಾದರೂ ಆಗಲಿ, ಡೇವಿಡ್ ಎಂಬವನನ್ನು ಮೊದಲು ಪತ್ತೆಮಾಡಿ, ಆನಂತರ ಎಲ್ಲವನ್ನೂ ತಿಳಿದುಕೊಳ್ಳೋಣ. ನೀನು ಮನೆಗೆ ಹೋಗುವಾಗ ಈ ಜಾಹೀರಾತನ್ನು 'ತಾಯಿನಾಡು' ಪೇಪರಿಗೆ ಕೊಟ್ಟು ಹೋಗು" ಎಂದು ಒಂದು ಚೀಟಿಯಲ್ಲಿ ಹೀಗೆ ಬರೆದುಕೊಟ್ಟ:—

"ಡೇವಿಡ್ ಲೋಕನಾಥನ್‌ರವರಿಗೆ ಎಂದು ಬರೆದಿದ್ದ ಚೀಟಿಯೊಡನೆ ಒಂದು ಕೋಳಿಯೂ, ಒಂದು ಟೋಪಿಯೂ ಸಿಕ್ಕಿದೆ. ಮಾಲಿಕರು ಒಂದು ಸಾಯಂಕಾಲ ೯ ಘಂಟೆಯ ಹೊತ್ತಿಗೆ ತೆಗೆದುಕೊಂಡು ಹೋಗಬಹುದು.

ಪ್ರಭಾಕರ್,
ಅಡ್ವೊಕೇಟ್, ಮಲ್ಲೇಶ್ವರಂ"

ಜಾಹೀರಾತನ್ನು ನಾನೊಂದು ಬಾರಿ ಓದಿ. "ಪ್ರಕಾಶ್, ಒಂದು ವೇಳೆ ಅವನು ಜಾಹೀರಾತನ್ನು ನೋಡದಿದ್ದರೆ?" ಎಂದೆ. ಅದಕ್ಕೆ ಅವನು "ನೋಡಿಯೆ ನೋಡುತ್ತಾನೆ. ಈಗಿನ ಕಾಲದಲ್ಲಿ ಏನು ಕಳೆದು ಹೋದರೂ ಪತ್ರಿಕೆಗಳಲ್ಲಿ ನೋಡುವುದು ಪದ್ಧತಿ. ಅದೂ ಅಲ್ಲದೆ ಹಬ್ಬಕ್ಕೆಂದು ಕೂಡಿಟ್ಟ ಹಣದಿಂದ ತಂದಿದ್ದ ಒಳ್ಳೆಯ ಜಾತಿಯ ಕೋಳಿಯು ಕಳೆದುಹೋಗಿರುವಾಗ, ಅವನೆಂದಿಗೂ ಪ್ರಕಟನೆಗಳನ್ನೂ ಪತ್ರಿಕೆಗಳನ್ನೂ ನೋಡದೆ ಇರುವುದಿಲ್ಲ." ಎಂದು ತಿಮ್ಮನನ್ನು ಕೂಗಿ, ೨ ರೂಪಾಯಿಗಳನ್ನು ಕೊಟ್ಟು, ಒಂದು ಒಳ್ಳೆಯ ಜಾತಿಯ ಕೋಳಿಯನ್ನು ತರುವಂತೆ ಹೇಳಿ ಕಳುಹಿಸಿದ. ನಾನು ಆಶ್ಚರ್ಯದಿಂದ ಅವನನ್ನು ನೋಡಿದೆ. ನಗುತ್ತಾ ಪ್ರಕಾಶನು "ತಿನ್ನುವುದಕ್ಕಲ್ಲಪ್ಪಾ; ಡೇವಿಡ್ ಬಂದರೆ ಕೊಡುವುದಕ್ಕೆ" ಎಂದ. ನಾನು ರಾತ್ರಿ ೯ ಘಂಟೆಗೆ ಬರುವೆನೆಂದು ಹೇಳಿ ಹೊರಟೆ. ದಾರಿಯಲ್ಲಿ ಹಾಗೆಯೆ ಜಾಹೀರಾತನ್ನು ಪತ್ರಿಕೆಗೆ ಕೊಟ್ಟು ಮನೆಗೆ ಹಿಂದಿರುಗುವಷ್ಟು ಹೊತ್ತಿಗೆ ಮಧ್ಯಾಹ್ನವಾಗಿತ್ತು.

ರಾತ್ರಿ ಊಟಮಾಡಿಕೊಂಡು ಪ್ರಕಾಶನ ಮನೆಗೆ ಹೋದೆ. ಅವನು ವರಂಡಾದಲ್ಲಿ ಕುಳಿತುಕೊಂಡು ನನ್ನ ತಂಗಿಯೊಡನೆ ಮಾತನಾಡುತ್ತಿದ್ದ. "ಏನಯ್ಯಾ ಸಮಾಚಾರ?" ಎಂದು ಪ್ರಶ್ನಿಸಿದೆ. ಪ್ರಕಾಶನು ಮೇಜಿನ ಮೇಲಿದ್ದ ಕಾಫಿಯನ್ನು ತೆಗೆದುಕೊಳ್ಳುವಂತೆ ಸೂಚಿಸಿ "ಇನ್ನೂ ೯ ಘಂಟೆ ಆಗಿಲ್ಲ" ಎಂದ. ಸ್ವಲ್ಪ ಹೊತ್ತು ಆ ಮಾತೂ ಈ ಮಾತೂ ಆಡುತ್ತಿದ್ದು ಹೊತ್ತುಗಳೆದೆವು. ಹೊರಗಿನಿಂದ "ಪ್ರಭಾಕರ್ ಎಂಬುವರು ಇಲ್ಲಿದ್ದಾರೆಯೋ, ಅವರ ಮನೆ ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಬಹುಶಃ ಈ ಮನೆಯಲ್ಲಿರಬಹುದೆಂದು ಯಾರೋ ಹೇಳಿದರು." ಎಂದು ಯಾರೋ ತಿಮ್ಮನೊಡನೆ ಮಾತನಾಡುತ್ತಿರುವಂತೆ ಕೇಳಿಸಿತು. ನಾನು ಎದ್ದು ಹೋಗಿ ಬಾಗಿಲನ್ನು ತೆರೆದು "ಒಳಗೆ ಬನ್ನಿ" ಎಂದೆ. ಆಗಂತುಕನು ದೂರದಲ್ಲಿಯೆ ನಿಂತುಕೊಂಡು ನಮಸ್ಕರಿಸಿ, "ನನ್ನ ಟೋಪಿ ಮತ್ತು ಕೋಳಿ ಸಿಕ್ಕಿದೆ ಎಂಬ ಜಾಹೀರಾತನ್ನು ನೋಡಿದೆ; ದಯವಿಟ್ಟು ವಾಪಸ್ಸು ಕೊಟ್ಟರೆ ತುಂಬಾ ಉಪಕಾರ ಮಾಡಿದಂತಾಗುತ್ತದೆ" ಎಂದ. ಪ್ರಕಾಶನನ್ನು ನಾನು ನೋಡಿದೆ. ಅವನು "ನಿಮ್ಮ ಕೋಳಿಯನ್ನು ನಮ್ಮ ತಿಮ್ಮನು ಕತ್ತರಿಸಿದ" ಎಂದು ಹೇಳಿ ಅವನ ಮುಖದಲ್ಲಿ ಏನಾದರೂ ಬದಲಾವಣೆಯಾಗುವುದೇನೋ ಎಂದು ನಿರುಕಿಸತೊಡಗಿದ. ಆಗಂತುಕನು ಯಾವ ವಿಧವಾದ ಆಶ್ಚರ್ಯವನ್ನಾಗಲಿ, ಭಯವನ್ನಾಗಲಿ ತೋರ್ಪಡಿಸದೆ "ಮತ್ತೆ ನನಗ್ಯಾಕೆ ಬರುವಂತೆ ಜಾಹೀರಾತನ್ನು ಪ್ರಕಟಿಸಿದಿರಿ? ನನ್ನ ಹೆಸರು ಇದ್ದದ್ದನ್ನು ನೋಡಿ ನಾನು ತುಂಬಾ ಆಶೆಯಿಂದ ಬಂದೆ" ಎಂದು ಉತ್ತರವಿತ್ತ. ಪ್ರಕಾಶನು ಮುಗುಳುನಗೆ ನಗುತ್ತಾ "ನಿಮ್ಮ ಕೋಳಿಗೆ ಬದಲು ಬೇರೆ ಕೋಳಿಯನ್ನು ತರಿಸಿದ್ದೇನೆ. ಬೇಕಾದರೆ ನಿಮ್ಮ ಮೊದಲನೆಯ ಕೋಳಿಯ ಪುಕ್ಕಗಳನ್ನೂ ರೆಕ್ಕೆಗಳನ್ನೂ ಹಾಗೆಯೇ ಇಟ್ಟಿರುವಂತೆ ತಿಮ್ಮನಿಗೆ ಹೇಳಿದ್ದೇನೆ" ಎಂದು ಒಂದು ಸಿಗರೇಟನ್ನು ಹಚ್ಚಿದ. ಡೇವಿಡ್ ಸ್ವಲ್ಪ ಸಮಾಧಾನ ಹೊಂದಿ "ಕೋಳಿ ಹೋದ ಮೇಲೆ ಪುಕ್ಕ, ರೆಕ್ಕೆಗಳಿಂದೇನು ಪ್ರಯೋಜನ? ನನಗೆ ಬೇರೆ ಕೋಳಿಯನ್ನು ಕೊಟ್ಟರೆ ಸಾಕು" ಎಂದ. ನಾನು ಕೋಳಿಯನ್ನು ತರುವಂತೆ ತಿಮ್ಮನಿಗೆ ಹೇಳಿದೆ. ಪ್ರಕಾಶನು ಸಿಗರೇಟಿನ ಹೊಗೆಯನ್ನು ಅಂತರಿಕ್ಷಕ್ಕೆ ಬಿಡುತ್ತಾ "ಮಿಸ್ಟರ್ ಡೇವಿಡ್, ನಿಮ್ಮ ಕೋಳಿ ತುಂಬಾ ಚೆನ್ನಾಗಿತ್ತು. ನನಗೂ ಕೋಳಿ

ಗೆ ವಿಷಯ ಸ್ವಲ್ಪ ಮಟ್ಟಿಗೆ ಗೊತ್ತಿದೆ. ಅದನ್ನು ನೀವು ಎಲ್ಲಿಂದ ತಂದಿರಿ? ನಿಮಗೋಸ್ಕರ ಆ ಕೋಳಿಯನ್ನು ಇಟ್ಟಿದ್ದಂತೆ ತೋರುತ್ತದೆ?" ಎಂದು ಕೇಳುತ್ತಿರುವಷ್ಟರಲ್ಲಿ, ತಿಮ್ಮನು ಕೋಳಿಯನ್ನು ತೆಗೆದುಕೊಂಡು ಬಂದ; ನಾನು ಅದನ್ನು ಡೇವಿಡ್‌ಗೆ ತೋರಿಸಿ "ಇದು ಇರಲೇ?" ಎಂದೆ. ಡೇವಿಡ್ ಕೋಳಿಯನ್ನು ನೋಡಿ ಸಂತುಷ್ಟನಾಗಿ "ಮೊದಲನೆಯ ಕೋಳಿಗಿಂತ ಇದೇ ತೂಕ ಜಾಸ್ತಿಯಿದೆ; ಇದೇ ಇರಲಿ. ಮೊದಲು ನಾನು ತಂದಿದ್ದ ಕೋಳಿ ಲಾಲ್‌ಬಾಗಿನ ಹತ್ತಿರವಿರುವ ಮಹಮ್ಮದ್ ಇಸ್ಮಾಯಿಲ್ ಅಂಗಡಿಯದು. ಕ್ರಿಸ್ಮಸ್ ಹಬ್ಬಕ್ಕೋಸ್ಕರ ಅದನ್ನು ತೆಗೆದುಕೊಂಡಿದ್ದೆ" ಎಂದು ಹೇಳಿ, ಕೋಳಿಯನ್ನು ತೆಗೆದುಕೊಂಡು, ನಮಗೆ ವಂದಿಸಿ ಹೊರಟುಹೋದ.

ಪ್ರಕಾಶನು ನಗುತ್ತಾ "ಪ್ರಭೂ, ನಾನು ಮೊದಲೇ ಹೇಳಲಿಲ್ಲವೇ ಇವನಿಗೇನೂ ತಿಳಿಯದೆಂದು. ಎಲ್ಲೋ ತಪ್ಪಿ ಇವನ ಕೈಗೆ ಕೋಳಿ ಸಿಕ್ಕಿದೆ. ಅದು ಹೇಗೆ ಸಿಕ್ಕಿತು ಎನ್ನುವುದನ್ನು ನಾವು ಪತ್ತೆ ಹಚ್ಚಲೇ ಬೇಕು. ನಾಳೆ ಸಾಯಂಕಾಲ ಲಾಲ್‌ಬಾಗಿಗೆ ಹೋಗಿ ಅಂಗಡಿಯವನನ್ನು ವಿಚಾರಿಸೋಣ" ಎಂದ. "ಆಗಲಿ" ಎಂದು ಒಪ್ಪಿ, ಮನೆಗೆ ಹಿಂದಿರುಗಿದೆ.

ಮಾರನೆಯ ದಿವಸ ಮಹಮದ್ ಇಸ್ಮಾಯಿಲ್ ಅಂಗಡಿಯ ಹತ್ತಿರ ಸಾಯಂಕಾಲ ೫ ಘಂಟೆಯ ಹೊತ್ತಿಗೆ ಹೋದೆವು. ಅವನೊಬ್ಬ ಕೋಳಿಗಳ ವ್ಯಾಪಾರಿ. ಕೋಳಿಗಳನ್ನು ಬಟ್ಟಿಗೆ ತಂದು ಚಿಲ್ಲರೆಯಾಗಿ ಮಾರುವುದೇ ಅವನ ಕಸಬು. ಅವನೊಡನೆ ಸ್ವಲ್ಪ ಹೊತ್ತು ಪ್ರಕಾಶನು ಮಾತನಾಡಿ, ಕೋಳಿಗಳನ್ನು ಹಲಸೂರು ಪೇಟೆಯ ಹನುಮಂತನಿಂದ ತಂದೆನೆಂದು ಅವನ ಬಾಯಿಂದ ಹೊರಡಿಸಿದ. ಅಲ್ಲಿಂದ ಹಲಸೂರು ಪೇಟೆಗೆ ಹೋಗಿ ಹನುಮಂತಪ್ಪನ ಅಂಗಡಿಯನ್ನು ಪತ್ತೆ ಹಚ್ಚಿ, ಅವನನ್ನು ಕಂಡೊಡನೆ "ಮೊನ್ನೆ ನೀವು ಡೇವಿಡ್ ಲೋಕನಾಥನ್‌ಗೆ ಕೊಟ್ಟ ಕೋಳಿಯನ್ನು ಎಲ್ಲಿಂದ ತಂದಿರಿ?" ಎಂದು ಪ್ರಶ್ನಿಸಿದೆವು. ಹನುಮಂತಪ್ಪನು ಕುಡುಕ, ಮೇಲಾಗಿ ತನ್ನ ವ್ಯಾಪಾರದ ಗುಟ್ಟನ್ನು ಬಿಡುವವನಲ್ಲ. ನಮ್ಮ ಪ್ರಶ್ನೆಗೆ ಅವನು ರೇಗಿ "ಹೋಗ್ರಯ್ಯಾ, ಎಲ್ಲಿಂದ ತಂದ್ರೆ ನಿಮ್ಗೇನು, ವ್ಯಾಪಾರ ಮಾಡೋದು ಬಿಟ್ಟು, ಎಲ್ಲಿಂದ ತಂದ್ರಿ, ಎಷ್ಟಕ್ಕೆ ತಂದ್ರಿ ಎಂದು ಪ್ರಶ್ನೆ ಹಾಕೋಕೆ ನೀವ್ಯಾರು!" ಎಂದ. ಪ್ರಕಾಶನು ಅವನ ಇಂಗಿತವನ್ನು ಅರಿತುಕೊಂಡು "ಅದಕ್ಕಲ್ಲಾ ನಾವು ಕೇಳಿದ್ದು; ನೀವು ಅವರಿಗೆ ಕೊಟ್ಟ ಕೋಳಿ ಜಾತೀದು ಅಲ್ಲ, ಕಂತ್ರೀದು! ಬೇಕಾದರೆ ೫ ರೂಪಾಯಿ ಪಂದ್ಯ" ಎಂದ. ಹನುಮಂತಪ್ಪನು "ಜಾತೀದಲ್ಲಾ! ಯಾರು ನಿಮಗೆ ಹೇಳಿದ್ದು? ೫ ರೂಪಾಯಿ ಸುಮ್ನೆ ಕಳೆದುಕೊಳ್ಳುತ್ತೀರಿ" ಎಂದ. ಅಷ್ಟಕ್ಕೆ ಸುಮ್ಮನೆ ಇರದೆ ಪ್ರಕಾಶನು "ನನಗೂ ಕೋಳಿಯ ವಿಷಯ ಗೊತ್ತಿದೆ. ಅದೆಂದಿಗೂ ಜಾತೀದಲ್ಲ. ೫ ರೂಪಾಯಿ ಹೋದ್ರೂ ಚಿಂತೆಯಿಲ್ಲ" ಎಂದು ಉತ್ತರ ಕೊಟ್ಟ. ಹನುಮಂತಪ್ಪನು ಮೇಜಿನ ಮೇಲೆ ಕೈಹಾಕಿ, ಒಂದು ದೊಡ್ಡ ಪುಸ್ತಕವನ್ನು ತೆಗೆದು "ನೋಡಯ್ಯಾ ಇಲ್ಲಿ, ಜಾತೀದು ಅಲ್ವೇನೋ '೫ ಜಾತೀ ಕೋಳಿಗಳು, ದಂಡಿನ ರೂತಮ್ಮನಿಂದ ೧೫ ರೂಪಾಯಿ'. ಆ ಮೇಲೆ ಹಾಗೆ ನೋಡು '೧೨ ಕೋಳಿಗಳು ದಾಸಪ್ಪನಿಗೆ ೧೨ ರೂಪಾಯಿ. ೧೨ ಕೋಳಿಗಳು ಮಹಮದ್ ಇಸ್ಮಾಯಿಲ್‌ಗೆ ೧೩ ರೂಪಾಯಿ. ಒಂದು ಕೋಳಿ ಮನೆಗೆ'. ನೋಡಿದೆಯೇನಯ್ಯಾ ಜಾತೀ ಕೋಳಿ ಅಲ್ವೇ? ರೂತಮ್ಮನ ಹತ್ತಿರ ಜಾತೀ ಕೋಳಿ ಬಿಟ್ರೆ ಕಂತ್ರೀ ಕೋಳಿ ಒಂದು ಪಿಳ್ಳೇನೂ ಸಿಗೋಲ್ಲ. ಬಿಸಾಕು ೫ ರೂಪಾಯಿ" ಎಂದು ಪುಸ್ತಕವನ್ನು ಮುಚ್ಚಿದ. ಪ್ರಕಾಶನು ೫ ರೂಪಾಯಿಗಳನ್ನು ಕೊಟ್ಟು, ನನ್ನೊಡನೆ ಹೊರಗೆ ಬಂದು "ಪ್ರಭೂ, ಈ ರೀತಿಯ ಮನುಷ್ಯರಿಗೆ, ಜೂಜು, ಪಂದ್ಯಗಳೆಂದರೆ ಪ್ರಾಣ. ಅದಕ್ಕೋಸ್ಕರ ಏನು ಬೇಕಾದರೂ ಮಾಡುತ್ತಾರೆ. ನಾವು ಸುಮ್ಮನೆ ಕೇಳಿದ್ರೆ ಅವನೆಂದಿಗೂ ಹೇಳುತ್ತಿರಲಿಲ್ಲ." ಎಂದು ದಂಡಿನ ಕಡೆಗೆ ತಿರುಗಿದ. ನಾನು ಅವನನ್ನು ಹಿಂಬಾಲಿಸಿದೆ. ದಂಡಿನಲ್ಲೆಲ್ಲಾ ರೂತಮ್ಮ ಹೆಸರು ವಾಸಿಯಾದ ಕೋಳಿಯ ವ್ಯಾಪಾರಗಾತಿ. ಅದರಿಂದ ಅವಳು ಬೇಕಾದಷ್ಟು ಆಸ್ತಿಯನ್ನೂ ಮಾಡಿದ್ದಳಂತೆ. ಅವಳ ಮನೆಗೆ ಹೋಗುವಷ್ಟು ಹೊತ್ತಿಗೆ ಒಳಗಿನಿಂದ ಒಬ್ಬನು ವೇಗವಾಗಿ ಹೊರಗೆ ಬಂದು ಗಾಡಿಯನ್ನು ಹತ್ತಿ "ಹನುಮಂತಪ್ಪನ ಅಂಗಡಿಗೆ ಹೊಡಿ" ಎಂದ. ಪ್ರಕಾಶನು ಮನೆಯ ಒಳಗೆ ಹೋಗದೆ ಅಲ್ಲಿಯೇ ನಿಂತಿದ್ದ ಒಂದು ಗಾಡಿಯನ್ನು ಹತ್ತಿ, ನನ್ನನ್ನು ಕುಳಿತುಕೊಳ್ಳುವಂತೆ ಹೇಳಿ "ಆ ಗಾಡಿಯ ಹಿಂದೆ ಬಿಡು" ಎಂದ. ಮುಂದಿನ ಗಾಡಿಯು ಹನುಮಂತಪ್ಪನ ಅಂಗಡಿಯ ಹತ್ತಿರ ಒಂದೆರಡು ನಿಮಿಷಗಳು ನಿಂತಿದ್ದು, ಪುನಃ ಲಾಲ್‌ಬಾಗಿನ ಕಡೆಗೆ ತಿರುಗಿತು. ನಾವೂ ಹಿಂಬಾಲಿಸಿದೆವು. ನಾವು ಗಾಡಿಯನ್ನು ಇಳಿದು ಅಂಗಡಿಗೆ ಹೋದೆವು. ಒಳಗೆ ಮಹಮ್ಮದ್ ಇಸ್ಮಾಯಿಲ್ ಕೂಗಾಡುತ್ತಿದ್ದ. ಅವನ ಜತೆಯಲ್ಲಿ ಮಾತಾಡುತ್ತಿದ್ದವನು "ನಿನಗೇನು ಬೇಕಾದರೂ ಕೊಡುತ್ತೀನಿ; ನಿನಗೆ ಹನುಮಂತಪ್ಪ ಕೊಟ್ಟ ಕೋಳಿಗಳ ಪೈಕಿ, ಹಸುರು ಪುಕ್ಕಗಳಿದ್ದ ಕೋಳಿಯನ್ನು ನೀನು ಯಾರಿಗೆ ಕೊಟ್ಟೆ?" ಎಂದು ಪ್ರಶ್ನಿಸುತ್ತಿದ್ದ. ಪ್ರಕಾಶನು ತಕ್ಷಣ ಅವನನ್ನು ಉದ್ದೇಶಿಸಿ "ಓಹೋ, ಹಸುರು ಪುಕ್ಕ ಇದ್ದದ್ದೇ; ನನಗೆ ಸಿಕ್ಕಿತು. ಕೋಳಿ ಬಹಳ ಚೆನ್ನಾಗಿರುವುದರಿಂದ ಮನೆಯಲ್ಲಿ ಸಾಕಿಕೊಂಡಿದ್ದೇನೆ." ಎಂದ. ಅವನು "ಅದು ನನಗಾಗಿ ನಮ್ಮಕ್ಕ ಸಾಕಿದ್ದಳು. ಅದನ್ನು ನನಗೆ ಕೊಟ್ಟುಬಿಡಿ. ಅದರ ಎರಡರಷ್ಟು ಬೆಲೆಯನ್ನು ಕೊಡುತ್ತೀನಿ!" ಎಂದು ಆತುರವಾಗಿ ಕೇಳಿಕೊಂಡ. ಪ್ರಕಾಶನು "ಆಗಬಹುದು. ನೀವು ಆ ಕೋಳಿಯ ಮೇಲೆ ಅಷ್ಟು ವಿಶ್ವಾಸ ಇಟ್ಟುಕೊಂಡಿದ್ದರೆ ನನಗ್ಯಾಕೆ? ನಾನು ಬೇರೆ ತೆಗೆದುಕೊಳ್ಳುತ್ತೇನೆ; ಬನ್ನಿ ನನ್ನ ಜತೆಯಲ್ಲಿ!" ಎಂದು ಹೇಳಿ ಅವನನ್ನು ಗಾಡಿಯಲ್ಲಿ ಕೂರಿಸಿಕೊಂಡು "ಮಲ್ಲೇಶ್ವರದ ಕಡೆಗೆ ಹೊಡೆ" ಎಂದು ಗಾಡಿಯವನಿಗೆ ಹೇಳಿದ. ಮನೆಯನ್ನು ಸೇರಿದ ಮೇಲೆ ಗಾಡಿಯವನಿಗೆ ದುಡ್ಡುಕೊಟ್ಟು ಕಳುಹಿಸಿ, ನಾವು ಮೂವರೂ ಮಹಡಿಯ ಮೇಲಿನ ಕೋಣೆಗೆ ಹೋದೆವು. ಪ್ರಕಾಶನು ಕೋಟನ್ನು

ಬಿಚ್ಚಿ ನನ್ನ ಎದುರಿನ ಕುರ್ಚಿಯ ಮೇಲೆ ಕುಳಿತುಕೊಂಡ. ನಾನು ನನ್ನ ಪಕ್ಕದಲ್ಲಿಯೆ ಕುಳಿತಿದ್ದ ವ್ಯಕ್ತಿಯನ್ನುದ್ದೇಶಿಸಿ "ನಿಮ್ಮ ಹೆಸರೇನು?' ಎಂದೆ. ಅವನು ಒಂದು ಬಾರಿ ನನ್ನನ್ನೂ, ಇನ್ನೊಂದು ಬಾರಿ ಪ್ರಕಾಶನನ್ನೂ ನೋಡುತ್ತಾ "ನನ್ನ ಹೆಸರು ಕನ್ನಸ್ವಾಮಿ' ಎಂದ. ಪ್ರಕಾಶನು "ಕೆಲಸವೆಲ್ಲಿ?" ಎಂದು ಕೇಳಿದ ಪ್ರಶ್ನೆಗೆ "ಹಿಂದೂ ಹೋಟೆಲಿನಲ್ಲಿ; ನನ್ನ ಕೋಳಿಯನ್ನು ದಯವಿಟ್ಟು ಬೇಗನೆ ಕೊಟ್ಟರೆ ತುಂಬಾ ಅನುಕೂಲ. ನನಗೆ ಇನ್ನೂ ಬೇರೆ ಕೆಲಸ ಇದೆ" ಎಂದ. ಪ್ರಕಾಶನು ಜೇಬಿನಲ್ಲಿದ್ದ ರಿವಾಲ್ವರನ್ನು ತಕ್ಷಣ ತೆಗೆದು "ನಿನ್ನ ನಾಟಕವೆಲ್ಲಾ ಹಾಗಿರಲಿ. ಮೊದಲು ಹೇಳು, ಕೋಳಿಯ ಹೊಟ್ಟೆಯಲ್ಲಿ ಮಣಿ ಹೇಗೆ ಬಂತು? ಹೇಳಿದೆಯೋ ಬದುಕಿದೆ; ಇಲ್ಲದೆ ಹೋದರೆ ಸುಟ್ಟು ಬಿಡುತ್ತೇನೆ' ಎಂದ. ಕನ್ನಸ್ವಾಮಿಯು ನಡುಗುತ್ತಾ "ನನಗೇನೂ ತಿಳಿಯದು" ಎಂದು ಗೋಳಾಡಿದ. ಅಲ್ಲಿಗೂ ಪ್ರಕಾಶನು ಅವನನ್ನು ಬಿಡದೆ ಗಡಿಯಾರವನ್ನು ನೋಡುತ್ತಾ "ಇನ್ನು ಮೂರು ನಿಮಿಷಗಳ ಕಾಲ ಕೊಟ್ಟಿದ್ದೇನೆ. ಅಷ್ಟರಲ್ಲಿ ಎಲ್ಲಾ ಸಮಾಚಾರಗಳನ್ನು ತಿಳಿಸಿದೆಯೋ ಸರಿ; ಇಲ್ಲವೋ ಗೋಲಿ ನಿನ್ನ ಎದೆಯನ್ನು ಸೇರುತ್ತೆ" ಎಂದ. ಕನ್ನಸ್ವಾಮಿಯು ಮುಖವನ್ನು ಕೈಗಳಿಂದ ಮುಚ್ಚಿಕೊಂಡು "ಇನ್ನೇನು ಹೇಳುತ್ತೇನೆ; ಹೇಗಿದ್ದರೂ ಸಿಕ್ಕಿಬಿದ್ದಿದ್ದೇನೆ. ಆದರೆ ನನ್ನ ತಪ್ಪೇನೂ ಇದರಲ್ಲಿಲ್ಲ" ಎಂದ. ಪ್ರಕಾಶನು "ಅದೆಲ್ಲಾ ಇರಲಿ,ನೀನು ಹೇಗೆ ಈ ಕೋಳಿಯ ಹೊಟ್ಟೆಯಲ್ಲಿ ಮಣಿಯನ್ನಿಟ್ಟೆ? ಅದು ಹೇಗೆ ನಿನ್ನ ಕೈಯಿಂದ ಬದಲಾಯಿಸಿತು?" ಎಂದು ಪ್ರಶ್ನಿಸಿದ. ಕನ್ನಸ್ವಾಮಿಯು ಸರಿಯಾಗಿ ಕುಳಿತುಕೊಂಡು "ನನಗೆ ಈ ಮಣಿಯನ್ನು ಕದಿಯಬೇಕೆಂದು ಇಷ್ಟವಿರಲಿಲ್ಲ. ಇದಕ್ಕೆ ಮುಂಚೆ ಈ ರೀತಿಯ ಕೆಲಸವನ್ನು ನಾನೆಂದಿಗೂ ಮಾಡಿಲ್ಲ. ಹಿಂದೂ ಹೊಟೇಲಿನಲ್ಲಿ ನಾನು ತಿಂಡಿಮಾಡುತ್ತೇನೆ. ಮಹಾರಾಣಿಯವರು ಬಂದು ಇಳಿದುಕೊಂಡ ದಿವಸವೇ ಅವರ ದಾದಿಗೂ ನನಗೂ ಸ್ನೇಹವಾಯಿತು. ಅವಳು ಮಣಿಯ ವಿಷಯವನ್ನೆಲ್ಲಾ ನನಗೆ ಸವಿಸ್ತಾರವಾಗಿ ಹೇಳಿದಳು. ಮತ್ತು ಅದನ್ನು ಉಪಾಯದಿಂದ ಕಳವು ಮಾಡಿ ಓಡಿಹೋಗೋಣವೆಂದೂ ಸೂಚಿಸಿದಳು. ನನಗೆ ಮಣಿಯನ್ನು ಹೊಂದಬೇಕೆಂಬ ಕೆಟ್ಟ ಆಶೆಯು ಪ್ರಬಲವಾಯಿತು. ನಾಲ್ಕು ದಿವಸಗಳ ವರೆಗೆ ಉಪಾಯವನ್ನು ಯೋಚಿಸಿ, ಕೊನೆಗೆ ರಾಣಿಯವರ ಕೊಠಡಿಯ ದೀಪವನ್ನು ನಾನೇ ಕೆಡಿಸಿ, ಸರಿಮಾಡುವುದಕ್ಕೆ ಆರ್ಮುಗಂ ಬರುವಂತೆ ಮಾಡಿದೆ. ಆರ್ಮುಗಂ ಹಿಂದೊಂದು ಬಾರಿ ಸಣ್ಣ ಪುಟ್ಟ ಕಳ್ಳತನಮಾಡಿದ್ದುದರಿಂದ, ಮಣಿಯು ಆ ದಿನ ಕಳವಾದರೆ ಅವನ ಮೇಲೆಯೆ ಗುಮಾನಿ ಬರುತ್ತದೆ ಎಂದು ನನಗೆ ಗೊತ್ತಿತ್ತು. ಹಾಗೆಯೆ ದಾದಿಗೂ ಈ ವಿಷಯವನ್ನು ಹೇಳಿ, ಆರ್ಮುಗಂ ಕೊಟಡಿಗೆ ಹೋಗುವುದಕ್ಕೆ ಮುಂಚೆಯೆ ದಾದಿಯ ಸಹಾಯದಿಂದ ಮಣಿಯನ್ನು ಅಪಹರಿಸಿ ಜೇಬಿನಲ್ಲಿಟ್ಟುಕೊಂಡೆ. ಸ್ವಲ್ಪ ಹೊತ್ತಿನಲ್ಲಿಯೆ ಅದರ ಕಳವಿನ ಮೂಲಕ ದೊಡ್ಡ ಗಲಾಟೆಯಾಗಿ ಪೋಲೀಸಿನವರು ಬಂದು ಹೊಟೇಲನ್ನು ಶೋಧಿಸತೊಡಗಿದರು. ನನಗೆ ದಿಕ್ಕೇ ತೋಚದಂತಾಯ್ತು. ಮಣಿಯು ನನ್ನ ಜೇಬಿನಲ್ಲಿರುವುದು, ಭೂಮಿಯೇ ನನ್ನ ಮೇಲೆ ಇದ್ದಹಾಗೆ ಇತ್ತು. ಯಾರಾದರೂ ನನ್ನನ್ನು ಶೋಧನೆ ಮಾಡಿದರೆ ಗತಿಯೇನು? .. ಎಂದು ಎದೆಯು ಡವಡವನೆ ಹೊಡೆದುಕೊಂಡಿತು. ಅಷ್ಟುಹೊತ್ತಿಗೆ ರಾತ್ರಿ ೧೧ ಘಂಟೆಯಾದುದರಿಂದ ನನ್ನ ಕೆಲಸದ ವೇಳೆಯು ಮುಗಿಯಿತು. ಕೂಡಲೆ ಜೇಬನ್ನು ಭದ್ರವಾಗಿ ಕೈಯಲ್ಲಿ ಹಿಡಿದುಕೊಂಡು ವೇಗವಾಗಿ ಹೊರಟೆ. ದಾರಿಯಲ್ಲಿ ಯಾರನ್ನು ನೋಡಿದರೂ ಪೋಲಿಸಿನವರ ಹಾಗೆ ಕಾಣುತ್ತಿದ್ದರು. ಸ್ವಲ್ಪ ಹೊತ್ತು ನಡೆದ ಮೇಲೆ, ಮಣಿಯನ್ನು ಎಲ್ಲಿಡಬೇಕೆಂಬ ದೊಡ್ಡ ಯೋಚನೆ ನನ್ನನ್ನು ಆವರಿಸಿತು. ತಕ್ಷಣ ಮಾರಲು ಹೋದರೆ ಯಾರಿಗಾದರೂ ಅಪನಂಬಿಕೆ ಬಂದು ಹಿಡಿದುಬಿಡುತ್ತಾರೆ. ನನ್ನಲ್ಲಿಯೆ ಇಟ್ಟುಕೊಂಡರೆ, ಪೋಲಿಸಿನವರು ತನಿಖೆ ಮಾಡಿದರೂ ಮಾಡಬಹುದು. ಬೇರೆ ಊರಿಗೆ ಹೋಗೋಣವೆಂದರೆ ನಾನೇ ಕಳ್ಳ ಎಂಬುದು ಸ್ಥಿರವಾಗುತ್ತದೆ. ಇದೆಲ್ಲವನ್ನೂ ನಾನು ಯೋಚಿಸುತ್ತಾ ನಮ್ಮಕ್ಕನ ಮನೆಗೆ ಹೋದೆ. ನಮ್ಮಕ್ಕ ಕೋಳಿಯ ವ್ಯಾಪಾರಗಾತಿ. ನನ್ನನ್ನು ನೋಡಿದ ಕೂಡಲೆ 'ಏಕೆ ಹೀಗಿದ್ದೀ?' ಎಂದು ಪ್ರಶ್ನಿಸಿದಳು. ನನ್ನ ಸ್ಥಿತಿಯೇ ಬದಲಾಯಿಸಿತ್ತು. 'ಏನೂ ಇಲ್ಲ' ಎಂದು ಹೇಳಿ ಹಿಂದೆ ಅಂಗಳಕ್ಕೆ ಒಂದು ನಿಂತುಕೊಂಡೆ. ನಮ್ಮಕ್ಕ ಕ್ರಿಸ್‌ಮಸ್ ಹಬ್ಬಕ್ಕೆ ನನಗೆ ಕೊಡಬೇಕೆಂದು ಒಂದು ಒಳ್ಳೆಯ ಜಾತಿಯ ಕೋಳಿಯನ್ನು ಸಾಕುತ್ತಿದ್ದಳು. ಇತರ ಎಲ್ಲಾ ಕೋಳಿಗಳಿಗಿಂತಲೂ ಅದು ತುಂಬಾ ಚೆನ್ನಾಗಿಯೂ ತೂಕವಾಗಿಯೂ ಇತ್ತು. ಅದೂ ಅಲ್ಲದೆ ಅದಕ್ಕೆ ಹಸುರು ಬಣ್ಣದ ಪುಕ್ಕಗಳೇ ಹೆಚ್ಚಾಗಿತ್ತು. ನಾನು ಯೋಚಿಸುತ್ತಾ ನಿಂತಿರುವಾಗ ಕೋಳಿಗಳ ಗುಂಪು ಕಾಳುಗಳನ್ನು ತಿನ್ನುತ್ತಾ ಗಲಾಟೆ ಮಾಡುತ್ತಿತ್ತು. ಅವುಗಳನ್ನು ನೋಡುತ್ತಲೇ ನನಗೆ ಥಟ್ಟನೆ ಒಂದು ಉಪಾಯವು ಹೊಳೆಯಿತು. ಹಾಗೂ, ಪ್ರಸಿದ್ಧ ಕಳ್ಳರು ಬಂಗಾರ, ವಜ್ರ ಮುಂತಾದುವುಗಳನ್ನು ಕೋಳಿ, ಬಾತುಗಳಿಂದ ನುಂಗಿಸಿ ಅನಂತರ ಬೇಕಾದಾಗ ಕುಯಿದು ತೆಗೆದುಕೊಳ್ಳುವರೆಂದು ಹೇಳಿದ್ದ ನನ್ನ ಸ್ನೇಹಿತನ ಮಾತೂ ಜ್ಞಾಪಕಕ್ಕೆ ಬಂದಿತು. ಕಾಲವನ್ನು ಕಳೆಯದೆ ನನಗಾಗಿ ಮೀಸಲಾಗಿದ್ದ ಕೋಳಿಯನ್ನು ಹಿಡಿದುಕೊಂಡು, ಮಣಿಯನ್ನು ಅದರ ಗಂಟಲಲ್ಲಿಟ್ಟು ಬೆರಳಿನಿಂದ ಒಳಕ್ಕೆ ನೂಕಿದೆ. ಅದು ಕ್ಕೊಕ್ಕೊ ಎಂದು ಶಬ್ದ ಮಾಡುತ್ತಾ ನುಂಗಿತು. ಶಬ್ದವನ್ನು ಕೇಳಿದ ನಮ್ಮಕ್ಕ ಒಳಗಿನಿಂದ ಬಂದು 'ಕೋಳಿಗಳನ್ನ ಏನು ಮಾಡ್ತೀಯಾ?' ಎಂದಳು. ನಾನು ತಕ್ಷಣ ಕೈಯಲ್ಲಿದ್ದ ಕೋಳಿಯನ್ನು ಕೆಳಗೆ ಹಾಕಿ 'ನನಗೆ ಕೊಡುವ ಕೋಳಿ ಹೇಗಿದೆ ಎಂದು ನೋಡಿದೆ' ಎಂದು ಹೇಳಿದೆ. ಅವಳು, 'ಬಹಳ ಚೆನ್ನಾಗಿದೆ, ತುಂಬಾ ಮುತುವರ್ಜಿಯಿಂದ ಸಾಕಿದ್ದೇನೆ. ಅಲ್ಲಿ ನೋಡು ಆ ಹಸುರು ಪುಕ್ಕ ಇರುವುದು' ಎಂದಳು. ನಾನು ಕೋಳಿಗಳ ಗುಂಪನ್ನು ನೋಡಿದೆ. ಸುಮಾರು ೫೦-೬೦ ಕೋಳಿಗಳ ಗುಂಪಿನಲ್ಲಿ ಎರಡಕ್ಕೆ ಮಾತ್ರ ಹಸುರು ಪುಕ್ಕ ಇದ್ದು ಒಂದೇ ರೀತಿಯಿತ್ತು. 'ಏನಕ್ಕಾ, ಎರಡು ಕೋಳಿಗಳೂ ಒಂದೇ ರೀತಿಯಿವೆ!'

ಎಂದೆ. ಅದಕ್ಕೆ ಅವಳು ಹೌದು ಒಂದು ನಿನಗೆ, ಇನ್ನೊಂದು ಹನುಮಂತಪ್ಪನ ಅಂಗಡಿಗೆ ಜಾತಿ ಕೋಳಿ ಬೇಕೆಂದು ಅವನು ೫ ರೂಪಾಯಿಗಳನ್ನು ಮುಂಗಡ ಕೊಟ್ಟಿದ್ದಾನೆ' ಎಂದಳು. ನನಗೆ ಆಕಾಶ ಕಳಚಿ ಬಿದ್ದಹಾಗೆ ಆಯಿತು. ನಾನು ಯಾವ ಕೋಳಿಗೆ ಮಣಿಯನ್ನು ನುಂಗಿಸಿದೆ ಎನ್ನುವುದು ತಿಳಿಯದೆ ತುಂಬಾ ಪೇಚಾಡಿದೆ. ಕೊನೆಗೆ ನನ್ನ ಕೋಳಿಯನ್ನು ಈಗಲೆ ತೆಗೆದುಕೊಳ್ಳುತ್ತೇನೆಂದು ಹೇಳಿ, ಕೋಳಿಯನ್ನು ತೆಗೆದುಕೊಂಡು ಹೊರಟುಹೋದೆ. ಅಷ್ಟುಹೊತ್ತಿಗೆ ಮಣಿಯ ಕಳವಿನ ವಿಷಯ ಸ್ವಲ್ಪ ಅಡಗಿ ಆರ್ಮುಗಂಗೆ ಶಿಕ್ಷೆಯಾಗಿದ್ದುದರಿಂದ, ಮೂರು ದಿವಸಗಳ ನಂತರ ನನ್ನ ಮನೆಯಲ್ಲಿ ಕೋಳಿಯನ್ನು ಕತ್ತರಿಸಿದೆ. ಹೊಟ್ಟೆಯಲ್ಲಿ ಮಣಿ ಇರಲಿಲ್ಲ. ಬೇರೆ ಕೋಳಿಯ ಹೊಟ್ಟೆಗೆ ಅದು ಸೇರಿದೆ ಎಂದು ತಿಳಿದು, ಅದನ್ನು ಯಾವ ಹನುಮಂತಪ್ಪನ ಅಂಗಡಿಗೆ ನಮ್ಮಕ್ಕ ಕೊಟ್ಟಳೆಂಬುದನ್ನು ವಿಚಾರಿಸಿಕೊಂಡು ಬಂದೆ. ಅವನು ಮಹಮ್ಮದ್ ಇಸ್ಮಾಯಿಲ'ಗೆ ಕೊಟ್ಟಿರುವುದಾಗಿ, ೧೦ ರೂಪಾಯಿಗಳನ್ನು ಕೊಟ್ಟ ಮೇಲೆ ತಿಳಿಸಿದ. ನೀವೂ ಇವರೂ ಅಲ್ಲಿಂದ ನಡೆದ ಸಂಗತಿಗಳನ್ನು ಅರಿತೇ ಇದ್ದೀರಿ. ನನ್ನನ್ನು ದಯವಿಟ್ಟು ಕ್ಷಮಿಸಿದರೆ ಇನ್ನು ಮೇಲೆ ಎಂದೆಂದಿಗೂ ಈ ರೀತಿ ಕೆಲಸಗಳನ್ನು ಮಾಡುವುದಿಲ್ಲ. ಇಲ್ಲದೆ ಇದ್ದರೆ ನಾನು ಪ್ರಪಂಚದಲ್ಲಿ ಬದುಕುವಂತಿಲ್ಲಾ!" ಎಂದು ತನ್ನ ಕತೆಯನ್ನು ಸಂಪೂರ್ಣವಾಗಿ ಹೇಳಿ, ಪ್ರಕಾಶನ ಕಾಲುಗಳ ಮೇಲೆ ಬಿದ್ದ. ಪ್ರಕಾಶನು ರಿವಾಲ್ವರನ್ನು ಮೇಜಿನ ಮೇಲೆ ಬಿಸಾಡಿ "ಇಲ್ಲಿಂದ ಹೊರಡು ಆಚೆಗೆ, ಹೊರಡು!" ಎಂದು ಗದ್ದರಿಸಿ ಬಾಗಿಲನ್ನು ತೋರಿಸಿದ. 'ಸದ್ಯ ಬದುಕಿದೆ' ಎಂದುಕೊಂಡು ಕನ್ನಸ್ವಾಮಿಯು ಹಿಂದಿರುಗದೆ ಓಡಿದ. ನಾನು ಆಶ್ಚರ್ಯದಿಂದ "ಕಳ್ಳನನ್ನು ಬಿಟ್ಟೆಯಲ್ಲೋ" ಎಂದೆ. ಪ್ರಕಾಶನು ನಿದಾನವಾಗಿ ಒಂದು ಸಿಗರೇಟನ್ನು ಹಚ್ಚಿ "ಪ್ರಭೂ, ಯಾರು ಕಳ್ಳ ಆದರೆ ನಮಗೇನು? ನ್ಯಾಯ ಬರಬೇಕು ಅಷ್ಟೇ ತಾನೇ? ಈಗ ಇವನನ್ನು ಪೋಲಿಸಿನವರಿಗೆ ಹಿಡಿದುಕೊಟ್ಟರೆ ಇವನ ಜೀವನವನ್ನೇ ಕೆಡಿಸಿದಂತೆ ಆಗುತ್ತದೆ. ಅವನು ಆತ್ಮಗೌರವವುಳ್ಳ ಮನುಷ್ಯ. ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟಿದ್ದಾನೆ. ಅವನಿಗೆ ಈ ಕೆಟ್ಟ ಬುದ್ಧಿ ಹುಟ್ಟುವುದಕ್ಕೆ ದುಷ್ಟರ ಸಂಗವೆ ಕಾರಣ. ಈ ಪ್ರಕರಣದಿಂದ ಅವನಿಗೆ ಸಾಕಾದಷ್ಟು ಶಿಕ್ಷೆ ಆದ ಹಾಗೆಯೆ ಸರಿ. ಇನ್ನು ಮುಂದೆ ಅವನೆಂದಿಗೂ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲ" ಎಂದ. ನಾನು ಸ್ವಲ್ಪ ಹೊತ್ತು ಅವನು ಹೇಳಿದುದನ್ನೆಲ್ಲಾ ಕೇಳಿ "ಪ್ರಕಾಶ, ಅದೇನೋ ಸರಿ, ಆದರೆ ಪಾಪ ತಪ್ಪಿತಸ್ಥನಲ್ಲದ 'ಆರ್ಮುಗಂ'ನ ಗತಿ?" ಎಂದೆ. ಅವನು "ಅವನ ಗತಿಯನ್ನೂ ನಾವು ನೋಡಿದರೆ ತಾನೇ, ನ್ಯಾಯ ದೊರಕಿದ ಹಾಗಾಯ್ತು!" ಎಂದು ಹೇಳಿ, ಮೇಜಿನ ಮೇಲಿದ್ದ ಟೆಲಿಫೋನಿನ ಮುಖಾಂತರ ಪೋಲಿಸ್ ಇನ್ಸ್‌ಪೆಕ್ಟರರಿಗೆ, ಮಣಿಯು ಸಿಕ್ಕಿದೆ ಎಂತಲೂ, ಅದನ್ನು ರಾಣಿಯವರಿಗೆ ತಲುಪಿಸಿದೆ ಎಂತಲೂ ಆರ್ಮುಗಂ ತಪ್ಪಿತಸ್ಥನಲ್ಲವೆಂತಲೂ, ಅವನ ಬಿಡುಗಡೆ ಮಾಡಬೇಕೆಂತಲೂ ಹೇಳಿದ. ಪ್ರಕಾಶನ ಮಾತನ್ನು ಯಾರೂ ತೆಗೆಯುವಂತಿಲ್ಲ. ಇನ್ಸ್‌ಪೆಕ್ಟರು ಕೂಡ "ಆಗಬಹುದು ಮುಂದಿನ ವಿಷಯಗಳನ್ನು ಸಮಕ್ಷಮ ಭೆಟ್ಟಿ ಮಾಡಿ ತಿಳಿದುಕೊಳ್ಳುತ್ತೇನೆ. ನಿಮ್ಮ ಮಾತಿನಂತೆ ಆರ್ಮುಗಂನನ್ನು ಬಿಡುಗಡೆ ಮಾಡಿರುತ್ತೇನೆ" ಎಂದು ತಿಳಿಸಿದನು.

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್ ಧಡಿ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಖಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಕರ್ಣಾಟಕ ಜನಜೀವನ

(ಸಂಶೋಧನಾತ್ಮಕ ಗ್ರಂಥ)

ಬರೆದವರು : ಬೆಟಗೇರಿ ಕೃಷ್ಣಶರ್ಮ

ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ
ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.

ಮೊನ್ನೆ ಮೊನ್ನೆಯೆ ಅಚ್ಚಾಗಿ
ಹೊರಕ್ಕೆ ಬಂದಿದೆ.

ಪ್ರೊ. ಜಾಗಿರದಾರರು ವಿಚಾರಪ್ರಚೋದಕ
ಮುನ್ನುಡಿಯನ್ನು ಬರೆದಿದ್ದಾರೆ.

ಸುಂದರ ಪ್ರತಿಗೆ ೧-೮-೦ ಕ್ಯಾಲಿಕೊ ಪ್ರತಿಗೆ ೨-೦-೦

ಬೇಕಾದವರು 'ಜಯಂತಿ'
ಕಾರ್ಯಾಲಯಕ್ಕೆ ಬರೆಯಿರಿ!

ಮನೋಹರ ಗ್ರಂಥಭಾಂಡಾರದಲ್ಲಿಯೂ
ಸಿಕ್ಕುವುದು.

ಬೆಳಗಾಂವಿಯಲ್ಲಿ ತಾ. ೨೬–೧೨-೧೯೪೯ ರಲ್ಲಿ ಸೇರಿದ

ನಾಟ್ಯಗೋಷ್ಠಿಯ ಅಧ್ಯಕ್ಷರಾದ

ಪ್ರೊ. ಆರ್. ವ್ಹಿ. ಜಾಗಿರದಾರ ಎಮ್.ಎ. (ಲಂಡನ್)

ಅವರ ಭಾಷಣದ

'ಸ್ಮೃತಿವಾದ'ವಿದು

★

ಪ್ರೊ. ಆರ್. ವ್ಹಿ. ಜಾಗಿರದಾರರು

ಸ್ವಾಗತಾಧ್ಯಕ್ಷರೆ ಮತ್ತು ಕಲಾಪ್ರೇಮಿಗಳೆ,

ಇಂದು ನಾನು ಈ ಸಮ್ಮೇಳನದ ಅಧ್ಯಕ್ಷನಾದುದಕ್ಕೆ ಆನಂದವಾಗಿಲ್ಲ ಎಂದು ಸತ್ಯವಾಗಿ, ಸ್ಪಷ್ಟವಾಗಿ ಹೇಳುವ ವ್ಯಕ್ತಿ ಎಂದರೆ ನಾನೊಬ್ಬನೆ ಎನಬೇಕಾಗಿದೆ. ನಾಟಕಗಳನ್ನು ಬರೆದವನು ನಾಟ್ಯ ಸಮ್ಮೇಳನದ ಅಧ್ಯಕ್ಷನೆನಿಸುವುದರಲ್ಲಿ ಚಮತ್ಕೃತಿ ಅಥವಾ ವೈಚಿತ್ರ್ಯವೆ ಇಲ್ಲ. ಒಂದು ವೇಳೆ ಮಹಿಳಾಗೋಷ್ಠಿಗೆ ನಾಟಕಕಾರನು, ನಾಟ್ಯಗೋಷ್ಠಿಗೆ ಮಹಿಳೆಯು ಅಧ್ಯಕ್ಷರಾಗಿ ಇದ್ದರೆ ಅದೊಂದು ಚಮತ್ಕೃತಿಯಾಗುತ್ತಿತ್ತು, ಒಂದುತರದ ಉಪಯುಕ್ತತೆಯೂ ಅದರಲ್ಲಿದ್ದಿತು. ಸಮಾಜದಲ್ಲಿ ಹೆಂಗಸರಿಗಿದ್ದ ಹೀನಾವಸ್ಥೆಯನ್ನು ಅಧ್ಯಕ್ಷನಾದ ನಾಟಕಕಾರನು ಹೆಚ್ಚು ಪರಿಣಾಮಕಾರಕವಾಗಿ ತೋರಿಸಬಹುದು; ನಮ್ಮ ರಂಗಭೂಮಿಯಲ್ಲಿ ಹೆಂಗಸರೇ ಇಲ್ಲವಲ್ಲ ಎನುವಾಗ ನಾಟ್ಯಗೋಷ್ಠಿಯ ಶ್ರೀಮತಿ ಅಧ್ಯಕ್ಷಳು ಹೆಚ್ಚು ಪರಿಣಾಮವನ್ನುಂಟು ಮಾಡಬಹುದಾಗಿತ್ತು. ನನಗೂ ಈ ಸಮ್ಮೇಳನಕ್ಕೂ ಕಲೆಗಿಂತ ಸ್ವಾರ್ಥದ ಸಂಬಂಧವೆ ಹೆಚ್ಚಾಗಿ ಕಂಡುಬರುವುದು. ಈ ಕಾರಣಕ್ಕಾಗಿ ನನಗೆ ಅಷ್ಟೊಂದು ಆನಂದವಿಲ್ಲ ಎಂದು ನಾನು ಹೇಳುವುದು.

ಹೀಗೆ ಒಂದಿಲ್ಲ ಒಂದು ಕಾರಣವನ್ನು ತೋರಿಸಿ 'ಇಂದು ಅಧ್ಯಕ್ಷನಾದುದಕ್ಕೆ ನನಗೆ ಆನಂದವಿಲ್ಲ' ಎಂದು ಹೇಳುವ ನಾನು, ಕೊನೆಗೂ ಅಧ್ಯಕ್ಷನಾಗಿಯೆ ತಮ್ಮ ಮುಂದೆ ನಿಂತಿರುವೆನಲ್ಲ–ಎಂದು ಬಹುಜನರಿಗೆ ಆಶ್ಚರ್ಯವೆನಿಸಬಹುದು. ಸುಣ್ಣಬಡಿದುಕೊಂಡು ಸೋಗುಹಾಕುವ ನಟರಿಗೂ ನಾಟಕಕಾರರಿಗೂ ಈ ಸ್ವಭಾವವಿರೋಧವು ಸಹಜವಾಗಿರಬೇಕು ಎಂದು ಕೆಲವರಾದರೂ ತಿಳಿದಿರಬಹುದು. ಅದಕಾಗಿ ನಾನು ಅಧ್ಯಕ್ಷನಾದುದು ಯಾಕೆ ಎಂಬುವದರ ಕತೆಯನ್ನೆ ತಮ್ಮೆದುರು ಬಿಚ್ಚಿಡುವೆ. ಎರಡು ಗಂಟೆಗಳಲ್ಲಿ ಮುಗಿಯಲೆಬೇಕಾದ ಸಮ್ಮೇಳನದಲ್ಲಿ ಇದಕ್ಕೂ ಹೆಚ್ಚಿಗೆ ಹೇಳುವುದಾದರೂ ಏನು?

ಸಮ್ಮೇಳನದ ಸ್ವರೂಪವೇನು?

ಈ ದಿನದ ನಾಟ್ಯಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಬೇಕೆಂದು ಸ್ವಾಗತಸಮಿತಿಯವರಿಂದ ಆಹ್ವಾನ ಬಂದೊಡನೆ ನನಗೆ ತಟ್ಟನೆ ಒಂದೇ ಒಂದು ವಿಚಾರ ತಲೆದೋರಿತು. ಈ ನಾಟ್ಯ-ಸಮ್ಮೇಳನವು ಯಾವ ಸ್ವರೂಪದ್ದು? ಈ ಮುಂಚೆ ನಾನು ಒಂದೆರಡು ನಾಟ್ಯಸಮ್ಮೇಳನಗಳನ್ನು ನೋಡಿದ್ದೇನೆ. ಅದರಲ್ಲಿ ಭಾಗವಹಿಸಿದ ಎಲ್ಲರೂ–ನನ್ನನ್ನೂ ಸೇರಿಸಿ–ಒಂದೆರಡು ಗಂಟೆ ಸಮ್ಮೇಳನಕ್ಕಾಗಿ ಬಣ್ಣಬಡಿದುಕೊಂಡು ರಂಗಭೂಮಿಯಲ್ಲಿಯಂತೆ ಅಲೆದಾಡಿ, ನಲಿದಾಡಿ, ಸಮ್ಮೇಳನ ಮುಗಿದಾಕ್ಷಣ ಬಣ್ಣ ಒರಸಿಕೊಂಡು 'ಗತಂ ನ ಶೋಚಯೇತ್' ಎಂಬ ಜ್ಞಾನವುಳ್ಳವರಂತೆ ಎಲ್ಲವನ್ನೂ ಮರೆತು ಮನೆಗೆ ಹೋದುದನ್ನೂ ನೋಡಿದ್ದೇನೆ. ಸಾಹಿತ್ಯಸಮ್ಮೇಳನ ಸೇರುವಲ್ಲಿ ಮತ್ತು ಸೇರುವಾಗ ಈ ನಾಟ್ಯ-ಸಮ್ಮೇಳನದ ವಿಚಾರ ತೋಚುವುದು ವಾಡಿಕೆಯಾಗಿದೆ. ಆದರೂ ಪ್ರತಿಸಲ ಸಾಹಿತ್ಯಸಮ್ಮೇಳನದೊಡನೆ ನಾ. ಸ. ವೂ ಸೇರಬೇಕೆಂಬ ನಿಯಮವಿದ್ದಂತಿಲ್ಲ, ಸೇರಿಕೆಂಬ ಭರವಸೆಯೂ ಇಲ್ಲ. ರಾಜ-ಪಾತ್ರದೊಡನೆ ಬರುವ ವಿದೂಷಕನಂತಾಗಿದೆ ನಾಟ್ಯಸಮ್ಮೇಳನ. ಯಾವಾಗ ರಾಜನಿಗೆ ಮನೋರಂಜನೆ ಬೇಕೆನಿಸುವುದೊ, ಅಥವಾ ಯಾವಾಗ ನಾಟ್ಯಾಂಗನೆಯ ಸಂದಿಗಳಿಗೆ ನಿದ್ದೆ ಬೇಜಾರುಗಳ ಭಯ ಬರುವುದೋ–ಆಗ ಬರುವುದು ವಿದೂಷಕನ ಪಾತ್ರ. ಹಿರಿಯನಾದ ಸಮ್ಮೇಳನ ದೊರೆಗೆ ಯಾವಾಗ ಬಿಡುವು ಬೇಕೆನಿಸುವುದೊ, ಇಲ್ಲವೆ

ಸ್ವಗತಸಮಿತಿಯಲ್ಲಿ ಯಾವಾಗ ನಾಲಕ್ಕರು ವಿಲಾಸಿಯುವಕರಿರಬಹುದೋ ಆಗ ಸೇರುವುದು ನಾಟ್ಯಸಮ್ಮೇಳನ. ಮೊದಲನೆಯ ಪ್ರಶ್ನೆ ಎಂದರೆ ಇದು. ಬಿಡಲಾರದ ಕರ್ಮವೆನಿಸುವ ಆಹ್ನಿಕದಂತೆ ಮಂದಿಗಾಗಿ ಇಲ್ಲವೆ ಮನಸ್ಸಿನ ಸಮಾಧಾನಕ್ಕಾಗಿ ಇಂತಹ ಸಮ್ಮೇಳನವನ್ನು ಸೇರಿಸಬೇಕೊ—ಇಲ್ಲವೆ ನಿಜವಾದ ಶ್ರದ್ಧೆ ಇದ್ದಲ್ಲಿ ಮಾತ್ರ ಇದನ್ನು ಸೇರಿಸಬೇಕೊ? ಸಾ. ಸ. ವು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದ ಕೆಳಗಿದ್ದುದು. ನಾಟ್ಯಸಮ್ಮೇಳನಕ್ಕೂ ಆ ಪರಿಷತ್ತಿನ ಕೃಪಾಛತ್ರದ ಆಶ್ರಯವಿದೆಯೆ? ಇದ್ದರೆ ಪರಿಷತ್ತು ಪ್ರತಿವರ್ಷ ಈ ಸಮ್ಮೇಳನವನ್ನು ಕೂಡಿಸಬೇಕಲ್ಲದೆ ಇಡಿಯ ವರ್ಷ ಏನಾದರೊಂದು ನಾಟ್ಯವಿಷಯಕ ಚಟುವಟಿಕೆಯನ್ನು ಕೈಕೊಳ್ಳಬೇಕು. ಪರಿಷತ್ತಿನಲ್ಲಿ ನಾಟ್ಯಕ್ಕಾಗಿ ಇಂತಹ ಆಶ್ರಯ ದೊರೆಯದಿದ್ದಲ್ಲಿ, ಸಾಹಿತ್ಯಗೋಷ್ಠಿಯಂತೆ ನಾಟ್ಯಗೋಷ್ಠಿಯೂ ಪರಿಷತ್ತಿನ ಕಾರ್ಯಕ್ಷೇತ್ರದಲ್ಲಿ ಸಮಾವಿಷ್ಟವಾಗದಿದ್ದಲ್ಲಿ—ಇನ್ನೊಬ್ಬರ ಮನೆಯ ಮದುವೆಯ ಮೆರವಣಿಗೆಯ ಹಿಂದೆ ನಮ್ಮ ಹುಡುಗನ ನೋಡಮುಂಜಿಯ ಸವಾರಿಯನ್ನು ಬಿಟ್ಟಂತೆ-ಅವಸರದ, ಅಸಂಗತವೆನಿಸುವ ಈ ಸಮ್ಮೇಳನ ನೆರೆಯಿಸುವ ಶ್ರಮವೇಕೆ? ಇನ್ನು ಮುಂದಾದರೂ ನಾಟ್ಯಸಮ್ಮೇಳನಗಳ ಸ್ಥಾನ-ಮಾನಗಳನ್ನು ಮುಂಚೆಯೆ ಗೊತ್ತುಪಡಿಸಬೇಕು. ಪರಿಷತ್ತಿನ ಅಂಗವಾಗಿಯೆ ಸಂತತವಾಗಿ ನಡೆಯುವ ಭಾಗ್ಯ ಇದಕ್ಕಿದ್ದರೆ ಒಳಿತು; ಪ್ರತ್ಯೇಕವಾಗಿಯೆ ನಡೆಯುವ ಬೈರಾಗಿ ಇದಾಗಬೇಕಾಗಿದ್ದರೆ ಆ ಬೈರಾಗಿಸಂಸಾರದ ನಿಯತಕಾರ್ಯಕ್ರಮವನ್ನು ಏರ್ಪಡಿಸುವುದೆ ಒಳಿತು. ಸಮ್ಮೇಳನಗಳು ಮಾಡುವವರಿಗೆ ಪರಿಶ್ರಮ, ಕೂಡುವವರಿಗೆ ಕುರ್ಚಿಯ ವಿರಾಮ ಎಂದಿಷ್ಟೆ ಎನಿಸಬಾರದಾಗಿದ್ದರೆ—ಅವುಗಳ ಸ್ವರೂಪವನ್ನು ಶಾಶ್ವತ ಕ್ರಮದಲ್ಲಿ ಮೊದಲು ನಿರ್ಣಯಿಸಬೇಕು.

ಸಮ್ಮೇಲನದ ಅಗತ್ಯವೇನು?

ಏನೇ ಇರಲಿ, ಸದ್ಯಕ್ಕಂತೂ ನನಗೆ ಸನ್ಮಾನದ ಸ್ಥಾನವನ್ನು ಒಪಗಿಸಿಕೊಟ್ಟುದಕ್ಕಾದರೂ ನಾನು ಇಂದಿನ ಸಮ್ಮೇಳನವನ್ನು ಒಪ್ಪಿಕೊಳ್ಳಬೇಕಾಗಿದೆ. ಸಮ್ಮೇಳನದ ಸ್ವರೂಪವನ್ನು ನಿರ್ಣಯಿಸಬೇಕೆಂದು ಮೇಲೆ ಹೇಳಿದ ಮಾತಿನಲ್ಲಿ ಮತ್ತೊಂದು ಮಾತು ಅಡಕವಾಗಿದೆ. ಅದೆಂದರೆ ಇಂತಹ ಸಮ್ಮೇಳನಗಳ ಅಗತ್ಯವೇನು? ಸದ್ಯಕ್ಕೆ ನಡೆದಂತೆ ನಡೆಯುವ ನಾಟ್ಯಸಮ್ಮೇಳನಗಳು ಎಳ್ಳಷ್ಟೂ ಅಗತ್ಯವಲ್ಲ- ಎಂಬುದನ್ನು ನಾನು ಮೇಲೆಯೆ ಸೂಚಿಸಿದ್ದೇನೆ. ಅವ್ಯಾಹತವಾಗಿ ಕಾರ್ಯಮಾಡುವ, ನಿಯತಕಾಲಿಕವಾಗಿ ಸೇರುವ, ಸಾಹಿತ್ಯಪರಿಷತ್ತಿನಂತಹ ಸಂಸ್ಥೆಗೆ ನಿಕಟವಾಗಿ ಸಂಬಂಧಿಸಿರಬೇಕಾಗಿರುವ—ಸಮ್ಮೇಳನಗಳ ಮಾತನ್ನು ನಾನಿಲ್ಲಿ ಹೇಳುವುದು. ಸಾಹಿತ್ಯದ ವಿಷಯವಾಗಿ ಸಮ್ಮೇಳನವಿದೆ, ಸಾಹಿತ್ಯ-ಗೋಷ್ಠಿ ಎಂಬುದೂ ನಡೆಯುತ್ತಲಿದೆ, ಹೀಗಿರುವಾಗ ಇಬ್ಬರು ಹೆಂಡಿರ ಕಾಟ ತಪ್ಪಿಸುವ ಅಸೂಯಾತ್ಮಕ ಹಟದಿಂದ ಮೂರನೆಯ ಹೆಂಡತಿಯನ್ನು ಮಾಡಿಕೊಳ್ಳುವಂತೆ ನಾಟ್ಯಸಮ್ಮೇಳನವನ್ನು ಸೇರಿಸಬೇಕೆ! ಅಥವಾ ಬೇರೆ ಕಾರಣಗಳಿವೆಯೆ? ಈ ವಿಷಯವಾಗಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಪ್ರಸಂಗ ದೊರೆತಾಗೆಲ್ಲ ಸಾಹಿತ್ಯಕ್ಕಿಂತ ನಾಟ್ಯವು ಪ್ರಾಚೀನವಾದುದೂ ತೀರ ಭಿನ್ನವಾದುದೂ ಎಂದು ನಾನು ಸಾಧಿಸುತ್ತಲೆ ಬಂದಿರುವೆ; ತಮ್ಮಲ್ಲಿ ಕೆಲವರಿಗಾದರೂ ನನ್ನ ವಿಚಾರಗಳು ಗೊತ್ತಿರಬಹುದೆಂಬ ಭಾವನೆಯಿಂದ ಚರ್ವಿತಚರ್ವಣಮಾಡಿ ಹೊತ್ತುಗಳೆಯ ಬಯಸುವುದಿಲ್ಲ ನಾನು. ನಾಟ್ಯಕಲೆಯ ಶಿಕ್ಷಣ, ಪ್ರೋತ್ಸಾಹ, ಸಂರಕ್ಷಣೆ— ಇವುಗಳಿಗಾಗಿಯೆ ನಾಟ್ಯಸಮ್ಮೇಳನಗಳನ್ನು ಕೂಡಿಸುವುದು ಅಗತ್ಯ ಎಂದು ಸ್ಥೂಲವಾಗಿ ಹೇಳಬಹುದು. ಇಷ್ಟೇಕೆ— ನಾಟ್ಯವು ಎಳೆಯತನದಿಂದಲೂ ಹುಡುಗರ ಶಿಕ್ಷಣಕ್ರಮಕ್ಕೆ ಸಂಬಂಧಿಸಿದೆ ಎಂಬುದನ್ನೇ ಲಕ್ಷ್ಯದಲ್ಲಿಟ್ಟುಕೊಂಡರೆ, ನಾಟ್ಯಪ್ರೇಮಿಗಳ ಮತ್ತು ನಾಟ್ಯಸಮ್ಮೇಳನಗಳ ಹೊಣೆಗಾರಿಕೆ ಎಷ್ಟಿದೆ ಎಂಬುದು ಸ್ಪಷ್ಟವಾಗುವುದು. ಒಂದೇ ಒಂದು ದೃಷ್ಟಾಂತನ್ನು ಕೊಡುವೆ ನಾನು. ಚಿಕ್ಕಮಕ್ಕಳಿಂದ ಕತೆ-ಕವಿತೆಗಳನ್ನು ಪಾಠ ಹೇಳಿಸಿಕೊಳ್ಳುವ ರೂಢಿ ಇದೆಯಷ್ಟೆ ಶಾಲೆಗಳಲ್ಲಿ? ಆದರೆ ಈ ಪಾಠ ಒಪ್ಪಿಸುವುದು ಕೇವಲ ಸ್ಮರಣಶಕ್ತಿಯನ್ನು ಬೆಳೆಯಿಸುವುದಕ್ಕೆ ಮಾತ್ರ ಅಲ್ಲ ಎಂಬುದನ್ನು ಎಷ್ಟು ಜನ ಶಿಕ್ಷಕರೆ ಅರಿತಿರುವರೊ? ಎಳೆಯತನದಲ್ಲಿ ಈ ಪಾಠ ಒಪ್ಪಿಸುವುದರ ಮಹತ್ತ್ವವು ಸ್ವರಸಂಸ್ಕಾರಕ್ಕೆ ಸಂಬಂಧಿಸಿದೆ; ಧ್ವನಿಯ ಯೋಗ್ಯವಾದ ಏರಿಳಿತಗಳನ್ನು ಅರಿತುಕೊಳ್ಳುವುದರಲ್ಲಿದೆ. ಮಾನವನ ವ್ಯವಹಾರಕ್ಕೆ ಮಾತು ತಳಹದಿ; ಮಾತಿಗೆ ಧ್ವನಿ (ಸ್ವರ) ತಳಹದಿ. ಶಬ್ದಗಳಿಂದಲೂ ಸಾಧಿಸದ, ಶಕ್ಯವಾಗದ ವಿಕಾರ-ವಿಚಾರಗಳನ್ನು ಧ್ವನಿಯಿಂದ ವ್ಯಕ್ತಮಾಡಲು ಶಕ್ಯವಿದೆ, ಸಹಜವಿದೆ. ಆದ್ದರಿಂದ ಸ್ವರದ ಸಂಸ್ಕಾರ ಮತ್ತು ಸಂವರ್ಧನೆಗಳಿಗಾಗಿ ಸ್ಪರ್ಧೆಗಳನ್ನೇರ್ಪಡಿಸುವ — ಪ್ರಚಾರಮಾಡುವ — ಪ್ರಯೋಗಗಳನ್ನು ತೋರಿಸುವ ಗ್ರಾಮೋಫೋನ್ ರೆಕಾರ್ಡುಗಳನ್ನು ತಯ್ಯಾರಿಸುವ ಕಾರ್ಯವನ್ನು ನಾಟ್ಯಪ್ರೇಮಿಗಳು ಕೈಕೊಳ್ಳಬಹುದಲ್ಲವೆ? ಇಂದು ಕನ್ನಡನಾಟಕಗಳಲ್ಲಿ ಪಾತ್ರವಹಿಸುವ ವಿಲಾಸಿನಟರನ್ನಾಗಲಿ ವ್ಯವಸಾಯ ನಟರನ್ನಾಗಲಿ ನೋಡಿದರೆ, 'ಇಂತಹ ಕಾರ್ಯದ ಅಗತ್ಯವು ಕಂಡುಬರುವುದು. ಕೋಪಕ್ಕಾಗಿ ಕೂಗಬೇಕು, ಹಾಸ್ಯಕ್ಕಾಗಿ ಗಹಗಹಿಸಬೇಕು, ಅಳುವುದಕ್ಕೆ ಮೂಗು ಮುಸುಗುಡಬೇಕು ಎಂಬ ಒಂದು ತತ್ತ್ವವನ್ನು ಹಿಡಿದು ನಮ್ಮಲ್ಲಿ ರೌದ್ರನಟರು, ಹಾಸ್ಯ ನಟರು, ನಸ್ಯ ನಟರು— ಏಂಗಡವಾಗಿ ರಾಜ್ಯ ನಡಿಸಿದ್ದಾರೆ. ಕೇವಲ ಸ್ವರಸಂಸ್ಕಾರದ ದೃಷ್ಟಿಯಿಂದಲೆ ಅಲ್ಲ, ಬೌದ್ಧಿಕ ಸಂಸ್ಕಾರದ ದೃಷ್ಟಿಯಿಂದ ಕೂಡ ಈ ಕಂಠಪಾಠಗಳು ಮಹತ್ತ್ವದ್ದೆನಿಸುವುವು. ಓದಿದ್ದನ್ನು ತಿಳಿದುಕೊಳ್ಳದ ಹೊರತು ಇನ್ನೊಬ್ಬರಿಗೆ ತಿಳಿಯುವಂತೆ ಅದನ್ನು ಹೇಳಲು ಬರುವುದಿಲ್ಲ. ಅದಕಾಗಿ ಪಾಠ ಮಾಡಿದ ಪ್ರತಿಯೊಂದು ಮಾತನ್ನು ಕತೆಯನ್ನು ಕವಿತೆಯನ್ನು, ಪಾಠ ಒಪ್ಪಿಸುವ ಮುಂಚೆ ತಿಳಿದುಕೊಳ್ಳಲೇಬೇಕಾಗುವುದು. ವ್ಯವಹಾರದಲ್ಲಿಯೂ ಇದರ ಮಹತ್ತ್ವವಿದೆ. ಒಬ್ಬನ ಮಾತನ್ನು ತಿಳಿದುಕೊಂಡು ಇನ್ನೊಬ್ಬರಿಗೆ ತಿಳುಹಿಸಬೇಕೆಂದಾಗ ಅಥವಾ ತನ್ನ ವಿಚಾರವನ್ನು ವ್ಯಕ್ತಮಾಡುವಾಗ ಸ್ಪಷ್ಟವಾಗಿ, ಸರಿಯಾಗಿ, ಯೋಗ್ಯಶಬ್ದಗಳಿಂದ ಯುಕ್ತವಾಗಿ ಹೇಳುವುದಗತ್ಯವಿದೆ. ಬಾಲ್ಯದಲ್ಲಿ ಕೊಡುವ ಶಿಕ್ಷಣಕ್ರಮದಲ್ಲಿ ಈ ಸಂಗತಿ ಅಗತ್ಯವಿದೆ, ಮಹತ್ತ್ವದ್ದಿದೆ. ಈ ಅಗತ್ಯವನ್ನೂ ಮಹತ್ತ್ವವನ್ನೂ ತೋರಿಸಿ,

ತಿಳುಹಿಸಿ ಕೊಡುವುದು ನಾಟ್ಯಪ್ರೇಮಿಗಳ ಕೆಲಸ, ನಾಟ್ಯಸಮ್ಮೇಳನಗಳ ಕಾರ್ಯಕ್ಷೇತ್ರ.

ವ್ಯವಹಾರದಲ್ಲಿ ನಾಟ್ಯದ ಸ್ಥಿತಿ:

ನಾಟಕಗಳನ್ನೂ ಪ್ರಯೋಗಗಳನ್ನೂ ಕಲೆಯ ದೃಷ್ಟಿಯಿಂದ ಆಧುನಿಕವಾಗಿ ಸುಧಾರಿಸಬೇಕೆಂಬ ವಿಚಾರವು ಸರ್ವಸಮ್ಮತ ವಿದ್ದಂತೆಯೆ ಇದೆ. ಈ ಕಾರ್ಯದಲ್ಲಿ ನಾಟ್ಯಸಮ್ಮೇಳನಗಳು ನಾಟಕಗಳನ್ನು ಬರೆಯಿಸಿ ಇಲ್ಲವೆ ಪ್ರಯೋಗಗಳನ್ನು ಮಾಡಿಸಿಯೆ ಸಹಾಯ ಮಾಡಬೇಕಾಗಿಲ್ಲ. ಇಂತಹ ಅಖಿಲಕರ್ನಾಟಕ, ಪ್ರಾತಿನಿಧಿಕ ಸಂಸ್ಥೆಯು ವ್ಯಕ್ತಿಗಳಿಗಾಗಲಿ ಸ್ಥಾನಿಕಸಂಸ್ಥೆಗಳಿಗಾಗಲಿ ಶಕ್ಯವಾಗದ ಕಾರ್ಯದಲ್ಲಿ ಮುಂದಾಗಬೇಕು; ಅವರವರು ಮಾಡಬೇಕಾದ, ಮಾಡುತ್ತಿರುವ ಕಾರ್ಯಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕು. ಉದಾಹರಣೆಗಾಗಿ, ನಾಟ್ಯಗೃಹಗಳ ಮಾತು. ಇತ್ತಿತ್ತಲಾಗಿ ಚಲಚ್ಚಿತ್ರಗಳು ಲೋಕಪ್ರಿಯವಾದಂದಿನಿಂದ ನಾಟಕವನ್ನಾಡಲು ಯೋಗ್ಯವಾದ ನಾಟ್ಯಗೃಹಗಳೇ ಇಲ್ಲದಂತಾಗಿವೆ. ಶಿಕ್ಷಣಕ್ಕೆ, ವ್ಯವಹಾರಕ್ಕೆ, ಸಮಾಜದ ಪ್ರಗತಿಗೆ— ಎಲ್ಲಕ್ಕೂ ಮಿಗಿಲಾಗಿ ಸಾರ್ವಜನಿಕ ಮನೋರಂಜನೆಗೆ ಸಾಧಕವಾದ ನಾಟಕಕ್ಕೆ ಯೋಗ್ಯಸ್ಥಾನವನ್ನು— ಒಂದು ನಾಟ್ಯಮಂದಿರವನ್ನು—ಪಟ್ಟಣಗಳಲ್ಲಿ ಕಟ್ಟಿಸಲು ಸ್ಥಾನಿಕ ಸಂಸ್ಥೆಗಳಿಗೂ ಜನತೆಗೂ ಒತ್ತಾಯಪಡಿಸಬಾರದೇಕೆ? ಅದರಂತೆಯೆ ಇಂದು ನಾಟಕವನ್ನಾಡಲು ಕಾಯಿದೆಯ ಅನಾನುಕೂಲತೆಗಳಿವೆ. ಯಾವ ಪ್ರಯೋಗಕ್ಕೂ ಮುಂಚೆ ಮ್ಯಾಜಿಸ್ಟ್ರೇಟನ ಅಪ್ಪಣೆಯನ್ನು ಪಡೆಯಬೇಕಂತೆ! ಸಾರ್ವಜನಿಕ ಸಭೆಗಳಿಗೆ ಅನ್ವಯಿಸದೆ ಇದ್ದ ನಿರ್ಬಂಧವು ಸಾರ್ವಜನಿಕ ಮನೋರಂಜನೆಗೆ ಯಾಕಿರಬೇಕು? ನಾಟಕದಂತಹ ಕಲಾಕೃತಿಗಳನ್ನು ಪರೀಕ್ಷಿಸಲು ಯೋಗ್ಯ ಅಧಿಕಾರಿಗಳಿರುವರೆ? ಇನ್ನೊಂದು ಉದಾಹರಣೆಯನ್ನು ನೋಡಬಹುದು. ಸದ್ಯಕ್ಕೆ ಎಲ್ಲ ಕಡೆಯೂ ಮನೋರಂಜನೆಗೆ ಕರ (Entertainment Tax) ಇದೆ. ಈಗ ನಮ್ಮಲ್ಲಿ ಪ್ರಚಲಿತವಿದ್ದ ಚಲಚ್ಚಿತ್ರಗಳನ್ನಾಗಲಿ, ನಾಟಕಗಳನ್ನಾಗಲಿ ಸರಕಾರದವರು ತಿಳಿದು ನೋಡಿದ್ದರಂತೂ ಈ ಕರವನ್ನು ಕೂಡಿಸುವ ಪ್ರಸಂಗವೆ ಬರುತ್ತಿದ್ದಿಲ್ಲ. The supposed entertainment is itself a tax—ನಾಟ್ಯಗೃಹದಲ್ಲಿ ಕುಳಿತು ನೋಡುವುದೆ ಜನತೆಗೆ ಜಿಝಿಯಾ ಕರದಂತೆನಿಸುವ ಪರಿಸ್ಥಿತಿ ಇದೆ. ಆ ಮಾತು ಹೋಗಲಿ, ರಂಜನೆಗೆ ಈ ಕರವೇಕೆ? ಕಲಾಪ್ರೇಮಕ್ಕೆ ಇದೊಂದು ದಂಡವೆ? ಆ ಕರಕ್ಕೆ ಏನಾದರೂ ಪ್ರತಿಫಲವಿದೆಯೆ? ಹೊಸ ಹೊಸ ಪ್ರಯೋಗ (Experiment) ಗಳನ್ನು ಮಾಡಬೇಕೆನುವ ನಾಟ್ಯವಿಲಾಸಿ (Amateur) ಗಳಿಗಂತೂ ಈ ಕರವು ಭಸ್ಮಾಸುರನ ಕರದಂತಾಗುವುದು. ಪರಿಸ್ಥಿತಿಯನ್ನೆಲ್ಲ ಅರಿತುಕೊಂಡು, ಅಧಿಕೃತ ರೀತಿಯಲ್ಲಿ ಸರಕಾರಕ್ಕೂ ಸಮಾಜಕ್ಕೂ ತಿಳುಹಿಸಿ ಸುಧಾರಿಸಲು ಯತ್ನಿಸುವುದು ನಾಟ್ಯಸಮ್ಮೇಳನಗಳಂತಹ ಪ್ರಾತಿನಿಧಿಕ ಸಂಸ್ಥೆಗಳ ಕಾರ್ಯ.

ಕಲೆಯ ವಿಶ್ವಬಾಂಧವ್ಯ:

ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬಹುದು. ಕಲೆಗೆ ಜಾತಿಭೇದವಿಲ್ಲ, ಪ್ರಾಂತ ಮೇರೆ ಇಲ್ಲ. ಸಂಗೀತ-ನೃತ್ಯಗಳಿಗಂತೂ ಭಾಷೆಯ ತೊಡಕೂ ಇಲ್ಲ. ಆದುದರಿಂದ ಅಖಿಲ ಕರ್ನಾಟಕ ನಾಟ್ಯಸಂಸ್ಥೆಯು ಪರಪ್ರಾಂತೀಯ ಕಲಾಕೋವಿದರೊಡನೆ ಸಹಕಾರವನ್ನಿಟ್ಟುಕೊಳ್ಳಲು ಯಾವ ಅಡ್ಡಿಯೂ ಇಲ್ಲ. ಪರಸ್ಪರ ಪರಿಚಯವಲ್ಲದೆ ಪರಸ್ಪರ ಪ್ರಚಾರವೂ ಇದರಿಂದ ಸಾಧಿಸುವುದು. ನಮ್ಮ ಸಂಸ್ಥೆಯಲ್ಲಿ ಪರಪ್ರಾಂತೀಯ ಕೋವಿದರನ್ನು ಸೇರಿಸಿಕೊಂಡರೆ ಪ್ರಾತಿನಿಧಿಕ ಸ್ವರೂಪ ಪ್ರಬಲವಾಗುವುದು, ಕಾರ್ಯವೂ ಕಳೆಗಟ್ಟುವುದು. ಸದ್ಯಕ್ಕೆ ಪ್ಲೇಗಿನಿಂದಾಗಲಿ ಬರಗಾಲದ ಹೊಡೆತದಿಂದಾಗಲಿ ಚದರಿದ ಜನರಂತೆ ನಮ್ಮ ಕಲಾಕೋವಿದರು ಅನ್ಯಭಾಷೆಗಳ ಮತ್ತು ಅನ್ಯಪ್ರಾಂತಗಳ ಆಶ್ರಯವನ್ನು ಪಡೆಯುತ್ತಲಿದ್ದಾರೆ! ಉಳಿದ ಕೆಲವರಿಗೆ ಪ್ಲೇಗುಬಂದಂತಾಗಿ ನಾವಾನ್ಯ ಜನರಿಗೆ ಅಗಮ್ಯ, ಅಗೋಚರ, ಅಸ್ಪೃಶ್ಯರಾಗಿ ಉಳಿಯುವ ಸಂಭವವೆ ಹೆಚ್ಚಿದೆ. ಕಲಾಧಿದೇವತೆಯಾದ ಶಿವನು ಜನರಿಗೆ ಕಲೆಯನ್ನು ಕೊಟ್ಟು ತಾನೇ ಸ್ಮಶಾನದಲ್ಲಿದ್ದಂತೆ, ಪರರಿಗೆ ನಮ್ಮವರನ್ನು ಕೊಟ್ಟು ನಾವೂ ಸ್ಮಶಾನದಲ್ಲಿದ್ದೇವೆ. ದೇವನೊಡನೆ ನಮ್ಮ ಹೋಲಿಕೆ—ಎಂದು ಸಮಾಧಾನ ತಂದುಕೊಳ್ಳಬೇಕೆ? ಅಥವಾ ಅವನು ಅರ್ಧನಾರೀನಟೇಶ್ವರ, ನಾವು ಅರ್ಧಮರ್ಧ ಘಟಾಸುರ—ಎಂದು ಹಳಿದುಕೊಳ್ಳಬೇಕೆ?

ಕಲೆಯಲ್ಲಿ ಅಸ್ಪೃಶ್ಯತಾ ನಿವಾರಣೆ

ಗೆಳೆಯರೆ, ಅಧ್ಯಕ್ಷನಾದೆನೆಂಬ ಹೆಮ್ಮೆಯಿಂದ ಉದ್ದುದ್ದ ಉಪದೇಶದ ಮಾತುಗಳನ್ನು ನಿಮ್ಮ ಮೇಲೊಗೆದು ನನ್ನ ಮಾತು ಮುಗಿಯಿತೆಂದು ಮನೆಯಲ್ಲಿ ಮಲಗುವ ಕಿಡಿಗೇಡಿ ವಿಚಾರ ನನಗಿಲ್ಲ. ನನ್ನನ್ನು ಅಧ್ಯಕ್ಷನನ್ನಾಗಿ ಆರಿಸುವಾಗ ನಿಮಗೆ ನನ್ನ ವಿಷಯವಾಗಿ ಯಾವ ಕಲ್ಪನೆ ಇದ್ದಿತೊ ನಾನರಿಯೆ. ಹೊಟ್ಟೆಯ ಕಳವಳಕ್ಕಾಗಿ ಯಾವ ಕೆಲಸವನ್ನೆ ಮಾಡಿದರೂ, ಹೃದಯದ ಕಳವಳಕ್ಕಾಗಿ ನಾಟ್ಯದ ಸಲುವಾಗಿ ಹೋರಾಡುವುದು ನನಗೊಂದು ಜೀವನದ ಧ್ಯೇಯವಾಗಿದೆ. 'ಹೋರಾಡುವುದು' ಎಂದು ನಾನು ಉದ್ದಿಶ್ಯಪೂರ್ವಕವಾಗಿಯೆ ಹೇಳುತ್ತಲಿದ್ದೇನೆ. ನಮ್ಮ ಸಮಾಜದಲ್ಲಿ ಇನ್ನೂ ನಾಟಕಕ್ಕಾಗಲಿ ಕಲೆಗಾಗಲಿ ಯೋಗ್ಯಸ್ಥಾನವಿಲ್ಲ, ಸಲ್ಲತಕ್ಕ ಸನ್ಮಾನವಿಲ್ಲ. ಭರತಮುನಿಯ ನಾಟಕದಲ್ಲಿ ಪಾತ್ರವಹಿಸಿದ ಅವನ ನೂರು ಜನ ಮಕ್ಕಳು ಶೂದ್ರರಾಗಿ ಹುಟ್ಟಬೇಕೆಂದು ಋಷಿಗಳು ಹೇಳಿದರೆಂದು ಭರತನಾಟ್ಯಶಾಸ್ತ್ರದಲ್ಲಿ ಐತಿಹ್ಯವಿದೆ. 'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನುಧಾವತಿ' ಎಂಬ ಉಕ್ತಿಗನುಸರಿಸಿ ಆ ಋಷಿಗಳ ಮಾತು ಸತ್ಯವಾಗಿ ಇಂದಿಗೂ ವ್ಯವಹಾರದಲ್ಲಿ ಸ್ವೀಕೃತವಿದೆ. ಕುಣಿಯುವ ಕಾರಂತರಾಗಲಿ, ಕೆಣಕುವ ಕೈಲಾಸಂಗಳಾಗಲಿ, ಸೊಗಗುವ ಶ್ರೀರಂಗರಾಗಲಿ ಸಮಾಜದ ದೃಷ್ಟಿಯಿಂದ ಸ್ವಲ್ಪ ಕೆಳಗಿನ ದರ್ಜೆಯವರೆ! ಬರೆಯುವುದಾದರೆ ಕಾವ್ಯ ಬರೆಯಲಿ, ಹೇಳುವುದಾದರೆ ಉಪನ್ಯಾಸದ ಉಸಿರೆಳೆಯಲಿ— ಆದರೆ ಬಣ್ಣಬಡಿದುಕೊಳ್ಳುವ ಅಬ್ರಹ್ಮಣ್ಯ ಬೇಡ! ಪಾಂಥಿಕತನದ ಬಣ್ಣಬಡಿದುಕೊಂಡು ದೊಡ್ಡವನೆನಿಸಿಕೊಳ್ಳಬಹುದು; ಆದರೆ ಬಣ್ಣಬಡಿದುಕೊಂಡು

ಡಾಂಭಿಕತನವನ್ನು ಬಯಲಿಗೆಳೆವವರು ಹುಡುಗಾಟದವರೆ! ಹೀಗಿದೆ ನಮ್ಮ ಹಿರಿಯರ, ಶಿಷ್ಟರ ಕಲಾಪ್ರಪಂಚದಲ್ಲಿ ಮಡಿ-ಮೈಲಿಗೆಯ ಸ್ವರೂಪ !

ಕೊನೆಯ ಮಾತು

ಹೀಗೆ ಸಾಹಿತ್ಯದ ಮತ್ತು ಸಾಮಾಜಿಕ ದೃಷ್ಟಿಯಿಂದ ನಾಟ್ಯ ಸಮ್ಮೇಳನದಂತಹ ಸಂಸ್ಥೆಗಳಿಂದಲೆ ಆಗಬೇಕಾದ ಕೆಲಸಗಳು ಅನೇಕ ಇವೆ. ಅವೆಲ್ಲವುಗಳ ಪಟ್ಟಿಯನ್ನು ಕೊಡುವ ಇಚ್ಛೆ ನನಗಿಲ್ಲ; ಕೊಡುವುದಗತ್ಯವಾಗಿದ್ದರೂ ಅದಕ್ಕೆ ಸಾಕಷ್ಟು ವೇಳೆಯೂ ಇಲ್ಲ. ಯಾಕೆಂದರೆ, ಕಂಬವನ್ನು ಎದುರಿಸಿದ ಹಿರಣ್ಯಕಶ್ಯಪನಂತಿದೆ ಈ ಸಮ್ಮೇಳನದ ಅಧ್ಯಕ್ಷನ ಸ್ಥಿತಿ. ಮಾತು ಮುಗಿದ ಮೇಲೆ ಕಂಬವನ್ನೊದೆಯುವುದು, ತತ್ಕ್ಷಣ ತನ್ನ ಕತೆಯು ಮುಗಿಯುವುದು; ಬೇರೆ ಮಾತು-ಕತೆಗಳಿಗೆ ಅವಸರವೆ ಇಲ್ಲ. ನನ್ನ ಮಾತು ಮುಗಿಯುವಷ್ಟರಲ್ಲಿ ಸಮ್ಮೇಳನ ಮುಗಿಯುವುದು, ಆ ಮೇಲೆ ನಮ್ಮೆಲ್ಲರ ಮಾತೂ ಮುಗಿಯುವುದು. ಈ ಪರಿಸ್ಥಿತಿಯಲ್ಲಿ ನಾನು ಹೆಚ್ಚಿಗೆ ಮಾತನಾಡಲಾರೆ. ಆದರೂ ಅನಿವಾರ್ಯವಾಗಿದೆ. ಇಂದಿನ ನಮ್ಮ ನಾಟಕಗಳು ಕೂಡ ೩-೪ ಗಂಟೆ ಸಾಗುವವು. ಆದರೆ ಈ ನಾಟ್ಯಸಮ್ಮೇಳನಕ್ಕೆ ಎರಡು ಗಂಟೆಯ ತರುವಾಯ 'licence' ಇಲ್ಲ! ಹೋಗಲಿ— ಬೇಜಾರಕ್ಕೀಡ ಬಹುದಾದ ನನ್ನ ಒಣ ಉಪದೇಶದ ಕಾಟ ತಮಗೆ ತಪ್ಪಿತೆನ್ನೋಣ. ನಾನು ಹೇಳಿದ ಎಲ್ಲ ಮಾತುಗಳನ್ನೂ ತಾವು ಅಲಕ್ಷ್ಯಮಾಡಿದರೂ ನನಗೆ ವ್ಯಥೆ ಇಲ್ಲ: ಆದರೆ ಒಂದು ಮಾತನ್ನು ಮಾತ್ರ ತಾವು ಎಂದಿಗೂ ಮರೆಯಬಾರದು, ಇಲ್ಲವಾದರೆ ಇಂದಿನ ಸಮ್ಮೇಳನವು ಸ್ವದು ದುಃಖದಾಯಕ ಪ್ರಸಂಗ ಎಂದೇ ನನಗೆ ನೆನಪು ಉಳಿದೀತು.

ಈ ನಾಟ್ಯಸಮ್ಮೇಳನಗಳ ವಿಷಯವಾಗಿ ನಾನು ಮೊದಲೇ ಹೇಳಿದ ಮಾತು. ನಾಟ್ಯವು ಶೀಲಕ್ಕೂ ಶಿಕ್ಷಣಕ್ಕೂ ಅಗತ್ಯವಿದೆ, ಉಪಯುಕ್ತವಿದೆ; ಇಂದಿನ ನಮ್ಮ ಸ್ವರಾಜ್ಯದಲ್ಲಿ ಕಲೆಯೂ ರಂಗಭೂಮಿಯೂ ಮಾಡಬೇಕಾದ ಕಾರ್ಯಗಳಿವೆ: ಸಂಘಟಿತವಾಗಿ ಮಾಡಿದರೆ ಯಶಸ್ಸು ಬರಬಹುದು, ಇಲ್ಲವಾದರೆ ಅಪಹಾಸ್ಯ ತಪ್ಪಿದ್ದಲ್ಲ. ಈ ಮಾತನ್ನು ಪೂರ್ತಿಯಾಗಿ ಸ್ಮರಣೆಯಲ್ಲಿಟ್ಟುಕೊಂಡು, ನಮ್ಮ ಹೊಣೆಗಾರಿಕೆಯನ್ನು ಪೂರ್ತಿಯಾಗಿ ತಿಳಿದುಕೊಂಡು, ಕಲೆಗಾಗಿ ಅಭಿಮಾನ ಕಟ್ಟಿಕೊಂಡು ಧ್ಯೇಯ ಇಟ್ಟುಕೊಂಡು ನಾಟ್ಯಸಮ್ಮೇಳನದ ತಳಹದಿಯನ್ನು ನಿಲ್ಲಿಸುವಾ. ಇಲ್ಲವಾದರೆ ಇದೇ ಎರಡು ಗಂಟೆ ನಾಟಕವನ್ನಾಡಿಯೊ ನಿದ್ದೆ ಮಾಡಿಯೊ ನಡೆದ [illegible] ಕೆಲಸಕ್ಕೆ ನಡುವೆ ಬಾರದಂತೆ ವರ್ತಿಸಿ ಕಳೆಯುವಾ.

ಕೇಳಿದ್ದಕ್ಕಾಗಿ ತಮ್ಮನ್ನು ವಂದಿಸುವೆ, ಹೇಳಿದ್ದಕ್ಕಾಗಿ ನನ್ನನ್ನು ಕ್ಷಮಿಸಿರಿ!



ಪ್ರಶ್ನೆ

ಶ್ರೀ. ಗುಂಡಗುಂಡಿ ಶ್ರೀನಿವಾಸ

ರಾಜದಂಡ ಕೈಯಲ್ಲಿ ಹಿಡಿದು
ಮುಕುಟ ತಲೆಯಮೇಲೆ ತಳೆದು
ಸಕಲ ಜನಕೆ ಮಾನ್ಯನಾಗಿ ಮೆರೆವುದೇತಕೆ ?
ಇನಿತು ಹಿರಿಯ ಆಸೆಗೈವುದಾನಂದಕೆ! ೧

ಯೋಗದಂಡ ಕೈಯಲ್ಲಿ ಹಿಡಿದು
ಜಟೆಯ ತಲೆಯ ಮೇಲೆ ತಳೆದು
ಸಂಸಾರ ತೊರೆದು ವನದಿ ಅಲೆವುದೇತಕೆ ?
ಚಿತ್ತಶುದ್ಧ ಮಾಡುತಿರುವುದಾನಂದಕೆ! ೨

ನಲ್ಲೆಗಾಗಿ ಒಲಿದು ತನುವ
ಬುದ್ಧಿಯುಕ್ತ ತನ್ನ ಮನವ
ಸಲಿಸಿ ಮನುಜ ಹಗಲು ಇರುಳು ದುಡಿವುದೇತಕೆ?
ತನ್ನ 'ಒಲವ' ಗೆಲಿಯಬೇಕೆಂಬ ಮೋದಕೆ! ೩

ಹಗಲು ಇರುಳು ಅವನ ನೆನೆದು
ಪ್ರೇಮವಲ್ಲಿ ಪೂರ್ಣ ಬೆಳೆದು
ಅಗಲೆ, ಅವಳು ಕಣ್ಣು ನೀರ ಮಿಡಿವುದೇತಕೆ ?
ತನ್ನ 'ನೀರ' ಬೆರೆಯಬೇಕೆಂಬ ಮೋದಕೆ! ೪

ಜಲಧಿಯುಕ್ಕಿ ಹಾಯುವಾಗಿ
ಮೇಲೆ ಮೇಲೆ ಏರಿ ಹೋಗಿ
ತಂಪುತಾಗಿ ನದಿಯು ಮುಖದಿ ಸುರಿವುದೇತಕೆ ?
ಅವಳದೊಂದು ಮುಕ್ತಪಡೆಯುವಾನಂದಕೆ ! ೫

ಗಿರಿಯ ತಟದಿ ಹುಟ್ಟಿ ಹರಿದು
ಗಿರಿಗೆ ತಾಗಿ ಕೊಳದಿ ಬಿದ್ದು
ತೀವ್ರ ಮಂದಗತಿಗಳಿಂದ ಹರಿವುದೇತಕೆ ?
ಇನಿಯ ಕಡಲ ಕೂಡಿ ಮೆರೆಯುವಾನಂದಕೆ! ೬

ಒಂದಲ್ಲದಿನ್ನೊಂದು
ರೀತಿಯಲ್ಲಿ ಪ್ರತಿಯೊಂದು
ವಸ್ತು ಬಯಸಿ ಬೇಡುತಿಹುದು ಚಿರಶಾಂತಿಯನು !
ಮೋದ ಶಾಂತಿಗಳಲಿ ಕಾಣೆ ಬಹುಭೇದವನು ! ೭

ಸೃಷ್ಟಿಯಲ್ಲಿ ಸೃಷ್ಟವಾದ
ಎಲ್ಲ ವಸ್ತುಗಳಿಗೆ ನಾದ !
ಇದಕೆ ಹಿರಿದು ಯಾವುದೆಂದು ಮನದಿ ಯೋಚಿಸೆ,
ಇಹುದೊ ? ಇರದೊ ? ಎಂಬುದೊಂದು
ಘನ ಸಮಸ್ಯೆ ! ೮

ಕಲಾಸೇವೆ

ಅನುವಾದಕ: 'ಬಾಲಗೋಪ'

ಅವರಿಂದ

(ಜಾನ್ ಗಾಲ್ಸ್‌ವರ್ದಿಯವರ 'Quality' ಎಂಬ ಕಿರುಗತೆಯ ಅನುವಾದ)

ಕಲಾಭಿಜ್ಞನ ಪ್ರಾಮಾಣಿಕತೆಯನ್ನು ಲೋಕವು ಅಪೇಕ್ಷಿಸುತ್ತದೆ; ಆದರೆ ಆತನು ಬದುಕಿ ಬಾಳಬೇಕಾಗಿರುವುದರ ಕಡೆಗೆ ಲಕ್ಷ್ಯವನ್ನೆ ಕೊಡುವುದಿಲ್ಲ. ವರ್ಷ- ವರ್ಷ ಬಾಳಬೇಕೆನ್ನುವ ಕನಕನ ಪಾದರಕ್ಷೆ ಎಲ್ಲರಿಗೂ ಬೇಕು. ಹೇಗೆ ಬೇಕು ಗೊತ್ತೆ? ಪೇಟೆಯಲ್ಲಿ ದೊರೆಯುವ ಹೊರಮಿಂಚಿನ ಜೋಡುಗಳ ಬೆಲೆಯಲ್ಲಿಯೆ ಬೇಕು.

★

ಬಾಲ್ಯದಿಂದಲೂ ನನಗೆ ಆತನ ಪರಿಚಯವಿತ್ತು. ನನ್ನ ತಂದೆಯವರ ಪಾದರಕ್ಷೆಗಳನ್ನು ಆತನೆ ಮಾಡುತ್ತಿದ್ದನು. ತೇರು-ಬೀದಿಯ ಮೂಲೆಯೊಂದರ ಮುರುಕು ಗುಡಿಸಲೊಂದು ಆತನ ನಿವಾಸ; ಈಗ ಆ ಗುಡಿಸಲು ಕಾಣಸಿಗದು.

ಅಂಗಡಿಯೆದುರು ತೂಗ ಹಾಕಿರುವ 'ಸೈನ್ ಬೋರ್ಡಿ'ನಲ್ಲಿ ಆತನ ಹೆಚ್ಚಳವನ್ನು ಬಣ್ಣಿಸಿದ್ದಿಲ್ಲ– ಬರೇ ಆತನ ಹೆಸರು ಮಾತ್ರ. ಕಿಟಕಿಯ ಬಳಿ ನಾಲ್ಕಾರು ಜೊತೆ ಪಾದರಕ್ಷೆಗಳು! ಆತನ ವೃತ್ತಿಯಲ್ಲಿ ಆತನಿಗೆ ತುಂಬಾ ಮಮತೆ; ಅದಕ್ಕಾಗಿ ನಾನು ಆತನನ್ನು ಆದರ್ಶಜೀವಿಯೆಂದು ತಿಳಿದುಕೊಂಡಿದ್ದೆ.

ಒಮ್ಮೆ ನನ್ನ "ಕನಕ! ಇದು ಕಷ್ಟಜೀವನವಲ್ಲವೆ?" ಎಂಬ ಪ್ರಶ್ನೆಗೆ ಆತನಿತ್ತ "ಇದೊಂದು ಕಲೆ!" ಎಂಬ ಗಂಭೀರ ಉತ್ತರವು ಇನ್ನೂ ನನಗೆ ನೆನಪಲ್ಲಿದೆ.

ಕನಕನ ಸೋದರನು ಆತನ ಪ್ರತಿರೂಪವಾಗಿದ್ದನು; ಮಾತಿನ ಸರಳತೆ, ದನಿಯ ಕಂಪನ, ಅರೆಬಾಗಿದ ಬೆನ್ನು– ಇವೆಲ್ಲವುಗಳೂ ಕನಕನು ಆತನ ಸೋದರನೆಂದು ಮೋಸಹೋಗಲು ಗುರುತುಗಳು; ಆದರೆ ಒಮ್ಮೆ ನನ್ನ ತೀವ್ರದೃಷ್ಟಿಗೆ ಅದರಲ್ಲಿಯ ವ್ಯತ್ಯಾಸವು ಕಂಡು ಬಂದಿತು; ಕನಕನ ಸೋದರನಿಗೆ ಎದುರಿನ ಒಂದು ಹಲ್ಲು ಉದುರಿ ಹೋಗಿದ್ದಿತು!

ಆತನೆಡೆಗೆ ಹೋದಾಗ ನನ್ನ ಮನ ಏನೋ ಒಂದು ತೆರನಾಗುತಿತ್ತು. ಅಲ್ಲಿದ್ದ ಕುರ್ಚಿಯೊಂದರಲ್ಲಿ ಕುಳಿತು, ಅರೆಗಳಿಗೆಯೊಳಗೆ ಕನಕನ ಸ್ವರವನ್ನು ಕೇಳುವ ವಾಡಿಕೆ ನನ್ನದು.. ನನಗೆ ತಕ್ಕ ಪಾದರಕ್ಷೆಗಳನ್ನು ಮಾಡಬಲ್ಲವನೆಂದರೆ ಕನಕನೊಬ್ಬನೇ ಎಂದು ನನ್ನ ದೃಢನಿಶ್ಚಯ! ನನ್ನೊಡನೆ ಮಾತನಾಡಿ, ನಾನು ಹೊರಟೊಡನೆ, ಆತ ತನ್ನ ಲೋಕಕ್ಕೆ ಪುನಃ ತಿರುಗುತ್ತಿದ್ದ.

ಒಂದು ಬಾರಿ ನಾನು ಕನಕನೊಡನೆ ಹೇಳಿದೆ: "ಕನಕ! ಕಳೆದ ಬಾರಿಯ ಪಾದರಕ್ಷೆಗಳು ಚೆನ್ನಾಗಿದ್ದಿಲ್ಲ!" ನನ್ನನ್ನೇ ಕೆಲಕಾಲ ಅವಿರತವಾಗಿ ದಿಟ್ಟಿಸಿ ಆತನೆಂದ: "ಚೆನ್ನಾಗಿರಬೇಕಾಗಿತ್ತು!" "ಆದರೆ.. ಇರಲಿಲ್ಲವಷ್ಟೆ!" ನಾನೆಂದೆ. "ಬೇಗನೆ ಅವುಗಳನ್ನು ಕಳುಹಿಸಿಕೊಡಿರಿ; ಪರೀಕ್ಷೆ ಮಾಡುವೆನಂತೆ" ಎಂತನಾತ. ನನಗೆ ಆತನ ಮೇಲೆ ಅತೀವ ಕರುಣೆಯುಂಟಾಯಿತು. ಇನ್ನೊಂದು ಬಾರಿ ಆತನೆಡೆಗೆ ಹೋದಾಗ ನಾಲ್ಕಾರು ತಿಂಗಳುಗಳು ಕಳೆದಿದ್ದುವು.

ಒಂದು ಬಾರಿ ನಾನಾತನಿದ್ದಲ್ಲಿಗೆ ಹೋದಾಗ, ಬೇರೆಯಲ್ಲಿಯೊ ವಿಕ್ರಯಿಸಿದ ಪಾದರಕ್ಷೆಗಳನ್ನು ನಾನು ಧರಿಸಿದ್ದೆ. ಕನಕ ನನ್ನನ್ನು ಕುರಿತು ನುಡಿದ: "ಅವು ನನ್ನಲ್ಲಿಯ ಪಾದರಕ್ಷೆಗಳಂತಿಲ್ಲ!" ಆತನ ಮಾತಿನಲ್ಲಿ ಕೋಪವಿದ್ದಿಲ್ಲ; ದುಃಖದ ತಿಲಾಂಶವೂ ಗೋಚರವಾಗುತ್ತಿದ್ದಿಲ್ಲ; ತಾತ್ಸಾರದ ನುಡಿಯದಾಗಿದ್ದಿಲ್ಲ. ಆದರೆ, ಆ ಮಾತಿನ ಸರಳತೆಯು ನನ್ನ ಹೃದಯವನ್ನು ಚುಚ್ಚಿದಂತಾಯಿತು. ನಾನು ಧರಿಸಿದ್ದ ಪಾದರಕ್ಷೆಗಳ ನ್ಯೂನತೆಗಳನ್ನು ಆತ ನನಗೆ ವಿವರಿಸತೊಡಗಿ ತನ್ನ ಜೀವನದ ಕಷ್ಟಗಳನ್ನು ನನಗೆ ತಿಳಿಸಿದಾಗ, ನನ್ನ ಮನಸ್ಸಿನಲ್ಲಿ ತೀವ್ರ ಕ್ಷೋಭೆಯುಂಟಾಯಿತು..

"ಅವರ (ಪ್ರಸಿದ್ಧ ವಿಕ್ರಯಕರ್ತರ) ಜೀವನ ನಡೆಯುವುದು ಅವರ ಕಾರ್ಯಕೌಶಲದಿಂದಲ್ಲ; ನಯನುಡಿಗಳಿಂದ! ನಮ್ಮ ವೃತ್ತಿಯನ್ನು ಪ್ರೀತಿಸುವ ನಮಗೆ — ಬಡವರಿಗೆ— ಕಾಲಕ್ರಮೇಣ ಕೆಲಸವೂ ದೊರೆಯದು!" ಆತನ ದೀನವದನದಲ್ಲಿ ಜೀವನ-ಸಮಸ್ಯೆಯೇ ಮೂರ್ತಿಮತ್ತಾಗಿ ಆವಿರ್ಭವಿಸಿದಂತೆ ನನಗೆ ಭಾಸವಾಯಿತು. ನಾನು ಆ ಪಾದರಕ್ಷೆಗಳನ್ನು ತೆಗೆದುಕೊಳ್ಳಲು ಒದಗಿದ ಕಾರಣಗಳನ್ನು ಆತನಿಗೆ ತಿಳಿಸಿದೆ; ಅಂದು ನಾನು ಅವಸರದಲ್ಲಿರದಿದ್ದರೆ ಆತನಲ್ಲಿಗೆಯೆ ಬರುತ್ತಿದ್ದೆ—ಎಂದು ಭರವಸೆಯಿತ್ತೆ; ಆದರೂ ಆತನಾಡಿದ ಮಾತುಗಳು ನನ್ನ ಹೃದಯದಲ್ಲಿ ದೃಢವಾಗಿ ಬೇರೂರಿದ್ದುವು. ಕರುಣಾವಿಶೇಷದಿಂದ ಅನೇಕ ಜೊತೆ ಪಾದ-ರಕ್ಷೆಗಳನ್ನು ಮಾಡಲು ಆತನಿಗೆ ಹೇಳಿದೆ; ಹಾಗಾಗಿ ಎರಡು ವರ್ಷಗಳ ವರೆಗೆ ಆ ದಾರಿಗೆ ನಾನು ಕಾಲಿಡಲಿಲ್ಲ.

ಇನ್ನೊಂದು ಬಾರಿ ನಾನಲ್ಲಿಗೆ ಹೋದಾಗ ಆತ ಮೊದಲಿನ ಗುಡಿಸಲಿನ ಅರ್ಧಭಾಗದಲ್ಲಿ ಮಾತ್ರ ವಾಸಿಸುತ್ತಿದ್ದ: ನಾನು ಹೋದೊಡನೆ "ಬಾಲಗೋಪರಲ್ಲವೆ?" ಎಂದು ತಡವರಿಸುವ ದನಿಯಲ್ಲಿ ಪ್ರಶ್ನಿಸಿದ.

'ಅಹುದು, ಕನಕ! ಆದರೆ ನಾನು ನಿನ್ನಲ್ಲಿಗೆ ಇಷ್ಟರ ವರೆಗೆ ಬಾರದಿರಲು ಕಾರಣ ನೀನೇ! ನಿನ್ನೀ ಪಾದರಕ್ಷೆಗಳು ಅತಿ ಉತ್ತಮ ತರಗತಿಯವು!" ಎಂದು ನಾನೆನ್ನಲು, ಆತನ ಕಣ್ಣಿಂದ ನೀರ ತೊಟ್ಟೊಂದು ಕೆಳಗೆ ಬಿದ್ದಂತೆ ನನಗೆ ಭಾಸವಾಯಿತು.

* * *

ಸ್ವಲ್ಪಸಮಯದ ಬಳಿಕ ನಾನಲ್ಲಿಗೆ ಹೋದಾಗ ಆತನ ದೇಹವು ಅತಿ ಕೃಶವಾಗಿದ್ದಿತು. ವೃದ್ಧಾಪ್ಯವು ಆತನನ್ನು ಸಂಪೂರ್ಣವಾಗಿ ಆವರಿಸಿದ್ದಿತು. "ಕನಕ, ಹೇಗಿರುವೆ?" ಎಂಬ ನನ್ನ ಪ್ರಶ್ನೆಗೆ, "ನಾನು ಚೆನ್ನಾಗಿರುವೆ; ಆದರೆ ನನ್ನ ಸೋದರನು ತೀರಿಕೊಂಡನು!" ಎಂಬ ಆತನ ದುಃಖಪೂರಿತ ಉತ್ತರವು ನನ್ನನ್ನು ಭಯಪಡಿಸಿತು.

"ಏನು? ಮೃತನಾದನೆ?....ನನಗೆ ಅತೀವ ದುಃಖವಾಗುತ್ತಿದೆ" ಎಂದೆ ನಾನು. "ಅವನ ಗುಣ ಉತ್ತಮವಿದ್ದಿತು; ಆದರೆ ಈಗ ಆತನಿಲ್ಲ!" ಎಂದ ಕನಕ ಕಿರುದನಿಯಲ್ಲಿ.

ಕೆಲಕಾಲದ ಬಳಿಕ ನಾನು ಪರದೇಶಕ್ಕೆ ಹೋದೆ; ಪುನಃ ಮಂಗಳೂರನ್ನು ಸೇರುವಾಗ ವರ್ಷವೊಂದು ಕಳೆದಿದ್ದಿತು; ಬಂದೊಡನೆ ಕನಕನನ್ನು ಸಂದರ್ಶಿಸಿದೆ. ಮೊದಲಿನ ಕನಕನಿಗೂ, ನನ್ನ ಕಣ್ಣೆದುರಿದ್ದ ಕನಕನಿಗೂ ಇದ್ದ ವ್ಯತ್ಯಾಸವನ್ನು ನೋಡಿ ನನಗೆ ದುಃಖವಾಯಿತು. ಈಗ ಕನಕನ ಕೈಕಾಲು ನಡುಗುತಿದ್ದಿತು, ದೃಷ್ಟಿ ಅತಿಮಂದವಾಗಿದ್ದಿತು: ಮೊದಲು ನನ್ನ ಪರಿಚಯವೇ ಸಿಕ್ಕಲಿಲ್ಲ– ಆತನಿಗೆ.

"ಕನಕ! ನಿನ್ನ ಪಾದರಕ್ಷೆಗಳನ್ನು ಎಷ್ಟು ಹೊಗಳಿದರೂ ಅತ್ಯಲ್ಪವೇ ಸರಿ! ನನ್ನ ಪ್ರಯಾಣಕಾಲದಲ್ಲೆಲ್ಲಾ ಇದೇ ಜೊತೆಯನ್ನು ಧರಿಸಿಕೊಂಡಿದ್ದೆ" ನಾನೆಂದೆ. ಕನಕನು ಮೌನವಾಗಿದ್ದು, ತನ್ನ ಕಾರ್ಯದ ಫಲದ ಪ್ರಶಸ್ತಿಯನ್ನು ಆನಂದದಿಂದ ಅನುಭವಿಸುತ್ತಿದ್ದನು. ಬಳಿಕ:

"ಮಹಾಶಯ! ನಿಮಗೆ ಪಾದರಕ್ಷೆಗಳು ಬೇಕೆ–?" ಎಂದು ಕೇಳಿದ. "ಹೌದು. ಇನ್ನೆರಡು ಜೊತೆಗಳನ್ನು ಮಾಡು!" ಎಂದು ನಾನೆಂದೆ. ಸ್ವಲ್ಪ ಸಮಯದ ಬಳಿಕ: "ನನ್ನಣ್ಣನ ಮರಣದ ಸಂಗತಿಯನ್ನು ನಾ ನಿಮಗೆ ಹೇಳಿರುವೆನೆ!" ಎಂದು ಕನಕ ನನ್ನನ್ನು ಪ್ರಶ್ನಿಸಿದ. ಕನಕನನ್ನು ನೋಡಲು ನನಗತಿ ದುಃಖವಾಯಿತು: ಅಷ್ಟು ದೀನವಾಗಿದ್ದಿತಾತನ ವದನ!

ಆತ ಕೊನೆಯ ಸಾರಿ ಮಾಡಿದ ಪಾದರಕ್ಷೆಗಳಷ್ಟು ಚೆನ್ನಾಗಿದ್ದ ಪಾದರಕ್ಷೆಗಳನ್ನು ನಾನಿದುವರೆಗೆ ನೋಡಿಲ್ಲ. ನನಗೆ ಆಗ ಬಹು ಕೆಲಸವಿದ್ದುದರಿಂದ ಹಣವನ್ನು ಆತನಿಗೆ ಕಳುಹಿಸಿಕೊಟ್ಟೆ.

ಒಂದು ವಾರದ ಬಳಿಕ ಕನಕನನ್ನು ಸಂದರ್ಶಿಸಲು ನಾನಾತನ ಅಂಗಡಿಗೆ ಹೋದೆ. ಆದರೆ ಅಲ್ಲಿ ಕನಕನ ಬದಲಾಗಿ ಒಬ್ಬ ಯುವಕನಿದ್ದುದನ್ನು ನೋಡಿ ನಾನು ಅಪ್ರತಿಭನಾದೆ. "ಕನಕನಿಲ್ಲಿಲ್ಲವೆ?" ಎಂದು ನಾನಾತನನ್ನು ಪ್ರಶ್ನಿಸಿದೆ. "ಇಲ್ಲ; ಆದರೆ ನಾವು ನಿಮಗೆ ಬೇಕಾಗುವ ತರದ ಪಾದರಕ್ಷೆಗಳನ್ನು ಮಾಡಬಲ್ಲೆವು ...." ಎನ್ನುತ್ತಿರುವ ತರುಣನನ್ನು ಅಡ್ಡತಡೆದು ನಾನು ಕೇಳಿದೆ: "ಆದರೆ ಕನಕನೆಲ್ಲಿ–?" "ಕನಕನು ಮೃತಪಟ್ಟನು!" "ಮೃತಪಟ್ಟನೆ? ಆದರೆ ಈ ಪಾದರಕ್ಷೆಗಳನ್ನು ಕಳೆದ ಬುಧವಾರ ತಾನೇ ಕಳುಹಿಸಿದನಷ್ಟೆ!" ಎಂದು ನಾನು ಆಶ್ಚರ್ಯದಿಂದ ಹೇಳಿದೆ.

"ಪಾಪ! ಆತ ನಿರಶನ ವ್ರತದಿಂದ ತೀರಿಕೊಂಡ. ತನ್ನ ಕಾರ್ಯದಲ್ಲೇ ಮಗ್ನನಾಗಿದ್ದು, ತಿಂಡಿಯನ್ನು ತಿನ್ನದೆ ಉಪವಾಸವಿದ್ದು ಅಂತ್ಯವನ್ನು ಕಂಡನು! ಮಂಗಳೂರಿನಲ್ಲಿ ಇನ್ನಾರೂ ಆತನಷ್ಟು ಚೆನ್ನಾಗಿ ಪಾದರಕ್ಷೆಗಳನ್ನು ಮಾಡರು!" ಯುವಕನೆಂದ. "ಆದರೆ, ಉಪವಾಸ ....!" ನಾನು ಉದ್ಗಾರ ತೆಗೆದೆ.

"ಅಹುದು. ಕೇಳಲೇನೋ ವಿಚಿತ್ರವಾಗಿ ತೋರಿದರೂ, ಆತ ಅನ್ನಾಹಾರಗಳನ್ನು ಗಣಿಸದೆ, ತನ್ನ ಕಾರ್ಯದಲ್ಲಿ ಅತ್ಯಾಸಕ್ತನಾಗಿದ್ದ. ಪಾಪ, ನಾನಾತನನ್ನು ಪರೀಕ್ಷಿಸುತಿದ್ದೆ; ಆತ ಇದುತನಕ ಬದುಕಿದ್ದುದೇ ಸೋಜಿಗ!"

ನಾನಲ್ಲಿಂದ ಹಿಂದಿರುಗುವಾಗ ನನ್ನ ಮನಸ್ಸು ಗಾಢಾಂಧಕಾರಮಯವಾಗಿದ್ದಿತು; ಬಳಿಕ ಆ ಕಡೆಗೆ ಹೋಗಲು ನನ್ನ ಮನವೊಪ್ಪಲಿಲ್ಲವೆಂದರೆ ಅತ್ಯುಕ್ತಿಯಾಗದು!

ಕಲೆಗಾಗಿ ತನ್ನ ಜೀವನವನ್ನೇ ಆಹುತಿಯಿತ್ತ— ಕಲಾಸೇವಕ ಕನಕ!

— o —

ಹೆಣಿಗೆ–ಕಸೀದೆ ಕಲಿಯಿರಿ!

ಹೆಣ್ಣುಮಕ್ಕಳಲ್ಲಿ ಹೆಣಿಗೆ–ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು!

ಅಚ್ಚುಕಟ್ಟುತನದಿಂದ ಅವರ ಚೆಲುವು–ಚೆದುರು ಇಮ್ಮಡಿಗೊಳ್ಳುವುವು!!

ಹೆಣಿಗೆ–ಕಸೀದೆ–ಎಂಬ್ರಾಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ!

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್–ಧಾರವಾಡ.



ಹೊಸಬಗೆಯ ಜಂಪರ್

★

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.

★

ಈಗ ಹೆಚ್ಚು ಜನಪ್ರಿಯವಾಗುತ್ತ ನಡೆದ ಜಂಪರುಗಳ ನಮೂನೆಗಳಲ್ಲಿ ಇದೊಂದು. ಸಾದಾ ಜಂಪರುಗಳಲ್ಲಿ ತೋಳು ಅಖಂಡವಿರುತ್ತದೆ. ಇದರಲ್ಲಿ ತೋಳನ್ನು ಬೇರೆಯಾಗಿ ಹಚ್ಚಬೇಕಾಗುವುದು. ಇದರಿಂದ ತೋಳನ್ನು ತಮಗೆ ಇಷ್ಟವಾದ ರೀತಿಯಲ್ಲಿ ಹಚ್ಚಿಕೊಳ್ಳಲು ಹೆಚ್ಚು ಅನುಕೂಲ. ತೋಳಿನ ಉದ್ದ ಕಡಿಮೆ ಇಟ್ಟು, ತುದಿಗೆ ನಿರಿಗೆ (ಫ್ರಿಲ್) ಗಳನ್ನು ಹಚ್ಚಬಹುದು. ಇಲ್ಲವೆ ರಬ್ಬರು ಬಟ್ಟೆ (ಇಲ್ಯಾಸ್ಟಿಕ್) ಹಚ್ಚಬಹುದು. ಕೊರಳುಪಟ್ಟಿಯನ್ನು ಕೂಡ ಇಷ್ಟಕಂಡಂತೆ ಹೆಚ್ಚು ಮಾಡಿಕೊಳ್ಳಬರುವುದು.

ಅಳತೆ:—

೧೫ ಇಂಚು ನಡುವಿನ ಉದ್ದ; ೧೯ ಇಂಚು ಪೂರ್ಣ ಉದ್ದ; ೩೨ ಇಂಚು ಎದೆ; ೨೫ ನಡು; ೬½ ಇಂಚು ಭುಜ; ೫ ಇಂಚು ತೋಳು; ೧೪ ಇಂಚು ಕೊರಳು; ೧೦ ಇಂಚು ರಟ್ಟೆ (ರಟ್ಟೆಯ ಸುತ್ತಳತೆ).

ಚಿತ್ರಿಸುವುದು:—

ಬ, ಅ, ಕ ಕಾಟಕೋನ.
ಅ, ನ=೮" ಎಂದರೆ ಎದೆಯ ¼.
ಅ, ಚ=೧೫" ನಡು ಉದ್ದ.
ಅ, ಕ=೧೯" ಪೂರ್ಣ ಉದ್ದ.
ನ, ಚ, ಕ ಬಿಂದುಗಳನ್ನು ಮುಂದೆ ಬೆಳಸು.
ಅ, ಇ=೨¾" ಎಂದರೆ ಎದೆಯ ೧/೧೨.
ಅ, ಡ=¾" ಡ, ಇ ಕೂಡಿಸು.
ಅ, ಫ=೪ ೧/೬" ಎಂದರೆ ಎದೆಯ ೧/೧೨+೧½".
ಫ, ಇ ಚಿತ್ರದಂತೆ ಕೊರಳನ್ನು ಕೂಡಿಸು.
ಅ, ಬ=೭¼" ಎಂದರೆ ಭುಜ+¾".
ಬ ವನ್ನು ಸರಳವಾಗಿ ಕೆಳಕ್ಕಿಳಿಸು.
ಬ, ಲ=೧½"
ಇ, ಲ ಕೂಡಿಸು.
ನ, ರ=೯½" ಎಂದರೆ ಎದೆಯ ¼+೧½".
ಟ, ಗ=೧"
ಲ, ಗ, ರ ಚಿತ್ರದಲ್ಲಿ ತೋರಿಸಿದಂತೆ ಬಗಲನ್ನು ತೆಗೆ.
ರ ವನ್ನು ಸರಳವಾಗಿ ಕೆಳಕ್ಕಿಳಿಸು.
ಮ, ಜ=½"
ರ, ಜ ರೇಷೆಯನ್ನು ಕ, ದ ರೇಷೆಯ ವರೆಗೆ ಎಳೆ.



ಚ, ಟ ರೇಷೆಗುಂಟ ನಿರಿಗೆಗಳನ್ನು ಹಾಕಬೇಕು; ಇಲ್ಲವೆ ಪ್ಲೇಟು ಹಿಡಿಯಬೇಕು. ಅದು ೨೭" ಬರಬೇಕು. (ನಡು+೨")

ತೋಳು

ಬ, ಅ, ಕ ಕಾಟಕೋನ
ಅ, ಬ=೧೨" ಎಂದರೆ ಎದೆಯ ¼+೪".



ಅ, ಕ=೬" ಎಂದರೆ ತೋಳು+½".
ಬ, ರ=೨¾" ಎಂದರೆ ಎದೆಯ ೧/೧೨.
ಗ ವು ಅ, ಬ ಗಳ ಮಧ್ಯ.
ಗ, ರ ಸರಳ ಕೂಡಿಸು; ಅನಂತರ ಚಿತ್ರದಲ್ಲಿ ತೋರಿಸಿದಂತೆ ಬಾಗುರೇಷೆಯಂತೆ ಕೂಡಿಸು.
ಅ, ನ=೧½"
ನ, ರ=ಸರಳ ಕೂಡಿಸು; ಅನಂತರ ಚಿತ್ರದಂತೆ ಬಾಗುರೇಷೆಯಂತೆ ಕೂಡಿಸು.
ಹ, ಜ=¾"
ರ, ಹ ಕೂಡಿಸು.

ಕತ್ತರಿಸುವಾಗ ಕ, ಹ ದಿಂದ ಕೆಳಕ್ಕೆ ೧½" ಅರಿವೆಯನ್ನು ಮಡಿಚುವುದಕ್ಕಾಗಿ ಹೆಚ್ಚು ಇಡು.

ಬೇಕಾಗುವ ಅರಿವೆ:— ೨೮" ಅಗಲ ಉಳ್ಳ ಅರಿವೆ ೧ ವಾರ ೨ ಇಂಚು ಬೇಕಾಗುವುದು. ಚ, ಜ ದಿಂದ ಕೆಳಗಿನ ಭಾಗಕ್ಕೆ ಬೇರೆ ಹಚ್ಚುವುದಾದರೆ ೩೦" ಬಟ್ಟೆ ಸಾಕಾಗುವುದು. ಸಾಮಾನ್ಯವಾಗಿ ಉದ್ದದ ೨ ರಷ್ಟು ಬಟ್ಟೆ ತೆಗೆದುಕೊಳ್ಳುವುದು.

೭. ಕುಸುಮಷಟ್ಪದಿ ಕನ್ನಡ-ಭಗವದ್ಗೀತೆ

ಶ್ರೀಮಾನ್ ಎಂ. ಎಸ್. ಸುಬ್ಬಣ್ಣ ಬರೆದುದು

ಶ್ರೀ ಭಗವದ್ಗೀತೆಯನ್ನು ಕುರಿತ ಗ್ರಂಥಗಳು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವರ್ಷವರ್ಷಕ್ಕೂ ಹೆಚ್ಚುತ್ತ ನಡೆದಿವೆ. ಆಧ್ಯಾತ್ಮ-ಮಾರ್ಗ-ಪ್ರಿಯವಾದ ನಮ್ಮ ಜನಕ್ಕೆ ಗೀತೆಯೆಂಬುದೊಂದು ಪಾಥೇಯವಿದ್ದಂತಾಗಿದೆ. ತಾವು ಆ ಪಾಥೇಯವನ್ನುಂಡು ಇನ್ನುಳಿದವರಿಗೂ ಅದರ ಸವಿಯನ್ನು ತೋರಿಸಲು ಹವಣಿಸುವುದು ಪ್ರತಿಯೊಬ್ಬ ಗೀತಾಪ್ರೇಮಿಯ ರೀತಿಯಾಗಿದೆ. ನಮ್ಮಲ್ಲಿ ಈಗ ಸನಾತನಿಗಳೂ ಭಗವದ್ಗೀತೆಯನ್ನು ಹೇಳಹೊರಡುವರು; ಸಮಾಜ ಸುಧಾರಕರೂ ಭಗವದ್ಗೀತೆಯನ್ನು ಒಲವಿನಿಂದ ಕಾಣುವರು. ರಾಜಕಾರಣಗಳಿಗೂ ಭಗವದ್ಗೀತೆ ಬೇಕು; ಸಾಹಿತ್ಯಿಕರಿಗೂ ಭಗವದ್ಗೀತೆ ಬೇಕು. ಸಂಸ್ಕೃತ ಭಾಷೆ ಬಂದವರಿಗೂ ಬೇಕು; ಬಾರದವರಿಗೂ ಬೇಕು. ಆದುದರಿಂದಲೆ ಒಲಿಯಲಾಶಿಸುವವರೆಲ್ಲ ಭಗವದ್ಗೀತೆಯ ವಿಷಯದಲ್ಲೊಂದು ಗ್ರಂಥ ಬರೆಯಬೇಕೆನ್ನುವುದು ನಮ್ಮಲ್ಲೊಂದು ರೀತಿಯೆ ರೂಢವಾಗಿ ಬಿಟ್ಟಿದೆ. ಪ್ರಸ್ತುತ ಗ್ರಂಥ-ಲೇಖಕರಾದ ಶ್ರೀಮಾನ್ ಸುಬ್ಬಣ್ಣನವರೂ ಆ ರೀತಿಯನ್ನೆ ಎತ್ತಿ ಹಿಡಿದು, ಭಗವದ್ಗೀತೆಯನ್ನು ಕುಸುಮಷಟ್ಪದಿ ಛಂದಸ್ಸಿನಲ್ಲಿ ಕನ್ನಡಿಸಿದ್ದಾರೆ. ಹೆಚ್ಚಾಗಿ ಮೂಲ ಶ್ಲೋಕಕ್ಕೊಂದು ಷಟ್ಪದಿಯನ್ನು ರಚಿಸಿದುದೆ ಹೆಚ್ಚು. ಎರಡೆರಡು ಶ್ಲೋಕಾರ್ಥವನ್ನೊಳಗೊಂಡ ಷಟ್ಪದಿಗಳೂ ಕೆಲವು ಉಂಟು.

ಪ್ರಾಸಕ್ಕಾಗಿಯೂ, ಚರಣಪೂರ್ತಿಗಾಗಿಯೂ ಬಳಸಲಾದ ಕೆಲವು ನಿರರ್ಥಕ ಪದಗಳನ್ನು ಬಿಟ್ಟರೆ ಮೂಲಶ್ಲೋಕದ ಅರ್ಥವನ್ನು ಇಲ್ಲಿಯ ಷಟ್ಪದಿಗಳು ಚೆನ್ನಾಗಿ ಹುದುಗಿಸಿಕೊಂಡಿವೆಯೆಂದು ಹೇಳಬಹುದು. ಭಾಷೆ ಪರಿಶುದ್ಧವಾಗಿದೆ. ಉದಾಹರಣೆಗಾಗಿ ಒಂದೆರಡು ಅನುವಾದದ ಷಟ್ಪದಿಗಳನ್ನು ಇಲ್ಲಿ ಅವತರಿಸುವೆವು:

“ ಮನುಜ ತಾನೆಂತು ನೂ- |
ತನವಸ್ತ್ರಮಾಂತುಮುಳಿ- |
ವನೊ ಜೀರ್ಣವಸ್ತ್ರಂಗಳಾ ತೆರದೊಳೀ ||
ತನುಜೀರ್ಣವಾಗೆ ತೆಜಿ- |
ಪನುಮಾತ್ಮನನ್ಯ ನೂ- |
ತನಮಾದ ದೇಹಮಂ ಧರಿಸುತ್ತಿಹ ||

ಅ. ೨-ಶ್ಲೋ. ೨೨

ಒಣಗಿಸದು ಸುಡದು ತಾಂ |
ನೆನೆಸದು ಕಡಿಯದು ಕ್ರಮ- |
ವನುಗೊಂಡು ಮಾರುತಂ ವೀತಿಹೋತ್ರಂ ||
ಘನಜಲಂ ಶಸ್ತ್ರಾದಿ-
ಗಣವಿವೆಲ್ಲಮುಮಾತ್ಮ-
ನನು ನಿರುತ ಕೇಳ್ ಪಾಂಡುವಂಶತಿಲಕ! ||

ಅ. ೨-ಶ್ಲೋ. ೨೩

ಇಲ್ಲಿಯ ಎರಡನೆಯ ಪದ್ಯದ ಎರಡನೆಯ ಚರಣದಲ್ಲಿಯ ಶ್ರುತ್ಯಸಹ್ಯವಾದ ಗಣಾಂತ್ಯ ಯತಿಭಂಗದಂತೆಯೆ ಅನೇಕ ಕಡೆಗೆ ಆಗಿರುತ್ತದೆ. ಆದುದರಿಂದ ತಾಲಲಯಗಳೊಂದಿಗೆ ಷಟ್ಪದಿಗಳನ್ನು ಹೇಳುತ್ತ ಹೋಗುವಾಗ ಅಲ್ಲಲ್ಲಿ ತಡೆತಡೆದು ನಿಲ್ಲಿಸಿದಂತಾಗುವುದು. ಅಚ್ಚಿನ ರೀತಿಯಲ್ಲಿಯೂ ತೆಲುಗನ್ನು ಅನುಸರಿಸಿದುದರಿಂದ ಪದಗಳಲ್ಲಿ ಅಲ್ಲಲ್ಲಿ ಮುರಿತಗಳು ಕಾಣುವುವು. ಕನ್ನಡಿಗರ ಕಣ್ಣೋದಿಗದು ಸಹಜವೆನಿಸದು. ಇಂತಹ ಸಣ್ಣಪುಟ್ಟ ದೋಷಗಳನ್ನು ತಿದ್ದಿಕೊಂಡರೆ ಸಂಸ್ಕೃತಬಾರದ ಕನ್ನಡಿಗರಿಗೆ ಭಗವದ್ಗೀತೆಯನ್ನೋದಿಕೊಂಡ ಲಾಭ ಈ ಗ್ರಂಥದಿಂದ ಸಿಕ್ಕದಿರದು.

—ಶಂ. ಪ.

೧೩. ಹೆಚ್ಚಾವುದು ?

ಮಂಡ್ಯದ ಸರಸ್ವತೀ ಗ್ರಂಥಮಾಲೆಯ ಮೊದಲನೆಯ ಕುಸುಮ

ಲೇಖಕರು- ಶ್ರೀ. “ ರಘು ” ಅವರು

ಇದು ಸಣ್ಣ ಕತೆಗಳ ಸಂಗ್ರಹ. ಇಲ್ಲಿಯ ಏಳು ಕತೆಗಳಲ್ಲಿಯೂ ಪೌರುಷಕ್ಕಿಂತ ದೈವ ಹೆಚ್ಚಿನದೆಂಬುದನ್ನು ಹೇಳಲು ಹೊರಟ ಕತೆಗಾರರ ಪ್ರಯತ್ನವಿದೆ. ಈ ಮಾತನ್ನು ಮುನ್ನುಡಿಯಲ್ಲಿ ತಾವೆ ಒಪ್ಪಿಕೊಂಡಿದ್ದಾರೆ. ಮೊದಲನೆಯ ಕತೆಯಲ್ಲಿ ಶಾರದೆ ತನ್ನ ಗಂಡನಿಂದ ಹಳ್ಳಿಯ ಹೆಂಗುಸೊಬ್ಬಳ ಈಯಲಾದ ಆಕಳನ್ನು ಬದುಕಿಸುವಳು. ಅದರ ಫಲವೆಂಬುದನ್ನು ತೋರಿಸಲೋ ಏನೋ, ಶಾರದೆಯು ಹೆರಿಗೆಯ ಸಂಕಟದಲ್ಲಿ ಸಿಕ್ಕಿ ಪಾರಾದುದನ್ನು ಹೇಳಿದ್ದಾರೆ. ಎರಡನೆಯ ಕತೆಯಲ್ಲಿಯ ‘ ಸರಸಾಕಕ್ಕಿ ’ಯ-ಕರುಳುಗಳನ್ನು ಕಳೆದುಕೊಂಡ-ಕರುಣಾ ಚಿತ್ರವು ಪರಿಣಾಮಕಾರಿಯಾಗಿದೆ; ಆದರೆ ಇದು ಕತೆಗಾರರ ಉದ್ದೇಶಸಿದ್ಧಿಗೆ ಸಹಾಯವನ್ನೇನೂ ಮಾಡಲಾರದು. ಮೂರನೆಯದಾದ ‘ ಡಾಕ್ಟರಿನ ಡೈರಿ ’ ಎಂಬ ಕತೆ ಕಲಾಪರಿಪೂರ್ಣವಾಗಿದೆ. ಇದರಲ್ಲಿ ದೈವಬಲದ ಮೇಲ್ಮೆ ಎಲ್ಲಿಯೂ ತನ್ನ ಕೈವಾಡ ತೋರಿಸುತ್ತಲಿಲ್ಲವಾದರೂ ಕತೆಗಾರರು ತಮ್ಮ ಉದ್ದೇಶಪೂರ್ತಿಗಾಗಿ ಶಾರದೆಯ ಕಡೆಯಿಂದ ಕತೆಯ ಕೊನೆಯಲ್ಲಿ ‘ ದೇವರು ದೊಡ್ಡವನು ’ ಎಂದೊಂದು ಮಾತನ್ನು ಹೇಳಿಸಿರುವರು. ‘ ಬಂಜೆ ’ ಎಂಬ ಕತೆಯಲ್ಲಿ ಅಗಸರ ಚೆನ್ನಿಯ ಮಕ್ಕಳಾಶೆಯ ಉತ್ಕಟತೆಯ ಸ್ವಾಭಾವಿಕ ಚಿತ್ರವಿದೆ. ‘ಭೂತನಚೇಷ್ಟೆ’ ಎಂಬ ಕತೆಓದಲು ಚೆನ್ನಾಗಿದೆಯಾದರೂ ದೆವ್ವ-ಭೂತಗಳಲ್ಲಿ ನಂಬುಗೆಯಿರದವರಿಗೆ ಅಷ್ಟೊಂದು ಮೆಚ್ಚಿಕೆಯೆನಿಸದೆ ಹೋಗಬಹುದಾದುದು. ಈ ಕತೆಯ ಕೊನೆಯಲ್ಲಿಯೂ ‘ ದೈವಮಾಯೆ ಬಲ್ಲವರಾರು ! ’ ಎಂಬೊಂದು ಮಾತಿದೆಯಷ್ಟೇ.

'ನನ್ನ ಮದುಮನೆ'ಯೆಂಬ ಕತೆಯಲ್ಲಿ ಪರಿಸ್ಥಿತಿಯ ವೈಪರೀತ್ಯದ ಮೂಲಕ ಕಮಲಮ್ಮನ ಕಣ್ಣು ತೆರೆದುವೆಂಬುದು ಇಲ್ಲಿಯ ಉತ್ತಮವಾದ ಸನ್ನಿವೇಶಗಳಿಂದ ಯಾರಿಗೂ ಎನಿಸಬಹುದಾದರೂ, ಕತೆಗಾರರಿಗೆ ಅದನ್ನು ನೋಡಿ 'ದೇವರಿದ್ದಾನೆ' ಎನ್ನಿಸುವುದು. ಕೊನೆಯ ಕತೆ 'ಮೋಡಿ' ಎಂಬುದಂತೂ ದೈವದ ಬಲ್ಮೆಯನ್ನು ತೋರಿಸಲೆಂದು ರಚಿಸಿ ಹೇಳಿದ ಪವಾಡದ ಕತೆ. ಹಿರಣ್ಯಕಶಿಪುವಿನಿಂದ ಪ್ರಲ್ಹಾದನನ್ನು ಉಳಿಸಲು ನರಸಿಂಹರೂಪದಿಂದ ದೇವರು ಪ್ರತ್ಯಕ್ಷನಾದಂತೆ, ಇದರಲ್ಲಿಯ ಮೋಡಿಕಾರ (ಗಾರುಡಿಗ)ನಿಂದ ಹುಡುಗನೊಬ್ಬನನ್ನು ಉಳಿಸಲು ದೇವರು ತನ್ನ ಶಕ್ತಿಯನ್ನು ತೋರಿಸುತ್ತಾನೆ. ಉದ್ದೇಶಸಾಧನೆಗಾಗಿಯೆ ನಿರ್ಮಿತವಾಗಿರುವ ಈ ಕತೆಯಲ್ಲಿ ಕಲಾಭಿಜ್ಞತೆಯನ್ನೇನೂ ಕಾಣುವಂತಿಲ್ಲ. ಶ್ರೀ. 'ರಘು' ಅವರು ಒಳ್ಳೆಯ ಕತೆಗಾರರೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅವರ ಉದ್ದೇಶಸಾಧನೆಯ ಹುಚ್ಚಿನ ಹುಳು, ಅರಳಿ ನಳನಳಿಸುತ್ತಿರುವ ಕಲಾಕುಸುಮಗಳನ್ನು ಅಲ್ಲಲ್ಲಿಯೆ ಕೊರೆದು ಕೆಡಿಸಿಬಿಟ್ಟಿರುವುದು. ಉದ್ದೇಶಸಾಧನೆಗಾಗಿರುವ ಕತೆಗಳು ಸಾಹಿತ್ಯದಲ್ಲಿ ಇರಲೇಬಾರದೆಂದಲ್ಲ; ಆದರೆ ಅದು ಹರಿದಾಸರ ಪಲ್ಲವಿಯಂತೆ ಆಗಾಗ ಮುಂದೆ ಬಂದು ರಸಿಕರ ಕಿವಿಯನ್ನು ಕಚ್ಚುತ್ತಿರಬಾರದಷ್ಟೆ! ಶ್ರೀ 'ರಘು' ಅವರ ಕತೆಗಳ ಸೊಗಸನ್ನು ಎಲ್ಲರೂ ಖಂಡಿತವಾಗಿ ಸವಿಯಬೇಕಾಗಿ ನಮ್ಮ ಬಿನ್ನಹ.

—ವಿ. ಎಸ್. ಓಂಕಾರ

೮೦. ಕೈಗನ್ನಡಿ

ಶ್ರೀ. ಕಲಮದಾನಿ ಗುರುರಾಯರು ಬರೆದುದು.

ಫಲಜ್ಯೋತಿಷ, ಹಸ್ತಸಾಮುದ್ರಿಕಗಳ ಬೆನ್ನನ್ನು ಹತ್ತುವ ಜನರು ಇತ್ತೀಚೆಗೆ ಬಹಳವಾಗಿದ್ದಾರೆ. ದೇಶದಲ್ಲಿಯ ಆರ್ಥಿಕ ದುಷ್ಪರಿಣಾಮವು ಬಹುಜನರ ಬಾಳನ್ನು ನಿರಾಶೆಯ ಕಾರಿರುಳಿನಲ್ಲಿ ಚೆಲ್ಲಿಬಿಟ್ಟಿದೆ. ಬದುಕಬೇಕೆಂಬ ಆಂತರ್ಯದ ಅಪೇಕ್ಷೆಯುಳ್ಳ ಮಾನವನು, ಕೇವಲ ನಿರಾಶಾವಾದಿಯಾದರೆ ಆತ ಬದುಕುವುದೇ ಶಕ್ಯವಿಲ್ಲ; ಬದುಕಿದರೂ ಅವನಿಂದ-ನಿರುತ್ಸಾಹದ ಮೂಲಕ-ಯಾವ ಕಾರ್ಯಗಳೂ ಆಗುವುದಕ್ಕೆ ಸಾಧ್ಯವಿಲ್ಲ. ಹೀಗಾಗದಂತೆ ಮನುಷ್ಯನಿಗೆ ಭವಿಷ್ಯದ ಸುಖಜೀವನದ ಆಶೆಯನ್ನು ಹಚ್ಚಿ 'ಫಲಜ್ಯೋತಿಷ', 'ಹಸ್ತಸಾಮುದ್ರಿಕ'ಗಳು ಅವನನ್ನು ಮುಂದೆ ಮುಂದೆ ಕರೆದೊಯ್ಯುವುವು. ಈ ಶಾಸ್ತ್ರಗಳು ಹೇಳುವ ಫಲದ ಸತ್ಯತೆಯ ಪ್ರಯೋಜನಕ್ಕಿಂತಲೂ ಮಾನವನನ್ನು ಆಶಾವಾದಿಯನ್ನಾಗಿಸುವ ಇವುಗಳ ಕಾರ್ಯಪ್ರಯೋಜನದ ಮೂಲಕ ತಿಳಿದವರು, ತಿಳಿಯದವರು; ಗಂಡುಸರು, ಹೆಂಗುಸರು; ಹಿರಿಯರು, ಕಿರಿಯರು ಎಲ್ಲರೂ ಇವುಗಳಿಗೆ ಮರುಳಾಗುತ್ತಾರೆ. ಎಂತಲೆ ದೇಶ-ವಿದೇಶಗಳಲ್ಲಿಯೂ ಇವೆರಡೂ ಶಾಸ್ತ್ರಗಳ ಸಂಶೋಧನೆ, ಚರ್ಚೆ, ಪರಿಣಾಮ ಇವುಗಳ ವಿಚಾರದಲ್ಲಿ ಹಿಂಡು ಹಿಂಡಾಗಿ ಹೊತ್ತಗೆಗಳು ಹೊರಬೀಳುತ್ತಿವೆ. ಕನ್ನಡದಲ್ಲಿ ಈ ವಿಚಾರವನ್ನು ಹೊಸರೀತಿಯಿಂದ ಹೇಳಿಕೊಡುವ ಗ್ರಂಥಗಳೆ ಇರಲಿಲ್ಲ. ಆ ಕೊರತೆಯನ್ನು ಕಳೆಯುವ ಉದ್ದೇಶದಿಂದ ಶ್ರೀ. ಕಲಮದಾನಿ ಗುರುರಾಯರು ಈ ಮೊದಲು 'ಹಸ್ತಸಾಮುದ್ರಿಕ' ಎಂಬ ಹೆಸರಿನಿಂದ ಸಣ್ಣ ಪುಸ್ತಕವೊಂದನ್ನು ಕನ್ನಡದಲ್ಲಿ ಬರೆದು ಒದವಿಸಿಕೊಟ್ಟಿದ್ದು, ಈಗ ಅದರಲ್ಲಿದ್ದ ವಿಷಯವನ್ನೆ ಇನ್ನಿಷ್ಟು ವಿಶದಗೊಳಿಸಿ, ಹೆಚ್ಚಿನ ಕೆಲವು ಸಂಗತಿಗಳನ್ನು ಸೇರಿಸಿ, ಅನೇಕ ಹಸ್ತಾಕೃತಿಗಳುಳ್ಳ ಈ 'ಕೈಗನ್ನಡಿ' ಎಂಬ ಸಾಮುದ್ರಿಕ ಗ್ರಂಥವನ್ನು ಬರೆದು ಹೊರಕ್ಕೆ ಕಳುಹಿದ್ದಾರೆ. ಇದರಲ್ಲಿ ೧ ಹಸ್ತ, ೨ ಉಗುರು, ೩ ಬೆರಳು ೪ ಹೆಬ್ಬೆಟ್ಟು ೫ ಪರ್ವಗಳು ೬ ರೇಖೆಗಳು ೭ ಕಾಲತಿಳಿಯುವ ರೀತಿ ೮ ಹೃದಯ-ರೇಖೆ ೯ ಜ್ಞಾನರೇಖೆ ೧೦ ಆಯುಷ್ಯ-ರೇಖೆ ೧೧ ಮಂಗಳರೇಖೆ ೧೨ ವಿವಾಹರೇಖೆ ೧೩ ಭಾಗ್ಯರೇಖೆ, ೧೪ ದೈವರೇಖೆ, ೧೫ ಆರೋಗ್ಯರೇಖೆ ೧೬ ಕೆಲವು ಚಿಹ್ನಗಳು ೧೭ ಉಳಿದ ರೇಖೆಗಳು ಹೀಗೆ ಬೇರೆ ಬೇರೆ ವಿಷಯಗಳ ವಿವೇಚನೆಯನ್ನೊಳಗೊಂಡ ೧೭ ಪ್ರಕರಣಗಳಿವೆ. ಈ ಈ ಪುಸ್ತಕವನ್ನು ಕೌಂಟ್ ಸಿ. ಡಿ. ಸೇಂಟ್ ಜರ್ಮೇನ್, ನಾವೆಲ್ ಜಾಕ್ವಿನ್, ವಿಲಿಯಂ ಜಿ. ಬೆನ್‌ಹಾಮ್, ಸಿರೋ, ಕ್ಯಾಥರಿನ್ ಸೇಂಟ್‌ಹಿಲ್ ಮೊದಲಾದ ಇಂಗ್ಲಿಷ್ ಲೇಖಕರ ಗ್ರಂಥಾಧಾರದಿಂದ ರಚಿಸಿರುವುದಾಗಿ ಲೇಖಕರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ.

೮೧. (೧) ಅಮಾತ್ಯನಂದಿನಿ

ಶ್ರೀ. 'ಭಾರತೀಸುತ' ಬರೆದುದು

ಇದೊಂದು ಪೌರಾಣಿಕ ಕಥಾವಸ್ತುವನ್ನೊಳಗೊಂಡ ಕಾದಂಬರಿ. ಲಕ್ಷ್ಮೀಶನ ಜೈಮಿನಿಭಾರತದ ಲೋಕಪ್ರಿಯತೆ ಅದರಲ್ಲಿಯ 'ಚಂದ್ರಹಾಸ'ನ ಕತೆಯನ್ನು ಪಂಡಿತ ಪಾಮರರಿಬ್ಬರಿಗೂ ಪರಿಚಯ ಮಾಡಿಕೊಟ್ಟಿದೆ. ಅದೇ ಕತೆಯನ್ನು ಪ್ರಸ್ತುತ ಲೇಖಕರು ವಿವಿಧ ಸಂನಿವೇಶಗಳಲ್ಲಿ ಬಳೆಯಿಸಿ, ೩೦೦ ಪುಟಗಳ ದೊಡ್ಡ ಕಾದಂಬರಿಯನ್ನಾಗಿ ಬರೆದಿದ್ದಾರೆ. ತಮ್ಮ ಮುನ್ನುಡಿಯಲ್ಲಿ ಲೇಖಕರು 'ಈ ಕೃತಿಯು ಪೌರಾಣಿಕವಾದ ಆ ಕತೆಗಿಂತ ವಿಭಿನ್ನವಾಗಿದೆ. ಅದು ಅಮಾನುಷತೆಯಿಂದ ತುಂಬಿದ್ದರೆ ನಾನು ಈ ಕತೆಯನ್ನು ಈಗಿನ ಜನರ ಮನೋಧರ್ಮಕ್ಕನುಗುಣವಾಗಿ ಮಾರ್ಪಡಿಸಿದ್ದೇನೆ' ಎಂದು ಹೇಳಿರುವರು. ಮೂಲದಲ್ಲಿ ಅಷ್ಟೊಂದು ಬೆಳೆಯದಿದ್ದ ಅನೇಕ ಪಾತ್ರಗಳು ಇದರಲ್ಲಿ, ತಮ್ಮ ತಮ್ಮ ಸ್ವಭಾವಪರಿಪುಷ್ಟಿಯಿಂದ ಸಾಕಷ್ಟು ಬಳೆದು ನಿಂತಿವೆ. ಮದನನ ಪಾತ್ರವು ಮಾತ್ರ ಮೂಲಕಥೆಯಲ್ಲಿಯ ಉದಾತ್ತತೆಯನ್ನು ಕಳೆದುಕೊಂಡು, ಖಲನಾಯಕನ ಸಹಕಾರಿ ಪಾತ್ರವಾಗಿ ಪರಿಣಮಿಸಿದೆ.

ಲೇಖಕರು ಚಂದ್ರಹಾಸನ ತಂದೆಯ ಹೆಸರನ್ನು 'ಸುಧಾರ್ಮಿಕ' ಎಂದು ಹೇಳಿರುವರು. ಆದರೆ ಜೈಮಿನಿ ಭಾರತದಲ್ಲಿಯ

'ಇನ್ನೊರೆವೆನಾಲಿಸಾದೊಡೆ ಪಾರ್ಥ,
ಧಾರ್ಮಿಕಂ ಮುನ್ನೊರ್ವನುಂಟು ಕೇರಳ
ದೇಶದವನಿಪಂ– ಸನ್ನುತ ಗುಣೋದಯಂ
ಮೇಧಾವಿಯೆಂಬವಂ' ಎಂದು ಹೇಳಿದುದು. ಅನೇಕರಿಗೆ ಗೊತ್ತಿದ್ದ ವಿಷಯ. 'ಮೇಧಾವಿ' ಹೋಗಿ 'ಸುಧಾರ್ಮಿಕ' ಎಂಬ ಹೆಸರು– ಅರ್ಥವಿಲ್ಲದ ಅಶುದ್ಧರೂಪದ ಹೆಸರು ಏಕೆ ಬಂದಿತೋ ಕಾಣೆವು.

ಕುಂ. ವಿ.

ಸಾದರ ಸ್ವೀಕಾರ

೮೬. **ಹರಿಹರ:**— (ಕವಿ ಕಾವ್ಯ ವಿಮರ್ಶೆ). ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ಎಂ. ಎ. ಅವರು ಬರೆದುದು. ಮೈಸೂರು ವಿ. ವಿ. ನಿಲಯದ ಪ್ರ. ಪು. ಮಾಲೆಯ ೭ನೆಯ ಪ್ರಕಟನೆ. ಫೂ. ಕ್ರಿ ದ ೬೬ ಪುಟ. ಬೆಲೆ ೦-೨-೦.

೮೭. **ಶಿಶುಗೀತಮಾಲೆ:**—(ಸಚಿತ್ರ ಕವಿತಾ ಸಂಗ್ರಹ) ಲೇಖಕರು ಶ್ರೀ. ಜಿ. ಎನ್. ಲಕ್ಷ್ಮಣ ಪೈ ವಿದ್ವಾನ್, ಪಿ. ಬಿ. ಎಲ್. ಅವರು. ಪ್ರಕಾಶಕರು ಸ್ಕೂಲ್ ಬುಕ್ ಕಂಪನಿ ಮಂಗಳೂರು. ಕ್ರೌ. ೮. ೪೦ ಪುಟ. ಬೆಲೆ ೦-೨-೬.

೮೮. **ಭುವನೇಶ್ವರಿ ಮೇಳದ ಪದಗಳು:**—ಬರೆದವರು ಶ್ರೀಮಾನ್ ಜಿ. ವಿ. ಶೆಟ್ಟಿ ಬಿ. ಎ., ಎಲ್ಎಲ್.ಬಿ. ವಕೀಲರು ಬೆಳಗಾಂವಿ. ಪ್ರಕಾಶಕರು ಶ್ರೀ. ವ್ಹಿ. ಎಚ್. ಮುತಾಲಿಕದೇಸಾಯಿ ವಕೀಲರು ಗೌರವ ಕಾರ್ಯದರ್ಶಿ ಭುವನೇಶ್ವರೀ ಮೇಳ ಬೆಳಗಾಂವಿ ಬೆಲೆ ೦-೧-೬.

ಇದರಲ್ಲಿ ಇಂದಿನ ಚಲಚ್ಚಿತ್ರದಲ್ಲಿ ಪ್ರಸಿದ್ಧವಾಗಿರುವ ಹೊಸ ಹೊಸ ಹಾಡುಗಳ ಧಾಟಿಯನ್ನನುಸರಿಸಿ ಬರೆದ ಹಾಡುಗಳಿವೆ. ಮೇಳಗಳಿಗೆ ಉಪಯುಕ್ತವಾಗಿದೆ.

೮೯. **ಶಿವಮೊಗ್ಗ ಕರ್ನಾಟಕ ಸಂಘದ ಮೂರು ವರ್ಷಗಳ ವರದಿ** (ತಾ. ೭-೨-೫೬ ರಿಂದ ೩೧-೧೨-೫೯ ರ ವರೆಗೆ). ಕ್ರೌ. ೮. ೮೦ ಪುಟಗಳು.

ಶಿವಮೊಗ್ಗೆಯ ಕರ್ನಾಟಕ ಸಂಘದಷ್ಟು ಪ್ರೀತಿಯಿಂದಲೂ ಆಸ್ಥೆಯಿಂದಲೂ ಕನ್ನಡದ ಕಾರ್ಯವನ್ನು ಎಲ್ಲ ಕರ್ನಾಟಕ ಸಂಘಗಳೂ ಮಾಡತೊಡಗಿದರೆ, ಜನಸಾಮಾನ್ಯರಲ್ಲಿ ನಾಡು-ನುಡಿಗಳ ವಿಷಯಕ ಅಭಿಮಾನ ತಲೆದೋರಲು ಸ್ವಲ್ಪವೂ ವಿಲಂಬವೆನಿಸಲಾರದೆಂಬುದನ್ನು ಈ ವರದಿಯನ್ನೋದಿದವರು ಸ್ಪಷ್ಟವಾಗಿ ಕಾಣಬಹುದಾಗಿದೆ.

೯೦. **ಕನ್ನಡ ಸಾಹಿತ್ಯ:**—(ಸಾಹಿತ್ಯ ಚರಿತ್ರೆ) ಬರೆದವರು ಶ್ರೀ. ಕೆ. ವೆಂಕಟರಾಮಪ್ಪ ಎಂ. ಎ., ಮೈಸೂರು, ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೮ನೆಯ ಗ್ರಂಥ. ಫೂಲ್ಸ್‌ಕ್ಯಾಪ್ ೩ ರ ದ ೬೪ ಪುಟಗಳು. ಬೆಲೆ ೦-೨-೦.

೯೧. **ಕೊರವಿಯ ರಾಮಾಯಣ ಸಾರಸಂಗ್ರಹ:**— (ಪದ್ಯ ಗ್ರಂಥ) ಸಂಗ್ರಾಹಕರು ಶ್ರೀಮಾನ್ ವೀ. ಬ. ಬಿಳೀಅಂಗಡಿ ಬಿ. ಎ., ಎಲ್ಎಲ್ ಬಿ. ಹುಬ್ಬಳ್ಳಿ. ಕ್ರೌ. ೮. ೧೨೨ ಪುಟ. ಬೆಲೆ ೦-೧೦-೦. ಸಂಗ್ರಾಹಕರೇ ಪ್ರಕಾಶಕರು.

೯೨. **ವಸುಂಧರಾ:**— (ಕೈಬರೆಹದ ಸಚಿತ್ರ ಮಾಸಪತ್ರಿಕೆ) ಸಂಪಾದಕರು ಶ್ರೀ. ಕೃ. ಗು. ಕಾರಜೋಳ; ಸಹ ಸಂಪಾದಕರು ಶ್ರೀ. ಕೆರೂರ ಹನುಮಂತ. ಫೂಲ್ಸ್‌ಕ್ಯಾಪ್ ೩ ದ ೨೪ ಪುಟಗಳು. ಬೀಳಗಿಯ ಎಳೆಯರ ಗುಂಪಿನಿಂದ ಪ್ರಸಿದ್ಧವಾಗುವುದು.

ನಮ್ಮ ಕಡೆಗೆ ಬಂದುದಿದು ಡಿಸೆಂಬರ್ ಸಂಚಿಕೆ. ಎಳೆಯರಿಗೆ ಉಚಿತವಾದ ಚಿತ್ರಗಳಿಂದಲೂ ಬಣ್ಣ ಬಣ್ಣದ ಕಾಗದಗಳಿಂದಲೂ ಸಂಚಿಕೆ ಆಕರ್ಷಕವಾಗಿದೆ. ಎಳೆಯರೆ ಬರೆದ ಕತೆ-ಕವನ-ಪ್ರಬಂಧಗಳು ಇದರಲ್ಲಿ ಅಡಕವಾಗಿವೆ. ಶ್ರೀಮಾನ್ ಹಿರೇಮಠ ಎಂಬ ವಿದ್ಯಾರ್ಥಿ ಬರೆದ 'ಬರಗಾಲದ ಮಳೆ' ತುಂಬ ಚೆನ್ನಾಗಿದೆ. ಅದನ್ನು ಮುಂದಿನ ತಿಂಗಳ ಜಯಂತಿಯಲ್ಲಿ ತಾವೆಲ್ಲ ನೋಡಬಹುದು.

೯೩. **ಮುಂಗುಳು:**— (ಕೈ ಬರೆಹದ ಮಾಸಪತ್ರಿಕೆ), ಚಿಕ್ಕೋಡಿ ತಾಲೂಕು 'ಮಾಂಜರಿ' ಗ್ರಾಮದ ಕನ್ನಡ ಶಾಲೆಯ ವಿದ್ಯಾರ್ಥಿಗಳ ಪ್ರಯತ್ನವಿದು. ಆ ಶಾಲೆಯ ಅಧ್ಯಾಪಕರಾದ ಶ್ರೀಮಾನ್ ಎ. ಎ. ಮಿರ್ಜಿಯವರು ಸಂಪಾದಕರು. ಜಯಂತಿಯ ಅಳತೆಯ ಸುಮಾರು ೪೦ ಪುಟಗಳಿಂದಿದು ಕೂಡಿದೆ.

ನಿಜವಾಗಿಯೂ ಸ್ತುತ್ಯವಾದ ಪ್ರಯತ್ನವಿದು. ವಿದ್ಯಾರ್ಥಿಗಳಿಗೆ ಚಿಕ್ಕತನದಲ್ಲಿಯೆ ಬರೆಯುವ ಓದುವ ರೂಢಿಯನ್ನು ಮಾಡಿಸುವುದು ಅವರ ಭವಿಷ್ಯಜ್ಜೀವನದ ಸುಖ-ಶಾಂತಿಗಳಿಗೆ ತುಂಬ ಸಹಕಾರಿಯಾಗುವುದು. ಇದರಲ್ಲಿ ಬರೆದ ಲೇಖನಗಳೆಲ್ಲ ಕೇವಲ ವಿದ್ಯಾರ್ಥಿಗಳು ಬರೆದುವೇ ಇಲ್ಲ. ತಮಗೆ ಮೆಚ್ಚಿಕೆಯವಾಗಿ ಕಂಡ ಹಿರಿಯ ಕವಿಗಳ ಕವನಗಳನ್ನೂ ಇದರಲ್ಲಿ ವಿದ್ಯಾರ್ಥಿಗಳು ಸಂಗ್ರಹಿಸಿ ಬರೆದಿದ್ದಾರೆ. ಹೀಗೆ ಸಂಗ್ರಹಿಸಲು ಆಯುತ್ತಿರುವಾಗ ಸಹಜವಾಗಿಯೆ ವಿದ್ಯಾರ್ಥಿಗಳಲ್ಲಿ ವಿಮರ್ಶಾಬುದ್ಧಿ ಬೆಳೆಯುತ್ತ ಹೋಗುವುದು. ಮರಾಠೀ ಭಾಷೆಯ ಮೆರುಗಿಗೆ ಮನಸೋತ ಚಿಕ್ಕೋಡಿ ತಾಲ್ಲೂಕಿನ ಮಾಂಜರಿಯಂತಹದೊಂದು ಗ್ರಾಮದಲ್ಲಿದ್ದು, ವಿದ್ಯಾರ್ಥಿಗಳಿಗೆ ಕನ್ನಡದ ಅಭಿಮಾನವುಂಟಾಗುವಂತಹ ಈ ಕಾರ್ಯದಲ್ಲಿ ಅವರನ್ನು ಮುಂದುವರಿಸಲು ಹಚ್ಚಿದ ಶ್ರೀ. ಮಿರ್ಜಿಯವರೂ ಆ ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ಖಂ. ಗೋ. ಮಠಾರಕರರೂ ಅಭಿನಂದನೆಗೆ ತಕ್ಕವರು.

೯೪. **ಧರ್ಮವೀರ:**—(ಸಚಿತ್ರ ಕೈಬರೆಹದ ಮಾಸಪತ್ರಿಕೆ) ಸಂಪಾದಕರು ಶ್ರೀ. ಧರ್ಮರಾಜ ಕುಲಕರ್ಣಿ ವಿಜಾಪುರ. ಜಯಂತಿಯಳತೆಯ ೬೮ ಪುಟಗಳು. ವಿಜಾಪುರದಲ್ಲಿಯ ಕೆಲವು ತರುಣ ವಿದ್ಯಾರ್ಥಿಗಳು ಸೇರಿ ನಡೆಯಿಸುತ್ತಿದ್ದಾರೆ.

ನಮ್ಮ ಕಡೆಗೆ ಬಂದುದಿದು ೧ನೆಯ ವರ್ಷದ ೧೦ನೆಯ ಸಂಚಿಕೆ— ನಾಡಹಬ್ಬದ ಸಂಚಿಕೆ. ಇದರ ವಿಷಯದಲ್ಲಿ ಪಟ್ಟ ಹಲವು ಜನ ಹಿರಿಯ ಸಾಹಿತ್ಯಿಕರ ಒಳ್ಳೆಯ ಅಭಿಪ್ರಾಯಗಳೂ ಇದರಲ್ಲಿ ನೋಡಲು ಸಿಕ್ಕುತ್ತವೆ. ಸಂಚಿಕೆಯ ಸಂಪಾದನೆಯೂ, ಚಿತ್ರಗಳೂ, ಹರಣವೂ, ಆಕರ್ಷಕತೆಯೂ ಯಾರಿಗೂ ಆದರ್ಶವಾಗಿವೆ. 'ಮಧುವನ' ಎಂಬ ಭಾಗದಲ್ಲಿ ಒಳ್ಳೊಳ್ಳೆಯ ಕವನಗಳು ಸಂಗ್ರಹಿತವಾಗಿವೆ. ತರುಣರ ಈ ಕಿರುಬೆಳಕಿನ ದೀವಟಿಗೆ ಹಿರಿಯ ಬೆಳಕಿನ ಪುಂಜವಾಗಿ ದೇಶದ ಕಗ್ಗತ್ತಲೆ ಬೇಗ ಹರಿಯಲಿ.

೯೫. **ತೇಜಸ್ವಿ:**— (ಷಾಣ್ಮಾಸಿಕ ಪತ್ರಿಕೆ) ಕಾರ್ಯಕಾರಿ ಸಂಪಾದಕರು

ಶ್ರೀಮಾನ್ ನೆಗಳೂರ ರಂಗನಾಥ ಬಿ. ಎ. ಅವರು, ಧಾರವಾಡದ ಕರ್ನಾಟಕ ಹೈಸ್ಕೂಲಿನಿಂದ ಹೊಸತಾಗಿ ಹೊರಡ ತೊಡಗಿದೆ. ರೊಯಲ್ ೧/೮ ದ ೭೨ ಪುಟಗಳು.

ಇದರಲ್ಲಿಯ ಪುಟಗಳನ್ನು ಇಂಗ್ಲಿಷ್ ಲೇಖನಗಳಿಗೆ ೨೮, ಕನ್ನಡ ಲೇಖನಗಳಿಗೆ ೪೦, ಮರಾಟಿಗೆ ೪ ಹೀಗೆ ಹಂಚಿಕೊಡಲಾ ಗಿದೆ. ಸಂಪಾದಕೀಯ, ಶ್ರೀಮಾನ್ ಸಾಲಿ ಯವರ ಎರಡು ಕವನ ಇವುಗಳನ್ನು ಬಿಟ್ಟರೆ ಎಲ್ಲ ಭಾಷೆಯ ಎಲ್ಲ ಲೇಖನಗಳೂ ವಿದ್ಯಾರ್ಥಿ ಗಳಿಂದಲೆ ಬಂದುವುಗಳಾಗಿವೆ. ಕನ್ನಡ ವಿಭಾಗದಲ್ಲಿಯ ಹಲವು ಲೇಖನಗಳೂ ಕವನ ಗಳೂ ‘ ಇವುಗಳನ್ನು ಬರೆದವರು ವಿದ್ಯಾರ್ಥಿ ಗಳೆ ? ’ ಎಂದೆನ್ನುವಷ್ಟು ಚೆನ್ನಾಗಿವೆ. ತೇಜಸ್ವಿ ಕನ್ನಡದ ತೇಜಸ್ಸಿಗೆ ಕಾರಣವಾಗಲಿ

ಒಂದು ವಿಚಾರ : ಅದೆಂದರೆ ಮರಾಠಿ ವಿದ್ಯಾರ್ಥಿಗಳ ಮಾತೃಭಾಷೆಯ ಅಭಿಮಾನ ವನ್ನು ಅಭಿನಂದಿಸುವುದು. ಕನ್ನಡದ ಕೇಂದ್ರವಾದ ಧಾರವಾಡದ ಯಾವ ಶಿಕ್ಷಣ ಸಂಸ್ಥೆಯ ಮುಖಪತ್ರಿಕೆಗಳಲ್ಲಿಯೂ ಮರಾಟಿಗೆ ಅವರು ಸ್ಥಾನವನ್ನು ಅಧಿಕಾರ ದಿಂದ ಬೇಡಿ ಕಾದಿರಿಸಿಕೊಳ್ಳುತ್ತಾರೆ. ಹೀಗೆಯೇ ಮಹಾರಾಷ್ಟ್ರ ಇಲ್ಲವೆ ಬೇರೆ ಭಾಷೆಯ ಕೇಂದ್ರ ಸ್ಥಳಗಳಲ್ಲಿರುವ ಕನ್ನಡ ವಿದ್ಯಾರ್ಥಿ ಗಳು ತಮ್ಮ ಮಾತೃಭಾಷೆಯ ಸ್ಥಾನ-ಮಾನ ಕ್ಕಾಗಿ ಬಡಿದಾಡಿ ಯಶಸ್ವಿಗಳಾದ ಉದಾಹ ರಣೆ ಎಲ್ಲಿಯಾದರೂ ಉಂಟೋ ? ಹಾಗಾ ದಂದೇ ಕನ್ನಡಕ್ಕೆ ಒಳ್ಳೆಯ ಕಾಲ ಸಮಿಾಪಿಸಿ ದಂತೆ.

೯೬. ೧೧ನೆಯ ಸಿವಿಲ ಕರ್ನಾಟಕ ಆಯುರ್ವೇದ ಸಮ್ಮೇಲನ (ಸಿರಸಿ) ದ ಸ್ವಾಗತಾಧ್ಯಕ್ಷರ ಭಾಷಣ. ಸ್ವಾಗತಾ ಧ್ಯಕ್ಷರು ಶ್ರೀಮಾನ್ ಡಿ. ಎಸ್. ವಿಶ್ವಾ ಮಿತ್ರ ಬಿ. ಎ., ಎಲ್‌ಎಲ್. ಬಿ. ಡೆ. ಅ. ೧೮ ಪುಟ.

೯೭. **ಪ್ರಬಂಧ ಪ್ರಕಾಶ**:—(ಲೇಖನ ಪದ್ಧತಿ ವಿಷಯಕ ಗ್ರಂಥ) ಲೇಖಕರು ಶ್ರೀ. ದೇಶಪಾಂಡೆ ಮನೋಹರರಾಯರು ಎಂ. ಎ., ಎಸ್. ಟಿ. ಸಿ. ವಿಕ್ರಮಪುರ—ಅಥಣಿ ಅವರು. ಕ್ರೌ. ೧/೮ ದ ೨೨೬ ಪುಟ ಗಳು. ಬೆಲೆ ೧-೦-೦. ಲೇಖಕರೆ ಪ್ರಕಾಶ ಕರು.

೯೮. **ಆರು ಕತೆಗಳು**:—(ಸಂಗ್ರಹ) ಬೇರೆ ಬೇರೆ ಕತೆಗಾರರು ಬರೆದುವು. ಬೆಳಗಾಂವಿಯ ಕಥಾಕುಂಜ ಗ್ರಂಥ ಮಾಲೆಯ ೧ನೆಯ ಹೂ. ಸಂಪಾದಕರು ಶ್ರೀ. ಪ್ಯಾಟಿ ಶಾಮರಾಯರು ಕ್ರೌ. ಅ. ೧೬೬ ಪುಟ. ಬೆಲೆ ೦-೧೨-೦.

೯೯. **ಜಾನಪದ ಸಾಹಿತ್ಯ ಸಂಗ್ರಹ**:— (ಹಳ್ಳಿಗರ ತ್ರಿಪದಿಗಳು) ಸಂಗ್ರಾಹಕರು ಶ್ರೀ. ಕೃ. ರಂ. ಕುಲಕರ್ಣಿ ಅರಭಾಂವಿ. ಫೂಲ್ಸ್‌ಕ್ಯಾಪ್ ಅ. ೧೬ ಪುಟ. ಬೆಲೆ ೦-೧-೦. ಪ್ರಕಾಶಕರು ಎನ್. ಎಸ್. ಸೊಪ್ಪೀಮಠ ‘ ತಾವರೆಯ ಬಳಗ ’ ಅರ ಭಾಂವಿ ಮಠ.

೧೦೦. **ಶವಸಂಸ್ಕಾರ**:—(ಅನುವಾ ದಿತ ನಾಟಕ ಭಾಗ). ಲೇ. ಶ್ರೀ. ‘ ಚೆನ್ನ ಬಸವ ’ ಬಳ್ಳಾರಿ. ಡೆ. ೧/೧೬ ದ ೨೦ ಪುಟ. ಬೆಲೆ (?) ಪ್ರಕಾಶಕರು ಕನ್ನಡ ಗೆಳೆ ಯರ ಗುಂಪು ಬಳ್ಳಾರಿ.

೧೦೧. **ಶ್ರೀಮದ್ ವಾಯುಸ್ತುತಿ**:—(ತಿಳಿಗನ್ನಡದ ಅನ್ವಯ-ಭಾವಾರ್ಥ ಸಹಿತ) ಲೇಖಕರು—ಪ್ರಕಾಶಕರು ಶ್ರೀಮಾನ್ ಬಂಡಾಚಾರ್ಯ ಕೌಜಲಗಿ, ಹಾಲಗೆರೆ ಓಣಿ, ಧಾರವಾಡ; ಡೆ. ಅ. ೯೬ ಪುಟ. ಬೆಲೆ ೦-೮-೦.

೧೦೨. Mystic Teachings of the Haridasas of Karnatak :— (ಹರಿದಾಸ ವಾಙ್ಮಯದ ವಿಮರ್ಶಾತ್ಮಕ ಚರಿತ್ರೆ). ಮುಂಬಯಿ ಸರಕಾರದ ಕನ್ನಡ ಸಂಶೋಧನ ಸಮಿ ತಿಯ ಪ್ರಕಟನೆಯಿದು. ಬರೆದವರು ಶ್ರೀ. ಎ. ಪಿ. ಕರಮರಕರ ಎಂ. ಎ., ಎಲ್‌ಎಲ್. ಬಿ. ಮತ್ತು ಶ್ರೀ. ಎನ್. ಬಿ. ಕಲಮದಾನಿ ರಿಟಾಯರ್ಡ್ ಎಂಜಿನಿಯರ್ ಧಾರವಾಡ. ಪ್ರಕಾಶಕರು ಡಾ. ಕೆ. ಎಸ್. ಕಮಲಾ ಪುರ ಎಂ. ಬಿ. ಬಿ. ಎಸ್. ಆನರರಿ ಸೆಕ್ರೆಟರಿ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರ ವಾಡ. ಡೆ. ಅ. ೪೮+೧೩೬ ಪುಟಗಳು. ಬೆಲೆ ೧-೮-೦.

೧೦೩. **ಹಿಂದುಸ್ಥಾನದ ಹೊಸ ಘಟನೆ** :—(ರಾಜಕಾರ್ಯ ವಿಷಯಕ) ಬರೆದವರು ಶ್ರೀ. ವೆಂಕಟರಾವ ನಾಯಕ ಎಂ, ಎ., ಎಲ್‌ಎಲ್. ಬಿ. ಸಂಪಾದಕ "ಕರ್ನಾಟಕ ವೈಭವ" ವಿಜಾಪುರ. ಕ್ರೌ. ಅ. ೨೫೨ ಪುಟ. ಬೆಲೆ ೧-೪-೦. ಲೇಖಕರೇ ಪ್ರಕಾಶಕರು.

೧೦೪. **ನವಯುಗದ ಪರ್ಯಾಯ ಸಂಚಿಕೆ**:—ಸಂಪಾದಕರು ಶ್ರೀ. ಕೆ. ಕೆ. ಸೆಟ್ಟಿ; ಸಹಸಂಪಾದಕರು ಶ್ರೀ. ಕೆ. ಎಚ್. ಸೆಟ್ಟಿ ನವಯುಗ ಕಾರ್ಯಾಲಯ ಉಡುಪಿ. ಕ್ರೌ. ೧/೮ ದ ೧೨೨ ಪುಟಗಳು ಬೆಲೆ (?)

ಉಡುಪಿಯ ಶ್ರೀ ಕೃಷ್ಣ ದೇವಸ್ಥಾನದ ಪರ್ಯಾಯಮಹೋತ್ಸವವನ್ನೂ ಇದೀಗ ಪರ್ಯಾಯಪೀಠದಿಂದಿಳಿದ, ಶ್ರೀ ಪಲಿಮಾರು ಮಠದ ಶ್ರೀಗಳವರ ಸುವ್ಯವಸ್ಥಿತ ಧಾರ್ಮಿಕ-ಸಾಮಾಜಿಕ ಕಾರ್ಯಗಳನ್ನೂ ಕುರಿತು ಬರೆದ ವಿಶದವಾದ ಲೇಖನವಲ್ಲದೆ ಬೇರೆ ಕತೆ-ಪ್ರಬಂಧ-ಕವನಗಳೂ, ಶ್ರೀ. ಕೋ. ಶಿ. ಕಾರಂತರ ‘ ಇಸ್ಪೀಟು ಜಾಕಿ ’ ಎಂಬ ವ್ಯಂಗ್ಯ ನಾಟಕವೂ ಪ್ರಕಟವಾಗಿವೆ. ಅನೇಕ ಚಿತ್ರ ಗಳಿಂದಲೂ ಮುದ್ದಾದ ಮುದ್ರಣದಿಂದಲೂ ವಿಶೇಷ ಸಂಚಿಕೆಯಿದು ಮನೋಹರವಾಗಿದೆ.

೧೦೫. **ನರಸಿಂಹ**:—(ಕೌಟುಂಬಿಕ ಮಾಸಪತ್ರಿಕೆ) ಸಂಪಾದಕರು ಶ್ರೀ. ದಿಕ್ಷಿತ ರಾಮಚಂದ್ರ ಅವರು. ಕ್ರೌ. ಅ. ೮ ಪುಟಗಳು.

ಇದೊಂದು ತೀರ ಹೊಸ ಮಾದರಿಯ ಪ್ರಯತ್ನ. ಬಳಗ ಬಹಳವಿರುವ ಮನೆತನ ವೊಂದರಿಂದ ಈ ಪತ್ರಿಕೆ ಪ್ರಕಟವಾಗುತ್ತ ಲಿದೆ. ಬೇರೆ ಬೇರೆ ಕಡೆಗಳಲ್ಲಿ— ಕೆಲಸದ ಮೂಲಕ—ವಾಸಿಸುತ್ತಿರುವ ಬಳಗದ ಉಪ ಕುಟುಂಬಗಳಿಗೆ, ಬಳಗಕ್ಕೆ ಸಂಬಂಧಿಸಿದ ಎಲ್ಲ ಸುದ್ದಿಗಳನ್ನೂ ಇದರಲ್ಲಿಯ ‘ ಸುದ್ದಿಯ ಸರಪಳಿ ’ ತಿಳಿಸುತ್ತದೆ. ಕುಟುಂಬದಲ್ಲಿ ಸಾಂದರ್ಭಿಕವಾಗಿ ಬಂದ ನಗೆಮಾತುಗಳನ್ನು ‘ ಕರಡಿಯ ಕೈ ’ ಸಂಗ್ರಹಿಸಿ ಎಲ್ಲರನ್ನೂ ನಗಿಸುತ್ತದೆ. ಬರೆಹ ಬಲ್ಲ ಹೆಂಗುಸರಿಗೂ ಹುಡುಗರಿಗೂ ಇದು ಅನೇಕ ವಿಷಯಗಳನ್ನು ತಿಳಿಸಿ ಬಹುಶ್ರುತರನ್ನಾಗಿಸಬಲ್ಲದು; ಅವರಲ್ಲಿ ವಾಚನಾಭಿರುಚಿಯನ್ನೂ ಲೇಖನಾಭಿರುಚಿ ಯನ್ನೂ ಬಳೆಯಿಸಬಹುದಾದುದು. ಇದರ ಉತ್ಪಾದಕರಲ್ಲಿ ಜಯಂತಿಯ ವಾಚಕರಿಗೆ ಚಿರಪರಿಚಿತರಾದ ಶ್ರೀ. ಎಚ್. ಎಸ್. ಪಾಟೀಲ ಎಂ. ಎ. ಅವರೂ ಒಬ್ಬರು.

ಈ ಸಲದ ಸಾಹಿತ್ಯ ಸಮ್ಮೇಳನ

★

ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡದವರ ಜಾತ್ರೆಯಾಗುತ್ತ ನಡೆದುದು ಸಮಾಧಾನದ ಸಂಗತಿ. ಈ ಜಾತ್ರೆಯಲ್ಲಿ ಸಂಸ್ಕೃತಿರಥವನ್ನು ಮುಂದುವರಿಸಲು ಸಿದ್ಧರಾಗಿಬಂದ ಕನ್ನಡಿಗರು ತಮ್ಮತಮ್ಮಲ್ಲಿಯ ಭೇದ-ಭಾವನೆಗಳನ್ನು ಹೋಳಿ ಮಾಡಬೇಕಾದುದು ತುಂಬ ಆವಶ್ಯಕವಾದ ವಿಷಯ!

ಪಯಣಕ್ಕೆ ಪೂರ್ವದಲ್ಲಿ

ಇಪ್ಪತ್ನಾಲ್ಕನೆಯ (ಡಿಶೆಂಬರ್ ೧೯೩೯) ತಾರೀಖಿನ ದಿನ ಧಾರವಾಡ ಮೋಟರ್ ನಿಲ್ದಾಣದ ಮೇಲಿನ ಸಂನಿವೇಶವು ನೋಡುವಂತಹದಿದ್ದಿತು. ಬೆಳಗಾಂವಿಗೆ ಹೋಗಲು ಟಿಕೀಟು ಪಡೆಯಲಾಶಿಸುವ ಜನಬಂಗುಳಿ, ಟಿಕೀಟು ಕೊಡುವ ಸ್ಥಳಕ್ಕೆ ಮುತ್ತಿಗೆ ಹಾಕಿ ನಿಂತು ಬಿಟ್ಟಿದ್ದಿತು. ಹೊಸದಾಗಿ ಹಿಂಡುಹಿಂಡುಗಟ್ಟಿ ಬರುವವರಿಗೆ ಟಿಕೀಟು ಕೊಡುವವರ ಮುಖದರ್ಶನ ಕೂಡ ಆಗುವಂತಿರಲಿಲ್ಲ. ಹುಬ್ಬಳ್ಳಿ, ಹಾವೇರಿ, ಗದಗು, ರಾಣೇಬೆನ್ನೂರ ತ್ತ ಕಡೆಯ ಜನರಲ್ಲದೆ, ಧಾರವಾಡದ ಅನೇಕ ಜನರ ನೆರವಿಯೂ ಅಲ್ಲಿ ಕಂಗೊಳಿಸುತ್ತಿದ್ದಿತು. ಸಾಹಿತ್ಯಸಮ್ಮೇಳನದ ಈ ಯಾತ್ರಾರ್ಥಿಗಳ ಗುಂಪಿನಲ್ಲಿ ಇನ್ನುಳಿದ ಕಾರ್ಯಕ್ಕಾಗಿ– ಇನ್ನುಳಿದ ಊರುಗಳಿಗೆ— ಹೋಗುವ ಪ್ರಯಾಣಿಕರು ಎಲ್ಲಿಯೊ ಮರೆಯಾಗಿ ಹೋಗಿದ್ದರು. ಯಾರ ಬಾಯಲ್ಲಿಯೂ ಒಂದೇ ಊರಿನ ಹೆಸರು ‘ಬೆಳಗಾಂವಿ.. ಬೆಳಗಾಂವಿ.. ಬೆಳಗಾಂವಿ!’

ಪ್ರಯಾಸಪಟ್ಟು ವಿಚಾರಿಸಿದ ಮೇಲೆ ಹೀಗೆ ಗೊತ್ತಾಯಿತು: ‘ಬೆಳಗಾಂವಿಗೆ ಹೋಗುವವರೆಲ್ಲ ಮೋಟಾರ್ ಏಜಂಟರ ಕಡೆಗೆ ಹೆಸರು ಕೊಡಬೇಕು.... ಹೆಸರು ಕೊಟ್ಟ ಕ್ರಮದಲ್ಲಿ ಟಿಕೀಟು ಕೊಟ್ಟು ಅವರ ದೇಹವನ್ನು ಬೆಳಗಾಂವಿಗೆ ಸಾಗಿಸುವುದರ ವಿಚಾರ ಮಾಡಲಾಗುವುದು’. ಇಲ್ಲಿ ‘ದೇಹವನ್ನು.. ಸಾಗಿಸುವ’ ಎಂಬುದರಲ್ಲಿ



ಸಾ. ಸಮ್ಮೇಳನದ ಅಧ್ಯಕ್ಷರು

ಮೋಟರ್ ವ್ಯವಸ್ಥಾಪಕರ ಮಾತಿನ ಔಚಿತ್ಯವೆ ವ್ಯಕ್ತವಾಗುವುದು. ಹೇಗೆಯೆಂದರೆ ಅಲ್ಲಿ ಸೇರಿದವರೆಲ್ಲರ ಮನಸ್ಸು–ಹೃದಯಗಳು ಬೆಳಗಾಂವಿಗೆ ಆಗಲೆ ಹೋಗಿ ಅಲ್ಲಿಯ ವಾತಾವರಣದಲ್ಲಿ ಬೆರತು ಬಿಟ್ಟಿದ್ದುವು. ಅಲ್ಲದೆ ಜನತೆಯ ಗದ್ದಲ, ಕಾದಾಟ, ತುಳಿದಾಟಗಳನ್ನು ನೋಡಿದರೆ, ಯಾರಯಾರ ಜೀವಗಳು ಅವರವರ ದೇಹಗಳನ್ನು ಹಿಡಿದುಕೊಂಡು ನಿಂತಾವೆಂಬ ವಿಷಯದ ಬಗ್ಗೆ ಮೋಟರ್ ಏಜಂಟರಿಗೆ ಭರವಸೆಯೂ ಇರಲಿಲ್ಲವೆಂದು ತೋರುತ್ತದೆ.

ಬೆಳಗಾಂವಿಗೆ ಬಂದಮೇಲೆ

ಅಂತೂ ಬೆಳಗಿನ ಎಂಟು ಗಂಟೆಗೆ ಮನೆ ಬಿಟ್ಟವರು ಮಧ್ಯಾಹ್ನ ಹನ್ನೆರಡು ಗಂಟೆಗೆ

‘ವಿಹಂಗಮ’
ಅವರಿಂದ

ಮೋಟಾರಿನಲ್ಲಿ ಕುಳಿತರು. ಮಧ್ಯಾಹ್ನ ಹನ್ನೆರಡು ಗಂಟೆಗೆ ಸ್ಟ್ಯಾಂಡಿಗೆ ಬಂದವರು ನಾಲ್ಕು ಗಂಟೆಗೆ ಟಿಕೀಟನ್ನು ಪಡೆದರು. ಸಂಜೆಯ ನಾಲ್ಕು ಗಂಟೆಗೆ ಹೊರಟವರು ಮರುದಿನ ೧೦–೧೧ ಗಂಟೆಗೆ ಬೆಳಗಾಂವಿಯನ್ನು ತಲ್ಪಿದರು. ನಾನು ಎಷ್ಟೆಷ್ಟೊ ಪ್ರಯಾಸಪಟ್ಟು, ಗುರುತಿನ ಏಜಂಟರಲ್ಲಿ ದಾಕ್ಷಿಣ್ಯವನ್ನು ವೆಚ್ಚಮಾಡಿ ಟಿಕೇಟನ್ನು ಪಡೆದೆ. ಮೋಟರು ಮುಂದುವರಿಯಿತು. ದಾರಿಯಲ್ಲಿಯ ಜಂಬುಡಿಯ ಪದರುಗಳು ಒಂದೊಂದಾಗಿ ಮುಖದ ಮೇಲೆ ಕುಳಿತು, ಕಣ್ಣುಮೂಗಿನ ಪರಿಚಯವನ್ನು ತಪ್ಪಿಸಿದುವು. ದೇಹದಿಂದಲ್ಲದಿದ್ದರೂ ದೇಹದ ಮೇಲಿನ ಬಟ್ಟೆಗಳ ಮೂಲಕ ಗರಡಿಮನೆಯ ಪೈಲ್ವಾನರಂತೆ ಸ್ವರೂಪವನ್ನು ಪಡೆದು ಬೆಳಗಾಂವಿಗೆ ಹೋಗಿ ಇಳಿದೆನು. ಸ್ವಾಗತಕ್ಕಾಗಿ ನಿಂತಿದ್ದ ಸ್ವಯಂಸೇವಕ ನನಗೆ ಸಾಕಷ್ಟು ಪರಿಚಿತನಾದರೂ ಆಗಿನ ನನ್ನ ಅವತಾರವು ಪರಿಚಯವನ್ನು ಮರೆಮಾಡಿತ್ತು. ಹೆಸರುಗೊಂಡು ಕೂಗಿದ ಮೇಲೆ ನನ್ನ ಧ್ವನಿಯು ಆತನಿಗೆ ಗುರುತನ್ನು ಕೊಟ್ಟಿತು. ಒಂದಕ್ಕೆ ಎರಡರಷ್ಟು ಬಾಡಿಗೆ ಕೊಟ್ಟು, ಕುದುರೆಯ ಬಂಡಿಯನ್ನು ಮಾಡಿಕೊಂಡು, ಸಮ್ಮೇಳನದ ಬಿಡಾರಕ್ಕೆ ನಾನು ಹೋಗುವಷ್ಟರಲ್ಲಿ ಅಧ್ಯಕ್ಷರ–ಮೋಟಾರಿನಲ್ಲಿಯ–ಮೆರವಣಿಗೆ ಮುಗಿದು ಹೋಗಿತ್ತು. ಬಳ್ಳಾರಿಯ ಬಿಳಿ ಎತ್ತುಗಳಂತೆ ಬೆಳಗಾಂವಿಯಲ್ಲಿಯ ಯಾವ ಬಿಳಿ ಎತ್ತುಗಳೂ ಅಧ್ಯಕ್ಷರ ರಥವನ್ನು ಎಳೆಯುವ ಪುಣ್ಯ ಮಾಡಿರಲಿಲ್ಲವೇನೋ! ‘ಮೆರವಣಿಗೆ ಹೇಗೆ

ನಡೆಯಿತು ?' ಎಂದು ಅಲ್ಲಿದ್ದ ನನ್ನ ಪರಿಚಿತರೊಬ್ಬರನ್ನು ಕೇಳಿದೆ. ಉಬ್ಬಿದೆದೆಯಿಂದ ಅವರು ಉತ್ಸಾಹಧ್ವನಿಯಲ್ಲಿ ಹೇಳಿದರು: "ಏನ್ರೀ, ಅಪೂರ್ವವಾದ ಮೆರೆವಣಿಗೆ! ಅರ್ಧ ಮೈಲುದ್ದದ ಜನಜಂಗುಳಿ, ಕನ್ನಡ-ವಾದ್ಯವೆಳದ ಕರಡಿಯ ಮಜಲಿಗೆ ಪ್ರಮುಖವಾದ ಸ್ಥಾನ. ಅಧ್ಯಕ್ಷರ ಕೊರಳಿಗೆ ಆರವತ್ತೈದು ಹೂಮಾಲೆ ಬಿದ್ದುವು. ದಿವ್ಯವಾದ ನೋಟ!". ಮೋಟಾರು-ಪ್ರಯಾಣವನ್ನು ಕೈಕೊಂಡ ಹುಚ್ಚುತನಕ್ಕಾಗಿ ನನಗೆ ಈಗ ಸ್ವಲ್ಪ ವ್ಯಸನವೆನಿಸಿತು. ನನ್ನ ಪರಿಚಿತರಲ್ಲಿಯ ಹಲವು ಜನರಂತೆ 'ಅಧ್ಯಕ್ಷರ ಸ್ಪೇಶಲ್ ಗಾಡಿ'ಯಲ್ಲಿ ನಾನೂ ಬಂದಿದ್ದರೆ ನನಗೆ ಪೈಲ್‌ವಾನನ ಅವತಾರ ತಾಳುವುದೂ ತಪ್ಪುತ್ತಿತ್ತು; ಅಧ್ಯಕ್ಷ ಅಜ್ಜಯ್ಯನ ಮೆರೆವಣಿಗೆಯ ವಿಜೃಂಭಣೆಯನ್ನೂ ನೋಡಲಿಕ್ಕಾಗುತ್ತಿತ್ತು. ಸರಿ, ಏನೇನೋ ಆಗುತ್ತಿತ್ತು, ಈಗ ಆಗಲಿಲ್ಲ. ಆಗಿರುವ ವ್ಯಸನವನ್ನು ಕಳೆದುಕೊಳ್ಳಲಿಕ್ಕೆ ಸಮಾಧಾನವೊಂದು ಬೇಕಲ್ಲ! ಅದಕ್ಕಾಗಿ ಯೋಚಿಸುತ್ತಿರುವಾಗ ಕೂಡಲೆ ಸಿಕ್ಕಿತು. 'ಉಗಿಬಂಡಿಯಲ್ಲಿ ಬಾರದೆ ಮೋಟಾರಿನಲ್ಲಿ ಬಂದುದರಿಂದ ಆಗಿರುವ ಹಣದ ಉಳಿತಾಯದಿಂದ, ತಿಂಗಳುದ್ದಕ್ಕೂ ನಮ್ಮ ಮನೆಗೆ ಕಾಯಿ-ಪಲ್ಲೆಯನ್ನು ಪೂರಯಿಸಲಿಕ್ಕಾಗುವುದು' ಎಂಬ ವಿಚಾರದ ತೆರೆ ಆ ವ್ಯಸನಕ್ಕೆ ಸುತ್ತಿಕೊಂಡಿತು.

ಊಟದ ಕಾಟ

ಮೋಟಾರಿನಲ್ಲಿ— ಕುದುರೆಬಂಡಿಗಳಲ್ಲಿ—ನಡೆದುಕೊಂಡು— ಜನ ಬೀಡಾರಕ್ಕೆ ಬಂದೆಬರುತ್ತಲಿದ್ದಿತು. ಲಿಂಗರಾಜ ಕಾಲೇಜಿನ ವಿದ್ಯಾರ್ಥಿವಸತಿಗೃಹದ ಭವ್ಯವಾದ ಕಟ್ಟಡಗಳು ಪ್ರತಿನಿಧಿಗಳಿಗೆ ಎಡೆ ಕೊಡುತ್ತಿದ್ದುವು. ಊಟದ ಏರ್ಪಾಡು 'ಕನ್ನಡಿಗರದೆಲ್ಲ ಒಂದೆ ಜಾತಿ' ಎಂಬುದನ್ನು ಸೂಚಿಸುವಂತಹುದು. ದ್ವೈತಭಾವದವರಿಗೆ ಅಲ್ಲಿ ಎಡೆಯಿರಲಿಲ್ಲವೆಂದು ಅವರು ಇನ್ನೆಲ್ಲಿಯೊ ತಮ್ಮ ಕವಳದ ಏರ್ಪಾಡನ್ನು ಮಾಡಿಕೊಂಡರು. ಏಳಾಣೆ ರೊಕ್ಕ ಕೊಟ್ಟು, ಆದರ ಬೆಲೆಯ ಊಟ ನಮ್ಮ ಸಣ್ಣ ಹೊಟ್ಟೆಯಲ್ಲೇನು ಹಿಡಿಸೀತೆಂಬ ಸೆಟ್ಟಿಯ ಲೆಕ್ಕಾಚಾರದವರು, ತಮ್ಮ ಹೊಟ್ಟೆಯಳತೆಯ ಬೆಲೆಯ ಊಟದ ದಾರಿಯನ್ನು ಕಂಡುಕೊಂಡರು. ಅಹಹ, ಅಂದಿನ ಊಟವೆ! ಈ ಮೊದಲು ಹಲವು ಸಲ ನಡೆದ ಸಭೆ-ಸಮ್ಮೇಲನಗಳ ಕಾಲದಲ್ಲಿ, ಬೆಳಗಾಂವಿಯ ಬೆಣ್ಣೆ ಕಾಯಿಸಿದ ತುಪ್ಪವನ್ನು ತಿಂದು ರುಚಿಗಂಡ ಅನೇಕರು, ಏಳಾಣೆ ಆದರೂ ಆಗಲೆಂದು ಹೋಗಿ ಎಡೆಯ ಮೇಲೆ ಕುಳಿತರೆ ಬಂದಿತಲ್ಲ ಮುಗ್ಗುಗಂಪನ್ನು ಬೀರುತ್ತ ಕೊಬ್ಬರಿಯೆಣ್ಣೆ. ಮೊಸರು ಗಟ್ಟಿಯಾಗಿ ಕಂಡಿತು; ಅದಾದರೂ ಇದೆಯೆಂಬ ಸಮಾಧಾನದಿಂದ ಸಾಕಷ್ಟು ಹಾಯ್ಕಿಸಿಕೊಂಡಾಯಿತು. ಆದರೆ ನಾಲಗೆಯ ಮೇಲೆ ಇಟ್ಟುಕೊಂಡಾಗ ಎಲ್ಲರ ನಾಲಗೆ ಹುಳಿಯಿಂದ ಜುರುಗುಟ್ಟಿ

ಸ್ವಾಗತಾಧ್ಯಕ್ಷರಾದ ಶ್ರೀ. ಎಂ. ಪಿ. ವಾಲಿ

ಹೋಯಿತು. ಒಂದು ಸಲ ಅಲ್ಲಿಗೆ ಊಟಕ್ಕೆ ಹೋದವರು, ಇನ್ನೊಂದು ಸಲ-ಕ್ಕೇನೂ ಹೋಗಿರಲಾರರೆಂದು ನನ್ನ ಅಲ್ಪ-ಮತಿಗೆ ಎನಿಸುತ್ತದೆ. ಊಟ ಇಂತಹದಾದರೂ ಊಟಕ್ಕೆ ಹಾಕುವ ಏಳಾಣೆ ಹೊತ್ತ ಹೋಟಲಿನವರು ತಮ್ಮ ಜೋಳ್ಗೆಯನ್ನು ಬೆಳಸಿಕೊಂಡರೆನ್ನಬೇಕು. 'ಹೋಗಲಿ, ಕನ್ನಡಿಗರೆ ಆಗಿದ್ದ ಆ ಹೋಟಲಿನ ಮಾಲಕರು ಲಾಭತಿಂದರೆ ತಿನ್ನಲಿ!' ಎನ್ನಬೇಕೆಂದರೆ ಆ ಹೋಟಲಿನ ಮಾಲಕರು ತಾವು ಕನ್ನಡಿಗರೆಂಬುದನ್ನು ಮರೆತೇಬಿಟ್ಟಿದ್ದಾರೆಂಬ ಸಂಗತಿಯನ್ನೂ, ಸಮ್ಮೇಳನದ ಶೃಂಗಾರಕಾಲದಲ್ಲಿಯೆ 'ಇದ್ದರೆ ಇದ್ದುಕೊಳ್ಳಲಿ' ಎಂಬ ಭಾವದಿಂದ, ಯಾರಿಗೂ ಕಾಣದಂತೆ, ಕನ್ನಡದಲ್ಲಿ ಬರೆಯಿಸಿದ ಒಂದು ಬೋರ್ಡನ್ನು ನೆಲಕ್ಕೆ ಕಟ್ಟಿರುವರೆಂಬ ಕತೆಯನ್ನೂ ಬೆಳಗಾಂವಿಯ ಕನ್ನಡಿಗರ ಬಾಯಿಂದಲೆ ಕೇಳಿದೆನು.

ಮೊದಲನೆಯ ದಿನ

ಮರುದಿನ ಬೆಳಗಿನ ಎಂಟು ಗಂಟೆಗೆ, ಸಮ್ಮೇಲನದ ಪ್ರಾರಂಭಾಧಿವೇಶನ ನೇರುವುದಾಗಿ ಪ್ರಕಟನೆಯಲ್ಲಿದ್ದಿತು. ಮೈಯನ್ನು ಕೊರೆಯುವ ಬೆಳಗಾಂವಿಯ ಚಳಿಯು, ಒಂಬತ್ತುಕಾಲುಗಂಟೆಗೆ ಅದು ಪ್ರಾರಂಭವಾಗುವಂತೆ ಮಾಡಿತು. ಸ್ವಯಂಸೇವಕರು ನಮತಾವಾದಿಗಳಾದುದರಿಂದಲೊ, ದಯಾಶಾಲಿಗಳಾದುದರಿಂದಲೊ, ದುಡ್ಡು ಕೊಟ್ಟು ಟಿಕೀಟು ಪಡೆದ ಜನರಿಗಿಂತ ದುಡ್ಡು ಕೊಡದ ಜನರಿಗೇ ಹೆಚ್ಚಾಗಿ ಸಭಾಸ್ಥಾನದಲ್ಲಿ ಸ್ಥಳವನ್ನು ಕೊಟ್ಟಿದ್ದರು. ದುಡ್ಡು ಕೊಟ್ಟವರಲ್ಲಿಯ ಹಲವರಿಗೆ ಒಂಟಿಗಾಲಿನಿಂದ ನಿಂತುಕೊಳ್ಳಬೇಕಾಯಿತು; ಅನೇಕರಿಗೆ ಸಭಾ-ಮಂಟಪಕ್ಕೆ ಪ್ರದಕ್ಷಿಣೆ ಹಾಕಬೇಕಾಯಿತು. ಸ್ವಯಂಸೇವಕರಿಗೆ ಇಂತಹ ನಮತಾ-ಭಾವವುದಯವಾಗುವುದಕ್ಕೆ ನಿರಾಹಾರದ ಮೂಲಕ ಉಂಟಾದ ಅವರಲ್ಲಿಯ ಸತ್ತ್ವಗುಣವೇ ಕಾರಣವೆಂದು ಹೇಳಬಹುದು. ಈ ಸಲದ ಸಮ್ಮೇಳನಕಾಲದಲ್ಲಿ ಕೆಲಸ ಮಾಡುವ ಸ್ವಯಂಸೇವಕರು ನಿರಾಹಾರದಿಂದಲೊ, ನೀರಾಹಾರಿಗಳಾಗಿಯೊ ದುಡಿಯಬೇಕೆಂದು ಸ್ವಾಗತಮಂಡಲಿ ನಿರ್ಣಯಿಸಿದುದು ಸಭೆ-ಸಮ್ಮೇಲನಗಳ ಇತಿಹಾಸದಲ್ಲಿ ಹೊಸಮಾತು.

ಸಮ್ಮೇಳನಕ್ಕೆ ಆರಂಭವಾಯಿತು. ಹಕ್ಕಿಗಳ ಕಿಲಬಿಲನಾದವನ್ನು ಅಣಕಿಸುವ ಧ್ವನಿಯಲ್ಲಿ ಸ್ವಾಗತಗೀತ, ಕರ್ನಾಟಕ ಗೀತಗಳಾದುವು. ಅಂದು ಹೇಳಿದ ಗೀತಗಳ ಮುದ್ರಿತ ಪ್ರತಿಗಳನ್ನು ಸಭೆಯಲ್ಲಿ ಹಂಚಲಾಯಿತು. ಸ್ವಾಗತ-ಗೀತಗಳಲ್ಲಿಯ ಶಬ್ದಾರ್ಥಕ್ಕಾಗಿ ಕುಳಿತಲ್ಲಿಯೆ ಅನೇಕ ಸಾಹಿತ್ಯಿಕರು ಆರೆದಾಟ ಮಾಡತೊಡಗಿದರು. ನನಗೆ ಒಂದು ಮಾತು ಹೊಳೆಯಿತು: ಅನೇಕ ಪತ್ರಿಕೆಗಳಲ್ಲಿ ಕೂಟಪ್ರಶ್ನೆ, ಚಕ್ರಬಂಧ ಸ್ಪರ್ಧೆ ಈಗ ಆಚ್ಚಾಗುತ್ತಿರುವುವಲ್ಲ! ಹಾಗೆಯೆ ಜಯಂತಿಯಲ್ಲಿಯೂ ಈ ಸಲ ಒಂದು

ಸ್ಪರ್ಧೆಯನ್ನು ಕೊಡಬೇಕು. ಆ ಸ್ಪರ್ಧೆ ಇನ್ನೇತರದೂ ಅಲ್ಲ; ಈ ಸ್ವಾಗತ ಗೀತೆಯ ಅರ್ಥವನ್ನು ಸರಿಯಾಗಿ ಹೇಳುವುದು :

" ರಂಗ ಭೀಮವಿಲಾಸ, ದಾದರಾ
ಸ್ವಾಗತವಾ ಗಿರಿಸಮಾಗ ಮಾನಿತನಂಮಾ|
ನಮ್ಮ ಗಾದರಿಂದವಿಂದ ನಡೆಮುತಾನೆರಿಂದ-
ವಿಂದ ||
ಜರುಗುವಂಥ ಮಿಂಚುವಂಥ ವಿಖ್ಯಾತ-
ನಾಮಾ ಸುದಾಮಾ || ಪಲ್ಲ || "

ಇದಕ್ಕೆ ಸರಿಯಾಗಿ ಅರ್ಥವನ್ನು ಹೇಳಿ ಕೊಡುವ ಜಯಂತಿಯ ವಾಚಕರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆವೆಂದು ಘನ-ವಂತರೊಬ್ಬರು ನಮಗೆ ತಿಳಿಸಿದ್ದಾರೆ. ಇಷ್ಟವಿದ್ದವರು ಪಂಡಿತ ಪ್ರಯತ್ನಮಾಡಬೇಕು.

ಸ್ವಾಗತಗೀತವಾದ ಮೇಲೆ ಸಮ್ಮೇಲನದ 'ಉದ್ಘಾಟಕ'ರಾದ ಶ್ರೀಮಂತ ಬಸವಪ್ರಭು ಲಖಮಗೌಡಾ ಸರದೇಸಾಯಿ ವಂಟಮುರಿ ಅವರು ತಮ್ಮ ಭಾಷಣವನ್ನು ಓದಿದರು. ಅವರು 'ಇಷ್ಟೊಂದು ಚೆನ್ನಾದ ಕನ್ನಡದಲ್ಲಿ ತಮ್ಮ ಭಾಷಣ ಬರೆಯಬಲ್ಲರಲ್ಲ' ಎಂದು ಹಲವರಿಗೆ ಹೆಮ್ಮೆಯೆನಿಸಿತು.

'..ಕನ್ನಡಿಗರ ಬಾಂಧವ್ಯವು ಇನ್ನೂ ಹೆಚ್ಚು ಬೆಳೆಯಲಿ, ಸಾಹಿತ್ಯ ಸೃಷ್ಟಿಯಲ್ಲಾದರೂ ಕರ್ನಾಟಕದ ಏಕೀಕರಣವಾಗಲಿ. ಸಾಹಿತ್ಯ-ಸೇವಕರಲ್ಲಿ ಪರಸ್ಪರ ಪ್ರೇಮವೂ ಸಹಾನುಭೂತಿಯೂ ಗುಣಗ್ರಹಣ ಶೀಲತೆಯೂ ಹೆಚ್ಚೆಚ್ಚು ಬೆಳೆದು, ಅಸ್ವಾಭಾವಿಕ ಭೇದಗಳೆಲ್ಲ ಅಳಿದುಹೋಗಲಿ. ಅಖಿಲ ಕರ್ನಾಟಕದ ಭಾವನೆಯು ದೃಢತರವಾಗಲಿ. ಈ ಭಾವನೆಯೇ ಏಕೀಕೃತ ಕರ್ನಾಟಕದ ಜಯಕೇತು ಕಿಚ್ಚಾಗಲಿ, ಆ ಕಿಚ್ಚು ಸದಾ ಪ್ರತಿಯೊಬ್ಬ ಕನ್ನಡಿಗನಲ್ಲಿ ಜೀವಂತವಾಗಿರಲಿ, ಪ್ರಜ್ವಲಿಸಲಿ!"

ಎಂಬ ಈ ಶ್ರೀಮಂತರ ಹಾರಯಿಕೆ ಕರ್ನಾಟಕಾಭಿಮಾನಿಗಳ ಮನಸ್ಸನ್ನು ಮುಟ್ಟಿ, ನ್ಯಾಯನ್ನು ಚುಮ್ಮುದಟ್ಟಿಸಿತು. ಬಳಿಕ ಸ್ವಾಗತಾಧ್ಯಕ್ಷರಾದ ಶ್ರೀ. ಮಲ್ಲೇಶ ಪ್ರಭು ವಾಲಿಯವರು ತಮ್ಮ ಇಪ್ಪತ್ತು ಪುಟಗಳಲ್ಲಿ ಅಚ್ಚಾದ ಭಾಷಣವನ್ನು ಯಾರಿಗೂ ಬೇಸರವೆನಿಸದಂತೆ—ಅಲ್ಲಲ್ಲಿ 'ಭಲೆ ಭಲೆ' ಎಂದು ಉದ್ಗಾರಗಳೇಳುವಂತೆ—ಪಂಡಿತ ಪಾಮರರಿಬ್ಬರೂ ತಲೆ-ದೂಗುವಂತೆ ಓದಿ ತೋರಿಸಿದರು. ಅವರ ಭಾಷಣದಲ್ಲಿ ಬೆಳಗಾಂವಿ, ಬೆಳಗಾಂವಿ-ನಾಡುಗಳ ಐತಿಹಾಸಿಕ ಮಹತಿಯೂ; ಬೆಳಗಾಂವಿ ಜಿಲ್ಲೆಯಲ್ಲಿ ಇರುವ ಕನ್ನಡ—ಕನ್ನಡಿಗರ ಇಂದಿನ ಪರಿಸ್ಥಿತಿಯೂ; ಕನ್ನಡ ಪ್ರಚಾರದ ಬಗೆಗೆ ಮಾಡಿದ ಸೂಕ್ತ ಸೂಚನೆಗಳೂ ಅಡಕವಾಗಿವೆ.

ಅಧ್ಯಕ್ಷರನ್ನಾರಿಸುವ ನಾಟಕ ಮುಗಿದ ಮೇಲೆ ಈ ಸಲ ಇನ್ನೊಂದು ನಾಟಕವನ್ನು ಹೊಸತಾಗಿ ಪ್ರಾರಂಭಿಸಲಾಯಿತು. ಅದಾವುದೆಂದರೆ ಅಸ್ವರಾಗಲಿರುವ ಅಧ್ಯಕ್ಷರು ಉದಯಹೊಂದಲಿರುವ ಅಧ್ಯಕ್ಷರನ್ನು ಕಾಯಿಕೊಟ್ಟು ಕುರ್ಚಿಯಮೇಲೆ ಕೂರಿಸುವುದು. ಇದನ್ನು ಮಾಡುವಾಗ ಹಳೆಯ ಅಧ್ಯಕ್ಷರಾದ ಶ್ರೀಮಾನ್ ದಿವಾಕರರವರು ಅನೇಕ ಸುಮಂಗಲ ಶಬ್ದಗಳನ್ನು ಅಲ್ಲಲ್ಲಿ ಹೆಣೆದು, ಸಭಿಕರ ಮನಸ್ಸನ್ನು ಕುಕ್ಕಿ ಎಬ್ಬಿಸುತ್ತಿದ್ದರು.

ಅಧ್ಯಕ್ಷರ ಭಾಷಣ ಅರುವತ್ತು ಮೂರು ಪುಟಗಳಲ್ಲಿ ಅಡಕವಾಗಿದೆ. ಶ್ರೀಮಾನ್ ಮುದವೀಡು ಕೃಷ್ಣರಾಯರನ್ನೂ, ಅವರ ಭಾಷಣದ ಬಗೆಯನ್ನೂ, ಅಖಿಲ ಕರ್ನಾಟಕವೂ ಅರಿತ ಮಾತು; ಎಂದಮೇಲೆ ಅವರ ಭಾಷಣದ ವಿಷಯದಲ್ಲಿ ಹೊಸತಾಗಿ ಹೇಳಬೇಕಾದುದೇನು? ಪುಟಪುಟದಲ್ಲಿಯೂ ಅವರ ವ್ಯಕ್ತಿತ್ವ ಮೂಡಿನಿಂತಿದೆ. ಕನ್ನಡದ ಅಭಿಮಾನದಿಂದ ತುಂಬಿದ ಅವರ ಭಾವನಾತ್ಮಕ ಮಾತುಗಳೂ, ಕನ್ನಡದ ದುರ್ದಶೆಯ ಕತೆಯನ್ನು ಹೇಳಿದ ಅವರ ಕರುಳ್ಗುದಿತದ ಮಾತುಗಳೂ ಜನಸಾಮಾನ್ಯರನ್ನು ಬಡಿದೆಬ್ಬಿಸುವಂತಹವು. ಅಂದು ಅವರು, ತಮ್ಮ ಅಚ್ಚಾದ ಭಾಷಣವನ್ನು ಓದಿದರೆ ಹೊತ್ತಾಗುವುದೆಂದು, ಅದರಲ್ಲಿಯ ಕೆಲವು ಮೂಲ ಸಂಗತಿಗಳನ್ನೆತ್ತಿ ಬಾಯಿಂದಲೆ ಹೇಳುವೆನೆಂದು ಭಾಷಣವನ್ನಾರಂಭಿಸಿದರು. ಬೇಗನೆ ಮುಗಿಸಬೇಕೆಂದು ಸಂಕಲ್ಪಿಸಿ ಅವರು ತಮ್ಮ ಮಾತನ್ನು ಮೊದಲು ಮಾಡಿದ್ದರೂ ಅಚ್ಚಾದ ಭಾಷಣವನ್ನು ಓದುವುದಕ್ಕೆ ಬೇಕಾಗುವಷ್ಟು ಸಮಯವನ್ನು ಸುಮಾರಾಗಿ, ಈ ಬಾಯಿ ಭಾಷಣವೂ ತಿಂದೇ ತಿಂದಿತು. ಬಳಿಕ ಹೊಟ್ಟೆಯಲ್ಲಿ ಹಸಿವು ಆಟವಾಡತೊಡಗಿದರೂ ಅದನ್ನು ಗಣಿಸದೆ ಸದಸ್ಯರು; ಕ. ಸಾ. ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಶ್ರೀ. ಬಿ. ಎಂ. ಶ್ರೀಕಂಠಯ್ಯನವರ ಸವಿಮಾತಿನಲ್ಲಿಯ—ಪರಿಷತ್ತಿನ ಕಳೆದವರ್ಷದ—ಕಾರ್ಯಕಲಾಪಗಳನ್ನೂ ಕೇಳಿಕೊಂಡರು.

ಅಂದಿನ ಸಭೆಯಲ್ಲಿ ಹಲವು ಜನ ಕನ್ನಡ ದೊಡ್ಡ ಮನುಷ್ಯರು ಕಾಣುತ್ತಿದ್ದರೂ ಮುಂಬಯಿ ಸರಕಾರದಲ್ಲಿ ಕನ್ನಡಿಗ ಮಂತ್ರಿಗಳಾಗಿದ್ದ ಶ್ರೀಮಾನ್ ಲತ್ತೆಯವರು ಕಾಣಲೆ ಇಲ್ಲ. ಅಂದೆಯೂ ಕಾಣಲಿಲ್ಲ; ಮುಂದೆ ಕೂಡ ಎಂದೂ ಕಾಣಲಿಲ್ಲ. ಇದು ಅನೇಕರ ಅಚ್ಚರಿಗೆ ಕಾರಣವಾದುದು ಆಶ್ಚರ್ಯದ ಮಾತಲ್ಲ.

ಅಂದು ಮಧ್ಯಾಹ್ನ ೩ ಗಂಟೆಗೆ 'ಮಹಿಳಾ ಗೋಷ್ಠಿ' ಇದ್ದಿತು. ಶ್ರೀ. ಸೌ. ಗೌರೀದೇವಿ ಇಂಚಲಮಠರು ಸ್ವಾಗತಾಧ್ಯಕ್ಷರು; ಸೊಲ್ಲಾಪುರದ ಶ್ರೀಮತಿ ಸರದಾರರವರು ಅಧ್ಯಕ್ಷರು. ಸ್ವಾಗತಾಧ್ಯಕ್ಷರ ಭಾಷಣ ಸಚಿತ್ರವಾಗಿ ಅಚ್ಚಾಗಿದ್ದಿತು. ಅಧ್ಯಕ್ಷರು ಓದಿದ ಭಾಷಣ ನಾಗರೀಲಿಪಿಯಲ್ಲಿ ಬರೆದ ಕನ್ನಡ-ಮರಾಟೀ-ಹಿಂದೀ ಸಮ್ಮಿಶ್ರ ಭಾಷಣವಾಗಿದ್ದಿತು. ಕೆಲವು ಮಹಿಳೆಯರು ಪ್ರಬಂಧಗಳನ್ನೋದಿದರು; ಇನ್ನು ಕೆಲವರು ಮಾತನಾಡಿದರು. ನಾಟಕವೂ ಒಂದು ನಡೆಯಿತು. ಹೊಸಕಾಲದ ಹೆಣ್ಣುಮಕ್ಕಳ ಬೆಡಗು-ಬಿನ್ನಾಣಗಳನ್ನು ಅಣಕವಾಡಿ ಹಾಡಿದ ಒಬ್ಬ ಸಂಪ್ರದಾಯಾಭಿಮಾನಿನಿಯನ್ನು ಸಭೆ ಮುಗಿಯುವುದರಲ್ಲಿಯೆ ಹೊಡೆದುಬಿಡಬೇಕೆನ್ನುವಷ್ಟು ಕೆಲವು ನವಯುವತಿಯರಿಗೆ ಕೋಪದ ಆವೇಶವುಂಟಾಗಿದ್ದಿತಂತೆ. ಆದರೂ ಹಳೆಯ ಕಾಲದ ಹೊಸಕಾಲದ ಮಹಿಳೆಯರಿಬ್ಬರೂ ಸೇರಿ ಕನ್ನಡ-ಕರ್ನಾಟಕದ ಕೆಲಸಮಾಡುವ ಆಶೆಯಿಂದ ೭-೮ ಗೊತ್ತುವಳಿಗಳನ್ನು ಸರ್ವಾನುಮತದಿಂದ 'ಪಾಸ್' ಮಾಡಿದರು. ಇದಾದ ಬಳಿಕ ಸಂಜೆಯ ೭ ಗಂಟೆಗೆ 'ವೃತ್ತಪತ್ರಿಕಾ ಕರ್ತರ ಗೋಷ್ಠಿ' ನಡೆಯಿತು.

ಬಾಗಿಲುಕೋಟೆಯ ವಾಸುದೇವ ನಾಟ್ಯ-ವಿನೋದಿಗಳು ಅಂದು ರಾತ್ರಿ ‘ ಪುಲಿಕೇಶಿ ’ ‘ **ಅಶ್ವಮೇಧ** ’ ನಾಟಕಗಳನ್ನು ಆಡಿ ತೋರಿಸಿದರು. ಪ್ರೇಕ್ಷಕರು ಹುಬ್ಬು ಗಂಟಿಕ್ಕಿ ‘ ಪುಲಿಕೇಶಿ ’ ನಾಟಕವನ್ನು ನೋಡಿದರು; ತೆರೆದ ಹಲ್ಲು ಮುಚ್ಚದಂತಹ ಹುಚ್ಚು ನಗೆಯಿಂದ ‘ ಅಶ್ವಮೇಧ ’ ವನ್ನು ನೋಡಿದರು. ಬಾಗಿಲುಕೋಟೆಯ ನಾಟ್ಯ-ವಿಲಾಸಿಗಳು ಅಂದು, ಕನ್ನಡ ನಾಟಕದ ದಿವ್ಯ ಭವಿಷ್ಯತ್ತನ್ನು ಕುರಿತು ಪ್ರೇಕ್ಷಕರ ಮನಸದಲ್ಲಿ ಆಶೆಯನ್ನು ಹುಟ್ಟಿಸಿದರು.

ಎರಡನೆಯ ದಿನ

ಮರುದಿನ (೨೬–೧೨-೩೯) ಬೆಳಗಿನ ೮–೩೦ ರಿಂದ ಹನ್ನೊಂದರ ವರೆಗೆ ‘ **ಸಂಘಗಳ ಸಮ್ಮೇಳನ** ’ ನಡೆಯಿತು. ಸ್ವಾಗತಾಧ್ಯಕ್ಷರಾದ **ಶ್ರೀ ಅಂಗಡಿ ಷಣ್ಮುಖಪ್ಪ**ನವರು ಎಲ್ಲರನ್ನೂ ಸ್ವಾಗತಿಸುತ್ತ, ಸಮತಾವಾದದ ಮೇಲೊಂದು ಭಾಷಣವನ್ನು ಝಾಡಿಸಿಬಿಟ್ಟರು. ಅವರ ಆ ಮಾತುಗಾರಿಕೆ, ವಾಕ್ಯರಚನೆಗಳೊಳಗಿಂದ ಸಮತಾವಾದದ ರಸವನ್ನು ಹಿಂಡಿ ಹೊರಕ್ಕೆ ತೆಗೆದು ಆಸ್ವಾದಿಸಬೇಕಾದರೆ ಸಭಿಕರಿಗೆ ತುಂಬ ಆಯಾಸಪಡಬೇಕಾಯಿತು. ಶ್ರೀಮತಿ **ಅಂಗಡಿ**ಯವರ ಮಾತುಗಾರಿಕೆಯನ್ನು ಮೊದಲುದಿನ— ಮಹಿಲಾಗೋಷ್ಠಿಯಲ್ಲಿ—ಕೇಳಿದ ಅನೇಕರು, ‘ ಹೆಂಡತಿಯ ಬಳಿ ಇವರು ಕನ್ನಡ ಭಾಷೆಯನ್ನೂ ಮಾತನಾಡುವ ಕಲೆಯನ್ನೂ ಹೇಳಿಸಿಕೊಂಡರಾಗದೆ ?’ ಎಂದು ಗುಣು ಗುಣು, ಪಿಸು ಪಿಸು ಆಡುತ್ತಿರುವುದನ್ನು ನಾನು ಕೇಳಿದೆ. ಅಂದಿನ ಅಧ್ಯಕ್ಷರ ಆಯ್ಕೆಯ ಕಾಲದಲ್ಲಿ ಸಭೆಗೆ ತಮ್ಮ ಮುಖ ತೋರಿಸಿ, ತಮ್ಮ ಮಾತುಗಳನ್ನು ಕೇಳಿಸಿ, ಧನ್ಯತೆ ಪಡೆದವರು ಎಣಿಕೆಯಿಲ್ಲದಷ್ಟು ಜನರು. ಕಡೆಕಡೆಗೆ ಮಾತನಾಡಿದ ಒಬ್ಬ ಮಹಿಳಾಮಣಿಯು ಅಧ್ಯಕ್ಷರನ್ನು ‘ **ಬಸವಣ್ಣನ ಅವತಾರ** ’ ಎಂದು ಬಣ್ಣಿಸಿ ಹೇಳಿದಳು.

ಇದೆಲ್ಲ ಮುಗಿಯುವುದರಲ್ಲಿಯೆ ಎದ್ದ ಸಭಿಕರ ತಲೆನೋವನ್ನು, ಅಧ್ಯಕ್ಷರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ‘ ವಚನಾಮೃತ ’ ಓಡಿಸಿ, ಅವರ ಮೈಯ ನರನರಗಳಲ್ಲಿಯೂ ಆ ಸಂದೋತ್ಸಾಹಗಳನ್ನು ಹರಿದಾಡಿಸಿತು. ಅಧ್ಯಕ್ಷರ ಅಂದಿನ ಭಾಷಣವೆಂದರೆ ಅದೊಂದು ಕೊಳಲಿನ ಇನಿದನಿ; ಪುಂಗಿಯ ಸಮ್ಮೋಹಕನಾದ. ಜನರ ತಲೆಯನ್ನು ಒಲೆದಾಡಿಸಿತು; ಮೈಯನ್ನು ಮರೆಯಿಸಿತು. ಪಾಸಾದ ಎರಡು ಮೂರು ಗೊತ್ತುವಳಿಗಳಲ್ಲಿ ಕೇಂದ್ರ-ಸಂಸ್ಥೆಯ ವಿಷಯಕ ಗೊತ್ತುವಳಿಯ ಶಬ್ದಾರ್ಥದ ಅವ್ಯಾಪ್ತಿ-ಅತಿವ್ಯಾಪ್ತಿಗಳ ಮೂಲಕ, ಒಂದು ಸಣ್ಣ ಕಾಳಗವೂ ನಡೆಯಿತು. ಅದರ ನಿರ್ಣಯವು ಆಯಿತೋ ಇಲ್ಲವೋ ಎಂಬುದು ತಿಳಿಯದೆಯೆ ‘ ಸಂಘಗಳ ಸಮ್ಮೇಳನ’ ಕೊನೆಗಂಡಿತು. ೨೫–೨೬ರ ಎರಡು ದಿನವೂ ಮಧ್ಯಾಹ್ನ ವಿಷಯನಿಯಾಮಕ ಸಮಿತಿ ಸೇರಿ, ಗೊತ್ತುವಳಿಗಳನ್ನು ಕುರಿತು ಆರೆದಾಟ ನಡೆಯಿಸುತ್ತಿದ್ದಿತು.

೨೬ನೆಯ ಹಗಲು ೩ ಗಂಟೆಗೆ ‘ ನಾಟಕಗೋಷ್ಠಿ ಪ್ರಾರಂಭವಾಯಿತು. ಸುಪ್ರಸಿದ್ಧ ನಾಟಕಕಾರರಾದ **ಶ್ರೀ. ಟಿ. ಪಿ. ಕೈಲಾಸಂ** ಅವರು ‘ ನಾಲ್ಕುವರೆ ನಿಮಿಷ ’ ದ ತಮ್ಮ ಭಾಷಣದಿಂದ ಗೋಷ್ಠಿಯ ‘ ಉದ್ಘಾಟನ ’ ವನ್ನು ಮಾಡಿದರು. ಸ್ವಾಗತಾಧ್ಯಕ್ಷರಾದ **ಪ್ರೊ. ವ್ಹಿ. ಜಿ. ಕುಲಕರ್ಣಿ**ಯವರು ಕನ್ನಡ ನಾಟಕಪ್ರಪಂಚವನ್ನು ಕುರಿತು ಕೂಲಂಕಷವಾಗಿ ವಿಚಾರಮಾಡಿ ಬರೆದ ತಮ್ಮ ಭಾಷಣವನ್ನು ಓದಲಾರಂಭಿಸಿದರು. ‘ ಇದುವರೆಗಿನ ಎಲ್ಲ ಗೋಷ್ಠಿಗಳ **ಸ್ವಾಗತಾಧ್ಯಕ್ಷರ** ಭಾಷಣಗಳು ಅಚ್ಚಾಗಿದ್ದು ಈ ಭಾಷಣ ಏಕೆ ಅಚ್ಚಾಗಲಿಲ್ಲವೊ ! ’ ಎಂದು ಅನೇಕರು ಚಡಪಡಿಸತೊಡಗಿದರು. ವಿಚಾರಾಂತ್ಯದಲ್ಲಿ ಹೀಗೆ ತಿಳಿದು ಬಂದಿತು:

“ ಮಿಕ್ಕ ಎಲ್ಲ ಗೋಷ್ಠಿಗಳ ಸ್ವಾಗತಾಧ್ಯಕ್ಷರು— ಆಯಾ ಗೋಷ್ಠಿಗಳಿಗೆಂದು ಅಂದಾಜು ಮಾಡಿ ಕೊಟ್ಟ ಹಣವನ್ನು ಇನ್ನಾವ ಕೆಲಸಗಳಿಗೂ ಬಳಸದೆ, ಮೊದಲು ತಮ್ಮ ತಮ್ಮ ಭಾಷಣಗಳನ್ನು ಅಚ್ಚು ಹಾಕಿಸುವುದರ ಕಡೆಗೆ ಹೆಚ್ಚು ಎಚ್ಚರ ತೆಗೆದುಕೊಂಡರು. ನಾಟಕಗೋಷ್ಠಿಯ ಸಂಚಾಲಕರು ಮಾತ್ರ ತಮ್ಮ ಪಾಲಿನ ಹಣವನ್ನು ರಂಗತಾಲೀಮುಗಳ ಕಾಲದಲ್ಲಿ ಹಾಳು-ಹಲ್ಲ- ಖರ್ಚು ಮಾಡಿದರು. ”

ನಾಟಕಗೋಷ್ಠಿಯ ಅಧ್ಯಕ್ಷರಂತೂ (ಪ್ರೊ. ಜಾಗಿರದಾರ್) ಸಂದರ್ಭಾನುಸಾರ ಮಾತನಾಡಬಹುದೆಂದೊ ಏನೊ, ತಮ್ಮ ಭಾಷಣವನ್ನು ಬರೆದಿರಲೂ ಇಲ್ಲ. ಅನುಭವಪೂರ್ಣವಾದ ಕೆಲವು ಮಾತುಗಳನ್ನು—ಜನರೆಲ್ಲ ಮೆಚ್ಚುವಂತೆ—ಹಾಗೆಯೆ ಬಾಯಿಂದ ಹೇಳಿದರು. (ಅವರ ಭಾಷಣದ ಸ್ಮೃತಿವಾದ ಇದೇ ಸಂಚಿಕೆಯಲ್ಲಿಯೆ ಬೇರೆ ಪ್ರಕಟವಾಗಿದೆ). ಬಳಿಕ ಮುಂದಿಗೆಲ್ಲ ಚೆನ್ನಾಗಿ ಕೇಳಿಸದಿದ್ದರೂ **ಶ್ರೀಯುತರುಗಳಾದ ಮೂರ್ತಿ, ಗೋಕಾಕ, ಕಾರಂತ, ಮಾಳವಾಡ, ಮುದವೀಡು** ಅವರು ನಾಟಕ ಮತ್ತು ರಂಗಭೂಮಿ ಇವುಗಳನ್ನು ಕುರಿತು ಸುಂದರವಾದ ಪುಟ್ಟ ಪುಟ್ಟ ಭಾಷಣಗಳನ್ನು ಮಾಡಿದರು.

‘ ಇವರೆಲ್ಲರ ಭಾಷಣ ಜನರಿಗೆ ಕೇಳಿಸಲಿಲ್ಲವೇಕೆ ? ’ ಎಂದು ಅನೇಕರು ಕುತೂಹಲದಿಂದ ಕೇಳಬಹುದು. ಥೇಟರು ದೊಡ್ಡದು; ವಿಪರೀತ ಜನಸಮುದಾಯ. ಸರಿಯಾಗಿ ಎಲ್ಲರಿಗೂ ಎಲ್ಲರ ಭಾಷಣ ಕೇಳಿಸಬೇಕೆಂದು ಮೊದಲಿನಿಂದಲೂ ತಂದಿಟ್ಟ ‘ ಲಾವುಡ್ ಸ್ಪೀಕರ್ ’ ಯಂತ್ರವನ್ನು, ಅದರ ಮಾಲಕರಾದ ‘ ಸುಪ್ರಸಿದ್ಧ ದೇಶಭಕ್ತ ’ ಶ್ರೀಮಂತರೊಬ್ಬರು, ಹೆಚ್ಚಿನ ಬಾಡಿಗೆಯ ಆಶೆಯಿಂದ— ಅಂದೆಯೆ ಇನ್ನೊಂದು ಕಡೆಗೆ ನಡೆದ—ಶ್ರೀ. ಅಂಬೇಡಕರರ ಸ್ವಾಗತದ ಕಾರ್ಯಕ್ರಮಕ್ಕಾಗಿ ಕೊಟ್ಟಿದ್ದರೆಂಬುದು ಗೊತ್ತಾಯಿತು. ಸಂಚಾಲಕರು ಇನ್ನೊಂದು ಯಂತ್ರವನ್ನು ತಂದು ಇರಿಸಿದ್ದರಾದರೂ ಅದು ಅಧ್ಯಕ್ಷರೊಬ್ಬರ ಮಾತನ್ನು ಮಾತ್ರ ಕೇಳಿತು. ಮಿಕ್ಕವರು ಆದರೆದುರು ಮಾತನಾಡತೊಡಗಲು, ಕಹಳೆ-ಕೊಂಬುಗಳ ಧ್ವನಿಯಿಂದ ಕೂಗಿ ಗೊಂದಲಹಾಕುತ್ತಿತ್ತು. ನಾಟಕಗೋಷ್ಠಿಯ ಯಶಸ್ಸಿಗೆ ಸ್ವಲ್ಪ ಕೊರತೆಯನ್ನು ಒಡ್ಡಿದುದು ಈ ಯಂತ್ರದ ಕೆಲಸಗೇಡಿತನ.

ಅಂದು ರಾತ್ರಿ ಸಮ್ಮೇಳನಕ್ಕೆ ಬಂದ ಅತಿಥಿಗಳ ಮನೋರಂಜನೆಗಾಗಿ ‘ ವಿವಿಧ ವಿನೋದಾವಳಿ’ಯನ್ನು ಏರ್ಪಡಿಸಿದ್ದರು. ಮೊದಲು ವ್ಯಾಯಾಮ ಪ್ರೇಮಿಗಳ ಶಕ್ತಿ-ಪ್ರದರ್ಶನ ನಡೆಯಿತು. ಆ ಮೇಲೆ ಶ್ರೀ.

ಹೊಂಬಳಿ ಅವರ 'ಕೊಳಲೂದು' ಕರ್ಣ ಮನೋಹರವಾಗಿ ನೆರವೇರಿತು. ಬೆಳಗಾಂವಿಯ ತರುಣರೇ ಸೇರಿ ಮಾಡಿದ ಏಕಾಂಕ ನಾಟಕವೊಂದು ಪ್ರದರ್ಶಿತವಾಗಿ ನಗೆಗೀಡಾಯಿತು. ನಾಟಕಗೋಷ್ಠಿಯ ಕಾರ್ಯದರ್ಶಿಗಳಾದ ಶ್ರೀಮಾನ್ ಜಿ. ವಿ ಕಟ್ಟಿಯವರು ಅಭಿನಯಿಸಿ ತೋರಿಸಿದ ಕೀರ್ತನಕಾರನ ಹುಚ್ಚಾಟ, ನಗೆಯ ಅಬ್ಬರವನ್ನೆಬ್ಬಿಸಿತು. ಪ್ರೊ. ವಿ. ಜಿ, ಶ್ರೀ. ಮಳಗಿ, ಶ್ರೀ. ಪುರಾಣಿಕ ಮೊದಲಾದವರು ಕೂಡಿ ಅಭಿನಯಿಸಿದ 'ಗದಾಯುದ್ಧ' ನಾಟಕದ ಭಾಗವು ರಸಿಕರೆಲ್ಲರನ್ನೂ ತಲೆದೂಗಿಸಿತು. ಶ್ರೀ. ಕೈಲಾಸಂರವರ ವಿನೋದ ಕಾರ್ಯಕ್ರಮದ ಮಾತಿನ ಗಡಿಬಿಡಿ ಸಮುದಾಯಕ್ಕೆ ತಿಳಿಯದೆ ಗಡಬಡವನ್ನೆಬ್ಬಿಸಿತು. ಇಷ್ಟೆಲ್ಲವಾಗಿ 'ವಿವಿಧ ವಿನೋದಾವಳಿ' ಮುಗಿಯಿತು.

ಮೂರನೆಯ ದಿನ

ಮೂರನೆಯ ದಿನ (೨೮-೧೨-೪೯) ದ ಬೆಳಗು-ಮಧ್ಯಾಹ್ನಗಳ ಕಾರ್ಯಕ್ರಮವೆಲ್ಲ 'ಸಾಹಿತ್ಯಗೋಷ್ಠಿ'ಗೆ ಮೀಸಲಾಗಿದ್ದಿತು. ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಎಸ್. ಜಿ. ಕಟ್ಟಿಯವರ ಭಾಷಣವೆಂದರೆ, ಸ್ವಾಗತಾಧ್ಯಕ್ಷರು ಎಷ್ಟುಹೊತ್ತು, ಹೇಗೆ ಮಾತನಾಡಬೇಕೆಂಬ ಔಚಿತ್ಯವನ್ನು ಅರಿತುದಾಗಿದ್ದಿತು. ಬೆಳಗಾಂವಿಯ ಕನ್ನಡತನವನ್ನು ಸಾಧಾರವಾಗಿ ಸಿದ್ಧಪಡಿಸಿದ ಇವರ ಭಾಷಣದ ಭಾಗವು ಮನನೀಯವಾಗಿದೆ.

ಸಾಹಿತ್ಯಗೋಷ್ಠಿಯ ಅಧ್ಯಕ್ಷರ ಭಾಷಣವು ಮುದ್ರಿತವಾಗಿದ್ದು, ಸಮ್ಮೇಳನಾಧ್ಯಕ್ಷರ ಭಾಷಣದ ಅರ್ಧದಷ್ಟು ಪುಟಗಳನ್ನು (೩೦) ಒಳಗೊಂಡಿದೆ. ಅಧ್ಯಕ್ಷರು (ಶ್ರೀ. ಸಿ. ಕೆ. ವೆಂಕಟರಾಮಯ್ಯ) ಪ್ರಚಂಡ ವಾಗ್ಮಿಗಳು; ಸಂಗೀತರಸಿಕರು; ಅಭಿನಯ ಕಲಾವಿದರು. ಇವೆಲ್ಲವುಗಳಿಂದ ಕೂಡಿದ ಅವರ ಭಾಷಣವು ಸಭಿಕರ ಮನಸ್ಸನ್ನು ಸೂರೆಗೊಂಡಿತು. ಸಾಹಿತ್ಯಪ್ರಪಂಚದಲ್ಲಿಯ ಹಲವು ಸಮಸ್ಯೆಗಳನ್ನೆತ್ತಿ ಮಾತನಾಡುತ್ತ, ತುಚ್ಛಶೃಂಗಾರದ ಅಶ್ಲೀಲ ಸಾಹಿತ್ಯೋದಯವನ್ನು ಕುರಿತು, ಅಧ್ಯಕ್ಷರು ನಿಷ್ಠುರವಾದ ನುಡಿಗಳಿಂದ ಖಂಡಿಸಿರುವರು. ಒಟ್ಟಿನಮೇಲೆ ಪರಿಣಾಮಕಾರಿಯಾದ ಭಾಷಣ.

ಬಳಿಕ ಹಿರಿಯ ಸಾಹಿತಿಗಳಾದ ಶ್ರೀಮಾನ್ 'ಶ್ರೀ'ಯವರೂ ಶ್ರೀಮಾನ್ ಮಾಸ್ತಿಯವರೂ ಸ್ವಲ್ಪ ಹಿರಿಯವಾದ ಕವನಗಳನ್ನೇ ಓದಿ ತೋರಿಸಿದರು. ಕವನ ಕೇಳಿ ದಣಿದ ಜನರಿಗೆ ಭಾಷಣ ಕೇಳಿಸಬೇಕೆಂದು ಕಾರ್ಯದರ್ಶಿಗಳಿಗೆನಿಸಿತೇನೋ! ಪ್ರೊ. ಜಾಗಿರದಾರರನ್ನು ಏಳಲು ಹೇಳಿದರು. ಅವರು ಸಹಜವಾಗಿ ತುಚ್ಛಶೃಂಗಾರದ ವಿಷಯವನ್ನೇ ಎತ್ತಿ, ಯಾವುದೇ ಶೃಂಗಾರವನ್ನು ತುಚ್ಛವೆಂದೋ ಸ್ವಚ್ಛವೆಂದೋ ನಿರ್ಣಯಿಸುವುದು ಕಠಿನವೆಂಬುದನ್ನು ತಮ್ಮ ಅನುಭವಕ್ಕೆ ಬಂದ ಕೆಲವು ಸಂಗತಿಗಳಿಂದ ಸಿದ್ಧಮಾಡಿ ತೋರಿಸಿದರು. ಸಹಜವಾಗಿ ಆಡಿದ ಈ ಮಾತುಗಳನ್ನು ತಮಗೆ ಅನ್ವಯಿಸಿಕೊಂಡು ಗೋಷ್ಠಿಯ ಅಧ್ಯಕ್ಷರು, ತಾವು ನೊಂದುಕೊಂಡುದನ್ನು ಸಭೆಯಲ್ಲಿ ಪರ್ಯಾಯವಾಗಿ ಪ್ರಕಟಿಸಿದರು. ಸ್ವಲ್ಪಕಾಲ ವ್ಯಾಸಪೀಠದ ಮೇಲೂ ಕೆಳಗೂ ಜನರಲ್ಲಿ ಅದರ ಬಗೆಗೆ ಗುಣುಗುಣಾಟವೆದ್ದು ಹೇಗೋ ಮಾಯವಾಯಿತು. ಬಳಿಕ ಶ್ರೀಮಾನ್ ಸಾಲಿಯವರಿಂದ ಮೊದಲಾಗಿ ಶ್ರೀಮಾನ್ ಬೇಂದ್ರೆಯವರ ವರೆಗೆ ೩-೪ ಜನರು ತಂತಮ್ಮ ಕವನಗಳನ್ನೋದಿದರು. ಮಧ್ಯಾಹ್ನದಲ್ಲಿ, ಸಭಿಕರಿಗೆ ಬೇಕಾದುದನ್ನೂ ಬೇಡವಾದುದನ್ನೂ ಲೆಕ್ಕಿಸದೆ ಅನೇಕ ಗದ್ಯ-ಪದ್ಯ ಸಾಹಿತ್ಯಿಕರು ತಮ್ಮ ಕೃತಿಗಳ ಪ್ರದರ್ಶನ ಮಾಡತೊಡಗಿದರು. ಸಾಹಿತ್ಯಗೋಷ್ಠಿಗಿದ್ದ ಕಾಲಾವಧಿ ಮುಗಿದರೂ ಓದಿ ತೋರಿಸಬೇಕೆಂಬ ಕುತೂಹಲವಿದ್ದ ನೂರಾರು ಸಾಹಿತ್ಯಿಕರು ಇನ್ನೂ ಹಾಗೆಯೆ ಉಳಿದಿದ್ದರು. ಅವರ ಕೃತಿಗಳನ್ನೂ ಸಭಿಕರಿಗೆ ಕೇಳಿಸಿಯೆ ತೀರುವ ಕರುಣೆಯಿಂದ, ನಾಲ್ಕನೆಯ ದಿನವೂ ಕಾರ್ಯಕಲಾಪ ನಡೆಯುವುದೆಂದು ಸಾರಲಾಯಿತು. ಅಧ್ಯಕ್ಷರು ಮಾತ್ರ ಅದೇ ದಿನ ಸಾಹಿತ್ಯಗೋಷ್ಠಿಯ ಸಮಾರೋಪ ಭಾಷಣವನ್ನು ಮಾಡಿ, ತಮ್ಮ ಹೊಣೆಯಿಂದ ಪಾರಾಗಿ ಬಿಟ್ಟರು. ಇದಾದ ಮೇಲೆ ಶ್ರೀಮಾನ್ **ಶಿವಮೂರ್ತಿ ಶಾಸ್ತ್ರಿ**ಗಳ 'ಕರ್ನಾಟಕ ವಿಜಯ' ಎಂಬ ಮಾಮೂಲಿ ಕೀರ್ತನೆ ಪ್ರಾರಂಭವಾಗಿ, ರಾತ್ರಿಯ ೯॥ ಗಂಟೆಯ ವರೆಗೆ ನಡೆದಿದ್ದಿತಂತೆ.

'ದುರಂತ'ದ ಭೀತಿ

ಅಂದು ರಾತ್ರಿ ಸಭಾಮಂಟಪದಲ್ಲಿ ಎರಡು ಬೇರೆ ಬೇರೆ ಕಾರ್ಯಕ್ರಮಗಳು ನಡೆಯಬೇಕಾಗಿದ್ದುವು. ಒಂದು ವಿಜಾಪುರದ **ರುಕ್ಮಾಂಗದ ನಾಟ್ಯವಿಲಾಸಿ**ಗಳ 'ವೀರಕನ್ನಡಿಗ' ಎಂಬ ನಾಟಕ ಪ್ರದರ್ಶನ; ಇನ್ನೊಂದು **ಮಾಸ್ತರ್ ಮಲ್ಲಿಕಾರ್ಜುನ ಮನಸೂರ**ರವರ ಗಾಯನ. ಇಬ್ಬರೂ ದುಡ್ಡಿಟ್ಟು ತಮ್ಮ ತಮ್ಮ ಕಾರ್ಯಕ್ರಮ ಜರುಗಿಸಿಕೊಳ್ಳುವವರು. ಸಮ್ಮೇಳನದ ಸಂಚಾಲಕರು ಇದ್ದ ವೇಳೆಯನ್ನು ಇಬ್ಬರಿಗೂ ಹಂಚಿಹಾಕಿ, ಸಭಾಮಂಟಪವನ್ನು ಕೊಟ್ಟಿದ್ದರು. ಆದರೆ ಹಿಂದಿನ ಕಾರ್ಯಕಲಾಪಗಳ ಒತ್ತುವಿಕೆಯಿಂದ, ನಾಟಕವು ಮುಗಿಯಬೇಕಾಗಿದ್ದ ವೇಳೆಗೆ ಅದು ಆರಂಭವಾಯಿತು. ಮುಂದೆ ಮುಂದಿನ ಕಾರ್ಯಕ್ರಮವೂ ಪೋಲೀಸರ ಸಹಾಯವನ್ನು ಪಡೆದು ಒತ್ತತೊಡಗಿದುದರಿಂದ ನಡುವೆ ಸಿಕ್ಕ ನಾಟಕವೂ ನಟರೂ ಪ್ರೇಕ್ಷಕರೂ ವ್ಯವಸ್ಥಾಪಕರೂ ಜಿಬ್ಬಿಜಿಬ್ಬಿಯಾದರು. 'ಎನ್ರೀ! ಏನೋ ದುರಂತ ಕಾಣಸತದರೀ' ಎಂದು ಕೆಲವರು ಮಾತನಾಡ ತೊಡಗಿದರು. ಆದರೆ ವಿಜಾಪುರದ ನಾಟ್ಯವಿಲಾಸಿಗಳು ನಾಟಕವನ್ನು ದುರಂತವಾಗಿಸದೆ, ತಮ್ಮ ವಿವೇಕದಿಂದ ಸುಖಾಂತವಾಗಿಸಿದರು. ಮುಂದೆ ಮಾಸ್ತರ ಮನಸೂರರವರ ಸಂಗೀತವೂ ನಡೆಯಿತಂತೆ.

ಕೊನೆಯ ದಿನ

೨೯-೧೨-೪೯ನೆಯ ದಿನದ ಬೆಳಗಿನ ಕಾರ್ಯಕ್ರಮವೆಂದರೆ ಅದೆಲ್ಲ ಸಾಹಿತ್ಯಗೋಷ್ಠಿಯ ಚಾಲಗಸಿಯಾಗಿದ್ದಿತು. ಮಧ್ಯಾಹ್ನದ ವರೆಗದು ನಡೆದರೂ ಅನೇಕ ಸಾಹಿತ್ಯಿಕರಿಗೆ ಸಮಯಸಿಕ್ಕದೆ ನಿರಾಶರಾಗುವ ಸಂದರ್ಭ ಬಂದಿತು.

ಮಧ್ಯಾಹ್ನ ೧೨ ಗಂಟೆಗೆ ಪರಿಷತ್ತಿನ ವಾರ್ಷಿಕಾಧಿವೇಶನ ಸೇರಿತು. ಪ್ರಳಯ ಮೇಘಗಳೆದ್ದಿವೆಯೆಂಬ ಕಲ್ಪನೆಯಿದ್ದ ಬಹು

ಜನರಿಗೆ ಪಾರ್ಷಿಕಾಧಿವೇಶನದ ಎಲ್ಲ ಕಾರ್ಯಕಲಾಪಗಳೂ ಸುಯಂತ್ರಿತವಾಗಿ ನೆರವೇರಿದುದಕ್ಕಾಗಿ ತುಂಬ ಆಶ್ಚರ್ಯ ವಾಯಿತು. ಪರಿಷತ್ತಿನ ಮೂಲಘಟನೆಯಲ್ಲಿ ಮತ್ತೆ ಸ್ವಲ್ಪ ಹೆಚ್ಚುಕಡಿಮೆಯಾಯಿತು. ಇದುವರೆಗೆ ಯಾವ ಸ್ಥಾನ-ಅಧಿಕಾರಗಳೂ ಇಲ್ಲದಿದ್ದ ಸಮ್ಮೇಳನಾಧ್ಯಕ್ಷರು ಕಾರ್ಯಸಮಿತಿಯಲ್ಲಿ ಒಬ್ಬ ಸದಸ್ಯರಾಗಿರಬೇಕೆಂದಾಯಿತು. ಕಾರ್ಯ-ಸಮಿತಿಯ ಸದಸ್ಯರೆಲ್ಲ ತಂತಮ್ಮ ಪ್ರಾಂತ ಸಮಿತಿಗಳಲ್ಲಿಯೂ ಇದ್ದೇ ಇರಬೇಕೆಂದು ನಿರ್ಣಯವಾಯಿತು. ಸಾಮಾನ್ಯಸದಸ್ಯರು ವರ್ಷಕ್ಕೆ ೩ ರೂ., ೬ ರೂ. ಸಲ್ಲಿಸಬೇಕೆಂದೂ ೩ ರೂ. ಕೊಟ್ಟ ಸದಸ್ಯರಿಗೆ 'ಕನ್ನಡನುಡಿ'ಯನ್ನೂ, ೬ ರೂ. ಕೊಡುವವರಿಗೆ 'ಕನ್ನಡನುಡಿ' 'ಪರಿಷತ್ಪತ್ರಿಕೆ' ಗಳೆರಡನ್ನೂ ಪುಕ್ಕಟೆಯಾಗಿ ಕೊಡಬೇಕೆಂದೂ ಗೊತ್ತಾಯಿತು. ಹೊಸವರ್ಷದ ಅಧಿಕಾರಿಗಳ ಸದಸ್ಯರ ಆಯ್ಕೆಯು ಆಗಿ ಶ್ರೀ. ಬಿ. ಎಂ. ಶ್ರೀ. ಅವರೆ ಮತ್ತೆ ಉಪಾಧ್ಯಕ್ಷರಾದರು. ಆಗದೆ ಏನು ? ಅವರೊಡನೆ ಸ್ಪರ್ಧೆಗೆ ನಿಲ್ಲುವಷ್ಟು ಗುಣಗಳುಳ್ಳ ಮತ್ತೊಬ್ಬ ಹುರಿಯಾಳು ನಮಗೆ ಕಾಣುವನಾದರೂ ಎಲ್ಲಿ ?

ಅಂತೂ ಸಾ. ಸಮ್ಮೇಳನದ ಬಹಿರಂಗಾಧಿವೇಶನಕ್ಕೆ ಸಮಯವೊಮ್ಮೆ ಸಿಕ್ಕಿತು. ೨–೨॥ ಗಂಟೆಗಳಲ್ಲಿ ಸುಮಾರು ೪೦ ಗೊತ್ತುವಳಿಗಳು ಮುಂದೆ ಬಂದು ಪಾಸಾದುವು. ಒತ್ತಾಯದ ಹಿಂದೀ ಭಾಷಾ ಶಿಕ್ಷಣವನ್ನು ವಿರೋಧಿಸಿದ ಗೊತ್ತುವಳಿಯೊಂದನ್ನು ಬಿಟ್ಟರೆ ಮಿಕ್ಕುವೆಲ್ಲವೂ ಸರ್ವಾನುಮತದಿಂದ ಪಾಸು. ಅಲ್ಲದೆ ಅದೊಂದರ ಹೊರತು ಮಿಕ್ಕ ಗೊತ್ತುವಳಿಗಳು ಸಂಪ್ರದಾಯವನ್ನು ಅನುಸರಿಸಿಯೆ ಹೊರಟ ಪುನರುಚ್ಚಾರಗಳಾಗಿವೆ. ಮುಂದಿನ ಸಾಹಿತ್ಯಸಮ್ಮೇಳನದ ಅಧಿವೇಶನಕ್ಕಾಗಿ ಸಾಂಗಲಿಯಿಂದ ಔತಣ ಬಂದುದೊಂದು ವಿಶೇಷ ಸಂಗತಿ. ಅದರಂತೆಯೆ ಧಾರವಾಡ–ಯಾದಗಿರಿ– ದಾವಣಗೆರೆಗಳೂ ಔತಣ ಕೊಟ್ಟಿವೆ.

ಮಿಕ್ಕ ಮಾತುಗಳು

ಸಮ್ಮೇಲನಕ್ಕೆ ಬಂದ ಸಾಹಿತ್ಯಿಕರ ಸಹಿಯ ಬೇಟೆಯನ್ನಾಡುವ ವಿದ್ಯಾರ್ಥಿಗಳ ಸಂಖ್ಯೆ ಈಸಲ ಎಂದೂ ಇಲ್ಲದಷ್ಟಿದ್ದಿತು. ಕೆಲವರಂತೂ ದೊಡ್ಡದೊಂದು ಕಡತದಲ್ಲಿ ಹಲವು ಸಾಹಿತ್ಯಿಕರ ಛಾಯಾಚಿತ್ರಗಳನ್ನು ಸಂಗ್ರಹಿಸಿ, ಅಲ್ಲಲ್ಲಿ ಓರಣವಾಗಿ ಅಂಟಿಸಿ, ಚಿತ್ರದ ಕೆಳಕ್ಕೆ ಅವರವರ ಅಂಕಿತಗಳನ್ನು ಬರೆಯಿಸಿಕೊಳ್ಳುತ್ತಿದ್ದರು.

ಕನ್ನಡನಾಡಿನ ಮೂಲೆಮೂಲೆಗಳಲ್ಲಿಯೂ ಹೊರಡುತ್ತಿರುವ ಹಸ್ತಲಿಖಿತ ಪತ್ರಿಕೆಗಳ ಸಂಪಾದಕರು ಈ ಸಲ ತಮ್ಮ ಪತ್ರಿಕೆಗಳೊಂದಿಗೆ ಸಮ್ಮೇಳನಕ್ಕೆ ಬಂದಿದ್ದರು.

ಆಧುನಿಕ ವಾಙ್ಮಯದ ಪ್ರದರ್ಶನವೋ ಎಂದು ಭಾಸವಾಗುವಂತೆ ಹಲವು ಪುಸ್ತಕದ ಅಂಗಡಿಗಳು ಬಂದಿದ್ದುವು.

ಎಲ್ಲಕ್ಕೂ ಹೆಚ್ಚಿನದೆಂದರೆ ಜನರಲ್ಲಿ ಕಂಡುಬಂದ ಉತ್ಸಾಹವು. ಸಮ್ಮೇಳನದ ಮಂಟಪದಲ್ಲಿ ಸೇರಿದ ಜನರಲ್ಲಿ ಬೇಸರವೆಂಬುದೆ ಕಂಡುಬರುತ್ತಿರಲಿಲ್ಲ. ಸಾವಿರಾರು ಸಂಖ್ಯೆಯಲ್ಲಿ ಸ್ತ್ರೀಯರು ಸೇರಿ, ಸುಮ್ಮಗೆ ಕುಳಿತು ಸಮ್ಮೇಳನದ ಕಾರ್ಯಕ್ರಮವನ್ನೆಲ್ಲ ನೋಡಿದುದೂ ಕೇಳಿದುದೂ ಉತ್ತರ-ಕರ್ನಾಟಕದ ಹೊಸಕಾಲದ ಇತಿಹಾಸದಲ್ಲಿಯೆ ಮೊದಲನೆಯದು.

ಸಮ್ಮೇಳನದ ಕಾಲದಲ್ಲಿ ದಿನದಿನವೂ ಬೆಳಗಿನ ಎಂಟು ಗಂಟೆಗೆ ಕನ್ನಡ ಬಾವುಟದ ವಂದನೆ ನಡೆಯುತ್ತಿದ್ದಿತು. ಆಗಿನ ನೋಟ ಅಭಿಮಾನಿಗಳೆದೆಯನ್ನು ಜುಮ್ಮೆಂದಿಸುವಂತಹದು.

'ಏರಿಸಿ, ಹಾರಿಸಿ, ಕನ್ನಡದ ಬಾವುಟ !'

ಮುನ್ನೂರು ರೂಪಾಯಿ ಗಳಿಸಿರಿ !



ಐದುವರ್ಷ ಗ್ಯಾರಂಟಿಯುಳ್ಳ ಅಷ್ಟಕೋನಾಕೃತಿಯ ಸುಂದರವಾದ ಕ್ರೋಮಿಯಂ ಸ್ವಿಸ್‌ಲಿವರ ರಿಸ್ಟ್‌ವಾಚ್

ಮಿಕ್ಕ ಕಡೆಗೆ ೧೮ ರೂ. ಗಳಿಗೆ ಮಾರುವುದನ್ನು ನಾವು ಕೇವಲ ೪–೮–೦ ಗಳಿಗೆ ಕೊಡುತ್ತೇವೆ. ಇದೇ ಬಂಗಾರಗಿಲೀಟುಳ್ಳದ್ದಕ್ಕೆ ೫–೮–೦. ದುಂಡಗೆ ಅಥವಾ ಚೌಕಾಗಿ ಇರುವುದು ೩–೮–೦; ಇದೇ ಬಂಗಾರ ಗಿಲೀಟುಳ್ಳದ್ದಕ್ಕೆ ೯–೮–೦. ಸ್ತ್ರೀಯರಿಗಾಗಿ ಸಣ್ಣ ಅಷ್ಟಕೋಣಾಕೃತಿಯ ವಾಚು ೭–೮–೦. ದುಂಡಗಿನದು ೪–೮–೦. ಪ್ಯಾಕಿಂಗು ಪೋಸ್ಟೇಜುಗಳಿಗಾಗಿ ೦–೯–೦ ಬೇರೆ ಬೀಳುವುದು. ಒಮ್ಮೆಲೆ ಮೂರು ವಾಚುಗಳನ್ನು ತರಿಸಿಕೊಳ್ಳುವವರಿಗೆ ಪೋಸ್ಟೇಜು ಪುಕ್ಕಟೆ.

The American Commercial Stores,
Post Box No. 12213, Calcutta (J)

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ, ೬ ಆಣೆಗೆ ಒಂದು ಸೆಟ್ಟು.



೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೬ ಆಣೆ.

ನಗೀಗೆ ನೇವಿದ್ಯಾ

ಅಪ್ಪನ ಪಕ್ಷಪಾತ

"ಸುಧಾ, ನಿಮ್ಮ ಸಾಲೀ ಅಕ್ಕಾಅವರ ಕಡಿಂದಽ ಪತ್ರಬಂದಽದ ಅಲಾ.."

"ಬರವೊಲ್ಲದ್ಯಾಕ ಬಿಡು; ಅವ್ವಗ ಅದರೊಳಗಿಂದೊಂದು ಅಕ್ಷರಸುದ್ಧಾ ಹೇಳೂದಿಲ್ಲ ನಾನು!"

* * *

ಗಂಡ ಗಳಿಸಿಟ್ಟ ದುಡ್ಡು

ರಮಾ:— ಅಲ್ಲಽ ರಾಧಾ, ನಿನ್ನ ಗಂಡ ಗೋವಿಂದರಾಯರು, ಗಳಿಸಿಟ್ಟ ದುಡ್ಡಿನ ಸಲುವಾಗಿ ನಿನಗೇನಾದರೂ ಹೇಳತಿರತಾರೇನು?

ರಾಧಾ:— ಹೇಳದೆ ಏನು? ನಾನು ಎಂದಾದರೂ ಏನಾದರೂ ಬೇಕಾಗಿ ಕೇಳಿದರ, ಒಂದು ಚಿಪ್ಪಡುಕಾಸು ಕೂಡಾ ಇಲ್ಲಾ.. ಅಂತ ಹೇಳತಿರತಾರ!

* * *

ಸಾಯಿನ್ಸಿನ ಸಾರಿಕೆ

"ನೋಡ್ರಿ ಈ ಆಫೀಸಿನ ತ್ರಾಸನ್ನ ನಾ ಮನೀಗೆ ಎಂದೆಂದೂ ಕಟಕೊಂಡು ಹೋಗತಿರೂದಿಲ್ಲ!"

"ಹೌದು; ಒಂದು ಅವಕಾಶವನ್ನು ಒಂದು ವಸ್ತು ಪೂರ್ಣವಾಗಿ ವ್ಯಾಪಿಸಿರುವಾಗ, ಅಲ್ಲಿ ಎರಡನೆಯ ವಸ್ತುವಿಗೆ ಆಸ್ಪದ ದೊರೆಯುವುದು ಶಕ್ಯವೇ ಇಲ್ಲವೆಂದು ನಮ್ಮ ಸಾಯಿನ್ಸೇ ಹೇಳುತ್ತದಲ್ಲ!"

* * *

ಸೇರಿಗೆ ಸವ್ವಾಸೇರು

ಒಬ್ಬ ಮನುಷ್ಯ ಊಟದ ಮನೆಗೆ ಹೋದ ಮೇಲೆ, ತನ್ನ ಬೆಲೆಬಾಳುವಂತಹ ಕೋಟನ್ನು ತೆಗೆದು ಅಲ್ಲಿಯೆ ಇದ್ದ ಮೊಳೆಯೊಂದಕ್ಕೆ ನೇತುಹಾಕಿದನು; ಬಳಿಕ ಅದರಮೇಲೊಂದು ಚೀಟಿಯನ್ನು ಬರೆದು ಅಂಟಿಸಿದನು. ಅದು ಹೀಗೆ ಇದ್ದಿತು:—

"ಈ ಕೋಟು ಜಟ್ಟಿಗಾಳಿಗದಲ್ಲಿ ಜಯಶಾಲಿಯಾದವನದಿದೆ. ಹತ್ತು ನಿಮಿಷಗಳಲ್ಲಿ ಮರಳಿ ಬರುವನು!"

ಮರಳಿ ಬಂದು ಕೋಟನ್ನು ನೋಡುತ್ತಾನೆ; ಇಟ್ಟ ಸ್ಥಳದಲ್ಲಿ ಇರಲಿಲ್ಲ; ಆದರೆ ಅಲ್ಲಿಯೆ ಅಂಟಿಸಿದ್ದ ಚೀಟಿಯಲ್ಲಿ ಹೀಗೆಂದು ಬರೆಯಲಾಗಿತ್ತು:

"ಪಲಾಯನಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದವನು ಕೋಟನ್ನು ಒಯ್ದಿದ್ದಾನೆ. ಮರಳಿ ಬರಲಾರನು!"

* * *

ಗಂಡಸ ಕಡಬು ಗುಂಡನಿಗೆ

"ನಿನ್ನೆ ಕ್ಲಬ್ಬಿನಿಂದ ಮನಿಗೆ ಹೋಗಲಿಕ್ಕೆ ರಾತ್ರಿ ಬಹಾಳ ಆಯಿತೇನ್ರೆಪಾ! ಅಷ್ಟರೊಳಗ ಏನಾಗೇದಂತೀರಿ: ಕಳ್ಳ ಒಬ್ಬ ಮನ್ಯಾಗ ಹೊಕ್ಕ್ಯಾನ..!"

"ಹೀಂಗೇನು? ಅಲ್ಲಿಂದೇನಾತು?"

"ಆಗೂದೇನು.. ನಮ್ಮಾಕಿಗೆ ಅನಿಸಿತಂತ ನಾನೇ ಬಂದಿರಬಹುದೂ ಅಂತ.. ನಿದ್ದಿಗಣ್ಣಾಗ ಇರಬಹುದು!"

"ಸರಿ, ಮುಂದೇನಾಯ್ತು?"

"ಆ ಕಳ್ಳನ್ನ ಆಸ್ಪತ್ರೆಗೆ ಕಳಿಸಬೇಕಾತು. ಅವನ ಸ್ಥಿತಿ ಚಿಂತಾಜನಕ ಆದಽ ಅಂತ ಅಲ್ಲೀ ಡಾಕ್ಟರು ಹೇಳತಿದ್ರು!"

* * *

ವಕೀಲರೆಂದರೆ ಯಾರು?

"ಅಪ್ಪಾ, ವಕೀಲರು ವಕೀಲರು ಅಂತ ಅಂತಿರತಾರ. ವಕೀಲರಂದರೆ ಯಾರು?"

"ಇಬ್ಬರು ಜಗಳಗಂಟರಿಗೆ ಕುಸ್ತೀಹಚ್ಚಿ, ಅವರು ಕುಸ್ತೀ ಕಣಕ್ಕ ಇಳಿದ ಕೂಡಲೆ, ಅವರ ಬಟ್ಟೆಬರೀ ಇದ್ದುಬಿದ್ದದ್ದನ್ನೆಲ್ಲಾ ತೊಗೊಂಡು ಓಡಿಹೋಗುವವರಿಗೆ ವಕೀಲರು ಅಂತಾರ, ತಿಳೀತೇನು?"

* * *

ಮುಖಸಾಮುದ್ರಿಕಜ್ಞ

ಧರಿಯಪ್ಪಾ ಕುರಿ ಎಂಬವನನ್ನು ಸೆಶನ್ ಕೇಸೊಂದರಲ್ಲಿ ಅಸೇಸರನನ್ನಾಗಿ ನಿಯಮಿಸಲಾಗಿತ್ತು. ಮೊದಲನೆಯ ದಿನ ಕೋರ್ಟು ಪ್ರಾರಂಭವಾಗಿ ಕೆಲವು ನಿಮಿಷಗಳು ಕಳೆದಿದ್ದವು; ಆಗ ಧರಿಯಪ್ಪನು ಒಮ್ಮೆಲೆ ಎದ್ದು ಹೇಳಿದನು:

"ತಡೀರಿ, ತಡೀರಿ, ಈ ಖಟ್ಲೀನ ಮುಂದ ನಡಸಾಕ ಬೇಕಾಗೇ ಇಲ್ಲ ಇನ್ನಮ್ಯಾಗ!"

"ಅದ್ಯಾಕ?" ನ್ಯಾಯಾಧೀಶ ಗಾಬರಿಯಾಗಿ ಕೇಳಿದ.

"ಇದೇನ ಇಲ್ಲಿ ನಿಂತಾನ ನೋಡ್ರಿ; ಇಂವಾ ಪಕ್ಕಾ ಬದ್ಮಾಸ್ ಆದಾನಂತ ಹೇಳಲಿಕ್ಕೆ ಸಾಕ್ಷೀ ಬೇಕಿಲ್ಲ, ಪುರಾವೇ ಬೇಕಿಲ್ಲ, ಒಂದೂ ಬೇಕಿಲ್ಲ. ಮಾರೀ ನೋಡಿದರಽ ಸಾಕು, ಗೊತ್ತಾಗತೈತಿ!"

"ಏನ್ರೀ; ನೀವು ಯಾರನ್ನು ಕುರಿತು ಈ ಮಾತು ಹೇಳ್ತೀರಿ? ಅವರು ಆರೋಪೀ ಅಲ್ಲ; ಸರಕಾರೀ ವಕೀಲರು ತಿಳಿತೇನು?" ಎಂದು ಕೋರ್ಟು ತಿಳಿವಳಿಕೆ ಕೊಟ್ಟಿತು. ಕೋರ್ಟಿನಲ್ಲಿ ಕಳ್ಳನಗೆ ಹರಿದಾಡಿತು.

* * *

ತಿಕೀಟು ಬೇಕಾದ ಪ್ರವಾಸಿಗ

ಸ್ಟೇಶನ್ ಮಾಸ್ತರ್:—ಏನಪಾ, ನಿನಗ ಯಾವ ಟಿಕೀಟು ಬೇಕು?

ಹಳ್ಳಿಯ ಪ್ರವಾಸಿ:—ಯಾವದಂತೇನ ಕೇಳತೀರೀ? ಅಗ್ಗಿನಗಾಡೀ ತಿಕೀಟಽ ಅಲ್ಲೇನ್ರಿ ನೀವ ಮಾರಾಟಕ್ಕ ಇಟ್ಟರೋವ್ರು? ಊರಿಗೆ ಹೊಂಟೇನಂದಮ್ಯಾಗ ಏನು ಸರ್ಕಽಸು—ಸಿನೇಮಾದ ಟಿಕೀಟು ತೊಗೊಳ್ಳೊದೈತೇ? ಗಾಡೀ ತಿಕೀಟನಽ ಕೊಡ್ರೀ ರಾಯರಽ ಹಿಂಗ್ಯಾಕ ಮಾಡತೀರಿ ಹಳ್ಳೀ ಊರ ಮಳ್ಳರ್ಹಾಂಗ!



ಅಳಿಯನ ಮುನಿಸು

ಇಂದು ಕರ್ನಾಟಕದಲ್ಲಿ ಮುಂದಾಳುಗಳೆನಿಸಿಕೊಳ್ಳುವವರು ನಡೆಯಿಸಿದ ಕಾರ್ಯಸಂನ್ಯಾಸದ ಮೇಲಾಟಕ್ಕೆ ಇದನ್ನುಳಿದು ಮತ್ತಾವ ಹೆಸರೂ ಸಮರ್ಪಕವಾಗಲಾರದು. ಮದುವೆಯ ಶಾಸ್ತ್ರ ಮುಗಿದಮೇಲೆ ಮುನಿಯುವ ಅಳಿಯನೂ, ಮಾಡುವ ಕೆಲಸ ನೀಗದಾಗ ಸಂನ್ಯಾಸ ಸ್ವೀಕರಿಸುವುದೂ ಒಂದೇ ಅಲ್ಲವೆ ? ಕೆ. ಪಿ. ಸಿ. ಸಿ. ಯ ರಾಜಕಾರಣದಲ್ಲಿ ಈ ದುರವಸ್ಥೆ ಬರಬಹುದೆಂಬುದನ್ನು ೪-೬ ತಿಂಗಳುಗಳಿಂದ ಒಂದೇಸವನೆ ನಾವಿಲ್ಲಿ ಸೂಚಿಸುತ್ತ ಲಿದ್ದೇವೆ. ಇಂತಹ ಅನಿಷ್ಟಪರಿಣಾಮದಲ್ಲಿ ನಮ್ಮ ಮಾತು ಅಸತ್ಯ ವಾಗಲೆಂದು ನಾವು ಬಯಸಿದ್ದೇ ಬಯಸಿದ್ದು; ಆದರೇನು ? ಪರಿಸ್ಥಿತಿಯ ಒತ್ತಾಯದಿಂದಲೊ ಮುಂದಾಳುಗಳ ಅಲಕ್ಷ್ಯದಿಂದಲೊ ಇಲ್ಲವೆ ಕಿಡಿಗೇಡಿಗಳ ಕೆಲಸದಿಂದಲೊ-ಕೊನೆಗೆ ಬೇಡವಾದ ಅನಿಷ್ಟವೆ ಬಂದೊದಗಿತು ! ಇಪ್ಪತ್ತು ವರುಷಗಳ ವರೆಗೆ ಮುಂದಾಳುತನ ವನ್ನು ವಹಿಸಿದವರು ಹಿರಿತನದಿಂದಾಗಲಿ,ಅನುಭವದ ಶಕ್ತಿಯಿಂದಾಗಲಿ, ಅನಿಷ್ಟ ನಿವಾರಣೋಪಾಯವನ್ನು ತೋರಿಸದೆ ಕಾರ್ಯರಂಗ ದಿಂದ ವಿಮುಖರಾಗುತ್ತಲಿದ್ದಾರೆ ! ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಇಂದಿನ ಪರಿಸ್ಥಿತಿಗೆ ಅವರ ಸಂಬಂಧವಿದೆ ; ಪ್ರಾಂತದಲ್ಲಿ ಮಾಡಬೇಕಾದ ಕೆಲಸ ಬೆಟ್ಟದಂತೆ ನಿಂತಿದೆ ; ಇಂದೊ ನಾಳೆಯೊ ಸ್ವಾತಂತ್ರ್ಯ ಯುದ್ಧಕ್ಕೆ ಉಗ್ರಸ್ವರೂಪ ಬರುವುದರಲ್ಲಿದೆ. ಬಿತ್ತಿದ್ದನ್ನು ಬೆಳೆದುಕೊಳ್ಳಬೇಕಾದಾಗ ರಾಜೀನಾಮೆಗಳ ಸುರಿಮಳೆ !

ನೈಸರ್ಗಿಕ ಪ್ರಗತಿ ಇದಲ್ಲ

ಹಳೆಯದು ಕೊಳೆತ ಗೊಬ್ಬರದಲ್ಲಿ ಹೊಸತು ಚಿಗಿಯುವುದು ನಿಸರ್ಗದ ನಿಯಮವಿದೆ; ನಿಜ. ಆದರೆ ನಮ್ಮ ಪ್ರಾಂತದ ರಾಜಕಾರಣದ ಪ್ರಗತಿಯಲ್ಲಿ ಅಂತಹ ಪರಿವರ್ತನೆಯಾಗಿ ಇಂದಿನ ಪ್ರಸಂಗ ಬಂದಿದೆ ಎಂದು ಹೇಳಬೇಕೆ ? ಇಪ್ಪತ್ತು ವರ್ಷ ಕಾರ್ಯಧುರವನ್ನು ವಹಿಸಿದವರು ಇಂದು ಅದನ್ನು ಇಳಿಸುವುದು ಯಾಕೆ ? ಇನ್ನೊಬ್ಬರು ಅದಕ್ಕಾಗಿ ಸಮರ್ಥರಿದ್ದಾರೆಂದೆಯೆ ? ತಾವು ಅಸಮರ್ಥರೆಂದು ತಮಗೆಯೆ ತಿಳಿದಿದೆ ಎಂದೊ ? ಅಲ್ಲ. ಇವೆರಡೂ ಕಾರಣಗಳಿಗಾಗಿ ಅಲ್ಲ. ಇಂದು ಕಾರ್ಯಧುರವನ್ನು ವಹಿಸುವ ಯೋಗ್ಯತೆಯ ತರುಣರು ಮುಂದೆ ಬಂದಿಲ್ಲವೆಂಬುದು ಎಲ್ಲರಂತೆ ಈ ರಾಜೀನಾಮೆಯ ರಾಷ್ಟ್ರಭಕ್ತರಿಗೂ ಗೊತ್ತಿದೆ ; ಆದರಂತೆಯೆ ತಮ್ಮ ಶಕ್ತಿ ಇನ್ನೂ ಅಳಿದಿಲ್ಲ ಎಂಬುದನ್ನು ಇವರು ತಮ್ಮ ಹೇಳಿಕೆಗಳಲ್ಲಿ ಸೂಕ್ಷ್ಮವಾಗಿ ಪ್ರಕಟಿಸಿದ್ದಾರೆ. ಹಾಗಾದರೆ ರಾಜೀನಾಮೆಯ (ಅದಕ್ಕೆ ಸಂನ್ಯಾಸ ಎಂಬ ಹೆಸರು) ಪ್ರಸಂಗ ಯಾಕೆ? ತತ್ತ್ವಗಳ ತಿಕ್ಕಾಟವಿದೆ ಎನಬೇಕೆಂದರೆ ಅವುಗಳ ಸುಳಿದಾಟ ಕೂಡ ಇಲ್ಲ. ಹಾಗಿದ್ದುದಾದರೆ ಚುನಾವಣೆಯಲ್ಲಿ ಹೋರಾಡಿ, ಪ್ರಜಾಪ್ರಭುತ್ವದಲ್ಲಿ ನಿಜವಾದ ಪ್ರಭು ಎನಿಸುವ ಮತದಾರರ ನಿರ್ಣಯವನ್ನು ಕೋರಬೇಕಾಗಿತ್ತು ; ಸ್ವಲ್ಪೇದಿವಸಗಳಲ್ಲಿ ಚುನಾವಣೆಯೂ ಜರುಗುವುದಿದ್ದಿತು. ನಿಸರ್ಗಪ್ರಾಪ್ತವಲ್ಲ, ತತ್ತ್ವದ ತಳಹದಿ ಇಲ್ಲ. ಪ್ರಜಾಪ್ರಭುತ್ವದ ವಿಧಿಯೂ ಅಲ್ಲ !

ನೀತಿಯ ನಿಬಿಡಾರಣ್ಯ

ಹೀಗೆ ನಮಗೆ ಅಸಮರ್ಥನೀಯವೆನಿಸಿದರೂ ಈ ಮುಂದಾಳುಗಳು ತಮ್ಮ 'ಹೇಳಿಕೆ' ಗಳಲ್ಲಿ ಕೆಲವು ಕಾರಣಗಳನ್ನು ತೋರಿಸಿದ್ದಾರೆ. ಮೊದಲನೆಯದೆ ನೀತಿಯ ನಿಬಿಡಾರಣ್ಯ. ಸತ್ಯ-ಅಹಿಂಸೆಗಳನ್ನು ಪಾಲಿಸುವವರಿಗೆ, ಸತ್ಯಾಗ್ರಹವೃತ್ತಿಯವರಿಗೆ ಇಂತಹ ಸಂನ್ಯಾಸವೆ ಕೆಲವು (ಅಥವಾ ಇಂತಹ) ಸಂದರ್ಭಗಳಲ್ಲಿ ಸಮಯೋಚಿತವೆನಿಸುವುದು' ಎಂಬುದೊಂದು. ಈ ಮಾತಿಗೆ ಮರುಮಾತನ್ನಾಡುವುದೆ ಇಂದಿನ ಕಾಲದಲ್ಲಿ ಧೈರ್ಯವೆನಿಸುವುದು. ಯಾಕೆಂದರೆ, ತಾವು ಹೇಳಿದ್ದೇ ಸತ್ಯ, ತಾವು ಮಾಡಿದ್ದೇ ಅಹಿಂಸೆ ಎಂಬುದೊಂದು 'ಪಿತ್ತಾಗ್ರಹ' ನಮ್ಮ ರಾಜಕೀಯ ಪಕ್ಷಗಳಲ್ಲಿ ಸೇರಿಕೊಳ್ಳುತ್ತಲಿದೆ. ಇದಲ್ಲದೆ ಈ 'ಹೇಳಿಕೆ' ಗಳಲ್ಲಿ ಉಪಯೋಗಿಸಿದ ಭಾಷೆಯನ್ನೂ ಶಬ್ದಗಳನ್ನೂ ನೋಡಿದರೆ ಇದೊಂದು ಸತ್ಯ-ಅಹಿಂಸೆಗಳ ಹೊಸಮಾದರಿ ಎಂದು ತೋರುವಂತಿದೆ. 'ನಮ್ಮ ವಿರೋಧಿಗಳು' 'ಸ್ವಾರ್ಥಿಗಳು' 'ಮತ್ಸರಬುದ್ಧಿ' 'ಕುಹಕ ವೃತ್ತಿ' 'ಅಧಿಕಾರಲಾಲಸೆ' ಮುಂತಾದ ಶಬ್ದಗಳನ್ನು ಎದುರಾಳಿಗಳಿಗಾಗಿ ಈ ಹೇಳಿಕೆಗಳಲ್ಲಿ ಉಪಯೋಗಿಸಿದೆ. ಇದೆಂತಹ ಸತ್ಯಾಗ್ರಹದ ಶಬ್ದಕೋಶ! ಇದಲ್ಲವೆ ಆಕ್ರೋಶ? ಮತಿಗೆಟ್ಟವರ ಗತಿಗೆಟ್ಟವರ ಆಕ್ರೋಶ! ಯಾವ ನೀತಿಯಾದರೇನು, ಮಿತಿ ಎಂಬುದು ಬೇಕಲ್ಲವೆ, ಸಂಯಮನ ಬೇಕಲ್ಲವೆ, ಸಹಿಷ್ಣುತೆ ಬೇಕಲ್ಲವೆ ?

ಜಾತಿಯ ಜರಾಸಂಧ

ಇನ್ನೂ ಒಂದು ಕಾರಣವಿದೆ. ರಾಮದುರ್ಗದ ಶೋಚನೀಯ ಘಟನೆಯ 'ಇತ್ತೀಚೆಗೆ ಜಾತಿಭಾವನೆ ವಿಕೋಪಕ್ಕೆ ಹೋಗಿದೆ ಎಂದೂ ತಮ್ಮ ವಿಷಯವಾಗಿ ಆರೋಪ-ಅಪಪ್ರಚಾರ ನಡೆದಿದೆ

ಎರಡೂ ಅದಕಾಗಿ ಸಂನ್ಯಾಸವೆ ಯುಕ್ತಾಯುಕ್ತವೆಂದೂ ಈ ಹೇಳಿಕೆಗಳ ತಿರುಳಾಗಿದೆ. ಒಂದು ನಿಮಿಷ ಅವರ ಕಾರಣವನ್ನು ಒಪ್ಪೋಣ; ಆದರೆ ಆ ಕಾರಣಕ್ಕಾಗಿ ಅವರು ಸ್ವೀಕರಿಸಿದ ಧೋರಣವು ಸರಿಯಾದುದು ಹೇಗೆ ಎಂಬುದು ಬುದ್ಧಿಗೂ ಭಾವನೆಗೂ ಅಗಮ್ಯ. ಜಾತಿಭಾವನೆ ವಿಕೋಪಕ್ಕೆ ಹೋದರೆ ಅದನ್ನು ಸರಿಪಡಿಸುವುದು ಅಗತ್ಯ; ಆ ಕೆಲಸವು ಮುಂದಾಳುಗಳೆನಿಸಿಕೊಳ್ಳುವವರ ಮೊದಲ ಹೊಣೆಗಾರಿಕೆ. ಆದರೆ ಅಧಿಕಾರ ಸಂನ್ಯಾಸವನ್ನೆ ಮಾಡಿದ ಮೇಲೆ ಇವರು ತಮ್ಮ ಹೊಣೆಗಾರಿಕೆಯನ್ನು ಸಾಧಿಸಿಕೊಳ್ಳುವುದು ಹೇಗೆ! ಮುಂದಾಳುತನದಲ್ಲಿ ವೈಭವಕ್ಕಿಂತ ವಿಧೇಯತೆ ಹೆಚ್ಚಾಗಿ ಇರಬೇಕಾದುದು. ಜಾತಿಭಾವನೆಯಿಂದ ಪ್ರಾಂತವು (ಇವರ ಹೇಳಿಕೆಯಂತೆ) ಹೀನ ಸ್ಥಿತಿಗಿಳಿಯುವಾಗ, ಉಳಿಸಲು ಮುಂದಾಗಬೇಕೊ ಅಥವಾ ಉಳಿದುಕೊಳ್ಳಲು ಹಿಂದೆ ಸರಿಯಬೇಕೋ ? ತಮ್ಮ ಸಂನ್ಯಾಸದಿಂದಲೆ ಸ್ಥಿತಿ ಸುಧಾರಿಸುವುದೆಂದು ಅವರು ನಿಜವಾಗಿಯೆ ತಿಳಿದಿದ್ದರೆ ಅವರ ಬುದ್ಧಿಶಕ್ತಿಗಾಗಿ ಬೆರಳುಕಚ್ಚಬೇಕಲ್ಲದೆ ಬೆನ್ನುಚಪ್ಪರಿಸಲಾಗದು; ಯಾಕೆಂದರೆ ವಸ್ತುಸ್ಥಿತಿ ನಮ್ಮೆದುರಿಗಿದೆ. ಇಂದು ಸಂನ್ಯಾಸ ಸ್ವೀಕರಿಸಿದವರೆಲ್ಲ ಒಂದೇ ಜಾತಿಯವರು; ಅರ್ಥಾತ್ ಅಧಿಕಾರ ಪದಕ್ಕೆ ಇನ್ನು ಮತ್ತೊಂದು- ಆದರೆ ಒಂದೇ—ಜಾತಿಯವರೇ ಬರಬಹುದಾಗಿದೆ. ಯಾರು 'ಅಪಪ್ರಚಾರಕ'ಮುಂತಾಗಿ ಇವರಿಂದಲೆ ಬಿರುದುಗಳನ್ನು ಪಡೆದಿರುವರೊ ಅಂತಹರೆ ಅಧಿಕಾರಪದಕ್ಕೆ ಬರಬಹುದು! ಹೀಗೆ ಕೊಲೆಯಬಹುದೆ ಜಾತಿಜರಾಸಂಧನನ್ನು ? ಇಂತಹ ಉಪಾಯಗಳಿಂದ ಆಗಾಗ ಕಡಿದು ಬಿದ್ದಂತಿದ್ದರೂ ಮುಂದೆ ಕೂಡಿಕೊಂಡು ಸಿಡಿದೆದ್ದಿದೆ ಈ ಜರಾಸಂಧನ ದೇಹ.

ಕರ್ನಾಟಕದ ದುರ್ದೈವ

ರಾಜಕಾರಣದಲ್ಲಿ ನಾವು ಇಂತಹದೊಂದು ಪಕ್ಷವನ್ನು ವಹಿಸಿಕೊಂಡಿಲ್ಲ ; ಈಗಲಾದರೂ ಇಂತಹದೊಂದು ಪಂಗಡವನ್ನು ಹೊಡೆದೋಡಿಸಬೇಕೆಂದು ನಮ್ಮ ದುರಾಶೆ ಇಲ್ಲ. ಕರ್ನಾಟಕಕ್ಕೆ ಪದೇಪದೇ ದುರ್ದೈವದ ಆಘಾತಗಳೊದಗುತ್ತಿವೆಯಲ್ಲ—ಎಂಬ ಕಳವಳದಿಂದ ನಾವೀ ಚರ್ಚೆಯನ್ನು ಎತ್ತಿದ್ದು. ಗಾಂಧೀಯುಗ ಪ್ರಾರಂಭವಾದೊಡನೆ ನವಚೈತನ್ಯವಂಕುರಿಸಿತ್ತು ನಮ್ಮ ಪ್ರಾಂತದಲ್ಲಿ. ಅಂದಿನ ಕನಸುಗಳನ್ನು ಇಂದು ನೆನೆಸಿಕೊಳ್ಳಬಹುದೆ ? ಅಂದು ಇದ್ದುದರ ಹತ್ತರಷ್ಟು ಸಾರ್ವಜನೀನವಾಗಿ ಇಂದು ಜಾತೀಯ ಪರಸ್ಪರ-ಅವಿಶ್ವಾಸ ನಮ್ಮಲ್ಲಿ ಹಬ್ಬಿದೆ; ಏಕೀಕರಣಕ್ಕಾಗಿ ಆಗ ಸಮಗ್ರವಾಗಿ ಉತ್ಸಾಹವಿದ್ದಿತು, ಅದೇ ಏಕೀಕರಣ ಇಂದು ಯಾದವೀಮುಸಲವಾಗಿದೆ; ಅಂದು ಕನ್ನಡಕ್ಕಾಗಿದ್ದ ಅಭಿಮಾನವು ಇಂದು ವಿಟಪುರುಷನಂತೆ ಹಿಂದೀಭಾಷೆಯನ್ನು ಹಿಂಬಾಲಿಸುತ್ತಿದೆ ; ಉತ್ತರಕರ್ನಾಟಕಕ್ಕೆ ನವಸಂಸ್ಕೃತಿಯ ಕೇಂದ್ರವಾಗಬಹುದಾದ ಧಾರವಾಡದಿಂದ ಇಂದು ಒಂದೊಂದಾಗಿ ಸಾಂಸ್ಕೃತಿಕ ಸಂಸ್ಥೆಗಳು ಅಧಿಕೃತವಾಗಿ ಸ್ಥಳಾಂತರಿಸುತ್ತಲಿವೆ; ಇಪ್ಪತ್ತು ವರ್ಷಗಳಲ್ಲಿ ಪ್ರತಿಯೊಂದು ಪ್ರಾಂತಕ್ಕೆ ಒಬ್ಬ ನಾಯಕ ದೊರಕಿದನು; ನಮ್ಮಲ್ಲಿ ಆ ಅವಧಿಗೆ ನಾಯಕರಾಗಬೇಕಾದವರು ಸಂನ್ಯಾಸಕ್ಕೆ ಸೆರಗೊಡ್ಡಿದ್ದಾರೆ! ಈ ಇಪ್ಪತ್ತು ವರ್ಷಗಳ ಇಂತಹ ವರದಿಯನ್ನು ನೋಡಿಯಾದರೂ ಮುಂದಾಳುಗಳೆನಿಸಿಕೊಳ್ಳುವವರು ಹುಮ್ಮಸದಿಂದ ಮುಂದೆ ಬರಬೇಕಾಗಿತ್ತು. ಆದರೆ ವಸ್ತುಸ್ಥಿತಿ ಎಲ್ಲ ವಿಪರೀತ! ಅದಕ್ಕೇ ಇದೊಂದು ಕರ್ನಾಟಕದ ದುರ್ದೈವ—ಎಂದು ನಾವು ಹೇಳುವುದು.

ಜಾತಿಭಾವನೆ ಜನತೆಯಲ್ಲಿದೆಯೆ?

ಮುಗಿದ ಮಾತಿನ ಚರ್ಚೆ ಸಾಕಿನ್ನು. ವಸ್ತುಸ್ಥಿತಿಯನ್ನು ನಿರೀಕ್ಷಿಸುವಾ. ನಮ್ಮ ಪ್ರಾಂತದಲ್ಲಿ ಜಾತಿಭಾವನೆ ಇದೆಯೆ—ಇದ್ದರೆ ಯಾವ ಸ್ವರೂಪದ್ದು ಮತ್ತು ಎಷ್ಟು ಪ್ರಮಾಣದಲ್ಲಿ—ಎಂಬುದನ್ನು ನಾವೀಗ ಧೈರ್ಯದಿಂದ ನೋಡಲೇಬೇಕು. ಸಾಮಾನ್ಯಜನತೆಯ ದೃಷ್ಟಿಯಿಂದ ಹೇಳುವುದಾದರೆ—ಇವೆಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರವಿಲ್ಲ. ವ್ಯವಹಾರದಲ್ಲಿ, ಸಮಾಜದಲ್ಲಿ, ಶಿಕ್ಷಣಸಂಸ್ಥೆಗಳಲ್ಲಿ, ಕೋರ್ಟು-ಕಚೇರಿಗಳಲ್ಲಿ—ಜಾತಿಯೆ ನಮ್ಮ ನಡತೆಯನ್ನು ಗೊತ್ತುಪಡಿಸುತ್ತಿದೆ ಎಂದು ಹೇಳಲಾಗದು. ಜಾತಿಯ ದೃಷ್ಟಿ ನಮ್ಮ ಸಾರ್ವಜನಿಕ ವ್ಯವಹಾರದಲ್ಲಿ ಸೇರಲು ಎರಡು ಕಾರಣಗಳಿವೆ. (೧) ಒಂದು ಸರಕಾರೀ ಡಿಪಾರ್ಟಮೆಂಟುಗಳಲ್ಲಿಯ ಹುದ್ದೆಗಳು, (೨) ಇನ್ನೊಂದು ಸ್ಥಾನಿಕ ಸ್ವರಾಜ್ಯಸಂಸ್ಥೆಗಳು. ನಮ್ಮ ಧರ್ಮದಲ್ಲಿ ಕೈಹಾಕುವುದಿಲ್ಲ ಎಂದು ಸಾರಿದ ಬ್ರಿಟಿಶ್ ಸರಕಾರವು ನಮ್ಮ ಧರ್ಮಕ್ಕಾಗಿ ಹಿಂದುಳಿದ ಜಾತಿಗಳ ಬೆನ್ನು ತಟ್ಟಿ, ಯೋಗ್ಯತೆಗೆ ತಕ್ಕ ಹುದ್ದೆ ಎಂದು ಹೇಳದೆ ಜಾತಿಗೆ ಇಂತಿಷ್ಟು ಹುದ್ದೆಗಳು ಎಂದು ಹೇಳಲಾರಂಭಿಸಿತು. ನಿಜವಾಗಿ ನೋಡಿದರೆ, ಎಲ್ಲರಿಗೂ ಸರಿಸಮಾನ ಶಿಕ್ಷಣ ದೊರೆಯುವ ಇಂದಿನ ಕಾಲದಲ್ಲಿ ಶಿಕ್ಷಣಕ್ಕೆ ತಕ್ಕುದಾದ ಶಿಫಾರಸೇ ಅಗತ್ಯವಿದೆ. ಬ್ರಾಹ್ಮಣರಲ್ಲಿ ಕಲಿತವರು ಹೆಚ್ಚು, ಅದಕಾಗಿ ಎಲ್ಲ ಜಾಗೆಗಳನ್ನೂ ಅವರಿಗೆ ಕೊಡದೆ ಒಂದೆರಡಾದರೂ ಇತರ ಜಾತಿಯವರಿಗೆ ಕೊಡುವುದು ಯೋಗ್ಯ ಎಂದು ಕೆಲವು ದಿವಸ ಹೇಳುವುದು ವಾಡಿಕೆಯಾಗಿತ್ತು. ವಾಡಿಕೆಯುದಾದರೂ ವಾಸ್ತವದ ಮಾತಲ್ಲ ಅದು. 'ನೀವೆಲ್ಲರೂ ವ್ಯಾಪಾರಿಗಳು, ಧನವಂತರು; ಅದಕಾಗಿ ಎಲ್ಲ ವ್ಯಾಪಾರವನ್ನೂ ಧನವನ್ನೂ ನೀವೆ ತೆಗೆದುಕೊಳ್ಳದೆ ಬ್ರಾಹ್ಮಣರಿಗಾಗಿ ಇಂತಿಷ್ಟು ಕಾಯ್ದಿಡಬೇಕು, ಬಿಟ್ಟುಕೊಡಬೇಕು' ಎಂದು ಬ್ರಾಹ್ಮಣರು ಬ್ರಾಹ್ಮಣೇತರರಿಗೆ ಹೇಳಬಹುದಲ್ಲವೆ? ಅದರಂತೆಯೆ 'ನೀವು ದೊಡ್ಡವರಾದ್ದರಿಂದ ಕಲಿಯುವಿರಿ; ಚಿಕ್ಕವರಾದ ನಮಗಿದು ಅನ್ಯಾಯ; ಅದಕಾಗಿ ಎಲ್ಲ ಅಧಿಕಾರ ಜಾಗೆಗಳನ್ನು ನೀವೇ ತೆಗೆದುಕೊಳ್ಳದೆ ನಮಗಾಗಿ ಒಂದು ಪ್ರಮಾಣದಲ್ಲಿ ಕಾದಿಡಬೇಕು' ಎಂದು ಸಮಾಜದ ಎಂಟು ವರ್ಷದ ಮಗುಗಳೆಲ್ಲ ಹೇಳಬಹುದಲ್ಲವೆ? ಮೇಲಿನ ಮಾತುಗಳಲ್ಲಿ ಒಂದು ಅಪಹಾಸ್ಯವೆನಿಸಿದರೆ ಉಳಿದುವುಗಳೂ ಅಪಹಾಸ್ಯವೆನಿಸಲೇಬೇಕು. ಇಂದು ಶಿಕ್ಷಣ ಸಾರ್ವಜನಿಕವಾಗಿದೆ, ಆದಕಾಗಿ ಅಧಿಕಾರಯೋಗ್ಯತೆ ಶಿಕ್ಷಣಕ್ಕೆಯೆ ಸಂಬಂಧಿಸತಕ್ಕುದು ಎಂದು ಯಾಕೆ ಹಟ ಹಿಡಿಯಬಾರದು ? ರಾಜಕಾರಣದಲ್ಲಿ ಸಂಯುಕ್ತ ಮತದಾರಸಂಘ (Joint electorate) ಗಳಿಗಾಗಿ ಹಟತೊಡುವ ಕಾಂಗ್ರೆಸ್‌ಭಕ್ತರು ಈ ಮಾತಿಗಾಗಿಯೂ ಹಟ ತೊಡಬಾರದೇಕೆ ?

ಸ್ಥಾನಿಕ ಸಂಸ್ಥೆಗಳ ‘ ಸಂಸ್ಥಾನಿಕೆ ’

ಇನ್ನು ಸ್ಥಾನಿಕ ಸಂಸ್ಥೆಗಳ ಮಾತು. ಇದಕಾಗಿ ಹೆಚ್ಚಿಗೆ ಹೇಳ ಬೇಕಾಗಿಲ್ಲ. ‘ ನಮ್ಮ ಜೀವನದಲ್ಲಿ ತತ್ತ್ವ, ಧೋರಣೆ ಎಂಬವುಗಳ ಪ್ರವೇಶವೆ ಇಲ್ಲ ’ ಎಂದು ಹೋದ ಸಲ ಹೇಳಿದ್ದೇವೆ. ಇಂತಹ ಸಮಾಜದಲ್ಲಿ ಮೊದಲು ವ್ಯಕ್ತಿಗಾಗಿ ಮತಕೊಡುವ ರೂಢಿ ಬಂದಿತು. ಮತದಾರರ ಸಂಖ್ಯೆ ಬೆಳೆದಂತೆ ಮತಗಳಿಗಾಗಿ ವ್ಯಕ್ತಿ ಮುಂದೆ ಬರುವ ರೂಢಿ ಬಂದಿತು. ಇಂತಹ ವೈಯಕ್ತಿಕ ಧೋರಣೆ ದಲ್ಲಿ ಕ್ರಮೇಣ ಜಾತಿಯೆ (ಯಾಕೆಂದರೆ ಹಣವನ್ನು ಎಷ್ಟೆಂದು ಹಂಚಬೇಕು ?) ಮತಗಳನ್ನು ದೊರಕಿಸುವ ಸುಲಭೋಪಾಯ ವಾಯಿತು. ಹಣವನ್ನು ಬಿಟ್ಟುಕೊಟ್ಟು ಹುರಿಯಾಳಿನ ಜಾತಿಗಾಗಿ ಮತಕೊಟ್ಟವನು, ಚುನಾಯಿತನಾದವನಿಂದ ತನಗೆ—ಅದೇ ಜಾತಿಯ ನಿಮಿತ್ತದಿಂದಲೆ—ಪ್ರತಿಫಲವನ್ನು ಬಯಸತೊಡಗಿದನು. ಹರಗದ ಭೂಮಿಯಲ್ಲಿ ಹುಲ್ಲು ಬೆಳೆವಂತೆ ಹೀಗೆ ತನ್ನಿಂದ ತಾನೇ ಬೆಳೆಯುತ್ತ ಇಂದಿನ ಜಾತಿವೈಷಮ್ಯ ಪರಿಸ್ಥಿತಿ ಬಂದಿದೆ. ಇಷ್ಟಾದರೂ ಅಧಿಕಾರಲಾಲಸೆಯುಳ್ಳ ಜನತೆಯಲ್ಲಿ ಮಾತ್ರ—ಸಾಮಾನ್ಯಜನತೆಯಲ್ಲಿ ಎಂದಿಗೂ ಅಲ್ಲ—ಈ ವೈಷಮ್ಯದೃಷ್ಟಿ ಕಂಡುಬರುತ್ತಲಿದೆ. ಈ ಸ್ಥಿತಿಯನ್ನು ಕೂಡ ಹೊಡೆದೋಡಿಸಲು ಪ್ರಜಾಪ್ರಭುತ್ವದ ಪದ್ಧತಿಗೆ, ಇಂದಿನ ಆರ್ಥಿಕ ಧೋರಣೆಯ ವ್ಯವಹಾರಕ್ಕೆ ಶಕ್ಯವಿದೆ ಎಂಬುದನ್ನು ನಾವು ಅರಿತು, ಅದರಂತೆ ಆಚರಿಸಿದರೆ ಶೀಘ್ರದಲ್ಲಿಯೆ ಈ ದುಃಸ್ಥಿತಿ ದೂರವಾಗುವಂತಿದೆ. ಇಂತಹ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವ ಮುಂದಾಳು ಗಳು ಬೇಕಾದಾಗ, ಮುಂದಾಳುತನದ್ದೆ ‘ ಹೆಣಗಾರಿಕೆ ’ ನಡೆದಿದೆ ನಮ್ಮಲ್ಲಿ !

ಶಿಕ್ಷೆಯೊ ? ಶಾಂತಿಯೊ ?

ರಾಮದುರ್ಗ ದುರ್ಘಟನೆಯ ಸಂಬಂಧದಲ್ಲಿ ನಡೆದ ವಿಚಾರಣೆ ಮುಗಿದು ನ್ಯಾಯಾಧೀಶರ ತೀರ್ಪು ಪ್ರಕಟಿತವಾಗಿದೆ. ಒಟ್ಟು ೮೨ ಜನ ಆರೋಪಿತರಲ್ಲಿ ೫೪ ಜನರಿಗೆ ನಾನಾತರದ ಶಿಕ್ಷೆವಿಧಿಸಲ್ಪಟ್ಟಿದೆ. ಇವರಲ್ಲಿ ೧೨ ಜನರಿಗೆ ಪ್ರಾಣದಂಡನೆಯಾಗಿದೆ. ಆಗ ನಡೆದ ಅತ್ಯಾಚಾರಕ್ಕಾಗಿ ಈ ಶಿಕ್ಷೆ ಘೋರವಲ್ಲ ಎಂದು ಪ್ರತಿಪಾದಿಸುವ ಧರ್ಮಸಾಧುಗಳು ಕೆಲವರಿರಬಹುದು; ಆದರೆ ಮಿಕ್ಕ ಇಡಿಯ ಜನಾಂಗಕ್ಕೆ. ಈ ತೀರ್ಪನ್ನು ಕೇಳಿ ವ್ಯಥೆಯಿಂದ, ಕರುಣೆಯಿಂದ, ನ್ಯಾಯದೃಷ್ಟಿಯಿಂದ ಮೈ ನಡುಗುವದರಲ್ಲಿ ಸಂದೇಹವಿಲ್ಲ. ಎಪ್ರಿಲ್ ೬-೭ನೆಯ ದಿವಸಗಳಲ್ಲಿ ನಡೆದ ಹಿಂಸೆಯನ್ನು ಯಾರೂ ಎಂದೂ ಸಮರ್ಥಿಸಿಲ್ಲ; ವಿಚಾರವಂತರು ಅಂತಹ ಹಿಂಸೆಯನ್ನು ಎಂದಿಗೂ ಸಮರ್ಥಿಸಲಿಕ್ಕಿಲ್ಲ. ಹೀಗೆಂದಾಕ್ಷಣ ಆ ಹಿಂಸೆಗೆ ಈ ಶಿಕ್ಷೆ ಯೋಗ್ಯವಾದದ್ದು, ತಕ್ಕುದು ಎಂದು ಹೇಳುವಂತಿಲ್ಲ. ಪ್ರಜೆ ಗಳಲ್ಲಿ ಅಸಂತೋಷ ಬೆಳೆಯುತ್ತಿರುವ ರಾಮದುರ್ಗದಂತಹ ಸಂಸ್ಥಾನಗಳಲ್ಲಿ ಅತ್ಯಗತ್ಯವಾಗಿ ಬೇಕಾದದ್ದು ಶಾಂತಿ, ಶಿಕ್ಷೆಯಲ್ಲ. ಸದ್ಯದಂತೆ ಘೋರವಾದ, ಸಾರ್ವಜನೀನವಾದ ಶಿಕ್ಷೆಯಿಂದ ಜನತೆಗೂ ದೊರೆಗೂ ಪರಸ್ಪರ ವಿಶ್ವಾಸ ಹುಟ್ಟಲಿಕ್ಕೇ ಅಡ್ಡಿಯಾಗು ವದು, ಸೌಹಾರ್ದದ ಮಾತಂತೂ ದೂರವೆ ಉಳಿಯಿತು. ಇಂತಹ ಶಿಕ್ಷೆಗಳಿಂದ ಪ್ರಜಾಜನರು ಭಯಗ್ರಸ್ತರಾಗಿ ಆಂದೋಲನವನ್ನೆ ತಡೆಯಬಹುದೆಂದು ಅಧಿಕಾರಿಗಳು ನಂಬಿದ್ದ ಪಕ್ಷದಲ್ಲಿ, ಇಂದಿನ ಪ್ರಜಾಪ್ರಭುತ್ವ ಪ್ರವಾಹದ ಸ್ವರೂಪವಾಗಲಿ, ವೇಗವಾಗಲಿ, ಸರ್ವತೋಮುಖತ್ವವಾಗಲಿ ಅವರಿಗೆ ಗೊತ್ತಿಲ್ಲವೆಂದೇ ಹೇಳ ಬೇಕಾಗುವುದು. ನ್ಯಾಯವಾದ ಆಂದೋಲನ ಮಾರ್ಗದಲ್ಲಿ ದೊಂಬಿಗಳ ತಗ್ಗು ದಿನ್ನೆಗಳು ಬಂದರೂ ಮುಂದಾಳುಗಳು ಆ ಮಾರ್ಗವನ್ನು ಬಿಡುವವರಲ್ಲ. ಧ್ಯೇಯಪರವಾದ ಚಳವಳದಲ್ಲಿ ಧ್ಯೇಯವನ್ನರಿಯದವರು ಪುಂಡಾಟಿಕೆ ಎಬ್ಬಿಸಿದ ಮಾತ್ರಕ್ಕೆ ಆ ಧ್ಯೇಯವು ದುಷ್ಟವಾಗುವುದಿಲ್ಲ. ಇದನ್ನೆಲ್ಲ ಲಕ್ಷ್ಯದಲ್ಲಿಟ್ಟು ಕೊಂಡು ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಮುಖ್ಯವಾದ್ದ ರಿಂದ ಈಗಲಾದರೂ ಶಕ್ಯವಿದ್ದ ಕ್ಷಮಾಧಿಕಾರದಿಂದ ಪರಿಸ್ಥಿತಿ ಯನ್ನು ಸುಧಾರಿಸಿಕೊಳ್ಳಲೆಂದು ನಾವು ಹಾರೈಸುತ್ತೇವೆ.

ಕ್ಷೋಭ- ಗಲಭೆಗಳ ಸ್ವರೂಪ

ಇದಲ್ಲದೆ ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಅಧಿಕಾರಿ ಗಳ ಲಕ್ಷ್ಯಕ್ಕೆ ತರಬಯಸುವೆವು. ಕ್ಷೋಭ–ಗಲಭೆಗಳ ಅತ್ಯಾಚಾರ ವನ್ನು (mob-violence) ಅಳೆಯಲು ಬೇರೊಂದು ದೃಷ್ಟಿ ಬೇಕಾಗುವುದು. ‘ ಹಿಂಸೆಗೆ ತಕ್ಕ ಶಿಕ್ಷೆ ’ ಎಂದು ತಟ್ಟನೆ ಇಲ್ಲಿ ಹೇಳುವಂತಿಲ್ಲ. ಇಂತಹ ಸಮಯದಲ್ಲಿ ಯಾವಾಗಲೂ ಜನ–ಸಮುದಾಯವು ಹಿಂಸೆಯ ಇಲ್ಲವೆ ಅತ್ಯಾಚಾರದ ಎಣಿಕೆಯಿಂದ (deliberate intent) ಸೇರುವುದಿಲ್ಲ. ಅಸಮಸ್ಥೆ, ಮನಃ-ಕ್ಷೋಭ ಗಲಭೆ, ಆ ಮೇಲೆ ದೊಂಬಿ (ದಂಗೆ) ಹೀಗೆ ಕ್ರಮವಾಗಿ ಒಬ್ಬರೂ ಅರಿತುಕೊಳ್ಳುವ ಮುಂಚೆಯೆ ಇಡಿಯ ಜನಸಮ್ಮರ್ದವು ಆವೇಶ (ಉರಾವೇಶ ಎನ್ನಿರಿ)ಕ್ಕೆ ವಶವಾಗುವುದು. ಕಣ್ಣಾರೆ ಕಂಡಲ್ಲಿ ಒಂದು ವ್ಯಕ್ತಿಯಮೇಲೆ ಹೊಣೆಗಾರಿಕೆಯನ್ನು ಹೊರಿಸ ಬಹುದ ; ಇಲ್ಲವೆ ಸಾಮಾನ್ಯವಾಗಿ ಮುಂದಾಳುಗಳನ್ನಷ್ಟನ್ನೆ ಹೊಣೆ ಗಾರರೆಂದು ಭಾವಿಸಿ ಶಿಕ್ಷಿಸಬಹುದು. ಇದನ್ನುಳಿದು ಒಂದೊಂದು ಅತ್ಯಾಚಾರಕ್ಕೆ ಒಂದೊಂದು ವ್ಯಕ್ತಿಯ ಹೊಣೆಗಾರಿಕೆ ಇದೆ ಎಂದು ಸಿದ್ಧಪಡಿಸಿ ಶಿಕ್ಷೆ ವಿಧಿಸುವುದು ಸಮಂಜಸವೆನಿಸಲಿಕ್ಕಿಲ್ಲ. ಆದಕಾ ಗಿಯೆ ಕಾಯಿದೆಯಿಂದಲೂ ದೊಂಬಿಯಲ್ಲಿ ಭಾಗವಹಿಸಿದ ಎಲ್ಲರೂ ದೊಂಬಿಯ ಅತ್ಯಾಚಾರಕ್ಕೆ ಜವಾಬ್ದಾರರೆನಿಸುವರು; ವೈಯಕ್ತಿಕ ವಾಗಿ ಜವಾಬ್ದಾರಿಕೆ ಹೊರಿಸಲಾಗದು ಎಂದೇ ಈ ತತ್ತ್ವದ ಉದ್ದೇಶವಲ್ಲವೆ ! ಇಂತಹ ಕಾರಣಗಳನ್ನು ಲಕ್ಷ್ಯದಲ್ಲಿರಿಸಿಯೆ ಅಧಿಕಾರಿಗಳು ಕ್ಷಮಾದಾನದಿಂದ ವಾತಾವರಣವನ್ನು ಸುಧಾರಿಸಿ ಕೊಳ್ಳಬೇಕೆಂದು ನಮ್ಮ ಸೂಚನೆ.

ಚಕ್ಕಡಿ ಇಳುಕಲಿಗೆ ಬಂದಿದೆ

ಯುದ್ಧ ವಿಷಯಕ ಧೋರಣೆ ಮತ್ತು ರಾಜಕೀಯ ಧ್ಯೇಯ ಗಳಿಗಾಗಿ ಉದ್ಭವಿಸಿದ ಘಟನಾತ್ಮಕ ತೊಡಕು ಇದುವರೆಗೂ ಬಿಟ್ಟಿಲ್ಲ. ತೋರಿಕೆಗೆ ಇಷ್ಟರಲ್ಲಿ ಬಿಟ್ಟೀತೆಂದೂ ಎನಿಸುವುದಿಲ್ಲ. ಮಹಾತ್ಮರ ಲೇಖಗಳನ್ನೂ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಸೇರಿಸಿದ

ಹೊಸ ಮಾತನ್ನೂ ನೋಡಿದರೆ, ಇಷ್ಟರಲ್ಲಿಯೆ ಮತ್ತೆ ಮಹಾತ್ಮರ ನೇತೃತ್ವದಲ್ಲಿ ಅಸಹಕಾರ ಚಳವಳಕ್ಕೆ ಪ್ರಾರಂಭವಾಗಬಹುದೇನೊ-ಎಂಬ ಕಲ್ಪನೆಯಾಗುವುದು. ಇತ್ತ ಬ್ಯಾ. ಜಿನಾ ಮತ್ತು ಪಂಡಿತ ಜವಾಹರರ ಲೇಖನಿಗದಾಯುದ್ಧದ ದ್ವಂದ್ವವನ್ನು ನೋಡಿಗರೆ, ಜಾತೀಯ ಐಕ್ಯ ಬಹುಕಾಲ ಅಶಕ್ಯವಾಗಿ ಸದ್ಯದ ತೊಡಕು ಕೂಡಲೆ ಬಿಡುವಂತಿಲ್ಲ ಎಂಬ ಹೆದರಿಕೆಯೆ ಬಲಗೊಳ್ಳುವುದು. ಇದೆಲ್ಲ ನಿಜ; ಆದರೂ ವಸ್ತುಸ್ಥಿತಿಯು ತೋರಿಕೆಗಿಷ್ಟು ನಿರಾಶಾಜನಕವಿದೆ ಎಂದು ನಮ್ಮ ಅಭಿಪ್ರಾಯ. ವೈಸರಾಯರೂ ಕಾಂಗ್ರೆಸ್ಸೂ ಪರಸ್ಪರ ದೂರರಾಗಿದ್ದರೂ ಸುತ್ತುತಿರುವೃತ್ತ ಪರಸ್ಪರ ಸನಿಯಕ್ಕೆ ಬರುತ್ತಲಿದ್ದಾರೆ; ಇದುವರೆಗೆ ಒಬ್ಬರೊಬ್ಬರನ್ನು ಎದುರಿಸಿರದಿದ್ದರೂ ಹಿನ್ನಡಿಗೆಯಿಂದ ಪರಸ್ಪರ ಹತ್ತಿರ ಬರುತ್ತಲಿದ್ದಾರೆ ಎಂದು ನಮ್ಮ ತರ್ಕ. ಉದಾಹರಣೆಗಾಗಿ, ಮುಂಬಯಿಯಲ್ಲಿ ಓರಿಯೆಂಟ್ ಕ್ಲಬ್ಬಿನಲ್ಲಿ ವೈಸರಾಯರು ಮಾಡಿದ ಭಾಷಣವನ್ನೂ, ಅದೇ ಸಮಯಕ್ಕೆ ಸರದಾರ ಪಟೇಲರು ಅಹಮದಾಬಾದದಲ್ಲಿ ಮಾಡಿದ ಭಾಷಣವನ್ನೂ ನೋಡಬಹುದು. 'ಹಿಂದುಸ್ಥಾನಕ್ಕೆ ವೆಸ್ಟಮಿನ್‌ಸ್ಟರ ಕಾಯಿದೆಗನುಸರಿಸಿದ ವಸಾಹತಸ್ವರಾಜ್ಯವೆ ಧ್ಯೇಯ ಎಂಬುದು ಸರಕಾರದ ದೃಷ್ಟಿಯಿಂದ ನಿರ್ವಿವಾದವಾಗಿದೆ' ಎಂದು ವೈಸರಾಯರು ಹೇಳಿದರು. ಮೊದಲು ಕೇವಲ ಜವಾಬ್ದಾರಿ ಸ್ವರಾಜ್ಯವೆ (Responsible self-government) ಧ್ಯೇಯವಾಗಿತ್ತು; ೧೯೩೫ರ ಕಾಯಿದೆಯ ಕಾಲದಲ್ಲಿ ಮಾತನಾಡುವಾಗ ವಸಾಹತ ಸ್ವರಾಜ್ಯ ಧ್ಯೇಯವಾಯಿತು; ಕೆಲವು ತಿಂಗಳ ಹಿಂದೆ 'ವಸಾಹತ ಸ್ವರಾಜ್ಯ ಎಂದರೆ ನಿಜವಾದ ವಸಾಹತ ಸ್ವರಾಜ್ಯ' (Dominion Status means Dominion Status, there are no two verieties of it) ಎಂದು ಸರ್ ಸ್ಯಾಮುಅಲ್ ಹೋರರು ಹೇಳಿದರು; ಈಗ ವಸಾಹತ ಸ್ವರಾಜ್ಯವೆಂದರೆ ವೆಸ್ಟ್‌ಮಿನ್‌ಸ್ಟರ ಕಾಯಿದೆಗನುಸರಿಸಿದ್ದು ಎಂದು ವೈಸರಾಯರು ಹೇಳುತ್ತಾರೆ. (ಎಂದರೆ ಸದ್ಯಕ್ಕೆ ಮಿಕ್ಕ ವಸಾಹತುಗಳಿಗಿದ್ದ ಸ್ವಾತಂತ್ರ್ಯ. ಈ ಸ್ವಾತಂತ್ರ್ಯವುಳ್ಳ ದೇಶವು ಬ್ರಿಟಿಶ್ ಸಾಮ್ರಾಜ್ಯಕ್ಕೆ ಅಧೀನವಲ್ಲ; ಬೇಕಾದಾಗ ಸಂಬಂಧವನ್ನು ಬಿಟ್ಟುಕೊಡಬಹುದು; ಕೂಡಿರುವವರೆಗೆ ಇಂಗ್ಲಂಡಿನ ಅರಸು ಈ ದೇಶಕ್ಕೆ ಅರಸು, ಸಾರ್ವಭೌಮನಲ್ಲ; ದೇಶದ ಸರಕಾರವು ದೇಶದ ಜನತೆಗೆ ಜವಾಬ್ದಾರ, ಬ್ರಿಟಿಶ್ ಪಾರ್ಲಿಮೆಂಟಿಗಲ್ಲ—ಸ್ವುಂತಾದ ಸ್ಥಾನ-ಮಾನ-ಅಧಿಕಾರಗಳುಳ್ಳ ಸ್ವಾತಂತ್ರ್ಯ). ಬ್ರಿಟಿಶ್ ಅಧಿಕಾರಿಗಳ—ಮೇಲಿನ—ವರು ಮಾತುಗಳನ್ನು ನೋಡಿದರೆ ಕ್ರಮೇಣ ಅವರ ಧೋರಣ ಹೇಗೆ ಬದಲಾಯಿಸುತ್ತಿದೆ ಎಂಬುದು ಸ್ಪಷ್ಟವಾಗುವುದು.

ಲೋಕನಿಯುಕ್ತ ಘಟನಾಸಮಿತಿ

ಲೋಕನಿಯುಕ್ತ ಘಟನಾಸಮಿತಿಯ ನಿರ್ಣಯವನ್ನು ಬ್ರಿಟಿಶರು ಒಪ್ಪಲು ಆಶ್ವಾಸನ ಬೇಕು ಎಂದು ಕಾಂಗ್ರೆಸು ಕೇಳುತ್ತಿರುವುದಷ್ಟೆ. ಇದಕ್ಕೆ ಕೆಲವು ತಿಂಗಳ ಹಿಂದೆ ಸರ್ ಸ್ಯಾಮುಅಲ್ ಹೋರರ ಭಾಷಣದಲ್ಲಿ 'ನ'ಕಾರ ದೊರೆಯಿತು; ಮುಂದೆ ಸ್ಟೇಟ ಸೆಕ್ರೇಟರಿಗಳಾದ ಝೆಟ್ಲಂಡರ ಮತ್ತು ವೈಸರಾಯರ ಭಾಷಣಗಳಲ್ಲಿ 'ಹಿಂದೀಯರು ತಂತಮ್ಮೊಳಗೆ ಸಂಧಿಯನ್ನೇ ಮಾಡಿಕೊಂಡರೆ ನಮಗೆ ಆನಂದವಿದೆ' ಎಂದು ದರ್ಪಪ್ರೇರಿತವೆನಿಸಬಹುದಾದ ಆಶೀರ್ವಾದ ಕಂಡುಬಂದಿತು. ಈಗ ವೈಸರಾಯರು ಹೇಳುವ ಮಾತನ್ನು ಕೇಳಿರಿ:— 'As to the objective there is no dispute. I am ready to consider any practical suggestion that has general support, and I am ready, when the time comes, to give every help that I personal can?

ಮೊದಲು 'ಐಕ್ಯಮತ್ಯ ವಿದ್ದದ್ದು ಈಗ' ಸರ್ವಸಾಮಾನ್ಯ ಬಹುಮತ' (general support)ಕ್ಕೆ ಬಂದಿದೆ; ಮೊದಲು ಬರಿಯ 'ಆನಂದ' ವಿದ್ದರೆ ಈಗ ವಿಚಾರ ಮಾಡುವ 'ಆಶ್ವಾಸನೆ' ಇದೆ. ಯಾರಿಗೆ ಗೊತ್ತು. ಈಗ 'ವಿಚಾರ ಮಾಡುವುದು' ಮುಂದೆ 'ಸ್ವೀಕಾರ ಮಾಡುವುದೆ'ಂದು ಆಗಬಾರದೇಕೆ? ಅಂತೂ ಸರಕಾರದ ಚಕ್ಕಡಿ ಇಳುಕಲಿಗೆ ಬಂದಿದೆ.

ಸರದಾರರ ಸವಾರಿಯೂ ಹಾಗೆ!

ಇತ್ತ ಕಾಂಗ್ರೆಸ ಮುಂದಾಳುಗಳ ಮಾತನ್ನು ನೋಡಿದರೂ ಧೋರಣೆಯಲ್ಲಿ ಅನುಕೂಲ ಬದಲಾವಣೆಯು ಕಂಡುಬರುತ್ತಿದೆ. ಮುಸ್ಲಿಂ ಲೀಗ ಸಂಸ್ಥೆಯನ್ನು ಮೊದಮೊದಲು ಕಡೆಗಣ್ಣಿನಿಂದಲೂ ನೋಡುತ್ತಿರಲಿಲ್ಲ ಕಾಂಗ್ರೆಸ್ಸು. ಲೀಗವು ಪ್ರಾತಿನಿಧಿಕ ಸಂಸ್ಥೆ ಎಂಬ ಮಾತನ್ನೇ ಎತ್ತಗೊಡುತ್ತಿರಲಿಲ್ಲ ಕಾಂಗ್ರೆಸ್ ಮುಂದಾಳುಗಳು. ಆದರೆ ಮೊನ್ನೆ ಅಹಮದಾಬಾದಿನಲ್ಲಿ ಸರದಾರ ಪಟೇಲರು ಆಡಿದ ಈ ಮಾತುಗಳನ್ನು ಕೇಳಿರಿ:— 'ಮುಸ್ಲಿಂ ಲೀಗಕ್ಕೆ ಪ್ರಾತಿನಿಧಿಕ ಸ್ವರೂಪವೆ ಇಲ್ಲವೆಂದು ನಾವು ಹೇಳುವದಿಲ್ಲ; ಆದರೆ ಎಲ್ಲ ಮುಸಲ್ಮಾನರ ಪ್ರತಿನಿಧಿ ಅದಲ್ಲ ಎಂದು ನಾವು ಹೇಳುವೆವು.' ನಿಜ. 'ಕಾಂಗ್ರೆಸ್ಸು ಎಲ್ಲ ಹಿಂದುಗಳ ಪ್ರತಿನಿಧಿ ಅಲ್ಲ' ಎಂದು ಬ್ಯಾ. ಸಾವರಕರರು ಹೇಳುತ್ತಾರೆ, 'ಹಿಂದು ಮಹಾಸಭೆ ಎಲ್ಲ ಹಿಂದುಗಳ ಪ್ರತಿನಿಧಿ ಅಲ್ಲ' ಎಂದು ಪಂಡಿತ ಜವಾಹರಲಾಲರು ಹೇಳುತ್ತಾರೆ. ಅಂತೂ ಮೊದಲು ಕೆಲವರ ಮುಂದೆ 'ಹಲವರ ಮುಸಲ್ಮಾನರ ಪ್ರತಿನಿಧಿ ಮುಸ್ಲಿಂ ಲೀಗ' ಎಂದು ಕಾಂಗ್ರೆಸ್ಸು ಒಪ್ಪಿಕೊಳ್ಳುವ ಲಕ್ಷಣವಿದೆ. ಲೀಗದ ಪ್ರಾತಿನಿಧಿಕ ಸ್ವರೂಪವನ್ನೇ ಒಪ್ಪಿದಾಕ್ಷಣ ಹರ್ಷಭರಿತರಾದ ಜಿನ್ನಾಸಾಹೇಬರು ಏನು ಮಾಡಿಯಾರು ಎಂದು ಹೇಳುವಂತಿಲ್ಲ. ಅಂತೂ ನಮ್ಮಲ್ಲಿಯೂ ಎಲ್ಲ ಚಕ್ಕಡಿಗಳು ಇಳುಕಲಿಗೆ ಬಂದಿವೆ; ಕೂಡಲೆ ಒಂದೆಡೆಯಲ್ಲಿ ಬಂದು ನಿಲ್ಲುವಂತಿವೆ ಎಂದು ಹೇಳಬಹುದಲ್ಲವೆ?

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೮,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ' ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವವು. ಒಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವವು.

It is Wise to Advertise

IN

JAYANTI

Because

- ★ Jayanti is the Leading Kannada Magazine.
- ★ Jayanti reaches all parts of Karnatak.
- ★ Jayanti is read in all the towns of Karnatak.
- ★ Jayanti is the delight of all classes of readers.
- ★ Jayanti is a Monthly run on Sound and Modern Lines.
- ★ Jayanti stands for High Quality.

F Rates & Particulars

Apply to:—

THE MANAGER JAYANTI, DHARWAR

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar

ಜಯಂತಿ

ಮಾರ್ಚ ೧೯೪೦

ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಾಗಿ ತನುಮನೋಧನಗಳಿಂದ ಕಾರ್ಯಮಾಡುವ
ಮೈಸೂರು ಸಂಸ್ಥಾನದ ಯುವರಾಜರಾದ
ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್,
ಜಿ. ಸಿ. ಐ. ಇ. ಅವರು

(By Courtesy : Mysore Govt)



ಕನ್ನಡದ ನಂದಾದೀಪವನ್ನು ಕಳೆಗುಂದದಂತೆ ಬೆಳಗಿಸುತ್ತಲಿರುವ
ಮೈಸೂರು ಸಂಸ್ಥಾನದ ಮಹಾರಾಜರವರಾದ

ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್,

ಜಿ. ಸಿ. ಎಸ್. ಐ., ಜಿ. ಬಿ. ಇ. ಅವರು

(By courtesy, Mysore Govt.)

ಕನ್ನಡ ನಾಡಿನಲ್ಲಿ ಕನ್ನಡನುಡಿಗೆ ಮುಖ್ಯವಾದ ಸ್ಥಾನವಿರಬೇಕೆಂಬುದನ್ನು ಮನವರಿಕೆ
ಮಾಡಿಕೊಂಡಿರುವ ಮೈಸೂರು ಸಂಸ್ಥಾನದ ದಿವಾಣರು

ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಇಸ್ಮೈಲ್ ಅವರು

(By courtesy: Mysore Govt.)

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ ...... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಮಾರ್ಚ ೧೯೪೦	೧೧ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಮೋಲೋಲಿಯ ಛಾಯಾಚಿತ್ರ	ಸ್ಟೂಡಿಯೋ ರೀಗಲ್, ಬೆಂಗಳೂರು	
ಪ್ರಸಾದ (ವಿಚಾರತರಂಗ)	' ಸಾಮಾಜಿಕ '	೬೮೩
ನಾದಲೋಲಾ (ರೇಖಾಚಿತ್ರ)	ಶ್ರೀ. ಬಾಜಲಿ, ಹೈದರಾಬಾದ್	೬೮೩
ಸಂಪಾದಕೀಯ (ಕನ್ನಡಿಗರ ಎರಡು ಹಬ್ಬಗಳು)	ಸಂಪಾದಕರು	೬೮೪
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೬೮೫
ಫಿನ್ಲಂಡನ್ನು ಮುತ್ತಿದ ಪ್ರಾಣಸಂಕಟ (ಪರಿಸ್ಥಿತಿಪರಿಚಯ) ..	ಶ್ರೀ. ' ಜಾರ್ಮನಿಯ ಹೆಜ್ಜೇಶ್ '	೬೮೭
ಅಣಕಿಸುವ ಕೈ (ಸಣ್ಣಕತೆ)	ಶ್ರೀ. ಬಿ.ಕೆ.ರಾಮಚಂದ್ರರಾವ್,ಬಿ.ಎ.,ಎಲ್‌ಎಲ್.ಬಿ.	೬೯೧
ವಿಶ್ವಶಾಂತಿಯ ಸಮಸ್ಯೆ (ವಿಚಾರಪ್ರಚೋದಕ)	ಶ್ರೀ. ಎಸ್. ಎಲ್. ಸುಬ್ರಹ್ಮಣ್ಯ, ಹರಿಹರ	೬೯೪
ಕಂಠೀರವಾರಾವ (ಕವನ)	ಶ್ರೀ. ಶ್ರೀಧರಶರ್ಮ ಮೈಸೂರು	೬೯೮
ಲತೆ (ಕವನ)	ಶ್ರೀ. ' ಬಾಲಪುರಂದರ '	೬೯೮
ದಂಡನೆ (ಸ್ವಭಾವಕಥೆ)	ಶ್ರೀ. ' ಭಾರತೀಸುತ ' ವೈನಾಡು	೬೯೯
ಏಳುಸುತ್ತಿನ ಕೋಟೆ (ಪ್ರದೇಶ ಪರಿಚಯ)	ಶ್ರೀ. ಹುಲ್ಲೂರ ಶ್ರೀನಿವಾಸ ಜೋಯಿಸ ವಕೀಲರು	೭೦೭
ಹಗಲ್ಗನಸು (ಭಾವನಾ ಚಿತ್ರ)	ಶ್ರೀ. ' ಬಾಲಗೋಪಾಲ '	೭೧೧
ಯುದ್ಧ ಸಮಸ್ಯೆಯೆ? (ವ್ಯಂಗ್ಯ ಪ್ರಬಂಧ)	ಶ್ರೀ. ಕೋಟ ಶಿವರಾಮ ಕಾರಂತರು	೭೧೩
ಬರಗಾಲದ ಮಳೆ (ಕವನ)	ಶ್ರೀ. ಎಸ್. ಎಸ್. ಹಿರೇಮಠ, ಬೀಳಗಿ	೭೧೫
ಬಾಲಕ (ಅನುವಾದಿತ ಕಥೆ)	ಶ್ರೀ. ಎನ್. ಕೃಷ್ಣಸ್ವಾಮಿ ಎಸ್. ಬಿ. ಎಸ್‌ಸಿ.	೭೧೭
ಪಂಚಾಂಗ-ಜಾತಕ (ಪಂಚಾಂಗ ಪರಿಚಯ)	ವಿದ್ವಾನ್ ಎಂ. ಜಿ. ವೆಂಕಟೇಶಯ್ಯ, ಎಂ. ಎ.	೭೧೮
ಸ್ವಲ್ಪದರಲ್ಲಿ ಸ್ವಾರಸ್ಯ (ವಿನೋದಪ್ರಬಂಧ)	ಶ್ರೀ. ' ಶ್ರೀರಂಗ '	೭೩೦
ಪ್ರಿನ್ಸಿಪಾಲ್ ಜಠಾರ ಗಣಪತಿರಾಯರು (ಸಂದರ್ಶನ) ..	ಶ್ರೀ. ' ವಿಹಂಗಮ '	೭೩೩
ನನಗೆ ಅವಾರ್ಡ ಬಂತೆ (ಸಂಶೋಧಕರೊಬ್ಬರ ಹರಟೆ) ..	ಶ್ರೀ. ' ನಾಪಾಡಿ '	೭೪೦
ಉಡಿಗೆ-ತೊಡಿಗೆಯ ಬೆಡಗು (ಹೊಸಬಗೆಯ ಫ್ರಾಕು) ..	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.	೭೪೩
ಪುಸ್ತಕವಿಮರ್ಶೆ	ಬೇರೆ ಬೇರೆ ವಿಮರ್ಶಕರು	೭೪೩
ಸಾದರಸ್ವೀಕಾರ	.. ..	೭೪೬
ನಗೀಗೆ ನೈವಿದ್ಯ	ಶ್ರೀ. ' ಸಕಲೀ ನಾರಾಯಣಾಚಾರ್ '	೭೪೮
ಹೊಸ ಹಿಂದುಸ್ಥಾನ (ಉಪನ್ಯಾಸಸಾರ)	ಪ್ರೊ. ಆರ್. ವಿ. ಜಾಗೀರದಾರ, ಎಂ. ಎ.	೭೪೯
ನಾಲ್ಕು ನಿಟ್ಟಿನ ನೋಟ	' ನಿರೀಕ್ಷಕರು '	೭೫೦
ಸಂತೆ-ಸಮ್ಮೇಳನಗಳ ಸುದ್ದಿ (ಬರೆದು ಬಂದುದು)	ಬೆಂಗಳೂರಿನ ' ಮುದ್ರಾರಾಕ್ಷಸ ' ರು	೩೫೫

ಜಯಂತಿಯ ಮೂರನೆಯ ವರ್ಷ

ಎಲ್ಲವೂ ಹೊಸ ವ್ಯವಸ್ಥೆ! ಹೊಸ ಏರ್ಪಾಡು!!

ಬಣ್ಣದ ಚಿತ್ರದ ಮೇಲೋಲೆ, ಸುಪ್ರಸಿದ್ಧ ಚಿತ್ರಕಾರರು ಬರೆದ ಸಂದರ್ಭ ಚಿತ್ರಗಳು!

ಈ ವರ್ಷದ ಸಂಚಿಕೆಯಲ್ಲಿ ಶ್ರೀ. 'ಆನಂದಕಂದ'ರ ಹಲವು ಸಣ್ಣ ಕತೆಗಳು ಓದಲು ದೊರಿಯುವುವು.

ಶ್ರೀಯುತರುಗಳಾದ ಕೋ. ಶಿ. ಕಾರಂತ, ಅ. ನ. ಕೃಷ್ಣರಾಯ, ಸಿ. ಕೃಷ್ಣಶರ್ಮ (ಹರಟಿಮಲ್ಲ)
ಜಿ. ಪಿ. ರಾಜರತ್ನಂ, ಡಿ. ಕೆ. ಭಾರದ್ವಾಜ, ಪಂಡಿತ ತಾರಾನಾಥ, ಪ್ರೊ. ಜಾಗಿರದಾರ

ಮೊದಲಾದ ಸುಪ್ರಸಿದ್ಧ ಲೇಖಕರ ವಿಚಾರಪ್ರಚೋದಕವೂ ರಸಪೂರ್ಣವೂ ಆದ ಲೇಖನ-ಪ್ರಬಂಧ-ಕಥೆಗಳು ಸಂಚಿಕೆ-ಸಂಚಿಕೆಯಲ್ಲಿಯೂ ತುಂಬಿತುಂಬಿ ಬರುವುವು.

ವಿದ್ಯಾರ್ಥಿಗಳ ಲೇಖನಗಳಿಗೆಂದು ಪ್ರತಿಸಂಚಿಕೆಯಲ್ಲಿ ಎರಡು-ಮೂರು ಪುಟಗಳನ್ನು ಕಾಯ್ದಿರಿಸಲಾಗುವುದು. ವಿದ್ಯಾರ್ಥಿ-ವರ್ಗದಿಂದ ಬಂದ ಲೇಖನಗಳು ಆ ಸ್ಥಳದಲ್ಲಿ ಯುಕ್ತ ವಿಮರ್ಶೆ, ಉಚಿತ ಸಲಹೆಗಳೊಂದಿಗೆ ಪ್ರಕಟವಾಗುವುವು.

ಕಾಗದ-ಮುದ್ರಣಸಾಮಗ್ರಿಗಳು ಇಷ್ಟೊಂದು ತುಟ್ಟಿಯಾಗಿದ್ದರೂ
'ಜಯಂತಿ' ಮೊದಲಿನಂತೆ ೪-೦-೦ ವಾ. ವರ್ಗಣಿಗೇ ದೊರೆಯುವುದು.

ಹೊಸವರ್ಷಕ್ಕೆ ಚಂದಾದಾರರಾಗಬೇಕೆನ್ನುವವರು ತ್ವರೆಮಾಡಿರಿ!

ಕೇವಲ ರೂ. ೪-೧೦-೦ ಕ್ಕೆ ೨೦ ಗಡಿಯಾರಗಳು



ಹದಿನೆಂಟು (18) ದಮ್ಮಿ ಕೈ ಗಡಿಯಾರಗಳು, ಒಂದು (1) ನಿಜವಾದ 36 ಗಂಟೆಗಳು ನಡೆಯುವ ಗಟ್ಟಿಗಡಿತವಾದ, ಬಾಳಿಕೆ ಬರುವ, ಸರಿಯಾದ ಟೈಮ್ ರೆಗ್ಯುಲೇಟರ್ ಕಿಸೆ ಗಡಿಯಾರ. 10 ವರ್ಷ ಗ್ಯಾರಂಟಿ. ಈ ಗಡಿಯಾರವನ್ನು ಹೆಚ್ಚಾಗಿ ಯೂರೋಪಿನಿಂದಲೇ ನೇರವಾಗಿ ಆಮದು ಮಾಡಿದ್ದೇವೆ. ಈ ರಿಯಾಯಿತಿ ದರದಲ್ಲಿ ಕೇವಲ 10,000 ಗಡಿಯಾರಗಳನ್ನು ಮಾತ್ರ ಮಾರಲು ನಿಶ್ಚಯಿಸಿದ್ದೇವೆ. ಬೇಗ ಬರೆದು ಒಂದು ಸೆಟ್ಟನ್ನು ತರಿಸಿಕೊಳ್ಳಿರಿ. ಈ ಸುವರ್ಣಾವಕಾಶವನ್ನು ಬಿಟ್ಟೀರಿ ಈ ಗಡಿಯಾರಗಳ ಜೊತೆಗೆ 14 ಕ್ಯಾರೆಟ್ ಚಿನ್ನದ ಮುಲಾಮಿನ ಮುಳ್ಳಿರುವ ಫೌಂಟನ್ ಪೆನ್, ನೈಜವಾದ ಸನ್-ಗಾಗಲ್ ಮತ್ತು ಫ್ಯಾನ್ಸಿ ಮುತ್ತಿನ ಸರಗಳು ಉಚಿತವಾಗಿ ಕೊಡಲಾಗುವುದು. ಇಷ್ಟವಿಲ್ಲದಿದ್ದಲ್ಲಿ ಹಣ ವಾಪಸ, ಪೋಸ್ಟ್ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

London Commercial Co. (J.M.D)

Post Box No. 27, AMRITSAR (India)

ನಮ್ಮ ಬದುಕು

(ಕಥಾಸಂಗ್ರಹ)

೧೧೨ ಪುಟದ ಸುಂದರ ಪುಸ್ತಕಕ್ಕೆ

೮ ಆಣೆ ಮಾತ್ರ ಬೆಲೆ!

'ಆನಂದಕಂದರ'
ಹೊಸ ಕಥಾಸಂಗ್ರಹವಿದು.

ಇದರಲ್ಲಿಯ ಆರು ಕತೆಗಳೂ ನಮ್ಮ ಬದುಕಿನಲ್ಲಿಯ ಒಂದೊಂದು ಸಮಸ್ಯಾತ್ಮಕ ಸಂನಿವೇಶಗಳನ್ನು ಚಿತ್ರಿಸಿ ತೋರಿಸುವುವು.

ಎಲ್ಲರೂ ಓದಬೇಕಾದ ಕಥೆಗಳು!

ಬೇಕಾದವರು 'ಜಯಂತಿ ಕಾರ್ಯಾಲಯ ಧಾರವಾಡ'

ಈ ವಿಳಾಸಕ್ಕೆ ಬರೆಯಿರಿ!

ಸಂಚಿಕೆ ೧೧
ಮಾರ್ಚ
ವರ್ಷ ೨
೧೯೪೦



ಏಕನಾದ

ಏಕನಾದವನ್ನು ಎಡೆಬಿಡದೆ ಮಿಡಿಯುತ್ತ ನಿಂತಿರುವೆ ತಾಯಿ ! ಉಸುರುಗಳಿಲ್ಲ, ಕುಣಿತಗಳಿಲ್ಲ, ಏರಿಳಿತಗಳಿಲ್ಲ ; ಒಂದೆದನಿಯಲ್ಲಿ ಮೊರೆಯುತ್ತಿದೆ. ಅದರಲ್ಲಿಯೆ ಬೆರತು ಮೈಮರೆತು ನಿಂತ ನೀನು ಅದರಲ್ಲಿ ಯಾವ ಸಂತಸವ ಕಾಣಬೆಯೊ ನಾನು ಕಾಣೆ.

ನಿನ್ನ ಏಕನಾದ ನಿನಗೆ ಒಂದೆ ದನಿಯ ಮಿಡಿಯುತ್ತಿರಬಹುದು. ಆದರೆ ವ್ಯಾವಹಾರಿಕ ಜೀವನದಲ್ಲಿ ತೊಡಕಿದ ನನ್ನ ವಿಕ್ಷಿಪ್ತಮನಸ್ಸನ್ನು ಆ ದನಿ ಹಲವು ರೀತಿಯಲ್ಲಿ ಕೆಣಕುವುದು, ಕೆದಕುವುದು, ಕದಡಿದ ಮನಸ್ಸನ್ನು ಇನ್ನಿಷ್ಟು ಕದಡಿ ಅಲೆಗಳೆದ್ದ ಕಡಲಿನಂತೆ ಮಾಡುವುದು.

ಒಡನಾಡಿಯೊಂದಿಗೆ ಆಡುತಿರುವಾಗ ಒಲವಿನ ಹಾಡುಗಳನ್ನು ಪ್ರಚೋದಿಸುವುದು ನಿನ್ನ ಏಕನಾದ. ಮಕ್ಕಳನೆತ್ತಿ ಆಡಿಸುತಿರುವಾಗ ಲಾಲಿಗೀತಗಳನ್ನು ಎಬ್ಬಿಸುವುದು ನಿನ್ನ ಏಕನಾದ. ಬಾಳಿಗೊಂದು ಬೆಳಕುಬೇಕೆಂದು ಮನನೆಳಸುತಿರುವಾಗ ಮಂತ್ರಾಕ್ಷರ ಪ್ರೇರಿಸುವುದು ನಿನ್ನ ಏಕನಾದ.

ಹಗೆಯೊಂದಿಗೆ ಜಗಳಕ್ಕೆ ನಿಂತಾಗ ರಣಗೀತಗಳಿಗೆ ನೆರವನ್ನು ಕೊಡುವುದದು. ಗೆಲ್ಲು ದೊರೆತು ಉಲ್ಲಾಸದಲ್ಲಿರುವಾಗ ವೀರಪವಾಡಗಳನ್ನು ಕೇಳಿಸುವುದದು. ಸೋಲುಂಟಾಗಿ ಜೋಲುಮೈಯವನಾಗಿರುವಾಗ ಮೂದಲಿಸಿ ಮನನೋಯಿಸುವುದದು. ಚಿಂತೆಯ ಸಂತೆಯಲ್ಲಿ ಬೇಹಾರಿ ನಾನಾಗಿರುವಾಗ ಕಾಗೆ-ಗೂಗೆಗಳ ಕರ್ಕಶನಾದದಿಂದ ಕಿವಿಗಳನ್ನು ಕಚ್ಚುವುದದು.

ಮನಸ್ಸು ಆಶೆಯ ಬೆನ್ನನ್ನು ಹತ್ತಿದಾಗ ಬದುಕಿನಲ್ಲಿಯ ಸವಿಹಾಡಿಗೆ ಶ್ರುತಿಕೊಡುವುದದು. ನಿರಾಶೆಯಿಂದ ನಿಟ್ಟುಸಿರು ಬಿಡುತ್ತಿರುವಾಗ ಮರಣದ ಬೀಭತ್ಸಗೀತಗಳಿಗೆ ಗತಿಕೊಡುವುದದು. ಅರಿದರಿದು! ಈ ಒಂದೆ ಒಂದು ದನಿ ನಿನ್ನ ಮನವನ್ನೊಯ್ದು ಒಂದೆ ಕಡೆಗೆ ನಿಲ್ಲಿಸಿದೆ. ನನ್ನ ಮನವನ್ನು ಕಂಡಕಂಡ ಕಡೆಗೆ ಓಡಾಡಿಸುತ್ತಲಿದೆ. ಸುಖಿಯಾರು ? ನಾನೋ, ನೀನೊ ?

—ಸಾಮಾಜಿಕ.

ನಾದಲೋಲಾ

ಕಾಸುವಡೆಯದ ಟೊಳ್ಳು ಕುಂಬಳಕಾಯಿಯಲ್ಲಿ ಏನೊಂದು
ಇನಿದು ತುಂಬಿನಿಂತಿದೆಯಲ್ಲ !



ಕನ್ನಡಿಗರ ಎರಡು ಹಬ್ಬಗಳು

ಧಾರವಾಡದ ವಿದ್ಯಾವರ್ಧಕ ಸಂಘ ಹುಟ್ಟಿ ೫೦ ವರ್ಷಗಳಾದುದರಿಂದ ಅದರ ಹೊನ್ನುಹಬ್ಬ (ಗೋಲ್ಡನ್ ಜ್ಯೂಬಿಲಿ) ಬರಲಿರುವ ಡಿಸೆಂಬರ್ ತಿಂಗಳಲ್ಲಿ ಜರುಗಲಿದೆ. ಬೆಂಗಳೂರಿನಲ್ಲಿರುವ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತು ಜನಿಸಿ ೨೫ ವರ್ಷಗಳಾದುದರಿಂದ— ಬರಲಿರುವುದಲ್ಲ— ಮುಂದಿನ ಬೇಸಗೆಯಲ್ಲಿ ಅದರ ಬೆಳ್ಳಿಯ ಹಬ್ಬ (ಸಿಲ್ವರ್ ಜೂಬಿಲಿ) ನೆರವೇರಲಿದೆ. ಇವೆರಡು ಹಬ್ಬಗಳೂ ಅಖಿಲ ಕನ್ನಡಿಗರು ಅಭಿಮಾನದಿಂದ ಆಚರಿಸುವಂತಹವಾಗಿವೆ. ಕನ್ನಡ ನಾಡು, ಕನ್ನಡನುಡಿ ಕಗ್ಗತ್ತಲೆಯಲ್ಲಿರುವಾಗ, ಅದನ್ನು ಬೆಳಕಿಗೆ ತರಬೇಕೆಂಬ ಮಹದುದ್ದೇಶದಿಂದ ಮುಂದುವರಿದು— ತನ್ನ ಕಿರುಬೆಳಕಿನದೇ ಇರಲಿ— ಅಖಂಡವಾಗಿ ಐವತ್ತು ವರ್ಷಗಳಿಂದ— ನಂದಾದೀಪವನ್ನು ಹಚ್ಚಿಕೊಂಡು, ಮೆಲ್ಲಗೆ ಸಾಗಿದ ಜನತೆಯ ಸಂಸ್ಥೆಯು ಕರ್ನಾಟಕ ವಿದ್ಯಾವರ್ಧಕ ಸಂಘ. ಕರ್ನಾಟಕದ ಭಾವನೆ ಉದಯವಾಗಿ ೨೫ ವರ್ಷಗಳಾದ ಮೇಲೆ, ಕನ್ನಡನಾಡಿನಲ್ಲಿ ಹೆಚ್ಚಿನ ಬೆಳಕನ್ನು ಹಬ್ಬಿಸಬೇಕೆಂಬ ಹುರುಪಿನಿಂದ ವಿದ್ಯುದ್ದೀಪವನ್ನು ತೊಳಗಿಸುತ್ತ ನಡೆದಿರುವ ರಾಜಮಾನ್ಯಸಂಸ್ಥೆ ಕರ್ನಾಟಕ ಸಾಹಿತ್ಯ ಪರಿಷತ್ತು. ಇವೆರಡರ ಅಭ್ಯುದಯವನ್ನು ಪ್ರತಿಯೊಬ್ಬ ಕನ್ನಡಿಗ ಕೋರಬೇಕಾದುದು ಕರ್ತವ್ಯವಾಗಿದೆ.

ಮೈಸೂರಿನ ಮಹಾರಾಜರ ಮನೆತನ ಅಚ್ಚುಕೆಚ್ಚಿನ ಕನ್ನಡಿಗರದು. ಅವರಲ್ಲಿಯ ಚಿಕ್ಕದೇವರಾಜ ಒಡೆಯರು, ರಣಧೀರ ಕಂಠೀರವ ನರಸರಾಜರು, ಮುಮ್ಮಡಿ ಕೃಷ್ಣರಾಜ ಒಡೆಯರು ಗಳಿಸಿದ ಶ್ರೀಚಾಮರಾಜೇಂದ್ರ ಒಡೆಯರು ಇವರೆಲ್ಲ ಕನ್ನಡಸಾಹಿತ್ಯಕ್ಕೆ ಕೊಟ್ಟ ಪೋಷಣೆ ಇಷ್ಟಿಷ್ಟೆಂದು ಹೇಳಲಿಕ್ಕೆ ಬರುವಂತಹದಲ್ಲ. ಆಳುತ್ತಿರುವ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರಂತೂ ಕನ್ನಡದ ಚೆಲ್ಮೆಗೆ, ಎಂದೂ ಕಳೆಗುಂದಲಾಗದಂತಹ ಸ್ನೇಹರಸವನ್ನು ನೀಡುತ್ತಲಿದ್ದಾರೆ. ಯುವರಾಜ ಶ್ರೀಕಂಠೀರವ ನರಸರಾಜೇಂದ್ರ ಒಡೆಯರವರಿಗೆ ಕನ್ನಡವೆಂದರೆ ಅದೊಂದು ಹುಚ್ಚುಹಿಗ್ಗು. ಇವರಿಬ್ಬರ ಔದಾರ್ಯದಿಂದಲೆ ಪರಿಷತ್ತಿನ ಪಕ್ಕಗಳು ಬಲಿಯುತ್ತಲಿವೆ. ನಿಲ್ಲಲು ಕಾಲುಗಳಲ್ಲಿ ಶಕ್ತಿ ತುಂಬುತ್ತಲಿವೆ. ಕಾರ್ಯಮಾಡಲು ತಕ್ಕುದಾದ ಕ್ಷೇತ್ರ ತಯಾರಾಗುತ್ತಲಿದೆ. ಯುವರಾಜಕುಮಾರರಾದ ಶ್ರೀಜಯಚಾಮರಾಜ ಒಡೆಯರವರಂತೂ ಹೊಸಕಾಲದ ತರುಣರು. ಮಾತೃಭಾಷೆ ದೇಶಭಾಷೆಗಳಿಗಿರುವ ಸ್ಥಾನ-ಮಾನಗಳನ್ನು ಚೆನ್ನಾಗಿ ಅರಿತವರು. ಕನ್ನಡ ಸಾಹಿತ್ಯಪರಿಷತ್ತು ತನ್ನ ಭವಿಷ್ಯದ ಯಶಸ್ಸಿಗಾಗಿ ಅವರನ್ನು ಆಶೆಯ ಕಣ್ಣಿನಿಂದ ನೋಡುತ್ತಲಿಂತಿದೆ. ಕಳೆದ ವರ್ಷದ ವಸಂತೋತ್ಸವದ ಕಾಲದಲ್ಲಿ ಶ್ರೀಜಯಚಾಮರಾಜೇಂದ್ರರಾಡಿದ ಪ್ರೋತ್ಸಾಹಕರವಾದ ಮಾತುಗಳಿಂದ ಆ ಆಶೆ ಅಂಕುರಿಸಿ ಪಲ್ಲವಿಸುವುದರಲ್ಲೂ ಇದೆ. ರಾಜಮನೆತನದ ಆಶ್ರಯವಲ್ಲದೆ ಸಾಹಿತ್ಯಪರಿಷತ್ತಿಗೆ ಮೈಸೂರಿನ ಆಡಳಿತವೂ ಸಾಕಷ್ಟು ಮನ್ನಣೆಯನ್ನು ಕೊಡುತ್ತಲಿದೆ. ಮೈಸೂರಿನ ಮಹಾಪ್ರಧಾನರಾದ ಸರ್ ಮಿರ್ಝಾ ಇಸ್ಮೈಲರವರು ಸುವಿವೇಕದೃಷ್ಟಿಯಿಂದ ಸಾಹಿತ್ಯಪರಿಷತ್ತನ್ನು ಕಾಣುತ್ತಿದ್ದಾರೆ. ಸವಿನುಡಿಗಳಿಂದ ಅಲ್ಲಿಯ ಕಾರ್ಯಕರ್ತರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಕನ್ನಡನಾಡಿನ ಏಕೀಕರಣದ ಆವಶ್ಯಕತೆಯನ್ನು ಕಂಡುಂಡು ಅದನ್ನು ಅನೇಕ ಸಲ ತಮ್ಮ ಭಾಷಣಗಳಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ರಾಜರೂ ರಾಜಕೀಯ ಸಂಸ್ಥೆಯೂ ಪರಿಷತ್ತನ್ನು ಇಷ್ಟೊಂದು ಗೌರವಬುದ್ಧಿಯಿಂದ ಕಾಣುತ್ತಿರುವಾಗ, ರಾಜಭಕ್ತಿಪ್ರೇರಿತರಾದ ಮೈಸೂರಿನ ಪ್ರಜೆಗಳು ಅದನ್ನು ಎಷ್ಟೊಂದು ಗೌರವದಿಂದ ಕಾಣಬೇಡ. ಆದುದರಿಂದಲೆ ಪರಿಷತ್ತಿನ ಬೆಳ್ಳಿಯ ಹಬ್ಬ ಅತಿಶಯ ವಿಜೃಂಭಣೆಯಿಂದ ನೆರವೇರುವುದೆಂಬುದರಲ್ಲಿ ಯಾರೂ ಸಂದೇಹಗೊಳ್ಳುವ ಕಾರಣವೇ ಇಲ್ಲ. ವಿಶೇಷಸಂಗತಿಯೊಂದೆಂದರೆ ಸ್ವತಃ ಶ್ರೀಮನ್ಮಹಾರಾಜರೆ ಬೆಳ್ಳಿಯ ಹಬ್ಬಕ್ಕೆ ದಯೆಮಾಡಿಸಲಿರುವರು. ಮಹಾರಾಜರ ವರದಹಸ್ತವೆ ಪರಿಷತ್ತಿಗೆ ಬೆಂಬಲವಾಗಿದೆಯೆಂದ ಮೇಲೆ, ಅವರ ಸರಕಾರವೂ ಮಂತ್ರಿ-ಮಹಾಜನರೂ ನೆರವನ್ನು ಸಾಕಷ್ಟು ಕೊಡಬಹುದೆಂದು ಸಂದೇಹದ ಭವಿಷ್ಯವನ್ನೇನೂ ನುಡಿಯಬೇಕಾಗಿಲ್ಲ.

ಕರ್ನಾಟಕ ವಿದ್ಯಾವರ್ಧಕಸಂಘದ ಸುವರ್ಣಮಹೋತ್ಸವದ ಯಶಸ್ಸಿನ ಮಾತು ಅಷ್ಟೊಂದು ಸುಲಭವಾದುದಲ್ಲ. ಮೊದಲನೆಯ ಮಾತೆಂದರೆ ಋಣಭಾರದಿಂದ ಆ ಸಂಸ್ಥೆಯು ನಡು ಬಾಗಿಹೋಗಿದೆ. ಮಧ್ಯಕಾಲದ ಮಹಾಜನರ ಅಲಕ್ಷ್ಯದ ಮೂಲಕ ಸಾಕಷ್ಟು ಪೋಷಣೆ ಸಿಕ್ಕದೆ ಅದರ ಜೀವನಾಡಿಗಳು ದುರ್ಬಲವಾಗಿವೆ. ನಮ್ಮವರೇ ಎಂದುಕೊಂಡಿದ್ದ ಕಾಂಗ್ರೆಸ್ ಸರಕಾರದವರು ಕೂಡ ಕರ್ನಾಟಕವನ್ನು ಮುಚ್ಚುಗಣ್ಣುಗಳಿಂದ ನೋಡುತ್ತಿದ್ದರೆಂದ ಬಳಿಕ, ಈಗಿನ ಪರಕೀಯರ ಕಾರಭಾರ ಕರ್ನಾಟಕದತ್ತ ಮುಖಕೂಡ ಹೊರಳಿಸದೆಂಬುದರಲ್ಲಿ ಸಂಶಯವಿಲ್ಲ. ಮೈಸೂರಿನ ಮಹಾರಾಜರ ತುಂಬು ನೆರವಿನಿಂದಲೆ ಕ. ವಿ. ವ. ಸಂಘ ಬೆಳೆದುಬಂದುದಾದರೂ ಇಂದು ಇದು ಮಹಾರಾಜರ ಬಳಿ, ಪರಿಷತ್ತಿನಷ್ಟು ಆತ್ಮೀಯತೆಯನ್ನು ಉಳಿಸಿಕೊಂಡಿಲ್ಲ. ಕ. ವಿ. ವ. ಸಂಘದ ಮೂಲಧ್ಯೇಯ, ಮೊದಲಿನ ಕಾರ್ಯ ಎಷ್ಟೊಂದು ಮಹತ್ತ್ವದುದಾಗಿದ್ದರೂ ಇಂದಿನ ಕಾರ್ಯಮಾಂದ್ಯವು— ಕಾರಣವೇನೆ ಇರಲಿ— ಅವುಗಳ ಮೇಲೆ ಉದಾಸೀನತೆಯ ಮುಸುಕನ್ನು ಎಳೆದುಬಿಟ್ಟಿದೆ. ಎಂತಲೆ ಸಂಘವು ಅಖಿಲ ಕರ್ನಾಟಕದ ಸಂಸ್ಥೆಯಾಗಿದ್ದರೂ, ಕನ್ನಡ ಸರಕಾರಗಳ— ಕನ್ನಡ ಮಹಾಜನರ— ಕಣ್ಮನಗಳಲ್ಲದು ಪ್ರವೇಶಿಸುತ್ತಿಲ್ಲ. ‘ಬರಿಯ ಉತ್ತರ ಕರ್ನಾಟಕದ ಸಂಸ್ಥೆ’ ಎಂದು ಮೈಸೂರಿನ ಜನತೆ ಕ. ವಿ. ವ. ಸಂಘವನ್ನು ಅಸಡ್ಡೆ ಮಾಡಬಹುದು. ‘ಮುಂಬಯಿ ಸರಕಾರದ ಅಧೀನಪ್ರದೇಶದಲ್ಲಿ ಇರುವ ಸಂಸ್ಥೆ’ ಎಂದು ಮದ್ರಾಸಸರಕಾರ ‘ದರಕಾರ’ ಮಾಡದಿರಬಹುದು. ಉತ್ತರ ಕರ್ನಾಟಕದ ಸಂಸ್ಥಾನಗಳಂತೂ ದಕ್ಷಿಣಮಹಾರಾಷ್ಟ್ರವೆಂದಾಗಿ ಬಿಟ್ಟಿವೆ. ನಿಜಾಮ ಸರಕಾರಕ್ಕಂತೂ ಕನ್ನಡದ ಆವಶ್ಯಕತೆಯೆ ಇಲ್ಲ. ಹೀಗಿರುವಾಗ ಕ. ವಿ. ವ. ಸಂಘದ ಸುವರ್ಣ-

(೬೮೯ನೆಯ ಪುಟವನ್ನು ನೋಡಿರಿ.)

‘ ಅಲ್ಟೀ ಮಾತಂ ’

ವಾಚಕರೆ, ಮೂರ್ಚ್ಛಿತರಾಗುವ ಸಮಯ-ವಿದಲ್ಲ. ಮೇಲಿನ ಶಬ್ದವನ್ನು ನೋಡಿ ಇದೇನೊ ಮಂಗರಾಯನ ‘ ಹಳೆಗನ್ನಡ ಪಾಂಡಿತ್ಯದ ಪ್ರದರ್ಶನ ’ ಎನಬೇಡಿರಿ. ಈಗಾಗಲೆ ಅನೇಕ ಸಲ ವಿವರಿಸಿದ ಸಂಯುಕ್ತ ಭಾಷಾಕೋಶಕ್ಕೆ ಮಂಗರಾಯನು ಕೊಡಬೇಕೆನುವ ಮೊದಲ ಮುದಿಪ್ಪು ಇದು. ಮಾತುಮಾತಿಗೊಮ್ಮೆ ಬಾಬು ಸುಭಾಷ ಬೋಸರು ‘ ಅಲ್ಟೀಮಾತಂ ’ (ultimatum) ಎನ್ನುವರಲ್ಲ – ಅವರ ಶ್ರೀಮದ್‌ಗಾಂಭೀರ್ಯವೇನು? ಮೊದಲು ಬ್ರಿಟಿಷ್ ಸರಕಾರಕ್ಕೆ ‘ಅಲ್ಟೀ-ಮಾತಂ ’ ಎಂದರು, ಆಮೇಲೆ ವೈಸರಾಯರಿಗೆ ‘ ಅಲ್ಟೀಮಾತಂ ’ ಎಂದರು, ಮೊನ್ನೆಮೊನ್ನೆ ಕಾಂಗ್ರೆಸ ಕಾರ್ಯಕಾರಿ ಸರ್ಕಾರ (High command) ಕ್ಕೆ ‘ ಅಲ್ಟೀಮಾತಂ ’ ಕೊಡೋಣ ಎಂದರು; ಸದ್ಯಕ್ಕೇನೊ ತಮ್ಮ ಬೆಂಬಲಿಗರಿಗೆಯೆ ‘ ಅಲ್ಟೀ ಮಾತಂ ’ ಕೊಡುವವರಿದ್ದಾರೆಂದು ಮಂಗರಾಯನ ವಿಶೇಷವಾರ್ತಾಪತ್ರಿಕೆ. ಅದಕ್ಕಾಗಿ ಮಂಗರಾಯನದೊಂದು ಸಲಹೆ:– ಸುಭಾಷರೆ, ನಿಮಗೇ ನೀವು ಅಲ್ಟೀಮಾತಂ ಕೊಡುವುದಕ್ಕೆ ಹತ್ತಿರ ಬಂದಿದ್ದೀರಿ. ಅದ್ದರಿಂದ ಇನ್ನು ಮೇಲೆ ಒಮ್ಮೆ ನಾವೆಲ್ಲರೂ ‘ ಅಲ್ಟೀಮಾತಂ (ಅಲ್ಟ್+ಈ+ಮಾತಂ) ಕೀ ಜೈ, ಕಲಿತಿ ಬುದ್ಧೀ ಸ್ಯೆ! ’ ಎಂದು ಜಯಘೋಷವನ್ನು ಮಾಡಿ, ‘ಗಾಂಧೀ ಫಾರ್ವರ್ಡ್ ಸುಭಾಷ ಬ್ಲಾಕ್ ಜಿಂದಾಬಾದ’. ಎಂದು ಐಕ್ಯಸಂಘಟನೆಯನ್ನು ಮಾಡಬಾರದೇಕೆ ?

* * *

ಒಂದು ಕತೆ

‘ ಲಂಚತಂತ್ರ ’ ಎಂಬ ಆಧುನಿಕ ರಾಜಕಾರಣ ಕಥಾಸರಿತ್ಸಾಗರದಲ್ಲಿ ಒಂದು ಕತೆ ಇದೆ. ಅದೇ-ಕೆಂತೆಂತೆನೆ :—

ಒಂದಾನೊಂದು ಊರೊಳಗ ಒಂದು ಕಾಗೆ ಇದ್ದಿತು. ಅದೇ ಊರೊಳಗೆ ಬ್ಯಾರೇ ಕಾಗೇನೂ ಇದ್ದುವು, ಅಂದ್ರ ಬಹಳ ಕಾಗೇನೂ ಇದ್ದುವು ಅಂತ. ಬಿದ್ದ ಎಂಜಲೆಲೆ ಎಲ್ಲ ಬಹಳ-ಕಾಗೇಗೇ ಸಿಕ್ಕತಿದ್ದುವು; ಅರ್ಥಾತ್, ಒಂದು-ಕಾಗೆ ಎಂಜಲೆಲೇನ್ನ ತಿರಸ್ಕಾರದಿಂದ ನೋಡತಿತ್ತು. ಒಂದು ದಿವಸ ಬಹಳ-ಕಾಗೇ ಒಳಗಿನ ಇನ್ನೊಂದು-ಕಾಗೆಗೂ ಉಳಿದ ಕಾಗೆಗಳಿಗೂ ಕಡಿದಾಟ ಒದಗಿ ‘ ಎನ್ನಿಂ ಎಂಜಲೆಲೆ ಮಹಾ ! ’ ಎಂದು ಇನ್ನೊಂದು-ಕಾಗೆ ಹಾರಿಹೋಯಿತು. ಅದನ್ನ ಕೇಳಿ ನಮ್ಮ ಒಂದು-ಕಾಗೆ ಇನ್ನೊಂದು-ಕಾಗೆಗೆ ಹೇಳಿತು: ‘ ನಾ ನಿನ್ನ ಜೋಡಿ ಕಡಿದಾಡತೀನಿ, ನೀ ಹೆದರಿ ನಿನ್ನ ಎಂಜಲೆಲೆ ಬಿಟ್ಟುಹೋಗ-ಬೇಡ, ಬಾ ’ ಎಂದಿತು. ಇನ್ನೊಂದು-ಕಾಗೆಗೆ ಆಶ್ಚರ್ಯ ! ‘ ನನ್ನ ಕಂಡರೆ ದ್ವೇಷ ಅಲ್ಲವೆ, ನಿನಗೆ ? ’ ಎಂದಿತು. ‘ ಆದರೆ ನಾನೂ ನೀನೂ ಒಂದೇ ಎಂಜಲೆಲೆಯ ಭಕ್ತರು ’ ಎಂದು ಉತ್ತರ ಕೊಟ್ಟಿತು ನಮ್ಮ ಒಂದು-ಕಾಗೆ.

ಮಂಗಗಳಿರಾ, ತಾತ್ಪರ್ಯವೇನೆಂದರೆ ಮರುಳ-ಮಾನವನಿಗೆ ಬೇಕಾದ್ದೇ ಆರಾಧ್ಯದೇವತೆ ಯಾಗುವುದು.

ಓಂ ಓಹಿ ! ಹಹ !! ಹುಹು !!!

* * *

ಸಂಭವಾಮಿ ಯುಗೇ ಯುಗೇ

ಆಗ ವೈಶಂಪಾಯನನಿಂತೆಂದನು :— ‘ ಹೇ ಜನ್ಮಜನ್ಮೇಜಯಾ, ಇಂತು ದ್ರೌಪದಿಯ ವಸ್ತ್ರಂಗಳಂ ಸೆಳೆವಂದು, ಆ ಕೌರವಸಭೆ ನಿಶ್ಚಯಿಸಲೊರ್ವ ಸಭಿಕರಾಜನೆನ್ನುವಂಥಾತ್ತನಾದನಲ್ಲಾ “ ಧೃತರಾಷ್ಟ್ರ, ದ್ರೌಪದಿಯ ವಸ್ತ್ರಂಗಳಂ ಯಾರು ಸೆಳೆಯಬೇಕೆಂದು ನಿರ್ಣಯಿಸಲ್ ಶಕುನಿ-ಕರ್ಣ-ದುರ್ಯೋಧನರ ಉಪ-ಸಮಿತಿಯಂ ಗೊತ್ತುಪಡಿಸೀಕರಿಸಬೇಕೆಂದು ನನ್ನ ಸೂಚನೆ. ” ಈ ಮಾತಿನಿಂದ ಸಿಡಿದೆದ್ದು ವಿದುರಂ ಪುರೋಭಾಗನಾಗಿ ಹೀಗೆ ಗದ್ದರಿಸಿದಂ: ‘ದ್ರೌಪದಿಯಂ ಈ ಸಭೆಗೆ ಎಳೆತರ್ಪುದರ ಯುಕ್ತಾ-ಯುಕ್ತಮಂ ನಿರ್ಣಯಿಸುವ ಹಕ್ಕುಂ ಪ್ರತಿಯೊರ್ವ ಸಭಿಕಂಗುಂಟು. ಅದಂ ಮೊದಲ್—’, ವಿದುರನ ಮಾತು ಮುಗಿವ ಮುನ್ನಮೆ ಶಕುನಿ ಶಂಖನಾದದಿಂದೆದ್ದು “ ಯಾರು ದ್ರೌಪದಿಯಂ ಎಳೆತರಬೇಕೆಂಬ ವಿಚಾರ ನಡೆದಿರ್ಪಲ್ಲಿ ವಿದುರನ ಈಮಾತು ನಿಯಮಬಾಹ್ಯವೆಂವೆನ್ನ ಸೂಚನೆ ’ ಎನಲಾಗಿ, ಧೃತರಾಷ್ಟ್ರಂ “ ನಿಯಮಬಾಹ್ಯಂ, ವಿದುರನ ಮಾತು ನಿಯಮಬಾಹ್ಯಂ ” ಎಂದು ಸಾರಲ್, ವಿದುರಂ ಆರ್ಭಟಿಸಿ ತನ್ನ ಹಕ್ಕುಂ ಕುಕ್ಕರಿಸಿತೆ ಗಡ ! .. ಎಂದು ಸಭಾತ್ಯಾಗಮಂ ಮಾಡಿದಂ ಇಂತು ಕೆ. ಪಿ. ಸಿ. ಸಿ. ಎಂಬ ಕೌರವ-ಪಾಂಡವ-ಪರ್ಯಂತ್ತು-ಸಭೆ ಕೊನೆಸಾರ್ದುದುಂ ’ ಓಂ ತತ್ಸತ್ತು !

* * *

ಬಿಳಿ ಭಕ್ತಿಯೋಗ

‘ ಹಿಂದುಸ್ತಾನವು ಒಂದು ದೇಶವಲ್ಲ. ಯಾಕೆಂದರೆ ಈ ದೇಶದಲ್ಲಿ ಪರಸ್ಪರವಿರುದ್ಧವಾದ ಹಿಂದು ಮತ್ತು ಇಸ್ಲಾಂ ಎಂಬ ಎರಡು ಧರ್ಮಗಳಿವೆ.’ ಎಂಬ ಸೈಮನ್ ಸೂತ್ರಕ್ಕೆ ‘ ಆದ್ದರಿಂದ ಹಿಂದು ಹಿಂದುಸ್ತಾನ ಮತ್ತು ಮುಸ್ಲಿಂ ಹಿಂದುಸ್ತಾನ ಎಂಬ ಎರಡು ದೇಶಗಳಿವೆ ’ ಎಂದು ಬ್ಯಾ. ಜಿನಾ ಅವರು ಭಾಷ್ಯಬರೆದಿದ್ದಾರೆ. ಇದನ್ನು ಓದಿ ಮಂಗರಾಯರಿಗೆ ಎರಡು ಸಾಲುಗಳು ಸ್ಮರಣೆಗೆ ಬಂದಿವೆ; ಯಾವ ‘ ಧುರಂಧರ ದಾಸ ’ರು ಬರೆದಿದ್ದಾರೊ ಸ್ಮರಣೆಯಲ್ಲಿಲ್ಲ. ಇರಲಿ. ಆ ಸಾಲುಗಳು ಹೀಗೆ :—

‘ಬಿಳಿ ಬಿಳಿ ಬಿಳಿ ಎಂದು ಬಿಳಿ ಟೊಪ್ಪಿಗೆ ಹಾಕುತಿ!
ಬಿಳಿ ಜನ ಶಾಸ್ತ್ರ ಎನಬಾರದೆ ? ’

ತಾತ್ಪರ್ಯವೇನೆಂದರೆ, ಸೈಮನ್ ಕಮಿಶನದ ಸೈಮನ್ ಸಾಹೇಬರು ಬಿಳಿಜನ; ಅದ್ದರಿಂದ ಬ್ಯಾ. ಜಿನಾ ಸಾಹೇಬರಿಗೆ ಅವರು ಆಧಾರ. ಕಾಂಗ್ರೇಸಿನವರಿಗೊಂದು ಬಿಳಿ ಬಣ್ಣದ ‘ಮಡಿ’ ಇದ್ದುದರಿಂದ ಜಿನಾ ಸಾಹೇಬರಿಗೂ ಒಂದು ಬಿಳಿ ಆಧಾರ ಬೇಕಾಯಿತು ! ಹೀಗೆ ‘ ಬಿಳಿ ’ ಧ್ಯೇಯಕ್ಕೆ ನಿಟ್ಟಿಸಿದ ಕಣ್ಣೇ ಕೊನೆಗೆ ಬೆಳ್ಳಗಾಗಬಹುದಲ್ಲ ಎಂದು ಮಂಗರಾಯನ ಮಿತ್ರರೊಬ್ಬರಿಗೆ ಶಂಕೆ. ಈ ಹೆದರಿಕೆಗಾಗಿಯೆ ನಮ್ಮ ಕೆ. ಪಿ. ಸಿ. ಸಿ. ಯವರು ಒಬ್ಬ ‘ ಡಾಕ್ಟರ ’ ನನ್ನು ಅಧ್ಯಕ್ಷ ಮಾಡಿರಬಹುದೆ ಎಂದು ಇನ್ನೊಂದು ಶಂಕೆ. ಎರಡೂ ಶಂಕೆಗಳು ನಿರಾಧಾರವೆಂದು ಮಂಗರಾಯನು ಅಭಯ ಕೊಡುತ್ತಾನೆ. ಕೆ. ಪಿ. ಸಿ. ಸಿ. ಅಧ್ಯಕ್ಷರು ವೇದದ ಡಾಕ್ಟರರಲ್ಲ; ಕಣ್ಣು ಬೆಳ್ಳಗಾದರೆ ಅಂತಹ ಅನಿಷ್ಟ ಎಂದೇ ಹೇಳುವಂತಿಲ್ಲ. ಕ್ಷೀರಸಾಗರದಲ್ಲಿದ್ದ ವಿಷ್ಣು, ಬೂದಿ ಬಳಿದುಕೊಂಡ ಶಿವ ಇಬ್ಬರೂ ಅಷ್ಟೇ ಬಿಳಿ ಎನಿಸಿ ಐಕ್ಯವಾಗಬಹುದು.

ಅಂತೂ ಇಂದಿನ ‘ಬೆಳಗಾಂ’ ದ ಮಹಿಮೆಯ-ನ್ನರಿತು ಎಲ್ಲರೂ ಬಿಳಿಹಲ್ಲು ತೋರಿಸಲು ಮಂಗ-ರಾಯನನ್ನನುಕರಿಸುವುದರಲ್ಲಿ ಸಂದೇಹವಿಲ್ಲ.

* * *

ಕುರುಬರು ಯಾರು ?

ಡಾ. ನಾಗನಗೌಡರು ಕೆ. ಪಿ. ಸಿ. ಸಿ. ಅಧ್ಯಕ್ಷರಾಗಿ ಚುನಾಯಿತರಾದುದಕ್ಕೆ ಅವರನ್ನು ಅಭಿ-ನಂದಿಸುವಾಗ ಕರ್ನಾಟಕದ ಒಂದು ‘ಉಜ್ಜ್ವಲ’ (ರಲಯೋರಭೇದಃ) ಕಾಂಗ್ರೆಸ್ ದಿನಪತ್ರಿಕೆಯು ಡಾ. ನಾಗನಗೌಡರು ಕುರುಬರಿದ್ದು ಹಿಂದುಳಿದ ಜಾತಿಗೆ ಸೇರಿದವರು ಎಂಬ ಕಾರಣವನ್ನೂ ತೋರಿಸಿದೆ. ಜಿನಾ ಸಾಹೇಬರ ಜಂಭ ಇನ್ನಾದರೂ ಇಳಿಯಲಿ. ಇಂತಹ ಉದಾಹರಣೆಗಳಿರುವಾಗ ಕಾಂಗ್ರೆಸು ಹಿಂದುಜನರ ಸಂಸ್ಥೆ, ಮುಸಲ್ಮಾನೇತರ ಸಂಸ್ಥೆ ಎಂದು ಹೇಳಬಹುದೆ ? ಇನ್ನೂ ಹಾಗೆಯೆ ಹೇಳುವ ಹಟವಿದ್ದರೆ ‘ಕುರುಬ’ರು ಯಾರು ಎಂಬುದಕ್ಕೆ ಮಂಗರಾಯನಿಗೆ ಎಳ್ಳಷ್ಟು ಸಂದೇಹ ಉಳಿಯಲಿಕ್ಕಿಲ್ಲ. ‘ಕೇವಲ ಕುರಿಗಳನು ಕಾಯುವವನೆ ಕುರುಬ’ ಎಂಬುದು ಅವ್ಯಾಪ್ತಿಯ ವ್ಯಾಖ್ಯೆ ಎಂದು ಘನವಂತ, ಧನವಂತ ಬ್ಯಾರಿಸ್ಟರರಿಗೆ ತಿಳಿಯಲಿಕ್ಕಿಲ್ಲವೆ ?

* * *

ಮಡಿಯ ಕನ್ನಡಕ್ಕೆ ರೇಡಿಯೋ ಮೈಲಿಗೆ !

ಕನ್ನಡಿಗರೆಲ್ಲ ಕಾಂಗ್ರೆಸಿನ ಭಕ್ತರು. ಕಾಂಗೆಸ್ಸು ಹೇಳುತ್ತದೆ: ಪರದೇಶೀಯ ವಸ್ತುಗಳ ಸಂಬಂಧವನ್ನು ಯಾವರೀತಿಯಲ್ಲಿಯೂ ತಂದುಕೊಳ್ಳಬಾರದೆಂದು. ರೇಡಿಯೋ ಯಂತ್ರಗಳು ಪರದೇಶೀಯವಲ್ಲವೆ ? ಆದಕ್ಕಾಗಿಯೆ ಆ ಯಂತ್ರಗಳ ಮೂಲಕ ಕನ್ನಡ ಮಾತು ಕೇಳುವುದನ್ನೂ ಕನ್ನಡ ಮಾತು ಆಡುವುದನ್ನೂ ಕನ್ನಡಿಗರು ಬಹಿಷ್ಕರಿಸಬೇಕು. ಎರಡನೆಯವರಿಗೆ ನೆರವಾಗಬೇಕಾದುದಂತೂ ಮನುಷ್ಯ ಧರ್ಮ; ಎಂದಮೇಲೆ ಪಾಪ, ರೇಡಿಯೋಯಂತ್ರಗಳನ್ನು ಕೊಂಡು ಕಂಪನಿಗೆ ಔದಾರ್ಯ ತೋರಿಸಲೆ ಬೇಕು. ಭಾರತದಲ್ಲಿಯ ಮಿಕ್ಕ ಪ್ರಾಂತದ ಭಾಷೆಯವರಿಗೆ ಸ್ವದೇಶಾಭಿ-ಮಾನದ ಮಡಿ-ಮೈಲಿಗೆಗಳೇನು ಗೊತ್ತು ? ಆದುದರಿಂದಲೆ ರೇಡಿಯೊಗಳಲ್ಲಿ ಅವರು ಹಾಡುತ್ತಾರೆ; ಮಾತನಾಡುತ್ತಾರೆ; ಕತೆ ಹೇಳುತ್ತಾರೆ; ನಾಟಕ ಮಾಡುತ್ತಾರೆ. ನಾಟಕಕಂಪನಿಗಳನ್ನು ನಡೆಯಿಸುವುದೂ ಅವುಗಳಲ್ಲಿ ನಟರಾಗಿ ಸೇರಿಕೊಳ್ಳುವುದೂ ಧರ್ಮಲಂಡತನವಾದರೂ, ನಾಟಕಗಳನ್ನು ನೋಡಿ ಆನಂದಪಡುವುದೇನು ಧರ್ಮಲಂಡತನವಲ್ಲ. ಮಡಿಯ ಮೂರ್ತಿವೆತ್ತಂತಿರುವ ವೈದಿಕರು, ವಿಧವೆಯರು, ಸಂನ್ಯಾಸಿಗಳು, ಸ್ವಾಮಿಗಳು ಎಲ್ಲರೂ ನಾಟಕನೋಡಲು ಹೋಗುವರು. ಆದರಂತೆಯೆ ನಮ್ಮ ಸನಾತನವೃತ್ತಿಯ ಕನ್ನಡಿಗರಿಗೆ, ಕನ್ನಡಕ್ಕೆ ರೇಡಿಯೋದ ಮೈಲಿಗೆಯಾಗುವುದು ಬೇಕಾಗಿಲ್ಲವಿನ್ನೇ ! ಬೇರೆ ಭಾಷೆಯವರ ಹಾಡು-ಮಾತು-ಕತೆಗಳನ್ನೆಲ್ಲ ಕೇಳಿ ಮೌಜುಮಾಡಬಹುದು. ಈಗ ರೇಡಿಯೋದಲ್ಲಿ ಎಲ್ಲ ಭಾಷೆಗಳಲ್ಲಿಯೂ ದೇಶ-ವಿದೇಶಗಳ ಸುದ್ದಿಯನ್ನು ಹೇಳಲಾಗುವುದು. ಕನ್ನಡಿಗರಿಗೆ ಕನ್ನಡಭಾಷೆಯಲ್ಲಿ ಬೇಕಾಗಿಯೆ ಇಲ್ಲ. ಏಕೆಂದರೆ ಈಗ ಬರುವ ಸುದ್ದಿಗಳೆಲ್ಲ ಹೆಚ್ಚಾಗಿ ಯುದ್ಧಸಂಬಂಧದ ಸುದ್ದಿಗಳು; ಅಲ್ಲದೆ ಬೇರೆಬೇರೆ ರಾಷ್ಟ್ರಗಳು ತಂ-ತಮ್ಮ ಪಕ್ಷಪ್ರಚಾರಕ್ಕಾಗಿ ಸುಳ್ಳುಸುದ್ದಿಗಳನ್ನು ಹಬ್ಬಿಸುತ್ತಿರುವುವು. ಎಂದಮೇಲೆ ಈ ರೇಡಿಯೋ ಸುದ್ದಿಗಳಲ್ಲಿ ಹಿಂಸೆ-ಅಸತ್ಯ ತುಂಬಿರುವುದೆಂಬುದು ಸಿದ್ಧವೇ ಸಿದ್ಧ. ಅಹಿಂಸೆ-ಅಸತ್ಯಗಳಲ್ಲಿ ಸಂಪೂರ್ಣ ಶ್ರದ್ಧೆಯನ್ನಿಟ್ಟ ಕನ್ನಡಿಗರು, ಈ ಹಿಂಸೆ-ಅಸತ್ಯಗಳು ತುಂಬಿದ ಸುದ್ದಿಗಳನ್ನು ಕೇಳುವುದೆಂದರೇನು? ರಾಮ ರಾಮ! ಶಿವ ಶಿವ! ಅರೇ ಅಲ್ಲಾ! ಶಾಂತಂ ಪಾಪಂ! ಆದಕ್ಕಾಗಿಯೆ ‘ರೇಡಿಯೊ ಇರಲಿ; ರೇಡಿಯೋಗಳಲ್ಲಿ ಕನ್ನಡ ಮಾತು ಮಾತ್ರ ಬರುವುದು ಬೇಡ’ ಎಂಬುದಾಗಿ ಎಲ್ಲ ಕನ್ನಡಿಗರೂ ಸತ್ಯಾಗ್ರಹ ಹೂಡಬೇಕೆಂದು ಮಂಗರಾಯನ ಖಂಡಿತವಾದ ಅಭಿಪ್ರಾಯ. ಧರ್ಮಲಂಡರು ಕೆಲವರು ಕನ್ನಡಕ್ಕೆ ರೇಡಿಯೋಯಂತ್ರಗಳ ಮೈಲಿಗೆ ಮಾಡಿಯೆ ಬಿಡುವೆವೆಂದು ಪಟತೊಟ್ಟು ಹೊರಟಿದ್ದಾರಂತೆ. ಅವರೆಲ್ಲರಿಗೂ ಆ ವರವರ ಗುರು-ಪೀಠದ ಸ್ವಾಮಿಗಳು ಬಹಿಷ್ಕಾರ ಹಾಕುವಂತೆ ಕನ್ನಡಿಗರೆಲ್ಲ ಏಕಮುಖವಾಗಿ ಪ್ರಯತ್ನ ಮಾಡುವುದು ತುಂಬ ಅಗತ್ಯ. ಅವರವರ ಜಾತಿಯ ದೇವತೆ ಅವರವರ ಹೃದಯದಲ್ಲಿ ನಿಂತು ಹೀಗೆ ಮಾಡುವಂತೆ ಪ್ರಚೋದಿಸಲೆಂದು ಮಂಗರಾಯನ ಪ್ರಾರ್ಥನೆ :—

ಜಗದೀಶಾ ನೀನೆ ಕಾಯಬೇಕು ಕನ್ನಡವ

ಹಗಲಿರುಳೂ ಕಿರುಚುತಿರುವ ರೇಡಿಯೊದಿಂದ.

* * *

ಬುಭುಕ್ಷಿತಃ ಕಿಂ ನ ಕರೋತಿ ?

ಜಮಖಂಡೀ ಸಂಸ್ಥಾನದ ಘಟನಾಸಮಿತಿಯ ಎದುರು ಅನೇಕ ಜನರು ಸಾಕ್ಷಿ ನುಡಿದಿರುತ್ತಾರೆ. ಆ ಜನರಲ್ಲಿ ಶ್ರೀಮಾನ್ ಚಿಕ್ಕೋಡಿ ಪಂಡಿತಪ್ಪನವರೂ ಒಬ್ಬರು. ಇವರು ಕನ್ನಡದ ಕಟ್ಟಾಳುಗಳಾದ ದಿವಂಗತ ಚಿಕ್ಕೋಡಿ ತಮ್ಮಣ್ಣನವರಿಗೆ ಹತ್ತಿರದ ಬಂಧುಗಳು. ಜಮಖಂಡಿಯಲ್ಲಿ ಸೇರಿದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಸ್ವಾಗತಾಧ್ಯಕ್ಷರಾಗಿದ್ದರು. ಹಿಂದೊಮ್ಮೆ ಬಳ್ಳಾರಿಯಲ್ಲಿ ಸೇರಿದ ಏಕೀಕರಣ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರೇನೊ ! ಸ್ವತಃ ಹದಿನಾರಾಣೆಯ ಕನ್ನಡಿಗರೂ ಅಹುದು. ‘ವಿಭಾಕರ’ ಎಂಬ ಕನ್ನಡ ಪತ್ರಿಕೆಯನ್ನು ಕನ್ನಡದ ಅಭಿಮಾನದಿಂದ ನಡೆಯಿಸಿಕೊಂಡು ಬಂದವರು ಇವರು ತಮ್ಮ ಸಾಕ್ಷಿಯಲ್ಲಿ ಕನ್ನಡದ ಬಗೆಗೆ ಏನು ಹೇಳಿರುವರೆಂಬುದು ಗೊತ್ತೋ ?

“ಕನ್ನಡ ದಪ್ತರ ಮಾಡುವ ತತ್ತ್ವವನ್ನು ಒಮ್ಮೆ ಒಪ್ಪಿದ ಮೇಲೆ ಉಪಕ್ರಮದ ವಿವರಗಳನ್ನು ಸರಕಾರದವರೇ ಯೋಜಿಸಬೇಕು. ರಾಜ-ಭಾಷೆ ಮರಾಠಿಯಿದ್ದು ದರಿಂದ ಅದನ್ನು ಬಿಡುವುದು ಶಕ್ಯವೇ ಇಲ್ಲ. ಮರಾಠೀ ಜನರು ಕನ್ನಡವನ್ನೂ ಕನ್ನಡ ಜನರು ಮರಾಠಿಯನ್ನೂ ಕಲಿಯಲಿಕ್ಕೇ ಬೇಕು.”

ಶ್ರೀ. ಪಂಡಿತಪ್ಪನಂತಹ ಕಡುಗನ್ನಡಿಗರು ಹೀಗೆಯೇಕೆ ಹೇಳಿರುವರೆಂಬುದರ ಬಗೆಗೆ ಆತುರರಾಗಿಯೂ, ಕಾತರರಾಗಿಯೂ, ವಿಸ್ಮಿತರಾಗಿಯೂ, ಭಯಭೀತರಾಗಿಯೂ ಅನೇಕ ಕನ್ನಡಿಗರು ಮಂಗರಾಯನನ್ನು ಕೇಳಿದ್ದಾರೆ. ಮಂಗರಾಯ ಅವರಿಗೆ ಏನೆಂದು ಹೇಳಬೇಕು ? ಸುಳ್ಳು ಹೇಳಿದರೆ ಜನತೆಯ ದ್ರೋಹ ಕಟ್ಟಿಕೊಂಡಂತಾಗುವುದು. ನಿಜ ಹೇಳಿದರೆ ಅದಕ್ಕೆ ಸಂಬಂಧಿಸಿದವರನ್ನು ರೇಗಿಸಬೇಕಾಗುವುದು. ನಿರುಪಾಯ. ಜನತೆಯ ಪಕ್ಷಪಾತಿಯಾದ ಮಂಗರಾಯ ಈಗ ಸತ್ಯವನ್ನೇ ಹೇಳಬೇಕಾಗಿದೆ. ಆ ಸತ್ಯ ಇದು :—

“ಚಿಕ್ಕೋಡಿ ಪಂಡಿತಪ್ಪನವರಿಗೆ ಮುಂಬಯಿ ಮಂತ್ರಿಮಂಡಲದಲ್ಲಿ ಸ್ಥಾನ ದೊರೆಯಲಿಲ್ಲ; ಇನ್ನು ಮುಂದೆಯೂ ದೊರೆಯುವ ಸಂಭವವಿಲ್ಲ. ಎಲ್ಲಿಯಾದರೂ ಇದ್ದು ‘ಮಂತ್ರಿ’ಗಳೆನಿಸಿಕೊಳ್ಳಬೇಕೆಂಬ ಹಸಿವು ಅವರನ್ನು ತುಂಬ ಬಾಧಿಸುತ್ತಲಿದೆ. ಹಸಿದವನು ಅದನ್ನು ಕಳೆದುಕೊಳ್ಳಲು ಏನನ್ನು ಮಾಡಲಾರ ? ನಾಡು-ನುಡಿಗಳು ಹಸಿವನ್ನು ಕಳೆಯುವುವೇ ? ಬಂಧು-ಬಾಂಧವರ ಹಿತ ಹಸಿವನ್ನು ಹಿಂಗಿಸುವುದೇ ? ಹಸಿದವ ಬಲ್ಲ ಹಸಿವೆಯ ಶೂಲಿ ! ಪಂಡಿತಪ್ಪನವರಿಗೆ ಮಂತ್ರಿತ್ವದ ಹಸಿವೆ ಹೆಚ್ಚಾಗಿದೆ. ಈ ಮಾತು ಸುಳ್ಳೆನಿಸಿದರೆ ಆ ಘಟನಾಸಮಿತಿಯೆದುರು ‘ಸಂಸ್ಥಾನದ ಆಡಳಿತಕ್ಕೆ ಮಂತ್ರಿಗಳು ಎಂಥವರು ಬೇಕು ? ಎಷ್ಟು ಜನಬೇಕು ?’ ಎಂಬುದರಬಗೆಗೆ ಅವರು ಹೇಳಿದ ಮಾತುಗಳನ್ನೆಲ್ಲ ಹಿಂಜಿ ನೋಡಿರಿ !”

ಫಿನ್‌ಲಂಡನ್ನು ಸುತ್ತಿರುವ ಪ್ರಾಣಸಂಕಟ

★

ನಿಸರ್ಗ ಶೋಭೆಯ ನೆಲೆವೀಡು !

ಸ್ವಾತಂತ್ರ್ಯಪ್ರಿಯ ಜನರ ನಚ್ಚಿನನಾಡು !

ಚಾರ್-ಮನೆಯ “ ಹೆಚ್ಚೇಶ ” ಬರೆದುದು

★



ಹರ್ ಕ್ಯಾಲಿಯೊ ಕ್ಯೊಸ್ಟಿಯವರು
ಫಿನ್‌ಲಂಡಿನ ಪ್ರೆಸಿಡೆಂಟರು.

ಸಣ್ಣ ಸಣ್ಣ ರಾಷ್ಟ್ರಗಳು ಇನ್ನು ಸ್ವಾತಂತ್ರ್ಯಸುಖದಲ್ಲಿ ಬದುಕಲಾರವೇನೊ ಎಂಬ ಸಂಶಯ ದಿನದಿನಕ್ಕೆ ಬಲಗೊಳ್ಳುವುದರಲ್ಲಿದೆ. ಇಂದು ಫಿನ್ಲಂಡು ಸೋತರಂತೂ ರಸಿಯದ ಅಧೀನತೆಯಲ್ಲಿ ಬಾಳಲೆ ಬೇಕು. ಇಂಗ್ಲೆಂಡ್-ಫ್ರಾನ್ಸುಗಳ ನೆರವಿನಿಂದ ಜಯಶಾಲಿಯಾದರೂ ನೆರವಿತ್ತ ಉಪಕಾರಕ್ಕಾಗಿ ಅದು ಆ ಹಿರಿಯ ರಾಷ್ಟ್ರಗಳ ಕೈಗೊಂಬೆಯಾಗಿ ಬದುಕಬೇಕು.

ಫಿನ್‌ಲಂಡಿನ ಹೆಸರನ್ನು ಈಗೆರಡು ತಿಂಗಳು ವೃತ್ತಪತ್ರಿಕೆಗಳಲ್ಲಿ ನೋಡಿದಷ್ಟು ಇನ್ನಾವ ಸಮಯದಲ್ಲಿಯೂ ನೋಡಿರಲಿಕ್ಕಿಲ್ಲ. ಆದರೂ ಫಿನ್‌ಲಂಡಿನ ಭವಿಷ್ಯದ ವಿಷಯವಾಗಿ, ಈಗ ಕೂಡ ಜನರಲ್ಲಿ ಇರುವಷ್ಟು ಸಂಶಯ, ಅಸಮಾಧಾನ, ಅನಿಶ್ಚಿತತೆಗಳು ಮತ್ತಾವ ದೇಶದ ವಿಷಯವಾಗಿಯೂ ಇಲ್ಲ. ಪೋಲಂಡ್, ಫಿನ್‌ಲಂಡುಗಳಲ್ಲಿರುವ ಅಂತರವೆಂದರೆ ಇದೆ! ಪೋಲಂಡನ್ನು ಹಿಟ್ಲರನು ಹೇಳಿಕೇಳಿ ದಂಡೆತ್ತಿಹೋಗಿ, ಮುತ್ತಿ, ಮಿಂಚಿನಂತೆ ಆ ದೇಶವನ್ನು ಸದೆಬಡೆದು, ಕ್ಷಣಮಾತ್ರದಲ್ಲಿಯೇನೋ ಎನ್ನುವಂತೆ ಕೈವಶಮಾಡಿಕೊಂಡನು. ಅದಕ್ಕಾಗಿ ಪೋಲಂಡಿನ ವಿಷಯವಾಗಿ ಜಗತ್ತಿನ ಮುಂದಾಳುಗಳಿಗೆ ನಿಶ್ಚಿತವಾದ ಕಲ್ಪನೆಯು ಬಂದಿತ್ತು. ಆದರೆ ಅತ್ತ ಪೋಲಂಡು ಸ್ವಾತಂತ್ರ್ಯವನ್ನು ಕಳೆದುಕೊಂಡ ಕೂಡಲೆ, ಯುರೋಪಿನ ಯುದ್ಧದ ವಾತಾವರಣವೇ ಬೇರೆಯಾಯಿತು. ಸಂಘವಾದದ ಕಡುಹಗೆಯೆಂದು ತಾನೇ ತನ್ನ ಆತ್ಮಚರಿತ್ರೆಯಲ್ಲಿ ಡಂಗುರ ಹೊಡೆದ ಹಿಟ್ಲರನು, ಆಗ ಸ್ಟಾಲಿನನ ಸಂಗಡ ಸಂಧಿಯನ್ನು ಮಾಡಿಕೊಂಡುದು ಇಡಿಯ ಪ್ರಪಂಚವನ್ನೆ ಆಶ್ಚರ್ಯಗೊಳಿಸಿತು. ಆ ಪರಿಸ್ಥಿತಿಯ ಒಳತಿರುಳನ್ನು ತಿಳಿದುಕೊಳ್ಳುವಷ್ಟರಲ್ಲಿಯೆ, ಅಲ್ಲಿ ಮತ್ತೊಂದು ಸಂಗತಿಯು ಸಂಭವಿಸಿತು. ರಸಿಯವು ಫಿನ್‌ಲಂಡನ್ನು ನುಂಗಬೇಕೆಂದು ಪ್ರಯತ್ನ ನಡೆಯಿಸಿರುವ ಸುದ್ದಿ ಎಲ್ಲೆಡೆಯಲ್ಲಿಯೂ,—ಕೆಟ್ಟಸುದ್ದಿಯೇ ಇದ್ದುದದರಿಂದ—ಕೂಡಲೆ ಹಬ್ಬಿತು. ಇದನ್ನು ಕೇಳಿ ಅಷ್ಟೇನು ಆಶ್ಚರ್ಯವಾಗಲಿಲ್ಲ ಜನರಿಗೆ! ರಸಿಯಾದೇಶವನ್ನು ‘ಈ ಸುದ್ದಿಯು ಸಟೆಯೆ?’ ಎಂದು ಕೇಳಿದಕೂಡಲೆ, ಕೇಳಿದವರಿಗೆ ಕಣ್ಣುಕತ್ತಲೆಗಟ್ಟುವಂತಹ ಉತ್ತರವು ದೊರೆಯಿತು. “ನಾವು ಎಂದೂ ಯಾರ ಮೇಲೆಯೂ ಕೈಯೆತ್ತುವುದಿಲ್ಲ” ಎಂದು ರಸಿಯವು ಘಂಟಾಘೋಷವಾಗಿ ಹೇಳುತ್ತಿರುವಾಗಲೆ ಅತ್ತ ಫಿನ್‌ಲಂಡು ಪಡುತ್ತಿದ್ದ ಪರಿತಾಪವನ್ನು ಅಲ್ಲಿಯ ಜನರೇ ಬಲ್ಲರು. ಒಳಗಿಂದೊಳಗೆ ಅವರು ಅನುಭವಿಸುತ್ತಿರುವ ತೊಂದರೆ-ತೊಳಲಾಟಗಳನ್ನು ಜಗತ್ತಿನ ಜನರಿಗೆ ಇನ್ನು ಹೇಗೆ ತಿಳಿಸಬೇಕು, ಎಂತು ಅವರ ಸಹಾಯವನ್ನು ಪಡೆಯಬೇಕು ಎಂಬುದು ಕೆಲಕಾಲ ಫಿನ್‌ಲಂಡಿನ ಹಿರಿಯರಿಗೆ ತೋಚದಂತಾಯಿತು. ಆದರೂ ಇತ್ತೀಚೆಗೆ, ರಸಿಯದ ಈ ‘ಮುಸುಕಿನೊಳಗಿನ ಗುದ್ದಾಟ’ ದ ವಿಷಯವಾಗಿ ಜನರಿಗೆ ಸರಿಯಾದ ಕಲ್ಪನೆಯು ಬರತೊಡಗಿ, ಫಿನ್‌ಲಂಡಿನ ಬಗೆಗೆ ಸಂಪೂರ್ಣ ಸಹಾನುಭೂತಿ ಕಾಣಲಾರಂಭಿಸಿದೆ.

ಫಿನ್‌ಲಂಡು ಎಷ್ಟು ಪುರಾತನವಾದ ದೇಶವೋ, ಅಷ್ಟೆ ಪ್ರಸಿದ್ಧವಾದ ದೇಶ ತಮ್ಮ ಸ್ವಾತಂತ್ರ್ಯರಕ್ಷಣೆಗಾಗಿ! ಮೊದಲಿನ ಫಿನಿಶ್ ಜನರು ಪಂಗಡಗಳಲ್ಲಿ ಇರುತ್ತ, ಬೆಸ್ತರಂತೆ ಅಥವಾ ಅರಬರಂತೆ ಮೇಲಿಂದಮೇಲೆ ತಮ್ಮ ನಿವಾಸಸ್ಥಾನವನ್ನು ಬದಲಿಸುತ್ತಿದ್ದರು. ಯುರೋಪದ ಉತ್ತರದಲ್ಲಿರುವ ರಾಷ್ಟ್ರಗಳಲ್ಲೆಲ್ಲ ಫಿನ್‌ಲಂಡಿಗಿರುವ ವನಶೋಭೆಯು ಮತ್ತಾವ ನಾಡಿಗೂ ಇಲ್ಲ. ಎಲ್ಲೆಡೆಯಲ್ಲಿಯೂ, ಕೆರೆ-ಕಾಲುವೆ, ಹೊಳೆ-ಹಳ್ಳಗಳು ಕಂಗೊಳಿಸುವುವು; ಚಳಿಗಾಲದಲ್ಲಿ ನಾಡಿನ ಮುಕ್ಕಾಲು ಭಾಗವು, ಹಿಮದಿಂದ ಮುಚ್ಚಲ್ಪಟ್ಟಿರುವುದು. ಆದರಿಂದ ಆ ದೇಶಕ್ಕೆ ಯಾವಾಗಲೂ

ತನ್ನ ಕಾರ್ಯಶಕ್ತಿಯನ್ನು ಜಾಗೃತವಾಗಿಟ್ಟುಕೊಂಡಿರಲು ಸಹಜ ಸಾಧ್ಯವಾಗಿದೆ.

ಫಿನ್‌ಲಂಡ್ ದೇಶವು ಭಾರತದಂತೆ ಕೃಷಿಪ್ರಧಾನವಾದುದು. ಅಲ್ಲಿಯ ಜನರಿಗೆ ರಸಿಯದ ವಿಷಯವಾಗಿ ಏನೋ ಒಂದು ಬಗೆಯ ವೈಮನಸ್ಯವುಂಟಾಗಿ, ಜರ್ಮನರ ಬಗೆಗೆ ಈಗ ಕೂಡ ಆತ್ಮೀಯ ಭಾವವು ವಾಸಿಸುತ್ತಿರುವುದು. ಇದಕ್ಕೆ ಅಲ್ಲಿಯ ಐತಿಹಾಸಿಕ ಸನ್ನಿವೇಶಗಳೇ ಕಾರಣ ಎಂದು ಹೇಳಬಹುದು. ಫಿನ್ನಿಶರು ಮೊದ ಮೊದಲು ಹಿಂಡುಹಿಂಡಾಗಿ ಜೀವಿಸುತ್ತಿದ್ದವರು, ೧೧ನೆಯ ಶತಮಾನದ ನಡುವೆ ಸ್ವೀಡನ್ನಿನ ಆಧೀನ ಇಸವಿಯಿಂದ ೧೮೦೯ ನೆಯ ಇಸವಿಯ ವರೆಗೆ ಸ್ವೀಡನ್ನಿನ ಆಧೀನ ತೆಗೆ ಒಳಪಟ್ಟು ಸುಖ-ಶಾಂತಿ ಸಮಾಧಾನಗಳಲ್ಲಿ ಕಾಲಕಳೆದರು. ಆದರೆ ಮುಂದೊದಗಿದ ಸಂಗತಿಗಳು ಅವರಲ್ಲಿ ಸ್ವದೇಶಾಭಿಮಾನದ ನವಚೇತನವನ್ನುಂಟುಮಾಡಿ, ರಸಿಯದ ವಿಷಯವಾಗಿ ವೈರಭಾವಕ್ಕೆ ಅವರಲ್ಲಿ ಎಡೆಯನ್ನುಂಟುಮಾಡಿದುವು. ೧೮೦೯ ರಿಂದ ಮೊದಲು ಮಾಡಿ, ಕಳೆದ ಮಹಾಯುದ್ಧದ ಆರಂಭದಲ್ಲಾದ ರಸಿಯದ ಜಾಗತಿಕ ಕ್ರಾಂತಿಯ ಕಾಲದ ವರೆಗೂ ಫಿನ್‌ಲಂಡು ರಸಿಯದ ವಶದಲ್ಲಿತ್ತು. ಇದೇ ಅವಧಿಯು ಫಿನ್‌ಲಂಡಿನ ಅವನತಿಯ ಕಾಲ ವೆಂದೂ ಹೇಳಬಹುದು; ಮತ್ತು ಇದೇ ಕಾಲವು ಫಿನಿಶರನ್ನು ಜಾಗ್ರತರನ್ನಾಗಿ ಮಾಡುವ ಪರಿಸ್ಥಿತಿಯನ್ನು ಕಲ್ಪಿಸಿಕೊಟ್ಟಿತು. ರಸಿಯದ ರಾಜ್ಯಾಧಿಪತಿಯಾದ ಝಾರನ ಆಡಳಿತವು ತಮ್ಮವರಿಗೆ ಅಷ್ಟೊಂದು ಬೇಸರವನ್ನುಂಟುಮಾಡಿರುವಾಗ, ಪಾರತಂತ್ರ್ಯದಲ್ಲಿ ತೊಳಲಾಡುತ್ತಿದ್ದ ಅನ್ಯರಿಗೆ ಅದೆಷ್ಟು ಅಸಹನೀಯವೆನಿಸಿರ ಬಹುದು! ಅದಕ್ಕಾಗಿಯೆ ಫಿನ್ನಿಶರು ೧೯೧೭ ರಲ್ಲಾದ ರಸಿಯದ ರಾಜ್ಯಕ್ರಾಂತಿಯನಂತರ, ಯುದ್ಧಸಮಯದ ಸಂಧಿಯನ್ನು ಸಾಧಿಸಿ, ಯುದ್ಧವು ಕೊನೆಗಾಣುವ ಕಾಲದಲ್ಲಿ, ಮಿತ್ರರಾಷ್ಟ್ರಗಳ ಸಹಾಯವನ್ನು ತೆಗೆದುಕೊಂಡು, ತಮ್ಮ ಸ್ವಾತಂತ್ರ್ಯವನ್ನು ತಾವೇ ಗಳಿಸಿಕೊಂಡರು.

ಅವರಿಗೆ ಸ್ವಾತಂತ್ರ್ಯವು ಸಾಧ್ಯವಾಗಲಿಕ್ಕೆ ಅವರ ಅಂತರಿಕ ಶಕ್ತಿಯು ಹೆಚ್ಚಾಗಿಯೂ, ಮಹಾಯುದ್ಧದ ಪರಿಸ್ಥಿತಿಯು ಸಾಧಾರಣವಾಗಿಯೂ ಕಾರಣವಾದುವು ಎನ್ನಬಹುದು. ಮೇಲೆ ಹೇಳಿದಂತೆ ಫಿನ್ಲಂಡಿನ ಜನರಿಗೆ, ರಸಿಯದ ವಿಷಯವಾಗಿ ವೈರ ಭಾವವು ಉಂಟಾಗಲಿಕ್ಕೆ, ಕಳೆದ ನೂರು ವರುಷಗಳಿಂದಲೆ ಅಂತಹ ಸನ್ನಿವೇಶಗಳು ಒದಗಿ ಬಂದಿರುವುವು. ಮಹಾಯುದ್ಧದ ಕಾಲದಲ್ಲಿ ಫಿನ್‌ಲಂಡಿನ ಮೇಲಿನ ಅಧಿಕಾರ ಸೂತ್ರಗಳನ್ನೆಲ್ಲ ಹಿಡಿದ ಹಿರಿಯರೂ, ಫಿನ್‌ಲಂಡ್ ತನ್ನದೆಂದು ಇಟ್ಟುಕೊಂಡ ಸೈನ್ಯದ-ಬಹುಶಃ ಎಲ್ಲ- ನಾಯಕರೂ ಫಿನ್‌ಲಂಡಿನ ಮಿಕ್ಕ ಯಾವ ರಂಗದಲ್ಲಿಯೂ ಮುಂದುವರಿದ ಜನರೂ, ಬಹುತರವಾಗಿ ಎಲ್ಲರೂ, ಜರ್ಮನಿಯ ವಿದ್ಯಾಲಯಗಳಲ್ಲಿ ಕಲಿತು ಬಂದವರಿರುವರು. 'ಪರರ ಆಳಿಕೆಗೆ ಬೇಸತ್ತು, ಅವರನ್ನು ತಮ್ಮ ನಾಡಿನಿಂದ ಹಿಮ್ಮೆಟ್ಟಿ ಹೊಡೆದೊಡಿಸಬೇಕಾದರೆ, ಅವರು ಕಲಿಸುವ ವಿದ್ಯೆಯು ಉಪಯೋಗಕ್ಕೆ ಬೀಳುವುದಿಲ್ಲ' ಎಂಬ ಸೂಕ್ಷ್ಮವಾದ ಸಂಗತಿಯನ್ನು ಫಿನ್‌ಲಂಡಿನವರು ಆಗಲೆ ಅರಿತು, ತಮ್ಮ ಯುವಕರನ್ನೆಲ್ಲ ಜರ್ಮನಿಯ ವಿಶ್ವವಿದ್ಯಾಲಯಗಳಿಗೆ ಹಾಕುತ್ತಿದ್ದರು. ಇದರಿಂದ ಅವರಲ್ಲಿ ಸ್ವಾತಂತ್ರ್ಯದ ವಿಷಯವಾಗಿ ಜಾಗೃತಿಯುಂಟಾಯಿತು, ಇಷ್ಟೇ ಅಲ್ಲದೆ, ಬಿಕ್ಕಟ್ಟಿನ ಮೊದಲ ಪಾಠಗಳನ್ನು ಸಹ, ಅನ್ಯರಾಷ್ಟ್ರಗಳಲ್ಲಿ ಕಳೆದ ಈ ಜೀವನವೇ ಅವರಿಗೆ ಕಲಿಸಿತು. ಈ ಪ್ರಕಾರ ಜರ್ಮನ್ 'ಇಂಪೀರಿಯಲ್ ಆರ್ಮಿ'ಯಲ್ಲಿ ಕಲಿತವರು, ಇಂದಿನ ಫಿನ್‌ಲಂಡಿನ ಮುಖ್ಯ ಸೇನಾಪತಿ **ಮ್ಯಾನರ್ ಹೀಮ**ರು. ಮತ್ತು ಅವರಿಗೆ ತ್ರಿಕಾಲದಲ್ಲಿಯೂ ತ್ರಿಕರಣಪೂರ್ವಕವಾಗಿ ಸಹಾಯಮಾಡುತ್ತಿರುವ 'ಓ' ಕಾರತ್ರಯರೂ ಅಂತಹರೇ ಇರುವರು.

ಕಳೆದ ಮಹಾಯುದ್ಧವು ನಡೆದಿದ್ದ ಕಾಲದಲ್ಲಿ, ಫಿನ್‌ಲಂಡ್ ದೇಶವು–ಎಷ್ಟೋ ಅವಧಿಯು ಗತಿಸುವವರೆಗೆ—ಯಾವಬದಿಯನ್ನೂ ಸ್ವೀಕರಿಸಿರಲಿಲ್ಲ. ಕೊನೆಗೆ ಸ್ವೀಕರಿಸಿದ ಮೇಲೆ ಸಹ ಕೆಲವರು ಅವರಿಗೆ 'ಅನಿಶ್ಚಿತ ಅಭಿಪ್ರಾಯದವರು' ಎಂದೂ, ಕೆಲವರು 'ಸಮಯ ಸಾಧಕರು (Opportunists)' ಎಂದೂ ಕರೆದರು. ಆದರೆ ಅವರ ಸಂಕಟಗಳನ್ನು ಅಂತಹರೇ ಬಲ್ಲರು. ರಸಿಯದ ಆಧೀನದಲ್ಲಿದ್ದ ದೇಶವಾದ ಕಾರಣ, ಮುಂದೆ ತನಗೆ ಜಯವಾದರೆ ರಸಿಯವು '**ಬಹುಮಾನ**' ಎಂದು ಸ್ವಾತಂತ್ರ್ಯವನ್ನು ಕೊಡ ಬಹುದೆಂಬ ಆಶೆಯಿಂದ ರಸಿಯದ ಬೆನ್ನನ್ನು ಕಟ್ಟಬೇಕೋ, ಇಲ್ಲವೆ 'ಮೊದಲಿನಿಂದಲೂ ಮಿತ್ರಭಾವದಿಂದ ಕೂಡಿ ಕಲಿತು, ಬೆಳೆದು ಬಂದ ಜರ್ಮನಿಯ ಸೇನಾನಾಯಕರು, ಕೊನೆಗೆ ಗೆಲವನ್ನು ಪಡೆದು ತನಗೂ ಸ್ವಾತಂತ್ರ್ಯದ ಸವಿಯನ್ನು ಸವಿಯಗೊಡ ಬಹುದು' ಎಂಬ ಸವಿಗನಸುಗಳನ್ನು ಕಾಣುತ್ತ ಜರ್ಮನಿಯಲ್ಲಿ ಸೇರಿಕೊಳ್ಳಬೇಕೋ ಎಂಬ ಸಮಸ್ಯೆಯು ಆಗ ಫಿನ್‌ಲಂಡಿಗೆ ಬಿದ್ದುದು ಸೋಜಿಗವಲ್ಲ! ಅಂತೂ ಫಿನ್‌ಲಂಡಿನ ಸಹಾಯವನ್ನು ಪಡೆಯಲು, ಅಥವಾ ತೆಗೆದುಕೊಳ್ಳಲು ಜರ್ಮನಿ ಮತ್ತು ರಸಿಯಗಳಿಗೆ ಸಮಾನವಾದ ಹಕ್ಕುಗಳು ಇದ್ದುವೆಂದೇ ಹೇಳಬಹುದು. ಆದರೆ ಅಂದಿನ ಸೇನಾನಾಯಕರೂ, ರಾಜಕಾರಣ ಪಟುಗಳೂ, ಫಿನ್‌ಲಂಡ್‌ದೇಶವನ್ನು ಇಂತಹ ಯಾವ ಗೊಂದಲದಲ್ಲಿಯೂ ಕೆಡುಹದೆ, ಸರಳವಾಗಿ ಆ ಸಂಕಟದೊಳಗಿಂದ ತಮ್ಮದೇಶವನ್ನು ಪಾರುಮಾಡಿಕೊಂಡರು. ಇಷ್ಟೇ ಅಲ್ಲ, ಪಾರತಂತ್ರ್ಯದಿಂದ ಸಹ ಪಾರುಮಾಡಿಕೊಂಡು, ಸ್ವತಂತ್ರರಾದರು.

ಫಿನ್‌ಲಂಡ್‌ದೇಶವು ಈ ಬಗೆಯಾಗಿ ವಿಚಿತ್ರವಾದ ರೀತಿಯಲ್ಲಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲಿಕ್ಕೆ ಕಾರಣರಾದವರೆಂದರೆ– ಈಗ ಸಹ ಫಿನ್ನಿಶ್ ಸೇನೆಯ ಮುಖ್ಯಾಧಿಕಾರಿಗಳಾಗಿ ಇರುವ **ಮ್ಯಾನರಹೀಮ** ಇವರೆ! ಇವರು ಮೂಲತಃ ಫಿನ್‌ಲಂಡಿನವರಾದರೂ, ಜರ್ಮನಿಯ ಇಂಪೀರಿಯಲ್ ಆರ್ಮಿಯಲ್ಲಿದ್ದು ಕಲಿತು, ರಸಿಯನ್ ಝಾರನ ಸೈನ್ಯದಲ್ಲಿ ಜನರಲ್ ಎಂದು ಸೇವೆಗೈದಿರುವರು– ಕೆಲಕಾಲ. ಆದರೆ ೧೯೧೭ರಲ್ಲಿ ರಸಿಯದ ಬೊಲ್ಶೆವಿಕ್ ಕ್ರಾಂತಿಯು ಸ್ಫೋಟವಾದ ಕೂಡಲೆ, ಒಳಗಿನ ಸಂಗತಿಗಳನ್ನೆಲ್ಲವನ್ನೂ ಅರಿತ ಅವರು ಕೂಡಲೇ ಸ್ವದೇಶಕ್ಕೆ ಮರಳಿದರು. ಅದೇ ಸಮಯದಲ್ಲಿ ಫಿನ್‌ಲಂಡಿನ ಹಿರಿಯರು ವಿಚಾರಮಾಡಹತ್ತಿದ್ದರು: 'ಯಾವ ಪಕ್ಷವನ್ನು ಕಟ್ಟಿದರೆ ತಮಗೆ ಹೆಚ್ಚು ಅನುಕೂಲವಾಗಬಹುದು' ಎಂದು. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಮ್ಯಾನರ ಹೀಮರು ಅಲ್ಲಿಗೆ ಬಂದು, ತಮ್ಮದೇಶದ ಸೈನ್ಯದ ನಾಯಕತ್ವವನ್ನು ವಹಿಸಿ, ಮಿತ್ರ

ರಾಷ್ಟ್ರದ ಪಕ್ಷವನ್ನು ಸೇರಿದರು. ನಿಜವಾಗಿಯೂ ಆಗಿನ ಪರಿಸ್ಥಿತಿಯಿಂದ ವಿಚಾರಮಾಡಿ ನೋಡಿದರೆ ಇದು ಒಂದು ಧೈರ್ಯದ ಕೆಲಸ ಎಂದೆನ್ನಬಹುದು. ಅಂತಹ ಆತ್ಮವಿಶ್ವಾಸದಿಂದ ಅವರು ಆ ಮಹತ್ತ್ವಪೂರ್ಣವಾದ ಹೆಜ್ಜೆಯನ್ನು ಹಾಕಿದರೆಂದೇ ೧೯೧೯ರಲ್ಲಾದ **ಡಾರ್ಪಟಿದ** ಒಪ್ಪಂದದಲ್ಲಿ ಫಿನ್‌ಲಂಡಿನ ಸ್ವಾತಂತ್ರ್ಯವು ಎಲ್ಲರಿಂದ ಒಪ್ಪಿಗೆಯನ್ನು ಪಡೆಯಿತು. ಮುಂದೆ ೧೯೩೦ರಲ್ಲಿ ರಸಿಯವು ಕೂಡ, ಫಿನ್‌ಲಂಡು ಒಂದು ಪ್ರಜಾಸತ್ತಾತ್ಮಕ ರಾಜ್ಯ ಎಂಬುದನ್ನು ತಲೆವಾಗಿ ಸ್ವೀಕರಿಸಿತು.

ಮ್ಯಾನರ ಹೀಮರಿಗೆ ಈಗ ವಯಸ್ಸು ಎಪ್ಪತ್ತು ವರುಷಗಳು; ಆಗಿನ ಕಾಲದಲ್ಲಿ ಐವತ್ತು ವರುಷದವರಿದ್ದ ಇವರೊಬ್ಬರೆ ಇಂತಹ ಮಹತ್ಕಾರ್ಯವನ್ನು ಹೇಗೆ ಮಾಡಿರಬಹುದು ಎಂದು ಯಾರಾದರೂ ಸಂಶಯಕೊಳ್ಳಗಾಗಬಹುದು ; ಆದರೆ ಅಪ್ರತಿಮವಾದ ಇವರ ಬುದ್ಧಿವಂತಿಕೆಗೆ, ಅವ್ಯಾಹತವಾದ ಬೇರೆ ಮೂವರ ಉತ್ಸಾಹ ಶಕ್ತಿಯು ನೆರವಾದುದರಿಂದಲೆ ಇದು ಸಾಧ್ಯವಾಯಿತು ಎಂದು ಹೇಳಿದಾಗ, ಆ ಸಂಶಯವು ದೂರವಾಗುವುದು. ಇವರಂತೆಯೆ ಜರ್ಮನಿಯಲ್ಲಿ ಶಿಕ್ಷಣ ಪಡೆದು, ಈಗ ಫಿನ್‌ಲಂಡಿನ ಸೈನ್ಯದಲ್ಲಿ ಉಚ್ಚ ಅಧಿಕಾರದಲ್ಲಿರುವವರೂ, ಶಾಂತಸ್ವಭಾವಿಯೂ, ದಕ್ಷನೂ ಆದ **ಓಸ್ಟ್ರನು;** ಸಂರಕ್ಷಣಾಶಾಖೆಯ ಮುಖ್ಯಸ್ಥನೂ ಫಿನ್‌ಲಂಡಿನ ದುರ್ಗಮವಾದ ಮ್ಯಾನರ ಹೀಮ ಗೋಡೆಯ ಉತ್ಪಾದಕನೂ ಆದ ಓಬಿಸ್ಟನು; ಮತ್ತು ಇವರಿಬ್ಬರ ಸಂಗಡ ಸಹಕಾರ ಮಾಡುವ ಓಸ್ಟರಮನ್ನನು- ಈ ಓ-ಕಾರತ್ರಯವು ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿರುವುದು.

ಇಂದು ಆರಂಭವಾಗಿರುವ ಫಿನ್‌ಲಂಡ್-ರಸಿಯದ ಕದನಕ್ಕೆ ಮುಖ್ಯವಾದ ಕಾರಣವೆಂದರೆ ಇದು. 'ಫಿನ್‌ಲಂಡ ತನ್ನ ಪೆಟ್ಸಾಮೋ ಎಂಬ ಬಂದರದ ಉಪಯೋಗವನ್ನು ಬಂದು ಮಾಡಬೇಕು. ಹಾಗೂ ಫಿನ್‌ಲಂಡಿನ ಆಲಂಡ್ ಎಂಬ ನಡುಗಡ್ಡೆಯಲ್ಲಿ ತನಗೊಂದು ಪಾಲನ್ನು ಕೊಡಬೇಕು, ಎಂದು ರಸಿಯದ ಹಟ. ಆದರೆ ಆರ್ಥಿಕ ದೃಷ್ಟಿಯಿಂದಷ್ಟೇ ಅಲ್ಲದೆ, ಆತ್ಮೋನ್ನತಿಯ ದೃಷ್ಟಿಯಿಂದಲೂ ಇವೆರಡೂ ಸಂಗತಿಗಳು ಫಿನ್‌ಲಂಡಿಗೆ ಅವಶ್ಯಪ್ರಾಯವಾಗಿರುವುದರಿಂದ, ರಸಿಯದ ಈ ಜಗಳವು ಕಾಲ್ಕೆದರಿ ತೆಗೆದ ಜಗಳವಾದಂತಾಗಿರುವುದು. ಆದಕ್ಕಾಗಿಯೆ ಇಡಿಯ ಪ್ರಪಂಚದ ಸಹಾಯ-ಸಹಾನುಭೂತಿಗಳು ಫಿನ್‌ಲಂಡಿಗೆ ದೊರೆತಿರುವುವು.

ಆದರೂ ಫಿನ್‌ಲಂಡ್ ದೇಶವು ಅತಿ ಭಯಾನಕವಾದ ಸಂಕಟದಲ್ಲಿರುವುದು ಎಂದು ಹೇಳಬಹುದು. ಮಿತ್ರ ರಾಷ್ಟ್ರಗಳ ಸಹಾನುಭೂತಿಯಿದ್ದರೂ, ಸಹಾಯ ಮಾಡುವೆವು ಎಂಬ ಆಶೀರ್ವಾದಗಳು ಬರುತ್ತಿದ್ದರೂ ಇದುವರೆಗೆ ಕಾರ್ಯರೂಪದಲ್ಲಿ ಏನೂ ಆಗಿಲ್ಲ. ಇನ್ನು ತಮ್ಮತಮ್ಮೊಳಗೆ, ಎಲ್ಲೆಡೆಯಂತೆ, ಫಿನ್‌ಲಂಡಿನಲ್ಲಿಯೂ ಅನೇಕ ಪಕ್ಷ-ಪಂಗಡಗಳಿವೆ. ಅಲ್ಲಿಯೂ ಎಡ-ಬಲ ಪಕ್ಷಗಳಿವೆ. ಎಂದಿನಂತೆ, ಎಲ್ಲೆಡೆಯಂತೆ ಅಲ್ಲಿಯೂ ಬಲಪಕ್ಷವು ಎಲ್ಲರಿಗೂ ಪ್ರಿಯವಾದುದಿರುವುದು ನಿಜ; ಆದರೆ ಈಗ ಮಾತ್ರ **ಹರ್ ಕ್ಯೊಸ್ತಿ ಕ್ಯಾಲಿಓ** ಇವರು ಅಧ್ಯಕ್ಷರಾಗಿದ್ದರೂ, ಸೋಶಲ್ ಡೆಮಾಕ್ರಾಟ್ ಪಕ್ಷದವರಿರುವರು. ಇದಲ್ಲದೆ ಮತ್ತೆ ಒಕ್ಕಲಿಗರ ಪಕ್ಷ, ಪ್ರಗತಿಪಕ್ಷ ಎಂಬ ಅಸಂಖ್ಯಪಕ್ಷಗಳಿರುವುವು. ಆದರೆ ಒಂದು ಸಂಗತಿಯು ನೆನಪಿನಲ್ಲಿಡತಕ್ಕಂತಹದಿರುವುದು: ಅದೆಂದರೆ, ಮಿತ್ರರಾಷ್ಟ್ರಗಳು ಇನ್ನೂ ತಮ್ಮತಮ್ಮೊಳಗಿನ ಜನಬಲ, ಧನಬಲಗಳನ್ನು ಸಂಗ್ರಹಿಸಿಕೊಂಡು, ಬಲಪಡಿಸಿಕೊಳ್ಳುತ್ತಿವೆಯಾದುದರಿಂದ ಫಿನ್‌ಲಂಡು 'ಪರದೇಶಿ' ಕೂಸಿನಂತಾಗಿದೆ. ಅಂತಹದರಲ್ಲಿಯೂ ಅದು ರಸಿಯದ " ರಣಹದ್ದು " ಗಳಿಗೆ ಧೈರ್ಯದಿಂದ ಎದುರಾಗಿ ಕಾದುವುದಕ್ಕೆ ಸಿದ್ಧವಾಗಿದೆ.

(೬೮೪ ನೆಯ ಪುಟದಿಂದ ಮುಂದುವರಿದುದು.)

ಮಹೋತ್ಸವದ ಯಶಸ್ಸಿಗೆ ಮಾರ್ಗಸೌಲಭ್ಯ ಎಲ್ಲಿದೆಯೆಂದು ಹೇಳಬಹುದು? ಕನ್ನಡನಾಡಿನ ಕಾರ್ಯಕಾರಿ ಜನತೆಯಿಂದು ರಾಜಕೀಯ ಜಂಜಡದಲ್ಲಿ ಸಿಕ್ಕಿಕೊಂಡು ಪರಸ್ಪರ ವಿಶ್ವಾಸವನ್ನು ಕಳೆದುಕೊಂಡು ಬಿಡುತ್ತಿದೆ. ಸಾಹಿತ್ಯಿಕರು ನಿರ್ಧನರು; ಜನತೆ ಅವರ ಕಾರ್ಯವನ್ನು ಮೆಚ್ಚಿದರೂ ಹಣವು ಅವರ ಬಳಿ ಬರಲಿಕ್ಕೆ ಅಡೆ-ತಡೆಗಳು ಬಹಳ. ಸಾಮಾನ್ಯಜನತೆಯೇನೋ ಯಾವಾಗಲೂ ಸಾಮಾನ್ಯ ಜನತೆ. ಅದು ಮೇಣದ ಮುದ್ದೆಯಿದ್ದ ಹಾಗೆ. ಬುದ್ಧಿವಂತರು ಅದನ್ನು ಯಾವ ಆಕಾರಕ್ಕೂ ತಿರುಗಿಸಿಕೊಳ್ಳಬಲ್ಲರು. ಸಂಘದ ಕಾರ್ಯಕರ್ತರು ಒಳ್ಳೆಯ ರೀತಿಯಿಂದ ಕಾರ್ಯಮಾಡಿದರೆ ನಿಜವಾಗಿ ಜನಸಾಮಾನ್ಯರಿಂದ ಸುವರ್ಣಮಹೋತ್ಸವಕ್ಕೆ ನೆರವು ದೊರೆತೇ ದೊರೆಯುವುದೆಂಬ ಮಾತು ವಿಜಯನಗರದ ೬೦೦ ವರ್ಷಗಳ ಉತ್ಸವದಿಂದ ಕನ್ನಡಿಗರೆಲ್ಲರ ಅನುಭವಕ್ಕೆ ಬಂದುಹೋಗಿದೆ. ಆದುದರಿಂದಲೆ ಸುವರ್ಣಮಹೋತ್ಸವಕ್ಕಾಗಿ ಸಂಘದ ಕಾರ್ಯಕರ್ತರು ತುಂಬ ದುಡುಕಿನಿಂದ ಕಾರ್ಯಮಾಡಬೇಕಾಗಿದೆ. ಕನ್ನಡಿಗರ ಬೆವರಿನಿಂದಲೆ ವೈಭವವನ್ನು ಮೆರೆಯಿಸುತ್ತಿರುವ ಉತ್ತರ ಕರ್ಣಾಟಕದ ಸಂಸ್ಥಾನಿಕರ ಮನಸ್ಸಿಗೆ ಸಂಘದ ಕಾರ್ಯವನ್ನೂ ಅದಕ್ಕೆ ನೆರವು ಕೊಡಬೇಕಾದ ಆವಶ್ಯಕತೆಯನ್ನೂ ಅರಿಕೆಮಾಡಿ ಕೊಡಬೇಕಾಗಿದೆ. ಕ. ವಿ. ವ. ಸಂಘದ ಆತ್ಮೀಯಸಂಬಂಧವನು ಮೈಸೂರು ಮಹಾರಾಜರ ನೆನವರಿಕೆಗೆ ತಂದುಕೊಡಬೇಕಾಗಿದೆ. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡುಗಳಿಗೆ ಸಂಘವು ಮಾಡಲಿರುವ ಸಾಂಸ್ಕೃತಿಕ ಕಾರ್ಯದ ಬೆಲೆಯನ್ನು ತಿಳಿಸಿ, ಅವುಗಳ ಕಣ್ಣನ್ನು ತಮ್ಮ ಕಡೆಗೆ ಸೆಳೆಯಬೇಕಾಗಿದೆ ಧರ್ಮಾರ್ಥನಿಧಿಯೊಳಗಿಂದ ಯಾರು ಯಾರಿಗೋ ಹಣ ಸೂರೆಮಾಡುತ್ತಲಿರುವ ಬ್ಯಾಂಕು, ಸಹಕಾರಿ ಸಂಘಗಳಿಗೆ ಸಂಘ ತನ್ನ ಪರಿಚಯ ಮಾಡಿಕೊಡಬೇಕಾಗಿದೆ. ಜನ-ಸಾಮಾನ್ಯರ ಹೃದಯವನ್ನೂ ತನ್ನ ಕಾರ್ಯದತ್ತ ಹೊರಳುವಂತೆ ತಿದ್ದಬೇಕಾಗಿದೆ. ಹೀಗೆಲ್ಲ ಕಾರ್ಯಮಾಡಿದರೆ ಸಂಘದ ಸುವರ್ಣ ಮಹೋತ್ಸವವೂ ಯಶಸ್ವಿಯಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ. ಆದರೆ 'ಕರೆ' ಎಂಬ ಪಕ್ಷಾರ್ಥಕಾವ್ಯಯವು ಯಾವಾಗಲೂ ಕಾರ್ಯವಾಗುವುದನ್ನು ಅಪೇಕ್ಷಿಸುತ್ತಿರುವುದೆಂಬುದನ್ನು ಕ. ವಿ. ವ. ಸಂಘದ ಸಂಚಾಲಕರು ಮರೆಯಬಾರದು.

—ಸಂಪಾದಕರು

ದಿವಂಗತ ಸೌ. ಗೌರಮ್ಮನವರ ನೆನಪಿಗಾಗಿ

ಸಣ್ಣಕತೆಗಳ ಪೋಟಾಟಿ

(ಹೆಣ್ಣುಮಕ್ಕಳಿಗೆ ಮಾತ್ರ)

ಸೋದರಿಯರೇ,

ಸೌ. ಗೌರಮ್ಮನವರು (ಮಿಸೆಸ್ ಬಿ. ಟಿ. ಜಿ. ಕೃಷ್ಣ) ಕಾಲವಾಗಿ ನಾಳಿನ ಎಪ್ರಿಲ್ ೧೩ನೆಯ ತಾರೀಖಿಗೆ ಒಂದು ವರ್ಷವಾಗುತ್ತದೆ. ಅವರ ‘ ಕಂಬನಿ ’ ಎಂಬ ಕಥಾಸಂಗ್ರಹವನ್ನು ಜನರು ಆದರದಿಂದ ಬರಮಾಡಿಕೊಂಡು ಆನಂದಹೊಂದಿ, ಬರಲಿರುವ ಇನ್ನೊಂದು ಸಂಗ್ರಹಕ್ಕಾಗಿ ಆತುರರಾಗಿದ್ದಾರೆ.

ಹೆಣ್ಣುಮಕ್ಕಳು ಬರೆಯುವ ಸಾಹಿತ್ಯ ಒಳ್ಳೆಯದಾಗಬೇಕು. ಅದೊಂದು ಮಟ್ಟಕ್ಕೆ ಬರಬೇಕು. . ’ ಎಂಬ ಆಶೆಯುಳ್ಳವರಾಗಿದ್ದರು ಗೌರಮ್ಮನವರು. ‘ ಇದು ಹೆಣ್ಣುಮಕ್ಕಳ ಕೃತಿ ಎಂಬ ಪೊಳ್ಳು ಸಹಾನುಭೂತಿಯ ಹೊರೆಯನ್ನು ನಾವೆಷ್ಟು ದಿನ ಹೊತ್ತಿರಬೇಕು? ಇದರಿಂದ ಗಂಡಸರು ನಮ್ಮ ಸಾಹಿತ್ಯವನ್ನು ತೃಪ್ತಿದಾಯಕವಾಗಿ ಒಪ್ಪಿದಂತಾಯಿತೇ ? ಅವರು ತಮ್ಮ ಸಾಹಿತ್ಯವನ್ನು ನೋಡುವ ದೃಷ್ಟಿಯಲ್ಲೇ ನಮ್ಮ ಕೃತಿಗಳನ್ನು ನೋಡಲಿ—’ ಎನ್ನುತ್ತಿದ್ದರವರು. ‘ ಜಯಕರ್ನಾಟಕ’ದ ಹಾಗೂ ಉಡುಪಿಯ ಮಿತ್ರಮಂಡಲಿಯ ಸಣ್ಣಕತೆಗಳ ಸ್ಪರ್ಧೆಗಳಲ್ಲಿ (ಕೇವಲ ಹೆಣ್ಣುಮಕ್ಕಳದೇ ಅಲ್ಲ) ಭಾಗವಹಿಸಿದ ಇವರ ಕತೆಗಳು ಕತೆಗಾರಿಕೆಯ ಕೈವಾಡದ ಮೂಲಕ ಮೊದಲ ಮೆಚ್ಚುಗೆಯನ್ನು ಪಡೆದಿದ್ದುವು.

‘ಕಂಬನಿ’ಯ ಪ್ರಕಟನೆಯ ಮೂಲಕ ಗೌರಮ್ಮನವರ ಕಥೆಗಳ ರಸಗವಳವನ್ನು ಕನ್ನಡಿಗರಿಗೆ ನೀಡುವ ಕಾರ್ಯವನ್ನು ಕೈಕೊಂಡೆವು. ಜಗಳೇ ಅವರನ್ನು ಕಳೆದುಕೊಂಡೆವು. ಇಂದಿನ ಅವರ **ಮೊದಲ ಸ್ಮೃತಿದಿನದ** ಸಮಯದಲ್ಲಿ ಅವರ ಆತ್ಮತೃಪ್ತಿಗಾಗಿ ಇನ್ನೊಂದು ಕಾರ್ಯಮಾಡಲೆಳಸುತ್ತಿದ್ದೇವೆ. ‘ನಮ್ಮ ನಾಡಿನ ಹೆಣ್ಣುಮಕ್ಕಳ ಕೃತಿಗಳು ನಿಜವಾದ ಹುರುಳು ತಿರುಳುಗಳಿಂದ ಮೇಲ್ಮೆ ಪಡೆಯಬೇಕು ’ ಎಂಬ ಅವರ ಹಿರಿಯಾಸೆ ಪೂರ್ಣವಾಗಲು ಪ್ರಯತ್ನಪಡುವುದೇ ಆ ಕೆಲಸ. ಕನ್ನಡಿತಿಯರಿಗೆ ವಾಙ್ಮಯಪ್ರಪಂಚದಲ್ಲಿ ಮುಂದುವರಿಯುವುದಕ್ಕೆ ಪ್ರೋತ್ಸಾಹದೊರೆಯಬೇಕು, ಉತ್ತಮ ಕತೆಗಾರ್ತಿಯರಿಗೆ ತಕ್ಕ ಮರ್ಯಾದೆ ಸಲ್ಲಬೇಕು,—ಎಂದು **ಕೇವಲ ಹೆಣ್ಣುಮಕ್ಕಳಿಗಾಗಿ** ಸಣ್ಣಕತೆಗಳ ಪೋಟಾಟವನ್ನು ಏರ್ಪಡಿಸಿದ್ದೇವೆ. ಇದರಲ್ಲಿ ಕನ್ನಡ ಕತೆಗಾರ್ತಿಯರು ಹೆಚ್ಚಾಗಿ ಭಾಗವಹಿಸಿ, ನಾವು ಗೌರಮ್ಮನವರಿಗೆ ಗೌರವದಿಂದ ಸಲ್ಲಿಸುವ ಸೇವೆಯನ್ನು ಸಫಲಗೊಳಿಸಬೇಕಾಗಿ ಕೋರುತ್ತೇವೆ.

ನಿಯಮಗಳು

(೧) ಕತೆ ಸ್ವಂತದಾಗಿರಬೇಕು. ಇದುವರೆಗೆ ಎಲ್ಲಿಯೂ ಅಚ್ಚಾಗಿರಕೂಡದು.

(೨) ಕತೆ ಕಾಗದದ ಒಂದೇ ಬದಿಗೆ ಸ್ಪಷ್ಟವಾಗಿ ಮಸಿಯಿಂದ ಬರೆದಿರಬೇಕು.

(೩) ೧೯೪೦ನೆಯ ಎಪ್ರಿಲ್ ೧೦ನೆಯ ತಾರೀಖಿಗೆ ಕೆಳಗಿನ ವಿಳಾಸಕ್ಕೆ ಕತೆ ತಲುಪಬೇಕು. ಹೆಚ್ಚು ಅವಧಿ ದೊರೆಯಲಾರದು.

(೪) ಉತ್ತಮವಾದ ಮೂರುಕತೆಗಳಿಗೆ ಈ ಕೆಳಗಿನಂತೆ ಪುಸ್ತಕರೂಪದಲ್ಲಿ ಬಹುಮಾನ ಕೊಡಲಾಗುವುದು.
ಮೊದಲನೆಯ ಬಹುಮಾನ—೧೨ ರೂ.
ಎರಡನೆಯ ಬಹುಮಾನ— ೮ ರೂ.
ಮೂರನೆಯ ಬಹುಮಾನ— ೫ ರೂ.

(೫) ಬಹುಮಾನ ಪಡೆದ ಕತೆಗಳನ್ನು ಪ್ರಕಟಿಸುವ ಅಧಿಕಾರ ಈ ಸ್ಪರ್ಧಾಸಮಿತಿಯದಿರದೆ.

ಸ್ಪರ್ಧೆಯ ತೀರ್ಮಾನ ಎಪ್ರಿಲ್ ೧೩ನೆಯ ತಾರೀಖು. ಬಹುಮಾನ ಪಡೆದವರಿಗೆ ತೀರ್ಮಾನ ತಿಳಿಸಲಾಗುವುದು.

ವಿ. ಸೂ:— ಸಾಕಷ್ಟು ಸಂಖ್ಯೆಗಳಲ್ಲಿ ಬಹುಮಾನಕ್ಕೆ ಅರ್ಹವಾದ ಕತೆಗಳು ಬಾರದಿದ್ದಲ್ಲಿ, ಸ್ಪರ್ಧೆಯನ್ನು ನಿಲ್ಲಿಸಲಾಗುವದು. ಬಂದ ಕಥೆಗಳನ್ನು ತಿರುಗಿ ಕಳಿಸುವುದಿಲ್ಲವಾದ್ದರಿಂದ ತಮ್ಮ ಕತೆಯ ಒಂದು ಪ್ರತಿಯನ್ನು ಇರಿಸಿಕೊಳ್ಳಬೇಕು. ಕತೆಯನ್ನೂ ಸ್ಪರ್ಧೆಯ ವಿಚಾರದ ಕಾಗದಗಳನ್ನೂ ಕೆಳಗಿನ ವಿಳಾಸಕ್ಕೆ ಕಳಿಸತಕ್ಕದ್ದು.

ಸ್ಪರ್ಧಾಸಮಿತಿ
ಮನೋಹರ ಗ್ರಂಥಭಾಂಡಾರ, ಧಾರವಾಡ

ಕರ್ನಾಟಕ ಜನಜೀವನ
(ಸಂಶೋಧನಾತ್ಮಕ ಗ್ರಂಥ)
ಬರೆದವರು : ಬೆಟಗೇರಿ ಕೃಷ್ಣಶರ್ಮ
ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.
ಮೊನ್ನೆ ಮೊನ್ನೆಯೆ ಅಚ್ಚಾಗಿ ಹೊರಕ್ಕೆ ಬಂದಿದೆ.
ಪ್ರೊ. ಜಾಗೀರದಾರರು ವಿಚಾರಪ್ರಚೋದಕ ಮುನ್ನುಡಿಯನ್ನು ಬರೆದಿದ್ದಾರೆ.
ಸುಂದರ ಪ್ರತಿಗೆ ೧-೮-೦ ಕ್ಯಾಲಿಕೊ ಪ್ರತಿಗೆ ೨-೦-೦
ಬೇಕಾದವರು ‘ ಜಯಂತಿ ’ ಕಾರ್ಯಾಲಯಕ್ಕೆ ಬರೆಯಿರಿ !
ಮನೋಹರ ಗ್ರಂಥಭಾಂಡಾರದಲ್ಲಿಯೂ ಸಿಕ್ಕುವುದು.

" ದ್ಯಾವಣ್ಣನದು ಚ—ಪುರದ ಪೋಲೀಸ ದಫೇದಾರೀ ಕೆಲಸ ! "
ಎಂದು ಸಿದ್ದಯ್ಯ ಹೇಳಿದ.

ಅಣಕಿಸುವ ಕೈ

★

ಮಲ್ಲಾಸಾನಿ ದ್ಯಾವಣ್ಣನಿಗೆ ಕೆಲಸ ಕೊಡಿಸಿದಳೇನೋ ನಿಜ; ಆದರೆ ಯಾವ ಕೆಲಸ ? ಪೋಲೀಸ್ ದಫೇದಾರನಾಗಿ ಜನರ ಮೇಲೆ ತನ್ನ ಜಬರ್ು ನಡೆಯಿಸಬೇಕೆಂದು ಅಪೇಕ್ಷಿಸುತ್ತಿದ್ದ ದ್ಯಾವಣ್ಣ, ಅಂಚೆಯ ಆಳಾಗಿ ಹಳ್ಳಿ ಹಳ್ಳಿ ಅಲೆಯಬೇಕಾಯಿತು

★

ಶ್ರೀ. " ರಾಮು "

ಅವರಿಂದ

" ಬಹಳ ಜನ ದೊಡ್ಡ ದೊಡ್ಡ ಮನುಷ್ಯರು ಹೇಳ್ತಾರಪ್ಪಾ, ಅವರು ದೊಡ್ಡಸ್ತಿಕೆಗೆ ಬಂದದ್ದು ಮುಕ್ಕಾಲು ಮೂರುವೀಸು ಪಾಲು ಹೆಂಗುಸಿನ ಬಲ, ಬುದ್ಧಿವಂತಿಕೆ, ಪ್ರೇರೇಪಣೆ ಇವುಗಳಿಂದ ಅಂತ ! " ಎಂದು ನಾನು ಹೇಳಿದೆ.

" ಸರೀರೀ, ನಾನೂ ಕೇಳಿದ್ದೇನೆ, ಚರಿತ್ರೆಯಲ್ಲಿ ಆ ರೀತಿ ಬರೆದಿದ್ದಾರಂತೆ. ಇದ್ದರು, ಹಿಂದಿನ ಕಾಲದಲ್ಲಿ ಇದ್ದರು. . ಸೀತಾ, ದಮಯಂತಿ ಅಂಥವರು. ಆದರೆ ಈಗಿನ ಕಾಲದಲ್ಲಿ ಹೇಳ್ರಿ, ಯಾರು ಇದ್ದಾರೆ? ಹೆಂಗುಸರಿಂದ ಏನಾಗುತ್ತೆ ಸ್ವಾಮಿ; ಅಡಿಗೆಯ ಕೆಲಸದಿಂದ ಪ್ರಾರಂಭಿಸಿಕೊಂಡು ನೋಡಿ, ಎಲ್ಲಾ ಚೆನ್ನಾಗಿ ಸರಿಯಾಗಿ ಏನೂ ತಪ್ಪಿಲ್ಲದೆ ನಿಪುಣತೆ ಹೊಂದಿರುವವರು ಎಂದರೆ ಗಂಡಸರು. ಹೆಂಗಸರು ಒಂದರಲ್ಲಿ ನೋಡಿ, ಸರಿಯಾಗಿದ್ದಾರೆ— ಮುಸುರೆ ತಿಕ್ಕುವುದರಲ್ಲಿ; ಥಳ ಥಳ ತೊಳೆಯುತ್ತಾರೆ. ಆ ಕೆಲಸ ಮಾತ್ರ ಗಂಡುಸಿಗೆ ಬರುವುದಿಲ್ಲ" ಎಂದು, ಹಿಂದೆ ತನ್ನ 'ಕಸಬಿ'ನಲ್ಲಿ ಪ್ರಸಿದ್ಧನಾಗಿದ್ದು, ಈಗ ಅದಕ್ಕೆ ರಾಜೀನಾಮೆ ಕೊಟ್ಟಿದ್ದ ರಾಮನು ಹೇಳಿದನು. ರಾಮನ 'ಕಸಬು' ಎಂದರೆ, ಬುದ್ಧಿವಂತಿಕೆಯ ಚೋರತನ. ಸಣ್ಣ ಸಣ್ಣ ಬುದ್ಧಿವಂತಿಕೆಯ ಸುಳ್ಳು ಹೇಳಿ, ದುಡ್ಡನ್ನು ಗಳಿಸುವುದರಿಂದ ಪ್ರಾರಂಭಿಸಿ, ಭಾರಿ ಬ್ಯಾಂಕುಗಳ ಬೀಗಗಳನ್ನು ಮುರಿಯುವುದರ ತನಕ, ಎಲ್ಲದರಲ್ಲೂ ಪಳಗಿದ ಕೈ ಅವನದು.

" ಇದೇನು, ಹೀಗೆ ಹೇಳ್ತೀಯಾ. ಹೆಂಗಸರ ಕೈವಾಡದ ಬಗ್ಗೆ ನೀನು ಬೇರೆ ತರದ ಅಭಿಪ್ರಾಯವನ್ನಿಟ್ಟುಕೊಂಡಿರುತ್ತೀ ಎಂದು ತಿಳಿದುಕೊಂಡಿದ್ದೆ. ಹೆಣ್ಣಿನ ಸಲಹೆ, ಬುದ್ಧಿವಂತಿಕೆ, ಬೆಂಬಲ, ಸಹಾಯ ಯಾವುದೂ ನಿನ್ನ ಹಿಂದಿನ ಕಸುಬುಗಳಲ್ಲಿ ನೆರವಾಗಿರಲಿಲ್ಲವೆ ? " ಎಂದೆನು.

" ಹೆಂಗುಸಿನ ವಿಷಯ ನಿಮಗೇನು ಗೊತ್ತು, ಸ್ವಾಮಿ. ನೀವು ಯಾವ ಹೆಣ್ಣನ್ನೂ ನಂಬಿ ಕೆಲಸಮಾಡಿ, ಅನುಭವಿಸಿ ತಿಳಿದುಕೊಂಡಿಲ್ಲ. ನನಗೆ ಇದರಲ್ಲಿ ಒಂದು ಸಲ ಚೆನ್ನಾಗಿ ಅನುಭವವಾಯ್ತು ಕೇಳಿ. " ಎಂದು ರಾಮ ಮಾತನ್ನು ಮುಂಬರಿಸಿದ.

" ಆಗ ನಾನು ಚ— ಪುರದಲ್ಲಿದ್ದೆ. ನಾನು ಸಿದ್ದಪ್ಪ ಇಬ್ಬರೂ ಜಂಟಿಯಲ್ಲಿ ಕಸಬು ಮಾಡುತ್ತಿದ್ದೆವು. ಆ ಊರಲ್ಲಿ ಹೆಂಡ, ಬ್ರಾಂದಿ, ಗಾಂಜಾ ಈ ಜಾತಿಯವೆಲ್ಲವನ್ನೂ ವಜಾಮಾಡಿಬಿಟ್ಟರು. ಹಾಳು ಕಾಂಗ್ರೆಸ್ಸು ಸರ್ಕಾರದವರು, ಅವೊಂದೂ ಆ ಊರಿನೊಳಗೇ ತರೋಕೆ ಆಗದೂ ಎಂತ ಮಾಡಿಬಿಟ್ಟರು. ಸಿದ್ದಪ್ಪ ಹೇಳ್ದ: 'ಅವಿದ್ದರೆ ತಾವೂ ಎಲ್ಲಿ ಕುಡುಕರಾಗುತ್ತೇವೋ ಅಂತ ಹೆದರಿ ಕಾಂಗ್ರೆಸ್ನಿನವರು ಅದನ್ನೆಲ್ಲಾ ವಜಾಮಾಡಿ ಬಿಟ್ಟರು ' ಎಂದು. ಆದರೆ ಅವರು ಹಾಗೆ ಮಾಡಿದ್ದು ನೋಡಿ, ನಮ್ಮ ಕಸಬಿಗೆ ಹೊಸ ದಾರಿ ಸಿಕ್ಕಿತು. ನಾನು, ಸಿದ್ದಪ್ಪ ಇಬ್ಬರೂ ಚಿತ್ರಗಳ ವ್ಯಾಪಾರವನ್ನು ಹಿಡಿದೆವು. ನೋಡ್ರಿ, ನಾವು ಮಾಡುತ್ತಿದ್ದಂತಹ ಸಭ್ಯ ಕೆಲಸ ಇನ್ನಾವುದೂ ಇರಲಿಲ್ಲ. ಚಿತ್ರಗಳ ವ್ಯಾಪಾರ, ಆದರೆ ಅದರ ಗುಟ್ಟು ಹೇಳ್ತೀನೆ ಕೇಳಿ. ಅದರಲ್ಲಿ ತರಹಾವರಿ ಚಿತ್ರಗಳಿದ್ದುವು. ನಮ್ಮ ಅಸಲು ಗಿರಾಕಿಗಳಿಗೆ ಮಾತ್ರ ನಾವು ಒಂದು ಬೇರೆತರದ

ಬೆತ್ತ ಮಾರುತ್ತಿದ್ದೆವು, ಅವರು ಖಾತ್ರಿ ಗಿರಾಕೀ ಅಂತ ನಮಗೆ ಧೈರ್ಯಬಂದರೆ, ಆ ಬೆತ್ತದ ಹಿಡಿ ತಿರುಗಿಸಿ ಬಿಟ್ಟರೆ ಕೋಲಿನ ಒಳಗೆಲ್ಲಾ ಟೊಳ್ಳು; ಟೊಳ್ಳು ತುಂಬಾ ಗಾಂಜಾ! ಏನು ಹೇಳ್ತೀರಿ ಹೀಗೆ ಬೆತ್ತದ ವ್ಯಾಪಾರ ಸುರು ಮಾಡಿದೆವು ನಾವು. ಅದೇ ಊರಿನಲ್ಲಿ ನಮ್ಮ ಹಳೆಯ ಸ್ನೇಹಿತ- ಅವನೂ ನಮ್ಮ ಕಸಬಿನವ— ದ್ಯಾಮಣ್ಣಾ ಅಂತ ಇದ್ದ. ಅವನು ಒಂದು ಹೊಸ ಹಂಚಿಕೆ ಹಾಕಿದ್ದ; ತಾನು ಪೋಲೀಸ್ ದಫೇದಾರನಾಗಬೇಕು ಅಂತ. ಅವನು ದಫೇದಾರ ಆದ್ರೆ ತೋಳ ಕುರಿಯನ್ನು ಕಾಯ್ದ ಹಾಗೆ ನೋಡ್ರಿ. ಆದ್ರೆ ಅವನಿಗೆ ಕೆಲಸ ಕೊಡುವವರು ಯಾರು? ನಾನು, ಸಿದ್ದಪ್ಪ ಇಬ್ಬರೂ ಇವರಲ್ಲೆಲ್ಲಾ ಬಹಳ ಬುದ್ಧಿವಂತರು, ನಮ್ಮನ್ನು ಹಿಡಿದರೆ ನಾವು ಏನಾದರು ಹಂಚಿಕೆ ಹೂಡಿ ಅವನಿಗೆ ಆ ಕೆಲಸ ಮಾಡಿಸಿ ಕೊಡುತ್ತೇವೆ ಎಂತ ಅವನಿಗೆ ಧೈರ್ಯ. ಆದ್ದರಿಂದ ಅವನು ನಮ್ಮ ಹತ್ತಿರ ಬಂದು “ನೋಡು ರಾಮಣ್ಣಾ, ನಿಮಗೆ ಒಂದು ನೂರು ರೂಪಾಯಿ ಕೊಡುತ್ತೇನೆ. ನೀವು ನನಗೆ ಈ ಊರಿನ ಪೋಲೀಸು ದಫೇದಾರೀ ಕೆಲಸ ಕೊಡಿಸಬೇಕು. ನಾನು ದಫೇದಾರ ಆದ್ರೆ, ನಿಮ್ಮ ಬೆತ್ತದ ವ್ಯಾಪಾರದ ತಂಟೆಗೆ ಪೋಲೀಸರು ಬಾರದ ಹಾಗೆ ನಾನು ನೋಡಿಕೊಳ್ಳುತ್ತೇನೆ” ಎಂದನು. ನಮ್ಮ ಬೆತ್ತದ ವ್ಯಾಪಾರದ ಮೇಲೆ ಪೋಲೀಸರು ಒಂದು ಕಣ್ಣು ಇಡುವುದಕ್ಕೆ ಪ್ರಾರಂಭಿಸಿದ್ದಾರೇ ಅಂತ ನಮಗೂ ತಿಳಿದಿತ್ತು. ‘ನಮ್ಮ ಕಡೆಯವನೇ ದಫೇದಾರಿ ಕೆಲಸದಲ್ಲಿದ್ದರೆ ಪೋಲೀಸರ ಎರಡು ಕಣ್ಣುಗಳನ್ನೂ ಮುಚ್ಚಿಸಿ ಬಿಡಬಹುದು’ ಅಂತ, ಏನಾದರೂ ಮಾಡಿ ದ್ಯಾಮಣ್ಣನಿಗೆ ದಫೇದಾರೀ ಕೆಲಸ ಮಾಡಿಸಬೇಕೂ ಅಂತ ನಾವಿಬ್ಬರೂ ಮನಸ್ಸು ಮಾಡಿ ಬಿಟ್ಟೆವು. ಸ್ವಕಾರ್ಯ, ಸ್ವಾಮಿಕಾರ್ಯ ಎರಡೂ ಆಗುತ್ತೆ ಅಂದ ಸಿದ್ದಪ್ಪ. “ಆದ್ರೆ ನಿನಗೆ ವಿದ್ಯಾನೇ ಇಲ್ಲಲ್ಲೋ!” ಎಂದು ನಾನು ದ್ಯಾಮಣ್ಣನಿಗೆ ಹೇಳಿದೆನು.

‘ವಿದ್ಯಾ ಯಾಕೆ ಬೇಕು ಅದಕ್ಕೆ? ನೋಡು. ದಫೇದಾರೀ ಕೆಲಸಕ್ಕೆ ಓದುಬರಹ ಬೇಕಿಲ್ಲ. ಅದಕ್ಕೆ ಬೇಕಾದ ಛಾತೀನೇ ಬೇರೆ. ಅದು ನನಗೆ ತುಂಬಾ ಇದೆ. ಐದುನಿಮಿಷದಲ್ಲಿ ಐವತ್ತು ಜನಗಳಿಗೆ ಛಡಿ ತಗೊಂಡು ಬಾಸುಂಡೆ ಬರುವಹಾಗೆ ಹೊಡೆಯ ಬಲ್ಲೆ. ಒಂದು ರಾತ್ರಿಯಲ್ಲಿ ಮೂರು ಖೂನಿ ಮಾಡಬಲ್ಲೆ. ಒಂದು ಕ್ಷಣದಲ್ಲಿ ನಿನ್ನ ಜೇಬಿನೊಳಗಿನ ದುಡ್ಡು ಹೊಡೆದು, ಸಿದ್ದಯ್ಯನ ಮೇಲೆ ಕೇಸು ಮಾಡ ಬಲ್ಲೆ. ಇನ್ನೇನು ಬೇಕಪ್ಪಾ, ದಫೇದಾರೀ ಆಗೋದಕ್ಕೆ?’ ಎಂದ.

ಸಿದ್ದಪ್ಪ ಎಲ್ಲಾದಕ್ಕೂ ಒಪ್ಪಿಗೊಂಡು, ಒಂದು ಷರತ್ತು ಜಾಸ್ತಿ ಹಾಕಿದ. ನಮಗೆ ಕೊಡುವ ನೂರು ರೂಪಾಯಿ ಅಲ್ಲದೆ ಮೇಲೆ ತಗಲುವ ಇತರೇ ಖರ್ಚುಗಳು, ಬಾಕಿಯವರಿಗೆ ಕೈಬೆಚ್ಚಗೆ ಮಾಡುವ ಖರ್ಚು, ಎಲ್ಲಾ ದ್ಯಾಮಣ್ಣನೇ ಕೊಡಬೇಕು ಅಂತ. ‘ಇಲ್ಲದಿದ್ದರೆ ನಮಗೇನು ಉಳಿಯುತ್ತೆ’ ಎಂದನು. ಮೊದಲು ಮೊದಲು ಗುಣುಗುಟ್ಟಿದರೂ ದ್ಯಾಮಣ್ಣ ಅದಕ್ಕೂ ಒಪ್ಪಿಕೊಂಡನು.

ನಾವು ವಿಚಾರವನ್ನೆಲ್ಲಾ ತಿಳಿದುಕೊಂಡೆವು. ಚ— ಊರಿನ ದಫೇದಾರೀ ಕೆಲಸ ಕೊಡುವವರು ಆ ಜಿಲ್ಲೆಯ ಪೋಲೀಸು ಸುಪರಿಂಟೆಂಡೆಂಟರು. ಅವರು ಇರುವುದು ಬ— ಪಟ್ಟಣದಲ್ಲಿ. ಸಿದ್ದಪ್ಪ ಅವರ ವಿಷಯವನ್ನು ಸಂಗ್ರಹಿಸಿದ್ದ; “ನೋಡು ರಾಮು, ಅವರಿಗೆ ಲಗ್ನ ಇಲ್ಲಂತೆ. ಮುವತ್ತೈದು ವರ್ಷ ವಯಸ್ಸಂತೆ. ಆದ್ದರಿಂದ ನಮ್ಮ ಕೆಲಸ ಸುಲಭವಾಗಿ ಆಗಬಹುದೂ ಅಂತ ಕಾಣುತ್ತೆ. ಅಲ್ಲಿ ನಮ್ಮ ರಾಚೂಟಿ ಇದ್ದಾನೆ. ನೆನಪಿದೆಯೆ, ಯಾರೂ ಅಂತ. ಮದ್ರಾಸಿನಲ್ಲಿ ನಾವು ಚೆಟ್ಟಿಯಾರ ಮನೆ ಕನ್ನ ಹಾಕಿದಾಗ ನಮ್ಮ ಪಾಲುದಾರ ಆಗಿದ್ದ ನೋಡು,— ಹುಂ, ಮೆಳ್ಳಗಣ್ಣಿನವ- ಅವನೇ. ಅವನು ಬ— ಪಟ್ಟಣದಲ್ಲಿ ಹೋಟಲು ಇಟ್ಟಿದ್ದಾನೆ. ಅವನ್ನ ಹಿಡಿದರೆ ಎಲ್ಲಾ ವಿಷಯ ತಿಳಿಯಬರುತ್ತೆ” ಎಂದನು.

ಮರುದಿವಸನೇ ನಾವು ಬ- ಪಟ್ಟಣಕ್ಕೆ ರೈಲು ಹಿಡಿದೆವು, ದ್ಯಾಮಣ್ಣನ ಹತ್ತಿರ ನೂರು ರೂಪಾಯಿ ಮುಂಗಡ ತೆಗೆದು ಕೊಂಡು; ರಾಚೂಟಿಯ ಹೋಟಲಿನಲ್ಲಿ ಇಳಿದುಕೊಂಡೆವು. ‘ಏನು ಮಾಡ್ತಿದ್ದೀರಿ’ ಎಂತ ಯಾರಾದರೂ ಕೇಳಿದರೆ ‘ಹೋಟಲು, ಇಟ್ಟಿದ್ದೀನಿ’ ಅಂತ ಜವಾಬು ಕೊಡೋ ಪೂರ್ತಕ್ಕೆ ಇಟ್ಟಿದ್ದ ಹೋಟಲು, ಅವನು ಮಾಡುತ್ತಿದ್ದ ಕಸಬೇ ಬೇರೆ; ಅವನಿಗೆ ನಮ್ಮ ಕತೆಯನ್ನೆಲ್ಲಾ ಹೇಳಿದೆವು. ನಾವು ಮೊದಲು ಪೋಲೀಸ ಕಚೇರಿಯ ಮ್ಯಾನೇಜರನ್ನು ಹಿಡಿದು, ಅವನಿಗೆ ಮೂವತ್ತೋ ನಲವತ್ತೋ ಕೊಟ್ಟು, ಈ ಕೆಲಸ ಮಾಡಿಸಿಕೊಳ್ಳೋಣಾ ಅಂತ ಏರ್ಪಾಟು ಹಾಕಿಕೊಂಡಿದ್ದೆವು. ಆದರೆ ರಾಚೂಟಿ ಇದಕ್ಕೆ ಒಪ್ಪಲಿಲ್ಲ. “ಛೆ! ಛೆ! ಮ್ಯಾನೇಜರ ಮಾತೆತ್ತ ಬೇಡ. ಅವನು ಬಕಪಕ್ಷಿ. ಐವತ್ತಲ್ಲಾ, ನೂರಾದರೂ ಸಾಲದು ಅವನಿಗೆ. ಆದರೂ ನಂಬಿಕೆಯವನಲ್ಲ. ಕೈಕೊಟ್ಟು ಬಿಡುತ್ತಾನೆ. ನಾನು ಹೇಳಿದ ಹಾಗೆ ಕೇಳ್ರಿ. ಮಲ್ಲಿ-ಮುಲ್ಲಾಸಾನಿ,— ಅವಳನ್ನು ಹಿಡಿದರೆ ಈ ಕೆಲಸ ಸಲೀಸಾಗಿ ಆಗುತ್ತೆ. ಪೋಲೀಸ್ ಸುಪರಿಂಟೆಂಡೆಂಟರನ್ನು ತನ್ನ ಜಾಕೀಟು ಜೇಬಿನಲ್ಲಿ ಮಡಗಿಕೊಂಡಿದ್ದಾಳೆ ಅವಳು. ಐವತ್ತು ಕೊಡಬೇಕು ಅವಳಿಗೆ. ಅದಕ್ಕೆ ಕಡಿಮೆ ಮುಟ್ಟುವವಳಲ್ಲ. ನಂಬಿಕೆ ಆಸಾಮಿ” ಎಂದನು. ನಾನು “ಹೆಂಗುಸನ್ನು ನಂಬಿದರೆ ನಮ್ಮ ಕೆಲಸ ಎಲ್ಲಿ ಆಗುತ್ತೆ? ಮ್ಯಾನೇಜರಿಗೇ ಹತ್ತು ಜಾಸ್ತಿ ಕೊಟ್ಟರೂ ಪರವಾ ಇಲ್ಲಾ, ಅವರನ್ನೇ ಹಿಡಿಯೋಣ. ಅಥವಾ ಒಂದು ನೂರು ಖರ್ಚಾದರೂ ಪರವಾ ಇಲ್ಲ, ಪೋಲೀಸ್ ಸುಪರಿಂಟೆಂಡೆಂಟರನ್ನೇ ಹಿಡಿಯೋಣ” ಎಂದೆ. ನನ್ನ ಮಾತನ್ನ ಅವರಿಬ್ಬರೂ ಒಪ್ಪಲಿಲ್ಲ. ಕಡೆಗೆ ಮಾರನೆಯ ದಿವಸ ಬೆಳಿಗ್ಗೆ ಹತ್ತು ಗಂಟೆ ಹೊತ್ತಿಗೆ ನಾವು ಮೂವರೂ ಮುಲ್ಲಾಸಾನಿಯ ಮನೆಗೆ ಹೋದೆವು.

ಮುಲ್ಲಾಸಾನಿ ಆಗ ತಾನೆ ಎದ್ದು ಚಾ ಕುಡಿಯುತ್ತಿದ್ದಳು. ಅವಳನ್ನು ನೋಡಿದರೆ ಕಣ್ಣಿಗೆ ಪಚ್ಚಕರ್ಪೂರ ಹಚ್ಚಿದ ಹಾಗಾಗುತ್ತಿತ್ತು. ಅವಳ ಮುಖದ ಮೇಲಿನ ಪುಡಿ ಪೂರ್ತಿ ಹೋಗಿರಲಿಲ್ಲ. ತುಟಿಗೆ ಹಚ್ಚಿದ ರಂಗು ಇನ್ನೂ ಹಾಗೇ ಇತ್ತು. ಅರ್ಧ ಎದೆಯ ನೀಟಿಗೆ ಇಟ್ಟಿದ್ದ ಕತ್ತು ಪಟ್ಟಿನ ಜಾಕೀಟನ್ನು ತೊಟ್ಟಿದ್ದಳು. ಅದಕ್ಕೆ ತೋಳುಗಳು ಇರಲಿಲ್ಲ. ಸೀರೆಯ ಸೆರಗು ಕೆಳಗೆ ಬಿದ್ದಿತ್ತು. ನಮ್ಮನ್ನು ನೋಡಿ ಮೊದಲು ಶಂಕೆಗೊಂಡರೂ, ರಾಚೂಟಿ ಇದ್ದುದರಿಂದ, ಅನಂತರ ನಮ್ಮೊಡನೆ ಸಲೀಸಾಗಿ ಮಾತನಾಡಲಿಕ್ಕೆ

ಆರಂಭಿಸಿದಳು. ರಾಜಕಾಟಿ ಸ್ವಲ್ಪದರಲ್ಲಿಯೇ ಎಲ್ಲಾ ವಿಷಯಗಳನ್ನು ತಿಳಿಸಿಬಿಟ್ಟ. 'ಕೆಲಸದ ಹುಕುಮನ್ನು ನಾಡಿದ್ದು ಎಂಟು ಗಂಟೆಯ ಒಳಗೆ ನಮ್ಮ ಕೈಯಲ್ಲೇ ಕೊಡಬೇಕು; ಐವತ್ತು ರೂಪಾಯಿ ಕೊಡುತ್ತೇವೆ' ಎಂದು ಹೇಳಿದ. ಮಲ್ಲಾಸಾನಿಯು "ಸುಪರಿಡೆಂಟರು ಜಾನಕೀನಾಥನ್! ಪರವಾ ಇಲ್ಲ, ಅರ್ಧ ಬ್ರಾಂಡಿ ಬಾಟಲಿ ಖರ್ಚು ಆಗುವವರೆಗೂ ಹಾಗೂ ಹೀಗೂ ಇರ್ತಾನೆ. ಆಮೇಲೆ ನಾನು ಹೇಳಿದ ಕಾಗದಕ್ಕೆ ರುಜು ಹಾಕತಾನೆ. ನಾಡಿದ್ದು ಬೆಳಿಗ್ಗೆ ಎಂಟು ಗಂಟೆಗೆ ನೀವು ಬಂದರೆ ನಿಮ್ಮ ಶಿವಣ್ಣನ ಮೇಸ್ತ್ರಿ ಕೆಲಸದ ಹುಕುಮನ್ನು ನಿಮ್ಮ ಕೈಯಲ್ಲೇ ಕೊಡುತ್ತೇನೆ" ಎಂದಳು.

"ಅದಲ್ಲ; ದ್ಯಾಮಣ್ಣನದು ಜ–ಪುರದ ಪೋಲೀಸ್ ದಫೇದಾರೀ ಕೆಲಸ" ಎಂದು ಸಿದ್ದಯ್ಯ ಹೇಳಿದನು.

ಮಲ್ಲಾಸಾನಿ "ನೋಡ್ರಿ. ಈಗ ನಿಮ್ಮದೂ ಸೇರಿ ಹದಿನಾರು ಕೆಲಸದ ಅರ್ಜಿಗಳಾಗಿವೆ ನನ್ನಲ್ಲಿ. ಪೋಲೀಸ್ ಸುಪರಿಂಟೆಂಟರು, ಸ್ಕೂಲು ಇನಸ್ಪೆಕ್ಟರು, ಪೋಸ್ಟು ಸುಪರಿಡೆಂಟರು, ಕಲೆಕ್ಟರು ಇವರೆಲ್ಲಾ ನನ್ನ ಕೈಕೆಳಗಿರುವುದರಿಂದ, ಬಹಳ ಅರ್ಜಿಗಳು ನನ್ನ ಹತ್ತಿರ ಬಂದು ಹೆಸರುಗಳು ಬದಲಾಯಿಸುತ್ತವೆ. ಪರವಾ ಇಲ್ಲ, ನಾಡಿದ್ದು ಬನ್ನಿ" ಎಂದು ಹೇಳಿ ಒಂದು ಕಾಗದದ ಮೇಲೆ ದ್ಯಾಮಣ್ಣನ ಹೆಸರನ್ನೂ, ಬೇಕಾಗಿರುವ ನೌಕರಿಯನ್ನೂ, ಊರಿನ ಹೆಸರನ್ನೂ ಬರೆದುಕೊಂಡಳು.

ಸ್ವಲ್ಪ ಹೊತ್ತಿನಲ್ಲಿಯೆ ನಾವು ಹೋಟೆಲಿಗೆ ಹಿಂದಿರುಗಿಬಿಟ್ಟೆವು. ತನ್ನ ಮೀಸೆಯ ತುದಿಯನ್ನು ನಾಲಿಗೆಯಿಂದ ಸವರುತ್ತಿದ್ದ ಸಿದ್ದಯ್ಯನು, "ಅಷ್ಟು ಚೆನ್ನಾಗಿರೋ ಹುಡುಗಿ, ಅಷ್ಟು ಛಾಲಾಕ್ಯಾಗಿರುವುದು ಬಹಳ ಅಪರೂಪ" ಎಂದನು.

"ಅಪರೂಪ! ಅಪರೂಪ ಎಲ್ಬಂತು. ಇರೋದೇ ಇಲ್ಲ!" ಎಂದು ನಾನು ಹೇಳಿದೆ.

ಸಿದ್ದಯ್ಯ "ಅಂಥವಳು ಒಬ್ಬಳು ನಮ್ಮ ಜತೆ ಪಾಲುದಾರಳಾದರೆ ಹಣದ ಮಳೆ ಸುರಿಸಬಹುದು, ನಾವು" ಎಂದನು.

ನಾನು "ಅವಳು ಪಾಲುದಾರಳಾದರೆ, ಅವಳು ನಮ್ಮ ಕಂಪನಿ ಸೇರೋದೇ ತಡ, ಅದು ಛಟ್ ಅನ್ನುತ್ತದೆ ನೋಡು" ಎಂದೆನು.

"ಹಾಗಾದರೆ ಅವಳು ದ್ಯಾಮಣ್ಣನಿಗೆ ಕೆಲಸಮಾಡಿಸಿ ಕೊಡುವುದಿಲ್ಲಾ ಅಂತೀಯಾ?" ಎಂದು ಸಿದ್ದ ಕೇಳಿದ.

"ಈಗ ನಾನ್ಯಾಕೆ ಹೇಳಲಿ? ಅವಳು ಕೆಲಸದ ಹುಕುಮನ್ನು ನಮ್ಮ ಕೈಯಲ್ಲಿ ಕೊಡುವವರೆಗೂ ನನಗೆ ನಂಬಿಕೆ ಇಲ್ಲ" ಎಂದುಬಿಟ್ಟೆ.

ಎರಡು ದಿನಗಳಾದ ನಂತರ ಬೆಳಗಿನ ಎಂಟುಗಂಟೆಗೆ ನಾವು ಮೂವರೂ ಮಲ್ಲಾಸಾನಿಯ ಮನೆಗೆ ಹೋದೆವು. ಆಕೆ ನನಗೋಸ್ಕರ ಕಾದಿದ್ದಳು. ಆಗ ಅವಳನ್ನು ನೀವು ನೋಡಬೇಕಾಗಿತ್ತು ಅಂದರೆ; ಪೋಲೀಸು ಸುಪರಿಡೆಂಟರು ಏಕೆ, ಎಲ್ಲಾ ಮಂತ್ರಿಗಳನ್ನು ಸಹ ತನ್ನ ಎಡಗಾಲಿನ ಬೆಟ್ಟಿನ ಕೆಳಗೆ ಇಟ್ಟುಕೊಳ್ಳುವ ಹಾಗೆ ಕಾಣಿಸುತ್ತಿದ್ದಳು. ಆದರೂ ನನಗೆ ಅವಳ ಸೌಂದರ್ಯದ ಶಕ್ತಿಯಲ್ಲಿ ಪೂರ್ತಿ ನಂಬಿಕೆ ಉಂಟಾಗಲಿಲ್ಲ. ಆದ್ದರಿಂದ ಅವಳು ನನ್ನ ಕೈಗೆ ದ್ಯಾಮಣ್ಣನ ಕೆಲಸದ ಹುಕುಮಿನ ಕಾಗದವನ್ನು ಕೊಟ್ಟಾಗ ನನಗೆ ಆಶ್ಚರ್ಯವೆ ಆಯಿತು. ಅದನ್ನು ಮಡಿಸಿ ಜೇಬಿನೊಳಗೆ ಇಟ್ಟು, ಅವಳ ಮುಂದೆ ಐವತ್ತು ರುಪಾಯಿಗಳನ್ನು ಇಟ್ಟೆ. ಎಣಿಸಿಕೊಳ್ಳದೆಯೆ ಆ ಹಣವನ್ನು ತನ್ನ ಕೈಸಂದೂಕದಲ್ಲಿ ಹಾಕಿ, "ಬಹಳ ಸುಲಭವಾಗಿ ಈ ಕೆಲಸ ಸಿಕ್ಕಿತು. ಕಷ್ಟವೇ ಆಗಲಿಲ್ಲ. ಸ್ವಲ್ಪ ಬಿನ್ನಾಣ, ಸ್ವಲ್ಪ ಬೆಡಗು, ಕಾಲು ಬಾಟಲಿ ಬ್ರಾಂಡಿ, ಇಷ್ಟಕ್ಕೇ ಸಿಕ್ಕಿಹೋಯಿತು ಈ ಕೆಲಸ' ಎಂದಳು.

ನಾವು ಹೋಟಲಿಗೆ ಹಿಂದಿರುಗಿ ಬಂದಾಗ ರೈಲಿಗೆ ಇನ್ನು ಕಾಲು ಗಂಟೆ ಇತ್ತು. ಆದ್ದರಿಂದ ಜಾಗ್ರತೆ ಸ್ಟೇಷನ್ನಿಗೆ ಹೋದೆವು.

ರೈಲಿನಲ್ಲಿ ಸಿದ್ದಯ್ಯ ನನ್ನನ್ನು ತಮಾಷೆ ಮಾಡಲು ಪ್ರಾರಂಭಿಸಿಬಿಟ್ಟನು. ನಾನು ಒಪ್ಪಿಕೊಂಡು "ಚಾಚೂ ತಪ್ಪಿಲ್ಲದೆ, ಕೆಲಸ ಮಾಡಿದ ಹೆಂಗುಸನ್ನು ಇದುವರೆಗೂ ನಾನು ನೋಡಿರಲಿಲ್ಲ" ಎಂದೆನು.

ಸುಮಾರು ಎರಡು ಗಂಟೆಗಳ ಕಾಲ ಪ್ರಯಾಣ ಮಾಡಿದನಂತರ ನಾನು ಕೆಲಸದ ಹುಕುಮನ್ನು ತೆಗೆದು ಓದಿದೆನು. ಅದು ಕನ್ನಡದಲ್ಲೇ ಇತ್ತು. ಅನಂತರ, ಏನನ್ನೂ ಹೇಳದೆ, ತುಟಿಗಳನ್ನು ಭದ್ರವಾಗಿ ಮುಚ್ಚಿಕೊಂಡು, ಅದನ್ನು ಸಿದ್ದಪ್ಪನ ಮುಖಕ್ಕೆ ಹಿಡಿದೆ. ಅವನು ಹಾಗೇ ಅದನ್ನು ಓದಿ, ಅನಂತರ ಅದನ್ನು ನನ್ನ ಕೈಯಿಂದ ಕಿತ್ತುಕೊಂಡು ಪುನಃ ಓದಿದನು. ತರುವಾಯ ತಾನೂ ಏನನ್ನೂ ಹೇಳದೆ ಅದನ್ನು ನನಗೆ ಹಿಂದಿರುಗಿ ಕೊಟ್ಟುಬಿಟ್ಟನು.

ಕೆಲಸ ದ್ಯಾಮಣ್ಣನಿಗೇ ಆಗಿತ್ತು ನಿಜ. ಹದಿನೈದು ರುಪಾಯಿನ ಕೆಲಸ ಆದದ್ದೂ ನಿಜ. ಆದರೆ ದ್ಯಾಮಣ್ಣನಿಗೆ ಜ—ಪುರಕ್ಕೆ ಇಪ್ಪತ್ತು ಮೈಲಿ ದೂರದಲ್ಲಿರುವ, ಬನ್ನಿಹಳ್ಳಿಯ ಅಂಚೆಜವಾನನ ಕೆಲಸ ಆಗಿತ್ತು.

ನಾವಿಬ್ಬರೂ ಜ—ಪುರಕ್ಕೆ ಹೋಗಲೇ ಇಲ್ಲ. ಮುಂದಿನ ನಿಲ್ದಾಣದಲ್ಲೇ ಇಳಿದುಬಿಟ್ಟು, ದ್ಯಾಮಣ್ಣನಿಗೆ ಕೆಲಸದ ಹುಕುಮನ್ನು ಅಂಚೆಯ ಮೂಲಕ ಕಳುಹಿಸಿಬಿಟ್ಟೆವು."

ಒ. ಹೆನ್ರಿಯವರ The Hand that riles ಎಂಬ ಕಥೆಯನ್ನು ಅನುಸರಿಸಿ ಬರೆದುದು.

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರೆಜಿಸ್ಟ್ರೇಶನ್ನಿನ ಬಗ್ಗೆ

ಸಿ. ಜಿ. ಅನುಂದ್ ಆ್ಯಂಡ್ ಕಂಪನಿ

೧೪ ಹೇರಸ್ಟ್ರೀಟ್, ಕಲಕತ್ತಾ

ಇವರಿಗೆ ಬರೆಯಿರಿ.

ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ವಿಶ್ವಶಾಂತಿಯ ಸಮಸ್ಯೆ

★

ಮೂಲ ಲೇಖಕರು:—
ಪ್ರೊ. ಶ್ರೀ. ಜಗನ್ನಾಥಪ್ರಸಾದ ಮಿಶ್ರ, M. A. B. L.
ಅನುವಾದಕರು:—
ಶ್ರೀ. ಎಸ್. ಎಲ್. ಸುಬ್ರಹ್ಮಣ್ಯ, ಹರಿಹರ

ಮಾನವನಲ್ಲಿರುವ ಅಧಿಕಾರ-ಕೀರ್ತಿಗಳ ಲಾಲಸೆ, ದೌಷ್ಟ್ಯ ಮೂಲಕವಾದ ಬಲ, ಸಂಪತ್ತಿನ ಅಸಮಾನತೆ ಇವೇ ಯುದ್ಧಕ್ಕೆ ಕಾರಣಗಳು; ಯುದ್ಧವು ವಿಶ್ವದ ಅಶಾಂತಿಗೆ ಕಾರಣ. ಅಂತಹ ಯುದ್ಧದ ಹಾಸುಬಲೆಯಿಂದ ಜಗತ್ತನ್ನು ಪಾರಾಗಿಸುವುದಕ್ಕೆ ಸಾಧ್ಯವೇ ಇಲ್ಲವೇನು?

★

೧೯೧೪ರಿಂದ ೧೯೪೫ರ ವರೆಗೆ ಯೂರೋಪಿನಲ್ಲಿ ಪ್ರಜ್ವಲಿತವಾದ ನರಹತ್ಯೆಯ ಹವನ ಕುಂಡದ ಜ್ವಾಲೆಗಳು ಇನ್ನೂ ಶಾಂತವಾಗಲೇ ಇಲ್ಲ. ವಿಶ್ವಶಾಂತಿಯ ಸಮಸ್ಯೆಯು ಬಗೆಹರಿದಿರುವುದಿಲ್ಲ. ಜಗತ್ತಿನಲ್ಲಿ ಇದೇ ಅಂತಿಮಯುದ್ಧವೆಂದೂ, ಮಾನವ ಜಾತಿಯ ಬರ್ಬರತೆಯು ನಿಶ್ಶೇಷವಾಗಿ ಅಳಿದುಹೋಯಿತೆಂದೂ ಜನರು ತಿಳಿದಿದ್ದರು. ಆದರೆ ಈಗಿನ ಯುದ್ಧವು ಆ ಭಾವನೆಯನ್ನು ಸುಳ್ಳುಮಾಡಿ ತೋರಿಸಿತು. ಪ್ರಚಂಡ ಝುಂಝಾವಾತದ ನಂತರ, ಆಕಾಶದಲ್ಲಿಯ ಮೇಘಗಳು ದೂರವಾಗಿ, ಪ್ರಕಾಶವುಂಟಾಗುವ ಆಶೆಯು ನಿರಾಶೆಯಲ್ಲಿ ಪರಿವರ್ತನಹೊಂದಿತು. ಆಕಾಶವು ಪುನಃ ಅಂಧಕಾರದಿಂದ ಮುಚ್ಚಲ್ಪಟ್ಟಿದೆ. ದಿಗಂತದಲ್ಲಿ ಯುದ್ಧದ ಕಾರ್ಮೋಡಗಳು ಘನೀಭೂತವಾಗಿವೆ. ೧೯೧೯ರಿಂದ ೧೯೩೯ರ ವರೆಗೆ ವಿಶ್ವದ ರಾಜಕೀಯ ವಾತಾವರಣವು ಶಾಂತಿಮಯವೂ ಸುವ್ಯವಸ್ಥಿತವೂ ಆಗಿದ್ದಂತೆ ತೋರಿತು; ಆದರೆ ಕೂಡಲೆ, ಮನುಷ್ಯನಲ್ಲಿಯ ಮೊದಲಿದ್ದ ಪ್ರವೃತ್ತಿಯು ಉತ್ಕಟರೂಪವೇ ಪ್ರಕಟವಾಗಲಾರಂಭಿಸಿತು, ಬರ್ಬರತೆಯ ಬೀಭತ್ಸ ಲೀಲೆಗಳು ನಮ್ಮೆದುರಿನಲ್ಲಿ ನೃತ್ಯಮಾಡಲಾರಂಭಿಸಿದುವು. ಇಂದು ಯುದ್ಧದ ವಿಷಮಯ ಪರಿಣಾಮವನ್ನು ನೋಡಿ, ಜಗತ್ತಿನ ಕೋಟ್ಯಂತರ ಜನರು ಸಂತಪ್ತರೂ ಆತಂಕಗ್ರಸ್ತರೂ ಆಗಿರುವರು.

ಒಂದುಕಡೆಗೆ ಮನುಷ್ಯನ ಸಭ್ಯತೆ ಮತ್ತು ಸಂಸ್ಕೃತಿಗಳು, ಮತ್ತೊಂದು ಕಡೆ ಅವನದೇ ಬರ್ಬರತೆ ಮತ್ತು ಪಾಶವ ವರ್ತನೆ-ಇವುಗಳ ಮಧ್ಯೆ ಸಂಘರ್ಷಣೆಯು ನಡೆದಿದೆ. ಈ ಘರ್ಷಣೆಯು ಎಲ್ಲಿ ಕೊನೆಗಾಣುವುದೋ ತಿಳಿಯದು. ಮಾನವ-ಸಂಸ್ಕೃತಿ ಮತ್ತು ಸಭ್ಯತೆಗೆ ಪರಾಭವ ಹೊಂದಿ, ಬರ್ಬರತೆಯೇ ಕೊನೆಗೆ ವಿಜಯಿಯಾಗುವುದೇ? ಈಗಿನ ರಾಷ್ಟ್ರಾಧಿಪತಿಗಳ ರೀತಿನೀತಿಗಳನ್ನು ನೋಡಿದರೆ ಹೀಗೆಂದೇ ಭಾಸವಾಗುತ್ತದೆ. ಫ್ಯಾಸಿಸ್ಟ ರಾಜ್ಯದ ಸರ್ವಾಧಿಕಾರಿಯಂತೂ ಶಾಂತಿಪ್ರಿಯತೆಯು ಭೀರುತೆಯ ನಿದರ್ಶನ-ಸ್ವರೂಪವೆಂದು ಸ್ಪಷ್ಟವಾಗಿ ಹೇಳುತ್ತಾನೆ. ಅವರು ನಂಬಿರುವುದು ಮನುಷ್ಯನ ಶೌರ್ಯವೀರ್ಯಗಳು ಯುದ್ಧಗಳ ಮೂಲಕವೇ ಪ್ರಕಾಶಗೊಳ್ಳುವುವೆಂದು. ಯಾವ ಜಾತಿಯು ಎಷ್ಟು ಹೆಚ್ಚಾಗಿ ಯುದ್ಧಪ್ರಿಯವಾಗಿದೆಯೊ ಅಷ್ಟೂ ಅದರ ಮಹತ್ತ್ವವು ಹೆಚ್ಚುವುದೆಂದೇ ಅವರ ಭಾವನೆ.

ವಿಶ್ವಶಾಂತಿಯ ಸಮಸ್ಯೆಯು ಬಗೆಹರಿಯುವುದೆಂತು? ತಮ್ಮ ತಮ್ಮ ಅಧಿಕಾರಗಳ ಪ್ರತಿಷ್ಠೆಗೆ ಯುದ್ಧವು ಅನಿವಾರ್ಯವೆ, ಅಥವಾ ಜೀವಶಾಸ್ತ್ರದ ದೃಷ್ಟಿಯಿಂದ ಇದು ಅಗತ್ಯವೇ? ಯುದ್ಧದ ವಿಚಾರದಲ್ಲಿ ತೋರಿಬರುವ ಮಾನವ-ಪ್ರವೃತ್ತಿಯಲ್ಲಿ ಯಾವ ವಿಧವಾದ ಅಸ್ವಾಭಾವಿಕತೆಯೇನೂ ಇಲ್ಲ. ಮನುಷ್ಯನು ಆದಿಯಲ್ಲಿಯ ತನ್ನ ಬರ್ಬರತೆಯ ಮೇಲೆ ವಿಜಯವನ್ನು ಹೊಂದಲು ಅಸಮರ್ಥನೆ ಆಗಿರುವನು. ಪ್ರತಿಯೊಬ್ಬ ವ್ಯಕ್ತಿಯು ಶಿಕ್ಷಿತನೂ, ಸಹೃದಯನೂ, ಉದಾರಿಯೂ, ಬುದ್ಧಿವಂತನೂ, ಸ್ವಾಧೀನಚಿತ್ತವುಳ್ಳವನೂ, ಸಮೃದ್ಧಿಶಾಲಿಯೂ ಆಗುವಂತಹ ಆದರ್ಶ ಮಾನವಸಮಾಜದ ಸ್ಥಾಪನೆಯು, ಸಭ್ಯತೆ ಮತ್ತು ಸಂಸ್ಕೃತಿಯ ಪ್ರಕಾಶಗಳ ಮೂಲಕ ಆಗಲಾರದೆ ಹೋಗಿದೆ. ನಮ್ಮಲ್ಲಿ ಅಧಿಕಾಂಶ ಜನರು ಇನ್ನೂ ಪಶುಪ್ರವೃತ್ತಿಯ ದಾಸರೇ ಆಗಿರುವೆವೆಂಬುದು ನಿರ್ವಿವಾದವಾದ ವಿಚಾರ. ಈ ಪ್ರವೃತ್ತಿಯೇ ನಮ್ಮನ್ನು ಕೇವಲ ವನ್ಯಮೃಗಗಳಂತೆ, ಪರಸ್ಪರ ಕೊಲೆ, ಲೂಟಿ, ಹತ್ಯೆ ಮತ್ತು ರಕ್ತಪಾತ ಮಾಡಲೂ; ದುರ್ಬಲರನ್ನು ತುಳಿದು ಅವರ ಮೇಲೆ ಪ್ರಭುತ್ವನಡೆಯಿಸುವಂತೆ ಮಾಡಲೂ ಕಾರಣವಾಗಿರುವುದು. ಈ ಪ್ರವೃತ್ತಿಯು ಮನುಷ್ಯನನ್ನು ಬಹಳ ಕಾಲದ ವರೆಗೆ ಶಾಂತ ವಾತಾವರಣದಲ್ಲಿ ಸುಮ್ಮನೆ ಕುಳ್ಳಿರಲು ಬಿಡುವುದಿಲ್ಲ. ಸಮಯ ದೊರೆತ ಕೂಡಲೆ, ಈ ಪ್ರವೃತ್ತಿಯು ಹೊರಕ್ಕೆ ಹೊಮ್ಮುವುದು. ನಾವು ಇದನ್ನು ಮಾನವಸಭ್ಯತೆಯ ಆದಿಯಿಂದಲೂ ನೋಡುತ್ತ ಬಂದಿರುವೆವಲ್ಲದೆ, ಯುದ್ಧದ ವಿಚಾರದಲ್ಲಿ, ಈ ಪರಂಪರಾಗತ ಭಾವನೆಗಳ ಕಾರಣದಿಂದಲೆ, ಇಂದು

ಮನುಷ್ಯರಲ್ಲಿಯುದ್ಧಮಾಡುವುದು ಮಾನವ ಪ್ರಕೃತಿಯ ಒಂದು ಅಂಶವೆ ಎಂಬ ಕಲ್ಪನೆಯುಂಟಾಗಿದೆ. 'ಎಲ್ಲಿಯವರೆಗೆ ಮನುಷ್ಯನು ತನ್ನ ಪ್ರವೃತ್ತಿಗಳ ದಾಸನಾಗಿಯೆ ಇರುವನೊ, ಅಲ್ಲಿಯವರೆಗೂ ಯುದ್ಧಗಳು ಸಂಭವಿಸುವುದು ಅನಿವಾರ್ಯವೇ ಆಗಿರುವುದು. ತರ್ಕ ಮತ್ತು ಯುಕ್ತಿಗಳಿಗಿಂತ, ಪ್ರವೃತ್ತಿಗಳ ಮೂಲಕವೆ ಮಾನವನು ನಡೆಯುವುದು.

ಆದುದರಿಂದ ಕೇವಲ ಸಾಧಾರಣ ಕಾರಣಗಳ ಪರಿಣಾಮವಾಗಿ ಈ ಪ್ರವೃತ್ತಿಯು ಹೊರಹೊಮ್ಮಿತೆಂದರೆ ಕೊಲೆ, ರಕ್ತಪಾತಗಳ ನಗ್ನನೃತ್ಯವು ನಡೆಯುವುದು. ಯುಗಯುಗಾಂತರಗಳಿಂದಲೂ ಮನುಷ್ಯರ ಮನಸ್ಸಿನಲ್ಲಿ ಈ ರೀತಿಯ ಸಂಸ್ಕಾರಗಳು ಬೇರುಬಿಟ್ಟುಕೊಂಡೆ ಬಂದಿವೆ. ದೀರ್ಘಕಾಲದ ಈ ಸಂಸ್ಕಾರದಿಂದ ಮನುಷ್ಯನು, 'ಯುದ್ಧವು ಸಹ ಭೂಕಂಪ, ಪ್ರವಾಹ, ಮಹಾಮಾರಿಗಳಂತೆಯೇ ಒಂದು ಪ್ರಾಕೃತಿಕ ದುರ್ಘಟನೆಯೇ' ಎಂಬ ನಂಬಿಕೆಯನ್ನು ಇಟ್ಟುಕೊಂಡಿರುವನು. ಇಂತಹ ಘಟನೆಗಳ ಹಿಂದೆ ಯಾವುದೋ ಒಂದು ಆಧಿದೈವಿಕ ಶಕ್ತಿಯು ಕೆಲಸಮಾಡುತ್ತಿದೆಯೆಂದೇ ಇವನ ವಿಶ್ವಾಸ. ಆದುದರಿಂದಲೇ, ಇತರ ದುರ್ಘಟನೆಗಳನ್ನು ನಿವಾರಿಸುವುದು ಮನುಷ್ಯ ಶಕ್ತಿಗೆ ಮೀರಿದ ಕೆಲಸವಾಗಿರುವಂತೆಯೇ ಯುದ್ಧವನ್ನು ತಡೆಗಟ್ಟುವುದು ಸಹ ಮನುಷ್ಯಪ್ರಯತ್ನಕ್ಕೆ ಮೀರಿದುದೆಂಬ ಭಾವನೆಯುಂಟಾಗಿದೆ. ಆದುದರಿಂದಲೆ ಮಹಾತ್ಮರು ಅಹಿಂಸೆಯ ವಿಚಾರದಲ್ಲಿ ಅಧಿಕವಾಗಿ ಪ್ರಚಾರ ಮಾಡುತ್ತಿರುವಾಗ, **ರೋಮಾರೋಲಾನ್ ಬರ್ನಾರ್ಡ್ ಷಾ** ಮೊದಲಾದವರು ಇದನ್ನು, ಎಂದರೇ ಯುದ್ಧದ ಅಸ್ತಿತ್ವವನ್ನೇ ಜಗತ್ತಿನಿಂದ ದೂರಮಾಡಬೇಕೆಂದು ಚರ್ಚಿಸುತ್ತಿರುವಾಗ, ಇದೆಲ್ಲ ಆದರ್ಶವಾದಿಗಳ ಮಾತೆಂದೂ, ವಾಸ್ತವಿಕ ಜಗತ್ತಿಗೂ ಇದಕ್ಕೂ ಸಂಬಂಧವೇ ಇಲ್ಲವೆಂದೂ ಜನರು ಮಾತಾಡುತ್ತಿರುವುದನ್ನು ನಾವು ಕೇಳುತ್ತಿರುವೆವು. ಈ ರೀತಿಯ ಆದರ್ಶವಾದದ ಮೂಲಕ ಜಗತ್ತಿನಲ್ಲಿ ಎಂದಿಗೂ ಶಾಂತಿಸ್ಥಾಪನೆಯಾಗಲಾರದು. ಮನುಷ್ಯಪ್ರವೃತ್ತಿಯಲ್ಲಿ ಪರಿವರ್ತನೆಯಾಗುವ ಹೊರತು, ಮನುಷ್ಯಜಾತಿಗೆ ಯುದ್ಧದ ಈ ಅಭಿಶಾಪದಿಂದ ಮುಕ್ತಿ ಇಲ್ಲವೇ ಇಲ್ಲ. ಯುದ್ಧವು ಯಾವುದೇ ಒಂದು ಅನಿವಾರ್ಯವಾದ ದೈವೀಘಟನೆಯಲ್ಲವೆಂದು ಜನರ ಮನಸ್ಸಿನಲ್ಲಿ ದೃಢವಿಶ್ವಾಸವು ಬೇರೂರಬೇಕು; ಮತ್ತು ಅಧಿಕಾಂಶ ಜನರು ನಾವು ಯುದ್ಧವಾಗುವುದಕ್ಕೇ ಅವಕಾಶಕೊಡಲಾರೆವೆಂದು ಘೋಷಿಸಬೇಕು, ಆಗ ಯುದ್ಧವು ಅನಿವಾರ್ಯಸಂಕಟವಾಗಿ ಉಳಿಯುವುದಿಲ್ಲವೆಂಬುದು ವ್ಯಕ್ತಪಡುವುದು. ಆದರೆ ಇಂತಹ ನಂಬಿಕೆಯುಳ್ಳವರೆಷ್ಟುಮಂದಿ ಇರುವರು? ಒಂದುವೇಳೆ ಯುದ್ಧವು ಯಾವುದಾದರೂ (Natural catastrophe) ಆಧಿದೈವಿಕ ದುರ್ಘಟನೆಯೇ ಆಗಿದ್ದಲ್ಲಿ, ಇದರ ನಿವಾರಣೆಯು ಅಸಂಭವವೇ ಆಗುತ್ತಿತ್ತು. ಆದರೆ ಇದು ಅಂತಹ ದೈವೀಘಟನೆಯೇನೂ ಅಲ್ಲ. **ಬರ್ಟ್ರೆಂಡ್ ರಸಲ್**ನು ಬರೆದಿರುವುದನ್ನು ನೋಡಿ: "War is not a convulsion of Nature, like an earthquake, it is a result of human Volition and human Volition can prevent it." (ಯುದ್ಧವು ಭೂಕಂಪದಂತಹ ಒಂದು ದುರ್ಘಟನೆಯೇನೂ ಅಲ್ಲ; ಇದರ ಉತ್ಪತ್ತಿಯು ಮನುಷ್ಯನ ಇಚ್ಛೆಯಿಂದಲೇ ಆಗುವುದಾದುದರಿಂದ, ಮನುಷ್ಯನ ಇಚ್ಛೆಯಿಂದಲೇ ಇದರ ನಿವಾರಣೆಯೂ ಆಗಬಹುದು). ಒಂದು ರಾಷ್ಟ್ರದೊಡನೆ ಮತ್ತೊಂದು ರಾಷ್ಟ್ರದ, ಒಂದು ಜಾತಿಯೊಡನೆ ಮತ್ತೊಂದು ಜಾತಿಯ, ಮನುಷ್ಯನೊಡನೆ ಮನುಷ್ಯನ ಸಂಬಂಧವು ಈಗ ಯಾವ ರೀತಿ ಇದೆಯೋ ಅದರಿಂದ, ನಿಜವಾಗಿಯೂ ಯುದ್ಧವು ಅನಿವಾರ್ಯವಾಗಿ ಉಳಿಯುವುದು. ಮನುಷ್ಯನೊಡನೆ ಮನುಷ್ಯನ ಸಂಬಂಧವು ಸಾಮ್ಯ, ಮೈತ್ರಿ ಮತ್ತು ಪ್ರೇಮ ಇವುಗಳ ಆಧಾರದಮೇಲೆ; ಅದರೆ, ಅಧಮಸ್ವಾರ್ಥದ ಮೂಲಕ ನಾವು ಈ ಸಂಬಂಧವನ್ನು ಕಲುಷಿತವಾಗಿ ಮಾಡದಿದ್ದರೆ, ಪ್ರತಿಯೊಂದು ದೇಶದ ಶಾಸಕರು ಸತ್ಯ, ನ್ಯಾಯ ಮತ್ತು



ಲೈಸೆನ್ಸ್ ಬೇಕಾಗಿಲ್ಲ

★

ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ ೧೯೩೯ ರಲ್ಲೇ ಹೊಸಬನೆಯ ಸಲ ತರಿಸಿದ್ದು. ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ ಉದ್ದ ೭ ಇಂಚು. ಭಾರ ಸುಮಾರು ೧೫ ಔನ್ಸುಗಳಷ್ಟು. ೫೦ ಗುಂಡುಗಳನ್ನು ತನಗೆ ತಾನಾಗಿ ಅಂದರೆ ಆಟಮೇಟಿಕ್ ಆಗಿ ಹಾರಿಸಬಹುದು. ಬೆಲೆ ರೂ. ೪-೮-೦ ಕೃತಕ ಮದ್ದು ಗುಂಡುಗಳಿಗೆ ೧೦೦೦ಕ್ಕೆ ರೂ. ೩. ಚರ್ಮದ ಚೀಲ ಬೇಕಾದರೆ ೧-೧೨-೦. ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ ೧-೧೨-೦ ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿ ಕೊಟ್ಟರೆ ಟಪಾಲು ಖರ್ಚು ಮುಫತ್ತು.

ಸೂಚನೆ:— ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡೆಯಿಸಲು ಪ್ರಯತ್ನಿಸಿರಿ.

American Pistol Co. (J. M. D.)
Post Box No. 27. Amritsar (India)

ಸ್ವಾಧೀನತೆಯ ನೀತಿಗಳನ್ನು ಅನುಸರಿಸಿ ಇತರ ರಾಷ್ಟ್ರಗಳೊಡನೆ ಸಂಬಂಧವನ್ನು ಕಲ್ಪಿಸಿಕೊಂಡಾಗ, ಸಾಧಾರಣ ಒಬ್ಬ ಮನುಷ್ಯನ ಅವಮಾನವೂ ನಮಗೆ ಅಸಹ್ಯವಾಗಿ ತೋರಿದರೆ, ಯುದ್ಧದ ನಿವಾರಣೆಯು ನಮಗೆ ಅಸಂಭವವೆಂಬುದು ಪ್ರತೀತವಾಗಲಾರದು. ಮನುಷ್ಯನು ಇಚ್ಛಾ-ಶಕ್ತಿಯ ಮೂಲಕ ಯುದ್ಧವನ್ನು ನಿಲ್ಲಿಸಬಲ್ಲನು. ಶಿಕ್ಷಣ, ಜ್ಞಾನ ಮತ್ತು ಸತ್ಸಂಗಗಳ ಮೂಲಕ ಮನುಷ್ಯನ ಆಚರಣೆಯಲ್ಲಿ ಪರಿವರ್ತನೆಯಾಗುವಾಗ, ಯುದ್ಧವನ್ನು ನಿಲ್ಲಿಸುವುದೂ ಅಸಂಭವವಲ್ಲ. ಏಕೆಂದರೆ ಈ ಯುದ್ಧದ ಸಂಬಂಧವು ಕೊನೆಗೂ ಮನುಷ್ಯನ ಆಚರಣೆಯೊಂದಿಗೆ ತಾನೇ ಇರುವುದು?

ಸಭ್ಯತೆ, ಸಂಸ್ಕೃತಿ, ಜ್ಞಾನ ವಿಜ್ಞಾನ ಮತ್ತು ರಾಜಕೀಯ ಹಾಗೂ ಸಾಮಾಜಿಕ ನಡೆವಳಿಕೆ ಇವುಗಳಲ್ಲಿ ಇದುವರೆಗಿನ ಮನುಷ್ಯನ ಆಚರಣೆಯಲ್ಲಿ, ಯುಗಯುಗದಿಂದ ಎಷ್ಟೋ ಪರಿವರ್ತನೆಯಾಗಿಲ್ಲವೇ? ಮನುಷ್ಯನ ಪ್ರಕೃತಿಯು ಆದಿಯಲ್ಲಿದ್ದುದಕ್ಕೂ ಈಗಿರುವುದಕ್ಕೂ ವ್ಯತ್ಯಾಸವಿಲ್ಲವೇ? ಒಂದು ಕಾಲದಲ್ಲಿ ಇದೇ ಮನುಷ್ಯನು ನರಮಾಂಸವನ್ನು ತಿನ್ನುತ್ತಿದ್ದು ದೇವತೆಗಳ ಉಪಾಸನೆಗೆಂದು ನರಬಲಿಯನ್ನು ಕೊಡುತ್ತಿದ್ದನು. ಅನೇಕ ಸ್ತ್ರೀಯರನ್ನು ಬಲವಂತದಿಂದ ವಿವಾಹವಾಗುತ್ತಿದ್ದನು. ಮೃಗಗಳಂತೆ ಅಂಗಡಿ-ಸಂತೆಗಳಲ್ಲಿ ತನ್ನ ಸಹೋದರರನ್ನು ಮಾರುತ್ತಿದ್ದನು. ಆದರೆ ಆ ಪದ್ಧತಿಗಳು ಈಗ ಎಲ್ಲಿವೆ? ಈಗಿನ ಸಭ್ಯ ಮನುಷ್ಯನು ಆ ರೀತಿಯ ಆಚರಣೆಗಳನ್ನು ಬರ್ಬರತೆಯ ಚಿಹ್ನೆಯೆಂದು ತಿಳಿದು, ಅವುಗಳನ್ನು ಘೃಣೀಕರಿಸುವನು.! ಇದು ಆದುದು ಹೇಗೆ? ಆದುದರಿಂದಲೆ ಮನುಷ್ಯನ ಧಾರಣೆಗಳೂ ಮತ್ತು ಸಂಸ್ಕಾರಗಳೂ ಪರಿವರ್ತನವಾದಂತೆಲ್ಲ ಅವನ ಸಾಮಾಜಿಕ ಆಚರಣೆ ಮತ್ತು ರೀತಿ-ನೀತಿಗಳಲ್ಲಿ ಸಹ ಬಹಳ ಪರಿವರ್ತನೆಯಾಗಿದೆ.

ಮನುಷ್ಯಚರಿತ್ರೆಯಲ್ಲಿರುವ ಕಲಹ-ಪ್ರಿಯತೆ ಮತ್ತು ಬರ್ಬರತೆಯನ್ನು ಯಾರೂ ಇಲ್ಲವೆನ್ನುವಂತಿಲ್ಲ. ಮನುಷ್ಯನು ಅಸಂಪೂರ್ಣನಾಗಿರುವವರೆಗೂ, ಅವನಲ್ಲಿ ದುರ್ಬಲತೆಗಳಿದ್ದೇ ಇರುವುವು. ಈ ದುರ್ಬಲತೆಗಳ ಪ್ರತಿಕ್ರಿಯೆಗಾಗಿಯೆ ಶಸ್ತ್ರಾಸ್ತ್ರಗಳು, ಪೋಲೀಸು, ಕಾನೂನು ಮುಂತಾದುವುಗಳ ರಚನೆಯಾಗಿರುವುದು. ಮನುಷ್ಯನು ತನ್ನ ಪ್ರವೃತ್ತಿಗೆ ದಾಸನಾಗಿ, ತನ್ನ ಉದ್ಧಾರವು ಗುಣಗಳಿಂದ ಚರಿತಾರ್ಥನಾಗದೆ ಹೋದುದರಿಂದಲೆ, ರಾಜಕೀಯ ಮತ್ತು ಸಾಮಾಜಿಕ ಶಾಸನಗಳ ವ್ಯವಸ್ಥೆಯುಂಟಾಗಬೇಕಾದುದು. ಇಷ್ಟೆಲ್ಲ ಕಾನೂನುಗಳಿದ್ದರೂ ಪ್ರತಿಬಂಧಗಳಿದ್ದರೂ, ಸಮಾಜದಿಂದ ಕಳ್ಳತನ, ಲೂಟಿ, ದರೋಡೆ, ರಕ್ತಪಾತ ಮೊದಲಾದ ಅಪರಾಧಗಳು ಸಂಪೂರ್ಣವಾಗಿ ನಿವಾರಣೆಯಾಗಿರುವುದಿಲ್ಲ. ಎಂದರೆ ನ್ಯಾಯಾಲಯಗಳ, ಪೋಲೀಸಿನ ಸಾರ್ಥಕತೆಯಲ್ಲಿ ಸಂದೇಹವಿದೆ ಎಂದಲ್ಲ ಇದರ ಭಾವನೆ. ಯುದ್ಧದ ನಿವಾರಣೆಯು ಸಂಪೂರ್ಣವಾಗಿಯೂ ಅಸಂಭವವೇ ಆದರೂ, ಸಭ್ಯತೆಯನ್ನು ಬರ್ಬರತೆಯಿಂದ ಉಳಿಸಲು ಮಾತ್ರ ಮನುಷ್ಯನು ಯತ್ನ ಮಾಡುತ್ತಲೇ ಇರಬೇಕಾಗುವುದು. ಇಂದು ಯುದ್ಧದ ಪರಿಣಾಮವು ಎಷ್ಟು ಭಯಂಕರವೂ ವಿನಾಶಕಾರಿಯೂ ಆಗಿದೆಯೆಂಬುದನ್ನು ಎಲ್ಲರೂ ಬಲ್ಲರು. ಇದರಿಂದ ಮುಕ್ತಿ ಹೊಂದಲು, ಮನುಷ್ಯನ ಆತ್ಮರಕ್ಷಣೆಯ ಪ್ರವೃತ್ತಿಯೇ ಅವನನ್ನು ಯುದ್ಧನಿವಾರಣೆಗೆ ಪ್ರೇರಿಸುವುದು.

ಗಾಂಧೀಜಿಯವರು ಅಹಿಂಸೆಗೇ ಹೆಚ್ಚು ಮಹತ್ವ ಕೊಡುವರು. ಬರ್ಟ್ರೆಂಡರು ತಮ್ಮ ಪುಸ್ತಕದಲ್ಲಿ, ಯುದ್ಧವನ್ನು ಕೊನೆಗಾಣಿಸುವ ಉಪಾಯವನ್ನು ಸೂಚಿಸುತ್ತ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪರಿವರ್ತನೆಯನ್ನುಂಟು ಮಾಡುವುದರ ಜೊತೆಗೆ, ಮನುಷ್ಯನ ಮನೋಭಾವನೆಗಳಲ್ಲಿ ಸಹ ಬದಲಾವಣೆಯಾಗಬೇಕೆಂದು ಹೇಳಿದ್ದಾರೆ. ಭಿನ್ನಭಿನ್ನ ರಾಷ್ಟ್ರಗಳ ಶಾಸಕರು, ಇತರ ರಾಷ್ಟ್ರಗಳೊಡನೆ ತಮ್ಮ ಮನಬಂದಂತೆ ವ್ಯವಹರಿಸುವ ಸ್ವಾತಂತ್ರ್ಯವಿರುವವರೆಗೂ ಯುದ್ಧವು ಸಂಭವಿಸಿಯೇ ತೀರುವುದೆಂದು ಇವರ ಮತ. ರಾಷ್ಟ್ರ-ಸಂಘವು ಇದ್ದೂ ಕೂಡ ಜಪಾನ್, ಇಟಲಿ ಮತ್ತು ಜರ್ಮನಿಗಳು ಕ್ರಮವಾಗಿ ಮಂಚೂರಿಯಾ, ಅಬಿಸೀನಿಯಾ ಮತ್ತು ಆಸ್ಟ್ರಿಯಾ ಜೆಕೋಸ್ಲೋವೇಕಿಯಾಗಳನ್ನು ಆಕ್ರಮಿಸಿದುವು. ಇದಕ್ಕಾಗಿ ವಿಶ್ವರಾಷ್ಟ್ರಗಳ (World Government) ಸ್ಥಾಪನೆಯಾಗಬೇಕು. ಇದರ ಶಾಸನವನ್ನು ಎಲ್ಲರೂ ಒಪ್ಪಲೆಬೇಕೆಂಬ ನಿಯಮವಾಗಬೇಕು. ಆದರೂ ಈ ರೀತಿ ಆಗುವುದು ಹೇಗೆ? ವಿಶ್ವರಾಷ್ಟ್ರದ ಪ್ರಭಾವವು ಅಪ್ರತಿಹತವಾದುದಾಗಿರಬೇಕು. ಯಾವ ಬೇರೆ ರಾಷ್ಟ್ರವೂ ಅದರ ವಿರೋಧವಾಗಿ ಹೋಗಲಾರದಂತಿರಬೇಕು. ರಸಲ್‌ರು ಹೇಳುವಂತೆ ಎಲ್ಲ ವಿಧವಾದ ಯುದ್ಧದ ಮತ್ತು ಇತರ ವಿಮಾನಗಳ ಏಕಮಾತ್ರ ಅಧಿಕಾರವು ವಿಶ್ವರಾಷ್ಟ್ರಕ್ಕೇ ಇರಬೇಕು.

ಇದು ರಾಜಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾಯಿತು. ಇನ್ನು ಆರ್ಥಿಕ ಕ್ಷೇತ್ರದಲ್ಲಿ ಆಗಬೇಕಾಗಿರುವುದೇನು? ಕೇಳಿರಿ; ಭೂಮಿ ಮತ್ತು ಅಸಂಪೂರ್ಣ (ಕಚ್ಚಾ) ವಸ್ತುಗಳ ಪೂರ್ಣ ಅಧಿಕಾರವು ವಿಶ್ವರಾಷ್ಟ್ರಕ್ಕೇ ಇರಬೇಕು. ಏಕೆಂದರೆ ಇವೆರಡರ ಮೇಲೆ ವ್ಯಕ್ತಿಗತ ಅಧಿಕಾರವು ಇರುವವರೆಗೂ ಪರಿಣಾಮವು ನೆಟ್ಟಗೆ ಆಗಲಿಕ್ಕಿಲ್ಲ. ಒಬ್ಬ ರೈತನ ಭೂಮಿಯಲ್ಲಿ ಎಣ್ಣೆಯ ಗಣಿಯಿರುವುದು ಒಬ್ಬ ಧನಿಕನಿಗೆ ತಿಳಿಯಿತೆಂದು ಇಟ್ಟುಕೊಳ್ಳೋಣ; ಕೂಡಲೆ ಅವನು ಬೇಕಾದಷ್ಟು ಹಣವನ್ನು ಕೊಟ್ಟು ಆ ಭೂಮಿಯನ್ನು ಕೊಂಡು ಎಣ್ಣೆಯನ್ನು ತೆಗೆಯಲು ಒಂದು ಕಂಪನಿಯನ್ನು ಸ್ಥಾಪಿಸುವನು. ಹೆಚ್ಚು ಲಾಭಬರುವ ಆಶೆಯಿಂದ ದೇಶದ ಇತರ ಧನಿಕರೂ ಅದರಲ್ಲಿ ಭಾಗವಹಿಸುವರು. ಬರುಬರುತ್ತ ಕಂಪನಿಯು ವೃದ್ಧಿಯಾಗಿ, ಅದೊಂದು ರಾಷ್ಟ್ರೀಯ ವ್ಯವಸಾಯವಾಗುವುದು. ದೇಶದ ದೊಡ್ಡ ದೊಡ್ಡ ರಾಜನೀತಿಜ್ಞರ ಸ್ವಾರ್ಥವು ಈ ಕಂಪನಿಯೊಡನೆ ಸಂಬಂಧಪಟ್ಟಿರುವುದರಿಂದ ರಾಷ್ಟ್ರದ ಬಿಗಿಯು ಅವರ ಕೈಯಲ್ಲೇ ಇರುವುದು. ಇತರ ದೇಶಗಳ ಧನಿಕರು ಸಹ ಈ ರೀತಿ ಕಂಪನಿಗಳನ್ನು ಸ್ಥಾಪಿಸಿ, ಅಲ್ಲಿಯ ಸರಕಾರದ ಜವಾಬ್ದಾರಿಯನ್ನು ತಮ್ಮ ಕೈಯಲ್ಲಿಟ್ಟುಕೊಳ್ಳುವರು. ಆಗ ರಾಷ್ಟ್ರ-ರಾಷ್ಟ್ರಗಳಲ್ಲಿ ಪ್ರತಿದ್ವಂದ್ವತೆಯುಂಟಾಗಿ, ಅದೇ ಯುದ್ಧಕ್ಕೆ ಮೂಲವಾಗುವುದು. ಈ ವಿಚಾರವು ಯಾವು-

ದಾದರೂ ಒಂದು ಅಸಭ್ಯ ಅಥವಾ ದುರ್ಬಲ ದೇಶಕ್ಕೆ ಸಂಬಂಧಿಸಿದ್ದಲ್ಲಿ, ಆ ದೇಶದ ಮೇಲೆ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಲು ಸಾಮ್ರಾಜ್ಯವಾದಿ ದೇಶಗಳಲ್ಲಿ ಸಂಗ್ರಾಮವಾಗುವುದು ನಿಶ್ಚಿತವೇ ಆಗುವುದು. ಈ ರೀತಿ ಅಸಿದ್ಧವಸ್ತುಗಳ ಮೇಲೆ ವ್ಯಕ್ತಿಯ ಅಧಿಕಾರವಿರುವವರೆಗೂ, ಆರ್ಥಿಕಕ್ಷೇತ್ರಗಳಲ್ಲಿ ಯುದ್ಧವು ನಿಶ್ಚಯವಾಗಿ ಸಂಭವಿಸುವುದು. ಬೇರೆ ಬೇರೆ ದೇಶಗಳಲ್ಲಿ ಸಮಾಜವಾದಿ ಸರಕಾರಗಳ ಸ್ಥಾಪನೆಯಾದ ಮಾತ್ರಕ್ಕೆ ಯುದ್ಧವಾಗುವುದಿಲ್ಲವೆಂಬುದು ಸುಳ್ಳು. ಬಾಕೂವಿನ ಎಣ್ಣೆಯ ಗಣಿಗಳ ಮೇಲಿನ ಅಧಿಕಾರವನ್ನು ರಷ್ಯವೂ, ಪರ್ಸಿಯನ ಎಣ್ಣೆಯ ಗಣಿಗಳ ಅಧಿಕಾರವನ್ನು ಇಂಗ್ಲೆಂಡೂ ಬಿಟ್ಟುಕೊಡಲಾರವು. ಜರ್ಮನಿಗೆ ಯುದ್ಧಕಾಲದಲ್ಲಿ ಎಣ್ಣೆ ದೊರೆಯದೆ ಹೋದಲ್ಲಿ, ಅದು ರಾಜ್ಯವಿಸ್ತಾರಕ್ಕಾಗಿ ಅವಶ್ಯವಾಗಿ ಯತ್ನಿಸುವುದು. ಆದುದರಿಂದ ಅಸಿದ್ಧಪದಾರ್ಥಗಳಿಂದ ಬರುವ ಲಾಭವನ್ನು, ಎಲ್ಲ ರಾಷ್ಟ್ರಗಳಿಗೂ ಹಂಚಬೇಕು. ಇದಕ್ಕೇ ಅದರ ಮೇಲಿನ ಅಧಿಕಾರವು ಅಂತರಾಷ್ಟ್ರೀಯ ಸರಕಾರಕ್ಕೇ ಇರಬೇಕು. ಅಲ್ಲದೆ **ಜಿಬ್ರಾಲ್ಟರ್ ಜಲಸಂಧಿ, ಸುಯೆಜ್ ಕಾಲುವೆ, ಪನಾಮಾ ಕಡಲ್ಗಾಲುವೆ ಮುಂತಾದ ವಿಶೇಷಸ್ಥಾನಗಳಲ್ಲಿ, ಯಾವುದೇ ಒಂದು ವಿಶೇಷ ಜಾತಿಯ ಪ್ರಭುತ್ವವಿರದೆ, ವಿಶ್ವ-ರಾಷ್ಟ್ರದ ಪ್ರಭುತ್ವವೇ ಇರಬೇಕು.**

ಆರ್ಥಿಕ, ರಾಜಕೀಯ ಕಾರಣಗಳಲ್ಲದೆ ಮನುಷ್ಯನಲ್ಲಿರುವ ಬರ್ಬರಪ್ರವೃತ್ತಿಯೂ ಯುದ್ಧಕ್ಕೆ ಕಾರಣವಾಗಿದೆ. ಈ ಪ್ರವೃತ್ತಿಯ ದಮನವಾಗದ ವಿನಾ ವಿಶ್ವಶಾಂತಿಯು ಸಂಭವವಿಲ್ಲ. ಆದುದರಿಂದ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳ ಪರಿವರ್ತನೆಯೊಡನೆ, ಮನುಷ್ಯನ ಮಾನಸಿಕ ಮತ್ತು ಚಾರಿತ್ರಿಕ ದೃಷ್ಟಿಯಿಂದ ಸಹ ಪರಿವರ್ತನೆಯಾಗಬೇಕು. ಮನುಷ್ಯನು ಸ್ವಭಾವತಃ ಯುದ್ಧಪ್ರಿಯನೇ ಎಂದು ತಿಳಿದಿರುವವರಿಗೇನೂ ಕಡಿಮೆಯಿಲ್ಲ. ಶಾಂತಿಯಿಂದ ಮನುಷ್ಯನು ಪುರುಷತ್ವ-ಹೀನನೂ, ಶಕ್ತಿಹೀನನೂ ಆಗುವನಂತೆ! ಆದುದರಿಂದ ಮನುಷ್ಯನಿಗೆ ಬಾಲ್ಯದಿಂದಲೇ, ತನ್ನ ಪಾಶವಿಕ ಪ್ರವೃತ್ತಿಗಳನ್ನು ದೂರಮಾಡುವಂತಹ ಶಿಕ್ಷಣವನ್ನೇ ಕೊಡಬೇಕು.

ಮಕ್ಕಳಿಗೆ ಚರಿತ್ರೆಯನ್ನು ಬೋಧಿಸುವಾಗ, ಅವರಲ್ಲಿ ಸ್ವದೇಶ ಮತ್ತು ಸ್ವಜಾತಿಯ ವಿಷಯವಾಗಿ ಉಗ್ರವೂ ಉತ್ಕಟವೂ ಆದ ಭಾವನೆಗಳನ್ನುಂಟುಮಾಡಲಾಗುತ್ತಿದೆ. ತಮ್ಮ ಜಾತಿಯಲ್ಲಿ ಶ್ರದ್ಧೆಯೂ, ಇತರರ ವಿಚಾರದಲ್ಲಿ ಅಶ್ರದ್ಧೆಯ ಭಾವನೆಗಳೂ ಉಂಟಾಗುತ್ತವೆ ಅವರ ಹೃದಯಗಳಲ್ಲಿ. ಬಾಲ್ಯದಿಂದಲೇ ತಮ್ಮದೇ ಜಾತಿ, ತಮ್ಮದೇ ದೇಶಗಳ ಮಹತ್ತ್ವವನ್ನೇ ಶ್ರೇಷ್ಠವೆಂದು ತಿಳಿದು, ಇತರರನ್ನು ತುಚ್ಛ ಮತ್ತು ಹೇಯವೆಂದು ತಿಳಿಯುವ ಭಾವವು ಅವರಲ್ಲಿ ಉಂಟಾಗಿ, ಪರಿಣಾಮವು ಬಹಳ ಭಯಂಕರವಾಗುತ್ತಿದೆ. **ಪಶುಬಲ ಮತ್ತು ರಕ್ತ-ಪಾತದಿಂದ ದುರ್ಬಲದೇಶಗಳ ಸ್ವಾಧೀನತೆಯನ್ನು ಅಪಹರಿಸಿ, ಅವುಗಳ ಸರ್ವ-ನಾಶವನ್ನು ಮಾಡಿರುವ ಸಮ್ರಾಟರೂ ಸೇನಾನಾಯಕರೂ ಕಳ್ಳರ, ದರೋಡೆಗಾರರ ಶ್ರೇಣಿಯಲ್ಲೇ ಪರಿಗಣಿಸಲ್ಪಡುವುದು ನ್ಯಾಯ.** ಆದರೆ ಚರಿತ್ರೆಯಲ್ಲಿ ಅವರ ವರ್ಣನೆಯು **ಮಹಾವೀರ-ಪುರುಷಪುಂಗವರ** ಶ್ರೇಣಿಯಲ್ಲಿ ಬರುತ್ತದೆ. ಇದರಿಂದ ಮಕ್ಕಳ ಮನಸ್ಸಿನಲ್ಲಿ ವಿಸ್ಮಯಯುಕ್ತವಾದ ಶ್ರದ್ಧೆಯ ಭಾವನೆಗಳುಂಟಾಗಿ ತಾವು ಸಹ ಅವರಂತೆಯೇ ಆಗಬೇಕೆಂಬ ಆಕಾಂಕ್ಷೆಯುತ್ಪನ್ನವಾಗುತ್ತದೆ. ರಕ್ತ-ಲೋಲುಪ ಸಾಮ್ರಾಟರು, ಸೇನಾನಾಯಕರು, ಕೇವಲ ತಮ್ಮ ಪಾಶವಿಕ ಪ್ರವೃತ್ತಿಯನ್ನು ಚರಿತಾರ್ಥಮಾಡಲು ಅಸಂಖ್ಯಾಕ ಮನುಷ್ಯರ ಜೀವನವನ್ನೆ ಧ್ವಂಸಮಾಡಿದ ವಿವರಣೆಯನ್ನು, ಬಾಲಕರ ಮುಂದೆ ವೀರರೆಂದೂ, ಮಹಾಪುರುಷರೆಂದೂ ವರ್ಣಿಸಿ, ನಾವು ನರಹತ್ಯೆ ಮತ್ತು ಪರಸ್ಪರ ಅಪಹರಣವನ್ನೇ, ಶೌರ್ಯ ಗೌರವದಿಂದ ನಂಡಿಸಿದಂತಾಗಲಿಲ್ಲವೆ? ಇತಿಹಾಸದ ಮೂಲಕ ದೊರೆಯುವ ಈ ರೀತಿಯಾದ ಶಿಕ್ಷಣವು, ಮನುಷ್ಯನ ಮನಸ್ಸಿನಲ್ಲಿ ಯುದ್ಧದ ವಿಚಾರವಾಗಿ ಅನುರಾಗವನ್ನು ಉಂಟುಮಾಡುವುದಿಲ್ಲವೆ?

ಬಾಂಬು, ಬಂದೂಕುಗಳ ಭೀಷಣ ಗರ್ಜನೆ, ತೋಪು ಮತ್ತು ಮಶೀನ್‌ಗನ್ನುಗಳಿಂದ ಅಗ್ನಿಯುಗುಳುವಿಕೆ ಇವುಗಳ ಮಧ್ಯೆ ವಿಶ್ವಶಾಂತಿಯ ಉಜ್ವಲ ದೀಪ-ಶಿಖಿಯು ಕ್ಷೀಣಿಸುತ್ತಿದೆ. ವಿಶ್ವಶಾಂತಿಯವಾಣಿಯು ತುಮುಲ ರಣಕೋಲಾಹಲದಲ್ಲಿ ವಿಲೀನವಾಗುತ್ತಿದೆ. ಎಂದರೆ, ವಿಶ್ವಶಾಂತಿಯ ಕಾಮನೆಯನ್ನಿಟ್ಟಿರುವವರೆಲ್ಲರೂ ಕನಸನ್ನು ನೋಡುತ್ತಿರುವರೆ? ಈ ಕನಸು ಎಂದಾದರೂ ಚರಿತಾರ್ಥವಾದೀತೇ? ಕನಸು! ಆದರೆ ಕನಸನ್ನೇ ಸತ್ಯವನ್ನಾಗಿ ಮಾಡಿ, ಮನುಷ್ಯನ ಜಯಯಾತ್ರೆಯ ಪಥವು ದೂರದಿಂದ ಹತ್ತಿರಕ್ಕೆ ಸಾಗುತ್ತಿದೆ. ಅಜ್ಞಾತಭವಿಷ್ಯದ ಆಶಂಕೆ, ಪರಾಜಯದ ಭೀತಿ, ಪುರಾತನತೆಯ ಆಕರ್ಷಣೆ, ನವೀನತೆಯ ಸಂದೇಹ– ಸಂಶಯ – ಇವುಗಳಾವುವೂ ಮನುಷ್ಯನ ಈ ಜಯಯಾತ್ರೆಯ ಪಥವನ್ನು ನಿರೋಧಿಸಲಾರವು. ಜಗತ್ತು ಇಂದು ಯುದ್ಧದಾನವನ ಕಬ್ಬಿಣ ಭುಜಗಳ ಆಲಿಂಗನಪಾಶದಿಂದ ಮುಕ್ತವಾಗಬಯಸುತ್ತಿದೆ. ಈ ಮುಕ್ತಿಯ ಪಥವನ್ನು ಯಾವ ಯಾವ ಜನಾಂಗವು ಜಗತ್ತಿಗೆ ತೋರಿಸಬಲ್ಲುದು? ಇದಕ್ಕಾಗಿಯೇ ಭಾರತವು ಇನ್ನೂ ಜೀವಿಸಿದೆಯೊ ಏನೊ ಯಾರು ಬಲ್ಲರು? ಭಾರತವರ್ಷ! ವೇದಾಂತ ಮತ್ತು ಉಪನಿಷತ್ತುಗಳ ಭಾರತವರ್ಷ! ಗೀತಾ ಮತ್ತು ಗಾಂಡೀ-ವದ ಭಾರತವರ್ಷ! ರಾಮಕೃಷ್ಣರ ಭಾರತವರ್ಷ! ಬುದ್ಧ-ಶಂಕರಾಚಾರ್ಯರ ಭಾರತವರ್ಷ! ಗಾಂಧಿಯ ಭಾರತವರ್ಷ! ಮನುಷ್ಯನೊಡನೆ ಮನುಷ್ಯನ, ಜಾತಿಯೊಡನೆ ಜಾತಿಯ ಸಂಬಂಧವನ್ನು ಪ್ರೇಮ ಮತ್ತು ಮೈತ್ರಿಯ ಆಧಾರದ ಮೇಲೆ, ಶಕ್ತಿಯೊಡನೆ ಪ್ರೇಮದ ಸಮನ್ವಯಮಾಡಿ, ಉನ್ಮತ್ತ ಜಗತ್ತನ್ನು ಶಾಂತಮಾಡುವುದು! ಪೃಥ್ವಿಯನ್ನು ಮೃತ್ಯುವಿನಿಂದ ಅಮೃತದ ಕಡೆಗೆ ಒಯ್ಯುವುದು! ಜಯ ಭಾರತಾಂಬೆ!

ಕಂಠೀರವಾರಾವ

ಶ್ರೀ. ಶ್ರೀಧರಂಕವರ್ಮಾ

ಮುಂಗಾಲೊದೆದೆದ್ದಡರಿ ಶಿಲೋಚ್ಚಯ
ಶೃಂಗದಿ ನಿಂದಿಹೆನಿದೊ ನೋಡು!
ರಂಗತ್ತುಂಗತರಂಗದ ವಾರ್ಧಿಯ
ಸಂಗರಕಿದೊ ಕರೆವೆನು ನೋಡು!
ಅಂಗಾಂಗದಿ ವಿಷಬೆರೆದಿಹ ಲುಬ್ಧಕ-
ಸಂಘದೆದೆಯ ತೊತ್ತಳದುಳಿವೆ,
ಕಂಗಾಣದ ಹುಲುಮನುಜಸಮಾಜದ
ಗೋಣಮುರಿದು ನೆತ್ತರ ಕುಡಿವೆ! ೧

ದಟ್ಟಡವಿಯ ದರಿಯಲಿ ಸಂಚರಿಸುವ
ಹುಟ್ಟುದೊರೆಯ ಹಿಡಿಯುವುದೇನು,
ನಟ್ಟಿರುಳಲಿ ನಲಿದಾಡುವನನು ಬೆ-
ನ್ನಟ್ಟಿ ಬರುವ ದರ್ಪವದೇನು!
ಆಟ್ಟಬಂದು ಗುರಿಯಿಯಿಟ್ಟ ಮದಾಂಧರ
ದಿಟ್ಟತನವ ಪರಿಕಿಪೆ ನಾನು;
ಸೃಷ್ಟಿಗೆ ಸೃಷ್ಟಿಯೆ ಬರಲಿ, ಅದರ ಎದೆ
ಮೆಟ್ಟಿ ನಿಲ್ಲದಿರ್ಪೆನೆ ನಾನು? ೨

ಈ ವಿಶ್ವದೊಳೊಲಿದಾಳುವ ಬಾಳುವ
ಜೀವಿಗಳಲಿ ಕೀಳ್ಮೇಲೇನು?
ನಾವಲ್ಲದೆ ಆಳರಸರು ಮತ್ತಾ-
ರೆಂಬ ನರರ ಹೂಂಕೃತಿಯೇನು?
ಭಾವಾವೇಶಾನಲದಲಿ ಮರ್ತ್ಯರ
ಸುಟ್ಟುಬೊಟ್ಟಡದೆ ಬಿಡೆ ನಾನು,
ಕಾವರನರಸಲು ಕಾಲಕಾಲ ಹಣೆ-
ಗಣ್ಣು ಬಿಟ್ಟು ನಿಂದಿಹೆ ನಾನು! ೩

ಜಾತಿಯ ಹೆಸರಲಿ ನೀತಿಯ ಕೆಸರಲಿ
ಧರ್ಮಕರ್ಮ ಧೋರಣೆಗಳಲಿ
ಖ್ಯಾತಿಯ ಗರದಲಿ ಭೀತಿಯ ಭರದಲ
ಪ್ರೀತಿಯ ಕೊಲಿಗೆಯ್ದೊರಲುತಲಿ;
ಭೂತಾವೇಶವೊ ಎನೆ ಕುಣಿದಾಡುವ
ಭೂತಕರ್ಮಿಗಳ ಕೆಡೆದಿಕ್ಕಿ
ನೂತನ ಸಮತಾತತ್ತ್ವಸಮನ್ವಿತ
ರೀತಿಯ ತಹೆ ಹಳೆಯದ ಮುಕ್ಕಿ! ೪

ದೂರದಿಗಂತದ ಮಿಂಚಿನ ಕೆಂಚದು
ಕೆರಗುವ ಕಾವನು ಕಾರುವೆನು;
ತೋರಿ ಹೊಡೆವ ಬರಸಿಡಿಲಿನ ಮಡಿಲಿನ
ಕಿಚ್ಚಿನ ಕೆಚ್ಚನು ಮಾರುವೆನು!
ಧೀರತ್ವದ ದಳ್ಳುರಿ ಮುಗಿಲ್ಮರಮುರಿ-
ದಟ್ಟಹಾಸತಾಂಡವದೊಳಿರೆ,
ಈ ರವಿ-ಶಶಿಗಳ ನುಂಗಿ ಹೊಸಹೊಸತು
ಸೃಷ್ಟಿಮಾಳ್ಪೆ ತಿರೆ ನಡುಗುತಿರೆ! ೫

ಲತೆ

ಶ್ರೀ. ಬಾಲಪುರಂದರ

ಲತೆಯ ನೋಡದೊ ಸೆಳೆಬಯಸುತಿದೆ ಕವಲೊಡೆದು
ಕೊರಳತಿಣುಕಿ—ಭರದೆ—ಕೆಳಗೆ ಹಣುಕಿ!
ಬಿರಿವರಳ್ಮೊಗ್ಗುಗಳು ಮೊಗವೇರಿ ನೋಡುತಿವೆ
ಅರಳದರಳ—ಎಡಕೆ—ಬಲಕೆ ಹೊರಳಿ! ೧

ರವಿಯೆಸೆದ ಕಿರಣಗಳ ದೆಸೆಯಿಂದ ಕದಪುಗಳು
ಎಳಹವಳದ—ಹೋಲಿ—ಹೊಳೆಯುತಿಹವು!
ಕವಿದೃಷ್ಟಿಯೊಳಹೊಕ್ಕು ನೋಡ ಕೈಗಳ ನಡುವೆ
ಮೂಡಲಿಹವು—ಹೊನ್ನ—ಮಿಡಿಗಳೆರಡು! ೨

ಸ್ವಾತಿಬರುವುದ ಕಾದು ಕುಳಿತ ಚಿಪ್ಪಿನ ತೆರದ
ಕುಟಿಯ ನೋಡು—ಬಿರಿಯೆ—ತಳಿರ ಜೋಡು!
ಚಳಿಹಿಡಿಯೆ ಕಂಬಳಿಯನರಸುವಂತಿದು ಸುತ್ತ
ಮಿಡುಕಲಿಹುದು—ಗಿಡವ—ಹುಡುಕಲಿಹುದು! ೩

ಹತ್ತಿರದ ಲತೆ ಸೋಂಕಲೆಳಗೈಗಳಿಂದಪ್ಪಿ
ಹರ್ಷಿಸುವುದು—ಒಡನೆ—ಬಿಸುಸುಯ್ವುದು!
ಗೊತ್ತಿಲ್ಲದಂತೆದೆಯು ಗೆಳೆಯನನು ಹಂಬಲಿಸಿ
ತೂಗುತಿಹುದು—ಸುತ್ತ—ಬಾಗುತಿಹುದು! ೪

ದಂಡನೆ

★

(ಫಣಿಯರದೊಂದು ಜೀವನ ಚಿತ್ರ)

ಶ್ರೀ. "ಭಾರತೀಸುತ" ವೈನಾಡು

ಅವರಿಂದ

ಕಳೆದ ಕೆಲವು ದಿನಗಳಿಂದ ಬೆಳಿಯನ ಕಣ್ಣುಗಳು ಪಾಪನ ತೋಟದಲ್ಲಿ ಬೆಳೆದುನಿಂತಿರುವ ನೇಂದ್ರ ಬಾಳೆಗೊನೆಯ ಮೇಲೆ. ತೋಳು-ಗಾತ್ರವಿರುವ ಬಾಳೆಕಾಯಿಗಳನ್ನು ಕಾಣುವಾಗ ಬೆಳಿಯನ ನಾಲಗೆಯಿಂದ ನೀರುಹರಿಯುತ್ತಿದ್ದಿತು. ಪಾಪನಿಗೆ ತಿಳಿಯದೆ ತೋಟದಿಂದ ಗೊನೆಯನ್ನು 'ಲಫಟಾಯಿಸ' ಬೇಕೆಂದು ಅವನು ಹೊಂಚು ಹಾಕುತ್ತಿದ್ದ; ಸಂದರ್ಭವನ್ನು ಇದಿರುನೋಡುತ್ತಿದ್ದ; ಕದಿಯಲಿಕ್ಕೆ ಹಂಚಿಕೆಗಳನ್ನು ತಯಾರಿಸುತ್ತಿದ್ದ. ಬಾಳೆಗೊನೆಯ ಸಂಗತಿಯನ್ನು ಬೆಳಿಯಾ ತನ್ನ ಗೆಳತಿ ಚುಂಡೆಗೆ ಉಸುರದಿರಲಿಲ್ಲ. ಅವನು ಗೊನೆಯನ್ನು ಕದ್ದುತಂದರೆ ಅದರಲ್ಲಿ ತನಗೆ ಒಂದು ಪಾಲು ದೊರೆಯುವುದೆಂಬ ಆಸೆಯು ಆ ಫಣಿಯಕನ್ಯೆಗೆ ಇದ್ದಿತು.

ಬಹುದಿನಗಳಿಂದ ಇದಿರುನೋಡುತ್ತಿದ್ದ ಆ ಸಂದರ್ಭವು ಬಂದೊದಗಿತು. ಕಾಯಿಗಳು ಬಲಿತು ರಟ್ಟೆಗಾತ್ರವಾದುವು. ಇನ್ನು ತಡಮಾಡಿದರೆ ಗೊನೆ ತನಗೆ ಸಿಕ್ಕದೆಂದು ಬೆಳಿಯಾ ತಿಳಿದ. ಆದರೆ ಒಬ್ಬನೆ ಈ ಸಾಹಸವನ್ನು ನೆರವೇರಿಸುವ ಧೈರ್ಯ ಬೆಳಿಯನಿಗಿರಲಿಲ್ಲ; ಅವನಿಗೆ ಒಬ್ಬ ಸಹಕಾರಿಯ ಆವಶ್ಯಕತೆಯಿದ್ದಿತು. ಈ ಕಳ್ಳತನದಲ್ಲಿ ತನಗೆ ಸಾಹಾಯ್ಯಮಾಡುವವನಿಗೆ ತನ್ನ ಸಂಪಾದನೆಯಲ್ಲಿ ಒಂದು ಪಾಲು ಕೊಡಬೇಕಾಗುವುದೆಂಬುದು ಬೆಳಿಯನಿಗೆ ತಿಳಿದಿದ್ದಿತು. ಪಾಲುಕೊಡುವ ವಿಷಯದಲ್ಲಿ ಅವನು ಜಿಪುಣನಲ್ಲ; ಸಮಪಾಲು ಕೊಡಲು ಅವನು ಸಿದ್ಧನಿದ್ದ; ಎಂತಲೆ ಗೊನೆ ಕದಿಯುವ ಕೆಲಸದಲ್ಲಿ ಒಬ್ಬ ಪಾಲುಗಾರನನ್ನು ಅರಸತೊಡಗಿದ.

*　　*　　*

ಬೆಳಿಯನಿಗೆ ಸಹಕಾರಿಯೊಬ್ಬನು ದೊರಕದಿರಲಿಲ್ಲ; ಅವನ ನಂಬಿಕೆಗೆ ಪಾತ್ರನಾದ ಒಬ್ಬ ಪಾಲುಗಾರನು ದೊರೆತ. ಪಕ್ಕದ ಗುಡಿಸಿಲಿನ ಕುಳ್ಳನೆ ಈ ಬೆಳಿಯನ ಸಹಕಾರಿ. ಕುಳ್ಳ ಹದಿನೇಟು ವರುಷದ ಪ್ರಾಯದ ತರುಣ; ಗಟ್ಟಿಮುಟ್ಟಾದ ದೇಹ; ಅಂಜಿಕೆಯು ಅವನಲ್ಲಿ ಕಡಿಮೆ. ಆದುದರಿಂದ ತನ್ನ ಸಾಹಸದ ಕೆಲಸದಲ್ಲಿ ಪಾಲುಗಾರನಾಗಲು ಕುಳ್ಳನೆ ಯೋಗ್ಯನೆಂದು ಬೆಳಿಯಾ ನಿರ್ಧರಿಸಿದ.

ಇಬ್ಬರೂ ಕೋಲು (ಕಟ್ಟಿಗೆ) ತರಲು ಕಾಡಿಗೆ ಹೋಗಿದ್ದರು. ಕಾಡಿನಲ್ಲಿ ಕೋಲುಗಳನ್ನು ಸಂಗ್ರಹಿಸುತ್ತಿರುವಾಗ ಬೆಳಿಯಾ ತನ್ನ ಹಂಚಿಕೆಯನ್ನು ಕುಳ್ಳನಿಗೆ ಉಸುರಿದ; ಇಬ್ಬರೂ ತಮ್ಮ ಹಚ್ಚಡಗಳ ತುದಿಗಳಲ್ಲಿ ಕಟ್ಟಿದ್ದ ಹೊಗೆಸೊಪ್ಪನ್ನು ಬಿಚ್ಚಿ ಬಾಯಿಗೆ ಹಾಕಿಕೊಂಡರು. ಹೊಗೆಸೊಪ್ಪನ್ನು ಜಗಿದು ರಸವನ್ನು ಉಗುಳುತ್ತಾ ಬೆಳಿಯಾ ಹೇಳಿದ: "ನೋಕುಮಿ, ತಿರುವಾ ನೀಡ ಬಾಟು ಒರು ಕಾರ್ಯ ಪರವನುಳ. (ನೋಡಯ್ಯ; ನಿನ್ನ ಸಂಗಡ ಒಂದು ಸಂಗತಿ ಹೇಳಬೇಕಾಗಿದೆ.)"

"ಅವೆ ಎನತ್ತೆ? (ಅದೇನು?)" ಬಿಚ್ಚಿದ್ದ ಹೊಗೆಸೊಪ್ಪನ್ನು ತನ್ನ ಹಚ್ಚಡದ ತುದಿಯಲ್ಲಿ ಪುನಃ ಕಟ್ಟುತ್ತಲಿದ್ದ ಕುಳ್ಳ ಬೆಳಿಯನ ಕಡೆಗೆ ಮೋರೆಯನ್ನು ತಿರುಗಿಸಿದ.

"ಪಾಪನ ತೊಡಿಯಿಲು ಒರು ಮೂತ ಕುಲ ಉಳ; ನೀಕಂಡುಳೆ? (ಪಾಪನ ತೋಟದಲ್ಲಿ ಒಂದು ಬಲಿತ ಗೊನೆ ಇದೆ; ಅದನ್ನು ನೀನು ನೋಡಿರುವೆಯಾ?)"

★

ಈ ನಾಗರಿಕತೆಯ ಶಿಖರದಲ್ಲಿರುವ ೨೦ ನೆಯ ಶತಮಾನದಲ್ಲಿಯೂ, ಮನುಷ್ಯರಾದ ಪಣಿಯರು ಮೃಗಗಳಂತೆ ಜೀವಿಸುತ್ತಿದ್ದಾರೆ. ಪಣಿಯರ ಯಜಮಾನ ಅವರನ್ನು ತನ್ನ ಕೋಣ-ಎತ್ತುಗಳಂತೆ ಪಶುಗಳನ್ನಾಗಿಯೆ ಭಾವಿಸಿರುತ್ತಾನೆ. ಪಣಿಯರಿಗೆ ಮನಸ್ಸಿದೆ, ಬುದ್ಧಿಯಿದೆ, ಭಾವನೆಗಳಿವೆ. ಆದರೆ ಇದುವರೆಗೂ ಅವು ಸಂಸ್ಕಾರ ಹೊಂದದಿರುವುದಕ್ಕೆ ಯಾರು ಹೊಣೆಗಾರರೆಂಬುದನ್ನು ಯಾರಾದರೂ ಯೋಚಿಸಿ ನೋಡಿರುವರೆ?

★

"ಕಂಡುಳೆ; ಎನತ್ತೆ ಬೋಣಿ? (ಕಂಡಿರುವೆ; ಏನಾಗಬೇಕು?)"

"ಇರಾವು ಆ ಕೊಲ ಕಪ್ಪನಾ ನೆನಚುಳೆ; ಎನ್ನ ಕೂಡೆ ನೀಯೂ ಒರಣಂ (ರಾತ್ರಿ ಆ ಗೊನೆಯನ್ನು ಕದಿಯಲು ವಿಚಾರಿಸಿರುವೆ; ನೀನೂ ನನ್ನ ಸಂಗಡ ಬರಬೇಕು.)"

"ಪಾಪ ಕಂಡಲೋ ಅರಂಜು ಕೊಲ್ಲುವಾನುಂ ಮಡಿಕ್ಕ (ಪಾಪನು ಕಂಡರೆ ಹೊಡೆದು ಕೊಲ್ಲಲೂ ಹಿಂಜರಿಯನು.)"

ಸ್ವಲ್ಪ ಅಂಜಿಕೆಯಿಂದ ಕುಳ್ಳ ಬೆಳಿಯನಿಗೆ ಹೇಳಿದ.

"ಆ ಪೋಡಿ ನೀಕ್ಕು ಬೊಂಡ ತಿರುವಾ; ಇರಾವು ಪಾಪಂಗು ಅರಿಯಾದೆ ಕೊಲವೆಟ್ಟುವ ಚಾದಿಕ್ಕುಂ. ಇರಾವು ಪಾಪ ಕಂಡಲೋ ಆಳೆ ತಿರಿಚ್ಚರಿವಾನುಂ ಅದಿನ್ನ್ ಕೂಡ. (ಆ ಅಂಜಿಕೆ ಬೇಡವಯ್ಯ; ಪಾಪನಿಗೆ ತಿಳಿಯದಂತೆ ಗೊನೆ ಕಡಿಯಲು ಸಾಧ್ಯ. ಕಂಡರೂ ಕತ್ತಲೆಯಲ್ಲಿ ಯಾರೆಂಬುದನ್ನು ತಿಳಿಯುವುದಕ್ಕೆ ಅವನಿಗೆ ಸಾಧ್ಯವಿಲ್ಲ.)"

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಇಬ್ಬರೂ ಗೊನೆಯನ್ನು ಲಪಟಾಯಿಸುವ ಹಂಚಿಕೆಯನ್ನು ಕುರಿತು ಮಾತನಾಡಿದರು. ಪಾಪನ ತೋಟದಿಂದ ಗೊನೆಯನ್ನು ಕದಿಯಲು ಕುಳ್ಳನಿಗೆ ಹೆದರಿಕೆಯಿದ್ದಿತೆಂಬುದು ನಿಜ; ಆದರೆ ಈ ಸುಲಿಗೆಯಲ್ಲಿ ಭಾಗವನ್ನು ವಹಿಸುವುದರಿಂದ ತನಗೆ ದೊರಕಬಹುದಾದ ಲಾಭವನ್ನು ಬಿಡಲು ಅವನಿಗೆ ಇಷ್ಟವಿರಲಿಲ್ಲ. ಆದುದರಿಂದ ಅವನು ಬೆಳಿಯನ ಹಂಚಿಕೆಗೆ ಒಪ್ಪಿದ. ಕುಳ್ಳ ಮಾತನಾಡದೆ ಸೌದೆಗಳನ್ನು ಸಂಗ್ರಹಿಸುತ್ತಿರುವುದನ್ನು ನೋಡಿ, ಬೆಳಿಯಾ ತನ್ನ ಗೆಳೆಯನನ್ನು ಉತ್ಸಾಹಪಡಿಸಲು ಹೀಗೆ ಹೇಳಿದ: " ನೋಕು ನಿ ಕುಳ್ಳ, ನಾ ಒರು ಏಣಿ ಕಂಡು ಬೆಚ್ಚ್ಟಿಳ್. ಏಣಿ ಇಂಡಲೋ, ಒಚ್ಚ ಮಂಡಾಕ್ಕಾದೆ ಕೊಲನೆಟ್ಟುವ ಚಾದಿಕ್ಕುಂ (ನೋಡು ಕುಳ್ಳ, ನಾನು ಒಂದು ಏಣಿ ಕಂಡಿರುವೆ. ಏಣಿಯಿದ್ದರೆ ಸದ್ದುಮಾಡದೆ ಗೊನೆಯನ್ನು ಕಡಿದುಕೊಂಡು ಬರಬಹುದು) "

ಏಣಿಯ ಸಂಗತಿಯು ಕುಳ್ಳನ ಕಿವಿಗಳಿಗೆ ಬೀಳಲು, ಅವನ ಅಂಜಿಕೆಯು ಸ್ವಲ್ಪ ಕಡಿಮೆಯಾಯಿತು. ಬಾಳೆಗಿಡವನ್ನು ಕಡಿದರೆ ಅದು ಬೀಳುವಾಗ ಸದ್ದಾಗುವುದು; ಈ ಸದ್ದನ್ನು ಕೇಳಿ ಪಾಪ ಮನೆಯೊಳಗಿಂದ ಹೊರಗೆ ಬರುವ; ಬಗ ತೋಟದ ಬೇಲಿ ನೆಗೆದು ಪಾಪನ ಕಣ್ಣುಗಳಿಂದ ತಪ್ಪಿಸಿಕೊಳ್ಳುವುದು ಪ್ರಯಾಸದ ಕೆಲಸ. ಈ ವಿಚಾರಗಳಿಂದಲೆ ಇರಬಹುದು.. ಕುಳ್ಳ ಬೆಳಿಯನ ಹಂಚಿಕೆಯಲ್ಲಿ ಭಾಗವಹಿಸಲು ಹಿಂದುಮುಂದು ನೋಡುತ್ತಿದ್ದ, ಏಣಿಯೊಂದು ದೊರಕಿದರೆ ಈ ಅಪಾಯವು ತಪ್ಪುವುದೆಂದು ಅವನು ತಿಳಿದಿದ್ದ. ಆದುದರಿಂದ ಗೊನೆ ಕದಿಯಲು ಏಣಿಯೊಂದು ಇರುವುದೆಂದು ಬೆಳಿಯಾ ಹೇಳಿದೊಡನೆಯೆ, ಕುಳ್ಳ ಕಳ್ಳತನದಲ್ಲಿ ಭಾಗವಹಿಸಲು ಒಪ್ಪಿದ. ಕೋಲುಗಳನ್ನು ತೆಗೆದುಕೊಂಡು ಗುಡಿಸಿಲುಗಳಿಗೆ ಹಿಂದಿರುಗುವಾಗ ಅವರು ತಮ್ಮ ಹಂಚಿಕೆಯನ್ನು ತಯಾರು ಮಾಡಿದರು. ಪಾಪನ ತೋಟದ ಬೇಲಿಯನ್ನು ಎಲ್ಲಿ ನೆಗೆಯಬೇಕೆಂದು ಅವರು ನಿರ್ಧರಿಸಿದರು.

* * *

ಕತ್ತಲಾಯಿತು. ಪಾಪನ ಗದ್ದೆಗಳಲ್ಲಿ ಕೆಲಸಮಾಡುತ್ತಿದ್ದ ಫಣಿಯರು ಹಿಂದಿರುಗಿದರು. ಫಣಿಯ ಹೆಂಗುಸರು ನಾಟಿ ಕೆಲಸವನ್ನು ಪೂರಯಿಸಿ, ಬಾವಿಯಿಂದ ನೀರನ್ನು ತಂದರು. ರಾತ್ರಿಯ ಆಹಾರಕ್ಕೆಂದು ಹೆಂಗುಸರು ಭತ್ತ ಕುಟ್ಟತೊಡಗಿದರು. ಗಂಡುಸರು ಗುಡಿಸಿಲುಗಳ ಮುಂದೆ ಬೆಂಕಿಯನ್ನುರಿಸಿ, ಕೊಳಲು-ದುಡಿಗಳನ್ನು ಸರಿಪಡಿಸತೊಡಗಿದರು. ಅವರು ಕೊಳಲುಗಳನ್ನೂದಿದರು; ದುಡಿಗಳನ್ನು ಬಾರಿಸಿದರು; ಹೆಂಗುಸರು ಭತ್ತವನ್ನು ಕುಟ್ಟುತ್ತಾ ಹಾಡುಗಳನ್ನು ಹಾಡಿದರು. ನೆಲದವ್ವನ ಮಕ್ಕಳು ರಾತ್ರಿಯನ್ನು ಈ ಬಗೆಯಾಗಿ ಉಲ್ಲಾಸದಿಂದ, ಆನಂದದಿಂದ ಕಳೆಯುಹೊರಟಿದ್ದರು.

ಫಣಿಯನಾಗಿ ಹುಟ್ಟಿದ ಮಾತ್ರಕ್ಕೆ, ಉಲ್ಲಾಸಪಡುವುದರಲ್ಲಿ ಮನುಷ್ಯನಿಗೆ ಸಹಜವಾಗಿರುವ ವಾಸನೆಯು ಅವನಲ್ಲಿ ಇಲ್ಲದಾಗುವುದಿಲ್ಲ. ಆಹಾರಸಂಪಾದನೆಗಾಗಿ ವ್ಯಯವಾದ ಮೇಲೆ ಮನುಷ್ಯನಲ್ಲಿ ಉಳಿದಿರುವ ಕ್ರಿಯಾಶಕ್ತಿಯು, ಯಾವುದಾದರೂ ಒಂದು ರೂಪದಿಂದ ಹೊರಗೆ ಬರಲೇ ಬೇಕು... ಆಹಾರಸಂಪಾದನೆಯ ಅನಂತರ ಮನುಷ್ಯನಲ್ಲಿ ಉಳಿದಿರುವ ಕ್ರಿಯಾಶಕ್ತಿಯ ಸಂತಾನಗಳೆ ಆಗಿವೆ.. ತತ್ತ್ವಜ್ಞಾನ ಮೊದಲಾದ ಶಾಸ್ತ್ರಗಳು; ಸಾಹಿತ್ಯ, ಸಂಗೀತ, ನಾಟ್ಯ ಎಂಬಿತ್ಯಾದಿ ವಿವಿಧಕಲೆಗಳು. ಮನುಷ್ಯನು ಸುಸಂಸ್ಕೃತನಾದರೆ ಈ ಕ್ರಿಯಾಶಕ್ತಿಯ ಪ್ರಕಾಶನವು ಉಚ್ಚ ತರಗತಿಯದಾಗಿರುತ್ತದೆ. ಸಂಸ್ಕೃತಿಯ ಸಂಪರ್ಕವಿಲ್ಲದಿರುವಾಗ ಈ ಕ್ರಿಯಾಶಕ್ತಿಯು ಹೊಂಡದಲ್ಲಿರುವ ಕೆಸರುನೀರಿನಂತಿರುತ್ತದೆ. ಏನೆ ಇರಲಿ! ಸಂಗೀತ, ಸಾಹಿತ್ಯ, ನಾಟ್ಯ ಎಂಬಿತ್ಯಾದಿ ವಿವಿಧ ಕಲೆಗಳ ಉದ್ಭವವು ಫಣಿಯ ಮತ್ತು ಇತರ ಅನಾಗರಿಕ ವರ್ಗದವರ ಹಾಡುಗಳಿಂದ, ಮತ್ತು ನರ್ತನಗಳಿಂದಲೆ ಪ್ರಾರಂಭವಾಗಿದೆಯೆಂದು ಹೇಳಬಹುದು. ಕಲೆಗಳ ಉದ್ಭವವು ಯಾವ ಪ್ರಕಾರವೆ ಇರಲಿ, ಫಣಿಯನು ಸಹ ಮನುಷ್ಯ; ಆಹಾರಸಂಪಾದನೆಯ ಅನಂತರ ಅವನಲ್ಲಿ ನಿಕ್ಕಿರುವ ಕ್ರಿಯಾಶಕ್ತಿಯು ಯಾವುದಾದರೂ ಒಂದು ದಾರಿಯಲ್ಲಿ ಹರಿಯಲೆ ಬೇಕು; ಯಾವುದಾದರೂ ಒಂದು ಉಲ್ಲಾಸದ ಕೆಲಸದಲ್ಲಿ ಅದು ವ್ಯಯವಾಗಬೇಕು. ಫಣಿಯನಲ್ಲಿ ವ್ಯಯವಾಗದೆ ಉಳಿದಿರುವ ಕ್ರಿಯಾಶಕ್ತಿಯು ಅವನ ಹಾಡುಗಳ ಮೂಲಕ ವಾದ್ಯಗಳ ಮೂಲಕ ಹೊರಗೆ ಹರಿಯುತ್ತದೆ.

ಭತ್ತವು ಅಕ್ಕಿಯಾಯಿತು; ಅಕ್ಕಿಯು ಅನ್ನವಾಯಿತು. ಫಣಿಯರು ಅನ್ನದಿಂದ, ಸುಟ್ಟ ಮೀನುಗಳಿಂದ, ಬೇಯಿಸಿದ ಏಡಿಗಳಿಂದ ತಮ್ಮ ಹಸಿವೆಯನ್ನು ಅಡಗಿಸಿಕೊಂಡರು. ತುತ್ತಿನ ಚೀಲಗಳು

ತುಂಬಿದ ಅನಂತರ ಅವರಿಗೆ ಬೇಕಾದುದು ವಿಶ್ರಾಂತಿ. ಜಗುಲಿಗಳ ಮೇಲೆ ಕೊಳಕು ಚಾಪೆಗಳನ್ನು ಹಾಸಿದರು; ಜಗುಲಿಗಳ ಮೇಲೆ ಉರಿಯುತ್ತಿರುವ ಬೆಂಕಿಗೆ ನಾಲ್ಕು ಕಟ್ಟಿಗೆಯ ಚೂರುಗಳನ್ನು ಹಾಕಿದರು; ಬೆಂಕಿಯನ್ನು ದೊಡ್ಡದಾಗಿ ಉರಿಸಿದರು. ಅವರು ಚಾಪೆಗಳ ಮೇಲೆ ಹೊರಳಿ, ಕೊಳಕು ದುಪ್ಪಟಿಗಳನ್ನು ಹೊದೆದು ಕೊಂಡರು.

ಮನುಷ್ಯನಿಗೆ ತಿಳಿವಳಿಕೆಯು ಹೆಚ್ಚಿದಂತೆ, ಅವನ ಚಿಂತೆಯೂ ಹೆಚ್ಚುತ್ತದೆ. ಫಣಿಯನಿಗೆ ತಿಳಿವಳಿಕೆ ಕಡಿಮೆ ; ಆದುದರಿಂದ ಚಿಂತೆಯ ಹೊರೆಯನ್ನೂ ಅವನು ಹೆಚ್ಚಾಗಿ ಹೊರಬೇಕಾಗುವುದಿಲ್ಲ. ಅವನ ಚಿಂತೆಯ ವಿಷಯವು ಅವನ ಹೊಟ್ಟೆಯ ಚೀಲ; ಹೊಟ್ಟೆ ತುಂಬಿದರೆ ಸಾಕು, ಅವನ ಚಿಂತೆಯು ನೀಗುವುದು. ಆದುದರಿಂದ ಫಣಿಯನ ಮನಸ್ಸು ಯಾವಾಗಲೂ ತಂಪಾಗಿರುತ್ತದೆ. ಅವನು ಹಾಸಿಗೆಯ ಮೇಲೆ ಹೊರಳಾಡುತ್ತಾ ನಿದ್ದೆಬರುವ ಹಾದಿಯನ್ನು ಇದಿರು ನೋಡಬೇಕಾಗಿಲ್ಲ. ಚಾಪೆಯ ಮೇಲೆ ಬಿದ್ದುಕೊಂಡ ಕೆಲವು ನಿಮಿಷಗಳಲ್ಲಿಯೇ ಗೊರಕೆ ಹೊಡೆಯಲು ಪ್ರಾರಂಭಿಸುತ್ತಾನೆ.

ಇತರರೆಲ್ಲರು ನಿದ್ರಿಸಿದರು ; ಆದರೆ ಬೆಳಿಯನಿಗೆ ನಿದ್ದೆ ಬರಲಿಲ್ಲ. ಅವನ ಮೆದುಳಿನಲ್ಲಿ ಒಂದು ಚಿಂತೆಯು ಸುಳಿದಾಡುತ್ತಿತ್ತು. ಅದು ಪಾಪನ ತೋಟದಲ್ಲಿರುವ ಬಾಳೆಗೊನೆಯದಾಗಿದ್ದಿತೆಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲ. ಇತರರೆಲ್ಲರೂ ನಿದ್ರಿಸಿದ ಮೇಲೆ ಅವನು ತನ್ನ ಚಾಪೆಯಿಂದ ಎದ್ದ; ಸದ್ದುಮಾಡದೆ ಸನಿಯದಲ್ಲಿರುವ ಕುಳ್ಳನ ಗುಡಿಸಿಲಿಗೆ ಬಂದ. ಕುಳ್ಳನು ನಿದ್ರಿಸಿರಲಿಲ್ಲ ; ಅವನು ಬೆಂಕಿಯ ಹತ್ತಿರ ಕುಳಿತು ಒಂದು ಚೂರು ಹೊಗೆಸೊಪ್ಪನ್ನು ಬಾಯಿಗೆ ಹಾಕಿಕೊಳ್ಳುತ್ತಿದ್ದ. ಬೆಳಿಯನು ಬರುವುದು ಯಾವಾಗ ಎಂದು ಇದಿರುನೋಡುತ್ತಿರುವುದು ಕುಳ್ಳನ ಆಗಲಿನ ಕೆಲಸವಾಗಿದ್ದಿತು. ಬೆಳಿಯಾ ಬಂದು ಕುಳ್ಳನ ಪಕ್ಕದಲ್ಲಿ ಕುಳಿತುಕೊಂಡ. ಕುಳ್ಳ ಕೊಟ್ಟ ಒಂದು ಚೂರು ಹೊಗೆಸೊಪ್ಪು, ವೀಳ್ಯದೆಲೆಯನ್ನು ಬಾಯೊಳಗೆ ತುರುಕಿ ಜಗಿದುದಾಯಿತು. ವೀಳ್ಯದೆಲೆಯ ರಸವನ್ನು ತನ್ನ ಮುಂದೆ ಉರಿಯುತ್ತಿರುವ ಬೆಂಕಿಯ ಮೇಲೆ ಉಗುಳುತ್ತಾ ಬೆಳಿಯಾ ಹೇಳಿದ; "ಇನಿನಮುಕ್ಕು ಪೋಗಾಂ (ಇನ್ನು ನಾವು ಹೋಗುವಾ.)" ಈ ಮಾತುಗಳು ಕೇಳಿಯೂ ಕೇಳಿಸದಷ್ಟು ಮೆಲ್ಲಗಾಗಿದ್ದುವು.

"ಪೋಗಾಂ. (ಹೋಗುವಾ.)" ಕುಳ್ಳನ ಜವಾಬು ಬಂದಿತು. ಇಬ್ಬರೂ ಕುಳಿತಲ್ಲಿಂದ ಎದ್ದರು; ಹೊದೆದಿರುವ ಹಚ್ಚಡಗಳನ್ನು ಸರಿಪಡಿಸಿಕೊಂಡರು; ಗುಡಿಸಿಲಿನಿಂದ ಅವರು ಹೊರಕ್ಕೆ ತೆರಳಿದರು.

*   *   *

ಕೃಷ್ಣಪಕ್ಷದ ರಾತ್ರಿ ; ಆದುದರಿಂದ ಕಗ್ಗತ್ತಲೆ; ಏನೂ ಕಾಣಿಸದು. ಈ ಫಣಿಯ ಹುಡುಗರಿಗೆ ಕಾರಿರುಳಿನಲ್ಲಿ ಸಂಚರಿಸುವುದು ಪ್ರಯಾಸದ ಕೆಲಸವಾಗಿರಲಿಲ್ಲ. ಅವರು ಮುಂದೆ ಹೆಜ್ಜೆಗಳನ್ನಿಟ್ಟರು; ಪಾಪನ ತೋಟದ ಕಡೆಗೆ ತೆರಳಿದರು. ತೋಟದ ಸನಿಯಕ್ಕೆ ಬಂದೊಡನೆಯೆ ಪಕ್ಕದ ಪೊದರಿನೊಳಗೆ ಅಡಗಿಸಿಟ್ಟಿದ್ದ ಬಿದಿರುಏಣಿಯನ್ನು ಬೆಳಿಯಾ ಹೊರಕ್ಕೆ ತೆಗೆದ. ಈ ಏಣಿಯನ್ನು ಬೇಲಿಯ ಮೇಲೆ ಚಾಚಿದುದಾಯಿತು. ಕುಳ್ಳ ಏಣಿಯನ್ನು ಹಿಡಿದುಕೊಂಡ. ಬೆಳಿಯಾ ಏಣಿಯ ಮೇಲೇರಿದ. ಬೇಲಿಯ ಎತ್ತರವು ನಾಲ್ಕು ಅಡಿಗಳಷ್ಟಿರಬಹುದು. ಏಣಿಯ ಸಹಾಯದಿಂದ ಬೇಲಿಯ ತುದಿಗೆ ತಲುಪಿದರೆ, ಅಲ್ಲಿಂದ ತೋಟದ ಒಳಭಾಗಕ್ಕೆ ನೆಗೆಯುವುದು ಸುಲಭದ ಕೆಲಸ. ಬೆಳಿಯಾ ಬೇಲಿಯ ತುದಿಗೆ ತಲುಪಿ, ಅಲ್ಲಿಂದ ತೋಟದ ಒಳಭಾಗಕ್ಕೆ ನೆಗೆದ. ಅವನು ತೋಟದೊಳಗೆ ಪ್ರವೇಶಿಸಲು, ಹೊರಗೆ ನಿಂತಿದ್ದ ಅವನ ಗೆಳೆಯನು ಬೆಳಿಯನನ್ನು ಹಿಂಬಾಲಿಸಿದ.

ಇಬ್ಬರೂ ತೋಟದೊಳಗೆ ಪ್ರವೇಶಿಸಿದರು ; ಬೆಳಿಯ ತೋಟದ ಹೊರಗೆ ಇರುವ ಏಣಿಯನ್ನು ತೆಗೆದು, ತನ್ನ ಹೆಗಲ ಮೇಲೆ ಅದನ್ನು ಇರಿಸಿಕೊಂಡು, ಬಾಳೆ ಗಿಡವಿರುವಲ್ಲಿಗೆ ಕತ್ತಲೆಯಲ್ಲಿ ಅಡಿಗಳನ್ನು ಇಡತೊಡಗಿದ. ಕುಳ್ಳ ಮಾತನಾಡದೆ ಬೆಳಿಯನನ್ನು ಹಿಂಬಾಲಿಸಿದ. ಸ್ವಲ್ಪ ಸಮಯದಲ್ಲಿಯೆ ಅವರು ಗೊನೆ ಇರುವಲ್ಲಿಗೆ ತಲುಪಿದರು. ಏಣಿಯನ್ನು ಬಾಳೆಗಿಡದ ಮೇಲೆ ಒರಗಿಸಿದುದಾಯಿತು. ಕುಳ್ಳ ಏಣಿಯನ್ನು ಹಿಡಿದುಕೊಂಡ. ಬೆಳಿಯಾ ಏಣಿಯ ಮೇಲೆ ಹತ್ತಿದ. ಗೊನೆಯು ಅವನ ಕೈಗೆ ಸಿಕ್ಕಿತು. ಕೆಳಗೆ ನಿಂತಿದ್ದ ಕುಳ್ಳ ತನ್ನ ಕತ್ತಿಯನ್ನು ಬೆಳಿಯನ ಕೈಗೆ ಕೊಟ್ಟುದಾಯಿತು. ಬೆಳಿಯಾ ಗೊನೆಯ ತುದಿಯನ್ನು ತನ್ನ ಎಡಗೈಯಿಂದ ಹಿಡಿದುಕೊಂಡ. ಇನ್ನೊಂದು ಕ್ಷಣದಲ್ಲಿ ಕತ್ತಿಯಿಂದ ಗೊನೆಯನ್ನು ಕಡಿದು, ಅದನ್ನು ಗಿಡದಿಂದ ಬೇರ್ಪಡಿಸಿದ. ಗೊನೆಯು ಬೆಳಿಯನ ಕೈಯಲ್ಲಿ

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರ ಮಾಸಪತ್ರಿಕೆ

ಪನವೇಲದ ಧೂತಪಾಪೇಶ್ವರ ಕಂಪನಿಯ ಕನ್ನಡ ಮುಖಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಎಜೆನ್ಸೀಜ್, ಹುಬ್ಬಳ್ಳಿ.

ತೂಗಾಡತೊಡಗಿತು. ಅವನು ಗೊನೆಯನ್ನು ಕೆಳಗೆ ನಿಂತ ಕುಳ್ಳನ ಕೈಗೆ ಕೊಟ್ಟುದುಲ್ಲದೆ, ಕತ್ತಿಯನ್ನು ತನ್ನ ಸೊಂಟಕ್ಕೆ ಸಿಕ್ಕಿಸಿ ಕೊಂಡುದಾಯಿತು; ಏಣಿಯ ತುದಿಯಿಂದ ಕೆಳಕ್ಕಿಳಿದ.

ಹೆಚ್ಚು ಹೊತ್ತು ಅಲ್ಲಿ ನಿಲ್ಲಲು ಅವರಿಗೆ ಧೈರ್ಯವೆನಿಸಲಿಲ್ಲ. ಗೊನೆಯನ್ನು ಕಡಿದಾಗ ಉಂಟಾದ ಕಿರಿಯ ಸದ್ದು ಮನೆಯೊಳಗೆ ನಿದ್ರಿಸುವ ಪಾಪನಿಗೆ ಕೇಳಿಸಿರಬಹುದೇನೋ ಎಂಬ ಅಂಜಿಕೆಯು ಆ ಫಣಿಯ ಹುಡುಗರಲ್ಲಿ ಉಂಟಾಯಿತು. ಅವರು ಏಣಿಯನ್ನು ತೆಗೆದುಕೊಂಡರು; ಅಲ್ಲಿಂದ ಹೆಜ್ಜೆಗಳನ್ನು ಕೀಳಲಾರಂಭಿಸಿದರು. ಏಣಿಯನ್ನು ಬೇಲಿಯ ಮೇಲೆ ಚಾಚಿ ಬೆಳಿಯಾ ಹತ್ತಿದ; ಬೇಲಿಯನ್ನು ನೆಗೆದು ಅವನು ತೋಟದ ಹೊರಗೆ ಬಂದ. ಒಳಗೆ ನಿಂತಿದ್ದ ಕುಳ್ಳ ಗೊನೆಯನ್ನು ಹೊರಗೆ ಹೋದ ಬೆಳಿಯನ ಕೈಗೆ ನೀಡಿದ; ಬೇಲಿಯನ್ನು ಹಾರಿ ತೋಟದಿಂದ ಪಾರಾದ. ಏಣಿಯನ್ನು ತೆಗೆದು ಹತ್ತಿರದ ಒಂದು ಪೊದರೊಳಗೆ ಅಡಗಿಸಿದರವರು; ತಮ್ಮ ಗುಡಿಸಿಲುಗಳಿಗಿರುವ ಹಾದಿಯನ್ನು ಹಿಡಿದರು.

ಇಬ್ಬರೂ ಬೆಳಿಯನ ಗುಡಿಸಿಲಿಗೆ ತಲುಪಿದರು. ಗೊನೆಯಿಂದ ಹತ್ತು ಹನ್ನೆರಡು ಕಾಯಿಗಳನ್ನು ಕಿತ್ತು ಉಳಿದುವುಗಳನ್ನು ಗುಡಿಸಿಲೊಳಗೆ ಅಡಗಿಸಿದರು. ಗೊನೆಯಿಂದ ಕಿತ್ತು ತೆಗೆದ ಕಾಯಿಗಳನ್ನು ಜಗುಲಿಯಲ್ಲಿ ಉರಿವ ಬೆಂಕಿಯಲ್ಲಿ ಸುಟ್ಟರು; ಆ ಮೇಲೆ ಬೇಯಿಸಿದ ಬಾಳೆಕಾಯಿಗಳನ್ನು ತಿನ್ನತೊಡಗಿದರು. ಅವರು ಇನ್ನೂ ತಿಂದು ಪೂರಯಿಸಿರಲಿಲ್ಲ; ಅಷ್ಟರಲ್ಲಿ ಹಿಂದಣ ಗುಡಿಸಿಲಿನ ಕರಿಂಬನು ಎಚ್ಚೆತ್ತು ಹೊರಗೆ ಬಂದ. ಬೆಳಿಯನೂ ಕುಳ್ಳನೂ ಬಾಳೆಕಾಯಿಗಳನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನುತ್ತಿರುವುದು ಕರಿಂಬನಿಗೆ ತಿಳಿಯಿತು. ಅವನು ಈ ಹುಡುಗರಿರುವಲ್ಲಿಗೆ ಬಂದ. ಅವರು ಬಾಳೆಕಾಯಿಗಳನ್ನು ಮುಕ್ಕುತ್ತಿರುವುದನ್ನು ನೋಡಿದೊಡನೆಯೆ ಪಾಪನ ತೋಟದಿಂದ ಅವರು ಬಾಳೆಗೊನೆಯನ್ನು ಕದ್ದುತಂದಿರಬೇಕೆಂಬ ವಿಚಾರವು ಕರಿಂಬನ ಮನಸ್ಸಿನಲ್ಲಿ ಹೊಳೆಯದಿರಲಿಲ್ಲ. ಈ ಕಳವುಸಾಮಾನಿನಲ್ಲಿ ತನಗೂ ಒಂದು ಪಾಲು ಸಿಕ್ಕಬೇಕೆಂಬ ಆಗ್ರಹವು ಕರಿಂಬನಲ್ಲಿ ಉದಿಸಿತು. ಆದುದರಿಂದ ಅವನು ಹುಡುಗರ ಹತ್ತಿರಕ್ಕೆ ಸರಿದು ನುಡಿದ: " ಕೊಲ ನಿಂಗಳು ಏಣೆ ಕೆಡಚ್ಚ? (ಗೊನೆ ನಿಮಗೆ ಸಿಕ್ಕಿದುದು ಹೇಗೆ?) "

ಬೆಳಿಯಾ ಮಾತನಾಡಲಿಲ್ಲ; ತನ್ನ ಬಾಯೊಳಗೆ ತುಂಬಿಸಿಕೊಂಡಿದ್ದ ಬಾಳೆಕಾಯಿಯನ್ನು ಜಗಿದು ನುಂಗುವ ಕೆಲಸದಲ್ಲಿ ಅವನು ನಿರತನಾಗಿದ್ದ. ಕುಳ್ಳ ತನ್ನ ಕೈಯ್ಯಲ್ಲಿದ್ದ ಒಂದು ಸುಟ್ಟ ಬಾಳೆಕಾಯಿಯನ್ನು ಕರಿಂಬನಿಗೆ ಕೊಟ್ಟ.

ಕುಳ್ಳನು ಕೊಟ್ಟ ಬಾಳೆಕಾಯಿಯನ್ನು ಕರಿಂಬ ಸ್ವೀಕರಿಸಿದ; ಅನಂತರ ಹೇಳಿದ: " ಎನ್ನ ಬಾಟು ಕಳವು ಪರೆಯಾದೆವಿ; ಕೊಲ ಏಣೆ ಕೆಡಚ್ಚ ಜಂಗತಿ ನಾತೆರುಂಜಳಿ. (ನನ್ನ ಸಂಗಡ ಸುಳ್ಳು ಹೇಳಬೇಡಿ; ಗೊನೆ ಸಿಕ್ಕಿದುದು ಹೇಗೆಂಬ ಸಂಗತಿಯನ್ನು ನಾನು ಅರಿತಿರುವೆ.) "

ಕರಿಂಬನು ಚಾಡಿಖೋರನೆಂಬುದು ಕುಳ್ಳನಿಗೆ ಗೊತ್ತು. ಗೊನೆ ಲಘಟಾಯಿಸಿದವರು ಯಾರೆಂಬ ವಿಷಯವನ್ನು ಈ ಮನುಷ್ಯ ಪಾಪನ ಸಂಗಡ ನುಡಿಯಬಹುದೆಂಬ ಅಂಜಿಕೆಯು ಕುಳ್ಳನಲ್ಲಿ ಮೂಡಿತು. ಭಯಪೂರ್ಣವಾದ ಒಂದು ನೋಟವನ್ನು, ಕುಳ್ಳ ಬಾಳೆಕಾಯಿಗಳನ್ನು ಮುಕ್ಕುತ್ತಾ ಕುಳಿತಿದ್ದ ಬೆಳಿಯನ ಕಡೆಗೆ ಚೆಲ್ಲಿದ. ಬೆಳಿಯಾ, ಬಾಯೊಳಗಿರುವುದನ್ನು ನುಂಗಿರಲಿಲ್ಲ; ಆದುದರಿಂದ ಅವನು ಮಾತನಾಡಲಿಲ್ಲ. ಕರಿಂಬನು ತನಗೆ ದೊರೆತ ಬಾಳೆಕಾಯಿಯನ್ನು ಸುಲಿದು ತಿನ್ನಲಾರಂಭಿಸಿದ.

ಲಂಚದಿಂದಲ್ಲದೆ, ಇತರ ಉಪಾಯಗಳಿಂದ ಕರಿಂಬನನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗದು; ತಮ್ಮ ಸುಲಿಗೆಯಲ್ಲಿ ಒಂದು ಪಾಲನ್ನು ಕರಿಂಬನಿಗೆ ಕೊಡದಿದ್ದರೆ, ಅವನು ತಮ್ಮ ಗುಟ್ಟನ್ನು ಪಾಪನಿಗೆ ಉಸುರಬಹುದೆಂಬ ಅಂಜಿಕೆಯು ಈ ಫಣಿಯ ಹುಡುಗರಿಗಿದ್ದಿತು. ಆದುದರಿಂದ ಬೆಳಿಯಾ ಗುಡಿಸಿಲೊಳಗೆ ಅಡಗಿಸಿಟ್ಟಿದ್ದ ಗೊನೆಯಿಂದ ಹತ್ತೆಂಟು ಬಾಳೆಕಾಯಿಗಳನ್ನು ಕಿತ್ತುಕೊಂಡು ಬಂದ. ಅವುಗಳನ್ನು ಕರಿಂಬನಿಗೆ ಕೊಟ್ಟಾಯಿತು. ಅನಾಯಾಸವಾಗಿ ತನಗೆ ಬಂದ ಲಾಭದಿಂದ ಕರಿಂಬನು ಸಂತೃಪ್ತನಾದ.

ತನಗೆ ಲಭ್ಯವಾದ ಬಾಳೆಕಾಯಿಗಳನ್ನು ತೆಗೆದುಕೊಂಡು ಕರಿಂಬ ತನ್ನ ಗುಡಿಸಿಲಿಗೆ ತೆರಳಿದ. ಬೆಂಕಿಯಲ್ಲಿ ಬೇಯಿಸಿದ್ದ ಬಾಳೆಕಾಯಿಗಳನ್ನು ಈ ಇಬ್ಬರು ಫಣಿಯ ಹುಡುಗರೂ ತಿಂದು ಮುಗಿಸಿದರು. ಸಮಯವು ಮಧ್ಯರಾತ್ರಿಯಾಗಿತ್ತು. ಕುಳ್ಳ ತನ್ನ ಗುಡಿಸಿಲಿಗೆ ಹೋದ. ಬೆಳಿಯಾ ಕೊಳಕು ಚಾಪೆಯನ್ನು ಬಿಡಿಸಿ ಅದರ ಮೇಲೆ ಪವಡಿಸಿದ; ಹಾಳು ಹಚ್ಚಡವನ್ನು ಹೊದೆದುಕೊಂಡ. ನಿದ್ದೆಯ ಹಾದಿಯನ್ನು ಅವನು ಇದಿರು ನೋಡಬೇಕಾಗಿರಲಿಲ್ಲ; ಅವನು ಚಾಪೆಯಮೇಲೆ ಉರುಳಾಡಿದೊಡನೆಯೆ, ನಿದ್ದೆಯು ಬಂದು ಅವನನ್ನು ತಬ್ಬಿಕೊಂಡಿತು.

* * *

ಬೆಳಕು ಹರಿಯಿತು. ಮಳೆಯು ಧಾರೆಮುರಿಯದೆ ಒಂದೆ ಸಮನೆ ಸುರಿಯುತ್ತಿದ್ದಿತು. ಶೀತದ ಗಾಳಿಯು ಒಂದೆಸಮನೆ ಬೀಸಲಾರಂಭಿಸಿತು. ಫಣಿಯರು ತಮ್ಮ ಗುಡಿಸಿಲುಗಳಲ್ಲಿ ಬೆಂಕಿಯನ್ನುರಿಸಿ, ಬೆಂಕಿಯನ್ನು ಕಾಯುಸುವುದರಿಂದ ಚಳಿಯನ್ನು ಹೋಗಲಾಡಿಸಿಕೊಳ್ಳುತ್ತಿದ್ದರು. ಆಗಾಗ ತಮ್ಮ ಹಚ್ಚಡಗಳ ತುದಿಗಳಲ್ಲಿರುವ ಗಂಟುಗಳನ್ನು ಬಿಚ್ಚಿ, ಹೊಗೆಸೊಪ್ಪನ್ನು ತೆಗೆದು ಬಾಯಿಗಳಿಗೆ ಹಾಕಿಕೊಳ್ಳುತ್ತಿದ್ದರು. ಬಾಯೊಳಗೆ ತುಂಬಿದ ಹೊಗೆಸೊಪ್ಪಿನ ರಸವನ್ನು ತಮ್ಮ ಮುಂದಿರುವ ಬೆಂಕಿಯಮೇಲೆ ಉಗುಳುತ್ತಿದ್ದರು.

ಪಾಪನ ವಸತಿಯಿಂದ " ಕೂ–ಕೂಹೂ–ಕೂಹೂ " ಎಂಬ ಸ್ವರವು ಹೊರಟಿತು. ಆ ಸಪ್ಪುಳವನ್ನು ಕೇಳಲು ಹೊಗೆಸೊಪ್ಪಿನ ಚೀಲವನ್ನು ಬಿಚ್ಚುತ್ತಿದ್ದ ಕೂಟ ತನ್ನ ಬೆನ್ನುತುರಿಸಿಕೊಳ್ಳುತ್ತಾ ಹೇಳಿದ. " ಎನಿಯ ತವ ಮೊಟ್ಟವಮ್ಮಾರೇ! ಏರು ತುರಪ್ಪಾ ಪಾಪ ಬಿಳಿಕಿಲಚೋ. (ಹುಡುಗರೆ ಏಳಿರಿ! ಎತ್ತುಗಳನ್ನು ಕಟ್ಟಲು ಪಾಪ ಕೂಗುತ್ತಿದ್ದಾನೆ.) "

ಎಡೆಬಿಡದೆ ಸುರಿಯುತ್ತಿರುವ ಮಳೆ; ಸಾಲದುದಕ್ಕೆ ಒಂದೆ ಸಮನೆ ಬೀಸುತ್ತಿರುವ ಚಳಿಗಾಳಿ ಬೆಂಕಿಯನ್ನು ಬಿಟ್ಟು ಗುಡಿಸಿಲಿಂದ ಹೊರಕ್ಕೆ ತೆರಳಲು ಯಾರಿಗೂ ಮನಸ್ಸು ಬರಲಿಲ್ಲ. ಫಣಿಯರಲ್ಲಿ ಒಬ್ಬಿಬ್ಬರು ನುಡಿದರು: “ಈಣೆತ್ತ ಮಳೆಯಿಲು ಏಣೆ ಊಳುವ? (ಹೀಗಿರುವ ಮಳೆಯಲ್ಲಿ ಹೇಗೆ ಊಳುವುದು?)”

ಅವರು ಗುಡಿಸಿಲುಗಳಿಂದ ಹೊರಕ್ಕೆ ಬರಲಿಲ್ಲ; ಹೊಗೆಸೊಪ್ಪನ್ನು ಮೆಲ್ಲುತ್ತಾ ಬೆಂಕಿಯ ಮುಂದೆ ಕುಳಿತರು. ಪಾಪನ ವಸತಿಯಿಂದ “ಕೂಹೂ–” ಗರ್ಜನೆಗಳು ಹತ್ತೆಂಟು ಸಲ ಬಂದರೂ ಅವರು ಕುಳಿತ ಸ್ಥಳದಿಂದ ಕದಲಲಿಲ್ಲ.

ಕೆಲವು ನಿಮಿಷಗಳಲ್ಲಿಯೆ ಗುಡಿಸಿಲುಗಳ ಮುಂದೆ ಪಾಪನ ಆಕೃತಿಯು ಪ್ರತ್ಯಕ್ಷವಾಯಿತು. ಪಾಪನ ಕೈಯಲ್ಲಿ ಒಂದು ದೊಣ್ಣೆ ಇದ್ದಿತು. ಫಣಿಯರು ತಮ್ಮ ಸ್ಥಳಗಳನ್ನು ಬಿಟ್ಟು ಕದಲದಿರುವುದನ್ನು ನೋಡಿ ಪಾಪನಿಗೆ ಸಿಟ್ಟು ಬಂದಿತು. ಅವನು ಹೀಗೆ ಗರ್ಜಿಸಿದ: “ನಾಯಿಮಕ್ಕಳೆ, ಹತ್ತೆಂಟು ಸಲ ನಾನು ಕೂಗಿದರೂ ಏಕೆ ಕಲ್ಲುಗೊಂಬೆಗಳಂತೆ ಕುಳಿತಿರುವಿರಿ? ಕೆಲಸಕ್ಕೆ ಬೇಗ ಹೊರಡಿ.”

“ಮಳೆ ಆಂಜು; ಏಣೆ ಪಣಿಯೆಡುಪ್ಪ? (ಮಳೆ ಬರುತ್ತಲಿದೆ; ಹೇಗೆ ಕೆಲಸಮಾಡುವುದು?)” ಈ ಮಾತುಗಳು ಒಬ್ಬ ಫಣಿಯನ ಬಾಯಿಯಿಂದ ಹೊರಕ್ಕೆ ಬಂದುವು.

“ಮುಂಡೇಗಂಡ, ಇದು ಮಳೆಗಾಲ; ಮಳೆ ಬರದಿರುವುದೇ? ನೀವು ಕೆಲಸಕ್ಕೆ ಹೊರಡದಿದ್ದರೆ ನಿಮ್ಮ ಬೆನ್ನು ಬಾಕಿಯಾಗದು. ಹೊಡೆದು ನಿಮ್ಮ ಮೂಳೆಗಳನ್ನು ಮುರಿವೆ ನಾನು!”

ಪಾಪನು ಸಿಟ್ಟಿನಿಂದ ಅಡಿದ-ಮೇಲಿನ-ಮಾತುಗಳನ್ನು ಕೇಳಲು ಕೊಟನು ಫಣಿಯರಿಗೆ ಉಪದೇಶಿಸಲಾರಂಭಿಸಿದ. “ಪೋಗುವಿಮ ತವ ಮೊಟ್ಟಮ್ಮಾರೇ; ಪಾಪ ಬಂದು ಬಿಳಿಕಿಂಜ ಸೇರತ್ತು ಪಣಿಕ್ಕು ಪೋಗಾದ ಎಳಪ್ಪಾನು ಪಾಡುಳಾನೋ? ಎನಾಂಗು ಈಣೆ ಆಕುವಿರಿ?” (ಹುಡುಗರೇ ಹೋಗಿರಿ; ಪಾಪನು ಬಂದು ಕರೆಯುವ ವೇಳೆಯಲ್ಲಿ ಕೆಲಸಕ್ಕೆ ಹೋಗದೆ ಹೀಗೆ ಕೂಡ್ರುವುದು ಸರಿಯೇ? ಏಕೆ ಹೀಗೆ ಮಾಡುವಿರಿ?)”

ಕೆಲವು ಫಣಿಯರು ಎದ್ದು ಗುಡಿಸಿಲುಗಳ ಮೂಲೆಗಳಲ್ಲಿಟ್ಟಿದ್ದ ಹಗ್ಗ ಕೋಲುಗಳನ್ನು ತೆಗೆದುಕೊಂಡರು; ನೇಗಿಲುಗಳನ್ನು ಹೆಗಲುಗಳ ಮೇಲೇರಿಸಿ ಕೊಂಡರು; ಗುಡಿಸಿಲುಗಳಿಂದ ಹೊರಗೆ ಬಂದರು. ಇನ್ನು ಕೆಲವು ನೂದಿ ಕುಳಿತ ಸ್ಥಳಗಳಿಂದ ಕದಲದೆ ಇದ್ದರು. ಇದನ್ನು ಕಾಣಲು ಪಾಪನ ಸಿಟ್ಟು ನೆತ್ತಿಗೇರಿತು; ಕೈಯಲ್ಲಿ ಹಿಡಿದ ದೊಣ್ಣೆಯನ್ನು ತಿರುಗಿಸುತ್ತಾ ಅವನು ಹೇಳಿದ. “ನೋಡಿ ಕತ್ತೆಗಳೆ, ನಿಮ್ಮ ಬೆನ್ನ ಮೂಳೆಗಳನ್ನು ಮುರಿಯುತ್ತೇನೆ” ಇತರ ಫಣಿಯರನ್ನು ಕೆಲಸಕ್ಕೆ ಒತ್ತಾಯಪಡಿಸುವುದಕ್ಕಾಗಿ ಫಣಿಯರಿರುವಲ್ಲಿಗೆ ಪಾಪ ಹೆಜ್ಜೆಗಳನ್ನಿಡತೊಡಗಿದ. ತಮ್ಮ ಬಳಿಗೆ ಪಾಪನು ಬರುತ್ತಿರುವುದನ್ನು ಕಂಡು, ಗುಡಿಸಿಲುಗಳಲ್ಲಿ ಕದಲದೆ ಕುಳಿತಿದ್ದ ಫಣಿಯರು, ತಾವು ಕೆಲಸಕ್ಕೆ ಹೋಗದಿದ್ದರೆ ಏಟುಗಳು ಬೀಳುವುದು ನಿಶ್ಚಯವೆಂದು ತಿಳಿದುಕೊಂಡರು. ಅವರು ಕುಳಿತಲ್ಲಿಂದ ಎದ್ದರು; ಹಗ್ಗ ಮತ್ತು ನೇಗಿಲುಗಳನ್ನು ತೆಗೆದುಕೊಂಡು ಹಟ್ಟಿಯ ಕಡೆಗೆ ನಡೆದರು.

ಆದರೆ ಬೆಳಿಯಾ ಮಾತ್ರ ಬೆಂಕಿಯ ಹತ್ತಿರದಿಂದ ಕದಲಲಿಲ್ಲ; ಇತರ ಫಣಿಯರೊಂದಿಗೆ ಕೆಲಸಕ್ಕೆ ಹೋಗಲಿಲ್ಲ. ಅವನು ಕದಲದಿರುವುದನ್ನು ಕಂಡು ಪಾಪನು ಪ್ರಶ್ನಿಸಿದ. “ಬೆಳಿಯಾ, ಏಕೆ ಕಲ್ಲುಗೊಂಬೆಯಂತೆ ಕುಳಿತಿರುವೆ? ಕೆಲಸಕ್ಕೆ ಹೊರಡದಿದ್ದರೆ ನಿನ್ನ ಬೆನ್ನು ಬಾಕಿಯಾಗದು.”

ಬೆಳಿಯಾ ಕುಳಿತಲ್ಲಿಂದ ಎದ್ದುನಿಂತು ಕುಂಟುತ್ತಾ ಹೇಳಿದ. “ನೋಕುವಿ ಪಾಪನೇ, ಎನ್ನ ಕಾಲುಕು ಒರು ಮುಳ್ಳುಸಟ್ಟ್ಯೆಳ. ನಡಪ್ಪಾನೂಂ ಕೂಡ; ಚಾಲ ನೋವಾಂಜು. (ಪಾಪ ನೋಡಿರಿ, ನನ್ನ ಕಾಲಿಗೆ ಒಂದು ಮುಳ್ಳು ತಗಲಿದೆ. ನಡೆಯುವುದಕ್ಕಾಗುವುದಿಲ್ಲ; ಬಹಳ ನೋವು.)”

“ಹಂದಿಯಮಗನೆ, ಮುಳ್ಳುತಗಲಿದೆಯಲ್ಲವೇ ನಿನ್ನ ಕಾಲಿಗೆ? ಅದನ್ನು ಇಲ್ಲದಾಗಿಸುವೆ! ಸೂಳೆ. . . .” ಹೀಗೆ ಪಾಪನ ಬಾಯಿಯಿಂದ ಬೈಗಳ ಹೊಳೆಯು ಹರಿಯತೊಡಗಿತು. ಅವನ ಕೈಯಲ್ಲಿ ಹಿಡಿದ ದೊಣ್ಣೆಯು ಚಲಿಸಿತು. ಅದು ಗಾಳಿಯಲ್ಲಿ ತೇಲಿಬಂದು ಬೆಳಿಯನ ಬೆನ್ನಮೇಲೆ ಬಿದ್ದಿತು. “ಠಪ್, ಠಪ್,” ಎಂಬ ಪ್ರಹಾರಗಳ ಸಪ್ಪಳವು ಅಲ್ಲಿ ಮೊಳಗಿತು. ಪುನಃ ನಾಲ್ಕಾರು ಏಟುಗಳು ಬೆಳಿಯನ ಬೆನ್ನಮೇಲೆ ಬಿದ್ದುವು. ಬೆಳಿಯಾ ತನ್ನ ನೇಗಿಲು ಹಗ್ಗಗಳನ್ನು ತೆಗೆದುಕೊಂಡ. ತನ್ನನ್ನು ಹೊಡೆಯುತ್ತಿರುವ ಪಾಪನ ಸಂಗಡ ಹೀಗೆ ಹೇಳಿದ: “ಅರೆಯಾದೆವಿಮ, ಪಣಿಕ್ಕು ನಾ ಪೋವೇ!” (ಹೊಡೆಯಬೇಡಿ, ಕೆಲಸಕ್ಕೆ ನಾನು ಹೋಗುವೆ!)”

ಹಟ್ಟಿಯ ಕದಗಳನ್ನು ತೆರೆದುದಾಯಿತು. ಊಳಬೇಕಾದ ಎತ್ತುಗಳನ್ನೂ, ಕೋಣಗಳನ್ನೂ ಫಣಿಯರು ಹಟ್ಟಿಯಿಂದ ಹೊರಕ್ಕೆ ಅಟ್ಟಿಕೊಂಡು ಬಂದರು. ಅವುಗಳ ಹೆಗಲುಗಳ ಮೇಲೆ ನೊಗಗಳನ್ನು ಏರಿಸಿದರು; ನೇಗಿಲುಗಳನ್ನು ಹೂಡಿದರು; ಬಾಲಗಳನ್ನು ಹಗ್ಗದಿಂದ ನೊಗಗಳಿಗೆ ಕಟ್ಟಿದರು. ನೊಗಗಳಿಗೆ ಎತ್ತುಗಳ ಬಾಲಗಳನ್ನು ಗಂಟುಹಾಕಲಿಕ್ಕೆ ಕಾರಣವು ಎತ್ತುಗಳು ಗದ್ದೆಯಲ್ಲಿರುವ ಕೆಸರನ್ನು ರಟ್ಟಿಸದಿರುವುದಕ್ಕಾಗಿದ್ದಿತು. ಅವರು ಗದ್ದೆಗಳನ್ನು ಊಳಲಾರಂಭಿಸಿದರು; ಕೋಲುಗಳಿಂದ ಎತ್ತುಗಳನ್ನು ಹೊಡೆದರು. ನೇಗಿಲುಗಳು ಮಣ್ಣನ್ನು ಕೊರೆದುವು; ಎತ್ತುಗಳು ನೇಗಿಲುಗಳನ್ನು ಎಳೆಯುತ್ತಾ ಮುಂದೆ ನಡೆದುವು. ಫಣಿಯರ ಕೊರಳುಗಳಿಂದ ಹೂಡುವ ಹಾಡುಗಳು ಹೊರಟುವು.

“ನಡೆಮಿ ತವ ಎರುತು ಮಕ್ಕಳೇ–
ಅರೆರೇ–ಅರೇ–ರೇರೇ–ಅರೇ–ರೇ!”

* * *

ಹೊತ್ತು ಮಧ್ಯಾಹ್ನವಾಗಲು ಊಳುವ ಕೆಲಸವು ಮುಗಿಯಿತು. ಫಣಿಯರು ನೇಗಿಲುಗಳನ್ನು ಬಿಚ್ಚಿದರು; ಕೋಣಗಳನ್ನೂ, ಎತ್ತುಗಳನ್ನೂ ಪಕ್ಕದ ಹೊಳೆಗೆ ಅಟ್ಟಿಕೊಂಡು ಹೋದರು. ಅವುಗಳನ್ನೂ ತೊಳೆದುದಾಯಿತು. ಆ ಮೇಲೆ ಈ ಮೂಕಜೀವಿಗಳ ಹೆಗಲಮೇಲೆ ಹೂಡಿದ್ದ ನೊಗಗಳನ್ನು ಫಣಿಯರು

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್ ಧಸವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಖಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಬಿಚ್ಚಿದರು. ಅವ ತಮ್ಮ ಹಸಿವನ್ನಡಗಿಸಲು ಮೇಯತೊಡಗಿದುವು. ಫಣಿಯರು ನೇಗಿಲ ನೊಗಗಳನ್ನು ಹೆಗಲಮೇಲೇರಿಸಿಕೊಂಡು 'ಬಲ್ಲಿ'ಯನ್ನು ಪಡೆವುದಕ್ಕಾಗಿ ಪಾಪನ ವಸತಿಗೆ ಬಂದರು.

ತನ್ನ ತೋಟದಿಂದ ಬಾಳೆಗೊನೆ ಕಳವು ಹೋದುದು ಪಾಪನ ಕಣ್ಣುಗಳಿಗೆ ಬೀಳದಿರಲಿಲ್ಲ. 'ಫಣಿಯರಲ್ಲದೆ ಇತರರು ಯಾರೂ ಅಲ್ಲ ಗೊನೆಯನ್ನು ಲಪಟಾಯಿಸಿದವರು' ಎಂಬ ವಿಚಾರವು ಅವನಲ್ಲಿ ಮೂಡಿತು. ಬಾಳೆಗೊನೆ ಕದ್ದವರು ಯಾರೆಂಬುದನ್ನು ತಿಳಿಯಬೇಕಾದರೆ ಬಾಡಿಮೋರ ಕರಿಂಬನನ್ನು ಹಿಡಿಯಬೇಕು; ಅದೇನೂ ಪಾಪನಿಗೆ ಪ್ರಯಾಸದ ಕೆಲಸವಾಗಿರಲಿಲ್ಲ. ಒಂದೆಲೆ ಹೊಗೆಸೊಪ್ಪು, ಒಂದು ಹಿಡಿ ಉಪ್ಪು, ಕೆಲವು ಮೆಣಸಿನಕಾಯಿಗಳು ಇವುಗಳನ್ನು ಕೊಟ್ಟರೆ ಸಾಕು, ಕರಿಂಬನು ಈ ಗುಟ್ಟನ್ನು ಉಸುರುವನೆಂಬ ನಂಬಿಕೆಯು ಪಾಪನಿಗಿದ್ದಿತು.

ಮಧ್ಯಾಹ್ನದ ಹೊತ್ತಿನಲ್ಲಿ ಗದ್ದೆಗಳಲ್ಲಿ ಕೆಲಸಮಾಡಿ ಬಂದ ಫಣಿಯರಿಗೆ ಒಂದಿಷ್ಟು ಗಂಜಿಯನ್ನು ಕೊಡುವುದು ಒಂದು ರೂಢಿ. ಅದರಂತೆಯೆ ಈ ಪಾಪನು ಕೂಡ ತನ್ನ ಫಣಿಯರಿಗೆ ಮಧ್ಯಾಹ್ನಹೊತ್ತು ಒಂದಿಷ್ಟು ಗಂಜಿಯನ್ನು ಕೊಡುತ್ತಿದ್ದ. ಗದ್ದೆಗಳಿಂದ ಬಂದ ಫಣಿಯರು ಗಂಜಿಯನ್ನು ಕುಡಿಯಲು ಕೊಟ್ಟಿಗೆಗೆ ತೆರಳಿದರು. ಗಂಜಿಯನ್ನು ತೆಗೆದುಕೊಳ್ಳಲು ಅವರ ಕೈಗಳಲ್ಲಿ ಮಣ್ಣಿನ ಪಾತ್ರೆಗಳಿದ್ದುವು. ಫಣಿಯರು ಈ ಮಣ್ಣಿನ ಪಾತ್ರೆಗಳನ್ನು ತೋರಿಸಿದರು; ಪಾಪನ ಅಡಿಗೆಯವನು ಅವುಗಳಲ್ಲಿ ಗಂಜಿಯನ್ನು ಸುರಿದ. ಫಣಿಯರಿಗೆ ನಂಜಿಕೊಳ್ಳಲು ಒಂದಿಷ್ಟು ಉಪ್ಪು ಮೆಣಸುಗಳು ದೊರೆತುವು. ಅವರು ಗಂಜಿಗೆ ಉಪ್ಪನ್ನು ಬೆರಸಿದರು; ಮೆಣಸುಗಳನ್ನು ಕಡಿದರು; ಗಂಜಿಯನ್ನು ಕುಡಿಯಲಾರಂಭಿಸಿದರು.

ಇತರ ಫಣಿಯರೊಂದಿಗೆ ಕರಿಂಬನಾದರೂ ಗಂಜಿಯನ್ನು ಕುಡಿಯಲಾರಂಭಿಸಿದ್ದ. ಕುಡಿದು ಮುಗಿಸಿರಲಿಲ್ಲ. ಅಷ್ಟರಲ್ಲಿ ಪಾಪನ ಕರೆ ಬಂದಿತು. "ಕರಿಂಬಾ, ಇತ್ತ ಬಾ." ಹಜಾರದಿಂದ ಪಾಪನು ಕೂಗುತ್ತಿರುವುದು ಕರಿಂಬನಿಗೆ ಕೇಳಿಸಿತು. ಕರಿಂಬ ತಾನು ಕಡಿದಿದ್ದ ಮೆಣಸನ್ನು ನುಂಗಿದ; ಗಂಜಿಯ ಪಾತ್ರೆಯನ್ನು ನೆಲದ ಮೇಲೆ ಮಡಗಿದ; ಎದ್ದುನಿಂತು ಪಾಪನಿರುವಲ್ಲಿಗೆ ಓಡಿದ. ಪಾಪನು ಹಜಾರದಲ್ಲಿ ಒಂದು ಬೆಂಚಿನಮೇಲೆ ಕುಳಿತಿದ್ದ. ಅವನ ಕೈಯಲ್ಲಿ ಒಂದೆಲೆ ಹೊಗೆಸೊಪ್ಪು ಇದ್ದಿತು. ಕರಿಂಬ ಹಜಾರದ ಮುಂದೆಬಂದು ನಿಂತು ಪ್ರಶ್ನಿಸಿದ: "ಎನಾಂಗ್ ಪಾಪನೇ? (ಏಕೆ ಪಾಪನೇ?)"

"ಕರಿಂಬ: ನೋಡು, ನಿನ್ನಿಂದ ಒಂದು ಸಂಗತಿ ತಿಳಿಯಬೇಕಾಗಿದೆ; ನೀನು ದಿಟವನ್ನು ಹೇಳಬೇಕು."

"ಎನತ್ಯೆ" ತಲೆತುರಿಸುತ್ತಲಿದ್ದ ಕರಿಂಬ ನುಡಿದ. "ಅರಿಂಜಿರುಂದೊಲ ಪರವೆ; ಪಾಪನ ಬಾಟು ಕಳವು ಪರವ ಪಾಡುಳಾನೋ? (ಏನದು? ತಿಳಿದಿದ್ದರೆ ಹೇಳುವೆ; ಪಾಪನ ಸಂಗಡ ಸುಳ್ಳಾಡಬಹುದೇ?)"

"ನಾನು ಹೇಳುವುದನ್ನು ಕೇಳು." ಪಾಪ ನುಡಿದ. "ಕಳೆದ ರಾತ್ರಿ ನನ್ನ ತೋಟದಿಂದ ಒಂದು ಬಾಳೆಗೊನೆ ಕಳವುಹೋಗಿದೆ."

"ಅದು ಏಕು ಅರಿಂಜುಕೂಡ. (ಅದು ನನಗೆ ತಿಳಿಯದು.)"

"ಸುಳ್ಳಾಡಬೇಡ; ಈ ಬಿಡಾರಗಳಲ್ಲಿರುವ ಫಣಿಯರಲ್ಲದೆ ಇತರರು ಯಾರೂ ಕದಿಯರು. ಕದ್ದುದು ಯಾರೆಂಬುದು ನಿನಗೆ ಗೊತ್ತಿದೆ; ನಿಜ ಹೇಳು."

"ಏಕು ಒಂಜು ತೆರಿಯ; ಪಾಪನೇ ನಾ ಒಂಜು ಕಪ್ಪಾನು ಪೋವಾನು ಕಾಣಿ. ಇರಾವು ಒರಕತ್ತಿಲಾಂಜು. ನಾಕು ಅದು ಅರಿಂಜು ಕೂಡ. (ನನಗೆ ಒಂದೂ ತಿಳಿಯದು; ಪಾಪನೇ, ನಾನು ಕದಿಯಲಿಕ್ಕೆ ಹೋಗಲಿಲ್ಲ. ರಾತ್ರಿ ನಿದ್ದೆ; ನನಗೆ ತಿಳಿಯದು.)"

"ನನ್ನ ಸಂಗಡ ಸುಳ್ಳಾಡದಿರು. ನಿಜವನ್ನು ಹೇಳಿದರೆ ನಾನು ನಿನಗೇನೂ ಮಾಡುವುದಿಲ್ಲ. ಇಲ್ಲದಿದ್ದರೆ ಹೊಡೆದ ಎಲ್ಲ ಫಣಿಯರ ಬೆನ್ನುಗಳನ್ನು ಹುಡಿಮಾಡುವೆ." ಸ್ವಲ್ಪ ಸಿಟ್ಟಿನಿಂದ ಪಾಪ ಹೇಳಿದ. ಕರಿಂಬನಿಗೆ ಒಂದು ಹೊಗೆಸೊಪ್ಪಿನ ಎಲೆಯನ್ನು ಪಾಪನು ಕೊಟ್ಟ, ಆ ಮೇಲೆ ಪಾಪನು ತನ್ನ ಮಾತುಗಳನ್ನು ಮುಂದುವರಿಸಿದ: "ನೋಡು, ಕರಿಂಬ, ನಾನು ನಿನಗೇನೂ ಮಾಡುವುದಿಲ್ಲ. ಕದ್ದವರು ಯಾರೆಂದು ಹೇಳು. ಇಲ್ಲದಿದ್ದರೆ ನಿನ್ನ ಬೆನ್ನು ಹುಡಿಯಾಗುವುದು!"

ಹೊಗೆಸೊಪ್ಪು ದೊರೆತುದರಿಂದ ಸಂತೋಷ, ಪಾಪನ ಕೈಗಳಿಂದ ಎಲ್ಲಿ ಏಟುಗಳು ಬೀಳುವುವೋ ಎಂಬ ಹೆದರಿಕೆ, ಇವುಗಳು ಏಕಕಾಲದಲ್ಲಿ ಕರಿಂಬನಿಗುಂಟಾದುವು. ಮೊದಲೆ ಚಾಡಿಹೇಳುವ ಸ್ವಭಾವ ಅವನದು; ಇದುವರೆಗೆ ತನ್ನ ಎದೆಯಲ್ಲಿ ಭದ್ರವಾಗಿಟ್ಟಿದ್ದ ಗುಟ್ಟನ್ನು ಈಗ ಅಡಗಿಸಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. ಅದು ತನ್ನ ಕಟ್ಟುಗಳನ್ನು ಸಡಿಲಿಸಿಕೊಂಡು ಹೊರಗೆ ಬಂದಿತು. ಪಾಪನು ಕೊಟ್ಟ ಹೊಗೆಸೊಪ್ಪಿನಿಂದ ಒಂದು ಚೂರನ್ನು ತೆಗೆದು ಬಾಯಿಗೆ ಹಾಕಿಕೊಂಡ ಕರಿಂಬ. ಎಡಗೈಯ ಬೆರಳುಗಳಿಂದ ತನ್ನ ಕೊರಳಿನ ಹಿಂಬದಿಯನ್ನು ಅವನು ತುರಿಸಿ ಕೊಂಡುಬಾಯಿತು. ಆ ಮೇಲೆ ಅಂಜುತ್ತಾ ಸಣ್ಣ ಸ್ವರದಲ್ಲಿ ಅವನು ಹೇಳಿದ. " ಇರಾವು ಒರು ಒರಕ್ಕು ಕಯಿಂಜು ಎಣಿಚ್ಚೇ; ಅಪ್ಪೋ– (ರಾತ್ರಿ ಒಂದು ನಿದ್ದೆ ಕಳೆದು ಎದ್ದೆ; ಆಗ–) "

" ಆಗ ಏನಾಯಿತು ? " ಪಾಪನು ಉತ್ಸುಕತೆಯಿಂದ ಪ್ರಶ್ನಿಸಿದ:
" ನಮ್ಮ ಮೊಟ್ಟಮ್ಮಾರು, ಬೆಳಿಯಾ, ಕುಳ್ಳ ಇವಾರು ಉಳಾರಿಲ್ಲ (ನಮ್ಮ ಹುಡುಗರು, ಬೆಳಿಯಾ, ಕುಳ್ಳ ಇವರು ಇದ್ದಾರಲ್ಲ) "
" ಬೆಳಿಯ ಕುಳ್ಳ ಏನು ಮಾಡಿದರು ? "

" ಈ ಮೊಟ್ಟಮಾರು ತೀಯಿಲು ನೇಂದ್ರಕೊಲ ಚುಟ್ಟ ತಿನ್ನಿಂ ಜಾರು. ಎಕ್ಕುಂ ಅಂಜೆಟ್ಟು ಕಾಯಿ ತಂದಾರು. (ಈ ಹುಡುಗರು ನೇಂದ್ರ ಗೊನೆಯನ್ನು (ಕಾಯಿಗಳನ್ನು) ಸುಟ್ಟು ತಿನ್ನುತಿದ್ದರು. ನನಗೂ ಐದೆಂಟು ಕಾಯಿಗಳನ್ನು ಕೊಟ್ಟರು.)"

ಗೊನೆ ಕದ್ದವರು ಯಾರೆಂಬುದು ಪಾಪನಿಗೆ ತಿಳಿಯಿತು. ಅವನು ಹೇಳಿದ. " ಕರಿಂಬ, ಒಳ್ಳೆಯದು. ನಾನು ಆ ಹುಡುಗರಿಗೆ ಬುದ್ಧಿಯನ್ನು ಕಲಿಸುವೆ. ನೀನು ಹೋಗಿ ಗಂಜಿ ಕುಡಿ !"

ಕರಿಂಬ ಗಂಜಿಕುಡಿಯುವುದಕ್ಕೆ ಕೊಟ್ಟಿಗೆಗೆ ಹೋದ.

* * *

ಗಂಜಿ ಕುಡಿದುಕೊಂಡು ಫಣಿಯರು ಬಂದರು. ಬಲ್ಲಿಯ ಪೆಟ್ಟಿಗೆಯನ್ನು ತೆರೆದು ಪಾಪನು ಫಣಿಯರಿಗೆ ಬಲ್ಲಿ ಅಳೆಯಲು ಪ್ರಾರಂಭಿಸಿದ. ಪ್ರತಿಯೊಬ್ಬ ಗಂಡಸಿಗೆ ಎರಡು ಸೇರು ಭತ್ತದಂತೆ ಬಲ್ಲಿಯನ್ನು ಅಳೆದು ಫಣಿಯರಿಗೆ ಕೊಟ್ಟುದಾಯಿತು. ಪಾಪನು ಅಳೆದುಕೊಡುತ್ತಿರುವ ಬಲ್ಲಿಯನ್ನು ಫಣಿಯರು ಒಬ್ಬೊಬ್ಬರಾಗಿ ತಮ್ಮ ಹಚ್ಚಡಗಳಲ್ಲಿ ಕಟ್ಟಿಕೊಂಡರು. ಬೆಳಿಯನೂ, ಕುಳ್ಳನೂ ಬಲ್ಲಿಯನ್ನು ಕಟ್ಟಿಕೊಂಡನಂತರ ತಮ್ಮ ಗುಡಿಸಿಲುಗಳಿಗೆ ಹೋಗಲು ಹೊರಟರು. ಆಗ ಪಾಪನ ಬಾಯಿಯಿಂದ ಈ ಆಜ್ಞೆಯು ಹೊರಟಿತು. " ಬೆಳಿಯಾ, ಮತ್ತು ಕುಳ್ಳ ಇವರಿಬ್ಬರೂ ಈಗ ಹೋಗಕೂಡದು. ಅಲ್ಲಿ ನೀವಿಬ್ಬರೂ ನಿಲ್ಲಿ ! "

ಪಾಪನ ಹುಕುಮನ್ನು ಕೇಳಲು ಈ ಹುಡುಗರಿಬ್ಬರ ಮೋರೆಗಳು ಸಪ್ಪಗಾದುವು. ತಾವು ರಾತ್ರಿ ಬಾಳೆಗೊನೆಯನ್ನು ಕದ್ದ ಸಂಗತಿಯನ್ನು ಕರಿಂಬನು ಪಾಪನಿಗೆ ಉಸುರಿರಬೇಕೆಂದು ಅವರು ಗ್ರಹಿಸಿದರು. ಪಾಪನಿಂದ ತಮಗೆ ಲಭಿಸಬಹುದಾದ ದಂಡನೆಯನ್ನು ನೆನೆಯಲು ಅವರ ಎದೆಗಳಲ್ಲಿ ಹೆದರಿಕೆಯು ಹುಟ್ಟಿತು. ಪಾಪನ ಆಜ್ಞೆಯನ್ನು ಮೀರಿ ಆ ಸ್ಥಳದಿಂದ ಕದಲಲು ಅವರಿಗೆ ಧೈರ್ಯವಿರಲಿಲ್ಲ.

ಬಲ್ಲಿ ಅಳೆದು ಪೂರಯಿಸಿತು. ಪಾಪ ಎರಡು ಹೊಗೆಸೊಪ್ಪಿನ ಎಲೆಗಳನ್ನು ತೆಗೆದು ಮನೆಯ ಅಂಗಳಕ್ಕೆ ಎಸೆದ. ಫಣಿಯರು ಅಂಗಳದಲ್ಲಿ ಬಿದ್ದ ಆ ಹೊಗೆಸೊಪ್ಪುಗಳನ್ನು ಹೆಕ್ಕಿಕೊಂಡು ಅವನ್ನು ತಮ್ಮೊಳಗೆ ಪಾಲುಮಾಡಿಕೊಂಡರು. ತಮಗೆ ಸಿಕ್ಕಿದ ಪಾಲುಗಳನ್ನು ತಮ್ಮ ಸೊಂಟಗಳಿಗೆ ಸಿಕ್ಕಿಸಿಕೊಂಡ ಫಣಿಯರು, ಒಬ್ಬೊಬ್ಬರಾಗಿ ತಮ್ಮ ಗುಡಿಸಿಲುಗಳಿಗೆ ಹೊರಟರು. ಪಾಪ ಮನೆಯೊಳಗೆ ಹೋಗಿ, ಒಂದು ಬೆತ್ತದ ಕೋಲನ್ನು ತೆಗೆದುಕೊಂಡು ಹೊರಗೆ ಬಂದ.

ಬಾಳೆಗೊನೆಯನ್ನು ಕದ್ದುದನ್ನು ವಿಚಾರಣೆ ನಡೆಯಿಸಲು ಹೊರಟ ಪಾಪ. ಫಣಿಯನೊಬ್ಬನು ಗೊನೆಯನ್ನೊ, ಭತ್ತವನ್ನೊ ಕದ್ದರೆ, ಕಳ್ಳನಿಗೆ ದಂಡನೆ ದೊರಕಿಸಲು ಪಾಪನು ಪೋಲೀಸಿನವರ ಬಳಿಗಾಗಲಿ, ಕೋರ್ಟುಕಚೇರಿಗಳಿಗಾಗಲಿ ಹೋಗಬೇಕಾಗಿಲ್ಲ. ತನ್ನ ಆಶ್ರಯದಲ್ಲಿರುವ ಫಣಿಯರ ಮೇಲೆ ಪಾಪನಿಗೆ ಪೂರ್ಣಾಧಿಕಾರವಿದೆ. ತನ್ನ ಅಧೀನದಲ್ಲಿರುವ ಫಣಿಯನನ್ನು ಕೊಲ್ಲುವುದು ಹೊರತು ಇತರ ಯಾವ ಪ್ರಕಾರದಲ್ಲಿ ಬೇಕಾದರೂ ಪಾಪನು ದಂಡಿಸಬಹುದು. "ನೀನೇಕೆ ಫಣಿಯನನ್ನು ಪೀಡಿಸಿದೆ?" ಎಂದು ಪಾಪನನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದುದರಿಂದ ಈ " ಒಡೆಯರು " ತಮ್ಮ ಫಣಿಯರು ಕಳ್ಳತನ ಮೊದಲಾದ ತಪ್ಪುಗಳನ್ನು ಮಾಡಿದರೆ, ನ್ಯಾಯವನ್ನು ತಮ್ಮ ಕೈಗಳಲ್ಲಿ ತೆಗೆದುಕೊಂಡು ಫಣಿಯರನ್ನು ಬೇಕಾದಂತೆ ದಂಡಿಸುತ್ತಾರೆ. ಫಣಿಯರು ಈ ಪಾಪಂದಿರ " ಸರ್ವಾಧಿಕಾರ " ದ ನೆರಳಿನಲ್ಲಿ ಬಾಳುತ್ತಾರೆ.

ಬಾಳೆಗೊನೆಯನ್ನು ಕದ್ದ ಖಟ್ಲೆಯ ವಿಚಾರಣೆಗೆ ಪ್ರಾರಂಭವಾಯಿತು. ಈ ವಿಚಾರಣೆಗೆ ಸಾಕ್ಷಿಗಳ ಆವಶ್ಯಕತೆಯಿಲ್ಲ. ಪಾಪ ಬೆತ್ತದ ಕೋಲನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಪ್ರಶ್ನಿಸಿದ: "ಬೆಳಿಯಾ, ನಿನ್ನೆ ರಾತ್ರಿ ನನ್ನ ತೋಟದಿಂದ ಬಾಳೆಗೊನೆ ಕದ್ದವರು ಯಾರು ? "

" ಎಕ್ಕು ಒಂಜು ಅರಿಂಜು ಕೂಡ ಪಾಪನೇ ! " (ಪಾಪನೆ, ನನಗೆ ಅದೇನೂ ತಿಳಿಯದು !) ನಡುಗುವ ಸ್ವರದಲ್ಲಿ ಬೆಳಿಯನ ಜವಾಬು ಬಂದಿತು.

" ಕುಳ್ಳ, ನೀನಾದರೂ ನಿಜ ಹೇಳು. " ಪಾಪ ಗರ್ಜಿಸಿದ.

" ಎಕ್ಕು ಒಂಜು ತಿರಿಯ " (ನನಗೆ ಯಾವುದೂ ಗೊತ್ತಿಲ್ಲ.)

" ನಾಯಿ ಮಕ್ಕಳೇ, " ಪಾಪನ ಗರ್ಜನೆಯು ಮೊಳಗಿತು : " ಮರ್ಯಾದೆಯಿಂದ ಕೇಳಿದರೆ ನೀವು ನಿಜ ಹೇಳುವಂತಿಲ್ಲ. ನಿಮ್ಮ ಬೆನ್ನ ಮೇಲಿನ ಚರ್ಮವನ್ನು ಸುಲಿಯುತ್ತೇನೆ; ತಿಳಿಯಿತೆ ? "

ಹುಡುಗರಿಬ್ಬರೂ ಮಾತನಾಡದೆ ನಡುಗುತ್ತಾ ನಿಂತರು. ಅವರು ಮೌನವನ್ನವಲಂಬಿಸಿರುವುದನ್ನು ಕಂಡು ಪಾಪನ ಸಿಟ್ಟು ಹೆಚ್ಚಿತು.

ಫೋಟೋ ಎನ್‌ಲಾರ್ಜ್‌ಮೆಂಟ್ಸ್
ಸುಂದರವಾಗಿಯೂ ಮೆಚ್ಚಿಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು !
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರ
ಬೇಕೆಂಬುದನ್ನು ಕೂಡಲೆ ತಿಳಿಸಿರಿ !
ಬಣ್ಣಬಣ್ಣದ ಎನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು !
ಬೆಲೆ ಸುಲಭ ! ❀ ತೃಪ್ತಿಕರವಾದ ಕೆಲಸ !!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು !
ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಫಣಿಯರ ನಾಲಗೆಗಳಿಂದ ಸತ್ಯವನ್ನು ಹೊರಡಿಸಬೇಕಾದರೆ ದಂಡವೆ ಉತ್ತಮ ಉಪಾಯವೆಂಬುದು ಪಾಪಂದಿರಿಗೆ ಅನುಭವಗಳಿಂದ ತಿಳಿದು ಬಂದ ಸಂಗತಿಯಾಗಿದೆ. ಕಳ್ಳತನ ಮೊದಲಾದ ತಪ್ಪುಗಳನ್ನು ಮಾಡಿದುದು ನಿಜವೆಂಬುದನ್ನು ಅಪರಾಧಿಗಳ ನಾಲಗೆಗಳಿಂದ ಪಾಪಂದಿರು ಹೊರಡಿಸುವುದು ದಂಡಪ್ರಯೋಗದ ಮೂಲಕವಾಗಿಯೆ. ನಿರಪರಾಧಿಗಳಾದ ಫಣಿಯರು ಸಹ ಹಲವು ಸಾರಿ ತಮ್ಮ ಪಾಪಂದಿರ ಗದಾಪ್ರಯೋಗಕ್ಕೆ ಗುರಿಯಾಗಿ ಪೀಡನೆಯನ್ನು ಸಹಿಸಲಾರದೆ, ತಪ್ಪುಮಾಡಿದವರು ತಾವೇ ಎಂದು ಒಪ್ಪಿಕೊಳ್ಳುವುದೂ ಉಂಟು. ತಪ್ಪುಗಾರನಿರಲಿ, ಇಲ್ಲದಿರಲಿ, ತಮಗೆ ಒಬ್ಬ ಫಣಿಯನ ಮೇಲೆ ಸಂದೇಹವು ಹುಟ್ಟಿದರೆ, ಅವನ ಮೇಲೆ ತಮ್ಮ ಗದೆಗಳನ್ನು ಬೀಸುವುದು ಈ ಪಾಪಂದಿರ ಒಂದು ಸ್ವಭಾವವಾಗಿದೆ.

ಹುಡುಗರಿಬ್ಬರೂ ನಿಜ ಹೇಳದಿರಲು, ಪಾಪನು ತನ್ನ ಬೆತ್ತದ ಕೋಲನ್ನು ತೆಗೆದ ; ಅದನ್ನು ಹುಡುಗರ ಮೇಲೆ ಪ್ರಯೋಗಿಸ ಹತ್ತಿದ. ಕಣ್ಣು, ಕಿವಿ, ಮೂಗು ಎಂಬ ಅವಯವಗಳ ಮೇಲೆ ಏಟುಗಳು ಬೀಳತೊಡಗಿದುವು. ನೋವನ್ನು ತಾಳಲಾರದೆ ಈ ಇಬ್ಬರೂ ಫಣಿಯ ಹುಡುಗರು ಓಡಲು ಯತ್ನಿಸಿದರು. ಆದರೆ ಪಾಪನು ಅವರನ್ನು ಹೋಗಬಿಡಲಿಲ್ಲ. ಅವನು ಅವರ ಕೈಗಳನ್ನು ಹಿಡಿದು ನಿಲ್ಲಿಸಿದ; ಅವರನ್ನು ಕಂಬಗಳಿಗೆ ಕಟ್ಟಿ ಹಾಕಿದ. ಬೆತ್ತದಿಂದ ಹೊಡೆಯುವ ಕೆಲಸವನ್ನು ಮುಂದುವರಿಸಿದ. ಹುಡುಗರ ಮೈ ಮೇಲೆ ಗಾಯಗಳಾದುವು; ನೆತ್ತರು ಹೊರಕ್ಕೆ ಬಂದಿತು; ಶರೀರಗಳು ಬಾತುಕೊಂಡುವು.

ನೋವನ್ನು ತಾಳಲಾಗದೆ ಹುಡುಗರು ಅಳುತ್ತಾ ನುಡಿದರು: " ಅರೆಯಾದೆ ಏ ಪಾಪನೇ; ನೇರು ಪರೆವೆ (ಪಾಪನೇ, ಹೊಡೆಯಬೇಡಿ; ನಿಜವನ್ನು ಹೇಳುವೆ.) "

" ಹಂದಿಮಕ್ಕಳೇ, ನಿಜ ಹೇಳಿ; ಬಾಳೆಗೊನೆಯನ್ನು ಕದ್ದವರು ಯಾರು ? " ಪುನಃ ಹತ್ತೆಂಟು ಪ್ರಹರಗಳು ಹುಡುಗರ ಮೈ ಮೇಲೆ ಬಿದ್ದುವು.

" ನಾಂಗ ಅಂಜೋ ! (ನಾವಾಗಿರುವೆವು) " ಹುಡುಗರ ಕೊರಳುಗಳಿಂದ ಕ್ರಂದನಸ್ವರವು ಹೊರಟಿತು.

" ನಾಯಿಮಕ್ಕಳೆ, ಇನ್ನು ಗೊನೆಯನ್ನು ಕದಿಯುವಿರಾ ? " ಪುನಃ ನಾಲ್ಕೈದು ಸಲ ಪಾಪನ ಕೈಯಲ್ಲಿರುವ ಬೆತ್ತವು ಈ ಫಣಿಯ ಹುಡುಗರ ಬೆನ್ನುಗಳ ಮೇಲೆ ನರ್ತಿಸಿತು.

" ಕಾಣೇ, ಪಾಪನೇ ಕಾಣೇ ! ಇನಿ ಕಪ್ಪೆನಾಂಗ ಪೋಗೊ. (ಇಲ್ಲ, ಪಾಪನೇ ಇಲ್ಲ ! ಇನ್ನು ಕದಿಯಲು ನಾವು ಹೋಗುವುದಿಲ್ಲ.)" ಫಣಿಯ ಹುಡುಗರು ರೋದಿಸತೊಡಗಿದರು.

"ಹೂಂ, ಕದಿಯಿರಿ; ನಿಮ್ಮನ್ನು ಹೊಡೆದು ಕೊಂದು ಬಿಡುವೆ." ಪಾಪನು ಗರ್ಜಿಸಿದ. ಏಟು ಹಾಕುವುದನ್ನು ಅವನು ನಿಲ್ಲಿಸಲಿಲ್ಲ.

ಫಣಿಯ ಹುಡುಗರನ್ನು ಪ್ರಹರಿಸಿ ಪಾಪನ ಕೈಯು ಬಳಲಿತು; ಅವನು ತನ್ನ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿದ; ಕಂಬಗಳಿಗೆ ಕಟ್ಟಿದ್ದ ಫಣಿಯ ಹುಡುಗರ ಕಟ್ಟುಗಳನ್ನು ಸಡಲಿಸಿದ. ತಮ್ಮನ್ನು ಬಂಧಿಸಿರುವ ಕಟ್ಟುಗಳು ಸಡಿಲವಾದೊಡನೆಯೆ ಫಣಿಯ ಹುಡುಗರು ಕಟ್ಟುಗಳನ್ನು ಬಿಚ್ಚಿಕೊಂಡು ತಮ್ಮ ಗುಡಿಸಿಲುಗಳ ಕಡೆಗೆ ಓಡಿದರು.

ಬೆಳಿಯನಿಗೂ ಕುಳ್ಳನಿಗೂ ಪಾಪನು ಕೊಟ್ಟ ಈ ಪ್ರಹಾರಾದಿ ಕಷಾಯಸೇವನೆಯಿಂದ ಸಾಕುಸಾಕೆನಿಸಿತ್ತು. ಪಾಪನು ಕೊಡುವ ಈ ಕಷಾಯವನ್ನು ಫಣಿಯನಾಗಿ ಹುಟ್ಟಿದವನು ತನ್ನ ಜೀವನದಲ್ಲಿ ಅನೇಕ ಸಾರಿ ಕುಡಿಯಬೇಕಾಗಿ ಬರುತ್ತದೆ. *

* * *

* **ಸೂಚನೆ:**— ವೈನಾಡಿನ ಫಣಿಯರ ಜೀವನವನ್ನು ಕಣ್ಣ ಮುಂದಿಟ್ಟುಕೊಂಡು ಈ ಕತೆಯನ್ನು ಬರೆದಿರುವೆ. ಇದರಲ್ಲಿ ವಿವರಿಸಿದುವೆಲ್ಲವೂ ಫಣಿಯರ ಜೀವನದಲ್ಲಿ ಸರ್ವಸಾಧಾರಣವಾಗಿ ಗೋಚರಿಸತಕ್ಕವುಗಳಾಗಿವೆ. ಕದಿವುದು ಫಣಿಯರಲ್ಲಿ ಗೋಚರಿಸತಕ್ಕ ಒಂದು ಜನ್ಮಸಿದ್ಧವಾಸನೆಯಾಗಿದೆ. ಕಳ್ಳತನದ ಅಭ್ಯಾಸವಿಲ್ಲದ ಫಣಿಯನು ಸಿಕ್ಕುವುದು ವಿರಳ. ಅವರು ಹೀಗಾಗುವುದು ಯಾರ ತಪ್ಪಿನ ಮೂಲಕ ?

—ಲೇಖಕ

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
❀ ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಏಳುಸುತ್ತಿನ ★ ★ ಕೋಟೆ

ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸ
ವಕೀಲರು

ಅವರಿಂದ

ಕೋಟೆಗಳು ಕನ್ನಡಿಗರ ಸಾಹಸಜೀವನದ ಕುರುಹುಗಳು. ಹಳೆಯ ಕೋಟೆಗಳಿದ್ದಲ್ಲಿಗೆ ಹೋಗಿ, ಅಲ್ಲಿಯ ಹಿರಿಯರೊಂದಿಗೆ ಮಾತನಾಡಿ ಕೇಳಿದರೆ, ಒಂದೊಂದು ಕೋಟೆಗಲ್ಲಿಗೂ ಒಂದೊಂದು ರೋಮಾಂಚಕಾರಿಯಾದ ಕತೆಯಿದ್ದುದನ್ನು ನಾವು ಕಾಣಬಹುದು. ಮಾದರಿಗಾಗಿ ಈ ಚಿತ್ರದುರ್ಗ ಕೋಟೆಯ ಬಣ್ಣನೆ ಓದಿರಿ!

★

ಶತ್ರುಗಳನ್ನು ಜಯಿಸಲು ಆಕಾಶಮಾರ್ಗಗಳಲ್ಲಿ ಸಂಚರಿಸುವ ವಿಮಾನಸೌಕರ್ಯವನ್ನು ಕಂಡುಹಿಡಿಯಬಹುದೆಂದು ಜನಗಳು ಊಹಿಸುವುದಕ್ಕೂ ಸಾಧ್ಯವಿಲ್ಲದ ಪ್ರಾಚೀನಕಾಲದಲ್ಲಿ, ಶತ್ರುಗಳನ್ನು ತಡೆಯಲು ಕಡಿದಾದ ಕೋಟೆ-ಕೊತ್ತಲಗಳಿಂದ ಕೂಡಿದ ದುರ್ಗಗಳೇ ಮುಖ್ಯವಾದ ರಾಜಧಾನಿಗಳಾಗಿದ್ದುವು. ಇಂತಹವುಗಳಲ್ಲಿ ನಿಡುಗಲ್ಲುಗಳಿಂದಲೂ, ಕೋಡುಗಲ್ಲುಗಳಿಂದಲೂ, ನಿಬಿಡವಾದ ಸಪ್ತಗಿರಿಗಳುಳ್ಳ ಚಿನ್ಮೂಲಾದ್ರಿಯು * ಕನ್ನಡ ನಾಡಿನಲ್ಲಿ ಒಂದು ಮುಖ್ಯವಾದ ದುರ್ಗವಾಗಿದ್ದಿತು. ಕನ್ನಡ ನಾಡದೇವಿಯು ಧರಿಸಿರುವ ಮುಡಿಯ ಪುಷ್ಪದಂತೆ ಈದುರ್ಗವು ರಂಜಿಸುತ್ತಿರುವುದು. ಗಗನಚುಂಬಿಗಳಾದ ಆ ಸಪ್ತಗಿರಿಗಳೇ ಕುಸುಮಗಳು. ಅವುಗಳನ್ನು ಆವರಿಸಿರುವ ಮಟ್ಟಿಯ ಗುಡ್ಡಗಳೆ ರೇಕುಗಳು; ಪ್ರಕೃತಿಸೌಂದರ್ಯದಿಂದ ಕೂಡಿದ ಇಕ್ಕಟ್ಟಾದ ಕಣಿವೆಗಳು ಈ ಮಟ್ಟಿಯ ಗುಡ್ಡಗಳನ್ನು ರೇಕುಗಳಾಗಿ ವಿಂಗಡಿಸುವ ರೇಖೆಗಳಂತಿರುವುವು. ಈ ಕಣಿವೆಗಳಲ್ಲಿ ಅಲ್ಪಸೇನೆಯೊಡನೆ ಕಾದುಕೊಂಡಿದ್ದು, ಮೇಲೆಬೀಳಲು ಬರುವ ಅಧಿಕಸಂಖ್ಯಾಕ ಸೇನೆಯುಳ್ಳ ಶತ್ರುಗಳನ್ನೂ ಹೊಡೆದೋಡಿಸಿ, ದುರ್ಗವನ್ನು ಸಂರಕ್ಷಿಸುವ ಸೌಲಭ್ಯಗಳಿರುವುವು. ಇವುಗಳನ್ನರಿತೇ ಪೂರ್ವಿಕರು ಈ ದುರ್ಗಕ್ಕೆ ಏಳುಸುತ್ತಿನ ಕೋಟೆಯನ್ನು ಕಟ್ಟಿ, ಈ ನಗರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು, ಶತ್ರುಗಳನ್ನೆದುರಿಸಿ ವೀರಾಗ್ರಣಿಗಳಾಗಿ ಮೆರೆದರು. ಮಹಾಕಾಂತಾರದ ಮಧ್ಯದಲ್ಲಿದ್ದ ಈ ದುರ್ಗವು ಕದಂಗಲಿಗಳ ನೆಲೆವೀಡಾಗಿದ್ದುದರಲ್ಲಿ ಆಶ್ಚರ್ಯವೇನಿರುವುದಿಲ್ಲ.

ಚಿತ್ರದುರ್ಗದ ಸಂತೆಯ ಬಾಗಿಲು

ಚಿತ್ರದುರ್ಗವು ಅತಿ ಪ್ರಾಚೀನಕಾಲದಿಂದಲೂ ರಾಜಧಾನಿಯಾಗಿರುವುದು. ಭಾರತಕಾಲದಲ್ಲಿ ಇಲ್ಲಿ ಹಿಡಿಂಬಾಸುರನು ವನದುರ್ಗಾಧಿಪತಿಯಾಗಿ ಇದ್ದನು. ಅಶೋಕನ ಕಾಲದಿಂದ ಕ್ರಿಸ್ತಶಕ ಎರಡು ಶತಮಾನಗಳ ಕಾಲ ಆಂಧ್ರಭೃತ್ಯರ ಸಾಮಂತರೂ, ರಾಜಪ್ರತಿನಿಧಿಗಳೂ ಈ ದುರ್ಗದಲ್ಲಿ ನಿಂತು ಆಳುತ್ತಿದ್ದರು. ಕದಂಬಕುಲದ ಮಯೂರಶರ್ಮನು ಈ ನಗರದ ಪ್ರಜೆಗಳ ಉಪಯೋಗಕ್ಕಾಗಿ ತಟಾಕವನ್ನು ನಿರ್ಮಿಸಿದನು. ಚಾಲುಕ್ಯ, ರಾಷ್ಟ್ರಕೂಟ ಚಕ್ರವರ್ತಿಗಳ ಕಾಲದಲ್ಲಿ. ಸಾಮಂತಾಧಿಪತಿಗಳಿಗೆ ಈ ನಗರವು 'ಸೂಳ್ಗಲ್ಲು' ಎಂಬ ಹೆಸರಿನಿಂದ ರಾಜಧಾನಿಯಾಗಿದ್ದಿತು. ಕ್ರಿ. ಶ. ೧೧೮೭ ರಲ್ಲಿ ಈ ಪಟ್ಟಣವು 'ಬೆಮ್ಮತ್ತನ ಕಲ್ಲುದುರ್ಗ' ಎಂಬ ಹೆಸರಿನಿಂದ ಹೊಯಿಸಳರಸರ ಪ್ರಾಂತದ ರಾಜಧಾನಿಯಾಯಿತು. ವಿಜಯನಗರದರಸರ ಕಾಲದಲ್ಲಿ, ಮಹಾಸೇನಾನಿಯಾದ ಮಲ್ಲಿನಾಥ, ರಾಜಕುಮಾರ ಮಲ್ಲಣ್ಣ

* ಚಿನ್ಮೂಲಾದ್ರಿ-ಚಿತ್ರದುರ್ಗದ ಬೆಟ್ಟಕ್ಕೆ ಪೂರ್ವದಿಂದಲೂ ಇರುವ ಹೆಸರು.



ಚಿತ್ರದುರ್ಗದ ಟೀಕಿನ ಬಾಗಿಲು

ಒಡೆಯರು ಮೊದಲಾದವರ ರಾಜಧಾನಿಯಾಗಿತ್ತು. ೧೫೬೮ ರಿಂದ ೧೭೭೯ರ ವರೆಗೆ ಇದು ಪ್ರಸಿದ್ಧರಾದ ಪಾಳೆಯಗಾರರ ರಾಜಧಾನಿಯಾಗಿತ್ತು. ಅನಂತರ ಮೈಸೂರು ಹುಲಿಯಾದ ಟಿಪ್ಪುಸುಲ್ತಾನನು ತನ್ನ ರಾಜ್ಯದ ಭದ್ರವಾದ ಕೋಟೆಯೆಂದು ಈ ನಗರವನ್ನು ಬಲಪಡಿಸಿದನು. ಈ ರೀತಿ ಅನಾದಿಕಾಲದಿಂದಲೂ ರಾಜಧಾನಿಯಾದ ಈ ದುರ್ಗಕ್ಕೆ ಯಾವಕಾಲದಿಂದ ಕೋಟೆ–ಕೊತ್ತಲಗಳು ಕಟ್ಟಲ್ಪಟ್ಟವೆಂಬುದನ್ನು ಹೇಳಲು ಸಾಕಾದಷ್ಟು ಆಧಾರಗಳು ದೊರೆತಿರುವುದಿಲ್ಲ. ಆದರೂ ಕ್ರಿ. ಶ. ೧೧ನೆಯ ಶತಮಾನದಲ್ಲಿಯೆ ಇಲ್ಲಿ ಕೋಟೆಯು ನಿರ್ಮಾಣವಾಗಿತ್ತೆಂದು ಶಿಲಾಲೇಖನಗಳಿಂದ ವ್ಯಕ್ತವಾಗುವುದು. "ಮಹಾಮಂಡಲೇಶ್ವರನಾದ ಮಂಗಿಯೋಜಯ್ಯನೆಂಬ ಸಾಮಂತರಾಜನು ನೊಳಂಬವಾಡಿ ಎಪ್ಪತ್ತುರಾಜ್ಯವನ್ನು ಆಳುತ್ತಿದ್ದಾಗ, ಶಕ ವರ್ಷ–೯೯೫ ರಲ್ಲಿ (೧೦೭೩ A. D.) ನೊಳಂಬವಾಡಿ ತೀರ್ಥದ ಭೀಮೇಶ್ವರ, ಹಿಡಿಂಬೇಶ್ವರಾದಿಯಾಗಿ ಅಲ್ಲಿದ್ದ ಎಲ್ಲಾ ದೇವರುಗಳಿಗೂ, ಕೋಟೆಯಿಂ ಪಶ್ಚಿಮ ದಿಶಾವರದೊಳು ಬಿಟ್ಟಗದ್ದೆ" ಮುಂತಾಗಿ ಹೇಳಲ್ಪಟ್ಟಿರುವುದರಿಂದ, ಶಕ ೧೦ನೆಯ ಶತಮಾನದಲ್ಲಿಯೆ ಕೋಟೆಯು ನಿರ್ಮಾಣವಾಗಿತ್ತೆಂದು ವ್ಯಕ್ತವಾಗುವುದು.

ರಕ್ಕಸತಂಗಡಿಯ ಯುದ್ಧವಾದಮೇಲೆ ವಿಜಯನಗರ ರಾಜ್ಯವು ದುಸ್ಥಿತಿಗೆ ಬಂದಿತು. ೧೫೬೮ನೆಯ ಸಂವತ್ಸರದಲ್ಲಿ ಮತ್ತಿ ತಿಮ್ಮಣ್ಣನಾಯಕನು ಚಿತ್ರದುರ್ಗದ ಅಧಿಕಾರಿಯಾಗಿ, ವಿಜಯನಗರದ ಅರಸರಿಂದ ನೇಮಕನಾದನು. ಆಗ ಚಿತ್ರದುರ್ಗದ ಬೆಟ್ಟದಮೇಲೆ ಹಳೆಯ ಕೋಟೆಯು ಇತ್ತು. ಅದನ್ನು ಸಣ್ಣ ಸಣ್ಣ ಕಲ್ಲುಗಳಿಂದಲೂ, ಮಣ್ಣಿನ ಹೆಂಟೆಯಿಂದಲೂ ಕಟ್ಟಿದ್ದರೆಂದು ತಿಳಿದು ಬರುತ್ತದೆ. ತಿಮ್ಮಣ್ಣನಾಯಕನು ಶಿಥಿಲವಾಗಿದ್ದ ಕೋಟೆಯ ಗೋಡೆಗಳನ್ನು ಭದ್ರಪಡಿಸಿ, ನಾನಾಸ್ಥಳಗಳಿಂದ ಶಿಲ್ಪಶಾಸ್ತ್ರಜ್ಞರು, ಕಲ್ಲುಕುಟಿಗರ, ಕಾಮಾಟಿಗಳು ಮುಂತಾದವರನ್ನು ಬರಮಾಡಿಕೊಂಡು, ಇನ್ನೂ ವಿಸ್ತಾರವಾದ ಕೋಟೆಯನ್ನು ನಿರ್ಮಿಸಿದನು. ಅವನ ನಂತರ ಆಳಿದ ನಾಯಕರು, ಅವನ ಮೇಲ್ಪಂಕ್ತಿಯನ್ನನುಸರಿಸಿ, ಸಮಯ ದೊರೆಕಿದಾಗಲೆಲ್ಲಾ ಹಳೆಯ ಕೋಟೆಗಳನ್ನು ಕೆಡಹಿಸಿ, ಹೊಸಕೋಟೆಯ ಗೋಡೆಗಳನ್ನು ನಿರ್ಮಿಸುತ್ತಲೂ, ಹೊಸವಳಯಗಳ ಸುತ್ತಿನ ಕೋಟೆಗಳನ್ನು ಕಟ್ಟಿಸುತ್ತಲೂ ಬಂದರು. ಕೊನೆಕೊನೆಯ ಪಾಳೆಯಗಾರರ ಕಾಲದಲ್ಲಿ ಸೆರೆಯಾಗಿ ಸಿಕ್ಕಿದ್ದ ಫರಂಗಿಯವರ (ಫ್ರೆಂಚರು ಮತ್ತು ಇಂಗ್ಲಿಷರು) ಉಸ್ತುವಾರಿಯಲ್ಲಿ, ಕೊನೆಯ ಸುತ್ತಿನ ಕೆಲವು ಭಾಗಗಳು ಕಟ್ಟಲ್ಪಟ್ಟುವು.

ಸಪ್ತಗಿರಿಗಳನ್ನಾವರಿಸಿ ಬೃಹದಾಕಾರವಾಗಿ ನಿರ್ಮಿತವಾಗಿರುವ ಏಳುಸುತ್ತಿನ ಕೋಟೆಯ ಗೋಡೆಗಳಿಂದಲೂ; ಅವುಗಳ ಸುತ್ತಲೂ ಇರುವ ಆಳವಾದ ಕಂದಕಗಳಿಂದಲೂ; ಅಗಸೆ ಬಾಗಿಲು ಗುಪ್ತ ದ್ವಾರಗಳಿಂದಲೂ; ತುಪ್ಪ ಎಣ್ಣೆ ಆಹಾರ ಪದಾರ್ಥಗಳನ್ನು ಶೇಖರಿಸುವ ಕಲ್ಲುಕಣಜಗಳಿಂದಲೂ; ದುರ್ಗಾಭಿಮಾನಿ ದೇವತೆಗಳ ಗುಡಿಗಳಿಂದಲೂ ಶೋಭಾಯಮಾನವಾದ ಈ ಕೋಟೆಯು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಕ್ತವಾಗಿರುವ ಕೋಟೆಯ ವಿವರಣೆಯನ್ನು ಹೋಲುತ್ತದೆ. ಕ್ರಿ. ಶ. ೧೮ನೆಯ ಶತಮಾನದಲ್ಲಿದು ಭರತಖಂಡದಲ್ಲಿಯೆ ಬಲವಾದ ಕೋಟೆಯೆಂದು ಪರಿಗಣಿಸಲ್ಪಟ್ಟಿತ್ತು. ಹೈದರಾಲಿಯು ಈ ಕೋಟೆಯನ್ನು ನೋಡಿ, ಶ್ರೀರಂಗ ಪಟ್ಟಣದ ಕೋಟೆಗಿಂತಲೂ ಮಿಗಿಲಾದದ್ದು ಎಂದು ಆಶ್ಚರ್ಯಹೊಂದಿದನು. ಟಿಪ್ಪೂಸುಲ್ತಾನನು ಈ ಕೋಟೆಯನ್ನು ತನ್ನ ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಉಳ್ಳವನಾಗಿ, ಇಲ್ಲಿ ಒಂದು ಅರಮನೆಯನ್ನೂ, ಒಂದು ಮಸೀದೆಯನ್ನೂ ಕಟ್ಟಿದನಂತೆ. ಈ ನಗರಕ್ಕೆ 'ಫರೂಕಾಬಾದ್' ಎಂದು ಹೆಸರಿಟ್ಟು, ಒಂದು ಟಂಕಸಾಲೆಯನ್ನೂ ಏರ್ಪಡಿಸಿದ್ದನು. ಚಿತ್ರದುರ್ಗದ ಕೋಟೆಯನ್ನು ಮುತ್ತಿದಾಗ 'ಹೈದರಾಲಿಯ' ಸೈನ್ಯದಲ್ಲಿದ್ದ ಫ್ರೆಂಚ್ ಸರದಾರನಾದ ಲಾಲಿಯು ಈ ಕೋಟೆಯ ರಚನೆಯ ವಿಷಯದಲ್ಲಿ 'ತಾರೀಫ್'ಮಾಡಿ, ನವಾಬ ಹೈದರಾಲಿಗೆ ಈ ರೀತಿ ಹೇಳಿರುವನು. "ಜಹಪನಾ ಸಲಾಮು; ನಾವು ಇಷ್ಟು ದಿವಸ ಬಹಳ ಖಿಲ್ಲೆಗಳನ್ನು ನೋಡಿದೆವು; ನಾವು ಶಿಸ್ತು ಕಟ್ಟಿ ಹೊಡೆದದ್ದೆಲ್ಲಾ ವ್ಯರ್ಥವಾಯಿತು; ಖಿಲ್ಲೆಯ ತಾರೀಫು ಬಹಳ ಇದೆ; ತಗ್ಗಿಸಿ ಹೊಡೆದರೆ ಕಂದಕಕ್ಕೆ ತಗಲುತ್ತದೆ; ಸ್ವಲ್ಪ ಎತ್ತರಿಸಿ ಹೊಡೆದರೆ ಗುಡ್ಡಕ್ಕೆ ತಗಲುತ್ತದೆಯೇ ಹೊರತು ಖಿಲ್ಲೆಗೆ ತಗಲಿಲ್ಲ; ಖಿಲ್ಲೆ ಸಿಕಸ್ತು ಆಗಲಿಲ್ಲ" ಎಂದು ಹೇಳಿದ್ದರಿಂದ ಎಲ್ಲರೂ ಖಿಲ್ಲೆಯನ್ನು ಬಹಳ ತಾರೀಫುಮಾಡಿದರು.* ಇಂಥ ಬಲವಾದ ಕೋಟೆಯಿದ್ದುದರಿಂದಲೆ ಚಿತ್ರದುರ್ಗದ ಪಾಳೆಯಗಾರರು ಹೈದರಾಲಿಯನ್ನೂ ಮರಾಟೆಯವರನ್ನೂ ನಿಜಾಮ ಅಲಿಯನ್ನೂ ಎದುರಿಸಿ ಧೀರರಾಗಿ ಆಳಿದರು.

ಬಲವಾದ ತಳಹದಿಗಳ ಮೇಲೆ ಈ ಕೋಟೆಗಳು ನಿರ್ಮಿತವಾಗಿ ಇವೆ; ಕೋಟೆಯ ಗೋಡೆಗಳು ಉಳಿಯಿಂದ ಸುಂದರವಾಗಿ ಕೆತ್ತಿದ ದೊಡ್ಡ ಆಳತೆಯ ಕಲ್ಲುಗಳಿಂದ ಕಟ್ಟಲ್ಪಟ್ಟಿರುವುವು. ಒಂದೊಂದು ಸ್ಥಳದಲ್ಲಿ ೭ ಅಡಿ ಉದ್ದ, ೩ ಅಡಿ ಅಗಲ, ೩ ಅಡಿ ಎತ್ತರವಾದ ಕಲ್ಲುಗಳು ಉಪಯೋಗಿಸಲ್ಪಟ್ಟಿರುವುವು. ಸಾಧಾರಣವಾಗಿ

* ಚಿತ್ರದುರ್ಗದ ಕೈಬರಹದ ಬಖೈರಿನಿಂದ.

ಕೋಟೆಯು ೧೫ ಅಡಿ ಎತ್ತರವಾಗಿರುವುದು; ಕೆಲವೆಡೆಗಳಲ್ಲಿ ೪೦ ಅಡಿ ಎತ್ತರದ ವರೆಗೂ ಕಟ್ಟಲ್ಪಟ್ಟಿರುತ್ತದೆ. ಕಲ್ಲುಗಳು ಒಂದರ ಮೇಲೊಂದು ಬೆಲ್ಲದ ಅಚ್ಚುಗಳಂತೆ ಏರಿಸಲ್ಪಟ್ಟಿರುವುವು. ಗಾರೆಯಾಗಲಿ, ಮಣ್ಣಾಗಲಿ ಉಪಯೋಗಿಸಲ್ಪಟ್ಟಿಲ್ಲ. ಕೋಟೆಯ ಮೇಲೆ ಇಟ್ಟಿಗೆಗಾರೆಯಿಂದ ಕೈಪಿಡಿಯಂತೆ ೪ ಅಡಿಯಿಂದ ೬ ಅಡಿ ಎತ್ತರದವರೆಗೂ ಗೋಡೆಗಳು ಕಟ್ಟಲ್ಪಟ್ಟಿರುತ್ತವೆ. ಈ ಗೋಡೆಗಳ ಹಿಂಭಾಗದಲ್ಲಿ ಕೋಟೆಯ ಮೇಲೆಯೆ ಸೈನಿಕರು ಯುದ್ಧಸಾಮಗ್ರಿಗಳನ್ನು ತರುವುದಕ್ಕೂ, ಓಡಾಡುವುದಕ್ಕೂ ಸಾಕಾದಷ್ಟು ಅಗಲವಾದ ಸ್ಥಳಗಳಿರುತ್ತವೆ. ಕೋಟೆಯ ಗೋಡೆಯ ಮೇಲೆ ೩೪-೪೦ ಗಜಗಳ ಅಂತರಗಳಲ್ಲಿ ದುಂಡು ಚೌಕ, ಆರುಮೂಲೆ, ಎಂಟು ಮೂಲೆ ಮೊದಲಾದ ಆಕೃತಿಗಳಲ್ಲಿ ಬತೇರಿಗಳು ಕಟ್ಟಲ್ಪಟ್ಟಿರುತ್ತವೆ. ಈ ಬತೇರಿಗಳಲ್ಲಿ ಕಾವಲುಗಾರರು ಅಹೋರಾತ್ರಿಗಳಲ್ಲಿ ಮಳೆ, ಬಿಸಿಲು ಮತ್ತು ಗುಂಡಿನ ಏಟುಗಳ ಬಾಧೆಯಿಲ್ಲದಂತೆ ಕಾವಲಿರಲು ಅನುಕೂಲವಾದ ಕಾವಲುಗೂಡುಗಳು ಕಟ್ಟಲ್ಪಟ್ಟಿರುತ್ತವೆ. ಕೋಟೆಯ ಮೇಲೆ ಇರುವ ಇಟ್ಟಿಗೆ ಗೋಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳು ಬಿಡಲ್ಪಟ್ಟಿರುವುವು. ಶತ್ರುಗಳು ಕೋಟೆಯನ್ನು ಸಮೀಪಿಸಿದಾಗ, ಕೋಟೆಯಲ್ಲಿರುವವರಿಗೆ ಸ್ವಲ್ಪವೂ ಅಪಾಯವಿಲ್ಲದಂತೆ, ಶತ್ರುಗಳನ್ನು ಉದ್ದವಾದ ಕೋಳವೆಯ ಕೋವಿಗಳಿಂದ ಗುರಿಯಿಟ್ಟು ಹೊಡೆಯಲು ಈ ರಂಧ್ರಗಳು ಮಾಡಲ್ಪಟ್ಟಿರುತ್ತವೆ. ಮತ್ತು ಮೇಲ್ಭಾಗದಲ್ಲಿ ದೊಡ್ಡ ದೊಡ್ಡ ಫಿರಂಗಿಗಳನ್ನು ಏರಿಸಲು ದ್ವಾರಗಳು ಬಿಡಲ್ಪಟ್ಟಿರುವುವು. ಅಲ್ಲಲ್ಲಿ ಸೈನಿಕರು ಗುಪ್ತವಾಗಿ ಕಾದಿರಲು ಅನುಕೂಲವಾದ ಗುಹೆಗಳು ಕಟ್ಟಲ್ಪಟ್ಟಿರುವುವು. ಈ ಗುಹೆಗಳು ದೊಡ್ಡ ಬಂಡೆಗಳ ಕೆಳಗಡೆ ಇರುವುದರಿಂದ, ಈಗಿನ ಕಾಲದ ನವೀನ ಶಸ್ತ್ರಾಸ್ತ್ರಗಳಿಗೂ (ಬಾಂಬುಗಳಿಗೂ) ಜಗ್ಗದೆ, ವಿಮಾನಗಳಿಂದ ದಾಳಿ ನಡೆಯಿಸಿದರೂ ಹೆದರದೆ, ಅವಿತುಕೊಳ್ಳಲು ಅನುಕೂಲವಾಗಿರುವುವು. ಪ್ರತಿಯೊಂದು ಗಿರಿ, ಕೋಡುಗಲ್ಲು ಮತ್ತು ಅನುಕೂಲವಾದ ಇತರೆಡೆಗಳಲ್ಲೆಲ್ಲ (ಬತೇರಿಗಳು) ಕೊತ್ತಳಗಳು ನಿರ್ಮಿತವಾಗಿ, ಅದರಲ್ಲಿ ಯಾವಾಗಲು ಫಿರಂಗಿಗಳು ಏರಿಸಲ್ಪಟ್ಟಿರುತ್ತಿದ್ದುವ.

ಅಗಳುಗಳು:— ಹೊರಗಿನ ಮೂರು ಸುತ್ತಿನ ಕೋಟೆಗಳ ಪಕ್ಕದಲ್ಲಿಯೂ ಮತ್ತು ಅನುಕೂಲವಾದ ಇತರೆಡೆಗಳಲ್ಲಿಯೂ, ಆಳವಾದ ಅಗಳುಗಳು ಅಗೆಯಲ್ಪಟ್ಟಿರುವುವು. ಪಾಳೆಯಗಾರರು ಆ ಕಾಲದಲ್ಲಿ, ಈ ಅಗಳುಗಳಲ್ಲಿ ಯಾವಾಗಲೂ ನೀರು ತುಂಬಿರುವಂತೆ ಏರ್ಪಾಡು ಮಾಡಿದ್ದರು. ಶತ್ರುಗಳು ಈ ಅಗಳುಗಳನ್ನು ಈಜಿ ಬರಲು ಅಸಾಧ್ಯವಾಗಿರುವಂತೆ ಕಮಲದ ಬಳ್ಳಿಗಳನ್ನೂ, ಜೊಂಡು, ಅಂತರಗಂಗೆ ಮೊದಲಾದುವನ್ನೂ ಬೆಳೆಯಿಸಿದ್ದಲ್ಲದೆ ಹಾವು, ಮೊಸಳೆ ಮೊದಲಾದ ದುಷ್ಟಜಲಚರಗಳನ್ನು ಬಿಟ್ಟಿರುತ್ತಿದ್ದರಂತೆ. ಅಗಳನ್ನು ದಾಟಿ ಅಗಸೆಬಾಗಿಲ ಮೂಲಕ ಶತ್ರುಗಳು ಕೋಟೆಯನ್ನು ಪ್ರವೇಶಿಸದಂತೆ, ಲಾಳಕೋಟೆಯ ಹೆಬ್ಬಾಗಿಲ ಬಳಿ ಸರಗು ಸೇತುವೆಯೊಂದನ್ನು ಕಟ್ಟಿದ್ದರು. ಶತ್ರುಗಳು ಸಮೀಪಿಸಿದಾಗ ಈ ಸೇತುವೆಯನ್ನು ಕೋಟೆಯ ಕಡೆಗೆ ಎಳೆದುಕೊಳ್ಳುವಂತೆ ಮಾಡಿದ್ದ ಏರ್ಪಾಡಿನ ಗುರುತುಗಳು ಈಗಲೂ ಕಾಣಬರುತ್ತವೆ.

ಮಹಾದ್ವಾರಗಳು

ಕೋಟೆಯೊಳಕ್ಕೆ ಪ್ರವೇಶಮಾಡಲು ಪ್ರತಿಯೊಂದು ಸುತ್ತಿನ ಕೋಟೆಯಲ್ಲಿಯೂ ಮಹಾದ್ವಾರಗಳಿರುವುವು. ಈ ಕೋಟೆಯಲ್ಲಿ ಒಟ್ಟು ೧೯ ಅಗಸೆಬಾಗಿಲುಗಳೂ, ೩೮ ದಿಡ್ಡಿಯ ಬಾಗಿಲುಗಳೂ, ೩೫ ಕಳ್ಳಗಂಡಿಗಳೂ, ೪ ಗುಪ್ತದ್ವಾರಗಳೂ ಇದ್ದುವು. ಇವುಗಳಲ್ಲಿ ಅನೇಕ ನಾಶಮಾಡಲ್ಪಟ್ಟಿವೆ.

ಮಹಾದ್ವಾರಗಳಿಗೆ ಮರದಿಂದ ಮಾಡಲ್ಪಟ್ಟ— ಕಬ್ಬಿಣದ ತಗಡುಗಳನ್ನು ಹೊದ್ದಿಸಿದ— ಬಲವಾದ ತಾರುಗಳಿದ್ದುವು. ಕೋಟೆಯ ಸಮೀಪದಲ್ಲಿ ಶತ್ರುಗಳು ಕಾಣಿಸಿಕೊಂಡಾಗ ಈ ಕದಗಳನ್ನು ಹಾಕಿ, ಬಲವಾದ ಲಾಳಮುಂಡಿಗೆಗಳನ್ನು ಸರಿದು, ಗಧಾರಿಗಳಿಂದ ಕದಗಳನ್ನು ಭದ್ರಮಾಡುತ್ತಿದ್ದರು. ಹೊರಭಾಗದಿಂದ ಶತ್ರುಗಳು ಆನೆಗಳಿಂದ ಈ ಕದಗಳನ್ನು ನೂಕಿಸಲು ಅವಕಾಶವಿಲ್ಲದಂತೆ, ಮೊನೆಯಾದ ಉಕ್ಕಿನ ಮೊಳೆಗಳೂ, ಗೂಟಗಳೂ ಜೋಡಿಸಲ್ಪಟ್ಟಿರುತ್ತಿದ್ದುವು. ಗುಂಡಿನೇಟಿಗೂ ಜಗ್ಗುತ್ತಿರಲಿಲ್ಲ; ಅಷ್ಟು ಗಡುಸಾಗಿರುತ್ತಿದ್ದುವು.. ಈ ಹೆಬ್ಬಾಗಿಲಿನ ಕದಗಳು; ಇವುಗಳನ್ನು ಅತ್ತಿಯ ಮರದ ಹಲಗೆಗಳಿಂದ ಮಾಡುತ್ತಿದ್ದರಂತೆ.



ಪಾಳೆಯಗಾರರ ಸ್ಮಾರಕಗಳು

೧ ದುರ್ಗದ ಅಧಿದೈವತವಾದ ಏಕನಾಥೇಶ್ವರಿಯ ದೇವಸ್ಥಾನ.
೨ ಉಯ್ಯಾಲೆಯ ಕಂಬ.
೩ ದೀಪಮಾಲೆಯ ಕಂಬ.

ಹೊರಸುತ್ತಿನ ಕೋಟೆಯಲ್ಲಿ ನಾಲ್ಕುದಿಕ್ಕುಗಳಲ್ಲಿಯೂ ಮಹಾದ್ವಾರಗಳಿವೆ. ಪೂರ್ವದಿಕ್ಕಿನಲ್ಲಿರುವುದಕ್ಕೆ **ರಂಗಯ್ಯನ ಬಾಗಿಲು** (ಸಿರಾ ದರ್ವಾಜ ಎಂದು ಇನ್ನೊಂದು ಹೆಸರೂ ಉಂಟು) ಎಂದೂ, ಉತ್ತರದಿಕ್ಕಿನ ಮಹಾದ್ವಾರಕ್ಕೆ **ಸಿದ್ದಯ್ಯನ ಬಾಗಿಲು** (ಸಂತೇಬಾಗಿಲು ಮತ್ತು ಫತ್ತೇದರ್ವಾಜ ಎಂದರೆ ಜಯದ ಬಾಗಿಲು=Gate of Victory ಎಂಬ ಹೆಸರುಗಳೂ ಇವೆ) ಎಂದೂ, ಪಶ್ಚಿಮದಿಕ್ಕಿನಲ್ಲಿರುವುದಕ್ಕೆ **ಉಚ್ಚಂಗಿ ಬಾಗಿಲು** ಎಂದೂ, ಆಗ್ನೇಯದಿಕ್ಕಿನಲ್ಲಿರುವುದಕ್ಕೆ **ಲಾಲಕೋಟೆಯ ಬಾಗಿಲು** ಎಂದೂ ಹೆಸರುಗಳು ಇರುತ್ತವೆ.

ಹೊರಸುತ್ತಿನ ಕೋಟೆಯಲ್ಲಿ ಸಂತೇಬಾಗಿಲೇ ಸುಂದರವಾದ ಮತ್ತು ಬಲವಾದ ಹೆಬ್ಬಾಗಿಲಾಗಿತ್ತು. ಇದಕ್ಕೆ ಚಿತ್ರದಲ್ಲಿ ಕಾಣಿಸಿರುವಂತೆ ಎರಡು ಮಹಾದ್ವಾರಗಳಿದ್ದುವು. ನಗರದೊಳಗಿನಿಂದ ಉತ್ತರಾಭಿಮುಖವಾಗಿ ಮೊದಲನೆಯ ಬಾಗಿಲಿನಿಂದ ಹೊರಗೆ ಹೋಗಿ, ಪೂರ್ವಾಭಿಮುಖವಾಗಿ ತಿರುಗಿ, ಎರಡನೆಯ ದ್ವಾರದಿಂದ ಹೊರಕ್ಕೆ ಹೋಗುವಂತೆ ಏರ್ಪಾಟಿದ್ದಿತು. ವಿಸ್ತಾರ-



ವಾದ ಆಯಾಕಾರವಾದ (ದೀರ್ಘ ಚತುಷ್ಕೋಣದ) ಮಧ್ಯ ಪ್ರದೇಶವು, ವೀರಾಂಗಣವಾಗಿ ಉಪಯೋಗಿಸಲ್ಪಡುತ್ತಿತ್ತು. ಇಲ್ಲಿ ಜಟ್ಟಿಗಳ ಕಾಳಗ, ಮುಷ್ಟಿಯುದ್ಧ, ಟಗರುಕಾಳಗ, ಹುಂಜಗಳ ಕಾಳಗ, ಕತ್ತಿಯ ವರಸೆ, ಹುಲಿ–ಚಿರತೆ ಕರಡಿ ಮೊದಲಾದ ದುಷ್ಟ ಜಂತುಗಳೊಡನೆ ವೀರಕಾಳಗ, ಆನೆಯ ಕಾಳಗ ಮೊದಲಾದ ವೀರಾವೇಶದ ಆಟಗಳು ಆಡಲ್ಪಡುತ್ತಿದ್ದುವಂತೆ. ಪಾಳೆಯಗಾರರು, ಪರಿವಾರದವರು, ಸರದಾರರು, ಮೊದಲಾದ ಪ್ರೇಕ್ಷಕರು ಕೋಟೆಯ ಮೇಲ್ಭಾಗದಲ್ಲಿ ಕುಳಿತು ಆಟಗಳನ್ನು ನೋಡುತ್ತಿದ್ದರು. ಕೋಟೆಯ ಗೋಡೆಗಳೂ ಮತ್ತು ಅದರ ಮೇಲಿನ ಕೈಪಿಡಿಗಳೂ ಸೇರಿ ೩೫ ಅಡಿ ಎತ್ತರದ ಮೇಲೆ ಇರುವುದರಿಂದ, ರೇಗಿದ ಮೃಗಗಳಿಂದ ನೋಟಕರಿಗೆ ಯಾವ ಅಪಾಯವೂ ಇರುತ್ತಿರಲಿಲ್ಲ. ಈ ಮಹಾದ್ವಾರದ ಕೋಟೆಯ ಗೋಡೆಗಳ ಮೇಲೂ, ಕಲ್ಲುಕಂಭಗಳ ಮೇಲೂ ಚಿತ್ರಗಳು ಕೆತ್ತಲ್ಪಟ್ಟಿರುವುವು. ಇವುಗಳಲ್ಲಿ ದ್ವಾರಪಾಲಕರು, ವಿಹಾಸುಗಳು, ರಾವುತರು, ಗಣೇಶ ಮೊದಲಾದ ಚಿತ್ರಗಳು ಚೆನ್ನಾಗಿವೆ. ಮಹಾದ್ವಾರದ ಮೇಲುಭಾಗದಲ್ಲಿ ಕಲ್ಲಿನ ಎರಡು ಪುಟ್ಟ ಆನೆಗಳು, ಉಭಯ ಪಾರ್ಶ್ವದಲ್ಲಿ ನಿಲ್ಲಿಸಲ್ಪಟ್ಟಿವೆ. ಈ ಮಹಾದ್ವಾರದ ಒಳಭಾಗದಲ್ಲಿ ಇಕ್ಕೆಲಗಳಲ್ಲಿರುವ ಚಾವಡಿಗಳಲ್ಲಿ, ಈಗ ಸ್ಥಳೀಯ ಪೋಲೀಸು ಕಚೇರಿಯು ಇಡಲ್ಪಟ್ಟಿರುವುದು. ಇದರ ಎರಡನೆಯ ಬಾಗಿಲು ಈಗ ದೇವಸ್ಥಾನವಾಗಿ ಮಾರ್ಪಡಿಸಲ್ಪಟ್ಟಿರುವುದು. ಇಲ್ಲಿ ಲಕ್ಷ್ಮಿ ಮತ್ತು ನಾರಾಯಣ ದೇವರ ವಿಗ್ರಹಗಳು ಪ್ರತಿಷ್ಠಿಸಲ್ಪಟ್ಟಿವೆ. ಈ ಕೋಟೆಯ ಆವರಣದಲ್ಲಿ ಈಚೆಗೆ ಕಟ್ಟಿರುವ **ಸುವೃಷ್ಟಿ ಆಂಜನೇಯ** ದೇವಾಲಯವೂ, ಇದೇ ಕೋಟೆಯ ಉತ್ತರದಿಕ್ಕಿನ ಗೋಡೆಯಲ್ಲಿ **ಜೀನಿಹನುಮಂತರಾಯನ** ದೇವಾಲಯವೂ ಇರುವುವು.

ಎರಡನೆಯ ಸುತ್ತಿನ ಕೋಟೆಯ ಮಹಾದ್ವಾರಕ್ಕೆ **ಹಾರೆ ಬಾಗಿಲು** ಎಂದು ಹೆಸರು. ಈ ಬಾಗಿಲ ಬಳಿ ಹಾರೆ ಬಾಗಿಲು ಈಶ್ವರ ದೇವಸ್ಥಾನವಿರುತ್ತದೆ. ಈ ಅಗಸೆಯ ಬಾಗಿಲನ್ನು ಮುಚ್ಚಿ ಈಗಿನ ಪೌರಸಭೆಯವರು ತಮ್ಮ ಉಗ್ರಾಣವನ್ನಾಗಿ ಮಾಡಿಕೊಂಡಿರುತ್ತಾರೆ. ಮೂರನೆಯ ಸುತ್ತಿನ ಕೋಟೆಯ ಪೂರ್ವಭಾಗದ ಬಾಗಿಲಿಗೆ **ಕಾಮನ ಬಾಗಿಲು** ಎಂದು ಹೆಸರು. ಇದರ ಬಳಿ **ಕಾಮನ ಭಾವಿ** ಎಂಬ ಒಂದು ಕೊಳವಿರುವುದರಿಂದ, ಈ ಬಾಗಿಲಿಗೆ ಈ ಹೆಸರು ಬಂದಿರುತ್ತದೆ. ಮೇಲುದುರ್ಗವನ್ನೇರುವುದಕ್ಕೆ ಇದೇ ಪ್ರಥಮ ದ್ವಾರವಾಗಿರುತ್ತದೆ. ಇಲ್ಲಿಯ ಕೋಟೆಯ ಗೋಡೆಯ ಮೇಲೆ, ಆದಿಶೇಷ, ನಂದಿ, ವಿಶ್ವೇಶ್ವರ, ವೀರಭದ್ರ, ಉಮಾಮಹೇಶ್ವರ, ಕಮಲ, ಗಂಡಭೇರುಂಡ ಪಕ್ಷಿ, ವಿಹಾಸುಗಳು ಮೊದಲಾದ ವಿಗ್ರಹಗಳೂ ಚಿತ್ರಗಳೂ ಕೆತ್ತಲ್ಪಟ್ಟಿರುವುವು. ಈ ಕೋಟೆಯು ಬಹಳ ಸುಂದರವಾಗಿರುವುದು. ಈ ಅಗಸೆ ಬಾಗಿಲಿನ ಕಲ್ಲಿನ ಗೋಡೆಯನ್ನು ಕಲ್ಲಿನಿಂದ ಕುಟ್ಟಿದರೆ ಸಪ್ತಸ್ವರಗಳ ನಾದವು ಬರುವುದು. ಆದ್ದರಿಂದ ಇದಕ್ಕೆ **ಕಂಚಿನ ಬಾಗಿಲು** ಎಂದೂ ಹೆಸರಿರುವುದು. ನಾಲ್ಕನೆಯದಕ್ಕೆ **ಚಿಕ್ಕ ಅರಮನೆಯ ಬಾಗಿಲು** ಎಂದೂ, ಐದನೆಯದಕ್ಕೆ **ಟಾಕಿನ ಬಾಗಿಲು** ಎಂದೂ, ಆರನೆಯದಕ್ಕೆ **ಟೀಕಿನ ಬಾಗಿಲು** ಅಥವಾ **ಗಣೇಶನ ಬಾಗಿಲು** ಎಂದೂ ಹೆಸರುಗಳಿವೆ. ಮೇಲುದುರ್ಗದ ಮಹಾದ್ವಾರಗಳಲ್ಲಿ **ಆನೆಯ ಬಾಗಿಲು** ಬಹು ಸುಂದರವಾಗಿರುವುದು. ಈ ಬಾಗಿಲ ಕಂಭಗಳ ಮೇಲೂ ಗೋಡೆಗಳ ಮೇಲೂ, ಅನೇಕ ಗೊಂಬೆಗಳು ಕೆತ್ತಲ್ಪಟ್ಟಿರುವುವು. ಹುಲಿಯೊಡನೆ ಜಟ್ಟಿಯ ಕಾಳಗ, ಆನೆಯ ಕಾಳಗ, ಸವಾರ, ಸಿವಂಗಿ, ಮದ್ದಲೆಯ ನರ್ತಕ, ನರ್ತಕಿಯರು, ಕಾಳಿಂಗಮರ್ದನ, ಗಣೇಶ, ವೀರನೃತ್ಯ, ರಾವುತ, ಸೂರ್ಯಚಂದ್ರರು, ಯಾಳಿಶಾರ್ದೂಲ, ಗಜಲಕ್ಷ್ಮಿ ಮೊದಲಾದುವುಗಳಿರುವುವು. ಏಳನೆಯ ಬಾಗಿಲಿಗೆ **ಅಜ್ಜಿಯ ಬಾಗಿಲು** ಎಂದು ಹೆಸರು; ದುರ್ಗದ ಅಧಿಮಾಸಿದೇವತೆಯಾದ **ಏಕನಾಥೇಶ್ವರಿಯನ್ನು** ಅಜ್ಜಿ ಎಂದು ಕರೆಯುತ್ತಿದ್ದರು. ಈ ಸುತ್ತಿನ ಕೋಟೆಯಲ್ಲಿ ಆಕೆಯ ಗುಡಿ ಇರುವುದು. ಆದ್ದರಿಂದ ಈ ದ್ವಾರಕ್ಕೆ ಈ ಹೆಸರು ಬಂದಿರುತ್ತದೆ. ಇವುಗಳಲ್ಲದೆ **ಹಿಡಿಂಬೇಶ್ವರನ ಬಾಗಿಲು, ಒನಕೆಬಿಂಡಿ ಬಾಗಿಲು, ಗರುಡ ಆಂಜನೇಯನ ಬಾಗಿಲು** ಮುಂತಾದ ಬಾಗಿಲುಗಳಿರುವುವು.

ರಾತ್ರಿಯ ವೇಳೆಗಳಲ್ಲಿಯೂ, ಅಪಾಯ ಸಂಭವಿಸಿದಾಗಲೂ, ಅಗಸೆಬಾಗಿಲುಗಳ ಕದಗಳನ್ನು ಮುಚ್ಚಿ, ಬೀಗ ಮೊಹರು ಮಾಡುವುದಕ್ಕೆ ಬೀಗಮುದ್ರೆಯ ಇಲಾಖೆಯು ನೇಮಕವಾಗಿತ್ತು.

ದಿಡ್ಡಿಯ ಬಾಗಿಲುಗಳು

ಅಗಸೆಬಾಗಿಲುಗಳ ಪಕ್ಕದಲ್ಲಿಯೂ, ಕೋಟೆಯ ಅನೇಕ ಸ್ಥಳಗಳಲ್ಲಿಯೂ ಇರುವ ಸಣ್ಣ ಬಾಗಿಲುಗಳಿಗೆ ದಿಡ್ಡಿಯ ಬಾಗಿಲುಗಳೆಂದು ಹೆಸರು. ಹೆಬ್ಬಾಗಿಲುಗಳು ಹಾಕಲ್ಪಟ್ಟಾಗ ಶತ್ರುಗಳಿಗೆ ಗೋಚರವಾಗದಂತೆ ದುರ್ಗದ ಹೊರಗೆ ಇದ್ದವರು ಕೋಟೆಯೊಳಕ್ಕೆ ಪ್ರವೇಶಮಾಡಲಿಕ್ಕೂ, ಆವಶ್ಯಕವಾದಾಗ ಕೋಟೆಯಿಂದ ಹೊರಗೆ ಹೋಗುವುದಕ್ಕೂ ಈ ದಿಡ್ಡಿಯ ಬಾಗಿಲುಗಳು ಸಾಹಾಯ್ಯಕವಾಗಿರುತ್ತಿದ್ದುವು. ಇವುಗಳಲ್ಲದೆ ಕೋಟೆಯ ಹಲವೆಡೆಗಳಲ್ಲಿ ಚೋರಗಂಡಿಗಳೂ, ಗುಪ್ತದ್ವಾರಗಳೂ ಇರುತ್ತವೆ. ಕೋಟೆಯ ಮರ್ಮವನ್ನು ತಿಳಿದವರಿಗಲ್ಲದೆ ಇತರರಿಗೆ ಇವು ಗೋಚರವಾಗುವುದಿಲ್ಲ.

—o—

ಹಗಲ್ಗನಸು

ಶ್ರೀ. 'ಬಾಲಗೋಪಾಲ'

ಸಂಧ್ಯೆಯ ರವಿಯ ಕೆಂಗಿರಣಗಳು ಮನವ ಸೆಳೆವಂತಿದ್ದುವು. ರಜೆಯ ದಿನಗಳು ಸಮೀಪಿಸುತ್ತಿದ್ದುವಾದುದರಿಂದ ಓದುವಿಕೆಗೆ ಅಧಿಕ ಗಮನವೀಯಬೇಕಿದ್ದಿಲ್ಲ. ಮಾರುತನೂ ಸ್ವಾಗತಿಸುವಂತಿದ್ದನು. ಮೆಲ್ಲನೆ ನಗರದ ಸರಹದ್ದಿನ ಕಡೆಗೆ ಕಾಲಿಟ್ಟೆ. ಅಲ್ಲೊಂದು ದಿಣ್ಣೆಯ ಮೇಲೆ ಕುಳಿತುಕೊಂಡು ಸೃಷ್ಟಿಸೌಂದರ್ಯವನ್ನು ಅನುಭವಿಸಲಾರಂಭಿಸಿದೆ. ನಗರದಿಂದ ಹಿಂದಿರುಗುವವರನೀಕ್ಷಿಸುತ್ತಾ ಮನದಲ್ಲಿ ಏನನ್ನೋ ಯೋಚಿಸುತ್ತಿದ್ದೆ. ಕೊನೆಯಲ್ಲಿ ಹುಲ್ಲಹೊರೆಯೊಂದನೆತ್ತಿಕೊಂಡು ಬರುತ್ತಿರುವ ನಿರುಜವ್ವನದ ಸ್ತ್ರೀಯೊಬ್ಬಳನ್ನು ನೋಡಿದೆ. ನಸುನಗುತ್ತಾ, ಮೆಲ್ಲನೆ ಏನನ್ನೋ ಹಾಡುತ್ತ ಹಜ್ಜೆಯಿಡುತ್ತಿದ್ದಳಾಕೆ. ನನ್ನನ್ನಾಕೆಯೆಡೆ ಆಕರ್ಷಿಸಿದುದಾವುದೋ ಹೇಳಲಾರೆ; ಆದರೆ ಮರುಕ್ಷಣದಲ್ಲಿ ನಾನಾಕೆಯ ಬಳಿಯಲ್ಲಿದ್ದುದೇನೋ ನಿಜ.

"ನನ್ನ ಕೂಡೆ ಸ್ವಲ್ಪ ಮಾತನಾಡಲಾರೆಯೆ? ದಿನದ ಆಯಾಸ ಪರಿಹಾರವೂ ಆಗುವುದು, ನನ್ನ ಮನಕೆ ಆನಂದವಿಶ್ರಾಂತಿಯೂ ಆಗುವುದು" ಎಂದೆ ನಾನು.

"ನಿಮಗಾನಂದವೆ-? ವೃಥಾ ಪರಿಹಾಸ್ಯಮಾಡುವಿರೇಕೆ? ಕತ್ತಲಾಯಿತು" ಎಂದವಳೇ ಭರದಿಂದ ಸಾಗಿದಳಾಕೆ.

* * *

ಮರುದಿನ ಶಾಲೆಯ ಕೆಲಸಕ್ಕೆ ಗಮನವನ್ನೆ ಈಯಲಿಲ್ಲ; ಸಾಯಂಕಾಲದ ನಿರೀಕ್ಷಣೆಯಲ್ಲೇ ದಿನವನ್ನು ಕಳೆದೆ. ಸಂಜೆಯಾದೊಡನೆ ತ್ವರೆಯಾಗಿ ದಿಣ್ಣೆಯನ್ನೇರಿ 'ಆಕೆ'ಯ ಹಾದಿ ಕಾದು ಕುಳಿತೆ. ಸಮಯಕ್ಕೆ ಸರಿಯಾಗಿ ಆಕೆ ಬಂದಳು...... ಇನ್ನೊಮ್ಮೆ ಆಕೆಯೊಡನೆ ಮಾತನಾಡಿದೆ; ನನ್ನ ಬಳಿ ಕುಳಿತು ಸಲ್ಲಾಪಮಾಡೆಂದೆ; ನಿನ್ನನ್ನು ಎಂದಿಗೂ ಮರೆಯೆನೆಂದೆ. 'ದಗ್ಧಹೃದಯದ ದಾಹವನ್ನು ತಣಿಸಲಾರೆಯಾ?' ಎಂದು ಪ್ರಶ್ನಿಸಿದೆ.

ಆಕೆ ಒಂದು ಬಾರಿ ನಕ್ಕಳು ಮಾತ್ರ. "ನಿಮ್ಮೊಡನೆ ಹೇಗೆ ಮಾತನಾಡಲಿ? ಯಾರಾದರೂ ನೋಡಿದರೆ ಏನೆನ್ನುವರು? ನಾನು ಹೋಗುವೆ" ಎಂದಳು.

"ಇಲ್ಲ—ನನಗೇನೂ ಹುಚ್ಚು ಹಿಡಿದಿಲ್ಲ; ಚೆನ್ನಾಗಿರುವೆ! ನಿನ್ನನ್ನು ಅಗಲಲು ಮನವೊಪ್ಪದು" ಎಂದು ಹೇಳಿದೆ.

ಆಕೆ ಬಂದು ನನ್ನ ಕೂಡೆ ಕುಳಿತಳು; ಕೆಲಕಾಲ ನನ್ನೊಡನೆ ಮಾತನಾಡಿದಳು. ತನ್ನ ಚರಿತ್ರೆಯನ್ನು ಬಿಡಿಸಿ ಹೇಳಿದಳು. ಕೊನೆಗೆಂದಳು:

"ಇನ್ನೊಂದು ಸಮಯದಲ್ಲಾದರೆ ನನ್ನೊಡನೆ ಮಾತನಾಡುವಿರಾ? ಇಂದೇಕೆ ನನ್ನ ಕೂಡೆ ಈ ಪರಸಸಲ್ಲಾಪ?"

"ನಿನ್ನನ್ನೆಂದಾದರೂ ಮರೆತೇನೆ? ನನ್ನ ಹೃದಯಮಂದಿರದ ದೇವಿ ನೀನು!" ಎಂದೆ ನಾನು. ಮರುಕ್ಷಣದಲ್ಲಿ ಆಕೆ ನನ್ನನ್ನು ತೊರೆದು ಹೋಗಿದ್ದಳು. ನಾಲ್ಕಡಿ ದೂರ ಹೋಗಿ, ನನ್ನೆಡೆಗೆ ಮೋರೆ ತಿರುಹಿ ನಸುನಕ್ಕಂತೆ ತೋರಿದಳು.... ತಾರೆಗಳು ತಿಳಿಯಾದ ಆಗಸದಲ್ಲಿ ಮಿನುಗಹತ್ತಿದುವು ಬಲು ದುಃಖಿತವಾಗಿತ್ತು ನನ್ನ ಮನ ಅಂದು.

* * *

ಕಾಲಚಕ್ರ ಉರುಳಿತ್ತು. ಬೆಳಗಾಂವಿಯಲ್ಲೊರ್ವ ಸುಂದರ ತರುಣಿಯನ್ನು ನೋಡಿ ಆಕೆಯ ಪ್ರೇಮಪಾಶದಲ್ಲಿ ಬಿದ್ದೆ ನಾನು; ವಿವಾಹವೂ ಆಯಿತು, ಕೆಲದಿನಗಳ ಬಳಿಕ ಮಂಗಳೂರನ್ನು ಸೇರಿದೆವು.

ಒಂದು ದಿನ ನಾವು ಅಡ್ಡಾಡಲು ಹೋಗಿದ್ದೆವು; ನನ್ನಾಕೆ 'ಆ' ದಿಣ್ಣೆಯ ಕಡೆ ಹೋಗೋಣವೆಂದಳು. ನಾವಿಬ್ಬರೂ ಅಲ್ಲಿ ಕುಳಿತೆವು, ಐದಾರು ನಿಮಿಷಗಳ ಬಳಿಕ 'ಆಕೆ' ಬರುವುದನ್ನು ಕಂಡೆ ನಾನು. ಅದೇ ಹಜ್ಜೆ—ಅದೇ ನಿಲುವಿಕೆ! ಕಾಲದ ಕಾಠಿಣ್ಯವೇನೂ ಆಕೆಯ ಮೋರೆಯ ಮೇಲಿದ್ದಿಲ್ಲ. ನನ್ನನ್ನು ನೋಡಿ ಪರಿಹಾಸ್ಯದ ನಗುವೊಂದನ್ನು ನಕ್ಕಳು. ಹತ್ತಿರ ಬಂದು:

"ಈಕೆ ಯಾರು? ನಿಮ್ಮ ಕೂಡೆ ಕುಳಿತಿರುವಳೇಕೆ?" ಎಂದು ನನ್ನನ್ನು ಪ್ರಶ್ನಿಸಿದಳು. ನಾನು ನನ್ನಾಕೆಯೊಡನೆ "ಈ ಹಳ್ಳಿಯ ಜನರಿಗೆ ಮರ್ಯಾದೆಯೆಂದರೇನೆಂಬುದು ತಿಳಿಯದು. ಇನ್ನೆಲ್ಲಿಗಾದರೂ ಹೋಗೋಣ" ಎಂದು ಆ ಸ್ಥಳವನ್ನು ಬಿಟ್ಟೆದ್ದೆ.

"ಇಲ್ಲಿ ಯಾರಿರುವರು? ಸ್ವಪ್ನದಲ್ಲಿರುವಿರೇನು?" ನನ್ನಾಕೆಯ ಪ್ರಶ್ನೆ. ನಿಜವಾಗಿಯೂ, ಅದೊಂದು ಹಗಲ್ಗನಸಾಗಿತ್ತೆ—?

ಯುದ್ಧ ಸಮಸ್ಯೆಯೇ? ★ (ನಗೆಬರಹ)

ಯುದ್ಧವು ಜಗತ್ತಿಗೆ ತುಂಬಾ ಬೇಕಾದ ಮಾತು. ಯುದ್ಧದಿಂದ ಮಾನವನ ಮರಣದ ಬೆಲೆ ಹೆಚ್ಚುತ್ತದೆ. ಲೋಕದ ಜನಸಂಖ್ಯೆ ಒಂದು ಅಳತೆಗೆ ಬರುತ್ತದೆ. ಸಂತಾನ ನಿರ್ಬಂಧವನ್ನು ಸಾಂಪ್ರದಾಯಿಕರು ಒಪ್ಪರು; ಬೇಗನೆ ಸಾಯಲಿಕ್ಕೆ ಮುದುಕರು ಸಿದ್ಧರಾಗರು; ಎಂದಮೇಲೆ ಲೋಕದ ಮಿತಿಮೀರುತಿರುವ ಜನಸಂಖ್ಯೆಗೆ ಯುದ್ಧದ ಹೊರತು ತಡೆಯೊಡ್ಡುವ ಸಾಧನ ಯಾವುದು?

★

ಯುದ್ಧವು ಒಂದು ಸಮಸ್ಯೆಯೇ ಎಂಬುದು ಒಂದು ಸಮಸ್ಯೆ. ಕಾರಣ ಅದರ ಮೂಲವನ್ನೂ, ಅದರ ಧರ್ಮವನ್ನೂ, ಅದರ ರೀತಿಯನ್ನೂ ಯೋಚಿಸಿದರೆ ಅದು ಬದುಕಿನಷ್ಟೇ ಸಹಜವಾದ ಅವಸ್ಥೆಯೆಂದು ಕಾಣುವುದು. ಅದು ಸಮಸ್ಯೆಯೇ ಅಲ್ಲ. ಮನುಷ್ಯಕುಟುಂಬದ ಒಂದು ವಿಶೇಷವಾದ ಬೇನೆ. ಪ್ಲೇಗು, ಸನ್ನಿಪಾತ, ಕಾಲರಾಗಳಿಗಿಂತ ಸಹಜವಾದುದು. ಮಾನವ ಸಮಾಜಕ್ಕೆ ಅವಶ್ಯವಾದುದೂ ಎನಿಸುತ್ತದೆ. ಈ ಬರೆಹದಲ್ಲಿ ಅದರ ತತ್ತ್ವವಿಮರ್ಶೆಯನ್ನಷ್ಟೇ ಮಾಡುತ್ತೇನೆ.

ಹಿಂದಿನ ಕಾಲದ ಯುದ್ಧಗಳೇಕೆ ಆದುವು ಎಂದು ಲೆಕ್ಕ ಹುಡುಕುವುದಕ್ಕಿಂತ, ಇಂದಿನ ಯುದ್ಧಗಳು ಅಗತ್ಯವೆಯೇಕೆ ಎಂದು ವಿಚಾರಿಸುವುದು ಮುಖ್ಯ. ಒಂದೇ ಆಹಾರ ತಿಂದು ಮನುಷ್ಯನು ಹೇಗೆ ಬದುಕಲಾರನೋ, ಒಂದೇ ಕಾರಣದ ಮೇಲೆ ಹಾಗೆ ಯುದ್ಧವು ಬದುಕಲಾರದು. ಯುದ್ಧಕ್ಕೆ ಕಾರಣಗಳು ಬೇರೆಬೇರೆಯಾಗಿದ್ದರೆಯೆ ಸೊಗಸು. ಹುಟ್ಟು, ಸಾವು—ಇವೆರಡು ಮಾತ್ರ ವೈವಿಧ್ಯವಿಲ್ಲದ, ಬೇಸರದಾಯಕ ರೂಪವುಳ್ಳ ಚಿತ್ರಗಳು. ಬಾಳು, ಬೇನೆಗಳಲ್ಲಾದರೂ ನಾಗರಿಕರೆಂಬವರು ವೈವಿಧ್ಯ ಸಾಧಿಸದಿದ್ದರೆ ಸಂಸ್ಕೃತಿ ಎಲ್ಲಿಂದ ಬಂತು? ನಮ್ಮ ಅಜ್ಜನೋ, ಪಿಜ್ಜನೋ ಸತ್ತ ಕಾರಣದಿಂದಲೆ ನಾವು ಸಹ ಸಾಯಬೇಕೆ?

ತೀರ ಪೂರ್ವದಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನನ್ನು ನರಮಾಂಸಕ್ಕಾಗಿ

ಶ್ರೀ. ಕಾರಂತರು

ಕೊಂದು ತಿಂದಿರಬಹುದೆನ್ನುವ. ಅಲ್ಲಿ ಮನುಷ್ಯನಿಂದ ಮನುಷ್ಯನು ಸಾಯುತ್ತಾನೆ. ಇದೊಂದು ಗೌರವ. ಹುಲಿಯ ಬಾಯಿಗೆ ಬಿದ್ದು ಹೋಗುವಷ್ಟು ಹೇಯವಾದ ಸಾವಲ್ಲ ಅದು. ಈಗೀಗಲಂತು ಮನುಷ್ಯರು ಬೆಕ್ಟೀರಿಯಾದಂತಹ ಕುದ್ರ ಜೀವಿಗಳಿಂದ ಸಾಯುತ್ತಿರುವರೆಂದರೆ ಎಂಥ ನಿಂದ್ಯ ನೋಡಿ. ಮಾರಿಯಮ್ಮನಿಂದ ಸಾಯುತ್ತಿದ್ದವರು ಬೆಕ್ಟೀರಿಯಾದಿಂದ ಸಾಯಬೇಕೇ? ಅವನ್ನೆಲ್ಲ ನೋಡುವಾಗ ಯುದ್ಧದ ಮೂಲಕ ಸಾಯುವುದು ಮನುಷ್ಯನ ಘನತೆಗೆ ತಕ್ಕುದಾದುದು. ಚೆಲುವಿನದು. ಅಲ್ಪರಿಂದ ಮನುಷ್ಯನ ಮೇಲೆ ಹೇರಿಸಲ್ಪಟ್ಟುದಲ್ಲ.

ಹಿಂದಿನ ಕಾಲದ ಚಿತ್ರವನ್ನು ಎಣಿಸಿರಿ. ಆಗಿನ ದಿನಗಳಲ್ಲಿ ಮನುಷ್ಯನಿಗೆ ಹಿಡಿ ಕಾಳು; ಉಡಲು ಒಂದು ಮರದ ತೊಗಟೆಯಿದ್ದರೆ ಆಯಿತು. ಅಪಕ್ವಜೀವನ ಅವರದು. ಆಗ ಒಬ್ಬ ಮನುಷ್ಯನ ಕಂಚಿನ ಖಡ್ಗದಿಂದ ಇನ್ನೊಬ್ಬ ಸತ್ತರೆ ಅದು ಘನವಾಗಿ ಕಾಣಬಹುದು. ಮೊಗಲಯುಗವಾಗಲಿ, ವಿಜಯನಗರದ ದಿನಗಳಾಗಲಿ ವಿಶೇಷವಲ್ಲ— ಹೆಚ್ಚೆಂದರೆ ರತ್ನಖಚಿತ ಹಿಡಿಯುಳ್ಳ ಕಠಾರಿಯಿಂದ ಒಬ್ಬಿಬ್ಬರು ಸತ್ತಿರಬಹುದು. ಹೆಚ್ಚಿನವರು ಸತ್ತುದು ಕಬ್ಬಿಣ ಇಲ್ಲವೆ ಉಕ್ಕಿನ ಕತ್ತಿಯಿಂದ. ತೀರ ಅಗ್ಗದ ಸಾವಲ್ಲವೇ ಅದು? ಅದರ ಬದಲು ಒಂದು ಬಾಂಬಿಗೋ, ಟಾರ್ಪೆಡೋವಿಗೋ, ಮೆಶಿನ್‌ಗನ್ನಿಗೋ ಬಲಿಯಾಗಿ ಸತ್ತರೆ ಸಾವಿನ ಬೆಲೆ ಎಷ್ಟಕ್ಕೆ ಏರಿತು! ಕಳೆದ ಮಹಾಯುದ್ಧದಲ್ಲಿ ಮಡಿದವರ ಸಂಖ್ಯೆಯನ್ನು ಯುದ್ಧಕ್ಕಾದ ವೆಚ್ಚದಿಂದ ವಿಭಾಗಿಸಿ ನೋಡಿರಿ— ಆಗಿನ ಸಾವಿಗೆ ೧೦೦–೧೦೦೦ ಬೆಲೆ ಹೋದೀತು. ಇದು ಮನುಷ್ಯಜೀವನದ ಬೆಲೆಯನ್ನು ಏರಿಸಿದಂತಲ್ಲವೆ? ಬಾಳ್ವೆಯ ಪ್ರಮಿತಿ (Standard of living) ಏರಿಸಬೇಕೆನ್ನುವ ಜನರು ಸಾವಿನ ಪ್ರಮಿತಿಯನ್ನು (Standard of death) ಏರಿಸ

ಶ್ರೀ. ಕೋ. ಶಿ. ಕಾರಂತ

ಅತ್ಯಾಶ್ಚರ್ಯಕರವಾದ ಕನ್ನಡಿ

ಯಾವುದೇ ವಯಸ್ಸಿನವರಾದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ. ಕಳವು ಆಗಿರುವ ಸಾಮಾನು, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದ ಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟು ಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸ್ವರ್ಗಸ್ಥರಾದ ತಂದೆ-ತಾಯಿಗಳನ್ನು ಮತ್ತು ಆಪ್ತ ಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು.

ಬೆಲೆ ಬರಿ Rs. 2-8-0 ಮತ್ತು ಟಪಾಲು ಖರ್ಚು ಬೇರೆ. ಇದು ನಿಜವಲ್ಲವೆಂದು ಸಿದ್ಧ ಮಾಡಿ ತೋರಿಸಿಕೊಟ್ಟಲ್ಲಿ ಬೆಲೆ ವಾಪಸು. ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಸಿಕ್ಕುವ ಸ್ಥಳ:

American Mesmerism House,
P. B. No. 27 (J. M. D.) Amritsar (India).

ಬೇಡವೇ. ಘನವಾಗಿ ಬದುಕಿ, ಬಡವಾಗಿ ಸಾಯಬೇಕೆ?

ಈ ತನಕ ಸಾವಿನ ನೀತಿಯನ್ನು ಹೇಳಿದುದಾಯಿತು; ಈಗ ಸಾವಿನ ರೀತಿಯನ್ನು ಯೋಚಿಸುವ. ಮುಂದೆ ಸಾವಿನ ಧರ್ಮವನ್ನು ಕುರಿತು ಚರ್ಚಿಸಿ ಈ ಪ್ರಬಂಧ ಮುಗಿಸುವುದೇ ನನ್ನ ಉದ್ದೇಶ.

ಯುದ್ಧಕ್ಕೆ ಕಾರಣವೇನು? ಕಾರಣಗಳು ಬೇಕೇಬೇಕು. ಅದೂ ಬಲವಾದ ಕಾರಣಗಳೇ ಬೇಕು. ಆದರೆ ಒಂದು ಯುದ್ಧದ ಕಾರಣವನ್ನು ಯುದ್ಧಪೂರ್ವದಲ್ಲಿ ಚರ್ಚಿಸಬೇಕೇ? ಯುದ್ಧಕಾಲದಲ್ಲೋ ಅಥವಾ ಯುದ್ಧಾನಂತರವೇ?— ಇದು ಕಷ್ಟದ ಸಂಗತಿ. ಕಾರಣ ಈಗಿನ ಯುದ್ಧಗಳು ಹಿಂದಿನ ಯುದ್ಧಗಳಂತಲ್ಲ. ಹಿಂದಿನ ಯುದ್ಧಗಳು— ನಾರಿಗೋ, ನಗರಕ್ಕೋ, ರಾಜ್ಯಕ್ಕೋ, ಸೇಡಿಗೋ ಆದುವು; ನಾರಿ, ನಗರ, ರಾಜ್ಯ ಸಿಕ್ಕಲು ಕೊನೆಗೊಂಡುವು. ಸೇಡು ತೀರಲು ಮುಗಿದುವು. ಈಗಿನ ಯುದ್ಧಕಾರಣಗಳು ಅಷ್ಟು ಸರಳವೂ ಅಲ್ಲ. ಯುದ್ಧಕಾರಣದಲ್ಲೂ 'ಅಭಿವೃದ್ಧಿ ಬೆಳವಣಿಗೆಗಳು' ಇವೆ. ಬೆಳವಣಿಗೆ ಜೀವನದ ಲಕ್ಷಣವು. ಯುದ್ಧವು ಜೀವನದ ಚಿಹ್ನೆ. ಹಾಗಿರಲು ಯುದ್ಧಕಾರಣಗಳು ಸಹ ಈ ಅಭಿವೃದ್ಧಿಯ ಲಕ್ಷಣವನ್ನು ತೋರಿಸಲೇಬೇಕು. ಕೆಲವು ಕಾರಣಗಳಿಂದ ಯುದ್ಧವೊಳಿತು, ಇನ್ನು ಕೆಲವು ಕಾರಣಗಳಿಂದ ಅದು ನಡೆದು, ಬೇರೆಯೇ ಕೆಲವು ಕಾರಣಗಳಿಂದ ಅದು ಕೊನೆಗೊಂಡರೆ ಅಗೊಂದು ನಾಗರಿಕತೆಯ ಸಂಸ್ಕಾರವಾಯಿತು.

ಉದಾ:— ಅನಾಥ ರಕ್ಷಣೆಗೆಂದು ಯುದ್ಧ ತೊಡಗಿ, ವಿಚಾರಸ್ವಾತಂತ್ರ್ಯಕ್ಕಾಗಿ ಯುದ್ಧ ನಡೆದು, ವಾಣಿಜ್ಯ ವಿಸ್ತಾರಕ್ಕಾಗಿ ಅದು ಕೊನೆಗಾಣಬಹುದು. 'ಈಗ ನಡೆಯುತ್ತಿರುವ ಯುದ್ಧದ ಕಾರಣಗಳನ್ನು ಸ್ಪಷ್ಟಪಡಿಸಿರಿ' ಎಂದು ಇಂಗ್ಲೆಂಡಿನಲ್ಲೂ ಕೇಳತೊಡಗಿದ್ದಾರೆ. ಹೀಗೆ ಕೇಳುವುದು ಅಜ್ಞಾನ. ಈಗಿನ ಯುದ್ಧಕಾರಣವೇ ಮುಂದಕ್ಕೂ ಉಳಿದೀತೆ, ಸಾಕಾದೀತೆ? ಹಿಟ್ಲರ ನೀತಿಯನ್ನು ನೋಡಿದರೆ ತಿಳಿಯದೇ? ಕಾರಣ ಬದಲಿಸುತ್ತಲೇ ಒಂದು ಯುದ್ಧಕ್ಕೆ ಪ್ರಾರಂಭಮಾಡಿಕೊಟ್ಟನು. ಅದನ್ನು ಬದಲಿಸುತ್ತ ಬದಲಿಸುತ್ತಲೇ ಯುದ್ಧ ಅವನು ಮುಂದುವರಿಸುತ್ತಿದ್ದಾನೆ. ಆದುದರಿಂದ ಕಾರಣವಿಲ್ಲದೆ ಯುದ್ಧವಾಗದೆಂದು ಒಪ್ಪಿ, ಸಕಾರಣವಾಗಿ ಅದು ನಡೆಯುತ್ತಿದೆಯೆಂದು ನಂಬಿ, ನಿಷ್ಕಾರಣವಾಗಿ ಕೊನೆಗೊಳ್ಳಲಿಲ್ಲವೆಂದು ತಿಳಿದು—ಎಲ್ಲ ಮುಗಿದ ಬಳಿಕ, ಕೊನೆಗೆ ಉಳಿಯುವ ಕಾರಣವೇ ಮುಖ್ಯ ಕಾರಣ—ಎಂದು ತಿಳಿಯುವುದು ಯೋಗ್ಯ ವಿಚಾರಸರಣಿ.

ಈ ದಿನ ಯುರೋಪನ್ನಾಗಲಿ, ಏಸ್ಯವನ್ನಾಗಲಿ ಕಾಡುತ್ತಿರುವ ಯುದ್ಧಗಳಿಗೆ "**ಐಡಿಯಾಲಜಿಗಳೇ**" **ಕಾರಣ**. ಲೇಡಿಯೋಲಜಿಯಂತೆಯೇ ಇದು ಮರಣಕ್ಕೊಂದು ಚಿಕಿತ್ಸಾಶಾಸ್ತ್ರ. ಚಿಕಿತ್ಸಾಶಾಸ್ತ್ರವೆನ್ನುವುದಕ್ಕಿಂತ ಪ್ರಯೋಗಶಾಸ್ತ್ರ ಎನ್ನುವುದು ಲೇಸು. ಅದರ ಸ್ಥೂಲರೂಪವನ್ನಿಷ್ಟೆ ವಿಚಾರಿಸುವ:

ಯುರೋಪಿನ, ಇಲ್ಲವೆ ಪ್ರಪಂಚದ ಎಲ್ಲ ಮುಖ್ಯ ಜನಾಂಗಗಳಿಗೂ ಒಂದೊಂದು ಮುಖ್ಯ ಐಡಿಯಾಲಜಿ ಬಾಧಿಸುತ್ತಿದೆ. ಅವುಗಳಲ್ಲಿ ತೀರ ಮುಖ್ಯವಾದುವು **ಸಾಮ್ರಾಜ್ಯವಾದ** (imperialism), **ಧನಸತ್ತಾವಾದ** (capitalism) **ಸಮತಾವಾದ** (socialism), **ಫಾಸಿಸ್ಮ** (fascism). ಅವುಗಳ ಮುಖ್ಯ ಧೋರಣೆ ಹೀಗಿದೆ:—

'ಬುದ್ಧಿ ಯಾರಿಗೂ ಇರಲಿ ಇಲ್ಲದಿರಲಿ— ಹಣ, ರಾಜ್ಯ ಎರಡೂ ತಮಗಿರಲಿ' ಎನ್ನುವುದು ಸಾಮ್ರಾಜ್ಯವಾದ.

'ಬುದ್ಧಿ ರಾಜ್ಯಗಳು ಯಾರಿಗಿದ್ದರೂ ಸರಿಯೆ—ಹಣ ನಮಗಿರಲಿ' ಎಂಬುದು ಧನಸತ್ತಾವಾದ.

'ಬುದ್ಧಿಯ ಯಾವತ್ತು ಹಕ್ಕು ಮುಖಂಡನಿಗಿದ್ದು, ಉಪವಾಸಕ್ಕೆ ಸಮನಾದ ಹಕ್ಕು ಪ್ರಜೆಗೆ' ಇರಬೇಕೆಂಬುದು ಸಮತಾವಾದ.

ಬದುಕಿನ ಹಕ್ಕು ಯಾರಿಗೆ ಇಲ್ಲದೆ ಹೋದರೂ 'ಫಾಸಿಗೆ' ಹೋಗುವ ಹಕ್ಕು ತಮ್ಮ ದೇಶದ ಪ್ರತಿಯೊಬ್ಬನಿಗೂ ಇರಬೇಕೆಂಬುದು ಫಾಸಿಸ್ಮನ ತತ್ತ್ವ.

ಮೊದಲಿನ ಎರಡು ವರ್ಗಗಳ ಮರಿ—**ಡೆಮಾಕ್ರಸಿ**, (democracy); ಎರಡನೆಯ ಎರಡು ವರ್ಗಗಳ ಮರಿ **ಸ್ಟೆಲಿನೋ-**



ಕ್ರೈಸಿ, ಹಿಟ್ಲರೊ ಕ್ರೈಸಿಗಳು. ಈ ಮೂರು ಕ್ರೈಸಿಗಳು ಮೇಳಿಸ ಐಡಿಯಾಲೊಜಿಗಳ ಕಾರ್ಯರೂಪಗಳು. ಅವಸ್ನು ಕ್ಷುಲ್ಲಕ ಬದುಕಿನ ತತ್ತ್ವಗಳು ಎಸ್ನುವ ಒದಲು 'ಅಮೋಘ ಸಾವಿನ ಸಂವಿಧಾನಗಳು' ಎನ್ನುವುದು ವಾಸಿ. 'ಸಾವು ಎಲ್ಲರಿಗೂ ಸಮ' ಎಂಬುದೇ ಡೆಮಾಕ್ರೆಸಿ: 'ತನಗಿಲ್ಲದ ಬದುಕು ಪರರಿಗೆ ಬೇಡ' ಎನ್ನುವುದು ಹಿಟ್ಲರೊಕ್ರೈಸಿ; 'ಸಾವಿಗೂ ಬದುಕಿಗೂ ವ್ಯತ್ಯಾಸವಿರಕೂಡದು' ಎನ್ನುವುದು ಸ್ಟಾಲಿನೊಕ್ರೈಸಿ. ಇಂದು ಯುದ್ಧ ತೊಡಗುವ ವೇಳೆ ಮುಖ್ಯ ರಾಷ್ಟ್ರಗಳಲ್ಲಿ ನಡೆದ ರೀತಿಗಳು ಇವನ್ನೇ ಪುಷ್ಟೀಕರಿಸುವುವು. ಯುದ್ಧವು 'ಸಾವಿನ ಕಡೆಗೊಂದು ಹಾದಿ' ಎಂದು ಒಪ್ಪುವಿರಾದರೆ ಈ ವಿಷಯದಲ್ಲಿ ಡೆಮಾಕ್ರೆಟಿಕ್ ನಾಡುಗಳವರು ಏಕಕಂಠದಿಂದ ಅದನ್ನು ಒಪ್ಪಿರುತ್ತಾರೆ. ಜರ್ಮನಿಯಲ್ಲಿ ಹಿಟ್ಲರನು ಸಾಯುವ ಅಧಿಕಾರವನ್ನು ಜನರಿಗೆ ಕೊಡದೆ 'ತನ್ನ ಇಚ್ಛೆಗೆ ಸರಿಯಾಗಿ ಸಾಯಿರಿ' ಎಂದಿದ್ದಾನೆ. ಸ್ಟಾಲಿನನು 'ನಾನು ಹೇಳುವ ತನಕ ಯಾರೂ ಸಾಯಬಾರದು'- ಎಂದಿದ್ದಾನೆ.

ಹಾಗಿದ್ದರೆ ಫಾಸಿಸ್ಟ್ ಮುಸೋಲಿನಿ ಮೌನತಾಳಿರುವನೇಕೆ- ಎಂಬುದು ವಿಚಾರಣೀಯ. ಇದೇ ನಾಜಿಗಳಿಗೂ ಫಾಸಿಸ್ಟರಿಗೂ ಇರುವ ಮುಖ್ಯ ವ್ಯತ್ಯಾಸ. ಜರ್ಮನ್ ಸೈನಿಕರು ಸತ್ತ ಮೇಲೆ ಹೆದರಲು ತರಬೇತಾದವರು. ಇಟಲಿಯಲ್ಲಿ ಹೆದರಿ ಸಾಯಲು ತರಬೇತಾದವರು. ಈ ವ್ಯತ್ಯಾಸದಿಂದ ಮುಸೋಲಿನಿಯು ಇನ್ನೂ ಯುದ್ಧಕ್ಕೆ ಕೈಹಾಕಿಲ್ಲ.

ಯುದ್ಧಪೂರ್ವದಲ್ಲಿ ನಮಗೆ ಈ ರೀತಿಯ ಐಡಿಯಾಲಜಿಗಳು ಕಾಣಸಿಗುವುವು. ಇವು ಪ್ರಗತಿಗೊಂಡು, ಯುದ್ಧಾಂತ್ಯದ ವೇಳೆ ಸಾಕಷ್ಟು ಮಾರ್ಪಾಟಗೊಂಡಾವೆಂದು ನಾನು ನಂಬುತ್ತೇನೆ.

ಈಗ **ಯುದ್ಧಧರ್ಮವಿಚಾರ**: ಈಗಿನ ಯುದ್ಧಧರ್ಮಬೇರೆ; ಹಿಂದಿನ ಧರ್ಮಯುದ್ಧ ಬೇರೆ. 'ಧರ್ಮ' (ಮುಫತ್) ಯುದ್ಧ ಅಗ್ಗವಾದುದು. ಈಗಿನ ಯುದ್ಧದ ಕಿಮ್ಮತ್ತು ಅದಕ್ಕೆ ಎಂದೂ ಬರಲಾರದು. ಇನ್ನು ಇನ್ನು ಧರ್ಮಯುದ್ಧಗಳೆಂಬುವು ಅಸಾಧ್ಯವೇ ಸರಿ.

'ಯುದ್ಧಧರ್ಮವೇನು?' ಎಂಬ ಪ್ರಶ್ನೆಗೆ ಎಲ್ಲರೂ ಒಪ್ಪುವ ಒಂದು ಉತ್ತರವೆಂದರೆ ಪ್ರಪಂಚದ ಜನತೆಯನ್ನು ಮಿತಪಡಿಸುವುದು. ಹಿಂದಿನ ಕಾಲದಲ್ಲಿ ಕಳ್ಳಕಾಕರೂ ಸಾಂಕ್ರಾಮಿಕ ಬೇನೆಗಳೂ, ಚಿಕ್ಕಪುಟ್ಟ ಯುದ್ಧಗಳೂ ಈ ಕೆಲಸವನ್ನು ಮಾಡುತ್ತಿದ್ದುವು. ನಮ್ಮ ದೇಶದಲ್ಲಿ ಈ ಮಹಾ ಕೆಲಸಕ್ಕೆ ಕ್ಷಾಮಗಳೂ ಸಹಕಾರಿಯಾಗಿದ್ದುವು. ಆದರೆ ಮುಂದುವರಿದ ದೇಶಗಳಲ್ಲಿ ಇಂಥ ಅನಾಗರಿಕ ಸ್ಥಿತಿ ತಲೆಯೆತ್ತಲಾರದು. ವೈದ್ಯಕೀಯ ವಿದ್ಯೆ ಮುಂದುವರಿದು ಸಾಂಕ್ರಾಮಿಕ ರೋಗಗಳು ತಲೆತಗ್ಗಿಸಿವೆ. ಹಾಗಿರಲು- ಜನಸಂಖ್ಯೆ ಮಿತಪಡಿಸುವ ಹಾದಿ ಯಾವುದು?

ಮೇರಿ ಸ್ಟೋಪ್ಸ್‌ನಂಥವರು 'ಮಿತ-ಸಂತತಿ' ಎಂದು ಸಾರುತ್ತಾರೆ. ಇದು ಅನೀತಿಯೆಂದು ಮಹಾತ್ಮಾ ಗಾಂಧಿಯವರೂ, ಯಾವತ್ತು ರೋಮನ್ ಕೆಥೋಲಿಕ್ ಜಗತ್ತೂ ಸಾರುತ್ತಿದೆ. ಆದುದರಿಂದ ಸ್ಟೋಪ್ಸ್‌ಳ ಸಂದೇಶ ಬೇರೂರಿದಂತೆ ಕಾಣದು. ಜಗತ್ತಿನ ಧಾವಿಸುವ ಜನಸಂಖ್ಯೆಯನ್ನು ಬಿಗಿಹಿಡಿಯಲು, ಮನುಷ್ಯನ ಕೈಯಲ್ಲೇ ಇರುವ ಬಲವಾದ ಲಗಾಮು ಯುದ್ಧ. ಮಿತಜನನ- ಮಿತಬಾಳ್ವೆ- ಮಿತಮರಣ. ಈ ಮೂರರಲ್ಲಿ ಮಿತಜನನಕ್ಕೆ ಸಂಪ್ರದಾಯವಾದಿಗಳು ಒಪ್ಪರು. ಮಿತಮರಣ ಮುದುಕರು ಒಪ್ಪದ ಮಾತು. ಮಿತಬಾಳ್ವೆ ಉಳಿದ ಒಂದೇ ಹಾದಿ. ಆದುದರಿಂದಲೆ ಯುದ್ಧವು, ೧೮-೪೦ ಪ್ರಾಯದ ಜನಗಳ ಸಂಖ್ಯೆಯನ್ನು ಮಿತಪಡಿಸುವುದು ಅವಶ್ಯವಾಯಿತು.

ಯುದ್ಧವು ಎಲ್ಲ ಮತಗಳಿಗೂ, ಧರ್ಮಗಳಿಗೂ ಸಮಂಜಸವಾದುದು. ಮುಸಲ್ಮಾನ ಧರ್ಮವು ಪ್ರಚುರವಾದ ಬಗೆ, ಕ್ರಿಸ್ತ ಕ್ರುಸೇಡುಗಳು ನಡೆದ ರೀತಿ, ಇತ್ತ ಚಾತುರ್ವರ್ಣಗಳಲ್ಲಿ ಎರಡನೆಯದಾದ ಕ್ಷತ್ರಿಯ ಕುಲದ ಹೇತು—ಇವೆಲ್ಲ ಯುದ್ಧದ ಕಡೆಗೆ ಇರುವ ಧಾರ್ಮಿಕ ಬೆಂಬಲ ತೋರಿಸುತ್ತವೆ.

ಈ ಎಲ್ಲ ಸಂಗತಿಗಳನ್ನು ಎಣಿಸಹೋದರೆ ಯುದ್ಧವು ತನ್ನ ರೀತಿಯಲ್ಲಾಗಲಿ, ನೀತಿಯಲ್ಲಾಗಲಿ, ಪ್ರಗತಿಪರವಾದ ಮನುಷ್ಯ-ಸಂಸ್ಕೃತಿ ಎಂದು ಒಪ್ಪಬೇಕಾಗಿದೆ.

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೬ ಆಣೆಗೆ ಒಂದು ಸೆಟ್ಟು.



೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೬ ಆಣೆ.

ಬರಗಾಲದ ಮಳೆ*

ಶ್ರೀ. ಎಸ್. ಎಸ್. ಹಿರೇಮಠ

೧

ಮಳೆಬಂತು ಮಳೆಬಂತು, ಬಂತು, ಬಂತು!
ಕಳೆದು ಹೋಗಿರುವ ಸೊಗವನ್ನೆಳೆದು ತಂತು!
ಕಳಕೊಂಡು ನೇಸರನು ನಳಿನ ಕಳೆಗೆಡುವಂತೆ
ಕಳೆಯಡಗಿ ಹೋಗಿರ್ದ ಇಳೆಗೆ ಸಿರಿ ತಂತೋ!

೨

ಎದೆಯ ಸೀಳುವ ಆರ್ತರಳು ಕೇಳಿ ಬಂತೋ,
ಮುದವುಡುಗಿ ತೊಳಲುವಾ ಮನ ನೋಡಿ ಬಂತೋ,
ಎದೆಗುಂದಿ ಮನೆಗಳಲಿ ಮಕ್ಕಳೊಂದಿಗೆ ಬಿದ್ದು
ಕುದಿವ ಕರುಳಿಗೆ ತಂಪನೆರೆಯಲಿಕೆ ಬಂತೋ!

೩

ಕುಗ್ಗಿ ಅಳುತಿಹ ಕೂಸುಗಳ ಸ್ವರಕೆ ಬಂತೋ,
ಮುಗ್ಗಿಬೀಳುವ ಪಶುಗಳಾಶ್ರಯಕೆ ಬಂತೋ,
ಬಗ್ಗಿ ಬಿದ್ದಿಹ ಸಸಿಯನೆಬ್ಬಿಸಲು ಬಂತೋ,
ತಗ್ಗಿ ಹೋಗಿಹ ಜಗದ ಸ್ವರವೆತ್ತ ಬಂತೋ!

೪

ಧನಿಕ ದೀನರ ಜಗಳವಡಗಿಸಲು ಬಂತೋ,
ಮನೆಮನೆಯ ಸಾವುಗಳನುಡುಗಿಸಲು ಬಂತೋ,
ತನುಜಾತರಳುವ ದನಿಗನುದಿನವು ಕುದಿಯುವಾ
ಜನನಿಯರ ಮನಗಳನು ಸಂತವಿಡಬಂತೋ!

೫

ಉಪವಾಸ ವ್ರತಕೊಲಿದು ಅಭಯಕೊಡ ಬಂತೋ,
ತಪನಿ ಸವೆಯುವ ಜನಕೆ ಫಲವೀಯೆ ಬಂತೋ,
ಜಪ-ಯಜ್ಞ-ಬಲಿಯ ಬಲುಮೆಗೆ ತಾನೆ ಬಂತೋ,
ಅಪರಿಮಿತ ಜೀವಿಗಳ ಮೊರೆಕೇಳಿ ಬಂತೋ!

೬

ಜನರ ಬಿಸಿಯುಸಿರೆಲ್ಲ ಮೋಡಗಳ ರೂಪಾಯ್ತೊ,
ಕ್ಷಣಕ್ಷಣವು ಕಿರುಚುತಿಹ ಧ್ವನಿಯು ಗುಡುಗಾಯ್ತೊ!
ಜನರನಗಲಿದ ತೇಜವೇ ಕೋಲುಮಿಂಚಾಯ್ತೊ,
ಧ್ವನಿಗೈಯುತೆತ್ತಲೂ ಮಳೆಯೆ ಮಳೆಯಾಯ್ತೊ!

೭

ಶೋಕಮೇಘವು ಕರಗಿ ಸಂತೋಷವಾಯ್ತು,
ನಾಕದಾ ಅಮೃತವನೆ ಹನಿಹನಿಗೆ ತಂತು!
ಏಕೈಕ ಚಿಂತೆಯಲಿ ಬಾಯ್ತೆಡುತ ಬಿದ್ದಿರುವ,
ಲೋಕಕೆಲ್ಲಾ ನೀಡಲೆಂದು ಮಳೆಬಂತೋ!

೮

ನೋಡಿರೈ ಸಂತೋಷಸೂರ್ಯ ಮಂಡಲವ
ದೂಡಿಹುದು ದುಃಖತುಂಬಿದ ಕಾಲತಮವ!
ನೋಡಿದೆಡೆಯೆಲ್ಲ ಸಂತಸದ ಸರಿವುಗಳು;
ಓಡುತ್ತಲಿಹವಹಹ ಸುಖದ ಹೊನಲುಗಳು!

೯

ಮಳೆಬಂತು ಮಳೆಬಂತು, ಬಂತು, ಬಂತು,
ಕಳೆದು ಹೋಗಿರ್ದ ಸೊಗವನ್ನೆಳೆದು ತಂತು!
ಕಳಕೊಂಡು ನೇಸರನು ನಳಿನ ಕಳೆಗೆಡುವಂತೆ
ಕಳೆಯಡಗಿ ಹೋಗಿರ್ದ ಇಳೆಗೆ ಸಿರಿ ತಂತೋ!

* ವಿಜಾಪುರ ಜಿಲ್ಲೆಯ ಬೀಳಗಿಯ ಎಳೆಯರ ಗುಂಪಿನವರು ಹೊರಡಿಸುವ 'ವಸುಂಧರಾ' ಎಂಬ ಕೈಬರೆಹದ ಪತ್ರಿಕೆಯೊಳಗಿಂದ ಆಯ್ದುದಿದು.

—ಸಂ. ಜಯಂತಿ

ಕಿರುಗತೆಯೊಂದು *

★ ಬಾಲಕ

★

ಶ್ರೀಮಾನ್ ಎನ್. ಕೃಷ್ಣಸ್ವಾಮಿ, ಸೀನಿಯರ್ ಬಿ.ಎಸ್‌ಸಿ.
ಮಹಾರಾಜರವರ ಕಾಲೇಜು, ಮೈಸೂರು

ಅವತರಣಿಕೆ

ಹಸಿವೆಯ ಶೂಲಿ ಹುಡುಗನ ಮೈಯ ಗಾಯವನ್ನು ಮರೆಯಿಸಿಯೂ ಲಾಗಹೊಡೆಯಲು ಹಚ್ಚಿತು. ಜಾತಿದ್ವೇಷದ ತೆರೆಯು ಮಾನವನ ಅಂತಃಕರಣದ ಕಣ್ಣುಗಳನ್ನು ಮರೆಮಾಡಿರುವುದು. ಎಂತಲೆ ಆ ಹುಡುಗನ ಹಸಿವಿನ ಸಂಕಟ ಮಿಕ್ಕವರಿಗೆಲ್ಲ ನಗೆಯಾಟವಾಗಿ ಪರಿಣಮಿಸಿತು.

★

ಈ ಕತೆಯನ್ನು ಹೇಳುವುದು ಬಹು ಕಷ್ಟ; ಯಾಕೆಂದರೆ ಇದು ಅಷ್ಟು ಸರಳವಾಗಿದೆ.

ನಾನು ಚಿಕ್ಕವನಾಗಿದ್ದಾಗ ನಮ್ಮ ಬೀದಿಯ ಮಕ್ಕಳನ್ನೆಲ್ಲಾ ವಸಂತ ಮತ್ತು ಗ್ರೀಷ್ಮಕಾಲಗಳಲ್ಲಿ, ಭಾನುವಾರದ ದಿನ ಒಟ್ಟಿಗೆ ಸೇರಿಸಿ ಅವರನ್ನೆಲ್ಲಾ ಹೊಲಗದ್ದೆ, ಅರಣ್ಯಗಳಿಗೆ ಕರೆದುಕೊಂಡು ಹೋಗಿ, ಗೆಲವಿನ ಹಕ್ಕಿಗಳಂತೆ ಅವರೊಡನೆ ಸರಸವಾಗಿರುತ್ತಿದ್ದೆನು.

ಕೊಳಕು, ಧೂಳು ತುಂಬಿದ ಆ ರಸ್ತೆಗಳನ್ನು ಬಿಟ್ಟು ಬರಲು ಆ ಮಕ್ಕಳಿಗೂ ಸಂತೋಷವೆನಿಸುತ್ತಿತ್ತು. ಅವರ ತಾಯಂದಿರು ಅವರಿಗಾಗಿ ರೊಟ್ಟಿಯ ಚೂರುಗಳನ್ನು ಕಟ್ಟಿ ಕೊಡುತ್ತಿದ್ದರು. ನಾನು ಕೂಡ ಸಕ್ಕರೆಯಿಂದ ಮಾಡಿದ ಉಂಡೆಗಳನ್ನು ಕೊಂಡುಕೊಂಡು, ಸೀಸೆ ತುಂಬಾ 'ಕ್ವಾಸ್'ನ್ನು ತುಂಬಿ, ಕುರುಬನ ಹಾಗೆ, ಆತಂಕವಿಲ್ಲದ ಆ ಚಿಕ್ಕಪುಟ್ಟ ಮರಿಗಳನ್ನು ಬೀದಿಯಲ್ಲಿ ಅಟ್ಟಿಕೊಂಡು ಹೊಲ ಗದ್ದೆಗಳನ್ನು ದಾಟಿ, ಹಚ್ಚನೆಯ ಹಸುರಿನಿಂದ ತುಂಬಿದ ಕಾನನಗಳಿಗೆ ಹೋಗುತ್ತಿದ್ದೆನು. ಕಾನನವು ವಸಂತದ ಉಡುಗೆಯನ್ನುಟ್ಟು ಸುಂದರವಾಗಿ ತನಿಯಾಗಿದ್ದಿತು.

* ಸುಪ್ರಸಿದ್ಧ ರಸಿಯನ್ ಲೇಖಕನಾದ 'ಮ್ಯಾಗ್ಸಿಂ ಗೋರ್ಕಿ'ಯವರ ಸಣ್ಣ ಕತೆಯಿದು. ಮೂಲಕಥೆಯು ಮಿ ಜೇಕೊಬ್ ಸ್ ಮಾರ್ಕ ಬರ್ಡ್‌ಬರ್ಗ್ ಎಂಬವರಿಂದ ಇಂಗ್ಲಿಷಿನಲ್ಲಿ ಅನುವಾದಿತವಾಗಿ 'ಹಿಂದುಸ್ಥಾನ್ ಸ್ಟ್ಯಾಂಡರ್ಡ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. —ಲೇಖಕ.

ಸಾಧಾರಣವಾಗಿ ನಾವು ಉಷಃಕಾಲದಲ್ಲೇ ಹೋಗುತ್ತಿದ್ದೆವು. ಆಗ ಚರ್ಚುಗಂಟೆಗಳು ಪ್ರಾತಃಪ್ರಾರ್ಥನೆಗಾಗಿ ಜನರನ್ನು ಕರೆಯುತ್ತಿದ್ದುವು. ಮಕ್ಕಳ ಪುಟ್ಟ ಪಾದಗಳಿಂದ ಹೊರ ಹೊಮ್ಮಿದ ಧೂಳೂ, ಗಂಟೆಯ ನಿನಾದವೂ ನಮ್ಮನ್ನು ಕೂಡಿ ಬರುತ್ತಿದ್ದುವು. ಮಧ್ಯಾಹ್ನದಲ್ಲಿ ಆಡಿ ಆಡಿ ದಣಿದಾಗ ಗೆಳೆಯರೆಲ್ಲರೂ ಕಾಡಿನ ಕೊನೆಯಲ್ಲಿ ಕಲೆತು, ಊಟವಾದ ಮೇಲೆ, ಅಲ್ಲಿಯೆ ಪೊದೆಗಳ ನೆರಳಿನಲ್ಲಿ ಹಸುರುಹುಲ್ಲಿನ ಮೇಲೆ ಮಲಗುತ್ತಿದ್ದರು. ಸ್ವಲ್ಪ ದೊಡ್ಡವರು ನನ್ನನ್ನು ಸುತ್ತಿಕೊಂಡು ಕತೆಯನ್ನು ಹೇಳಲು ಬೇಡುತ್ತಿದ್ದರು. ಅವರಷ್ಟೇ ಉತ್ಸಾಹದಿಂದ ನಾನು ಕೂಡ ಕತೆಯನ್ನು ಹೇಳುತ್ತಾ ಹರಟುತ್ತಿದ್ದೆನು. ನನ್ನಲ್ಲಿ ಯೌವನದ ಅಹಂಭಾವವಿತ್ತು. ನನಗೆ ತಿಳಿದಿದ್ದ ಅಲ್ಪ ಪ್ರಾಪಂಚಿಕ ವಿಷಯಗಳನ್ನು ಕುರಿತ ಹೆಮ್ಮೆಯೂ ಇತ್ತು. ಇದೆಲ್ಲಾ ಸ್ವಾಭಾವಿಕವೇ ಎನ್ನಿ. ಅದ್ದರಿಂದ ನಾನು ಬುದ್ಧಿವಂತರಲ್ಲಿ ೨೦ ವರ್ಷದ ಮಗುವಂತಿದ್ದೆನು.

ಮೇಲೆ ಅನಂತವಾದ ಆಕಾಶ. ಮುಂದೆ ವಿವಿಧತೆಯನ್ನು ಹೊಂದಿದ್ದ ಸಂಪದ್ಯುಕ್ತವಾದ ಅರಣ್ಯ. ನಾವು ಪ್ರಾಜ್ಞ-ಮೌನದಲ್ಲಿ ಮುಳುಗಿಹೋಗುತ್ತಿದ್ದೆವು. ತಂಗಾಳಿಯು ಧಾರಾಳವಾಗಿ ಬೀಸುತ್ತಿದ್ದಿತು. ಮರ್ಮರಧ್ವನಿಯು ವೇಗವಾಗಿ ಮುನ್ನುಗ್ಗುತ್ತಿತ್ತು. ಕಾನನದ ಸೌರಭಯುಕ್ತವಾದ ನೆಳಲು ನಡುಗುತ್ತಿದ್ದಿತು. ಮತ್ತೆ ಮೌನವು ಆತ್ಮವನ್ನು ಆವರಿಸುತ್ತಿದ್ದಿತು.

ಅನಂತವಾದ ನೀಲಾಕಾಶದಲ್ಲಿ ಬೆಳ್ಳನೆಯ ಮೋಡಗಳು ನಿಧಾನವಾಗಿ ಈಜುತ್ತವೆ. ಬಿಸಿಲ ಬೇಗೆಯಿಂದ ಕಾಯ್ದ ನೆಲದ ಮೇಲೆ ನಿಂತು ಆಗಸವನ್ನು ನೋಡಿದರೆ ಅದು ತಂಪಾಗಿರುವಂತೆ ತೋರುತ್ತದೆ; ಆದರೂ 'ಮೋಡಗಳು ಕರಗುವುದಿಲ್ಲಾ, ಅದು ಹೇಗೆ?' ಎನ್ನುವುದು ಮಾತ್ರ ಬಗೆಹರಿದಿಲ್ಲ.

ಅಲ್ಲದೆ ಸುತ್ತಲೂ ಜೀವನದ ಸಿಹಿ-ಕಹಿಗಳನ್ನು ನವಿಯಲಿದ್ದ ಸಣ್ಣ ಪುಟ್ಟ ಬಾಲಕರು.

ಆ ದಿನಗಳು ಆನಂದದಾಯಕವಾಗಿದ್ದುವು. ಅವು ನಿಜವಾದ ಹಬ್ಬಗಳಾಗಿದ್ದುವು. ಆಗಲೆ ಜೀವನದ ದುಃಖದಿಂದ ಮಾಸಿದ್ದ ನನ್ನ ಆತ್ಮವು, ನಿರ್ಮಲರಾದ ಬಾಲಕರ ಸುಖಸಂತೋಷಗಳಲ್ಲಿ ಮಿಂದು ಆನಂದವನ್ನನುಭವಿಸುತ್ತಿದ್ದಿತು.

* * *

ಒಮ್ಮೆ ನಾನು ಪುಟ್ಟ ಮಕ್ಕಳೊಡನೆ ಊರುಬಿಟ್ಟು ಹೊಲಗಳ ಕಡೆಗೆ ಹೋದಾಗ, ಯಾವನೋ ಒಬ್ಬ ಅಪರಿಚಿತ ಬಾಲಕನು ನಮ್ಮಿಂದ ಹಿಂದೆ ಉಳಿದನು. ಅವನೊಬ್ಬ ಚಿಕ್ಕ ಜ್ಯೂ. ಕಾಲಿಗೆ ಏನೂ ಇರಲಿಲ್ಲ. ಹರಕು ಅಂಗಿಯನ್ನು ತೊಟ್ಟಿದ್ದ. ಅಲ್ಲದೆ, ಬಹು ಬಡಕಲಾಗಿ ಹೋಗಿದ್ದ. ಕಪ್ಪನೆಯ ಹುಬ್ಬು, ಗುಂಗುರು ಗುಂಗುರಾದ ಕೂದಲು ಇವುಗಳಿಂದ ಸಣ್ಣ ಕುರಿಮರಿಯ ಹಾಗೆ ಇದ್ದನು. ಏನು ಕಾರಣವೊ ಅಳುತ್ತಿದ್ದನು. ಕಾಂತಿಹೀನವಾದ ಕಪ್ಪನೆಯ ಕಣ್ಣುಗಳು ಕೆಂಪಗೆ ಬಾತುಕೊಂಡಿದ್ದುವು. ಹಸಿವಿನಿಂದ

ಕಂಗೆಟ್ಟು ಹೋದ ಪೋರಿ ಬೇರೆ. ಅವನು ಮಕ್ಕಳ ಗುಂಪಿನೊಳಗೆ ಹಾದು ದಾರಿಯ ಮಧ್ಯದಲ್ಲಿ ನಿಂತನು. ತಂಪಾಗಿದ್ದ ಆ ಬೆಳಗಿನಲ್ಲೂ ಅವನ ಕಾಲುಗಳು ನಿಶ್ಚಲವಾಗಿದ್ದುವು. ಮುದ್ದಾದ ಬಾಯಿಯ ಕರ್ರನೆಯ ತುಟಿಗಳು ಅಳುಕಳಿಕಿಕೊಂಡು ತೆರೆದುವು. ಮರುಕ್ಷಣದಲ್ಲಿ ಒಂದೇ ಒಂದು ಹಾರಿಕೆ ಹಾರಿ, ಜಗುಲಿಯ ಮೇಲೆ ನಿಂತುಕೊಂಡ ಆ ಬಾಲಕನು.

ಮಕ್ಕಳೆಲ್ಲಾ, 'ಹಿಡಿದುಕೊಳ್ಳಿ ಅವನನ್ನು; ಪುಟ್ಟಬಜ್ಯಾ! ಹಿಡಿದುಕೊಳ್ಳಿ ಪುಟ್ಟಬಜ್ಯಾವನ್ನು!' ಎಂದು ಕೂಗಿಕೊಂಡರು.

ಅವನು ಓಡಿಹೋಗುವನು ಎಂದು ನಾನು ತಿಳಿದಿದ್ದೆ. ವಿಶಾಲನೇತ್ರಗಳಿಂದ ಕೂಡಿದ ಅವನ ಮುಖಭಾವವು ಭೀತಿಯನ್ನು ಹೊರಸೂಸುತ್ತಿತ್ತು. ತುಟಿಗಳು ಅದುರಿದುವು. ಹಲ್ಲುಕಿರಿಯುತ್ತಾ ಗುಂಪಿನ ಮುಖ್ಯೆ ಎತ್ತರವಾಗಿ ಹಿಂದಕ್ಕೆ ಕೈಕಟ್ಟಿಕೊಂಡು ನಿಂತನು.

ಅನಂತರ ಅವನು ನಿದಾನವಾಗಿ, ಸ್ಪಷ್ಟವಾಗಿ, ಚೆನ್ನಾಗಿ 'ಒಂದು ತಮಾಷೆಮಾಡಲೋ ?' ಎಂದನು.

ನಾನು ಮೊದಲು, ಇದು ಸ್ವರಕ್ಷಣಾರ್ಥವಾಗಿ ಹೂಡಿದುದಿರಬಹುದು ಎಂದುಕೊಂಡೆ. ಮಕ್ಕಳಿಗೆ ಆಶೆಹುಟ್ಟಿ ಅವು ಹಿಂದಕ್ಕೆ ಸರಿದುವು. ಎಲ್ಲೋ ಕೆಲವು ದೊಡ್ಡವರು, ಕ್ರೂರಿಗಳಾಗಿದ್ದವರು ಮಾತ್ರ ಅವನನ್ನು ಅಪನಂಬಿಕೆಯ ದೃಷ್ಟಿಯಿಂದಲೆ ಕಾಣುತ್ತಿದ್ದರು. ನಮ್ಮ ಬೀದಿಯ ಹುಡುಗರಿಗೂ ಬೇರೆ ಬೀದಿಯ ಹುಡುಗರಿಗೂ ಆಗುತ್ತಿರಲಿಲ್ಲ. ಇವರಲ್ಲಿ ಸ್ವಪ್ರತಿಷ್ಠೆಮೂಡಿತ್ತು. ಇತರರಲ್ಲಿಯ ಒಳ್ಳೆಯದನ್ನು ನೋಡಲು ಇಚ್ಛಿಸುತ್ತಿರಲಿಲ್ಲ. ನೋಡುತ್ತಲೂ ಇರಲಿಲ್ಲ.

ಚಿಕ್ಕವರು ಮಾತ್ರ ಅವನ ಮಾತನ್ನು ನಂಬಿ 'ಎಲ್ಲಿ ತೋರಿಸು' ಎಂದರು. ಸುಂದರನಾದರೂ ಕೃಶನಾಗಿ ಹೋಗಿದ್ದ ಆ ಬಾಲಕನು ಅಲ್ಲಿಂದ ಹಿಂದಕ್ಕೆ ಸರಿದು, ತನ್ನ ಶರೀರವನ್ನು ಹಿಂದಕ್ಕೆ ಬಗ್ಗಿಸಿ ಬೆರಳುಗಳಿಂದ ನೆಲವನ್ನು ಮುಟ್ಟಿದನು. ಅನಂತರ ಕಾಲುಗಳನ್ನೆತ್ತಿ ಕೈಮೇಲೆ ನಿಂತು 'ಆಯಿತು' ಎಂದನು.

ಆ ಮೇಲೆ ಅವನು ಬೆಂಕಿಯಿಂದ ಸುಡುತ್ತಿದ್ದಂತೆ ಹಿಂದಕ್ಕೆ ಲಾಗ ಹಾಕಿದನು. ಕೈಕಾಲುಗಳಿಂದ ಬೇಗ ಬೇಗ ಆಡುವುದಕ್ಕೆ ಆರಂಭಿಸಿದನು. ಷರಟು ಷರಾಯಿನಲ್ಲಿದ್ದ ತೂತುಗಳಿಂದ ಅವನ ಬೂದುಚರ್ಮವು ಕಾಣುತ್ತಿದ್ದರೂ, ಹೆಗಲಿನ ಎಲುಗುಗಳೂ, ಮಂಡಿ ಮೊಣಕೈಗಳೂ ವಿವಿಧವಾಗಿ ತಿರುಗುತ್ತಿದ್ದುವು. ಕತ್ತಿನ ಕೆಳಭಾಗದ ಎಲುಬು ಪಕ್ಕರಕ್ಕೆಯ ಹಾಗಿದ್ದಿತು. ಇನ್ನೊಂದು ಬಾರಿ ಏನಾದರೂ ಬಗ್ಗಿದ್ದರೆ ಮೂಳೆಗಳೆಲ್ಲಾ ಮುರಿದು ಹೋಗುವಂತಿದ್ದುವು. ಬೆವತು ಷರಟೆಲ್ಲಾ ನಾಂದು ಹೋಗಿದ್ದಿತು. ಪ್ರತಿಸಲವೂ ಮಕ್ಕಳ ಕಡೆಗೆ ನೋಡುತ್ತಾ ಕೃತಕವಾಗಿ ನಗುತ್ತಿದ್ದನು. ಆದರೆ ಆ ನಗುವಿನಲ್ಲಿ ಜೀವವೇ ಇರುತ್ತಿರಲಿಲ್ಲ. ಅವನ ಕಾಂತಿಹೀನವಾದ ಕಣ್ಣುಗಳು ನೋವಿನಿಂದ ಉಬ್ಬಿದಂತೆ ಉಬ್ಬಿ ಉರಿಯುತ್ತಿದ್ದುವು. ಆ ನೋಟದಲ್ಲಿ, ಮಕ್ಕಳಿಗೆ ಅಸ್ವಾಭಾವಿಕವಾದ ಏನೋ ಒಂದು ಬಗೆಯ ಬಗಿತ ಎದ್ದಿತು. ಮಕ್ಕಳು ಅವನನ್ನು ಉತ್ಸಾಹಗೊಳಿಸಿದುವು. ಕೆಲವರು ಆಗಲೆ ಅವನಂತೆ ಮಾಡಲು ಪ್ರಾರಂಭಮಾಡಿದ್ದರು. ಅವನು ಕೂಡ ಲಾಗ ಹಾಕುವುದು, ಮಣ್ಣಿನಲ್ಲಿ ಬೀಳುವುದು, ನೋವಿನಿಂದ ಅಳುವುದು– ಹೀಗೆಲ್ಲಾ ಮಾಡುತ್ತಿದ್ದರು.

ಇದು ಕೂಡಲೆ ನಿಂತಿತು. ನುರಿತ ಕಲೆಗಾರನ ಹಾಗೆ ನಿಂತು ಮಕ್ಕಳನ್ನು ನೋಡುತ್ತಾ ಅವನು ಕೈನೀಡಿದನು; 'ಏನಾದರೂ ಕೊಡಿ' ಎಂದನು.

ಎಲ್ಲರೂ ಸುಮ್ಮನಿದ್ದರು. ಯಾವನೋ ಒಬ್ಬನು, 'ದುಡ್ಡೇ?' ಎಂದು ಕೇಳಿದನು. 'ಹೌದು' ಎಂದು ನುಡಿದನು ಅವನು.

'ಅದು ಮತ್ತೆ ಒಳ್ಳೆಯದು' 'ದುಡ್ಡಿಗಾದರೆ ನಾವೇ ಮಾಡಿಕೊಳ್ಳುತ್ತಿದ್ದೆವು.' ಈ ರೀತಿಯ ಬೇಡಿಕೆಯು ಅವನಲ್ಲಿ ಅವರಿಗೆ ಅಸೂಯೆಯನ್ನೂ, ವೈಷಮ್ಯವನ್ನೂ ಹುಟ್ಟಿಸಿತು. ಅವರೆಲ್ಲರೂ

ಬೆನ್ನ ಮೇಲೆ ಎಡಗೈಯ ಬಳಿಯಿಂದ ತೊಡೆಯ ವರೆಗೆ ಕಪ್ಪಗೆ ಗುರುತಾಗಿದ್ದಿತು.

ನಗುತ್ತಾ ಅವನನ್ನು ಬೈಯುತ್ತಾ ಹೊಲಗಳ ಕಡೆಗೆ ಹೊರಟರು. ಅವರ ಬಳಿ ದುಡ್ಡೂ ಇರಲಿಲ್ಲ. ನನ್ನ ಬಳಿ ಏಳು ಕೊಪೆಕ್ಕುಗಳಿದ್ದುವು. ಎರಡನ್ನು ಅವನ ಕೊಳೆಕೈಯಲ್ಲಿ ಹಾಕಿದೆ. ಬಾಲಕನು ಅದನ್ನು ತೆಗೆದುಕೊಂಡು, 'ವಂದನೆ' ಎಂದು ನುಡಿದನು.

ಅಲ್ಲಿಂದ ಅವನು ಹೊರಟನು. ಅವನ ಅಂಗಿಯ ಹಿಂಭಾಗದಲ್ಲೆಲ್ಲಾ ಕರ್ರಗೆ ಕಲೆಗಳಾಗಿದ್ದುವು. ಮೊಣಕೈಯಮೇಲೂ ಹಾಗೇ ಆಗಿದ್ದುವು. 'ತಡೆ, ಅದೇನು ?' ಎಂದು ನಾನು ಕೇಳಿದೆನು.

ಅವನು ನಿಂತು ಹಿಂದಿರುಗಿ ನನ್ನನ್ನು ನೋಡಿ, ನಗುತ್ತಾ 'ಏನು ? ಬೆನ್ನ ಮೇಲೆಯೆ ? ಈಪ್ಸರಿನಲ್ಲಿ ಆಟ ತೋರಿಸುತ್ತಿದ್ದಾಗ

(೭೧೯ ನೆಯ ಪುಟ ನೋಡಿರಿ)

ವಿದ್ವಾನ್ ಎಂ. ಜಿ. ವೆಂಕಟೇಶಯ್ಯ
ಎಂ. ಎ. ಬಳ್ಳಾರಿ

ಪಂಚಾಂಗ—ಜಾತಕ

ವಾರಗಳೆಂದರೆ ಏನು? ನಕ್ಷತ್ರಗಳೆಂದರೆ ಏನು? ಪಂಚಾಂಗವೆಂದು ಪಂಚಾಂಗ (ಪುಸ್ತಕ)ಕ್ಕೆ ಏಕೆ ಹೆಸರು ಬಂದಿತು? ವಧೂ-ವರರ ಗುಣಗಳನ್ನು ಕೂಡಿಸಿ ನೋಡುವ ಇಂದಿನ ಪದ್ಧತಿಯಲ್ಲಿ ದೋಷವೇನಿದೆ? ಇದನ್ನೆಲ್ಲ ತಿಳಿದುಕೊಳ್ಳಲು ಬಯಸುವವರು ಇದನ್ನೋದಿರಿ!

ಹಿಂದಿನ ಪ್ರಬಂಧದಲ್ಲಿ ಸಿದ್ಧಾಂತದ ವಿಚಾರವಾಗಿ ಎರಡು ಮಾತಾಯಿತು. ಈಗ ಪಂಚಾಂಗದ ವಿಚಾರ ನೋಡೋಣ.

ವಾರ, ತಿಥಿ, ನಕ್ಷತ್ರ, ಯೋಗ ಮತ್ತು ಕರಣ, ಇವೆಂದರೆ ಫಲಜ್ಯೋತಿಷದ ಪಂಚಾಂಗಗಳು. ವಾರಗಳು ಆದಿತ್ಯಾದಿ ವಾರಗಳು. ಖಗೋಳದಲ್ಲಿ ಚಂದ್ರನು ಸೂರ್ಯನಿಗಿಂತಲೂ ವೇಗವಾಗಿ ಹೋದಂತೆ ಕಾಣುತ್ತದೆ. ಸೂರ್ಯ-ಚಂದ್ರರ ಪರಸ್ಪರ ದೂರವನ್ನು ತಿಥಿಯು ತಿಳಿಸುತ್ತದೆ. ಖಗೋಳವನ್ನು ೩೬೦ ಭಾಗಗಳನ್ನಾಗಿ ಮಾಡಿದರೆ, ಒಂದು ಭಾಗವನ್ನು ತೋರಿಸುವ ಕೋಣ (Angle) ವು ಒಂದು '**ಅಂಶ**' (ಅಥವಾ Degree)ವುಳ್ಳದ್ದು ಆಗುತ್ತದೆ. ಮೂವತ್ತು ತಿಥಿಗಳಿಗೆ ೩೬೦ ಭಾಗಗಳಾದರೆ ಒಂದು ತಿಥಿಗೆ ೧೨ ಭಾಗಗಳಾಯಿತು. ೩೦ ಭಾಗಗಳಿಗೆ ಒಂದು ರಾಶಿ; ಖಗೋಳದಲ್ಲಿ ಇಂತಹ ರಾಶಿಗಳು ೧೨. ಈ ರಾಶಿಯ ಒಂಭತ್ತರಲ್ಲಿಯ ಒಂದು ಪಾಲಿಗೆ (೧/೯) ಒಂದು **ಪಾದ** ಎನ್ನುವರು. ಇಂತಹ ನಾಲ್ಕು ಪಾದಗಳು ಸೇರಿದರೆ ಒಂದು **ನಕ್ಷತ್ರ**. ಖಗೋಳದಲ್ಲಿ ಹೀಗೆ ೨೭ ನಕ್ಷತ್ರಗಳಿರುವುವು. ಚಂದ್ರನ ಪ್ರಯಾಣವೇ ನಮಗೆ ಮುಖ್ಯ; ಈ ದಿನ ಜ್ಯೇಷ್ಠಾ ನಕ್ಷತ್ರವೆಂದರೆ, ಚಂದ್ರನು ಈ ದಿನ ಜ್ಯೇಷ್ಠಾ ನಕ್ಷತ್ರದಲ್ಲಿ ಪ್ರಯಾಣಮಾಡುತ್ತಿದ್ದಾನೆ ಯೆಂದರ್ಥ. ನಕ್ಷತ್ರ ಮತ್ತು ವಾರ, ಇವೆರಡೂ ಸೇರಿದರೆ **ಯೋಗ**; ಈ ಯೋಗದ ಅರ್ಧಭಾಗ **ಕರಣ**. ಚಂದ್ರನ ಚಲನೆಯಿಂದ ವರ್ಷಾದಿಗಳನ್ನು ಎಣಿಸುವುದರಿಂದ ಇದಕ್ಕೆ **ಚಾಂದ್ರಮಾನ**ವೆಂದು ಹೆಸರು ಬಂದಿತು.

ಸಿದ್ಧಾಂತದಲ್ಲಿ ಲೋಪಗಳಿದ್ದರೆ ಪಂಚಾಂಗದಲ್ಲೂ ಲೋಪಗಳೇ. ಈ ಲೋಪಗಳಿಂದ ಆಗುವ ತೊಂದರೆ ಏಕಾದಶಿಯ ವಿಚಾರ ಬಂದಾಗ ಚೆನ್ನಾಗಿ ಮುಂದಟ್ಟಾಗುತ್ತದೆ. ತಿಂಗಳಿಗೂ ಏಕಾದಶಿಗೂ ಗಂಟುಹಾಕಿ ನಮ್ಮವರು ಅನೇಕ ನಾಮಕರಣಗಳನ್ನು ಮಾಡಿದ್ದಾರೆ.

ತಿಂಗಳು	ಶುಕ್ಲಪಕ್ಷ	ಕೃಷ್ಣಪಕ್ಷ
ಚೈತ್ರ	ಕಾಮದಾ ಏಕಾದಶಿ	ವರೂಥಿನೀ ಏಕಾದಶಿ
ವೈಶಾಖ	ಮೋಹಿನೀ ,,	ಅಪರಾ ,,
ಜ್ಯೇಷ್ಠ	ನಿರ್ಜಲಾ ,,	ಯೋಗಿನೀ ,,
ಆಷಾಢ	ವಿಷ್ಣುಶಯನೋತ್ಸವಾ ಏಕಾದಶಿ	ಕಾಮಿಕಾ ,,
ಶ್ರಾವಣ	ಪುತ್ರದಾ ,,	ಅಜಾ ,,
ಭಾದ್ರಪದ	ವಿಷ್ಣು ಪರಿವರ್ತಾ ,,	ಇಂದಿರಾ ,,

ಈ ಸಮಯದಲ್ಲಿ ಶ್ರವಣನಕ್ಷತ್ರವು ಸೇರಿದರೆ
ಅದು ವಿಷ್ಣುಶೃಂಖಲ ಏಕಾದಶಿ.

ತಿಥಿಯ ಸಂಪರ್ಕವಿಲ್ಲದ ಯೋಗಗಳು ಕೆಲವುಂಟು; ಇಂತಹ ಯೋಗಕ್ಕೆ **ಮಹಾಮಾಘವೇ** ಉದಾಹರಣೆ; ಮೇಷದಲ್ಲಿ ಶನಿ, ಮಘಾನಕ್ಷತ್ರದಲ್ಲಿ ಚಂದ್ರ, ಸಿಂಹದಲ್ಲಿ ಗುರು, ಶ್ರವಣಾನಕ್ಷತ್ರದಲ್ಲಿ ಸೂರ್ಯ; ಇವೆಲ್ಲವೂ ಒಟ್ಟಿಗೆ ಸೇರಿದರೆ ಮಹಾಮಾಘ.

ವಾರ, ತಿಥಿ, ನಕ್ಷತ್ರ ಯೋಗ, ಮತ್ತು ಕರಣ, ಇವುಗಳಲ್ಲಿ ಹುಟ್ಟಿದರೆ ಬರಬಹುದಾದ ಫಲಗಳು **ಜಾತಕ**ಭಾಗಕ್ಕೆ ಸೇರಿದುವುಗಳು. ಇಷ್ಟೇ ಅಲ್ಲದೆ, ಪ್ರತಿಗ್ರಹವೂ ಬೇರೆ ಬೇರೆ ರಾಶಿಯಲ್ಲಿ ಪ್ರವೇಶಮಾಡುವಾಗ, ಯಾವ ಯಾವ ಫಲಗಳನ್ನು ಕೊಡುತ್ತವೆ ಎಂಬ ವಿಚಾರವು **ಗೋಚಾರ**ಕ್ಕೆ ಸೇರಿದ್ದು. ಷಟ್ಪಂಚಕಾದಿಗಳು, ವಿವಾಹಕ್ಕೆ ಬೇಕಾದ ಕೂಟಾದಿಗಳು ಇವು ಪಂಚಾಂಗವನ್ನು ಮತ್ತು ಜಾತಕವನ್ನು ಎರಡನ್ನೂ ಒಟ್ಟುಗೂಡಿಸುತ್ತವೆ.

ಸಾಮಾನ್ಯವಾಗಿ ಸ್ಥೂಲವಾಗಿ ವಿಚಾರಗಳನ್ನು ನೋಡುವವರು ಈ ಪಂಚಾಂಗದ ಮೂಲಕ ಜಾತಕವಿಚಾರಗಳನ್ನು ಹೇಳುತ್ತಾರೆ. ಸರಿಹೋಗುವುದೂ ಉಂಟು; ತಪ್ಪಾಗುವುದೂ ಉಂಟು. ತಪ್ಪಾದಲ್ಲಿ ಜಾತಕಪದ್ಧತಿಯಲ್ಲಿಯೆ ನಿಜತ್ವವಿಲ್ಲವೆಂದು ಅನೇಕರು ಸಾರುವುದುಂಟು. ಇವಕ್ಕೂ ಜಾತಕಪದ್ಧತಿಗೂ ಅಜಗಜಾಂತರವೆಂಬ ವಿಚಾರವು ಬಹಳ ಜನಕ್ಕೆ ತಿಳಿದಂತೆ ಕಾಣಬರುವುದಿಲ್ಲ.

ಗೋಚಾರಮೂಲಕವಾಗಿ ಹೇಳಬಹುದಾದ ಫಲಗಳನ್ನು ಜಾತಕಪದ್ಧತಿಯ ಮೂಲಕವಾಗಿ ಹೇಳಲಾಗುವುದೆ? ಈ ಪ್ರಶ್ನೆ ಬಹಳ ಸಹಜವಾದದ್ದು. ಇದಕ್ಕೆ ಉತ್ತರ **ಅಷ್ಟಕವರ್ಗ.** ಗೋಚಾರದಲ್ಲಿ ಹೇಳುವ ರೀತಿಗಿಂತಲೂ ಉತ್ತಮವಾದ ರೀತಿಯು **ಅಷ್ಟಕವರ್ಗ**ವೆಂದು ಅದನ್ನು ಜಾತಕಪದ್ಧತಿಯಲ್ಲಿ ಸೇರಿಸಿದ್ದಾರೆ. ಅಷ್ಟಕವರ್ಗದ ಮೂಲಕ ಅನೇಕ ವಿಚಾರಗಳನ್ನು ಹೇಳಬಹುದು; ಹೆಚ್ಚೇಕೆ? ಪಾಶ್ಚಿಮಾತ್ಯರ ಪದ್ಧತಿಯು ಒಂದುವಿಧವಾದ ಅಷ್ಟಕವರ್ಗ.

ಇನ್ನು ಕೂಟಾದಿಗಳ ವಿಚಾರ. ಅನೇಕ ವೇಳೆ ನಾವು ಕೇಳಿದ್ದೇವೆ:—'ಎಲ್ಲಾ ಕೂಟಗಳೂ ಸರಿ ಬಂದಿತ್ತು; ಆದರೆ ಮದುವೆಯಾದ ಆರುತಿಂಗಳೊಳಗಾಗಿ ಹುಡುಗಿ ವಿಧವೆಯಾದಳು' ಎಂಬುದನ್ನು. ಕೂಟಗಳನ್ನು ನೋಡುವುದು, ಗಂಡಹೆಂಡಿರ ಜಾತಕದಲ್ಲಿ ಚಂದ್ರನ ಚಲನೆಯೊಂದನ್ನು ಮಾತ್ರ ಇಟ್ಟುಕೊಂಡು; ಎಂದರೆ ಬರಿಯ ನಕ್ಷತ್ರದ ಮೇಲೆ. ಹೀಗಿರುವಲ್ಲಿ ಮಿಕ್ಕ ಗ್ರಹಗಳ ವಿಚಾರವೇನು? ಆಯುಃಪ್ರಮಾಣವು ಜಾತಕದಿಂದ ತಿಳಿದುಬರುತ್ತದೆಯೇ ಹೊರತು ಕೇವಲ ನಕ್ಷತ್ರದಿಂದಲ್ಲ. ನಕ್ಷತ್ರ ಒಂದೇ ಸಾಲದೆಂಬುದಕ್ಕೆ ಕುಜದೋಷವನ್ನು ನೋಡುವುದೇ ಸಾಕಾದಷ್ಟು ಪ್ರಮಾಣ.

ಇದರಿಂದ ನಮಗೆ ವಿಶದವಾಗುತ್ತದೆ:— ಜಾತಕಪದ್ಧತಿಗಳೆ ಬೇರೆ; ಪಂಚಾಂಗ-ಪದ್ಧತಿಗಳೆ ಬೇರೆ. ಮೇಲೆ ಹೇಳಿರುವ ಪಂಚಾಂಗ ಪದ್ಧತಿಗಳನ್ನಿಟ್ಟುಕೊಂಡು ಕೆಲಸ ಸಾಗಿಸುವುದು ಸುಲಭ. ಅದಕ್ಕಾಗಿ ಬಹಳ ಮಂದಿ ಈ ಪಂಚಾಂಗಪದ್ಧತಿಗಳ ಮೇಲೆಯೇ ಕೆಲಸವನ್ನು ಸಾಗಿಸುತ್ತಾರೆ. ಇತರ ಪದ್ಧತಿಗಳು—ಎಂದರೆ ಜಾತಕಪದ್ಧತಿಗಳು ಬಹಳ ಸುಲಭವಲ್ಲ. ಅದರ ಜೊತೆಗೆ ಬೇಕಾದ ಸಲಕರಣೆಗಳು ಒದಗುವುದು ಪ್ರಯಾಸ. ಅಲ್ಲಲ್ಲಿ ಅನೇಕ ವಿಚಾರಗಳು ಹೊಳೆಯುತ್ತವೆ: ಅವುಗಳನ್ನು ಸರಿಯಾಗಿ ನೋಡಲು ನಮಗೆ ಬೇಕಾದ ಪುಸ್ತಕ ಸಂಪತ್ತಿಲ್ಲ. ಕೆಲಸ ಮಾಡುವವರಿಲ್ಲ; ಅಲ್ಪ ಸ್ವಲ್ಪ ಮಾಡಿದವರು ಅದನ್ನು ಪ್ರಕಟಿಸಲು ಅನುಕೂಲಮಾಡಿಕೊಳ್ಳುವುದಿಲ್ಲ; ಹೀಗಾಗಿ ಸರಿಯಾದ ಜಾತಕಪದ್ಧತಿಗಳು ಬರುತ್ತಬರುತ್ತ ಮಾಯವಾಗುತ್ತಿವೆ.



(೭೧೬ ನೆಯ ಪುಟದಿಂದ ಮುಂದುವರಿದುದು.)

ಸ್ಕೂಲಿನಿಂದ ಬಿದ್ದೆವು ನಮ್ಮ ತಂದೆ ಇನ್ನೂ ಮಲಗಿಯೇ ಇದ್ದಾನೆ. ಆದರೆ ನಾನು ಆರೋಗ್ಯವಾಗಿದ್ದೇನೆ' ಎಂದನು.

ನಾನು ಅವನ ಷರಟನ್ನು ಎತ್ತಿದೆ. ಬೆನ್ನಮೇಲೆ ಎಡಗೈಯ ಬಳಿಯಿಂದ ತೊಡೆಯವರೆಗೆ ಕಪ್ಪಗೆ ಗುರುತಾಗಿದ್ದಿತು. ಅದರ ಮೇಲೆಲ್ಲಾ ಗಾಯವಾಗಿದ್ದಿತು. ಸಾಧನೆಮಾಡಿದಾಗ ಅದು ಅನೇಕ ಕಡೆಗೆ ಬಿರುಕು ಬಿಟ್ಟು ಸಂದಿಗಳಿಂದ ರಕ್ತವು ಚಿಮ್ಮುತ್ತಿತ್ತು.

'ಅದರಿಂದೇನೂ ಅಪಾಯವಿಲ್ಲ! ಅದರಿಂದೇನೂ ಈಗ ಅಪಾಯವಿಲ್ಲ; ಆದರೆ ಸ್ವಲ್ಪ ನವೆಯಾಗುತ್ತೆ ಅಷ್ಟೇ..'

ಧೀರನಂತೆ ಮುಂದುವರಿಯುತ್ತ ಅವನು, ದೊಡ್ಡವನಂತೆ ಗಂಭೀರವಾಗಿ ಹೇಳಿದನು:

'ಈಗ ನನಗೆ ನಾನೇ ದುಡಿದು ಸಂಪಾದಿಸುತ್ತಿದ್ದೇನೆ ಅಂತ ನೀವು ತಿಳಿದಿರಬಹುದು. ಆದರೆ ನಿಜವಾಗಿ ಹೇಳಬೇಕಾದರೆ—ಹಾಗಲ್ಲ. ತಂದೇ, ನಮ್ಮ ಹತ್ತಿರ ದುಡಿಕಾಸಿಲ್ಲ. ನಮ್ಮ ತಂದೆಗೆ ವಿಪರೀತ ಗಾಯಗಳಾಗಿ ಹೋಗಿದೆ; ಆದರಿಂದ ನಾನೇ ದುಡಿಯಬೇಕು; ಅಲ್ಲದೆ, ನಾವು ಜ್ಯೂಗಳು ಬೇರೆ. ಎಲ್ಲರೂ ನಮ್ಮನ್ನು ನೋಡಿ ನಗುತ್ತಾರೆ....ನಮಸ್ಕಾರ'

ಹೀಗೆ ಹೇಳಿ ನಗುನಗುತ್ತಾ ಅವನು ತಲೆಯನ್ನು ಅಲ್ಲಾಡಿಸಿ ಬೇಗ ಬೇಗ ನೆಗೆದುಕೊಂಡು ಹೊರಟುಹೋದನು. ಎಲ್ಲರೂ ಅವನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದರು. ಆದರೆ ಯಾರಿಗೂ ಅವನ ಕಡೆಗೆ ಲಕ್ಷ್ಯವೇ ಇಲ್ಲ.

ಇದೆಲ್ಲಾ ಏನು ಅಲ್ಪವಾದದ್ದು— ಬಹುಸುಲಭ ಅಲ್ಲವೇ? ಆದರೆ ಆಗಾಗ ನನ್ನ ಜೀವಮಾನದ ಕಷ್ಟದ ದಿನಗಳಲ್ಲಿ ಆ ಬಾಲಕನ ಧೈರ್ಯವನ್ನು ನೆನಸಿಕೊಳ್ಳುತ್ತಿದ್ದೇನು— ಅದೂ ಕೃತಜ್ಞತೆಯಿಂದ.

ಸರಸ್ವತೀಗ್ರಂಥಮಾಲಾ

ಮೊದಲನೆಯ ವರ್ಷದ ಕುಸುಮಗಳು

ಹೆಚ್ಚಾವುದು? (ಶ್ರೀ. ರಘು) ೦-೬-೦; . **ಯುದ್ಧಾತದ್ಧಾ** (ಶ್ರೀ. ನಾ. ಕಸ್ತೂರಿ) ಎಂ. ಎ., ಬಿ. ಎಲ್. ೦-೬-೦

ಹಳ್ಳಿಯ ಪದಗಳು (ಶ್ರೀ. ಬಿ. ಎಸ್. ರಂಗಸ್ವಾಮಿ) ೦-೮-೦

ಗರುಡಗಂಬದ ದಾಸಯ್ಯ ಶ್ರೀ. ಗೋರೂರ ರಾಮಸ್ವಾಮಿ ಐಯಂಗಾರ್ ೧-೦-೦

ಒಟ್ಟಾಗಿ ತರಿಸಿಕೊಳ್ಳುವವರು ೨ ರೂ. M. O. ಮಾಡಿ. ❁ ಸರಸ್ವತೀ ಪುಸ್ತಕಭಾಂಡಾರ, ಮಂಡ್ಯ (ಮೈಸೂರು)

ಸ್ವಲ್ಪದರಲ್ಲಿ ಸ್ವಾರಸ್ಯ ಅಥವಾ

ಕನಕಾಚಾರ್ಯರ ಕಾನ್‌ಸ್ಟಿಟ್ಯುಎಂಟ್ ಅಸೆಂಬ್ಲಿ

★

ಕನಕಾಚಾರ್ಯರು ಪ್ರವಾಸ ಮುಗಿಸಿ ಮೊನ್ನೆ ಮೊನ್ನೆ ಬಂದರು. ಅವರ ರೇಲ್ವೆ ಪ್ರವಾಸವೆಂದರೆ ಅದೊಂದು ಸಾಮಾಜಿಕ ಮಹಾಕಾವ್ಯ. ಬೇಕಾದುದನ್ನು ಕೊಡಲು ಸಿದ್ಧನಾದ ಧನವಂತನ ಬಳಿಯಲ್ಲಿ ಸಂಡಿಗೆ ಇಡಲಿಕ್ಕೆ ಬೂದುಗುಂಬಳಕಾಯಿ ಬೇಡಿದ ಕನಕಾಚಾರ್ಯರ ಹೆಂಡತಿಯ ಕತೆ ಯಾರ ಮನಸ್ಸಿಗೆ ಚಕ್ಕಳಗುಳಿ ಇಡಲಾರದು?

★

ಭಕ್ತನಿಗೆ ಪರಮಾತ್ಮನಿಂದ ವಿರಹಾವಸ್ಥೆ ಒದಗಿ ಆತನ ಹೃದಯವು 'ಹಂಬಾ! ಹಂಬಾ! ಎಂದು ಕರೆಯುತ್ತಲಿದ್ದೇನೆ' ಎನುವ ದಶೆಗೆ ಇಳಿಯುವುದು– ಎಂಬ ಮಾತು ಕೇವಲ ಕಾಲ್ಪನಿಕ. ಶಬ್ದಗಳ ಮೋಹ ಎಂದು ಹುಡುಗರಾದ ನಮಗೆ ಇದುವರೆಗೆ ತೋರುತ್ತಲಿದ್ದಿತು. 'ಇದುವರೆಗೆ' ಎನ್ನಲು ಕಾರಣ ಇದೆ, ಅರ್ಥಾತ್ ಈಗ ತೋರುವದಿಲ್ಲ ಎಂದೇ ಹೇಳಿಬಿಡೋಣ. ನಮ್ಮ ಕನಕಾಚಾರ್ಯರು ಸುಮಾರು ಒಂದು-ಒಂದೂವರೆ ತಿಂಗಳು ದೇಶಾಂತರ ಪಯಣಬೆಳೆಸಿದಾಗ ಆದ ನಮ್ಮ ಅವಸ್ಥೆಯನ್ನು 'ಮೇಘದೂತ'ವನ್ನು ಬರೆದ ಕಾಳಿದಾಸನೆ ಬಣ್ಣಿಸಬಲ್ಲ! 'ಕುದುರೆಮೋತಿ ಇಲ್ಲದಿದ್ದರೆ ನಿಮ್ಮದು —ತ್ರೆಯ ಮೋತಿ ಯಾಗುವುದು' ಎಂದು ಆಚಾರ್ಯರು ಹೇಳಿದ ನಗೆಯಾಟದ ರಹಸ್ಯಾರ್ಥವು ಈಗ ನಮಗೆ ಚೆನ್ನಾಗಿ ತಿಳಿಯಿತು. 'ಹರಟೆಗೆ ಬೇಕು ಹಿರಿಯರು' ಎಂದು ಆಚಾರ್ಯರದೊಂದು ತತ್ತ್ವ. ಸಾಕಷ್ಟು ಅನುಭವ, ಸಾಕಷ್ಟು ಆಲಸ್ಯ ಎರಡೂ ಅವರಿಗಿವೆಯಂತೆ! ಈ ಮಾತಿನ ಮಹತ್ತ್ವವೂ ನಿನ್ನೆಯ ಮಾರ್ಮಿಕವಾಗಿ ಹೊಳೆಯಿತು. ದೇಶಾಂತರ ಮುಗಿಸಿ ಬಹುದಿವಸಗಳ ನಂತರ ನಿನ್ನೆಯ ಆಚಾರ್ಯರು ಅಂಗಡಿಗೆ ಬಂದದ್ದು. 'ಬಂದವರೆ 'ಜಾಗೆ ಇದೆ ಏನಿರಿ ಒಳಗೆ?' ಎಂದರು. ನನ್ನೆಲ್ಲರಿಗೂ ಆಶ್ಚರ್ಯ. ಉತ್ಸಾಹದಲ್ಲಿದ್ದ ಆಚಾರ್ಯರು ತಡಮಾಡದೆ ಮಾತನ್ನು ಬೆಳೆಸಿದರು. 'ಒಂದು ತಿಂಗಳು ರೇಲ್ವೆ ಪ್ರವಾಸಮಾಡಿ ಮಾಡಿ, ಮೊದಲು ಈ ಪ್ರಶ್ನೆ ಕೇಳುವ ರೂಢಿಬಿದ್ದಿದೆ, ನೋಡಿ!' ಎಂದು ನಕ್ಕರು.

ಕನಕಾಚಾರ್ಯರ ರೇಲ್ವೆ ಪ್ರವಾಸವೆಂದರೆ ಅದೊಂದು ಸಾಮಾಜಿಕ ಮಹಾಕಾವ್ಯ ಎಂದು ನಮಗೆ ಹಿಂದೆ ಅನೇಕ ಸಲ ತಿಳಿದುಬಂದಿತ್ತು. ಮೊದಲನೆಯ ಮಾತೆಂದರೆ, ರೈಲುಪ್ರವಾಸದ ಬಗ್ಗೆ ಅವರಿಗೆ ಕೆಲವು ಸ್ವತಂತ್ರ ವಿಚಾರಗಳಿವೆ. ತಮ್ಮಂತಹ ವೈದಿಕ ಬ್ರಾಹ್ಮಣರಿಗೆ ಪುಕ್ಕಟೆ ಪ್ರವಾಸದ ಅಧಿಕಾರವಿದೆ ಎಂದು ಅವರ ಹಟ! ನಾವು ಎಷ್ಟೋ ಸಲ ಹೇಳಿದ್ದೇವೆ ಅವರಿಗೆ, "ಇದು ಕಲಿಕಾಲ, ಇಂದಿನ ರೀತಿ ನೀತಿ-ಶಾಸ್ತ್ರ-ಸಂಬಂಧ ಎಲ್ಲ ಬೇರೆ, ಇಂದು ಕಾಯಿದೆಯ ಇಲ್ಲವೆ ವ್ಯವಹಾರದ ದೃಷ್ಟಿಯಿಂದ ಬ್ರಾಹ್ಮಣರೂ ಅಷ್ಟೆ ಮಿಕ್ಕವರೂ ಅಷ್ಟೆ" ಎಂದು ಮುಂತಾಗಿ. ಆದರೆ ಆಚಾರ್ಯರ ಹಟವೆ ಅಂತಹದು. ಇಂದಿಗೂ ಅವರು ತಮ್ಮ ತತ್ತ್ವವನ್ನು ಬಿಟ್ಟಿಲ್ಲ, ಅದರಂತೆಯೆ ಆಚರಿಸುವುದನ್ನು ಬಿಟ್ಟಿಲ್ಲ! 'ನೀವು ಹುಡುಗರು ಅನ್ನೋದು ಯಾಕೆ?' ಎಂದು ನಮ್ಮನ್ನೆ ಹಂಗಿಸುವರು. 'ರೈಲಿನಲ್ಲಿ ದುಡಿಯುವವರಿಗೆ ಪುಕ್ಕಟೆ ಪ್ರವಾಸ. ಯಾಕೆ? ಅವರು ಪ್ರವಾಸಮಾಡೋದು ಸ್ವಾರ್ಥಕ್ಕಾಗಿ ಅಲ್ಲ, ಪರಾರ್ಥಕ್ಕೆ. ಅಷ್ಟ್ಯಾಕೆ? ನೀವು ಹುಡುಗರೆಲ್ಲಾ ಕೂಡಿ ನಾಟಕ ಮಾಡಿದಾಗ ಸರಕಾರೀ ಕರ ನಿಮಗಿಲ್ಲ, ಗೊತ್ತಿದೆ ಇಲ್ಲೊ? ಯಾಕೆ? ಮಂದಿಗಾಗಿ ನೀವು ದುಡ್ಡು ಕೂಡಿಸತೀರಿ ಅಂತ. ಬ್ರಾಹ್ಮಣರು ಲೋಕಸಂಗ್ರಹಕ್ಕಾಗಿ ಸಂಚರಿಸುವರು, ಅದಕ್ಕ ಅವರಿಗೂ ಪುಕ್ಕಟೆ!' ಎಂದು ಅವರ ತರ್ಕ. ಹೀಗಾಗಿ ಆಚಾರ್ಯರು ಫ್ರೀ ಇಲ್ಲವೆ ಕನ್‌ಸೆಶನ್ ಟಿಕೆಟುಗಳಿಗಾಗಿ ಎಂದೂ ಕಾಯುವುದಿಲ್ಲ. ಲೋಕಸಂಗ್ರಹದ ಕನ್‌ಸೆಶನ್ ಟಿಕೆಟ್ಟುಗಳಿಗೆ 'ವಾಯಿದೆ' ಎಂದರೇನು?

ಇಂದಿನ ಕಾಲದಲ್ಲಿ ಹೀಗೆ ಸಂಚರಿಸುವುದು ಅಯುಕ್ತ, ಅಪರಾಧ, ಅಭಿಮಾನಕ್ಕೆ ಕುಂದು ಎಂಬುದೊಂದು ವಿಚಾರ ಆಚಾರ್ಯರ ತರ್ಕಕ್ಕೆ ಸಹಜವಾಗಿಯೆ ಮುಟ್ಟುವುದಿಲ್ಲ. ಎಲ್ಲಿ ಯಾರಾದರೂ ನಡುದಾರಿಯಲ್ಲಿ ಹೊರಕ್ಕೆ ತಳ್ಳುವರಲ್ಲ ಎಂದರೆ ಅವರು ಹೀಗೆ ಉತ್ತರ ಕೊಡುವರು: 'ಅಪ, ನೋಡು, ಮಾನಾಪ-

ಮಾನದ ಪ್ರಶ್ನೆ ಇದರಲ್ಲಿ ಯಾಕೆ? ನಾವು ಮಾಡೋದೇ ಲೋಕ-ಸಂಗ್ರಹಕ್ಕಾಗಿ. ದುಡ್ಡುಕೊಟ್ಟವರಿಗೆ ಜಾಗ ಇಲ್ಲ ಎಂದರೆ ನಾನಾಗಿಯೆ ಇಳಿದು ಬಿಡತೀನಿ. ಅಷ್ಟ್ಯಾಕೆ? ಮೊದಲೇ ಕೇಳತೀನಿ:— ಜಾಗೆ ಇದೆ ಏನು— ಅಂತ. ಇದ್ದರೆ ಹೊರಟ, ಇಲ್ಲದಿದ್ದರೆ ಹೊರಹೊರಟ! ನಾವೇನು ನಿಂ ಗಾಂಧಿಯಹಾಗೆ ವೈಸರಾಯರ ಭೆಟ್ಟಿಗೆ ಹೊರಟವರಲ್ಲ! ಏನಂತಿ?'

'ಸೊಂಟದಿಂದ ಹಣ ಬಿಚ್ಚದ ಇದೂ ಒಂದು ಬನಿಯಾ ವ್ಯಾಪಾರ' ಎಂದ ನಮ್ಮಲ್ಲೊಬ್ಬ.

ಆಚಾರ್ಯರು ದಿಟ್ಟಿಸಿ ನೋಡಿದರು, ಗಂಟಲು ಸರಿಪಡಿಸಿಕೊಂಡರು, ನಸ್ಯವನ್ನೇರಿಸಿದರು, ಆವೇಶದ ರಣಗುದುರೆಯಂತೆ ಅರಳಿಸಿದ ಮೂಗಿನಿಂದ ಮುಖ ಮೇಲೆತ್ತಿ ವತ್ತೊಮ್ಮೆ ನೋಡಿ ಕನಿಕರದಿಂದ 'ಹುಂ' ಎಂದರು. 'ಸೊಂಟದಿಂದ ಹಣ! ಅದಕ್ಕೇ ಕೇಳೋದು. ನಿಮ್ಮ ಬ್ರಾಹ್ಮಣ್ಯ ಹೋಯಿತು ಅಂತ. ನಮ್ಮಂತಹ ಬ್ರಾಹ್ಮಣರಿಗೆ ಹಣ ಎಲ್ಲಿಂದ ಬರಬೇಕು? ಈಗ ನೋಡು— ನಿಮ್ಮ ದೇಶಸೇವಾದ ಯೋಗಿಗಳು ಸಂಚಾರಮಾಡತಾರಲ್ಲ, ಅವರು ತಮ್ಮ ಹಣ ವೆಚ್ಚಮಾಡತಾರೇನು? ಯಾಕೆಂದರೆ- ತಮ್ಮದು ಅನ್ನೋದೇ ಇಲ್ಲ ಅವರಿಗೆ. ಯಾರೋ ಕೊಡತಾರ, ಹ್ಯಾಗೋ ನಡೀತದ. ಅದಕ್ಕೇ ಹೇಳಿರುವನಪಾ ಆತ "ಯೋಗಕ್ಷೇಮಂ ವಹಾಮ್ಯಹಂ" ಅಂತ. ಏನಂತಿ?'

ಎನ್ನೋದೇನು? ಅದು ಆಚಾರ್ಯರಿಗೂ ಗೊತ್ತು. ಅವರು ಗಹಗಹಿಸಿ ನಕ್ಕರು. 'ಮ್ಯಾಲಿನ ಪರಮಾತ್ಮನಲ್ಲಿ ಭಕ್ತಿ ಇಲ್ಲ ಇದ್ದರೂ ಮನೆಯ ಪರಮಾತ್ಮನ ಭಯಕ್ಕಾಗಿ ಹಾಗೇ ಮಾಡಬೇಕಾಗೋದು. ಸೊಂಟದಿಂದ ಹಣ ಬಿಚ್ಚದ— ಅಂತ! ಕುಚ್ಮಂಡೇಗಂಡ! ನಾಳೆ ಮದುವೆ ಆಯ್ತು ಅಂದ್ರ ತಿಳಿದೀತು, ಒಂದು ಗೃಹಸ್ಥಾಶ್ರಮವೆಂಬುದು ನಮ್ಮನ್ನು ಹಾರಿಸುವ ಬಿರುಗಾಳಿ ಎಂದು ಸೂಚಿಸುವಂತೆ ನಸ್ಯವನ್ನು ಸುಯ್ಯುಗುಡಿಸಿದರು!

ಆಚಾರ್ಯರ ಜೀವನ ಅನೊಂದು ಅದ್ಭುತರಸ್ಯ, ಅವರು ಏನು ಮಾಡಿದರೂ ನಮಗೆ ಅವರಲ್ಲಿ ಅತ್ಯಂತವಾಗಿ ಆದರಬುದ್ಧಿ ಇದೆ ಎಂದು ಅನೇಕ ಸಲ ಹೇಳಿರುವೆನಷ್ಟೆ. ಪುನರುಕ್ತಿ ದೋಷವೆನಿಸಿದರೂ ಅದನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುವೆ. ಚಳಿಗಾಲಕ್ಕೊಮ್ಮೆ ಆಚಾರ್ಯರು 'ದೇಶಾವರಿ'ಗೆಂದು ಸಂಚಾರ ಬೆಳಸುವರು. ಪರಮಾತ್ಮನ ಪ್ರೇರಣೆಯಿಂದ ಗಳಿಸುವ ಹಣದಲ್ಲಿ ಮನೆಗಾಗಿ ಗಾಡಿಯವೆಚ್ಚವನ್ನು ಮಾಡಬಹುದೆ—ಎಂದು ಅವರ ತಾತ್ತ್ವಿಕ ಪ್ರಶ್ನೆ. 'ಗಳಿಸಿದ ನಾಲ್ಕು ದಮಡಿಗೊಳಗೆ ಗಾಡಿಗೆ ಅಂತ ಒಡೀಬ್ಯಾಡಿರಿ' ಎಂದು ಹೊರಡುವಾಗ 'ಮನೆಯ ಪರಮಾತ್ಮನ' ಪ್ರೇರಣೆ! ಮುಂದೆ ಬೇಸಗೆ ಮೊದಲ್ಗೊಂಡು ಹಬ್ಬ-ಹುಣ್ಣಿಮೆಗಳು ಬರುವುವು. 'ಆಗ ಆಕೆಗೆ ಸೀರೆಯೊ ಸರಿಗೆಯೊ ಅದೊ ಇದೊ ಬೇಕಲ್ಲ? ನಮಗೇನು ಮಾಡೋದು? ನಾವು ಗಳಿಕೋದು ದುಡಿಯೋದು ಮಂದಿಗಾಗಿ—ಹೆಂಡತಿ ಅಂದರೂ ಮಂದೀನೇ ಅಲ್ಲ? ನಿನಗೇನು ತಿಳಿದೀತು ಮುಖ್ಯಪ್ರಾಣನ ದತ್ತಕ ಪುತ್ರಗೆ?' ಎಂದರು.

ಆಯಿತು. ನಮ್ಮೆಲ್ಲರಿಗೂ ನಗೆ ಬಂದಿತು, ಜೀವಕಳೆಯೂ ಬಂದಿತು, ಎಂದಿನಂತೆ ಆಚಾರ್ಯರ ಅಧ್ಯಕ್ಷತೆಯಲ್ಲಿ ಸಂಸಾರದ ಸ್ವಾರಸ್ಯಗಳನ್ನು ಸವಿಯಲು ಪ್ರಾರಂಭವಾಯಿತು.

'ಅದಾಯಿತು, ಆಚಾರ್ಯರೆ, ನೀವು ನಿಜವಾಗಿಯೆ ವೈಸ್‌ರಾಯರ ಭೆಟ್ಟಿಗೆ ಹೋಗಿದ್ದಿರಿ ಅಂತ ಸುದ್ದಿ' ಎಂದು ಯಾವನೊ ಕೆಣಕುವ ದನಿಯಲ್ಲಿ ಚುಚ್ಚಿದನು.

'ಅಂದರೆ? ದೇಶಾವರಿಯ ಬ್ರಾಹ್ಮಣಗೆ ವೈಸರಾಯ ಏನು ಒಲ್ಲಾಗಿಲ್ಲ. ನನಗೂ ಒಂದು ವಿಚಾರ ಅದೆ. ಅದೇನು? ಅ— ಕನಸಿನ ಟೋಟುಮೆಂಟೊ ಏನೊ ಅಂತೀರಲ್ಲ—ಒಲ್ಲಾದವರಿಗೆಲ್ಲ ವೋಟು (Vote) ಕೊಡೋದು, ಅದು—ಅ— '

'ಕಾನ್‌ಸ್ಟಿಟುಎಂಟ ಅಸೆಂಬ್ಲಿ'

'ಹಸಿ ಅಂಬಲಿಯೊ ಒಣ ಅಂಬಲಿಯೊ ನನಗೊತ್ತಿಲ್ಲ, ಯಾರೋ ಹೇಳಿದರು—ಅದನ್ನ ಬೇಡಲಿಕ್ಕೆ ನಿಮ್ಮ ಗಾಂಧಿ ವೈಸರಾಯನ ಕಡೆ ಹೋಗಿದ್ದ ಅಂತ. ಆಗ ನಾನೂ ನಿಜವಾಗಿಯೆ ಹೋಗಬೇಕು ಅಂತ ಮಾಡಿದ್ದೆ.'

ಇದನ್ನು ಕೇಳಿ ನಗೆ ಬಂದರೆ ಕ್ಷಮ್ಯವಾದೀತಷ್ಟೆ. ಆಚಾರ್ಯರಿಗೆ ನಿಜವಾಗಿ ಈ ವಿಷಯ ಗೊತ್ತಿರುವುದೇನು, ತಿಳಿಸುವುದೇನು? ಆದರೂ ಅವರು ಮಾತನಾಡುವ ರೀತಿ ಏನು? ಇದನ್ನು ಅವರಿಗೆ ಅಡಿ ತೋರಿಸುವ ಧೈರ್ಯ ಯಾರಿಗೆ? ನಗೆ ತಡೆಯುವಂತಿಲ್ಲ, ಮಾತು ಒಡೆಯುವಂತಿಲ್ಲ ಎಂಬ ತ್ರಿಶಂಕುಸ್ಥಿತಿಯಲ್ಲಿ ನಾವು ತೊಳಲುವಾಗ ಯಾವುದರ ಹೆದರಿಕೆಯೂ ಇಲ್ಲದೆ ಆಚಾರ್ಯರು ಮಾತನ್ನು ಮುಂದುವರಿಸಿದರು.

'ಹಿಂದಕೊಮ್ಮೆ ನಾನು ಆಕೀನ್ನ ಕರಕೊಂಡೇ ದೇಶಾವರೀ ಸಂಚಾರಕ್ಕೆ ಹೋಗಿದ್ದೆ. ನೆನಪಾಯಿತು ಅಂತ ಹೇಳತೀನಿ. ಒಬ್ಬ ಧನವಂತ—ಮ್ಯಾಲೆ ಬಹಾಳ ಭಾವಿಕ—ಇಂಥವನ ಮನೆಗೆ ಹೋದಿವಿ. ಏನೋ—ಎಂತೊ—ನನ್ನ ವಿದ್ವತ್ತಾಕ್ಕ ಅವ ಹುಚ್ಚಾಗಿ ಹೋದ. 'ನಿಮ್ಮನ್ನ ಸಂತೋಷಗೊಳಿಸಬೇಕು ಅಂತ ನನ್ನ ಬಲವಾದ ಇಚ್ಛೆ, ಆಚಾರ್ಯರೆ, ಬಡವನ ಮೇಲೆ ಅನುಗ್ರಹಮಾಡಿ ಬೇಕಾದ್ದನ್ನ ಕೇಳಬೇಕು' ಎಂದ. ಮಹಾರಾಯನಂಥಾ ಮನೆ, ಲೆಕ್ಕ ಇಲ್ಲದಷ್ಟು ಜವಿನಾನು, ಏನಪ! ಕೇಳು ಅಂದ, ನನಗೂ ವಿಚಾರಕ್ಕೆ ಬಿದ್ದಿತು. ಆದರೆ ಹೆಂಗಸರ ಬುದ್ಧಿ ಚುರುಕು ಅಂತಾರಲ್ಲ, ಆಕೆ ಥಟ್ಟನೆ ಕೇಳಿಯೆ ಬಿಟ್ಟಳು—ಇಪ್ಪತ್ತು ಸಂಡಿಗೆ-ಕುಂಬಳ ಬೇಕಂತೆ ವರ್ಷದ ಸಂಡಿಗೆ ಹಾಕಲಿಕ್ಕೆ! ಅದಕ್ಕೇ ಹೇಳ್ತೀನಿ, ಕನಸಿನ ಟೋಟಮೆಂಟಾಯ್ತು ಮನಸಿನ ಟೋಟಮೆಂಟ ಆಯ್ತು—ನೀವು ಬೇಕಾದ್ದ ಬೇಡೀರಿ, ಆದರೆ ದೇಶದೊಳಗಿನ ಈ ಸಂಸ್ಕಾರ ಇಲ್ಲದ ಮುಂಡೇವು ಸಂಡಿಗೆ ಕುಂಬಳಾನೇ ಬೇಡೋವು! ನಿಮ್ಮ ಗಾಂಧೀಗೆ ಹೇಳಿ ಬಿಡ್ಬೇಕು ಅಂತಿದ್ದೆ, ಅಪ! ನಿನ್ನಷ್ಟಕ್ಕೆ ನೀ ದೊಡ್ಡ ಮನುಷ್ಯ ಇದ್ದೀ, ಏನ್ಬೇಕು ಅದನ್ನ ಹೇಳಿಬಿಡು, ಈ ಧಡ್ಡ ರಂಡೇವನ್ನ ಕಿಕ್ಕಿಗೆ ಹಾಕಿಕೋಬೇಡ ಅಂತ.'

ಇದನ್ನು ಕೇಳಿ ನಿಮಗೆ ಏನೆನಿಸಬಹುದೋ—ನಮಗಂತೂ ವಿಶ್ವರೂಪದೆದುರು ನಿಂತ ಅರ್ಜುನನಂತಾಯಿತು. ಆಚಾರ್ಯರಿಗೆ ಮಾತ್ರ ಮಾತಿನ ಮಹತ್ತ್ವ ತಿಳಿದಿತ್ತೊ ಇಲ್ಲವೊ! ನಮ್ಮ ಮುಖದಲ್ಲಿ ಮೂಡಿದ ಭಯ-ನಯ-ಭಕ್ತಿಗಳ ಛಾಯೆಯನ್ನು ನೋಡಿದರೊ ಇಲ್ಲವೊ! ಅವರ ಮಾತಿನ ಓಘ ಹಾಗೆ ನಡೆದಿತ್ತು.

'ನನಗೂ ಏನೋ ನೆನಪಾಯಿತು ಅಂತ ಹೇಳಿದೆ. ಹಾಂಗ ಕೇಳಿದರೆ ನಿಮ್ಮ ಗಾಂಧಿ ವೈಸರಾಯರ ಕಡೆ ಹೋದದ್ದೂ ನನಗ ಗೊತ್ತಿರಲಿಲ್ಲ. ಒಂದು ಕಡೆ ಮನೆಯೊಳಗೆ ಯಾರಿಲ್ಲ ಅನ್ನೋದು, ಇನ್ನೊಂದು ಕಡೆ ಮನೆ ಮಾಯೆಯ ಪ್ರಸನ್ನ ಮಾಡೋವಷ್ಟು ದೇಶಾವರಿ ದೊರಕಿಸೋದು; ಈ ದ್ವೈತದೊಳಗ ಗಾಂಧಿ—ವೈಸರಾಯ ಇಂಥಾ ಪ್ರಾಪಂಚಿಕ ವರ್ತಮಾನದ ಕಡೆ ಲಕ್ಷ್ಯ ಹೋಗೋದು ಹ್ಯಾಗೆ? ಏನೋ-ಗಾಡಿಯೊಳಗ ಜನ ಮಾತಾಡ್ತಿದ್ದರು-ಬಡವರದಸಿಂದ ಮಳೆ ಆದರೂ ಬೇಡಬಾರದು ಅಂತ ಒಂದು ಕಡೆ, ನಂ ಹುಡುಗರಿಗೆ ನೋಕರಿ ಬೇಡಬಾರದು ಅಂತ ಒಂದು ಕಡೆ, ನಂನಂ ಜಾತೀಜನ ಒಟ್ಟಾದರೆ ಸಾಕು— ಆ ಮ್ಯಾಲೆ ದೇಶ ಒಂದಾಧಾಂಗೇ— ಅಲ್ಲಿಂದ ಸ್ವರಾಜ್ಯ ಸಿಕ್ಕಾಂಗೇ ಅಂತ ಇನ್ನೊಂದು ಕಡೆ— ಹೀಗೇ ಹೋದಹೋದಲ್ಲೆಲ್ಲ ಅದೇ ಹರಟೆ. ನನಗೂ ಆಗಾಗ ನಡುವೆ ಲೋಕಸಂಗ್ರಹಕ್ಕಾಗಿ ಇಳಿಯಬೇಕಾಗತಿತ್ತು ಅಂತ ಮೊದಮೊದಲು ಈ ಹರಟೆಯ ಸುಳಿವೇ ಹತ್ತಿರಲಿಲ್ಲ. ಅಂತೂ ಹೇಳಿದೆ— ಮದಿವೆ ಆದರೆ ತಿಳಿದೀತು ಅಂತ'

ಯಾರೋ ಒಬ್ಬರು ಗಟ್ಟಿಸಿಯೆ ನಕ್ಕರು.

'ಮತ್ತೂ ನಗತೀಯಲ್ಲೋ?' ಎಂದರು ಆಚಾರ್ಯರು ಹಿರಿತನದಿಂದ. 'ನೋಡಿದಿ ಇಲ್ಲೊ? ನಾ ನನಗಾಗಿ ದೇಶಾವರಿಗೆ ಹೋಗತೀನೆ? ನಿಮ್ಮಂಥವರನ್ನ ನಿಮ್ಮ ಕನಸಿನ ಟೂಟುಮೆಂಟಿನೊಳಗ ಕೇಳಿದರೆ— ನಮಗ ಏನ ದೇಶ ಅಂದರ— ಒಳಗ ಹೋಗಿ ಆಕೇನ್ನ ಕೇಳಿಬರತೀವಿ ಅನ್ನೋವವರು! ಹಹ! ಹುಚ್ಚುಮುಂಡೇಗಂಡ! ಅದಕ್ಕೇ ಹೇಳಿರುವ ಪರಮಾತ್ಮ— ಮಾಮನುಷ್ಯರ ಯುದ್ಧ ಚಕಚಿದಾಟ ಬಿಟ್ಟಿಲ್ಲ, ರಂಡೇಮಾಲ್ಯಾ, ನಿಮಗ; ನನ್ನ ಹೆಸರಲೆ ಕಡಿದಾಡಿರಿ ಅಂತ!

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮುಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!

೮ ಆಣೆಗೆ ೧೦ ಬ್ಲೇಡು!

ಗಿಳಿಗೆ

ಶ್ರೀಧರಶರ್ಮಾ

೧

ಗಿಳಿಯೇ ನಂಬಿಹೆ ಯಾರನು, ನಂಬಿಗೆ-
ಗಿಂಬುಗೊಡದವರ ಬಿಡೆಯೇಕೆ?
ಗಿಳಿಯೇ ನೀನಾರ್ಗೊಲಿದಿಹೆ, ಒಲಿಯದ
ಹಕ್ಕಿಗಳೊಡನಾಡುವೆಯೇಕೆ?
ಬೆಳೆದುಜ್ವಲಿಸುವ ಶಕ್ತಿಯು ಹೊಸ ಹರಿ-
ವೊನಲ ತಡೆವ ಸಾಹಸವೇಕೆ?
ಮಳೆಗಾಲದ ಕಿರುಬಿಸಿಲನು ಸೇವಿಸ-
ದಾಲಸ್ಯವು ಬಂದಿದೆಯೇಕೆ?

೨

ಗುಡುಗಿನ ಗದ್ದಲಕಂಜುತ ಕುಸುಮವು
ಕೋಮಲತೆಯನೀಡಾಡುವುದೆ?
ಕೆಡೆದೆಸೆದರು ಜೇನ್ಗೂಡನು ಕಟ್ಟುವ
ಹಂಬಲವನು ಮರೆತೋಡುವುದೆ?
ಪುಡುಗಿಚ್ಚಿನ ಕಾವಿಗು ಸಕ್ಕರೆ ಸಿಹಿ-
ತನವಳಿದೇಂ ಕಹಿಯಾಗುವುದೆ?
ಪಡೆಮಾತೇಂ ನಿಜಗುಣವೇ ಗುಣವದ-
ನುಳಿವುದು ನಿನಗಳವಾಗುವುದೆ?

೩

ಪ್ರಕೃತಿಯ ಮಡಿಲಲಿ ಬೆಳೆದೆಳವಕ್ಕಿಗೆ
ಪತ್ತನದುದ್ಯಾನವು ಬೇಕೆ?
ಸುಕೃತಿಯು ಫಲಿಸಿದ ನರನಿಗೆ ಲೋಕದ
ಸಂಭಾವದ ಹಂಗಿರಬೇಕೆ?
ವಿಕೃತಾರ್ಥದ ವ್ಯಾಖ್ಯಾನವ ಕೇಳ್ವಲಿ-
ವುದನುಲಿಯದೆ ಬಿಡಲಾದೀತೆ?
ಪ್ರಕೃತಿಯ ಬಿಡದಿರು ಗಿಳಿಯೇ, ನನ್ನೀ
ಸಕೃದುಚ್ಚಾರವೆ ದಿಟವಲ್ತೇ!

ಅರ್ಥಶಾಸ್ತ್ರವಿಶಾರದರಾದ ಕನ್ನಡಿಗರೊಬ್ಬರು

ಪ್ರಿನ್ಸಿಪಾಲ್ ಜಠಾರ ಗಣಪತಿರಾಯರು

★

‘ ವಿಹಂಗಮ ’

‘ ಶಕ್ತನಾದರೆ ನಂಟರೆಲ್ಲ ಹಿತರು ’ ಎಂದು ದಾಸರು ಎಲ್ಲರ ಅನುಭವವನ್ನೂ ಹಾಡಿದ್ದಾರೆ. ಕನ್ನಡನಾಡು ಸಂಘಟನೆಹೊಂದಿ ತನ್ನ ಕಾಲಮೇಲೆ ತಾನು ನಿಂತಾಗ, ಹೊರಗಿನ ಕನ್ನಡಿಗರೆಲ್ಲರ ದೃಷ್ಟಿ ಕನ್ನಡನಾಡಿನ ಕಡೆಗೆ ತಿರುಗುವುದು; ತಮ್ಮ ನಾಡೆಂಬ ಆತ್ಮೀಯತೆ ಅವರಲ್ಲಿ ತಲೆದೋರುವುದು. ಹಾಗಾಗದೆ ಹೋದಲ್ಲಿ ಹೊರಗೆ ಹೋದ ಕನ್ನಡಿಗರೆಲ್ಲ ಹೊರಗಿನವರೇ ಆಗಿಬಿಟ್ಟು, ನಾಡಿನ ಶಕ್ತಿಯೆಲ್ಲ ಕುಗ್ಗಿ ಹೋಗುವುದು.

★

ಶ್ರೀಮಾನ್ **ಜಠಾರ ಗಣಪತಿರಾಯರು** ತಮ್ಮ ಮೂರನೆಯ ಸಲದ ಪಶ್ಚಿಮಯಾತ್ರೆಯನ್ನು ಮುಗಿಸಿ, ಕಳೆದ (೧೯೩೯) ಅಕ್ಟೋಬರ್ ತಿಂಗಳಲ್ಲಿ ಮರಳಿ ಭಾರತಕ್ಕೆ ಬಂದರು. ‘ ಜಠಾರ ಗಣಪತಿರಾಯರು ’ ಎಂದೊಡನೆ ಇವರಾರೆಂದು ಅನೇಕರಿಗೆ ಗುಂಭ ಬೀಳಬಹುದು. ಆದರೆ **ಪ್ರೊಫೆಸರ್ ಜಠಾರ** ಎಂದೊ, **ಪ್ರಿನ್ಸಿಪಾಲ್ ಜಠಾರ** ಎಂದೊ ಇವರು ಸುಶಿಕ್ಷಿತ ಪ್ರಪಂಚಕ್ಕೆಲ್ಲ ಪರಿಚಿತರಾಗಿರುವರು. ತಮ್ಮ ‘ ಇಂಡಿಯನ್ ಎಕಾನಾಮಿಕ್ಸ್ ’ ಎಂಬ ಗ್ರಂಥದಿಂದ, ಭಾರತದಲ್ಲಿಯ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ ವಿದ್ಯಾರ್ಥಿಗಳೊಂದಿಗೆ ತಮ್ಮ ಪರಿಚಯಮಾಡಿಕೊಂಡಿರುವರು. ಈ ‘ಪ್ರೊಫೆಸರ್’ ‘ಪ್ರಿನ್ಸಿಪಾಲ’ ಜಠಾರರಿಗೇ ಗಣಪತಿರಾಯರೆಂದು ಹೆಸರು.

ಮಗನನ್ನು ಐ. ಸಿ. ಎಸ್. ಪರೀಕ್ಷೆಗಾಗಿ ಇಂಗ್ಲೆಂಡಿಗೆ ಕಳುಹಬೇಕಾಗಿದ್ದಿತು. ಅವನನ್ನು ಕಳುಹಿದಂತಾಯಿತು, ಯುರೋಪಿನ ಯಾತ್ರೆಯನ್ನೂ ಮಾಡಿದಂತಾಯಿತು ಎಂಬ ಅಭಿಪ್ರಾಯದಿಂದ, ಕಳೆದ ವರ್ಷದ ಮಾರ್ಚ ತಿಂಗಳಲ್ಲಿ ಸಕುಟುಂಬವಾಗಿ ಇವರು ಪಶ್ಚಿಮದೇಶದ ಪ್ರಯಾಣವನ್ನು ಕೈಕೊಂಡರು. ಹೋದ ಸ್ವಲ್ಪ ದಿನಗಳೊಳಗಾಗಿಯೆ ಜರ್ಮನಿಯು ಪೋಲಂಡನ್ನು ಯುದ್ಧಕ್ಕೆ ಕೈವೀಸಿ ರಣಕಹಳೆಯನ್ನೂದಿತು. ಇವರು ಪ್ರವಾಸಮಾಡಬೇಕೆಂದಿದ್ದ ಮುಖ್ಯ ಮುಖ್ಯ ರಾಷ್ಟ್ರಗಳಲ್ಲೆಲ್ಲ ಯುದ್ಧದ ಪ್ರಚಂಡ ಬಿರುಗಾಳಿ ಬೀಸಲಾರಂಭಿಸಿತು ಆದುದರಿಂದಲೆ ಅರ್ಧಕ್ಕೆ ತಮ್ಮ ಪ್ರವಾಸವನ್ನು ಮುಗಿಸಿ ಗಣಪತಿರಾಯರು ಮರಳಿ ಮಾತೃಭೂಮಿಗೆ ಬರಬೇಕಾಯಿತು.

ಯುದ್ಧಾರಂಭದ ಮೊದಲುದಿನಗಳಲ್ಲಿ ರಾಯರು ಜರ್ಮನಿಯಲ್ಲಿಯೆ ಇದ್ದರೆಂಬುದು ನನಗೆ ಗೊತ್ತಾಯಿತು. ಆದುದರಿಂದಲೆ ಆಗಿನ ಜರ್ಮನಿಯ ವಾತಾವರಣದ ವಿರಳಿತಗಳನ್ನು ಅವರ ಬಾಯಿಂದಲೆ ಕೇಳಿಕೊಳ್ಳಬೇಕೆಂಬ ಆತುರ ಉಂಟಾಯಿತು. ಅಲ್ಲದೆ ಜಯಂತಿಯ ವಾಚಕರಿಗೆ– ಕನ್ನಡಿಗರಾದ– ಪ್ರಿನ್ಸಿಪಾಲ್ ಜಠಾರ ಅವರ ಪರಿಚಯವನ್ನು ಮಾಡಿಕೊಡಬೇಕೆಂಬ ಅಪೇಕ್ಷೆಯೂ ಬಹುಕಾಲದಿಂದಿತ್ತು. ಎಂತಲೆ ಅವರನ್ನು ಕಾಣುವ ದಿನಕ್ಕಾಗಿ ಕಾಯುತ್ತಲಿದ್ದೆ; ನನ್ನ ಉತ್ಕಟತೆಯ ಫಲವಾಗಿಯೊ ಏನೊ ಆ ದಿನ ಬೇಗನೆ ಬಂದೂ ಬಿಟ್ಟಿತು.

ಕಳೆದ ದೀಪಾವಳಿಯ ಬಿಡುವಿನಲ್ಲಿ ಪ್ರಿ. ಜಠಾರ ಅವರು, ತಮ್ಮ ಹುಟ್ಟೂರಾದ ಧಾರವಾಡಕ್ಕೆ ಬಂದು, ಕೆಲಗೆರೆಯ ಬಳಿಯ ಸ್ವಂತದ ಬಂಗ್ಲೆಯಲ್ಲಿ ವಾಸಿಸುತ್ತಿದ್ದರು. ಅವರ ಸಂಬಂಧಿಕರೊಬ್ಬರಿಂದ ಈ ವರ್ತಮಾನ ನನಗೆ ಸಿಕ್ಕಲು, ಸಂದರ್ಶನಕ್ಕಾಗಿ ಬರೆದು ಕೇಳಿಕೊಂಡೆ. ನನ್ನ ಬಿನ್ನಹವು ಮನ್ನಣೆ ಹೊಂದಿ, ಗಣಪತಿರಾಯರಿಂದ ಸಂದರ್ಶನದ ದಿನವೂ ಕಾಲವೂ ಬರೆದು ಬಂದಿತು. ನಾನೂ, ನನ್ನ ಮೂರು ನಾಲ್ಕು ಜನ ಸ್ನೇಹಿತರೂ ಸೇರಿ ಹೊರಡುವುದಾಗಿ ನಿರ್ಣಯಿಸಿದೆವು.

* * *

ನಾವು ಹೋಗಿ ಪಡಸಾಲೆಯಲ್ಲಿಯೆ ಅಂದವಾಗಿಯೂ ಅಚ್ಚುಕಟ್ಟಾಗಿಯೂ ಇರಿಸಿದ್ದ ಕುರ್ಚಿಗಳನ್ನಲಂಕರಿಸಿ ಕುಳಿತೆವು. ನಮ್ಮ ಆಗಮನವನ್ನು ಆಳು ಒಳಗಿದ್ದ ರಾಯರಿಗೆ ತಿಳುಹಿದನೇನೊ. ಮುಗುಳುನಗೆಯ ಮೊಗದಿಂದ ಹೊರಕ್ಕೆ ಬಂದು, ತಮಗೆಂದಿದ್ದ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ನಗೆಮಾತಿನಲ್ಲಿ ಕೇಳಿದರು:–

“ ಏನು, ವಧೂಪರೀಕ್ಷೆಗೆ ಬಂದಿದ್ದೀರಾ ನೀವೆಲ್ಲ ! ”

ಅವರು ನುಡಿದ ನಗೆಮಾತು ಸಂದರ್ಭಕ್ಕೆ ತುಂಬ ಒಪ್ಪುವಂತಹದಿದ್ದಿತು. ದೊಡ್ಡವರ ಸಂದರ್ಶನಕ್ಕಾಗಿ ಹೋಗುವುದಿದ್ದುದರಿಂದ ಇದ್ದುದರಲ್ಲಿಯೆ ಅಚ್ಚುಕಟ್ಟಾದ ಬಟ್ಟೆಬರೆಗಳನ್ನು ನಾವೆಲ್ಲ ತೊಟ್ಟು-



ಪ್ರಿನ್ಸಿಪಾಲ್ ಜಠಾರರು　　ಶ್ರೀಮತಿ ಜಠಾರರು　　ಕುಮಾರ ಕ್ಷಿತೀಶ ಜಠಾರರು

ಕೊಂಡಿದ್ದೆವು. ಯಾರಲ್ಲಿಯೊ ಎರವಲಾಗಿ ಕೇಳಿ ಒಂದು ಸುಂದರವಾದ ಮೋಟಾರ್-ಕಾರನ್ನು ಸಂಪಾದಿಸಿಕೊಂಡು, ಅದರಲ್ಲಿ ಪಯಣ ಬೆಳಸಿದ್ದೆವು. ಅಲ್ಲದೆ ಸಂದರ್ಶನಕ್ಕೆ ಹೋದವರು ಐದು ಜನ. ಇದೆಲ್ಲ ಒಮ್ಮೆಲೆ ನಮಗೆ ಹೊಳೆದು, ರಾಯರ ಮಾತಿಗೆ ಎಲ್ಲರೂ ಮನಸಾರೆ ನಕ್ಕೆವು.

ಆಗಿನ ಅವರ ಉಡಿಗೆ-ತೊಡಿಗೆ ತೀರ ಸಾದಾತರದ್ದಿದ್ದಿತು. ಅಚ್ಚಬಿಳಿಯದಾದ ತೆಳ್ಳನೆಯ ಪಂಚೆಯನ್ನುಟ್ಟಿದ್ದರು. ಮೈಯಲ್ಲಿಯೂ ತೆಳುವಾದ ಒಂದು ಷರ್ಟು. ತಲೆಗೆ- ಗಾಂಧೀಯರ್ಗಕ್ಕೆ ಒಪ್ಪುವಂತಹ-ಕಿರುಗೊದಲ ಕ್ರಾಪು. ಮುಖವನ್ನು ಬಿಟ್ಟು ಎಂದೂ ಅಗಲದಿರಬಹುದು, ಅಂತಹ ಮುಗುಳುನಗೆ. ವಯಸ್ಸು ಅರವತ್ತಕ್ಕೆ ಸಮೀಪಿಸಿದ್ದರೂ ಮುಪ್ಪಿನ ಗುರುತನ್ನೆ ಕಾಣಿಸದ ಮೈಬಣ್ಣ. ಹೆಚ್ಚು ಎತ್ತರವೂ ಅಲ್ಲ--ಕುಳ್ಳೂ ಅಲ್ಲ— ಅಂತಹ ನಿಲುವಿಕೆ. ಆಗಿನ ಅವರ ವೇಷ-ಭೂಷಣಗಳನ್ನು ಕಂಡು 'ಇವರು ಮೂರು ಸಲ ಪಶ್ಚಿಮಯಾತ್ರೆಯನ್ನು ಮಾಡಿದವರಾಗಿರಬಹುದೇ?' ಎಂದು ಸಂದೇಹಮನಸ್ಕರಾಗಬಹುದು ಯಾರೂ. ಮೊದಲು ಮಾತನ್ನು ಹೇಗೆ ಪ್ರಾರಂಭಿಸಬೇಕೆಂಬುದು ತಿಳಿಯದೆ ನಾವೆಲ್ಲ ಒಬ್ಬರನ್ನೊಬ್ಬರು ನೋಡಲಾರಂಭಿಸಿದ್ದೆವು. ಆಗ ರಾಯರೆ ಮಾತಿಗೆ ಮೊದಲುಮಾಡಿದರು.

"ನನ್ನ ವಿಷಯದಲ್ಲಿ ನಿಮಗೇನು ಬೇಕಾಗಿದೆ? ನಾನೇನು ಅಂತಹ ದೊಡ್ಡ ಮನುಷ್ಯನಲ್ಲ; ನನ್ನ ಚರಿತ್ರೆಯಲ್ಲಿ ಅಂತಹ ಉಜ್ವಲ ಸಂದರ್ಭಗಳೇನೂ ಸಿಕ್ಕುವಂತಿಲ್ಲ. ಎಲ್ಲರಂತೆಯೆ ಹುಟ್ಟಿದೆ. ಅನುಕೂಲತೆಯಿದ್ದಿತೆಂದು ಕಲಿತೆ; ಜೀವನಪ್ರವಾಹದಲ್ಲಿ ಕೈಗೆ ದೊರೆತ ಕೆಲಸವೊಂದನ್ನು ಮಾಡುತ್ತಿದ್ದೇನೆ. ನಾನೇನು ದೇಶಭಕ್ತನಲ್ಲ; ಸಾಹಿತಿಯಲ್ಲ. ನನ್ನ ಸಂದರ್ಶನದಲ್ಲಿ ತಮಗೆ ಏನು ವಿಶೇಷ ದೊರೆತೀತು?"

ಈ ಮಾತಿನಲ್ಲಿ ಹುದುಗಿದ್ದ ಅವರ ನಿರಭಿಮಾನವೃತ್ತಿ ನಮ್ಮನ್ನು ವಿಸ್ಮಿತರನ್ನಾಗಿ ಮಾಡಿತು. ಆ ಮಾತಿಗೆ ಸರಿತೂಗುವ ಉತ್ತರವನ್ನೆ ಕೊಡಬೇಕೆಂದು ಯೋಚಿಸಿ ನಾನು ಹೇಳತೊಡಗಿದೆ:

"ತಮ್ಮ ಚರಿತ್ರೆಯಲ್ಲಿ ಅಂತಹ ಉಜ್ವಲ ಸಂದರ್ಭಗಳಿರದಿದ್ದರೆ ಹೋಗಲಿ; ಮೂರುಸಲ ಪಶ್ಚಿಮದೇಶದ ಯಾತ್ರೆಯನ್ನು ಮಾಡಿ ಬಂದಿದ್ದೀರಿ. ಕಳೆದ ಮಹಾಯುದ್ಧದ ಕಾಲವನ್ನೆಲ್ಲ ಇಂಗ್ಲೆಂಡಿನಲ್ಲಿ ಕಳೆದಿದ್ದೀರಿ (೧೯೧೪ ರಿಂದ ೧೯೧೬ ರ ವರೆಗೆ ಇವರು ಎಡಿನ್‌ಬರೋ ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪರೀಕ್ಷೆಗಾಗಿ ಓದುತ್ತಿದ್ದರು). ಈಗ ನಡೆದ ಮಹಾಯುದ್ಧದ ಆರಂಭದಿನಗಳನ್ನು ತಾವು ಜರ್ಮನಿಯಲ್ಲಿಯೆ ಕಳೆದಿದ್ದೀರೆಂದು ಕೇಳಿದ್ದೇವೆ. ಈ ಪರಿಸ್ಥಿತಿಯ ಅನುಭವವೇನು ಕಡಿಮೆಯದೇ? ಆ ಅನುಭವವನ್ನು ಅರಿತುಕೊಳ್ಳಬೇಕೆಂಬ ಉತ್ಕಂಠೆಯಿಂದಲೆ ನಾವೀಗ ತಮ್ಮಲ್ಲಿಗೆ ಬಂದಿದ್ದೇವೆ."

ರಾಯರು ಕಿರುನಗೆಯಲ್ಲಿಯೆ ಹೇಳಿದರು:

"ಹೀಗೇನು? ಆಗಲಿ, ತಮಗೆ ಯಾವ ವಿಷಯಬೇಕೋ ಅದನ್ನು ಕೇಳಿಕೊಳ್ಳಿ!"

ನಮ್ಮ ಸ್ನೇಹಿತರೊಬ್ಬರು ಮೊದಲನೆಯ ಪ್ರಶ್ನೆಯನ್ನೇ ಹೀಗೆ ಕೇಳಿದರು:

“ಯುದ್ಧಪೂರ್ವದಿನಗಳನ್ನು ತಾವು ಜರ್ಮನಿಯಲ್ಲಿಯೆ ಕಳೆದಿರಲ್ಲ; ಆಗ ಅಲ್ಲಿಯ ಪರಿಸ್ಥಿತಿ ಹೇಗಿದ್ದಿತು? ತುಂಬ ಕುತೂಹಲಪೂರ್ಣವಾದ ವಾತಾವರಣ ಉಂಟಾಗಿರಬಹುದಲ್ಲವೇ ಎಲ್ಲೆಲ್ಲಿಯೂ?”

“ಇಲ್ಲ; ಎಂದಿನಂತೆಯೆ ಸುಯಂತ್ರಿತವಾಗಿ ಎಲ್ಲ ವ್ಯವಹಾರಗಳೂ ನಡೆಯುತ್ತಿದ್ದುವ. ಇಷ್ಟು ಬೇಗನೆ ಯುದ್ಧಪ್ರಾರಂಭವಾದೀತೆಂದು ಜರ್ಮನಿಯಲ್ಲಿಯ ಜನಸಾಮಾನ್ಯರಿಗಾಗೂ ಎನಿಸಿರಲಿಲ್ಲ; ಇಷ್ಟೇ ಅಲ್ಲ; ಹಿಟ್ಲರನ ತೀರ ಹತ್ತಿರದ ಸಲಹೆಗಾರರು ಕೂಡ ಹಾಗೆ ಭಾವಿಸಿರಲಾರರೆಂದು ನನಗೆ ಎನಿಸುವುದು. ಆದರೆ ಯುದ್ಧ ಪ್ರಾರಂಭವಾಗಬಹುದೆಂಬ ಮಾತನ್ನು ಎಲ್ಲರೂ ಆಡುತ್ತಿದ್ದರು.”

“ಹಿಟ್ಲರನ ವಿಷಯದಲ್ಲಿ ಜನಸಾಮಾನ್ಯರ ಭಾವನೆ ಹೇಗಿದೆ?”

“ನನ್ನ ಕೇಳಿಕೆಯಲ್ಲಿ ಜರ್ಮನ್‌ಜನರ ಸಂಪೂರ್ಣ ಶ್ರದ್ಧೆ ಹಿಟ್ಲರನಲ್ಲಿ ನೆಲಸಿರುವುದು. ಇದಕ್ಕೆ ಕಾರಣವೆಂದರೆ ಹಿಟ್ಲರನ ನಿಸ್ವಾರ್ಥದ ಹೋರು, ಜರ್ಮನ್ ಜನಾಂಗದ ಸುಖ-ಸಮಾಧಾನದ ವಿಷಯದಲ್ಲಿ ತೋರಿಸುತ್ತಿರುವ ಅವನ ಕಳವಳ; ತಳಮಳ. ಹಿಟ್ಲರನ ಕಾರ್ಯಪದ್ಧತಿಯನ್ನು ಮೆಚ್ಚದವರು ಜರ್ಮನಿಯಲ್ಲಿ ಅನೇಕರಿರಬಹುದು; ಆದರೆ ಆತನ ಅತಿಶಯವಾದ ದೇಶಾಭಿಮಾನಕ್ಕಾಗಿ ಎಲ್ಲ ಮತಭೇದಗಳನ್ನೂ ಮರೆತು, ಎಲ್ಲರೂ ಅವನನ್ನು ಬೆಂಬತ್ತುವರು. ತೀರ ಕೆಲವು ಜನರು ಹಿಟ್ಲರನ ಕಾರ್ಯವಿರೋಧಿಗಳಿರಬಹುದು. ಆದರೆ ಆತನ ಅಧಿಕಾರದರ್ಪವೂ ಬಹುಜನದ ಬೆಂಬಲವೂ ಈ ಕೆಲವೆ ಕೆಲವು ಜನರಿಗೆ, ನಾಲಗೆಯನ್ನು ಕೂಡ ಹೊರಕ್ಕೆ ತೆಗೆಯಲು ಬಾರದಂತೆ ಮಾಡಿವೆ. ಆದ್ದರಿಂದಲೆ ನೋಡಿದವರಿಗೆ ಒಮ್ಮೆಲೆ ಹೀಗೆ ಎನಿಸುವುದು: ಸಂಪೂರ್ಣ ಜರ್ಮನ್ ರಾಷ್ಟ್ರವೆ ಹಿಟ್ಲರನ ಬೆನ್ನು ಹತ್ತಿ ನಡೆಯಲಿಕ್ಕೆ ಸಿದ್ಧವಿದೆಯೆಂದು.”

“ಹಿಂದುಸ್ತಾನದ ವಿಚಾರದಲ್ಲಿ ಜರ್ಮನರ ಮನದಲ್ಲಿರುವ ಭಾವನೆಗಳು ಯಾವ ಬಗೆಯವು?”

“ಜರ್ಮನಿಯಲ್ಲಿಯ ಪ್ರತಿಯೊಬ್ಬ ರಾಜಕಾರ್ಯವಿದನೂ ತಮ್ಮಲ್ಲಿಗೆ ಬಂದ ಹಿಂದೂಮನುಷ್ಯನಿಗೆ ‘ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಡಿಸುವುದು ನಮ್ಮ ಕೈಯಲ್ಲಿಯೆ ಇದೆ. ನಮ್ಮ ನೆರವಿಲ್ಲದೆ ನೀವು ಅದನ್ನು ಎಂದೂ ಪಡೆಯಲಾರಿರಿ’ ಎಂಬ ಮಾತನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುವನು. ಜರ್ಮನಿಯ ಸುಸಜ್ಜಿತ ಸೈನ್ಯವೆಂದರೆ ಹಿಂದುಸ್ತಾನದ ಸ್ವಾತಂತ್ರ್ಯಸಿದ್ಧಿಗಾಗಿಯೆ ಇವೆಯೆಂಬ ಮಾತನ್ನು ಮತ್ತೆ ಮತ್ತೆ ಹೇಳುವನು. ಹಿಂದೂ ಜನರ ವಿಚಾರದಲ್ಲಿ ಜರ್ಮನಿಯಲ್ಲಿ ತಿರಸ್ಕಾರ ಭಾವನೆ ಕಾಣುವುದಿಲ್ಲವಿಷ್ಟೇ ಅಲ್ಲ; ಬಿಳಿಯ ಜನರು ನಮ್ಮನ್ನು ಕಾಣದಷ್ಟು ಸಹಾನುಭೂತಿ ಆತ್ಮೀಯತೆಗಳಿಂದ ಅಲ್ಲಿಯವರು ನಮ್ಮನ್ನು ಕಾಣುತ್ತಾರೆ. ನಾವು ಕಪ್ಪುಬಣ್ಣದವರೆಂಬ ತಿರಸ್ಕಾರದ ಅನುಭವ ಜರ್ಮನಿಯಲ್ಲಿರುವಾಗ ನನಗೆಲ್ಲಿಯೂ ಬರಲಿಲ್ಲ.”

“ಪರದೇಶೀಯರು ತಮ್ಮಲ್ಲಿಗೆ ಬಂದಾಗ ಜರ್ಮನ್ ಆಡಳಿತವು ಅವರೊಂದಿಗೆ ಹೇಗೆ ನಡೆದುಕೊಳ್ಳುವುದು?”

“ತೀರ ವಿಶ್ವಾಸದಿಂದ ನಡೆದುಕೊಳ್ಳುವುದು; ಇಷ್ಟೇ ಅಲ್ಲ. ಜರ್ಮನರು ದುಷ್ಟರಲ್ಲ, ನೀಚರಲ್ಲ, ಪಶುಗಳಲ್ಲ. ಅವರು ತುಂಬ ನಾಗರಿಕರು, ಸುಸಂಸ್ಕೃತರು, ಎಂಬ ಅರಿಕೆಯುಂಟಾಗುವಂತೆ ಅದು ಎಚ್ಚರಪಡುತ್ತದೆ. ಜರ್ಮನಿಯಲ್ಲಿ ತಿರುಗಾಡಬೇಕೆನ್ನುವ ವಿದೇಶೀಯ ಪ್ರವಾಸಿಗೆ ಆಡಳಿತವು ಅನೇಕ ಬಗೆಯಿಂದ ಸೌಕರ್ಯಗಳನ್ನೊದಗಿಸಿಕೊಡುವುದು. ರೇಲ್ವೆಯ ವೆಚ್ಚದಲ್ಲಿ ೧೦೦ ಕ್ಕೆ ೬೦ ರಷ್ಟು, ವಿದೇಶೀಯರಿಗೆ ರಿಯಾಯಿತಿ ತೋರಿಸಲಾಗುವುದು. ಜರ್ಮನರ ವಿನೀತ ಸ್ವಭಾವದ ಮೂಲಕ, ಯಾವ ತೊಂದರೆಯೂ ಇಲ್ಲದೆ ಜರ್ಮನಿಯಲ್ಲಿ ಪ್ರವಾಸಮಾಡಿ ಬರಬಹುದು. ಯುದ್ಧಪೂರ್ವದಿನದಲ್ಲಿಯೆ ನಾನಲ್ಲಿ ಇದ್ದರೂ, ಈ ಮಾತಿನ ಅನುಭವ ನನಗೆ ತುಂಬ ಬಂದಿತು.”

“ಹಿಂದುಸ್ತಾನದಿಂದ ಕಲಿಯಲಿಕ್ಕೆಂದು ಇಂಗ್ಲೆಂಡಿಗೆ ಹೋದ ವಿದ್ಯಾರ್ಥಿಗಳಲ್ಲಿಯ ಬಹುಸಂಖ್ಯಾಕರು, ತಮ್ಮ ವಿಲಾಸಜೀವನದ ಮೂಲಕ ಅಲ್ಲಿಯ ಜನರ ತಿರಸ್ಕಾರಕ್ಕೆ ಪಾತ್ರರಾಗಿರುವರು. ಜರ್ಮನಿಯಲ್ಲಿರುವ ಹಿಂದೀವಿದ್ಯಾರ್ಥಿಗಳು ಹೇಗೆ ಇದ್ದಾರೆ? ಇಂಗ್ಲೆಂಡಿನಂತೆಯೆ ಪರಿಸ್ಥಿತಿಯೇನು ಅಲ್ಲಿಯೂ?”

“ಇಲ್ಲ, ಇಂಗ್ಲೆಂಡಿನಂತಹ ಪರಿಸ್ಥಿತಿ ಅಲ್ಲಿ ಕಂಡುಬಾರದು. ಏಕೆಂದರೆ ಇಂಗ್ಲೆಂಡಿಗೆ ಹೋಗುವ ಹಿಂದೀ ವಿದ್ಯಾರ್ಥಿಗಳು ಬಹುತರವಾಗಿ ಶ್ರೀಮಂತರಿರುವರು. ಅವರಲ್ಲಿಯ ಅನೇಕರು ಕಲಿಯುವುದನ್ನೆ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿರುವುದಿಲ್ಲ.

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ **ಚಮನ** ಬಾ. ಕಿ. ೪ ಆ.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

ಇಂಗ್ಲೆಂಡಿನಲ್ಲಿ ವಿಲಾಸದ ಅನುಕೂಲತೆಗೆ ಕಡಿಮೆಯಿರದು; ವಿದ್ಯಾರ್ಥಿಗಳ ಬಳಿ ಹಣ ಬೇಕಾದಷ್ಟು ಇರುವುದು. ಆದುದರಿಂದ ಇಂಗ್ಲೆಂಡಿಗೆ ಹೋಗುವ ಹಿಂದೀ ವಿದ್ಯಾರ್ಥಿಗಳು ಕೆಟ್ಟ ಹೆಸರನ್ನು ಸಂಪಾದಿಸುವರು. ಆದರೆ ಜರ್ಮನಿಗೆ ಹೋಗುವ ವಿದ್ಯಾರ್ಥಿಗಳ ಮಾತು ಹಾಗಲ್ಲ. ಮೊದಲು ಜರ್ಮನಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯೆ ತೀರ ಕಡಿಮೆ. ಹೋಗುವವರು ತಮ್ಮ ಪ್ರೀತಿಯ ವಿಷಯವನ್ನು ಮನಗೊಟ್ಟು ಕಲಿತು ಬರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಹೋಗುವರು. ಹೀಗೆ ಹೋಗುವವರಲ್ಲಿ, ಯಾವುದಾದರೊಂದು ವಿದ್ಯಾರ್ಥಿವೇತನ ಪಡೆದ ಬಡವಿದ್ಯಾರ್ಥಿಗಳೆ ಹೆಚ್ಚು ಜನರು. ತಮಗೆ ಸಿಕ್ಕುವ ವಿದ್ಯಾರ್ಥಿವೇತನವನ್ನು ಕಾಯ್ದುಕೊಳ್ಳುವುದಕ್ಕಾಗಿ ಅವರು ಹಗಲಿರುಳೂ ಜಾಗೃತರಾಗಿರಬೇಕಾಗುತ್ತದೆ. ಆದುದರಿಂದಲೆ ಅಲ್ಲಿಯ ವಿದ್ಯಾರ್ಥಿಗಳಿಗೆ ವಿಲಾಸಜೀವನಕ್ಕೆ ಆಸ್ಪದವೆ ದೊರೆಯದು. ಎಂತಲೆ ಹಿಂದೀ ವಿದ್ಯಾರ್ಥಿಗಳು ತಮ್ಮ ಸೌಶೀಲ್ಯದ ಮೂಲಕ ಅಲ್ಲಿ ಹಿಂದುಸ್ಥಾನದ ಒಳ್ಳೆಯ ಹೆಸರನ್ನು ಉಳಿಸಿದ್ದಾರೆ."

ಇದನ್ನೆಲ್ಲ ಕೇಳಿದಾಗ ನಮ್ಮೆಲ್ಲರ ಮುಖದಿಂದಲೂ ಸಮಾಧಾನದ ನಿಟ್ಟುಸಿರು ಹೊರಬಿದ್ದಿತು. ಬಳಿಕ ನಮ್ಮ ಸ್ನೇಹಿತರೊಬ್ಬರು ಕುತೂಹಲಿಗಳಾಗಿ ಕೇಳಿದರು:

"ಜರ್ಮನಿಯಲ್ಲಿಯ ಜನರು ನಮ್ಮ ಮಹಾತ್ಮಾ ಗಾಂಧಿಯವರನ್ನು ಒಬ್ಬ ಧಾರ್ಮಿಕಸಾಧುವೆಂದು ತಿಳಿಯುವರೋ, ರಾಜಕಾರ್ಯವಿದನೆಂದು ತಿಳಿಯುವರೊ?"

ಸ್ವಲ್ಪ ತಡೆದು ಯೋಚನೆಮಾಡಿ ರಾಯರು ಹೇಳಿದರು:

"ನನಗೆ ಗೊತ್ತಿದ್ದಮಟ್ಟಿಗೆ ಮಹಾತ್ಮರನ್ನು ರಾಜಕಾರ್ಯವಿದರೆಂದು ಎಣಿಸುವವರೆ ಜರ್ಮನಿಯಲ್ಲಿ ಹೆಚ್ಚು ಜನರು. ಅಲ್ಲಿಯ ಇಂದಿನ ವೈಜ್ಞಾನಿಕ ಜೀವನದ ಮೂಲಕ ಧರ್ಮ, ಸಾಧುತ್ವ ಇವುಗಳಲ್ಲಿ ಜರ್ಮನರಿಗೆ ಅಷ್ಟೊಂದು ನಂಬುಗೆಯೆ ಇಲ್ಲವಾಗಿದೆ. ಎಲ್ಲವನ್ನೂ ಅವರು ಭೌತಿಕ ವ್ಯವಹಾರ ದೃಷ್ಟಿಯಿಂದಲೆ ನೋಡುವರೆಂದ ಮೇಲೆ ಗಾಂಧಿಯವರನ್ನು — ಅದರಲ್ಲಿಯೂ ರಾಜಕಾರ್ಯ ಪಟುಗಳಾದ ಬ್ರಿಟಿಷರೊಡನೆ ಎಡೆಬಿಡದೆ ಹೋರಾಟ ನಡೆಯಿಸಿದ ಗಾಂಧಿಯವರನ್ನು — ಕೇವಲ ಒಬ್ಬ ಧಾರ್ಮಿಕ ಸಾಧುವೆಂದು ಏತಕ್ಕೆ ತಿಳಿದಾರು?"

ಬಳಿಕ ನಾನೊಂದು ಮಾತನ್ನು ಕೇಳಿದೆ:

"ತಾವು ಇಂಗ್ಲೆಂಡು, ಫ್ರಾನ್ಸುಗಳಲ್ಲಿಯೂ ತಿರುಗಾಡಿದ್ದೀರಿ, ಜರ್ಮನಿಯಲ್ಲಿಯೂ ತಿರುಗಾಡಿದ್ದೀರಿ. ಅಲ್ಲಲ್ಲಿಯ ಜನರ ಆರ್ಥಿಕ-ಪರಿಸ್ಥಿತಿಯಲ್ಲಿ ಹೆಚ್ಚು-ಕಡಿಮೆಗಳೇನಾದರೂ ತಮಗೆ ಕಂಡುಬಂದುವೇನು?"

"ಓ, ಕಂಡುಬಾರದೆ ಏನು! ಯಾರಿಗೂ ಈ ಹೆಚ್ಚು ಕಡಿಮೆಗಳು ಸ್ಪಷ್ಟವಾಗಿ ಕಂಡುಬರುವುವು. ಇಂಗ್ಲೆಂಡ್, ಫ್ರಾನ್ಸುಗಳಲ್ಲಿ, ಬಂಡವಾಳಗಾರರು ಬಡವರು ಎಂಬೆರಡು ವರ್ಗಗಳು ಸಮಾಜದಲ್ಲಿ ಸ್ಪಷ್ಟವಾಗಿ ಕಾಣುತ್ತಲಿವೆ. ಜರ್ಮನಿಯಲ್ಲಿ ಹೀಗಿಲ್ಲ; ಅಲ್ಲಿ ಸುಖದಿಂದ ಬದುಕು-ಬಾಳ್ವೆ ಮಾಡಿಕೊಂಡಿರುವ ಮಧ್ಯಮವರ್ಗದ ಜನರೆ ಹೆಚ್ಚಾಗಿರುವುದರಿಂದ, ಬಂಡವಾಳಗಾರರ ವೈಭವೋನ್ನತ ಜೀವನವೂ ಅಲ್ಲಿ ಕಣ್ಣಿಗೆ ಬೀಳದು; ಬಡಜನರ ದೈನ್ಯಜೀವನವೂ ಹೆಚ್ಚಾಗಿ ಕಣ್ಣಿಗೆ ಬೀಳದು. ಇಂಗ್ಲೆಂಡ್, ಫ್ರಾನ್ಸ್ ಇವೆರಡೂ ಜನಾಂಗಗಳಿಗಿಂತ ಜರ್ಮನ್ ಜನಾಂಗದ ದೇಶಾಭಿಮಾನ, ಸ್ವಜನಾಭಿಮಾನ ವಿಶಿಷ್ಟರೀತಿಯವಾಗಿವೆ. ಆದುದರಿಂದಲೆ ಇವೆರಡೂ ರಾಷ್ಟ್ರಗಳಲ್ಲಿರುವಷ್ಟು ಸಿರಿವಂತಿಕೆ ಜರ್ಮನಿಯಲ್ಲಿ ಇರದಿದ್ದರೂ, ಇವೆರಡೂ ರಾಷ್ಟ್ರಗಳಲ್ಲಿ ಕಂಡುಬರುವಷ್ಟು ಬಡಜನರ ಸಂಖ್ಯೆ ಜರ್ಮನಿಯಲ್ಲಿ ಇಲ್ಲವೆಂದು ನನ್ನ ತಿಳಿವಳಿಕೆ.

ನಮ್ಮಲ್ಲಿಯ ಸ್ತ್ರೀಪಕ್ಷಪಾತಿಗಳೊಬ್ಬರು ಕಳವಳದ ದನಿಯಲ್ಲಿಯೆ ಹೀಗೆ ಪ್ರಶ್ನೆಮಾಡಿದರು:

"ಅಲ್ಲ.. ಹಿಟ್ಲರನು ಅಧಿಕಾರಕ್ಕೆ ಬಂದನಂತರ, ಅಲ್ಲಿಯ ಹೆಂಗುಸರಿಗಿರುವ ಸ್ವಾತಂತ್ರ್ಯದ ಮೇಲೆ ಗದೆ ತಂದಿದ್ದಾನೆಂದು ಹೇಳುತ್ತಾರೆ. ಅದರದೇನು ಸಮಾಚಾರ? ನಿಜವೇ ಅದು?"

"ನನಗೇನೂ ಅದು ನಿಜವೆಂದು ಎನಿಸಲಿಲ್ಲ. ಅಲ್ಲಿಯ ಹೆಣ್ಣುಮಕ್ಕಳು ಈಗಲೂ ಬೇಕಾದಂತಹ ಹೊಣೆಗಾರಿಕೆಯ ಸ್ಥಳಗಳಲ್ಲಿ ಇದ್ದುಕೊಂಡು, ಗಂಡುಸರಂತೆಯೆ ರಾಜಕಾರ್ಯದಲ್ಲಿ—ಸಾಮಾಜಿಕ- ಶೈಕ್ಷಣಿಕಕಾರ್ಯದಲ್ಲಿ, ಬೇಕಾದಹಾಗೆ ಭಾಗವಹಿಸುತ್ತಲಿದ್ದಾರೆ. ಇಷ್ಟೆ; ಕುಟುಂಬದ ಹೊರೆಹೊತ್ತ ಹೆಣ್ಣುಮಕ್ಕಳು ಅದನ್ನು ಹೊಣೆಗಾರಿಕೆಯಿಂದ ನಡೆಯಿಸಿಕೊಂಡು ಹೋಗಬೇಕೆಂಬ ಎಚ್ಚರಿಕೆಯನ್ನು ಹಿಟ್ಲರನ ಆಡಳಿತ ಹುಟ್ಟಿಸಿರಬಹುದು. ಇದರ ಅರ್ಥವೆಂದರೆ ನಮ್ಮ ಭಾರತೀಯ ಸ್ತ್ರೀಯರಂತೆ ಬರಿಯ ಅಡಿಗೆಯ ಒಲೆಯ ಮುಂದೆಯೆ ಅವರನ್ನು ಕುಳ್ಳಿರಿಸಿಬಿಡಬೇಕೆಂಬುದಲ್ಲ. ಕುಟುಂಬದ ಹೊರೆಹೊತ್ತ ಹೆಣ್ಣುಮಕ್ಕಳು ಇನ್ನಿತರ ವ್ಯವಹಾರಗಳಲ್ಲಿ ಮನಸ್ಸುಹಾಕಿದರೆ ಎರಡೂ ಅವ್ಯವಸ್ಥೆಗೀಡಾಗುವುವೆಂಬುವನ್ನು, ನಾವು ಬೇರೆ ಪಾಶ್ಚಾತ್ಯರಾಷ್ಟ್ರಗಳಲ್ಲಿ ನೋಡಿ ಅನುಭವ ಪಡೆಯಬಹುದಾಗಿದೆ."

"ಜರ್ಮನ್ ಜನರನ್ನು ನೋಡಿದಾಗ ಒಮ್ಮೆಲೆ ಕಂಡುಬರುವಂತಹ ವಿಶೇಷಗುಣಗಳು ಯಾವುವು?"

"ಸ್ತ್ರೀಯರೇ ಇರಲಿ, ಪುರುಷರೆ ಇರಲಿ ಅಲ್ಲಿಯ ಜನರು ಹೆಚ್ಚಾಗಿ ಸುಶಿಕ್ಷಿತರು; ಆರೋಗ್ಯವಂತರು; ವ್ಯಾಯಾಮಪ್ರೇಮಿಗಳು; ಸಂಯಮಶೀಲರು; ವಿನಯವಂತರು. ಅವರಲ್ಲಿಯ ಸಂಘಟನೆ ಆದರ್ಶನೀಯವಾದುದು. ನಾಡು-ನುಡಿಗಳ ಅಭಿಮಾನ ಅಡಿಯಿಂದ ಮುಡಿಯ ವರೆಗೆ ತುಂಬಿ ತುಳುಕುತ್ತಿರುವುದು. ಸಂಘ-ಸಂಸ್ಥೆಗಳನ್ನು ಕಟ್ಟಿ ನಡೆಯಿಸಿಕೊಂಡು ಹೋಗುವುದರಲ್ಲಿ ತುಂಬ ಗಟ್ಟಿಗರು; ಕೈಕೊಂಡ ಕಾರ್ಯಕ್ಕಾಗಿ ಹಗಲಿರುಳು ತಪಿಸುವಂತಹರು."

"ಜರ್ಮನರು ಯಹೂದಿ ಜನರನ್ನು ಇಷ್ಟೊಂದು ಕ್ರೂರತನದಿಂದ ನಡೆಯಿಸಿಕೊಳ್ಳುವುದಕ್ಕೆ ಕೇವಲ ಜಾತೀಯ ಭಾವನೆಯೆ ಕಾರಣವೇನು?"

"ಕೇವಲ ಜಾತೀಯ ಭಾವನೆಯೊಂದರಿಂದಲೆ ಹೀಗಾಗಿದೆಯೆಂದು ನನಗೆನಿಸದು. ಕಳೆದ ಮಹಾಯುದ್ಧದ ಕಾಲದಲ್ಲಿ ತಮ್ಮ ಸ್ವಂತದ

ಲಾಭದ ಫಲವಾಗಿ ಯಹೂದಿಗಳು ವೈರಿಗಳಿಗೆ ಫಿತೂರಿಗಾರರೆಂದು ಜರ್ಮನರಿಗೆ ಸಂಶಯವಿದ್ದಂತೆ—ಅಲ್ಲಿಯ ಜನರೊಂದಿಗೆ ಮಾತನಾಡಿದಾಗ—ನನಗೆ ಕಂಡುಬಂದಿತು."

"ಫ್ರಾನ್ಸಿನ ರಾಜಕೀಯ ಜೀವನನಿರೀಕ್ಷೆಯಿಂದ ತಮ್ಮ ಮನಸ್ಸಿನ ಮೇಲೆ ಉಂಟಾದ ಪರಿಣಾಮ ಯಾವ ಬಗೆಯದು?"

"ಡೆಮಾಕ್ರಸಿ, ಡೆಮಾಕ್ರಸಿ, ಎಂದು ಅಲ್ಲಿ ಯಾರ ಮಾತಿಗೂ ಅಷ್ಟೊಂದು ಬೆಲೆಯಿಲ್ಲವಾಗಿದೆ. ಈ ಹುಚ್ಚು ಡೆಮಾಕ್ರಸಿಯ ಮೂಲಕವಾಗಿಯೆ ಅಲ್ಲಿ ರಾಜ್ಯದ ಹೊಣೆಗಾರಿಕೆಯನ್ನು ಕುರಿತು ಗಂಭೀರವಾಗಿ ವಿಚಾರಮಾಡುವ ವ್ಯಕ್ತಿಗಳೇ ಕಡಿಮೆಯಾಗಿವೆ. ರಾಜ್ಯಸೂತ್ರಗಳೆಲ್ಲ ಬಂಡವಾಳಗಾರರ ಕೈಯಲ್ಲಿವೆ. ಬಂಡವಾಳದ ಬಲದಿಂದ ನಿರ್ಮಿತವಾದ ಸೈನ್ಯವೂ ಯುದ್ಧೋಪಕರಣಗಳೂ ಅಲ್ಲಿ ಸಾಕಷ್ಟಿವೆ. ಆದರೆ ರಾಷ್ಟ್ರವನ್ನೆಲ್ಲ ಒಂದೇ ಕಡೆಗೆ ನೋಡಲು ಹಚ್ಚುವಂತಹ ವ್ಯಕ್ತಿತ್ವದ ಕೊರತೆ ಅಲ್ಲಿ ವಿಶೇಷವಾಗಿರುವುದೆಂದು ನನ್ನ ಫ್ರಾನ್ಸಿನ ಪ್ರವಾಸದಲ್ಲಿ ತಿಳಿದುಬಂದಿತು."

ಈ ಮಾತು ಮುಗಿಯುತ್ತಿರುವಾಗಲೆ ಚಹವು ಬಂದಿತು. ಎಲ್ಲರೂ ತಲೆಯಲ್ಲಿದ್ದ ಎಲ್ಲ ವಿಚಾರಗಳನ್ನೂ ಅಲ್ಲಿಂದಲ್ಲಿಯೆ ನಿಲ್ಲಿಸಿ ಚಹವನ್ನು ಸ್ವಾಗತಿಸಿದೆವು. ಚಹಾಪಾನವಾಗಿ ತಾಂಬೂಲಸೇವನೆ ಮುಗಿಸುವಷ್ಟರಲ್ಲಿಯೆ ಕೇಳಬೇಕೆಂದು ಗೊತ್ತುಮಾಡಿಕೊಂಡಿದ್ದ ನಮ್ಮ ಪ್ರಶ್ನೆಗಳೆಲ್ಲ ಮರೆತುಹೋಗಿದ್ದುವು. ಇನ್ನೇನು ಕೇಳಬೇಕೆಂದು ನಾವೆಲ್ಲ ಒಬ್ಬರ ಮೋರೆಯನ್ನೊಬ್ಬರು ನೋಡತೊಡಗಿದೆವು. ಬರಿಯೆ ಇಂಗ್ಲೆಂಡ್, ಜರ್ಮನಿ, ಫ್ರಾನ್ಸುಗಳ ವಿಷಯವನ್ನೆ ಮಾತನಾಡತೊಡಗಿದುದನ್ನು ಕೇಳಿ, ನಮ್ಮ ಜೊತೆಗಾರರೊಬ್ಬರು ರೇಗಿಕೊಂಡು ಸುಮ್ಮಗೆ ಕುಳಿತಿದ್ದವರು—ಈಗ ಅವಕಾಶ ದೊರೆತುದರಿಂದ—ಚಹ ಕುಡಿದ ಹುರುಪಿನಲ್ಲಿಯೆ ರಾಯರಿಗೆ ಒಂದು ಮಾತನ್ನು ಕೇಳಿದರು :

"ಅದೆಲ್ಲಾ ಹೋಗಲಿ ರಾಯರೆ, ಈಗ 'ಕಿರ್ಲೋಸ್ಕರ' 'ಸಹ್ಯಾದ್ರಿ' 'ಕೇಸರಿ' ಮೊದಲಾದ ಮರಾಟಿ ಪತ್ರಿಕೆಗಳಲ್ಲಿ ಕನ್ನಡ-ಮರಾಟೀ ವಾದವನ್ನು ಕುರಿತು ಅನೇಕ ಲೇಖನಗಳು ಪ್ರಕಟವಾಗುತ್ತಲಿವೆ. ತಾವು ಮುಂಬಯಿಯಲ್ಲಿರುತ್ತೀರಿ; ಕರ್ನಾಟಕದ ಮತ್ತು ಕನ್ನಡಿಗರ ವಿಷಯ ತಮಗೆ ಹೆಚ್ಚಾಗಿ ಗೊತ್ತಿರುವುದೆಂಬ ಭಾವನೆಯಿಂದ ಅನೇಕ ಮರಾಟಿಗರು ತಮ್ಮನ್ನು ಈ ವಿಚಾರದಲ್ಲಿ ಪ್ರಶ್ನಿಸುತ್ತಿರಬಹುದು. ತಾವು ಈ ಕನ್ನಡ-ಮರಾಟಿಯ ತೊಡಕನ್ನು ಅವರೆದುರು ಯಾವರೀತಿಯಲ್ಲಿ ವಿಶ್ಲೇಷಿಸಿ ಹೇಳುತ್ತೀರಿ? ನಾನು ಈ ಪ್ರಶ್ನೆಯನ್ನು ಕೇಳಬಹುದಲ್ಲವೆ?"

ರಾಯರು ನಗುನಗುತ್ತಲೆ ಹೇಳಿದರು :

"ಅವಶ್ಯವಾಗಿ ಕೇಳಬಹುದು ಅದಕ್ಕೇನು? ಆದರೆ ಮೊದಲು ನೀವೇ ಹೇಳಿ; ಈ ಕನ್ನಡ-ಮರಾಟಿಯ ತೊಡಕನ್ನು ಕುರಿತು ನಿಮ್ಮ ವಿಶ್ಲೇಷಣೆ ಏನಿದೆ?"

ತಮ್ಮ ವಿಷಯ ಬಂದಿತೆಂಬ ಹುರುಪಿನಿಂದ ನಮ್ಮ ಜೊತೆಗಾರರು ಚೆನ್ನಾಗಿ ಕುಳಿತು, ಕೆಮ್ಮಿ, ದನಿ ಸರಿಮಾಡಿಕೊಂಡು ಹೇಳತೊಡಗಿದರು :

"ನೋಡಿ, ಕನ್ನಡ-ಮರಾಠೀ ವಾದವು ಕೇವಲ ಭಾಷಾಭೇದಕ್ಕಾಗಿ ಹುಟ್ಟಿದುದಲ್ಲವೆಂದು ನನ್ನ ಅಭಿಪ್ರಾಯ. ಹಿಂದೂ-ಮುಸಲ್ಮಾನ್, ಬ್ರಾಹ್ಮಣ-ಬ್ರಾಹ್ಮಣೇತರ ಈ ವಾದಗಳಂತೆ ಇದೂ ಅಧಿಕಾರಲಾಲಸೆಗಾಗಿ ಹೊರಟ ಜಗಳವಾಗಿದೆ. ರಾಜಕೀಯ ಪರಿಸ್ಥಿತಿಯ ವೈಚಿತ್ರ್ಯದ ಮೂಲಕವೆನ್ನಿ, ಕನ್ನಡಿಗರ ಆರ್ಥಿಕ ಪರಿಸ್ಥಿತಿಯ ಮೂಲಕವೆನ್ನಿ; ಹೊಸಕಾಲದ ಇಂಗ್ಲಿಷ್ ಶಿಕ್ಷಣದ ಪ್ರಚಾರ ನಮ್ಮಲ್ಲಿ ಬೇಗನೆ ಆಗಲಿಲ್ಲ. ಶಿಕ್ಷಣ ಕೇಂದ್ರಗಳಾದ ಪುಣೆ-ಮುಂಬೈಗಳ ಕಡೆಯ ಮರಾಟಿಗರು ನಮಗಿಂತ ಮೊದಲೆ ಇಂಗ್ಲಿಷ್ ಶಿಕ್ಷಣ ಪಡೆದವರಾದುದರಿಂದ, ಅವರು ಹಲವು ಉದ್ಯೋಗಗಳನ್ನು ಕೈಕೊಂಡು ಉತ್ತರಕರ್ನಾಟಕದಲ್ಲಿ ಬಂದು ನೆಲಸಿದರು. ದೊಡ್ಡ ದೊಡ್ಡ ಸರಕಾರೀ ನೌಕರಿಗಳಲ್ಲಿದ್ದುದರಿಂದ ಕನ್ನಡಿಗರ ಮೇಲೆ ಅವರು ಸಾಕಷ್ಟು ಕಾಲ ಅಧಿಕಾರ ನಡೆಯಿಸಿದರು. ಡಾಕ್ಟರಿ, ವಕೀಲಿ ಉದ್ಯೋಗಗಳನ್ನು ಮಾಡಿ ಸಿರಿವಂತರಾಗಿ, ಸಮಾಜದಲ್ಲಿ ಮುಂದಾಳುಗಳೆಂಬ ಗಣ್ಯತೆಯನ್ನೂ ಪಡೆದರು. ಆದರೆ ಈಗ ಅಂತಹ ಪರಿಸ್ಥಿತಿ ಉಳಿದಿಲ್ಲ. ಕನ್ನಡಿಗರೂ ಇಂಗ್ಲಿಷ್ ಕಲಿಯತೊಡಗಿದರು. ದೊಡ್ಡ ದೊಡ್ಡ ಪದವಿಗಳನ್ನು ಪಡೆದು ನೌಕರಿಗಳನ್ನು ಮಾಡಲಾರಂಭಿಸಿದರು; ವಕೀಲರಾದರು; ಡಾಕ್ಟರರಾದರು. ಇದರಿಂದ ಮರಾಟಿಗರ ಅಧಿಕಾರಕ್ಕೂ ಅರ್ಥಸಂಪಾದನೆಗೂ ಅಡಚಣೆ ಬರತೊಡಗಿತು. ಇನ್ನೊಂದು ಮಾತೆಂದರೆ ಇಲ್ಲಿ ಬಂದು ನೆಲಸಿದ ಮರಾಟಿಗರು ಕನ್ನಡಿಗರೊಂದಿಗೆ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ

ಗೋವಾ ಮಲಮು

GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

CONCENTRATED HIGH CLASS COLOURS

FOR MANUFACTURING

- WRITING INKS
- TYPEWRITING RIBBONS
- SOAPS
- SWEETMEATS.

For particulars please apply to—

KRIPAG LTD.

P. O. BOX No. 210, BOMBAY

ಆತ್ಮೀಯಭಾವನೆಯಿಂದ ವರ್ತಿಸಿ ಸಮರಸರಾಗಲಿಲ್ಲ. ಹೀಗೆ ಸಮರಸರಾಗುವುದಕ್ಕೆ ಮುಖ್ಯವಾಗಿದ್ದುದೆಂದರೆ ಭಾಷೆಯ ಸಾಧನವೊಂದೆ. ಎಲ್ಲಿಯವರೆಗೆ ಅನಿವಾರ್ಯವೆ ಇದ್ದಿತೊ ಅಲ್ಲಿಯವರೆಗೆ—ಭಿನ್ನಭಾಷೆಯವರಾದರೂ— ಮರಾಟಿ ಮಾತನಾಡುವ ವಕೀಲ–ಡಾಕ್ಟರರುಗಳ ಕಡೆಗೆ ಕನ್ನಡಿಗರು ಹೋಗಿಯೆ ಹೋಗುತ್ತಿದ್ದರು. ಹಾಗೆ ಹೋಗುತ್ತಿರುವ ವರೆಗೆ ಕನ್ನಡ–ಮರಾಟೀವಾದದ ಗೊಂದಲವೆ ಇರಲಿಲ್ಲ. ಆದರೆ ಕನ್ನಡ ಮಾತನಾಡುವ ಜನರೆ ವಕೀಲರೂ ಡಾಕ್ಟರರೂ ಬೇರೆ ಉದ್ಯೋಗಿಗಳೂ ಆಗಿ ಬಂದ ಮೇಲೆ, ಜನಸಾಮಾನ್ಯರು ಆತ್ಮೀಯಭಾವದಿಂದ ಅವರ ಬಳಿಗೆ ಹೋಗತೊಡಗಿದರು. ಜನಸಾಮಾನ್ಯರ ಮಾತು ತಿಳಿಯುವಂತಹ ಅಧಿಕಾರಿಗಳೆ ಇರಬೇಕೆಂದು ಸರಕಾರಕ್ಕೆ ಎನಿಸಿದುದರಿಂದ, ಅಲ್ಲಿಯೂ ಕನ್ನಡಿಗರಿಗೇ ಹೆಚ್ಚಾಗಿ ಅವಕಾಶ ದೊರೆಯತೊಡಗಿತು. ಇದರಿಂದುಂಟಾದ ಹೃದಯದ ಹೊಯ್ದಾಟ ಮೆಲ್ಲಮೆಲ್ಲಗೆ ಅಸಮಾಧಾನದ ರೂಪು ತೆಗೆದುಕೊಳ್ಳಲಾರಂಭಿಸಿತು. ಹೀಗೆ ಹುಟ್ಟಿದ ಅನೇಕ ಅಸಮಾಧಾನಗಳ ಸೂಕ್ಷ್ಮಕಾರಣವು ತಿಳಿಯದೆ, ಹೊರಹೊರಗೆ ಕಾಣುವಂತಹ ಸ್ಥೂಲಕಾರಣವೊಂದನ್ನು ಅವಕ್ಕೆ ಅಂಟಿಸುವುದೊಂದು ಲೋಕದ ರೀತಿ. ಕರ್ನಾಟಕದಲ್ಲಿಯ ಕನ್ನಡ-ಮರಾಟೀ ವಾದಕ್ಕೆ ಕೇವಲ ಭಾಷಾಭೇದದ ಸ್ಥೂಲಕಾರಣವನ್ನು ಅಂಟಿಸುವುದೂ ಮೇಲೆ ಹೇಳಿದ ರೀತಿಯ ಕೈವಾಡವೆ ಆಗಿದೆ."

"ಭಲೆ, ಸರಿಯಾದ ವಿಮರ್ಶೆ! ನಿಮ್ಮ ಪ್ರತಿಯೊಂದು ಮಾತನ್ನೂ ನಾನು ಒಪ್ಪಿಕೊಳ್ಳುತ್ತೇನೆ. ವಸ್ತುಸ್ಥಿತಿ ಹೀಗಿರುವುದೇನೋ ನಿಜ!"

ಇನ್ನೊಬ್ಬ ಮಿತ್ರರು ಹುರುಪುಗೊಂಡು ಹೇಳತೊಡಗಿದರು.

"ನಾಳೆ ನೋಡಿ; ತಮ್ಮ ಚಿರಂಜೀವರು ಐ.ಸಿ.ಎಸ್. ಪರೀಕ್ಷೆಯಲ್ಲಿ ಪಾಸಾಗಿ ಬರಲಿ! ಮರಾಟೀ ಪತ್ರಿಕೆಗಳೆಲ್ಲ ಅವರನ್ನು ಮಹಾರಾಷ್ಟ್ರೀಯನೆಂದು ಸಿದ್ಧಮಾಡಿ ಅಭಿನಂದಿಸತೊಡಗುತ್ತವೆ."

ರಾಯರು ಮಾತನಾಡಿದರು:

"ಅವರು ಮಹಾರಾಷ್ಟ್ರೀಯನೆಂದು ಅಭಿನಂದಿಸಿದರೆ ಕನ್ನಡ ಪತ್ರಿಕೆಗಳು ಕನ್ನಡಿಗನೆಂದು ಅಭಿನಂದಿಸಬೇಕು. ಅದಕ್ಕೆ ಯಾರಾದರೂ ಬೇಡವೆನ್ನುವರೇ?"

"ಅಭಿನಂದಿಸಲಿಕ್ಕೆ ಯಾರೂ ಬೇಡವೆನ್ನದಿರಬಹುದು. ಆದರೆ ಅಭಿನಂದಿಸಿಕೊಳ್ಳುವವರಲ್ಲಿ ತಾನು ಕನ್ನಡಿಗ ಎಂಬ ಅಭಿಮಾನದ ಜಾಗೃತಿ ಇರಬೇಕಲ್ಲವೆ? ಈಗ ನೋಡಿ; ಕರ್ನಾಟಕದಲ್ಲಿ ಎಷ್ಟೋ ತಲೆಗಳಿಂದ ಒಂದು ವಾಸಮಾಡುತ್ತಿರುವ ಮಹಾರಾಷ್ಟ್ರೀಯ ಕುಟುಂಬಗಳಿವೆ. ಅವರ ಹಿತಸಂಬಂಧಗಳೆಲ್ಲ ಕರ್ನಾಟಕದಲ್ಲಿ; ಮರಳಿ ಮಹಾರಾಷ್ಟ್ರಕ್ಕೆ ಹೋಗುವ ಆವಶ್ಯಕತೆಯೂ ಇಲ್ಲ, ಸಂದರ್ಭವೂ ಇಲ್ಲ. ಹೀಗಿದ್ದರೂ ಇಲ್ಲಿಯ ಜನರೊಂದಿಗೆ ಸಮರಸರಾಗಿ ಹೋಗಬೇಕೆನ್ನುವ ಸಮಂಜಸಬುದ್ಧಿಯೆ ಅವರಲ್ಲಿ ಉಂಟಾಗಲೊಲ್ಲದು. ಈಗ ನೋಡಿ, ಇಲ್ಲಿಯ ಮರಾಟಿ ವಕೀಲರು ಕನ್ನಡ ಪಕ್ಷಕಾರರಿಂದ ದುಡ್ಡನ್ನು ಸಂಪಾದಿಸುವರು. ಮರಾಟಿ ವ್ಯಾಪಾರಿಗಳು ಕನ್ನಡ ಗಿರಾಕಿಗಳಿಂದ ಲಾಭಪಡೆಯುವರು. ಮರಾಟಿ ಡಾಕ್ಟರರು ಕನ್ನಡ ಜನರಿಂದಲೆ ಹಣಗಳಿಸುವರು. ಆದರೆ ಅವರು ಗಳಿಸಿದ ಹಣದ ಉಪಯೋಗ ತಾವು ಬದುಕಿ ಬಾಳುತ್ತಿರುವ ಪ್ರಾಂತ್ಯಕ್ಕಾಗದೆ, ಯಾವುದೊ ಹುಚ್ಚು ಅಭಿಮಾನದ ಮೂಲಕ ಬೇರೆ ಪ್ರಾಂತ್ಯಕ್ಕೆ ಆ ಹಣ ಹರಿದುಹೋಗುತ್ತಲಿದೆ. ಕಡೆತನಕ ಕರ್ನಾಟಕದಲ್ಲಿಯೆ ಬದುಕಿ ಬಾಳಲಿರುವ ಮರಾಟಿಗರು ಇಲ್ಲಿಯ ಸಂಸ್ಥೆಗಳಿಗೆ ನೆರವು ಕೊಡಬೇಕಾಗಿಲ್ಲವೆ? ಇಲ್ಲಿಯ ಕೂಸು ಹಾಲಿಲ್ಲದೆ ಸಾಯುತ್ತಿರುವಾಗ, ಹೊಟ್ಟೆತುಂಬಿ ಬೆಳೆದ ಮುಂದಿಯ ಮಗುವಿಗೆ ಊಟಹಾಕಲು ಹೋಗುವುದು ಸರಿಯೆನಿಸುವುದೇ?"

ನಮ್ಮ ಜೊತೆಗಾರ ಐರಿಕೆಯ ದನಿಯಲ್ಲಿ ಮಾತನಾಡುತ್ತ ರಾಯರನ್ನು ಕುತೂಹಲದೃಷ್ಟಿಯಿಂದ ನೋಡತೊಡಗಿದ. ರಾಯರು ತಮ್ಮ ಸಹಜವಾದ ಕಿರುನಗೆಯಲ್ಲಿಯೆ ಹೇಳಿದರು.

"ಹೀಗಾಗುತ್ತಿರುವುದು ನಿಜವಿದ್ದರೆ ಅದು ಖಂಡಿತವಾಗಿ ತಪ್ಪು ಎಂದೇ ನಾನು ಹೇಳುತ್ತೇನೆ. ಪ್ರಾಂತೀಯ ಜೀವನದಲ್ಲಿ ಸಮರಸರಾಗದಿದ್ದರೆ, ಅಂತಹ ಜನರು ಅದಕ್ಕೆ ತಕ್ಕ ಪರಿಣಾಮವನ್ನು ಅನುಭವಿಸಬೇಕಾದುದು ಸಹಜಸಿದ್ಧ!"

ಎಂದು ರಾಯರು ಮಾತನ್ನು ಮುಗಿಸುತ್ತಿರುವಾಗಲೆ ಅವರ ಮಿತ್ರರೊಬ್ಬರು ಯಾವುದೊ ತಮ್ಮ ಕೆಲಸಕ್ಕಾಗಿ ಆಗಮಿಸಿದರು.

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರ ಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಾಂಗವಾಯು, ಕೈ-ಕಾಲು-ನೋರೆ ನಡುಗುವುದು, ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ; ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ನಾವೂ ಸಾಕಷ್ಟು ವೇಳೆಯನ್ನು ತೆಗೆದುಕೊಂಡುದರಿಂದ ಅಂದಿನ ಸಂದರ್ಶನವನ್ನು ಅಷ್ಟಕ್ಕೇ ನಿಲ್ಲಿಸಿ ರಾಯರನ್ನು ಬೀಳ್ಕೊಂಡು ಹೊರಟೆವು. ಹೊರಡುವಾಗ ನಾನು ಕೇಳಿದೆ:

" ಇಂದಿನ ಸಂದರ್ಶನದಲ್ಲಿ ತಮ್ಮ ವೈಯಕ್ತಿಕ ಜೀವನದ ಪರಿಚಯದ ಮಾತುಗಳೇನೂ ಬಂದಂತಾಗಲಿಲ್ಲವಲ್ಲ ! "

"ಇದು ನೋಡಿ, ನೀವು ಬರುತ್ತೀರೆಂದು ನನ್ನ ಜೀವನದಲ್ಲಿಯ ಕೆಲವು ಮಾತುಗಳನ್ನು ಈ ಕಾಗದದ ಮೇಲೆ ಟಿಪ್ಪಣಿಮಾಡಿ ಇಟ್ಟಿದ್ದೇನೆ. ಇದರ ಉಪಯೋಗವೇನಾದರೂ ಆಗುತ್ತಿದ್ದರೆ ಮಾಡಿಕೊಳ್ಳಿರಿ ! " ಎಂದು ರಾಯರು ಕಾಗದದ ತುಂಡೊಂದನ್ನು ನನ್ನ ಕೈಗೆ ಕೊಟ್ಟರು. ಅದನ್ನು ತೆಗೆದುಕೊಂಡು ನಮಸ್ಕರಿಸಿ ನಾವೆಲ್ಲರೂ ಹೊರಟೆವು. ಮೋಟಾರಿನ ವರೆಗೂ ನಮ್ಮನ್ನು ಕಳುಹಿ ರಾಯರು ಮರಳಿದರು. ನಾವೂ ಮನೆಗೆ ನಡೆದೆವು. ಅವರು ಕೊಟ್ಟ ಕಾಗದದ ತುಂಡಿನಲ್ಲಿ ಅಂದವಾದ ಇಂಗ್ಲಿಷ್ ಅಕ್ಷರದಲ್ಲಿ ಈ ಅರ್ಥದ ಮಾತುಗಳನ್ನು ಬರೆಯಲಾಗಿತ್ತು :—

"ಹುಟ್ಟಿದುದು ಧಾರವಾಡದಲ್ಲಿ, ತಾ. ೧೦-೭-೧೮೮೭ ನೆಯ ದಿನ. ಪ್ರಾಥಮಿಕ ಶಿಕ್ಷಣ ವಿಜಾಪುರದಲ್ಲಿ, ಮಾಧ್ಯಮಿಕ ಶಿಕ್ಷಣವು ವಿಜಾಪುರ-ಧಾರವಾಡಗಳಲ್ಲಿ. ೧೯೦೩ನೆಯ ಇಸ್ವಿಯಲ್ಲಿ ಧಾರವಾಡದ ಗ. ಹೈಸ್ಕೂಲಿನಿಂದ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು, ಪರೀಕ್ಷೆಯಲ್ಲಿ ಶೇರ್ಗಡೆ ಹೊಂದಿ ಆಯಿತು.

೧೯೦೪ ರಿಂದ ೧೯೦೭ ರ ವರೆಗೆ ಡೆಕ್ಕನ್ ಕಾಲೇಜಿನಲ್ಲಿ.

೧೯೦೭ ರಿಂದ ೧೯೧೧ ರ ವರೆಗೆ ಕೆಂಬ್ರಿಜ್ಜಿನಲ್ಲಿ.

(ಟ್ರೈಪೊಸ್ ಇನ್ ನ್ಯಾಚರಲ್ ಸೈನ್ಸ್ ಮತ್ತು ಇತಿಹಾಸ)

೧೯೧೧ ರಿಂದ ೧೯೧೪ ರ ವರೆಗೆ ಬಡೋದೆಯ ರೆವಿನ್ಯು ಸರ್ವಿಸಿನಲ್ಲಿ.

೧೯೧೪ ರಿಂದ ೧೯೧೭ ರ ವರೆಗೆ ಎಡಿನ್‌ಬರೊ ಕಾಲೇಜಿನಲ್ಲಿ.

೧೯೧೬ ರಲ್ಲಿ ' ಲೇನ್‌ಫೈನ್ ಬರ್ಸರಿ ಇನ್ ಎಕೊನಾಮಿಕ್ಸ್' ಎಂಬ ವಿದ್ಯಾರ್ಥಿವೇತನವನ್ನು ಪಡೆದಾಯಿತು.

೧೯೧೭ ರಲ್ಲಿ ಎಡಿನ್‌ಬರೋ ವಿಶ್ವವಿದ್ಯಾಲಯದ ಎಮ್. ಎ. (ಆನರ್ಸ್ ಇನ್ ಎಕೊನಾಮಿಕ್ಸ್) ಪದವಿ ದೊರೆಯಿತು.

೧೯೧೭ ರಿಂದ ೧೯೨೦ ರ ವರೆಗೆ ಇಂಗ್ಲಿಷ್ ಮತ್ತು ನ್ಯಾಯಶಾಸ್ತ್ರ (ಲಾಜಿಕ್) ದ ಮುಖೋಪಾಧ್ಯಾಯ (ಪ್ರೊಫೇಸರ್) ರಾಗಿ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ.

೧೯೨೦ ರಲ್ಲಿ ಐ. ಇ. ಎಸ್. ಸ್ಥಾನ ಸಿಕ್ಕಿತು.

೧೯೩೧ ರಲ್ಲಿ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲ್ ಸ್ಥಾನ ದೊರೆಯಿತು.

೧೯೩೭ ರಿಂದ ಇದುವರೆಗೂ ಮುಂಬೈ ಎಲ್‌ಫಿನ್‌ಸ್ಟನ್ ಕಾಲೇಜಿನ ಪ್ರಿನ್ಸಿಪಾಲರು.

ಅವಗತವಿರುವ ಭಾಷೆಗಳು : ಕನ್ನಡ, ಮರಾಠಿ, ಇಂಗ್ಲಿಷ್, ಫ್ರೇಂಚ್, ಜರ್ಮನಿ.

ಪ್ರೀತಿಯ ವಿಷಯಗಳು : ಇಂಗ್ಲಿಷ್ ಸಾಹಿತ್ಯ, ಸಂಗೀತ, ಟೆನ್ನಿಸ್ ಆಟ.

ಒಳ್ಳೆಯ ಶಿಕ್ಷಕರೂ, ಸೂಕ್ಷ್ಮ ಅಭ್ಯಾಸಿಗಳೂ, ಉತ್ತಮ ಬರೆಹಗಾರರೂ ಬಲ್ಲಿದರಾದ ಮಾತುಗಾರರೂ ಎಂದು ಹೆಸರುವಾಸಿಯನ್ನು ಪಡೆದುದುಂಟು. "

ತಲೆನೋವು, ನೆಗಡಿ, ಕಾಲರಾ, ಉರಿ ಮುಂತಾದ ಶಾರೀರಿಕ ರೋಗಗಳ ಮೇಲೆ
" ರಜಿಸ್ಟರ್ಡ್ "
ನೀಲಗಿರಿ ಅರ್ಕ
NILGIR ARK
ಪ್ರತಿ ಒಂದು ಹನಿ ಗುಣದ ಪ್ರಭಾವ ತೋರಿಸುತ್ತದೆ.
ಬಾಟಲಿ ಕಿಮ್ಮತ್ತು ೪ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ನನ್ಗೆ ಅರ್ವಾ ಬರತ್ತೆ!

★

"ನಾಡಾಡಿ" * ಅವರಿಂದ

ಶೋಧಕಬುದ್ಧಿಯುಳ್ಳ ಮನುಷ್ಯನು ಹೋದಹೋದಲ್ಲೆಲ್ಲ ಹೊಸಮಾತುಗಳನ್ನು ಕಾಣುತ್ತಿರುತ್ತಾನೆ; ಕಂಡು ಅವುಗಳನ್ನು ಅರೆದು ಒರೆದು ನೋಡುತ್ತಾನೆ. ಭಾಷಾಶಾಸ್ತ್ರಿಯೊಬ್ಬ ಮದರಾಸಿಗೆ ಹೋದರೆ, ಮೊದಲು ಅವನಿಗೆ ಕಾಣುವುದೇನು? ತಮಿಳು-ಕನ್ನಡಗಳಿಗಿರುವ ನಂಟುತನ!

★

"ಏನ್ನಾ ವೇಣುಂಗೊ?'

"ಏನಯ್ಯಾ ಹಾಗೆಂದರೆ?"

'ಉಂಗುಳಕು ಎನ್ನಾ ವೇಣುಂಗೊ ಸ್ವಾಮಿ?"

ತುಂಬ ಕಷ್ಟ! ಮುಂಜಾವದಲ್ಲಿ ಎದ್ದು, ಅರಿಯದ ಊರಲ್ಲಿ ನುಗ್ಗಿ, ತಿಳಿಯಲಾರದ ಮಾತಿನ ಬಲೆಯಲ್ಲಿ ಸಿಕ್ಕಿ ತೊಳಲಾಡುವುದು ತುಂಬ ಕಷ್ಟ! ರೈಲುಬಂಡಿ ರಾತ್ರಿಯೆಲ್ಲ ವಿರಾಮವಿಲ್ಲದೆ ಎಳೆದೆಳೆದು, ನಸುಕಿನಲ್ಲಿ ನಿಲ್ದಾಣಕ್ಕೆ ನನ್ನನ್ನು ತಂದುಬಿಟ್ಟಿತು. ಅಲ್ಲಿಂದ ಬಸ್ಸಿನವನು ಇಲ್ಲಿಗೆ ತಂದು ನಿಲ್ಲಿಸಿದನು. ಕಣ್ಣು ತೆರೆದು ನೋಡುವಾಗ ಶ್ರೀಕೃಷ್ಣನೇ ಮೂರ್ತಿಮತ್ತಾಗಿ ಇದಿರು ಬಂದು ನಿಂತನು.

"ಶ್ರೀಕೃಷ್ಣ ವಿಲಾಸ ಮೀಲ್ಸ್ ಎಂಡ್ ಟಿಫಿನ್ ಉಡುಪಿ ಹೊಟೆಲ್"

ಉಡುಪಿಯ ಶ್ರೀಕೃಷ್ಣಾ! ಸಾಗರಾಂಕಿತವಾದ ಈ ಮಹಾನಗರಿಯೆಂಬ ಅಪಾರಸಾಗರದಲ್ಲಿ ಪಾರಗಾಣದೆ ಗಾಸಿಯಾಗುತ್ತಿರುವ ಅಲ್ಪಜೀವಿಗಳ ಉದ್ಧಾರಕ್ಕಾಗಿ ಅವತಾರಮಾಡಿ, ಈ ಪ್ರಾತಃಕಾಲದಲ್ಲಿ ನನಗೆ ದರ್ಶನವಿತ್ತ ಶ್ರೀಕೃಷ್ಣಾ! ನಿನ್ನ ಮಹಿಮೆ ಅಗಾಧವಾಗಿದೆ. ಭಕ್ತವತ್ಸಲ, ಭಕ್ತಕಾಮಕಲ್ಪದ್ರುಮನಾದ ದೇವರು ಎಂದರೆ ನೀನೆ. ಒಂದು ಯುಗದ ದೇವನಲ್ಲ ನೀನು, ಎಲ್ಲ ಯುಗದ ಗುತ್ತಿಗೆ ಹೊತ್ತ ದೇವಾಧಿದೇವ ನೀನು. ಹಿಂದೆ ದ್ವಾಪರಯುಗದಲ್ಲಿ ಮನೆಮನೆಗೆ ಅಲೆದೆ, ಹಾಲ ಕುಡಿದೆ, ಮೊಸರು ತಿಂದೆ, ಬೆಣ್ಣೆ ಕದ್ದೆ. ನೀನು ತಿಂದು ತೇಗಿದೆ; ನಿನ್ನ ಹಿಂದೆ ಬಂದವರನ್ನು ತಿನಿಸಿ ತೇಗಿಸಿದೆ. ಈ ನಿನ್ನ ಆಟವನ್ನು ಗಾವಲಿತಿ (ಗೋವಳತಿ?) ಯೊಬ್ಬಳು ಹಾಡು ಕಟ್ಟಿ ಹೊಗಳಿರುವಳು:

ಏನೂಂತ ಹೇಳಲಿ ಗೋಪೀ, ನಿನ್ನ
ಮಗನ ಜಾಲಾ
ಖೂನಾ ತಪ್ಪಿಸಿ ಬಂದಾ ಮನಿವೊಳಗೆ
|| ಪಲ್ಲವಿ ||
ಕೆನಿ ಹಾಲು ಕುಡಿದಾನ
ಗಡಗೀಯು ವಡಿದಾನ
ಅಡಗಿದ್ದನ ದೊಡ್ಡ ಮನಿವೊಳಗೆ ||೧||

ಇಲ್ಲಿ "ಖೂನಾ" ಎಂದರೆ ಗುರುತು ಎಂದು ಜನಪದಸಾಹಿತ್ಯದ ಸಂಪಾದಕರು ಟಿಪ್ಪಣಿ ಕೊಟ್ಟಿದ್ದಾರೆ; ಇರಲಿ.

ಕೃಷ್ಣಾ, ನೀನು ಆಯುಗದ ನಿನ್ನ ಅವತಾರಕಾರ್ಯವನ್ನು ಮಿಕ್ಕ ಅವತಾರಗಳಂತೆ ಅಂದೇ ಮುಗಿಸಿ ಬಿಡಲಿಲ್ಲ. ಇಂದಿನ ಈ ಕಲಿಯುಗದಲ್ಲಿಯೂ ನಿನ್ನ ಲೀಲೆಗಳನ್ನು ಪ್ರತ್ಯಕ್ಷವಾಗಿ ತೋರುತಲಿರುವೆ. ಲೋಕದ ಅನ್ನಬ್ರಹ್ಮ ನೀನು. ಎಲ್ಲೆಲ್ಲಿಂದಲೊ ಹಸಿದು ಬಂದವರಿಗೆ ತಿಂಡಿಗಳನ್ನು ಕೊಡುವೆ; ಬಾಯಾರಿ ಬಂದವರಿಗೆ ಬಾಯ ಆರಯಿಕೆ ಮಾಡುವೆ. ಒಂದು ಊರಲ್ಲ, ಒಂದು ದೇಶವಲ್ಲ. ಎಲ್ಲ ದೇಶ-ವಿದೇಶಗಳಲ್ಲಿ ನಿನ್ನ ಅನಾದ್ಯನಂತ ಸಂಚಾರವಿದೆ. ಎಲ್ಲೆಲ್ಲಿಯೂ ನಿನ್ನ ದರ್ಶನ!

ಕೃಷ್ಣಾ, ಉಡುಪಿಗೆ ಬಂದವರಿಗೆ ಪುಕ್ಕಟೆ ಅನ್ನ ಹಾಕಲು ಎಂಟು ಮಠಗಳನ್ನು ಸ್ಥಾಪಿಸಿ ನಡೆಸುತ್ತಿರುವೆ. ಉಡುಪಿಗೆ ಬಾರದವರಿಗೋಸ್ಕರ ಎಂಟು ದಿಕ್ಕುಗಳಿಗೆ ದಿಗ್ವಿಜಯಮಾಡಿ ಟಿ. ಎ. ತಕ್ಕೊಂಡು ಅನ್ನವನ್ನು ಒದಗಿಸಿ ಕೊಡುತ್ತಿರುವೆ. ವಿಶ್ವರೂಪದರ್ಶನಧಾರಿಯೆ, ನಿನಗೆ ಅನಂತ ಪ್ರಣಾಮಗಳು!

ಶ್ರೀಕೃಷ್ಣನ ದರ್ಶನವಾದರೂ ಆತನ ಪ್ರಸಾದವು ದೊರೆಯಬೇಕಾದರೆ ಈ ಊರಲ್ಲಿ ಈ ಜನಗಳ ಭಾಷೆ ಕಲಿಯದೆ ವಿಧಿಯಿಲ್ಲ, ಎಂದು ನನ್ನ ಮನವರಿಕೆ ಆಯಿತು. ಅದೇ ನಿಮಿಷಕ್ಕೆ ನಿರ್ಧಾರ ಮಾಡಿದೆನು. ಕೂಡಲೆ ಅದೆ ಕೃಷ್ಣಮಂದಿರದಲ್ಲಿ ಶಾಂತಿಪಾಠದ ಸಮಾರಂಭವೂ ನೆರವೇರಿತು.

ಶ್ರೀಗುರುಭ್ಯೋನಮಃ; ಹರಿಃ ಓಂ;
........ಸಹ ನೌ ಭುನಕ್ತು!

[ಈ ವೇದಮಂತ್ರವು ಸಹಭೋಜನವನ್ನು ಪ್ರತಿಪಾದಿಸುವುದು ಎಂದು ನನ್ನ ಅಭಿಪ್ರಾಯ. ಅದರ ಚರ್ಚೆ ಇಲ್ಲಿ ಅನಾವಶ್ಯಕ.]

ಮಧ್ಯಾಹ್ನ ಭೋಜನ ಕಾಲದಲ್ಲಿ ಮಂತ್ರೋಪದೇಶವು ಮಂದಗತಿಯಿಂದ ಮುಂದೆ ಸಾಗಿತು.

ಬೆರಳಿನಿಂದ ತೋರಿಸಿ ಸನ್ನೆಮಾಡಿ,
"ಅನ್ನಕ್ಕೆ ಏನು ಎನ್ನುವಿರಿ?"
"ಅನ್ನಂ"
ಅದೇ ಕ್ರಮದಲ್ಲಿ "ಸಾರಿಗೆ? ಸಾರಂ!"
"ಹಂ, ಹಂ, ರಸಂ"
ಆಶ್ಚರ್ಯದ ಉದ್ಗಾರವು.
"ಬೇಳೆ ಹುಳಿಗೆ? ಹುಳಿಂ?"

* ಈ 'ನಾಡಾಡಿ'ಗಳು ಎಂ.ಎ. ಪದವಿಯನ್ನು ಪಡೆದ ಸಂಸ್ಕೃತಿ ಸಂಶೋಧಕರೊಬ್ಬರು.
ಸಂ. ಜ.

" ಹಂ, ಹಂ, ಕೊಳಂಬು, ಸಾಂಬಾರ್."

" ಸರಿ: ಪಲ್ಯ?"

" ಕರಿ "

ಇಂಗ್ಲಿಶ (curry) ಶಬ್ದವು ನೆನಪಾಗಿ ಮುಖದಲ್ಲಿ ಆಶ್ಚರ್ಯಭಾವವು ಮೂಡುವುದು.

" ಮೊಸರು ಕಲಸಿದ ಭರತ?"

" ಪಚಡಿ "

ವಿಚಿತ್ರವಾದ ಒಂದು ಚೀತ್ಕಾರ. ಇಮ್ಮಡಿಸಿದ ಕುತೂಹಲದಿಂದ; " ತವ್ವೆ "

" ಪರ್ವು "

" ಹಪ್ಪಳಂ—ಪಪ್ಪಳಂ?"

" ಪಪ್ಪಡಂ "

ಹತ್ತಿರ ಹತ್ತಿರ ಹೋಗಿ ಗುರಿತಪ್ಪಿದ ಬೇಟೆಗಾರನ ಆನಂದ.

ಉದ್ದಕ್ಕೆ ಹೀಗೆ ಪಟ್ಟಿಯನ್ನು ಕೊಡದೆ, ಹಾಡಿನಲ್ಲಿ ಹೇಳಲಿಕ್ಕೆ ಬರುತ್ತಿದ್ದರೆ ಎಷ್ಟು ಒಳಿತಾಗುತ್ತಿತ್ತು! ಏನು ಭಾಷಾಂತರಕ್ಕೂ ಹಾಡೊ? ಅಹುದು. ಯಾಕೆ? ನಮ್ಮ ಸಂಸ್ಕೃತಪಂಡಿತರು ವೇದಾಂತ, ಜ್ಯೋತಿಷ, ಬೀಜಗಣಿತ, ವೈದ್ಯಶಾಸ್ತ್ರ, ಎಲ್ಲವನ್ನೂ ಪದ್ಯರೂಪವಾಗಿ ಬರೆಯಲಿಲ್ಲವೊ? ಅವರು ಹೀಗೇಕೆ ಮಾಡಿರಬಹುದು ಎಂಬುದರ ಮರ್ಮವು ಈಗ ನನಗೆ ಹೊಳೆದಂತೆ ಆಯಿತು. ಹಾಗೆಯೆ ಇಂದಿನ ಆಧುನಿಕರು ಪದ್ಯರೂಪವಾಗಿ ಈ ಭಾಷಾಕೋಶಗಳನ್ನು ಮತ್ತೆ ರಚಿಸತೊಡಗಿದರೆ ಹೊಸಬರಿಗೆ ನೆನಪಿಡಲು ಎಷ್ಟು ಸುಲಭವಾಗಬಹುದು?

ನಗಬೇಡಿ, 'ಆಗಬಹುದೆ?' ಎಂದು ಹಲ್ಲುಕಿರಿಯಬೇಡಿ. ಇಂದಿನ ಈ ಯುಗದಲ್ಲಿಯೂ ಇಂತಹ ಪ್ರಯತ್ನಗಳು ಆಗದೆ ಇಲ್ಲ. ನೋದಾಹರಣವಾಗಿ ಸಿದ್ಧ ಮಾಡುವೆ. ಉತ್ತರಕರ್ನಾಟಕದ ಗಡಿ-ಗಡಿನಾಡಿನಲ್ಲಿ ನಾನು ಒಮ್ಮೆ ಹೋದಾಗ, ಕನ್ನಡ-ತುರ್ಕ (ಎಂದರೆ ಮುಸಲ್ಮಾನಿ) ಭಾಷೆಯನ್ನು ಕಲಿಸಲು ಒಬ್ಬ ಉಭಯ ಭಾಷಾ ಕವಿಚಕ್ರವರ್ತಿಯು ಕಟ್ಟಿದ ಒಂದು ಸರಸವಾದ ಕವನವನ್ನು ಕೇಳಿದೆನು. ಅದರ ಮಾದರಿಯನ್ನು ಮುಂದಿಡುವೆನು.

ಈ ಕವನದ ತುಂಡುಗಳು ಸಂವಾದ ರೂಪದಲ್ಲಿ ಇವೆ. ಇದರಲ್ಲಿ ಎರಡು ಪಾತ್ರಗಳು ಇದ್ದು, ಅವುಗಳು ವಾದಿಬೇದಿರ್ಗಾಗಿ ಮಾತಾಡುತ್ತವೆ.

ಗನೆಯುವ ಮುಸಲ್ಮಾನಿಭಾಷೆ ಬಾರದ ಆಡನಾಡಿ ಪೋರ, ಕಲಿಯಲು ಅನುತ್ಸುಕ. ತಿನೆಯುವ ತುರ್ಕ ಭಾಷಾ ಪಂಡಿತ ಉಸ್ತಾದ, ಅದನ್ನು ಕಲಿಸಬೇಕು ಎಂಬ ಹಟವುಳ್ಳವ.

ಹೊಸಬ:—" ತುರಕರ ಮಾತು ಬರೋದಿಲ್ಲ, ನನಗೆ ಮಾತು ಬರೋದಿಲ್ಲ."

ಉಸ್ತಾದ:—" ಅದು ಹೇಗೆ ಬರೋದಿಲ್ಲ?"

ಹೊಸಬ:— ಅದ ನಾ ಮೊದಲೇ ಕಲಿತಿಲ್ಲ"

ಉಸ್ತಾದ:— ಅದು ಯಾಕೆ ಬರೋದಿಲ್ಲ?"

ಹೊಸಬ:— ಅದ ನಾ ಮೊದಲೇ ಕಲಿತಿಲ್ಲ"

ಇದು ಪ್ರಸ್ತಾವನೆ ಅಥವಾ ಪಲ್ಲವಿ

ಉಸ್ತಾದ:—" ಕಾಗಿಗಂತಾರ ಕವ್ವಾ" ಅನ್ನು!

ಶಿಷ್ಯ:—" ಕಾಗಿಗಂತಾರ ಕವ್ವಾ "

ಗುರು (ತಿದ್ದಿ ತಿದ್ದಿ):—" ಕಾಗಿಗೆ ಅಂತಾರ ಕವ್ವಾ "

ಶಿಷ್ಯ (ಅಣಕಿಸುವಂತೆ):—" ಕಾಗಿಗೆ ಅಂತಾರ ಕವ್ವಾ "

ಗುರು (ಹಿಗ್ಗಿ):—"ರೊಟ್ಟಿ ಹಂಚಗಂತಾರ ತವ್ವಾ" ಅನ್ನSS!

ಶಿಷ್ಯ:—" ರೊಟ್ಟಿ ಹಂಚಿಗಂತಾರ ತವ್ವಾ" ಅನ್ನSS (ನಾಲಗೆ ಕಚ್ಚುವನು)"

ಈ ಪ್ರವೇಶವು ಹೀಗೆಯೆ ನಡೆಯುತ್ತಿರು ನಷ್ಟರಲ್ಲಿ ತೆರೆ ಬೀಳುವುದು.

* * *

" ತುಪ್ಪ?"

" ನೆಯ್ "

" ಈ ಬಿಳಿ ಪಲ್ಯ?"

" ಕೂಟ "

ಆಶ್ಚರ್ಯದಿಂದ ಮುಖ ನೋಡುವನು.

" ಮೊಸರು?"

" ತೈರ್ "

" ಮಜ್ಜಿಗೆ?"

" ಮೋರ್ "

ವಿಚಾರಪರನಾಗುವನು.

" ಪಳದ್ಯಾ?"

" ಮೋರ ಕೊಳಂಬು "

೨+೨=೪ ಎಂಬ ಗಣಿತವನ್ನು ಬಿಡಿಸಿದವನ ಆನಂದ.

" ಸ್ವಲ್ಪ?"

" ಕೊಂಚ "

" ಬಹಳ—ತುಂಬ?"

" ರುಂಬ "

ಮುಗುಳು ನಗೆ.

" ತಕ್ಕೊಂಡು ಬಾ "

" ಕೊಂಡುವಾ "

ವಿಚಾರಪರನಾಗುವನು.

ಅಂತೂ ಮಜ್ಜಿಗೆ ಅನ್ನಕ್ಕೆ ಮುಕ್ತಾಯ, ಊಟವು ಮುಗಿಯಿತು.

ಹೆದರಬೇಡಿ, ಇನ್ನು ಯಾರ ಭಯವೂ ಇಲ್ಲ. ಬೇಕಾದಲ್ಲಿ ಹೊಟ್ಟೆ ತುಂಬಿಕೊಳ್ಳಬಲ್ಲಿರಿ.

ಇಲ್ಲಿ ಆಳೊಬ್ಬನು ಸ್ನಾನಕ್ಕೆ ಬಿಸಿನೀರನ್ನು ಕಾಸಿ ಕೊಡುವನು. ಅದಕ್ಕೆ ಅವನು "ವೆನ್ನೀರ್" ಎನ್ನುವನು. ಮನೆಗೆ "ವೀಡು" ಎನ್ನುವರು.

ಈ ಮೊದಲಿನ ಭಾಷಾಪ್ರಯೋಗಗಳನ್ನು ನೋಡಿ, ಕನ್ನಡ ಮತ್ತು ತಮಿಳು ಈ ಭಾಷಾಭಗಿನಿಯರಲ್ಲಿಯ ವಿಲಕ್ಷಣವಾದ ಸಾಮ್ಯ-ವೈಷಮ್ಯಗಳು, ಇವುಗಳಿಂದ ಹುಟ್ಟುವ ಭಾಷಾಶಾಸ್ತ್ರವಿಷಯಕವಾದ ಅನೇಕ ಪ್ರಮೇಯಗಳು, ಇವುಗಳ ಪರಿಶೀಲನ—ಹಾ, ಹಾಂ—ದುರಂತ, ದುರಂತ! ದುರಂತದಿಂದ ದಿಗ್ಭ್ರಾಂತರಾದ ನನ್ನ ಕನ್ನಡ ಓದುಗರಿಗೆ ನನ್ನ ಈ ಲೇಖನದ ಇನ್ನೊಂದು ದುರಂತವು ಬೇಡ. ಆದುದರಿಂದ "ಥೂಸಿಗೊ"— ಈ ಬರೆಹವು ಮೇಲೆಯೇ ಮುಗಿದಿದೆ ಎಂದು ಬರೆದು ಬಿಡುವೆನು.

ಹೊಸಬಗೆಯ ಫ್ರಾಕ್

★

ಶ್ರೀ. ಹಳೆಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿ.

ಇದೊಂದು ಬಗೆಯಾಗಿ ಬೆಳೆಯುತ್ತಿರುವ ಬೆಡಗಿನ (ಫ್ಯಾಶನೆಬಲ್) ಫ್ರಾಕುಗಳಲ್ಲಿ ಇದು ತೀರ ಹೊಸದು. ಇದರಲ್ಲಿ ಈ ಮೊದಲು ಬರೆದ ಫ್ರಾಕಿನಂತೆ ತೋಳು ಅಖಂಡವಾಗಿರದೆ, ಬೇರೆಯಾಗಿ ಹಚ್ಚಬೇಕಾಗುವುದು. ಕೆಳಭಾಗದ ನಿರಿಗೆಯು (ಸ್ಕರ್ಟ್)ನ್ನು ತಮಗೆ ಇಷ್ಟಬಂದಂತೆ ಒಂದೇ ಪದರಿನಿಂದಾಗಲಿ, ಮೂರು ಇಲ್ಲವೆ ನಾಲ್ಕು ಪದರುಗಳ ನಿರಿಗೆ (ಫ್ರಿಲ್) ಗಳಿಂದಾಗಲಿ ಪೂರ್ಣಗೊಳಿಸಬಹುದು. ನಡುವಿಗೆ ಫ್ರಾಕಿನ ಬಟ್ಟೆಯಿಂದಲೆ ಆಗಲಿ, ಅದಕ್ಕೆ ಶೋಭೆಬರುವ ಇನ್ನೊಂದು ಬಣ್ಣದ ಬಟ್ಟೆಯಿಂದಾಗಲಿ, ನಡುಪಟ್ಟಿ (ಬೆಲ್ಟ್) ಹಚ್ಚಬೇಕು. ತೋಳನ್ನು ನಿರಿಗೆಯುದನ್ನೊ ಭುಜದಮೇಲೆ ಅಲೆದಾಡುವಂತಹದನ್ನೊ ಹಚ್ಚಬೇಕು. ಇಲ್ಲಿ ನಿರಿಗೆಯ ತೋಳುಗಳನ್ನು ಕತ್ತರಿಸುವ ರೀತಿಯನ್ನಷ್ಟೆ ಹೇಳಿದೆ.

ಕೆಳಭಾಗದ ನಿರಿಗೆಗೆ (ಸ್ಕರ್ಟ್) ಹಾಗೂ ಕಾಲರು, ತೋಳುಗಳಿಗೆ ಎದ್ದುಕಾಣುವಂತೆ ಬಣ್ಣದ ಗೋಟು(ಪಾಯ್‌ಪಿಂಗ್) ಕೊಡಲು ಮರೆಯಕೂಡದು. ಇಂತಹ ಫ್ರಾಕುಗಳಿಗೆ ಗುಂಡಿಪಟ್ಟಿಯನ್ನು ಹಿಂಬದಿಗೆ ಮಾಡಬೇಕು. ಮುಂಬದಿಗೆ ಬರಿ ಚೆಂದಕ್ಕಾಗಿ ಗುಂಡಿಗಳನ್ನು ಹಚ್ಚಬೇಕು.

ಅಳತೆ

೨೪" ಎದೆ, ೨೩" ನಡು, ೧೦" ನಡುವಿನ ಉದ್ದ, ೨೭" ಪೂರ್ಣ ಉದ್ದ, ೩½" ತೋಳಿನ ಉದ್ದ, ಭುಜ ೬".

ಚಿತ್ರಿಸುವುದು :

ಬ, ಅ, ಕ ಕಾಟಕೋನ ಮಾಡು.

ಅ, ದ = ೬" ಎಂದರೆ ಎದೆಯ ¼.

ಅ, ಕ = ೧೦" ಎಂದರೆ ನಡುವಿನಉದ್ದ.

ದ, ಕ ಬಿಂದುಗಳನ್ನು ಮುಂದೆ ಬೆಳಸು.

ಅ, ಇ = ೩" ಎಂದರೆ ಎದೆಯ ⅛.

ಅ, ಫ = ೩½" ಎಂದರೆ ಎದೆಯ ⅛+½".

ಅ, ಡ = ¾".

ಡ, ಇ ಮತ್ತು ಫ, ಇ ಚಿತ್ರದಂತೆ ಕೂಡಿಸು.

ಅ, ಬ = ೬" ಎಂದರೆ ಭುಜದ ಅಳತೆ.

ಬ ವನ್ನು ಕೆಳಕ್ಕೆ ಸರಳವಾಗಿ ಇಳಿಸು.

ಬ, ಗ = ೧½".

ಇ, ಗ = ಕೂಡಿಸು.

ದ, ನ = ೭½" ಎಂದರೆ ಎದೆಯ ¼+೧½".

ಜ, ರ ೧".

ಗ, ರ, ನ ಬಗಲಿನ ಬಾಗನ್ನು ಚಿತ್ರದಂತೆ ಕೂಡಿಸು.

ಕ, ತ = ೭¾" ಎಂದರೆ ನಡುವಿನ ¼+೧¾".

ನ, ತ ಕೂಡಿಸು.

ಕ, ಯ ¾".   ತ, ಯ ಕೂಡಿಸು.

ತೋಳು :

ಬ, ಅ, ಕ ಕಾಟಕೋನ.

ಅ, ಕ = ೪½" ಎಂದರೆ ಉದ್ದ+೧".

ಅ, ಬ = ೯" ಎಂದರೆ ಎದೆಯ ¼+೩",

ಡ. ಅ, ಬ ಗಳ ಮಧ್ಯ.



ಬ, ಇ = ೨" ಎಂದರೆ ಎದೆಯ ೧/೧೨.

ಇ, ಡ ಕೂಡಿಸು.

ದ, ಫ = ೧".   ಫ, ನ = ½.

ಇ, ಫ ಕೂಡಿಸು.   ನ, ಕ ಕೂಡಿಸು.

ಕತ್ತರಿಸುವುದು ಮೇಲ್ಭಾಗ :

೧೫" ಅಗಲ ೨೦¾" ಉದ್ದ ಬಟ್ಟೆಯ ತುಂಡನ್ನು ತೆಗೆದುಕೊಂಡು, ಮೊದಲು ಅಗಲದಲ್ಲಿ ಸರಿಯಾಗಿ ಮಡಿಕೆ ಮಾಡಿ, ಅನಂತರ ಉದ್ದದಲ್ಲಿ ಮೇಲಿನ ಮಡಿಕೆಯು, ಕೆಳಗಿನ ಮಡಿಕೆಗಿಂತ ¾" ಹೆಚ್ಚು ಬರುವಂತೆ ಮಡಿಸು. ಡ, ಇ ಎರಡೂ ಮಡಿಕೆಗಳನ್ನೂ ಫ, ಇ ಮೇಲಿನ ಒಂದೇ ಮಡಿಕೆಯನ್ನೂ ಕತ್ತರಿಸು. ಇ, ಗ ಇಡಿಯ ಮಡಿಕೆಯನ್ನು ಗ, ರ, ನ ನಾಲ್ಕೂ ಪದರುಗಳನ್ನೂ, ನ, ತ ನಾಲ್ಕೂ ಪದರುಗಳನ್ನೂ ಕತ್ತರಿಸು. ತ, ಯ ಹೆಚ್ಚುಳ್ಳ ಮೇಲ್ಮಡಿಕೆಯನ್ನು ಕತ್ತರಿಸು.

ತೋಳು ಕತ್ತರಿಸುವುದು:—೧೮" ಅಗಲ ೪" ಉದ್ದವುಳ್ಳ ಎರಡು ಬಟ್ಟೆಯ ತುಂಡುಗಳನ್ನು ಅಗಲದಲ್ಲಿ ಮಡಿಕೆಮಾಡಿ ಇಡು.

ಕ ದಿಂದ ಇ, ನ, ಕ ರೇಷೆಗಳನ್ನು ನಾಲ್ಕೂ ಪದರುಗಳನ್ನು ಕತ್ತರಿಸು. ಕ, ನ ದ ಬದಿಗೆ ರಟ್ಟೆಯ ಸುತ್ತಳತೆಯಷ್ಟು ನಿರಿಗೆಗಳನ್ನು ಮಾಡಬೇಕು. ಇಲ್ಲವೆ ರಟ್ಟೆಯ



ಸುತ್ತಳತೆಯಷ್ಟು ಇಂಚಿನ ರಬ್ಬರ್ ಬಟ್ಟೆಯನ್ನು ಹಚ್ಚಬೇಕು.

ಕೆಳಭಾಗ:— ಪೂರ್ಣ ಉದ್ದದಲ್ಲಿ ನಡುವಿನ ವರೆಗಿನ ಉದ್ದವನ್ನು ಕಳೆದು, ಉಳಿದಷ್ಟು ಉದ್ದ, ಹಾಗೂ ನಡುವಿನ ಇಮ್ಮಡಿ ಅಗಲ ಉಳ್ಳ ಒಂದು ಬಟ್ಟೆಯ ತುಂಡನ್ನು, ಮೇಲ್ಭಾಗದ ನಡುವಿನ ಸುತ್ತಳತೆಯಷ್ಟು ಆಗುವ ವರೆಗೆ ನಿರಿಗೆಮಾಡಿ ಹಚ್ಚಬೇಕು. ಎಂದರೆ ಇದಕ್ಕೆ (ಪೂರ್ಣ ಉದ್ದ ೨೭-೧೦=೧೭") ೧೭" ಉದ್ದ+೧½" ಬುಡಕ್ಕೆ ಮಡಿಸಲಿಕ್ಕೆ—ಹೀಗೆ ೧೮½"—ಉದ್ದ;೪೪" ಅಗಲ (೨೨ ನಡು×೨=೪೪) ಬಟ್ಟೆ ಬೇಕು.

ಬೇಕಾಗುವ ಬಟ್ಟೆ:— ೩೬ ಇಂಚು, ಅಗಲ ಉಳ್ಳ ಬಟ್ಟೆ ೧½" ವಾರ (೫೪") ಬೇಕು.

ಸಾಮಾನ್ಯವಾಗಿ ಫ್ರಾಕಿನ ಉದ್ದದ ಇಮ್ಮಡಿ ತೋಳಿನ ಇಮ್ಮಡಿ ಅರಿವೆ ಬೇಕಾಗುವುದು.

೨೮ ದೇವದಾಸ

ಶ್ರೀಮಾನ್ ಗುರುನಾಥ ಜೋಶಿಯವರು ಭಾಷಾಂತರಿಸಿದುದು.

ಬಂಗಾಲ ಸಾಹಿತ್ಯಪ್ರಪಂಚದಲ್ಲಿ ತೊಳಗಿ ಮೆರೆಯಾದ ದಿವ್ಯಜ್ಯೋತಿ ಶ್ರೀ-ಶರಚ್ಚಂದ್ರ ಚಟರ್ಜಿಯವರ ಸುಪ್ರಸಿದ್ಧ ಕಾದಂಬರಿಯೊಂದರ ಅನುವಾದವಿದು. ಚಲಚ್ಚಿತ್ರದ ಮೂಲಕ ಹಲವು ಜನ ಕನ್ನಡಿಗರಿಗೆ ಈ ಕಾದಂಬರಿಯ ಪರಿಚಯ ಸಾಕಷ್ಟಾಗಿರಬಹುದು. 'ದೇವದಾಸ' ಫಿಲ್ಮ್ ಬಂಗಾಲದ ನ್ಯೂಥಿಯೇಟರಿನವರಿಗೆ ಒಂದು ದೊಡ್ಡ ಹೆಸರನ್ನು ತಂದುಕೊಟ್ಟದು. ನಮ್ಮ ಅನುಭವದಲ್ಲಿ ಆ ಚಲಚ್ಚಿತ್ರದಲ್ಲಿಯ ಸನ್ನಿವೇಶಗಳ ಓಟದ ಮೂಲಕ 'ದೇವದಾಸ' ಕಾದಂಬರಿಯ ಸಂಪೂರ್ಣ ಸೂಕ್ಷ್ಮಾತಿಸೂಕ್ಷ್ಮ ಸೌಂದರ್ಯಾನುಭವ ನಮಗೆ ಸಿಕ್ಕದು. ಅದು ಸಿಕ್ಕಬೇಕಾದರೆ ಮನಸ್ಸನ್ನು ಕೊಟ್ಟು ಮೂಲ ಕಾದಂಬರಿಯನ್ನೇ ಓದಿನೋಡಬೇಕು. ಹಾಗೆ ನೋಡಲು ನಮಗೆ ಅನುಕೂಲವಾಗುವಂತೆ, ಒಳ್ಳೆಯ ಭಾಷೆಯಲ್ಲಿ ಭಾಷಾಂತರ ಮಾಡಿಕೊಟ್ಟ ಶ್ರೀ. ಗುರುನಾಥ ಜೋಶಿಯವರೂ, ಅಂದವಾಗಿ ಅಚ್ಚುಹಾಕಿಸಿ ಪ್ರಕಟಿಸಿದ ಹುಬ್ಬಳ್ಳಿ ಸಾಹಿತ್ಯಭಾಂಡಾರದ ಸಂಚಾಲಕರೂ ಖಂಡಿತ ಕನ್ನಡಿಗರ ಕೃತಜ್ಞತೆಗೆ ಪಾತ್ರರು.

ಈ ಕಾದಂಬರಿಯ ನಾಯಕ 'ದೇವದಾಸ' ಎಂಬ ಹೆಸರಿನ ತರುಣ; ದುಡುಕುಬುದ್ಧಿಯ ತರುಣ. ದುಡುಕುಬುದ್ಧಿ ಅದೊಂದು ಉರಿಯುವ ಅಗ್ನಿಸ್ವರೂಪಿಯಾದುದು. ಉರಿಯುವ ಅಗ್ನಿಗೊಂದು ಸರಿಯಾದ ಎಡೆದೊರೆತು, ತಕ್ಕುದಾದ ಬತ್ತಿಯ ಆಲಂಬನೆ ಸಿಕ್ಕು, ಎಣ್ಣೆ (ಸ್ನೇಹ) ತುಂಬಿದ ಪ್ರಣತಿಯ ನೆರವು ಉಂಟಾದಾಗ ಅದು ತೇಜಸ್ವಿಯಾದ ನಂದಾದೀಪವಾಗಿ ಪರಿಣಮಿಸಿ, ಲೋಕದ ಕತ್ತಲೆಯನ್ನು ಕಳೆಯುವ ಸಾಧನವಾಗಬಹುದು. ಹೀಗಾಗದೆ ಅದು ಎಲ್ಲಿಯೊ ಬಿದ್ದು, ತನ್ನಷ್ಟಕ್ಕೆ ತಾನೆ ಉರಿದುಕೊಳ್ಳುವ ಅವಕಾಶ ದೊರೆತರೆ, ಅದಕ್ಕೆ ನಾಡಿನ ಲಕ್ಷ್ಯವೂ ಇರದು; ಕಾಡಿನ ಲಕ್ಷ್ಯವೂ ಇರದು. ಎಲ್ಲವನ್ನೂ ಆಹುತಿಗೊಳ್ಳುತ್ತ ಹೋಗುವುದು. ಯಾವುದೂ ಸಿಕ್ಕದಿರುವಾಗ ತನ್ನ ಉರಿಯುವ ಶಕ್ತಿಯನ್ನೇ ಕಳೆದುಕೊಂಡು ತಣ್ಣಗಾಗಿ ಬಿಡುವುದು.

ದೇವದಾಸನ ದುಡುಕುಜೀವನವನ್ನು ಈ ಅಗ್ನಿಯ ಹೋಲಿಕೆಯಿಂದಲೆ ಸಂಪೂರ್ಣವಾಗಿ ಬಣ್ಣಿಸಿ ಹೇಳಲು ಸಾಧ್ಯ. ಆತನ ಆಶೆಗೆ ಆಲಂಬನವಾಗಿ ಪಾರ್ವತಿಯ ಜೊತೆ ದೊರೆತು, ಆಕೆಯ ಸ್ನೇಹಪೂರ್ಣ ಹೃದಯದ ಉಪಭೋಗ ಸಿಕ್ಕು, ದೇವದಾಸನೊಬ್ಬ ಗೃಹಸ್ಥನಾಗಿ ನಿಂತಿದ್ದರೆ, ಅವನಲ್ಲಿ ಹುಟ್ಟಿನೊಡನೆಯೆ ಹುಟ್ಟಿ ಬೆಳೆಯುತ್ತಲಿದ್ದ ಸದ್ಗುಣಗಳ ಉಪಯೋಗ ಸಮಾಜಕ್ಕೆ ಎಷ್ಟೆಷ್ಟು ರೀತಿಯಿಂದ ಆಗಬಹುದಾಗಿದ್ದಿತು! ಆಗಬಹುದಾಗಿದ್ದಿತಾದರೂ ಆಗಲಿಲ್ಲ. ಅವನ ಜೀವಜ್ಯೋತಿಗೆ ದೊರೆಯಬಹುದಾಗಿದ್ದ ಪಾರ್ವತಿಯ ಸ್ನೇಹಪ್ರವಾಹವನ್ನು ಆತನ ತಾಯಿ-ತಂದೆಗಳು ತಪ್ಪಿಸಿದರು. ಸರಿಯಾದ ಎಡೆಸಿಕ್ಕದೆ ಆ ಜೀವಜ್ಯೋತಿ ತನ್ನನ್ನು ತಾನೆ ಉರಿಸುತ್ತ ಹೊರಟಿತ್ತು. ಚಂದ್ರಮುಖಿಯೆಂಬ ಸೂಳೆ ಆ ಜ್ಯೋತಿಗೊಂದು ಸ್ನೇಹಸಂಪೂರ್ಣವಾದ ಪಣತೆಯಾಗಲು ಸಿದ್ಧಳಾದಳು. ಆದರೆ ದೇವದಾಸನಲ್ಲಿ ನೆಲೆಗೊಂಡಿರುವ ಸಂಪ್ರದಾಯನಿಷ್ಠೆ, ಸಮಾಜಭೀತಿಗಳು ಆ ಹಣತೆಯನ್ನೂ ಒಡೆದುಹಾಕಿದುವು. ನಿರಾಶನಾದ ದೇವದಾಸ ಮೈಮರೆಯುವುದಕ್ಕೆಂದು ಸುರೆ ಕುಡಿಯತೊಡಗಿದ. ಪಾವಿತ್ರ್ಯದ ಸರಿಯಾದ ಕಲ್ಪನೆಯಿರುವುದರಿಂದ ಅವನು, ತನ್ನ ಸುರಾಪಾನದ ಮೂಲಕ ತಾನಾಗಿಯೆ ಮಾತೃಸ್ನೇಹದಿಂದ ದೂರನಾಗಿ ಬಿಟ್ಟ. ಎಲ್ಲಿಯೂ ಸ್ನೇಹದ ಆಶೆಯಿರದುದರಿಂದ ದೇವದಾಸನ ಜೀವಜ್ಯೋತಿ ತನ್ನನ್ನೇ ತಾನು ಸುಟ್ಟುಕೊಂಡು ಶಾಂತವಾಗಿ, ಕತೆಯನ್ನು ವಿಷಾದಾಂತವಾಗಿಸುವುದು. ದೇವದಾಸನಂತಹರ ವಿಷಾದಾಂತಜೀವನದ ಘಟನೆಗಳು ನಮ್ಮ ಸಮಾಜದಲ್ಲಿ ಎಷ್ಟೊಂದು ಕಣ್ಣಿಗೆ ಬೀಳುತ್ತಿಲ್ಲ? ಆದರೂ ನಮ್ಮ ಪರಂಪರಾಪ್ರಿಯ ಸಮಾಜ, ಅಂತಹ ವಿಷಾದಾಂತ ಘಟನೆಗಳ ಹಿಂದಿನ ಸಂಗತಿಗಳನ್ನು ವಿಶ್ಲೇಷಿಸಿ ನೋಡಲಿಕ್ಕೆ ಸಿದ್ಧವಿಲ್ಲ. ಆದುದರಿಂದಲೆ ಸಮಾಜದ ಸ್ನೇಹ-ಸಹಾನುಭೂತಿಗಳನ್ನು ಕಾಣದೆ ಎಷ್ಟೋ ಜೀವಗಳು ವ್ಯರ್ಥ ಹಾಳಾಗುತ್ತಿರುವುದರ ಕಡೆಗೆ ಯಾರದೂ ಲಕ್ಷ್ಯವಿಲ್ಲದಂತಾಗಿದೆ. ಅಂತಹ ಜೀವಗಳ ಗೋಳನ್ನು ಲೋಕದೆದುರು ಸ್ಪಷ್ಟಪಡಿಸುವ ವಕೀಲಿಯ ಕೆಲಸವನ್ನು ಶ್ರೀ ಶರಚ್ಚಂದ್ರರು ಈ ಕಾದಂಬರೀಲೇಖನದ ಮೂಲಕ ಯಶಸ್ವಿಯಾಗಿ ಮಾಡಿರುವರು. ಎಂತಹ ಸಂಪ್ರದಾಯಪ್ರಿಯನೂ ದೇವದಾಸನ ಸಂಯಮರಹಿತ ಜೀವನಕ್ಕೆ ಸಿಟ್ಟಾಗನು; ಇಷ್ಟೇ ಅಲ್ಲ ಅವನ ಸ್ನೇಹವಿರಹಿತ ಜೀವನಕ್ಕಾಗಿ ನಿಟ್ಟುಸಿರು ಹಾಕುವನು. ಪಾರ್ವತಿಯ ವೈವಾಹಿಕಜೀವನದಲ್ಲಿಯ ವ್ಯಭಿಚಾರಕ್ಕಾಗಿ ಯಾವ ಸನಾತನಿಯೂ ಆಕ್ಷೇಪವೆತ್ತನಿಷ್ಟೇ ಅಲ್ಲ; ದೇವದಾಸನ ವಿಷಯದಲ್ಲಿರುವ ಆಕೆಯ ನಿರ್ವ್ಯಾಜಪ್ರೇಮಕ್ಕಾಗಿ ಕರುಣೆಯ ಕಣ್ಣೀರು ಸುರಿಸುವನು. ಚಂದ್ರಮುಖಿಯ ಸೂಳೆತನ ಯಾವ ರೂಢಿಮೂಢನ ಹೃದಯಕ್ಕೂ ಚುಚ್ಚದಿಷ್ಟೇ ಅಲ್ಲ; ಆಕೆಯಲ್ಲಿಯ ನಿಜವಾದ ಮಾನವ ಸ್ವರೂಪ ಎಲ್ಲರಿಂದಲೂ ಕೈಮುಗಿಸಿಕೊಳ್ಳುವುದು. 'ದೇವದಾಸ' ಕಾದಂಬರಿಯನ್ನು ಓದುವಾಗ ಹತ್ತಾರುಸಲವಾದರೂ ಶೋಕವುಕ್ಕಿದ

ಹೃದಯದಿಂದ 'ಅಯ್ಯೋ' ಎಂದೆನ್ನದವನು—ಕಣ್ಣೀರು ಮಿಡಿಯದವನು—ಸ್ಥಿತಪ್ರಜ್ಞನಿರಬೇಕು, ಇಲ್ಲವೆ ಪ್ರಜ್ಞಾರಹಿತನಿರಬೇಕು. ಭಾಷಾಂತರಕಾರರು ತಮ್ಮ ಒಂದೆ ಬಗೆಯ ಭಾಷಾಶೈಲಿಯ ಮೂಲಕ ಮೂಲದ ಭಾವದ ಕುಸುರನ್ನು ಕೊಂಚ ಕಡಿಮೆ ಮಾಡಿರುವರಾದರೂ, ಇದ್ದಷ್ಟು ಕುಸುರುಗಳೆ ರಸಿಕರ ಮೆಚ್ಚಿಕೆಗೆ ಸಾಕಷ್ಟಿವೆ. ಅಕ್ಷರ ಬಲ್ಲವರೆಲ್ಲರೂ ಈ ಕಾದಂಬರಿಯನ್ನು ಓದಿಯೆ ಇದರಲ್ಲಿಯ ಸೊಗಸನ್ನು ಅನುಭವಿಸಬೇಕಾದುದು ಅಗತ್ಯ.

—ಬೆಟಗೇರಿ ಕೃಷ್ಣಶರ್ಮ

೭೩. ತುಟಿ ಮೀರಿದುದು.

(ಹಾಸ್ಯನಿಬಂಧಗಳ ಸಂಗ್ರಹ)
ಶ್ರೀಮಾನ್ 'ರಾ. ಶಿ.'ಯವರು ಬರೆದು,
ಮನೋಹರ ಗ್ರಂಥಮಾಲೆಯಲ್ಲಿ
ಪ್ರಕಟವಾದುದು.

ಈ ಗ್ರಂಥದ 'ತೋರಿದುದು ಕೆಲವು' ಎಂಬುದರಲ್ಲಿ ಬೇರೆ ಬೇರೆ ೮ ನಿಬಂಧಗಳಿವೆ. ಇವುಗಳೊಳಗಿನ ಹಾಸ್ಯವನ್ನು ಪ್ರಯತ್ನದಿಂದ ಹುಡುಕಿದರೂ ಹೆಚ್ಚಿನ ಪ್ರಯೋಜನವನ್ನೇನೂ ಪಡೆಯುವಂತಿಲ್ಲ. ಏಕೆಂದರೆ ನಗೆಯನ್ನು ಹುಟ್ಟಿಸಲಿಕ್ಕೆ ವೈಚಿತ್ರ್ಯಪೂರ್ಣವಾದ ಘಟನೆಗಳಾದರೂ ಇರಬೇಕು; ಚಮತ್ಕೃತಿ ತುಂಬಿದ ಮಾತುಗಳಾದರೂ ಇರಬೇಕು. ಈ ನಿಬಂಧಗಳಲ್ಲಿ ಅಂತಹ ಹಾಸ್ಯೋತ್ಪಾದಕ ಘಟನೆ ಒಂದರಲ್ಲಿಯೂ ಇಲ್ಲ. ಹುಡುಕಿತೆಗೆಯಲೆಂದೇ ಹೊರಟರೆ ನಾಲ್ಕಾರು ಚಮತ್ಕೃತಿಯುಕ್ತ ಹಾಸ್ಯೋಕ್ತಿಗಳು ದೊರೆಯಬಹುದಿಷ್ಟೆ. ಅವೂ ಕೂಡ ತೀರ ಸಾಮಾನ್ಯ ತರಗತಿಯವು.

ಉದಾಹರಣೆಗಾಗಿ:

"ನಮ್ಮ ದೇಶದಲ್ಲಿ ಯಾವಾಗಲೂ ಹಣವಿಲ್ಲದೆ ಇರುವ ಸ್ಥಳಗಳು ಎರಡು: ಸರಕಾರದ ಬೊಕ್ಕಸ. ನನ್ನ ಜೇಬು.."

"ಈ ರೀತಿ ನಾನು ಧೈರ್ಯ ಹೇಳಿದವರಿಗೆಲ್ಲಾ ದೇವರು ಸಹಾಯ ಮಾಡಲು ಆರಂಭಿಸಿದರೆ ದೇವರ ಮನೆಯು ಮೂರೇ ತಿಂಗಳಲ್ಲಿ ಹಾಳಾಗಿಹೋಗುತ್ತದೆ, ಅಷ್ಟೆ."

"ಆದರೆ ನಮ್ಮ ಮನೆಮಕ್ಕಳಿಗೆ ಮನುಷ್ಯರಿಗೆ ಬರುವ ಕಾಯಿಲೆಗಳು ಬರಬಾರದೆ? ನಾಯಿಕೆಮ್ಮು, ಹಕ್ಕಿರೋಗ, ಜಂತುಹುಳುಗಳು, ಕೊಕ್ಕರೆಕಾಲು, ಹುಲಿಹುಣ್ಣು— ಖಾಸಬಂಗಲೆ ಖಾಯಿಲೆಗಳೆಲ್ಲಾ ನಮ್ಮ ಮೇಲೇನೆ."

ಈ ಗ್ರಂಥಕರ್ತರು ತಮ್ಮ 'ಸ್ವತಂತ್ರ ಶೈಲಿ' ಎಂಬ ನಿಬಂಧದಲ್ಲಿ 'ಅಚ್ಚು ಹಾಕಿದಾಕ್ಷಣವೇ ಪದ್ಯವಾಗಿಹೋಗಿತೆ?' ಎಂಬ ಹೊಸಗಾದೆಯನ್ನು ಬರೆದಿದ್ದಾರೆ. ಇವೆಂಟು ನಿಬಂಧಗಳನ್ನು ಓದಿದಾಗ ನಮ್ಮ ಗೆಳೆಯರಿಗೊಬ್ಬರಿಗೂ ಒಂದು ಹೊಸಗಾದೆ ಹೊಳೆಯಿತಂತೆ. ಅದಾವುದೆಂದರೆ:

"ಲೆಕ್ಕಣಿಕೆ ಬರೆದುದೆಲ್ಲವೂ ಲಘು-ಪ್ರಬಂಧವಾದೀತೇ?"

ಎರಡನೆಯ ಭಾಗವಾದ 'ಕಂಡವರು ಕೆಲವರು' ಎಂಬುದರಲ್ಲಿ ಕೆಲವು ವ್ಯಕ್ತಿಗಳ ಸ್ವಭಾವಚಿತ್ರಗಳು ಚೆನ್ನಾಗಿ ಪಡಿಮೂಡಿವೆಯಾದರೂ, ಇದರಲ್ಲಿಯ ಒಂಬತ್ತು ಬರೆಹಗಳನ್ನೆಲ್ಲ ಹಾಸ್ಯನಿಬಂಧಗಳೆಂದು ಹೇಳಲು ಬರುವಂತಿಲ್ಲ. '**ಕುಪ್ಪಣ್ಣ**' ಪ್ರಾರಂಭದಲ್ಲಿ ಸ್ವಲ್ಪ ನಗೆಯನ್ನು ತುಟಿಯಿಂದ ಹೊರಕ್ಕೆ ಮೀರಿಸಬಹುದಾದರೂ, ಕೊನೆಯಲ್ಲಿ ಸಿದ್ಧವಾಗುವ ಆತನ ಸಾಧುಬುದ್ಧಿ ಹೊರಕ್ಕೆ ಹೊರಟ ನಗೆಯನ್ನು ಅಲ್ಲಿಯೆ ಕರಗಿಸಿಬಿಡುತ್ತದೆ. '**ಸೋಪಿನ ಶಾಮಿ**' ತನ್ನ ಧೂರ್ತತನದ ಮೂಲಕ ವಾಚಕರನ್ನು ಸ್ವಲ್ಪ ಬೆರಗುಗೊಳಿಸಬಹುದಾದರೂ ನಗಿಸಲಾರ. ಸಿದ್ಧಾಂತಿ—ರಾವಸಾಹೇಬರ ಕತೆಯೂ ಅಷ್ಟೆ! ಅದರಲ್ಲಿಯ ಸನ್ನಿವೇಶ ವಾಚಕರನ್ನು ಸ್ಮಿತಮುಖರನ್ನಾಗಿಸಬಹುದು. 'ನಾದಿನಿ'ಯು ವಾಚಕರಲ್ಲಿಯ ಅನೇಕರ ನಾದಿನಿಯರನ್ನು ಮನದೆದುರು ತಂದು ನಿಲ್ಲಿಸಿ ನಗಿಸಲು ಸಮರ್ಥಳಾಗಿದ್ದಾಳೆ. 'ಎಮ್ಡನ್ ನಾಯ್ಡು'ವಿನ ಚಿತ್ರದಲ್ಲಿ ನಗೆಗಿಂತ ಚುಚ್ಚುಮಾತಿಗೆ ಹೆಚ್ಚಿನ ಅವಕಾಶವಿದೆ. 'ಅಮ್ಮಣ್ಣಿ' ಎಂಬುದರಲ್ಲಿ ನಗೆ ಮಿದೆಯಾದರೂ ಇದನ್ನು ನಿಬಂಧವೆಂದು ತಿಳಿಯಲಿಕ್ಕಾದೀತೆ? ಸಣ್ಣಕತೆಯ ವರೆಗೆ ಇದು ಚೆನ್ನಾಗಿ ಹತ್ತಿ ನಿಲ್ಲುತ್ತದೆ. 'ಶಾಮಣ್ಣಿ'ನ ಮೊದ್ದುತನ ಕರುಣೆಯ ಸಹಾನುಭೂತಿಯನ್ನೆ ಹೆಚ್ಚಾಗಿ ಅಪೇಕ್ಷಿಸುತ್ತದೆ. ಹಳ್ಳಿಗ ಮಾರಿಯಲ್ಲಿ ಹಳ್ಳಿಗರ ಮನಸ್ಸಿನದೊಂದು ಸಹಜಚಿತ್ರವಿದೆ. 'ಚೆಲುವನ ಚೆನ್ನ'ನ ಪ್ರಾಮಾಣಿಕತೆಯ ಕತೆ ಕತೆಯಲ್ಲದೆ ನಿಬಂಧದ ತಂತ್ರಕ್ಕೆ ಒಳಪಡದು.

ಮೂರನೆಯ ಭಾಗವಾದ 'ನಡೆದುದು ಹಲವು' ಎಂಬುದರಲ್ಲಿ ಕೆಲವು ಸತ್ಯ-ಸಂಗತಿಗಳನ್ನು ಕುರಿತು ಬರೆದ ಐದು ಬರೆಹಗಳಿವೆ. ಕೊನೆಯದಾದ 'ಪ್ರಚಂಡರು' ಎಂಬುದು ಮಿಕ್ಕ ನಾಲ್ಕಕ್ಕಿಂತ ಸ್ವಲ್ಪ ಬೇರೆ ಜಾತಿಯದು. ಇವೆಲ್ಲವುಗಳಲ್ಲಿಯೂ ತೀರ ಸಾಮಾನ್ಯ ತರಗತಿಯ ವಾಕ್ಯವಿಡಂಬನೆಯಿದೆ.

ನಾಲ್ಕನೆಯ ಭಾಗದಲ್ಲಿ 'ಅಣಕವಾಡುಗಳು' ಇವೆ. ಇವು ಅಣಕವಾಡಿನ ಅಣಕಗಳಲ್ಲದೆ ನಿಜವಾದ ಅಣಕವಾಡೆಂದು ಯಾರೂ ಹೇಳಲಾರರು. ಅಣಕವಾಡಿನ ಗುಣಧರ್ಮಗಳು ಇದು ಉದ್ದೇಶದಲ್ಲಿರಬಹುದಲ್ಲದೆ ಪರಿಣಾಮದಲ್ಲಿ ಸ್ವಲ್ಪವೂ ಕಂಡುಬಾರವು.

ಭಾಷೆಯ ವಿಚಾರವೂ ಅಷ್ಟೇ! ನಗೆ-ಬರೆಹಗಳನ್ನು ರೂಢಿಯ ಭಾಷೆಯಲ್ಲಿ ಬರೆಯಬೇಕೆಂಬ ಮಾತನ್ನು ನಾವು ಒಪ್ಪುತ್ತೇವೆ. ಆದರೆ 'ಚಲನಾಚಾತುರ್ಯ' 'ಕವನಾಶಕ್ತಿ' 'ಮಹಶ್ಶಕ್ತಿ' 'ಅನುನಾಯಿ' 'ಅದ್ಯೃಷ್ಟ' ಇಂತಹ ತಪ್ಪು ಮಾತುಗಳನ್ನು ಸರಿಪಡಿಸಿಕೊಂಡು ಬರೆದರೆ ಆಗದೇನು? 'ಹೊರಗೆಡಿಸುವರು' ಎಂಬ ಮಾತನ್ನು, 'ಹೊರಗೆಡಹುವರು' ಎಂಬ ಮಾತನ್ನು ಬಳಸಬೇಕಾದಲ್ಲಿ ಬಳಸಿರುವರು. ಅನೇಕ ಕಡೆಗೆ ಮಾತಿನ ರೀತಿ ಇಂಗ್ಲಿಷ್ ಮಾತಿನ ಧಾಟಿಯನ್ನೆ ಹಿಡಿದು ನಡೆದುದನ್ನು ಕಾಣಬಹುದು.

ಈಗಾಗಲೆ ಕನ್ನಡದಲ್ಲಿ ಪ್ರಕಟವಾದ ಶ್ರೀ. ಗೋರೂರರ 'ಹಳ್ಳಿಯ ಚಿತ್ರ' 'ನಮ್ಮೂರಿನ ರಸಿಕರು' ಗಳು, ಶ್ರೀರಂಗರ ಹರಟೆಗಳು, ಶ್ರೀ. ಪಡುಕೋಣೆ ರಮಾನಂದರಾಯರ 'ಹೂಬಾಣ'ಗಳು, ಅನುವಾದಿತವಾಗಿ ಬಂದ 'ಕುರಿಹಿಂಡು' ಇವು ಹರಿಸುವ ಸಹಜಹಾಸ್ಯದ ಹೊನಲಲ್ಲಿ ಮುಳುಗಿ ಮಿಂದವರಿಗೆ ಈ 'ತುಟಿ ಮೀರಿದುದು' ಬರಿಯೆ ಉಸುಬಿನ ಬಯಲು. ಇಷ್ಟೊಂದು ಅಂದವಾದ ಅಚ್ಚು, ಹೊರ-ಚೆಲ್ವುಗಳಿಂದ ಮುಂದೆಬಂದ ಗ್ರಂಥವು

ತನ್ನ ಉದ್ದೇಶವನ್ನು ಸರಿಯಾಗಿ ಸಾಧಿಸುವ ಕಾರ್ಯವನ್ನೂ ಮಾಡುತ್ತದೆ ಎನಿಸಿದ್ದರೆ, ಎಲ್ಲರಿಗಿಂತಲೂ ಹೆಚ್ಚಿನ ಆನಂದ ನಮಗಾಗುತ್ತಿತ್ತು. ಬಿ. ಪಾ. ಸಾ. ರಾವ್

೬೪. ವೇದಾಂತದ ಒಳದಾರಿ

ಶ್ರೀಮಾನ್ ಕುಲಕರ್ಣಿ ನಾರಾಯಣರಾಯರು ಎಂ. ಎ., ಎಲ್‌ಎಲ್. ಬಿ. ಅವರ ೬ ವ್ಯಾಖ್ಯಾನಗಳ ಸಂಗ್ರಹ.

ಬಂಕಾಪುರದ ಶ್ರೀಮಾನ್ ಶಿವಾನಂದ ಸೂನುಗಳವರು, ಕಳೆದ ವರ್ಷ ಕಾರವಾರ ಜಿಲ್ಲೆಯ ಬಾಡದಲ್ಲಿರುವ ಅಖಂಡಾಶ್ರಮದಲ್ಲಿ ನಡೆಯಿಸಿದ ತ್ರೈಮಾಸಿಕ ಪರಮಾರ್ಥ ಸಾಧನಾಶಿಬಿರದಲ್ಲಿ, ಶ್ರೀ. ಕುಲಕರ್ಣಿಯವರು ಕೇನೋಪನಿಷತ್ತಿನ ಆಧಾರದ ಮೇಲೆ ಮಾಡಿದ ಪ್ರವಚನಗಳಿವು. ಎಲ್ಲ ಉಪಾಸನೆಗಳಿಗಿಂತ ಜ್ಞಾನೋಪಾಸನೆಯೆ ಶ್ರೇಷ್ಠವೂ, ಸಂಪೂರ್ಣವೂ, ಮಾನವನ ಕೊನೆಯ ಗುರಿಯೂ ಆಗಿದೆಯೆಂಬುದನ್ನು ಈ ಪ್ರವಚನಗಳಲ್ಲಿ ಪ್ರಮಾಣಪೂರ್ವಕವಾಗಿ ಸಿದ್ಧಗೊಳಿಸಲು ಶ್ರೀಮಾನ್ ಕುಲಕರ್ಣಿಯವರು ಹವಣಿಸಿದ್ದಾರೆ. ಈ ಆರೂ ಪ್ರವಚನಗಳನ್ನು ಓದುವಾಗ ಪ್ರವಚನಕಾರರ ವೇದಾಂತದ ಆಳವಾದ ಅಭ್ಯಾಸದ ಅನುಭೂತಿಯುಂಟಾಗುವುದಲ್ಲದೆ, ತಿಳಿದ ವಿಷಯವನ್ನು ಸುಲಭವಾದ ಭಾಷೆಯಲ್ಲಿ ಸ್ಪಷ್ಟವಾಗಿ ಹೇಳುವ ಶಬ್ದಸಾಮರ್ಥ್ಯವೂ ಇವರಲ್ಲಿದೆಯೆಂಬುದು ಗೊತ್ತಾಗುವುದು. ಶ್ರೀ. ಕುಲಕರ್ಣಿಯವರು ತಾವು ಸಾಂಪ್ರದಾಯಿಕ ಅದ್ವೈತಮಾರ್ಗಿಗಳೆಂದು ಹೇಳಿಕೊಳ್ಳುತ್ತಿದ್ದರೂ, ಅವರು ಕೇವಲ ಸಂಪ್ರದಾಯಾಂಧರಲ್ಲವೆಂಬ ಮಾತು ವಿಚಾರವಾದಿಗಳಿಗೆ ಹೊಳೆಯದಿರದು. ಇದಕ್ಕೆ ಕಾರಣವೆಂದರೆ ವೈಜ್ಞಾನಿಕ ಯುಗದಲ್ಲಿ ಬೆಳೆದು ಬಾಳುತ್ತಿರುವ ಅವರಿಗೆ, ಅನೇಕ ಲೌಕಿಕ ಸತ್ಯಸಿದ್ಧಾಂತಗಳನ್ನು ವಿಾರಿ ನಡೆಯಲಿಕ್ಕೆ ಮನಸ್ಸು ಬಾರದೆಂದು ತೋರುವುದು. ಎಂತಲೆ ಅವರು ಒಂದೆಡೆಯಲ್ಲಿ ಹೀಗೆ ಹೇಳಿರುವರು:

“ ಜ್ಞಾನವನ್ನು ಮುಚ್ಚಿಡುವ ಹವ್ಯಾಸವೆ ಗರ್ಹಣೀಯವಾದುದು. ಇಷ್ಟೆ ಅಲ್ಲ; ಜಾತಿ ಮತ ಪಂಥ ಮೊದಲಾದ ಎಲ್ಲ ಕಲ್ಪನೆಗಳನ್ನು ಬಿಟ್ಟವನಿಗೇ ಪರಮಾರ್ಥವು ದಕ್ಕುವಂತಹದು. ”

ದೈವದ ಮುಂದೆ ಪೌರುಷಕ್ಕೆ ಬೆಲೆಯೇ ಇಲ್ಲವೆಂಬ ಅನನ್ಯಗತಿಕರಾದ ಪರಮಾರ್ಥಿಗಳಿವರಲ್ಲ; ಎಂತಲೆ ಅವರು ಇನ್ನೊಂದೆಡೆ ಹೀಗೆ ನುಡಿದಿರುವರು:–

“ ನನ್ನ ಕಡೆಯಿಂದ ಆಗಲಾರದು ಎಂಬ ಹೇಡಿತನದ ವೃತ್ತಿಯು ಮೋಕ್ಷಕ್ಕೆ ತೀರ ವಿಘ್ನಕಾರಿಯು. ತನ್ನಲ್ಲಿಯೆ ತನಗೆ ನಂಬಿಗೆ ಇಲ್ಲದ ಹೇಡಿಯು, ಯಾವುದೇ ಗುರುಗಳ ಅಥವಾ ದೇವರ ಕೃಪೆಯಿಂದ ಮೋಕ್ಷವಾದೀತೆಂಬ ಹುಚ್ಚು ನಂಬಿಗೆಯನ್ನಿಡುವುದೇ ಬೇಡ. . ”

ಇನ್ನೊಂದೆಡೆ ಉಪಾಸನೆಯನ್ನು ಕುರಿತು ಹೇಳಲು ಹೊರಟು “ ನಾವು ಇಲ್ಲಿಯವರೆಗೆ ನಂಬುತ್ತ ಬಂದಿರುವ ನಂಬಿಗೆಗಳು, ಪೂಜಿಸುತ್ತ ಬಂದಿರುವ ದೇವತೆಗಳು, ಆಚರಿಸುತ್ತ ಬಂದಿರುವ ರೀತಿ–ನಡಾವಳಿಗಳು ನಿರ್ಬಾಧವಾಗಿ ಉಳಿಯುವಂತೆ ತತ್ತ್ವಜ್ಞಾನವಿರಬೇಕೆಂದು ಹಟಹಿಡಿಯುವುದು ಸರಿಯಲ್ಲ ” ಎಂದು ಉಗ್ಗಡಿಸಿರುವರಲ್ಲದೆ, “ ತತ್ತ್ವವಸ್ತು ಇದ್ದಕ್ಕಿದ್ದಂತೆ ತಿಳಿದುಕೊಳ್ಳುವುದು ನಮ್ಮ ಕರ್ತವ್ಯವು. ನಾವು ಮಾಡಿಟ್ಟ ಕಲ್ಪನೆಗಳಿಗನುಸರಿಸಿ ತತ್ತ್ವವಿರಬೇಕೆಂದು ಅಪೇಕ್ಷಿಸುವುದು ದುರಾಗ್ರಹವು ” ಎಂದು ಗಟ್ಟಿಮುಟ್ಟಾಗಿ ಸಾರಿರುವರು. ಈ ಉಗ್ಗಡಣೆಗೂ ಸಾರಿಕೆಗೂ ಪುರಾತನರ ವಚನಪ್ರಮಾಣಗಳನ್ನು ಕೊಟ್ಟು, ಅವುಗಳ ಬಲವನ್ನು ಹೆಚ್ಚಿಸಿರುವರು. ಮೊದಲಿನ ೩-೪ ಪ್ರವಚನಗಳಲ್ಲಿರುವಷ್ಟು ವಿಚಾರಸ್ವಾತಂತ್ರ್ಯಕ್ಕೆ ಕೊನೆಯ ಎರಡರಲ್ಲಿ ಅವಕಾಶವಿಲ್ಲದಾಗಿದೆ. ಆ ಎರಡೂ ಕೇವಲ ಔಪನಿಷದಿಕ ಪರಂಪರೆಯಿಂದ ಆತ್ಮತತ್ತ್ವವನ್ನು ಸಿದ್ಧಮಾಡಲು ಹೊರಟವುಗಳಾಗಿವೆ. ವೇದಾಂತದ ಸಾಂಪ್ರದಾಯಿಕ ಪರಿಭಾಷೆಗಳನ್ನು ಈ ಎರಡರಲ್ಲಿ ಹೆಚ್ಚಾಗಿ ಬಳಸಿದುದರಿಂದ, ವೇದಾಂತ-ಶಾಸ್ತ್ರದಲ್ಲಿ ಸ್ವಲ್ಪವಿಲ್ಲ ಸ್ವಲ್ಪ ಪ್ರವೇಶವಿದ್ದವರಿಗಲ್ಲದೆ ಅವು ಜನಸಾಮಾನ್ಯರಿಗೆ ಕೂಡಲೆ ಅರ್ಥವಾಗಲಾರವು. ಆದರೂ ಅನೇಕ ಪರಿಭಾಷೆಗಳಿಗೆ ಅಲ್ಲಲ್ಲಿ ವಿವರಣೆಗಳನ್ನು ಕೊಟ್ಟು ಸುಲಭವಾಗಿ ತಿಳಿಯುವಂತೆ ಪ್ರಯತ್ನಮಾಡಿದುದೂ ಕಂಡುಬರುತ್ತಲಿದೆ. ಶ್ರೀ. ಕುಲಕರ್ಣಿಯವರು ತತ್ತ್ವಜ್ಞಾನದ ಪ್ರಾಮಾಣಿಕ ಅಭ್ಯಾಸಿಗಳು; ವಕೀಲಿಯ ವ್ಯವಸಾಯಮಾಡುತ್ತಿದ್ದರೂ ಬದುಕಿಗೊಂದು ದೊಡ್ಡ ಗುರಿಯನ್ನಿರಿಸಿಕೊಂಡು ಹೊರಟವರು. ಅವರನ್ನರಿತವರಿಗೆ ಅವರು ಬಯಲುಡಂಭಾಚಾರದ ಬಾಯಿ-ವೇದಾಂತಿಗಳಲ್ಲವೆಂಬುದು ಚೆನ್ನಾಗಿ ಗೊತ್ತು. ಈ ಪ್ರವಚನಗಳಲ್ಲಿ ಅವರ ಜೀವನದ ಆಶೆ, ಗುರಿ ಚೆನ್ನಾಗಿ ಪ್ರತಿಬಿಂಬಿತವಾಗಿವೆ. ನಾಸ್ತಿಕನೆ ಇರಲಿ, ಆಸ್ತಿಕನೆ ಇರಲಿ, ಈ ಜ್ಞಾನೋಪಾಸನೆಯ ವಿಚಾರಗಳನ್ನು ಅವಶ್ಯವಾಗಿ ಓದಿಕೊಳ್ಳಬೇಕು. ಶ್ರೀಮಾನ್ ಕುಲಕರ್ಣಿಯವರು ತಮ್ಮ ಅಭ್ಯಾಸ, ಅನುಭವಗಳನ್ನು ಕುರಿತು ಬೇರೆ ಗ್ರಂಥಗಳನ್ನೂ ಬರೆದು, ಕನ್ನಡಿಗರಿಗೆ ಒದಗಿಸಿ ಕೊಡಬೇಕೆಂದು ಹಾರಯಿಕೆ.

—ಕುಂ. ವಿ.

(೭೩೭ ನೆಯ ಪುಟ ನೋಡಿರಿ)

ಮುನ್ನೂರು ರೂಪಾಯಿ ಗಳಿಸಿರಿ!



ಐದುವರ್ಷ ಗ್ಯಾರಂಟಿಯುಳ್ಳ ಅಷ್ಟಕೋನಾಕೃತಿಯ ಸುಂದರವಾದ ಕ್ರೋಮಿಯಂ ಸ್ವಿಸ್ ಲಿವ್ಹರ ರಿಸ್ಟ್‌ವಾಚ್

ಮಿಕ್ಕ ಕಡೆಗೆ ೧೮ ರೂ. ಗಳಿಗೆ ಮಾರುವುದನ್ನು ನಾವು ಕೇವಲ ೪–೫–೦ ಗಳಿಗೆ ಕೊಡುತ್ತೇವೆ. ಇದೇ ಬಂಗಾರಗಿಲೀಟುಳ್ಳದ್ದಕ್ಕೆ ೫–೫–೦. ದುಂಡಗೆ ಅಥವಾ ಚೌಕಾಗಿ ಇರುವುದು ೩–೮–೦; ಇದೇ ಬಂಗಾರ ಗಿಲೀಟುಳ್ಳದ್ದಕ್ಕೆ ೪–೮–೦. ಸ್ತ್ರೀಯರಿಗಾಗಿ ಸಣ್ಣ ಅಷ್ಟಕೋಣಾಕೃತಿಯ ವಾಚು ೭–೮–೦. ದುಂಡಗಿನದು ೪–೮–೦. ಪ್ಯಾಕಿಂಗು ಪೋಸ್ಟೇಜುಗಳಿಗಾಗಿ ೦–೯–೦ ಬೇರೆ ಬೀಳುವುದು. ಒಮ್ಮೆಲೆ ಮೂರು ವಾಚುಗಳನ್ನು ತರಿಸಿಕೊಳ್ಳುವವರಿಗೆ ಪೋಸ್ಟೇಜು ಪುಕ್ಕಟೆ.

The American Commercial Stores,
Post Box No. 12213, Calcutta (J)

ಸಾದರ ಸ್ವೀಕಾರ

೧೦೬. **ದೇಶಮಿತ್ರ:**—(ವಾರಪತ್ರಿಕೆ) ಸಂಪಾದಕರು ಏ. ಪಿ. ಎಂ. ಉಸ್ಮಾನ್ ಬಿ. ಎ., ಎಲ್ಎಲ್. ಬಿ. ವಕೀಲರು ಹುಬ್ಬಳ್ಳಿ. ಕ್ರೌ. ಫೋ. ೮ ಪುಟ; ವಾರ್ಷಿಕ ವರ್ಗಣಿ ಊರವರಿಗೆ ೨-೧೦-೦; ಪರವೂರವರಿಗೆ ೩-೮-೦. ಪ್ರಕಾಶಕರು ಶ್ರೀ. ಎಂ. ಎಸ್. ಮಂಗಳವೇಢೆ; ವಾಗ್ವಿಲಾಸ ಪ್ರೆಸ್ ಹುಬ್ಬಳ್ಳಿ.

ಇದು ಮುಸ್ಲಿಂಲೀಗಿನ ವಿಚಾರಗಳನ್ನೆತ್ತಿ ಹಿಡಿದು, ಕರ್ನಾಟಕದಲ್ಲಿಯ ಮುಸಲ್ಮಾನರನ್ನು ಜಾಗೃತಗೊಳಿಸಲು ಹೊರಟ ವಾರಪತ್ರಿಕೆ. ಕಾಂಗ್ರೆಸ್ ವಿರೋಧದ ತಾಂಬೂಲವನ್ನೆತ್ತಿಕೊಂಡೆ ಹೊರಟಿದೆಯೆಂಬುದನ್ನು ಇದರಲ್ಲಿಯ ಲೇಖನಗಳ ಮಾದರಿಯಿಂದ ಅರಿತುಕೊಳ್ಳಬಹುದಾಗಿದೆ. ಪತ್ರಿಕೆ ಮುಸಲ್ಮಾನರಿಗಾಗಿ ಹೊರಟಿದ್ದರೂ ಇದು ಒಂದು ಹಿಂದೂ ವೀರಶೈವ ಮುದ್ರಣಾಲಯದಲ್ಲಿ ಅಚ್ಚಾಗುತ್ತಲಿದೆ; ಒಬ್ಬ ಹಿಂದೂ ವೀರವೈಷ್ಣವರು ಇದಕ್ಕೆ ಪ್ರಕಾಶಕರಾಗಿ ಇದ್ದಾರೆ. ಈ ಆಶ್ಚರ್ಯದ ವಾರ್ತೆಯನ್ನು ಹಿಂ. ಭ. ಸಾವರಕರರಿಗೂ ಮು. ಭ. ಜಿನ್ನಾ ಅವರಿಗೂ ತಿಳಿಸಬೇಕಾದುದು ತುಂಬ ಅಗತ್ಯ.

೧೦೭. **ಸಮಾಜಸೇವಕ:**—(ವಾರಪತ್ರಿಕೆ). ಸಂಪಾದಕರು ಶ್ರೀ. ಎಂ. ರಾಮರಾಯರು, ಬೆಂಗಳೂರು ಸಿಟಿ. ಫ್ರೂ. ಫೋ. ೧೨ ಪುಟ. ವಾರ್ಷಿಕ ವರ್ಗಣಿ ಊರವರಿಗೆ ೧-೮-೦, ಪರವೂರವರಿಗೆ ೨-೪-೦, ಬಿಡಿಸಂಚಿಕೆಗೆ ೦-೦-೬. ಪ್ರಕಾಶನ ಸ್ಥಳ; ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ನಗರ.

ಸಂಪಾದಕರು, ತಮ್ಮ ಬಹುಮುಖದ ಮತ್ತು ಬಹುಕಾಲದ ಸಾಹಿತ್ಯಸೇವೆಯಿಂದ ಕನ್ನಡಿಗರಿಗೆ ಸಾಕಷ್ಟು ಪರಿಚಿತರು. ಇವರು ಸತತ ಪ್ರಯತ್ನದ ಬಲದಿಂದ ಯಾವ ಕಾರ್ಯವನ್ನೂ ಯಶಸ್ವಿಯಾಗಿ ಮಾಡಿ ತೋರಿಸಬಲ್ಲರು. ಸಮಾಜಸೇವೆಗೆ ಹೆಚ್ಚಿನ ಸಹಕಾರಿಯಾಗಬೇಕೆಂದು ಈ ಪತ್ರಿಕೆಯನ್ನು ಅವರು ಪ್ರಾರಂಭಿಸಿದ್ದಾರೆ. ಚಿರಾಯುವಾಗಿ ಬಾಳಲೆಂದು ನಮ್ಮ ಹಾರಯಿಕೆ.

೧೦೮. **ಶ್ರೀ ವಿಷ್ಣುಸಹಸ್ರನಾಮಸ್ತೋತ್ರ:**— ಪ್ರಕಾಶಕರು ಶ್ರೀ. ಪಿ. ಎ. ಉಪಾಧ್ಯಾಯ, ೪೫, ಎ. ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ. ಕ್ರೌ. ೮. ೩೬ ಪುಟ. ಬೆಲೆ ೦-೨-೦.

ಇದರಲ್ಲಿ ವಿಷ್ಣುಸಹಸ್ರನಾಮಸ್ತೋತ್ರವೂ ವಿಷ್ಣುಸಹಸ್ರನಾಮಗಳೂ ಕನ್ನಡ ಲಿಪಿಯಲ್ಲಿ ಮುದ್ರಿತವಾಗಿವೆ. ಪಾರಾಯಣ ಮಾಡಬೇಕೆನ್ನುವವರು ತರಿಸಿಕೊಳ್ಳಬಹುದು.

೧೦೯. **ದೇವಪೂಜಾವಿಧಿ:**—ಮೇಲೆ ಹೇಳಿದ ಶ್ರೀ. ಉಪಾಧ್ಯಾಯರೆ ಪ್ರಕಾಶಕರು. ಕ್ರೌ. ೮. ೪೦ ಪುಟ. ಬೆಲೆ ೦-೩-೦.

ಮಾಧ್ವವೈಷ್ಣವರಿಗೆ ಅನುಕೂಲವಾಗುವಂತೆ ಆಗಮ ಪದ್ಧತಿಗನುಸಾರವಾಗಿ ದೇವಪೂಜೆಗೆ ಬೇಕಾಗುವ ಎಲ್ಲ ಮಂತ್ರಗಳೂ ತಂತ್ರಗಳೂ ಇದರಲ್ಲಿ ಅಡಕವಾಗಿ ಇವೆ. ಸಂದರ್ಭೋಪಯುಕ್ತ ಮುದ್ರೆಗಳ ಚಿತ್ರಗಳೂ ಇವೆ. ಪೂಜಾಪ್ರಿಯರು ಇದರ ಉಪಯೋಗ ಮಾಡಿಕೊಳ್ಳಬಹುದು.

೧೧೦. **ಲಿಂಗಪೂಜಾವಿಧಿ:**— ಸಂಗ್ರಾಹಕರು, ಶ್ರೀ. ವೀರೇಶ್ವರ. ಪ್ರಕಾಶಕರು ಮಾ. ಸಂ. ಶಿವಪ್ಪ ಸಹೋದರರು ಬೆಂಗಳೂರುನಗರ. ಡೆ. ೧೬ದ ೫೨ ಪುಟಗಳು. ಬೆಲೆ ೦-೧-೬.

ಇದರಲ್ಲಿ ಪ್ರಾರಂಭದ ಭಾಗದಲ್ಲಿ ಪ್ರಶ್ನೋತ್ತರರೂಪದಿಂದ ಲಿಂಗಪೂಜೆಯನ್ನು ಕುರಿತ ಚರ್ಚೆಯಿದ್ದು, ಮುಂದಿನಭಾಗದಲ್ಲಿ ವೀರಶೈವ ಸಂಪ್ರದಾಯದ ಶೈವಾಗಮೋಕ್ತ ಪೂಜಾವಿಧಿಯನ್ನು ಹೇಳಲಾಗಿದೆ. ಆವಶ್ಯಕತೆಯಿದ್ದವರು ಇದರ ಪ್ರಯೋಜನ ಪಡೆಯಬೇಕು.

೧೧೧. **ಕಂಠೀರವ:**— (ವಾರದಲ್ಲಿ ಎರಡು ಸಲ ಹೊರಡುವ ಪತ್ರಿಕೆ). ಸಂಪಾದಕರು ಶ್ರೀ. ಬಿ. ವಿಟ್ಠಲರಾವ್ ಮಂಗಳೂರು. ಡೆ. ಫೋ. ೧೪-೧೬ ಪುಟಗಳು. ಸಂಪಾದಕರೇ ಪ್ರಕಾಶಕರು.

ಸ್ವತಂತ್ರವಿಚಾರದ ಪತ್ರಿಕೆಯೆಂದು ಎಂದಿನಿಂದಲೂ ಇದರ ಪ್ರಸಿದ್ಧಿಯಿದೆ.

೧೧೨. **ಶಿವಾನುಭವ:**— (ಮಾಸಪತ್ರಿಕೆ). ಸಂಪಾದಕರು ರಾವಸಾಹೇಬ ಫ. ಗು. ಹಳಕಟ್ಟಿ ಬಿ. ಎ., ಎಲ್ಎಲ್. ಬಿ. ವಿಜಾಪೂರ. ಡೆ. ೧೬ದ ೬೦ ಪುಟ. ವಾರ್ಷಿಕ ವರ್ಗಣಿ ೩-೬-೦.

ವೀರಶೈವ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳೂ, ಲೇಖನಗಳೂ, ಐತಿಹಾಸಿಕ ಸಂಶೋಧನೆಗಳೂ ಇದರಲ್ಲಿ ಪ್ರಕಟವಾಗುವವು. ಈಗಾಗಲೆ ಕರ್ನಾಟಕದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ.

೧೧೩. **ವಿದ್ಯುಚ್ಛಕ್ತಿಯ ವೈಭವ:**— (ವೈಜ್ಞಾನಿಕ ಗ್ರಂಥ). ಲೇಖಕರು ಶ್ರೀಮಾನ್ ಬಿ. ಎ. ಕೃಷ್ಣಸ್ವಾಮಿರಾವ್ ಎಂ. ಎಸ್ಸಿ, ಮೈಸೂರು ವಿ. ವಿ. ನಿಲಯದ ಪ್ರಚಾರೋಪನ್ಯಾಸಮಾಲೆಯ ೯ನೆಯ ಪ್ರಕಟನೆ. ಫ್ರೂ ೮ ದ ೫೪ ಪುಟಗಳು. ಬೆಲೆ ೦-೨-೦.

೧೧೪. **ಶ್ರೀವಿಟ್ಠಲಶತಕ ಮತ್ತು ಕೀರ್ತನೆಗಳು:**— (ಹೆನ್ನೆರಂಗದಾಸ ವಿರಚಿತ). ಸಂಪಾದಕರು ಶ್ರೀಮಾನ್ ಕನಕಗಿರಿ ರಾಜಗೋಪಾಲಾಚಾರ್ಯರು, ಸುರಪುರ (ನಿಜಾಮಸ್ಟೇಟ್). ಕ್ರೌ. ೮. ೧೦೪ ಪುಟ. ಬೆಲೆ ೦-೮-೦. ಸಂಪಾದಕರೇ ಪ್ರಕಾಶಕರು.

೧೧೫. **ಕನ್ನಡ ಸಾಹಿತ್ಯವಾಹಿನಿ** (ಸಾಹಿತ್ಯ ಚರಿತ್ರೆ): ಲೇಖಕರು ಶ್ರೀಮಾನ್ ಎಸ್. ಕೆ. ಕುಲಕರ್ಣಿ, ಎಂ. ಎ., ಸಂಪಾದಕರು ಶ್ರೀಮಾನ್ ಬುರ್ಲಿ ಬಿಂದುಮಾಧವರು ಧಾರವಾಡದ ಮಿಂಚಿನ ಬಳ್ಳಿಯ ೨ನೆಯ ವರ್ಷದ ೪ನೆಯ ಗ್ರಂಥ; ಕ್ರೌ. ೮. ೧೬೦ ಪುಟಗಳು; ಬೆಲೆ ೧-೦-೦.

೧೧೬ **ಭುವನೇಶ್ವರೀ ವರ್ಷಭವಿಷ್ಯ** (ಶಾ. ಶ. ೧೮೬೨). ಲೇಖಕರು ಜ್ಯೋತಿರ್ವಿತ್ ಶೇಷಶಾಸ್ತ್ರಿ ಹೆಬ್ಬಾಳ, ಅವರು. ಪ್ರಕಾಶನ ಸ್ಥಳ: ಶ್ರೀ ಭುವನೇಶ್ವರೀ ಜ್ಯೋತಿಷ ಕಾರ್ಯಾಲಯ, ಸುರಪುರ (ನಿಜಾಮ ಸ್ಟೇಟ್). ಡೆ. ೧೬ ದ ೧೫೦ ಪುಟಗಳು. ಬೆಲೆ ೦-೩-೦.

ಈಗ ಏಳು ವರ್ಷಗಳಿಂದಲೂ ಪ್ರಕಟವಾಗುತ್ತಲಿರುವ ಈ ವರ್ಷಭವಿಷ್ಯವು ಹಲವು ಜನ ಕನ್ನಡಿಗರ ದೃಷ್ಟಿಗೆ ಬಿದ್ದಿರಬಹುದಾಗಿದೆ. 'ಸುರಪುರ ಪಂಚಾಂಗ'ದ ಪ್ರಸಿದ್ಧಿ ಎಲ್ಲೆಲ್ಲಿಯೂ ಇದೆ. ಆ ಪಂಚಾಂಗವನ್ನು ಸಿದ್ಧಗೊಳಿಸುವ ಜ್ಯೋತಿಷಿಗಳೇ ಈ ಪುಸ್ತಕವನ್ನು ಬರೆದಿದ್ದಾರೆಂದರೆ ಸಾಕು. ಇದರಲ್ಲಿ ಹೊಸ ವರ್ಷದ ೧೨ ತಿಂಗಳ ಪಂಚಾಂಗವಿರುವುದಲ್ಲದೆ, ೧೨ ರಾಶಿಯವರ ಮಾಸಫಲವನ್ನು ಬೇರೆ ಬೇರೆಯಾಗಿ ವಿಶದವಾಗಿ ಕೊಡಲಾಗಿದೆ. ಹಿಂದುಸ್ಥಾನ ಮತ್ತು ಪರರಾಷ್ಟ್ರಗಳ ಆಗುಹೋಗುಗಳನ್ನು ಕುರಿತೂ— ಬೇರೆ ಬೇರೆ ಗ್ರಹಗಳ ಪರಿಣಾಮವಾಗಿ— ಸಾಕಷ್ಟು ಸಂಗತಿ ಸಂಗ್ರಹಿತವಾಗಿದೆ. ತೇಜಿ-ಮಂದಿಗಳ ವಿಚಾರವೂ ಇದೆ. ಮೋಹನ ಮುದ್ರಣಾಲಯದ ಮುದ್ದಾದ ಮುದ್ರಣ.

೧೧೭ **ಕರ್ಮವೀರ:—** (ವಾರಪತ್ರಿಕೆ) ಸಂಪಾದಕರು ಶ್ರೀಮಾನ್ ಹ. ರಾ. ಪುರೋಹಿತ ಎಂ.ಎ. ಅವರು. ಪ್ರಕಾಶಕರು ಶ್ರೀ. ಹ. ರಾ ಮೋಹರೆ ಸಂಯುಕ್ತ ಕರ್ನಾಟಕ ಕಾರ್ಯಾಲಯ ಹುಬ್ಬಳ್ಳಿ ಅವರು. ಡೆ. ಫೋಲಿಯೊ ೨೦ ಪುಟಗಳು. ಬಿಡಿಸಂಚಿಕೆಗೆ ೦-೧-೦.

"ಸಂಯುಕ್ತ ಕರ್ನಾಟಕ ವಾರಪತ್ರಿಕೆಯು ಈಗ 'ಕರ್ಮವೀರ' ಎಂಬ ಹಳೆಯ ಹೆಸರಿನಿಂದ ಹೊಸ ವೇಷ-ಭೂಷಣದೊಂದಿಗೆ ಹೊರಟಿದೆ. ಸುಸ್ವಾಗತವು.

೧೧೮ **ಕನ್ನಡಕ:—** (ಕಿರುಗತೆಗಳ ಸಂಗ್ರಹ) ಲೇಖಕರು ಶ್ರೀಮಾನ್ 'ಅರುಣ' ಅವರು. ಧಾರವಾಡದಲ್ಲಿ ಇದೀಗ ಹೊರಟ 'ರಂಗವಂಗ ರಂಜನೋದ್ಯಾನ'ದ ೧ನೆಯ ಗೊಂಚಲಿದು. ಪ್ರಕಾಶಕರು ಶ್ರೀಮಾನ್ ಎಚ್. ಎಸ್. ಪಾಟೀಲ ಎಂ. ಎ.; ಫ್ರೂ. ೮. ಪುಟಗಳು. ಬೆಲೆ ೦-೪-೦.

೧೧೯ **ಹುಬ್ಬಳ್ಳಿ ಗಜೆಟ್:—** (ಜನ್ಮದಿನ ಸಂಚಿಕೆ) ಡಾ. ಎನ್. ಎಸ್. ಹರಡೀಕರರು ಸಂಪಾದಕರು. ಶ್ರೀ. ಬಿ.ಕೆ. ನಾಡಕರ್ಣಿ, ಮನೆ ನಂಬರು ೪೬೩೪, ದಾಜಿಬಾನ ಪೇಟೆ ಹುಬ್ಬಳ್ಳಿ, ಅವರು ಪ್ರಕಾಶಕರು. ಕ್ರೌ.ಫೋ. ೬೦ ಪುಟಗಳು. ಬೆಲೆ ೦-೧-೦.

ಮ್ಯುನಸಿಪಾಲಿಟಿಯ ವಿಷಯಕವಾದ ಅನೇಕ ಮಹತ್ವದ ಸಂಗತಿಗಳನ್ನು ಜನಸಾಮಾನ್ಯರಿಗೆ ತಿಳಿಸುವಂತಹ ಹಲವು ಲೇಖನಗಳು ಅಧಿಕೃತ ಲೇಖಕರಿಂದ ಬರೆಯಲ್ಪಟ್ಟು ಇದರಲ್ಲಿ ಪ್ರಕಟವಾಗಿವೆ. ಹುಬ್ಬಳ್ಳಿಯ ಮ್ಯುನಸಿಪಾಲಿಟಿಯ ಕಥೆಯೂ ಸಂಘ-ಸಂಸ್ಥೆಗಳ ಪರಿಚಯವೂ ಉಪಯುಕ್ತವಾದುವುಗಳಾಗಿವೆ. ಇಷ್ಟೊಂದು ಕಡಿಮೆಯ ಬೆಲೆಯಲ್ಲಿ ಇಂತಹ ಸಂಚಿಕೆಯನ್ನು ಒದಗಿಸಿಕೊಡುವುದೆಂದರೆ ಈ ಕಾಲದಲ್ಲಿ ಸಾಹಸದ ಮಾತೇ ಸರಿ. ವಾಚನೀಯವಾದ ಸಂಚಿಕೆ. ಎಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕು.

೧೨೦ ಸೌ. ಗೌರೀದೇವಿ ಇಂಚಲಮಠ ಅವರ ಭಾಷಣ. ಕಳೆದ ೫-೨-೪೦ ನೆಯ ದಿನ ನವಿಲುಗುಂದದಲ್ಲಿ ಸೇರಿದ ಧಾರವಾಡ ಜಿಲ್ಲೆಯ ಮಹಿಳಾ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಮಾಡಿದ ಭಾಷಣವಿದು. ಅಚ್ಚಿನ ತಪ್ಪುಗಳು ತುಂಬ ಇವೆ.

(೬೩೫ ನೆಯ ಪುಟದಿಂದ ಮುಂದುವರಿದುದು.)

೧೦೧. **ಶ್ರೀಮದ್ವಾಯುಸ್ತುತಿಃ**

(ತಿಳಿಗನ್ನಡ ಅನ್ವಯ-ಭಾವಾರ್ಥಗಳಿದ್ದದ್ದು)

ಶ್ರೀ. ಕೌಜಲಗಿ ಬಂಡಾಚಾರ್ಯರು ಬರೆದುದು.

ಮಾಧ್ವಸಂಪ್ರದಾಯದವರಲ್ಲಿ ವಾಯುಸ್ತುತಿಗಿರುವ ಸ್ಥಾನ-ಮಾನಗಳು ತುಂಬ ದೊಡ್ಡವು. ನಿತ್ಯದ ದೇವಪೂಜೆಯ ಕಾಲದಲ್ಲಿ ವಾಯುಸ್ತುತಿಯನ್ನು ಹೇಳುವರಲ್ಲದೆ, ಬೇರೆ ಬೇರೆ ವ್ಯಾವಹಾರಿಕ ಇಷ್ಟಾರ್ಥಸಿದ್ಧಿಗಾಗಿ ಈ ಸ್ತುತಿಯ ಬೇರೆ ಬೇರೆ ಶ್ಲೋಕಗಳ ಪಾರಾಯಣ-ಪುನಶ್ಚರಣಗಳನ್ನು ಮಾಡುವುದೂ ಅವರಲ್ಲಿ ಸಾಕಷ್ಟು ರೂಢವಾಗಿದೆ. ಶ್ರೀಮಧ್ವಾಚಾರ್ಯರ ಸಮಕಾಲೀನರೇ ಆದ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಈ ಸ್ತುತಿಯನ್ನು ರಚಿಸಿರುವರು. ಪಂಡಿತರ ರಚನೆಯಾದುದರಿಂದ, ಪ್ರಾಸಾನುಪ್ರಾಸ ಮೊದಲಾದ ಶಬ್ದಾಲಂಕಾರಗಳಿಂದಲೂ, ಉದ್ದುದ್ದ ಸಮಾಸಗಳಿಂದಲೂ, ದ್ವೈತಪ್ರಮೇಯದ ಪರಿಭಾಷೆಗಳಿಂದಲೂ ತುಂಬಿ ಇದು ತುಂಬ ದುರ್ಬೋಧವೂ ಕ್ಲಿಷ್ಟವೂ ಆಗಿದೆ. ಭಾವುಕರಾದ ಮಾಧ್ವರು ಇದನ್ನು ಪ್ರತಿಯೊಬ್ಬರೂ ಭಕ್ತಿಯಿಂದ ಹೇಳುವರಾದರೂ, ೧೦೦ರಲ್ಲಿ ಒಬ್ಬರಿಗಾದರೂ ಇದರ ಅರ್ಥ ಗೊತ್ತಿರುವುದೋ ಇಲ್ಲವೋ ಸಂಶಯ. ಅದಕ್ಕಾಗಿಯೆ ಶ್ರೀ. ಕೌಜಲಗಿಯವರು ಎಲ್ಲರಿಗೂ ಸರಿಯಾಗಿ ವಾಯುಸ್ತುತಿಯ ಅರ್ಥಜ್ಞಾನವನ್ನು ಮಾಡಿಕೊಡಬೇಕೆಂಬ ಉದ್ದೇಶದಿಂದ, ವಾಯುಸ್ತುತಿಯ ಮೂಲ-ಶ್ಲೋಕಗಳಿಗೆ ಅನ್ವಯಾನುಸಾರ ಪ್ರತಿಪದಾರ್ಥವನ್ನೂ ಭಾವಾರ್ಥವನ್ನೂ ಸುಲಭವಾದ ತಿಳಿಗನ್ನಡದಲ್ಲಿ ಬರೆದು, ಉತ್ತಮ ಕಾಗದಗಳಮೇಲೆ ಅಂದವಾಗಿ ಅಚ್ಚು ಹಾಕಿಸಿ ಪ್ರಕಟಿಸಿದ್ದಾರೆ. ವಾಯುಸ್ತುತಿಯ ಅರ್ಥವನ್ನು ಕೂಲಂಕಷವಾಗಿ ಅರಿತುಕೊಳ್ಳಬೇಕೆನ್ನುವ ಸಂಪ್ರದಾಯಾಭಿಮಾನಿಗಳಿಗೂ ಜಿಜ್ಞಾಸುಗಳಿಗೂ ತುಂಬ ಅನುಕೂಲವಾಗಿದೆ. ಶ್ರೀ. ಕೌಜಲಗಿಯವರು ಬರೆದ ಅನ್ವಯಾರ್ಥ ಭಾವಾರ್ಥಗಳನ್ನು ಶ್ರೀಮಾನ್ ಪಾಂಡುರಂಗಿ ಶ್ರೀನಿವಾಸಾಚಾರ್ಯರೂ ಶ್ರೀ. ಗಲಗಲಿ ಮಧ್ವಾಚಾರ್ಯರೂ ನಿರೀಕ್ಷಿಸಿ ಸಂಶೋಧಿಸಿದ್ದಾರೆ, ಅಲ್ಲದೆ ಸುಬ್ರಹ್ಮಣ್ಯಮಠದ ಶ್ರೀವಿದ್ಯಾಸಿಂಧುತೀರ್ಥ ಶ್ರೀಪಾದಂಗಳವರಿಂದಿದು ಮನ್ನಣೆ ಪಡೆದಿದೆ. ಬೇಕಾದವರು ಲೇಖಕರಿಗೆ ಬರೆದು ತರಿಸಿಕೊಳ್ಳಬೇಕು.

—ಸಂ.....ಕ.

ನಗೀಗೆ ನೇವಿದ್ಯ

ರಂಗಸೆಟ್ಟಿಯ ರಹಸ್ಯ

ರಂಗಸೆಟ್ಟಿ ತನ್ನ ಹೆಂಡತಿಯನ್ನು ಕರೆದು ಹೇಳಿದ :

“ನೋಡು; ಆ ಮಾಲಗಾರ ನೀಲವ್ವನ ಮನ್ಯಾಗ ಇಂದ ಬಟಾಟೀ ಕೊಂಡು ತರಬ್ಯಾಡ ತಿಳೀತೇನು ?”

“ಇದೇನು ಮಾತಿದು ? ಮನೀ ಮುಂದಽ ಇರೂವಾಕಿ. ಹನ್ನೆರಡು ತಿಂಗಳೂ ಕಾಯಿ-ಪಲ್ಲೆ ಆಕೀ ಹತ್ತಿಲೇನಽ ತೊಗೋತಿರತೀವಿ. ಅಂಥಾಕೀ ಹತ್ತರ ಬಟಾಟೀ ತರಬ್ಯಾಡಂದರ?

“ಹಾಂಗಲ್ಲಽ! ಇಂದ ನೀಲವ್ವ ನಮ್ಮ ಅಂಗಡ್ಯಾಗಿನ ತಕ್ಕಡೀ ಕಲ್ಲು ಇಸಗೊಂಡು ಹೋಗ್ಯಾಳಽ! ಅದಕ್ಕಽ ಹೇಳಿದೆ ಇಂದ ತರಬ್ಯಾಡಾ ಅಂತ!”

* * *

ಪೌಷ್ಟಿಕಾಹಾರದ ಪರಿಣಾಮ

“ಏನು ಆಚಾರ್ರಽ! ನಿಮ್ಮ ಖಾನಾವಳೀ ಒಳಗ ಹಿಗೂ ಆಹಾರದೊಳಗ ಪೌಷ್ಟಿಕ ಪದಾರ್ಥ ಏನಾದರೂ ಇರತಾವೇನು ?”

“ಇರದೇ ಏನು ರಾಯರಽ; ಮೊನ್ನೆ ಮೊನ್ನೆ ಶಾನೇ ಒಬ್ಬ ಪೇನ್‌ಶನ್‌ದಾರರು—ತೀರ ಅಶಕ್ತರು—ತಮ್ಮ ಹಾಗೆಯೆ ಇಲ್ಲಿ ಹವೆಯ ಬದಲಾವಣೆಗೇ ಅಂತ ಬಂದಿದ್ದರು. ನಮ್ಮಲ್ಲೇ ಊಟಮಾಡ್ತಾ ಇದ್ದರು. ಎಂಟೇ ಎಂಟು ದಿವಸ ಅನ್ನದತೊಳಗ ಅವರಿಗೆ ಇಷ್ಟ್ಯಂದು ಜೋರು ಬಂತು : ಊಟದ ಬಿಲ್ಲು ಸುದ್ದಾ ತೀರಿಸದೆ ಓಡಿಹೋಗಿಬಿಟ್ಟರು.

* * *

‘ಕೃಷ್ಣಕಾಂತನ ಪತ್ರ’

ಹಳ್ಳಿಯೂರಿನ ವಾಚನಾಲಯ. ಮುದುಕರೊಬ್ಬರು ಹಳೆಯ ವರ್ತಮಾನಪತ್ರವನ್ನು ಚಾಳಿಸುತ್ತ ಕುಳಿತಿದ್ದಾರೆ. ಪಟ್ಟಣದಿಂದ ಬಂದಿದ್ದ ಗುಂಡೂರಾಯರು ಒಳಗೆ ಬಂದು ಕುಳಿತಿದ್ದವರನ್ನು ಕೇಳಿದರು :

“ಏನ್ರೀ, ಇಲ್ಲೆ ‘ಕೃಷ್ಣಕಾಂತನ ಪತ್ರ (ಕಾದಂಬರಿ)’ ಅದಽ ಏನು ?”

“ಕೃಷ್ಣಕಾಂತನ ಪತ್ರ ? ಅದ್ಯಾಕ್ರೀ ಇಲ್ಲಿರಬೇಕು ? ಇದೇನು ಪೋಸ್ಟಾಫೀಸಂತ ತಿಳಕೊಂಡು ಬಂದೀರೇನು ? ಹಹಹ! ಸಾಲೀ ಮಾಸ್ತರ ಕಡೇ ಹೋಗರಿ; ಅವರ ಕಡೇ ಅದ ಪೋಸ್ಟು!”

* * *

ಸಾಲತೀರಿಸುವಿಕೆ

ಸಾವುಕಾರ:—ಅಲ್ರೀ, ನಿಮ್ಮ ಆ ಇಪ್ಪತ್ತೈದು ರೂಪಾಯಿ ಬಾಕೀ ಸಲುವಾಗಿ ರಜಿಸ್ಟರ್ಡ್ ಪತ್ರಾ ಇಪ್ಪತ್ತು ಬರದಾಯಿತು. ಒಂದು ಪೈ ಕೂಡಾ ಕೊಡವಲ್ರಿ ಇನ್ನೂ! ಏನು ಮಾಡಬೇಕು ನಾವು!

ಸಾಲಗಾರ:— ನೋಡ್ರಿ, ಕಳಕೊಂಡು ಹುಡುಕಾಡತೀರಲ್ಲಾ—ನಿಮ್ಮಂಥಾ ತಿಳಿದವರು ಸುದ್ದಾ! ಇಪ್ಪತ್ತು ರಜಿಸ್ಟರ್ಡ್ ಪತ್ರಾ ಬರೆದೀವಂತ ಹೇಳತೀರಿ; ಅದಕ್ಕ ಮಾಡಿದ ಟಪಾಲ ಖರ್ಚನ್ನ ನನ್ನ ಹೆಸರಿಗೆ ಜಮಾ ಹಿಡೀತಽ ಹೋಗಿದ್ದರ, ಅರ್ಧಾ ಹಣಾ ಮುಟ್ಟಿ ಹೋಗತಿದ್ದಿಲ್ಲಽ ನಂದು ಇಷ್ಟರೊಳಗಽ!”

* * *

ಎಲ್ಲಾ ಸಿದ್ಧ ಆಗತದ!

ಡಾಕ್ಟರ್:— ರೋಗಿ ಸತ್ತಾ ಅಂತ ಸರ್ಟಿಫಿಕೇಟು ಬೇಕು ಹೌದಲ್ಲೋ ನಿಮಗ ?

ಬಂದವ:—ಸತ್ತಾ ಅಂತ ಏನೂ ಬರೀಬೇಕಾಗಿಲ್ಲ ನೀವು. ‘ನನ್ನಲ್ಲೇ ಔಷಧ ತೊಗೋತಿದ್ದಾ’ ಅಂತ ಸರ್ಟಿಫಿಕೆಟ್ ಕೊಟ್ಟರೆ ಸಾಕು; ಎಲ್ಲಾ ಸಿದ್ಧ ಆಗತದ!

* * *

ವಾಶಿಂಗ್‌ಟನ್ನರಿಬ್ಬರು

“ನೋಡಿದಿರಾ ?.. ಆ ಹೊಸಮನೀ ಗೋವಿಂದಪ್ಪ ಇಲ್ಲಽ? ಅಂವಾ ನನಗಂತಾನ. ‘ನೀ ಶತಸುಳ್ಳ ಇದ್ದೀದೀ’ ಅಂತ. ನಾ ಸುಮ್ಮನಽ ಬಿಟ್ಟೇನಽ.. ಆಗಽ ಮಾರೀ ಮುಂದಽ ಹೇಳಿಬಿಟ್ಟೆ ‘ನೀ ಶತ ಸುಳ್ಳ ಇದ್ದೀದಿ’ ಅಂತ!”

“ಹೂಂ, ಹೀಂಗಾತೇನು?’ ಅಂತೂ ಹುಟ್ಟಿ ಬಂದ ಮ್ಯಾಲ ಇಬ್ಬರೂ ಒಮ್ಮೆಯಾದರೂ ಖರೇ ಮಾತಾಡಿದ್ಹಾಂಗ ಆಯ್ತನ್ರಿ!’

* * *

ಮೋಟಾರ ಅಪಘಾತ

“ಏನ್ರೀ, ನಿಮ್ಮ ಹೆಂಡತಿ ಏನೋ ಮೋಟಾರಿನ ಕೆಳಗ ಸಿಕ್ಕಿದ್ದರಂತಲ್ಲಾ; ಅಯ್ಯೊ, ಪಾಪ, ಏನಾದರೂ ವಿಶೇಷ ಏಟು ಗೀಟು....’

“ವಿಶೇಷವೇನೂ ಇಲ್ಲ; ಗಾಡಿಯ ಅಚ್ಚು ಮುರೀತು; ಮುಂದಿನ ಎರಡೂ ಗಾಲಿ ಪಂಕ್ಚರಾದುವು.”

* * *

ಏನು ಮಾಡಬೇಕಂತೀರಿ ?

ಆಕೆ:—ಡಾಕ್ಟರರೆ, ನಮ್ಮ ಮನೀ ಒಳಗ ಅವರು ದಿನಾ ರಾತ್ರಿ ನಿದ್ದಿಹತ್ತಿದಾಗ ಏನೇನೋ ಮಾತಾಡಲಿಕ್ಕ ಹತ್ತ್ತಾರ. ಅದಕ್ಕೇನು ಮಾಡಬೇಕಂತೀರಿ ?

ಡಾಕ್ಟರ್:— ಇನ್ನೇನೂ ಬ್ಯಾಡಾ; ಅವರು ಎಚ್ಚರಿರೂವಾಗ ಮಾತಾಡಲಿಕ್ಕೆ ಅವಕಾಶ ಕೊಡತಿರ್ರಿ ಇಷ್ಟೇ! ನ. ನಾ.

* * *

ಭಾರತದಲ್ಲಿ ನಾಜೀಪಕ್ಷ

ವಿದ್ಯಾರ್ಥಿ:—ಅಭಿಮನ್ಯು ‘ನಾಜಿ(ಝಿ)’ ಪಂಗಡದೊಳಗಿನ ವೀರನೇನರೀ ಸರ್ ?

ಗುರು:— ಅದು ಹೇಗೋ ಅಭಿಮನ್ಯು ಹಿಂದೂಕ್ಷತ್ರಿಯ. ನಾಝಿ (ಜಿ)ಪಂಗಡ ಜರ್ಮನೀದು.

ವಿದ್ಯಾರ್ಥಿ:— ಮತ್ತೆ ರನ್ನಕವಿ ತನ್ನ ಗದಾಯುದ್ಧದಾಗ ಅಭಿಮನ್ಯುನ್ನ ವರ್ಣಿಸುವಾಗ “ಅಭಿಮನ್ಯು ಕುಮಾರನ ‘ನಾಜಿ’ ವೀರನಂ” ಎಂದು ಬರೆದಾನಲ್ಲರೀ ಸರ್!

—ಶೆಟ್ಟಿ, ಎಚ್. ಎಸ್.

ಹೊಸ ಹಿಂದುಸ್ತಾನ*

★

ಇಂತಹ ವಿಷಯ ಸಣ್ಣದಲ್ಲ ಎಂದು ನಿಮ್ಮಂತೆ ನನಗೂ ಮುಂಚಿತವಾಗಿಯೆ ಎನಿಸಿದೆ. ದೇಶ-ಜಾತಿ- ಪ್ರಾಂತ ಮೊದಲಾದ ಕಾರಣಗಳಿಗಾಗಿ ಕೆಲವು ವಿಚಾರಗಳ ಅಧಿಕಾರ ಬರುವ ರೂಢಿ ಇದೆ. ಅದಕ್ಕಾಗಿಯೆ ನನ್ನ ವಿಷಯಕ್ಕೆ 'ಹೊಸ ಹಿಂದುಸ್ತಾನ' ಎಂದು ನಾನು ಹೆಸರಿಟ್ಟಿದ್ದೇನೆ. ಯಾಕೆಂದರೆ ಮೇಲೆ ಹೇಳಿದ ರೂಢಿಯು ಧಾರಾಳವಾಗಿ ಕಂಡುಬರುವುದು **ಹಳೆ** ಹಿಂದುಸ್ತಾನದಲ್ಲಿ; **ಹೊಸತನ್ನು** ಕುರಿತು ಮಾತನಾಡುವ ನನಗೆ ಅದು ಬಾಧಕವಲ್ಲ.

ಈ ಹೊಸ ಹಿಂದುಸ್ತಾನವು ಕೇವಲ ಕಾಲ್ಪನಿಕ ಚಿತ್ರವಲ್ಲ. ನಮ್ಮ ಕಣ್ಣೆದುರು ನಿಂತ ಮೂರ್ತಿಯಾಗಿದೆ. 'ಮೂರ್ತಿ' ಯಾದುದಕ್ಕೋ ಏನೋ, ಎಲ್ಲ ಮೂರ್ತಿಗಳಂತೆ ಗರ್ಭಗುಡಿಯ ಕತ್ತಲಲ್ಲಿ ಸ್ಥಾನಾಪನ್ನವಾಗಿ ಯಾರಿಗೂ ಕಾಣದಂತಾಗಿದೆ. ಯಾರು ಅದರ ಆರಾಧಕರು ತಾವೆಂದು ಹೇಳಿಕೊಳ್ಳುವರೊ ಅಂತಹ 'ಪೂಜಾರಿ'ಗಳಿಗೆ ಕೂಡ ಕಾಣದಂತಾಗಿದೆ !

ಹೊಸ ಹಿಂದುಸ್ತಾನ ಎಂಬುದು ಇಲ್ಲವೇ ಇಲ್ಲ ಎಂದು ಇವರ ಮತ್ತು ಅನೇಕರ ವಾದ. ಇಷ್ಟೇಕೆ- ಹಿಂದುಸ್ತಾನ ಎಂಬುದೇ ಇಲ್ಲ ಎಂದು ಇತ್ತಿತ್ತಲಾಗಿ ನಮ್ಮವರೇ ಹೇಳುತ್ತಿದ್ದಾರೆ. ಭಾಷೆ-ಧರ್ಮ-ಜಾತಿ- ಜನಾಂಗಗಳ ದೃಷ್ಟಿಯಿಂದ ಹಿಂದುಸ್ತಾನ ಎಂಬುದು ಪರಸ್ಪರ ವಿರೋಧಕವಾದ, ಅನೇಕವಿಧವಾದ ಘಟಕಗಳ ಪ್ರಾದೇಶಿಕ ಸಮುದಾಯ ಎಂದಿದ್ದಾರೆ. ಇಂದು ಕೆಲವರು ಅದಕ್ಕೂ ಮುಂದೆ ಹೋಗಿ, ಹಿಂದುಸ್ತಾನವೆಂಬುದು ಎಂದಿಗೂ ಒಂದು ದೇಶವಾಗಲಿಕ್ಕಿಲ್ಲ; ಯಾಕೆಂದರೆ ಇದರ ಮುಖ್ಯ ಘಟಕಗಳೆ ನಿತ್ಯಜೀವನದ ದೃಷ್ಟಿಯಿಂದಲೆ ಪರಸ್ಪರ ವಿರೋಧಕವಾಗಿವೆ- ಎನ್ನುತ್ತಾರೆ. ಈ ಮಾತಿಗೆ ಅಹುದೆನ್ನಬಹುದೆ? ಹಾಗೆ ನೋಡಿದರೆ ನಿಸರ್ಗದಿಂದಲೆ ಭಿನ್ನಶಕ್ತಿ-ಸ್ವರೂಪಗಳು ಹೆಂಗುಸಿಗೂ ಗಂಡುಸಿಗೂ ಇದ್ದುದರಿಂದ, ಇತಿಹಾಸದ ದೃಷ್ಟಿಯಿಂದ ನಮ್ಮಲ್ಲಿ ಹೆಂಗುಸರನ್ನು ಗಂಡುಸರು ದಾಸ್ಯಬುದ್ಧಿಯಲ್ಲಿ ಇಟ್ಟಿರುವರೆಂಬುದರಿಂದ ನಮ್ಮ ಅಖಿಳಭಾರತ ಮಹಿಳಾಮಂಡಳವು 'ಹೆಣ್ಣು ಹಿಂದುಸ್ತಾನ' 'ಗಂಡು ಹಿಂದುಸ್ತಾನ' ಎಂಬೆರಡು ಎಂದಿಗೂ ಒಂದಕ್ಕೊಂದು ಹೊಂದದ ಬೇರೆ ಬೇರೆ ದೇಶಗಳಿವೆ ಎಂದು ಹೆಚ್ಚು ಸಯುಕ್ತಿಕವಾಗಿ ಹೇಳಬಹುದಲ್ಲವೆ ?

ಒಂದಕ್ಕೊಂದು ಹೊಂದದ ಘಟಕಗಳು ನಮ್ಮಲ್ಲಿವೆ ಎಂಬುದಕ್ಕೆ ಧರ್ಮದ ಉದಾಹರಣೆಯನ್ನು ಕೊಡಲಾಗುತ್ತಿದೆ. ಹಿಂದು ಮತ್ತು ಇಸ್ಲಾಂ ಧರ್ಮಗಳು ಇಷ್ಟೊಂದು ಪರಸ್ಪರ ವಿರೋಧಕ ಇವೆ ಎಂದು ಇಟ್ಟುಕೊಳ್ಳೋಣ. ಆದರೆ ಇಂದು ನಮ್ಮ ವ್ಯವಹಾರಕ್ಕೆ ಧರ್ಮವೆ ತಳಹದಿಯಾಗಿದೆಯೆ ? ನಿತ್ಯಜೀವನದಲ್ಲಿ ಸಾಮಾನ್ಯ ಮನುಷ್ಯನು ಪರಮಾತ್ಮನಿಗಿಂತ ಪೋಲಿಸನಿಗೆ ಹೆಚ್ಚಾಗಿ ಹೆದರುವನು; ನಿತ್ಯಜೀವನದಲ್ಲಿ ಜಾತಿ ಮೊದಲಾದ ಒಳಪಂಗಡಗಳು ಸಾರ್ವಜನಿಕ ವ್ಯವಹಾರದಲ್ಲಿ ಮಾಯವಾಗುತ್ತಿವೆ. ಅಲ್ಲಲ್ಲಿ ನೋಕರಿ-ಚುನಾವಣೆ- ಮೊದಲಾದುವುಗಳಲ್ಲಿ, ಕೇವಲ ವ್ಯವಹಾರಕ್ಕೆ ವಿಘಾತುಕವಾದ ಸ್ವಾರ್ಥದ ದ್ಯೋತಕವಾಗಿಯೆ ಕಂಡುಬರುತ್ತಿವೆ. ದೇವ-ಜಾತಿ-ಧರ್ಮ ಇವು- ಎಂದರೆ ಸಂಪ್ರದಾಯದಿಂದ ನಡೆದುಬಂದಂತಹವು-ನಮ್ಮ ಇಂದಿನ ಜೀವನಕ್ಕೆ ನಿಕಟವಾಗಿ ಸಂಬಂಧಿಸಿಲ್ಲವೆಂದಮೇಲೆ 'ಪರಸ್ಪರ ವಿರೋಧಕಧರ್ಮ' ಗಳ ಹೇತುವು ಕುಂಠಿತವಾಗುತ್ತದೆ.

ತ್ರಿಕಾಲಗಳಲ್ಲೂ ಇನ್ನೊಬ್ಬರಿಗೆ ವಿರೋಧವಾಗಿಯೆ ಆಚರಿಸಲು ಅವಕಾಶವನ್ನು ಕೊಡುವುದಕ್ಕೆ 'ಧರ್ಮ' ಎನಬಹುದೆ-ಎಂಬುದೂ ಒಂದು ಪ್ರಶ್ನೆ. ತ್ರಿಕಾಲದಲ್ಲೂ ಧರ್ಮದ, ಸಂಸ್ಕೃತಿಯ ಪರಸ್ಪರ ವಿರೋಧಕತ್ವವು ಹಾಗೆಯೆ ಉಳಿಯುವುದೆನ್ನುವವರಿಗೆ ಮಾನವಜನಾಂಗದ ಇತಿಹಾಸ-ಬೆಳೆವಣಿಗೆಗಳ ಜ್ಞಾನವೇ ಇಲ್ಲವೆನ್ನಬೇಕಾಗುವುದು. ಕೇವಲ ತರ್ಕದ ದೃಷ್ಟಿಯಿಂದ ನೋಡಿದರೂ ಅನವಸ್ಥೆಗೆ ಈ ಮಾತು ಕಾರಣವಾಗುವುದು. ಹಿಂದು-ಮುಸಲ್ಮಾನ ಎಂಬ ಎರಡೇ ದೇಶಗಳೇಕೆ? ವೈಷ್ಣವ, ಸ್ಮಾರ್ತ, ಬ್ರಾಹ್ಮಣೇತರ, ಶಿಯಾ, ಸುನ್ನಿ, ಅಘಾದ ಪಂಗಡ, ಜಿನಾ ಪಂಗಡ— ಹೀಗೆ ಅನೇಕ ಪಂಗಡಗಳಲ್ಲೂ ಪರಸ್ಪರ ವಿರೋಧವನ್ನು ತೋರಿಸಿ, ಅಷ್ಟು ಹಿಂದುಸ್ತಾನಗಳು ಅವಶ್ಯಕ ಎನಬಹುದಲ್ಲವೆ ?

ಇಂದು ಕೂಡ ಕೆನಡಾ ದೇಶದಲ್ಲಿ ಎರಡು ರಾಷ್ಟ್ರಗಳಾಗಬಹುದು:—ಕೆಥೊಲಿಕ್ ಮತ್ತು ಪ್ರೊಟೆಸ್ಟಂಟ್ ಪಂಗಡದವರು ಇತಿಹಾಸದಲ್ಲಿ ನೂರಾರು ವರ್ಷ ರಕ್ತದ ಕಾಲುವೆಗಳನ್ನು ಹರಿಸಿದ್ದಾರೆ. ಅವು ಪರಸ್ಪರ ವಿರೋಧಕವಲ್ಲವೆ ? ಆದರೂ ಫ್ರೆಂಚ್ ಮಾತೃಭಾಷೆಯ ಕೆಥೊಲಿಕ್ ಜನರೂ, ಇಂಗ್ಲಿಶ್ ಮಾತೃಭಾಷೆಯ ಪ್ರೊಟೆಸ್ಟಂಟ ಜನರೂ ಇಂದಿಗೆ ೭೦-೮೦ ವರ್ಷಗಳಿಂದ ಒಂದೇ ದೇಶ ಎನಿಸಿದ್ದಾರೆ. ಸದ್ಯದ ಅಮೇರಿಕೆಯಲ್ಲಿ ಪರಸ್ಪರ ವಿರೋಧಕವೆನಿಸಬಹುದಾದ ಎಷ್ಟು ಧರ್ಮಗಳ ಅನುಯಾಯಿಗಳು ಒಂದೆಡೆ ಇದ್ದು ಒಂದೇ ರಾಷ್ಟ್ರ ಎನಿಸಿಲ್ಲ ?

ಇಂದಿನ ಸಂಸ್ಕೃತಿಯೆ ಅಂತಹದಿದೆ. ನಮ್ಮಲ್ಲಿ ಕೂಡ ನಾವು ನಗರಸಂಸ್ಥೆಯಿಂದ ಒಂದಾಗಿ ಬಾಳುವುದಿಲ್ಲವೆ? ಹಿಂದು ಧಾರವಾಡ, ಮುಸಲ್ಮಾನ್ ಧಾರವಾಡ ಎಂದು ವಿಂಗಡಿಸುವ ಅಗತ್ಯ ನಮಗೆ ಕಂಡುಬಂದಿದೆಯೆ ? ಇದೇ ಮನೋವೃತ್ತಿಯು ದೇಶದ ತುಂಬ ಯಾಕೆ ಹಬ್ಬಿಕೊಂಡಿರಬಾರದು ?

ಧರ್ಮದ ಅಧಿಕಾರದಿಂದ ಮಾತನಾಡುವವರನ್ನು ಕಂಡು ನಾವು ವಿಶೇಷ ಎಚ್ಚರಿಕೆಯಿಂದ ವರ್ತಿಸಬೇಕಾಗಿದೆ. ದೇವ-ಧರ್ಮ ಜಾತಿ ಮೊದಲಾದುವುಗಳು ಹಿಟ್ಲರವಾದದ ಮಾದರಿಗಳು. ಇವುಗಳ ಹೆಸರಿನಿಂದ ವ್ಯವಹಾರ ನಡೆದಲ್ಲಿ, ವೈಯಕ್ತಿಕ ಸ್ವಾತಂತ್ರ್ಯ ಎಂಬುದು ಶಕ್ಯವೇ ಇಲ್ಲ.

* ತಾ॥ ೧೮-೨-೧೯೪೦ (ರವಿವಾರ) ಸಾಯಂಕಾಲ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಪ್ರೊ. ಆರ್. ವ್ಹಿ. ಜಾಗಿರದಾರ ಇವರು 'ಹೊಸ ಹಿಂದುಸ್ತಾನ' ಎಂಬ ವಿಷಯವಾಗಿ ಕೊಟ್ಟ ಉಪನ್ಯಾಸದ ಸಾರಾಂಶ.

೬-೩೦೮೨



ಯುಧಿಷ್ಠಿರನ ಯಮಲೋಕಯಾತ್ರೆ

ಈ ಶಬ್ದಗಳನ್ನು ಕಂಡು ವಾಚಕರು ಚಕಿತರಾಗಬಹುದು ; ಸದ್ಯದ ನಮ್ಮ ರಾಜಕೀಯಸ್ಥಿತಿಯನ್ನು ಬಣ್ಣಿಸಲು ಈ ಶಬ್ದಗಳನ್ನು ಉಪಯೋಗಿಸಲಾಗಿದೆ ಎಂದು ಕೇಳಿದ ಮೇಲಂತೂ ಅದೆಷ್ಟೊ ಚಕಿತರಾಗಬಹುದು. ಆದರೂ ಸದ್ಯದ ನಮ್ಮ ರಾಜಕಾರಣ ವಾತಾವರಣದ ಜೀವಾಳವನ್ನು ಚಿತ್ರಿಸಲು ಮೇಲಿನ ಶಬ್ದಗಳೇ ತೀರ ಸಮಯೋಚಿತವಾಗಿವೆ. ಹೋದ ತಿಂಗಳಲ್ಲಿ ಮಹಾತ್ಮರು ವೈಸರಾಯರನ್ನು ಕಂಡುಬಂದರಷ್ಟೆ. ಒಂದೇ ದಿವಸದ ಅಲ್ಪಾವಧಿಯಲ್ಲಿ ಈ ಸಂದರ್ಶನ ಮುಗಿದುದೂ, ಕಾಂಗ್ರೆಸ್-ಬ್ರಿಟಿಶ ಧೋರಣೆಗಳು ಒಂದಕ್ಕೊಂದು ಹೊಂದಲಾರವೆಂದು ಮಹಾತ್ಮರೂ ವೈಸರಾಯರೂ ಪ್ರಕಟನೆ ಹೊರಡಿಸಿದುದೂ ಸರ್ವಸಾಮಾನ್ಯವಾಗಿ ನಿರಾಶೆಯನ್ನುಂಟುಮಾಡಿದೆ. ಆದರೆ ಸೂಕ್ಷ್ಮವಾಗಿ ನೋಡಿದಲ್ಲಿ ಈ ಕ್ಷಣಿಕಸಂದರ್ಶನವು ಯುಧಿಷ್ಠಿರನು ನಾಲ್ಕುಗಳಿಗೆ ನರಕಕ್ಕೆ ಹೋದಂತೆಯೆ; ಅರಿಯದೆ ಆಡಿದ ಒಂದು ಅಸತ್ಯಕ್ಕಾಗಿ ಶಾಸ್ತ್ರ ಎಂದು (formally) ಯುಧಿಷ್ಠಿರನು ನರಕಕ್ಕೆ ಕೆಲ ನಿಮಿಷ ನಡೆಯಬೇಕಾಯಿತಂತೆ. ಯುಧಿಷ್ಠಿರನ ಹಕ್ಕಿನ ಸ್ಥಾನ ಸ್ವರ್ಗ. ಅದರಂತೆಯೆ ಶಾಸ್ತ್ರ ಎಂದಲ್ಲಿ (formally) ಮಾತ್ರ ನಾವು ನಿರಾಶಿತರಾಗಬೇಕು; ನಿಜವಾಗಿ ನೋಡಿದರೆ ಮೊನ್ನಿನ ಆ ಮುಹೂರ್ತದ ಸಂದರ್ಶನದಲ್ಲೂ ಸಂಧಾನದ ಸ್ವರ್ಗದ ಹಕ್ಕು ಆಡಕವಾಗಿದೆ ಎಂಬುದು ಸ್ಪಷ್ಟವಾಗುವುದು.

ಸಂಧಾನದ ಸತ್ಯಾಗ್ರಹ

ಮೊದಲಮಾತೆಂದರೆ ಆ ಸಂದರ್ಶನದ ತರುವಾಯ ಮಹಾತ್ಮರೂ ವೈಸರಾಯರೂ ಹೊರಡಿಸಿದ ಪ್ರಕಟನೆಗಳ ವಿಚಾರ. ಈ ಎರಡೂ ಪ್ರಕಟನೆಗಳಲ್ಲೂ ಅವೇ ಎರಡು ಮಾತುಗಳು ಸ್ಪಷ್ಟವಾಗಿ ಉಲ್ಲೇಖಿತವಾಗಿವೆ. (೧) ಬ್ರಿಟಿಷರು ಒಪ್ಪಿಕೊಂಡ ಧೋರಣೆಗೂ ಕಾಂಗ್ರೆಸು ಇಟ್ಟುಕೊಂಡ ಧ್ಯೇಯಕ್ಕೂ ತೀರ ವಿರೋಧವಿದೆ; (೨) ಸಂಧಾನವು ಶಕ್ಯ ಎಂಬ ಆಶೆ, ಅದನ್ನು ಸಾಧಿಸುವ ಪ್ರಯತ್ನ ಇಬ್ಬರೂ ಬಿಡುವಂತಿಲ್ಲ. ನೋಡಿದ ಮಾತ್ರಕ್ಕೆ ಈ ಮಾತುಗಳಿಂದ ಆಶಾಜನಕ ಪರಿಸ್ಥಿತಿ ಕಂಡುಬರುವುದಿಲ್ಲವೇನೊ ನಿಜ. ಆದರೆ ಇಬ್ಬರೂ ಹೇಳಿದ ಅವೇ ಮಾತುಗಳನ್ನು ಒಂದಕ್ಕೊಂದು ಹೊಂದಿಸಿಯೆ ನೋಡಬೇಕಾಗುವುದು, ಹಾಗೆ ನೋಡಿದರೆ ಸಂದರ್ಭವೆ ಬೇರೆ ಎನಿಸುವುದು. ಇದುವರೆಗೆ ಪರಸ್ಪರರ ಇಚ್ಛೆಯಾಗಲಿ, ಧ್ಯೇಯ-ಧೋರಣೆಗಳಾಗಲಿ ಸಮರ್ಪಕವಾಗಿ ತಿಳಿದಿರಲಿಲ್ಲವೆನಬೇಕಾಗುವುದು. ಆದಕಾಗಿಯೆ ಕಾಂಗ್ರೆಸು ಪ್ರಾಂತಿಕ ಅಧಿಕಾರವನ್ನು ಬಿಟ್ಟುಕೊಟ್ಟುದು ತಪ್ಪು ಎಂದು ವೈಸರಾಯರು, ಬ್ರಿಟಿಶರು ಯುದ್ಧತತ್ತ್ವವನ್ನು ಸಾರದಿರುವುದು ತಪ್ಪು ಎಂದು ಕಾಂಗ್ರೆಸಿನವರು ತಿಳಿದಿದ್ದರು. ಅದಕಾಗಿ ಪರಸ್ಪರರನ್ನು ದೋಷಿ ಎಂದು ತಿಳಿದೇ ದೂರದಿಂದ ಒಬ್ಬರಿಗೊಬ್ಬರು ನೀತಿಪಾಠವನ್ನು ಕೊಡುತ್ತಿದ್ದರು. ಇಂದು ಪರಸ್ಪರರ ಧೋರಣೆ-ವಿಚಾರಗಳು ಪರಸ್ಪರರಿಗೆ ಸ್ಪಷ್ಟವಾಗಿವೆ; ಒಬ್ಬರ ಪ್ರಾಮಾಣಿಕಬುದ್ಧಿ-ಶುದ್ಧಾಂತಃಕರಣಗಳನ್ನು ಇನ್ನೊಬ್ಬರು ಇಂದು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆ; ಒಬ್ಬರ ಧ್ಯೇಯವು ಇಂದು ಇನ್ನೊಬ್ಬರಿಗೆ ಹೇಯವೆನಿಸುವುದಿಲ್ಲ. ಇಷ್ಟೊಂದು ಆತ್ಮವಿಶ್ವಾಸ-ಅನ್ಯಪರಿಚಯ-ಪರಸ್ಪರ ಆದರ ಇವು ಉಂಟಾಗಿವೆ ಎಂದೇ ಇಬ್ಬರೂ ಸಂಧಾನಕ್ಕಾಗಿ ಸತ್ಯಾಗ್ರಹದ ಹಟವನ್ನು ತೊಟ್ಟಿರಬಾರದೇಕೆ ?

ಆಶೆಯ ಕಿರಣ

ಇವರಿಬ್ಬರ ಈ ಸಂಧಾನಸತ್ಯಾಗ್ರಹದಲ್ಲಿಯೆ ಪರಿಸ್ಥಿತಿಯ ಮೇಲೆ ಬೀಳಬೇಕಾದ ಬೆಳಕಿನ ಆಶಾಕಿರಣವಿದೆ. ಬ್ರಿಟಿಶ ಪಾರ್ಲಮೆಂಟಿಗೆ ಹೊಣೆಗಾರಿಕೆಯ ಸಲಹೆ ಕೊಡುವವರು ವೈಸರಾಯರು; ಕಾಂಗ್ರೆಸಿಗೆ ಸಲಹೆ ಕೊಡುವ ಹೊಣೆಗಾರಿಕೆ ಹೊತ್ತವರು ಮಹಾತ್ಮರು. ಪ್ರಯತ್ನಪುರುಷರಾದ ಇವರಿಬ್ಬರು ಸಂಧಾನದ ಆಶೆ ತಮಗಿದೆ, ಸಂಧಾನವನ್ನು ಸಾಧಿಸುವ ಹಟವೂ ಇದೆ ಎನುವಾಗ 'ವಾತಾವರಣವೆಲ್ಲ ನಿರಾಶಾಮಯವಾಯ್ತು' ಎಂದು ಹೇಳುವ ಬಗೆ ಹೇಗೆ? ಇಲ್ಲಿಗೆಯೆ ಮುಗಿಯಲಿಲ್ಲ ಈ ಮಾತು. ಗಾಂಧಿ-ವೈಸರಾಯರ ಸಂದರ್ಶನವನ್ನೆ ಕುರಿತು ಸ್ಟೇಟ್‌ಸೆಕ್ರೆಟರಿಗಳಾದ ಮಾರ್ಕಿಸ್ ಝೆಟ್‌ಲಂಡರು ಲಂಡನಿನ ಒಂದು ವಾರಪತ್ರಿಕೆಗೆ ಸಂದರ್ಶನವನ್ನು ಕೊಟ್ಟಿದ್ದಾರೆ! ಪಾರ್ಲಮೆಂಟಿನಲ್ಲಿ ಮುಂದೆ ಎರಡೇ ದಿವಸಗಳಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆಯಾಗುವುದಿದ್ದರೂ ಪತ್ರಿಕೆಗೆ ಸಂದರ್ಶನವನ್ನು ಕೊಡುವಂತಹ ಅವಸರವೇನು ಇದ್ದಿತು? ಅದು ಅವಸರವಲ್ಲ, ವಿಷಯದ ಮಹತ್ತ್ವ ಎಂದು ನಮ್ಮ ಅಭಿಪ್ರಾಯ. ಸ್ಟೇಟ್‌ಸೆಕ್ರೆಟರಿಯವರು ಈ ಸಂದರ್ಶನದಲ್ಲಿ ಗಾಂಧಿ-ವೈಸರಾಯರ ಇನ್ನೊಂದು ಭೆಟ್ಟಿಗೆ ಅನುಕೂಲವಾಗುವಂತೆಯೆ ಮಾತನಾಡಿದ್ದಾರೆ: 'ಹಿಂದುಸ್ಥಾನವು ಸ್ವತಂತ್ರ (free) ವಾಗಬೇಕೆಂಬ ಬಯಕೆ ನನಗೆ ಅರ್ಥವಾಗುವುದು; ವೆಸ್ಟ್‌ಮಿನ್‌ಸ್ಟರ ಶಾಸನಕ್ಕನುಸರಿಸಿದ ವಸಾಹತ ಸ್ವರಾಜ್ಯವು ಧ್ಯೇಯ-

ವೆಂದು ನಾವೂ ಒಪ್ಪಿಕೊಂಡಿದ್ದೇವೆ; ಆದರೆ ಕಾಂಗ್ರೆಸಿನವರು ಬ್ರಿಟಿಶ ಛತ್ರದ ಹೊರಗೆ ಸರ್ವತಂತ್ರಸ್ವತಂತ್ರ (independent) ರಾಗಬೇಕೆನುವುದು ಕೇವಲ ತಾತ್ವಿಕ, ನಮಗೆ ಅದು ಅರ್ಥವಾಗುವುದಿಲ್ಲ; ಬರಿಯ ಶಬ್ದಮೋಹವನ್ನು ಬಿಟ್ಟು ವಸ್ತುಸ್ಥಿತಿಯನ್ನು ಕಾಂಗ್ರೆಸಿನವರು ಎದುರಿಸಬೇಕಾಗಿದೆ' ಎಂದು ಮುಂತಾಗಿ ಝೆಟ್‌ಲಂಡರ ಸಂದರ್ಶನದ ಸಾರಾಂಶ.

ಶಬ್ದ ಜಾಲಕ್ಕೆ ಸಿಕ್ಕವರು ಯಾರು?

ಸ್ಟೇಟ್ ಸೆಕ್ರೆಟರಿಯವರು ಕೇವಲ ಅಧಿಕಾರದ ಬಣ ಹಿರಿಯತನವನ್ನು ಕಾಯ್ದುಕೊಳ್ಳಲು ಹೀಗೆ ಮಾತನಾಡಿದ್ದಾರೆ ಎನಬೇಕಾಗಿದೆ. ಇಲ್ಲವಾದರೆ ವಸ್ತುಸ್ಥಿತಿಯನ್ನು ಹೀಗೆ ವಿಪರ್ಯಾಸಗೊಳಿಸಬಹುದೆ? ವೆಸ್ಟ್‌ಮಿನ್‌ಸ್ಟರ ಶಾಸನಕ್ಕನುಸರಿಸಿದ ವಸಾಹತ ಸ್ವರಾಜ್ಯ ಧ್ಯೇಯ ಎಂದು ಒಪ್ಪುವರಂತೆ, ಆದರೆ ಸಾಮ್ರಾಜ್ಯದ ಹೊರಗಾಗಬಹುದಾದ ಸ್ವಾತಂತ್ರ್ಯದ ಅರ್ಥ ಅವರಿಗಾಗುವುದಿಲ್ಲವಂತೆ! ಸ್ಟೇಟ್ ಸೆಕ್ರೆಟರಿಯಂತಹ ಹುದ್ದೆಯಲ್ಲಿದ್ದವರಿಗೆ ವೆಸ್ಟ್‌ಮಿನ್‌ಸ್ಟರ ಶಾಸನದ ಅರ್ಥವೆ ಆಗಿಲ್ಲವೆನಬಹುದೆ? ಇಲ್ಲವೆ ಹೊಳೆದ ಅರ್ಥವನ್ನು ಮುಚ್ಚುವ ಹವಣಿಕೆಯಿಂದ ತಮ್ಮ ಸುತ್ತಲು ಶಬ್ದಗಳ ಜೇಡಬಲೆಯನ್ನು ಕಟ್ಟುತ್ತಿದ್ದಾರೆನಬಹುದೆ? ಇಲ್ಲವೆ Independence ಎಂಬ ಒಂದು ಶಬ್ದವೆ ಇವರನ್ನು ಮೋಹದಲ್ಲಿ ಸಿಕ್ಕಿಸಿದೆ ಎನಬಹುದೆ? ಯಾಕೆಂದರೆ ಕಾಂಗ್ರೆಸಿನವರು ಕೇಳುವ Independence (ಸಾಮ್ರಾಜ್ಯದ ಹೊರಗಿರುವ ಸ್ವಾತಂತ್ರ್ಯ) ಎಂಬುದು ವೆಸ್ಟ್‌ಮಿನ್‌ಸ್ಟರ್ ಶಾಸನದಲ್ಲಿ ಅಡಕವಾಗಿದೆ; ಆ ಶಾಸನಕ್ಕನುಸರಿಸಿದ ಧ್ಯೇಯವನ್ನು ಸಾಹೇಬರು ಒಪ್ಪುವರಂತೆ; ಕಾಂಗ್ರೆಸು ಹೇಳುವುದೂ ಅದಕ್ಕನುಸರಿಸಿಯೆ ಇರುವಾಗ ಅದನ್ನೊಪ್ಪುವುದಿಲ್ಲವಂತೆ! ಇಂದು ಬೇಕಾದ ವಸಾಹತ (Dominion) ಕ್ಕೆ ಬೇಕಾದಾಗ ಬ್ರಿಟಿಶಸಾಮ್ರಾಜ್ಯದ ಅಂತರ್ಗತತ್ವವನ್ನು ಬಿಟ್ಟುಕೊಡುವ ಅಧಿಕಾರವಿದೆ; ಹಿಂದುಸ್ಥಾನವೂ ವಸಾಹತಸ್ಥಿತಿಗೆ ಮುಟ್ಟಿದರೆ ಆ ಅಧಿಕಾರ ಹಿಂದುಸ್ಥಾನಕ್ಕೂ ಬರಬೇಕಲ್ಲವೆ? ಎಂದ ಮೇಲೆ ಝೆಟ್‌ಲಂಡ್ ದೊರೆಗಳು Independence ಎಂಬ ಶಬ್ದಕ್ಕೆ ಇಷ್ಟೇಕೆ ಬೆದರಬೇಕು! ಇದುವರೆಗೆ ಯಾವ ವಸಾಹತೂ ಬ್ರಿಟಿಶ್ ಸಾಮ್ರಾಜ್ಯವನ್ನು ಬಿಟ್ಟಿಲ್ಲ, ನಿಜ; ಹಿಂದುಸ್ಥಾನವೂ ಬಿಡಲಿಕ್ಕಿಲ್ಲ. ಆದರೆ ಬಿಡುವ ಅಧಿಕಾರ ಬೇಕೆಂಬುದೆ ಕಾಂಗ್ರೆಸಿನ ಬೇಡಿಕೆಯ ತಿರುಳು. ಮಹಾತ್ಮಾ ಗಾಂಧಿಯವರು Independence ಎಂಬ ಶಬ್ದಕ್ಕೆ ಅನೇಕ ಸಲ ಇದೇ ಅರ್ಥವನ್ನು ಕೊಟ್ಟಿದ್ದಾರೆ. ಹೀಗಿರುವಾಗ ಬರಿಯ ಶಬ್ದದ ದೂರದ ಧನುಷ್ಟಂಕಾರ (long range attacks) ದೊರೆಗಳಿಗೆ ಯಾಕೆ? ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರು ಹೇಳಿದಂತೆ ಸಾಮ್ರಾಜ್ಯವಾದಿಗಳಲ್ಲಿ ನುರಿತವರಾದ ಇಂಗ್ಲಿಷರೆ ಶಬ್ದ-ಜಾಲವನ್ನು ಕಟ್ಟಬಲ್ಲರು!

ವಸ್ತುಸ್ಥಿತಿ ಎಂಬ ವಂಚಕವೃತ್ತಿ

ಸ್ಟೇಟ್ ಸೆಕ್ರೆಟರಿಗಳ ನಿಜವಾದ ಆಶಯವು ಬೇರೆಯಾಗಿದೆ. 'ತಾತ್ವಿಕ ಘಟವನ್ನು ಬಿಟ್ಟು ವಸ್ತುಸ್ಥಿತಿಗಿಳಿಯಬೇಕು' ಎಂಬ ಉಪದೇಶದ ದನಿಯೊಡನೆ ನಮ್ಮ ಜುಟ್ಟನ್ನು ನಮ್ಮ ಕಣ್ಣೊಳಗೆಯೆ ತಿವಿಯುವ ಯತ್ನವಿದೆ. ವಸ್ತುಸ್ಥಿತಿ ಎಂದರೇನು? ಕಳೆದ ಐವತ್ತು ವರ್ಷಗಳಿಂದ ರಾಷ್ಟ್ರೀಯವೃತ್ತಿ ಬೆಳೆದಿದೆ, ಕಳೆದ ಇಪ್ಪತ್ತು ವರ್ಷಗಳಿಂದ ದೇಶಾಭಿಮಾನವು ಪ್ರಾಂತಾಭಿಮಾನವನ್ನು ಹಿಮ್ಮೆಟ್ಟುತ್ತಲಿದೆ, ಇಡಿಯ ದೇಶಕ್ಕೆ ಕಾಂಗ್ರೆಸು ಒಂದು ರಾಷ್ಟ್ರೀಯ ರಾಜಕೀಯ (ಸಾಮಾಜಿಕವಲ್ಲ, ಪ್ರಾಂತಿಕವಲ್ಲ, ಜಾತಿನಿಷ್ಠವಲ್ಲ) ಪಕ್ಷವಾಗಿ ಬೆಳೆದಿದೆ, ಕಳೆದ ಚುನಾವಣೆಗಳಲ್ಲಿ ಒಂದೇ ಒಂದು ಕಾಂಗ್ರೆಸು ಮಿಕ್ಕ ಎಲ್ಲ ಪಕ್ಷಗಳನ್ನೂ ಮಿಕ್ಕಿ ಬಹುಮತವನ್ನು ಪಡೆದಿದೆ, ಈ ಎರಡು ವರ್ಷ ರಾಜ್ಯಸೂತ್ರ ವಹಿಸುವ ಯೋಗ್ಯತೆ ಮತ್ತು ಬುದ್ಧಿಮತ್ತೆ ಭಾರತೀಯರಿಗಿದೆ ಎಂದು ಬ್ರಿಟಿಶರಿಗೂ ಒಪ್ಪಿಗೆಯಾಗಿದೆ—ದೇಶದ ದಿವ್ಯಚರಿತದಂತಿದ್ದ ಈ ಸಂಗತಿ ಝೆಟ್‌ಲಂಡರಿಗೆ ವಸ್ತುಸ್ಥಿತಿ ಎನಿಸುವುದಿಲ್ಲ. ಅವರ ವಸ್ತುಸ್ಥಿತಿ ಸಂಕುಚಿತಸ್ವರೂಪದ್ದಿದೆ, ಜಾತಿಯನ್ನು ಹಿಡಿದು ನಿಂತಿದೆ, ಅರಾಷ್ಟ್ರೀಯತೆಯ ಆಕಾರತಳೆದಿದೆ, ಒಂದು ಮಾತಿನಲ್ಲಿ ಹೇಳುವುದಾದರೆ ಜಿನಾ ಎಂಬ ಜಡದೇಹದಿಂದ ನಿಂತಿದೆ! ಅದೇನು ಕಾರಣವೊ—ಕಳೆದ ಮೂರು ವರ್ಷಗಳಿಂದ ಬ್ಯಾ. ಜಿನಾ ಅವರ ಚರಿತ್ರವು 'ಅಧೋಽಧೋ ಗಂಗೇಯಾ ಪದಮುಪಗತಾ' ಎಂಬಂತೆ ಆಗಿದೆ. ಇತ್ತಿತ್ತಲಾಗಿಯಂತೂ 'ಹಿಂದುಸ್ಥಾನವು ಒಂದು ರಾಷ್ಟ್ರ' ಎಂಬ ಮಾತನ್ನೆ ಅವರು ಒಪ್ಪುವುದಿಲ್ಲ; ದೇಶದ ಇತಿಹಾಸವನ್ನೆ ಧಿಕ್ಕರಿಸುವ ಒಂದು ವ್ಯಕ್ತಿಯ ಅಸಂಬದ್ಧ ಪ್ರಲಾಪಗಳಿಗೆ 'ಅಲ್ಪ ಮತಸ್ಥರ ಧ್ಯೇಯದೃಷ್ಟಿ' ಎಂಬ ದೊಡ್ಡ ಹೆಸರನ್ನು ಕೊಟ್ಟು ಬ್ರಿಟಿಶರೆ ವಸ್ತುಸ್ಥಿತಿಯನ್ನು ಮರೆಸಿದ್ದಾರೆ; safeguarding the interests of minority (ಅಲ್ಪಮತಸ್ಥರ ಹಕ್ಕು-ಬಾಧ್ಯತೆಗಳ ಸಂರಕ್ಷಣೆ) ಎಂಬ ಶಬ್ದಮೋಹದಲ್ಲಿ ತೊಡಗಿದ್ದಾರೆ ಎಂದು ಹೇಳಬಹುದು.

'ಹಿಂದೂ ಮುಸಲ್ಮಾನ' ಮುಂದೂ ಮುಸಲ್ಮಾನ!

ಬ್ಯಾ. ಜಿನಾ ಅವರ ದಿನದಿನಕ್ಕೆ ಬದಲಾಯಿಸುವ ಮನೋವೃತ್ತಿಯನ್ನು ಲಕ್ಷ್ಯದಲ್ಲಿಟ್ಟರೆ 'ಹಿಂದೂ ಮುಸಲ್ಮಾನರ ಐಕ್ಯ' ಎಂಬ ಪ್ರಶ್ನೆಯು ಅವಾಸ್ತವವೆನಿಸುವುದು, ತೀರ ಅಸಂಬದ್ಧವೆನಿಸುವುದು. ಹಿಂದುಧರ್ಮ, ಮಹಮ್ಮದೀಯ ಧರ್ಮ ಇವೆರಡೂ ಧ್ಯೇಯ-ಧೋರಣೆ-ವ್ಯವಹಾರಗಳಿಂದ ಪರಸ್ಪರ ವಿರುದ್ಧವಾದುವು ಎಂದು ಜಿನಾ ಅವರದೊಂದು ತತ್ತ್ವ; ಇಂದು ಮುಸಲ್ಮಾನರೆಂದರೆ ಅವರು ಹಿಂದೂ ಮುಸಲ್ಮಾನರು ಇನ್ನು ಮುಂದೂ ಕೇವಲ ಮುಸಲ್ಮಾನರೇ ಎಂದು ಜಿನಾ ಅವರ ತರ್ಕ; ಹಿಂದುಗಳು ಬಹುಮತದವರು, ಬಹುಮತದವರಿಂದ ಅಲ್ಪಮತದವರಿಗೆ ಯಾವಾಗಲೂ ಅಪಾಯವೆ ಇದೆ ಎಂದು ಜಿನಾ ಅವರ ರಾಜನೀತಿ; ಶತ್ರುಸಮಾನರೆನಿಸುವ ಬಹುಮತದವರಿಂದ ಅಲ್ಪಮತದವರ ಸಂರಕ್ಷಣೆಯಾಗಬೇಕಾದರೆ ಅಧಿಕಾರವೆಲ್ಲ ಅಲ್ಪಮತದವರ ಕೈಯಲ್ಲಿಯೆ ಇರಬೇಕೆಂದು ಜಿನಾ ಅವರ ಶಾಸನಪದ್ಧತಿ ಶೋಧ! ಕೊನೆಗೆ ತಮ್ಮ ಅಭಿಪ್ರಾಯವು ಮುಸ್ಲಿಂಲೀಗಿನ ಅಭಿಪ್ರಾಯ, ತದ್ದ್ವಾರಾ ಮುಸಲ್ಮಾನರ ಅಭಿಪ್ರಾಯ, ಅತಏವ ಇಡಿಯ ಭರತಖಂಡದ

ಮುಸಲ್ಮಾನರ ಅಭಿಪ್ರಾಯ ಎಂಬ 'ಗುರುತ್ರಾಣ'! ಇದನ್ನು ವಸ್ತುಸ್ಥಿತಿ ಎನಬಹುದೆ, ಇಲ್ಲವೆ ವ್ಯಕ್ತಿಯದೊಂದು ಮಾದರಿ ಮಾತ್ರ ಎನಬಹುದೆ? ಜ್ನಾ. ಜಿನಾ ಅವರು 'ಇಂದಿನ ಸ್ಥಿತಿ ಅಲ್ಲ, ಹಿಂದಿನ ಕರ್ಮ' ಎನುವಂತಾಗಿದೆ.

ಕಾಂಗ್ರೆಸಿನ ಕರ್ಮಫಲ

ಹಿಂದಿನ ಕರ್ಮ ಎನುವುದಕ್ಕಿಂತ ಕಾಂಗ್ರೆಸಿನ ಕರ್ಮಫಲ ಎನುವುದು ಹೆಚ್ಚು ಸಯುಕ್ತಿಕವಾಗಬಹುದೇನೋ ಎಂದು ನಮ್ಮ ಶಂಕೆ. ಯಾಕೆಂದರೆ ಒಂದು ದೃಷ್ಟಿಯಿಂದ ಜ್ನಾ. ಜಿನಾ ಇವರ ವಿಚಾರ ಪರಿವರ್ತನೆಗೆ ಕಾಂಗ್ರೆಸಿನ ಹೊಯ್ದಾಟದ ಧೋರಣವೆ ಕಾರಣವಾಗಿದೆ. ಮೊದಲನೆಯ ದುಂಡು ಮೇಜಿನ ಪರಿಷತ್ತಿನಂದಿನಿಂದ ಜ್ನಾ. ಜಿನಾ ಇವರ ಜಾತೀಯತ್ವಬುದ್ಧಿ ಕೆನೆಗಟ್ಟುತ್ತಲಿದೆ. 'ಜಾತಿ-ಜಾತಿಗಳಲ್ಲಿ ಐಕ್ಯವನ್ನು ಮಾಡಿಕೊಳ್ಳಿರಿ, ಆಮೇಲೆ ಬೇಡಿದ್ದನ್ನು ಕೊಡುವ ವಿಚಾರಮಾಡುವಾ' ಎಂದು ಬ್ರಿಟಿಶ್ ಸರಕಾರವು ಹೇಳಲು ಮೊದಲು ಮಾಡಿದಾಗ, ಮಹಾತ್ಮಾ ಗಾಂಧಿಯರು ಜ್ನಾ. ಜಿನಾ ಇವರೊಡನೆ ಮಾತು-ಕತೆಯನ್ನು ಪ್ರಾರಂಭಿಸಿದರು. ಬ್ರಿಟಿಶರ ಬಲೆಯಲ್ಲಿ ಕಾಂಗ್ರೆಸು ಪೂರ್ತಿಯಾಗಿ ಸಿಕ್ಕಿಕೊಂಡುದು ಈ ಸಂದರ್ಭದಲ್ಲಿಯೆ ಎಂದು ಹೇಳಬಹುದು. ಭಾರತೀಯರಿಗೆ ಜಾತಿಗಳ ಹೊರತಾಗಿ ಬೇರೊಂದು ಸಂಘಟನೆ ಇಲ್ಲವೆ? ತಾನು ಯಾವುದೊಂದು ಜಾತಿಯ ಸಂಸ್ಥೆಯಲ್ಲ ಎಂದು ಹೇಳುವ ಕಾಂಗ್ರೆಸು ಬ್ರಿಟಿಶರ ಮಾತಿಗೆ ಒಪ್ಪಿ ಜಿನಾ ಇವರೊಡನೆ ಸಂಧಾನ ನಡೆಯಿಸಿದ್ದು ರಾಜಕಾರಣದ ದೃಷ್ಟಿಯಿಂದ ದೊಡ್ಡ ತಪ್ಪಾಯಿತು. 'ಜಾತಿ-ಜಾತಿಗಳ ಒಪ್ಪಂದಕ್ಕೂ ಪ್ರಜಾಪ್ರಭುತ್ವಕ್ಕೂ ಸಂಬಂಧವಿಲ್ಲ, ಇಷ್ಟೇ ಅಲ್ಲದೆ ಇವು ಪರಸ್ಪರ ವಿರುದ್ಧವಾಗಿವೆ. ಕಾಂಗ್ರೆಸು ಇಂದು ಇಡಿಯ ದೇಶಕ್ಕೆಯೆ ಹಿರಿಯದಾದ ಸಂಸ್ಥೆಯಾಗಿದೆ, ಮಿಕ್ಕ ಎಲ್ಲ ಪಕ್ಷಗಳನ್ನು ಕೂಡಿಸಿದರೂ ಮೀರುವಂತಹ ಸಂಸ್ಥೆಯಾಗಿದೆ, ಕಾಂಗ್ರೆಸಿನಲ್ಲಿ ಉದಾಹರಣೆಗಾಗಿ ಎಲ್ಲ ಜಾತಿಯವರೂ ಇದ್ದಾರೆ. ಕಾಂಗ್ರೆಸು ಬಹುಮತದ ಸಂಸ್ಥೆಯಾಗಿದೆ. ರಾಜಕಾರಣದಲ್ಲಿ ಜಾತಿ-ಸಂಬಂಧವನ್ನು ಕಾಂಗ್ರೆಸು ಸೇರಿಸಬಯಸುವುದಿಲ್ಲ, ಆದರಂತೆಯೆ ಕೇವಲ ಜಾತಿಯ ಮೇಲೆಯೆ ನಿಂತ ಯಾವ ಸಂಸ್ಥೆಗೂ ಕಾಂಗ್ರೆಸು ಮನ್ನಣೆ ಕೊಡುವುದಿಲ್ಲ. ಇಷ್ಟೇಕೆ? ಇಂದಿನ ಹಿಂದುಸ್ಥಾನದ ಪ್ರಗತಿಯಲ್ಲಿ ಜಾತಿಯನ್ನು ಮುಂದುಮಾಡುವ ವ್ಯಕ್ತಿಯಾಗಲಿ ಸಂಸ್ಥೆಯಾಗಲಿ ಆ ಪ್ರಗತಿಯ ಶತ್ರು ಎಂದು ಕಾಂಗ್ರೆಸಿನ ಅಭಿಪ್ರಾಯ' ಎಂದು ಕಾಂಗ್ರೆಸು ಮೊದಲಿನಿಂದಲೇ ಹಟ ತೊಟ್ಟಿದ್ದರೆ?

ನಾಗರಕ್ಕೆ ನೆರೆದ ಹಾಲು

ಮೇಲಿನ ಮಾತುಗಳಲ್ಲಿ ಕೆಲವನ್ನು ಇಂದು ಮಹಾತ್ಮರು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸತೊಡಗಿದ್ದಾರೆ. ಆದರೆ ಹತ್ತು ವರ್ಷಗಳ ಕರ್ಮಫಲವಾಗಿ ಇಂದು ಕಾಂಗ್ರೆಸು ಆಡುವ ಮಾತು ಸಯುಕ್ತಿಕವೆನಿಸದಂತಹ ಪರಿಸ್ಥಿತಿ ಬಂದಿದೆ! ಮೊದಲು ಜಾತೀಯನಿರ್ಣಯ (Communal Award) ವನ್ನು ಧೈರ್ಯವಾಗಿ, ಕೃತಿರೂಪವಾಗಿ ಪ್ರತಿಭಟಿಸದೆ ಇದ್ದುದು; ಆಮೇಲೆ ಕಾಂಗ್ರೆಸು ರಾಜ್ಯಸೂತ್ರವನ್ನು ವಹಿಸಿದ ಮೇಲೆ ತನ್ನ ಮಂತ್ರಿಮಂಡಳದಲ್ಲಿ ಮುಸಲ್ಮಾನರ ಪ್ರತಿನಿಧಿ ಇರಬೇಕೆಂದಾಗಲಿ ಇಲ್ಲವೆ ಮುಸಲ್ಮಾನರಿಗಾಗಿ ಪ್ರತ್ಯೇಕವಾದ, ವಿಶಿಷ್ಟವಾದ, ಪ್ರೋತ್ಸಾಹಕವಾದ ಧೋರಣೆಯನ್ನು ತಳೆದಾಗಲಿ ವರ್ತಿಸಿದ್ದು. ಮೊದಲನೆಯದರಿಂದ ಹಿಂದುಸ್ಥಾನದ ರಾಜಕಾರಣದಲ್ಲಿ ಮತ್ತು ರಾಜಕೀಯ ಪ್ರಗತಿಯಲ್ಲಿ ಜಾತಿಯನ್ನು ಮೌಲಿಕ (Basic) ವಾಗಿ ಒಪ್ಪಿಕೊಂಡಂತಾಯಿತು; ಎರಡನೆಯದರಿಂದ ಅನೇಕ ಜಾತಿಗಳಲ್ಲಿಯ ಒಂದರ ವಿಶಿಷ್ಟ ಸ್ಥಾನಮಾನ-ಗಳನ್ನು ಒಪ್ಪಿಕೊಂಡಂತಾಯಿತು. ಈ ಧೋರಣೆಯಿಂದ ಇಷ್ಟಸಿದ್ಧಿ ದೊರೆಯದಂತಾದ ಮೇಲೆ ಕಾಂಗ್ರೆಸು ಮೇಲಿನ ಮಾತುಗಳನ್ನು ಹೇಳುತ್ತಿದೆ. ಹತ್ತು ವರುಷಗಳ ಮುಂಚೆ ಅವೇ ಮಾತುಗಳು ತಾತ್ತ್ವಿಕ ಪ್ರತಿಭಟನೆಯ ದ್ಯೋತಕವಾಗಬಹುದಿತ್ತು; ಇಂದು ಬರಿಯ ಹತಾಶಾವೃತ್ತಿಯ ದ್ಯೋತಕವಾಗಿದೆ. ಹಲ್ಲು ಮುರಿಯಬೇಕಾದಾಗ ಮರೆತು ಹಾಲನ್ನು ನೆರೆದು, ಈಗ ಹಲ್ಲು ಮುರಿಯಬೇಕೆಂದರೆ ಇನ್ನಿಷ್ಟು ಕಸಲಿ ನಿಂತಿದೆ ನಾಗರ!

ಇನ್ನೊಂದು ಉದಾಹರಣೆ

ಕಾಂಗ್ರೆಸಿನ ದೋಲಾಯಮಾನ ಧೋರಣೆಯಿಂದ ದೇಶದಲ್ಲಿ ಜಾತೀಯತಾಭಾವನೆ ಬೆಳೆಯಿತೆಂದು ಕಾಂಗ್ರೆಸ್ ಶತ್ರುಗಳು ಆಗಾಗ ಹೇಳುತ್ತಿರುವರಷ್ಟೆ. ಕಾಂಗ್ರೆಸು ಮುಸಲ್ಮಾನರಿಗಾಗಿ ತಾಳಿದ ಅನಾವಶ್ಯಕ ಔದಾರ್ಯಕ್ಕಾಗಿ ಹಿಂದೂಮಹಾಸಭೆಯು ಕಳವಳಗೊಂಡು 'ನಮ್ಮ ಸಂರಕ್ಷಣಕ್ಕಾಗಿ ನಾವೇ ಸಿದ್ಧರಾಗಬೇಕು' ಎಂಬ ಹರಹುರಮಹಾದೇವ ಹುಂಬತನವನ್ನೆಬ್ಬಿಸಿತು. ಅದೂ ಹೋಗಲಿ. ಕಾಂಗ್ರೆಸಿನ ಒಳ-ಆಡಳಿತದಲ್ಲಿಯೆ ಒಮ್ಮೊಮ್ಮೆ ಅನಿಶ್ಚಿತದ, ಅನಾವಶ್ಯಕವೆನಿಸುವ, ಜಾತೀಯತಾಸೂಚಕ ಧೋರಣೆ ಕಂಡುಬರುವುದು. ರಾಜ್ಯಸೂತ್ರವನ್ನು ವಹಿಸುವಾಗ ಪಾರ್ಲಮೆಂಟರಿ ಸಬ್‌ಕಮಿಟಿಯೊಂದು ಅಸ್ತಿತ್ವದಲ್ಲಿ ಬಂದಿತಷ್ಟೆ. ಆಗ ಮುಸಲ್ಮಾನರಿಗೆ ಸಂಬಂಧಿಸಬಹುದಾದ ಎಲ್ಲ ವಿಷಯಗಳನ್ನೂ ಪ್ರಾಂತಗಳನ್ನೂ ಮೌಲಾನಾ ಅಬುಲ್ ಕಲಂ ಆಝಾದರಿಗೆ ಒಪ್ಪಿಸಲಾಯಿತು! ಮೌಲಾನಾ ಆಝಾದರು ಕಾಂಗ್ರೆಸಿನಲ್ಲಿ ಎಲ್ಲ ಜಾತಿಯವರಿಗೂ ಪ್ರಿಯರಾಗಿದ್ದಾರೆ ಎಂಬುದಕ್ಕೆ ಈ ಸಲ ಅಧ್ಯಕ್ಷಪದಕ್ಕಾಗಿ ಅವರಿಗೆ ದೊರೆತ ಸಾವಿರಗಳ ಬಹುಮತವೆ ಸಾಕ್ಷಿಯಾಗಿದೆ. ಹೀಗಿರುವಾಗ ಮುಸಲ್ಮಾನರ ಸಂಬಂಧ ಮುಸಲ್ಮಾನ ಮುಂದಾಳಿಗೆ, ಮಿಕ್ಕವರದು ಬೇರೆ ಜಾತಿಯವರಿಗೆ ಎಂಬ ವ್ಯವಸ್ಥೆಯು ಕಾಂಗ್ರೆಸಿನಂತಹ ಸಂಸ್ಥೆಯಲ್ಲಿ ಯಾಕೆ? ಆವಶ್ಯಕವೆನಿಸಿದಾಗಲೂ ಅಪಾರ್ಥಕ್ಕೆ ಎಡೆಗೊಡುವ ಸಂದರ್ಭಗಳನ್ನು ತಪ್ಪಿಸಬೇಕಿರಲು, ಕಾಂಗ್ರೆಸಿನ ಕಾರ್ಯಭಾರದಲ್ಲಿ ಅಂತಹವೆ ನಡೆದು, ಜ್ನಾ. ಜಿನಾ ಅವರಂತಹ ಆಕಾಂಕ್ಷಿ ಅಭಿಮಾನ ಅಹಂಕಾರಗಳುಳ್ಳವರನ್ನು ಕೆಣಕುತ್ತಲಿವೆ. 'ಮುಸಲ್ಮಾನರಿಗೆ ಹೆಚ್ಚಿನ ಸ್ಥಾನ-ಮಾನಗಳನ್ನು ಕೊಡಲು ಒಪ್ಪಿಕೊಂಡರೆ ಮುಸ್ಲಿಂ ಲೀಗವೆ ಅದಕ್ಕೆ ಯೋಗ್ಯ, ಆ ಸನ್ಮಾನಕ್ಕೆ ಅರ್ಹವಾದುದು' ಎಂದು ಜಿನಾ ಅವರ

ಜಂಘ; ಪ್ರಜಾಪ್ರಭುತ್ವದ ಪಲ್ಲವಿಯನ್ನು ಹೇಳುವ ಕಾಂಗ್ರೆಸಿಗೆ ಮುಸಲ್ಮಾನ ಕಾರ್ಯಭಾರವನ್ನು ಮುಸಲ್ಮಾನ ಮುಂದಾಳಿಗೆ ಒಪ್ಪಿಸುವುದು ಅನಿವಾರ್ಯವೆನಿಸಿತೆ? ಸರಿ-ಅದಕಾಗಿಯೆ ಹಿಂದು ಹಿಂದುಸ್ಥಾನ, ಮುಸಲ್ಮಾನ ಹಿಂದುಸ್ಥಾನ ಎಂದು ವಿಂಧ್ಯಪರ್ವತದಂತೆ ಅಡ್ಡಬಂದು ಜಿನಾ ಅವರು ದೇಶವನ್ನು ಎರಡು ತುಂಡಾಗಿ ಕಡಿದೊಗೆಯುವ ಧೈರ್ಯ ಮಾಡಿದ್ದಾರೆ! ಕಾಂಗ್ರೆಸಿನಲ್ಲಿ ಬುದ್ಧಿಪೂರ್ವಕವಾಗಿ ಜಾತೀಯತೆಗೆ ಪ್ರೋತ್ಸಾಹವಿಲ್ಲವೆಂಬುದು ಬ್ರಿಟಿಶ ಸರಕಾರಕ್ಕೆ ಕೂಡ ಗೊತ್ತಿದ್ದಮಟ್ಟಿಗೆ ನಿರ್ವಿವಾದವಾಗಿದೆ. ಆದರೂ ನಾವು ಹೇಳಿದಂತೆ ಅಪಾರ್ಥಕ್ಕೆ ಎಡೆಗೊಡುವ ಸಂನಿವೇಶಗಳಿಗೆ ಕೊರತೆ ಇಲ್ಲ. ಈ ಸಲ ಮೌಲಾನಾ ಅಝಾದರನ್ನು ಕಾಂಗ್ರೆಸಿನ ಪಟ್ಟಕ್ಕೇರಿಸುವಾಗ ಇಂತಹದೆ ಧೋರಣವಿದ್ದಿತೆಂದು ಕಾಂಗ್ರೆಸಿಗರೆ ಅನೇಕರು ಆಡಿತೋರಿಸಿದ್ದಾರೆ.

* * *

ಕಾಂಗ್ರೆಸಿನ ಚುನಾವಣೆಗಳು

ಹೋದ ತಿಂಗಳಲ್ಲಿ ರಾಮಗಡ ಅಧಿವೇಶನದ ನಿಮಿತ್ತವಾಗಿ ಅಖಿಲಭಾರತ ಮತ್ತು ಪ್ರಾಂತಿಕ ಕಾಂಗ್ರೆಸ ಸಂಸ್ಥೆಗಳ ವಾರ್ಷಿಕ ಚುನಾವಣೆಗಳು ಜರುಗಿದುವು; ಇವುಗಳಿಗಿಂತ ಹೆಚ್ಚು ಮಹತ್ವವೆನಿಸಬೇಕಾದ ರಾಮಗಡ ಅಧಿವೇಶನದ ಅಧ್ಯಕ್ಷರ ಚುನಾವಣೆಯೂ ಆಯಿತು. ಈ ಸಲದ ಅಧ್ಯಕ್ಷ ಚುನಾವಣೆಯು ಲಕ್ಷ್ಯಕ್ಕೆ ಬಾರದ ಸ್ಥಿತಿಯಲ್ಲಿಯೆ ಜರುಗಿಹೋಯಿತೆನಬಹುದು. ತೋರಿಕೆಗೆ ಇಬ್ಬರು ಹುರಿಯಾಳಾಗಿದ್ದರು; ನಿಜವಾಗಿ ಮೌಲಾನಾ ಅಬುಲ್ ಕಲಾಂ ಅಝಾದರೊಬ್ಬರೆ ಹುರಿಯಾಳು ಎಂದರೆ ತಪ್ಪಾಗಲಿಕ್ಕಿಲ್ಲ. ಹೋದ ಸಲದ ಚುನಾವಣೆಯಾದಂದಿನಿಂದ ಬಾಬು ಸುಭಾಷ ಬೋಸರು ತಪಶ್ಚರ್ಯೆಯ ವನವಾಸದಲ್ಲಿ ಹುದುಗಿ ಹೋಗಿದ್ದಾರೆ; ಸಮಾಜಸತ್ತಾವಾದಿಗಳದೊಂದು ಹೆಸರಿಗೆ ಕಾಂಗ್ರೆಸಿನೊಳಗೆಯೆ ಪಕ್ಷವಿದೆ. ಆದರೆ ಇತ್ತಿತ್ತಲಾಗಿ ಎಲ್ಲ ಚುನಾವಣೆಗಳ ಸಂದರ್ಭಗಳಲ್ಲಿ ಈ ಸಮಾಜಸತ್ತಾವಾದಿಗಳು ಸೌಮ್ಯವಾದಿಗಳೊಡನೆಯೆ ಬೆರೆತುಹೋಗುವ ಹೊಸ ಪರಿಪಾಠವನ್ನು ಪ್ರಾರಂಭಿಸಿದ್ದಾರೆ. ಅದೇನು ಗೂಢವೊ! ಇವರ ಸಮಾಜಸತ್ತಾವಾದವು ಅಲ್ಪವಯಸ್ಕರ ಆಸ್ತಿಯಂತಿದೆ; ಸದ್ಯಕ್ಕೆ ಸೌಮ್ಯವಾದಿಗಳೆ ಇವರ ಪಾಲಕರು. ಇವರು ಪ್ರೌಢರಾಗುವುದೆಂದೊ, ಸಮಾಜಸತ್ತಾವಾದ ಎಂಬ ಇವರ ಆಸ್ತಿ ಇವರ ಅಧೀನಕ್ಕೆ ಒಳಗಾಗುವುದೆಂದೊ! ಸದ್ಯಕ್ಕಂತೂ ಸೌಮ್ಯವಾದಿಗಳಲ್ಲಿ ಇವರು ಅಂತರ್ಗತರಾಗಿದ್ದಾರೆ; ಅದೇ ಮೇರೆಗೆ ಆ ಧೋರಣೆಯ ಹುರಿಯಾಳಾದ ಮೌಲಾನಾ ಅಝಾದರಿಗಾಗಿ ಎರಡೂ ಕೈಗಳನ್ನೆತ್ತಿದ್ದಾರೆ.

ಕಾಮ್ರೇಡ ಎಮ್. ಎನ್. ರಾಯ

ಈ ಪರಿಸ್ಥಿತಿಯಲ್ಲಿ ಕಾ. ಮಾನವೇಂದ್ರರಾಯರು ಸಾವಿರಾರು ಮತಗಳಿಂದ ಸೋತದ್ದರಲ್ಲಿ ಸ್ವತಃ ಅವರಿಗೂ ಅವರ ಅಭಿಮಾನಿಗಳಿಗೂ ಎಳ್ಳಷ್ಟೂ ಆಶ್ಚರ್ಯವಿಲ್ಲ. ಕಾ. ರಾಯರೆ ಹೇಳುವಂತೆ ಈ ಸಲ ಉಗ್ರವಾದಿಗಳ ತತ್ತ್ವಪರೀಕ್ಷೆಯಾಯಿತು. ಕೇವಲ ಸಮಾಜಸತ್ತಾವಾದಿ ಎಂಬ ಹೆಸರಿನ ಕೆಳಗೆ ಮೆರೆದರೆ ಉಗ್ರವಾದಿ ಎನಿಸುವುದಿಲ್ಲ, ಸಾಮಾಜಿಕ ಧ್ಯೇಯ ಸಾಮೂಹಿಕ ಧೋರಣೆ—ಅವುಗಳಿಗಾಗಿ ಹೋರಾಡುವ ಸಾತ್ತ್ವಿಕಶಕ್ತಿ-ಮತ್ತು ಒಂದು ನಿಶ್ಚಿತ ಕಾರ್ಯಕ್ರಮ—ಇವುಗಳಿಲ್ಲದಿದ್ದರೆ 'ವ್ಯಗ್ರವಾದಿ' ಎನಿಸಬಹುದಲ್ಲದೆ ಅಂತಹರಿಗೆ ರಾಜಕೀಯ ಜೀವನದಲ್ಲಿ ಸ್ಥಾನವೇ ಇಲ್ಲ. ಈ ಸಂಗತಿಯನ್ನು ತರುಣರ ಲಕ್ಷ್ಯಕ್ಕೆ ತಂದುಕೊಟ್ಟುದಕ್ಕೆ ಮೊದಲು ನಾವು ಕಾ. ರಾಯ ಇವರನ್ನು ಅಭಿನಂದಿಸುವೆವು. ಆದರೆ ಅತ್ಯಂತ ಬುದ್ಧಿಮತ್ತೆಯಿಂದ ಮತ್ತು ಸಾಹಸದ ಸ್ವಭಾವದಿಂದ ಕೂಡಿದ ಮಾನವೇಂದ್ರರ ಮುಂದಾಳುತನದ ಹೊಣೆಗಾರಿಕೆ ಇನ್ನು ಹೆಚ್ಚಿತು ಎಂಬುದನ್ನು ಅವರ ಲಕ್ಷ್ಯಕ್ಕೆ ತರಬಯಸುತ್ತೇವೆ. ಮಾನವೇಂದ್ರರು ಈಗ ಕಾಂಗ್ರೆಸಿನಲ್ಲಿದ್ದಾರೆ; ಅವರ ಧೋರಣೆ ಮತ್ತು ಕಾರ್ಯಕ್ರಮವು ಅನೇಕರಿಗೆ ಉತ್ಸಾಹ ಜನಕ ಮತ್ತು ಅಭಿಮತವಾಗುವಂತಿದೆ. ಆದರೆ ಅದಕ್ಕೆ ಸರಿಯಾದ ಪ್ರಚಾರ ಬೇಕು. ನಮ್ಮಲ್ಲಿ ಸುಶಿಕ್ಷಿತರೆನಿಸಿಕೊಳ್ಳುವವರನ್ನು ಕೂಡ ಬೆರಗುಗೊಳಿಸುವ ಬುದ್ಧಿಮತ್ತೆ ಅವರಲ್ಲಿದೆ. ಓದುವವರು ವಿರಳ, ಓದಿ ತಿಳಿದುಕೊಳ್ಳುವವರು ಇನ್ನೂ ವಿರಳ. ಇತ್ತಿತ್ತಲಾಗಿ ಕಾಂಗ್ರೆಸಿನ 'ಶಿಸ್ತಿ'ನ ಶಾಸ್ತ್ರ ರೂಢಿಯಲ್ಲಿ ಬಂದು, ಸ್ವತಂತ್ರ ವಿಚಾರಶಕ್ತಿ ಸಾಮಾನ್ಯರಲ್ಲಿ ಕುಗ್ಗುತ್ತಲಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಪತ್ರಿಕೆಗಳಿಂದ ಪ್ರಚಾರವಾಗದು. ಸಾಮಾನ್ಯರ ಹಿತಕ್ಕಾಗಿದ್ದ ತತ್ತ್ವದ ಪ್ರಚಾರವು ಸಾಮಾನ್ಯರಿಗೆ ಮುಟ್ಟಬೇಕಾದರೆ ಮಾನವೇಂದ್ರರು ಹೆಚ್ಚಾಗಿ ಎಲ್ಲ ಕಡೆಗೆ ಸಂಚಾರ ಕೈಕೊಂಡು, ಪ್ರಾಂತಿಕ ಕಾರ್ಯಕರ್ತರನ್ನು ಕೂಡಿಸಿಕೊಂಡು, ಸ್ಥಾನಿಕ ಭಾಷೆಯಲ್ಲಿ ಸಭೆ-ಸಮ್ಮೇಳನಗಳನ್ನು ನಡೆಯಿಸಬೇಕು. ಮಹಾತ್ಮಾ ಗಾಂಧಿಯವರ 'ರಾಜ್ಯ'ದಲ್ಲಿ ಇಂತಹ ಪ್ರಚಾರಪದ್ಧತಿಯನ್ನೆ ಕೈಕೊಳ್ಳದ ಹೊರತು ಲಾಭವಿಲ್ಲ; ಕಾ. ರಾಯರಂತಹರ ಧ್ಯೇಯ-ಧೋರಣೆ-ಕಾರ್ಯಕ್ರಮಗಳ ಅವಶ್ಯಕತೆಯು, ಗತಿಗಾಣದ ನಮ್ಮ ರಾಜಕಾರಣಕ್ಕೆ ಬಹಳವಿದೆ.

ಕರ್ನಾಟಕ ಕಾಂಗ್ರೆಸ್ ಚುನಾವಣೆ

ನಮ್ಮ ಪ್ರಾಂತಿಕ ಕಾಂಗ್ರೆಸ್, ಎ. ಆಯ್. ಸಿ. ಸಿ. ಪ್ರತಿನಿಧಿಗಳ ಚುನಾವಣೆಯೂ ಜರುಗಿತು; ನಮ್ಮ ಪ್ರಾಂತದಲ್ಲಿ ಮೌಲಾನಾ ಅಝಾದರಿಗೆ ೯೨, ಕಾ. ರಾಯ ಇವರಿಗೆ ೧೯ ಮತಗಳು ದೊರಕಿದುವು. ಕರ್ನಾಟಕದಲ್ಲಿ ಉಗ್ರವಾದದ ಪ್ರಚಾರ ಸಮಾಧಾನಕಾರಕವಾಗಿದೆ ಎಂಬುದಕ್ಕೆ ೧೯ ಮತಗಳೆ ಸಾಕ್ಷಿ; ಮಿಕ್ಕ ಪ್ರಾಂತದೊಡನೆ ಹೋಲಿಸಿ ನೋಡಿದಲ್ಲಿ ಈ ೧೯ರ ಮಹತ್ವ ಕಂಡುಬರುವುದು. ಅಧ್ಯಕ್ಷರ ಚುನಾವಣೆಯಲ್ಲಿ ಒಂದು ತತ್ತ್ವ ಅಡಕವಿದೆ ಎಂಬ ಮಾತನ್ನು ೧೯ ಜನರು ಪೂರ್ತಿಯಾಗಿ ಅರಿತಿದ್ದಾರೆ ಎನಬಹುದು. ಇನ್ನು ಪ್ರಾಂತಿಕ ಚುನಾವಣೆಯಲ್ಲಿ ಕೆಲವು ಅಘಟಿತ ಘಟನೆಗಳು ಸಂಭವಿಸಿದುವು. ನಮ್ಮ ಪ್ರಾಂತದ ರಾಜಕೀಯ ಜೀವನವನ್ನು ನಾವು ಹೋದ ಸಲ ಸೂಕ್ಷ್ಮವಾಗಿ ವಿವೇಚಿಸಿದ್ದೇವೆ. ಅಲ್ಲಿ ಕಾಣಿಸಿದ ಜಾತಿವಿಷಯುಕ್ತ ವಾತಾವರಣವನ್ನು ಶುದ್ಧಗೊಳಿಸುವ ವಿಚಾರದಿಂದ, ಈ ಸಲ ಅಧ್ಯಕ್ಷರ ಐಕ್ಯವನ್ನು ಮತದ ವೈಮನಸ್ಯಕ್ಕೆ ಬಿಡದೆ ಎಲ್ಲರಿಗೂ ಸಮಾಧಾನವಾಗುವ

ರೀತಿಯಿಂದ ಮಾಡುವ ಪ್ರಯತ್ನವಾಯಿತು. ಅಲ್ಲಿ ನೆರೆದ ಗಣ್ಯ ಜನರ ಸಮಾಧಾನವು ಇಡಿಯ ಪ್ರಾಂತಕ್ಕೆ ಸಮಾಧಾನಕಾರಕವಾಗಿ ಪರಿಣಮಿಸುವುದೊ ಹೇಗೆ ನೋಡಬೇಕಾಗಿದೆ. ಪ್ರಥಮ ಗ್ರಾಸೇ ಮಕ್ಷಿಕಾಪಾತಃ ಎಂಬಂತೆ ಚುನಾವಣೆ ಮುಗಿದ ಮರುಗಳಿಗೆಯಲ್ಲಿ ಕೆಲವರು ರಾಜೀನಾಮೆಯನ್ನು ಕೊಟ್ಟಿದ್ದರು! ಇದು ಖಂಡಿತವಾಗಿ ಶುಭಸೂಚಕವಲ್ಲ. ರಾಜಕೀಯ ತತ್ವಗಳನ್ನನುಸರಿಸಿ ಪಕ್ಷಗಳಿದ್ದುದಾದರೆ ಚುನಾವಣೆಯೆ ನಿಜವಾದ ಪದ್ಧತಿ. ವೈಯಕ್ತಿಕ ಇಲ್ಲವೆ ಜಾತಿಪ್ರೇರಿತ ಪಕ್ಷಪಂಗಡಗಳಿದ್ದುದಾದರೆ ಏನು ಮಾಡಿದರೂ ಎಲ್ಲರಿಗೂ ಸಮಾಧಾನವಾಗುವುದು ಶಕ್ಯವಿಲ್ಲ. ಆದ್ದರಿಂದ ನಮ್ಮ ಪ್ರಾಂತದ ಹಿರಿಯರು ಈ ಚುನಾವಣೆಗಾಗಿ ಒಂದು ಉಪಸಮಿತಿಯನ್ನು ಮಾಡಿ ಅದರ ಸಲಹೆಗಳನ್ನು ಒಪ್ಪಿಕೊಂಡ ಕ್ರಮ ಸರಿಯಾಗಲಿಲ್ಲ ಎಂದು ನಮ್ಮ ಅಭಿಪ್ರಾಯ. ಆದರೂ ಯಾವ ಪಕ್ಷ-ಪಂಗಡಗಳಿಗೆ ಸೇರಿದ, ಜಾತಿಕುರುಕ್ಷೇತ್ರದಲ್ಲಿ ಕಾಲಿಡದ, ಸ್ವತಂತ್ರವೃತ್ತಿಯ ಡಾ. ನಾಗನಗೌಡರು ಅಧ್ಯಕ್ಷರಾದದ್ದು ಒಂದು ಸಮಾಧಾನ; ಅವರಿಗೆ ಅಭಿನಂದನೆ.

ಜಿಲ್ಲೆಯ ಸಾಹಿತ್ಯ ಸಮ್ಮೇಳನಗಳು

ಸಾಹಿತ್ಯದ ಪ್ರಚಾರದಿಂದ ಜನತೆಯ ಜೀವನದ ಮಟ್ಟವು ದಿನದಿನಕ್ಕೆ ಮೇಲಕ್ಕೇರುತ್ತ ಹೋಗುವುದು. ಸಾಮಾನ್ಯರಿಗೆ ಕಮಗಿರುವ ಸಾಮಾಜಿಕ ಸ್ಥಾನ, ಕರ್ತವ್ಯನಿಷ್ಠೆ, ತನ್ಮೂಲಕ ಪರಸ್ಪರ ಸಹಾನುಭೂತಿ ಇವುಗಳ ಎಚ್ಚರಿಕೆಯುಂಟಾಗಿ, ನಾಡಿನ ಐಕ್ಯಕ್ಕೆ ತುಂಬ ಸಹಕಾರವನ್ನದು ಒದವಿಸಿಕೊಡುವುದು. ಇದಕ್ಕೆ ಉದಾಹರಣೆಯೆಂದು ಕಳೆದ ಫೇಬ್ರುವರಿ ತಿಂಗಳ ೪-೫ನೆಯ ತಾರೀಖುಗಳ ದಿನ ನವಿಲುಗುಂದದಲ್ಲಿ ವಿಜೃಂಭಣೆಯಿಂದ ನೆರವೇರಿದ ಧಾರವಾಡ ಜಿಲ್ಲೆಯ ೪ನೆಯ ಸಮ್ಮೇಲನದ ವಿಚಾರವನ್ನು ಹೇಳಬಹುದು. ಸಮ್ಮೇಳನ ನೆರೆಯಿಸಲಿಕ್ಕೆ ಮೂಲಪ್ರೇರಕರು ನವಿಲುಗುಂದದ ಗವೀಮಠದ ಶ್ರೀಬಸವಲಿಂಗಸ್ವಾಮಿಗಳವರು. ಊರಲ್ಲಿಯ ಬ್ರಾಹ್ಮಣರು, ವೀರಶೈವರು, ವೈಶ್ಯರು, ಮುಸಲ್ಮಾನರು ಎಲ್ಲರೂ ತಂತಮ್ಮ ಜಾತಿವೈಷಮ್ಯವನ್ನು ಮರೆತು, ತಾವೆಲ್ಲ ಕನ್ನಡಿಗರು ಎಂಬ ಒಂದೆಭಾವನೆಯಿಂದ ಒಂದುಗೂಡಿ ಕಾರ್ಯ ಮಾಡಲು ಸಿದ್ಧರಾದರು. ನವಿಲುಗುಂದದಂತಹ ಚಿಕ್ಕ ಗ್ರಾಮದಲ್ಲಿಯೂ ಸಮ್ಮೇಳನವನ್ನು ತುಂಬ ಯಶಸ್ವಿಯನ್ನಾಗಿ ಮಾಡಿ ತೋರಿಸಿದರು. ಸಾಹಿತ್ಯಸಮ್ಮೇಳನ, ಕಲಾಪ್ರದರ್ಶನ, ಕವಿಗೋಷ್ಠಿ, ನಾಟ್ಯಸಮ್ಮೇಳನ, ಮಹಿಳಾಸಮ್ಮೇಳನ ಇವೆಲ್ಲ ಅಚ್ಚುಕಟ್ಟಾಗಿ ನಡೆದುವು. ಅಖಂಡ ಕರ್ನಾಟಕದ ಸವಿಗನಸನ್ನು ಕಾಣುತ್ತಿರುವ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ತಮ್ಮ ಮಾತು-ಕತೆಗಳಿಂದಲೂ ಕನ್ನಡದ ಅಭಿಮಾನಪೂರ್ಣತೆಯಿಂದಲೂ ದಕ್ಷಿಣ ಭಾಗದ ಜನರಲ್ಲಿ ಕನ್ನಡದ ಒಲವನ್ನು ಬಿತ್ತಲೆಂದು ಬಂದಿದ್ದರು; ಅವರೆ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಸಾ. ಸಮ್ಮೇಳನಕ್ಕೆ ಬೆಳಗಾಂವಿಯ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ನಂದೀಮಠ ಅವರು ಅಧ್ಯಕ್ಷರಾಗಿದ್ದರು. ನಾಟ್ಯ-ಸಮ್ಮೇಳನಾಧ್ಯಕ್ಷರಾದ ಶ್ರೀ. ಅ. ನ. ಕೃಷ್ಣರಾಯರು ತಮ್ಮ ವಿನಯ ಪರಿಪೂರ್ಣವಾದ ಭಾಷಣದಿಂದ ಸಭಿಕರನ್ನು ಮೈಮರೆಯಿಸಿ ಬಿಟ್ಟರು. ಗದುಗು, ಹುಬ್ಬಳ್ಳಿ, ಧಾರವಾಡ, ಹಾವೇರಿ ಮೊದಲಾದ ಸ್ಥಳಗಳಿಂದ ಅನೇಕ ಸಾಹಿತ್ಯಿಕರೂ ಸಾಹಿತ್ಯ ಪ್ರಿಯರೂ ಆಗಮಿಸಿದ್ದರು. ಪಟ್ಟಣದ ಸಾಹಿತ್ಯಿಕರ ಸಾಹಿತ್ಯ ಪ್ರದರ್ಶನವಲ್ಲದೆ ಹಳ್ಳಿಯ ಸಾಹಿತ್ಯ ವೈವಿಧ್ಯದ ಪ್ರದರ್ಶನವೂ ಅಲ್ಲಿ ಆಯಿತು. ಹೀಗಾದುದು ಪರಸ್ಪರರು ಪರಸ್ಪರರಿಂದ ಸ್ವೀಕರಿಸಲ ವಶ್ಯವಾದ ಸಂಗತಿಗಳಾವುವೆಂಬುದು ಗೊತ್ತಾಗಲು ನೆರವನ್ನು ಉಂಟುಮಾಡಿತು. ಕನ್ನಡದ ಹೊಸಸಾಹಿತ್ಯವಿಂದು ಹಳ್ಳಿಯ ಮಾತು, ಹಳ್ಳಿಯ ಸಹಜವಾದ ಅಲಂಕಾರಗಳು, ಹಳ್ಳಿಗರ ವಾಕ್ಪ್ರಚಾರ, ಛಂದಸ್ಸು ಇವುಗಳಿಂದ ಅನೇಕ ಮಾತುಗಳನ್ನು ತನಗೆ ಹೊಂದಿಸಿಕೊಳ್ಳಬೇಕಾಗಿದೆ. ಅರಮನೆಯಲ್ಲಿ ಕುಳಿತು ಬರಿಯ ಅರಸರ ಮನಸ್ಸನ್ನು ಮೆಚ್ಚಿಸುವಂತಹ ಹಿಂದಿನಕಾಲದ ಕವಿಗಳ ಪಾಂಡಿತ್ಯವಷ್ಟರಿಂದಲೆ ನಮ್ಮ ಸಾಹಿತ್ಯ ಪೂರ್ಣವಾಗಲಾರದೆಂಬ ಮಾತು ಇಂದು ನಮ್ಮ ಅನುಭವಕ್ಕೆ ಪೂರ್ಣವಾಗಿ ಬಂದಿದೆ. ಹಳ್ಳಿಗರ ಹಾಡು ಕತೆ ಮಾತುಗಳಲ್ಲಿಯೂ ಎಂತೆಂತಹ ಸತ್ಯ-ಸೌಂದರ್ಯಗಳು ಮಿನುಗುತ್ತಿವೆಯೆಂಬುದರ ಅರಿವು ಸುಶಿಕ್ಷಿತರೆನಿಸಿಕೊಳ್ಳುವವರಲ್ಲಿಯೂ ಉಂಟಾಗುತ್ತಿದೆ. ಅದರಂತೆಯೆ ಹಳ್ಳಿಗರ ಸಾಹಿತ್ಯದಲ್ಲಿಯ ಸತ್ಯ-ಸೌಂದರ್ಯಗಳು ಪಟ್ಟಣದ ನಾಗರಿಕರಿಂದ ಸಂಯಮ-ಔಚಿತ್ಯಗಳ ಒಪ್ಪನ್ನು ಪಡೆಯಬೇಕಾಗಿದೆಯೆಂಬ ಆವಶ್ಯಕತೆಯನ್ನು ಹಳ್ಳಿಗರಿಗೆ ತೋರಿಸಿ ಕೊಡಬೇಕಾಗಿದೆ. ಆಗಾಗ ಹಳ್ಳಿಯ ಸಾಹಿತ್ಯಿಕರಿಗೂ ಪಟ್ಟಣದ ಸಾಹಿತ್ಯಿಕರಿಗೂ ಸರಿಯಾದ ಸಂಬಂಧ ಬರುವಂತಹ ಸಂದರ್ಭಗಳನ್ನು ಒದಗಿಸಿಕೊಟ್ಟಲ್ಲಿ, ಹಳ್ಳಿಗರ ಮತ್ತು ಪಟ್ಟಣಿಗರ ಸಾಹಿತ್ಯಗಳೆರಡೂ ಪರಸ್ಪರ ಸಹಕಾರದಿಂದ ಪರಿಪೂರ್ಣವಾಗಿ ಪರಸ್ಪರ, ರಂಜಕವಾಗಿ ತೋರುವುದರಲ್ಲಿ ಸಂದೇಹವಿಲ್ಲ.

ವಿಶಾಲಕರ್ನಾಟಕ ಪಬ್ಲಿಕೇಶನ್ಸ್ ಲಿಮಿಟೆಡ್ ಧಾರವಾಡ

'ರಾಜಹಂಸ' ಪತ್ರಿಕೆಯು ಸಾಪ್ತಾಹಿಕವಾಗಿ—ದೈನಿಕವಾಗಿ ಮಾಡಿದ ಕನ್ನಡಿಗರ ಸೇವೆ ಸರ್ವಶ್ರುತವಾದುದು. ಕಳೆದ ಮಹಾಯುದ್ಧದ ಕಾಲದಲ್ಲಿ ಯುದ್ಧದ ಸುದ್ದಿಗಳನ್ನು ಕೇಳಬೇಕೆಂಬ ಕನ್ನಡಿಗರ ಕ್ಷುಧೆಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿದುದು ರಾಜಹಂಸ ದಿನಪತ್ರಿಕೆಯೆ. ಕೇವಲ ಕನ್ನಡ ಕಲಿತ ಜನರು, ರಾಜಹಂಸವಿರದಿದ್ದರೆ ತೀರ ನಿರಾಶೆಯನ್ನು ತಳೆಯಬೇಕಾಗುತ್ತಿದ್ದಿತು. ಈಗ ಆ ರಾಜಹಂಸವೇ ಕಾಲೋಚಿತವಾಗಿ 'ವಿಶಾಲಕರ್ನಾಟಕ' ಎಂಬ ಹೆಸರನ್ನು ಹೊಂದಿ, ಹೊಸ ಹುರುಪಿನಿಂದ ನಾಡಿನ ಸೇವೆಯನ್ನು ಹೆಚ್ಚಾಗಿ ಮಾಡಬೇಕೆಂಬ ಹವಣಿಕೆಯಲ್ಲಿದೆ. ಅದಕ್ಕಾಗಿಯೆ ಗಟ್ಟಿಮುಟ್ಟಾದ ತಳಹದಿಯೊಂದನ್ನು ಹಾಕಿಕೊಂಡು ಕಾರ್ಯ-ವಾಗಬೇಕೆಂದು ಆ ಪತ್ರಿಕೆಯ ಸಂಚಾಲಕರಾದ ಜಠಾರ ಬಂಧುಗಳು ಈ ಪ್ರಕಾಶನ ಸಂಸ್ಥೆಯನ್ನು ಹೊರಡಿಸಿದ್ದಾರೆ. ಈ ಸಂಸ್ಥೆಯಿಂದ ವಿಶಾಲಕರ್ನಾಟಕ ಪತ್ರಿಕೆಯ ಪ್ರಕಟನೆಯಲ್ಲದೆ ಕರ್ನಾಟಕದ ಪ್ರಗತಿಗೆ ಪೋಷಕವಾಗುವಂತಹ ಬೇರೆ ಬೇರೆ ಪ್ರಕಾಶನ ಕಾರ್ಯವೂ ನಡೆಯಲಿವೆ. ಕನ್ನಡಿಗರೆಲ್ಲರೂ ಈ ಸಂಸ್ಥೆಗೆ ನೆರವಿತ್ತು ಇದರ ಮೂಲಕ ಹೆಚ್ಚಿನ ಕಾರ್ಯವಾಗುವಂತೆ ಮಾಡಬೇಕಾಗಿ ನಮ್ಮ ಮನಃಪೂರ್ವಕವಾದ ಹಾರಯಿಕೆ.

ಸಂತೆ-ಸಮ್ಮೇಲನಗಳ ಸುದ್ದಿ

★

ಬೆಂಗಳೂರಿನ ಮುದ್ರಾರಾಕ್ಷಸ' ಕಳುಹಿದುದು.

ಎರಡನೆಯ ಕಥೆಗಾರರ ಸಮ್ಮೇಲನ. ಬೆಂಗಳೂರು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ. ಸ್ವಾಗತಾಧ್ಯಕ್ಷರು ಕನ್ನಡಾಚಾರ್ಯ 'ಶ್ರೀ' ಅವರು. ಸಮ್ಮೇಲನಾಧ್ಯಕ್ಷರು—ಹಿರಿಯ ಸಾಹಿತಿಗಳಾಗಿದ್ದರೂ ಕಲಿಯುಗದ (!) ಪ್ರಸಿದ್ಧಿ—ಕೀರ್ತಿಗಳಿಗೆ ಅಂಜಿ ಮಂಗಳೂರ ಸಾಹಿತ್ಯಸಾಗರದಲ್ಲಿ ಅಡಗಿದ್ದ ಎಮ್. ಎನ್. ಕಾಮತ್ ಅವರು. ಈಗಿನ ಕಥೆಗಾರರು ಹುಟ್ಟುವ ಮುಂಚೆಯೆ ಕಾಮತರು ಕಥೆಗಳನ್ನು ಹೇಳುತ್ತ, ಬರೆಯುತ್ತ ಇದ್ದವರು. ಅಂಥವರನ್ನು ಅಧ್ಯಕ್ಷರನ್ನಾಗಿ ಆರಿಸಿ, ಮಂಗಳೂರ 'ಸಾಹಿತ್ಯ ಸಾಗರದ ಮೀನೊಂದನ್ನು' 'ಕೃಷ್ಣರಾಜ ಸಾಗರ'ದ ಬಳಿಗೆ ತಂದುದಕ್ಕೆ ಕಥೆಗಾರರ ಸಮ್ಮೇಲನದವರು ಅಭಿನಂದನೀಯರು !

* * *

ಸ್ವಾಗತಾಧ್ಯಕ್ಷರು ಎಂದಿನಂತೆ ತಮ್ಮ ಸರಳವಾದ, ಸವಿಯಾದ ಅಚ್ಚುಕಟ್ಟಿನ ಮಾತಿನಿಂದ ಎಲ್ಲರಿಗೂ ಸ್ವಾಗತವನ್ನು ಬಯಸಿದರು. ಮತ್ತೆ ಶನಿವಾರದ (ಮೊದಲನೆಯ ದಿನ, ಜನವರಿ ತಾರೀಖು ೨೦.) ಕಾರ್ಯಕ್ರಮದ ವಿಚಾರವನ್ನೆತ್ತಿ, "ಕತೆಗಾರರಲ್ಲಿ ಅಗ್ರಸ್ಥಾನವನ್ನು ಪಡೆದು ಗಣ್ಯರಾಗಿರುವ, ಸಣ್ಣ ಕತೆಗಳ **ಜನಕ**ರೆನಿಸಿರುವ ಶ್ರೀನಿವಾಸರ ಭಾವಚಿತ್ರ ಅನಾವರಣ ಮಾಡಲಾಗುವುದು. ಇದನ್ನು ಕಂಡು ನಾವು **ಮ್ಯೂಚುಅಲ್ ಅಡ್ಮಿರೇಷನ್ ಸೊಸೈಟಿ**ಯವರು ಎಂದು ಕೆಲವರು ಅನ್ನುವರು. ನಮ್ಮಲ್ಲಿ ಒಬ್ಬರನ್ನೊಬ್ಬರು ಹಳಿಯುತ್ತ, ಮ್ಯೂಚುಅಲ್ **ರಿಕ್ರಿಮಿನೇಷನ್ ಸೊಸೈಟಿ**ಯನ್ನು ಸ್ಥಾಪಿಸುವುದಕ್ಕಿಂತ ಮ್ಯೂಚುಅಲ್ ಅಡ್ಮಿರೇಷನ್ ಸೊಸೈಟಿ ರಚನೆ ಒಳ್ಳೇದಲ್ಲವೆ ?" ಎಂದು ಅಪ್ಪಣೆ ಕೊಡಿಸಿದರು. ಕಳೆದ ೨೦ ವರುಷಗಳಿಂದ ಮಹಾತ್ಮಾಗಾಂಧಿ

ಕತೆಗಾರ ಸಮ್ಮೇಳನಕ್ಕೆ ಅಧ್ಯಕ್ಷರಾದ ಶ್ರೀಮಾನ್ ಎಂ. ಎನ್. ಕಾಮತರು

ಯವರು ಸತ್ಯ, ಅಹಿಂಸೆಗಳ ಪ್ರಚಾರ ಮಾಡುತ್ತಿದ್ದರೂ, ಅವುಗಳ ಆಚಾರ ದಿನದಿನಕ್ಕೆ ಕುಗ್ಗುತ್ತಾ ಇದೆ. ಹೀಗಿರುವಾಗ 'ಆಡಿದುದನು ಮಾಡಿ ತೋರುವ' ಮೂವತ್ತುಮೂರು ಕೋಟಿಗೊಬ್ಬರಾಗಿರುವ ಮಹಾತ್ಮರನ್ನು ಕಾಣುವುದು ಕಷ್ಟವಲ್ಲವೆ ?

* * *

"ಶ್ರೀ" ಯವರು ತಮ್ಮ ಮಾತನ್ನು ಮುಂದುವರಿಸುತ್ತ ಇಂತೆಂದರು:— "ಶ್ರೀನಿವಾಸರನ್ನು ನೆನೆದಾಗ ನನಗೆ ಷೇಕ್ಸ್‌ಪಿಯರ್ ಮತ್ತು ಮ್ಯಾಥ್ಯೂ ಆರ್ನಾಲ್ಡ್ ಎಂಬ ಇಬ್ಬರು ಪ್ರಸಿದ್ಧ ಆಂಗ್ಲ ಸಾಹಿತಿಗಳ-ಕವಿಗಳ-ಜ್ಞಾಪಕವಾಗುತ್ತೆ" ಇದುವರೆಗೆ ಕರ್ನಾಟಕದಲ್ಲಿ ಬರ್ನಾರ್ಡ್‌ಷಾ (ಪ್ರೊ. ಆರ್. ವಿ. ಜಹಗೀರ್‌ದಾರ) ಕನ್ನಡ ಷೆಲ್ಲಿ (ಪ್ರೊ. ಕೆ. ವಿ. ಪುಟ್ಟಪ್ಪ) ಕನ್ನಡ ವರ್ಡ್ಸ್‌ವರ್ಥ್ (ಶ್ರೀ ದ. ರಾ. ಬೇಂದ್ರೆ), ಕನ್ನಡ ಸ್ವಿಫ್ಟ್ (ಶ್ರೀ. ಜಿ. ಪಿ. ರಾಜರತ್ನಂ) ಅವರು ಜನಿಸಿರುವರೆಂದು ಕೇಳಿದ್ದೆವು. ಈಗ ಷೇಕ್ಸ್‌ಪಿಯರ್ ಮತ್ತು ಆರ್ನಾಲ್ಡರಿಬ್ಬರ ಆತ್ಮಗಳು ದೇಹಾಂತರ ಹೊಂದಿ 'ಶ್ರೀನಿವಾಸ'ರಲ್ಲಿ ವಾಸಿಸುತ್ತಿರುವವೆಂದು ತಿಳಿದುಬಂದಿತು. ಆದರೆ 'ಶ್ರೀನಿವಾಸ'ರ ಒರಿಜಿನಾಲಿಟಿಗೆ ಮಾತ್ರ ಸ್ವಲ್ಪ ಆತ್ಮಾಂತರವಾದಂತಾಯಿತೆಂದು ಕಾಣುತ್ತದೆ. ಆದರೂ ಚಿಂತೆಯಿಲ್ಲ. ಹೊಸ ಸಾಹಿತ್ಯ-ಸೃಷ್ಟಿಯಿಂದ ಕನ್ನಡ ಸಾಹಿತ್ಯವನ್ನು ಹೊಲಸುಮಾಡುತ್ತಿರುವರೆಂದು ತಮ್ಮ 'ಮಡಿ'ಗಾಗಿ ಪಾಡುಪಡುತ್ತಿರುವ ಕನ್ನಡ ಪಂಡಿತರು ಕಾಳಿದಾಸ, ಭವಭೂತಿ, ಲಕ್ಷ್ಮೀಶ, ಕೆಂಪು ನಾರಾಯಣ ಆದಿಗಳು ಈಗಿನ ಹೊಸ ಸಾಹಿತ್ಯ ಸೃಷ್ಟಿಯಲ್ಲಿ ಹುಟ್ಟಿಲ್ಲವೆಂದು ನಿಶ್ಚಿಂತರಾಗಿರಲಿ ! ನಮ್ಮವರು ಬೇರೆ ಜಾತಿಗೆ ಸೇರಬಹುದು. ಬೇರೆಯವರು ನಮ್ಮ ಜಾತಿಗೆ ಸೇರದಿದ್ದರೆ ಸರಿ!— ಎಂದು ನಮ್ಮ ಪಂಡಿತರ ಅಂಬೋಣವಿರಬಹುದು.

* * *

ಶನಿವಾರ ಮಧ್ಯಾಹ್ನ ಶ್ರೀ. ಮಾಸ್ತಿ ಅವರ ಭಾವಚಿತ್ರ ಅನಾವರಣ, ಅದಕ್ಕಾಗಿ ೧೨ ಜನ– ಒಬ್ಬ ವ್ಯಕ್ತಿಯ ಗುಣಗಾನಕ್ಕಾಗಿ– ೧೨ ಜನ ಗುಣಗಾನ ಮಾಡುವರಿದ್ದಾರೆಂದು ಕೇಳಿ ಕೆಲವರಿಗೆ ಆಶ್ಚರ್ಯವೂ ಗಾಬರಿಯೂ ಆಗಿದ್ದಂತೆ ಕಂಡುಬಂದಿತು ! ಈ ಹನ್ನೆರಡು ಸಂಖ್ಯೆಯ ಔಚಿತ್ಯವೇನೋ ತಿಳಿಯದು. ಸದ್ಯಕ್ಕೆ ಅವರಲ್ಲಿಯ ಇಬ್ಬರು ಉತ್ತರ ಕರ್ನಾಟಕದಿಂದ ಬಂದಿರಲಿಲ್ಲ ! ಆದರೂ ಹತ್ತು ಮಂದಿ ಗುಣಗಾನ ಮಾಡಿದಾಗ ಅವರಿಗೆ ವಂದನೆಗಳನ್ನರ್ಪಿಸುವುದಕ್ಕೂ 'ಶ್ರೀನಿವಾಸ'ರಿಗೆ ಅವಕಾಶ ಸಿಕ್ಕುವುದೊ ಇಲ್ಲವೊ ಎಂಬಂತಾಗಿತ್ತು. ರಾತ್ರಿ ಆಷ್ಟು ಹೊತ್ತಾಯಿತು ಅನಾವರಣೋತ್ಸವ ಮುಗಿಯುವ ಹೊತ್ತಿಗೆ. 'ಶ್ರೀನಿವಾಸ'ರಿಗೂ ಅದರಿಂದ ಬೇಸರವುಂಟಾಗಿದ್ದಂತೆ ಕಂಡುಬಂದಿತ್ತು. ಗುಣಗಾನದಲ್ಲಿ ಒಂದೆರಡು ಮಾದರಿ ನೋಡಬಹುದು.

* * *

ಶ್ರೀ. ಮಾಸ್ತಿಯವರ 'ಕಲೆ ಮತ್ತು ಒಲವು'ಗಳ ವರ್ಣನೆಮಾಡುವಾಗ ಕನ್ನಡ

ವರ್ಡ್ಸ್‌ವರ್ಥರು ತಮ್ಮ ಸಹಜವಾದ ಕವಿತಾಶೈಲಿಯಲ್ಲಿ, 'ಶ್ರೀನಿವಾಸ'ರನ್ನು ಬ್ರಹ್ಮಾಂಡದ ತಾನ್ಮಾತ್ರಿಕಾವಸ್ಥೆಯಲ್ಲಿರುವ ಪಂಚಮಹಾಭೂತಗಳೊಂದಿಗೆ ಜಡವಾದ ಭೂಮಂಡಲಕ್ಕಿಳಿಸಿ, ಪಂಚಭೂತಗಳ ಮತ್ತು ಬ್ರಹ್ಮ ವಿಷ್ಣು ರುದ್ರಾದಿ ತ್ರಿಮೂರ್ತಿಗಳ ತ್ರಿಗುಣಗಳನ್ನು ಸೇರಿಸಿ, ಪಿಂಡಾಂಡವನ್ನು ಭೇದಿಸಿ, ಆರು ಹೆಣ್ಣು ಮಕ್ಕಳನ್ನು ಪಡೆದ 'ಶ್ರೀನಿವಾಸ'ರನ್ನು 'ಅರ್ಧನಾರಿ'ಯಾಗಿ ಮಾಡಿ, ಅವರ ಕಲೆಯಲ್ಲಿ ರಸವಂತಿಕೆಯನ್ನು ಕಾಣಿಸಿದರು! ಅವರ ಗದ್ಯಪ್ರಬಂಧವು ಕೃತಜ್ಞತೆಯನ್ನು ಸೂಸುವ ಕಾವ್ಯವಾಗಿಯೆ ಇತ್ತು. ಆದರೆ ನುಡಿವಕ್ಕಿಯು ಚಂಚು ಭೂಮಂಡಲದ ಮೇರೆ ಮೀರಿ ಬಾನಿನಾಚೆಗೆ ಹೋಗದಿದ್ದರೆ ಚೆನ್ನಾಗಿತ್ತೆಂದು ಕೆಲವರು ಗೊಣಗಿದರು! 'ಪದ್ಯವೇನೊ ವದ್ಯಂ' ಗದ್ಯವೂ ಹೃದ್ಯವಾಗದಿದ್ದವರಿಗೇನು ಮಾಡಬೇಕು! ಮಿತಿಮೀರಿದರೆ ಯಾವುದೂ ವಿಷವಾಗುವುದೆಂದರು ಮತ್ತೆ ಕೆಲರು. ಆದರೆ 'ಶ್ರೀನಿವಾಸ'ರು ರುದ್ರನಂತೆ ಆ ವಿಷವನ್ನು ಕಂಠದಲ್ಲಿ ಧರಿಸಬಲ್ಲರೆಂದು, ವಿಶ್ವರೂಪವನ್ನು ವಿವರಿಸಿದ ವಿದುರನಂತೆ 'ಶ್ರೀನಿವಾಸ'ರ ವಿಶ್ವದರ್ಶನವನ್ನು ವರ್ಣಿಸಿದ ಕವಿಯನ್ನೂ ಅಷ್ಟೊತ್ತಿಗೆ ಮರೆತಿರಬೇಕು ಹಾಗೆಂದವರು!

* * *

ಶ್ರೀ. ಮಾಸ್ತಿಯವರ 'ಸುಬ್ಬಣ್ಣ' ಪುಸ್ತಕವನ್ನು ಸ್ವಲ್ಪ ಹೊತ್ತಿನಲ್ಲಿ ಓದಿ ಮುಗಿಸಬಹುದು. ಆದರೆ ಆ ಪುಸ್ತಕದ ಗುಣವರ್ಣನೆಗೆ ಅದಕ್ಕಿಂತಲೂ ಹೆಚ್ಚು ಘಂಟೆಗಳು ಬೇಕಾಗುತ್ತೆ ಎಂದು ನಮಗೆ ಗೊತ್ತಿರಲಿಲ್ಲ ಎಂಬುದು 'ಸುಬ್ಬಣ್ಣ'ನನ್ನು ವರ್ಣಿಸಿದವರ ಭಾಷಣವನ್ನು ಕೇಳಿದವರು ಕೆಲವರು ಗೊಣಗುತ್ತಿದ್ದರು. ಅವರಲ್ಲಿ ನನ್ನಂತೆ ಮಾಸ್ತಿಯವರನ್ನು ಮೆಚ್ಚಿ ಅವರ ಗುಣಗಾನವನ್ನು ಕೇಳಬಂದಿದ್ದವರೆ ಹಲವರು. ಹಾಗೆಂದವರಲ್ಲಿ, ಅತಿಯಾಗಿದ್ದರೂ ಅಹಿತವಾಗಿದ್ದ ಚಳಿಯಿಂದ ಕಂಕುಳಲ್ಲಿ ಕೈಗಳನ್ನು ಸಿಕ್ಕಿಸಿಕೊಂಡಿದ್ದವರನೇಕರು. 'ತಮ್ಮ ನಂತ್ರ ಮಾತಾಡೋರು ಬೇರೆಯವರಿದ್ದಾರೆ ಅನ್ಯೋನ್ಯವಾಗ ಟೈಂ ಸೆನ್ಸ್ ಬೇಡವೆ?" ಎಂದು ಗೊಣಗುತ್ತಿದ್ದವರು ಹಲವರು. ಯಾರು ಏನೆಂದರೇನು? "ತುಂಬಿದ ಪ್ರವಾಹ ಇಳಿಯೋದು ಅದರ ಹೊತ್ತಿಗೇ" ಎಂದು ತಿಳಿಯಬೇಕು ನಿಮಗೆ ಅಂದೆ ನಾನು. ನಮ್ಮ ಹಾಗೆ ನಡುಗುವ ಕಡೆ ನಿಂತಿದ್ದರೆ ಅವರೂ, ಆಗ ಪ್ರವಾಹ ಇಳಿಯೊ ಹೊತ್ತು ಗೊತ್ತಾಗತಿತ್ತು ಕನ್ನಡ 'ಮಾಪಸಾಂತ'ಳಿಗೆ ಎಂದರವರು.

* * *

ಎರಡನೆಯ ದಿನ ಭಾನುವಾರ–ಏಕಾದಶಿ!– ಬೆಳಗಿನ ಕಾರ್ಯಕ್ರಮದಲ್ಲಿ ಅನೇಕರು ತಮ್ಮ ತಮ್ಮ ಕತೆ, ಪ್ರಬಂಧಗಳನ್ನು ಓದಿದರು. ಅದರಿಂದ ಕನ್ನಡ-ಕಥೆಯಲ್ಲಿ ಕೃಷಿ ಎಷ್ಟು ಉತ್ಸಾಹದಿಂದ ನಡೆಯುತ್ತಿದೆ ಎಂದು ಸ್ಪಷ್ಟವಾಗುತ್ತಿತ್ತು.

* * *

ಮಧ್ಯಾಹ್ನ ಸಂಸ್ಕೃತ ಕಾಲೇಜಿನಲ್ಲಿ ಕಾರ್ಯಕ್ರಮ. ಹಲವು ಜನ ಕಥೆಗಾರರು ಆತ್ಮಪರಿಚಯವನ್ನು ಹೇಳಿದರು. ಈ ಕಾರ್ಯಕ್ರಮಕ್ಕೆ ಶ್ರೀ. ಕಾಮತರು ಬರಲು ತಡವಾದುದುಕ್ಕೆ, ಶ್ರೀ. ಬೆನಗಲ್ ರಾಮರಾಯರೆ ಅಧ್ಯಕ್ಷರಾಗಿದ್ದರು. ಕಾಮತರು ಬಂದ ಬಳಿಕ, ಅವರಿಗೆ ಅಧ್ಯಕ್ಷಗಿರಿಯನ್ನು ಕೊಟ್ಟುಬಿಟ್ಟರು. ಈ ಕಾರ್ಯಕ್ರಮದಲ್ಲಿ ಸಮ್ಮೇಲನದ ಕೆಲವು ಗೊತ್ತುವಳಿಗಳನ್ನು ಮಾಡಲಾಯಿತು. ಬಳಿಕ ಪರಿಷನ್ಮಂದಿರದಲ್ಲಿ ಸಂಗೀತ ಕಚೇರಿಗೆ ತೆರಳುವ ಮುನ್ನ ಕನ್ನಡ ಕತೆಗಾರರ– ಸಾಹಿತಿಗಳ 'ಗ್ರೂಪ್ ಫೋಟೋ' ತೆಗೆಯಲಾಯಿತು.

* * *

ಸಂಗೀತ ಕಾರ್ಯಕ್ರಮವಾದ ಬಳಿಕ, ಸಂಜೆಗೆ ತೆಲುಗು, ಹಿಂದಿ, ತಮಿಳು, ಮರಾಠಿ, ಮಲಯಾಳ, ಸಂಸ್ಕೃತ, ಹರಿಕಥೆಯಲ್ಲಿಯ ಸಣ್ಣ ಉಪಕಥೆಗಳು, ಮಕ್ಕಳ ಕಥೆಗಳು, ಕನ್ನಡ ಕಥೆಗಳು– ಇವುಗಳ ಇತಿಹಾಸವನ್ನು ಬೇರೆ ಬೇರೆಯವರು ಮನೋರಂಜಕವಾಗಿ ಹೇಳಿದರು. ಮಕ್ಕಳ ಕತೆಗಳ ವಿಚಾರವಾಗಿ ಶ್ರೀ. ದೇವುಡು ಅವರು ನುಡಿದ ತಮ್ಮ ಬೆಂಡೆದೆಯ ನೊಂದ ನುಡಿಗಳನ್ನು ಮಕ್ಕಳ ಕಥೆಗಾರರು ಮರೆಯದಿರುವುದೊಳ್ಳೆಯದು. ಮಲೆಯಾಳಿ ಕಥೆಗಳ ಇತಿಹಾಸವನ್ನು ಹೇಳುವಾಗ ಶ್ರೀ. ಕಸ್ತೂರಿ ಅವರು– ಇವರು ತಮಿಳು ಮಲೆಯಾಳಿಗಳಲ್ಲಿ ನುರಿತಿರುವಂತೆಯೆ ಕನ್ನಡದಲ್ಲಿಯೂ ನುರಿತ ಲೇಖಕರಾಗಿರುವರು— ತಮ್ಮ ಸಹಜವಾದ ಹಾಸ್ಯದ ಶೈಲಿಯಲ್ಲಿ, ಮಲೆಯಾಳಿ ವಿದ್ಯಾರ್ಥಿಗಳು ರೈಲಿನಲ್ಲಿ (ಗುಂಪಾಗಿ) ಪ್ರವಾಸಮಾಡುವಾಗ ಸ್ಟೇಶನ್ ಮಾಸ್ತರನ್ನು ಹಾಸ್ಯಮಾಡಲು, ಪ್ರತಿಯೊಂದು ಸ್ಟೇಶನ್ ಬಂದಾಗ 'ಸ್ಟೇಶನ್ ಮಾಸ್ಟರ್ ಕೀಜೆ!– ಜೈ ಆಲ್ಲ–ಕೀಜೆ!— ಎಂದು ಹಿಂದಿಯನ್ನು ಮಲೆಯಾಳಿ ಮಾಡುವರು ಎಂದು ಮುಂತಾಗಿ ಮಲೆಯಾಳಿ ವೈಶಿಷ್ಟ್ಯವನ್ನು ಹೇಳುತ್ತ, 'ಬಾಯಲ್ಲಿ ಬೆಂದು ಬಿಸಿಯಾಗಿರುವ ಆಲೂ ಗೆಡ್ಡೆಯನ್ನು ಹಾಕಿಕೊಂಡು ಕನ್ನಡ ಮಾತನಾಡಲೆತ್ನಿಸಿದರೆ ಮಲೆಯಾಳಿ ಭಾಷೆಯಾಗುವುದು!' ಎಂದರು. ಈ ಇತಿಹಾಸ ಕಾರ್ಯಕ್ರಮದಲ್ಲಿ ಕೆಲವರಿಗೆ,ರಾತ್ರಿ ಬಹಳ ಹೊತ್ತಾದ್ದರಿಂದ ಅವಕಾಶದೊರೆಯದಂತಾಯಿತು. ಇನ್ನೂ ಅಧ್ಯಕ್ಷರ ಮುಕ್ತಾಯ ಭಾಷಣ ಆಗಬೇಕಾಗಿತ್ತು. ಅವತ್ತು ಏಕಾದಶಿ ಎಂಬುದನ್ನು ಹಲವರು ಮರೆತಿರಬಹುದು. ರಾತ್ರಿ ಕಥೆಗಾರರ ಭೋಜನ ಕೂಟದ ಔತಣವೇ ಇದಕ್ಕೆ ಕಾರಣವಾಗಿರಬಹುದು. ಅಧ್ಯಕ್ಷರೂ ಈಗಿನ ಕಥೆಗಾರರಿಗೆ ಕೆಲವು ಅಮೂಲ್ಯವಾದ ಸೂಚನೆಗಳನ್ನಿತ್ತು, ತಾವೇ ರಚಿಸಿದ್ದ ಕೆಲಪದ್ಯಗಳನ್ನು ಹಾಡಿ, ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

* * *

ಸಮ್ಮೇಳನ ಒಟ್ಟಿನಲ್ಲಿ ಯಶಸ್ವಿಯಾಗಿ ನಡೆಯಿತು. ಪರಿಷನ್ಮಂದಿರದಲ್ಲಿ– ನಾಡಿನಲ್ಲಿ– ಇಂತಹ ಸಮ್ಮೇಳನಗಳು ಅನೇಕ ಸಲ ಸೇರಲಿ, ಕನ್ನಡಿಗರಿಗೆ ಆನಂದವೀಯಲಿ, ಕನ್ನಡ ನುಡಿಯ ಸೊಬಗು, ಪರಿಮಳ ಎಲ್ಲೆಲ್ಲೂ ತುಂಬಲಿ.

ಕನ್ನಡ ಕೀಜೆ! ಕನ್ನಡ ಕೀಜೆ!
ಒಂದೇ ಕನ್ನಡಂ!!

ದಿ ಯುನೈಟೆಡ್ ಕರ್ನಾಟಕ ಇನ್ಶೂರನ್ಸ್ ಕಂಪನಿ, ಲಿಮಿಟೆಡ್

[illegible] ಧಾರವಾಡ.

★ [illegible]

★ [illegible] (Valuation) [illegible]

★ [illegible] (Claim) [illegible]

★ [illegible]

[illegible]

The United Karnatak Insurance Co. Ltd., DHARWAR.

[illegible]

ಧಾರವಾಡ [illegible]

[illegible]

JAYANTI March 1940 R. No. B. 4116

It is Wise to Advertise

IN

JAYANTI

Because

- ★ Jayanti is the Leading Kannada Magazine.
- ★ Jayanti reaches all parts of Karnatak.
- ★ Jayanti is read in all the towns of Karnatak.
- ★ Jayanti is the delight of all classes of readers.
- ★ Jayanti is a Monthly run on Sound and Modern Lines.
- ★ Jayanti stands for High Quality.

For Rates & Particulars

Apply to :—

THE MANAGER JAYANTI, DHARWAR

Printer A. R. Bhise Karnatak Printing Works, Dharwar Edited and published by M. G. Patil at the Jayanti Office Dharwar

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ ...... ವ್ಹಿ. ಪಿ. ಯಿಂದ ೩-೫-೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು **ಬೆಟಗೇರಿ ಕೃಷ್ಣಶರ್ಮರು**

೩ನೆಯ ವರ್ಷ	ಎಪ್ರಿಲ ೧೯೪೦	೧೨ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಬುಡುಬುಡುಕೆಯ ಭವಿಷ್ಯ (ವಿಚಾರತರಂಗ)	ಸಾಮಾಜಿಕ	೭೪೭
ಜಯವಾಗುತ್ತೈತಿ (ರೇಖಾಚಿತ್ರ)	ಶ್ರೀ. ಆಳಂದೀಕರ ಗುಬಬುಗರ್	೭೪೭
ಸಂಪಾದಕೀಯ (ಜಯಂತಿಯ ೩ನೆಯ ವರ್ಷ)	ಸಂಪಾದಕರು	೭೪೮
ಮಂಗನ ಮಲ್ಲಿನಾಥತನ	ಶ್ರೀ. ' ಮಲ್ಲಿನಾಥ '	೭೪೯
ಯೋಗ್ಯತೆಯುಳ್ಳ ಯುದ್ಧಸಚೀವ (ವ್ಯಕ್ತಿಪರಿಚಯ) ..	ಶ್ರೀ. ' ಜಾರ್ಮನಿಯ ಹೆಜ್ಜೇಶ್ '	೭೫೧
ಶಿವಮಂತ್ರ (ಕವಿತೆ)	ಶ್ರೀ. ಕುಲಕರ್ಣಿ ದತ್ತ, ಮುಂಬೈ	೭೫೪
ಕವಳೀಹಣ್ಣು (ಸಣ್ಣಕತೆ)	ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.	೭೫೫
ಸಾಮ್ಯುಜೀವನ (ಪರಿಸ್ಥಿತಿ ಪರಿಚಯ)	ಪ್ರೊ. ಎಸ್.ಎಮ್. ಕುಲಕರ್ಣಿ, ಎಂ. ಎ.	೭೫೯
ನನ್ನಾಕೆ (ಕವನ)	ಶ್ರೀ. ಬಿ. ಎಸ್. ಶ್ರೀನಿವಾಸಮೂರ್ತಿ	೭೬೫
ರಣಯಂತ್ರ (ಏಕಾಂಕ ನಾಟಕ)	ಶ್ರೀ. ಬಿ. ಆರ್. ಸುಬ್ಬರಾವ್	೭೬೬
೧೮೩೬ರಲ್ಲಿ ಕರ್ನಾಟಕ ಏಕೀಕರಣದ ವಿಚಾರ (ಐತಿಹಾಸಿಕ) ..	ಶ್ರೀ. ಬೆಂಗೇರಿ ಪ್ರಲ್ಹಾದರಾಯರು	೭೭೦
ಕನಕರಾಯನ ಕಾಯಕ (ಪತ್ತೇದಾರಿ ಕಥೆ)	ಡಾ. ಎಚ್. ಬಿ. ಕೊಣ್ಣೂರ, ಎಲ್.ಸಿ.ಪಿ.ಎಸ್.	೭೭೩
ಸಮಾಜದ ಆವಶ್ಯಕತೆಯೂ ನಮ್ಮ ವಿವಾಹ ವ್ಯವಸ್ಥೆಯೂ (ವಿ.ಪ್ರ.)	ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ	೭೭೬
ಹೊಂಗರುಳು (ಸಣ್ಣಕತೆ)	ಶ್ರೀ. ಜಿ. ಹೆಚ್. ದೇಸಾಯಿ, ಬಿ. ಎ.	೭೮೦
ಮೌಲಾನಾ ಅಬುಲ್ ಕಲಾಮ್ ಆಜಾದ (ವ್ಯಕ್ತಿಪರಿಚಯ) ..	ಶ್ರೀ. ' ಹರಟೆಯ ಮಲ್ಲ '	೭೮೮
ಸಾದರಸ್ವೀಕಾರ	.. ..	೭೯೪
ಪುಸ್ತಕವಿಮರ್ಶೆ	ಬೇರೆ ಬೇರೆ ವಿಮರ್ಶಕರು	೭೯೫
ನಗೀಗೆ ನೇವಿದ್ಯ	ಶ್ರೀ. ' ನಕಲೀ ನಾರಾಯಣಾಚಾರಿ '	೭೯೮
ನಾಲ್ವಾ ನಿಟ್ಟಿನ ನೋಟ	' ನಿರೀಕ್ಷಕರು '	೭೯೯

ಸಂಚಿಕೆ ೧೨

ವರ್ಷ ೨



ಎಪ್ರಿಲ್

೧೯೪೦

ಜಯವಾಗುತ್ತೈತಿ, ಜಯವಾಗುತ್ತೈತಿ !!

"ಬಸಿರಿದ್ದಾಕಿ ಹಡೆದಾಳಣ್ಣಾ ಹಡೆದಾಳು ! ಮೊಸರಿದ್ದಾಕಿ ಕಡೆದಾಳಣ್ಣಾ ಕಡೆದಾಳು ! ಜಲವಿದ್ದಾತ ಕುಡಿದಾನಯ್ಯಾ ಕುಡಿದಾನು! ಬಲವಿದ್ದಾತ ಬಡಿದಾನಯ್ಯಾ ಬಡಿದಾನು ! ಬುಡ್‌ಬುಡುಬುಡಕ್ !

ಬುಡುಬುಡಿಕೆಯ ಭವಿಷ್ಯ

ಹಾಲಕ್ಕಿಯಿರುವ ಮೂಲೆಗಳನ್ನು ಸುತ್ತಿ ಸುತ್ತಿ ಭವಿಷ್ಯವರಿಯಲು ಬಾಯಿಬಿಡುತ್ತಿರುವ ಬುಡುಬುಡಿಕರಣ್ಣಾ, ಬರಡುಗೆಲಸವಿದೇನ ನಡೆಯಿಸಿರುವೆ? ಹಾಲಕ್ಕಿ ಉಲಿಯುವುದೇಕೆ? ಹೊಟ್ಟೆಗೆ ಸಿಕ್ಕದಿರುವಾಗ ಅಳಲಿ ಬಲಗುಂದಿ ಕಲಕಲಿಸುತ್ತಿದ್ದೀತು; ಹೊಟ್ಟೆ ತುಂಬಿರುವಾಗ ಒಡನಾಡಿಗಳೊಂದಿಗೆ ಒಲವಿನಿಂದ ಕಿಲಕಿಲಿಸುತ್ತಿದ್ದೀತು. ತನ್ನ ಅಳಲನ್ನೊ ನಲವನ್ನೊ ಹೊರಹೊಮ್ಮಿಸುತ್ತಿರುವ ಹಕ್ಕಿಯ ಹಾಡಿನಲ್ಲಿ, ಬರುವಕಾಲದ ಕತೆಯೇನಿದ್ದೀತು ಮರುಳ! ಇರುಳ ಕೊನೆಯ ಈ ತನಿವೇಳೆಯನ್ನು ನಿನ್ನ ಬರುದನಿಯ ಬುಡುಬುಡುಕೆಯಿಂದಲೂ ಬಿರುದನಿಯ ಬಡಬಡಿಕೆಯಿಂದಲೂ ಏತಕ್ಕೆ ಕಹಿಗೊಳಿಸುತ್ತಿರುವೆ?

ಭವಿಷ್ಯದ ಒಳಿತು-ಕೆಡಿತುಗಳು ಹಕ್ಕಿಯ ಚಿಲಿಪಿಲಿಯಲ್ಲಿಲ್ಲ, ಹಲ್ಲಿಯ ಲೊಟಲೊಟದಲ್ಲಿಲ್ಲ, ನರಿ-ನಾಯಿಗಳ ಊಳ್ಕೆಯೊಳಿಲ್ಲ. ನಿನ್ನ ನುಡಿಯಲ್ಲಿದೆ, ನಡೆಯಲ್ಲಿದೆ. ನಿನ್ನ ಕಲ್ಪನೆಯಲ್ಲಿದೆ, ಕನಸಿನಲ್ಲಿದೆ. ನಿನ್ನ ಗಯ್ಮೆಯಲ್ಲಿದೆ, ಕೆಯ್ಮೆಯಲ್ಲಿದೆ. ಗುರಿಯೊಂದನ್ನು ಗೊತ್ತುಮಾಡಿ, ತಾಗು-ಬಾಗು-ತೊಂದರೆಗಳಿಗೆ ತಡೆದು ನಿಲ್ಲದೆ ಮುಂದಡಿಯಿಡುತ್ತಿದ್ದರೆ, ಭವಿಷ್ಯ ಒಳಿತಿನದಾಗಬಲ್ಲುದು. ನಿರಿ–ಗುರಿಗಳಿಲ್ಲದೆ, ಬಂದ ತೊಂದರೆಗಳಿಗೆ ಬಾಯ್‌ಬಿಡುತ್ತ ನಿಂದಲ್ಲಿ ನಿಂದುಬಿಟ್ಟರೆ ಭವಿಷ್ಯ ಖಂಡಿತ ಕೆಡುಕಿನದು.

ನಮ್ಮ ಭವಿಷ್ಯಕ್ಕೆ ನಮ್ಮ ವರ್ತಮಾನವೆ ಪ್ರಚೋದಕ! ನಮ್ಮ ಕೈ-ಕಾಲು–ಮೈ-ಮನಸುಗಳ ತಕ್ಕುಮೆಯರಿತ ಅಲುಗಾಟವು ಒಳ್ಳೆಯ ಭವಿಷ್ಯವನ್ನು ಕೈಹಿಡಿದು ಕರೆದುತರಬಲ್ಲದು. ಕೀಳುಗರಗಳನ್ನು ಊಳಿಗದಾಳುಗಳನ್ನಾಗಿಸಬಲ್ಲದು. ಇದಕ್ಕೆ ಬುಡುಬುಡಿಕನ ಭವಿಷ್ಯದ ಬರುವಾಸೆ ಬೇಕಿಲ್ಲ. ಕಾಲಪುರುಷ ಕರ್ಮದ ಜೀತಗಾರನೆಂಬುದರ ಅರಿವಿರಲಿ ಬುಡುಬುಡಿಕ! ಭವಿಷ್ಯದ ಬರಡುಮಾತುಗಳಿಂದ ಲೋಕವನ್ನು ಕುರುಡುಗೊಳಿಸಬೇಡ! ವರ್ತಮಾನದ ಕರ್ತವ್ಯವನ್ನೊರೆದೊರೆದು ಎಚ್ಚರಿಸು ಅರಿವನ್ನು! ಅದಕ್ಕಾಗಿ ಬಾರಿಸು ಬಾರಿಸು ನಿನ್ನ ಬುಡುಬುಡಿಕೆಯನ್ನು!

—ಸಾಮಾಜಿಕ



ಜಯಂತಿಯ ೨ನೆಯ ವರ್ಷ

ಕರ್ನಾಟಕದ ಭಾಗ್ಯನಿಧಾತನ ಅಪೇಕ್ಷೆಯಂತೆ ಜಯಂತಿ ತನ್ನ ಎರಡನೆಯ ವರ್ಷವನ್ನು ಮುಗಿಸಿತು. ಮೂರನೆಯ ವರ್ಷದಲ್ಲಿ ಇನ್ನೂ ಉತ್ಸಾಹದಿಂದ ಅಡಿಯಿಡಲು ಅದು ಸಂಕಲ್ಪಮಾಡಿದೆ. ಇದನ್ನು ನೋಡಿದ ಅನೇಕರು ಎಂದುಕೊಳ್ಳುತ್ತಿರಬಹುದು : ಜಯಂತಿಯ ಜೀವನ ಸುಖವಾಗಿ ನಡೆದಿದೆಯೆಂದು. ಆದರೆ ವಸ್ತುಸ್ಥಿತಿ ಅದಕ್ಕೆ ತೀರ ವಿಪರೀತವಾಗಿದೆ. ಜಯಂತಿಗೆ ಬಾಲಾರಿಷ್ಟದ ಭೀತಿಯಿನ್ನೂ ತಪ್ಪಿಲ್ಲ. ಪಶ್ಚಿಮಖಂಡದಲ್ಲಿ ನಡೆದ ಪ್ರಲಯವು ಜಯಂತಿಯ ದಾರಿಯಲ್ಲಿ ಮುಳ್ಳುಗಳನ್ನು ಹಾಸುತ್ತಲೆ ಹೊರಟಿದೆ. ನಿರ್ವಾಕ್ಷಿಣ್ಯವಾದ ರಾಜಕೀಯ ಅಭಿಪ್ರಾಯವುಳ್ಳ ಜಯಂತಿಗೆ, ಭಾರತದ ಸ್ವಾತಂತ್ರ್ಯ ಚಳವಳಿಯ ಭವಿಷ್ಯತ್ತೂ ಎಂತೆಂತಹ ಸಂದರ್ಭಗಳನ್ನು ತಂದೊದವಿಸುವುದೇನೊ! ಇದಾವುದಕ್ಕೂ ಜಯಂತಿ ಬೆದರದು. ಕನ್ನಡಿಗರ ಮಮತೆಯ ದೃಷ್ಟಿ ತನ್ನ ಕಡೆಗಿದೆಯೆಂದು ಅದಕ್ಕೆ ಎನಿಸಿದರೆ ಎಂತಹ ಗಂಡಾಂತರಗಳನ್ನೂ ಗಂಡೆದೆಯಿಂದದು ಕಡೆಗಣಿಸಿ ಮುಂದುವರಿಯಬಲ್ಲುದು. ಆದರೆ ಅದು ಇದೆಯೆಂಬ ನಂಬುಗೆ ಇದುವರೆಗೂ ಜಯಂತಿಗೆ ಉಂಟಾಗಲೊಲ್ಲದು. ಕನ್ನಡಿಗರ ಔದಾಸೀನ್ಯವೆ ಅದಕ್ಕೆ ಬಾಲಾರಿಷ್ಟದ ಭೀತಿಯನ್ನು ಆಗಾಗ ಜ್ಞಾಪಕಕ್ಕೆ ತಂದುಕೊಡುತ್ತಿದೆ. ಆದರೂ ಆ ಔದಾಸೀನ್ಯವನ್ನು ತನ್ನ ಕಾರ್ಯದ ಮೂಲಕ ಹರಿಯುವ ಭರವಸೆಯಿಂದಲೆ ಎಂತಹ ಆರ್ಥಿಕನಷ್ಟವನ್ನು ಅನುಭವಿಸುತ್ತಲಿದ್ದರೂ ಜಯಂತಿ ಮತ್ತೆ ತನ್ನ ಕಾರ್ಯಕ್ಷೇತ್ರದ ಮೇಲೆ ಸೊಂಟ ಬಿಗಿದು ಹೊರಟಿದೆ.

ಯುದ್ಧದ ಮೂಲಕ ಮುದ್ರಣ ಸಲಕರಣೆಗಳ ದರವು ಸಾಕಷ್ಟು ಏರಿನಿಂತಿದ್ದರೂ, ಜಯಂತಿ ತನ್ನ ವಾಚಕರಿಗೆ ಸುಮ-ಸುಮಾರು ಕಳೆದ ವರ್ಷದಷ್ಟೇ ಓದುವ ಪುಟಗಳನ್ನು ಸಲ್ಲಿಸಿರುವುದು. ಸಂದರ್ಭಚಿತ್ರಗಳ ಸಂಖ್ಯೆ ಕಳೆದ ಸಲಕ್ಕಿಂತ ಸ್ವಲ್ಪ ಹೆಚ್ಚಾಗಿಯೆ ಇದೆಯಲ್ಲದೆ ಕಡಮೆಯಿಲ್ಲ. ಈ ಸಲ ಕೊಟ್ಟ ಲೇಖನಗಳನ್ನು ವಿಭಾಗಿಸಿ ನೋಡಿದರೆ ೪೮ ಸಣ್ಣಕತೆ, ೫ ಏಕಾಂಕನಾಟಕ, ೧೩ ವ್ಯಕ್ತಿಪರಿಚಯ' ೧೪ ಹಾಸ್ಯಪ್ರಬಂಧ, ೪೨ ಕವನ, ೧೭ ರಾಜಕೀಯ ವಿಷಯಾತ್ಮಕ ಲೇಖನ, ೫ ಪ್ರದೇಶ ಪರಿಚಯಾತ್ಮಕ ಲೇಖನ (ಇದರಲ್ಲಿ ‘ ನನ್ನ ದಕ್ಷಿಣಹಿಂದುಸ್ಥಾನದ ಯಾತ್ರೆ’ ಎಂಬುದು ಅನೇಕ ಲೇಖಾಂಕಗಳಲ್ಲಿ ಬಂದಿದೆ.) ೩ ವೈಜ್ಞಾನಿಕ ಲೇಖನ (ಇದರಲ್ಲಿ ‘ಜ್ಯೋತಿಶ್ಶಾಸ್ತ್ರ’ ? ಎಂಬುದು ೩-೪ ಲೇಖಾಂಕಗಳಲ್ಲಿ ಪ್ರಕಟವಾಗಿದೆ), ೧೮ ಸಾಮಾಜಿಕ ಸಮಸ್ಯಾತ್ಮಕ ಲೇಖನ, ೧೩ ಕರ್ನಾಟಕದ ಚಳವಳಿಗೆ ಸಂಬಂಧಿಸಿದ ಲೇಖನ, ೧೧ ಹೊಲಿಗೆಯ ಸಂಬಂಧದ ಲೇಖನ ಹೀಗೆ ಎಣಿಕೆಗೊಳ್ಳುವುವು. ಇವುಗಳಲ್ಲದೆ ೪೦ಕ್ಕಿಂತ ಹೆಚ್ಚಿನ ಆಧುನಿಕಗ್ರಂಥಗಳ ವಿಮರ್ಶೆ ಪ್ರಕಟವಾಗಿವೆ. ‘ ಮಂಗನ ಮಲ್ಲಿನಾಥತನ’ ‘ ನಾಲ್ಕೂ ನಿಟ್ಟಿನ ನೋಟ ’ಗಳೂ ತಮ್ಮ ಅಭಿಪ್ರಾಯಗಾಂಭೀರ್ಯವನ್ನು ತೋರಿಸುತ್ತ ಸುಮಾರು ೬೦–೮೦ ಪುಟಗಳನ್ನು ಒಳಗೊಂಡಿರುವುವು. ‘ ನಗೀಗೆ ನೇವೇದ್ಯ ’ ೨೦–೨೧ ಪುಟಗಳಷ್ಟಿದೆ.

ಜಯಂತಿಯ ಕಾರ್ಯವನ್ನು ಮೆಚ್ಚಿ ಹೊಗಳುವವರು ಅನೇಕರು. ಅದರಲ್ಲಿಯ ಲೇಖನಗಳು ಇನ್ನೂ ಸುಂದರವಾಗಿ ಬರಬೇಕೆಂದು ಹಿತ-ಸೂಚನೆಗಳನ್ನು ಮಾಡಿದವರೂ ಕೆಲವರಿರುವರು. ಇಂತಹ ಸೂಚಕರಲ್ಲಿ ಹೆಚ್ಚಿನವರು ಅಪೇಕ್ಷಿಸುವುದು ಕತೆಗಳು ಇನ್ನೂ ಚೆನ್ನಾದುವು ಬರಬೇಕೆಂದು. ಚೆನ್ನಾದುವುಗಳನ್ನೆ ಕೊಡಬೇಕೆಂಬ ಅಪೇಕ್ಷೆ ನಮಗೂ ಇಲ್ಲದೆ ಇಲ್ಲ. ಆದರೆ ಜಯಂತಿ ಇನ್ನೊಂದು ಉದ್ದೇಶವನ್ನಿಟ್ಟುಕೊಂಡಿದೆ. ಅದಾವುದೆಂದರೆ ಹೊಸ ಹೊಸ ಲೇಖಕರನ್ನು ನಿರ್ಮಾಣಗೊಳಿಸುವುದು. ಒಳ್ಳೆಯ ಕತೆಗಳಿಂದು ಈಗ ಹೆಸರುಹೊಂದಿದವರ ಕತೆಗಳನ್ನಷ್ಟೆ ಕೊಡುತ್ತ ಹೋದರೆ ತರುಣರ ಕತೆಗಳು ಒಳ್ಳೆಯವೆನಿಸಿಕೊಳ್ಳಲು ಅವಕಾಶವು ಹೇಗೆ ದೊರೆಯಬೇಕು ? ಜಯಂತಿಯ ಉದ್ದೇಶ ತರುಣಲೇಖಕರನ್ನು ನಿರ್ಮಾಣಗೊಳಿಸುವುದಿದ್ದರೂ, ಕೈಗೆಬಂದ ಲೇಖನಗಳನ್ನದು ಹಾಕುತ್ತಿಲ್ಲವೆಂಬುದನ್ನು, ನಮ್ಮಲ್ಲಿ ಬಂದು ೧೦೦ಕ್ಕೆ ೮೦–೯೦ರಂತೆ ನಿರಾಕೃತವಾಗಿ ಹೋಗುವ ಲೇಖನಗಳಿಂದ ಯಾರೂ ಗೊತ್ತುಮಾಡಿಕೊಳ್ಳಬಹುದು.

ಹೊಸ ವರ್ಷ

ಈ ವರ್ಷ ಜೀವನೋಪಯುಕ್ತವಾದ ಇನ್ನೂ ಅನೇಕ ವಿಷಯಗಳನ್ನು ಕೊಡಬೇಕೆಂದಿದ್ದೇವೆ. ಸ್ತ್ರೀಯರ ಶರೀರ ವ್ಯಾಯಾಮವನ್ನು ಕುರಿತ ಸಚಿತ್ರಲೇಖನಮಾಲೆಯನ್ನು ಹೊಸ ಸಂಚಿಕೆಯಿಂದ ಪ್ರಾರಂಭಿಸಲಾಗುವುದು ಎಳೆಯ ವಿದ್ಯಾರ್ಥಿಗಳಲ್ಲಿ ಬರೆವಣಿಗೆಯ ಅಭಿರುಚಿ ಹೆಚ್ಚುವಂತೆ ಮಾಡಲು ‘ ಸಾಹಿತ್ಯದ ಅಭ್ಯಾಸ ’ ಎಂಬ ತಲೆಕಟ್ಟಿನ ಕೆಳಗೆ–ಪ್ರತಿ ತಿಂಗಳಲ್ಲಿಯೂ–ವಿದ್ಯಾರ್ಥಿಗಳ ಲೇಖನಗಳನ್ನು ವಿಧಾಯಕ ವಿಮರ್ಶಾ ಸಹಿತವಾಗಿ ಪ್ರಕಟಿಸಲಾಗುವುದು.

ನಮ್ಮಲ್ಲಿ ಬರುವ ಸಂದರ್ಭ ಚಿತ್ರಗಳ ವಿಚಾರದಲ್ಲಿ ಮಿಕ್ಕವರಂತೆ ನಾವೂ ಅಸಂತುಷ್ಟರು. ಶ್ರೀಮಾನ್ ಬಾಬ್ಲೀ, ಶ್ರೀಮಾನ್ ಆಳಂದೀಕರ್ ಅವರ ಚಿತ್ರಗಳು ಬಹುಜನರಿಗೆ ಮೆಚ್ಚಿಕೆಯಾಗಿವೆಯಾದರೂ ಅವರು ತುಂಬ ದೂರದಲ್ಲಿರುವುದರಿಂದ ಸಮಯಕ್ಕೆ ಸರಿಯಾಗಿ ಅವರಿಂದ ಚಿತ್ರಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೂ ಈ ಸಲ ಅವರಿಂದ ಇನ್ನೂ ಹೆಚ್ಚಾಗಿ ಚಿತ್ರಗಳನ್ನು ತರಿಸಿಕೊಳ್ಳುವ ಏರ್ಪಾಡಿನಲ್ಲಿದ್ದೇವೆ. ಅಲ್ಲದೆ ಮಹಾರಾಷ್ಟ್ರದ ‘ ಕಿರ್ಲೋಸ್ಕರ ’ ಮಾಸಪತ್ರಿಕೆಯಲ್ಲಿ ಆಗಾಗ ಪ್ರಸಿದ್ಧವಾಗುತ್ತಿರುವ ಚಿತ್ರಗಳ ಕರ್ತೃಗಳಾದ ಶ್ರೀಮಾನ್ ಎಸ್. ಎನ್. ಕುಲಕರ್ಣಿಯವರೂ ನಮ್ಮ ಚಿತ್ರಕಾರರಾಗಲು ಒಪ್ಪಿಕೊಂಡಿದ್ದಾರೆ. ಹೊಸ ವರ್ಷದ ಮೊದಲನೆಯ ಸಂಚಿಕೆಯಲ್ಲಿಯೆ ಅವರ ಸುಂದರ ಚಿತ್ರಗಳನ್ನು ನಮ್ಮ ವಾಚಕರು ಕಾಣಬಹುದು.

ಕೃತಜ್ಞತೆಗಳ ಸಲುವಳಿ

೨ನೆಯ ವರ್ಷ ಯಶಸ್ವಿಯಾಗಿ ಕೊನೆಗೊಳ್ಳುವುದಕ್ಕೆ ಅನೇಕ ಮಹನೀಯರ ನೆರವು ಕಾರಣವಾಗಿದೆ. ಜಯಂತಿಯ ಸಮಯ-

(೬೫೩ ನೆಯ ಪುಟ ನೋಡಿ)

೧. ಕಾಂಗ್ರೆಸಿನ ಮಂಗಸುದ್ದಿಗಳು

೧. ಈ ಸಲ ಕಾಂಗ್ರೆಸಿನ ಅಧಿವೇಶನದಲ್ಲಿ ಒಂದೇ ಒಂದು ಗೊತ್ತುವಳಿ ಚರ್ಚೆಗೆ ಬಂದುದು ತೀರ ಅವ್ಯವಹಾರ್ಯವಲ್ಲವೆ- ಎಂದು ವಾಚಕರೊಬ್ಬರು ಕೇಳಿದ್ದಾರೆ. ಅಹುದು, ಮಂಗರಾಯನಿಗೂ ಈಗ ಸಂದೇಹ ಉಂಟಾಗುತ್ತಿದೆ. ಅಧ್ಯಕ್ಷರನ್ನು ಸೂಚಿಸುವ, ಆನೇಕರ ಆಭಾರ ಮನ್ನಿಸುವ ಮುಂತಾದ ಗೊತ್ತುವಳಿಗಳನ್ನು ಮುಂದಿನ ವರ್ಷದ ಅಧಿವೇಶನಕ್ಕೆ ದೂಡಿರಬಹುದೆ? ಇಲ್ಲವೆ ದೇವನ ನಾಮೋಚ್ಚಾರದಿಂದ ಪಾಪ ಹಿರುವಂತೆ ಗಾಂಧಿಯವರ ನೇತೃತ್ವದಲ್ಲಿ ಎಲ್ಲ ಅಕ್ರಮ-ಅಸಂಭವನೀಯಗಳೂ ಹಾರುವುವೊ? ಹಾಂ-ಹಾಂ! ದೇವನ ನಾಮೋಚ್ಚಾರ ಎಂದ ಮಾತ್ರಕ್ಕೆ ಮಂಗರಾಯನಿಗೆ ಸ್ಫೂರ್ತಿಸ್ಮರಣೆಯಾಯಿತು. ಆಗಬಾರದೇಕೆ? ಸಾಕ್ಷಾತ್ ರಾಮಗಢದಲ್ಲಿ ಅಧಿವೇಶನ! ಒಂದೇ ಮಾತು, ಒಂದೇ ಬಾಣ, ಒಂದೇ ಹೆಂಡತಿ- ರಾಮನಿಗೆ; ಒಂದೇ ಗೊತ್ತುವಳಿ ರಾಮಗಢದ ಅಧಿವೇಶನಕ್ಕೆ! ಅಹುದೊ? ಅಲ್ಲೊ? ಇವುಗಳಲ್ಲಿ ಒಂದೇ ಮಾತ್ರಂ!

೨. ಅಧಿವೇಶನದ ಕಾಲಕ್ಕೆ 'ಭಾರಿ' ಮಳೆ ಸುರಿಯಿತಂತೆ. 'ಇದರಿಂದ ಮುಂದಿನ ಹೋರಾಟದಲ್ಲಿ ಭಾಗವಹಿಸಬೇಕೆನ್ನುವವರ ಸತ್ತ್ವಪರೀಕ್ಷೆಯಾಯಿತು' ಎಂದು ಮಹಾತ್ಮರು ಅಸೋಸಿಯೇಟೆಡ್ ಪ್ರತಿನಿಧಿಗೆ ಹೇಳಿದರಂತೆ. ಆದರೆ ವಿಶೇಷ seated ಮಂಗರಾಯನಿಗೂ ಒಂದು ಅಭಿಪ್ರಾಯ ಹೊಳೆದಿದೆ. ಅದೇನೆಂದು ಕೇಳುವಿರಾ? ಕೇವಲ ಮಹಾತ್ಮರಲ್ಲಿಯೆ ವಿಶ್ವಾಸವನ್ನಿಟ್ಟು ಕೊಡೆಯನ್ನು ತಾರದವರ ಸರ್ವಾಂಗ ಸತ್ತ್ವ-ಪರೀಕ್ಷೆಯಾಯಿತು ಎಂದು—ಅಥವಾ—ಬೋಲೋ ಸುರಿಮಳೆಮಾತಕೀ ಜೈ!

* * *

೨. ಅಧುನಿಕ 'ಬೆ (=ಇಲ್ಲ) ದಿಲ್ (=ಹೃದಯ) ಶಾಹಿ'

೧ ಕಳೆದ ತಿಂಗಳ ಸಮ್ಮೇಲನಕ್ಕಾಗಿ ವಾರ್ಷಿಕ ಸ್ನೇಹವುಳ್ಳ ಕೆಲ 'ಅಖಿಲ ಕರ್ನಾಟಕಸ್ಥ ಮತ್ತು ಸಂಲಗ್ನ ಪ್ರಾಂತದಲ್ಲಿಯ ಮರಾಟಿಗರು' ವಿಜಾಪುರದಲ್ಲಿ ಸಮ್ಮಿಲಿತರಾಗಿ, ಪರಸ್ಪರ ತೆಕ್ಕೆ ಬಿದ್ದು, 'ಗೊಳೊ' ಗೊತ್ತುವಳಿಗಳನ್ನು ಸ್ವೀಕಾರ ಮಾಡಿದರು. ಸಮ್ಮೇಲನದ ಹೆಸರಿನಲ್ಲಿ 'ಸ್ನೇಹ' ಎಂಬ ಶಬ್ದವಿದ್ದ ಮಾತ್ರಕ್ಕೆ ಇವರಿಗೆ ಹೃದಯವಿದೆ ಎಂದು ಯಾರಾದರೂ ತರ್ಕ ಹೂಡಬಹುದು; ಆದರೆ ಇದು ನೋಡಿರಿ ಸ್ವಾಗತಾಧ್ಯಕ್ಷರ ತರ್ಕ! 'ನಾವು ಕರ್ನಾಟಕದಲ್ಲಿ ಇರುವವರಿದ್ದೇವೆ. ಅಂದಬಳಿಕ ನಮಗೆ ಕನ್ನಡ ಬರಲಿಕ್ಕೆ ಬೇಕು. ಆದರೆ ನಮ್ಮ ಮಕ್ಕಳ ಮೇಲೆ ಒತ್ತಾಯ ಬೇಡ'! ಯಾಕೆ? ಅಂದರೆ, ಅರ್ಥಾತ್, ಮಕ್ಕಳು ಕರ್ನಾಟಕದಲ್ಲಿ ಇರುವವರಲ್ಲವೆಂದೊ? ಹೀಗೆ ಸಂಸಾರ ನಡೆಯಿಸುವುದು ಮಾರವಾಡಿಗಳಿಗೆ ಶಕ್ಯ ಎಂದು ಇದುವರೆಗೆ ಮಂಗರಾಯನ ಕಲ್ಪನೆ ಇದ್ದಿತು. ಮಹಾರಾಷ್ಟ್ರೀಯರ ನಿಷ್ಕಾಮಕರ್ಮದ ಈ ಸಹೋಸ್ತ್ರರೂಪ-ಶಾಂತಂ ಪಾಪಂ, ಹರಹರ ಮಹಾದೇವ,ಮಹಾರಾಷ್ಟ್ರೀಯಾನಾ ಬುದ್ಧೀ ದೇವ!

೨. ಇದೇ ಸಮ್ಮೇಳನದಲ್ಲಿ ಬೆಳಗಾಂವಿಯ ಲೋಕಲ್ ಬೋರ್ಡಿನ ಧಿಕ್ಕಾರದ, ಮ್ಯುನಿಸಿಪಾಲಿಟಿಯ ಸತ್ಕಾರದ (ಕನ್ನಡ ಕಲಿಸಬಾರದೆಂಬುದಕ್ಕೆ!) ಗೊತ್ತುವಳಿಗೆ ಅನುಮೋದನ ಕೊಟ್ಟವರು ಶ್ರೀ. ಶಂಕರರಾವ ಜೋಶಿಯವರಂತೆ! 'ಕನ್ನಡದ ಮುಟ್ಟ'ನ ಜೋಶಿ ಶಂಕರರಾಯರೆತ್ತ? ಕರ್ನಾಟಕದಲ್ಲಿ ಹುಟ್ಟಿದರೂ ತಾವು ಕನ್ನಡಿಗರಲ್ಲನೆಂಬ ಶಂಕರರಾವ ಜೋಶಿಯವರು ಎತ್ತ? ಹೆಸರಿನೊಡನೆ ಬುದ್ಧಿಯೂ ವಿಪರ್ಯಸ್ತವಾಗುವುದೇದು ಮಂಗರಾಯನಿಗೂ ಹೊಳೆದಿರಲಿಲ್ಲ.

ಕೊನೆಯುಚ್ಚು:— ಬೆಳಗಾಂವಿ ಮ್ಯುನಿಸಿಪಲ್ ಸ್ಕೂಲುಗಳಲ್ಲಿ ಕನ್ನಡವನ್ನು ಕಲಿಸತಕ್ಕದ್ದಲ್ಲವೆಂಬ ಹಟವನ್ನು ಸಾಧಿಸಿ ಹೆಸರಾದ, ಕಾಂಗ್ರೆಸ್ ಮುಂದಾಳುಗಳಾದ ಶ್ರೀ. ಪ್ರೊತ್ತಾರ ಭೀಮರಾಯರು-ಏನು ಶ್ರೀ ಭೀಮಕರ ಪ್ರೋತ್ಸಾಹರಾವರೊ?-ಮುಂಬಯಿ ಮೇಲ್ಮನೆಯಿಂದ ಕೆಳಗುರುಳಿದರು-ಅರ್ಥಾತ್ ಕೌನ್ಸಿಲಿನ ಚುನಾವಣೆಯಲ್ಲಿ ಪರಾಜಿತರಾದರು. ಅದಕಾಗಿಯೆ ಹೇಳುವುದು 'ನಮ್ಮ ಮಕ್ಕಳಿಗೆ ಒತ್ತಾಯ ಬೇಡ' ಎಂದು.

* * *

೩. ಕಂಟಕಂ ಕಂಟಕೇನೈವ

'ಕಾಂಗ್ರೆಸ್ ಮಂತ್ರಿಮಂಡಳದ ಆಳಿಕೆಯಲ್ಲಿ ಜಾತೀಯ ಭಾವನೆಯು ಬೆಳೆಯಿತೆಂಬ ಆರೋಪವು ಕೆಲಮಟ್ಟಿಗೆ ನಿಜವಿರುತ್ತದೆಂಬುದನ್ನು ಒಪ್ಪಲೆಬೇಕು' ವಾಚಕರೆ, ಮೇಲಿನ ವಾಕ್ಯವು ಪ್ರತಿಯೊಂದಕ್ಕೆ ಹಲ್ಲು ಕಿರಿಯುವ ಸ್ವಭಾವದವನಾದ ಮಂಗರಾಯನದು ಎಂದು ತಟ್ಟನೆ ತರ್ಕಕ್ಕೆ ಜಿಗಿಯಬೇಡಿರಿ. ನೀವೆಲ್ಲರೂ ದಿಕ್ಕುಗೆಟ್ಟು, ಬಾಯ್ಬಿಟ್ಟು, ಆಶ್ಚರ್ಯಭಸ್ಮೀಭೂತರಾಗುವುದಿಲ್ಲವೆಂದು ವಚನಕೊಟ್ಟರೆ ಮಂಗರಾಯನು ಈ ವಾಕ್ಯದ ಆಧಾರವನ್ನು ಹೇಳುವನು. Ready? ಮೂಗು-ಮುಚ್ಚಿದಿರಾ? ಒನ್, ಟು, ಥ್ರೀ! ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ, ದಿ ಲೀಡಿಂಗ್ ಕನ್ನಡ ಡೇಲೀ ಎಂದು ಹೆಸರಾಗಿ, ನಮ್ಮ ಪ್ರಾಂತದಲ್ಲಿ ಕಾಂಗ್ರೆಸಿನ ಕೀರ್ತಿಯ ಗುತ್ತಿಗೆಯನ್ನು ಹೊತ್ತ, ಏವಂ ಗುಣ ಸಂಯುಕ್ತ ವಿಶೇಷಣವಿಶಿಷ್ಟ, ನಮ್ಮ ಒಂದೇ ಒಂದಾದ ಕನ್ನಡಪತ್ರಿಕೆಯ ತಾ॥ ೨೧-೩-೪೦ರ ಕುಶಾಗ್ರ ಲೇಖನದಿಂದ ಎತ್ತಿದೆ ಆ ಮಾತನ್ನು. ದಾನ ಕೊಟ್ಟರೆ ಧನವಂತನಾಗೆಂದೂ, ದೂರ ನೂಕಿದರೆ ದರಿದ್ರ ಜಪುಣನೆಂದೂ ಬುಡುಬುಡಿಕರು ಬಾಗಿಲಿಗೆ ಬಂದು ಬೈದು ಹೋಗುವ ಕತೆ ನೆನಪಾಗುವುದು ಮಂಗರಾಯನಿಗೆ. ಅಥವಾ ಮೇಲೆ ಕಾಣಿಸಿದ ಗಾದೆಯ ಮಾತಿನಂತೆ ಮುಳ್ಳಿನಿಂದಲೆ ಮುಳ್ಳನ್ನು ತೆಗೆಯಬೇಕಾಗುವುದೆಂದು ನಂಬಿ, ವಾಚಕರು ಆ ಇಡಿಯ ಲೇಖನವನ್ನು ಓದಬೇಕೆಂದು ಪ್ರಾರ್ಥಿಸಿ, ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ನೀರು ಸಿಂಪಡಿಸೋಣವೆ?

ಮಾದರಿಯ ಮಾತುಗಾರಿಕೆ

‘ ಸಂಸ್ಥಾನಿಕರು (ಮೈಸೂರಿನ ದೃಷ್ಟಾಂತ ವಲ್ಲ) ಹೊಣೆಗಾರಿಕೆಯ ರಾಜ್ಯಪದ್ಧತಿಯನ್ನು ಜಾರಿಯಲ್ಲಿ ತಂದರೆ ಬ್ರಿಟಿಶ ಕರ್ನಾಟಕದ ಜಿಲ್ಲೆಗಳೆಲ್ಲ ಆ ಆಧಿಪತ್ಯಕ್ಕೆ ಸೇರುವಂತೆ ನಾನು ಮನ ಒಲಿಸುವೆ ’ ಎಂದು ಶ್ರೀ. ರಾಜಗೋಪಾಲಾಚಾರಿಯವರು ಅಭಯ-ಹಸ್ತವನ್ನೆತ್ತಿದ್ದಾರೆ. ಅದಕ್ಕಾಗಿ ನಮ್ಮ ಸಾ. ಸ. ದ ಅಚಾರ್ಯರಾದ ಶ್ರೀ ಮುದವೀಡುಕೃಷ್ಣರಾಯರು ರಾಜಗೋಪಾಲಾಚಾರಿಯವರಿಗೆ ಕೈಮುಗಿದಿದ್ದಾರೆ. ಮುಗಿದ ಕೈಗಳಲ್ಲಿ ಏನನ್ನು ಮುಚ್ಚಿದೆ ಎಂದು ಅನೇಕರು ಮಂಗರಾಯನಿಗೆ ಕೇಳಿದ್ದಾರೆ. ಯಾರಿಗೆ ಗೊತ್ತು, ಬ್ರಿಟಿಶ ಹಿಂದುಸ್ತಾನದಲ್ಲಿ ಹೊಣೆಗಾರಿಕೆಯ ರಾಜ್ಯಪದ್ಧತಿ ಬರುವುದು ಅಶಕ್ಯ ಎಂದು ಇಬ್ಬರೂ ಕಾಂಗ್ರೆಸ್ ಹಿರಿಯರಿಗೆ ಮನವರಿಕೆಯಾಗಿದೆಯೆ ? ಇಲ್ಲವೆ, ಕಾಂಗ್ರೆಸಿನಲ್ಲಿ ವ್ಯಕ್ತಿಪೂಜೆಯ ಪರಿಪಾಠ ಹೆಚ್ಚಾಗಿ ರಾಜ್ಯಕ್ಕೆ ದೊರೆ (ಆನುವಂಶಿಕ) ಬೇಕೆಂಬ ‘ ಬಯಕೆ ’ ಆಗಿರಬಹುದೆ ? ಅಥವಾ, ಮಗನಿಲ್ಲದ ದಶರಥನಿಗೆ ‘ ಮಗನಿಂದ ವಿಯೋಗವಾಗಿ ಸಾಯುವೆ ’ ಎಂದು ಆಶೀರ್ವಾದ ಪರವಾದ ಶಾಪದಂತೆ ಈ ಪ್ರಸಂಗವಿದೆಯೆ ? ಇಲ್ಲವೆ- ಬ್ರಿಟಿಶ ಕರ್ನಾಟಕದಲ್ಲಿ ಪೆನಶನ್ ಪಡೆದ ರಾಜಕಾರಣಪಟುಗಳಿಗೆ ಬೇರೊಂದು ಕರ್ಮಸ್ಥಾನ ಅವಶ್ಯವೆನಿಸಿದೆಯೆ ? ಅಥವಾ- ಯಾವುದೂ ವಿಚಾರವಿಲ್ಲದೆ ಏನಾದರೊಂದು ಹೇಳಿ ಹೆಸರಾಗೋಣ ಎಂಬ ಮಂಗಮತದ ಪ್ರತಿಧ್ವನಿ ಇದೆಯೆ?

ಆರು ಹಿತವರು ನಿನಗೆ ಮೂವರೊಳಗೆ?

ರಾಜನೋ ? ಆಚಾರ್ಯನೋ ?

ರಾಜಗೋಪಾಲಾಚಾರ್ಯನೊ ?

ಭೋ-ಬಹು-ಪಟಕಾರರೆ !

ನೀವು ಹಿಂದೂ ಸಂಘಟನೆಗಾಗಿ ಹೋರಾಡುವವರಲ್ಲವೇ ಭೋಪಟಕರರೆ ? ಹಾಗಾದರೆ ಮಹಾರಾಷ್ಟ್ರೀಯರೆಂದರೆಯಷ್ಟೇ ಹಿಂದುಗಳೆಂದು ನಿಮ್ಮ ಭಾವನೆಯೇನು ? ಕನ್ನಡಿಗರೆಂದರೆ ಯಾರೆಂದು ತಿಳಿದಿದ್ದೀರಿ ? ಮ್ಲೇಚ್ಛರೆಂದೋ ಹೂಣರೆಂದೋ ? ‘ ಕನ್ನಡಿಗರೊಂದಿಗೆ ಮಹಾರಾಷ್ಟ್ರೀಯರು ಸಹಕರಿಸಬಾರದು- ಸಮರಸರಾಗಬಾರದು- ಅವರಲ್ಲಿ ಮುಂಗೈಜೋರಿನಿಂದ ತಮ್ಮ ಪ್ರಭುತ್ವವನ್ನು ಸ್ಥಾಪಿಸಬೇಕು ’ ಎಂದು ಹೇಳುವ ನಾಲಗೆಯಿಂದಲೆ ಹಿಂದೂ ಸಂಘಟನೆಯ ಹರಟೆಯನ್ನು ಕೊಚ್ಚುವ ನಿಮ್ಮನ್ನು ಯಾವುದೋ ಕಿಡಿಗೇಡಿ ಮಂಗದ ಪಿಶಾಚ ಹಿಡಿದಂತೆ ತೋರುತ್ತದೆ. ಮುಂಗೈಜೋರು ಮಹಾರಾಷ್ಟ್ರೀಯರಲ್ಲಷ್ಟೇ ಇದೆಯೆಂದು ಭೋಪಟಕರರು ತಿಳಿದಿರಬಹುದೇನೋ ! ಆದರೆ ಕರ್ನಾಟಕದಲ್ಲಿಯ ‘ ವೀರ ’ ಶೈವರೂ ‘ ವೀರ ’ ವೈಷ್ಣವರೂ ತಮ್ಮತಮ್ಮಲ್ಲಿಯ ಜಗಳಾಟದಲ್ಲಿ ವೆಚ್ಚಮಾಡುವ ಮುಂಗೈಜೋರನ್ನು ನಿಮ್ಮ ಕಡೆಗೆ ತಿರುಗಿಸಿದರೆ ಕರ್ನಾಟಕದಲ್ಲಿಯ ಹಿಂದುತ್ವವೆಲ್ಲ ನಷ್ಟವಾಗಿ ಹೋದೀತಲ್ಲ ಅದಕ್ಕೇನು ಗತಿ ? ಹಿಂದೂಭಕ್ತ ಭೋಪಟಕರರು ಇನ್ನು ಮೇಲೆ ಹೊಸದೊಂದು ಇತಿಹಾಸವನ್ನು ಬರೆಯಲಿದ್ದಾರೆಂದು ಮಂಗರಾಯನಿಗೊಂದು ವರ್ತಮಾನ ಬಂದಿದೆ. ಅದರಲ್ಲಿ ಅವರು ಶಿವಾಜಿಯ ಮನೆತನ ಪೇಶವರ ಮನೆತನ ಎರಡನ್ನು ಬಿಟ್ಟರೆ ಭಾರತದಲ್ಲಿ ಹಿಂದೂರಾಜ್ಯಗಳೇ ಸ್ಥಾಪನೆಯಾಗಿಲ್ಲವೆಂದು ಸಿದ್ಧ ಮಾಡಲಿದ್ದಾರಂತೆ. ಈ ಮಂಗತನಕ್ಕಾಗಿ ಮಂಗರಾಯ ಖಂಡಿತವಾಗಿ ನಾಚಿ ತಲೆಬಾಗಿಸದಿರನು.

ಪತ್ರೋತ್ತರಗಳು

“ ಮರಾಟಿಗರ ಮುಂಗೈಜೋರನ್ನು ಕನ್ನಡಿಗರು ಎಂದಿನಿಂದಲೂ ಕಂಡಿದ್ದಾರೆ. ಈಗಲೂ ಅದರ ಅನುಭವ ಸಾಕಷ್ಟು ಕಂಡುಬರುತ್ತಲಿದೆ. ಬೇಗನೆ ಇನ್ನು ಕರ್ನಾಟಕದಲ್ಲಿಯ ಮರಾಟೀ ಶಾಲೆಗಳಲ್ಲಿ, ಇದುವರೆಗಿದ್ದ ಕರ್ನಾಟಕ ಪ್ರಾಂತದ ಇತಿಹಾಸ-ಭೂಗೋಲಗಳ ಅಭ್ಯಾಸವು ಹೋಗಿ, ಮಹಾರಾಷ್ಟ್ರದ ಇತಿಹಾಸ-ಭೂಗೋಲಗಳ ಅಭ್ಯಾಸ ನಡೆಯುವ ಯೋಜನೆ ನಡೆದಿದೆ. ಅಧಿಕಾರ ಬಲದಿಂದ ಕನ್ನಡ ಬಾರದಿದ್ದ ಜನರನ್ನು ಕನ್ನಡ ವಿದ್ಯಾಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲಾಗುತ್ತಿದೆ. ಬೇಡಿದಲ್ಲಿ ಮರಾಟೀ ಶಾಲೆಯನ್ನು ಕೊಡುವ ಭವಿಷ್ಯವೂ ಕಾಣತೊಡಗಿದೆ. ಧಾರವಾಡದಲ್ಲಿ ಮರಾಟೀ ಮುಲಕೀಪರೀಕ್ಷೆಯೂ ಪ್ರಾರಂಭವಾಯಿತು. ಮುಂಬೈಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿಯೂ ಮರಾಟಿಗೆ ಪ್ರಾಶಸ್ತ್ಯವಿದೆಯೆಂಬ ಮಾತು ಸಿದ್ಧವಾದಂತಾಯಿತು. ಅಲ್ಲದೆ ಮಹಾರಾಷ್ಟ್ರೀಯರಾದ — ಹೊಣೆಗಾರಿಕೆಯನ್ನರಿತ— ಮುಂದಾಳುಗಳು ಮುಂಗೈಜೋರಿನಿಂದ ಕನ್ನಡಿಗರನ್ನು ಮೂಲೆಗೊತ್ತುವಂತೆ ಕರ್ನಾಟಕದ ಕೇಂದ್ರನಗರಗಳಲ್ಲಿಯೆ ಸಾರುತ್ತ ಹೊರಟಿದ್ದಾರೆ. ಬೃಹನ್ನಡಾ ಜಾತಿಯ ಕುಲಗೇಡಿ ಕನ್ನಡಿಗರೆ ಅವರಿಗೆ ಸಾಹಾಯ್ಯಕರಾಗಿ ನಿಂತಿದ್ದಾರೆ. ಈಗ ಕನ್ನಡಿಗರ ಕರ್ತವ್ಯವೇನು ? ” ಎಂದೊಂದು ಕಾಗದ ಮಂಗರಾಯನಿಗೆ ಬಂದಿದೆ. ಅದಕ್ಕೆ ಮಂಗರಾಯನು ಹೀಗೆಂದು ಉತ್ತರ ಕೊಟ್ಟಿದ್ದಾನೆ:

“ ಕನ್ನಡಿಗರೆಂದರೆ ಯಾರು ? ಕರ್ನಾಟಕದಲ್ಲಿ ಯಾರೂ ಕನ್ನಡಿಗರಿಲ್ಲ. ಬ್ರಾಹ್ಮಣರಿದ್ದಾರೆ, ಲಿಂಗಾಯತರಿದ್ದಾರೆ, ಜೈನರಿದ್ದಾರೆ, ಕುರುಬರಿದ್ದಾರೆ, ಒಕ್ಕಲಿಗರಿದ್ದಾರೆ, ಮುಸಲ್ಮಾನರಿದ್ದಾರೆ, ಹರಿಜನರಿದ್ದಾರೆ, ಹೆಂಗುಸರಿದ್ದಾರೆ ಗಂಡುಸರಿದ್ದಾರೆ. ಆದರೆ ಯಾರೂ ಕನ್ನಡಿಗರಿಲ್ಲ. ಇನ್ನು ಯಾರಾದರೂ ತಮ್ಮಂತಹ ಅಭಿಮಾನಿಗಳು ಒಬ್ಬರು ಇದ್ದು, ಅಭಿಮಾನಭಂಗವನ್ನು ಸಹಿಸುವುದಾಗದಿದ್ದರೆ, ಕರ್ನಾಟಕದಲ್ಲಿಯೆ ಇದ್ದ ಗೇರುಸೊಪ್ಪೆಯ ಜಲಪಾತದಿಂದ ಪ್ರಯೋಜನ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಪರೀಕ್ಷೆಯ ಕೂಡ ಗೋವಿಂದ...ಬಹುಜನರ ಬೆನ್ನುಹತ್ತಿ ನಡೆದರಾಯಿತು. ಎಂದರೆ ಗೇರುಸೊಪ್ಪೆಯ ಕೊಳ್ಳವಲ್ಲದಿದ್ದರೂ ಇನ್ನಾವುದೊ ಹಳ್ಳ ತಮಗೆ ದೊರೆಕೇ ದೊರೆಯುವುದು! ”

ಬರಿಯೆ ೨-೮-೦ ಗಳಿಗೆ ೬ ಗಡಿಯಾರ ಮತ್ತು ೪೫೦ ಬೆಡಗಿನ ಬಹುಮಾನ



ನಮ್ಮ ಐದುವರ್ಷದ ಗ್ಯಾರಂಟಿಯುಳ್ಳ, ಸರಿಯಾಗಿ ವೇಳೆತೋರಿಸುವ, ೩೬ ಗಂಟೆಯವರೆಗೆ ನಡೆಯುವ ಕೀಲಿಯ, ಅಂದವಾದ ನಕ್ಷಿಗಳುಳ್ಳ ಲಿವ್ಹರ್ ಪಾಕೆಟ್ ವಾಚನ್ನು ೨-೮-೦ ಗಳಿಗೆ ಕೊಳ್ಳುವವರಿಗೆ ಕೆಳಗೆ ಹೇಳಿದ ಬಹುಮಾನಗಳನ್ನು ಕೊಡುವೆವು. ಗೋಲ್ಡ್‌ಗಿಲೀಟ್ ಕೇಸು ಇರುವ ಅಂದವಾದ ಡಬ್ಬಿ ರಿಸ್ಟ್‌ವಾಚ್ ೧; ಇನ್ನೂರು ಫೂಟಿನ ಫೋಕಸ್ಸುಳ್ಳ ಟಾರ್ಚ್‌ಲೈಟು ೧; ಹದಿನಾಲ್ಕು ಕ್ಯಾ. ರೋಲ್ಡ್‌ಗೋಲ್ಡಿನ ತುದಿಯುಳ್ಳ ಫೌಂಟನ್ ಪೆನ್ ೧; ಡಬ್ಬಿ B. ಟೈಂಪೀಸು ೧; ಸೇಫ್ಟೀ ರೇಜರ್ ೧; ಸೇವ್ಹಿಂಗ್‌ಬ್ರಷ್ ೧; ಸಾಬೂನು ೧; ಬಂಗಾರದ ಗಿಲೀಟಿನ ಗುಂಡಿಗಳು ೪ ಅಲ್ಲದೆ ೪೫೦ ಸುಂದರ ಬಹುಮಾನಗಳು. ಪೋಸ್ಟೇಜ್-ಪ್ಯಾಕಿಂಗುಗಳಿಗಾಗಿ ೧೨ ಆಣೆ ಪ್ರತ್ಯೇಕ.

———o———

ಯೋಗ್ಯತೆಯುಳ್ಳ ಯುದ್ಧಸಚಿವ

ಲೆಸ್ಲಿ ಹೋರ್ ಬೆಲಿಶಾ

★

" ಜಾರ್ಮನಿಯ ಹೆಚ್ಚೀಶ್ " ಬರೆದುದು

★

ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಹೋರ್ ಬೆಲಿಶಾ ಅವರ ಹಾದಿಯೆ ಒಂದು ಹೊಸಬಗೆಯುದು. ತರುಣಪ್ರಪಂಚದ ಪಕ್ಷಪಾತಿಯೂದ ಇವರಿಗೆ ಸನಾತನ ಸಂತಾನವೆಲ್ಲ ವಿರೋಧಿಯಾಗಿರುವುದು. ಫಿನ್ಲೆಂಡಿನ ಯುದ್ಧಾನಂತರ ಮೊನ್ನೆ ಮೊನ್ನೆಯೆ 'ಫಿನ್ಲೆಂಡಿನ ಘಾತಕ್ಕೆ ಕಾರಣವಾದುದು ಬ್ರಿಟಿಶರ ಔದಾಸೀನ್ಯ' ಎಂದು ಸ್ಪಷ್ಟವಾದ ಅಭಿಪ್ರಾಯಕೊಟ್ಟ ಬಂಟರಿವರು!

★

ಲೆಸ್ಲಿ ಹೋರ್ ಬೆಲಿಶಾ ಅವರು

ಮೊನ್ನೆ ಮೊನ್ನೆಯೆ ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಮಿ. **ಹೋರ್ ಬೇಲಿಶಾ** ಅವರು ಆಡಿದ ಮಾತುಗಳು ಇಡಿಯೆ ಪ್ರಪಂಚಕ್ಕೆ ಪಾಠ ಕಲಿಸುವಂತಹವಾಗಿವೆ: " ಈಗ ನಾವು ರಶಿಯದ ಮೇಲೆ ಏಕೆ ದಾಳಿಯನ್ನಿಕ್ಕಬಾರದು? ಹಿಟ್ಲರನು ಯುದ್ಧವನ್ನು ಹೇಳಿ ಕೇಳಿ ಪ್ರಾರಂಭಮಾಡಿದನೆಂದು, ಪೋಲಂಡಿನವರಿಗೆ ನೀವು ಕೂಡ ಬಹಿರಂಗವಾಗಿ ಸಹಾಯವನ್ನು ಸಲ್ಲಿಸಿದಿರಿ; ಆದರೆ ಈಗ ಸ್ಟಾಲಿನನು ಹಾಗೆ ಹೇಳದೆ ಫಿನ್‌ಲಂಡನ್ನು ಮುರಿದು ಮುಟ್ಟಿಗೆಯಲ್ಲಿ ಹಿಡಿಯತೊಡಗಿದ್ದರೂ ನೀವು ಸುಮ್ಮನೆ ಕುಳಿತಿರುವಿರಿ; ಇಷ್ಟೇ ಅಲ್ಲದೆ 'ಫಿನ್‌ಲಂಡಿನ ಜನರು ವಿಶ್ವದ ಎಲ್ಲ ಮಿತ್ರ-ರಾಷ್ಟ್ರಗಳಿಗೆ ಬಿನ್ನವಿಸಿಕೊಂಡರೆ, ನಾವೂ ಸಹಾಯಮಾಡಲು ಸಿದ್ಧರಿರುವೆವು' ಎಂಬ ಜಂಭದ ಮಾತುಗಳನ್ನು ಬೇರೆ ಆಡುವಿರಿ. ಸರ್ವಾನುಮತದಿಂದ ಪಾಸುಮಾಡಿದ ಗೊತ್ತುವಳಿಗಳಿಂದ ಕೇಳಿಕೊಂಡರೆಯೆ ಜನರಿಗೆ ನೆರವಾಗಬೇಕೋ? ಎಲ್ಲಿ ಅನ್ಯಾಯವಾಗುತ್ತಿರುವುದೊ ಅದನ್ನು ಎಲ್ಲಿದ್ದರೂ ತಡೆಯಬೇಕೆಂಬ ಭಾವನೆ ನಿಮ್ಮಲ್ಲಿರಬಾರದೆ?" ಎಂದು ಬ್ರಿಟಿಷ್ ಪರರಾಷ್ಟ್ರಧೋರಣೆಯನ್ನು ಮಿ. ಹೋರ್ ಬೆಲಿಶಾ ಅವರು ಖಂಡಿಸಿದರು. ಈ ಬಗೆಯ ವಿಚಾರಗಳನ್ನು ತಳೆದಿರುವವರೆಂದೇ, ಅವರು ಬ್ರಿಟಿಷ ಮಂತ್ರಿಮಂಡಲದಿಂದ ರಾಜೀನಾಮೆಯನ್ನು ಕೊಡಬೇಕಾಯಿತು. ನಿಜವಾಗಿ ನೋಡಿದರೆ, ಯುದ್ಧಸಚಿವರಾಗಿದ್ದು ಇವರಷ್ಟು ಯಶಸ್ವಿಯೂ ಉತ್ಕೃಷ್ಟವೂ ಆದ ಕಾರ್ಯವನ್ನು ಬೇರೆ ಇನ್ನಾವ ಬ್ರಿಟಿಷ್ ಯುದ್ಧಸಚಿವನೂ—ಬೇರೆ ಇನ್ನಾವ ಕಾಲಕ್ಕೂ—ಮಾಡಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಲೆಸ್ಲಿ ಹೋರ್ ಬೆಲಿಶಾ ಅವರು ಕೇವಲ ೪೪ ವರ್ಷದ ಪ್ರಾಯದಲ್ಲಿ ಇಂತಹ ಅತ್ಯುಚ್ಚ ಪದವಿಯನ್ನು ಅಲಂಕರಿಸಿದರು. ಅವರು ಯುದ್ಧ ಮಂತ್ರಿಮಂಡಲದಲ್ಲಿ ಎಲ್ಲರಿಗಿಂತ ಚಿಕ್ಕವರಾದ ಸಚಿವರಾಗಿದ್ದರು. ಈ ಚಿಕ್ಕತನದ ವಿಷಯದಲ್ಲಿ ಇವರ ಒಂದು ಹೇಳಿಕೆಯು, ಎಷ್ಟು ಮನೋರಂಜಕವಾಗಿರುವುದೋ, ಅಷ್ಟೆ ಮನೋವೇಧಕವೂ ಆಗಿರುವುದು. ಇವರು ಮೊದಲನೆಯ ಸಲವೇ, ಎಂದರೆ ಇಪ್ಪತ್ತೆಂಟು ವರುಷದವರಿದ್ದಾಗಲೆ, ಡೆವ್ಹನ್‌ಶಾಯರಿನ ಪರವಾಗಿ ಪಾರ್ಲಿಮೆಂಟಿನ ಆಯ್ಕೆಗೆ ನಿಂತ ಸಮಯದಲ್ಲಿ, ಇವರನ್ನು ದ್ವೇಶಿಸಿ, ಇವರ ಇದಿರಾಳು "ಚೀಪುಗಲ್ಲು" ಎಂದು ಚೇಷ್ಟೆಯ ಮಾತುಗಳನ್ನಾಡಿದರಂತೆ; ಆಗ ಇವರು ಹೀಗೆ ಹೇಳಿದರಂತೆ :

"ಹೌದು ನಾನು ಚಿಕ್ಕವ; ನಾನು ಚೀಪುಗಲ್ಲು. ಅದಲ್ಲದೆ ನನಗೆ ಚೀಪುಗಲ್ಲು ಎನ್ನಿಸಿಕೊಳ್ಳಲು ತುಂಬಾ ಅಭಿಮಾನವೆನಿಸುತ್ತದೆ. ಯಾಕೆಂದರೆ ಪ್ರಪಂಚದಲ್ಲಿ ಅತಿಬಲಾಢ್ಯವಾದ ಸೈನ್ಯವನ್ನು ಯಶಸ್ವಿಯಾಗಿ ನಡೆಯಿಸಿದ ನೆಪೋಲಿಯನ್ನನಿಗಿಂತ ನಾನು ಹಿರಿಯನಾಗಿರುವೆ. ಇಡಿಯ ವಿಶ್ವವನ್ನೇ ಗೆದ್ದ ಅಂದಿನ ಅಲೆಗ್ಝಾಂಡರನಿಗಿಂತಲೂ ನಾನು ಹಿರಿಯನಾಗಿರುವೆ; ಇಪ್ಪತ್ತುಮೂರನೆಯ ವರುಷವೆ ಇಂಗ್ಲಂಡಿನ ಮುಖ್ಯ ಪ್ರಧಾನನೆಂದಿಷ್ಟೇ ಅಲ್ಲದೆ ಉತ್ಕೃಷ್ಟ ಪ್ರಧಾನನೆಂದೆನಿಸಿಕೊಂಡ ಪಿಟ್ಟನಿಗಿಂತಲೂ ನಾನು ಅದೆಷ್ಟೋ ದೊಡ್ಡವನಿರುವೆ. ಕಳೆದ ಮಹಾಯುದ್ಧದಲ್ಲಿ ನಮ್ಮ ತಾಯ್ನಾಡನ್ನೂ, ಅದರ ಹೆಸರನ್ನೂ ಕಾಪಾಡಿದವರು ಇಂತಹ ಮೂರು ಕೋಟಿ 'ಚೀಪುಗಲ್ಲು' ಗಳೆ ಎಂಬುದನ್ನು ಯಾರೂ ಮರೆಯಲಾಗದು; ಅಂತಹ ಇನ್ನೊಂದು ಪ್ರಸಂಗವು ಒದಗಬಾರದು ಎಂದಿದ್ದರೆ ನನ್ನಂತಹ ಚೀಪುಗಲ್ಲುಗಳ ಕಾರ್ಯದ ಅಗತ್ಯ ತುಂಬ ಇದೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ" ಎಂದು ಹೇಳಿದರು.

ಆ ಚುನಾವಣೆಯಲ್ಲಿ ಎಂ. ಬೆಲಿಶಾ ಅವರು ಗೆಲುವನ್ನು ಪಡೆದರು. ಇಂದು ಅದೇ 'ಚೀಪುಗಲ್ಲು' ಪ್ರಪಂಚದಲ್ಲೆಲ್ಲ ಪ್ರಖ್ಯಾತಿಯನ್ನು ಪಡೆದ 'ಚೀಪುಗಲ್ಲು'ಗಳ ಸೈನ್ಯವನ್ನು ಬಲಪಡಿಸಿ, ಸಿದ್ಧಗೊಳಿಸಿರುವುದು. ಯುದ್ಧಮಂತ್ರಿಮಂಡಲದಲ್ಲಿ ಕಾರ್ಯದರ್ಶಿಯೆಂದು ನಿಯಮಿಸಲ್ಪಟ್ಟಾಗ, ಮಂತ್ರಿಮಂಡಲದ ಸದಸ್ಯರು ಅಸಮ್ಮತಿಯಿಂದ ತಲೆಯನ್ನಲ್ಲಾಡಿಸಿದರು. ಆದರೆ ಅದಕ್ಕೆ ಹೋರ್ ಬೆಲಿಶಾ ಅವರು "ಅವರು ವಯಸ್ಕರಿರುವುದರಿಂದ, ಅವರ ತಲೆಯು ಅಲ್ಲಾಡುವುದು ಸ್ವಾಭಾವಿಕ. ಇಂದಿನ ತರುಣರು ಅದಕ್ಕೆ ಹೆದರುವ ಕಾರಣವಿಲ್ಲ" ಎಂದು ನುಡಿದರು; ಮತ್ತು ನುಡಿಯಂತೆ ನಡೆಯನ್ನು ತೋರಿಸಿದರು.

ಎಂ. ಹೋರ್‌ಬೆಲಿಶಾರವರ ಸೈನ್ಯಸುಧಾರಣೆಯ ಉಪಾಯಗಳು ಆಧುನಿಕವಾಗಿರುವುವು. ಅವರು ಮೊತ್ತಮೊದಲು ತಮ್ಮ ಕಾರ್ಯದ ರೂಪರೇಷೆಯನ್ನು ಜನರೆದುರಿಗಿಟ್ಟಾಗ ಎಲ್ಲರೂ ಅಸಮಾಧಾನವನ್ನು ವ್ಯಕ್ತಗೊಳಿಸಿದರು. ಇದೇನು ದೊಡ್ಡ ವಿಷಯವಲ್ಲ. ಏಕೆಂದರೆ ಪ್ರತಿಯೊಬ್ಬ ಪ್ರಗತಿಶೀಲ ಯುದ್ಧ ಸಚಿವನಿಗೂ ಇಂತಹ ಅನೇಕ ಎಡರು-ತೊಡರುಗಳನ್ನು ಎದುರಿಸಲೇ ಬೇಕಾಗುತ್ತದೆ. ಅದರಲ್ಲಿಯೂ ಪರಂಪರಾಪ್ರಿಯ ಜನರಿಂದಲೂ, ಒಂದೇ ಸ್ಥಳದಲ್ಲಿ ಅನೇಕ ವರುಷ ಕೆಲಸ ಮಾಡಿದ "ಸ್ಥಿತಪ್ರಜ್ಞ"ರಿಂದಲೂ ಇಂತಹ ಆಧುನಿಕಜನರಿಗೆ ತುಂಬಾ ತೊಂದರೆಯಾಗುವುದು. ಆದರೂ ಅವೆಲ್ಲವುಗಳನ್ನೂ ದಾಟಿ ಹೋಗಿ, ಬ್ರಿಟಿಶ ಸೈನ್ಯವನ್ನು ಮುಂದುವರಿದದ್ದೆಂದೂ, ಸುಸಜ್ಜಿತವಾದದ್ದೆಂದೂ, ಸುವ್ಯವಸ್ಥಿತವಾದದ್ದೆಂದೂ ಜಗತ್ತಿನಲ್ಲಿ ಮೆರೆಯಿಸಿದ ಶ್ರೇಯಸ್ಸು ಎಂ. ಹೋರ್‌ಬೆಲಿಶಾ ಅವರ ಆಧುನಿಕವಾದ ವಿಚಾರಗಳಿಗೆ ಸಲ್ಲುವುದು. 'ಪ್ರತಿಯೊಬ್ಬ ಕಾಲಾಳು ಕೂಡ, ದಂಡನಾಯಕನಾಗುವ ಯೋಗ್ಯತೆ-ಹಂಬಲುಗಳುಳ್ಳವನಿರಬೇಕು; ಪ್ರತಿಯೊಬ್ಬ ಸೈನಿಕನೂ ಪುಟಿಯುತ್ತಿರುವ ಬಿಸಿರಕ್ತದ ತರುಣನಿರಬೇಕು; ಶಾಂತಿಸಮಯದಲ್ಲಿ ಕೂಡ ಪ್ರತಿಯೊಬ್ಬ ಬ್ರಿಟಿಶ್ ಯುವಕನೂ **ಸೈನಿಕನೆಂದು ಕಡ್ಡಾಯದಿಂದ** ನೋಂದುಮಾಡಲ್ಪಡಬೇಕು' ಎಂಬಿವೇ ಮೊದಲಾದುವುಗಳು ಎಂ. ಹೋರ್‌ಬೆಲಿಶಾ ಅವರ ಪ್ರೀತಿಯ ಯೋಜನೆಗಳು. ಇವೆಲ್ಲ ಉಪಾಯಗಳು ಬ್ರಿಟಿಶ ಸಂಪ್ರದಾಯಗಳ ಮೂಲಕ್ಕೆ ಕುಠಾರವನ್ನು ಹಾಕುತ್ತಿದ್ದುದರಿಂದ, ಮೊದಲು ಈ ಯೋಜನೆಗಳಿಗೆ ವಿರೋಧವುಂಟಾಯಿತು. ಆದರೆ ಕಾಲವು ಬದಲಾದಂತೆ, ಹೋರ್‌ಬೆಲಿಶಾ ಅವರು ತಮ್ಮ ಧೋರಣಾತ್ಮಕ ಬುದ್ಧಿಯಿಂದ ಮುಂಗಡವಾಗಿ ಕಂಡುಹಿಡಿದ ಸಂಗತಿಗಳು ಒಂದೊಂದಾಗಿ ಸಂಭವಿಸತೊಡಗಿದಂತೆ, ಸಂಪ್ರದಾಯ ಶರಣರು ಅವರೆದುರು ತಲೆವಾಗಬೇಕಾಯಿತು.

ಎಂ. ಹೋರ್ ಬೆಲಿಶಾರವರು ಅನೇಕ ತಪ್ಪು-ತಡೆಗಳನ್ನುಗೆಯ್ದಿರುವರೆಂದು ಜನರು ಅವರನ್ನು ಅದೆಷ್ಟೋ ದೂಷಿಸುವರು. "ಗೆಸ್ಟಾಪೊ ನೆಯ ಇಸವಿಯಲ್ಲಿ ಹಿಟ್ಲರನು ಮ್ಯುನಿಚನ್ನು ನುಂಗುವ ಯೋಚನೆಯಲ್ಲಿದ್ದಾಗ, ಇವರು ಇಂಗ್ಲಂಡಿನ ವಿಮಾನದಲವನ್ನು ಸಾಕಷ್ಟು ಬಲಪಡಿಸಿರಲಿಲ್ಲ; ಸೈನ್ಯಕ್ಕೆ ಬೇಕಾಗುವ ಅನೇಕ ಉಪಕರಣಗಳು ಆಗ ಸಾಕಷ್ಟಿರಲಿಲ್ಲ" ಎಂದು ಮುಂತಾಗಿ ಅವರ ಮೇಲೆ ಆರೋಪಗಳನ್ನು ಹಾಕಿದರು. ಇದಕ್ಕೆ ಎಂ. ಹೋರ್‌ಬೆಲಿಶಾ ಅವರು ಶಾಂತವಾಗಿ ಕೊಟ್ಟ ಉತ್ತರ ಹೀಗಿದೆ:

"ಮನುಷ್ಯನು ತಪ್ಪುಮಾಡುವುದು ಸ್ವಾಭಾವಿಕ. ನಡೆಯಲು ಕಲಿಯುವವ ಎಡುಹುವುದು ಸಹಜ!" ಆದರೆ ನಿಜವಾಗಿಯೂ ಈ ಬಗೆಯ ಕೊರತೆಗೆ ಯುದ್ಧ ಸಾಮುಗ್ರಿಯನ್ನು ಪೂರಯಿಸುವ ಖಾತೆಯು ಕಾರಣ ಎಂಬುದು ಕೊನೆಗೆ ತಿಳಿಯದೆ ಹೋಯಿತೇ?

ಅವರಿಗೆ ಈಗಲೂ ಅವಿಶ್ರಾಂತವಾಗಿ ದಿನದ ಹದಿನೆಂಟು ತಾಸುಗಳ ವರೆಗೆ ದುಡಿಯುವ ಚಟವಿದೆ. ಎಂ. ಹೋರ್‌ಬೆಲಿಶಾರವರಿಗೆ ಜಾಣೆಯಾದ ತಾಯಿಯಿದ್ದುದು ಒಂದು ಸುದೈವದ ಸಂಗತಿ. ಅವರು ತಮ್ಮ ಮಗ ಲೆಸ್ಲಿಯನ್ನು ತುಂಬಾ ಮಮತೆಯಿಂದಲೂ, ಕೌತುಕದಿಂದಲೂ ಸಂರಕ್ಷಿಸಿಕೊಂಡು ಬಂದರು. ಚಿಕ್ಕವನಿದ್ದಾಗ ಲೆಸ್ಲಿಯನ್ನು ಅವರು ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡಿಕೊಂಡರು; ಅಂತೆಯೆ ಲೆಸ್ಲಿಯು ದೊಡ್ಡವನಾದಾಗ ಅನೇಕ ಬ್ರಿಟಿಶರ-ಅನೇಕ ಪ್ರಪಂಚದ-ಅನೇಕ ಜೀವಿಗಳ ಜೀವವನ್ನು ತನ್ನದೆಂದೇ ನೋಡಿಕೊಳ್ಳುವ ಯೋಗ್ಯತೆಯನ್ನು ಪಡೆದ. ಅವನ ವಿಷಯವಾಗಿ ಕೇಳಿದಾಗ ಆ ವಿದುಷಿಯು ಹೀಗೆ ಹೇಳಿದಳು:—

"ಲೆಸ್ಲಿಯೂ, ನಾನೂ ತುಂಬಾ ಪ್ರೇಮದಿಂದಿರುವೆವು. ಅವನು ನನ್ನ ಮಾತುಗಳನ್ನು ಕೇಳಿಯೇ ತೀರಬೇಕೆಂದು ನಾನು ಎಂದಿಗೂ ಹಟ ಹಿಡಿಯಲಿಲ್ಲ; ನಾನು ಅವನ ಮೇಲೆ ಮಾಡಿದ ಮಮತೆಯ ಉಪಕಾರವನ್ನು ತೀರಿಸಲೆಂದು, ನನಗಾಗಿ ಅವನಿಗೆ ಎಂದೂ ಏನನ್ನೂ ಮಾಡಲು ಹೇಳಿಲ್ಲ. ನಮ್ಮ ಅವನ ನಡುವೆ ಇದ್ದ ಒಂದು ಭಾವನೆಯೆಂದರೆ ಪರಸ್ಪರ ಒಲವು ಒಂದೇ. ಆದುದರಿಂದಲೇ ಅವನಿಗೆ ಪ್ರತಿದಿನ ಸಾಯಂಕಾಲದಲ್ಲಿ ಮೊದಲು ಮನೆಗೆ ಬಾರದಿದ್ದರೆ ಸಮಾಧಾನವೆನಿಸುವದಿಲ್ಲ; ನನಗೂ ಹಾಗೆಯೆ. ಅವನ ವ್ಯಕ್ತಿತ್ವಕ್ಕೆ ಬಾಧೆಯುಂಟಾಗದಂತೆ ನಾನು ಈಗಾಗ ಅನುಭವದ ಕೆಲವು

ಹಿತೋಕ್ತಿಗಳನ್ನು ಹೇಳುವೆ. ಯಾಕೆಂದರೆ ಪ್ರತಿಯೊಬ್ಬ ವ್ಯಕ್ತಿಯು ತನಗೆ ಯುಕ್ತವೆಂದು ಕಂಡುದನ್ನು ಮಾಡುವುದರಲ್ಲಿಯೆ ಅವನಿಗೆ ಶ್ರೇಯಸ್ಸಿದೆ. ಮೊದಲು ಲೆಸ್ಲಿಯು ಡಾಕ್ಟರನಾಗಬೇಕೆಂದು ನಾನು ಬಯಸಿದ್ದೆ. ಆದರೆ ಮುಂದೆ ಅವನು ನ್ಯಾಯದ ಕಡೆಗೆ ಹೆಚ್ಚಾಗಿ ಒಲವನ್ನು ತೋರಿಸಿದುದಕ್ಕಾಗಿ, ಅವನನ್ನು ಆ ವಿಷಯಕ್ಕಾಗಿಯೆ ಬಿಟ್ಟುಕೊಟ್ಟೆ. ಆದರೆ ಆಗಾಗ ಅವನು ನನಗೆ 'ನೀನು ನನಗೆ ಮೂರ್ತಿವಂತ ಸ್ಫೂರ್ತಿ' ಎನ್ನುವ; ನಿಜವಾಗಿ ನೋಡಿದರೆ ಅವನ ವಿಷಯವಾಗಿ ನಾನೇ ಹಾಗೆ ಎನ್ನಬೇಕು ಎನಿಸುತ್ತದೆ'' ಇವೆಲ್ಲ ಮಾತುಗಳನ್ನು ಆಕೆ 'ಮಕ್ಕಳನ್ನು ಹೇಗೆ ಪಾಲಿಸಬೇಕು, ಹೇಗೆ ಬೆಳಸಬೇಕು' ಎಂಬುದನ್ನು ಕೇಳಿದಾಗ ಹೇಳಿದ್ದಳು.

ಎಂ. ಲೆಸ್ಲಿ ಹೋರ್‌ಬೆಲಿಶಾರವರು ವಿದ್ಯೆಯಲ್ಲಿ ಮುಂದೆ ಇದ್ದುದಲ್ಲದೆ, ವರ್ಗದ ವ್ಯಾಯಾಮಪಟುಗಳಲ್ಲಿ ಕೂಡ ಹೆಸರನ್ನು ಪಡೆದಿದ್ದರು. ಅವರು ಕಳೆದ ಮಹಾಯುದ್ಧಕ್ಕೆ ಮೊದಲು ಆಕ್ಸ್‌ಫರ್ಡಿನ ಸೆಂಟ್ ಜಾನ್ಸ್ ಕಾಲೇಜಿನಲ್ಲಿಯೂ, ಅನಂತರ ಪಾರೀಸಿನಲ್ಲಿಯೂ ಶಿಕ್ಷಣವನ್ನು ಪಡೆದಿರುವರು. ಕಳೆದ ಮಹಾಯುದ್ಧದಲ್ಲಿ ಅವರು ಇನ್ನೂ ಚಿಕ್ಕವರಿದ್ದರೂ, ಬ್ರಿಟಿಶ್ ಸೈನ್ಯದ ಒಂದು ತುಣುಕಾದ "ಹಿರಿಯ ಹದ್ದುಗಳು (Old Contemptibles)" ಎಂಬುದರೊಡನೆ ಸೇರಿ, ಫ್ರಾನ್ಸ್ ರಣಾಂಗಣದ ಮೇಲೆ ಕಾದಿರುವರು. ಆ ಮೇಲೆ ರೊಯಲ್ ಆರ್ಮಿಯ ಸೇವಾಪಥಕವನ್ನು ಸೇರಿ, ಶೀಘ್ರದಲ್ಲಿಯೆ ಅಲ್ಲಿ ಮೇಜರರಾದರು. ಸಲೋನಿಕಾ, ಸೈಪ್ರಸ್ ಮೊದಲಾದ ರಣಸಂಗ್ರಾಮಗಳಲ್ಲಿ ಇವರು ನಾಯಕತ್ವವನ್ನು ವಹಿಸಿರುವರು.

ಆದರೆ ಯುದ್ಧವು ಕೊನೆಗಂಡ ಕೂಡಲೆ ಇವರು ಮತ್ತೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವನ್ನು ಸೇರಿ, ತಮ್ಮ ವಿದ್ಯೆಯನ್ನು ಮುಂದುವರಿಸಿದರು. ಅಲ್ಲಿ ಇವರು ಉತ್ತಮ ವಾಗ್ಮಿಗಳೆಂದು ಕೂಡಲೆ ಪ್ರಸಿದ್ಧರಾಗಿ, ಬ್ಯಾರಿಸ್ಟರರಾದರು. ಆ ಮೇಲೆ ಇವರು ಕೆಲದಿನ ವೃತ್ತಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದು ಜನರಲ್ಲಿ ಮನ್ನಣೆಯನ್ನು ಪಡೆದರು. ಅವಿಶ್ರಾಂತ ದುಡಿದ ಮೂಲಕವೂ ಉಚ್ಚವಾದ ಧ್ಯೇಯಕ್ಕಾಗಿಯೂ ಇವರು ಜನರಲ್ಲಿ ಸಾಕಷ್ಟು ಪರಿಚಿತರಿರುವರು. ೧೯೨೩ನೆಯ ಇಸವಿಯಲ್ಲಿ ಮೊದಲನೆಯ ಸಲ ಪಾರ್ಲಿಮೆಂಟಿನಲ್ಲಿ ಆರಿಸಿ ಬಂದು, ಕೂಡಲೆ ರಾಜಕಾರಣದಲ್ಲಿ ಅತ್ಯುಚ್ಚ ಪದವನ್ನು ಅಲಂಕರಿಸಿದರು. ಮೊತ್ತ ಮೊದಲು ಇವರು ಸ್ವೀಕರಿಸಿದ ಸರಕಾರದ ಹುದ್ದೆಯೆಂದರೆ ವ್ಯಾಪಾರಮಂಡಲದ ಪಾರ್ಲಿಮೆಂಟರಿ ಸೆಕ್ರೆಟರಿಯೆಂದು. ಮುಂದೆ ತಮ್ಮ ವಿದ್ವತ್ತೆಯ ಬಲದಿಂದಲೂ, ಅಪಾರವಾದ ಅನುಭವದ ಸಹಾಯದಿಂದಲೂ ಬಹುಬೇಗ ಮೇಲೆ ಮೇಲೆ ಏರುತ್ತ ಯುದ್ಧ-ಸಚಿವರಾದರು.

ಆದರೆ ಮೊನ್ನೆ ಮೊನ್ನೆ ಕೇವಲ ಶಾಬ್ದಿಕ ಮತಭೇದಕ್ಕಾಗಿ ಅವರು ಯುದ್ಧಮಂತ್ರಿಪದಕ್ಕೆ ರಾಜೀನಾಮೆಯನ್ನೀಯುವ ಸಂದರ್ಭಗಳು ಬಂದೊದಗಿದುವು. ಈ ರಾಜೀನಾಮೆಯನ್ನು ಮುಖ್ಯಪ್ರಧಾನಪದವಿಯನ್ನು ಪಡೆಯುವುದಕ್ಕಾಗಿ ಅವರು ಕೊಟ್ಟಿರಬಹುದೆ?

(೩೪೮ ನೆಯ ಪುಟದಿಂದ ಮುಂದುವರಿದುದು)

ನಿಷ್ಕೃತೆಯ ಸಂಪೂರ್ಣ ಶ್ರೇಯಸ್ಸು ಕರ್ನಾಟಕ ಪ್ರಿಂಟಿಂಗ್ ಪ್ರೆಸ್ಸಿನ ಮಾಲಕರಾದ ಶ್ರೀಮಾನ್ ಜಠಾರ ವಿಟ್ಠಲರಾಯರಿಗೆ ಸೇರಿದುದು. ಸಮಯಕ್ಕೆ ಸರಿಯಾಗಿ ಪಡಿಯಚ್ಚುಗಳನ್ನು ಒದಗಿಸಿಕೊಟ್ಟ ಶ್ರೀಮಾನ್ ಪೋತದಾರ ಶ್ರೀನಿವಾಸರಾಯರ ಉಪಕಾರವೂ ಸ್ಮರಣೀಯವಾದುದು. ಚಿತ್ರಕಾರರಾದ ಶ್ರೀ. ಬಾಬ್ಲಿ, ಶ್ರೀ. ಆಳಂದೀಕರ್, ಶ್ರೀ. ಉಪಾಧ್ಯೆ, ಶ್ರೀ. ಶೇಷಗಿರಿ ಮೊರಬ ಮೊದಲಾದವರಿಗೆ ನಮ್ಮ ಅಭಿವಂದನೆಗಳು ಸಲ್ಲಬೇಕು. ನಮ್ಮ ಸಂಪಾದನೆಯ ಕೆಲಸದಲ್ಲಿ ತುಂಬ ಸಹಕಾರವನ್ನು ಒದಗಿಸಿ ಕೊಟ್ಟ ಪ್ರೊ. ಆರ್.ವಿ. ಜಾಗಿರದಾರ ಎಂ. ಎ (ಲಂಡನ್), ಶ್ರೀಯುತರುಗಳಾದ ಜೋಶಿ ಶಂಕರರಾಯರು, ನೆಗಳೂರ ರಂಗನಾಥ ಬಿ. ಎ., ಪಾಟೀಲ ಹನುಮಂತರಾಯರು ಎಂ. ಎ. ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಅಲ್ಲದೆ ಈ ಸಲ ಲೇಖನಗಳ ಮೂಲಕ ಸಹಾಯ ಮಾಡಿದ ಲೇಖಕರಿಗೂ, ನಮ್ಮ ಚಂದಾದಾರರಿಗೂ ಕೃತಜ್ಞತೆಯ ನಮಸ್ಕಾರಗಳು.

ಕನ್ನಡಕ್ಕೊಂದು ದೊಡ್ಡ ನಷ್ಟ

ಮೈಸೂರಿನ ಯುವರಾಜರೂ ಕ. ಸಾ. ಪರಿಷತ್ತಿನ ಅಧ್ಯಕ್ಷರೂ ಆದ ಶ್ರೀಮತ್ ಕಂಠೀರವ ನರಸರಾಜ ಒಡೆಯರ್ ಬಹಾದ್ದೂರ ಜಿ.ಸಿ.ಐ.ಇ. ಅವರು ಕಳೆದ ತಿಂಗಳ ೧೧ನೆಯ ತಾರೀಖು ದಿವಂಗತರಾದುದು ಕನ್ನಡ ಸಾಹಿತ್ಯ-ಸಂಸ್ಕೃತಿಗಳ ದೃಷ್ಟಿಯಿಂದ ದೊಡ್ಡದೊಂದು ನಷ್ಟ. ದಿವಂಗತರಿಗೆ ಸದ್ಗತಿ ದೊರೆಯಲಿ!

—ಸಂಪಾದಕರು

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ' ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವುವು.
ಬಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವುವು.

ಕವಿ ಮಂತ್ರ

★

ಶ್ರೀ. ಕುಲಕರ್ಣಿ ದತ್ತ ಮುಂಬೈ

(ಲಾವಣಿ ಹಾಡಿನ ಧಾಟಿ)

೧

ಗೆಳೆಯ ಕಳ್ಳ ಜಗ ಭಾಳ ಖೋಡಿ ಇದು
ಸುಳ್ಳು ಹೇಳುವುದಿಲ್ಲ ಕೇಳು ತುಸಾ!
ಕಳ್ಳು ಕರಗಿ ನಾ ಬಿಚ್ಚಿ ಹೇಳತೀನಿ
ಮುಳ್ಳುಗೊಂಡು ಹೋಗ್‌ಬ್ಯಾಡ ಮೋಸಾ!

೨

ಹೆಜ್ಜಿಹೆಜ್ಜಿಗೂ ನೋಡಿ ಕಾಲು ಇಡು,
ಹುಚ್ಚುಹಾವು ಸಿರಿವಂತನದಾ—
ಕಚ್ಚಿಗಿಚ್ಚಿ ನೀ ಸತ್ತು ಹೋದಿಯೊ
ದಾರಿ ನಡಿಯೊ ಎಚ್ಚರದಿಂದಾ!

೩

ದುಡ್ಡಿನ ಜೋರಿಲೆ ಮನಸ್ಯಾನ ಸುದ್ದಾ
ಮಂಗನ ಮಾಡ್ತಾರ ಜಗದಾಗ;
ಒಳ್ಳೇ ದಾರಿಲಿ ಸುಮ್ಮನ ನಡದರೂ
ಮುಳ್ಳು ಹಾಸತಾರ ಹಾದ್ಯಾಗ!

೪

ದುಡ್ಡಿರದಿದ್ದರ ಜಗತ್ತಿಲ್ಲವೂ
ದೊಡ್ಡ ಮಾಯಾಸುರ ಬಾಜಾರಾ!
ಹಿಡಿದ ಹೂವು ತಾ ಹಾವು ಆಗತದ
ಮಡದಿ ಭೈರವಿಯು ಅವತಾರಾ!

೫

ಗೊಂಬಿ ಮುಟ್ಟಿದರ ದೆವ್ವ ಆಗತದ
ನುಂಗಿಗಿಂಗಿತು ಕೇಳ್ ಹುಷಿಯಾರಾ!
ಹಾಲೆನಿಸಿದರೂ ಕುಡಿಯಬ್ಯಾಡ ನೀ,
ಹಾಲಾಹಲ ಬಡವಗ ಪೂರಾ!

೬

ಎತ್ತ ಹೋದರೂ ಹ್ಯಾಂಗ ನಡದರೂ
ಕಿತ್ತಿ ತಗಿಯುತಾರ ನಿನ್ನ ನರಾ!
ಸೊಕ್ಕಿನ ಮಾತಿಲಿ ಗಂಟು ಬೆಳಸಲಾಕ
ಬೇಕವರಿಗೆ ಬಡವರ ನೆತ್ರಾ!

೭

ಶಾಣ್ಯಾ ಆದರಽ ಕೇಳು ಗೆಣ್ಯಾ ನೀ
ಹೇಳಿಕೊಡುವೆ ನಿನಗೊಂದು ಮಂತರಾ!
ಸೊಕ್ಕಿನ ಜಗದಾಗ ಬಗ್ಗಿ ನಡೆದರಽ
ಮಣ್ಣು ಮುಕ್ಕುವದೆ ನಿರಂತರಾ!

೮

ಹೊಟ್ಟಿಗೆ ಇಲ್ಲದೆ ಸಾಯುತಿದ್ದರೂ
ಹೇಳಬ್ಯಾಡ ನೀ ಬಡವಂತಾ!
ಊಟಮಾಡಿದೇನಂತ ಹೇಳಿದರ
ಕರದು ಉಣಸತಾನ ಸಿರಿಮಂತಾ!

“ಇವತ್ತ ಮನೀಗೆ ಹೋದ ಮ್ಯಾಗ ರೊಟ್ಟೀ ಸುಡೂದೈತಿ..”

“ಕವಳೀಹಣ್ಣು” *

(ಸಣ್ಣಕತೆ)

★

ಶ್ರೀ. ಎಚ್. ಎಸ್. ಪಾಟೀಲ ಎಂ. ಎ.

ಅವರಿಂದ

ಮೋಹಭ್ರಮಿತನ ಮನಸ್ಸಿಗೆ ಸಹಜಕ್ರಿಯೆಗಳೆಲ್ಲವೂ ಆಶೆಯನ್ನು ಹುಟ್ಟಿಸುವುವು. ಸತ್ಯದ ನಿಷ್ಠುರವಾದ ವಜ್ರಾಘಾತವಾದಾಗ ಆತನ ಮೋಹದ ಭ್ರಮೆ ಹರಿದು ಹೋಗುವುದು; ಕಣ್ಣು ನಿಚ್ಚಳವಾಗಿ ತೆರೆಯುವುದು. ಆದರೆ ಒಮ್ಮೊಮ್ಮೆ ಈ ಎಚ್ಚರಿಕೆ ಸರಿಯಾದ ದಾರಿಯಲ್ಲಿ ಕರೆದೊಯ್ಯುವುದು; ಬಹಳ ಸಲ ಅಡ್ಡದಾರಿ ಹಿಡಿಸಿ ಪಾತಾಳಪಾತಕ್ಕೆ ನೂಕುವುದು. ಬಾಬಾನಿಗಾದ ಎಚ್ಚರಿಕೆ ಏನು ಮಾಡಿತೋ ಯಾರಿಗೆ ಗೊತ್ತು?

“ಕವಳೀಹಣ್ಣು ಬಾರಬೇ ಕವಳೀಹಣ್ಣೂ”

* * *

“ಏರೀ, ಈಟೊತ್ತ್ಯಾಕ ಮಾಡಿದೇ ಬರಾಕ?

“ಮದ್ಯಾಣಕ ತಡಾ ಆಗಿ ಬಂದ ಜಾನೂ–ಹಣ್ಣುತೊಗೊಂಡು; ಅದಕ್ಕs ಆsಟ ತಡಾ ಆತು!”

“ಹಾಂ, ಇಲ್ಲಿ ಬಾ, ಒಳ್ಯಾಕ ಬಾ.” ಬಾಬಾನ ಮಾತುಗಳಲ್ಲಿ ಒಂದು ತೆರದ ಸಡುಕ ಇತ್ತು. ಅವನು ‘ಬಾ’ ಎಂದು ಕರೆದರೂ ಪಾರ್ವತಿಯು ಒಳಕ್ಕೆ ಹೋಗದೆ, ಅಂಗಣದಲ್ಲಿಯೆ ನಿಂತಳು. ಕೂಡಲೆ ಬಾಬಾನು ತನ್ನ ಹಿಂದಿನ ಹೆಬ್ಬಾಗಿಲನ್ನು ಮುಂದಕ್ಕೆ ಮಾಡಿ ಹೇಳಿದ:

“ಬಾರs ಒಳ್ಯಾಕ..ಒಂದೀಟು ಕುಂತು ಹೋಗೀಕೆಂತ”

“ಇಲ್ಲಪಾ; ಮದಲs ಹೆಂಚಿ ಆಗೇತಿ. ಇದೀಟು ಹಣ್ಣು ಎಲ್ಲಾರ ಅಡ್ಡಾಡಿ ಮಾರಿ, ಗಡಾ ಗುಡಸಲಕ್ಕ ಹೋಗಬೇಕು” ಎಂದವಳೇ ಮುಗುಳುನಗೆ ನಗುತ್ತ ಪಾರ್ವತಿ ಹೊರಡಲನುವಾದಳು. ಆ ನಗೆಯು ಅವನನ್ನು ಏನು ಮರುಳು ಮಾಡಿತೋ, ಚಟ್ಟನೆ ಮುಂದೆ ಬಂದು ಬಾಬು ಅವಳ ಕೈಯನ್ನು ಹಿಡಿದನು. ಆದರೆ ಅವಳು ಇಂತಹ ಚೇಷ್ಟೆಗಳನ್ನು ಬಲ್ಲವಳಾದ್ದರಿಂದ, ಕೈಯಲ್ಲಿ ಮುಂಚಿತವಾಗಿಯೆ ಹಿಡಿದ ಕವಳಿಯ ಹಣ್ಣುಗಳನ್ನು ಅವನ ಕೈಯಲ್ಲಿ ನೀಡಿ ಮುಂದೆ ಸಾಗಿದಳು.

“ಇವತ್ತ ಮನೀಗೆ ಹೋದಮ್ಯಾಗ ರೊಟ್ಟೀ ಸುಡೂದೈತಿ; ಅದಕ್ಕ ಬಿಡು. ನಾಳೆ ಗಡಾ ಬಂದು ಕುಂಡರತೇನೇಳು” ಎಂದವಳೇ ಯುಕ್ತಿಯಿಂದ ತನ್ನ ಕೈಯನ್ನು ಬಿಡಿಸಿಕೊಂಡು, ಎಡಗೈಯಿಂದ ಸೆರಗನ್ನು ಸಾವರಿಸಿಕೊಳ್ಳುತ್ತ, ಬಲದ ಕೈಯಿಂದ ತಲೆಯ ಮೇಲಿನ ಬುಟ್ಟಿಯನ್ನು ಗಟ್ಟಿಯಾಗಿ ಹಿಡಿದುಕೊಂಡು, ಒಂದು ಸಲ ಬಾಬಾನ ಕಡೆಗೆ ಹೊರಳಿ ನೋಡಿ ಹೊರಟು ಹೋಗಿ ಬಿಟ್ಟಳು.

“ಕವಳೀ ಹಣ್ಣು ಬಾರಬೇ ಕವಳೀಹಣ್ಣೂ”

* * *

ಪಾರ್ವತಿಯು ಇದೇ ಊರಲ್ಲಿಯೆ ಹುಟ್ಟಿ ಬೆಳೆದ ಗವಳಿಗರ ಹುಡುಗಿ. ಅವಳು ಇಲ್ಲಿಯೆ ಹುಟ್ಟಿದವಳಾಗಿದ್ದರೂ ಅವಳನ್ನು ಅವಳ ತಂದೆಯು ಉತ್ತರದ ಕಡೆಯ ಗವಳಿಗನಾದ ಜನಾರ್ದನನಿಗೆ ಕೊಟ್ಟು ಮದುವೆ ಮಾಡಿದ್ದ. ಜನಾರ್ದನನು ಮಾವನ ಅನುಮತಿಯ ಪ್ರಕಾರ ತನ್ನ ಉದ್ಯೋಗವನ್ನು ಸಾಗಿಸುವುದಕ್ಕೋಸ್ಕರ ಧಾರವಾಡದಲ್ಲಿಯೆ ಬಂದಿದ್ದನು. ಬಂದ ಕೆಲವು ದಿನಗಳಲ್ಲಿಯೆ

* ಬೇಗನೆ ಪ್ರಕಾಶಹೊಂದಲಿರುವ “ಬಿಸಿ – ಬಿಸಿ” ಎಂಬ ಹೆಸರಿನ ಕಥಾಸಂಗ್ರಹದೊಳಗಿನದು.

ಪಾರ್ವತಿಯ ತಂದೆತಾಯಿಗಳಿಬ್ಬರೂ ತೀರಿಕೊಂಡದ್ದರಿಂದ, ಈ ಗಂಡ-ಹೆಂಡಿರಿಬ್ಬರೂ ಕೆಲಗೆರೆಯ ಹತ್ತಿರಿನ ಬಂಗ್ಲೆಗಳ ಗುಂಪಿನಲ್ಲಿ ಒಂದು ಸಣ್ಣ ಗುಡಿಸಿಲಿನಲ್ಲಿರುತ್ತಿದ್ದರು.

ಪ್ರತಿದಿನ ಪ್ರಾತಃಕಾಲದಲ್ಲಿ ಜನಾರ್ದನನು ಎರಡೂ ಎಮ್ಮೆಗಳನ್ನು ಹೊಡೆದುಕೊಂಡ ಹೋಗಿ, ಮೇಯಿಸಿಕೊಂಡು, ಕೆಲಗೆರೆಯಲ್ಲಿ ನೀರು ಕುಡಿಸಿ, ಎಂಟುಗಂಟೆಯ ಹೊತ್ತಿಗೆ ಗುಡಿಸಿಲಿಗೆ ಬರುತ್ತಿದ್ದ. ಅಷ್ಟರಲ್ಲಿಯೆ ಪಾರ್ವತಿಯು ಸಗಣಿ-ಕಸಗಳನ್ನೆಲ್ಲ ತೀರಿಸಿಕೊಂಡು, ಕೆಲಗೆರೆಯಲ್ಲಿ ಒಂದು ಕೊಡ ನೀರು ತುಂಬಿಕೊಂಡು, ಅವನ ಜೊತೆಯಲ್ಲಿಯೆ ತಿರುಗಿ ಮನೆಗೆ ಬರುತ್ತಿದ್ದಳು— ಬಂದು ಎಮ್ಮೆಗಳನ್ನು ಹಿಂಡಿಕೊಳ್ಳುತ್ತಿದ್ದಳು. ಅವಳಿಗೆ ಅಲ್ಲಿಯ ಎಲ್ಲ ಮನೆಗಳು ಗುರುತಿನವಿದ್ದುದರಿಂದ, ತಾನೇ ಸ್ವತಃ ಎಲ್ಲ ಕಡೆಗೆ ಹೋಗಿ ಹಾಲುಕೊಟ್ಟು ಬರುತ್ತಿದ್ದಳು. ಅವಳು ತಿರುಗಿ ಬರುವಷ್ಟರಲ್ಲಿ ಜನಾರ್ದನನು ಹತ್ತಿರಿನ ಗುಡ್ಡದ ಮೇಲೆ ಹೋಗಿ ಉರುವಲು ಕಟ್ಟಿಗೆಯನ್ನೂ, ಕವಳಿಯವೊ-ಪರಗಿಯವೊ-ಹಣ್ಣುಗಳನ್ನೂ ತೆಗೆದುಕೊಂಡು ಬರುತ್ತಿದ್ದನು. ಅವನು ಬರುವ ವೇಳೆಗೆ ಪಾರ್ವತಿ ರೊಟ್ಟಿಯನ್ನು ಬಡಿದು ಅಡುಗೆ ಸಿದ್ಧಮಾಡಿ ಇಟ್ಟಿರುತ್ತಿದ್ದಳು. ಹೀಗೆ ಮಧ್ಯಾಹ್ನದ ವೇಳೆಗೆ ಇಬ್ಬರೂ ಕೂಡಿ ಊಟ ತೀರಿಸಿಕೊಂಡು, ಕೆಲಹೊತ್ತು ವಿಶ್ರಮಿಸಿ, ಆ ಮೇಲೆ ಇಳಿಹೊತ್ತಿನಲ್ಲಿ ಪಾರ್ವತಿಯು ಆ ಹಣ್ಣುಗಳನ್ನು ಮಾರಲಿಕ್ಕೆಂದು ಊರಲ್ಲಿ ಹೋಗುತ್ತಿದ್ದಳು. ಅನಂತರ ಎಮ್ಮೆಗಳನ್ನು ಮೇಯಿಸಲಿಕ್ಕೆ ಹೋಗಿ, ಬರುವಾಗ ಮೈತೊಳೆದುಕೊಂಡು ಬರುವುದು ಜನಾರ್ದನನ ಕೆಲಸವಾಗಿತ್ತು.

ಪಾರ್ವತಿ ಇದೇ ಊರಲ್ಲಿಯೆ ಹುಟ್ಟಿ ಬೆಳೆದವಳಾದ್ದರಿಂದ ಆ ಹಣ್ಣುಗಳನ್ನು ಮಾರಲಿಕ್ಕೆ ಅವಳಿಗೆ ವಿಶೇಷ ವೇಳೆ ಹಿಡಿಯುತ್ತಿದ್ದಿಲ್ಲ. ನಾಲ್ಕೆಂಟು ಮನೆ ಅಲೆದಾಡಿ—ಸವಿಯಾದ ಹಣ್ಣುಗಳಿದ್ದರಂತೂ ತೀರಿಯೆ ಹೋಯಿತು, ಇಲ್ಲದೆ ಹೋದರೆ ಸವಿಯಾದ ಮಾತಿನಿಂದಾದರೂ ಅವುಗಳನ್ನು—ವಿಕ್ರಯಿಸಿ, ಕಾಳುಗಳನ್ನೂ, ಹಣವನ್ನೂ ತೆಗೆದುಕೊಂಡು, ಸಂಜೆಯ ಹೊತ್ತಿಗೆ ಗುಡಿಸಿಲನ್ನು ಸೇರುತ್ತಿದ್ದಳು.

ಬಾಬಾ ಠಾಕೂರನು ಪಾರ್ವತಿಯ ಬಾಲ್ಯದ ಗೆಳೆಯ. ಅವನಾದರೂ ಗವಳಿಗನೇ ಇದ್ದರೂ ಅವನಿಗೆ ಆ ಉದ್ಯೋಗವು ಸೇರದ್ದರಿಂದ ಒಂದು ಇಂಗ್ಲಿಷ್ ಶಾಲೆಯಲ್ಲಿ ಆಳುಮಗನಾಗಿ ಅತ ದುಡಿಯುತ್ತಿದ್ದ. ಚಿಕ್ಕಂದಿನಲ್ಲಿ ಪಾರ್ವತಿಯ ಮನೆಯ ಮಗ್ಗುಲಿನ ಮನೆಯಲ್ಲಿಯೆ ಅತನ ಮನೆಯುವದೂ ಇರುತ್ತಿದ್ದುದರಿಂದ, ಇವರಿಬ್ಬರಲ್ಲಿ ಸ್ನೇಹ ಒಳೆದು ಬಂದಿದ್ದಿತು. ಈಗಾದರೂ ಅವಳು ಊರಲ್ಲಿ ಹಣ್ಣುಮಾರಲಿಕ್ಕೆ ಬಂದಾಗ ಪ್ರತಿ ಮಂಗಳವಾರ, ಶನಿವಾರ, ಆದಿತ್ಯವಾರ ಬಾಬಾನ ಮನೆಯಲ್ಲಿ ಕೊಂಚಕಾಲ ಮಾತನಾಡುತ್ತ ಕುಳಿತು, ತಮ್ಮ ಬಾಲ್ಯದ ಆಲ್ಹಾದಮಯವಾದ ಕಾಲವನ್ನು ಕತೆಮಾಡಿ ನೆನೆದು, ನಕ್ಕು, ಕಳೆದು, ಹೋಗುತ್ತಿದ್ದಳು.

* * *

ಆ ದಿನ ಆದಿತ್ಯವಾರ; ಅಂದು ಪಾರ್ವತಿಯು ಬೇಗನೆ ಬಂದು, ಬಹಳ ಹೊತ್ತಿನವರೆಗೆ ಕುಳಿತುಕೊಳ್ಳುವೆನೆಂದು ಹೇಳಿದ್ದರಿಂದ ಬಾಬಾನು ತುಂಬಾ ಹುರುಪಿನಲ್ಲಿದ್ದ. ತಮ್ಮ ಶಾಲೆಯ ಹೆಡ್‌ಮಾಸ್ಟರರ ಮನೆಯ ಅಕ್ಕಿ, ಬೇಳೆ, ಬೆಣ್ಣೆ ಮುಂತಾದುವುಗಳನ್ನು ಬೇಗನೆ ತಂದುಕೊಟ್ಟು, ಮನೆಯಲ್ಲಿ ಮಧ್ಯಾಹ್ನದಿಂದಲೆ ದಾರಿ ಕಾಯುತ್ತ ಕುಳಿತ. ಪ್ರತಿ ಆದಿತ್ಯವಾರಕ್ಕೂ ಮಾಸ್ತರರಿಗೆ ಅಷ್ಟೊಂದು ಕೆಲಸವನ್ನು ಮಾಡಿಕೊಡುತ್ತಿದ್ದರೂ, ಇಂದು ಅದೇಕೋ ಅವನಿಗೆ ಆ ಕೆಲಸ ಬೇಡವೆನಿಸಿತು. ಆದರೂ ಮಾಡಲೆ ಬೇಕಾದುದರಿಂದ ಹೆ. ಮಾ. ರನ್ನು ಮನದಲ್ಲಿಯೆ ಎಷ್ಟೋ ಶಪಿಸಿದ. ತಾನು ಹೊರಗೆ ಹೋದ ವೇಳೆಯಲ್ಲಿ ಅವಳು ಎಲ್ಲಿ ಬಂದು ಹೋಗುವಳೋ ಎಂಬ ಅಂಜಿಕೆಯಿಂದ, ಮನೆಯ ಕೀಲಿಯ ಕೈಯನ್ನು ಹತ್ತಿರಿನ ಮನೆಯವರ ಕೈಯಲ್ಲಿ ಕೊಟ್ಟು, ಯಾರಾದರೂ ಬಂದರೆ ಕೊಡಲಿಕ್ಕೆ ಹೇಳಿರೆಂದು ಹೇಳಿ ಹೋಗಿದ್ದ. ಆದರೆ ಮರಳಿ ಬಂದ ಮೇಲೆ ಅವಳಿನ್ನೂ ಬಂದಿಲ್ಲವೆಂಬುದನ್ನು ಕೇಳಿ ಸಂತೋಷವೂ. ಬರುವಳೋ ಇಲ್ಲವೋ ಎಂಬ ಸಂಶಯದ ಮೂಲಕ ಹೆದರಿಕೆಯೂ ಹುಟ್ಟಿ, ಅವನು ಕೊಂಚ ಕಳವಳಗೊಂಡನು. ಪಾರ್ವತಿ ಬಂದ ಕೂಡಲೆ ಅವಳಿಂದ ಕೂಗಿಸಿಕೊಂಡು ಬಾಗಿಲ ತೆರೆಯಬೇಕೆಂದು ಮಾಡಿ, ಮೊದಲು ಅವನು ಕೊಂಡಿಯನ್ನು ಹಾಕಿ ಒಳಕ್ಕೆ ಕುಳಿತಿದ್ದನು. ಕೆಲವು ಹೊತ್ತು ಕುಳಿತು ದಾರಿ ನೋಡಿದನು. ಆದರೆ ಕೂಡಲೆ ಬೇಸತ್ತು, ಬಂದಳೋ ಹೇಗೆ ನೋಡಬೇಕೆಂಬ ಲವಲವಿಕೆಯಿಂದ ಮೆಲ್ಲಮೆಲ್ಲನೆ ಕಾಲಿಡುತ್ತ ಬಾಗಿಲ ಬಿರುಕಿನೊಳಗಿಂದ ಹಣಿಕಿಕ್ಕಿ ನೋಡಿದ, ನಿರಾಶೆಹೊಂದಿ ನಾಚಿಕೆಗೊಂಡ. "ಅವಳು ಬಂದಿದ್ದರೆ ಅವಳ 'ಕವಳೀಹಣ್ಣು ಬಾರಬೇ ಕವಳೀಹಣ್ಣು' ಎಂಬ ಕೂಗು ಕೇಳಬರುತ್ತಿದ್ದಿಲ್ಲವೆ?" ಎಂಬ ಪ್ರಶ್ನೆಯನ್ನು ತನ್ನಷ್ಟಕ್ಕೆ ಕೇಳಿಕೊಂಡು "ಬಂದೇ ಬರುತ್ತದೆ; ಅವಳು ಬಂದು ಬಾಗಿಲನ್ನು ಬಡಿದು ಕೂಗುವ ವರೆಗೆ ಬಾಗಿಲ ಸಮೀಪಕ್ಕೆ ಬರುವುದಿಲ್ಲ' ಎಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಮತ್ತೊಮ್ಮೆ ಹೋಗಿ ಕುಳಿತ. ಅಕೆಗೆ ತಡವಾದುದರಿಂದ ಒಂದೊಂದೇ ವಿಚಾರಗಳು ಬರಹತ್ತಿದುವು ಅವನ ಮನಸ್ಸಿನಲ್ಲಿ. "ಯಾರ ಮನೆಯಲ್ಲಿ ಹರಟೆ ಹೊಡೆಯುತ್ತ ಕುಳಿತಳೋ ಏನೋ! ಮಾತನಾಡಲಿಕ್ಕೆ ಮೊದಲು ಮಾಡಿದರಾಯಿತು, ಅವಳಿಗೆ ವೇಳೆ ಹೋದುದೇ ಗೊತ್ತಾಗುವದಿಲ್ಲ.. ಇಂದು ಬರುವಳೋ ಇಲ್ಲವೋ? ಹಾಂ! ಬಂದಂತೆ ಕಂಡಿತು.." ಎಂದು ಏನೋ ಒಂದು ಕೂಗು ಕೇಳಿಸಿದಂತೆ ಆದುದರಿಂದ ಅವನು ಬಾಗಿಲನ್ನು ತೆರೆದ. ಕೊಂಚ

ಹೊಸ ಕಾನೂನಿನ ಪ್ರಕಾರ ಟ್ರೇಡ್‌ಮಾರ್ಕುಗಳನ್ನು ರಜಿಸ್ಟರ್ ಮಾಡಿಸುವುದು ಅನಿವಾರ್ಯವಾಗಿದೆ.
ವಿವರಗಳಿಗಾಗಿ ಕೂಡಲೆ ಬರೆಯಿರಿ.
ಸಿ. ಜಿ. ಅನುಂದ್ ಅ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!



ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಕಾಲ ತಡೆದು ನೋಡುತ್ತಾನೆ. ‘ಸೋಡಾ ಲೆಮನ್’ ನವನು. ಬಾಬಾ ತುಂಬಾ ಅಧೀರನಾದ. ಕಡೆಗೆ ‘ಬಾಗಿಲನ್ನು ಮುಚ್ಚು ವುದು ಬೇಡವೇ ಬೇಡ; ಬಂದ ಮೇಲೆ ಸಿಟ್ಟಾದಂತೆ ಮಾಡಿ ಆಕೆ ಯನ್ನು ಗಾಬರಿ ಮಾಡೋಣ’ ಎಂದು ಏನನೋ ವಿಚಾರಿಸುತ್ತ ಮನೆಯ ಒಳಗಿನ ಬಂಕದಲ್ಲಿ ಕುಳಿತ; ಆಮೇಲೆ ಅಡ್ಡಾದ. ಅಷ್ಟ ರಲ್ಲಿಯೆ ಅವನಿಗೆ ಅಲ್ಲಿಯೆ ನಿದ್ರೆ ಹತ್ತಿತು.

ಪಾರ್ವತಿ ಬಂದಳು. ಆಕೆ ಆ ದಿನ ಬರಿಯ ಬುಟ್ಟಿಯನ್ನು ಹಿಡಿದುಕೊಂಡು ಬಂದಿದ್ದರೂ, ಅದನ್ನು ತಲೆಯ ಮೇಲಿಟ್ಟು ಕೊಂಡು ಬಾಬಾನ ಹತ್ತಿರ ಬಂದು ಚೇಷ್ಟೆಗಾಗಿ ‘ಕವಳೀಹಣ್ಣು **ಬಾರಬೇ ಕವಳೀಹಣ್ಣೂ**’ ಎಂದು ಅವನ ಕಿವಿಗಳಲ್ಲಿ ಗಟ್ಟಿಯಾಗಿ ಕೂಗಿದಳು. ಅದಕ್ಕೆ ಅವನು ಎಚ್ಚತ್ತು ಆತುರದ ಧ್ವನಿಯಲ್ಲಿ ಕೇಳಿದ:

“ಪಾರೀ, ಕದಾ ಯಾರು ತಗದರs” ಅದಕ್ಕೆ ಪಾರ್ವತಿ ಗಹಗಹಿಸಿ ನಗುತ್ತ ಹೇಳಿದಳು:

“ಯಾಕs, ಕನಸ ಬಿದ್ದೈತೇನು? ಬಾಗಲ ತಗದೇ ಇತ್ತಲ್ಲಾ!” ಎಂದಳು. ಆಗ ಬಾಬಾನು ತನ್ನ ಮನಸ್ಸಿನ ಆಂದೋಲನದಲ್ಲಿ ಬಾಗಿಲನ್ನು ತೆರೆದಿರಿಸಿದುದು ನೆನಪಿಗೆ ಬಂದು, ತಾನೂ ಸ್ವಲ್ಪ ನಕ್ಕು ನುಡಿದ:

“ಇರ್ಲಿ ಬಿಡs.. ಪಾರೀ ಈಟೊತ್ತ್ಯಾಕ ಮಾಡಿದೇ? ಗಡಾ ಬರತೇನಿ ಅಂತ ಹೇಳಿದ್ದಿ?” ಪಾರ್ವತಿ ಹೇಳತೊಡಗಿದಳು :

“ಹೌದಲ್ಲಾ ಕರೇವು! ಆದರ ಇದೊಂದಿಟು ಸಂತೀ ಮಾಡ ಬೇಕಾಗಿತ್ತು. ಅದಕ್ಕs ಹಾಲಿನ ರೊಕ್ಕಾ ವಸೂಲು ಮಾಡಿಕೊಂಡು ಬಂದೆ. ಆ ಮ್ಯಾಗ, ಜಾನ್ಯಾಗ ಹಣ್ಣು ತರಲಾಕ ಹೋಗಬ್ಯಾಡಾ ಅಂತ ಹೇಳಿ ‘ಪ್ಯಾಟ್ಯಾಗ ಬರದs ಬಾಳ ದಿನಾ ಆತು; ನೀನೂ ನಡಿ’ ಅಂದೆ. ಅದಕ್ಕ ಅಂವ ‘ಅsಟ ಎಮ್ಮಿ ಮ್ಯೆಯರ ತೊಳೆದು ಬರತೇನೀ ಮುಂದಾಗು’ ಅಂತ ಹೇಳಿದ. ಅದಕ್ಕs ನಾನು ಮುಂದ ಬಂದುಬಿಟ್ಟೆ. ಇಲ್ಲಾಂದ್ರ ಚೆಂಜೇನ ಆಗ್ತಿತ್ತು ಇಂದೂ” ಎಂದಳು. ಅಷ್ಟು ಮಾತನಾಡುವಾಗ ಪಾರ್ವತಿಯ ನೋಟವು, ಮೊದಲು ತಮ್ಮಿಬ್ಬರ ನಡುವೆ ಇಟ್ಟ ಆ ಬರಿಯ ಬುಟ್ಟಿಯ ಕಡೆಗೆ, ಆಮೇಲೆ ಒಳಗೆ ಅಸ್ತವ್ಯಸ್ತವಾಗಿ ಬಿದ್ದಿರುವ ಹಾಸುಗೆ ಹಾಗೂ ಪಾತ್ರೆಗಳ ಕಡೆಗೆ ಸುಳಿದಾಡಿತು. ಆದರೆ ಬಾಬಾನು ಮಾತ್ರ ‘ಜಾನೂ ಈಗೆಲ್ಲಿರುವ?’ ಎಂಬುದನ್ನು ಕೇಳುವುದನ್ನು ಬಿಟ್ಟು, ‘ಆಕೆ ತನ್ನನ್ನು ಕಾಣುವುದಕ್ಕಾಗಿ ಹೇಗೆ ಉಪಾಯಾಂತರದಿಂದ ಜಾನೂನನ್ನು ತಪ್ಪಿಸಿ ಬಂದಿರುವಳಲ್ಲ’—ಎಂದು ಮನಸ್ಸಿಗೊಂದು ಬಗೆಯ ಸಮಾಧಾನವನ್ನು ಹಚ್ಚಿಕೊಳ್ಳುತ್ತ, ಆಕೆಯನ್ನು ಮನ ದಲ್ಲಿಯೆ ಕೊಂಡಾಡಿದ. ಅದೇ ಹುರುಪಿನಲ್ಲಿ ಅವನು ಹೇಳಿದ :

“ಪಾರೀ, ಚಾಪುಡಿ ಹಾಲು ಸಕ್ರೀ ತಂದೀನಿ. ಅsಟು ಚಾ ಕಾಸಬಾರದs?-ನನಗೂ ಅsಟ ಆಕ್ಕೈತಿ!” ಎಂದು ನಗು- ಮೋರೆಯನ್ನು ಮಾಡಿದ.

“ಗಡಾನs ಒಂದು ಮದಿವೀ ಮಾಡಿಕೋ ಬಾರದಪ್ಪಾ, ನನಗೂ ಚಾ ಕಾಸಿಕೊಡಾಕ್ಕರs ಆಕ್ಕಿದ್ಲು-ನಿನಗೂ ಹೀಂಗ ಬಾಯಿ ತೆರೆಯೋ ಯಾಳೆ ಬರತಿದ್ದಿಲ್ಲ” ಎಂದು ಅವನ ಮಾತಿಗೆ ಪ್ರತಿ ಯಾಗಿ ನುಡಿದು ಆಕೆಯೂ ನಗಹತ್ತಿದಳು. ಕೂಡಲೆ ಎದ್ದು ಅದೇ ಬಂಕದ ಮೂಲೆಯಲ್ಲಿ ಹೂಡಿದ ಒಲೆಯನ್ನು ಹೊತ್ತಿಸಿ, ಎಸರಿಗಾಗಿ ನೀರಿಟ್ಟಳು. ಆಗ ಬಾಬಾನ ಮನಸ್ಸಿನಲ್ಲಿ ಅವಳು ಆಡಿದ ಮಾತುಗಳೇ ಸುಳಿದಾಡುತ್ತಿದ್ದುವು. ಅವನು ಎದ್ದು ಅತ್ತಿಂದಿತ್ತ ಅಲೆದಾಡುತ್ತಿರುವಾಗ ಚಿಕ್ಕತನದ ಒಂದೊಂದೇ ಚಿತ್ರವನ್ನು ಕಾಣತೊಡಗಿದ. ಕಡೆಗೆ ಅವಳ ಹತ್ತಿರ ಬಂದು, ನಿರಾಶೆಯ ದನಿಯಲ್ಲಿ ಹೇಳಿದ:

“ಏನ ಮಾಡಲೇ ಪಾರೀ? ಹೊರಗ ದುಡಿದು ತಂದು ಹಾಕಾಕೂ, ಒಳಗ ಅಡಿಗಿ ಮಾಡಿ ಹಾಕಾಕೂ ನನಗ ನೆರವಾಗೂ ಅಂಥಾ, ನಿನ್ನಂತಾ ಹೆಣ್ಣು ಸಿಕ್ಕರ, ಮಾಡಿಕೊಳಾಕ ತಯಾರ ಅದೀನಿ ನಾನೂ..ಆದರ—”

“ಬಾಳ ಬಿಡಪಾ ನಿಂದೂ. ಗಿಡದಾಗನs ಹಣ್ಣಾಗಿದ್ದೂ ಆಗ ಬೇಕಂದರ ಎಲ್ಲಿಂದs ಬರಬೇಕಿನ್ನ. ಮೊದಲs ಅsಟ ಪಾಡ ಇದ್ದದ್ದು ನೋಡಿಕೂಂತ್ರ, ಹಿಂದ್ಕಿಂದ ಎಲ್ಲಾ ಬೇಕಾಕ್ಕೈತಿ” ಎಂದು ಎಸರಿನಲ್ಲಿ ಪುಡಿ ಹಾಕಿ, ಪಾತ್ರೆಯನ್ನು ಕೆಳಗಿಳಿಸಿದಳು. ಹಾಲಿನ ಪಾತ್ರೆಯನ್ನು ಒಲೆಯ ಮೇಲಿಟ್ಟು, ಎದ್ದು, ಇನ್ನೂ ಏನೋ ಹೇಳ ಬೇಕೆಂದು ಮಾಡಿದ್ದಳು. ಆದರೆ ಬಾಬಾನ ಚಿತ್ತ ಆಕೆಯ ಮಾತಿನ

ಕಡೆಗೆ ಇದ್ದಿಲ್ಲವೆಂಬುದನ್ನು ಕಂಡು, ತನ್ನ ಮೊದಲಿನ ಸ್ಥಳದ ಮೇಲೆ ಸುಮ್ಮನೆ ಕುಳಿತಳು. ತುಸುವೇಳೆಗೆ ಮತ್ತೆ ಎದ್ದು ಚಹವನ್ನು ಸೋಸಿ, ಹಾಲು ಬೆರಸಿ, ಒಂದು ಉಂಗುರಿಲ್ಲದ ಕಪ್ಪಿನಲ್ಲಿ ಬಾಬಾನಿಗೂ, ಆ ಹಾಲಿನ ಪಾತ್ರೆಯಲ್ಲಿ ತನಗೂ ಚಹವನ್ನು ತೆಗೆದುಕೊಂಡಳು. ಬಾಬಾನ ಬಾಯಿಂದ ಮಾತ್ರ ಏನೂ ಮಾತುಗಳೇ ಹೊರಡಲೊಲ್ಲವು. ಬಹಳ ದಿನಗಳಿಂದ ಕೇಳಬೇಕೆಂದು ಮಾಡಿದ ಒಂದು ಪ್ರಶ್ನೆ ಅವನ ಮನಸ್ಸಿನಲ್ಲಿಯೆ ಉಳಿದಿತ್ತು. ಈಗ ತುಸುವೇಳೆಯ ಹಿಂದೆಯೆ ಪುನಃ ಕೇಳಬೇಕೆಂದು ನಾಲಗೆಯ ತುದಿಯವರೆಗೆ ಬಂದು, ಅದು ಪುನಃ ತಿರುಗಿ ಹೋಗಿತ್ತು. ಈಗ ಅವನು ಯೋಚಿಸುತ್ತಿರುವುದು ಅದನ್ನು ಹೇಗೆ ಕೇಳಬೇಕೆಂಬುದನ್ನೇ. ಕಡೆಗೆ ಹೇಗೊ ಹೇಗೋ ಚಹಕುಡಿದು ಮುಗಿಸಿ, ಮೆಲ್ಲಗೆ ಮಾತನ್ನಾರಂಭಿಸಿದ:

"ಪಾರೀ.. ಈಟ ದಿನ ನಾವ್ಹ್ಯಾಂಗ ಮಾತಾಡಿಕೊಂತ ಬಂದೀವಿ.. ಸಲಿಗೀಂದ ಇದ್ದೀವಿ.. ಹಾಂಗ ಮುಂದೂ ಕಡಿತನಕಾ ಇರಲಿಕ್ಕೆ ಆದೀತೇನ.." ಎಂದು ಅರ್ಧರ್ಧವಾಗಿ ನುಡಿದ. ಅಷ್ಟು ಮಾತನಾಡಬೇಕಾದರೆ ಅವನಿಗೆ ಸಾಕುಬೇಕಾಗಿ ಹೋಯಿತು. ಮೋರೆ ಕೆಳಗೆ ಮಾಡಿ, ಎಡಗೈ ಬೆರಳಿನ ಉಗುರನ್ನು ಕಡಿಯುತ್ತ ಅಂತೂ ಒಮ್ಮೆ ಬಹಳ ದಿವಸಗಳಿಂದ ಮನಸ್ಸಿನಲ್ಲಿಟ್ಟು ಮಲಿನವಾದ ಉಸಿರನ್ನು ಹೊರದೂಡಿದ. ಅವನಿಗೆ ಅದೊಂದು ದೊಡ್ಡ ಪ್ರಶ್ನೆ. ಆದರೆ ಆಕೆಯು ಶಾಂತಭಾವದಳಾಗಿಯೆ ನುಡಿದಳು:

"ಅದೇನು? ಬರೋವಾಕಿ ಮಾತ್ರ ನಿನ್ನ ತಲೀ ಕೆಡಿಸಬಾರದೂ ಆತು" ಮಾತನಾಡುತ್ತಿರುವಾಗ ಆಕೆಯ ಕೈಗಳು ಆ ಬರಿಯ ಬುಟ್ಟಿಯ ದಂಡೆಗುಂಟ ಆಡುತ್ತಿದ್ದುವು. ಬಾಬಾನು ಆಕೆಯ ಮಾತಿನ ಮೊದಲಿನ ಶಬ್ದದಿಂದ ಹುರಿದುಂಬಿ, ಆಕೆಯ ಕೈಗಳ ಮೇಲೆ ಕೈಯಿಟ್ಟು ಹೇಳಿದ:

"ಅದೇನು ಮಾಡೀತು ಬಿಡ.. ಆದರ ಜಾನೂಗ ಗೊತ್ತಾದರ..!" ತಾನು ಗೆಲುವನ್ನು ಒಂದೊಂದೇ ಹೆಜ್ಜೆ ಸಮಿಪಿಸ ಹತ್ತಿರುವೆನೆಂದು ಎನಿಸಹತ್ತಿತು ಅವನಿಗೆ. ಅದಕ್ಕಿಂತಲೇ ಅವನು ಆ ಸಮಸ್ಯೆಯನ್ನು ಬಿಡಿಬಿಡಿಯಾಗಿ ಮುಂದಿಡಹತ್ತಿದ್ದನು. ಪಾರ್ವತಿ ಸಹಜಸ್ವರದಲ್ಲಿಯೆ ಕೇಳಿದಳು:

"ಗೊತ್ತಾದರೇನಾಯಿತು..? ಜಾನೂಗೇನು ಗೊತ್ತಿಲ್ಲ ಏನು.. ನಾ ಹ್ಯಾಂಗದೇನಿ ಅಂಬೂದು?" ಎಂದು ಬಾಗಿಲ ಕಡೆಗೆ ನೋಡಹತ್ತಿದಳು. ಅದರರ್ಥ ಅವನಿಗೆ ಚೆನ್ನಾಗಿ ಆಗಲಿಲ್ಲ. ಅವನಿನ್ನೂ ತನ್ನ ಗುಂಗಿನಲ್ಲಿಯೆ ಇದ್ದ. ಕಡೆಯ ಮಾತನ್ನೊಂದು ಅವಳಿಗೆ ತಿಳಿಸಿಯೆ ಬಿಡಬೇಕೆಂದು ಅವನು ಹೇಳತೊಡಗಿದ:

"ಆದರ ಪಾರೀ, ಈ ಮನೀ ಮಂದೀ ಮಾತ ಕೇಳಿದರ ನನಗ ಸಿಟ್ಟು ಬೆಂಕಿ ಬರತೈತಿ ನೋಡು!"

"ಅದಕ್ಯಾಕಟು ಸಿಟ್ಟಿಗೇಳೋದು? ಅದಕ್ಕಂತ ಈಗೀಗ ನಮ್ಮ ಅತ್ತಿಗಿಸುದ್ದಾ ನಮ್ಮ ನಿಮ್ಮ ಮನೀಗೆ ಬರೋದನ್ನ ಬಿಟ್ಟಾಳ, ಹೌದಲ್ಲೊ? ಆದರ, ಬಾಬಾ, ಮಂದಿ ಅನ್ನೋದು ತಗೊಂಡು ಏನು ಮಾಡೋದು! ನಮ್ಮಾಟಕ ನಾವು ನೆಟ್ಟಗಿದ್ದರಾಯಿತು" ಎಂದು ನುಡಿದಳು. ಆ ಮಾತಿನಿಂದ ಅವನಿಗೆ ಆಶ್ಚರ್ಯವಾಯಿತು. ಆದರೆ ಅದೇ ವೇಳೆಗೆ ಪಾರ್ವತಿಯು ಬಾಗಿಲಿಗೆ ಹೋದದ್ದನ್ನು ನೋಡಿ ಅವನು ಮತ್ತಷ್ಟು ಗಾಬರಿಯಿಂದ ಅತ್ತ ಕಡೆಗೆ ನೋಡಹತ್ತಿದ. ಹೆಗಲ ಮೇಲೆ ಒಂದೆರಡು ಹಸಿಬೆಗಳನ್ನು ಹಾಕಿಕೊಂಡು ಜಾನೂ ಬಾಗಿಲಲ್ಲಿ ನಿಂತಿದ್ದ. ಎದ್ದು ಅವನನ್ನು ಒಳಗೆ ಕರೆಯಬೇಕೆಂಬುದು ಸಹ ಬಾಬಾನಿಗೆ ತೋಚಲಿಲ್ಲ.

"ಹೌದು ಇದ ಮನೀ ಬಾ ಜಾನೂ!" ಎಂದು ಪಾರ್ವತಿಯೆ ಅವನನ್ನು ಒಳಕ್ಕೆ ಕರೆದಳು.

"ನಾ ಹಗಲೆಲ್ಲಾ ಹೇಳತಿದ್ದೆನಲ್ಲ.. ಇವನ ನಮ್ಮ ಬಾಬಾ! ಬಾಬಾ, ನಾ ಜಾನೂಗ ಇಲ್ಲೇ ಬರಲಾಕ ಹೇಳಿದ್ದೆ.. ಜಾನೂ ಇನ್ನೊಂದೀಟು ಗಡಾ ಬಂದಿದ್ದರ ನಿನಗೂ ಚಾ ಸಿಗತಿತ್ತು.. ಹೋಗಗೋಣ ಪ್ಯಾಟ್ಯಾಗ.. ಬಾಬಾ, ಹೋಕ್ಕೇವು ನಾವಿನ್ನ.." ಎಂದು ಇಬ್ಬರ ಕಡೆಗೂ ನೋಡುತ್ತ ಅವಳು ನುಡಿದಳು. ಜನಾರ್ದನನೂ ನಗುತ್ತ ತಲೆ ಅಲ್ಲಾಡಿಸಿದ. ಬಾಬಾನ ಬಾಯಿಂದ ಮಾತುಗಳೇ ಹೊರಡದಂತಾಗಿದ್ದುವು. ಕಡೆಗೆ ಪಾರ್ವತಿಯು ಅವನ ಅಸಹಾಯ್ಯ ಪರಿಸ್ಥಿತಿಯನ್ನು ಕಂಡು,

"ಬಾಬಾ, ನಮ್ಮ ಬಾಳೇವಂದ್ರ ಕವಳೀ ಹಣ್ಣು ಇದ್ದಾಂಗ. ಹೊರಗ ಬೇಕಾದಟು ಸವೀಕಾಣಲೀ, ಹುಳೀಕಾಣಲೀ ಒಳಗೊಳಗ ಯಾಡ್ನೂ ಕಾಳು ಕೂಡೇ ಇರೂದ.. ಹೋಕ್ಕೇವು" ಎಂದು ಜಾನೂನ ಕೈ ಹಿಡಿದುಕೊಂಡು ಹೊರಟುಬಿಟ್ಟಳು ಪಾರ್ವತಿ.

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್ ಧನವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಪಾತ್ರೆಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ನಾಝೀ ಜೀವನ

ಪ್ರೊ. ಎನ್. ಎಂ ಕುಲಕರ್ಣಿ, ಎಂ. ಎ.,
ಬನಾರಸ ಹಿಂದೂ ಯುನಿವರ್ಸಿಟಿ

(೧)

ರ್‍ಹಾಯಿನ್‌ಲ್ಯಾಂಡ್ ಅತಿಕ್ರಮಣ

★

ಇಂದು ಜರ್ಮನಿಯ ಹೆಸರೂ ಹಿಟ್ಲರನ ಹೆಸರೂ ಜಗತ್ತನ್ನೆ ಬೆರಗುಗೊಳಿಸಿಬಿಟ್ಟಿವೆ. ಈಗ ೧೬-೧೭ ವರ್ಷಗಳ ಹಿಂದಿನ ಜರ್ಮನಿಯೆಂದರೆ ಅದೊಂದು ಇಹಲೋಕದ ನರಕ. ಹೊಟ್ಟೆಯ ಹಸಿವಿಗಾಗಿ ಅಂದು ಜರ್ಮನರು ಯಾವಬಗೆಯ ನಾಚಿಕೆ ಹಿಡಿಯಲಿಲ್ಲ; ಹೇಸಿಗೆ ಹಿಡಿಯಲಿಲ್ಲ. ಆದರೆ ಒಂದು ಆಶ್ಚರ್ಯ: ಅದೇ ನರಕವೇ ಹಿಟ್ಲರನಂತಹ ಒಂದು ಅದ್ಭುತ ಜೀವಜ್ಯೋತಿಯನ್ನು ಜರ್ಮನಿಗೆ ಒದಗಿಸಿಕೊಟ್ಟಿತು. ಇಂದು ಆ ಜ್ಯೋತಿಯ ಬೆಳಕಿನಲ್ಲಿ ಜರ್ಮನರು ರುದ್ರಲೀಲೆಯನ್ನು ನಡೆಯಿಸಿದ್ದಾರೆ.

★

ಅಡಾಲ್ಫ್ ಹಿಟ್ಲರ್! ರೋಮಾಂಚ ತರುವ ಹೆಸರು! ಜರ್ಮನಿಯ ಜೀವ-ಜ್ಯೋತಿ! ಮಹಾಯುದ್ಧದಲ್ಲಿ ತುಳಿದುಳಿದ ತನ್ನ ರಾಷ್ಟ್ರವನ್ನು ಪುನಃ ಮೇಲ್ಮೆಟ್ಟಲಿಗೆ ತಂದಿರುವ. ಎಷ್ಟು ದಿನದಲ್ಲಿ? ಆರೇಳು ವರ್ಷಗಳಲ್ಲಿ! ಶಕ್ಯವಿದೆಯೋ? ಸೋಲರಿಯದೀ ಸರ್ವಾಧಿಕಾರಿಗೆ ಅಶಕ್ಯವಿದ್ದದ್ದಿಲ್ಲ. ಪಾಶ್ಚಾತ್ಯ ನಕ್ಷೆಕಾರರಿಗೆ ಒಂದು ಸಮಸ್ಯೆಯನ್ನೇ ತಂದುಬಿಟ್ಟಿದ್ದಾನೆ. ಬೆಳಗಾಗುವುದರಲ್ಲಿ ರಾಷ್ಟ್ರದ ಮೇರೆಗಳನ್ನು ಬುಡ-ಮೇಲುಮಾಡಿ ಬಿಡುತ್ತಾನೆ. ಆ ಮಹಾ "ಶಾಂತಿ ಒಪ್ಪಂದವು" ನಿಮಗೆ ಗೊತ್ತಿವೆಯಷ್ಟೆ? ಅದೇನೋ ದೊಡ್ಡ ದೊಡ್ಡ ವ್ಯಕ್ತಿಗಳುಕೂಡಿ ಗುಡ್ಡದಂತಹ ಶಾಂತಿಯನ್ನು ತಂದುಬಿಟ್ಟರು, ಯುದ್ಧವಾದ ನಂತರ! ಅರುವತ್ತೇಳು ಲಕ್ಷ ಜರ್ಮನರಿಗೆ ಉಪವಾಸ ತಂದ ಶಾಂತಿಯದು. ಕ್ರಾಂತಿ ಬರದಿಹುದೇ ಈ ಶಾಂತಿಯಿಂದ! ಅದು ಯುದ್ಧ ಮುಗಿಯುತ್ತಲೇ ಬಂದುಬಿಟ್ಟಿತು. ಕೊನೆಯ ಒಂದು ಶ್ವಾಸವಿರುವವರೆಗೆ ಕಾದುವೆನೆಂದ ಕೈಸರನು ಕೈಮುಚ್ಚಿಕೊಂಡು ಎಲ್ಲಿಯೋ ಓಡಿಹೋಗಬೇಕಾಯ್ತು. ರಾಷ್ಟ್ರದ ಶಕ್ತಿಯನ್ನೆಲ್ಲ ಯುದ್ಧದ ಜೂಜಿನಲ್ಲಿ ಬದ್ಧಮಾಡಿದ ಜರ್ಮನಿಯು, ಕೊನೆಗೆ ಮಧ್ಯಾಹ್ನಕ್ಕೆ ಕಾಣದಂತೆ ಮಿಡುಕ ಬೇಕಾಯ್ತು. ಇದರ ಕಾರಣಗಳು ಬಹಳ ಇವೆ. ಅವುಗಳಲ್ಲಿ 'ಶಾಂತಿ' ಒಪ್ಪಂದದ ಪ್ರಕಾರ ಫ್ರಾನ್ಸಕ್ಕೆ ಸಲ್ಲಿಸುವ ಸಂಪತ್ತನ್ನು ಹುಟ್ಟಿಸುವುದು ಮಾತ್ರ ಬಹು ದೊಡ್ಡ ಸಮಸ್ಯೆಯಾಗಿಬಿಟ್ಟಿತು. ಮುರುಕ ಗುಡಿಸಲಲ್ಲಿ ಮಕ್ಕಳು ಹಸಿವೆಯಿಂದ ಸಾಯುತ್ತಿರುವಾಗ ಬಡ ಭಕ್ತನೊರ್ವ ದೇವರಲ್ಲಿ ಬಂದು ಧನ ಬೇಡಿದಾಗ 'ಕನಕೇಷ್ಟಿಯಾಗ' ಮಾಡೆಂದು ಹೇಳಿದಂತಾಯಿತು ಜರ್ಮನರಿಗೆ! 'ಇಂತಿಷ್ಟು ವೇಳೆಯಲ್ಲಿ ಈ ಪ್ರಕಾರ ನಮ್ಮ ಸಾಲ ಮುಟ್ಟಿಬಿಡಲಿ' ಎಂದು ಫ್ರಾನ್ಸ್-ಬ್ರಿಟನ್ ದೇಶದವರು ಜರ್ಮನರಿಗೆ ನೋಟೀಸು ಕೊಟ್ಟುಬಿಟ್ಟರು. ಆ ನೋಟೀಸಿನ ಕೋರಿಕೆಯನ್ನು ಮೀರಿದ್ದಕ್ಕೆ ಜರ್ಮನಿಯ ಶ್ರೇಷ್ಠವಾದ ಫಲವತ್ತಾದ ಭೂಭಾಗವನ್ನೊಂದನ್ನು ಫ್ರೆಂಚ್ ಸರಕಾರವು ಅತಿಕ್ರಮಿಸಿ ಬಿಟ್ಟಿತು. ಈ ಅತಿಕ್ರಮಣದ ಪರಿಣಾಮವು ಮುಂದೆಬಹ ನಾಝೀ ಪಂಥದ ಬೆಂಕಿಗೆ ಪುಟಕೊಟ್ಟಿತು. ಆ ಅತಿ-ಕ್ರಮಣ ಮತ್ತು ಅದರ ಪರಿಣಾಮವನ್ನು ಪ್ರಸ್ತುತ ಲೇಖನದಲ್ಲಿ ಚಿತ್ರಿಸಲು ಹವಣಿಸಿದ್ದೇನೆ.

ಪೃಥ್ವಿಯಲ್ಲಿ ನಂದನವನ ಇರುವಂತಿದೆ ಸ್ವಿತ್ಸರ್ಲಂಡ್ ದೇಶ; ಅಲ್ಲಿ ಉಗಮಹೊಂದಿ, ಫ್ರಾನ್ಸ್ ಮತ್ತು ಜರ್ಮನಿಯು ನಡುವೆ ಹರಿದು, ಉತ್ತರಸಮುದ್ರಕ್ಕೆ ಕೂಡಿದ ನದಿಯೇ ರ್‍ಹಾಯಿನ್ ಎಂಬುದು. ನಮ್ಮ ದೇಶದ ನದಿಗಳಂತೆ ದೊಡ್ಡದಲ್ಲ; ಎಂಟೇ ನೂರು ಮೈಲಿಗಳವರೆಗೆ ಹರಿದಿರುವುದು. ಆದರೆ ಈ ನದಿಯ ವೈಶಿಷ್ಟ್ಯವೊಂದೆಂದರೆ ತಾನು ಹರಿದ ಭೂಮಿಯನ್ನೆಲ್ಲ ಇದು ಫಲಪ್ರದವನ್ನಾಗಿ ಮಾಡಿರುವುದು. 'ರ್‍ಹಾಯಿನ್‌ಲ್ಯಾಂಡ್' ಎಂಬುದು ಪ್ರುಶಿಯಾದಲ್ಲಿಯ ಒಂದು ಪ್ರಾಂತ; ತಿಕ್ಕಿಹತ್ತಿಕ್ಕಿ ಜನ ತುಂಬಿದ ಜರ್ಮನಿಯ ಭಾಗ; ಒಂಬತ್ತುಸಾವಿರ ಚೌರಸುಮೈಲಿನ ಇದರ ಕ್ಷೇತ್ರದಲ್ಲಿ ಎಪ್ಪತ್ತೆರಡು ಲಕ್ಷದ ಮೇಲೆ ಜನರು ತುಂಬಿವ್ದಾರೆ. ಅವರೆಲ್ಲ ಸುಮ್ಮನೆ ಕೂಡುವ ಜನರೂ ಅಲ್ಲ. ಪ್ರಾಯಶಃ ಜಗತ್ತಿನಲ್ಲಿಯ ಯಾವ ಜನಾಂಗದವರೂ ಈ ಜನರಷ್ಟು ಉದ್ಯೋಗಿಗಳೂ, ಕಷ್ಟ ಸಹಿಷ್ಣುಗಳೂ ಇರಲಿಕ್ಕಿಲ್ಲ. ಅಂತೆಯೇ **ರ್‍ಹಾಯಿನ್** ಪ್ರದೇಶವು ಜರ್ಮನಿಯ ಜೀವಾಳವಾಗಿದೆ. **ರ್‍ಹಾಯಿನ್** ನದಿಗೆ

ರುಹರ್ ಎಂಬ ಚಿಕ್ಕ ನದಿಯೊಂದು ಕೂಡಿದೆ; ನೂರೈವತ್ತು ಮೈಲು ಮಾತ್ರ ಇದು ಹರಿದಿದೆ; ಆದರೆ ಈ ನೂರೈವತ್ತು ಮೈಲಿನ ಪ್ರದೇಶದಲ್ಲಿ ಜರ್ಮನಿಯ ಕಲ್ಲಿದ್ದಲಿಯ ಖಣಿಗಳು ತುಂಬಿವೆ; ಕಬ್ಬಿಣ ಖಣಿಗಳೂ ಇದರಲ್ಲಿವೆ. ಈ ರುಹರ್ ಜಿಲ್ಲೆಯಲ್ಲಿ, ಕಳೆದ ಮಹಾಯುದ್ಧದ ಕಾಲದಲ್ಲಿ, ಜರ್ಮನಿಯ ಮದ್ದು-ಗುಂಡುಗಳ ಕಾರ್ಖಾನೆಗಳು ಹೇರಳವಾಗಿ ಬೆಳೆದಿದ್ದುವು. ಸ್ವಲ್ಪದರಲ್ಲಿ ಹೇಳಬೇಕೆಂದರೆ ರುಹರ್ ಪ್ರದೇಶವು ಜರ್ಮನಿಯ ಮುಖ್ಯ ಜೀವನಾಡಿಯಾಗಿತ್ತು. ರ್‍ಹಾಯಿನ್ ಪ್ರದೇಶವು ಒಟ್ಟಾಗಿ ಜರ್ಮನ್ ಜನಾಂಗದ ಜೀವಸೂತ್ರವಾಗಿತ್ತು, ಔದ್ಯೋಗಿಕೋನ್ನತಿಯು ಮೇಲ್ಪಂಕ್ತಿಯಲ್ಲಿತ್ತು. ರುಹರ್ ದೇಶದ ಕಲ್ಲಿದ್ದಲಿಯ ಕ್ಷೇತ್ರಗಳು **ಡ್ಯೂಸೆಲ್‌ಡಾರ್ಫ್** ಜಿಲ್ಲೆಯ ಕಾರ್ಖಾನೆಗಳಿಗೆಲ್ಲ ಉರುವಲು ಪೂರಯಿಸುವುವು. ಹೆಸರಾದ ಸಾರ್ ಕಲ್ಲಿದ್ದಲಿಯ ಕ್ಷೇತ್ರವೂ ಈ ಭಾಗದ ದಕ್ಷಿಣಕ್ಕೇ ಇರುತ್ತದೆ. ಈ ರೀತಿಯಾಗಿ ರ್‍ಹಾಯಿನ್ ಪ್ರದೇಶವು ಔದ್ಯೋಗಿಕ ಕೇಂದ್ರವಾಗಿದ್ದು, ಜರ್ಮನಿಯ ವ್ಯಾಪಾರೋದ್ಯೋಗಗಳ ತವರುಮನೆಯಾಗಿತ್ತು. ಮಹಾಯುದ್ಧ ಪ್ರಾರಂಭವಾದಾಗ ಜರ್ಮನಿಯು ತನ್ನ **ರ್‍ಹಾಯಿನ್‌ಲ್ಯಾಂಡ್, ವೆಸ್ಟ್‌ಫೇಲಿಯಾ** ಮತ್ತು ಸ್ಯಾಕ್ಸನಿ ಜಿಲ್ಲೆಗಳಲ್ಲಿ ಹುಟ್ಟುವ ಮಾಲುಗಳಿಂದ ಬ್ರಿಟನ್ ದೇಶವನ್ನು ತುಂಬುತ್ತಿತ್ತು. ಜಗತ್ತಿಗೇ ಶ್ರೇಷ್ಠವಾದ ವ್ಯಾಪಾರಿಗಳಾಗಿದ್ದರು ಜರ್ಮನರು. ಸಾಧಾರಣವಾಗಿ ಜಪಾನೊಂದನ್ನುಳಿದು ಇನ್ನಾವ ರಾಷ್ಟ್ರಗಳಲ್ಲಿಯೂ ಜರ್ಮನರಂತಹ ಕಷ್ಟಸಹಿಷ್ಣುಗಳೂ, ಅಲ್ಪಕೂಲಿಯಿಂದಲೆ ತೃಪ್ತರಾಗುವಂತಹ ಕೆಲಸಗಾರರೂ ಇರಲಾರರು. ಅಂತೆಯೆ ಜರ್ಮನರು ವ್ಯಾಪಾರೋದ್ಯಮದಲ್ಲಿ ಮೇಲ್ಮೆಟ್ಟಿನವರಾಗಿದ್ದರು.

ವ್ಯಾಪಾರೋದ್ಯೋಗವು ಜರ್ಮನಿಯ ಉತ್ತರಜಿಲ್ಲೆಗಳಲ್ಲಿ ಹೆಚ್ಚು ಪ್ರಬಲವಾಗಿದೆ. ಕೃಷಿಕರ್ಮವೂ ಸಾಧಾರಣವಾಗಿ ನಡೆಯುತ್ತದೆ. ಆದರೆ ಜರ್ಮನಿಯ ಆರ್ಥಿಕ-ಸ್ಥಿತಿಯು ವ್ಯಾಪಾರೋದ್ಯಮದಿಂದಲೆ ಭದ್ರವಾಗಿರುವುದಲ್ಲದೆ ಕೃಷಿಕರ್ಮದಿಂದಲ್ಲ. ಹೀಗಿದ್ದರೂ ರ್‍ಹಾಯಿನ್ ಪ್ರದೇಶವು ಕೇವಲ ಯಂತ್ರ–ಗಿರಣಿಗಳ ಹೊಗೆಯಿಂದ ಮುಸುಕಿದ ಭಾಗವೆಂದು ತಿಳಿಯಕೂಡದು. ರ್‍ಹಾಯಿನ್ ನದಿಯ ಸುತ್ತಲಿನ ಗಿರಿ-ಕಂದರಗಳು, ನಿಸರ್ಗದೇವತೆಯು ತನ್ನ ರಂಜನಕ್ಕಾಗಿಯೇ ಎಂದು ಕಲ್ಪಿಸಿದಂತಹ ನೋಟಗಳನ್ನು ತುಂಬಿಕೊಂಡಿರುವುವು. ಈ ನದಿಯ ದಂಡೆಯ ಮೇಲಿರುವ ಪಟ್ಟಣಗಳೂ ಸೌಂದರ್ಯ-ಶೃಂಗಾರಗಳ ಮನೆಯಾಗಿವೆ. **ಕೊಲೋನ್** ಎಂಬುದು ಇವುಗಳಲ್ಲಿ ಶ್ರೇಷ್ಠವಾದುದು. ನಾವು ಉಪಯೋಗಿಸುವ 'ಯು. ಡಿ. ಕಲೋನ್' (ಪನ್ನೀರು) ಈ ಪಟ್ಟಣದ ಹೆಸರನ್ನೇ ಇಟ್ಟುಕೊಂಡಿದೆ. ರ್‍ಹಾಯಿನ್ ಪ್ರದೇಶದ ಹಳ್ಳಿಗಳು ಕೂಡ ಒಂದು ವಿಶಿಷ್ಟ ಸೌಂದರ್ಯದುಂಬವು. ಇಲ್ಲಿಯ ಅನೇಕ ಹಳೆಯ ಮನೆಗಳು ಕೇವಲ ಕಟ್ಟಿಗೆಯಿಂದ ಮಾಡಿದುವು. ಇವುಗಳ ಕೆತ್ತಿಗೆಯ ಕೆಲಸವು ಮನ ಮೋಹಿಸುವಂತಹದು.

ಈ ರೀತಿಯಾಗಿ ನೈಸರ್ಗಿಕವಾಗಿಯೂ ಮಾನವನಿಂದಲೂ ಶೃಂಗರಿಸಿದ ರ್‍ಹಾಯಿನ್ ಪ್ರದೇಶವು ಮಹಾಯುದ್ಧ ಮುಗಿದ ಮೇಲೆ ಸ್ಮಶಾನಸಮವಾಗಿ ಕಾಣುತ್ತಿತ್ತು. ಅದಕ್ಕೆ ಮುಖ್ಯಕಾರಣವೆಂದರೆ ಜರ್ಮನಿಯ ಆರ್ಥಿಕಾವನತಿ. ಪ್ರಾಯಶಃ ಯಾವ ಜನಾಂಗವೂ ಎಂದೂ ಅನುಭವಿಸದಂತಹ ಆರ್ಥಿಕ ಸ್ಥಿತಿಯು ಜರ್ಮನಿಗೆ ೧೯೧೯ ರಲ್ಲಿ ಒಂದು ಬಿಟ್ಟಿತು. ಆ ಕಾಲಕ್ಕೆ ಜರ್ಮನಿಯಲ್ಲಿದ್ದು ಬಂದ ಕೆಲವು ಮಿತ್ರರನ್ನು ನಾನು ಈ ವಿಷಯದಲ್ಲಿ ಕೇಳಿದ ಪ್ರಶ್ನೆಗಳಿಗೆ ಹೇಳಿದ ಅವರ ಉತ್ತರಗಳು ಹೊರಗಿನವರ ದೃಷ್ಟಿಯಿಂದ (ಜರ್ಮನರಿಗಲ್ಲ!) ನಿಜವಾಗಿಯೂ ನಂಬಲಾರದಂತಿವೆ; ಹಾಸ್ಯಜನಕವಾಗಿಯೂ ಇವೆ. ರೇಲ್ವೆ ಹಮಾಲರಿಗೆ ಐದುನೂರು **ಮಾರ್ಕ್** (ಜರ್ಮನಿಯ ನಾಣ್ಯ) ಕೊಟ್ಟರಂತೆ! ಒಂದು ಕಪ್ಪು ಕಾಫಿಗೆ ಮುನ್ನೂರು ಪೇಪರು **ಮಾರ್ಕ್**! ಇಂತಹ ಸ್ಥಿತಿಯಲ್ಲಿ ಜರ್ಮನಿಯು ಫ್ರಾನ್ಸ್ ಮತ್ತು ಬ್ರಿಟನ್ನಿಗೆ ಸಲ್ಲಿಸಬೇಕಾಗಿದ್ದ ಸಾಲವನ್ನು ಹೇಗೆ ತೀರಿಸುವುದು? ಶಕ್ಯವೇ ಇರಲಿಲ್ಲ. ಮಿಕ್ಕೆಲ್ಲ ಸಾಹುಕಾರರಿಗಿಂತಲೂ ಫ್ರೆಂಚ್ ಸರಕಾರವೇ ಜರ್ಮನಿಗೆ ದೊಡ್ಡ ಸಮಸ್ಯೆಯನ್ನೊಡ್ಡಿದ್ದಿತು. ೧೯೩೨ ರ ವರೆಗೆ ಜರ್ಮನಿಯು 'ಶಾಂತಿ'ಯೊಪ್ಪಂದದ ಪ್ರಕಾರ ಕೆಲವೊಂದು ಬಗೆಯಿಂದ ಫ್ರಾನ್ಸಿಡೆ ಸಾಲದ ಭಾರವನ್ನು ಇಳಿಸತೊಡಗಿತ್ತು. ಆ ವರ್ಷದ ವರೆಗೆ ಜರ್ಮನಿಯು ತನ್ನ ಸಾಲ ತೀರಿಸಲಿಕ್ಕೆ ಮಾಡಿದ ಸಾಹಸ-ಯತ್ನಗಳೂ ನಂಬಲಾರದಂತಹವೇ ಆಗಿವೆ. ಆದರೂ ಕೊಡತಕ್ಕ ಸಾಲದಲ್ಲಿ ಹತ್ತರಲ್ಲೊಂದು ಪಾಲು ಕೂಡ ತೀರಲಿಲ್ಲ. ಬ್ರಿಟಿಷ್ ಸರಕಾರವು ಮಾತ್ರ ಸ್ವಲ್ಪ ಇದ್ದುದರಲ್ಲಿ ಉತ್ತಮವಾದ ಹಂಚಿಕೆಯೊಂದನ್ನು ಸೂಚಿಸಿ 'ಜರ್ಮನಿಯು ಒಟ್ಟಿನ ಮೇಲೆ ೨,೩೫೦,೦೦೦,೦೦೦ ಪೌಂಡುಗಳನ್ನು ಮಾತ್ರ ಕೊಟ್ಟು ಬಿಡಲಿ! ಎಂದರೆ ಕಾಗದವನ್ನು ಹರಿದು ಹಾಕಿಬಿಡುತ್ತೇನೆ' ಎಂದು ಆಶ್ವಾಸನಕೊಟ್ಟಿತು. ಆದರೆ ಫ್ರಾನ್ಸು ಇದಕ್ಕೂ ಸಮ್ಮತಿಸಲಿಲ್ಲ! ಜರ್ಮನ್ ಜನಾಂಗದ ಜೀವವನ್ನೇ ಹೀರಲಿಕ್ಕೆ ನಿರ್ಧರಿಸಿತ್ತು ಫ್ರಾನ್ಸ್ ಸರಕಾರ! ಇದಕ್ಕೆ ಪ್ರತಿಯಾಗಿ '**ಡಾಸ್ ಪ್ಲ್ಯಾನ್**' ಎಂದೊಂದು ಸೂಚಿಸಲ್ಪಟ್ಟಿತು. ಈ ಪ್ಲ್ಯಾನಿನ ಪ್ರಕಾರ ಹಳೆಯ ಸಾಲ ತೀರಿಸಲಿಕ್ಕೆ ಜರ್ಮನಿ ಹೊಸ ಸಾಲ ಮಾಡಬೇಕಾಯಿತು! ಈ ಸೂಚನೆಗೂ ಕಬೂಲಾಯಿತು. ಜರ್ಮನಿಯೆಂದಮೇಲೆ ಅದರ ಆರ್ಥಿಕ ಸ್ಥಿತಿ ಯಾವ ಗತಿಯಲ್ಲಿದ್ದಿತೆಂಬುದನ್ನು ಕಲ್ಪಿಸಬಹುದಾಗಿದೆ. ಆದರೆ ಈ ಹೊಸ ಸಾಲ ತೆಗೆಯುವ ಮೊದಲು ೧೯೩೨ ರಲ್ಲಿ ಜರ್ಮನಿಯು ತೀರ ಕೈಗುಂದಿ ಹೋಗಿ ಫ್ರಾನ್ಸಿನ ಹಣವನ್ನು ನಿಲ್ಲಿಸಿಬಿಟ್ಟಿತು. ಸಾವಿರದ ವರೆಗೆ ಸಾಲ; ಅನಂತರ? ಸರಿ ಆ ಕಾಲಕ್ಕೆ ಫ್ರೆಂಚ್ ಪ್ರಾಯಿಮ್ ಮಿನಿಸ್ಟರನು **ಪಾಯಿನ್‌ಕೇರ್** ಎಂಬವನಿದ್ದ.

ಪಾಯಿನ್‌ಕೇರನಿಗೆ ಜೀವನದಲ್ಲಿ ಒಂದೇ ಒಂದು ಕನಸು: ಅದರಲ್ಲಿ ಅವನು ಜರ್ಮನಿಯು ಪೂರ್ಣವಾಗಿ ನಾಶಹೊಂದಿ ಫ್ರಾನ್ಸ್ ದೇಶವು ಅದರ ಸತ್ತ್ವವನ್ನೆಲ್ಲ ಹೀರಿಕೊಳ್ಳಬೇಕೆಂದು ಬಯಸುತ್ತಿದ್ದ. ಬಹಳ ಮಾಡಿ ಈ ನಿರ್ಘೃಣ ಕನಸಿಗೆ ಕಾರಣವು, ಮಹಾಯುದ್ಧದಲ್ಲಿ ಜರ್ಮನಿಯು

ಮಾಡಿದ ಹಾವಳಿಯೆ ಇರಬಹುದು. ಪ್ಯಾರಿಸ್ ಪಟ್ಟಣವನ್ನು ಬಾಂಬಿನಿಂದ ನಾಶಮಾಡಬೇಕೆಂಬ ಜರ್ಮನಿಯ ಸಾಹಸ ಗೊತ್ತಿದೆಯಷ್ಟೆ? ಅದೂ ಅಲ್ಲದೆ ಪಾಯಿನ್-ಕೇರನು ಸಂಪೂರ್ಣ ರಾಷ್ಟ್ರಭಕ್ತ; ಎಂದರೆ ತನ್ನ ರಾಷ್ಟ್ರದ ಹಿತಸಾಧಿಸಲಿಕ್ಕೆ ಹತ್ತು ರಾಷ್ಟ್ರಗಳು ಮುಳುಗಿದರೂ ಸರಿಯೆ.. ಎನ್ನುವ ರಾಷ್ಟ್ರಭಕ್ತಿ ಅವನದು! ಸರಿ, ಅವನಿಗೆ ಜರ್ಮನಿಯಲ್ಲಿ ದಾಳಿಯಿಡಲಿಕ್ಕೆ ಏನಾದರೊಂದು ನೆವ ಬೇಕಾಗಿತ್ತು. ನೆವಕ್ಕೇನು ಕೊರತೆ? ಜರ್ಮನಿಯು ಸೋತರೂ ಇನ್ನೂ ಜೀವಿಸುತ್ತಿದೆಯಲ್ಲ; ಅದೇ ಒಂದು ಬಲವಾದ ನೆವ! ಅಲ್ಲದೆ ಕಾಯಿದೆಯ ಪ್ರಕಾರ ನೆವವೊಂದೂ ದೊರೆತೇಬಿಟ್ಟಿತು. ಜರ್ಮನಿಯು ಒಪ್ಪಂದದ ಮೇರೆಗೆ ಹಣ ಕೊಡಲಿಲ್ಲವಲ್ಲ; ಅದೇ ಅದರ ತಪ್ಪು. ಇನ್ನು ಪರರಾಷ್ಟ್ರಗಳ ಭೀತಿಯೊಂದು. ಆ ಭೀತಿಯೂ ಇವನಿಗೆ ಇರಲಿಲ್ಲ. ೧೯೨೨ರಲ್ಲಿ ಬ್ರಿಟನ್ನಿಗೆ ಮುಖ್ಯ ಮಂತ್ರಿ ಬೊನಾರ್ ಲಾ ಎಂಬವರಿದ್ದರು. ಇವರು 'ಶಾಂತ' ಮಂತ್ರಿಗಳು; ಅಲ್ಲದೆ ಬೆಲ್ಜಂ ಸರಕಾರದ ಬೆಂಬಲ ಫ್ರಾನ್ಸಿಗೆ. ಕೇಳುವುದೇನು? ಇದಕ್ಕೂ ಮೇಲಾಗಿ ವ್ಹರ್ಸಾಯದಲ್ಲಿ ಕೂಡಿದ 'ಹಾನಿ ತುಂಬಿ ಕೊಡುವ' ಕಮಿಟಿಯಲ್ಲಿ ಫ್ರೆಂಚ್ ಸರಕಾರವು ಅಧಿಪತಿಯಾಗಿತ್ತು! ತೋಳನನ್ನು ಕುರಿ ಕಾಯಲಿಕ್ಕೆ ಬಿಟ್ಟಂತಾಗಿತ್ತು! ಜರ್ಮನರು ತಮ್ಮ ಋಣಭಾರ ಇಳಿಸಲಿಕ್ಕೆ ತಾವು ಹಾವಳಿ ಮಾಡಿದ ಉತ್ತರ ಫ್ರಾನ್ಸಿನಲ್ಲಿಯ ಭಾಗವನ್ನು ಪೂರ್ತಿಯಾಗಿ ಪುನರ್ರಚನೆ ಮಾಡಿಕೊಡಲಿಕ್ಕೆ ಕೂಲಿ-ಪದಾರ್ಥಗಳನ್ನು ಕೊಡಲು ಸಮ್ಮತಿಸಿದ್ದರೂ, ಫ್ರೆಂಚ್ ಕಂಟ್ರಾಕ್ಟರರು ಇದಕ್ಕೆ ಒಪ್ಪಲಿಲ್ಲ. ಅವರ ನಕಾರ ಸಹಜವಾದುದೆ. ತಮಗೆ ಸಲ್ಲುವ 'ಕಂತ್ರಾಟ'ವನ್ನು ಪರದೇಶಿಗಳಿಗೆ ಹೇಗೆ ಬಿಡುವುದು? ಶಕ್ಯವಿಲ್ಲ. ಇದೂ ಅಲ್ಲದೆ ೧೯೨೨ನೆಯ ಡಿಸೆಂಬರ್ ಕೊನೆಯ ವಾರದಲ್ಲಿ ಫ್ರಾನ್ಸಿನ ಕಬ್ಬಿಣ ಕಾರಖಾನೆಯ ಮಂಡಲವು, ಜರ್ಮನಿಯು ತಾನೊದಗಿಸತಕ್ಕ ಕೆಲವು ಕಟ್ಟಿಗೆ-ಕಲ್ಲಿದ್ದಲಿಯನ್ನು ಸಲ್ಲಿಸಲಿಲ್ಲವೆಂದೂ ಪ್ರಯುಕ್ತ ರ್‍ಹಾಯಿನ್ ಮತ್ತು ರುಹರ್ ಪ್ರದೇಶಗಳ



ನಾಝೀ ತತ್ತ್ವದ ಇಂದಿನ ಪ್ರಸಾರಕ ಹೆರ್ ಹಿಟ್ಲರ್

ಅತಿಕ್ರಮಣವು ಅವಶ್ಯವೆಂದೂ ಸಾರಹತ್ತಿತು. ಪಾಯಿನ್‌ಕೇರನಿಗೆ ಹೊರಗಣ ಯಾವ ಬೆಂಬಲವೂ ಬೇಕಾಗಿರಲಿಲ್ಲ. ರುಹರ್ ಅತಿಕ್ರಮಣ ಮಾಡದೆ ಜರ್ಮನಿಯನ್ನು ಸಾಲತೀರಿಸಲಿಕ್ಕೆ ಒತ್ತಾಯ ಮಾಡುವುದು ಶಕ್ಯವೇ ಇಲ್ಲವೆಂದು ಸಾರಿಬಿಟ್ಟ.

ಫ್ರಾನ್ಸಿನ ಈ ನಿರ್ಣಯಕ್ಕೆ ಯಾವ ಪರರಾಷ್ಟ್ರಗಳೂ ಅಡ್ಡಿಯಾಗಲಿಲ್ಲ. ಬ್ರಿಟನ್ನಿನ ಮಂತ್ರಿ ಬೋನಾರ್‌ಲಾನಂತೂ 'ಶಾಂತ'-ಮಂತ್ರಿ. ಅಂತೆಯೆ ಎರಡೂ ದಡದಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟ. ಆಗಿನ ಈ ಶಾಂತ ಮಂತ್ರಿಯ ನೈತಿಕ ಜವಾಬ್ದಾರಿಯನ್ನು ಒರ್ವ ಆಂಗ್ಲಪತ್ರಿಕಾ ಸುದ್ದಿಗಾರನು ಈ ರೀತಿ ಮಾರ್ಮಿಕವಾಗಿ ವರ್ಣಿಸಿದ್ದಾನೆ: "ಬೋನಾರ್‌ಲಾನ ನಡತೆಯು ವಿಚಿತ್ರವಾದದ್ದು. ಅವನು ಮಾಡಿದ ಕೃತಿಯನ್ನು ವರ್ಣಿಸಬೇಕಾದರೆ, ಮೂವರು ಜವಾನ್‌ದಾರರ ಒಂದು ಸಾಮ್ಯದಿಂದಲೇ ಶಕ್ಯ. ಇಬ್ಬರು ಜವಾನ್‌ದಾರರು ಬಡಿದಾಡಿ ಅದರಲ್ಲೊಬ್ಬನು ಪೂರ್ಣ ಸೋತಾಗ, ಗೆದ್ದ ಪಕ್ಷದವನು ಸೋತವನನ್ನು ಖೂನ್ ಮಾಡಲಿಕ್ಕೆ ಹೊರಡುತ್ತಾನೆ. ಹಾಗೆ ಹೋಗಲಿಕ್ಕೆ ಅವನಿಗೆ ಮೂರನೆಯವನ ಹೊಲದಲ್ಲಿಯೆ ರಸ್ತೆಯಿದೆ. ಖೂನ್ ಮಾಡಲಿಕ್ಕೆ ಹೊರಟ ವ್ಯಕ್ತಿಗೆ ಈ ಮೂರನೆಯವನು ಹೀಗೆ ಹೇಳುತ್ತಾನೆ: 'ನೀನು ಖೂನ್ ಮಾಡಲಿಕ್ಕೆ ಹೊರಟ ವ್ಯಕ್ತಿಯ ಕೂಡ ನಾನು ಸಹ ಜಗಳವಾಡಿದ್ದೇನೆ; ಆದರೆ ನೀನು ಸದ್ಯ ಅವನನ್ನು ಕೊಲ್ಲುವುದು ಮಾತ್ರ ಎಂದಿಗೂ ಸರಿಯಲ್ಲ. ಇದರ ಮೇಲೂ ಕೊಂದೇ ಬಿಡಬೇಕೆಂದು ಹಟ ಹಿಡಿದರೆ ಉಪಾಯವಿಲ್ಲ. ನನ್ನ ಕರ್ತವ್ಯ ನಾನು ಮಾಡಿಬಿಟ್ಟಿದ್ದೇನೆ. ನನ್ನ ಹೊಲದಲ್ಲಿಯೆ ಹೋಗು, ಬೇಕಾದ್ದು ಮಾಡು.

ನಿನ್ನ ಕೆಲಸ ಮುಗಿಯುವವರೆಗೆ ನಾನು ಕಣ್ಮುಮುಚ್ಚಿಕೊಂಡು ನಿಲ್ಲುತ್ತೇನೆ. ಮತ್ತೇನು!' ಇದೇ ಮಾತನ್ನು ಆಂಗ್ಲಮಂತ್ರಿ ಫ್ರೆಂಚ್ ಮಂತ್ರಿಗೆ ಹೇಳಿದ್ದು." ಸರಿ. ಫ್ರೆಂಚ್‌ಮಂತ್ರಿಗೆ ಆಂಗ್ಲಮಂತ್ರಿಯ ಕಣ್ಮುಚ್ಚಣಿಕೆಯಾಟ ಸರಿಯಾಗಿ ತೋರಿತು. ಯಥಾವಕಾಶವಾಗಿ ಹೊಲವನ್ನು ಹೊಕ್ಕು ಮಾಡತಕ್ಕ ಖೂನನ್ನು ನಿಧಾನವಾಗಿಯೂ, ನಿರ್ಘೃಣವಾಗಿಯೂ ಮಾಡಿಬಿಟ್ಟ.

ಈ ರೀತಿ ದೊರಕಿದ ನೈತಿಕ ಬಲದಿಂದಲೂ, ಶಾಂತಿಯ ಒಪ್ಪಂದದಿಂದಲೂ, ತನ್ನ ರಾಷ್ಟ್ರದ ಸೇನಾಬಲದಿಂದಲೂ, ಜರ್ಮನಿಯ ಹಣ ನಿಂತ ನೆವದಿಂದಲೂ, ರಾಜ್ಯಮದದರ್ಪಬಲದಿಂದಲೂ ಫ್ರೆಂಚ್ ಮಂತ್ರಿಯು, ಜರ್ಮನಿಯ ನಾಶಕ್ಕೆ ಸಡ್ಡು ಹೊಡೆದು ನಿಂತುಬಿಟ್ಟ. ಜರ್ಮನಿಯು ಸೋತನಂತರ ಫ್ರೆಂಚ್‌ಸೈನ್ಯವನ್ನೆದುರಿಸುವ ಶಕ್ತಿ ಯಾವ ರಾಷ್ಟ್ರಕ್ಕೂ ಇರಲಿಲ್ಲ. ೧೯೨೩ನೆಯ ಜಾನೇವಾರಿ ೧೧ ನೆಯ ದಿನ ಫ್ರೆಂಚ್ ಸೈನ್ಯವು **ರುಹರ್** ಪ್ರದೇಶ ಹೊಕ್ಕಿತು. ಅಪಾರವಾದ ಮದ್ದುಗುಂಡಿನ ಸಂಗ್ರಹ; ಜೀವಹಿಂಡುವ ಯಂತ್ರ-ಬಂದೂಕುಗಳು; ಸಾವನ್ನು ಚೆಲ್ಲುವ ವಿಮಾನುಗಳು; ಯಂತ್ರ ತುರಗ ಪದಾತಿ-ಇತ್ಯಾದಿ ಸಮರಸನ್ನದ್ಧ ಫ್ರೆಂಚ್ ಸೈನ್ಯವು ರ್‍ಹ್ಯಾಯಿನ್ ಪ್ರದೇಶವನ್ನು 'ಶಾಂತ' ರೀತಿಯಿಂದ 'ಪ್ರವೇಶಿಸಿತು!'. ಈ ಪ್ರವೇಶಕ್ಕೆ ತಾತ್ಕಾಲಿಕ ನೆವವೊಂದು: ರುಹರ್ ಭಾಗದಲ್ಲಿರುವ ಕೆಲವು ಫ್ರೆಂಚ್ ಕಾವಲುಗಾರರ ರಕ್ಷಣೆಗಾಗಿ ಬಂದ ಸೈನ್ಯವಿದೆಂದು ಸಾರಿದ! ಹಿಟ್ಲರನು ಪ್ರಚಾರದಲ್ಲಿ ತಂದಿರುವ ತನ್ನ ಜರ್ಮನರ ರಕ್ಷಣೆಯ ರೀತಿ ಫ್ರೆಂಚರಿಂದಲೇ ಕಲಿತುದು; ಸೇರಿಗೆ ಸವ್ವಾಸೇರು! ರುಹರದಲ್ಲಿದ್ದ ಪರರಾಷ್ಟ್ರ ಸೈನ್ಯವೆಲ್ಲ ಬಾಯ್ಮುಚ್ಚಿ ಕಣ್ಮುಚ್ಚಿ ಕುಳಿತಿತ್ತು. ಅಮೇರಿಕೆಯ ಪ್ರೆಸಿಡೆಂಟನು ರುಹರ ರಕ್ಷಣೆಗೆ ಬಿಟ್ಟ ಸೈನ್ಯವನ್ನು ತೀವ್ರವಾಗಿ ಮರಳಿ ಕರೆದುಬಿಟ್ಟ! ಬ್ರಿಟಿಶ್ ರಕ್ಷಣಾ ಸೈನ್ಯವು ಕೂಡ 'ತಥಾಸ್ತು' ಎಂದು ಹೊರಡುವುದಿತ್ತು. ಆದರೆ ಅದಾವುದೊಂದು ದೈವಲೀಲೆಯಿಂದಲೊ ಬ್ರಿಟಿಶ್ ಸರಕಾರವು ತನ್ನ ಸೈನ್ಯವನ್ನು ಕರೆಯಲಿಲ್ಲ. ಈ ಬ್ರಿಟಿಶ ಸೈನ್ಯವೊಂದು ಮಾತ್ರ ಆ ಕಾಲಕ್ಕೆ ಜರ್ಮನರಿಗೆ ದೈವಕಳುಹಿದ ಆಧಾರಸ್ತಂಭವಾಗಿತ್ತು. ಸದ್ಯ ಸಾಗುತ್ತಿರುವ ಆಂಗ್ಲ-ಜರ್ಮನಿಯ ಸ್ನೇಹಸಂಬಂಧವು ಈ ಕಾಲದ ಸಾಹಾಯ್ಯದ ಒಂದು ಪರಿಣಾಮವೆಂದೂ ಹೇಳಬಹುದು. ಆದರೂ ಆಗಿದ್ದ ರುಹರದಲ್ಲಿಯ ಬ್ರಿಟಿಶ ಸೈನ್ಯ ಬಹು ಚಿಕ್ಕದು. ಫ್ರೆಂಚ ಮಂತ್ರಿಗೆ ಬ್ರಿಟಿಶ ಸರಕಾರದ 'ಕಣ್ಮುಚ್ಚಣಿಕೆ'ಯ ಬಲ ಚೆನ್ನಾಗಿ ದೊರೆತಿತ್ತು. ಆಗಿನ ಕಾಲಕ್ಕೆ ಜೈಮಿನಿಕಾರನು ಸುದ್ದಿಗಾರನಾಗಿ ಬಂದಿದ್ದಿದ್ದರೆ 'ಈ ಚತುರ್ದಶ ಜಗವನ್ನುಮೆಂದರಿವೆಸಕಟ! ಗೋಚರವೆನೀ ಎನಗೆ ಘನ ಎಸುತ ತೆಗೆದ ನಾ-! ರಾಜ ಪೇಳ್ವೆನು' ಎಂದು ಫ್ರೆಂಚ್ ಸೈನ್ಯದ ವರ್ಣನೆ ಮಾಡಬಹುದಾಗಿತ್ತು. ಸಾಯುತ್ತ ಬಿದ್ದಿರುವ ಜರ್ಮನಿಯ ಎದೆಯ ಮೇಲೆ ಕಾಲಿಟ್ಟು ತುಳಿಯುತ್ತ ಫ್ರೆಂಚ್ ಸೈನ್ಯವು ಪೂರ್ಣವಾಗಿ ಜಯಹೊಂದಿ ಬಿಟ್ಟಿತು!

ರ್‍ಹ್ಯಾಯಿನ್-ರುಹರ ಭಾಗದ ಈ ಅತಿಕ್ರಮಣದಿಂದ ಜರ್ಮನರ ಜೀವನವು ನರಕ ಯಾತನೆಯನ್ನನುಭವಿಸಿತು. ಜರ್ಮನಿಯ ದೊಡ್ಡ ಪಟ್ಟಣಗಳಲ್ಲಿಯ ಆಗಿನ ವ್ಯವಹಾರದ ರೀತಿಯನ್ನು ನೆನಪಿಗೆ ತಂದರೆ ನಿಜವಾಗಿಯೂ ಇಹದಲ್ಲಿಯೇ ಸ್ವರ್ಗ-ನರಕಗಳ ಚಿತ್ರ ಕಾಣಲು ಶಕ್ಯವಿದೆಯೆಂದು ಪೂರ್ಣ ಮನಗಾಣಬಹುದಾಗಿದ್ದಿತು. ಜರ್ಮನಿಯಲ್ಲಿ ಕಂಡ ಚಿತ್ರ ನರಕದ್ದು ಮಾತ್ರ. ಇಂದಿನ ನಾಝೀಜೀವನದ ಚಿತ್ರವನ್ನು ಅದರೊಂದಿಗೆ ಹೋಲಿಸಿ ನೋಡಿದರೆ ನಿಶ್ಚಯಕ್ಕೂ ಇದು ಸ್ವರ್ಗಚಿತ್ರವೆಂದೇ ಕಂಡುಬರುವುದು. ಇದು ಮುಖ್ಯವಾಗಿ ರುಹರಾತಿಕ್ರಮಣದ ಪರಿಣಾಮವು. **ಬರ್ಲಿನ್, ಲೀಪರ್ಝಿಗ್, ಹ್ಯಾಂಬರ್ಗ, ಥ್ಯೂರಿಂಗೆನ್ವಾಲ್ಡ್, ವೀಮಾರ್** ಇತ್ಯಾದಿ ಪಟ್ಟಣಗಳು ಅಂದು ಭೂಮಿಗಿಳಿದು ಬಂದ ನರಕದ ಭಾಗಗಳಾಗಿದ್ದುವು. ಮಹಾಯುದ್ಧ ಪ್ರಾರಂಭವಾದಾಗ ಬರ್ಲಿನ್ ಪಟ್ಟಣವು ವಿಶ್ವಕರ್ಮನ ರಾಜಧಾನಿಯಾಗಿತ್ತೆಂದರೆ ಅತಿಶಯೋಕ್ತಿಯಲ್ಲ. ಆಗಿನ ಅಲ್ಲಿಯ ಜನಸಂದಣಿಯ ಬೀದಿಗಳು; ಎಲ್ಲರ ಮುಖದ ಮೇಲಿನ ಜಯಸಂಪಾದಿಸಲು ಹೊರಟ ಉತ್ಸಾಹದ ಕಳೆ; ಅಲ್ಲಲ್ಲಿ ಕೇಳುವ



ಅಮೇರಿಕನ್ ರಿವಾಲ್ವರ್

ಅತ್ಯಾಧುನಿಕ ತಯಾರಿ ೧೯೩೯ರಲ್ಲೀ ಮೊದಲನೆಯ ಸಲ ತರಿಸಿದ್ದು. ಆಕಾರ ಮೇಲಿನ ಚಿತ್ರದಲ್ಲಿರುವಂತೆಯೇ ಉದ್ದ ೭ ಇಂಚು. ಭಾರ ಸುಮಾರು ೧೫ ಔನ್ಸುಗಳಷ್ಟು. ೫೦ ಗುಂಡುಗಳನ್ನು ತನಗೆ ತಾನಾಗಿ ಅಂದರೆ ಆಟಮೇಟಿಕ್ ಆಗಿ ಹಾರಿಸಬಹುದು. ಬೆಲೆ ರೂ. ೪-೯-೦ ಕೃತಕ ಮದ್ದು ಗುಂಡುಗಳಿಗೆ ೧೦೦೦ಕ್ಕೆ ರೂ. ೩. ಚರ್ಮದ ಚೀಲ ಬೇಕಾದರೆ ೧-೧೨-೦. ರಿವಾಲ್ವರಿನ ಯಂತ್ರಕ್ಕೆ ಬಿಡುವ ಎಣ್ಣೆ ಬೇಕಾದರೆ ೦-೧೨-೦ ಆರ್ಡರಿನೊಂದಿಗೆ ಸಂಪೂರ್ಣ ಬೆಲೆಯ ಮೊತ್ತವನ್ನು ಕಳುಹಿಸಿ ಕೊಟ್ಟರೆ ಟಪಾಲು ಖರ್ಚು ಮುಫತ್ತು.

ಸೂಚನೆ:— ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡೆಯಿಸಲು ಪ್ರಯತ್ನಿಸಿರಿ.

American Pistol Co. (J. M. D.)
Post Box No. 27. Amritsar (India)

ಆ ರಾಷ್ಟ್ರಗೀತೆಗಳ ಉತ್ಸಾಹ ನಿನಾದ; ದುಂದುಭಿ, ಭೇರಿಗಳ ಜಯಸಂರಂಭ; ಜರ್ಮನ್ ಕೇಸರಿಯಾದ ಕೈಸರನ ಜಯ ಗರ್ಜನೆ; ೧೯೨೦ ರಲ್ಲಿ ನಮ್ಮ ದೇಶದಲ್ಲಿಯ ತರುಣರು ಶಾಲೆ-ಕಾಲೇಜು ತ್ಯಜಿಸಿ ರಾಷ್ಟ್ರಭಕ್ತರಾಗಿ ಹೊರಟಂತೆ ಹೊರಟಿರುವ—ಆಗಿನ ಜರ್ಮನಿಯ ಹೊಸ ಸೈನ್ಯದ ಪೋಷಾಕು ಧರಿಸಿ ಮೆರೆಯುವ ತರುಣರು! ಎಲ್ಲಿದೆ ಆ ಸಂಭ್ರಮವೆಲ್ಲ ಈಗ? ಎಲ್ಲಿ ಎಂಬ ಪ್ರತಿಧ್ವನಿಯೇ ಉತ್ತರ! ಉಪ್ಪರಿಗೆಯಿದ್ದುದು ತಿಪ್ಪೆಯಾಗಬಹುದೆಂದು ಸಾರುವುದು ಕೇವಲ ಸಾಹಿತಿಯ ಶಬ್ದ ಚಮತ್ಕಾರವಲ್ಲ. ಕಂಡ ಕೆಲವು ಸಂಗತಿಗಳು ಕಲ್ಪನೆಗೆ ಕೂಡ ಕಾಣದಂತಹ ವಿಷಯಗಳಾಗಿವೆ. ಆಗಿನ ರುಹರಾತಿಕ್ರಮಣದಿಂದಾದ ಜರ್ಮನಿಯ ಪಟ್ಟಣಗಳ ಪತನವು, ಕತೆಗಾರನಿಂದ ಕೇಳಿದ್ದರೆ ಕಲ್ಪನೆಯ ಸಾಮ್ರಾಜ್ಯವೆಂದು ಕಿವಿ ಮುಚ್ಚಬಹುದಾಗಿತ್ತು. ಬೀದಿಗಳಲ್ಲಿ ನಾಯಿಗಳು ಕೂಡ ಇಲ್ಲ; ಮಾಯವಾಗಿದೆ ಜನಸಂದಣಿ; ರಾಷ್ಟ್ರಗೀತೆಯ ಬದಲು ಹಸಿವೆ ಮುಚ್ಚಿದ ಮಕ್ಕಳ ಮೂಕಗೀತೆಯೊಂದು ಕೇಳಬರುತ್ತದೆ; ಕೈಸರನು ಕಾಣದಾಗಿಹನು; ಅಧಿಕಾರಿಗಳು, ಅತಿರಥ-ಮಹಾರಥರು ಪತನ ಹೊಂದಿ ಪಲಾಯನ ಮಾಡಿದ್ದಾರೆ; ಶಸ್ತ್ರಾಸ್ತ್ರಗಳು ಅಸ್ತವಾಗಿವೆ; ಪೃಥ್ವಿಯಲ್ಲಿಯೆ ಮೇಲೆನಿಸಿಕೊಂಡ ಉದ್ಯೋಗಪುರುಷಸಿಂಹರು ಮಧ್ಯಾಹ್ನದ ಕೂಳಿಗೆ ಕೂಗುತ್ತ ಕೈಮುಚ್ಚಿಕೊಂಡು ಕುಳಿತಿದ್ದಾರೆ. ಹೊಸ ಶೋಧನ ಸೋಪಾನವೇರಿದ ಜರ್ಮನಿಯ ಕೈಗಾರಿಕೆಯ ವೀರರು ಕತ್ತಲು ಕೋಣೆಯಲ್ಲಿ ಕಣ್ಮುಚ್ಚಿಕೊಂಡು ಕುಳಿತಿದ್ದಾರೆ. ಇದಕ್ಕೂ ಕೆಳಗಣ ಪತನ ಪರಿಸ್ಥಿತಿ ಪೃಥ್ವಿಯಲ್ಲಿಯ ಯಾವ ಜನಾಂಗಕ್ಕೂ ಬಂದಿರಲಿಲ್ಲ; ಮುಂದೆಯಾದರೂ ಬರಲಿಕ್ಕಿಲ್ಲ. ಶತ್ರುವಿನ ಈ ಆತಿಕ್ರಮಣಕ್ಕೆ ಎದುರಾಗಿ ಸರ್ವ ಔದ್ಯೋಗಿಕ ಕ್ರಮವೆಲ್ಲ ತಡೆದು ನಿಂತು ಹೋಗಿವೆ. ದುಡಿದುದರಿಂದ ಬರುವ ತುಸು ಕಾಸು ಕೂಡ ಬಾರದಾಗಿದೆ ಜರ್ಮನರಿಗೆ.

ನೋಡಿದಲ್ಲೆಲ್ಲ ನಿಃಶಬ್ದ, ನೀರವ! ಬಾಳುರಿಯ ಭರದಲ್ಲಿ ಬೆಂದು ಹಣ್ಣಾದ ಜನರು ಗಾನ, ಸಂಸ್ಕೃತಿ, ಸಾಹಿತ್ಯ, ಧರ್ಮ-ಕರ್ಮಗಳನ್ನೆಲ್ಲಿ ನೋಡುವರು? ಎಲ್ಲರೆದುರಿಗೂ ಒಂದೇ ಒಂದು ಅಳಿಸದಾದ ಪ್ರಶ್ನೆಯ ಚಿಹ್ನೆ: 'ಹೊಟ್ಟೆಗೇನು'? ಹಸಿವು ಜನರನ್ನು ಹುಚ್ಚರನ್ನಾಗಿ ಮಾಡುವುದು. ಅಂತೆಯೇ ಆಗಿನ ಜರ್ಮನರು ಮಾಡಿದ ಕಾರ್ಯಗಳೆಲ್ಲ ಹುಚ್ಚರವು. ಯಾವ ಮನೆ ಹೊಕ್ಕರೂ ಕಾಣುವುದು ಒಂದೇ ಚಿತ್ರ. ಹಸ್ತಪಾದವುಳ್ಳ ಗಟ್ಟಿಗರಾದ ಚಪಲರು, ಪುಷ್ಪಶಯ್ಯೆಯಲ್ಲಿ ಮಲಗಿ ಬೆಳೆದ ಲಕ್ಷಾಧೀಶರು, ಶಾಸ್ತ್ರಸಂಶೋಧಕರು, ಸಾಹಿತಿಶ್ರೇಷ್ಠರು, ವಕೀಲರು, ವೈದ್ಯರು, ಪಂಡಿತರು, ಪಾಮರರು, ಎಲ್ಲ ಜರ್ಮನರೂ ಮಾಡುತ್ತಿರುವ ಕಾರ್ಯಕ್ರಮ ಒಂದೇ ಒಂದು: ಇದ್ದ ಬಿದ್ದ ಎಲ್ಲ ಸ್ಥಿರ-ಚರಾಸ್ತಿಗಳನ್ನು ಕೈಗೆಬಂದಂತೆ ಮಾರುವುದು; ಎಲ್ಲ ಮುಗಿದನಂತರ ಮನೆಯಲ್ಲಿದ್ದ ಗ್ಯಾಸ್ ನಳಿಯನ್ನು ಬಿಟ್ಟು ವಿಷವಾಯುವಿನಿಂದ ಉಸುರುಗಟ್ಟಿ ಸಾಯುವುದು; ಇಲ್ಲವೆ ನೇಣು ಹಾಕಿಕೊಳ್ಳುವುದು. ಮಾನವ-ಸಹಜ ಮಾನಾಭಿಮಾನವು ಎಂದೋ ಮಾಯವಾಗಿತ್ತು. ಅಧಿಕಾರ ವಾಣಿಯಾವನಲ್ಲಿಯೂ ಉಳಿದಿರಲಿಲ್ಲ. ಭಿಕ್ಷುಕರಿಗೆ ಅಧಿಕಾರವಿದೆಯೇ? ಉನ್ನತ ರಾಜಕಾರಣ ಧುರೀಣರಾದ ಸರದಾರರನೇಕರು ಒಪ್ಪತ್ತು ಕೂಳು ಕೊಟ್ಟವರಿಗೆ ಮಾಡುವ ಮುಜುರೆ-ಮರ್ಯಾದೆಯನ್ನು ನೋಡಿದರೆ ಅದು ನಂಬಲಾರದ ನೋಟವಾಗಿತ್ತು. ಸ್ವಾಭಿಮಾನವು ಪ್ರಾಯಶಃ ಎಲ್ಲ ಜನಾಂಗದವರಿಗಿಂತಲೂ ಜರ್ಮನರಲ್ಲಿಯೆ ಹೆಚ್ಚಾಗಿದೆಯೆಂದು ಹೇಳಬಹುದು. ಅವರು ತಮ್ಮ ನಾಡಿಗೆ 'ಮಾತೃಭೂಮಿಯೆಂದು' ಕರೆದವರಲ್ಲ. ಅದು ಹೆಂಗುಸರು ಕರೆಯುವ ರೀತಿ. ಜರ್ಮನರಿಗೆ ಜರ್ಮನಿಯು '**ಪಿತೃಭೂಮಿ**'! ಸಮಾಜದೃಷ್ಟಿಯಿಂದಲೂ ಜರ್ಮನರು ಉಚ್ಚ-ನೀಚ ಭೇದಭಾವಿಗಳು. ನಮ್ಮ ದೇಶದಲ್ಲಿ 'ರಾವಸಾಹೇಬ' ರಾವಬಹಾದ್ದೂರ' ಮುಂತಾದ ಗೌರವದ ಸ್ಥಾನ ಪಡೆದವರಿಗಿಂತ ಹೆಚ್ಚಾಗಿ, ಜರ್ಮನಿಯಲ್ಲಿ 'ವ್ಹಾನ್' (Von) ಎಂದು ಕರೆಯಿಸಿಕೊಳ್ಳಲಿಕ್ಕೆ ಸರ್ವರೂ ಹಾತೊರೆಯುವರು. ನಿಜವಾಗಿಯೂ ಜರ್ಮನಿಯಲ್ಲಿ ಆ ಕಾಲಕ್ಕೆ ಎರಡೇ ತರದ ಜನವರ್ಗವಿತ್ತೆಂದು ಹೇಳಬಹುದು. 'ವ್ಹಾನ್' ಎಂದು ಕರೆಯಿಸಿಕೊಳ್ಳುವದು ಒಂದು; ಉಳಿದವರೆಲ್ಲ 'ವ್ಹಾನೇತರರು' ಸ್ವಲ್ಪ ಅತಿಶಯೋಕ್ತಿಪ್ರಿಯರು ಜರ್ಮನರ ನಾಮಾಂಕಿತ ಪ್ರೀತಿಯ ಬಗ್ಗೆ ಇನ್ನೂ ಕೆಲವು ಮೋಜಿನ ಸಂಗತಿಗಳನ್ನು ಹೇಳುತ್ತಾರೆ. ಉದಾಹರಣೆಯೆಂದರೆ: ಜರ್ಮನಿಯ ಕಾಯಿದೆ ಮಂಡಳದ ಒಬ್ಬ ವ್ಯಕ್ತಿಯನ್ನು ಅವರು "ಪ್ರಿವ್ಹೀ ಕೌನ್ಸಿಲರ್ ಪ್ರೊಫೆಸರ್ ಡಾಕ್ಟರ ಬ್ರಾನ್" ಎಂದು ಕರೆಯುತ್ತಾರಂತೆ! ವೃತ್ತಪತ್ರಗಳ ಸಂಪಾದಕರಿಗೆ 'ಮಿಸ್ಟರ್ ಎಡಿಟರ್ ಜಾನ್' ಎಂದು ಕರೆಯುವುದೂ ಉಂಟಂತೆ. ಇಂತಹ ಭಿನ್ನಭಾವವುಳ್ಳ ಜರ್ಮನರು ಆ ಕಾಲಕ್ಕೆ ಸರ್ವಾಭಿಮಾನವನ್ನೂ ಗಾಳಿಗೆ ತೂರಿ, ಬಾಳಿಗಾಗಿ ಭಿಕ್ಷೆಗೆ ನಿಂತಿದ್ದರು. ಉದ್ಯೋಗಾಪೇಕ್ಷಿಗಳಿಗೆ ಕೆಲಸವಿಲ್ಲ; ಕೆಲಸವಿದ್ದವರಿಗೆ ಕೂಲಿಯಿಲ್ಲ; ಕೂಲಿಯಿದ್ದವರಿಗೆ ಕೊಳ್ಳುವಂತಿಲ್ಲ; ಕೊಳ್ಳುವವರಿಗೆ ಪದಾರ್ಥಗಳಿಲ್ಲ. ಈ ಜೀವನಚಕ್ರದಲ್ಲಿ ಜರ್ಮನರೆಲ್ಲ ತಿರುಗಹತ್ತಿದ್ದರು.

ಅತಿಕ್ರಮಣಕರ್ತರಿಗೆ ಬಹಿಷ್ಕಾರ ಹಾಕಲಿಕ್ಕೆ ಜರ್ಮನ್ ಸರಕಾರವು ಕೆಲಸಗಾರರಿಗೆ 'ಸಂಪು'ಮಾಡಲು ಹೇಳಿತು: ಸಂಪಿನ ಪರಿಣಾಮದಿಂದ ಟಂಕಸಾಲೆಯಲ್ಲಿ ನಾಣ್ಯದ ಬೆಲೆಯನ್ನು ಹುಚ್ಚಾಟವಾಗಿ ಏರಿಸಬೇಕಾಯಿತು. ಇದರಿಂದ ತಿನ್ನುವ ಪದಾರ್ಥಗಳ ಹಾಗೂ ಕೂಲಿಯ ದುಡಿತದ ಪ್ರಮಾಣವು ಆದೊಂದು ವಿಪರೀತವಾಗಿಯೆ ಪರಿಣಮಿಸಿ ಬಿಟ್ಟಿತು. ೧೯೨೩ನೆಯ ನೊವ್ಹೆಂಬರ್ ತಿಂಗಳಲ್ಲಿ ಜರ್ಮನಿಯ ಒಂದು ಬಂಗಾರದ ನಾಣ್ಯವು ೧,೦೦೦,೦೦೦,೦೦೦ ದಷ್ಟು ನೋಟುಗಳಿಗೆ ಸಮನಾಗಿತ್ತು! ಬ್ಯಾಂಕ್ ನೋಟುಗಳು, ವಾರ್ಷಿಕ ಉತ್ಪನ್ನಗಳು, ಬಾಡಿಗೆಗಳು, ವೃತ್ತಪತ್ರಗಳು ಬೆಳಗಾಗುವುದರಲ್ಲಿ ಬೆಲೆ ಕಳೆದುಕೊಂಡುವು. ಈ ಸುಗ್ಗಿಯಲ್ಲಿ ನಮ್ಮ ದೇಶದ ಮಾರವಾಡಿಗಳಂತಿದ್ದ ಜರ್ಮನ್ ಜ್ಯೂ ಜನರು **ನವಕೋಟಿ ನಾರಾಯಣರಾಗಿ** ಬಿಟ್ಟರು. (ಅಂತೆಯೆ ಸದ್ಯದ ಹಿಟ್ಲರನ ಜ್ಯೂ-ಸಂಹಾರ.) ಬರ್ಲಿನ್ ಮುಂತಾದ ಪಟ್ಟಣಗಳಲ್ಲಿಯ ಕಾರ್ಖಾನೆಗಳ ಕೂಲಿ-

ಅತ್ಯಾಶ್ಚರ್ಯಕರವಾದ ಕನ್ನಡಿ

ಯಾವುದೇ ವಯಸ್ಸಿನವರಾಗಿದ್ದರೂ ಮನುಷ್ಯನು ಈ ಕನ್ನಡಿಯನ್ನು ನೋಡಲು ಸಾಧ್ಯವಿದೆ. ಕಳವು ಆಗಿರುವ ಸಾಮಾನು, ಅಸ್ವಸ್ಥತೆಯಿಂದ ಗುಣವಾಗದಿರುವಿಕೆ, ಮುಂದೆ ಸಂಭವಿಸಬಹುದಾದ ದುಃಖಗಳು ಮತ್ತು ಅವುಗಳಿಂದ ತಪ್ಪಿಸಲು ಉಪಾಯ, ಭೂಮಿಯಲ್ಲಿ ಇಟ್ಟಿರುವ ಹಣದ ಪತ್ತೆ, ಯಾವುದೇ ಕಷ್ಟತರವಾದ ಕೆಲಸಗಳು ಸಾಧ್ಯವಾಗುವಿಕೆ, ನೌಕರಿ, ಕೋರ್ಟು ಕಚೇರಿ ಕೆಲಸಗಳಲ್ಲಿ ಯಶ, ಪರೀಕ್ಷೆ ಮುಂತಾದ ಕೈಕೊಂಡ ಕೆಲಸಗಳಲ್ಲಿ ಯಶಸ್ಸು ಉಂಟಾಗುತ್ತದೆ. ಸ್ವರ್ಗಸ್ಥರಾದ ತಂದೆ-ತಾಯಿಗಳನ್ನು ಮತ್ತು ಆಪ್ತ ಮಿತ್ರರನ್ನು ಮತ್ತು ಸ್ವಪ್ನದಲ್ಲಿ ನೋಡಬೇಕೆಂಬ ವಸ್ತುಗಳನ್ನು ಇದರಲ್ಲಿ ಕಾಣಬಹುದು.

ಬೆಲೆ ಬರಿ Rs. 2-8-0 ಮತ್ತು ಟಪಾಲು ಖರ್ಚು ಬೇರೆ. ಇದು ನಿಜವಲ್ಲವೆಂದು ಸಿದ್ಧ ಮಾಡಿ ತೋರಿಸಿಕೊಟ್ಟಲ್ಲಿ ಬೆಲೆ ವಾಪಸು. ನಿಮ್ಮ ಪತ್ತೆ ಚೆನ್ನಾಗಿ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಸಿಕ್ಕುವ ಸ್ಥಳ:

American Mesmerism House,
P. B. No. 27 (J. M. D.) Amritsar (India).

ಕಾರರ ದುಡಿತವು ನಂಬಲಾರದಷ್ಟು ಅಸ್ತ-ವ್ಯಸ್ತವಾಗಿತ್ತು. ಒಬ್ಬ ಕೂಲಿಯವನು ಒಂದುವಾರದಲ್ಲಿ ಹದಿನಾಲ್ಕು ಸಾವಿರದಿಂದ ಮೂವತ್ತಾರು ಸಾವಿರ ಮಾರ್ಕಿನವರೆಗೆ ದುಡಿಯಬಹುದಾಗಿತ್ತು! 'ಎಂದಮೇಲೇಕೆ ಭಿಕ್ಷೆ!' ಎಂದು ಕೇಳುವುದೋ? ಸರಿ, ಅದಕ್ಕೆ ಒಂದೇ ಉದಾಹರಣೆ ಹೇಳೋಣ. ಅತಿಕ್ರಮಣದ ಪೂರ್ವದಲ್ಲಿ ಒಬ್ಬ ಗೋಡೆಕಟ್ಟುವವನು, ವಾರಕ್ಕೆ ಸುಮಾರು ಇಪ್ಪತ್ತಾರು ರೂಪಾಯಿ ಬೆಲೆಯಿದ್ದ ನಲವತ್ತು ಮಾರ್ಕುಗಳನ್ನು ದುಡಿಯುತ್ತಿದ್ದ. ಈಗ ಅವನಿಗೆ ಅಷ್ಟೇವೇಳೆಯಲ್ಲಿ ನಲವತ್ತೆಂಟು ಸಾವಿರ ಮಾರ್ಕು ದುಡಿತ, ಆದರೆ ಈ ಎಲ್ಲ ಮಾರ್ಕುಗಳ ಬೆಲೆ ಆರಾಣೆ ಮಾತ್ರ! ಅವನ ದಿನ-ಗೂಲಿ ಒಂದಾಣೆಯೂ ಆಗಲಿಲ್ಲ. ಅದರಲ್ಲೇನು ಕೊಳ್ಳುವುದು? ಕೊಳ್ಳಹೋದರೂ ಏನು ಸಿಗಬಹುದು? ಆ ಕಾಲಕ್ಕೆ ಜರ್ಮನಿಯಲ್ಲಿ ತಿನ್ನುವ ಪದಾರ್ಥಗಳಲ್ಲಿ 'ಮಾರ್ಜ-ರಿನ್' (ಕೃತ್ರಿಮ ಬೆಣ್ಣೆ) ಒಂದು. ಈ ಬೆಣ್ಣೆಯು ಒಂದು ಪೌಂಡು ತೂಕಕ್ಕೆ ಆರು ಸಾವಿರ ಮಾರ್ಕು ಕೊಡಬೇಕು! ಇಂತಹ ಒಂದು ಪೌಂಡು ಕೃತ್ರಿಮ ಬೆಣ್ಣೆಯನ್ನು ದೊರಕಿಸಲಿಕ್ಕೆ ಆಗಿನ ಜರ್ಮನಿಯ ಕೂಲಿ-ಕಾರನು ಒಂದೂವರೆ ದಿವಸ ಕೆಲಸಮಾಡಬೇಕಾಗುತ್ತಿತ್ತು. ಅಷ್ಟೇ ಬೆಣ್ಣೆಯನ್ನು ಒಬ್ಬ ಬ್ರಿಟಿಶ್ ಕೂಲಿಕಾರನು ಅರ್ಧ ಗಂಟೆಯ ಕೂಲಿಯಿಂದ ಕೊಳ್ಳಬಹುದು. ನಾಲ್ಕು ಪೌಂಡು ತೂಕವುಳ್ಳ ಒಂದು ರೊಟ್ಟಿಯ ತುಣುಕಿಗೆ ಆರುನೂರೈವತ್ತು ಮಾರ್ಕು ಬೆಲೆ; ಅಲ್ಲದೆ ಒಂದು ಮನೆಗೆ ವಾರದಲ್ಲಿ ಒಂದು ಇಂತಹ ರೊಟ್ಟಿಗಿಂತ ಹೆಚ್ಚಿಗೆ ದೊರೆಯುವಂತಿರಲಿಲ್ಲ. ಒಂದು ಕಾಲು ಗ್ಯಾಲನ್ ಹಾಲಿಗೆ ಏಳ್ನೂರೈವತ್ತು ಮಾರ್ಕು! ಇದ್ದಲಿಯು ಅರುವತ್ತು ಮಾರ್ಕಿಗೆ (ಸುಮಾರು ನಲವತ್ತೆರಡು ರೂಪಾಯಿಗೆ) ಒಂದು ಪೌಂಡು! ಚಳಿಗಾಲದಲ್ಲಿ ಆಗಿನ ಜರ್ಮನರು ಇದ್ದಲು ಕೊಳ್ಳಲಾಗದೆ ಬೆಚ್ಚಗಿರಲಿಕ್ಕೆಂದು ಹಾಸಿಗೆಯಲ್ಲಿಯೆ ಮಲಗಿಬಿಡುತ್ತಿದ್ದರಂತೆ! ಅದೂ ಒಂದು ಪಡುಗಡೆಯೇ ಅವರಿಗೆ. ಹಾಗೇ ಕೊನೆಯ ನಿದ್ದೆ ಹೋದವರೂ ಬಹಳ. ಒಂದು ಬೂಟಿನ ಜತೆಗೆ ೩೫೦೦೦ ಮಾರ್ಕು (ಸುಮಾರು ೨೭ ಸಾವಿರ ರೂಪಾಯಿ!) ಅಂತೆಯೇ ಸಣ್ಣ ಹುಡುಗರು ಕೂಡ ಹಿಮ ಬಿದ್ದ ನೆಲದಮೇಲೆ ಬರಿಗಾಲಿನಿಂದ ನಡೆಯಬೇಕಾಗಿತ್ತು. ನೋಡಿದಲ್ಲೆಲ್ಲ ಕಾಹಿಲೆಯಿಂದ ನರಳುವ ಮಕ್ಕಳು-ಮರಿಗಳು. ಆಗಿನ ಜರ್ಮನಿಯ ಅರ್ಥಿಕಪಂಡಿತರು ಹೇಳಿದಂತೆ ಜರ್ಮನಿಯು ನಲವತ್ತು ಲಕ್ಷ ಜನರನ್ನು ಮಾತ್ರ ಹೇಗಾದರೂ ಜೀವ ದಿಂದಿಡಬಹುದೆಂದು ಆಶೆಯಿತ್ತು. ಇನ್ನುಳಿದ ಇಪ್ಪತ್ತೇಳು ಲಕ್ಷವು ಈ ರೀತಿಯಲ್ಲಿ ಸಾವಕಾಶವಾಗಿ ಮಾಯವಾಗಹತ್ತಿತ್ತು. ಫ್ರೆಂಚ್ ಜನಸಂಖ್ಯೆ ನಲವತ್ತೊಂದು ಲಕ್ಷವಿತ್ತು ಆ ಕಾಲಕ್ಕೆ. ಸರಿ, ಫ್ರೆಂಚ್ ಮಂತ್ರಿಯ ಉದ್ದೇಶ ತುಂಬ ಹಗುರಾಗಿ ಸಾಧಿಸಿಬಿಟ್ಟಿತು. ಈ ಅತಿಕ್ರಮಣದ ಪರಿಣಾಮವಾಗಿ ಜರ್ಮನ್ ಜನಸಂಖ್ಯೆಯು ತಮಗಿಂತ ಕಡಿಮೆಯಾಗುವುದು ಕಟ್ಟಿಟ್ಟದ್ದು. ಯಾವ ದೃಷ್ಟಿಯಿಂದ ನೋಡಿದರೂ ಜರ್ಮನಿಯು ಈ ಅತಿಕ್ರಮಣದಿಂದ ಅವನತವಾಗಹತ್ತಿತ್ತು; ಆಗಿಯೂ ಬಿಟ್ಟಿತು.

ಇದೇ ರೀತಿಯಾಗಿ **ಲೀಪಝಿಗ್**, ವೀಮಾರ ಮೊದಲಾದ ಪಟ್ಟಣಗಳಲ್ಲಿಯೂ ಜರ್ಮನ್ ಜೀವನವು ಅತಿಕ್ರಮಣದುರಿಗೆ ಸಾವಕಾಶವಾಗಿ ಕರಗಹತ್ತಿತ್ತು. ಆದರೆ ಕರಗಿದಂತೆ ಆ ಜೀವನದ ಬಂಗಾರವು ಚೊಕ್ಕಾಗಿ ಹೊರಟಿತು. ಆ ಕಾಲದಲ್ಲಿ ಹಿಟ್ಲರನು ಇನ್ನೂ ಅದೇ ತನ್ನ ಅಧಿಕಾರದ ಸ್ಥಾನದ ಮೊದಲನೆಯ ಮೆಟ್ಟಲಿನಲ್ಲಿದ್ದ. ಜರ್ಮನರ ರಾಷ್ಟ್ರಪ್ರೇಮವು ಈ ನರಕ-ಯಾತನೆಯಲ್ಲಿ ಕೂಡ ಕಡಿಯಲಿಲ್ಲ. ಎಷ್ಟು ಸಂಕಟಬಂದರೂ ಸೋಲು ಒಪ್ಪಲಿಕ್ಕಿಲ್ಲವೆಂದು, ಹಸಿವೆಯಿಂದ ಸಾಯುತ್ತಿರುವ ಜರ್ಮನರು ಹೇಳುತ್ತಿದ್ದರು. ಕೊನೆಯಲ್ಲಿ ಜರ್ಮನಿಯು ದುಃಖಾಂತವನ್ನು ತಂದುಕೊಳ್ಳಲಾರದೆ **ಆಂಗ್ಲ-ಫ್ರೆಂಚ್** ಕರಾರಿಗೆ ಒಪ್ಪಿಕೊಂಡಿತು. ಫ್ರೆಂಚ್ ಸೈನ್ಯವು ೧೯೨೫ರಲ್ಲಿ ಪುನಃ ತನ್ನ ದೇಶಕ್ಕೆ ತೆರಳಿತು. ತನ್ನ ಉದ್ದೇಶವು ಸಾಕಷ್ಟು ಸಾಫಲ್ಯಹೊಂದಿತ್ತು; ಆದರೆ ಈ ತೆರದ ಒಪ್ಪಂದವು ಹೇಡಿತನದ ಚಿನ್ಹವೆಂದು ಹಿಟ್ಲರನ ಅಭಿಪ್ರಾಯ! ಅಂತೆಯೆ ಅವನು ಆಗ '**ಜರ್ಮನಿಯ ಹೋರಾಡುವ ಸಂಘ**' ಎಂಬುದೊಂದು ಸೈನ್ಯವನ್ನು ತಯಾರಿಸಿ, ತಾನೇ ಅದರ ಅಧಿಪತಿಯಾದ. ಆ ಆಧಿಪತ್ಯದ ಕಾರ್ಯವನ್ನೂ ಅದರ ಪರಿಣಾಮವನ್ನೂ ಮುಂದಿನ ಲೇಖನದಲ್ಲಿ ಚಿತ್ರಿಸುವುದಿದೆ.

ನನ್ನಾಕೆ

★

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

೧

ಮೂಡುವ ಉಷೆಯು ನಿನಾಲಿತದಲ್ಲಿ
ಎದೆಯು ಬಿದಿರ್ಚುತ ಬಹಳಾಕೆ;
ಪಾಡುವ ಕೋಕಿಲೆಯಿನಿಗೊರಳಲ್ಲಿ
ಹಾಡುತ ಬರುವಳು ನನ್ನಾಕೆ!
ಬನ-ಬನದಲರನು ಮುಡಿಯೊಳಗಿಟ್ಟು
ಇಂದಿರವಿಲ್ಲನು ಕಟಿಯೊಳು ತೊಟ್ಟು
ಮೊರೆವ ತರಂಗಿಣಿಕಲಗಾನದಲಿ
ಬರುವಳು ಒಯ್ಯಾರದಲಿ!
ಸಸ್ಯಶ್ಯಾಮಲೆ, ಲತಾಂಗಿ ಕೋಮಲೆ,
ಬರುವಳು ಸುಮ್ಮಾನದಲಿ!

೨

ಋತುಗಳ ಸೊಬಗನು ಸೂರೆಗೆ ಕೊಂಡು,
ತಿಂಗಳ ಜೊನ್ನಿನ ಮುಗುಳ್ನಲಿ;
ಬರುವಳು ಬಳುಕುತ, ಬೀಗುತ, ಬಾಗುತ,
ಕುಸುಮಪರಾಗದ ಘಮಲಿನಲಿ!
ಸಂಧ್ಯಾರಾಗವನಾಂತು ಕದಪಿನಲಿ,
ತೇಲುವ ಅಂಚೆಯ ಮಂದಗಮನದಲಿ
ಒಯ್ಯನೆ ಬರುವಳು, ಬಾನಿನ ಫಲಕದಿ
ತೇಲಿಸಿ ಮುಗಿಲಿನ ಕುರುಳೋಳಿ!
ಅಮೃತ ತರಂಗಿಣಿ, ರಸಋಷಿಸಂಗಿನಿ,
ಒಲಿದೈತರುವಳು ಮುದತಾಳಿ!

೩

ಕಲ್ಪ-ಕಲ್ಪಗಳ ಕಂಡಿಹಳೆನಿತೋ;
ಜರೆಯನು ಕಾಣಳು ಆ ತರುಣಿ!
ಕಾಲನ ಅಧಿಕಾರವ ಮೀರಿದಿರುವಳು:
ಚಿರಯೌವನದವಳಾರಮಣಿ!
ಎನ್ನನ್ನರೆನಿಬರನೋ ಕರುಣೆಯಲಿ,
ಎಡೆಯನಿತ್ತು ತನ್ನೊಲುಮೆತೆಕ್ಕೆಯಲಿ,
ರಕ್ಷಿಸುತಿರುವಳು ಪ್ರೇಮಭಿಕ್ಷೆಯಲಿ;
ಸ್ಥಿರಮಂದಸ್ಮಿತೆ, ಆ ದಾತೆ!
ಅದೂಷ್ಯ ಭೋಗಿನಿ, ಪವಿತ್ರಯೋಗಿನಿ,
ಸುರುಚಿರ ರಸಚೇತನಿ, ಪೂತೆ!

೪

ದರ್ಶದ ನಿಶಿಯು ಸುರುಂದ್ರ ನೀರವದಿ
ಧ್ಯಾನದೊಳಿರ್ಪಳು ತಾಪಸಿಯು!
ಬುವಿಯಲಿ, ಬಾನಲಿ, ಮಲೆಯಲಿ, ಕಾನಲಿ,
ಕಿಕ್ಕಿರಿದಿಡಿದಿರೆ ತಾಮಸಿಯು!
ಕಾಲಿಮಕೇಶವ ದಿಸೆಗಳಿಗೆಸೆದು,
ನೀರವ ಧ್ಯಾನದೊಳಕ್ಷಿಯ ಮುಗಿದು,
ರಸರೂಪಿಯನುರೆ ತಪದೊಳಗೊಲಿದು,
ತುಂಬುವಳೆರ್ದೆಯನು ರಸ-ಕುಂಭ!
ಮೋಹವನೆರೆವಳು; ಅಮೃತತೆಯೀವಳು;
(ಶಂಕೆಯೆ? ಬಿಡಿ, ಎನ್ನನು ನಂಬಿ!)

೫

ಪಲವರಿಗೊಲುಮೆಯ ಭಿಕ್ಷೆಯನಿಟ್ಟರು,
ಕಲುಷಿತಳಲ್ಲವು ಆ ಕನ್ನೆ!
ಲಿಂಗವನರಿಯದ ಚೇತನರೂಪಿಣಿ,
ಸ್ಫಟಿಕ ಶುಭ್ರಳು, ರಸ-ರನ್ನೆ!
ಎನಿಬರೊ ಬರುವರು, ಒಲಿವರು, ಅಳಿವರು,
ಒಲುಮೆಯ ಸ್ಮಾರಕ ಹಿಂದಕೆ ಬಿಡುವರು,
ಆದರು ಬೇಸರದಲೆ ಒಲಿದೀವಳು
ಕೊಡುಗೈಯವಳಾ ಹಿರಿ-ದಾನಿ!
ಗೆಲಿದವರೆನಿಬರೊ? ಗೆಲುವವರೆನಿಬರೊ?
ಕೃಪೆಗೈಯುಲು ಆ ರಸ-ರಾಣಿ!

ರಣಯಂತ್ರ

(ಏಕಾಂಕ ನಾಟಕ)

★

ಶ್ರೀ. ಟಿ. ಆರ್ ಸುಬ್ಬಾರಾವ್

ಅವರಿಂದ

ದೃಶ್ಯ ೧

[ಕವಾಯತಿನ ಮೈದಾನದ ಒಂದು ಭಾಗ. ತೆರೆಯು ಹಿಂದೆ ವಾದ್ಯಗಳು ಮಧುರವಾಗಿ ಮೊರೆಯುತ್ತಿವೆ. ಸೈನಿಕರ ಸಾಲುಗಳು ತರಂಗ-ತರಂಗವಾಗಿ ಬಂದು ನಿಲ್ಲುತ್ತಿವೆ. ಎತ್ತರವಾದ ವೇದಿಕೆಯ ಮೇಲೆ ನಿಂತು ಧರ್ಮಗುರುವು ಹರಸುತ್ತಿರುವನು. ಎದೆಗೆ ಬಣ್ಣ ಬಣ್ಣಗಳ ಬಟ್ಟೆ-ಬಿಲ್ಲೆಗಳನ್ನು ಸಿಕ್ಕಿಸಿಕೊಂಡ ನಾಯಕನು ಹೆಮ್ಮೆಯಿಂದ ನಿಂತಿರುವನು. ಸೈನಿಕರು ಬಂದು ಸೆಲ್ಯೂಟ್ ಮಾಡಿ ತೆರಳುತ್ತಿರುವರು.]

ನಾಯಕ:— ನನ್ನ ಮೆಚ್ಚಿನ ಶೂರ ಸೈನಿಕರೇ, ಸಾಗರದ ಮೇಲೆ ಸಾಗಿ ಹೋಗಿ, ಅರಿಸಿಬಿರವನ್ನು ದಾಳಿಮಾಡಲು ಹೊರಟ ನಿಮ್ಮನ್ನು ಎಷ್ಟು ಅಭಿನಂದಿಸಿದರೂ ಸಾಲದು. ಸೂರ್ಯನು ಅಸ್ತಮಿಸದ ಸಾಗರಸಮ್ರಾಟ್ ಬ್ರಿಟನ್ನಿನ ಮಾನ ಉಳಿಸಲು.. ವಿಶ್ವಧರ್ಮದ ರಕ್ಷಣೆ ಮಾಡಲು.. ನಾಗರಿಕತೆಗೆ ಧಕ್ಕೆತರುತ್ತಿರುವ ಕಲಾದ್ವೇಷಿ ಜರ್ಮನರನ್ನು ತುಳಿಯಲು ಹೋಗುವ ನೀವು-ಜನತೆಯ ಜ್ಯೋತಿಗಳು, ಬಡವರ ಬಂಟರು, ಕೆಚ್ಚೆದೆಯ ಕಲಿಗಳು. ನಿಮ್ಮ ಪ್ರತಿಯೊಂದು ರಕ್ತದ ಅಣುವು ಶತವಾಗಿ, ಸಾಸಿರವಾಗಿ ಬ್ರಿಟನ್ನಿನ ಬೆಂಬಲಕ್ಕೆ ನಿಲ್ಲಲಿ. ಹೆಚ್ಚಾಗಿ ಹೇಳಲಾರೆ; ಬ್ರಿಟನ್ನಿನ ಭಾಗ್ಯ-ಬದುಕು ನಿಮ್ಮ ಕೈಗಳಲ್ಲಿದೆ. ಈ ಮಾತು ನಿಮ್ಮೆದೆಗಳಲ್ಲಿ ಚಿರವಾಗಿರಲಿ! ಹೇಳಿ "Long live our King Emperor!"

ಸೈನಿಕರು:— (ಏಕಕಂಠದಲ್ಲಿ) " Long live our King Emperor. Down with Germans." (ನಮ್ಮ ದೊರೆ ಚಿರಾಯುವಾಗಲಿ, ಜರ್ಮನರು ಹಾಳಾಗಲಿ!)

[ತೆರೆಯಲ್ಲಿ ಬಂದೂಕುಗಳ ಶಬ್ದವು ಸಿಡಿಲಿನಂತೆ ಕೇಳಬಂದು ನಿಲ್ಲುವುದು. ಇದ್ದಕ್ಕಿದ್ದಂತೆಯೆ " ದೊರೆಯು ಹಾಳಾಗಲಿ-ಯುದ್ಧಕ್ಕೆ ಉರಿ ಬೀಳಲಿ " ಎಂದು ಕೂಗಿಕೊಂಡು ಹುಚ್ಚಿಯೊಬ್ಬಳು ಓಡಿ ಬರುವಳು. ಹತ್ತಿರದಲ್ಲೇ ಇದ್ದ ಪೋಲೀಸಿನವರು ಅವಳನ್ನು ಹಿಡಿಯುವರು.]

ಹುಚ್ಚಿ:— ನನ್ನ ಮಗನನ್ನು ತಿಂದ ರಣರಕ್ಕಸಿಗೆ ಬೆಂಕಿ ಬೀಳಲಿ! (ನಾಯಕನನ್ನು ನೋಡಿ) ಅವನನ್ನು ಯುದ್ಧಕ್ಕೆ ಕಳುಹಿಸಿದ ನಿನಗಿಷ್ಟು ಬೆಂಕಿ ಬೀಳಲಿ......ಯುದ್ಧ.... ಬ್ರಿಟನ್ ....ಅಗ್ನಿಯುದ ಕಂದಮ್ಮನ್ನ ಕೊಂದೆಯ ಲ್ಲೋ ಪಾಪಿ ! .... ನೀನು ಸಾಯಿ....ಹಾ!.... ಹ್ಹಾ....! (ವಿಕಟವಾಗಿ ನಗುವಳು.)

ಸಿಪಾಯಿ:— " Shut up your bloody mouth " (' ನಿನ್ನ ಹಾಳು ಬಾಯಿ ಮುಚ್ಚು ' ಎಂದು ಹಲ್ಲು ಕಡಿಯುವನು.)

ಹುಚ್ಚಿ:— ಯುದ್ಧದ ಬಾಯ್ಮುಚ್ಚೋ....ಹೋಗ್ಬೇಡ್ರಿ... ಯಾರೂ ಯುದ್ಧಕ್ಕೆ ಹೋಗ್ಬೇಡ್ರಿ....!ಸಾಯ್ತಾರಿ..ನೀವೆಲ್ಲಾ ಸಾಯ್ತಾರಿ !

ಸಿಪಾಯಿ:— (ಕೆರಳಿ) you....your ..bloody .. ass [ಕಿರುಚುವನು. ಹುಚ್ಚಿಯು ಕೂಗುತ್ತಲೆ ಇರುವಳು.. ಸಿಪಾಯಿಗಳು ಹಿಡಿದೆಳೆದೊಯ್ಯುವರು. ತೆರೆಯ ಮರೆಯಲ್ಲಿ ಹುಚ್ಚಿಯು ಕೂಗುತ್ತಾ ಇರುವುದು ಕೇಳಿಬರುವುದು. ಆದರೆ ಅದು ಅರ್ಧಕ್ಕೆ ನಿಂತು ಪಿಸ್ತೂಲಿನ ಸದ್ದು ಕೇಳುವುದು. ವಾದ್ಯಗಳು ಬಿರುಸಾಗಿ ಬಾರಿಸಲ್ಪಡುವುವು.]

ದೃಶ್ಯ ೨

[ಸೈನಿಕ ರಣಬೀರನ ಕೋಣೆ. ಸಂಜೆಯ ನಾಲ್ಕರ ಸಮಯ. ರಣಬೀರನು ಸೈನ್ಯದ ಉಡುಪನ್ನು ಧರಿಸುತ್ತಾ ಹಾಗೆಯೆ ಹಿಂದಿಯ ಹಾಡೊಂದನ್ನು ಗೊಣಗುತ್ತಿರುವನು. ಪಕ್ಕದಲ್ಲಿ ಕಟ್ಟಿಟ್ಟ ಹಾಸಿಗೆ-ಟ್ರಂಕೊಂದಿದೆ. ಶಾರ್ದೂಲಸಿಂಗನು ಪ್ರವೇಶಿಸುವನು.]

ಶಾರ್ದೂಲ:— ನಮಸ್ತೇ..ರಣಬೀರ, ಏನು ಹೊರಡಲು ಸಿದ್ಧವಾಗಿಯೆ ನಿಂತಿದ್ದೀಯಾ ?

ರಣಬೀರ:— ಹೂಂ, ಆರು ಗಂಟೆಯ ರೈಲಿಗೆ ಹೊರಡಬೇಕಲ್ಲಾ !

ಶಾರ್ದೂಲ:— ಮತ್ತೆ ಹಿಂದಿರುಗುವುದು ಯಾವಾಗಲೊ ?

ರಣಬೀರ:— ಹಿಂದಿರುಗುವುದು.... ಹೂಂ.... ನೋಡಬೇಕು !

ಶಾರ್ದೂಲ:— ವಿಮಲಾ ನಿನ್ನನ್ನು ಜ್ಞಾಪಿಸುತ್ತಿದ್ದಳು !

ರಣಬೀರ:— ವಿಮಲಾ.... ವಿಮಲಾ...., ಶಾರ್ದೂಲ್ ನೀನೇ ಅದೃಷ್ಟಶಾಲಿ ನೋಡು !

ಶಾರ್ದೂಲ:— ಹೇಗೆ ? ಅದಿರಲಿ ರಣಬೀರ, ಈವೊತ್ತು ಬೆಳಗಿನಲ್ಲಿ ಕಂಡ ಆ ಹುಚ್ಚಿ ಜ್ಞಾಪಕಕ್ಕೆ ಬಂದು ಮತ್ತೆ ಮತ್ತೆ ಮನಸ್ಸನ್ನು ಕಲಕುತ್ತಿದೆ ನಾನೇನಾದರೂ ಉಡುಪಿನಲ್ಲಿಲ್ಲದೆ ಇದ್ದಿದ್ದರೆ ಆ ಸಿಪಾಯಿ ಪಿಶಾಚ್ಯವನ್ನು ಅಪ್ಪಳಿಸುತ್ತಿದ್ದೆ ನೋಡು. ಪಾಪ ಮಗನನ್ನು ಕಳೆದುಕೊಂಡ ತಾಯಕರುಳ ಬೇಗೆ ಆ ದೆವ್ವಕ್ಕೇನು ಗೊತ್ತು ?

ರಣಬೀರ:— ಛೆ! ಛೆ! ಇಷ್ಟಕ್ಕೆಲ್ಲಾ ಮರುಗಿದರೆ ಹೇಗೆ ಶಾರ್ದೂಲ? ಅಲ್ಲಿ ಯುದ್ಧರಂಗದಲ್ಲಿ ಇಂತಹವು ದಿನಕ್ಕೆ ನೂರಾರು!

ಹೆಂಡತಿಯ ಕಾಗದವನ್ನು ಓದುತ್ತಿರುವ ಸೈನಿಕನನ್ನು ಗುಂಡಿಟ್ಟು ಕೊಲ್ಲುವಾಗ,.. ಅನ್ನ ತಿನ್ನುತ್ತಿರುವವನ ತಲೆಯ ಮೇಲೆ ಬಾಂಬನ್ನೊಗೆಯುವಾಗ,.. ಮಗನನ್ನು ನೆನಸುತ್ತಿರುವ ತಂದೆಯ ಎದೆಯನ್ನು ಬಾಕಿನಿಂದಿರಿಯುವಾಗ.. ಚಿಳ್ಳೆಪಿಳ್ಳೇ-ಆಬಾಲವೃದ್ಧರ ಮೇಲೆ—ಸ್ತ್ರೀಯರ ಮೇಲೆ ವಿಷವಾಯುವನ್ನು ಹರಿಸುವಾಗ ಇವನ್ನೆಲ್ಲಾ ಗಣನೆಗೆ ತರಲಿಕ್ಕಾಗುವುದೇ ಶಾರ್ದೂಲ? ಇಂತಹ ಮೃದುಭಾವನೆಯು ಸೈನಿಕನ ಮೈಗೆ ಒಳ್ಳೆಯದಲ್ಲ ತಿಳೀತೇ?

ಶಾರ್ದೂಲ:— ನನಗೇಕೆ ಅದರ ಯೋಚನೆ? ನಾನಂತೂ ಯುದ್ಧಕ್ಕೆ ಹೋಗುವ ಹಾಗಿಲ್ಲ!

ರಣಬೀರ:— (ನಗುತ್ತಾ) ಯುದ್ಧದ ಅ-ಆ-ಇ-ಈ, ತಿಳಿಯದ ನಾಗರಿಕರನ್ನೂ ಬಿಡದ ಈ ಮಾರಿ ನಿನ್ನ ಬಿಡುತ್ತೇನೋ.... ಹುಚ್ಚಾ....ಹುಚ್ಚಾ..

ಶಾರ್ದೂಲ:— ಹಾಗಲ್ಲಾ, ರಣಬೀರ!

ರಣಬೀರ:— ಮತ್ತೆ ಹೇಗೆ ಶಾರ್ದೂಲ?

ಶಾರ್ದೂಲ:— ವಿಮಾರಾ ಗರ್ಭಿಣಿ. ನನ್ನನ್ನು ಬಿಟ್ಟರೆ ಅವಳಿಗೆ ಯಾರು ದಿಕ್ಕು? ಕ್ಯಾಪ್ಟನ್ ಹಾವರ್ಡರಿಗೆ ಹೇಳಿಕೊಳ್ಳುತ್ತೇನೆ

ರಣಬೀರ:— ನೀನೇನೊ ಹೇಳಿಕೊಳ್ಳಬಹುದು, ಆದರೆ ಕೇಳುವವರಾರು?

ಶಾರ್ದೂಲ:— ಏಕೆ ಕೇಳುವುದಿಲ್ಲ! ನನ್ನ ಮನಸ್ಸಿಗೆ ವಿರೋಧವಾಗಿ ನನ್ನನ್ನು ಯುದ್ಧಕ್ಕೆ ಹೇಗೆ ಕಳುಹಿಸುವರು?

ರಣಬೀರ:— ನೀನು,.. ನಿನ್ನ ಮನಸ್ಸು;.. ಈ ಸೈನ್ಯದಲ್ಲಿ ನೀನೊಬ್ಬ ವ್ಯಕ್ತೀ ಅಂತ ತಿಳಿದಿದ್ದೀಯೇನು?

ಶಾರ್ದೂಲ:— ಅಲ್ಲವಾದರೆ ಮತ್ತೇನು?

ರಣಬೀರ:— ಮತ್ತೇನೇ? ನೀನೊಂದು ಯಂತ್ರ! ಅವರು ನಡೆಯಿಸಿದಂತೆ ನಡೆಯಬೇಕು; ನುಡಿಸಿದಂತೆ ನುಡಿಯಬೇಕು. ಗೊತ್ತಿಲ್ಲವೇ ನಿನಗೆ. ನಾವು ಸೈನ್ಯದಲ್ಲಿ ವ್ಯಕ್ತಿಗಳಲ್ಲ ಶಾರ್ದೂಲ; ಬರಿಯ ಅಂಕೆಗಳು! ಬರಿಯ ನಂಬರುಗಳು! ನನ್ನದು R. 73; ನಿನ್ನದು.....

ಶಾರ್ದೂಲ:— (ಯಾಂತ್ರಿಕವಾಗಿ) A. 94!

ರಣಬೀರ:— (ನಗುತ್ತಾ), Mr. A. 94, ತಗೋ ಈ ಬೀರ್ (ಎಂದು ಗ್ಲಾಸುಗಳಲ್ಲಿ ಬೀರ್ ಸುರಿದು ಶಾರ್ದೂಲ್‌ಸಿಂಗನಿಗೆ ಒಂದನ್ನು ತೋರಿಸಿ ತಾನೂ ಕುಡಿಯುವನು.)

ಶಾರ್ದೂಲ:— (ಬೀರ್‌ಗ್ಲಾಸನ್ನು ತಿರಸ್ಕರಿಸಿ ಆಶ್ಚರ್ಯದಿಂದ) ರಣಬೀರ್..ನೀನು..ಬೀರ್.-

ರಣಬೀರ:— ಹ್ಹ..ಹ್ಹ..ಹ್ಹಾ...ಶಾರ್ದೂಲ್– ಮರಣದ ಭೀಕರಭಾವನೆಯನ್ನು ಮನಸ್ಸಿನಿಂದ ದೂರಮಾಡಲಿಕ್ಕೆ, ಈ ಮಧುವಿನ ಮೋಹಕ– (ಗ್ಲಾಸನ್ನು ತೋರಿಸುತ್ತಾ) ಉತ್ತೇಜಕ ಪಾನೀಯವೊಂದಕ್ಕೆ ಮಾತ್ರ ಸಾಧ್ಯ. ಯುದ್ಧಕ್ಕೆ ಹೋಗುವವರು ಮಧು–ಮೋಹಿನಿಯರ ಆಶ್ರಯವನ್ನು ಹೊಂದಲೇ ಬೇಕು. ಪ್ರತಿದಿನವೂ ಸಾವಿನ ಶೀತಲಸ್ಪರ್ಶವನ್ನೂ, ನೋವಿನ ಭೀಕರ ಭಾವನೆಯನ್ನೂ ನಿರೀಕ್ಷಿಸುತ್ತಿರುವವರಿಗೆ ಪ್ರಪಂಚವನ್ನು ಮರೆಯಲೊಂದು ವಸ್ತುವು ಬೇಕಲ್ಲವೇ ಶಾರ್ದೂಲ್? ಅದನ್ನು ಮಧುವು ಒದಗಿಸುವುದು. ಮರೆತೆಯೇನು ಮೊನ್ನೆ ಗಾಯಕನೊಬ್ಬನು ಹಾಡಿರುವುದು ' ರಹನೇಕಾ ದೋದಿನ್, ಔರ್ ಉಸ್ ದಿನ್‌ಭೀ ಪಿಯಾ ಜಾಯ್ ! '

ಶಾರ್ದೂಲ:— ನಿನ್ನ ವೇದಾಂತ ನನಗೆ ಬೇಡ ರಣಬೀರ. ಕದನವು ನಿನ್ನನ್ನು ಮೊದಲಿಗೇ ಸಾಕಾದಷ್ಟು ಕೀಳ್ಮಟ್ಟಕ್ಕಿಳಿಸಿದೆ!

ರಣಬೀರ:— ನಾಳೆ ನೀನು ಯುದ್ಧಕ್ಕೆ ಹೊರಡುವಾಗ, ನಚ್ಚಿನವರನ್ನು ಬಿಟ್ಟು ಹೋಗುವಾಗ, ಮೋಹದ ಮಡದಿಯ ಕಣ್ಣೀರಿನ ಕಾಲುವೆಯನ್ನು ದಾಟುವಾಗ ತಿಳಿಯುವುದು ನನ್ನ ವೇದಾಂತದ ಸಾರ! [ತೆರೆಯಲ್ಲಿ ವ್ಹಿಸಲ್ಲಿನ ಶಬ್ದವಾಗುವುದು] ಶಾರ್ದೂಲ, ಹೊತ್ತಾಯ್ತು, ನಾನಿನ್ನು ಹೊರಟೆ. ಹೊತ್ತಾಗುತ್ತಾ ಬಂತು, Good bye.

ಶಾರ್ದೂಲ:— Good bye; ಬದುಕಿ ಬಂದರೆ ಮತ್ತೆ ನೋಡೋಣ!

ರಣಬೀರ:— (ನಿಧಾನವಾಗಿ) ಬದುಕಿ ಬಂದರೆ ನೋಡೋಣ! ಹ್ಹಾ! ಶಾರ್ದೂಲ ವಿಮಾರಾಗೆ ನನ್ನ ನಮಸ್ಕಾರಗಳನ್ನು ತಿಳಿಸು (ತೆರೆಯಲ್ಲಿ ಸೈನ್ಯದ ಬ್ಯಾಂಡಿನ ಸಪ್ಪಳ ಕೇಳಬರುವುದು. ರಣಬೀರನು ಹಾಡುತ್ತಾ ಹೋಗುವನು.)

" ಕರೆಯುತಲಿದೆ ರಣ ಕಹಳೆಯು ನೋಡು–
ಉರುಳಲಿ ಜರ್ಮನರಾ ತಲೆಯೋಡು–
ಸಾಯುವೆವು! ಸತ್ತರೇನಂತೆ ಬರಿಯಂಕೆ
ಹಾರಲ್ಕೆ ಆಂಗ್ಲಬಾವುಟ ಎಂದಿನಂತೆ! "

ಶಾರ್ದೂಲ:— (ನಿಧಾನವಾಗಿ) ಹೂಂ......ನಿಜ...... ಬರಿಯಂಕೆ...... (ತೆರೆಬೀಳುವುದು.)

ದೃಶ್ಯ ೩

[ಶಾರ್ದೂಲಸಿಂಗನ ಮನೆ. ಸಾಮಾನುಗಳೆಲ್ಲವೂ ಅಸ್ತವ್ಯಸ್ತವಾಗಿ ಬಿದ್ದಿವೆ. ಮೂಲೆಯಲ್ಲೊಂದು ಹಾಸಿಗೆಯ ಸುರುಳಿ. ಶಾರ್ದೂಲನ ಪತ್ನಿ ವಿಮಾರಾ ಒಂದೆಡೆಯಲ್ಲಿ ನೀರವವಾಗಿ ಕುಳಿತಿದ್ದಾಳೆ. ಆಗಾಗ ಯಾರನ್ನೋ ನಿರೀಕ್ಷಿಸಿ ಎದ್ದು ಹೋಗಿ ನೋಡಿಬಂದು ಕುಳಿತುಕೊಳ್ಳುವಳು. ಅನತಿಕಾಲಾನಂತರ ಶಾರ್ದೂಲನು ಪ್ರವೇಶಿಸುವನು.]

ವಿಮಾರಾ:— (ಉತ್ಸುಕಳಾಗಿ) ಹೋದ ಕೆಲಸವೇನಾಯ್ತು?

ಶಾರ್ದೂಲ:— (ನಿರಾಶೆಯಿಂದ) ಆಗುವುದೇನು! ನೆನಸಿದಂತೆಯೇ ಆಯ್ತು!

ವಿಮಾರಾ:— ಎಂದರೆ?

ಶಾರ್ದೂಲ:— ಎಂದರೆ ಯುದ್ಧಕ್ಕೆ ಹೊರಡಬೇಕು!

ವಿಮಾರಾ:— ಹೊರಡಲೆ ಬೇಕೇ?

ಶಾರ್ದೂಲ:— ಹೂಂ........

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚಿಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು !
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಆಳತೆಯದಿರ
ಬೇಕೆಂಬುದನ್ನು ಕೂಡಲೆ ತಿಳಿಸಿರಿ !
ಬಣ್ಣಬಣ್ಣದ ಎನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು !
ಬೆಲೆ ಸುಲಭ ! ✱ ತೃಪ್ತಿಕರವಾದ ಕೆಲಸ !!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು !

ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ವಿಹಾರಾ:— ಮನೆಯ ಸ್ಥಿತಿಗತಿ ಎಲ್ಲಾ ಹೇಳಿಕೊಂಡಿರಾ ?

ಶಾರ್ದೂಲ:— ಎಲ್ಲಾ ಹೇಳಿಕೊಂಡಿದ್ದು ಆಯ್ತು ವಿಹಾರಾ !

ವಿಹಾರಾ:— ಏನೆಂದರು ?

ಶಾರ್ದೂಲ:— ಏನ್ನುವುದೇನು ? ಹೇಳಿದರು, ಸೈನಿಕನಿಗೆ ಕ್ಷುಲ್ಲಕ ಪ್ರೇಮಬಂಧನಕ್ಕಿಂತಲೂ ದೇಶದ ಕಾರ್ಯವೇ ದೊಡ್ಡದೆಂದು. ಅವನಿಗೇನು ಗೊತ್ತು ವಿಹಾರಾ ? ಅವನಿಗೂ ನಿನ್ನಂತಹ ಪತ್ನಿ ಇದ್ದಿದ್ದರೆ........

ವಿಹಾರಾ:— ಹಾಗಾದರೇನು ಮಾಡುವಿರಿ ?

ಶಾರ್ದೂಲ:— ಮಾಡುವುದಿಲ್ಲ-ಮುಟ್ಟುವುದಿಲ್ಲ-ಹೊರಡಲೇ ಬೇಕು.

ವಿಹಾರಾ:— (ಹೆದರಿ) ಪ್ರಾಣನಾಥ್ .. .. ..

ಶಾರ್ದೂಲ:— (ನೀರವ)

ವಿಹಾರಾ:— ನನ್ನನ್ನು ಈ ಸ್ಥಿತಿಯಲ್ಲಿ ಬಿಟ್ಟು .. .. ..

ಶಾರ್ದೂಲ:— (ನಿಟ್ಟುಸಿರು ಬಿಟ್ಟು) ಉಪಾಯವಿಲ್ಲ ವಿಹಾರಾ !

ವಿಹಾರಾ:— ನನ್ನಾಣೆ ಬಿಟ್ಟು ಹೋಗಬೇಡಿ !

[ತೆರೆಯಲ್ಲಿ ಶಿಳ್ಳಿನ ಸದ್ದಾಗುವುದು. ಕುಳಿತಿದ್ದ ಶಾರ್ದೂಲನು ಎದ್ದು ನಿಲ್ಲುವನು, ವಿಹಾರಾ ಅವನನ್ನು ಬಿಗಿಯಾಗಿ ತಬ್ಬಿಕೊಳ್ಳುವಳು. ತೆರೆಯಲ್ಲಿ ವಾದ್ಯಗಾರರು ಬಾರಿಸುವರು.]

" ಬಾರೆಂದೊರಲುತ ಕರೆದಳು ಆ ರಣಮಾರಿ !
ಬನ್ನಿರಿ ಹೋಗುವ ಸಾಯಲು ಹೋರಿ ! "

ಶಾರ್ದೂಲ:— (ತನಗೆ ತಾನೆ) ಹೂಂ.. ಹೋಗಬೇಕು.. ಸಾಯಲು.. ಇಲ್ಲ, ಸಾಧ್ಯವಿಲ್ಲ ! ಮುದ್ದಿನ ವಿಹಾರೆಯನ್ನು ಬಿಟ್ಟು (ಎದೆಯ ಮೇಲೆ ನಿಶ್ಚೇಷ್ಟಿತಳಾಗಿ ಬಿದ್ದಿರುವ ಮಾರಿಯ ಕುರುಳನ್ನು ಸವರುತ್ತಾ) ಇಲ್ಲಾ. . ಹೋಗುವುದಿಲ್ಲ. ಏನೇ ಆಗಲಿ, ಸಾಧ್ಯವಿಲ್ಲ! (ತೆರೆಯಲ್ಲಿ " Fall in " ಎಂದು ನಾಯಕನು ಕೂಗಿದ ಸ್ವರ ಕೇಳುವುದು.)

ವಿಹಾರಾ:— ಹೋಗಬೇಡಿ ನಾಥಾ !

ಶಾರ್ದೂಲ:— ವಿಹಾರಾ !

ವಿಹಾರಾ:— ಯುದ್ಧಕ್ಕೆ ಹೋ ಗ ಬೇ ಡಿ ಪ್ರಾಣನಾಥಾ ! (ತೆರೆಯಲ್ಲಿ ಕುದುರೆಗಳ ಖುರಪುಟಗಳ ಸದ್ದು ಕೇಳಬರುವುದು.)

ಶಾರ್ದೂಲ:— (ಸ್ವಗತ) ಯು ದ್ಧ ಕ್ಕೆ...... ಮದ್ಯದ ಮಾರ್ಕೆಟ್ಟಿಗೆ......, ಸೂಳೆಯರ ಸಂತೆಗೆ......, ಅಧಃಪತನದ ಅಧೋಲೋಕಕ್ಕೆ !....ಸಾಧ್ಯವಿಲ್ಲ (ಕುದುರೆಗಳ ಸದ್ದು ಹತ್ತಿರ ಹತ್ತಿರ ಬರುತ್ತಿರುವುದು.) ವಿಹಾರಾ !

ವಿಹಾರಾ:— ಖಂಡಿತವಾಗಿಯೂ ಯುದ್ಧಕ್ಕೆ ಹೋಗುವುದಿಲ್ಲ ?

(ಸಿಪಾಯಿಗಳಿಬ್ಬರು ಒಳಕ್ಕೆ ಬರುವರು)

ಸಿಪಾಯಿ:— ಶಾರ್ದೂಲ್, ಕವಾಯಿತಿನ ಮೈದಾನಕ್ಕೆ ಬಾ; ನಾಯಕರು ಕರೆಯುತ್ತಾರೆ.

ಶಾರ್ದೂಲ:— ಬರುವುದಿಲ್ಲ.

ಸಿಪಾಯಿ:— ನಾಯಕರ ಆಜ್ಞೆ ಮೀರುವೆಯಾ ?

ಶಾರ್ದೂಲ:— (ದೃಢವಾಗಿ) ಹೂಂ !

ಸಿಪಾಯಿ:— ಸೈನ್ಯದ ಶಿಸ್ತು ಮುರಿಯುವೆಯಾ ?

ಶಾರ್ದೂಲ:— (ನೀರವ)

ಸಿಪಾಯಿ:— ಯುದ್ಧಕ್ಕೆ ಹೋಗಲು ಹೆದರುತ್ತೀಯೇನು ?

ಶಾರ್ದೂಲ:— .. ..

ಸಿಪಾಯಿ:— ಛಿ ! ಛಿ ! ನೀನೊಬ್ಬ ಹೇಡಿ !

ಶಾರ್ದೂಲ:— (ಕೆರಳಿ) ಹೇಡಿ....... !

ಸಿಪಾಯಿ:— (ತಿರಸ್ಕಾರವಾಗಿ ನಗುತ್ತಾ) ಹೇ ಡಿ ಯ ಲ್ಲ ದೆ ಮತ್ತೇನು. ಶಾರ್ದೂಲ ಒಂದು ಸಾರಿಯಲ್ಲ, ನೂರು ಸಾರಿ ಹೇಡಿ....ಹೇಡಿ....ಹಹ್ಹಾ !

ಶಾರ್ದೂಲ— [ಸೊಂಟದಲ್ಲಿದ್ದ ಚಾಕುವನ್ನು ತೆಗೆದು ಹೇಡಿಯೆಂದ ಸಿಪಾಯಿಯ ಎದೆಗೆ ಚುಚ್ಚುವನು. ಅವನು " ಅಯ್ಯೋ ಸತ್ತೇ " ಎಂದು ಕೆಳಗುರುಳುವನು. ಮತ್ತೊಬ್ಬ ಸಿಪಾಯಿಯು ಓಡಿ ಹೋಗುವನು. ವಿಹಾರಾ ಬೆದರಿದ ಕಣ್ಣುಗಳಿಂದ ನೋಡುತ್ತಾ ನಿಂತಿರುವಳು.] (ದೃಢಸ್ವರದಲ್ಲಿ) ವಿಹಾರಾ, ಇಂದಿನಿಂದ ನೀನು ಒಂದು ಪಾಠ ಕಲಿಯಬೇಕು !

ವಿಹಾರಾ:— (ಕಂಪಿತ ಧ್ವನಿಯಲ್ಲಿ) ಏನು ?

ಶಾರ್ದೂಲ:— ನೀನು ನನ್ನ ದೇಹವನ್ನು ಪ್ರೀತಿಸುತ್ತೀಯೋ, ಆತ್ಮವನ್ನು ಪ್ರೀತಿಸುತ್ತೀಯೋ ?

ವಿಹಾರಾ:— ಅದೇನೋ ನನಗೆ ಗೊತ್ತಿಲ್ಲ; ನಾನು (ದೇಹವನ್ನು ಮುಟ್ಟಿ) ನಿಮ್ಮನ್ನು ಪ್ರೀತಿಸುತ್ತೇನೆ !

ಶಾರ್ದೂಲ:— ಕೂಡದು. ಇ ೦ ದಿ ನಿ ೦ ದ ವಿಶ್ವಪ್ರೇಮದ ಹೊನಲಿನಲ್ಲಿ ನಿನ್ನ ವ್ಯಕ್ತಿಪ್ರೇಮವನ್ನು ತೇಲಿಬಿಡಬೇಕು ! ವ್ಯಕ್ತಿ-ಪ್ರೇಮವು ನಶ್ವರ; ವಿಶ್ವಪ್ರೇಮವು ಅಮರ ! ಆ ಅಗಾಧವೂ ಪವಿತ್ರವೂ ಆದ ಪ್ರೇಮದ ಪ್ರತಿಭೆಯಲ್ಲಿ ನನ್ನನ್ನು ಇಂದಿನಿಂದ ಮರೆತು ಬಿಡು ! ವಿಹಾರಾ, ದೈಹಿಕ ಮೋಹಕ್ಕೆ ತಿಲಾಂಜಲಿ ಕೊಟ್ಟು ಪ್ರೇಮಯೋಗಿನಿಯಾಗು !

ವಿಹಾರಾ:— ಎಂದೂ ಇಲ್ಲದೆ ಇಂದೇಕೆ ಈ ವೇದಾಂತವಾಚನ?

ಶಾರ್ದೂಲ:— ಏಕೆ? ಸೈನ್ಯದ ಶಿಸ್ತು ಮುರಿದರೆ ಏನಾಗುವುದು ಗೊತ್ತೇ ವಿಶಾರಾ?

ವಿಶಾರಾ:— ಏನಾಗುವುದು?

ಶಾರ್ದೂಲ:— ಮಾರ್ಷಲ್ ಆರ್ಡರ್ ಜಾರಿಯಾಗುವುದು!

ವಿಶಾರಾ:— ಎಂದರೆ....?

ಶಾರ್ದೂಲ:— ಎಂದರೆ......! ಕೇಳಿ ಹೆದರದಿದ್ದರೆ ಹೇಳುವೆನು!

ವಿಶಾರಾ:— (ಹೆದರಿ)........ಊಂ.......!

ಶಾರ್ದೂಲ:— (ಅವಳ ತಲೆಯನ್ನು ನೇವರಿಸುತ್ತಾ) ಇಷ್ಟಕ್ಕೇ ಹೆದರಿ ಬಿಟ್ಟೆಯಾ ವಿಶಾರಾ?

ವಿಶಾರಾ:— ಇಲ್ಲ; ಹೆದರುವುದಿಲ್ಲ!

ಶಾರ್ದೂಲ: — (ನಗುತ್ತಾ) ಸುಳ್ಳಿ....(ಅವಳ ಕೆನ್ನೆಯನ್ನು ತಟ್ಟಿ) ಹೆದರಲಿಲ್ಲ ತಾನೆ? ಕೇಳು! ಮೊದಲು ನನ್ನನ್ನು ಒಬ್ಬನನ್ನೇ ಒಂದು ಕಡೆ ನಿಲ್ಲಿಸುವರು. ನನ್ನೆದುರಿಗೆ ಬಂದೂಕುಗಳನ್ನು ಸಿದ್ಧ ಮಾಡಿಕೊಂಡು ಸೈನಿಕರು ಸಾಲಾಗಿ ನಿಲ್ಲುವರು. ನಾಯಕನು ನನ್ನ ಅಪರಾಧವನ್ನು ಓದಿ ಹೇಳುವನು. ಬಳಿಕ ನನ್ನ ಸಮವಸ್ತ್ರಗಳನ್ನು ಕಿತ್ತುಹಾಕುವರು. ನನ್ನ ಮುಖದ ಮೇಲೆ ಕಪ್ಪುವಸ್ತ್ರ ಹೊದಿಸುವರು. (ವಿಶಾರಾ 'ಅಯ್ಯೋ' ಎಂದು ಕಿರುಚಿ ಶಾರ್ದೂಲನ ಕೈಗಳಲ್ಲಿ ಮುಖವಿಟ್ಟುಕೊಂಡು ಅಳಲಾರಂಭಿಸುವಳು. ತೆರೆಯಲ್ಲಿ ಕುದುರೆಗಳ ಖುರಪುಟದ ಸದ್ದು ಆಗುವುದು. ಮೈದಾನದಲ್ಲಿ ವಾದ್ಯಗಳು ಬಿರುಸಾಗಿ ಮೊಳಗುತ್ತಿರುವುವು.)

ವಿಶಾರಾ:— (ಕಂಪಿತ ಸ್ವರದಲ್ಲಿ) ಕೇಳಲಾರೆ, ನಾನಿನ್ನು ಮುಂದಕ್ಕೆ ಕೇಳಲಾರೆ!

ಶಾರ್ದೂಲ:— (ದೃಢವಾಗಿ) ನಾಯಕನು ಉಚ್ಚಸ್ವರದಲ್ಲಿ ಒನ್-ಟೂ-ತ್ರಿ ಎಂದು ಕಿರುಚುವನು, ಬಳಿಕ ಸಿಡಿಲೊಂದು ಹೊಡೆಯುವುದು; ಅಷ್ಟೇ ವಿಶಾರಾ. (ವಿಶಾರಾ ಹೆದರಿ ಅವನನ್ನು ಬಿಟ್ಟು ಸ್ವಲ್ಪ ಹಿಂದೆ ಸರಿದು, ಕಣ್ಣೀರು ತುಂಬಿದ ಕಣ್ಣುಗಳಿಂದ ಭೀತಳಾಗಿ ನೋಡುತ್ತಿರುವಳು. ಕುದುರೆಗಳ ಸಪ್ಪಳ ಹತ್ತಿರವಾಗುವುದು. ವಾದ್ಯರವವು ಮತ್ತೂ ಬಿರುಸಾಗುವುದು.)

ಶಾರ್ದೂಲ:— ಹತ್ತಿರ ಬಾ ವಿಶಾರಾ! ಅಂತ್ಯಕಾಲದ ಕರೆಯು ನನ್ನ ಕಿವಿಗಳಲ್ಲಿ ಮೊಳಗುತ್ತಿದೆ. ಆದರೆ ನನ್ನ ಆತ್ಮನು ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದಾನೆ. ಏಕೆಂದರೆ ಅವನ ಶುಭ್ರದೇಹಕ್ಕೆ, ನಿರಪರಾಧಿ ಜನರ ರಕ್ತದ ಕಳಂಕ ತಗುಲಿಲ್ಲ. (ವಿಶಾರಾ ಮತ್ತಷ್ಟು ಅಳತೊಡಗುವಳು. ಕುದುರೆಗಳು ಮತ್ತೂ ಹತ್ತಿರಕ್ಕೆ ಬರುತ್ತಿರುವುವು.) ಜಾಗ್ರತೆ ವಿಶಾರಾ, ಅಳಲಿಕ್ಕೆ ಹೊತ್ತಿಲ್ಲ. ನೋಡು, ನನ್ನೆದೆಯ ಸ್ಥೈರ್ಯವನ್ನು ಕರಗಿಸಿ, ನಿನ್ನ ಪತಿಯನ್ನು ಪಾಪಕ್ಕೆ ದೂಡಿ ನರಾಧಮನನ್ನಾಗಿ ಮಾಡಬೇಡ. ಎಲ್ಲಿ? ಕಣ್ಣೀರೊರಸಿಕೋ. ಸ್ವಲ್ಪ— ಹಾಂ— ಹಾಗೆ ನಗು ನೋಡೋಣ. ಹಾಂ, ಹಾಗೆ! ಬಾ ಹತ್ತಿರ. ಒಂದೇ ಒಂದು ಮುತ್ತು ಕೊಡು ವಿಶಾರಾ! (ವಿಶಾರಳು ಹತ್ತಿರ ಬಂದು ನಾಚಿ ನಿಲ್ಲುವಳು). ವಿಶಾರಾ, ನಾಚಬೇಡ ಇದೇ ಕಡೆಯಸಾರಿ, ಇನ್ನೊಂದು ಸಾರಿ ನಿನಗೆ ಕಾಡಿಸುವುದಿಲ್ಲ, ವಿಶಾರಾ! (ವಿಶಾರೆಯು ಅಳುತ್ತಾ ಅವನೆದೆಯಮೇಲೆ ಬೀಳುವಳು. ಶಾರ್ದೂಲನು ಅವಳ ತೊಯ್ದ ಕಪೋಲವನ್ನು ಮುತ್ತಿಡುವನು. ಬಾಗಿಲಿನಿಂದ ಸಿಪಾಯಿಗಳಿಬ್ಬರು ಬಂದು ಅವನನ್ನು ಹಿಡಿದೆಳೆಯುವರು. ವಿಶಾರಾ ಕಾತರಸ್ವರದಲ್ಲಿ ಕಿರುಚುವಳು.)

ಶಾರ್ದೂಲ:— ಎಳೆಯಬೇಡಿ ಬರುತ್ತೇನೆ. ವಿಶಾರಾ, ಹೋಗಿ ಬರುತ್ತೇನೆ.

ವಿಶಾರಾ:— (ಅವನನ್ನು ಬಂದು ಬಿಗಿಯಾಗಿ ಅಪ್ಪುವಳು. ಸಿಪಾಯಿಗಳು ಅವಳನ್ನು ಕೆಳಕ್ಕೆ ದಬ್ಬಿ, ಶಾರ್ದೂಲನನ್ನು ಎಳೆದೊಯ್ಯುವರು. ವಿಶಾರಾ ನಿಶ್ಚೇಷ್ಟಿತಳಾಗಿ ಕೆಳಗುರುಳುವಳು.)

ಶಾರ್ದೂಲ:— (ಹೋಗುತ್ತಲೆ) ವಿಶಾರಾ........!

ವಿಶಾರಾ:— .. ಪ್ರಾಣನಾಥ ....!

ಶಾರ್ದೂಲ:— ನನ್ನನ್ನು ಮರೆತುಬಿಡು ವಿಶಾರಾ!

ವಿಶಾರಾ:— ಹೃದಯೇಶಾ!

(ತೆರೆಬೀಳುವುದು)

ದೃಶ್ಯ ೪.

[ಅನತಿಕಾಲದ ಬಳಿಕ ವಿಶಾರೆಯು ಸ್ವಲ್ಪ ಚೇತರಿಸಿಕೊಂಡೇಳುವಳು. ಅವಳ ಕೈಯಲ್ಲಿ ಬಟ್ಟಲೊಂದಿದೆ. ತೆರೆಯಲ್ಲಿ ವಾದ್ಯಧ್ವನಿ ಮೃದುವಾಗಿ ಕೇಳಿಬರುತ್ತಿದೆ. ವಿಶಾರಾ ಯಾರನ್ನೋ ನಿರೀಕ್ಷಿಸುವಂತೆ ದೃಢವಾಗಿ ನಿಲ್ಲುವಳು.]

ತೆರೆಯಲ್ಲಿ:— ಫಾಲ್ ಇನ್!

ವಿಶಾರಾ:— (ಹುಚ್ಚಳಾಗಿ) ವ್ಯಕ್ತಿಪ್ರೇಮ— ದೈಹಿಕಮೋಹ— ನಾನಿನ್ನೂ ಆ ಮಟ್ಟಕ್ಕೆ ಬಂದಿಲ್ಲ ಪ್ರಾಣನಾಥಾ. ನಿನ್ನನ್ನಗಲಿ ಇರಲಾರೆ!

ತೆರೆಯಲ್ಲಿ:— (ಕರ್ಕಶವಾಗಿ) ಒನ್.........!

ವಿಶಾರಾ:— (ತನಗೆತಾನೇ) ಒನ್........!

ತೆರೆಯಲ್ಲಿ:— (ಸ್ವಲ್ಪಹೊತ್ತಿನ ಬಳಿಕ) ಟೂ.........!

ವಿಶಾರಾ:— .... ಟೂ!

ತೆರೆಯಲ್ಲಿ:— .... ತ್ರೀ........!!!

ವಿಶಾರಾ:— ....ತ್ರೀ!

ತೆರೆಯಲ್ಲಿ:—...... Fire (ಸಿಡಿಲುಹೊಡೆದಂತೆ ಶಬ್ದವು ಕೇಳಿಬರುವುದು. ವಿಶಾರಾ ಬಟ್ಟಲಲ್ಲಿದ್ದ ದ್ರಾವಕವನ್ನು ಕುಡಿಯುವಳು. ರಂಗದಮೇಲೆ ಮಬ್ಬುಗತ್ತಲು ಹರಡುವುದು. ವಾದ್ಯಧ್ವನಿಯು ಬಹಳ ಮಧುರವಾಗಿ ಕರುಳುಕೊಯ್ಯುವ ರಾಗವನ್ನು ನುಡಿಸುತ್ತಿರುವುದು. ವಿಶಾರಾ ನೆಲಕ್ಕೆ ಕುಸಿದುಬಿದ್ದಿರುವಳು.)

ತೆರೆಯಲ್ಲಿ:— ಕ್ವಿಕ್‌ಮಾರ್ಚ್....!

ವಿಶಾರಾ:— (ಕ್ಷೀಣಸ್ವರದಲ್ಲಿ) ಬಂ .. ದೆ .. ಪ್ರಾ .. ಣ .. ನಾ. .ಥಾ (ವಾದ್ಯಗಳು ಇದ್ದಕ್ಕಿದ್ದಂತೆಯೇ ನಿಲ್ಲುವುವು. ರಂಗದ ಮೇಲೆ ಪೂರ್ಣ ಕತ್ತಲೆ. ತೆರೆಬೀಳುವುದು.)

೧೮೨೩ ರಲ್ಲಿ ಕರ್ನಾಟಕ ಏಕೀಕರಣದ ವಿಚಾರ

ಜನರಲ್ ಮನ್ರೋನ ಸೂಕ್ತ ಸಲಹೆಗಳು !

★

ಮನ್ರೋನ ಸೂಚನೆಯಂತೆ ಉತ್ತರಕರ್ನಾಟಕವನ್ನು ಅಂದೆಯೆ ಮದ್ರಾಸಿಗೆ ಸೇರಿಸಿ ಬಿಟ್ಟಿದ್ದರೆ ನಾವೆಲ್ಲ 'ಸದರ್ನ್ ಮರಾಠಾ ಕಂಟ್ರಿ' ಯವರೆಂದು ಎಲ್ಲಿ ಎನಿಸಿಕೊಳ್ಳುತ್ತಿದ್ದೆವು? ಪುಣೆ-ಮುಂಬಯಿಗಳ ಕಡೆಗೆ ಮುಖತಿರುಗಿಸಿ ಕನ್ನಡತನ ಕಳೆದುಕೊಳ್ಳುವ ಸಂದರ್ಭ ನಮಗೆಲ್ಲಿ ಬರುತ್ತಿದ್ದಿತು? ಆದರೇನು, ಕನ್ನಡಿಗರನ್ನು ಕಾಡಲೆಂದು ನಿಂತ ಯಕ್ಷಿಣಿ ಕಂಪನಿಯ ಡಿರೆಕ್ಟರ ಮನಸ್ಸಿನಲ್ಲಿ ಹೊಕ್ಕು, ಹಾಗೆ ಆಗದಂತೆ ಮಾಡಿದಳು; ಕನ್ನಡಿಗರ ಸ್ವಾಭಿಮಾನಶಕ್ತಿಯನ್ನೆ ಕುಗ್ಗಿಸಿದಳು !

ಶ್ರೀ. ಬೆಂಗೇರಿ ಪ್ರಲ್ಹಾದರಾಯರು

ಅವರಿಂದ

ಕ್ರಿಸ್ತ ಶಕ ೧೮೧೮ ರ ಫೆಬ್ರುವರಿ ೧೦ನೆಯ ತಾರೀಖಿನ ಸುಮಾರಿಗೆ ಇಂಗ್ಲಿಷರು ಪೇಶವನನ್ನು ಸೋಲಿಸಿ, ಸ್ಥಾನಭ್ರಷ್ಟನನ್ನಾಗಿ ಮಾಡಿ, ತಾ. ೧೧-೨-೧೮೧೮ ಕ್ಕೆ ಜಾಹೀರನಾಮೆಯನ್ನು ಪ್ರಸಿದ್ಧಿಸಿ, ಉತ್ತರ ಕರ್ನಾಟಕದ ಭಾಗವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. **ಜನರಲ್ ಮನ್ರೋನು** ಈ ಭಾಗದಲ್ಲಿದ್ದ ಒಂದೊಂದೇ ಕೋಟೆಯನ್ನು ಸ್ವಾಧೀನ ಪಡಿಸಿಕೊಳ್ಳುತ್ತ ೧೫-೬-೧೮೧೮ ಕ್ಕೆ ತನ್ನ ಹಾಗೂ **ಜನರಲ್ ಪ್ರಿಟ್ಝಲರನ** ಸೈನ್ಯ ಸಮೇತ ಹಳೆಹುಬ್ಬಳ್ಳಿಯ ಹತ್ತಿರ ತಳಪ್ಪೂರಿ, ಅಲ್ಲಿಯೆ ಮಳೆಗಾಲ ಕಳೆದನು. ಈ ಮಳೆಗಾಲದಲ್ಲಿ ಉಗ್ರಸ್ವರೂಪದ ಕಾಲರಾಬೇನೆಯು ಹುಬ್ಬಳ್ಳಿಯಲ್ಲಿ ಹಬ್ಬಿದುದರಿಂದ, ಈ ಸೈನ್ಯದಲ್ಲಿಯ ಇಬ್ಬರು ಅಧಿಕಾರಿಗಳೂ, ಸುಮಾರು ಒಂದು ನೂರು ಜನ ಬ್ರಿಟಿಷ್ ಸಿಪಾಯಿಗಳೂ ಜೀವಕ್ಕೆ ಎರವಾದರು. ಇವರ ಸ್ಮಾರಕದ ಕುರುಹುಗಳು ಈಗಲೂ ಹಳೆಯಹುಬ್ಬಳ್ಳಿಯ ಪಶ್ಚಿಮಕ್ಕಿರುವುದನ್ನು ಕಾಣಬಹುದು.

ಉತ್ತರ ಕರ್ನಾಟಕವನ್ನೆಲ್ಲ ತುಂಬ ಧೈರ್ಯದಿಂದಲೂ, ಜಾಣತನದಿಂದಲೂ ಸ್ವಾಧೀನಪಡಿಸಿಕೊಂಡುದಕ್ಕಾಗಿ ಜನರಲ್ ಮನ್ರೋನ ಗುಣಗಾಯನವನ್ನು ಬ್ರಿಟಿಷರು ಬಹಳವಾಗಿ ಮಾಡಿದರು. ಸರ್ ಜಾನ್ ಮಾಲ್ಕಂನು ೧೪-೨-೧೮೧೮ ಕ್ಕೆ ಹಿಂದುಸ್ಥಾನಸರಕಾರದ ಆಗಿನ ಸೆಕ್ರೆಟರಿಯಾದ ಮಿ. ಆಡಾಮ್ಸನಿಗೆ ಬರೆದ ಪತ್ರದಲ್ಲಿ ಜನರಲ್ ಮನ್ರೋನ ಬುದ್ಧಿಮತ್ತೆಯನ್ನು ಬಹಳವಾಗಿ ವರ್ಣಿಸಿರುವನು. ಹಿಂದುಸ್ಥಾನದಲ್ಲಿದ್ದ ಸೈನ್ಯದವರನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅಭಿನಂದಿಸುವಾಗ, ಮಿ. ಕ್ಯಾನಿಂಗನು ಮನ್ರೋನ ವರ್ಣನೆ ಮಾಡುತ್ತ "ಈಸ್ಟ್ ಇಂಡಿಯಾ ಕಂಪನಿಯ ಚಾರ್ಟರದ ಜೀವಾವಧಿಯನ್ನು ಬೆಳಸುವಾಗ ಹೌಸ್ ಆಫ್ ಕಾಮನ್ಸಿನವರಿಗೆ ಮನ್ರೋನ ಯೋಗ್ಯತೆಯು ಈ ಮೊದಲೇ ಗೊತ್ತಾಗಿದೆ. ಯುರೋಪಖಂಡದಲ್ಲಿ ಇವರಿಗಿಂತ ಹೆಚ್ಚು ಸುಪ್ರಜ್ಞಾತ ರಾಜಕಾರ್ಯಪಟುವು ಈ ಮೊದಲು ಎಂದೂ ಹುಟ್ಟಿಲ್ಲ. ವೀರಾಧಿವೀರರ ತೊಟ್ಟಿಲವಾದ ಭರತಖಂಡದಲ್ಲಿ ಕೂಡ ಮನ್ರೋನಿಗಿಂತ ಹೆಚ್ಚು ಶೂರರು ಈ ಮೊದಲು ಹುಟ್ಟಿರಲಿಕ್ಕಿಲ್ಲ." ಎಂದಿರುವನು.

ಬ್ರಿಟಿಷ್ ಸರಕಾರದವರ ದೃಷ್ಟಿಯಲ್ಲಿ ಮನ್ರೋನು ಒಬ್ಬ ಮಹತ್ವದ ವ್ಯಕ್ತಿಯಾಗಿರಲಿಕ್ಕೆ ಸಾಕು. ಉತ್ತರ ಕರ್ನಾಟಕದಲ್ಲಿ ತಾನು ಸ್ವಾಧೀನ ಪಡಿಸಿಕೊಂಡ ಸ್ಥಾನದ ಮೇಲೆ ಮನ್ರೋನು ಪ್ರಿನ್ಸಿಪಲ್ ಕಲೆಕ್ಟರನಾಗಿ, ಆಡಳಿತದ ಎಲ್ಲ ವಿಭಾಗಗಳ ಸೂತ್ರಗಳನ್ನು ವಹಿಸಿ, ಧಾರವಾಡದಲ್ಲಿದ್ದುಕೊಂಡು ಒಬ್ಬನೆ ಕೆಲಸವನ್ನು ಸಾಗಿಸಿದ್ದನು. ಮುಂದೆ ಇವನ ಆರೋಗ್ಯವು ಕೆಡಹತ್ತಲು ಅದೇ ವರ್ಷ (೧೮೧೮) ರಲ್ಲಿ ಮದ್ರಾಸಿಗೆ ತೆರಳಿದನು.

ಒಳಿಕ ೧೮೨೩ ರಲ್ಲಿ ಉತ್ತರ ಕರ್ನಾಟಕದ ಭಾಗವು ಮದ್ರಾಸಿಗೆ ಸೇರಬೇಕೊ, ಮುಂಬಯಿಗೆ ಸೇರಬೇಕೊ ಎಂಬ ವಿಷಯದಲ್ಲಿ ಊಹಾಪೋಹವೆದ್ದಿತು. ಮುಂಬಯಿ ಹಾಗೂ ಮದ್ರಾಸ್ ಸರಕಾರಗಳ ನಡುವೆ ಸಾಕಷ್ಟು ಪತ್ರವ್ಯವಹಾರವು ನಡೆಯಿತು.

ಆ ಕಾಲಕ್ಕೆ ಮದ್ರಾಸಿನ ಗವ್ಹರ್ನರನಾಗಿದ್ದ (ಜನರಲ್) **ಸರ್ ಥಾಮಸ್ ಮನ್ರೋನು** ಈ ಭಾಗವು ಮದ್ರಾಸ್ ಇಲಾಖೆಗೇ ಸೇರಬೇಕೆಂದು ವಾದಿಸಿದನು. ಅದರಲ್ಲಿಯ ಕೆಲವಂಶಗಳನ್ನು ಈ ಕೆಳಗೆ ಕೊಡಲಾಗಿದೆ :

"ಮರಾಠಾ ರಾಜ್ಯದ ನೆನಹು (ಕನ್ನಡಿಗರಲ್ಲಿ) ಅಳಿಸಿಹೋಗುವುದು. ಇಲ್ಲಿಯ ಜಾಗಿರ್‌ದಾರ್-ಇನಾಂದಾರ್ ಮೊದಲಾದವರನೇಕರು — ಕೊಂಕಣದಿಂದ — ಪರಪ್ರಾಂತದಿಂದ — ಹಾಗೂ ಕೃಷ್ಣಾನದಿಯ ಉತ್ತರಡೆಯಿಂದ ಬಂದವರಾದುದರಿಂದ, ಈ ಭಾಗದವರಿಗೆ ಅವರು ಹೊಸಬರಿದ್ದು ಇಲ್ಲಿಯ ಜನಸಾಮಾನ್ಯರ ಮೇಲೆ ಅವರ ವರ್ಚಸ್ಸು ಇರುವುದಿಲ್ಲ. ಈ ಭಾಗವನ್ನು ಮರಾಟರು ಆಕ್ರಮಿಸಿದ್ದರೂ ಇದು ಮಹಾರಾಷ್ಟ್ರದ ಭಾಗವಾಗಲಾರದು. ಈ ಜಿಲ್ಹೆಯು (ಉತ್ತರ ಕರ್ನಾಟಕದ ದೊಡ್ಡ ಭಾಗ) ಕರ್ನಾಟಕದ ಒಂದು ಭಾಗವಾಗಿದೆ. ಮದ್ರಾಸ್ ಆಡಳಿತಕ್ಕೊಳಪಟ್ಟ ಬಳ್ಳಾರಿ-ಸಂಡೂರ ಮೊದಲಾದ ಭಾಗಗಳಲ್ಲಿ ಇರುವ ಕನ್ನಡಜನಾಂಗದವರೇ ಇರುತ್ತಾರೆ ಇಲ್ಲಿಯ ಜನರು ಕೂಡ. ಇವರು ಅದೇ ಕನ್ನಡ ಭಾಷೆಯನ್ನಾಡುತ್ತಾರೆ. ಅವರಿವರ ನಡುವೆ ಯಾವುದೇ ತೆರದ ಭಿನ್ನತೆ ಇರುವುದಿಲ್ಲ. ಸ್ವಾಭಾವಿಕವಾದ ಸಂಬಂಧಗಳಿಲ್ಲದ ಮರಾಟಾ ವಿಭಾಗಕ್ಕೆ (ಮುಂಬಯಿಗೆ) ಈ ವಿ ಭಾ ಗ ವ ನ್ನು ಜೋಡಿಸುವುದಕ್ಕಿಂತ ಮದ್ರಾಸಿನ ವಿಭಾಗದಲ್ಲಿರುವ ತಮ್ಮ ಜ್ಞಾತಿಬಾಂಧವರಿರುವ—ಕನ್ನಡ ಜನತೆಯಿರುವ—ವಿ ಭಾ ಗ ಕ್ಕೆ ಜೋಡಿಸಿದರೆ ಇವರಿಗೆ (ಕನ್ನಡರಿಗೆ) ಹೆಚ್ಚು ಸಮಾಧಾನವಾಗುವುದು. ಅಲ್ಲದೆ ಈ ಬಗೆಯದಾದ ತಮ್ಮ ಜನಾಂಗದ—ಪ್ರಾಂತದ—ನಿರಂತರವಾದ ಏಕೀಕರಣವು ಹೆಚ್ಚು ಮಹತ್ವದ ವಿಷಯವಾಗುವುದು. ಹೀಗೆ ಮಾಡದೆ ಮರಾಠಾ ಸಂಸ್ಥಾನಿಕರ ಸೌಕರ್ಯಕ್ಕಾಗಿ ಇದನ್ನು ಮುಂಬಯಿಗೆ ಜೋಡಿಸಿದರೆ, ಇವರು ಯಾವಾಗಲೂ ಪುಣೆ—ಮುಂಬಯಿ ಅಭಿಮುಖರಾಗುವುದರಿಂದ ಈ ವ್ಯವಸ್ಥೆಗೆ ಮಹತ್ವವು ಬರಲಾರದು.... ಇತ್ಯಾದಿ ಇತ್ಯಾದಿ."

ಆದರೆ ಈ ಪ್ರಶ್ನೆಯು "**ಕೋರ್ಟ್ ಆಫ್ ಡಿರೆಕ್ಟರ್ಸ್**" ಕಡೆಗೆ ಹೋದಾಗ, ೧೮೩೦ರಲ್ಲಿ ಅವರು ಕರ್ನಾಟಕದ ಈ ಭಾಗವು ಮುಂಬಯಿಗೆ ಸೇರತಕ್ಕದ್ದೆಂದು ನಿರ್ಣಯಿಸಿದರು. ಆ ಮೇರೆಗೆ ಮುಂಬಯಿ ಸರಕಾರದ ತಾ|| ೧೭-೩-೧೮೩೦ ರ ೭ನೆಯ ರೆಗ್ಯುಲೇಶನ್ನಿನನ್ವಯ ಈ ಭಾಗವು—ಉತ್ತರ ಕರ್ನಾಟಕವು—ಮುಂಬೈ ಇಲಾಖೆಗೆ, ಸರ್ ಥಾಮಸ್ ಮನ್ರೋನ ಸ್ಪಷ್ಟ ಸೂಚನೆಗಳ ವಿರುದ್ಧವಾಗಿ ಸೇರ್ಪಡೆಯಾಗಿ, ಇಂದಿಗೂ ಅದೇ ಸ್ಥಿತಿಯಲ್ಲಿದೆ.

ಕರ್ನಾಟಕದ ಪರಿಸ್ಥಿತಿಯನ್ನು ವರ್ಣಿಸುತ್ತ ಜ ನ ರ ಲ್ ಮ ನ್ರೋ ನು ತಾ|| ೨೮-೧೧-೧೮೧೭ ನೆಯ ದಿ ವ ಸ ಗವ್ಹರ್ನರ್ ಜನರಲ್ಲನಿಗೆ ಬರೆದ ಪತ್ರದಲ್ಲಿ ಈ ಮೇರೆಗೆ ತಿಳಿಸಿರುವನು:—" ಕೃಷ್ಣಾ-ವರದಾ ನದಿಗಳ ನಡುವಿನ ಪ್ರ ದೇ ಶ ವು ನಿಜವಾಗಿಯೂ ಮರಾಠಾ ಪ್ರಾಂತವಲ್ಲ—ಅಲ್ಲಿ ಮರಾಠಾ ಮಿಶ್ರಣವಿದ್ದರೂ ಜನತೆಯ ಅತ್ಯಧಿಕ ಭಾಗವು ಕನ್ನಡವಿದೆ. ಮರಾಠಾ ಜಹಗೀರದಾರ್ ಮುಂತಾದ ಭೂಮಿಯೊಡೆಯರೂ ಅವರ ನೌಕರರೂ ಈ ಭಾ ಗ ಕ್ಕೆ (ಕರ್ನಾಟಕಕ್ಕೆ) ಪರಸ್ಥಳದವರು— ಅರಿಯದವರು, ಹಾಗೂ ಗೆ ದ್ದ ವ ರು ಎಂಬ ಮಾಲಿಕೆಯಲ್ಲಿ ಸೇರಿಸಲ್ಪಡುತ್ತಾರೆ..... ಕೋಟೆಗಳಲ್ಲಿ ಹಾಗೂ ಹಳ್ಳಿಗಳಲ್ಲಿರುವ ಕಾಲಾಳುಗಳೆಲ್ಲರೂ ಬಹ್ವಂಶದಿಂದ ಕನ್ನಡರೇ ಇರುತ್ತಾರೆ. ಮರಾಠರಿಂದ ತಾಳಗೆಟ್ಟ ಕರವಸೂಲಿ ಹಾಗೂ ಒಮ್ಮೊಮ್ಮೆ ಇಡಿ ಭಂಡವಲವೇ ನಿರಂಕೃತವಾಗುತ್ತಿರುವುದರಿಂದ ವ್ಯಾಪಾರ-ಉದ್ಯಮದವರೆಲ್ಲರೂ ಮರಾಠರನ್ನು ಇಲ್ಲಿಂದ ಕಿತ್ತಿ ಹಾ ಕ ಲು ಹಾತೊರೆಯುತ್ತಿರುವರು. ವ್ಯಾಪಾರಸ್ಥರಿಗಿಂತಲೂ ನಾಡಿನಲ್ಲಿ ಹೆಚ್ಚು ಪ್ರಭಾವಶಾಲಿಗಳಾದ ಗ್ರಾಮಾಧಿಕಾರಿಗಳು ಸಹ ಮರಾಟರ ಹಿರಿಯತನದಿಂದ ಮು ಕ್ತ ರಾ ದ ರೆ ಸಾಕೆಂದು ಪ್ರಬಲ ಇಚ್ಛೆಯುಳ್ಳವರಾಗಿರುವರು." ಇತ್ಯಾದಿ—

ಮೇಲಿನ ಅವತರಣಿಕೆಯಿಂದ ನೋಡಲಾಗಿ ೧೯ನೆಯ ಶತಮಾನದ ಪ್ರಾರಂಭಕ್ಕೆ ಕೃಷ್ಣೆಯು ಕರ್ನಾಟಕದ ಉತ್ತರದ ಮೇರೆಯಿತ್ತೆಂದು ಮನ್ರೋನು ಸ್ಪಷ್ಟಪಡಿಸಿರುವನು. ಮತ್ತು ಉತ್ತರ ಕರ್ನಾಟಕವನ್ನು ಮದ್ರಾಸಿಗೆ ಸೇರಿಸಿ, ಕನ್ನಡ ಮಾತನಾಡುವ ಜನಾಂಗವನ್ನೆಲ್ಲ ಒಂದುಗೂಡಿಸಬೇಕೆಂದು ಅವನು ೧೮೨೬ ರಲ್ಲಿಯೆ ಮನಃಪೂರ್ವಕ ಪ್ರಯತ್ನಿಸಿದನು. ಸಾಧ್ಯವಾಗಲಿಲ್ಲ, ಆ ಮಾತು ಬೇರೆ. ಮಿ. ಕ್ಯಾನಿಂಗನ ಪಾರ್ಲ್‌ಮೆಂಟಿನಲ್ಲಿಯ ಭಾಷಣದಿಂದ ಮನ್ರೋನ ವರ್ಚಸ್ಸು ಆಗಿನ ಸರಕಾರದಲ್ಲಿ ಎಷ್ಟಿತ್ತೆಂಬುದು ಒಡೆದುಕಾಣುತ್ತದೆ. ಇಂಥವನಿಗೆ ಸಹ ಕನ್ನಡ ಜನಾಂಗವನ್ನು—ಮದ್ರಾಸ್ ಇಲಾಖೆಯಲ್ಲೇ ಆಗಲಿ—ಒಂದುಗೂಡಿಸುವುದು ಆಗಲಿಲ್ಲ. ಕನ್ನಡರ ಏಕೀಕರಣಕ್ಕೆ ೧೮೨೬ರಲ್ಲೆ ಪ್ರಯತ್ನಿಸಿದ ಮನ್ರೋನ ಸೂಚನೆಯು ಆಗ ಸ್ವೀಕೃತವಾಗಿದ್ದರೆ ಮದ್ರಾಸ್ ಸರಕಾರದಿಂದ ಕನ್ನಡ ಭಾಗವನ್ನು ಬೇರ್ಪಡಿಸುವುದು ಈಗಿನ ಪರಿಸ್ಥಿತಿಯಲ್ಲಿ ಅಷ್ಟೇನು ತೊಂದರೆಯದಾಗಿ ಕಾಣುತ್ತಿರಲಿಲ್ಲ. ಆಂಧ್ರರಂತೆಯೆ ಕನ್ನಡಿಗರೂ ತಮ್ಮ ಪ್ರಾಂತೀಕರಣಕ್ಕಾಗಿ ಏಕಮುಖರಾಗಿ ಹೋರಾಡಲಿಕ್ಕೆ ಅನುಕೂಲವಾಗುತ್ತಿದ್ದಿತು. ಆದರೆ..|

ಟಿ. ಸೂ. ಇದರಲ್ಲಿಯ ಅವತರಣಿಕೆಗಳನ್ನು ಧಾ ರ ವಾ ಡ ಜಿಲ್ಲಾ ಗ್ಯಾಝೇಟಿಯರಿನಿಂದ ಆಯ್ದುಕೊಳ್ಳಲಾಗಿದೆ— —ಲೇ.



ಡಾ. ಎಚ್. ಬಿ. ಕೊಣ್ಣೂರ
ಎಲ್. ಸಿ. ಪಿ. ಎಸ್. ಗದಗ
ಅವರಿಂದ

ಕನಕರಾಯನ ಕಾಯಕ

★

ಇಬ್ಬರು ಕಳ್ಳರು. ಒಬ್ಬ ದೊಡ್ಡ ಕಳ್ಳ; ಒಬ್ಬ ಸಣ್ಣ ಕಳ್ಳ! ದೊಡ್ಡಕಳ್ಳನ ಕಳ್ಳತನದಲ್ಲಿ ಸಣ್ಣಕಳ್ಳನ ಕಳ್ಳತನ ಕರಗಿ ಹೋಯಿತು. ಎಂತಲೆ ಅಣ್ಣಯ್ಯ ಗಂಗುವಿನ ಕೂಡ ಸಲ್ಲಾಪಮಾಡುವಂತಾಯಿತು. ಕನಕರಾಯರು ಸೆರೆ ಮನೆಯ ದಾರಿಯನ್ನು ಹಿಡಿಯಬೇಕಾಯಿತು.

★

“ಗೌರ್ಹಿ ಬಿಡು ಎಲ್ಲಾ ಗೊತ್ತೈತಿ! ದೊಡ್ಡ ಜಾಹಗೀರದಾರ ಮನ್ಯಾಗ ಕೆಲಸಕ್ಕ ಅದೀನಿ ಅಂತೀದಿ; ಒಂದು ತೊಲಿ ಭಂಗಾರಾ ತರೋಣಾಗೂದಿಲ್ಲಾ. ಮತ್ತ ಒಣಾ ಜಂಭಾನs ಭಾಳ, ನಿಂದು”

“ಇಲ್ಲಿ ನೋಡು ಗಂಗೂ. ನಾನೂ ಅದ ಬೇತದಾಗs ಇದ್ದೀನಿ. ಒಮ್ಮೆ–ಇಲ್ಲೊಮ್ಮೆ ನಿನ್ನ ಕೆಲಸಾ ಮಾಡಿಕೊಡತೀನೀ ಆತು!”

“ಅದೇನಿಲ್ಲಾ. ಇನ್ನ ಮೂರುದಿನಕ್ಕ ಹಬ್ಬ ಐತಿ. ಅಟರಾಗs ಒಂದು ತೊಲೀ ಉಂಗರಾನಾರs ತಂದ ಕೊಟ್ಟೀ ಪಾಡಾತು. ಇಲ್ಲಾಂದ್ರ ನಂದು ನಿಂದೂ ಫಾರೀಕತs ನೋಡು!”

“ಹಾಂ, ತಡೀ! ಅಷ್ಟುಮಾತ್ರ ಮಾಡಬ್ಯಾಡ! ಇನ್ನ ಮೂರs ದಿನದಾಗ ನಿನ್ನ ಕೆಲಸಾ ಮಾಡತೀನಿ.”

ಹೀಗೆಂದು ಅಡಿಗೆಯ ಅಣ್ಣಯ್ಯ ತನ್ನ ಪ್ರೇಯಸಿ ಗಂಗೆಗೆ ಅಭಯವಚನವನ್ನಿತ್ತ.

* * *

ಒಂದು ದಿನ ಬೆಳಗಿನ ಐದು ಗಂಟೆಯ ಸಮಯ; ಜಾಹಗೀರ ದಾರ್ ಕನಕರಾಯರು ಮಲಗುವ ಕೋಣೆಯ ಕೆಳಗಿನ ಕೋಣಡಿ ಯಲ್ಲಿ ಎರಡು ವ್ಯಕ್ತಿಗಳು ಅಸ್ತವ್ಯಸ್ತವಾಗಿ ಬಿದ್ದ ಸಾಮಾನು ಗಳನ್ನು ಪರೀಕ್ಷಿಸುತ್ತ ಗಂಭೀರಭಾವದಿಂದ ಏನೇನನೋ ವಿಚಾರ ಮಾಡುತ್ತಲಿದ್ದುವು. ಆಗ ಒಂದು ವ್ಯಕ್ತಿ “ಕನಕರಾಯರೇ ತಿಜೋರಿ ಒಡೆಯುವ ಸಪ್ಪಳ ನಿಮಗೆ ಯಾವಾಗ ಕೇಳಿಸಿತ ?” ಎಂದಿತು.

ಕನಕ:— ಸುಮಾರು ೩ ಗಂಟೆಯಾಗಿರಬಹುದು!

ವ್ಯಕ್ತಿ:— ಮುಂದೆ ನೀವೇನು ಮಾಡಿದಿರಿ?

ಕನಕ:— ಮುಂದೆ ನಾನು ಮೆಲ್ಲಗೆ ಕೆಳಗಿಳಿದು ಬಂದೆ. ಈ ಕೋಣೆಯಲ್ಲಿ ಯಾರೋ ಒಬ್ಬರು ಇರಬೇಕೆಂಬ ನನ್ನ ಸಂಶಯ ದೃಢವಾಯಿತು; ನಾನು ಸಪ್ಪನೆ ಮೇಲೆ ಹೋಗಿ ನನ್ನ ಪಿಸ್ತೂಲನ್ನು ತರುವುದರೊಳಗಾಗಿ ಆ ವ್ಯಕ್ತಿ ಮಾಯವಾಗಿತ್ತು. ಈ ಮುಂಭಾಗದ ಕಿಡಕಿಯಿಂದಲೆ ಹಾರಿ ಪಾರಾಗಿ ಹೋಗಿರಬೇಕು. ಇಲ್ಲಿ ನೋಡಿರಿ, ಓಡಿ ಹೋದ ಗುರುತು; ಆ ಮನುಷ್ಯನ ಹೆಜ್ಜೆ ಗಳು.

ಎಂದು ಕನಕರಾಯನು ಮುಂದಿನ ಅಂಗಳದಲ್ಲಿ ಮೂಡಿದ ಹೆಜ್ಜೆಗಳನ್ನು ತೋರಿಸಿದನು.

ವ್ಯಕ್ತಿ:— ಅಂತೂ ಕಳವಾದ ಸಾಮಾನುಗಳಾದರೂ ಎಷ್ಟು?

ಕನಕ:— ನನಗೆ ಉಳಿದ ಚಿಲ್ಲರೆ ಸಾಮಾನು ಕಳೆದದ್ದು ಅಷ್ಟೊಂದು ಅನಿಸಿಲ್ಲ ಸಾಹೇಬ! ಆದರೆ ನನ್ನ ಹತ್ತುಸಾವಿರ ರೂಪಾಯಿ ಬೆಲೆ ಬಾಳುವ ವಜ್ರ ಹೋದದ್ದಕ್ಕೆ ಎದೆ ಒಡೆದದೆ.

ವ್ಯಕ್ತಿ:— ಆಂ! ಏನು? ವಜ್ರ? ಹತ್ತುಸಾವಿರ ಬೆಲೆಯುಳ್ಳದ್ದೆ?

ಕನಕ:— ಹೌದರೀ ಮಿ. ರಾಮುಲಾಲ! ಅದನ್ನು ಹತ್ತು ಸಾವಿರ ರೂಪಾಯಿಗೆ ಇನ್‌ಸ್ಯೂರ ಮಾಡಿಸಿದ್ದೆ ಬೇರೆ.

ರಾಮುಲಾಲ:— ಹಾಗಾದರೆ ನಮ್ಮ ಸಿ. ಆಯ್. ಡಿಪಾರ್ಟ್‌- ಮೆಂಟಿಗೆ ಒಳ್ಳೆಯ ಕೆಲಸವನ್ನೇ ಹಚ್ಚಿದಿರಲ್ಲ. ನಿಮಗೆ ಕಂಪನಿ ಯಿಂದ ೧೦,೦೦೦ ರೂ. ಸಿಕ್ಕಬಹುದಲ್ಲವೆ?

ಕನಕ:— ಸಿಕ್ಕಬಹುದು. ಆದರೆ ಆ ರೀತಿಯಿಂದ ದುಡ್ಡು ತೆಗೆದುಕೊಳ್ಳುವುದಕ್ಕಿಂತ ನನ್ನ ವಜ್ರ ಸಿಕ್ಕರೆ ಒಳಿತಲ್ಲವೆ?

ರಾಮುಲಾಲ:— ಅದು ನಿಮ್ಮ ದೊಡ್ಡಮನಸ್ಸು!

ಅಷ್ಟರಲ್ಲಿ ಇನ್ನೊಬ್ಬ ವ್ಯಕ್ತಿ— ಫೌಜದಾರರು:– “ಓಹೊ! ಇಲ್ಲಿ ನೋಡಿರಿ ಒಂದು ಜನಿವಾರ; ಇದರಲ್ಲಿ ೨-೩ ಕೀಲಿ ಕೈಗಳಿವೆ. ನೋಡಿರಿ, ಇದರಲ್ಲಿ ಯಾವುದಾದರೂ ನಿಮ್ಮ ತಿಜೋರಿಗೆ ಹತ್ತುತ್ತ ದೆಯೋ?” ಎಂದು ಕೇಳಿತು.

ಕನಕರಾಯ:— (ಆತುರದಿಂದ) ಓಹೋ! ಇದು ನಮ್ಮ ಅಣ್ಣಯ್ಯನ ಜನಿವಾರ; ಇವು ಅವನವೇ ಕೀಲಿಯ ಕೈ. (ಒಂದು ಕೀಲಿಕೈಯನ್ನು ತಿಜೋರಿಗೆ ಹಚ್ಚುತ್ತ) ಹಾಂ! ಇದು ಹತ್ತುತsದ ನೋಡ್ರಿ! ಅಯ್ಯೋ.., ಕಳ್ಳಾ ಅಣ್ಣ್ಯಾ! ನನ್ನ ಹಾಳ ಮಾಡಿದ್ಯಾ!

ರಾಮುಲಾಲ:— ಅಣ್ಣಯ್ಯನೆಂದರೆ ಆ ಅಡಿಗೆಯವನೇ? ಅವನಿಗೆ ೭-೮ ಸಲ ಕಳವಿಗಾಗಿ ಶಿಕ್ಷೆಯಾಗಿದೆ. ಅವನು Jail Bird. ಅವನೇ ಇರಬೇಕು ಇದನ್ನು ಕದ್ದವನೂ!

ಕನಕರಾಯ:— ಹೌದರೀ, ನಮ್ಮಲ್ಲೀನೂ ಅಡಿಗ್ಗೇ ಇದ್ದಾನ. ಈಗ ಆರುತಿಂಗಳಾಯ್ತು. ಏನೋ ಬಹಳೇ ಹೇಳಿಕೊಂಡ. ಪಾಪ .... ಬಡವಾ ಅಂತ ಕೆಲಸಕ್ಕೆ ಇಟ್ಟಕೊಂಡರೀ ಹೀಂಗಮಾಡಿದ್ಯಾ......

ರಾಮಲಾಲ:— ಅವನು ಈಗೆಲ್ಲಿದ್ದಾನೆ ?

ಕನಕ:— ನಿನ್ನೆ ಸಂಜೆಗೇನs ಝೂಲನ್ ಟೀಕೀಟು ತಗದೀವೀ ಅಂತ ಹೇಳಿ, ಯಾರ ಜೋಡಿಗೋ ಬೆಂಗಳೂರಿಗೆ ಹೋಗತೀನೀ ಅಂತ ಹೇಳಿ, ಒಂದು ೫ ರೂ. ಇಸುಗೊಂಡು ಹೋಗ್ಯಾನ. ಅವನs ಹೊತ್ತಿರಬೇಕೂ ಹೀಂಗ ಕಾಣಸ್ತsದ. ನಮ್ಮ ಹಣೇಬರಹ ! ನಮ್ಮ ಅನ್ನಾ ತಿಂದು ನಮ್ಮನ್ನs ಹಾಳುಮಾಡಲಿಕ್ಕೆ ಹೇಸೂದಿಲ್ಲಾ ಈ ಮುಂಡೇ ಮಕ್ಕಳು !

ರಾಮಲಾಲ:— ಒಳ್ಳೇದು ಕನಕರಾಯರೆ, ನೀವು ಈಗ ಈ ಫೌಜದಾರರೊಂದಿಗೆ ಕಚೇರಿಗೆ ಹೋಗಿ ಜವಾಬುಕೊಟ್ಟು ಬರ್ರಿ; ನೋಡೋಣ ನಿಮ್ಮ ದೈವಾ !

ಫೌಜದಾರರು ಕನಕರಾಯನನ್ನು ಕರೆದುಕೊಂಡು ಪೋಲಿಸ ಕಚೇರಿಗೆ ಹೋದರು. ಮುಂದೆ ಸುಮಾರು ಒಂದು ತಾಸಿನವರೆಗೆ C. I. D. Inspector ರಾಮಲಾಲನು ಆ ಕೋಣೆಯಲ್ಲಿ ಏನೇನನೋ ಹುಡುಕಾಡಿದನು, ಮತ್ತು ಅಣ್ಣಯ್ಯನು ಇರುವ ಸ್ಥಳವನ್ನು ಚೆನ್ನಾಗಿ ಶೋಧಿಸಿಕೊಂಡು ಬಂದು, ಕನಕರಾಯನು ತಿರುಗಿ ಬಂದಮೇಲೆ ಮನೆಗೆ ಹೋದನು. ಊಟ ತೀರಿಸಿಕೊಂಡು ಸಿಗರೇಟು ಸೇದುತ್ತ ತನ್ನ ಕೋಣೆಯಲ್ಲಿ ಆರಾಮ್ ಕುರ್ಚಿಯ ಮೇಲೆ ಬಿದ್ದನು. ಅವನು ಅದು ಎಷ್ಟು ಹೊತ್ತು ವಿಚಾರ ಪರನಾಗಿದ್ದನೋ, ಅದೆಷ್ಟು ಸಿಗರೇಟುಗಳನ್ನು ತೀರಿಸಿದನೋ ಅವನಿಗೇ ಗೊತ್ತಿರಲಿಲ್ಲ. ಚಹಾ ಬರುತ್ತಲೆ ಎಚ್ಚರಾದಂತಾಗಿ ಲಗುಬಗೆಯಿಂದ ಚಹಾಪಾನವನ್ನು ತೀರಿಸಿ, ಇನ್ನು ಎರಡು ದಿನ ತಾನು ಊರಲ್ಲಿರುವುದಿಲ್ಲವೆಂದು ತನ್ನ ಆಳುಮಗ ಹರಿಸಿಂಗನಿಗೆ ತಿಳಿಸಿ, ಡ್ರೆಸ್‌ಮಾಡಿಕೊಂಡು ಹೊರಬಿದ್ದನು.

*   *   *

ಮರುದಿನ ಸಂಜೆಯ ೪॥ ಗಂಟೆಯ ಸಮಯ. ಬೆಂಗಳೂರಿನ “**ಕೃಷ್ಣಾಭವನ**” ಹೋಟೆಲ್ಲಿನ ಒಡೆಯನು ತನ್ನ ಕಾರಕೂನನೊಂದಿಗೆ ಲೆಕ್ಕನೋಡುತ್ತ ಕುಳಿತಿದ್ದನು. ಅಷ್ಟರಲ್ಲಿ ಹೋಟೆಲ್ಲಿನ ಎದುರಿಗೆ ಒಂದು ಟಾಂಗಾ ನಿಂತಿತು. ಅದರಲ್ಲಿದ್ದವರು ಒಳಗೆ ಬಂದು— “ಸ್ವಾಮಿಾ ಇಲ್ಲಿ ಅಣ್ಣಯ್ಯ ಕುಲಕರ್ಣಿ ಎಂಬವರು ಬಂದಿದ್ದಾರೆಯೇ ?” ಎಂದು ಕೇಳಿದರು. ಕೂಡಲೆ ಹೋಟೆಲಿನ ಒಡೆಯನು ಹೇಳಿದ:

“ಹೌದು ಸ್ವಾಮಿಾ, ಇದ್ದಾರೆಬನ್ನಿ! ತಾವೂ ಇಲ್ಲಿ ಉಳಕೊಳ್ಳುವವರೆ ! ಬನ್ನಿ ಬನ್ನಿ, ಮೇಲಿನ ಕೋಣೆಯಲ್ಲಿದ್ದಾರೆ !” ಎನ್ನುತ್ತ ಹೋಟೆಲ್ಲಿನ ಒಡೆಯನು ಅವರನ್ನು ಅಣ್ಣಯ್ಯನ ಕೋಣೆಗೆ ಕರೆದುಕೊಂಡು ಹೋದನು. ಒಳಗೆ ಬಂದವರನ್ನು ನೋಡಿ ಅಣ್ಣಯ್ಯ ನುಡಿದ: “ಓಹೋ ರಾವಸಾಬ ಬರ್ರೀ—ತಾವು ಇಲ್ಲಿ ಬಂದಿರಿ ?” ಅವನ ಧ್ವನಿ ಸ್ವಲ್ಪ ನಡುಗಿತಾದರೂ ಅಂಜಿದ ಚಿನ್ಹವನ್ನೇನೂ ತೋರಿಸಲಿಲ್ಲ. ರಾಮಲಾಲನು ಅವನನ್ನು ಹೊರಗೆ ಕರೆದು ಹೇಳಿದ: “ಏನು ಅಣ್ಣಾಪ್ಪಾ ? ಮತ್ತ ನಿನ್ನ ಕೈಚಳಕಾ ತೋರಿಸ್ದೀ ಅನ್ನಬಾರದ ?”

ಅಣ್ಣಯ್ಯ:— ಇಲ್ಲ ರಾವಸಾಬ ! ನೀವು ಅಂತೀರಾದರೂ ಏನು ? ನಾ ಊರು ಬಿಡುತ್ತಲೆ ನಿಮಗೆ ಸಂಶಯವೇ ಏನು ?

ರಾಮಲಾಲ:—ಹಾಂಗ ಮುಂಗಾಲು ಪುಟಗಿಮಾತ್ತಾಡಬ್ಯಾಡ; ಈ ಸಾರೆ ದೊಡ್ಡದಕ್ಕs ಕೈಹಾಕೀದಿ..ಆದರೆ ಉಪಾಯವಿಲ್ಲ !

ಅಣ್ಣಯ್ಯ:— (ಗಾಬರಿಯಾಗಿ) ಇಲ್ಲರೀ ರಾವಸಾಬ್, ನಾಯಾಕ ಕಳವು ಮಾಡ್ಲೀ ? ಈಗ ಆರಾಮು ಇದ್ದೀನಿ.

ರಾಮಲಾಲ:— ಇರಲಿ, ಗಾಬರಿಯಾಗಬೇಡ. ಆ ವಜ್ರಾ ಕೊಟ್ಟುಬಿಡು. ಈ ಸಾರೆ ನಿನಗೆ ಶಿಕ್ಷೆಮಾಡಿಸುವುದಿಲ್ಲ !

ಅಣ್ಣಯ್ಯ:— ವಜ್ರ? ಏನಂತೀರಿ ಸಾಹೇಬ ! ನಾ ನs ? ವಜ್ರ ? ನಾಯಾಕ ಕಳವು ಮಾಡಲಿ ? ಏನೋ ಹಿಂದಕ ಸಣ್ಣವು ಪುಟ್ಟವು ಮಾಡಿದ್ದಕ್ಕs ರಗಡ ಅನುಭೋಗಿಸೀನಿ. ಅಂಥಾದs ದಕ್ಕಲಿಲ್ಲಂತ..ವಜ್ರ ದಕ್ಕೀತರೇ? ಛೀ ಛೀ, ದೇವರಾಣೆ ಅಂದರೂ ಇಂಥಾ ಕೆಲಸಾ ಮಾಡಿಲ್ಲ ಬಿಡ್ರಿ !

ರಾಮಲಾಲ:—(ನಗುತ್ತ) ಇದು ನೋಡು.. ಈ ಜನಿವಾರ ಮತ್ತು ಇದರಾಗಿನ ಕೀಲೀ ಕೈ ಇವು ನಿನ್ನವಲ್ಲವೆ ?

“ಓಹೋ ಹೀಗೋ ರಾಯರೇ, ಹಾಗಾದರೆ ಇದು ನೋಡಿರಿ !....”

ಅಣ್ಣಯ್ಯ:—(ಆಶ್ಚರ್ಯದಿಂದ) ಹೌದು. ಇವು ನನ್ನವs! ಅಲ್ಲಾs ಮತ್ತ..ಇದೇನಿದು ? ಆಂ? (ತನ್ನಲ್ಲಿ ಜನಿವಾರವಿಲ್ಲದ್ದು ನೋಡಿಕೊಂಡು ಏನೇನೋ ನೆನಪಾದವನಂತೆ) ಆಂ ! ಹಾಂ ! ಹೌದರೀ ಸಾಹೇಬ, ಈ ಊರಿಗೆ ಬರೋ ಮುನ್ನಾ ದಿನ ಅಡಿಗೀ ಮನ್ಯಾಗ ಪೈರಣ ತೆಗೆದಿದ್ದೆ. ಜನಿವಾರ ಅದರಾಗs ಹೋಗಿರಬೇಕು. ಊರಿಗೆ ಬರೋ ಗಡಿಬಿಡ್ಯಾಗ ಮರೆತೀನಿ ಕಾಣಸ್ತsದ. ಆದರ ನಾ ಕಳವು ಗಿಳವು ಇಂಥಾದೇನೂ ಮಾಡಿಲ್ಲ, ಶಪಥಮಾಡತೀನಿ ಬೇಕಾದರ !

ರಾಮಲಾಲ:— ಇರಲಿ, ಈಗಂತೂ ನೀ ನನ್ನ ಸಂಗಡ ಬರಬೇಕು. ಹೀಗೆಂದು ಅಣ್ಣಯ್ಯನನ್ನು ಬೆಂಗಳೂರ ಪೋಲೀಸ ಕಚೇರಿಯಲ್ಲಿ ಕೂಡ್ರಿಸಿ. ರಾಮಲಾಲನು ಪೇಟೆಯಲ್ಲಿ ಎಷ್ಟೋ ವಜ್ರವ್ಯಾಪಾರಿಗಳನ್ನು ಕಂಡುಬಂದನು.

*   *   *

ಮರುಕ್ಷಣದಲ್ಲಿಯೆ ಆವೇಶದಿಂದ ಬಾಗಿಲಕಡೆಗೆ ಓಡಿದರು.

ಎಂಟು ದಿನಗಳ ತರುವಾಯ ಇನ್‌ಸ್ಯೂರನ್ಸ್ ಕಂಪನೀಯ ಮ್ಯಾನೇಜರನೊಂದಿಗೆ ರಾಮುಲಾಲನು ಕನಕರಾಯನ ಮನೆಗೆ ಹೊರಟನು. ಹಾದಿಯಲ್ಲಿ ಮ್ಯಾನೇಜರನನ್ನು ಕಂಡು: "ಆ ವಜ್ರ ಹತ್ತುಸಾವಿರಕ್ಕೆ ನಿಮ್ಮಲ್ಲಿ ಇನ್‌ಸ್ಯೂರ್ ಮಾಡಿಸಿದ್ದರೇ ? ಅದರ ಬೆಲೆ ನೀವೇ ಕಟ್ಟಿದ್ದಿರಲ್ಲವೆ ?" ಎಂದು ಕೇಳಿದನು.

ಮ್ಯಾನೇಜರ್:— ಹೌದು. ಅದರ ಕನಿಷ್ಠ ಬೆಲೆ ಅಷ್ಟಾಗ ಬಹುದೆಂದು ನಾನೇ ಕಟ್ಟಿದ್ದೆ. ಅದು ಅವರಲ್ಲಿ ವಂಶಪರಂಪರೆಯಿಂದ ಬಂದ ವಜ್ರವಂತೆ. ಬಹಳ ಹಿಂದಿನಕಾಲದ್ದು.

ರಾಮುಲಾಲ:— ಕಂತುಗಳನ್ನು ತಪ್ಪದೆ ಕೊಡುತ್ತಾ ಬಂದಿದ್ದಾರೆಯೆ ?

ಮ್ಯಾನೇಜರ್:— ಕೊಡುತ್ತಿದ್ದರು; ಆದರೆ ಕಳೆದ ೪ ವರ್ಷ ಕೊಟ್ಟಿರಲಿಲ್ಲ. ಮೊನ್ನೆ ಮೊನ್ನೆ ದಂಡಸಹಿತ ಕೊಟ್ಟು Renewal ಮಾಡಿಸಿಕೊಂಡಿದ್ದಾರೆ. ಸುಮಾರು ೨೦೦೦ ರೂಪಾಯಿ ಕೊಟ್ಟರು. ಇನ್ನು ೩ ವರ್ಷಕ್ಕೆ ಅವರ ಕಂತು ಮುಗಿಯುತ್ತವೆ.

ಅಷ್ಟರಲ್ಲಿ ಕನಕರಾಯನ ಮನೆ ಬಂದಿತು. ಅವರನ್ನು ಕಾಣುತ್ತಲೆ ಕನಕರಾಯನು: " ಓಹೋ ಮ್ಯಾನೇಜರ ಸಾಹೇಬ, ಬರ್ರಿ ! ಏನು ಮಿ. ರಾಮುಲಾಲ, ಕಂಪನಿಯ ಮ್ಯಾನೇಜರ ಕಡಿಂದ ಎಲ್ಲಾ ಖಾತ್ರಿಮಾಡಿಕೊಂಡ್ರಲ್ಲಾ ? ಮತ್ತೇನು, ನಮ್ಮದೇನಾದರೂ ಪತ್ತೇ ಆಯಿತೋ ! ಎಂದನು.

ರಾಮುಲಾಲ:— ಆದಂತೆಯೇ. ಆದರೆ ಸ್ವಲ್ಪ ಪಕ್ಕಾಮಾಡ ಬೇಕಾಗಿದೆ.

ಕನಕರಾಯ:— (ಆನಂದ ವ್ಯಕ್ತಮಾಡುತ್ತ) ಓಹೋ ಅದಕ್ಕೇನು ಅಡ್ಡೀ ಅದ ?

ರಾಮುಲಾಲ:— ಒಳ್ಳೇದು ಕನಕರಾವ್, ನೀವು ಈಗ ೬ ತಿಂಗಳ ಹಿಂದೆ ಕಂಪನಿಗೆ ೨೦೦೦ ರೂ. ಕೊಟ್ಟಿರಿ; ಮತ್ತು ನಿಮ್ಮದು ಹಿಮ್ಮತಲಾಲ್ ಶೇಟಜಿಯಲ್ಲಿ ಸಾಲ ಇತ್ತಲ್ಲವೆ ಸುಮಾರು ೫೦೦೦ ? ಅದನ್ನೂ ತೀರಿಸಿದಿರಿ !

ಕನಕ:— ಹೌದು, ಅದ್ಯಾಕ ಬೇಕಾಗಿತ್ತು ಈಗ ?

ರಾಮು:— ಸಹಜ ಕೇಳಿದೆ. ಸಾಲದಾಗ ಇದ್ದೀವಿ ಅಂದಿರಿ. ಮತ್ತೆ ಒಮ್ಮೆಗಿಲೆ ಇಷ್ಟು ರೂಪಾಯಿಯ ವ್ಯವಸ್ಥೆ ಹ್ಯಾಗೆ ಮಾಡಿದಿರೀ ಅಂತ !

ಕನಕ:— (ಅಧೃತೆಯಿಂದ) ಇದನ್ನೇನು ಕೇಳತೀರಿ ಮಿ|| ರಾಮುಲಾಲ ! ನನ್ನಂಥಾ ವತನದಾರ ವಜನದಾರ ಮನುಷ್ಯ ಬಾಯಿ ತೆಗೆದರೆ ದುಡ್ಡಿಗೇನು ಕಡಿಮೆ ? ಸರಕಾರದಾಗನುದ್ಧಾ ನನ್ನ ವಜನ ಅದ. ಇದು ನೀವು ಕೇಳತಕ್ಕ ಪ್ರಶ್ನೆಯೇ ಅಲ್ಲಾ ! ಸ್ವಲ್ಪ ಮುಂದಿನ್ನ ನೋಡಿ ಮಾತಾಡ್ರಿ !

ರಾಮುಲಾಲ:—(ಸಮಾಧಾನದಿಂದ) ತಾವು ಸಿಟ್ಟಿಗೇಳಬಾರದು, ಸಹಜ ಕೇಳಿದೆ. ನಿಮ್ಮ ಸ್ವಂತ ಕೆಲಸದ ಗೊಡವೆ ನಮಗೇಕೆ ? ಇಗೊಳ್ಳಿರಿ, ನಿಮ್ಮ ವಜ್ರ ಸಿಕ್ಕಿದೆ ! ಎಂದು ಜೇಬಿನಿಂದ ಒಂದು ಪಾಕೀಟನ್ನು ತೆಗೆದನು.)

ಕನಕ:— ಎಲಾ ! ಸಿಕ್ಕಿತs? ಆಹಾ ! ನನ್ನ ದೈವ; ಎಲ್ಲಿ ನೋಡೋಣಾ? ಇದೆಲ್ಲಾ ಆ ಕಳ್ಳ ಅಣ್ಣ್ಯಾಂದs ಹೌದಲ್ಲಿರಿ? ಮಗಾ ಮತ್ತ ಜನಿವಾರಾನs ಬಿಟ್ಟು ಹೋಗಿದ್ದಾ,

ಮ್ಯಾನೇಜರ್:— Oh ! Good Luck Kanakrav ! ಎಲ್ಲಿ ನೋಡೋಣ ? (ನೋಡಿ ಆಶ್ಚರ್ಯದಿಂದ) ಎಲ ! ಏನಿದು ? ಸ್ವಲ್ಪ ಮುರಿದಿದೆಯಲ್ಲ ? (ಪರೀಕ್ಷಿಸಿ) ಓ ! ಇದೇನು ? ಮೇಣ ! ಆಕಾರ ಮಾತ್ರ ರಾಯರ ವಜ್ರದಂತೆಯೇ ?

ಕನಕ:— ಏನು ? ಬರೇ ಮ್ಯಾಣ ? ಹಾಂಗಾರ ಅದು ನಂದು ಅಲ್ಲs ಅಲ್ಲಾ. ಏನೋ ಖೊಟ್ಟಿತನಾ ಆಗ್ಯೇದ. ಯಾಕರೀ ಮ್ಯಾನೇಜರ್ ನೀವು ನಮ್ಮ ವಜ್ರಾ ನೋಡಿದ್ದೀರಿ !

ರಾಮುಲಾಲ:— ಇದು ನಿಮ್ಮದೇ ಅದೇ. ಅಗದೀ ಸತ್ಯ !

ಕನಕ:— (ಸಿಟ್ಟಿನಿಂದ) ನಿಮಗ ಮಂದೀ ಮಕ್ಕಳ ಯೋಗ್ಯತಾನs ತಿಳಿಯುದಿಲ್ಲಾಂತ ಕಾಣತದೆ. ಅಂತೀರಾದರೂ ಏನು ? ಇದನ್ನೇನು ನಾನs ಮಾಡೀನೇ !

ರಾಮುಲಾಲ:— ಹೌದು, ಇಲ್ಲಿ ನೋಡಿರಿ Nurjan & co; Bengalore ಇವರಲ್ಲಿ ನಿಮ್ಮ ವಜ್ರಾ ೮೦೦೦ ರೂಪಾಯಿಗೆ ಮಾರಿದ ಬಗ್ಗೆ ಪಾವತಿ ಇದೆ.

ಪಾವತೀ ನೋಡುತ್ತಲೇ ಕನಕರಾಯನು: "ಅಯ್ಯೋ ರಾಮಾ! ಮಂದಿ ಎಂಥಾ ಮೋಸಮಾಡತಾರಪಾ ! ನಾ ಯಾಕ ಮಾರಲಿಕ್ಕೆ ಹೋಗಲೀ ! ಇದು ಏನೋ ನೀವs ಲಂಚಾ ತಿಂದು ಮಾಡಿದ ಗತ್ತು ಕಾಣಸತದ ! ಎಂದು ಕೂಗಿದನು.

ಕನಕರಾಯನ ಅಂಜಿಕೆಯಿಂದ ನಡುಗುತ್ತಿದ್ದ ಮೋರೆಯ ಮೇಲೆ ಬೆವರೊಡೆಯತೊಡಗಿತ್ತು.

ರಾಮುಲಾಲ:— ಓಹೋ, ಹೀಗೋ ರಾಯರೇ ! ಹಾಗಾದರೆ ಇದು ನೋಡಿರಿ? ತಾವು Pellmell & co. ಇವರಲ್ಲಿ ನಿಮ್ಮ ವಜ್ರದ ಪಡಿಯಚ್ಚು ಮಾಡಿಸಿದ ಬಗ್ಗೆ ಪಾವತೀ ? ಅದಕ್ಕೆ ತಾವು ೫೦ ರೂಪಾಯಿ ಕೊಟ್ಟಿದ್ದೀರಿ. ಹೀಗೆನ್ನುತ್ತ ಆ ಪಾವತಿಯನ್ನು

ಮೇಜಿನ ಮೇಲಿಟ್ಟನು. ಅದನ್ನು ನೋಡುತ್ತಲೆ ಕನಕರಾಯನು ಜೋರಿಂದು ಬೆವತು ತಣ್ಣಗಾದನು. ಮರುಕ್ಷಣದಲ್ಲಿ ಆವೇಶದಿಂದ ಬಾಗಿಲಕಡೆಗೆ ಓಡಿದನು. ಬಾಗಿಲಲ್ಲಿಯೆ ನಿಂತಿದ್ದ ಫೌಜದಾರರು ಅವನನ್ನು ಹಾಗೆಯೆ ಮನೆಯ ಮುಂದಿದ್ದ Taxi ಯಲ್ಲಿ ಕೂಡ್ರಿಸಿ ಕೊಂಡು ಕಚೇರಿಗೆ ಹೋದರು. ಕಂಪನಿಯ ಮ್ಯಾನೇಜರರಿಗೆ ವಜ್ರದ ಕಥೆ ಹೇಳುತ್ತ ರಾಮರಾಯನು:— ಇದು ನೋಡಿ ಮ್ಯಾನೇಜರ್, ಮೂರು ತಿಂಗಳ ಹಿಂದೆ ತಮ್ಮ ವಜ್ರದ ಪಡಿಯಚ್ಚು ಮಾಡಿಸಿ, ಅನಂತರ ಅದನ್ನು ಮಾರಿದ್ದಾರೆ; ಅದರಿಂದ ಬಂದ ೮೦೦೦ ರೂ. ಮತ್ತು ಈ ಮೋಸದ ವಜ್ರ ಕಳೆದ ಬಗ್ಗೆ ನಿಮ್ಮ ಕಂಪನಿಯಿಂದ ೧೦೦೦೦ ರೂ. ಎತ್ತಿಹಾಕುವವರಿದ್ದರು..ಈ ರಾಯರು !

ಮ್ಯಾನೇಜರ್:—ದೊಡ್ಡ ಜಾಗಿರದಾರರು. ಹೊರಲಾರದಷ್ಟು ಸಾಲ! ಸಾರಾಗುವ ಹಂಚಿಕೆ ಮಾತ್ರ ಬಹು ಚೆನ್ನಾಗಿದೆ; ಅಲ್ಲರೀ ಮತ್ತೆ..ಆ ಅಣ್ಣಯ್ಯ.. ಅವನ ಜನಿವಾರ.. ಹೀಗೆ ಏನೇನೋ ಅಂದರಲ್ಲ ? ಅದೇನು ?

ರಾಮಲಾಲ:— ಅದೂ ಒಂದು ಕಥೆಯೇ ಕೇಳಿರಿ! ಅಣ್ಣಯ್ಯ ಇವರ ಅಡಿಗೆಯವ. ಅವನೊಬ್ಬ Jail-bird ನಾವು ಇಲ್ಲಿಗೆ ತಪಾಸ್ ಮಾಡಲಿಕ್ಕೆ ಬಂದಾಗ ಅವನ ಜನಿವಾರ ಕೀಲೀ ಕೈ ಇಲ್ಲಿ ಸಿಕ್ಕವು. ಅಂತೆಯೇ ಅವನ ಮೇಲೆ ಸಂಶಯ ಬಂದಿತು. ಮುಂದೆ ಕನಕರಾಯನನ್ನು ಕಚೇರಿಗೆ ಕಳಿಸಿ, ನಾನು ಅತ್ತ ಇತ್ತ ಎಲ್ಲ ಕಡೆಗೆ ಹುಡುಕಾಡಿ ಅಣ್ಣಯ್ಯನಿರುವ ಹಿತ್ತಲಿನಲ್ಲಿಯ ಕೋಣೆಗೆ ಹೋದೆ. ಅವನ ಮುರುಕು ಟ್ರಂಕಿನಲ್ಲಿ ಈ ವಜ್ರ! 'ಮುಂದಿನ ಕಿಡಕಿಯಿಂದ ಹಾರಿಹೋದಾ ಕಳ್ಳಾ' ಅಂತ ಕನಕರಾಯರು ಹೇಳುತ್ತಾರೆ. ಅವನ ಕೋಣೆ ಹಿತ್ತಲಲ್ಲಿ! ಮೇಲೆ ಮನೆಯ ಎಲ್ಲ ಬಾಗಿಲೂ ಮುಚ್ಚಿದ್ದುವು! ಅವನು ಕಳವು ಮಾಡಿ ತನ್ನ ಕೋಣೆಗೆ ಹೋಗುವುದಂತೂ ಶಕ್ಯವಿಲ್ಲ. ಆದರೆ ವಜ್ರ ಮಾತ್ರ ಅವನ ಟ್ರಂಕಿನಲ್ಲಿ !

ಮ್ಯಾನೇಜರ್:— ಹಾಗಾದರೆ ಅವನ ಜನಿವಾರ ಅಲ್ಲಿರುವುದು ಹೇಗೆ ?

ರಾಮಲಾಲ:— ಅದನ್ನು ಅಣ್ಣಯ್ಯನು ಬಹು ಸ್ವಾರಸ್ಯವಾಗಿ ಹೇಳುತ್ತಾನೆ. ತನ್ನ ಶರ್ಟನ್ನು ಕಳೆದಿರುವಾಗ ಅದರೊಂದಿಗೇ ಜನಿವಾರ ಹೋಗಿರಬೇಕೂ ಅಂತ ! ಅದೂ ಸಹಜ ಆದರ ಅನ್ನಿರಿ. ಆ ಜನಿವಾರಕ್ಕೇ ಇವರು ಟ್ರಿಝುರೀ ಕೀಲೀ ಕೈ ಹಾಕಿ ಅಲ್ಲಿ ಒಗೆದಿರಬೇಕು.

ಮ್ಯಾನೇಜರ್:— ಅಂತೂ ಬಹಳೇ ವಿಚಾರಮಾಡಿ ಆಟ ಹೂಡಿದ್ದಂತೆ ಕಾಣಿಸುತ್ತದೆ. ಅಚ್ಛಾ, ನಮ್ಮ ಕಂಪನಿ ನಿಮಗೆ ಬಹಳೇ ಆಭಾರಿಯಿದೆ. ನಮಸ್ಕಾರ !

* * *

ಜವುಳುಹಳ್ಳದ ದಂಡೆಯ ಮೇಲಿನ ಒಂದು ಕೋಣೆಯಲ್ಲಿ ರಾತ್ರಿ ೧೦ ಗಂಟೆಯ ಸುಮಾರಿಗೆ ಎರಡು ವ್ಯಕ್ತಿಗಳು ಮೆಲ್ಲಗೆ ಮಾತನಾಡುತ್ತಿದ್ದುವು.

"ಅಲ್ಲೊ ! ಅವತ್ತ ಮುಂಜಾಲೆದ್ದು ಒಂದು ಉಂಗರಾ ಕೊಟ್ಟೆ; ಎರಡs ದಿನದಾಗs ಬರತೀನಿ ಅಂದಾಂವಾ ಈಟ ದಿನಾ ಆದರೂ ಬರಭಾರದೇನು ?"

"ಅಲ್ಲಾ ಗಂಗೂ, ಆಗೂ ಬರತಿದ್ದೆ; ಕೇಳೀದೀ ಇಲ್ಲೋ ನಮ್ಮ ರಾಯರ ಗದ್ದಲಾ ?"

"ಹೌನಲ್ಲೊ, ಅದು ನಿನ್ನ ಮ್ಯಾಗs ಬಂದೈತೀ ಅಂತ ಕೇಳಿದ್ದೆ. ಅದಕs ಓಡಿಹೋಗಿದ್ದಿ ಕ್ಷಾಣತ್ತೈತಿ. ಅದು ನಿಮ್ಮ ರಾಯರ ಮ್ಯಾಗs ಹೊಡಮಳ್ಳೈತಿ ಅಂತಾರಲ್ಲೊ ! "

"ಹೌದು ಮತ್ತ ! ಈಗ ನೋಡು, ಅವರ ಕೊಳ್ಳಿಗೇ ಮಸೀದಿ ಬಿದ್ದsದ."

"ಅಯ್ಯ ! ಹಂಗಾರ ನಿಂದs ಅನ್ನು ಈ ಕಾರಭಾರ.?"

"ಏ ಸ್ವಲ್ಪ ಮೆಲ್ಲಾಕs ಮಾತಾಡು. ಇಲ್ಲೆ ಕೇಳಿಲ್ಲೆ ಯಾರಿಗೂ ಹೇಳಬ್ಯಾಡಾ. ನಾ ಕಳವ ಮಾಡಿದ್ದು ಬಾಯಿಯವರ ಟ್ರಂಕಿನ್ಯಾಗಿನ ಉಂಗರಾ ಮತ್ತು ರುಪಾಯಿ; ಯಾರೋ ಬಂದ ಸಪ್ಪಳ ಆತು. ಜಿಗತಾಕೊಟ್ಟೆ, ನಿನ್ನ ಕಡೆ ಬಂದೆ. ಉಂಗರಾ ಕೊಟ್ಟವನs ಸ್ಟೇಶನ್ನಿಗೇ ಹೋದೆ ನೋಡು !"

"ಒಳೇ ಧೈರ್ಯವಾದಾವ ಅದೀ ಏಳು ನೀನೂ !"

"ಮುಂದ ಒಳ್ಳೇ ಸಾರಾದೆ ನೋಡು ! ಪೋಲಿಸರು ಕೇಳಿದರು : 'ನಿನ್ನ ಜನಿವಾರ ಅಲ್ಲ್ಯಾಕಲೇ' ಅಂತ. ಇಂಥಾ ದೊಡ್ಡ ಗುಳಿಗೀಕೊಟ್ಟೆ; ನನ್ನ ಶರ್ಟಿನ್ಯಾಗಿಂದ, ಹೋಗಿರಬೇಕೂ ಅಂತ. ನಾಟೀಬಿಟ್ಟಿತು ಮಹಾಮಂತ್ರ !

"ಜನಿವಾರಾ ಅಲ್ಲ್ಯಾಕ ಬಿಟ್ಟೆ ?"

"ಜನಿವಾರ ಹರದು ಹರದು ಗಂಟುಹಾಕಿದ್ದೆ. ಸಣ್ಣ ಆಗಿತ್ತು. ಟ್ರಂಕಿಗೆ ಕೀಲಿಕೈ ನಿಲುಕಲಿಲ್ಲಾ ಜನಿವಾರನs ತಗದೆ. ಅಷ್ಟರಾಗs ಸಪ್ಪಳಾತು. ಜನಿವಾರಾ ತಗೋಳಿಕ್ಕೆ ಪುರಸತ್ತು ಆಗಲಿಲ್ಲ; ಅದರ ಗುಳಿಗೀ ಎಂಥಾದ ಕೊಟ್ಟೇನಿ."

"ನಿನ್ನ ಬುದ್ಧಿನೂ ಚುರುಕ ಐತಿ ಏಳು. ಒಂದು ಹತ್ತರುಪಾಯಿ ತಾರಲಾ ! "

"ಇರಾ. ಇನ್ನ ೧ ತಿಂಗಳ ತನಕಾ ಮಾತಾಡಿಸಬ್ಯಾಡಾ. ಜಪಾ ತರನು !"

* * *

'ಕಳವಾದ ಸಂಧಿಯನ್ನು ಸಾಧಿಸಿ ವಜ್ರದ ಕಳವನ್ನು ಹೂಡಿದೆನೋ' ಎಂದು ಕನಕರಾಯನು ಕನವರಿಸುತ್ತಿದ್ದಾನೆ.

"ನನ್ನ ಕಳವು ಪೂರ್ಣ ದಕ್ಕಿದೆಯೋ ಇಲ್ಲವೋ" ಎಂದು ಅಣ್ಣಯ್ಯನು ಚಡಪಡಿಸುತ್ತಿದ್ದಾನೆ.

ಕೊಲ್ಹಾಪುರದಲ್ಲಿಯ

ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು

ಬೋಂಗಾಳೇ ಬ್ರದರ್ಸ, ಕ್ಯಾಪ್ ಮೇಕರ್ಸ

ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.

* ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ನಮ್ಮ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಸಮಾಜದ ಆವಶ್ಯಕತೆಯೂ

ಮುಂಬಯಿ ಪ್ರೆಸಿಡೆನ್ಸಿ (Reforms Association) ರಿಫಾರ್ಮ್ಸ್ ಅಸೋಸಿಯೇಷನ್ನಿನ ಒಂದು ಸಭೆಯಲ್ಲಿ 'ಸಗೋತ್ರ' ಮತ್ತು 'ಸಪರಿವಾರ' ವಿವಾಹಗಳು ನ್ಯಾಯಸಮ್ಮತವಾಗುವಂತೆ ಮಾಡುವ ಗೊತ್ತುವಳಿ ಬರುವುದಿದೆಯೆಂದು 'ಹಿಂದೂಸ್ಥಾನ್ ಟೈಮ್ಸ್' ಪತ್ರಿಕೆಯ ಒಂದು ಸಂಚಿಕೆಯಲ್ಲಿ ಪ್ರಕಟವಾಗಿದ್ದಿತು. ಈ ರೀತಿಯ ಕಾನೂನು ಬಡೋದೆಯ ರಾಜ್ಯದಲ್ಲಿ ಕೆಲವುಕಾಲದಿಂದ ಜಾರಿಗೆ ಬಂದಿದೆಯೆಂದೂ, ಇದಕ್ಕೆ ಯಾವ ಸಾಮಾಜಿಕ ವಿರೋಧವೂ ಅಲ್ಲಿ ಉಂಟಾಗಲಿಲ್ಲವೆಂದೂ ಅದರಲ್ಲಿ ಹೇಳಲಾಗಿದೆ. ಈ ಕಾನೂನನ್ನು ರಚಿಸುವುದಕ್ಕೆ ಮೊದಲು, ಬಡೋದಾ ಸಂಸ್ಥಾನದವರು ಈ ವಿಷಯದಲ್ಲಿ ಡಾಕ್ಟರುಗಳ, ವಿಜ್ಞಾನಿಗಳ ಮತ್ತು ಇತರ ವಿಶೇಷಜ್ಞರ ಮತಗಳನ್ನು ತೆಗೆದುಕೊಂಡು, ಅನಂತರವೇ ಇದನ್ನು ಜಾರಿಗೆ ತಂದಿರುವರು. ಬರೋಡೆಗೆ ಹಿತಕಾರಿಯಾದುದು, ಮುಂಬಯಿಪ್ರಾಂತಕ್ಕೂ ಹಿತಕಾರಿಯಾಗಲೆಬೇಕು. ಇಷ್ಟೇ ಅಲ್ಲ, ಈ ಪ್ರಾಂತ್ಯದಲ್ಲಿಯೂ ಇಂತಹ ವಿವಾಹಗಳಿಗಿರುವ ಅಡ್ಡಿಗಳನ್ನು ದೂರ ಮಾಡುವ ಗುಂಪಿಗೆ ಲೋಕಮತವು ಹೆಚ್ಚಾಗಿ ಇರುವುದರಿಂದ, ಇಂತಹ ಕಾನೂನನ್ನು ಈಗ ರಚಿಸುವುದು ಅವಶ್ಯವೂ, ಪ್ರಯೋಜನಕಾರಿಯೂ ಆಗಿದೆ.

ಈ ಸಮಾಚಾರದಿಂದ ಸನಾತನಧರ್ಮಾವಲಂಬಿಗಳಿಗೆ ನಿಜವಾಗಿಯೂ ಅಸಮಾಧಾನವಾಗಿರಲೆಬೇಕು. ಕಾನೂನಿನ ಮೂಲಕ, ಧರ್ಮದ ಆದರ್ಶಗಳನ್ನು ಒಂದಾದ ಮೇಲೊಂದರಂತೆ, ನಷ್ಟ-ಭ್ರಷ್ಟ ಮಾಡುವುದನ್ನು ಕಂಡು ಯಾವ ಧರ್ಮನಿಷ್ಠನಿಗೆ ತಾನೆ ಸಿಟ್ಟು ಬರಲಿಕ್ಕಿಲ್ಲ? ಹಿಂದುಗಳ ಸಂಸರ್ಗಮಾತ್ರದಿಂದಲೇ ಇಸ್ಲಾಂ ಧರ್ಮಕ್ಕೆ ಕಳಂಕವುಂಟಾಗುತ್ತದೆಯೆಂಬ ಕಲ್ಪನೆಯಿಂದಲೆ ಮುಸಲ್ಮಾನರು "ಪಾಕಿಸ್ತಾನ"ದ ವಿಚಾರದಲ್ಲಿ ಪ್ರಚಾರವನ್ನಾರಂಭಿಸಿರುವಂತೆ, ನಮ್ಮ ಸನಾತನಧರ್ಮ ಸಹೋದರರೂ, ದಿನದಿನಕ್ಕೂ ಅವರ ಧರ್ಮದಲ್ಲಿ ಉಂಟಾಗುತ್ತಿರುವ ಲೋಪಗಳನ್ನು ಕಂಡು, ದುಃಖಿತರಾಗಿ, "ಧರ್ಮಸ್ಥಾನ"ದ ಕೂಗನ್ನೂ ಎಬ್ಬಿಸಿ, ತಮ್ಮ ಧರ್ಮಾಚರಣೆಯಲ್ಲಿ ಯಾರೂ ಯಾವ ವಿಧವಾದ ಹಸ್ತಕ್ಷೇಪವನ್ನೂ ಮಾಡಬಾರದೆಂದು ಚಳವಳಿ ಹೂಡಬಹುದೆಂಬ ಭಯವಿದೆ ನನಗೆ.

ನಾವು ಸಂಪ್ರದಾಯಾಭಿಮಾನದ ಭಾವನೆಯನ್ನು ಬಿಟ್ಟು, ನಮ್ಮ ಬುದ್ಧಿಯಿಂದ ಈ ವಿಚಾರಗಳನ್ನು ವಿಮರ್ಶಿಸೋಣ: ಈ ರೀತಿ ಪರೀಕ್ಷಿಸುವುದರಲ್ಲಿ ನಾವು ನಮ್ಮ ಪೂರ್ವಜರನ್ನು ಅವಮಾನಕ್ಕೆ ಗುರಿಪಡಿಸಬೇಕೆಂದಾಗಲಿ, ಅವರಿಗಿಂತಲೂ, ನಾವು ಹೆಚ್ಚು ಬುದ್ಧಿವಂತರೆಂದು ಸಿದ್ಧಮಾಡಬೇಕೆಂದಾಗಲಿ ನಮ್ಮ ಅಭಿಪ್ರಾಯವಿಲ್ಲ. ನಮ್ಮ ಪೂರ್ವಜರು ನಿಸ್ಸಂದೇಹವಾಗಿಯೂ ಬುದ್ಧಿವಂತರೇ ಆಗಿದ್ದರು. ಅವರು ತಮ್ಮ ಕಾಲದ ಜೀವನದ ರೀತಿ-ನೀತಿಗಳನ್ನು ನಿಯಮಿಸಿಕೊಂಡು, ಅದರಂತೆ ನಡೆಯುತ್ತಿದ್ದರು. ಆದರೆ ಇಂದು ನಾವಾದರೋ ಅವರಿಗಿಂತ ತೀರ ಭಿನ್ನವಾದ ಕಾಲ ಮತ್ತು ಭಿನ್ನವಾದ ವಾತಾವರಣದಲ್ಲಿ ಇದ್ದೇವೆ. ಆದುದರಿಂದ ಆ ನಿಯಮಗಳನ್ನು ಅಪರಿವರ್ತಿತ ರೂಪದಲ್ಲಿ ಪ್ರಯೋಗಮಾಡುವುದು ನಮ್ಮ ನಿತ್ಯಜೀವನದಲ್ಲಿ ಅಸಂಭವವಲ್ಲವೆಂದರೂ, ಅತ್ಯಂತ ಕಠಿನವಂತೂ ಆಗುತ್ತಲಿದೆ. ಅವುಗಳಲ್ಲಿ ಉಚಿತ ಸಂಶೋಧನೆಯನ್ನು ಮಾಡದೆ ಹೋದರೆ, ನಮ್ಮ ಅಸ್ತಿತ್ವವೇ ನಷ್ಟವಾಗಬಹುದೆಂಬ ಭಯವುಂಟಾಗಿದೆ. ಆದುದರಿಂದ ಆ ನಿಯಮ-ಉಪನಿಯಮಗಳನ್ನು ಪರೀಕ್ಷಿಸುವುದು ನಮ್ಮ ಪರಮಕರ್ತವ್ಯವಾಗಿದೆ.

* ಶ್ರೀ ಕಸ್ತೂರಿಮಲ್ ಬಾಂಠಿಯಾ ಬಿ.ಕಾಮ್ ಅವರು ಹಿಂದಿಯಲ್ಲಿ ಬರೆದ ಲೇಖನದ ಅನುವಾದ ಇದು.

★

ಮಾನವ ಸಮಾಜದಲ್ಲಿ ಮದುವೆ ಮಹತ್ತ್ವವಾದುದು. ಆದರೆ ರೂಪುಗೊಂಡು ನಿಂತ ಮದುವೆ ಮೂಢಧರ್ಮದ ರೂಢಿಗಳೂ, ಆಚಾರನಿಷ್ಠೆಯ ಹುಚ್ಚೂ ಸೇರಿ, ಬಿಟ್ಟವೆ. ಸುಸಂತಾನಕ್ಕೂ, ಶ್ಯಕವೆನಿಸಿದ್ದ ಮದುವೆಯಿಂದು ಕಾರಣವಾಗುತ್ತ ನಡೆದಿದೆ. ವನ್ನೇನೂ ಮಾಡ

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ *

ನಾವು ಈಗ ದೊಡ್ಡದೊಂದು ಅಪಾರ್ಥದಲ್ಲಿ ಮುಳುಗಿದ್ದೇವೆ. ಅದೆಂತೆಂದರೆ: ನಾವು ಆದರ್ಶವನ್ನು ಹಿಂಬಾಲಿಸುತ್ತ, ಕರ್ತವ್ಯವನ್ನೇ ಮರೆಯುತ್ತಿದ್ದೇವೆ. '**ಆದರ್ಶ**' ಮತ್ತು '**ಕರ್ತವ್ಯ**' ಎರಡೂ ಒಂದೇ ಅಲ್ಲ—ಇದನ್ನು ನಾವು ತಿಳಿದಿರುವುದಿಲ್ಲ, ಅಥವಾ ತಿಳಿದಿದ್ದರೂ ಅದನ್ನು ಮರೆಯುತ್ತಿದ್ದೇವೆ. ಯಾವುದರ ರೂಪು ಮತ್ತು ಗುಣಗಳನ್ನು ಅನುಕರಿಸಬೇಕೋ ಅದೇ '**ಆದರ್ಶ**'! ಮಾಡಲು ಯೋಗ್ಯವಾದ ಕಾರ್ಯ, ಧರ್ಮ ಇದು **ಕರ್ತವ್ಯದ** ವ್ಯಾಖ್ಯೆ! ನಾವು ತಿಳಿದಿರುವಂತೆ ಈ ಎರಡೂ ಶಬ್ದಗಳ ಅರ್ಥವು ಸಮಾನವಾಗಿಯೆ ಇದ್ದಲ್ಲಿ, ಎರಡಕ್ಕೂ ಭಿನ್ನಭಿನ್ನವಾದ ವ್ಯಾಖ್ಯೆಗಳಿರುವ ಸಂಭವವಿರುತ್ತಿರಲಿಲ್ಲ. ಮಾಡಲು ಯೋಗ್ಯವಾದ ಕಾರ್ಯವು 'ಕರ್ತವ್ಯ'ವಾಗಿ, 'ಆದರ್ಶ'ವ ಕೇವಲ 'ಅನುಕರಣೀಯ'ವೆಂದು ಹೇಳಲಾಗಿದೆ. ಅನುಕರಣವು ಆಗಾಗ ಅಸಂಭವವು ಸಹ ಆಗುವುದೆನ್ನುವುದನ್ನು ಎಲ್ಲರೂ ಒಪ್ಪುವರು. ಆದುದರಿಂದ ಆದರ್ಶವು ಆಗಾಗ ಅಸಂಭವಕಾರ್ಯವಾಗುತ್ತದೆ. ನಾವು

ಕೇವಲ ರೂ. ೪-೧೦-೦ ಕ್ಕೆ ೨೦ ಗಡಿಯಾರಗಳು



ಹದಿನೆಂಟು (18) ದಮ್ಮಿ ಕೈ ಗಡಿಯಾರಗಳು, ಒಂದು (1) ನಿಜವಾದ 36 ಗಂಟೆಗಳು ನಡೆಯುವ ಗಟ್ಟಿಗಡಿತವಾದ, ಬಾಳಿಕೆ ಬರುವ, ಸರಿಯಾದ ರೈಲ್ವೆ ರೆಗ್ಯುಲೇಟರ್ ಜೇಬಿ ಗಡಿಯಾರ. 10 ವರ್ಷ ಗ್ಯಾರಂಟಿ. ಈ ಗಡಿಯಾರವನ್ನು ಹೆಚ್ಚಾಗಿ ಯೂರೋಪಿನಿಂದಲೇ ನೇರವಾಗಿ ಆಮದು ಮಾಡಿದ್ದೇವೆ. ಈ ರಿಯಾಯಿತಿ ದರದಲ್ಲಿ ಕೇವಲ 10,000 ಗಡಿಯಾರಗಳನ್ನು ಮಾತ್ರ ಮಾರಲು ನಿಶ್ಚಯಿಸಿದ್ದೇವೆ. ಬೇಗ ಬರೆದು ಒಂದು ಸೆಟ್ಟನ್ನು ತರಿಸಿಕೊಳ್ಳಿರಿ. ಈ ಸುವರ್ಣಾವಕಾಶವನ್ನು ಬಿಡಬೇಡಿರಿ. ಈ ಗಡಿಯಾರಗಳ ಜೊತೆಗೆ 14 ಕ್ಯಾರಟ್ ಚಿನ್ನದ ಮುಲಾಮಿನ ಮುಳ್ಳಿರುವ ಫೌಂಟನ್ ಪೆನ್, ನೈಜವಾದ ಸನ್-ಗಾಗಲ್ ಮತ್ತು ಫ್ಯಾನ್ಸಿ ಮುತ್ತಿನ ಸರಗಳು ಉಚಿತವಾಗಿ ಕೊಡಲಾಗುವುದು. ಇಷ್ಟವಿಲ್ಲದಿದ್ದಲ್ಲಿ ಹಣ ವಾಪಸ್, ಪೋಸ್ಟ್ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

London Commercial Co. (J. M. D)
Post Box No. 27, AMRITSAR (India)

ಆದರೆ ಅದು ಸ್ವಚ್ಛಂದವಾಗಿರುವುದರಿಂದ ಅನವಸ್ಥೆಯಾಗುವುದು. ಅದಕ್ಕೆ ನೀತಿ-ನಿಯಮಗಳ ಬಂಧನಗಳ ಆವಶ್ಯಕತೆಯುಂಟಾಯಿತು. ಅದನ್ನೇ ಸಂಯಮದ ಆವಶ್ಯಕತೆ ಎಂದು ಬೇಕಾದರೂ ಹೇಳಬಹುದು. ನನ್ನ ಅಭಿಪ್ರಾಯವೇನೆಂದರೆ, ನಾನಾ ಕಾಲಗಳಲ್ಲಿ ನಾನಾ ದೇಶಗಳಲ್ಲಿ ಮಾನವಜಾತಿಯು, ಈ ಸಂಭೋಗಕ್ಕೆ ಒಂದು ಮಿತ ಆವಶ್ಯಕತೆಯುಂಟೆಂದು ತಿಳಿದು ಅದನ್ನು ನಾನಾ ರೀತಿಯಲ್ಲಿ ಪ್ರಯೋಗಿಸಿರಬಹುದು. ವಿವಾಹವೂ ಅಂತಹ ಒಂದು ಪ್ರಯೋಗವೇ ಆಗಿದೆ. ಆದರೆ ಈ ಪ್ರಯೋಗ ನಡೆದುದು ಸಂಭೋಗಕ್ಕೆ ಮಾತ್ರವಲ್ಲ: ಸಂಭೋಗವನ್ನು ಸಂಯತ ಮಾಡುವುದಕ್ಕಾಗಿ!.. ಒಂದು ಸಾಮಾಜಿಕ ಕರ್ತವ್ಯ ಪ್ರೀತಿಯ ಅರ್ಥವೇ ವಿವಾಹವಿಧಾನ."

ವಿವಾಹವು ಯಾವಾಗಲೂ ಒಂದು ಸಾಮಾಜಿಕ ಸಂಸ್ಕಾರವೇ ಹೊರತು, ಧಾರ್ಮಿಕವಲ್ಲವೆಂಬುದು ಇದರಿಂದಲೂ ಸಿದ್ಧವಾಗುತ್ತದೆ. ಮೊದಲು ವಿವಾಹವು ನಡೆದು, ಅನಂತರ ಅದರ ಧಾರ್ಮಿಕ ವಿಧಾನ ಉಂಟಾಯಿತು. ಎಂದರೆ ವಿವಾಹದ ಸಾಮಾಜಿಕ ಪದ್ಧತಿಯು ಮೊದಲಿನಿಂದ ಪ್ರಚಾರದಲ್ಲಿದೆ. ಅನಂತರ ಇಂದಿನ ಪ್ರಚಲಿತ ಧಾರ್ಮಿಕ ಉಡುಪನ್ನು ಅದಕ್ಕೆ ತೊಡಿಸಲಾಗಿದೆ. "ವಿವಾಹವು ಶಾಸನವಿಧಾನದಿಂದ ಸೃಷ್ಟಿಯಾದುದೇನಲ್ಲ"ವೆಂದೂ 'ವಿಧಾನವೇ ವಿವಾಹದ ಸೃಷ್ಟಿ'ಯೆಂದೂ ಒಬ್ಬ ಇಂಗ್ಲಿಷ್ ಲೇಖಕನ ಅಭಿಪ್ರಾಯ. ನಮ್ಮ ಹಿಂದು ಇತಿಹಾಸ-ಗ್ರಂಥಗಳಲ್ಲಿ ಕೂಡ ಇದಕ್ಕೆ ಬೆಂಬಲವಿದೆ. ಸುಪ್ರಸಿದ್ಧ ಇತಿಹಾಸ ಲೇಖಕರಾದ ರಾ. ಬ. ಸಿ. ವಿ. ವೈದ್ಯರ 'ಮಹಾಭಾರತ ಮೀಮಾಂಸೆ' (ಪುಟ ೩೧೮)ಯಲ್ಲಿ ಈ ರೀತಿ ಇದೆ: "ಎಲ್ಲ ಸಮಾಜಗಳ ಉತ್ಕ್ರಾಂತಿಯ ಇತಿಹಾಸದಲ್ಲಿಯೂ, ಆ ಸಮಾಜದಲ್ಲಿ ವಿವಾಹದ ಬಂಧನವು ಸಂಪೂರ್ಣವಾಗಿ ಇರದೆ ಇದ್ದಂತಹ ಕಾಲವು ಇದ್ದೇ ಇರಬೇಕು. ಭಾರತೀಯ ಆರ್ಯಸಮಾಜದ ಸ್ಥಿತಿಯು ಈ ರೀತಿ ಇದ್ದಿತೆಂದು ಮಹಾಭಾರತದಲ್ಲಿದೆ. ಇದು ಕೇವಲ ಕಲ್ಪನೆಯೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಆದಿಪರ್ವದ ೧೨೨ನೆಯ ಅಧ್ಯಾಯದಲ್ಲಿ ಈ ರೀತಿ ಇದೆ:—ಉದ್ದಾಲಕ ಋಷಿಯ ಮಗ ಶ್ವೇತಕೇತುವು, ವಿವಾಹದ ಈಗಿನ ಮರ್ಯಾದೆಯನ್ನು ಸ್ಥಾಪಿಸಿದನು. ಆತನ ತಾಯಿಯ ಕೈಯನ್ನು ಯಾರೋ ಒಬ್ಬ ಋಷಿಯು ಹಿಡಿದುಬಿಟ್ಟನಂತೆ! ಆದುದರಿಂದ ಅವನಿಗೆ ಸಿಟ್ಟು ಬಂದು ಈ ಪದ್ಧತಿಯನ್ನು ಜಾರಿಗೆ ತಂದನು." ಮೇಲ್ಕಂಡ ಲೇಖಕರು ಉಪನಿಷತ್ತಿನಿಂದ ಸತ್ಯಕಾಮ-ಜಾಬಾಲಿಕೆಯರ ಉದಾಹರಣೆಯನ್ನು ತಮ್ಮ ಅಭಿಪ್ರಾಯದ ಸಮರ್ಥನೆಯ ಬಗ್ಗೆ ಕೊಟ್ಟಿರುವರು. ಜಾಬಾಲಿಯ ತಾಯಿಯು ಆ ಹುಡುಗನು ಯಾರ ಮಗನೆಂಬುದನ್ನು ಹೇಳಲಾರದವಳಾಗಿದ್ದಳು. ಆದರೆ ಹುಡುಗನು ನಿಜಹೇಳಿಬಿಟ್ಟನು. ಆದುದರಿಂದ ಋಷಿಯು — ಅವನ ಗುರುವು— ಅವನು ಬ್ರಾಹ್ಮಣನ ಮಗನೆಂದೇ ನಿಶ್ಚಯಿಸಿದನು. ಯಾಕೆಂದರೆ ಯಾರಲ್ಲಿ ಶಾಂತಿ, ದಯೆ, ದಾನ, ಸತ್ಯ, ತಪ ಮತ್ತು ಧರ್ಮವಿರುವುದೋ ಅವನೇ ಬ್ರಾಹ್ಮಣನೆಂಬುವ ಮಾನ್ಯತೆಯು ಆಗ ಇದ್ದಿತು.

ತಾತ್ಪರ್ಯವೇನೆಂದರೆ:— ವಿವಾಹವು—ಇದರ ಇನ್ನೊಂದು ಅರ್ಥವು ಸಂತಾನೋತ್ಪಾದನೆಯ ಕಾರ್ಯ— ಸಮಾಜದಲ್ಲಿ ಮೊದಲು ಪ್ರಚಾರದಲ್ಲಿ ಬಂದಿತು. ಆ ಕಾರ್ಯದಲ್ಲಿ, ಹಿಂದಿನಿಂದ ತೊಡರುಗಳು ಬಂದಂತೆಲ್ಲ, ಅವುಗಳನ್ನು ನಿವಾರಿಸಲು ನಿಯಮಗಳ ರಚನೆಯಾಯಿತು. ಬರು-ಬರುತ್ತ ಅದರದೊಂದು ದೊಡ್ಡ ಶಾಸ್ತ್ರವೇ ಆಗಿ, ನಮ್ಮನ್ನು ನಾಲ್ಕೂ ಕಡೆಗಳಿಂದ ಬಲವಾಗಿ ಬಂಧಿಸುವ ಒಂದು ಶೃಂಖಲೆಯಂತಾಗಿಬಿಟ್ಟಿತು.

ನಾವು ಪಾಶ್ಚಾತ್ಯ ದೇಶಗಳ ಇತಿಹಾಸದ ಸಾಕ್ಷಿಯನ್ನೂ ಕೊಡಬಯಸುವುದಿಲ್ಲ. ನಮ್ಮ ಧರ್ಮಶಾಸ್ತ್ರವೇ ವಿವಾಹ ಕಾರ್ಯವು ಎಂಟುರೀತಿಯಿಂದ ಸಂಪನ್ನವಾಗುವುದೆಂದು ಹೇಳುತ್ತಿದೆ. ಅವುಗಳಲ್ಲಿ ಇಂದು ನಾಲ್ಕು ಧರ್ಮಾನುಕೂಲವೆನಿಸುವವೂ, ನಾಲ್ಕು ಧರ್ಮಪ್ರತಿಕೂಲವೆನಿಸುವವೂ ಆಗಿ ಪರಿಗಣಿಸಲ್ಪಟ್ಟಿವೆಯಾದರೂ, ನಮ್ಮ ಇತಿಹಾಸದಲ್ಲಿ ಅವುಗಳ ಚರ್ಚೆ

ಯಿಲ್ಲ. ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ಮತ್ತು ದೈವ ಈ ನಾಲ್ಕು ಧರ್ಮವಿವಾಹಗಳು. ಮಹಾಭಾರತದಲ್ಲಿ ಇವುಗಳ ಸ್ಥಾನದಲ್ಲಿ ಆರ್ಷ ಮತ್ತು ದೈವಗಳನ್ನು ಬ್ರಾಹ್ಮದಲ್ಲಿಯೇ ಅಂತರ್ಭಾವಮಾಡಿ, ಧರ್ಮವಿವಾಹದಲ್ಲಿ ಬ್ರಾಹ್ಮ ಮತ್ತು ಕ್ಷತ್ರಿಯ ಈ ಎರಡೇ ಭೇದಗಳನ್ನು ಮಾಡಲಾಗಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಧರ್ಮವಿವಾಹಗಳ ವಿಚಾರವಾಗಿ ಈ ರೀತಿ ಬರೆದಿರುವನು:—

೧. ಕನ್ಯೆಯನ್ನು ಉತ್ತಮವಾಗಿ ಸಿಂಗರಿಸಿ ವಿವಾಹಮಾಡುವುದು **ಬ್ರಾಹ್ಮ-ವಿವಾಹವಾಗುವುದು.**

೨. 'ನಾವಿಬ್ಬರೂ ಪರಸ್ಪರವಾಗಿ ಸೇರಿಕೊಂಡು ಧರ್ಮವನ್ನು ಆಚರಿಸುತ್ತೇವೆ' ಎಂದು ಕನ್ಯಾ-ವರರಿಬ್ಬರೂ ನಿಯಮಮಾಡಿಕೊಂಡು ವಿವಾಹವಾಗುವುದು **ಪ್ರಾಜಾಪತ್ಯ ವಿವಾಹವು.**

೩. ವೇದಿಕೆಯ ಬಳಿ ಕುಳಿತು ಋತ್ವಿಜರಿಗೆ ಕನ್ಯೆಯನ್ನು ಕೊಡುವುದು **ಆರ್ಷ-ವಿವಾಹ.**

ಕನ್ಯೆಯ ತಂದೆಯು ವರನನ್ನು ಕರೆದು ಧನದಾನಾದಿಗಳಿಂದ ಸತ್ಕರಿಸಿ ಕನ್ಯೆಯನ್ನು ಕೊಟ್ಟಲ್ಲಿ ಅದು **ಬ್ರಾಹ್ಮವಿವಾಹವೆಂದು** ಮಹಾಭಾರತದಲ್ಲಿ ಸಹ ಹೇಳಿದೆ. ಇದು ಬ್ರಾಹ್ಮಣರಲ್ಲಿ ವಿಶೇಷ ಪ್ರಚಾರದಲ್ಲಿದ್ದ ಕಾರಣ ಈ ಹೆಸರು ಬಂದಿರಬೇಕು. ಕ್ಷಾತ್ರ-ವಿವಾಹದ ವಿವರಣೆಯು ಮಹಾಭಾರತದಲ್ಲಿ ಇಲ್ಲ. ಆದರೆ ಪಣವನ್ನೊಡ್ಡಿ ವಿವಾಹ ಮಾಡುವ ಪದ್ಧತಿಯು ಆಗ ಕ್ಷತ್ರಿಯರಲ್ಲಿ ಇತ್ತು. ಸೀತೆ, ದ್ರೌಪದಿ, ಮುಂತಾದವರ ವಿವಾಹವು ಇದಕ್ಕೆ ಉದಾಹರಣೆ. ಕ್ಷತ್ರಿಯನು ಆಗ ಯಾರ ಬಳಿಗೂ ಹೋಗಿ ಕನ್ಯೆಯನ್ನು ಕೇಳುತ್ತಿರಲಿಲ್ಲ.

ತಂದೆ-ತಾಯಿಗಳ ಸಲಹೆಯಿಲ್ಲದೆ, ಕನ್ಯಾ-ವರರಿಬ್ಬರೂ ದಾಂಪತ್ಯಾನುಸರಣೆ ಮಾಡುವುದು **ಗಾಂಧರ್ವವಿವಾಹ.** ಕನ್ಯೆಯ ತಂದೆ ಮುಂತಾದವರಿಗೆ ಧನವನ್ನು ಕೊಟ್ಟು ಕನ್ಯೆಯನ್ನು ತರುವುದು **ಆಸುರೀ ವಿವಾಹ,** ಕನ್ಯೆಯನ್ನು ಬಲವಂತದಿಂದ ತಂದು ವಿವಾಹವಾಗುವುದು **ರಾಕ್ಷಸ-ವಿವಾಹ,** ನಿದ್ರಿಸುತ್ತಿರುವ ಕನ್ಯೆಯನ್ನು ತಂದು ವಿವಾಹವಾಗುವುದು **ಪೈಶಾಚಿಕ-ವಿವಾಹ** ಎನಿಸಿಕೊಳ್ಳುವುವು. ಪಾಶ್ಚಾತ್ಯ ದೇಶಗಳಲ್ಲಿ ಇಂದಿಗೂ ಗಾಂಧರ್ವ ವಿವಾಹಗಳು ನಡೆಯುತ್ತಿವೆ. ಆದರೆ ಧರ್ಮಗುರುಗಳೆದುರಿನಲ್ಲಿ, ಅಥವಾ ಸಿವಿಲ್ ಮ್ಯಾರೇಜ್ ರಿಜಿಸ್ಟ್ರಾರರ ಮುಂದೆ, ರಿಜಿಸ್ಟರ್ ಆಗುವ ನಿಯಮವಿರುವುದರಿಂದ ಅದೂ ಧಾರ್ಮಿಕ-ವಿವಾಹವೇ ಆಯಿತು. ವರನ ತಂದೆಗೆ ಪ್ರತಿಜ್ಞಾಬದ್ಧನಾಗಿ ಧನ ಕೊಟ್ಟು ಆಗುವ ವಿವಾಹಪದ್ಧತಿ ಉಚ್ಚಜಾತಿಯವರಲ್ಲಿ ಈಗಲೂ ಇದೆ. ಮೇಲೆ ವಿವರಿಸಲ್ಪಟ್ಟಿರುವ ಎಂಟು ವಿವಾಹಪದ್ಧತಿಗಳಲ್ಲಿ ಯಾವುದಕ್ಕೆ ಸೇರದಿದ್ದರೂ, ಇದು **ಈಗ ಸರ್ವಮಾನ್ಯವಾಗಿರುವುದು ಆಶ್ಚರ್ಯಕರವಾದುದಾಗಿದೆ.** ಇಂತಹ ವಿವಾಹವನ್ನು ಬ್ರಾಹ್ಮ-ವಿವಾಹವೆಂದು ಹೇಳುವುದು, ಒಪ್ಪಿಕೊಳ್ಳುವುದು **ಕಲಿಯುಗದ ಧರ್ಮಾಭಿಮಾನಿಗಳ ಧರ್ಮವೆಂದಲ್ಲದೆ ಮತ್ತೇನೆನ್ನಬೇಕು?** ವಿವಾಹಗಳ ವಿಸ್ತೃತ ವರ್ಣನೆಯನ್ನು ಈ ರೀತಿ ಮಾಡುವುದರ ಉದ್ದೇಶವೇನೆಂದರೆ:—ನಮ್ಮ ಪೂರ್ವಜ ಋಷಿಗಳು ದಾಂಪತ್ಯಾನುಸರಣದ ಬೇರೆ ಬೇರೆ ಪದ್ಧತಿಗಳನ್ನು ಬೇರೆ ಬೇರೆ ವರ್ಣಗಳಲ್ಲಿ ಪ್ರಚಲಿತ ಮಾಡಿ, ಧರ್ಮಗ್ರಂಥಗಳಲ್ಲಿ ಬರೆದಿಟ್ಟರು. ಇಂದು ಯಾವ ಪದ್ಧತಿಗಳನ್ನು ಅಧಾರ್ಮಿಕ ಅಥವಾ ಅನೈತಿಕವೆಂದು ಕರೆಯಲು ನಾವು ಸಾಹಸಪಡುತ್ತಿರುವೆವೋ, ಅದೇ ನಮ್ಮ ಪತನಕ್ಕೆ ಮುಖ್ಯ ಕಾರಣವಾಗಿದೆ.

ದಾಂಪತ್ಯಾನುಸರಣದ ಪ್ರಚಲಿತ ಪದ್ಧತಿಗಳನ್ನು ಬೇರೆ ಬೇರೆ ಹೆಸರಿನಿಂದ ಸ್ಮಾರ್ತ-ಗ್ರಂಥಗಳಲ್ಲಿ ಮಾನ್ಯ ಮಾಡಿರುವುದಕ್ಕೆ ಕಾರಣವನ್ನು ಇಲ್ಲಿ ಹುಡುಕುವುದು ಅಗತ್ಯವಿಲ್ಲ. ಈ ಪದ್ಧತಿಗಳು ಧಾರ್ಮಿಕವಾದಂತೆ ನಮ್ಮಲ್ಲಿ ಸಗೋತ್ರ, ಸಪರಿವಾರ ವಿವಾಹಗಳೂ ಒಂದಾನೊಂದು ಕಾಲದಲ್ಲಿ ಮಾನ್ಯವೇ ಆಗಿದ್ದುವು. ಇದನ್ನು ನಾವು ತಿರಸ್ಕರಿಸುವುದಾದರೆ, ನಾವು ನಮ್ಮ ಸೋದರಮಾವ, ಸೋದರತ್ತೆ, ಚಿಕ್ಕಪ್ಪ ಮೊದಲಾದವರ ಪುತ್ರಿಯರೊಡನೆ ವಿವಾಹವಾಗಲು ದೊರೆಯುವ ಪ್ರಮಾಣಗಳನ್ನು ತೆಗೆದುಹಾಕಬೇಕಾಗುವುದು. ಇಂದಿಗೂ ಎಷ್ಟೋ ಜನರಲ್ಲಿ ಮಾತೃಗೋತ್ರದಲ್ಲಿ ವಿವಾಹವು ತ್ಯಾಜ್ಯವಾಗಿಲ್ಲ. ದಾಕ್ಷಿಣಾತ್ಯರಲ್ಲಿ ಮಾತುಳಕನ್ಯಾ ಪರಿಣಯದ ಪದ್ಧತಿಯೂ ಪ್ರಚಲಿತವಾಗಿದೆ. ಸಮಾವರ್ತನದಲ್ಲಿ ವಟುವು ಕಾಶೀಯಾತ್ರೆಗೆ ಹೋಗುವಾಗ, ಸೋದರಮಾವನು ತನ್ನ ಮಗಳನ್ನು ಕೊಡುವೆನೆಂದು ಹೇಳಿ ಅವನನ್ನು ತಡೆಯುವನು. ಪಿತೃಕುಲ, ಪಿತೃ-ಗೋತ್ರದಂತೆಯೇ ಮಾತೃಕುಲ, ಮಾತೃ-ಗೋತ್ರಗಳು ಸಹ ಸಗೋತ್ರವೇ. ನಮ್ಮ ಭಾರತೀಯ ಸಮಾಜವು ಪಿತೃಕುಲವಾದೀ ಪರಂಪರೆಯಲ್ಲಿ ಸಂಘಟಿತವಾಗಿರುವುದರಿಂದಲೆ, ಪಿತೃಗೋತ್ರವನ್ನು ಸಗೋತ್ರವೆಂದು ಒಪ್ಪಿರುವುದು; ಮತ್ತು ಇಂತಹ ಸಗೋತ್ರವಿವಾಹಗಳು ಶಾಸ್ತ್ರವಿಹಿತವೆಂದು ಒಪ್ಪಿಕೊಳ್ಳದಿರುವ ನಿಯಮವು ಪ್ರಾಚೀನ ಕಾಲಕ್ಕೇ ಹೋಯಿತು.

ನಾವು ನಮ್ಮ ನಮ್ಮದೇ ಜಾತಿಯ ಸಂಕುಚಿತ ದೃಷ್ಟಿಕೋನವನ್ನು ಬಿಟ್ಟು, ನಮ್ಮ ದೇಶದ, ಸಮಗ್ರ ಜಗತ್ತಿನ ಸಭ್ಯಜಾತಿಗಳ ವೈವಾಹಿಕ ಪದ್ಧತಿಗಳನ್ನು ಅವಲೋಕಿಸಿದರೆ, ಚಿಕ್ಕಪ್ಪನ ಮಕ್ಕಳ, ಅಕ್ಕನ ಮಕ್ಕಳ ಪರಸ್ಪರ ವಿವಾಹವು ಸಾರ್ವತ್ರಿಕವಾಗಿದೆಯೆಂಬುದು ತಿಳಿಯುವುದು. ಇಷ್ಟೇ ಅಲ್ಲ, ಸ್ವಂತ ಅಣ್ಣ ತಂಗಿಯರೂ ವಿವಾಹವಾಗುವ ಜಾತಿಗಳಿಷ್ಟಿಲ್ಲ ಈ ಜಗತ್ತಿನಲ್ಲಿ

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೬ ಆಣೆ.

ಒಬ್ಬ ಆಂಗ್ಲ ಲೇಖಕನು ಹೇಳುವುದನ್ನು ಕೇಳಿ:— ಅಣ್ಣ ತಂಗಿಯರ ದಾಂಪತ್ಯಾನುಸರಣದಿಂದ ಹೀನ ಸಂತತಿಯು ಖಂಡಿತ ಆಗುವುದಿಲ್ಲ. ಉದಾಹರಣೆಗೆ– ಈಜಿಪ್ಟಿನ ಪ್ರಾಚೀನ ಫೈರೋ (Pharaoh) ರಾಜ ಮನೆತನವು ಅನೇಕ ತಲೆಗಳ ವರೆಗೆ ಈ ರೀತಿ ಮಾಡಿಯು ಸಹ ತನ್ನ ವೀರತ್ವ ಮತ್ತೂ ಮೇಧಾಶಕ್ತಿಯಿಂದ ಜಗತ್ತಿಗೇ ಮಾದರಿಯಾಗಿದೆ. ದಕ್ಷಿಣ ಅಮೇರಿಕದ ಪೆರು (Peru)ದೇಶದ ಇನ್ಕಾಸ್ (Incas) ಎಂಬ ಹೆಸರಿನ ರಾಜ್ಯಭೋಗಿ– ಮಹಂತ ಜಾತಿಯು, ಈ ರೀತಿ ಮಾಡಿ ಅಸಾಧಾರಣ ವೀರತ್ವ ಮತ್ತು ಮೇಧಾಶಕ್ತಿಯನ್ನುಂಟು ಮಾಡಿದೆ. ಸಹೋದರ--ಸಹೋದರಿಯರ ಸಂಯೋಗವು ನಮ್ಮ ದೃಷ್ಟಿಯಲ್ಲಿ ಮಾತ್ರ ಸಂಸ್ಕೃತಿಗೆ ವಿರೋಧವಾದುದು.

ನಾವು ಸಂತಾನವಿಜ್ಞಾನದ ನಿಯಮವನ್ನು ಮರೆತು ರೂಢಿಯನ್ನು ನಂಬಿರುವೆವು- ಅದೂ ಹಿಂದೆ ಇದ್ದಂತೆಯೇ. ತಂದೆ–ತಾಯಿಗಳಿಗನುರೂಪವಾಗಿಯೆ ಸಂತಾನವೂ ಆಗುವುದೆಂಬುದು ಸಂತಾನ ವಿಜ್ಞಾನದ ನಿಯಮ. ನಿರ್ಬಲ ಅಥವಾ ಮೂರ್ಖ ತಂದೆ–ತಾಯಿಗಳ ಸಂತಾನವು ಸಬಲವೂ ಪಾಂಡಿತ್ಯವುಳ್ಳುದೂ ಆಗಲಾರದು. ಆದುದರಿಂದಲೆ ಪ್ರತಿಯೊಬ್ಬ ಯುವಕ–ಯುವತಿಯೂ ವಂಶಪರಂಪರೆ, ಪರಿಸ್ಥಿತಿಗಳ ಪೂರ್ಣಜ್ಞಾನವನ್ನು ಹೊಂದುವುದು ಅತ್ಯಗತ್ಯ.

ಆಚಾರ್ಯ ವಾತ್ಸಾಯನರು ಈ ರೀತಿ ಬರೆದಿರುವರು:— "ಬುದ್ಧಿವಂತ ಯುವಕನು ಕುಲೀನಳೂ, ತಂದೆತಾಯಿಗಳನ್ನುಳ್ಳವಳೂ, ತನಗಿಂತ ೩ ವರ್ಷ ಕಡಿಮೆ ವಯಸ್ಸಿನವಳೂ, ಪಿತೃಕುಲವು ಸುಂದರವಾಗುಳ್ಳವಳೂ, ಸದಾಚಾರಿಯೂ, ಧನಿಕಳೂ, ತುಂಬ ಪರಿವಾರವುಳ್ಳವಳೂ, ರೂಪವಂತಳೂ, ಶೀಲವಂತಳೂ, ಸೌಭಾಗ್ಯದ ಲಕ್ಷಣಗಳನ್ನುಳ್ಳವಳೂ, ನಿರೋಗಿಯೂ, ದೂಷಿತ ಅಂಗಾಂಗಗಳಿಲ್ಲದವಳೂ, ಶರೀರದ ಪ್ರತಿಯೊಂದು ಅಂಗವೂ ಹೃಷ್ಟಪುಷ್ಟವಾಗಿರುವವಳೂ ಆದ ಕನ್ಯೆಯನ್ನು ವಿವಾಹವಾಗಬೇಕು."

ಕನ್ಯೆಯ ವಿಷಯದಲ್ಲಿ ಯಾವ ವರನಿಗೇ ಆಗಲಿ, ಇಷ್ಟೊಂದು ವಿಸ್ತೃತ ತಿಳಿವಳಿಕೆಯು ಅಪರಿಚಿತ ಸಂಬಂಧದಲ್ಲುಂಟಾಗುವುದು ಅಸಂಭವ. ಹತ್ತಿರದ ಸಂಬಂಧಿಗಳಲ್ಲಿ ಮಾತ್ರ ಇದು ಸಾಧ್ಯ, ಅಥವಾ ಯಾವಾಗಲೂ ಜೊತೆಯಲ್ಲಿರಬೇಕು. ಈ ರೀತಿ ಯಾವಾಗಲೂ ಜೊತೆಯಲ್ಲಿರುವ ಬಾಲಕ–ಬಾಲಕಿಯರಲ್ಲಿ ಕ್ರಮೇಣ ಪರಸ್ಪರ ಪ್ರೇಮವುಂಟಾಗಿ, ಅವರ ದಾಂಪತ್ಯಜೀವನವು ಸುಖಮಯವಾಗಿರುವುದು.

ಸಮುಚಿತ ಸಂಬಂಧದ ತೊಂದರೆಯನ್ನು ಧರ್ಮಶಾಸ್ತ್ರ ಮತ್ತು ಜನರ ಆಗ್ರಹವು ಮತ್ತೂ ಹೆಚ್ಚು ಮಾಡಿ, ಬಾಲಿಕೆಯು ಅವಿವಾಹಿತಳಾಗಿಯೇ ಇರುವಷ್ಟು ಬಿಗಿಯಾಗಿ ಮಾಡಿದೆ. ಆಕೆಗೆ ಪರಲೋಕ ಪ್ರಾಪ್ತಿ ಇಲ್ಲವಂತೆ, ಆಕೆಯ ತಾಯಿ–ತಂದೆಗಳೂ ಪಾಪಕ್ಕೆ ಭಾಗಿಗಳಾಗುವರಂತೆ! ಸ್ತ್ರೀಯು ಅವಿವಾಹಿತಳಾಗಿದ್ದು ತಪಸ್ಸು ಮಾಡಿದರೂ ಪರಲೋಕ ಪ್ರಾಪ್ತಿ ಇಲ್ಲವೆಂದು ಮಹಾಭಾರತದಲ್ಲಿದೆ. ಈಗಿನ ಕಲಿಕಾಲದಲ್ಲಿ ಯಾವ ಹುಡುಗಿ ತಾನೇ ಅವಿವಾಹಿತಳಾಗಿ ಇದ್ದಾಳು!

'ಶಾಸ್ತ್ರಗಳ–ಆಚಾರ ಶಾಸ್ತ್ರಗಳ–ವಿಧಾನವು ಯಾವಾಗಲೂ ಸಮಾಜದ ಉನ್ನತಿಗಾಗಿಯೆ ಇರುವುದು– ಇದನ್ನು ಎಲ್ಲರೂ ಒಪ್ಪುವರು. ಆಗಿನ ಕಾಲದಲ್ಲಿ ಈ ದೇಶದ ಪ್ರಜಾಭಿವೃದ್ಧಿಯು ಅಗತ್ಯವಾಗಿ ಬಹಳವಾಗಿ ಇದ್ದಿರಬೇಕು. ಆದುದರಿಂದಲೇ ಈ ನಿಯಮವನ್ನು ಮಾಡಿರಬೇಕು. ಅಷ್ಟೇ ಏಕೆ? ಭಾರತದಲ್ಲಿ ನಿಯೋಗದ ಮೂಲಕ ಸಂತಾನ ಪಡೆಯುವ ಪದ್ಧತಿಯೂ ಇದ್ದಿತು. ಯುದ್ಧಾದಿ ಕಾರಣಗಳಿಂದ, ಪುರುಷರ ಅಭಾವವುಂಟಾದರೆ, ಸ್ತ್ರೀಯರು ಅವಿವಾಹಿತರಾಗಿರದಂತೆ ಇರುವುದೇ ಧರ್ಮವಾಗುವುದು. ನಮ್ಮ ಧರ್ಮಶಾಸ್ತ್ರಗಳಲ್ಲಿ **ಪುರುಷನಿಗೆ ಮಾತ್ರ ನಾಲ್ಕು ಆಶ್ರಮಗಳ ವ್ಯವಸ್ಥೆಯಿದ್ದು, ಸ್ತ್ರೀಗೆ ಪತಿಸೇವೆಯು ವಿನಾ ಬೇರೆ ಯಾವ ಧರ್ಮವ್ಯವಸ್ಥೆಯೂ ನಿರೂಪಿಸಲ್ಪಟ್ಟಿಲ್ಲ.** ಇಂದಿಗೂ ಸಹ ಕನ್ಯೆಯು ಅಪರಿಣೀತೆಯಾಗಿರದ ನಿಯಮವು ಭಾರತೀಯ ಸಮಾಜದಲ್ಲಿ ಬಹಳ ಕಠಿನತೆಯಿಂದ ಪಾಲಿಸಲ್ಪಡುತ್ತಿದೆ. ಈ ಕಾರಣದಿಂದ ಸಮಾಜದಲ್ಲಿ ವರದಕ್ಷಿಣೆಯ ದುಷ್ಟಪದ್ಧತಿಯು ಭಯಂಕರ ರೂಪವನ್ನು ಧರಿಸಿದೆ. ಅಯೋಗ್ಯ ಸಂಬಂಧದಿಂದ ಹೀನತೆಯು ದಿನದಿನವೂ ವೃದ್ಧಿಯಾಗುತ್ತಿದೆ. ಅವಿವಾಹಿತಳಾದ ಕುಮಾರಿಯು ಮನೆಯಲ್ಲಿರಕೂಡದಾದುದರಿಂದ, ನಾವು ತಿಳಿದೂ ತಿಳಿದೂ ಅಯೋಗ್ಯವೂ ಅನುಚಿತವೂ ಆದ ಸಂಬಂಧವನ್ನು ಸ್ವೀಕರಿಸಲೆ ಬೇಕಾಗುತ್ತದೆ. ಈ ರೀತಿ ಎರಡು ವಿಧವಾದ ನಷ್ಟ-ಕಷ್ಟಗಳಿಗೆ ನಾವು ಗುರಿಯಾಗುತ್ತಿದ್ದೇವೆ. ಎಲ್ಲವನ್ನು ತಿಳಿದೂ ತಿಳಿದೂ ನಾವು ನಮ್ಮ ಪ್ರಿಯಸಂತಾನವನ್ನು ಬಲಿಕೊಡುತ್ತಿದ್ದೇವೆ. ಸಮಾಜದಲ್ಲಿ ಅಯೋಗ್ಯರ ಸಂಖ್ಯೆಯು ವೃದ್ಧಿಯಾಗುವ ದೋಷವನ್ನು ನಾನೇ ಹೊರಬೇಕಾಗಿದೆ. ಇವೆಲ್ಲಕ್ಕೂ ಅತ್ಯಂತ ಮುಖ್ಯವಾದ ಕಾರಣವೇನೆಂದರೆ **ನಮ್ಮ ಪ್ರಾಚೀನ ರೂಢಿಗಳು, ಪರಂಪರಾಗತವಾಗಿ ಬಂದಿರುವ ಪದ್ಧತಿಗಳು.** ಹಿಂದೂ ಸಮಾಜದಲ್ಲಿ ಭ್ರಷ್ಟಾಚಾರವನ್ನು ಸೃಷ್ಟಿಸಬೇಕೆಂಬ ಉದ್ದೇಶದಿಂದಲ್ಲ ಈ ಲೇಖನವನ್ನು ಬರೆದಿರುವುದು. ಸಮಾಜದ ಸದ್ಯದ ಅವಸ್ಥೆಯಲ್ಲಿ, ನಮ್ಮ ಆವಶ್ಯಕತೆಗಳೇನು? ಅವುಗಳಲ್ಲಿಯ ವಿವಾಹವ್ಯವಸ್ಥೆಯಲ್ಲಿ ಯಾವ ಪರಿವರ್ತನೆಯಾಗಬೇಕು!– ಇವೇ ಮುಂತಾದುವುಗಳು ವಿಚಾರಣೀಯವೆಂದು ತಿಳಿದೇ ಈ ಲೇಖನವನ್ನು ಬರೆದಿರುವುದು. ಈ ಲೇಖನದಲ್ಲಿರುವ ಎಷ್ಟೋ ಉದಾಹರಣೆಗಳು ಅಪವಾದ ಸ್ವರೂಪದುವೇ ಆಗಿವೆ, ಆದರೆ ಇತರ ಸಮಾಜಗಳಲ್ಲಂತೂ, ಇವು ಅಪವಾದವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ವಿಚಾರಗಳನ್ನು ನಿಸ್ಸಂಕೋಚ ಮತ್ತು ಶಾಂತಚಿತ್ತತೆಯಿಂದ ವಿಮರ್ಶಿಸುವುದು ಅಗತ್ಯವೆಂದು ಭಾವಿಸುತ್ತೇನೆ.

ಹೆಂಗರುಳು

ಎಲ್ಲರ ಕರುಳೂ ಹೆಂಗರುಳೇ ಆಗಿದ್ದರೆ ಜಗತ್ತಿನಲ್ಲಿ ಎಲ್ಲರ ಬಾಳೂ ರಾಮುವಿನ ಬಾಳೇ ಆಗಬಹುದಾಗಿದ್ದಿತು; ಇಲ್ಲದಿದ್ದರೆ ಜಗತ್ತೆಲ್ಲ ಹುಚ್ಚರ ಆಸ್ಪತ್ರೆಯಾಗಬಹುದಾಗಿದ್ದಿತು. ಆದರೆ ನಿಸರ್ಗವು ಸಂಯಮವೆಂಬ ಇನ್ನೊಂದು ಶಕ್ತಿಯನ್ನೂ ಮಾನವನಿಗಾಗಿ ನಿರ್ಮಿಸಿ ಇಟ್ಟಿದೆ. ಅದರ ಸರಿಯಾದ ಉಪಯೋಗವಾಗಿದ್ದರೆ ರಾಮೂ ತನ್ನ ಎರಡನೆಯ ಮಗುವನ್ನೂ ಪರದೇಶಿಯನ್ನಾಗಿಸುವ ಪ್ರಸಂಗವನ್ನು ತಂದುಕೊಳ್ಳುತ್ತಿರಲಿಲ್ಲ.

(ಸಣ್ಣ ಕತೆ)

★

ಕಲ್ಪನೆ ಇಲ್ಲದ ಕವಿ– ಎಂದರೆ ಅರ್ಥವಿಲ್ಲವೆಂತಲ್ಲ; ಅಸಂಬದ್ಧವೆನಿಸುವುದು; ಅಪದ್ಧ-ಅಮಂಗಳವೆನಿಸುವುದು. ರಾಜ್ಯವಿಲ್ಲದ ರಾಜ, ತಾಯಿಯಿಲ್ಲದ ಮಗು ಎಂದರೆ . . . . ಹಾಗೆ ಹೇಳತಕ್ಕವ ಕವಿಯೊಬ್ಬನೆ. ಅವನಿಗೆ ಕಲ್ಪನೆಯಿದೆ; ಆದರೆ ಅದರ ಅತಿರೇಕವಾಗಿದೆ ಎನ್ನಬಹುದು. ಆದರೆ ಶಾಮುವಿಲ್ಲದ ರಾಮು ಎಂದರೆ . . . . ಒಬ್ಬ ಕವಿ ತನ್ನ ಕಲ್ಪನೆಯನ್ನೆ ಕಳೆದುಕೊಳ್ಳುವ; ತಾಯಿ-ಮಕ್ಕಳನ್ನು ಅಗಲಿಸಿದ ಪಾಪ ಅವನಿಗೆ ತಟ್ಟುವುದು; . . . . ಕಲ್ಪನೆಯಿದ್ದಲ್ಲಿ ಕವಿ ಬೇಕು; ಮಗುವೆಂದಲ್ಲಿ ತಾಯಿಬೇಕು; ರಾಜ್ಯವಿದ್ದಲ್ಲಿ ರಾಜ ಬೇಕು. ನಮ್ಮ ರಾಮು ತನ್ನ ಮಗುವಿನ ತಂದೆಯಾಗಿ– ಹೆಂಡತಿಯ ಸೌಭಾಗ್ಯವಾಗಿ, ಸುಖದಿಂದ ಸಂಸಾರ ಮಾಡುತ್ತ ಉದ್ದಂಡ ಆಯುಷ್ಯಂತನಾಗಬೇಕಾದರೆ, ಶಾಮು ಎಂಬ ಹರಕೆ– ಆಶೀರ್ವಾದ–ಬೇಕು; ಗೆಳೆಯ ಬೇಕು; ಆಪ್ತ ಬೇಕು. ಆದರೆ. . . . ಹೇಗೆ ಬೇಕೆಂಬುದೊಂದು ಮಾತ್ರ ಕಾವ್ಯನ್ಯಾಯ; ಪ್ರಪಂಚನ್ಯಾಯವಲ್ಲ. ಅದೊಂದು ಕವಿಬುದ್ಧಿ; ಸಮಾಜನೀತಿಯಲ್ಲಿ ಒಂದು ಚಿಕ್ಕದಾದ ಕತೆ ಮಾತ್ರ.

ರಾಮು ಕವಿ ಇರಲಿಲ್ಲ; ಎಂದೂ ಇರಲಿಲ್ಲ. ಬುದ್ಧಿಯಿಂದಲೂ ಇರಲಿಲ್ಲ. . ಕಲ್ಪನೆಯಿಂದಲೂ ಇರಲಿಲ್ಲ. ಕವಿಹೃದಯದವನೆಂದು ಆತನ ಶಾಮು ಹೇಳುವ; ನಮಗೆ ತಿಳಿಯದು. ರಾಮುವಿನ ಹೃದಯ ಆತನ ಶಾಮುವಿಗಷ್ಟೇ ಗೊತ್ತು; ನಮಗಿಲ್ಲ. ರಾಮು ಕವಿ ಇದ್ದರೆ. . ಶಾಮುವಿನ ಸಂಭ್ರಮ ಅವನಲ್ಲಿ ಹಿಡಿಸಲಾರದು– ಅದರ ಉಕ್ಕು, ಅರ್ಥ-ರೂಪವನ್ನರಿಯದಿದ್ದ ಗೆಳೆಯನ ಕವಿತ್ವವನ್ನು ಕಂಡಮಾತ್ರದಿಂದ ಹೊರಸೂಸಿ ಗಡಚಿಕ್ಕುತ್ತಿತ್ತೆಂಬುದಿಷ್ಟೆ ನಮಗೆ ಗೊತ್ತು. ಬುದ್ಧಿಗೆ ವಿಕಾಸವಿದೆ, ಝರಿಯಿದೆ, ಹೃದಯಕ್ಕಿಲ್ಲ. ಆದರೆ ನೆಲೆಯಿದೆ. ಒಂದು ಗೋಚರ, ಇನ್ನೊಂದು ಕಾಣದ ಕತ್ತಲೆ. ರಾಮುವಿನ ಹೃದಯವನ್ನು ಬಲ್ಲೆನೆಂದು ಶಾಮು ಹೇಳುವ; ಅದು ಹೇಗೋ ನಾವು ಕಾಣೆವು. ನಮಗೆ ಕತ್ತಲೆ, ಇದ್ದಿರಬಹುದು. . . . ಶಾಮುವಿಗೂ ಒಂದು ಮುಗ್ಧ– ಕವಿಕಲ್ಪನೆ.

ರಾಮು ಒಬ್ಬ ಕರಿಯ ಟೊಣಪ; ಆದರೆ ಶಾಮುವಿಗೊಂದು ಹಸುಗೂಸು ಮಾತ್ರ ಅವನು. . ; ಹಾಗೆ ನೋಡಿಕೊಳ್ಳುವುದರಲ್ಲಿ ಶಾಮುವಿಗೆ ಆಸ್ಥೆ ಬಹಳ. ಅವನನ್ನು –ತಾಯಿ ತಪ್ಪಿಸಿಹೋದ ಆಡಿನ ಮರಿಯೆಂದು ತಿಳಿಯುವುದರಲ್ಲಿ ಶಾಮುವಿಗೊಂದು ಹುಮ್ಮಸ. ರಾಮು ಮಾತನಾಡುವುದು– ನಗುವುದು ಶಾಮುವಿಗೊಂದು ತೊದಲ್ನುಡಿ. ತನ್ನ ರಾಮುವಿನ ಮನಸ್ಸು ಬಲು ಮೃದು; ಅದನ್ನು ಸಂರಕ್ಷಿಸುವವರು ಬೇಕು. ಆದುದರಿಂದಲೆ ಅದರ ಸುತ್ತಲೂ ಕಂಟಿಯಂತೆ... ಯಾವಾಗಲೂ ಶಾಮೂ ಹಬ್ಬಿಕೊಂಡಿರುವ; ಆದರೆ ‘ ಹೂವು ! . . ಕಂಟಿಯಲ್ಲೆ ಉರುಳಿ ಹುಡಿಗೂಡಬಹುದು. . . .’ ಶಾಮು ಈಗ ತಲೆಕೆದರುವ; ತನ್ನ ವಿಚಾರದ ಕ್ರೂರ ಸೂಕ್ಷ್ಮತೆಗೆ ಆ ತಲೆ ಝಾಡಿಸುವ; ತನ್ನ ರಾಮುವನ್ನು ಕಣ್ಣುತುಂಬ ನೋಡಿಕೊಳ್ಳುವ. ದೇವರಿಗೆ ಬೇಡುವ: ‘ ತನ್ನ ರಾಮು ಉದ್ದಂಡ ಆಯುಷ್ಯಂತನಾಗಲಿ ’ ಎಂದು. ದಿನ ಬೆಳಗಾಗಿ ಅರಳಿ– ದಿನ **ಬೆಳಗಾಗಿ** ಸಾಯುವಾಗ ಸಾಯುವ– ಆ ಯಃಕಶ್ಚಿತ ಹೂವಿನ ಕೂಡ ರಾಮುವಿನ ಹೋಲಿಕೆಯು ? ಪರಿಮಳವಿದೆ; ಆದರೆ ಮುಳ್ಳು ಸುಳ್ಳೆ ? ಹೂವಿನ ಉಪಮೆ ಎಂದೂ ಬೇಡವೆನ್ನುವ.

ತನ್ನ ರಾಮು ಎದುರೇ ನಿಂತಿರುವ; ಶಾಮು ಹರುಷ ಮೂರುತಿಯಂತೆ ಪುನಃ ಹರಕೆ ಹೊತ್ತ: “ತನ್ನ ರಾಮು ಉದ್ದಂಡ ಆಯುಷ್ಯಂತನಾಗಲಿ” ಎಂದು.

ರಾಮು ಕೈಯಲ್ಲಿದ್ದ ಕಾಗದ ಚಾಚಿದ. ಕಾಗದ ಸರಿಯಾಗಿ ನಾಲ್ಕು ಭಾಗವಾಗಿ ಮಡಿಸಿದೆ, ಒಂದೊಂದು ಭಾಗದ ನಡುವೆ ಒಂದೊಂದು ದೊಡ್ಡ ಪೂಜೆ. ಒಂದರಲ್ಲಿ ಮೇಲ್ಬದಿಗೆ ಮತ್ತೆರಡು ಸಣ್ಣ ಪೂಜೆ ಇರಿಸಿ ಕೆಳಬದಿಗೆ ‘ **ನನ್ನ ಮಗ** ’ ಎಂದು ಬರೆದಿದೆ. ಇನ್ನೊಂದರಲ್ಲಿ ಬಾಯಿ ಇರುವಲ್ಲಿ ಒಂದು ಸಣ್ಣ ಪೂಜೆ ಇಟ್ಟು,

---

ಶ್ರೀಮಾನ್ ಜಿ. ಎಚ್. ದೇಸಾಯಿ, ಬಿ. ಎ.

ಲಾವಣ್ಯವೇ ಸೌಖ್ಯದ ಸೋಪಾನ



ನಿಮ್ಮ ಮೈ ಮೊಗ-
ಮಲ್ಲಿನಂತೆ ಹೊಳೆಯ
ಬೇಕೆ ?

ನೀವು ಲಾವಣ್ಯ-
ಮೂರ್ತಿಗಳಾಗಬೇಕೆ ?
ಹಾಗಾದರೆ ನಮ್ಮ
ಗಂಧದ ಸಾಬೂನನ್ನು
ಉಪಯೋಗಿಸಿ !

ಮೈಸೂರು ಗಂಧದ ಸಾಬೂನು

ಎಲ್ಲೆಲ್ಲಿಯೂ ಸಿಗುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಕೆಳಕ್ಕೆ '**ನನ್ನ ಹೆಂಡತಿ**' ಎಂದಿದೆ. ಮೂರನೆಯದರಲ್ಲಿ ಹಣೆಯಿರು ವಲ್ಲಿ ಎರಡು ಗೆರೆ ಕೊರೆದು '**ನನ್ನ ತಾಯಿ**' ಎಂದು ಬರೆದಿದೆ. ನಾಲ್ಕನೆಯದರಲ್ಲಿ ಏನೊಂದೂ ಇರಲಿಲ್ಲ; ಕೆಳಕ್ಕೆ ಮಾತ್ರ ದೊಡ್ಡ ಅಕ್ಷರದಲ್ಲಿ '**ನಾನು**' ಎಂದಿದೆ.

ಶಾಮು ಮೆಲ್ಲನೆ ಕಾಗದ ಕೈಯಲ್ಲಿ ತೆಗೆದುಕೊಂಡು "ಇದು ಏನೋ....ರಾಮೂ?" ಎಂದ. ತಟ್ಟನೆ ರಾಮುವಿನ ಉತ್ತರ ಬಂದಿತು: "ಅದು..ಅದು ನನ್ನ ಸಂಸಾರ" ಎಂದು. ಶಾಮು ಸುಮ್ಮನಾದ; ಬಲು ಪ್ರಯಾಸದಿಂದ ಮುಗುಳ್ನಗೆಯೊಂದನ್ನು ತಂದುಕೊಂಡು ತನ್ನ ರಾಮುವನ್ನು ನಿಟ್ಟಿಸಿದ. ರಾಮುವಿನ ಮಾತಿನ ನಯಕ್ಕೆ ವಿಚಾರಸೂಕ್ಷ್ಮತೆಗೆ ಒಪ್ಪಿದರೂ ಅದೇಕೊ ಆತನ ಹೆಣ್ಣಿನಂತಹ ಸ್ವಭಾವ ಸರಿಬರಲಿಲ್ಲ. ಹೆಣ್ಣುಹೃದಯ ಬೇರೆ, ಹೆಣ್ಣುಸ್ವಭಾವ ಬೇರೆ. ಒಂದು ಮೃದುಮನಸ್ಸು, ಇನ್ನೊಂದು ಅದನ್ನು ವ್ಯಕ್ತಪಡಿಸುವ ರೀತಿ. ಗಂಡಿಗೆ ಹೆಣ್ಣುಹೃದಯ ಎಂದಿಗೂ ಹೊಸತಲ್ಲ; ಆದರೆ ಅದನ್ನು ವ್ಯಕ್ತಗೊಳಿಸುವ ರೀತಿ ತನ್ನದೇ ಆಗಿರ ಬೇಕು. ಇದು ತನ್ನ ರಾಮುವಿಗೆ ಗೊತ್ತಿರಲಿಲ್ಲ.

ರಾಮುವಿನ ಬಳಿ ಆತನ ಕೂಸಿನ ಚಿತ್ರವೊಂದು. ತಾನು ತಾನು ಆಗರೆದುರು ನಿಲ್ಲುವ. ಇದಕ್ಕೆ ಶಾಮುವಿನ ಅಡ್ಡಿ ಇರಲಿಲ್ಲ, ಆದರೆ ದಿನಕ್ಕೆ ಇಪ್ಪತ್ತು ಸಲ ಅದನ್ನು ಮುದ್ದುಕೊಟ್ಟು ಒದ್ದೆಮಾಡು ವುದು ಶಾಮುವಿಗೆ ಸರಿಬರುತ್ತಿರಲಿಲ್ಲ. ಒಂದೊಂದು ಸಲ ಕ್ಲಾಸಿನಲ್ಲೇ ಇರಲಿ—ಹಾದಿಯಲ್ಲೇ ಇರಲಿ—ಹೆಂಡತಿ ತಾಯಿ ಇವರ ನೆನಪಾಗಲು ನಾಟಕದಲ್ಲಿ ಪಾತ್ರಮಾಡುವವರಂತೆ ನಿಟ್ಟುಸಿರಿನ ಉದ್ಗಾರ ತೆಗೆದು 'ಪಟ್' ಎಂದು ಹಣೆ ಬಡಿದುಕೊಂಡು— ಬಿಕ್ಕಿ ಬಿಕ್ಕಿ ಅಳುವ ತನ್ನ ರಾಮು. ಇದನ್ನು ಕಂಡು ಶಾಮು ನಿರಾಶಿತನಾಗುವ; ತನಗೂ ದುಃಖ ಕುತ್ತಿಗೆ ತುಂಬಿ ಬಂದಂತಾಗು ವುದು. ಒಬ್ಬನೇ ಇದ್ದಲ್ಲಿ ತನ್ನ ರಾಮುವಿನ ಕಣ್ಣುಗಳನ್ನು ಒರಸ ಬಹುದಾಗಿತ್ತು. ಆದರೀಗ, ರಾಮುವಿನ ಕಡೆಗೊಮ್ಮೆ ಗಂಡುಸಿ ನಂತೆ ನೋಡಿ, ಗಂಡುಸಿನಂತೆ ದೀರ್ಘನಿಶ್ವಾಸ ಬಿಡುವ.

ಇನ್ನೆಷ್ಟು ದಿನ ತನ್ನ ರಾಮು ಈ ರೀತಿ ಇರುವ? .. ತಾಯಿ ಯನ್ನು ಬೇಡಿ ಹೆಂಡತಿಯನ್ನು ಬೇಡಿ ಅಳುವ; ರಾಮುವಿಗೆ ದಿನ ಕ್ಕೆಂಟು ಸಲ ತನ್ನ ಕತೆ ಕೇಳುವವರು ಬೇಕು; ಅವರು 'ಅಯ್ಯೋ' ಎನಬೇಕು, 'ಹಾ' ಎನಬೇಕು. ಇದೆಷ್ಟು ದಿನ. ಇನ್ನು ೩ ದಿನ ಕ್ಕೊಮ್ಮೆ ಹೆಂಡತಿಯಿಂದ ಕಾಗದ ಬರಲೆ ಬೇಕು. ಅದು ತಪ್ಪಿದರೆ, ಅಂದು ಊಟವಿಲ್ಲ; ಅಭ್ಯಾಸವಿಲ್ಲ. ನಿಟ್ಟುಸಿರು ಕಣ್ಣೀರು ಇವೇ. ಅದೆನೋ—ಈಗ ೫ ದಿನಕ್ಕೆ ಹಿಂದೆ 'ಕೂಸಿಗೆ ಕೆಮ್ಮು' ಎಂದು ಕಾಗದ ಬಂದಿದೆ. ಅಲ್ಲಿ ಕೆಮ್ಮು ಆದರೆ, ಇಲ್ಲಿ ಗುಡಿಯು ಕಟ್ಟಿ ಹತ್ತುವುದಾಯಿತು; ಡಾಕ್ಟರರ ಭೆಟ್ಟಿಯಾಯಿತು; ಔಷಧ ಕೇಳುವು ದಾಯಿತು, ಕಳಿಸುವುದಾಯಿತು; ರಾತ್ರಿಯಲ್ಲಿ ಜಾಗರಣೆಯಾಯಿತು. ಇಂದು ಆರನೆಯ ದಿನ; ಶಾಮುವೂ ತುಸು ಗಾಬರಿಯಾದ. ರಾಮು ವಿನ 'ಹೆಣ್ಣು ಹೃದಯ' ಅವನ ಹೆಂಡತಿಗೂ ಗೊತ್ತಿತ್ತು. ಇದು ವರೆಗೂ ಪತ್ರ ಬರೆಯಲು ತಪ್ಪಿರಲಿಲ್ಲ; ಇಂದು ಅದು ಬಾರದಿದ್ದರೆ. ತನ್ನ ರಾಮು 'ಮನುಷ್ಯನೇ ಅಲ್ಲ' ಎಂದು ಶಾಮುವಿಗೆ ಮನವರಿಕೆಯಾಯಿತು.

"ಇಷ್ಟು ನೋಡಬ್ಯಾಡೋ..ಶಾಮೂ....ನನ್ನ ಸಂಸಾರಕ್ಕೆ ದೃಷ್ಟೀ ಹಚ್ಚಿಟ್ಟಿ?" ಶಾಮು ತಡವರಿಸಿದ: ಕೈಯಲ್ಲಿದ್ದ ಕಾಗದ ಚಾಚಿ ಪುನಃ ರಾಮುವಿನ ಕೈಗೆ ಕೊಟ್ಟ. ಮುಖವೆತ್ತಿ ತುದಿಗಾಲಿ ನಿಂದ ತಲೆಯುವರೆಗೂ ರಾಮುವನ್ನು ನೋಡಿದ. ರಾಮುವಿನ ಕಣ್ಣು ನೀರಿನಿಂದ ತುಳುಕಿ ಒಂದೆರಡು ಹನಿ, ಕಾಗದದ ಮೇಲೆ ಜಾರಿದುವು. "ಪತ್ರ ಬರಲಿಲ್ಲ ಮನೆಯಿಂದ...." ಬಾಯಿಂದ ಶಬ್ದ ಬರುತ್ತಲೆ.... ಧ್ವನಿ ಗದ್ಗದವಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದ; ಧ್ವನಿ ತೆಗೆದ. ಮಂಚದ ಮೇಲೆ ಬಿದ್ದುಕೊಂಡು ಮುಸುಕುಹಾಕಿ.. ಮುಸುಕಿನೊಳಗಿಂದಲೆ ಚೀತ್ಕರಿಸಿಕೊಂಡ.. "ನನ್ನ ಪರದೇಶಿ ಮಗನ್ನ....ಕೊಂದರು!" ಶಾಮು ಮೊರೆಯಿಟ್ಟ ಪುನಃ ದೇವ ರಿಗೆ..'ತನ್ನ ರಾಮು ಮನುಷ್ಯನಾಗಲಿ' ಎಂದು. ದುಃಖ-ಉದ್ವೇಗ ಗಳನ್ನವನು ಹುದುಗಿಸಲು ಕಲಿಯಲೆಂದು. ಕಾರಣವಿರಲಿ, ಇರದೇ ಇರಲಿ; ರಾಮು ರೊಚ್ಚಿಗೆದ್ದು ಬೀಸುಗೈಯಿಂದ ತನಗೆರಡು ಬಿಗಿ ದಿದ್ದರೆ ಶಾಮುವಿಗೆ ಬಲು ಸಂತೋಷ. ಆದರೆ..

ಹೊರಕ್ಕೆ ಸೈಕಲ್ ಗಂಟೆ ಬಾರಿಸಿತು. ಶಾಮು ಗಾಬರಿಯಾದ; ಮೆಲ್ಲನೆ ಮುಖವೆತ್ತಿ ರಾಮುವನ್ನು ನೋಡಿದ. ರಾಮು ಕಣ್ಣು ತಪ್ಪಿಸಲಿಲ್ಲ. ನೋಟಕ್ಕೆ ನೆಟ್ಟ ನೋಟ ಚಾಚಿದ. "ಬಂದದ್ದಕ್ಕೆ 'ಹೂಂ' ಅನಲಿಕ್ಕೆ—ಪುಕ್ಕತನ ಯಾಕೋ ಶಾಮು!" ಎಂದ. ಶಾಮು ನೋಟ ತಗ್ಗಿಸಿದ. ತಲೆ ತಗ್ಗಿಸಿದ. "ನಿನಗೂ ಧೈರ್ಯ ಇಲ್ಲಃ ಶಾಮೂ" ರಾಮೂ ನಾಗಿದ. "ದೇವರ ಮ್ಯಾಲ ಭಾರಾ ಹಾಕು.... ಈ ಎಂಟು ಆಣೆ ಕೊಡು ತಾರಿನವಗ.. ತಾರು

ತೊಗೊಂಡು...." ಶಾಮು ಹೊರಕ್ಕೆ ಹೊರಟು ಬಂದ. ತಾರು ತೆಗೆದುಕೊಂಡ; ತಾರಿನವ 'ಸಲಾಮ್' ಮಾಡಿ ಹೊರಟುಹೋದ. ಶಾಮು ತಾರು ಬಿಚ್ಚಿ ನೋಡಿಕೊಂಡ.

ಎದೆಯಲ್ಲಿದ್ದಷ್ಟು ಉಸಿರೂ ಒಮ್ಮೆಲೆ ಹರಿದಾಟ ನಿಲ್ಲಿಸಿದಂತಾಯಿತು. ಕುಸಿ ಬೀಳುವ ಕಾಲಿಗೆ ಅದೆಲ್ಲಿಯದೊ ಕಸುವನ್ನು ತಂದುಕೊಂಡು.... ಪುನಃ ಕೋಣೆಯನ್ನು ಸೇರಿ.. ಮೆಲ್ಲಗೆ ಬಾಗಿಲನ್ನು ಹಾಕಿ ಹೊರಳಿ ನಿಂತುಕೊಂಡು, ರಾಮುವನ್ನು ನೋಡಿದ. ರಾಮುವಿನಲ್ಲಿ ಏನೊಂದೂ ಹಾವಭಾವದ ವಿಕಾರವಿರಲಿಲ್ಲ. ಶಾಮು ಬರುತ್ತಲೆ ಪ್ರಾರಂಭಿಸಿದ ಸ್ಪಷ್ಟವಾಗಿ.. "ಶಾಮೂ—ತಾರು ಈಗ ಓದೋದು ಬ್ಯಾಡಾ.... ಮೊದಲು ನೀನು ಊಟಾ ಮಾಡಿ ಬಾ...." ಶಾಮು ತತ್ತರಿಸಿದ. ಅದೆಂತಹ ಗಂಡೆದೆಯದು?– ಎಂದುಕೊಂಡ. ಮರುಕ್ಷಣ "ಅದಾವ ವಿಪರೀತಕ್ಕಿದೆಯೊ" ಎಂದುಕೊಂಡ. ಮರುನಿಮಿಷದಲ್ಲಿಯೆ "ಯಾರದು— ತನ್ನದೋ—ತನ್ನ ರಾಮುವಿನದೋ" ಎಂದುಕೊಂಡ. ಹುಚ್ಚ! ಶಾಮು! ತನ್ನ ರಾಮುವಿನ ತಾರು ಓದಿಕೊಂಡು—ಆತನನ್ನು, ಮಗುವನ್ನು ತಪ್ಪಿಕೊಳ್ಳುವಂತೆ ತಪ್ಪಿ, ತಲೆಯನ್ನು ಮೂಸಬೇಕೆಂದು ತಾನೇ ಬಂದಿರಲಿಲ್ಲವೆ—ಎದೆ ಉಬ್ಬಿಸಿಕೊಂಡು? ಅದು ಎಂತಹ ಗಂಡೆದೆ! ತನ್ನ ರಾಮು 'ಮನುಷ್ಯನಾಗಲಿ' ಎಂದು ಸಾವಿರ ಸಲ ದೇವರಿಗೆ ಮೊರೆಯಿಟ್ಟಿದ್ದನಲ್ಲ.. ಅದು ಎಂತಹ ಗಂಡೆದೆ? ಶಾಮುವಿಗೆ ನಾಚಿಕೆಯಾಯಿತು. ತನ್ನದೇ, ತನ್ನ 'ಗಂಡೆದೆ' ತನ್ನೊಳಗೆ ಸಣ್ಣಾಗಾಗುತ್ತಿರುವಂತೆ .. ಇಲ್ಲವಾಗುತ್ತಿರುವಂತೆ ಭಾಸವಾಯಿತು. ತಲೆ ತಗ್ಗಿಸಿ ತುಟಿ ಕಚ್ಚಿಕೊಂಡ. ಅಪ್ಪಿ ಸಂತಯಿಸಬೇಕೆಂದು ಹಾತೊರೆದಿದ್ದ ತನ್ನ ತೋಳುಗಳನ್ನು ಕಂಡು ನಾಚಿ, ಅವುಗಳನ್ನು ಹಿಚುಕಹತ್ತಿದ. ಪುನಃ ರಾಮು ಸಾಗಿದ. ಅದೇ ಉಚ್ಚಸ್ವರ. ತುಸು ಮಾತ್ರವೂ ಕಂಪಿಸುತ್ತಿರಲಿಲ್ಲ. ಅದೇ ಬೆಚ್ಚುಗಣ್ಣು; ಒಂದೇ ಒಂದು ಕಣ್ಣಹನಿ ನಿಂತಿರಲಿಲ್ಲ.." ಶಾಮೂ.: ಊಟಾ ಮಾಡಲಿಕ್ಕೆ ೧೫ ಮಿನೀಟು— ೩ ಮಿನೀಟು ಹೋಗಲಿಕ್ಕೆ, ೨ ಮಿನೀಟು ಬರಲಿಕ್ಕೆ– ೨೦ ಮಿನೀಟು ಆಯ್ತು....ಅದರೊಳಗ ಬಂದೀ.. ಅಂದ್ರ ನಾನು ತುತ್ತು ಮಾಡಿ— ನನ್ನ ಕೂಸಿಗೆ ಉಣಿಸಿದ್ಹಾಂಗ— ನಿನಗ ಉಣಿಸಬೇಕಾದೀತು....." ಶಾಮು ಪೆಚ್ಚುಬಡಿದು ನಿಂತ; ಅವನಿಗೆ ಪುನಃ ಮೊರೆಯಿಡುವ ಮನಸ್ಸಾಗಲಿಲ್ಲ ಶಪಿಸಿದ ದೇವರಿಗೆ.. "ತನ್ನ ರಾಮು ಮನುಷ್ಯನಾಗಲಿ" ಎಂದು.

* * *

"ಕೂಸಿಗೆ ಉಣಿಸಿದ ಹಾಂಗ...."

ಶಾಮು ರಾಮುವನ್ನು ನೋಡಿದ. ರಾಮು ಮೆಲ್ಲನೆ ಬೇರೆ ಬದಿಗೆ ದೃಷ್ಟಿ ಚಾಚಿದ. ಶಾಮುವು ಬೇರೆ ಬದಿಗೆ ದೃಷ್ಟಿ ಚಾಚಿದ. ದೂರದಲ್ಲಿ– ಏನನ್ನೊ ಕಳೆದುಕೊಂಡವರಂತೆ– ನಿಟ್ಟಿಸಿದರು. ಶಾಮು ತುಸು ಹುಂಬ, ಪುನಃ ರಾಮುವನ್ನು ನೋಡಿದ. ರಾಮು ಇನ್ನೂ ಹುಡುಕುತ್ತಲಿದ್ದ. ಅವನ ದೃಷ್ಟಿಯನ್ನು ಹಿಂಬಾಲಿಸಿದ, ಎದುರು ಗೋಡೆಗೆ ತೂಗುಬಿಟ್ಟ ಕೂಸಿನ ಚಿತ್ರದಲ್ಲಿ ನೆಟ್ಟಿರುವುದನ್ನು ಕಂಡ. "ಕೂಸಿಗೆ ಉಣಿಸಿದ ಹಾಂಗ...."

ಅದೆಷ್ಟು ಸೂಕ್ಷ್ಮ ತನ್ನ ರಾಮು, ಅದೆಷ್ಟು ಮೃದು! ತಾನೇ ಅಂದಿರಲಿಲ್ಲವೆ 'ರಾಮು' ಎಂದರೆ ಒಂದು ಚಿಕ್ಕದಾದ ಚೆಲುವಾದ 'ಕವಿತೆ' ಇದ್ದಂತೆ ಎಂದು! ಹಾಗೆ ಅಂದಿರುವುದೇನೋ ನಿಜ. ಅದರ ಜೊತೆಗೆ ಅದೆ ಉಸಿರಿನಲ್ಲಿ ಇನ್ನೂ ಎಂದಿದ್ದ: ತಾನೊಬ್ಬ 'ಕವಿ' ಎಂದು. ಅದು ತಪ್ಪು; ಹಾಗೆ ಎಂದುಕೊಳ್ಳುವುದು ಪಾಪ. 'ಸರಸ್ವತಿ'ಯ ಆಣೆಗೂ ಶಾಮು ಕವಿ ಇರಲಿಲ್ಲ. ಅವನೊಬ್ಬ ಹೊಗಳುಭಟ್ಟ. ಹೆಚ್ಚಿಗಾದರೆ ಸಹೃದಯದ ವಿಮರ್ಶಕ. ಒಂದು ಹೆಣ್ಣುನವಿಲು ಮಾತ್ರ. ಆತನ ರಾಮು ಆ ಗಂಡುನವಿಲು. ಅದು ಕುಣಿಕುಣಿದು ಮೈಮರೆಯಬೇಕು. ಆನಂದದಿಂದ ಅದರ ಕಣ್ಣು-ಹನಿ ತೊಟಕಿಕ್ಕಬೇಕು. ಅವನ್ನು ಕುಡಿದು, ಹೆಣ್ಣುನವಿಲು ತೃಪ್ತಿಪಡಬೇಕು. ಇದು ಅದರ ಗುಣ, ಅದರ ಕರ್ತವ್ಯ. ಶಾಮು ಭಕ್ತಿಪರವಶನಾಗಿ ತನ್ನ ರಾಮುವನ್ನು ಕಣ್ಣುತುಂಬ ನೋಡಿಕೊಂಡ. ಅವನ ರಾಮು– ತಾನಾಡಿದ ಮಾತಿನ ಮರುವಿಚಾರದಲ್ಲಿ ಸುಗ್ಗಿ ತಡವರಿಸುತಿರುವ. ಅದರ ಸೊಕ್ಕಿನಲ್ಲಿ ಮತ್ತೆ ಮತ್ತೆ ಮಿಡಿಯುತ್ತಿರುವ. ಅದನ್ನು ಮಿಡಿದು ಅದರ ಗತಿ– ತಾಣ ತೂಗಿ ನೋಡುತ್ತಿರುವ. ಬಿರುಗಾಳಿಗೆ ಸಿಕ್ಕ ಕೊಳ್ಮಿಂಚಿನಂತೆ ಅಲ್ಲೊಮ್ಮೆ ಇಲ್ಲೊಮ್ಮೆ ತನ್ನ ವಿದ್ಯುಚ್ಛಕ್ತಿಯ ನಾಲಗೆಯನ್ನು ಚಾಚಿ ಕಣ್ಣುಮುಚ್ಚಾಲೆ ಆಡುತ್ತಿರುವುದನ್ನು ನೋಡಿ–ಹಿಗ್ಗಿ–ನಲಿದಾಡುತ್ತಿರುವ "ಕೂಸಿಗೆ ಉಣಿಸಿದ ಹಾಂಗ...."

"ಹೌದು ಉಣಿಸೂದೇನು..ಮತ್ತನ್ನ ಕೆಲಸ..! ಆದರೆ ಕೂಸಿಗೆ ಕೆಮ್ಮು ಬಂದರೆ....ಉಣಸೂದರೆ ಹ್ಯಾಂಗ? ಉಣಿಸ

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ ಚಮನ ಬಾ. ಕಿ. ೪ ಆ.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ಮುರ್ಘಾಟಿ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯಿಲೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

CONCENTRATED
HIGH CLASS
COLOURS

FOR MANUFACTURING

- WRITING INKS
- TYPEWRITING RIBBONS
- SOAPS
- SWEETMEATS.

For particulars please apply to—

KRIPAG LTD.

P. O. BOX No. 210, BOMBAY

ದಿದ್ದರ..ಅವು ಬದುಕಬೇಕು ಹ್ಯಾಂಗ? ಕೂಸು ಸತ್ತರೆ..ಅದರ ತಂದಿ ತಾಯಿ ಬಾಳಬೇಕು ಹ್ಯಾಂಗ?.... ಬೋಡಿಕೆಮ್ಮು ಯಾಕ ಬರಬೇಕೊ?' ತನ್ನ ಕವಿಹೃದಯದ ರಾಮು ಏನೊಂದನ್ನು ಕಲ್ಪಿಸಲಾರ? ತನ್ನ ಕವಿ ಹೃದಯಕ್ಕೆ ಎಷ್ಟೊಂದು ಬರೆ ಎಳೆದುಕೊಳ್ಳಲಾರ? ಅದರಂತೆ ಅದಕ್ಕೆ ಎಷ್ಟು ಬಗೆಯಾಗಿ-ಸುಣ್ಣನೆಯ-ಸವಿಗನಸು ತೋರಿಸಲಾರ! "ಕೂಸಿಗೆ ಉಣಿಸಿದ ಹಾಂಗ.."

ತನ್ನ ಮಗು ಬಲು ಬಲು ಮುದ್ದು. "ಬಂಗಾರದ ಗೊಂಬೀ ಹಾಂಗ ಅದಽನ.. ಅದಕ್ಕ ನಾನು 'ಚಿನ್ನ' ಅಂತ ಕರೀತೇನಿ" ಅಂದರ..ತನ್ನ ಹದಹುಗುಳಿ ಹೆಂಡತಿ, ಗಾಬರಿ ಆಗಿ ತನವಾಡದೆ ದೃಷ್ಟಿಯನ್ನು ತೆಗೆದು 'ಗುಂಡ' ಅಂತ ಹೆಸರಿಟ್ಟಿದ್ದಳು. ಅದಕ್ಕೀಗ ಎರಡು ತುಂಬುತ್ತಾ ಬಂದಿದೆ. ನೋಡದೆ—ಎಂದರೆ .. ತಾನು ಕಾಲೇಜಿಗೆ ಹೊರಟು ಬರುವಾಗ ನೋಡಿದ್ದು– ಈಗ ಮೂರು ತಿಂಗಳಾಗುತ್ತ ಬಂತು. ಅದರ ದೊಡ್ಡ ಬೊಗಸೆಗಣ್ಣು ಇದೇ ಅರಳಿದ ಹೂವಿನಂತೆ ತನ್ನ ಕಣ್ಣೆದುರು ಕಟ್ಟಿವೆ. ತಾನು ಹೊರಟು ಬರುವಾಗ ಅದು ಪಿಟ್ಟೆನ್ನಲಿಲ್ಲ. ತಾನು ಗಾದಿ ಹತ್ತಿ ಹೊರಟು ಹೋಗುವುದನ್ನು, ತನ್ನ ಬೆಚ್ಚುಗಣ್ಣಿನಿಂದ ನೋಡುತ್ತಾ ನಿಂತು ಬಿಟ್ಟಿತ್ತು. ಆಗ ತನ್ನ ಹೆಂಡತಿ ಆಡಿದ ಮಾತು ಇನ್ನೂ ನೆನಪಿದೆ. "ಬೋಡಿ..ಪ್ಯಾಟ್ಯಾಗ ಹೋದರ-ಅತ್ಲಾಡಲಿಕ್ಕೆ ಹೊರಟರ ರಂಭಾಟ ಮಾಡತಿತ್ತು.ಅಂಥಾದು ಈಗ ಊರಿಗೆ ಹೊಂಟಿರ.."ತಾನು ಹೇಳಿದ ಉತ್ತರವೂ ನೆನಪಿದೆ. "ತಿಳಿವಳಿಕೆ ಬಂದದ ಅದಕ್ಕ" ಎಂದು..ತಿಳಿವಳಿಕೆ ಬಾರದೆ ಏನು? ಹುಟ್ಟುತ್ತಲೆ ತಾಯಿಯನ್ನು ಕಳೆದುಕೊಂಡರೆ- ತಾನು ಪರದೇಶಿ ಎಂಬ ತಿಳಿವಳಿಕೆ ಬಾರದಿರುವುದೆ? ಸತ್ತ ತಾಯಿಯನ್ನು ತದ್ರೂಪ ಹೋಲುತ್ತಿರುವುದೂ ತಿಳಿವಳಿಕೆಯ ಗುರುತಲ್ಲವೆ? ಅದೇ ವಿಚಾರದಲ್ಲಿ ಗಾಡಿ ಹೊಂಟು ಸಾಗಿತ್ತು. ಗಾಡಿಯ ಕಿಟಕಿಗೆ ತಲೆ ಆನಿಸಿ ಗೊಳೋ ಎಂದು ಧ್ವನಿ ತೆಗೆದು ಅತ್ತು ಬಿಟ್ಟಿದ್ದ. ಬದಿಯಲ್ಲಿಯ ಒಬ್ಬ ಪ್ರವಾಸಿ ಕಾರಣ ಕೇಳಿದರೆ ತಾನೊಂದು ಹೇಳಿದ್ದ: "ನಾನು ಬರುವ ಮುಂದೆ ನನ್ನ ಮಗ ಅಳಲಿಲ್ಲ, ಅದಕ್ಕ ನಾನು ಅಳತೀನಿ" ಎಂದು. ಆ ಪ್ರವಾಸಿ-ಇನ್ನೊಬ್ಬ ಪ್ರವಾಸಿಯನ್ನೆಳೆದುಕೊಂಡಿದ್ದ ಹರಟೆಗೆ "ಪಾಪ.. ತಾಯಿಯಿರಲಿಕ್ಕಿಲ್ಲ ಆ ಕೂಸಿಗೆ" ಎಂತ. "ಅಥವಾ ಹೀಗಿರಬಹುದು.." ಎಂದು ತಲೆಯಲ್ಲಾಡಿಸಿದ್ದ ಆ ಇನ್ನೊಬ್ಬ "ಮಲತಾಯಿ ಬಗಲಾಗ ಇರಬಹುದು ಆ ಕೂಸು– ಆಕೀಗೆ ಹೆದರಿ ಅತ್ತಿರಲಿಕ್ಕಿಲ್ಲ" ಎಂದು. "ಇರಬಹುದು, ಮಲತಾಯಿಗೆ ಹೆದರಿ ಅತ್ತಿರಲಿಕ್ಕಿಲ್ಲ" ಆಗ. ಆದರೆ ಈಗ– ಕೆಮ್ಮು ಬಂದಾಗ– ಕೂಡ ಅವು ಹೆದರಿ ಗಪ್ಪ ಇರತಾವs?..ಏನಿದ್ರೇನೂ..ಪರದೇಶೀ ಎಂದಮೇಲೆ.. ಅತ್ತರೇನು.. ಕೆಮ್ಮಿದರೇನು?..ಹಾಗೇ ಕಣ್ಣು ಮುಚ್ಚಿ ಬಿಟ್ಟರೇನು?..ರಂಡೇಮಗಳು ತಾಯಿ ಇನ್ನೊಂದು ತುಸು ದಿನ ಜೀವ ಹಿಡೀಬಾರದs? ಪಾಪಿ–ಅವಳ ಹಣೇಬರೆಹ! ಸಾಯೂವಾಗ ಮಗನ ಮೋರೀ ಕೂಡ ನೋಡಿರಲಿಲ್ಲ. ಪಾಪ, ಅವಳೆಷ್ಟು ಸರಳ– ಎಷ್ಟು ಕೋಮಲ! ಸಾಯುವಾಗ ಆಡಿದ ಅವಳ ಮಾತು ಇನ್ನೂ ಕೇಳಿಬರುವಂತಿವೆ. "ನಾ ಸಾಯುತೀನಿ ನನಗೊತ್ತು! ನನ್ನ ಪುಣ್ಯಾ ದೊಡ್ಡದು! ಕೂಸು ಜೋಕೆ! ಗಂಡಸರ ಕೈಯಿಂದs ಆಗೂದಿಲ್ಲ..! ಆಡು ಸಾಕಿದರೂ ಆಗೂದಿಲ್ಲ.. ಅದಕ್ಕ ಇನ್ನೊಬ್ಬ ತಾಯಿ ಬೇಕು!...." ಮುಂದಿನ ಮಾತು ಅಸ್ಪಷ್ಟವಾಗಿ ಬಾಯಿಯಲ್ಲಿಯೆ ಉಳಿದುವು. ಆ ಮುದ್ದು ಮುಖಕ್ಕೆ ಮುಗುಳ್ನಗೆಯೊಂದು ಮೂಡಿತು...! ಆಗ ತನಗೆ ಎಲ್ಲಿಯದೋ ದೂರದ ಅಜ್ಜಿ– ಹಲ್ಲಿಲ್ಲದ ಬಾಯಿ ತೆರೆದು ಸಮಾಧಾನ ಮಾಡಬಂದಿದ್ದಳು. "ಸತ್ತವರು ಸತ್ತು ಹೋದರು. ಇದ್ದವರು ಸುಖದಿಂದಿರಬೇಕಪಾ" ಎಂದು. ಇಲ್ಲವೆನ್ನುವವರಾರು? ಸುಖದಿಂದ ಇರತೀನೀ ಅಂತ ಆಣೇ ಇಟ್ಟುಕೋಬೇಕೇ? ಇದ್ದವರು ಸುಖದಿಂದಿರಬೇಕೂ ಅಂದ್ರು..ಈಗ ತನ್ನ ಕೂಸಿಗೆ ಕೆಮ್ಮು ಯಾಕದು ಬಂದದ್ದು! ಅದಕ್ಕೆ ಯಾರು ಬೇಡವೆಂದರು ಸುಖದಿಂದಿರಲಿಕ್ಕೆ? ಅದಕ್ಕ ಯಾಕ ಬಂತು ಈ ಕೆಮ್ಮು! ಅದು ನೆಟ್ಟಗದs ಅಂತ ಮೂರು ದಿನಕ್ಕೊಂದು ಪತ್ರ ಬಂದರsನs ತಾನೊಂದು ಹೊಸ ಉಸಿರು ಹಿಡಿಯುತ್ತಿರಲಿಲ್ಲ? ಅದು ದಿಕ್ಕಿಲ್ಲದ್ದು. ಹಾಲು ಕಾಣದ್ದು– ಪರದೇಶಿ–ಅಂತಲ್ಲs ತಾನು ಮತ್ತೊಂದು ಮದುವೆಯಾದದ್ದು? ಅಷ್ಟು ಬೇಗ–ಸತ್ತ ಮರುವರ್ಷದೊಳಗೆ—ಇನ್ನೊಂದು ಮದುವೆಯಾಗಲು ತನಗೆ ಇಷ್ಟವಿರಲಿಲ್ಲ. ಆದರೇನು– ಅದೆಲ್ಲ ಕನ್ಯೆಯನ್ನು ನೋಡುವ ಮುಂಚಿನ ನಿರ್ಧಾರ. ಹುಡುಗಿ ಬಹಳೇ ಚೆಲುವೆ. ಅದರಲ್ಲಿ ತನ್ನ ಗೆಳೆಯ ರಾಮುವಿನ ತಂಗಿ. ಇವಳೂ ಮೊದಲಿನವಳಷ್ಟೇ ಚಲುವೆ. ಅಷ್ಟೇ ಸರಳ– ಅಷ್ಟೇ ಕೋಮಲ. ಆದರೂ ತುಸು ದಿಟ್ಟೆ. ತನ್ನನ್ನು ಮರೆಮುಚ್ಚಿಲ್ಲದೆ ನೋಡುತ್ತ

ನಿಲ್ಲುವಳು; ಈಗ ಇವಳಿಗೂ ತಾಯಿಯೆಂಬ ಮುಗ್ಧಯೋಗ್ಯತೆ ಬರುವುದರಲ್ಲಿದೆ. ಇವಳಿಗೂ ೮ ತಿಂಗಳು...."

ಮೆಲ್ಲಗೆ ಮುಖವೆತ್ತಿ ಶಾಮುವನ್ನು ನೋಡಿದ, ಅನಸಂತೆಯು. ಆತ ಸಾದುಗಪ್ಪು- ಈಕೆ ತುಸು ತಿಳಿ. ಸ್ವಲ್ಪ ಗಡುತರ. ತುಸು ಗಿಡ್ಡ. ಆತ ಗಡುತರವಿದ್ದುದರಿಂದ ಗಿಡ್ಡ ಕಾಣುವ. ಈಕೆ ಗಿಡ್ಡ ವಿದ್ದುದರಿಂದ ಗಡುತರ ಕಾಣುವಳು. ಆತ ಗಂಡುಸರಲ್ಲಿ ಪುಕ್ಕ. ಈಕೆ ಹೆಂಗುಸರಲ್ಲಿ ಪುಕ್ಕಿ. ಆತ ಅಣ್ಣ, ಈಕೆ ಅಣ್ಣನ ತಂಗಿ. ಅವನಂತೆ ಆಲಸ್ಯದ ಮೊಟ್ಟೆ. ಚಟುವಟಿಕೆಯಿಲ್ಲ. ಯಾವಾಗಲೂ ಬೇಸತ್ತ ನಡಿಗೆ.. ಈಗ ಮತ್ತಿಷ್ಟು ಆಲಸ್ಯಬಂದಿರಬಹುದು.... ಆದರೂ ತಾಯಿಯಾಗಲು ವಯಸ್ಸುಚಿಕ್ಕದು. ಅದೇ ಹದಿನಾರು. ಆದರೇನು ಮೊದಲಿನವಳಂತೆ ಮುಖಹೀನಳಲ್ಲ; ಬಲು ಕಿಡಿಗೇಡಿ. ಬಾಯಿತುಂಬ ಹರಟೆಬೇಕು. ಗಟ್ಟಿಸಿ ನಗುವುದುಬೇಕು. ಹುಡುಗ-ತನಬೇಕು. ಆದರೆ ಇವಳೂ ಬಂಗಾರದಂಥವಳು. ಹುಡುಗರು ಎಂದರೆ ಇವಳ ಜೀವ. ತನ್ನ ಮಗನ ಸಂರಕ್ಷಣೆಗೆಂದು ಅವಳನ್ನು ತರುವುದೆಂದರೆ- ಯಾಕೋ ನಗು ಬರುತ್ತಿತ್ತು ರಾಮೂನಿಗೆ. "ನನಗೂ ಬಂದದ ಸಾಕಷ್ಟು ಸಂಸಾರದ ಅನುಭವ. ಕಾಲೇಜು ಬಿಡತೀನಿ- ಸಾಕಷ್ಟು ಅದ ಮನೀ ಒಳಗ .. ನನ್ನ ಮಗನ್ನ ನಾಲ್ಕು ತಾಸು ಹೆಗಲಮೇಲೆ- ನಾಲ್ಕು ತಾಸು ತೊಟ್ಟಿಲದೊಳಗೆ ನಾಲ್ಕು ತಾಸು...." ಹೌದು, ತೊಟ್ಟಿಲಾಯಿತು- ತೂಗುವು ದಾಯಿತು. ಕೂಸಿಗೆ ಕೆಮ್ಮು ಬಂದರ ಇವೆಲ್ಲ ಏನು ಉಪಯೋಗ? "ನೋಡಿ-ಕೆಮ್ಮು ಯಾಕ ಬಂದದೋ!" "ಇಕೀ ಅಚ್ಚ ಚ್ಯಾನ ಭಾಳ .. ತಿನಿಸಿದ್ಲಾಳು ಪಾಯಸಾನ.. .... ಕೈಯಾಗಿಂದ ಕಸಗೊಂಬೂತನಕಾ ಬಿಡೂದಿಲ್ಲ. ಮತ್ತ ಅಂತಾಳ ಹೆಂಗುಸರು ನಾಜೂಕು ಅಂತ. ಕಂಠಮಟಾ ಪಾಯಸಾ ತಿನಿಸಿ ಕೆಮ್ಮುತರಿಸಿ- ಕಂಠಮಟಾ ಬಿ ಷ ಧಾ ಹಾ ಕೂ ದು .. ಇದ ಕಾಣಸ್ತದ ನಾಜೂಕುತನ ಇವರದು!"

ರಾಮುವಿಗೆ ಹೊಟ್ಟೆತುಂಬ ನಗುಬಂತು. ಶಾಮುವನ್ನು ನೋಡಿದ. ಶಾಮುವಿನ ಕಣ್ಣಲ್ಲಿ ನೀರು. ರಾಮುವಿಗೆ ಹೊಟ್ಟೆ ತುಂಬ ನಗುಬಂದಿತು. 'ನೀನೂ ನಗು ನನ್ನ ಕೂಡ' ಎಂದು ಹೇಳಬೇಕೆನ್ನಿಸಿತು ಎಲ್ಲರಿಗೂ— ಅದರಲ್ಲಿ ತನ್ನ ಶಾಮುವಿಗೆ. ತತ್‌ಕ್ಷಣ ನಗುವಿನ ತೆರೆ ತುಟಿಬಿಚ್ಚಿದ್ದುವು. ಮರುಕ್ಷಣ ಉಲ್ಲೋಲಕಲ್ಲೋಲವಾಯಿತು. "ನಿನ್ನ ತಂಗಿ..ಮಹಾ ಧಡ್ಡ ನೋಡಿ' ಹಿಗ್ಗಿನ ಸಂಭ್ರಮದಲ್ಲಿ ರಾಮು ಕಣ್ಣರಳಿಸಿ ಶಾಮು ವನ್ನು ನೋಡಿದ. ಶಾಮುವಿನ ಕಣ್ಣನೀರು ಗಲ್ಲಕ್ಕೆ ಹರಿದಿದ್ದಿತು... ರಾಮು ರಾಜ್ಯಬಿಟ್ಟಿದ್ದು ನಡೆದ ಪುನಃ ಕಾಲಿಗೆ. "ಊಟಾಮಾಡಲಿಕ್ಕೆ ಹೋಗು – ಅಂದರ, ಕಣ್ಣಾಗ ನೀರೇನಪಾ .. ' ಶಾಮು ಅತ್ತುಬಿಟ್ಟ; ರಾಮು ಮುಂದೆ ಸಾಗಿದ. "ಅತು– ನಡಿ! ನಾನೂ ಬರತೀನಿ ನಿನ್ನ ಕೂಡ" ಶಾಮು ಮುಂದು ವರಿದು ಬಂದು ರಾಮುವನ್ನು ಹಿಡಿದುಕೊಂಡು "ರಾಮೂ—" ಎಂದ. ರಾಮು ಶಾಮುವಿನ ಕೈಯಲ್ಲಿದ್ದ ತಂತಿಯನ್ನು ನೋಡಿದ; ಚೀತ್ಕರಿಸತೊಡಗಿದ: "ಗೊತ್ತದನೋ ಶಾಮೂ—! ನನಗ ಗೊತ್ತದ ಅದರೊಳಗ ಏನದ ಅಂಬೂದು! ೭ ದಿನ ಪತ್ರ ಬರಲಿಲ್ಲ .. ಇವತ್ತ ೭ನೆಯ ದಿನ; ತಂತಿ ಬಂದದ? ನನಗ ಗೊತ್ತದ. ಒಂದು ಪತ್ರಕ್ಕ ಒಂದು ಹೊಸಾ ಉಸಿರುಬರತಿತ್ತು ನನಗ.. ಈಗ ತಾರು ಬಂದದ.. ತಾ ಇಲ್ಲೆ ಓದತೀನಿ: ಓದಿ ಸಾಯತೀನಿ! ತಾ!"

ರಾಮು ತಾರು ಕಸಿದುಕೊಂಡ. ಅದಾಗಲೇ ಬಿಚ್ಚಿದ್ದನ್ನು ಕಂಡು ಶಾಮುವನ್ನು ನೋಡಿದ. ಮುಂದಿನ ಕ್ಷಣ ಓದಿಬಿಟ್ಟ ಸಣ್ಣಮಕ್ಕಳು ಪಾಠ ಒಪ್ಪಿಸುವವರಂತೆ :

'Child died start.'

(ಮಗು ತೀರಿತು; ಹೊರಟು ಬನ್ನಿರಿ!)

ಶಾಮುವು ರಾಮುವನ್ನು ಮನೆಯಬಾಗಿಲಿಗೆ ಕರೆದು ತಂದ.

* * *

ಇದುವರೆಗೆ ತನ್ನ ರಾಮುವಿನ ಸಂಸಾರ ನೌಕೆ, ಶುಭ್ರವಾದ ವಿಶಾಲವಾದ, ನಿರಭ್ರವಾದ-ಪೌರ್ಣಿಮಾರಾತ್ರಿಯ ಆಕಾಶದಲ್ಲಿ ತೇಲುವ—ಬೆಳ್ಳನೆಯ ಚಂದಿರನಂತೆ ವಿರಾಜಿಸುತ್ತಿತ್ತು. ಅದಾವ ಅಪರಾಧಕ್ಕೋ, ಅದಾವ ಶಾಸ್ತ್ರಕ್ಕೋ ಚಂದಿರನಿಗೊಂದು ಕಲೆಯಿದ್ದಂತೆ, ತನ್ನರಾಮ (ಚಂದ್ರ)ನ ಸಂಸಾರಕ್ಕೂ, ಅವನ ಮೊದಲ ಹೆಂಡತಿ ತೀರಿ ಒಂದು ಕಲೆ ಮೂಡಿತ್ತು. 'ಕಲೆಯಿದ್ದದ್ದು ಚಂದಿರನಿಗೊಂದು ಶೋಭೆ', ಶಾಮುವಿನ ಕವಿಬುದ್ಧಿ ಅನೇಕ ಸಲ ಚುಚ್ಚಿತ್ತು. ಕವಿಬುದ್ಧಿಯ ಪಾಪವಿರಬಹುದು- ಅವನ ತಂಗಿಯ ಕುಂಕುಮದ ಪುಣ್ಯವಿರಬಹುದು, ಶೋಭೆ ವಿಶೇಷವಾಗಿತ್ತು.

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ
"ರಜಿಸ್ಟರ್ಡ"
ನೀಲಗಿರಿ ಅರ್ಕ
NILGIR ARK
ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.
ಬಾಟಲಿ ಕಿಮ್ಮತ್ತು ೪ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರ ಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಾಂಗವಾಯು, ಕೈ-ಕಾಲು-ಮೋರೆ ನಡುಗುವುದು, ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ; ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ದಂಗುಬಡಿಸುತ್ತಿತ್ತು, ತುಂಬಿತುಳುಕುತ್ತಿತ್ತು. ಈಗ ಮಗು ಸತ್ತು...... ಒಮ್ಮೆಲೆ- ಎಲ್ಲಿಯದೊ- ಗತಿಕಳೆದುಕೊಂಡ- ದಿಕ್ಕುಕಾಣದ- ನಿರಾಕಾರ- ಆಕರಾಳರೂಪದ- ಅಕಾಲದಲ್ಲಿಯ ದೊಂದು ಕಾರ್ಮೋಡ ತೇಲಿಬಂದು, ಆ ಚಂದಿರನನ್ನು- ಅವನ ಬೆಳ್ಳಿಯ ಬೆಳಕನ್ನು- ನಿರಭ್ರಆಕಾಶವನ್ನು- ಕತ್ತಲೆಯಿಂದ ಮುತ್ತಿತು. ಗಾಳಿಗೂ ಮಿಸುಕದ ಈ ಕಲ್ಲುಬಂಡೆಯಂತಹ ಕಾರ್ಮೋಡ ಅದಾವ ಅನರ್ಥಕ್ಕೆ ಬಂದಿದೆ? ತನ್ನ ರಾಮುವಿನ ದುಃಖ ಉಕ್ಕಿಬಾರದೆ, ಅದಾವ ವಿಪರೀತಕ್ಕೆ ಹುದುಗಿ ಕುಳಿತಿದೆ. ಆ ಕಾರ್ಮೋಡ ಉಸಿರುಕಟ್ಟಿ, ಸಿಡಿದು, ಒಡೆದು, ಹರಿದು ಹನಿ ಹನಿಯಾಗಿ ಬೀಳಬೇಕು, ಇದೇ ಅದರ ಗತಿ. ತನ್ನ ರಾಮು ದೊಡ್ಡ ಧ್ವನಿ ತೆಗೆದು-ಎದೆ ಎದೆ ಬಡಿದುಕೊಂಡು- ಅಳಬೇಕು. ಎಂಬುದೇ ಅವನ ದುಃಖದ ಗತಿ. ಆದರೆ, ಅದೆಷ್ಟು ಶಾಂತನಾಗಿರುವ ತನ್ನ ರಾಮು. ಇದುವರೆಗೆ ಆತ ತುಟಿ ಎರಡು ಮಾಡಿರಲಿಲ್ಲ. ಕಣ್ಣಲ್ಲಿ ಒಂದೇ ಒಂದು ಹನಿ ಇರಲಿಲ್ಲ. ಕೂಸು ಅತ್ತರೆ ಅಳುವ ರಾಮು, ಕೂಸು ಸತ್ತರೂ ಅಳದಿರುವನಲ್ಲ! .... ತನ್ನ ರಾಮು ಅಳಲೇ ಬೇಕು; ಧ್ವನಿತೆಗೆದು ಎದೆ ಎದೆ ಬಡಿದುಕೊಂಡು ಅಳಬೇಕು! ತನ್ನ ರಾಮು ಮನುಷ್ಯನಾಗಬೇಕಾದರೆ .... ಅಳಲೇಬೇಕು!

ಹೊರಹೊಸ್ತಿಲಲ್ಲಿ ಕಾಲಿಟ್ಟರು. ಅದರ ಒಳಮಗ್ಗುಲಿಗೆ, ಅಂಗತ್ತಲಾಗಿ ರಬ್ಬರಿನ ಗುಬ್ಬಿಯೊಂದು ಉರುಳಿತ್ತು. ಅದರ ಎದೆಯಮೇಲೆ ರಾಮುವಿನ ಕಾಲು ಬೀಳಲು- ಅದು ಕಿರಿಚಿತು. ರಾಮು ಗುಬ್ಬಿಯನ್ನು ನೋಡಿದ; ಶಾಮು ರಾಮುವಿನ ಕಣ್ಣು ನೋಡಿದ.... ಈಗ ತನ್ನ ರಾಮು ಅಳುವ ....

ರಾಮು ಮುಂದೆ ನಡೆದ. ಮೊಗಸಾಲೆಯಲ್ಲಿ ಅವನ ಮುದಿ ತಂದೆ ಮೊಣಕಾಲಿಗೆ ವಂಜೆಸುತ್ತಿ ಕುಳಿತಿರುವ; ರಾಮುವನ್ನು ನೋಡಿ, ಅವನ ಗೂಡುಸೇರಿದ ಒಣಗಣ್ಣು ಒದ್ದೆಯಾದುವು. ರಾಮು ತಂದೆಯನ್ನು ನೋಡಿದ. ಶಾಮು ರಾಮುವನ್ನು ನೋಡಿದ. ಈಗ . . . .

ರಾಮು ಮುಂದೆ ನಡೆದ; ನಡುಮನೆಯಲ್ಲಿ ಶಾಮುವಿನ ತಂಗಿ- ರಾಮುವಿನ ಹೆಂಡತಿ- ತುಂಬಿದ ಬಸಿರೆ-- ರಾಮುವನ್ನು ಕಂಡು, ತಾಳಲಾರದೆ- ಒಮ್ಮೆಲೆ ದುಃಖ ಉಕ್ಕೇರಿ ಬಂದು, ದೊಡ್ಡ ಧ್ವನಿ ತೆಗೆದು ಅಳಹತ್ತಿದಳು. ನಡುಮನೆಯ ಪಕ್ಕದ ಕೋಣೆಯೆ ಬಾಣಂತಿಯ ಕೋಣೆ. ಅಲ್ಲೊಂದು ತೊಟ್ಟಿಲು. ಹಸಿರು ಹಣೆಯಾದರೂ- ಇನ್ನೂ ಯೌವನವಿರುವ- ಸಕೇಶಿವಿಧವೆಯಂತೆ ತೂಗಾಡುತ್ತಿದೆ. ರಾಮೂ ಅದನ್ನು ನೋಡಿದ. ಶಾಮುವು ರಾಮುವಿನ ದೃಷ್ಟಿಯನ್ನು ಹಿಂಬಾಲಿಸಿ ಅವನ ಕಣ್ಣುಗಳನ್ನು ನೋಡಿದ..

ರಾಮು ಮುಂದೆ ನಡೆದ. ಅಡುಗೆಮನೆಯಲ್ಲಿ ಆರಿದ ಒಲೆ. ಕೆಕ್ಕರಿಸುತ್ತ ಕುಳಿತ ಅಡುಗೆಯ ಮುದುಕಿ, ರಾಮುವನ್ನು ಕಂಡು ಸೀರೆಯ ಸೆರಗಿನಿಂದ ಕಣ್ಣು ಹತ್ತಿಕ್ಕಿದಳು.

ರಾಮು ಮುಂದೆ ನಡೆದ. ಹಿತ್ತಲಲ್ಲಿ ತಗ್ಗು ತೋಡಿ ಬಂದು ದಣಿವಾರಿಸುತ್ತ ಕುಳಿತವನಂತೆ ಕುಳಿತ ಆಳು ಮಗ, ಯಜಮಾನನನ್ನು ಕಂಡು ಎದ್ದು ನಿಂತ.

ರಾಮು ಮತ್ತೆ ಮುಂದೆ ನಡೆದ, ಭಾವಿ ಇರುವಲ್ಲಿ ಬಂದ. ಶಾಮು ಹೌಹಾರಿ ರಾಮುವಿನ ಪಕ್ಕಕ್ಕೆ ಓಡಿಬಂದ. ರಾಮು ನಸುನಕ್ಕ. ಭಾವಿಯ ಬದಿಗಿರುವ ಕಟ್ಟೆಯ ಮೇಲೆ ಕಾಲಿಳಿಬಿಟ್ಟು ಕುಳಿತುಕೊಂಡ. ಶಾಮು ಧೋತರದ ಚುಂಗಿನಿಂದ ಕಣ್ಣೀರು ಒರಸಿಕೊಂಡ.

ತಂದೆ ಬಂದ. ಅಡುಗೆಯವಳು ಬಂದಳು. ಆಳುಮಗ ಮುಂದೆ ಸರಿದ; ತಂದೆ ಪ್ರಾರಂಭಿಸಿದ: "ಮೊನ್ನೆ ಸ್ವಲ್ಪ ಕಡಿಮೆ ಆಗಿತ್ತು" ಎಂದು. ಅಡುಗೆಯವಳು ಧ್ವನಿಕೂಡಿಸಿದಳು.

"ರಂಡೇಮಗಾ.. ಡಾಕ್ಟರು! ಕೆಮ್ಮಿಗೆ ಔಷಧಾ ಕೊಡೋ ಅಂದರ—ಮಲಾಮು ಹಾಕೂ ಅಂತ ಅಂದ!"

ಹುಚ್ಚು ನಗೆಯೊಂದು ರಾಮುವಿನ ಮೋರೆಯ ಮೇಲೆ ಮಿನುಗಿತು.

"ಒಟ್ಟಿನ ಮೇಲೆ...." ಮುಂದೆ ಮಾತಿರಲಿಲ್ಲ. ಕಟ್ಟೆಯನ್ನು ಇಳಿದು ರಾಮೂ ಸರ್ರನೆ ನಡುಮನೆಗೆ ಬಂದ. ಹೆಂಡತಿಯೆದುರು ಕೈಕಟ್ಟಿಕೊಂಡು ನಿಂತ. ಶಾಮು ಹಿಂಬಾಲಿಸಿ ಬಂದು ಕೇಳಿದ.

"ಕೂಸಿನ ಸಂರಕ್ಷಣೆಗಾಗಿ— ಮಲತಾಯಿಗಿಂತ — ಒಂದು ಆಡು—ಆಡು ಸಾಕಬೇಕಾಗಿತ್ತು" ರಾಮು ಮಾತನಾಡಿದ; ಶಾಮು ಕೇಳಿದ. ಇದುವರೆಗೂ ತನ್ನ ರಾಮು ತುಟಿ ಎರಡು ಮಾಡಿರಲಿಲ್ಲ; ಇದುವರೆಗೂ ಶಾಮು ರಾಮು ಮಾತನಾಡುವುದನ್ನು

ದನ್ನು ಕೇಳಬೇಕೆಂದು ತಡೆದಿದ್ದ. ಕೇಳಿದ : ಕೂಸಿನ ತೊದಲ್ನುಡಿಯಂತಿದೆ. " ಅದು ಸಾಕಬೇಕಾಗಿತ್ತು " ಚಂದಿರನ ಸುತ್ತುಗಟ್ಟಿದ ಕಾವ್ಯೋದ್ಯಾನ— ಆ ಕಾವ್ಯೋದ್ಯಾನದಲ್ಲಿಯು ಬರಸಿಡಿಲನ್ನು ಕೇಳಿದ ಶಾಮೂ. ಎದೆ ಒಡೆದುಕೊಂಡು ಹನಿ ಹನಿಯಾಗಿ ಕರಗುತ್ತ ಕನಸುವು ಕಳೆದುಕೊಳ್ಳಬೇಕೆಂದಿದ್ದನಲ್ಲವೆ ? ಕನಸುವು ಇಮ್ಮಡಿಸಿ ಇನ್ನೂ ತನಗೆ ಹಸಿವೆ ಇದೆ ಎಂದು ನಾಲಗೆ ಚಾಚಿ ಗುಡುಗಾಡುವುದನ್ನು ಕೇಳಿದ. ಆ ಕಾವ್ಯೋದ್ಯಾನದಲ್ಲಿಯದೊಂದು ಸೆಳ ಕು-ಮಿಂಚು, ತನ್ನ ರಾ ಮು ವ ನ್ನು ಅಪ್ಪಿ ಸಂತಯಿಸಬೇಕೆಂದು ಹಾತೊರೆಯುತ್ತಿದ್ದ ತನ್ನ ತೋಳಿನಲ್ಲಿ ಸಂಚರಿಸಿದಂತಾಯಿತು. ಅಂಗಾಂಗವೆಲ್ಲ ಥರಥರನೆ ನಡುಗಿತು. ಹಿಚುಕಿ ಹಿಚುಕಿ ತನ್ನ ತೋಳುಗಳನ್ನು ನೋಡಿಕೊಂಡ, ತನ್ನ ತಂಗಿಯಿರುವಲ್ಲಿ ನೋಡಿದ; ಪುನಃ ತೋಳು ನೋಡಿದ. ಒಂದು ಭುಜದಿಂದ ಪಾದದ ವರೆಗೆ ನೇತು ಬಿದ್ದಿದೆ; ಇನ್ನೊಂದು ತನ್ನ ರಾಮುವಿನ ಹೆಗಲನ್ನು ಸುತ್ತು-ವರಿಯ ಹತ್ತಿದೆ. ತೋಳಿನಿಂದ ತುದಿಬೊಟ್ಟಿನವರೆಗೆ ಕಪ್ಪನೆಯ ಕೂದಲು ಬೆಳೆದು ನಿಂತಿವೆ. ಹಾಗೆಯೆ ನೋಡುತ್ತನಿಂತ. ನೋಡುತ್ತಿರುವಾಗಲೆ ಕೈಬೆರಳಿಗೆ ಪಂಜರ ಹಾಯ್ದುವೆ. ಮರುಕ್ಷಣ ನಖ ಉದ್ದವಾಗಿ ಬೆಳೆದುಕೊಂಡಿವೆ. ಉಗುರೂ ಬೆರಳೂ ಹಾಗೆಯೇ ನಾಗಿವೆ. ರಾಮುವಿನ ಹೆಗಲು ಬಿಟ್ಟು ಕುತ್ತಿಗೆ ಸುತ್ತಿವೆ. ಸುತ್ತುವರಿದು-ಕುತ್ತಿಗೆಯ ಮತ್ತೊಂದು ಬದಿಯಲ್ಲಿ-ಒಂದನ್ನೊಂದು ಮುಟ್ಟಲಿವೆ.

' ಏನು ಮಾಡತೀಯೊ—ಶಾಮೂ ' ಚೀರಿದವಳು ತನ್ನ ತಂಗಿ. ತನ್ನ ಪ್ರೀತಿಯ ಗೆಳೆಯನ ಹೆಂಡತಿ; ತಾನೇನು ಮಾಡುತ್ತಿದ್ದ ? ಏನೊಂದೂ ಇರಲಿಲ್ಲ; ತನ್ನಷ್ಟಕ್ಕೆ ತನ್ನ ತೋಳು-ಪ್ರೀತಿಯ ಗುರುತಿಗಾಗಿ ರಾಮುವಿನ ಹೆಗಲ ಮೇಲೆ ಬಿದ್ದುಕೊಂಡಿದೆ; ತಾನು ಸನ್ನದ್ಧದೃಷ್ಟಿಯಿಂದ ಆ ತೋಳಿನ ಮೂಕಮಮತೆಯನ್ನು ನಿಟ್ಟಿಸುತ್ತ ನಿಂತಿರುವ ತನ್ನ ರಾಮು— ಕವಿಹೃದಯದ ರಾಮು— ಮಾತನಾಡಿರುವ. ತಾನು ಕೇಳಿರುವ. ಅದರ ಸೂಕ್ಷ್ಮತೆಗೆ— ಮಾರ್ಮಿಕತೆಗೆ-ನಯಕ್ಕೆ ಬೆರಗಾಗಿ ನಿಂತಿರುವ. . . . . ಆದರೆ ತನ್ನ ತಂಗಿ ಚೀರಿದಳೇಕೆ ?

ಶಾಮು ತಲೆ ಝಾಡಿಸಿದ. ತಂಗಿಯನ್ನು ನೋಡಿದ, ತನ್ನನ್ನೂ ನೋಡಿಕೊಂಡ. ಒಂದು ಪುಟ್ಟ ಮಂಗ, ಒಂದು ಮುದಿಮಂಗ; ತನ್ನ ರಾಮು ಆ ಮಂಗನನ್ನಾಡಿಸುವವ; ಬುಡುಬುಡುಕೆ ಬಾರಿಸ ಹತ್ತಿದ್ದ; ತಾನು ' ಲಾಗ ' ಹಾಕುತ್ತಿದ್ದ. ಪುಟ್ಟ ಮಂಗ ಕಿರಿಚ ಹತ್ತಿತ್ತು.

ಶಾಮು ತಲೆ ಅಲ್ಲಾಡಿಸಿದ; ಮುದಿಮಂಗವಲ್ಲ, ಗೋರಿಲ್ಲಾ ! ತಾನೊಂದು ಗೋರಿಲ್ಲಾ ! ಮಂಗನ ಮುತ್ತಾತ ! ಮನುಷ್ಯನ ಆದಿಪುರುಷ ! ತನ್ನ ರಾಮು ಮನುಷ್ಯ ! ಮಂಗನ ದೇವರು— ತನ್ನ ದೇವರು ! ತನ್ನ ರಾಮು ಒಬ್ಬ ಕವಿ— ಮನುಷ್ಯನ ದೇವರು. ಒಂದೇ ಒಂದು ಅರೆಗಳಿಗೆಯಲ್ಲಿ ತಾನು ಪ ಶು ವಾ ಗಿ ದ್ದ. ಮನುಷ್ಯತ್ವ ಮರೆತಿದ್ದ; ಕೊಲೆಗಡುಕ ಪಶುವೃತ್ತಿ ಸಾಧಿಸಲಿದ್ದ.

ಶಾಮು ತತ್ತರಿಸಿದ; ಮೈಯೆಲ್ಲ ಬೆವತಿತು. ರಾಮುವನ್ನು ನೋಡುವ ಧೈರ್ಯ ಮಾಡಿದ; ರಾಮೂ ಇನ್ನೂ ಕುತ್ತಿಗೆಯ ಮೇಲೆ ಬೆರಳಾಡಿಸುತ್ತ ನಿಂತುಕೊಂಡಿದ್ದ. ಅದೆಷ್ಟು ಗಂಭೀರನಾಗಿ-ದಿಟ್ಟನಾಗಿ-ಎದೆ ಸೆಟೆಸಿಕೊಂಡು ನಿಂತಿರುವನಲ್ಲ ತನ್ನ ರಾಮು! ಅವನಿಗೆಷ್ಟು ಧೈರ್ಯವಿದೆ ? ಅದೆಂತಹ ಕವಿಹೃದಯ ವದು ! ಅದಾವ ಅನರ್ಘಕ್ಕಿದೆ ?

ಶಾಮು ಹೊರಹೋದ; ರಾಮು ನಿಂತಲ್ಲಿಂದ ಚೀರಿಕೊಂಡ. " ಶಾಮೂ— ನನ್ನಿಂದ ತಪ್ಪಾಯಿತು. " ಶಾಮು ಕೇಳಿದ, ಮುಂದಿನ ಹೆಜ್ಜೆ ಇರಿಸಿದ. ಪುನಃ ರಾಮು ಕೂ ಗಿ ಕೊಂ ಡ " ಶಾಮೂ—ನಾನು ಆ ಮಾತನ್ನು ಆಡಬಾರದಿತ್ತು—ನನ್ನಿಂದ ತಪ್ಪಾಯಿತು ! " ಶಾಮುವೂ ತು ಟಿ ಯ ಲ್ಲಿ ನುಡಿದ " ನನ್ನದೂ ತಪ್ಪಾಯಿತು—ಆ ಮಾತನ್ನು ನಾನೂ ಕೇಳಬಾರದಾಗಿತ್ತು ! "

ಶಾಮು ಹೊರಳಿನೋಡಿದ; ರಾಮು ಹೆಂಡತಿಯ ಬದಿಯಲ್ಲಿ ಮೊಣಕಾಲೂರಿದ್ದ. ಒಂದು ಕೈ ಅವಳ ಹೆ ಗ ಲ ಮೇ ಲಿ ತ್ತು. ಇನ್ನೊಂದು ಅ ವ ಳ ಕಣ್ಣೊರಸುತ್ತಿತ್ತು. ಮತ್ತು-ರಾಮು ಕೇಳಿದ-ತನ್ನ ರಾಮು ದೊಡ್ಡ ಧ್ವನಿ ತೆಗೆದು-ಎದೆ ಎದೆಬಡಿದುಕೊಂಡು-ಅಳುವುದನ್ನು.

* * *

ಮರುದಿನ ರಾಮು ಮನೆಯಲ್ಲಿರಲಿಲ್ಲ. ಆದರ ಮರುದಿನ ಅವನ ಪತ್ರವೊಂದು.

" ಪ್ರಿಯ ಶಾಮು,

ಕುಸು ದಿನ-ನನಗೆ ಅಲ್ಲಿಗೆ ಬರಲು ಮನಸ್ಸಾಗದು. ನನ್ನ ಕಂದ ನನ್ನು ಮರೆಯಲು ಪ್ರಯತ್ನಿಸುವೆ. ಅಲ್ಲಿದ್ದರೆ ಅದಾಗದು. ನಿನ್ನ ತಂಗಿಯ ಬಸಿರು ನನಗೆ ನನ್ನ ಕಂದನ ನೆನಪನ್ನು ಕೊಡದಿರದು—

ನಿನ್ನವ—

ರಾಮು.

* * *

ಮುಂದೇ ಹತ್ತೇ ದಿನಕ್ಕೆ ರಾಮುವಿಗೆ ಶಾಮುವಿನ ಪತ್ರವೊಂದು:

ಪ್ರಿಯ ರಾಮು,

ನಿನ್ನ ಕಂದ ಮರಳಿ ಬಂದಿರುವ. ತಾಯಿಯಿದ್ದ ಮಗು ನಿನ್ನ ಹಣೆಯಲ್ಲಿಲ್ಲ; ನನ್ನ ತಂಗಿ ತೀರಿಕೊಂಡಳು; 'ಬಸುರಿದ್ದಾಗ, ಹೃದಯಕ್ಕಾದ ಆಘಾತ ಕಾರಣ ' ಎಂದು ಡಾಕ್ಟರರು ಹೇಳುವರು. ಇದ್ದಿರಬಹುದು. . . ಇರಲಿಕ್ಕಿಲ್ಲ; ಕೂಸು ಮಾತ್ರ ಕ್ಷೇಮದಿಂದಿದೆ. ಈ ಹಲಕ್ಕಾದರೂ ಆಡೊಂದನ್ನು ಸಾಕು !

ನಿನ್ನವ

ಶಾಮು.

ಮೌಲಾನಾ ಅಬುಲ್ ಕಲಾಮ್ ಆಜಾದ್

ಶ್ರೀ. “ ಹರಟೆಯ ಮಲ್ಲ ”

★

ಮೊದಲಿನಿಂದಲೂ ಇಸ್ಲಾಮಿ ಸಂಸ್ಕೃತಿಯಲ್ಲಿ ಮುಳುಮುಳುಗಿ ಮಿಂದ ಆಜಾದರೆಲ್ಲಿ! ಕೇವಲ ಅಭಿನಿವೇಶದಿಂದಲೂ ಧುರೀಣತೆಯ ಆಶೆಯಿಂದಲೂ ಮುಸ್ಲಿಮ್ ಪಕ್ಷವನ್ನು ವಹಿಸಿರುವ ಜಿನ್ನಾ ಎಲ್ಲಿ? ಸನಾತನ ಇಸ್ಲಾಮೀಯರಾದ ಮೌಲಾನಾ ಆಜಾದರಿಗೆ ಯಾವಾಗಲೂ ಅಖಂಡಭಾರತದ ಕನಸು! ಸುಧಾರಕ ಮುಸಲ್ಮಾನರಾದ ಜಿನ್ನಾ ಅವರಿಗೆ ಹಿಂದುಸ್ಥಾನವನ್ನು ಸೀಳಿ ಆಳಬೇಕೆಂಬ ಕನಸು! ಹಿಂದೀಯರ ಭವ್ಯಭವಿಷ್ಯತ್ತು ಯಾರ ಕಾರ್ಯದಲ್ಲಿ ಇದೆಯೆನ್ನುವಿರಿ?

★

‘ ತಮೀರ್ಂ ಗಿರ್‌ಗಯಿ, ತಜ್‌ವೀಜ್ ಮಂಜೂರ್ ’

ವರ್ತಮಾನ ಭಾರತದ ಕರ್ಣಧಾರರಾಗಿರುವ
ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಆಜಾದರು

ತ್ರಿಪುರಿಯ ಕಾಂಗ್ರೆಸ್ಸಿನಲ್ಲಿ ವೇದಿಕೆಯಿಂದ ಬಾರಿಬಾರಿಗೆ ಈ ಮಾತು ಕೇಳಿಬರುತ್ತಿದ್ದುವು. ದಕ್ಷಿಣದೇಶದ ದ್ರಾವಿಡರಿಗಂತೂ ಅದರ ಅರ್ಥವೇ ಆಗುತ್ತಿರಲಿಲ್ಲ. ಉತ್ತರದವರಲ್ಲೂ ಉರ್ದು ಸಂಪರ್ಕವಿಲ್ಲದ ಶುದ್ಧ ಹಿಂದೀ ಜನಕ್ಕೂ ಅಷ್ಟೆ. ‘ಸವರಣೆ ಬಿದ್ದು ಹೋಯಿತು. ಗೊತ್ತುವಳಿ ತೀರ್ಮಾನವಾಯಿತು’ ಎಂದು ಅದರ ಅರ್ಥ. ತ್ರಿಪುರಿಯಲ್ಲಿ ‘ತಮೀರ್ಂ’ಗಳ ಸಮಾರಾಧನೆಯೇ ನಡೆದಿತ್ತು. ಕಾಂಗ್ರೆಸ್ಸು ಮುಗಿಯುವುದರೊಳಗಾಗಿ ಪ್ರತಿನಿಧಿಗಳಿಗೆ ಆ ಮಾತು ಬಾಯಿಪಾಠ. ಈ ಉತ್ಸಾಹ-ವಿನೋದಗಳಲ್ಲಿ ಗೊತ್ತುವಳಿಗಳ ಅದೃಷ್ಟ ಶ್ರವಣವು ಒಮ್ಮೆಯಾದರೂ ಇಂಗ್ಲೀಷಿನಲ್ಲಿ ಆಗಲಿಲ್ಲವೆಂಬ ಮಾತು ಜನರ ಗಮನಕ್ಕೆ ಬರಲಿಲ್ಲ.

ತ್ರಿಪುರಿಯಲ್ಲಿ ಮೌಲಾನಾ ಆಜಾದರೇ ಅಧ್ಯಕ್ಷರ ಕೆಲಸವನ್ನು ನಡೆಸಿದರು. ಮಾಜಿ ಅಧ್ಯಕ್ಷರ ಪರಂಪರೆಯಲ್ಲಿ ಅಲ್ಲಿದ್ದವರಲ್ಲಿ ಅವರೇ ಮೊದಲಿನವರು. ಆದ್ದರಿಂದ ಅವರಿಗೆ ಆ ಕೆಲಸ ಬಂತು. ತೀರ್ಮಾನಗಳನ್ನು ಸವರಣೆಗಳನ್ನು ಪ್ರತಿನಿಧಿಗಳ ಮತಕ್ಕೆ ಗುರಿಮಾಡಿ ಫಲವನ್ನು ಹೇಳುವ ಕೆಲಸ ಅವರದಾಗಿತ್ತು. ಅವರಿಗೆ ಇಂಗ್ಲೀಷು ಸರಿಯಾಗಿ ಬಾರದೆಂಬ ವಿಷಯ ಎಲ್ಲರಿಗೆ ತಿಳಿದದ್ದು ಆಗಲೇ.

ಆದರೂ ಆಜಾದರು ಇಂದು ರಾಷ್ಟ್ರಪತಿಯಾಗಿದ್ದಾರೆ. ಮೆಕಾಲೆ ಸಾಹೇಬನ ಗುಲಾಮಗಿರಿವಿದ್ಯೆಗೆ ಹಿಂದುಸ್ಥಾನವು ತೋರಿಸುವ ಗೌರವಕ್ಕೆ ಗುರುತು ಇದು. ಇಂಗ್ಲೀಷು ಈಗಿನ ಯುಗದ ದೇವಭಾಷೆ ಎಂಬ ನಮ್ಮ ಜನಕ್ಕೆ ಉತ್ತರವೂ ಹೌದು.

ಹಿಂದೂ ಮುಸ್ಲಿಮರು ಒಂದು ಜನವಲ್ಲ. ಇಬ್ಬರೂ ಬೇರೆ-ಬೇರೆ ಸೃಷ್ಟಿ. ಮೂಡಲ ಪಡುವಲ ಭೇದ ಅದು. ಅಳಿಸಲಾರದ ಭೇದ, ಕಳೆಯಲಾರದ ಭಿನ್ನತೆ— ಎಂದು ಜಿನ್ನಾ ಇಂದು ವಾದಿಸುತ್ತಿದ್ದಾರೆ. ಈ ವಾದ ಇಂದಿನದಲ್ಲ. ಅಲಿಘರ್ ಚಳವಳಿ ಈ ವಾದದ ಆಕಾರ. ಈ ವಾದ ಭ್ರಾಂತಿಜನ್ಯವೆಂದೂ ಆತ್ಮವಿಘಾತಕವೆಂದೂ ಆಜಾದರು ಮೊದಲಿನಿಂದ ವಾದಿಸುತ್ತಿದ್ದಾರೆ. ನಾಡಿನಲ್ಲಿ ಆ ದೃಷ್ಟಿ ಅವರ ಕೃಷಿಯಿಂದ ಹರಡುತ್ತಿದೆ. ಅವರ ಜೀವನ ಈ ದೃಷ್ಟಿ ಪ್ರಸಾರಕ್ಕೆ ಐಕ್ಯಸಾಧನೆಗೆ ಮೀಸಲಾಗಿದೆ. ಇಷ್ಟುದಿನ ಒಳಗೊಳಗೇ ಹರಿಯುತ್ತಿದ್ದ ಈ ವಿಷಭಾವನೆ— ಜಿನ್ನಾಸಾಹೇಬರ ಪುಣ್ಯದಿಂದ ಬಯಲಿಗೆ ಬಂದಿದೆ. ಬೇತಾಳನಂತೆ ಕುಣಿಯುತ್ತಿದೆ. ಇಂಥ ಸಂದರ್ಭದಲ್ಲಿ ನಾವೆಲ್ಲ ಒಂದು, ಒಂದೇ ಮೂಗಿನ ಎರಡು ಹೊಳ್ಳೆ ಎಂದು ಮೂವತ್ತು ವರ್ಷದಿಂದ ಡಾಣಾ ಡಂಗುರವಾಗಿ

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !



೮ ಆಣೆಗೆ ೧೦ ಬ್ಲೇಡು !

ಸಾರುತ್ತಿರುವ ಆಜಾದರು ರಾಷ್ಟ್ರಪತಿಯಾದುದು ಆ ವಾದದ ಭರತವಾಕ್ಯವೇ ಸರಿ. ಜನ ಆಜಾದರನ್ನು ಅದಕ್ಕಾಗಿ ಆರಿಸಿಲ್ಲ ಆ ಪದವಿಗೆ. ಅವರಿಗೆ ಅದು ಸದಾ ತೆರವೇ ಇತ್ತು. ಆಜಾದರೇ ಆ ಕಾರ್ಯವಿಧಿಗಾಗಿ ಮುಂದೆ ಬಂದು ಪೌರೋಹಿತ್ಯವನ್ನು ಹೂಡಿದ್ದಾರೆ.

ಆಜಾದರು ರಾಷ್ಟ್ರಪತಿಯಾದುದು ಇದೇ ಮೊದಲ ಸಲವಲ್ಲ. ೧೭ ವರ್ಷದ ಕೆಳಗೆಯೆ ಅವರಿಗೆ ಆ ಗೌರವ ಸಂದಿತ್ತು. ಆಗಲೂ ಇಂಥದೇ ಸಂದರ್ಭ. ಕಾಂಗ್ರೆಸ್ಸಿಗೆ ನಾಡಿಗೆ ಈಗಿದ್ದಂತೆ ವಿಷಮ ಪರೀಕ್ಷೆ. ಈಗ ಪರಯೂಥ ಕಲಹ ಬಾಯಿ ತೆರೆದ ಹುಲಿಯಂತೆ ಇದಿರಿಗೆ ಕೂತಿದೆ. ಹುಲಿಯ ಬಣ್ಣಕ್ಕೆ ಹೆದರಿದ್ದರೂ ಉಗುರಿನ ಗಾಯದ ಪರಿಚಯ ನಾಡಿನಲ್ಲಿ. 'ನಾವು ನೂರಲ್ಲ, ನೂರಾ ಐದು ಜನ' ಎಂಬ ಭಾವನೆ ಹರಡೀತು. ೧೯೨೩ರಲ್ಲಿ ಕಾಂಗ್ರೆಸ್ಸು ಸ್ವಯೂಥಕಲಹದ ಯಾದವೀ ಆಟದಲ್ಲಿ ಮುಳುಗಿ ಹೋಗಿದ್ದಿತು. ಈಗ ಸಿಂಹದ ಮರಿ ಇದಿರಾಟವಾಡುತ್ತಿದ್ದರೆ ಆಗ ಬಂಗಾಲದ ಸಿಂಹವೆ ಕೆರಳಿನಿಂತಿತ್ತು.

೧೯೨೨ ರಲ್ಲಿ ಗಯಾ ಕ್ಷೇತ್ರದಲ್ಲಿ ಕಾಂಗ್ರೆಸ್ಸು. ಕಾಂಗ್ರೆಸ್ಸಿನಲ್ಲಿ ಇಬ್ಭಾಗವಾಗಿತ್ತು. ಗಾಂಧೀ ಪಕ್ಷವೊಂದಾದರೆ ಸ್ವರಾಜ್ಯ ಪಕ್ಷವೊಂದು. ಬಂಗಾಲದ ಸಿಂಹ ಚಿತ್ತರಂಜನದಾಸರು, ತಮ್ಮ ಸ್ವರಾಜ್ಯ ಪಕ್ಷದ ಶಾಸನಸಭಾ ಪ್ರವೇಶದ ತತ್ತ್ವವನ್ನು ಪ್ರತಿಪಾದಿಸಿ, ಕಾಂಗ್ರೆಸ್ಸನ್ನೊಪ್ಪಿಸಲು ಬಹಳ ಹೋರಾಡಿದರು. ಅಮಾತ್ಯ ರಾಜಗೋಪಾಲಾಚಾರ್ಯರ ಇದಿರು ಅವರ ಬಾಣ ನೆಡಲಿಲ್ಲ. ಆದರೆ ಮನಸ್ಸುಗಳು ಮಾತ್ರ ಗಾಯಗೊಂಡುವು. ಕಾಂಗ್ರೆಸ್ಸಿನ ಗತಿ ಕುಂದಿತು. ಆಗ ಗಾಂಧೀಜೀ ಸೆರೆಮನೆಯಲ್ಲಿದ್ದರು. ಅತ್ತೊಂದು ಇತ್ತೊಂದು ಎಳೆಯುವ ಕುದುರೆಗಳ ಈ ಕಾಂಗ್ರೆಸ್ಸಿನ ಸಾರಥ್ಯವನ್ನು ಯಾರು ಮಾಡಬಲ್ಲರು? ನಮ್ಮಲ್ಲಿ ಸಂಧಾನಚತುರರು ಯಾರು? ಎಲ್ಲರ ತಲೆಯಲ್ಲೂ ಇದೇ ವಿಚಾರ; ಎಲ್ಲರ ಬಾಯಲ್ಲೂ ಇದೇ ಪ್ರಶ್ನೆ.

ಮರುವರ್ಷ ದೆಹಲಿಯಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನ ನೆರೆದಾಗ ಜನ ಆ ಸಾರಥಿಯನ್ನು ಕಂಡುಕೊಂಡಿತು. ದೆಹಲಿಯಲ್ಲಿ ೧೯೨೩ ರಲ್ಲಿ ನಡೆದುದು ಕಾಂಗ್ರೆಸ್ಸಲ್ಲ; ನಿಜವಾಗಿ ಅದೊಂದು ಸಂಧಾನಸಭೆ. ಆ ಸಂದರ್ಭದಲ್ಲಿ ಎಲ್ಲರ ಕಣ್ಣಲ್ಲೂ ಬೆಳಗಿದ ಮೂರ್ತಿ ಮೌಲಾನಾ ಆಜಾದರದು. ಆಗ ಹಿಂದುಸ್ಥಾನದ ಜನ–ನಾವು–ಇನ್ನೂ ರಾಷ್ಟ್ರವಾಗಿರಲಿಲ್ಲ. ಗಾಂಧೀಜಿಯ ತಪಸ್ಸು ಇನ್ನು ಮೊಳಕೆಯಲ್ಲಿತ್ತು. ಅಂತೇ ಮೌಲಾನಾ ಅಂದು ಬರೀ ಅಧ್ಯಕ್ಷರಾಗಿದ್ದರು. ಇಂದು ನಾವು ರಾಷ್ಟ್ರವಾಗಿದ್ದೇವೆ. ಕಾಂಗ್ರೆಸ್ಸಿನ ಅಧ್ಯಕ್ಷರಿಂದು ರಾಷ್ಟ್ರಪತಿ. ೧೭ ವರುಷಗಳ ಕೆಳಗೆ ಆಜಾದರು ಆ ಪೀಠವನ್ನು ಏರಿ ತಮ್ಮ ಸೌಜನ್ಯ ಸಾಮರಸ್ಯಗಳನ್ನು ಹರಿಸದೆ ಇದ್ದಿದ್ದರೆ ಕಾಂಗ್ರೆಸ್ಸಿನ ಇತಿಹಾಸ ಹೇಗೆ ಇರುತ್ತಿತ್ತೋ !

ಮೌಲಾನಾ ಹುಟ್ಟಿದಾಗ ಶಾಂತಿದೇವತೆ ನಡುನೆತ್ತಿಯಮೇಲೆ ಹೊಳೆಯುತ್ತಿದ್ದಿರಬೇಕು. ಅವರ ಬಾಳಿನಲ್ಲಿ ಶಾಂತಿ-ಸಾಮರಸ್ಯಗಳೇ ಪ್ರಧಾನ ಲಕ್ಷಣಗಳು. ಕಾಂಗ್ರೆಸ್ಸಿಗೆ ಗಾಂಧೀಜೀ ರಾಮನಾದರೆ ಮೌಲಾನಾ ವಿಭೀಷಣ. ವಿಭೀಷಣ ಪಟ್ಟಾಭಿಷೇಕವು ರಾಮರಾಜ್ಯದ ಸಂಕಲ್ಪದ ಮೊದಲಹೆಜ್ಜೆ.

ಮೌಲಾನಾರ ಸ್ವಭಾವವೇ ಹಾಗೆ; ಅತಿ ಸರಳ. ಅವರ ಮಾತಿನಲ್ಲಿ ತರ್ಕದ ಚಾಕಚಕ್ಯವಿಲ್ಲ; ಶ್ರದ್ಧೆಯ ಗಾಂಭೀರ್ಯವಿದೆ. ಚರ್ಚೆಯಲ್ಲಿ ಪೂರ್ವಪಕ್ಷದ ಉದ್ವೇಗವಿಲ್ಲ; ಧರ್ಮಾಧಿಕಾರಿಯಂತೆ ಶಾಸ್ತ್ರೀಯ ದೃಷ್ಟಿಯನ್ನು ತೋರುತ್ತಾರೆ. ಕಾಂಗ್ರೆಸ್ಸಿನಲ್ಲಿ ಬಿಸಿಬಿಸಿಯಾದ ಚರ್ಚೆ ನಡೆಯುತ್ತಿರುವಾಗ ವೇದಿಕೆಯ ಮೇಲೆ ಸಣ್ಣಗಾಗಿ ಟೀಕೆ-ಟೂಕೆಗಳು ನಡೆದಿರುತ್ತವೆ. ಆಜಾದರು ಲಕ್ಷ್ಯಗೊಟ್ಟು ಚರ್ಚೆಯನ್ನು ಕೇಳುತ್ತ ಆ ವಿಮರ್ಶೆಯನ್ನು ಸುರಿಸುತ್ತಾರೆ. ಒಮ್ಮೊಮ್ಮೆ ಅವರ ಮೋರೆ ಕೆಂಪೇರಿ, ಮೊದಲೇ ಕೆಂಪಾದುದು ಕೆನ್ನೈದಿಲೆಯಂತೆ ಅರಳುತ್ತದೆ. ಇಷ್ಟೆಲ್ಲ ನಡೆದರೂ ಅವರು ಉದ್ರೇಕದ ಪಾಲಾಗುವುದಿಲ್ಲ. ಅದು ಬರೀ ಉತ್ಸಾಹ ಮಾತ್ರ. 'ಕಾಶೀ ಬೊಂಬಾಯಿ' ಪಟಗಳನ್ನು ಒಂದು ಬಿಲ್ಲೆ ಕೊಟ್ಟು ಕನ್ನಡಿಯೊಳಗಿಂದ ನೋಡುವ ಮಗುವಿನಂತೆ ಅವರ ಮನಸ್ಸು. ಸದಾ ಪ್ರಸನ್ನ; ಸರ್ವದಾ ಪ್ರಶಾಂತ.

ಆಜಾದರ ಈ ಪ್ರಸನ್ನಹೃದಯಕ್ಕೆ ಸಂಕೋಚ-ಸ್ವಾರ್ಥಗಳು ಸೇರುವುದಿಲ್ಲ. ಚಿಲ್ಲರೆ ಅಭಿಮಾನಗಳು, ಕೀಳಾದ ಮತಾವೇಶ ಅವರ ಸ್ಥೈರ್ಯವನ್ನು ಅಲುಗಾಡಿಸಲಾರವು. ಹಿಂದುಸ್ಥಾನದಲ್ಲಿ ಈಚೆಗೆ ಕೆಲವು ಕಾಲದಿಂದ ಹಿಂದು-ಮುಸ್ಲಿಮ ಕಲಹ ಭಾರತ ಯುದ್ಧದಂತೆ ಕ್ರಮವಾಗಿ ಬೆಳೆದು ಹೋಗಿದೆ. ಹಿಂದುಸ್ಥಾನದ ರಾಷ್ಟ್ರೀಯತೆ-ಸಂಸ್ಕೃತಿಗಳ ಬೊಡ್ಡೆಗೆ ಕೊಡಲಿಯ ಪೆಟ್ಟು ಬೀಳಹತ್ತಿವೆ. ಜನರಲ್ಲಿ ಪರಸ್ಪರವಾಗಿ ಸಂಶಯ ಅವಿಶ್ವಾಸಗಳು ತುಂಬಿ ಹೋಗಿವೆ. ಗಾಂಧೀಜಿಯಂಥ ಮಹಾತ್ಮನೇ ಹಿಂದೂ-ಮುಸ್ಲಿಮ ಸೌಹಾರ್ದದ ಮಾತು ಬಂದಾಗ ನಡುಗುತ್ತಾರೆ. ಆದರೆ ಆಜಾದರು ಮಾತ್ರ ಅಚಲಶ್ರದ್ಧೆಯಿಂದ ಅಸೀಮ ಧೈರ್ಯದಿಂದ ಆ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ; ನಮ್ಮ ಗೋಕುಲಾಷ್ಟಮಿಯಲ್ಲಿ ಈ ಇಮಾಂ ಸಾಹೇಬರಿಗಾಗಿ ಒಂದು ಮನೆ ನಿರ್ಮಿತವಾಗಿದೆ.

ಹಿಂದುಸ್ಥಾನದ ರಾಜಕೀಯರಂಗದಲ್ಲಿ ಈಗ ನಡೆದಿರುವ ರಾಮನಟ್ಟದ ದಹನಸಮಾರಂಭದಲ್ಲಿ ತಮ್ಮ ಮನಸ್ಸಿನ ಶಾಂತಿ

ಎಲ್ಲರಿಗೂ ಗೊತ್ತಿರಲಿ

★

ಮೇಸರ್ಸ್ ಪಿ. ಜಿ. ಭಾಗವತ ರಜಿಸ್ಟರ್ಡ್ ಅಕಾವುಂಟಂಟ್ಸ್ ಆಫ್‌ಬಾಂಬೆ-ಅವರು ತಮ್ಮ ಬ್ರ್ಯಾಂಚ್ ಆಫೀಸನ್ನು ಹುಬ್ಬಳ್ಳಿಯ ಹಾಸ್ಪಿಟಲ್ ರೋಡಿನಲ್ಲಿರುವ ಭೂಸನೂರು ಬಿಲ್ಡಿಂಗಿನಲ್ಲಿ ತೆರೆದಿದ್ದಾರೆ. ಇವರು ಕರ್ನಾಟಕದಲ್ಲಿಯ ಅನೇಕ ಬ್ಯಾಂಕುಗಳನ್ನೂ ಸಾರ್ವಜನಿಕ ಕಂಪನಿಗಳನ್ನೂ ಬೇರೆ ಸಂಸ್ಥೆಗಳನ್ನೂ ಆಡಿಟ್‌ಮಾಡಿ ಈಗಾಗಲೆ ಹೆಸರಾದವರು. ಇನ್‌ಕಮ್‌ಟ್ಯಾಕ್ಸ್ ಪ್ರಕರಣಗಳ ಸಂಬಂಧದಲ್ಲಿಯೂ ಒಳ್ಳೆಯ ಸಲಹೆಗಳನ್ನು ಕೊಡಲು ಬಲ್ಲಿದರಿವರು.

ತಂದೆ ಸಿಪಾಯಿ ದಂಗೆಯ ಕೊನೆಯ ಅಂಕದ ಪರಂಪರೆಯಲ್ಲಿ ಹಿಂದುಸ್ತಾನವನ್ನು ಬಿಡಬೇಕಾಯಿತು. ಆ ದೇಶಭ್ರಷ್ಟತೆಯ ಮೊದಲ ದಿನಗಳಲ್ಲಿ ಹುಟ್ಟಿದವರು ಆಜಾದ್. ಮೇಲೆ ಹೇಳಿದಂತೆ ಬೆಳೆದವರು. ಅವರ ಹುರುಪು-ಹಟಗಳನ್ನು ಗೆಲ್ಲಬಹುದೇ ?

ಕಲಕತ್ತೆಯಿಂದ ಮತ್ತೊಂದು ವಾರಪತ್ರಿಕೆ-ಅಲ್ ಬಲಾಗ್-ಹೊರಡಿಸಿದರು. ಈ ಸಲ ಸರಕಾರವು ಹೊಸ ಅಸ್ತ್ರವೊಂದನ್ನು ಉಪಯೋಗಿಸಿತು. ಬಂಗಾಲ ಪ್ರಾಂತದಿಂದ ಗಡೀಪಾರು ಮಾಡಿತು ಆಜಾದರನ್ನು. ಅದಕ್ಕೆ ಮೊದಲೇ ಸಂಯುಕ್ತಪ್ರಾಂತ, ಮುಂಬಯಿ, ಪಂಜಾಬು ಮುಂತಾದ ಪ್ರಾಂತಗಳು ಅವರನ್ನು ತಮ್ಮ ಪ್ರಾಂತಗಳಿಗೆ ಬಾರದಂತೆ ನಿಷೇಧಿಸಿದ್ದುವು. ನೆರೆಯನ್ನು ಕಳೆದುಕೊಳ್ಳದಿರಲು ಯಾರಿಗೇ ಆದರೂ ಸ್ವಲ್ಪ ಹೆಚ್ಚಿನ ಸಾಮರ್ಥ್ಯ ಬೇಕು. ಧರ್ಮದ ಕಡಿದಾದ ಹಾದಿಯಲ್ಲಿ ನಡೆಯದೆ ನಿಗ್ರಹದ ಕಡಿವಾಣವನ್ನು ತೊಡದೆ, ಎಲ್ಲವೂ ಭಗವದಧೀನವೆಂದು ನಂಬದೆ ಆ ಸಾಮರ್ಥ್ಯ ದೊರೆಯದು. ಆಜಾದರು ಮುಸ್ಲಿಮರಲ್ಲಿ ಹೆಸರಾದ ಧರ್ಮಶಾಸ್ತ್ರವೇತ್ತರು. ಅವರ ಹಾಗೆ ಇಸ್ಲಾಮ ಧರ್ಮವನ್ನು ಕಾಲಾನುಸಾರವಾಗಿ ಅನ್ವಯ ಮಾಡಿ, ಸಮಕಾಲದ ಪ್ರಶ್ನೆಗಳನ್ನು ಬಿಡಿಸಬಲ್ಲ ಮೌಲಾನಾ ಹಿಂದುಸ್ತಾನದಲ್ಲಿ ಮತ್ತೊಬ್ಬರಿಲ್ಲ. ಇಸ್ಲಾಮಿ ಧರ್ಮದ ಮೂಲಸ್ಥಳದಲ್ಲೇ ಅವರಿಗೆ ಧರ್ಮ-ದೀಕ್ಷೆಯಾಗಿದೆ. ಅವರು ಹುಟ್ಟಿದುದೇ ಮಹಮ್ಮದೀಯರ ಮಹಾ ಕ್ಷೇತ್ರದಲ್ಲಿ, ಮಕ್ಕಾದಲ್ಲಿ. ಆ ಪವಿತ್ರ ಸನ್ನಿವೇಶದಲ್ಲೇ ಅವರು ಪೈಗಂಬರನ ನಿಜಹೃದಯವನ್ನೂ ಇಸ್ಲಾಮಿ ಧರ್ಮದ ನಾಡಿಯನ್ನೂ ಕಂಡುಕೊಂಡರು. ಮುಂದೆ ಈಜಿಪ್ಟ ದೇಶದಲ್ಲಿ ಅವರ ಧಾರ್ಮಿಕ ವಿದ್ಯಾನಿಲಯದಲ್ಲಿ ಅವರ ಶಿಕ್ಷಣ ನಡೆಯಿತು. ಇಸ್ಲಾಮಿ ತತ್ತ್ವಶಾಸ್ತ್ರ-ನ್ಯಾಯಶಾಸ್ತ್ರಗಳಲ್ಲಿ ಮೇಲ್ತರಗತಿಯ ಪಾಂಡಿತ್ಯಗಳಿಸಿದರು. ಆ ತಳಹದಿಯ ಮೇಲೆ ಅಲ್ಲಾಭಕ್ತಿ, ವಿಶ್ವ-ಪ್ರೇಮಗಳಿಂದ ಕಟ್ಟಿದ ಭವ್ಯಜೀವನ ಅವರದು.

ಕಳೆದ ವರ್ಷ ಹೈದರಾಬಾದಿನಲ್ಲಿ ಆರ್ಯಸಮಾಜದ ಧಾರ್ಮಿಕ ಸತ್ಯಾಗ್ರಹ ನಡೆದುದು ಇತಿಹಾಸಪ್ರಸಿದ್ಧವಾಗಿದೆ. ಹೇಗೋ ಏನೋ ಅದಕ್ಕೆ ಜಾತಿದ್ವೇಷದ ಹಿಂದೂ-ಮುಸ್ಲಿಮ ಜಗಳದ ಬಣ್ಣ ಕೊಡಲ್ಪಟ್ಟಿತು. ಹಿಂದುಸ್ತಾನದ ಮೂಲೆ ಮೂಲೆಗಳಿಂದಲೂ ಅದು ಹಿಂದುಗಳ ಒಳಸಂಚು ಎಂಬ ಗುಲ್ಲು ಕೇಳಿಬಂತು. ಆ ಸತ್ಯಾಗ್ರಹದಲ್ಲಿ ಏನಾದರೂ ತಿರುಳುಂಟೇ ಎಂಬ ಪ್ರಶ್ನೆಯೇ ಮುಸ್ಲಿಮ ನಾಯಕರ ತಲೆಯಲ್ಲಿ ಸುಳಿಯಲಿಲ್ಲ. ' ಸರಿ ಇದ್ದರೆ ನೀನು ಸೋತೆ, ಬೆಸನಾದರೆ ನಾನು ಗೆದ್ದೆ ' -- Head I win, Tail you loose- ಎಂಬ ಚಕ್ರತರ್ಕ ಅದು. ಮೌಲಾನಾ ಆಜಾದರೊಬ್ಬರು- ಅವರೊಬ್ಬರೆ- ಆ ಸತ್ಯಾಗ್ರಹವನ್ನು ಹರಸಿ ಬೆಂಬಲ ನೀಡಿದ ' ಕಾಫಿರರು '.

ಈ ಧರ್ಮಪರಾಯಣತೆ, ನಿಷ್ಪಕ್ಷಪಾತಗಳು ಉಳಿದ ಜನರಲ್ಲಿ ಕೊಂಚಮಟ್ಟಿಗಾದರೂ ಆದರಕ್ಕೆ ಪಾತ್ರವಾದುವು. ' ಎಡಗೈಯಲ್ಲಿ ಕೊರಾನು ಬಲಗೈಯಲ್ಲಿ ಕತ್ತಿ ' ಹಿಡಿದು ' ಸಾರೇ ಜಗತ್‌ಕೊ ಇಸ್ಲಾಮ್ ಬನಾಯೇಂಗೆ ' ಎಂಬ ರಣಘೋಷವನ್ನು ನಂಬಿದ ಜನರಲ್ಲಿ ಆಜಾದರ ವಿಶಾಲತೆಗೆ ಏನು ಮನ್ನಣೆ ದೊರೆಯಬೇಕು? ಸತ್ಯಪರಮೇಶ್ವರನಾದ ಶ್ರೀರಾಮಚಂದ್ರನಿಗೆ ಜನ ಕೊಟ್ಟ ಬಹುಮಾನವೇನು? ಅಪನಿಂದೆ. ಪರಮಜ್ಞಾನಿಯಾದ ಸಾಕ್ರೆಟೀಸನಿಗೆ ಸಿಕ್ಕ ಸನ್ಮಾನವೇನು? ಕಾಲಕೂಟ ವಿಷದ ಬಟ್ಟಲು. ಆಜಾದರಿಗೂ ಬಹಿಷ್ಕಾರ, ವಿರೋಧ, ಕಾಫಿರ ಬಿರುದು ಎಲ್ಲಾ ದೊರೆತುವು. ಇವಕ್ಕೆಲ್ಲ ಅವರು ಬಗ್ಗಲಿಲ್ಲ. ಕಡೆಗೆ ಕಲಕತ್ತೆಯ ಮುಸ್ಲಿಮರು ಅವರ ಧರ್ಮಾಧಿಕಾರವನ್ನೂ ತಿರಸ್ಕರಿಸಿದರು.

ಬಕ್ರೀದ್‌ಹಬ್ಬ ಮಹಮ್ಮದೀಯರಲ್ಲಿ ಮುಖ್ಯವಾದುದೊಂದು ಹಬ್ಬ. ಶೈವರಿಗೆ ಶಿವರಾತ್ರಿ, ಭಾಗವತರಿಗೆ ಗೋಕುಲಾಷ್ಟಮಿ ಇದ್ದಂತೆ. ಆ ಹಬ್ಬದಲ್ಲಿ ಸಾವಿರಾರು ಜನ ಮಹಮ್ಮದೀಯರು ತಮ್ಮ ತಮ್ಮ ಊರುಗಳಲ್ಲಿ ಸಮಾವೇಶವಾಗುತ್ತಾರೆ. ಅಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಕಲಕತ್ತೆಯಲ್ಲಿ ಬಹಳ ದಿನಗಳಿಂದ ಆಜಾದರು ವಾಸವಾಗಿದ್ದಾರೆ. ಆ ಊರಿನ ಬಕ್ರೀದ್ ಹಬ್ಬದ ಪ್ರಾರ್ಥನೆಗೆ ಇವರೇ ಇಮಾಂ. ಎರಡು ವರ್ಷದ ಕೆಳಗೆ ಕಲಕತ್ತೆಯ ವೀರಮುಸ್ಲಿಮರು ಆಜಾದರನ್ನು ತಿರಸ್ಕರಿಸಿ ಬೇರೊಬ್ಬ ಇಮಾಂ ಸಾಹೇಬರನ್ನು ತಂದುನಿಲ್ಲಿಸಿದರು. ಇತ್ತ ಕಡೆಯೂ ಕೆಲವು ಜನ ಇದ್ದರು. ಭದ್ರಾದ್ರಿಯಲ್ಲಿ ಭಕ್ತ ರಾಮದಾಸನನ್ನು ಅರ್ಚಕನಾಯಕರು ಗುಡಿಯಿಂದ ಹೊರಗೆ ಹಾಕಿದಂಥ ಪ್ರಸಂಗ. ರಾಮದಾಸರು ಅಲ್ಲಿ ನಡೆದಂತೆಯೇ ಆಜಾದರು ಇಲ್ಲಿ ನಡೆದರು. ಜನ ಇತ್ತಂಡವಾಗಿ ರೋಷ-ದ್ವೇಷಗಳಿಗೆ ಕಡಿವಾಣಕೊಟ್ಟು ದೊಂಬಿಯೆಬ್ಬಿಸಲುಕೂಡ ಸಿದ್ಧರಾಗಿದ್ದರು. ತಮ್ಮದು ನ್ಯಾಯ, ಇದಿರಾಳಿಗಳು ಮಾಡಿದುದು ಹದಿನಾರಾಣೆ ಅನ್ಯಾಯ. ಆದರೂ ಆಜಾದರು ಆ ಪ್ರಸಂಗದಿಂದ ಸರಿದು ನಿಂತರು. ಅನ್ಯಾಯವನ್ನು ಹರ್ಷದಿಂದ ಸ್ವೀಕರಿಸಿದರು. ಹಿಂಸೆ, ಅಶಾಂತಿ, ರಕ್ತಪಾತಗಳ ಮೂಲಕ ನ್ಯಾಯಸಾಧಿಸುವುದು ಅವರಿಗೆ ಒಗ್ಗಲಿಲ್ಲ. ಇಮಾಂ ಪದವಿಯನ್ನೇ ತ್ಯಾಗಮಾಡಿದರು. ಧರ್ಮದ ಹೆಸರಿನಲ್ಲಿ ನಡೆಯಬಹುದಾಗಿದ್ದ ಧರ್ಮದ ಕೊಲೆಯನ್ನು ತಪ್ಪಿಸಿದರು. ಧರ್ಮವನ್ನೂ ಉಳಿಸಿದರು.

ರಾಜಕಾರಣವೂ ಅಧಿಕಾರಲಾಲಸೆಯೂ ಬಾಳಿನ ಹೆಗ್ಗುರಿಯಾಗಿರುವ ಕಾಲ ಇದು. ಹಿಂದೀ ಮುಸ್ಲಿಮರು ಗಳಿಸಿಕೊಂಡ ಹಿರಿಯರ ಸೊತ್ತು ಮುಲ್ಲಾ-ಮೌಲಾನಾರದಲ್ಲ, ಫಕೀರ-ದರ್ವೇಷರದಲ್ಲ. ಆಫಘನ ಅರಸುಮಕ್ಕಳದು, ದೆಹಲಿಯ ಸುಲ್ತಾನರದು. ಆ

ಅನುಗ್ರಹ. ಈ ಕಾಲದಲ್ಲಂತೂ ಧರ್ಮದ ಭಾವನೆ ಮುಸಕಾಗಿರುವುದು ಸಹಜವೇ ಸರಿ. ಇಸ್ಲಾಮಿಯಾ ಧರ್ಮವೂ ನ್ಯಾಯನಿಷ್ಠವಾದುದು ಪ್ರೇಮಪೂರ್ಣವಾದುದು ಎಂಬುದನ್ನು ಮರೆತು ಮರೆಯಿಸುವಷ್ಟು ದೂರಹೋಗಿದ್ದಾರೆ ಜನ. ಅಜಾದರಂಥ ಒಬ್ಬಿಬ್ಬರಾದರೂ ವ್ಯಕ್ತಿಗಳು ತಮ್ಮ ಜೀವನದಲ್ಲಿ ತೋರುತ್ತಿರುವ ಧರ್ಮವೇ ನಿಜವಾದ ಇಸ್ಲಾಮವನ್ನೂ ಇನ್ನೂ ನೆಲೆಗೊಳಿಸಿದೆ, ಬೆಳಗುತ್ತಿದೆ.

ಪರ್ಷಿಯಾ ದೇಶದ ಟಾಬ್ರಿಜ್ ನಗರದಲ್ಲಿ ಕ್ರೈಸ್ತರೂ ಮುಸಲ್ಮಾನರೂ ಒಟ್ಟಿಗೆ ವಸಿಸುತ್ತಿದ್ದರು. ಅಲ್ಲಿ ಕ್ರೈಸ್ತನೊಬ್ಬ ಭಾರಿ ವರ್ತಕನಾಗಿದ್ದ. ಒಂದು ದಿನ ಹಾಜಿಯೊಬ್ಬ (ಮಕ್ಕಾಯಾತ್ರೆ ಮಾಡಿದ ಮಹಾನುಭಾವ) ಅವನ ಅಂಗಡಿಗೆ ಬಂದು, ಈ ವರ್ತಕನನ್ನು ಮಹಮ್ಮದೀಯನಾಗೆಂದು ಕೇಳಿದ. ವರ್ತಕನು ಆ ಮಾತಿಗೆ ಒಪ್ಪಲಿಲ್ಲ. ಅಂಗಡಿಗೆ ಬಂದ ಸತ್ಪುರುಷನನ್ನು ಬರಿಗೈಯಲ್ಲಿ ಕಳಿಸಬಾರದೆಂದು ಭಿಕ್ಷೆ ನೀಡಿದ. ಹಾಜಿಗೆ ಬೇಕಾದುದು ಭಿಕ್ಷೆಯಲ್ಲ; ಮತಪರಿವರ್ತನ. ಹಾಗೆ ಹೇಳಿ ಭಿಕ್ಷೆ ತಿರಸ್ಕರಿಸಿದ. ಅಲ್ಲಿಂದ ಚರ್ಚೆ ಬೆಳೆದು ಹಾಜಿಗೆ ಸಿಟ್ಟು ಬಂತು. ಅಲ್ಲಿದ್ದ ಕಾವಲಿನವನ ಕೈಯ ಕತ್ತಿಯನ್ನು ಸೆಳೆದುಕೊಂಡು ಸಿಟ್ಟಿನ ಭರದಲ್ಲಿ ಹಾಜಿ ವರ್ತಕನನ್ನು ಇರಿದು ಓಡಿ ಹೋದ. ನಗರಾಧಿಪತಿ ಮಹಮ್ಮದೀಯ; ಆತನಿಗೆ ಇದು ತಿಳಿಯಿತು. ಆ ಹಾಜಿಯನ್ನು ಹಿಡಿದು ತರಿಸಿ, ತನ್ನ ಕೈಯಿಂದಲೇ ಅವನನ್ನು ತಿವಿದು ಕೊಂದುಹಾಕಿದ. 'ಹೀಗೆಯೋ ಮಹಮ್ಮದನ ಧರ್ಮವನ್ನು ಹರಡುವುದು? ನಾಯಿ' ಎಂದು ಅವನ ದೇಹವನ್ನು ನಾಯಿಗಳ ಪಾಲುಮಾಡಿದ.

ಮೌಲಾನರನ್ನು ನೆನೆದಾಗಲೆಲ್ಲ ಈ ಕತೆ ನೆನಪಾಗುತ್ತದೆ.

ಆಜಾದರು ಬರೀ ಪಂಡಿತರಲ್ಲ. ಒಳ್ಳೆಯ ಸಾಹಿತಿಗಳು. ಉರ್ದೂ ಭಾಷೆಯ ಮೇಲೆ ಇವರ ಹಿಡಿತ ಬಹಳ ಬಲವಾದುದು. ಪಾರ್ಸೀ ಅರಬ್ಬೀ ಭಾಷೆಗಳೂ ಇವರಿಗೆ ತಾಯಿನುಡಿಯಿದ್ದಂತೆ. ಅರೇಬಿಯಾದಲ್ಲಿ ಹುಟ್ಟಿ ಬೆಳೆದು ಈಜಿಪ್ಟಿನಲ್ಲಿ ವಿದ್ಯಾಭ್ಯಾಸಮಾಡಿದವರಿಗೆ ಅರಬ್ಬೀ ತಾಯಿನುಡಿಯಲ್ಲದೆ ಮತ್ತೇನು? ಅಂಥವರ ಕೈಯಲ್ಲಿ ಉರ್ದು ನುಡಿ ಕುಣಿಸಿದಂತೆ ಕುಣಿಯುತ್ತದೆ. ಮೌಲಾನಾ ವಿಪುಲವಾಗಿ ಬರೆದಿದ್ದಾರೆ. ಅನೇಕ ದೊಡ್ಡ ದೊಡ್ಡ ಗ್ರಂಥಗಳಿಗೆ ಅವರ ಕರ್ತೃತ್ವದ ಭಾಗ್ಯ ಲಭಿಸಿದೆ. ಇಪ್ಪತ್ತೈದು ವರ್ಷಗಳಿಂದ ಒಂದೇಸಮನೆ ಬರೆವಣಿಗೆಯಲ್ಲಿ ತೊಡಗಿದ್ದಾರೆ. ಪತ್ರಿಕಾನಿರ್ವಹಣವೂ ಕೆಲವು ದಿನ ನಡೆಯಿತು. ೧೯೧೨ ರಲ್ಲಿ ಸಂಪಾದಕವರ್ಗದಲ್ಲಿ ಸೇರಿದರು. ದೆಹಲಿಯಿಂದ 'ಅಲ್‌ಹಿಲಾಲ್'–' ಅರಿವಿನ ದೀವಟಿಗೆ– ಎಂಬ ವಾರಪತ್ರಿಕೆಯನ್ನು ಮೊದಲು ಮಾಡಿದರು. ಅದಕ್ಕೆ ಮೊದಲು ಉರ್ದುನುಡಿಯ ವಾರಪತ್ರಿಕೆಗಳಿದ್ದರೂ ಇಲ್ಲದಂತೆಯೆ ಅಗಸ್ತ್ಯಭ್ರಾತನಾಗಿದ್ದುವು. ಅಲ್-ಹಿಲಾಲ್ ಹಿಂದುಸ್ಥಾನದ ಪತ್ರಿಕಾಗಗನದಲ್ಲಿ ಸೂರ್ಯ. ಅದೊಂದು ಚಿತ್‌ಜ್ಯೋತಿ. ಹಿಂದೀ ಜನರಲ್ಲಿ, ಮುಖ್ಯವಾಗಿ ಮುಸ್ಲಿಮರಲ್ಲಿ ತುಂಬಿದ್ದ ಕತ್ತಲೆಯನ್ನು ಕಳೆಯುವ ಪಂಜಿನಂತೆ ಅಲ್ ಹಿಲಾಲ ಮೆರೆಯಿತು. ಅದರ ಭಾಷೆ ಗಂಭೀರ. ಆ ಗಾಂಭೀರ್ಯ ಸಶಕ್ತವಾದುದು, ಬರೀ ಅಲಂಕಾರದ ಹೊರೆಯಲ್ಲ. ಅದರ ಭಾವ ಉದ್ದೀಪಕವಾದುದು, ಸಚೇತನ. ಅಭಿಪ್ರಾಯಗಳಲ್ಲಿ ನಿರ್ಭಯ, ನಿಸ್ಸಂಕೋಚ. ನಾಡಿನ ಜನಕ್ಕೆ ಈ ಬಗೆಯ ಭಾವ ಭಾಷೆ, ಈ ನಿರ್ಭಯದ ಅಭಿಪ್ರಾಯ ಹೊಸದು. ಅರಿಹೋಗಿದ್ದ ತಮ್ಮ ಹೃದಯಾಗ್ನಿಯನ್ನು ಹೊತ್ತಿಸುವ ಕಿಡಿಯಂತಿತ್ತು ಅದರ ಸಂದೇಶ. ಸರಕಾರಕ್ಕೆ ಈ ಪ್ರಚಂಡಶಕ್ತಿಯನ್ನು ಸಹಿಸುವುದು ಸಾಧ್ಯವೇ? ಆ ಪತ್ರಿಕೆಯನ್ನು ಹಿಸುಕಿಬಿಟ್ಟರು.

ಅಜಾದರು ಅಷ್ಟು ಸುಲಭವಾಗಿ ಗೆಲ್ಲಬಹುದಾದ ಮನುಷ್ಯರಲ್ಲ. ಅವರು ಪತ್ರಿಕಾ ವ್ಯವಸಾಯವನ್ನು ಮೊದಲು ಮಾಡಿದ್ದುದು ವಿಲಾಸಕ್ಕೂ ಅಲ್ಲ, ವ್ಯಾಪಾರಕ್ಕೂ ಅಲ್ಲ. ಅರೇಬಿಯಾ ಈಜಿಪ್ಟ್‌ಗಳ ಸ್ವತಂತ್ರ ವಾತಾವರಣದಲ್ಲಿ ಬೆಳೆದ ಜೀವ. ಈಜಿಪ್ಟನಲ್ಲಿದ್ದಾಗ ಜಗಲೂಲ್ ಪಾಶ್ಚಾರ ಸ್ವಾತಂತ್ರ್ಯಸಂಗ್ರಾಮದ ರುಚಿಯನ್ನು ನೋಡಿಯೂ ಇದ್ದರು. ಹಿಂದುಸ್ಥಾನದ ಮುಸ್ಲಿಮರು ಅಜ್ಞಾನಿಗಳಾಗಿ ಪರತಂತ್ರರಾಗಿದ್ದುದು ಇವರ ಮನಸನ್ನು ಕುದಿಸಿತು. ತಮ್ಮ ಜನರನ್ನು ಜಾಗೃತಗೊಳಿಸಿ ಪರಾಧೀನತೆಯ ಪಾಶವನ್ನು ಹರಿದೊಗೆಯುವಂತೆ ಪ್ರೇರೇಪಿಸುವ ದೃಢಸಂಕಲ್ಪ ಮಾಡಿದರು. ಆ ಸಂಕಲ್ಪಕ್ಕೆ ಕಾಂಗ್ರೆಸ್ಸಾಗಲಿ ಮಹಾತ್ಮಾ ಚಳುವಳಿಯಾಗಲಿ ಕಾರಣವಲ್ಲ. ಅಲ್‌ಹಿಲಾಲ್ ಮೊದಲಾದಾಗ ಕಾಂಗ್ರೆಸ್ ಇನ್ನೂ ಬಾಲಾರಿಷ್ಟದ ಮಗು. ಬಂಗಾಲದ ವಿಭಜನ ಚಳುವಳಿ ಬಲವಾಗಿಯೆ ಇತ್ತಾಗಲಿ, ಅರಬ್ಬೀ ಪಾರ್ಸೀ ಪಂಡಿತರಾದ ಇವರಿಗೆ ಆ ಇಂಗ್ಲೀಷು ಚಳುವಳಿಯ ಅರ್ಥ ಆಗಬೇಕು ಹೇಗೆ! ಅಜಾದರ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ

ಗೋವಾ ಮಲಮು
GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಪ್ರಾಂತವಾದ ಬಿಹಾರವೊಂದರಲ್ಲಿ ಇವರಿಗೆ ಆಸರೆ ಸಾಧ್ಯವಿತ್ತು. ವಿಧಿಯಿಲ್ಲದೆ ಆಜಾದರು ಬಿಹಾರ ಪ್ರಾಂತಕ್ಕೆ ಬಂದರು. ಅಲ್-ಬಲಾಗ್ ಒಂದು ವರ್ಷವಾದರೂ ನಡೆಯದೆ ನಿಂತುಹೋಯಿತು.

ಹಿಂದೂಸ್ಥಾನದ ಮುಸ್ಲಿಮರಲ್ಲಿ ಈ ಶತಮಾನದ ಮೊದಲಲ್ಲಿ ನಡೆದ ಅಲಿಘರ್ ಚಳುವಳಿಯನ್ನು ಕಂಡವರು ಮೌಲಾನಾರ ಪತ್ರಿಕಾವ್ಯವಸಾಯದ ಬೆಲೆ ಅರಿಯಬಲ್ಲರು. ಅಲಿಘರ್ ಚಳುವಳಿಯಲ್ಲಿ ಜಾತಿನಿಷ್ಠೆ ಸ್ವಾತಂತ್ರ್ಯವಿರೋಧಗಳ ಬೀಜ ಬಿತ್ತಲ್ಪಟ್ಟಿತ್ತು. ಬ್ರಿಟಿಷರ ಅಂಧಾನುಕರಣ-ಅಧಿಕಾರಲಾಲಸೆಗಳಿಗೆ ತೌರುಮನೆಯಾಗಿತ್ತು. ಮುಸ್ಲಿಂ ಲೀಗಿನ ಜನ್ಮ ಅಲಿಘರ ಚಳುವಳಿಯ ಫಲ. ಈಗ ದೇಶದಲ್ಲಿ ಕಾಣಬರುವ ದ್ವೇಷ ಅಸೂಯೆಗಳು ಅದರ ಪ್ರಸಾದ. ಚಳುವಳಿ ಬಲವಾಗಿತ್ತು. ವಿದ್ಯಾವಂತರೆಲ್ಲ ಆ ಚಳುವಳಿಗೆ ಶರಣುಹೋಗಿದ್ದರು. ಅಲಿಘರ್ ಹಿಂದುಸ್ಥಾನದ ಮಕ್ಕಾ ಆಗಿತ್ತು. ಈ ಸಂಕುಚಿತವೃತ್ತಿಯ ವಿಘಾತಕ ಚಳುವಳಿ ಮೌಲಾನಾರ ವಿಶಾಲಬುದ್ಧಿಗೆ ಸ್ವಾತಂತ್ರ್ಯಪಿಪಾಸೆಗೆ ಸಹಿಸಲಿಲ್ಲ. ಬಲವಾದ ವಿರೋಧವನ್ನು ಮೊದಲುಮಾಡಿದರು. ತಮ್ಮ ಪ್ರಚಂಡ ಪಾಂಡಿತ್ಯದ ಬಲದಿಂದ, ಧಾರ್ಮಿಕ ರಾಜಕೀಯ ವಾದಭೂಮಿಯಲ್ಲಿ ಸುಂಟರಗಾಳಿಯನ್ನೆಬ್ಬಿಸಿದರು. ಸಂಪ್ರದಾಯದ ರೂಢ ಸಿದ್ಧಾಂತಗಳನ್ನು ಹೇತುವಾದಕ್ಕೆ ಗುರಿಮಾಡಿದರು. ಮೂಲ ಸಿದ್ಧಾಂತಗಳ ಕಡೆಗೆ ಜನರ ಮನವನ್ನೆಳೆದು ಹಾವಸೆಯನ್ನು ಕತ್ತರಿಸಿದರು. ರಾಜಕೀಯ ಭೂಮಿಯಲ್ಲಿ ಮುಸ್ಲಿಮರ ಕಾಟಸ್ಥ್ಯವೃತ್ತಿಯನ್ನು ಖಂಡಿಸಿ ಕಾಂಗ್ರೆಸ್ಸಿನೊಡನೆ ಸಹಕರಿಸಿರೆಂದು ಸಾರಿ ಹೇಳಿದರು. ಮುಸ್ಲಿಮ ಸಮಾಜದ ಹಳೆಯ ಹುಲಿಗಳೆಲ್ಲ ನಡುಗಿದುವು.

ಇದೆಲ್ಲ ನಡೆದಾಗ ಯೂರೋಪಿನಲ್ಲಿ ೧೯೧೪ ರ ಮಹಾಯುದ್ಧ ಪ್ರಾರಂಭವಾಯಿತು. ಇಸ್ಲಾಮಿಯಾ ಕ್ಷೇತ್ರಗಳ ಬಗ್ಗೆ ಸ್ವಲ್ಪ ಗೊಂದಲವಾಯಿತು. ಅದರ ಫಲವಾಗಿ ಹಿಂದೀ ಮುಸ್ಲಿಮರಲ್ಲಿ ಅಶಾಂತಿ ಬೆಳೆಯಿತು. ಹಿಂದೀ ಸೇನೆಯಲ್ಲಿ ಒಡಕು ಉಂಟಾಗುವ ಲಕ್ಷಣ ಕಂಡುವು. ಮೌಲಾನಾ ಮಹಮ್ಮದಾಲಿ ಮೌಲಾನಾ ಆಜಾದರಿಬ್ಬರೂ ಬಂಧನಕ್ಕೊಳಗಾದರು. ಬಿಹಾರ ಪ್ರಾಂತಕ್ಕೆ ಬಂದು ನೆಲಸಿ, ತಮ್ಮ ಗ್ರಂಥಪ್ರಕಟನ ಕಾರ್ಯವನ್ನು ಮಾಡಬೇಕೆಂದಿದ್ದರು. ಆಜಾದರು ೧೯೧೬ ರಲ್ಲಿ ಬಂಗಾಲದಿಂದ ಹೊರದೂಡಲ್ಪಟ್ಟಾಗ ಅವರ ಬಯಕೆ ಈಡೇರಲಿಲ್ಲ. ಬಿಹಾರಕ್ಕೆ ಬಂದ ನಾಲ್ಕೈದು ತಿಂಗಳಲ್ಲೆ ಸೆರೆಮನೆಯನ್ನು ಸೇರಬೇಕಾಯಿತು. ನಾಲ್ಕು ವರುಷದ ಕಾಲ ರಾಂಚಿಯಲ್ಲಿ ಬಂಧಿತರಾಗಿದ್ದರು.

ಆಜಾದರ ಗ್ರಂಥರಾಶಿಯಲ್ಲಿ ಶ್ರೇಷ್ಠವಾದುವು ಅವರ 'ಆತ್ಮಚರಿತ್ರೆ', ಅವರು ಮಾಡಿದ ಕೊರಾನಿನ 'ಭಾಷಾಂತರ ಮತ್ತು ಭಾಷ್ಯ'. ಅವರ ಭಾಷ್ಯ ಇಸ್ಲಾಮಿಯಾ ಜಗತ್ತಿನಲ್ಲಿ ತುಂಬಾ ಮನ್ನಣೆ ಪಡೆದಿದೆ. ಅವರ ತಾರ್ಕಿಕಶಕ್ತಿ, ಅಗಾಧ ಪಾಂಡಿತ್ಯಗಳು ಅಲ್ಲಿ ಹೊರಸೂಸಿವೆ. ಅವರ ಆತ್ಮಚರಿತ್ರೆಯಲ್ಲಿ ತಮ್ಮ ಹಿರಿಯರ ಕತೆಯೇ ಬಹಳ. ಅವರ ತಂದೆ ಇಸ್ಲಾಮಿಯಾ ಧರ್ಮದಲ್ಲಿ ಹೆಸರಾದ ಪಂಡಿತರು. ಮಕ್ಕಾ ಮದೀನಾಗಳಲ್ಲಿ ಇವರ ಮನೆ ಒಂದು ಗುರುಕುಲವೇ ಆಗಿತ್ತು. ಆತ್ಮಚರಿತ್ರೆ ವಿಷಯದಲ್ಲಿದ್ದಂತೆ ಶೈಲಿಯಲ್ಲಿ ಹೊಸ ಬೆಳಕು. ಈ ಮೂವತ್ತು ವರ್ಷದ ಉರ್ದೂ ರಚನೆಯಲ್ಲಿ ಆಜಾದರ ಶೈಲಿಯ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಆ ಶೈಲಿಯ ಮಾದರಿ 'ಆತ್ಮಚರಿತ್ರೆ'.

ವೈಯಾಕರಣಿ ಭಟ್ಟಾಚಾರ್ಯರು ತಮ್ಮ ಹೆಂಡತಿ ಸಂತಾನಕಾಮವನ್ನು ತೋರಿದಾಗ 'ಶಬ್ದೇಂಧುಶೇಖರಃಪುತ್ರೌ ಮಂಜೂಷಾ ಮಮ ಪುತ್ರಿಕಾ' ಎಂದು ಹೇಳಿದರಂತೆ. ಕೃತಿಸಂತಾನದ ಆಧಿಕ್ಯ-ಆನಂದಗಳನ್ನು ಅದಕ್ಕಿಂತ ಹೆಚ್ಚು ಅರ್ಥವತ್ತಾಗಿ ವರ್ಣಿಸಬಲ್ಲ ಮಾತು ಇರಲಾರದು. ಸಾಹಿತಿಗೆ ಕಲಾಕೃತಿಗಿಂತ ಹೆಚ್ಚಿನ ಸಂತಾನವೇ? ತುಕಾರಾಮನ ಗ್ರಂಥರಾಶಿಯನ್ನು ಹೊಳೆಯಲ್ಲಿ ಹಾಕಿದಾಗ ಆ ಭಕ್ತನಿಗಾದ ನೋವನ್ನು ಅರಿಯೆವೆ! ಮೌಲಾನಾ ಆಜಾದರಿಗೂ ಅಂಥ ದಾರುಣ ಅನುಭವವಾಯಿತು. ಒಮ್ಮೆ ಅವರು ರಾಂಚಿಯಿಂದ ಮರಳಿದ ಮೇಲೆ, ತಮ್ಮ ಹಸ್ತಪ್ರತಿಗಳನ್ನು ನೋಡಿ ನೆಲಕ್ಕೇ ಇಳಿದು ಹೋದರು. ಅವರ ಮುಖ್ಯವಾದ ಬರೆವಣಿಗೆಯೆಲ್ಲ ಛಿದ್ರವಾಗಿ ಗ್ರಂಥಪಾತವಾಗಿ ಹೋಗಿತ್ತು. ಅವರು ಇಲ್ಲದಾಗ ಪೋಲೀಸರು ಅವರ ಮನೆ ಶೋಧಿಸಿದರು. ಹಸ್ತಪ್ರತಿಗಳನ್ನೆಲ್ಲಾ ಓದಿ ನೋಡಿ, ಅಲ್ಲಲ್ಲಿ ಹಾಳೆ ಕತ್ತರಿಸಿ, ಕೆಲವು ಹಾಳೆಗಳನ್ನೇ ಕಿತ್ತು ಹಾಕಿ, ತಿರುಪತಿ ಕ್ಷೌರಮಾಡಿಟ್ಟರು. ಆ ನೇಕ ವರ್ಷಗಳ ಸತತ ಪರಿಶ್ರಮದ ಫಲ. ಆ ನೋವು ಅನುಭವಿಸಿದವರಿಗೇ ಗೊತ್ತು. ಆದರೆ ಆಜಾದರು ಧೈರ್ಯಗೆಡಲಿಲ್ಲ. ಆ ಮಹಾಪ್ರಾಣಕ್ಕೆ ಇದೊಂದು ಲೆಕ್ಕವೆ? ಅದ್ಭುತವಾದ ಸ್ಮರಣಶಕ್ತಿ ಅವರದು. ಪಾತವಾಗಿದ್ದ ಭಾಗಗಳನ್ನೆಲ್ಲ ನೆನಪಿನಿಂದ ಮತ್ತೆ ಉದ್ಧರಿಸಿ ಬರೆದರು.

ಆಜಾದರು ರಾಂಚಿಯ ದಿಗ್ಬಂಧನದಿಂದ ಹೊರಬೀಳುವ ವೇಳೆಗೆ ಗಾಂಧೀಜಿಯ ಸತ್ಯಾಗ್ರಹ ಚಳವಳಿಯು ಮೊದಲಾಗಿತ್ತು. ಹೊರಗೆ ಬಂದದ್ದೇ ತಡ, ಅದರಲ್ಲಿ ಧುಮುಕಿದರು. ದೇಶಬಂಧು ದಾಸ ಮುಂತಾದವರ ಜೊತೆಯಲ್ಲಿ ಮತ್ತೆ ಸೆರೆಮನೆ ಕಾಣಬೇಕಾಯಿತು. ಅಂದಿನಿಂದ ಇಂದಿನವರೆಗೆ ಕಾಂಗ್ರೆಸ್ಸಿಗೆ ಆಜಾದರು ಒಂದು ಮೂಲಸ್ತಂಭ. ಈ ಇಪ್ಪತ್ತು ವರ್ಷದ ಇತಿಹಾಸದಲ್ಲಿ ಆಜಾದರಷ್ಟು ಸ್ಥಿರವಾಗಿ ಅವಿಚ್ಛಿನ್ನವಾಗಿ ಕಾಂಗ್ರೆಸ್ಸನ್ನು ಹೊಂದಿಕೊಂಡು ಬಂದವರು ಬಹಳ ಕಡಮೆ. ಮತಾಭಿಮಾನದ ಕೋಮುಲವಾದ ರಾಜಕಾರಣದ ಉಬ್ಬರಗಳು ಮೇಲೆ ಮೇಲೆ ಬಂದಿವೆ, ಬರುತ್ತಲೇ ಇವೆ. ಮೌಲಾನಾ ಮಾತ್ರ ಕಡಲ ನಡುವಣ ಬೆಟ್ಟದಂತೆ ನಿಶ್ಚಲರಾಗಿದ್ದಾರೆ. ಈ ವಿಷಗಾಳಿ ಬೀಸುವ ಮುನ್ನ ಮುಸ್ಲಿಂಲೀಗಿಗೂ ಅಧ್ಯಕ್ಷರಾಗಿದ್ದರು; ಖಿಲಾಫತಸಮಿತಿಗೂ ಕಣ್ಣಾಗಿದ್ದರು. ೧೯೨೦ರಲ್ಲಿ ಅವನ್ನೆಲ್ಲ ಬಿಟ್ಟು ಕೇವಲ ಕಾಂಗ್ರೆಸ್ಸನ್ನೇ ಹಿಡಿದರು. ೧೯೩೦ ರ ಸತ್ಯಾಗ್ರಹ ನಡೆದಾಗ ಆಜಾದರೇ ಕಾಂಗ್ರೆಸ್ಸಿನ ಹಿರಿಯರು. ಗಾಂಧೀಜಿಯ ಸೂಚನೆಯ ಮೇರೆಗೆ ಕಾಂಗ್ರೆಸ್ಸಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ರೂಪುಗೊಂಡಾಗಿನಿಂದಲೂ ಮೌಲಾನಾ ಅದರ ಸದಸ್ಯರಾಗಿದ್ದಾರೆ; ಅಷ್ಟೇ ಅಲ್ಲ, ಮುಖ್ಯ ಸದಸ್ಯರಾಗಿದ್ದಾರೆ.

ಗಾಂಧೀಜೀ ಹಿಂದುಸ್ಥಾನದ ರಾಜಕಾರಣದಲ್ಲಿ ಪ್ರವೇಶಿಸಿದಾಗಿನಿಂದ ಹಿಂದೂ-ಮುಸ್ಲಿಮ ಐಕ್ಯದ ಮಾತು ಕಾಂಗ್ರೆಸ್ಸಿನ ಪ್ರಧಾನ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಐಕ್ಯವಿಲ್ಲದೆ ಸ್ವರಾಜ್ಯವು ಬರೀ

ಬಿಸಿಲುಗುದುರೆಯೆಂದು ಹೇಳಿದ್ದಾರೆ. ಆ ಮಾತು ಗಾಂಧೀಜೀಗೆ ಒಂದು ಸಿದ್ಧಾಂತಮಾತ್ರವಲ್ಲ. ಅವರಿಗೆ ಅದರಲ್ಲಿ ಬಲವಾದ ನಂಬಿಗೆ. ಹಕೀಂ ಅಜಮಲ್ ಖಾನ್, ಡಾ- ಅನ್ಸಾರಿ, ಮೌಲಾನಾ ಅಜಾದ ರೊಡನೆ ಅವರು ಅನುಭವಿಸಿದ ಸ್ನೇಹವೇ ಅದಕ್ಕೆ ಸಾಕ್ಷಿ. ಮೊದಲಿನವರಿಬ್ಬರೂ ತೀರಿಕೊಂಡಮೇಲೆ ಅಜಾದರೇ ಕಾಂಗ್ರೆಸ್ಸಿನ ಮುಸ್ಲಿಂ ಸಚಿವರು. ಅವರ ಸಲಹೆಗೆ ತುಂಬಾ ಬೆಲೆ. ಗಾಂಧೀಜಿ ಪ್ರತಿಯೊಂದು ಸಣ್ಣಪುಟ್ಟ ಮಾತಿನಲ್ಲೂ ಅಜಾದರನ್ನೂ ಕೇಳು ತ್ತಾರೆ. ಹಿಂದೂ ಮುಸ್ಲಿಮ ಸಂಘಟನದ ಯಾವ ಮಾತೂ ಅವರಿಲ್ಲದೆ ನಡೆದಿಲ್ಲ. ಕಾಂಗ್ರೆಸ್ಸಿನಲ್ಲೇ ಏಕೆ, ಸಂಸ್ಥಾನಗಳಲ್ಲೂ ಆ ಪ್ರಶ್ನೆ ಬಂದಾಗ ಅದು ಅಜಾದರ ದಪ್ತರಕ್ಕೆ–Portfolio–ಸೇರಿದ್ದು. ಹೈದರಾಬಾದಿನಲ್ಲಿ ಹಿಂದೂ ಮುಸ್ಲಿಮ ಸಂಧಾನ ನಡೆದಿತ್ತು. ಕೆಲವು ದಿನದ ಕೆಳಗೆ ಅದನ್ನು ಹೇಗೆ ನಡೆಯಿಸಬೇಕೆಂದು ಅಲ್ಲಿಯ ಹಿಂದೂ ಜನ ಗಾಂಧೀಜಿಯನ್ನು ಕೇಳಿದರು. ಗಾಂಧೀಜಿ ಮೌಲಾನಾರ ಕಡೆಗೆ ಅದನ್ನು ಒಪ್ಪಿಸಿದರು. ಮೌಲಾನಾ ಅದರಲ್ಲಿ ತೊಡಗಿಕೊಂಡು ಹಿಂದೂಗಳಿಗೆ ಸಲಹೆಕೊಟ್ಟರು. ಇನ್ನೂ ಆ ಪ್ರಶ್ನೆ ಅವರ ಕೈಯಲ್ಲೇ ಇದೆ.

ಮೌಲಾನಾ ಗಾಂಧೀಜಿಯನ್ನು ಕಂಡುದು ೧೯೨೦ ರಲ್ಲಿ. ಮಹಮ್ಮದಾಲಿಯ ಬಂಧನದ ತರುವಾಯ ಎಲ್ಲ ಪ್ರಾಂತಗಳ ನಾಯಕರನ್ನೂ ಗಾಂಧೀಜಿ ಒಂದು ಪರಿಷತ್ತಿಗಾಗಿ ಮುಂಬಯಿಗೆ ಕರೆಯಿಸಿದರು. ಆಗ ಬಂಗಾಲದಿಂದ ಅಜಾದರು ಬಂದಿದ್ದರು. ಆಗಿನಿಂದ ಈಗಿನ ವರೆಗೆ ಗಾಂಧೀಜಿಗೆ ಅವರು ನಂಬಿಗೆಯ ಗೆಳೆಯರು, ಅತ್ತ ಇತ್ತ ಸರಿಯಾದ ಅನುಯಾಯಿ.

ಅಹಿಂಸೆಯೇ ಪರಮಧರ್ಮವೆಂದು ಗಾಂಧೀಜಿ ನಂಬಿದಂತೆ ನಂಬುವುದು ಎಲ್ಲರಿಗೂ ಸಾಧ್ಯವಾಗದ ಮಾತು. ಗಡಿನಾಡಿನ ಗಾಂಧಿಯೊಬ್ಬರು ಹಾಗೆ ನಂಬಿಯಾರು. ಅಜಾದರು ಅಹಿಂಸೆಯೇ ಏಕೈಕ ಧರ್ಮವೆಂದು ನಂಬಿರಲಿಕ್ಕಿಲ್ಲ; ಆದರೆ ಹಿಂಸೆಯು ಹಾದಿಯಲ್ಲವೆಂದು ನಂಬಿದ್ದಾರೆ. ಹಿಂಸೆಗೂ ಸಭ್ಯತೆಗೂ ಗಾವುದ ದೂರವೆಂದು ಅರಿತಿದ್ದಾರೆ. 'ಪ್ರಪಂಚವು ಅಲ್ಲಾನದು. ಅದು ಯಾರ ಸೊತ್ತೂ ಅಲ್ಲ. ಇದೊಂದು ಸಂಗಮ. ಇಲ್ಲಿ ಅಹಂಕಾರ ಸಲ್ಲದು, ಹಿಂಸೆ ಸೊಲ್ಲು' ಹೀಗೆ ಅವರು ಸಾರಿಹೇಳಿದ್ದಾರೆ. ಇಸ್ಲಾಮೀ ಧರ್ಮದಲ್ಲಿ ಅಹಿಂಸೆಗಿರುವ ಸ್ಥಾನವನ್ನು ಚರ್ಚಿಸುತ್ತ ಅವರು ಒಮ್ಮೆ ಕೊಟ್ಟ ಒಂದು ಹೇಳಿಕೆ ಅಹಿಂಸಾಸಾಹಿತ್ಯದಲ್ಲಿ ಅಮರವಾಗಿ ಉಳಿಯಬಲ್ಲುದು.

ಅಜಾದರು ಮನಬಿಚ್ಚಿ ಮಾತನಾಡುವುದು ಕಡಮೆ. ಒಳಗೊಳಗೇ ಹುದುಗಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಯಾವಾಗಲೂ ಹಿಂದೆ ಕೂತು ಚಪ್ಪಾಳೆಯಿಕ್ಕುವುದರಲ್ಲೋ ವಿಮರ್ಶಿಸಿಕೊಳ್ಳುವು ದರಲ್ಲೋ ಅವರಿಗೆ ಆಶೆ. ಮುಂದೆ ಬಂದು ನಿಲ್ಲುವುದು ಅವರಿಗೆ ಒಗ್ಗದು. ಕಾಂಗ್ರೆಸ್ಸಿನಲ್ಲಿ ಉಳಿದ ಎಲ್ಲ ನಾಯಕರೂ ಒಂದಿಲ್ಲೊಂದು ಠೀವರ್ಮಾನದ ಬಗ್ಗೆ ಮಾತನಾಡುತ್ತಾರೆ. ಅಜಾದರು ಸದಾ ವೇದಿಕೆಯ ಮೇಲೆಯೆ. ಆದರೆ ಒಮ್ಮೆಯಾದರೂ ಭಾಷಣ ಮಾಡುವುದಿಲ್ಲ. ಸಂಧಾನಕ್ಕಾಗಿ ಸೂತ್ರಚಾಲನೆಗಾಗಿ ನಾಲ್ಕೂ ಪ್ರಾಂತಗಳಲ್ಲಿ ಓಡಾಡುತ್ತಾರೆ. ಇಂದು ಪಂಜಾಬಿನ ಅಂತಃಕಲಹ ಶಾಂತವಾಯಿತು; ಅಲ್ಲಿ ವಾಯುವ್ಯಪ್ರಾಂತದಲ್ಲಿ ಕಾಂಗ್ರೆಸ್ಸಿನ ಮಂತ್ರಿಮಂಡಲವೂ ಸಿಡಿದು ಹೋಗುವ ಸಂದರ್ಭ ಬಂದಿತ್ತು, ಅಂಥದನ್ನು ಉಳಿಸಿದರು. ದೆಹಲಿಯಲ್ಲಿ ಇತ್ತಂಡವಿದ್ದುದು ಸರಿಯಾಯಿತು, ಹೀಗೆ ಮೌಲಾನಾರ ಕೈವಾಡದ ಬಗ್ಗೆ ಆಗಾಗ ಸುದ್ದಿ ಬರುತ್ತಲೇ ಇರುತ್ತವೆ. ಆದರೆ ಎಲ್ಲಿಯೂ ಭಾಷಣವಾದ ಸುದ್ದಿ ಬರುವುದಿಲ್ಲ. ಮೌಲಾನಾ ಭಾಷಣಪ್ರಿಯರಲ್ಲ. ಎಲ್ಲಾದರೂ ಅವರು ಮಾತಾಡಲು ಒಪ್ಪಿದರೆ ಅದು ಬಲವಂತ ಮಾಘಸ್ನಾನ. ಅವರಿಗೆ ವಾಗ್ಮಿತ್ವವಿಲ್ಲವೆಂದಲ್ಲ. ಮಾತಾಡಲು ನಿಂತರೆ ಕಲ್ಲಿನ ಗೊಂಬೆಗಳನ್ನೂ ಕುಣಿಸುವ ಧಾಟಿ ಅದು. ಅವರದು ಕಂಚಿನ ಕಂಠ. ಆ ಧ್ವನಿಯಲ್ಲಿ ಗರ್ಜನೆಯ ಗಾಂಭೀರ್ಯವಿದೆ. ಗುಟರಿನ ಹುಂಬತನವಿಲ್ಲ. ಅವರ ವಾಣಿ ಕಾಳೆಯ ಕೂಗಲ್ಲ, ಘಂಟೆಯನಾದ.

ಸಲ್ಲಾಪಗೋಷ್ಠಿಯಲ್ಲಿ ಕೂತರೆ ಮೌಲಾನಾ ಬಹು ಸರಸವಾಗಿ ಮಾತಾಡುತ್ತಾರೆ. ಒಳ್ಳೇ ವಿನೋದಿಗಳು. ವರ್ಧಾದ ಅತಿಥಿಭವನದಲ್ಲಿ ಎಡಗಡೆಯ ದೊಡ್ಡ ಕೋಣೆ ಇವರ ಬಿಡಾರ. ಅಲ್ಲಿ ನೆಲಕ್ಕೆ ಹಾಸಿದ ಮೆತ್ತೆ 'ಫರ್ಷ'ಗಳ ಮೇಲೆ, ಒರಗುದಿಂಬಿಗೆ ಆತುಕೊಂಡು ಕುಳಿತು ಮೌಲಾನಾ ಮಾತುಕತೆ ನಡಿಸುವುದನ್ನು ನೋಡಿದರೆ, ಮೊಗಲಾಯಿಯ ಹಳೆಯವೈಭವವೆಲ್ಲ ಕಣ್ಣಿಗೆ ಕಟ್ಟುತ್ತದೆ. ಮಾತಿನಲ್ಲಿ ಬಹಳ ವಿದುವು, ತುಂಬಾ ಔದಾರ್ಯ. ಆ ಗಾಂಭೀರ್ಯದಲ್ಲಿ ನಗೆ ಕಡಿಮೆ. ನಕ್ಕರೆ ಆ ಮುಗುಳಿನಲ್ಲಿ ರಾಜಠೀವಿ ಕಾಣಬರುತ್ತದೆ.

ಅಜಾದರು ಸುಂದರವಿಗ್ರಹವಾಗಲಿ, ಅದರಲ್ಲಿ ಯಮ-ನಿಯಮದ ಸ್ಪಷ್ಟರೆ ಇದೆ. ಆ ಮುಖದಲ್ಲಿ 'ಅತ್ತಣ ದಿನನಾಥನಿತ್ತ ಮೂಡುಗುಮಲ್ತೆ?' ಎಂಬ ದೃಢಸಂಕಲ್ಪವಿದೆ. ಅವರ ಮೊನೆಯಾದ ಗಲ್ಲಕ್ಕೆ ಆ ಮಾಟಾದ ಗಡ್ಡವೂ ಆ ಗರುಡಮೂಗಿಗೆ ಹುರಿಮೀಸೆಯೂ ಸಂಕಲ್ಪಕ್ಕೆ ಸಾಹಸ ಜೊತೆಯಾದಂತಿವೆ. ಅವರ ಕಣ್ಣು ದೀವಿಗೆಯಂತೆ ಥಳಥಳಿಸುವುದಷ್ಟೇ ಅಲ್ಲ; ಗಾಂಭೀರ್ಯ ಅಧಿಕಾರಗಳು ಕಣ್ಣೊಳಗಿಂದ ಸುರಿಯುತ್ತವೆ. 'ಇಡೀ ಜಗತ್ತೇ ವಿರೋಧಿಸಲಿ, ನನ್ನ ಹಾದಿ ನಾ ಬಿಡಲಾರೆ' ಎಂಬ ಆತ್ಮವಿಶ್ವಾಸ ಆ ಮುಖದಲ್ಲಿ ಒಡೆದು ಕಾಣುತ್ತದೆ. ಆದರೆ, ತಾ ಹಿಡಿದ ಮೊಲಕ್ಕೆ ಮೂರೇ ಕಾಲೆಂಬ ಛಲವಿಲ್ಲ. ಕಿರಿಯರು, ತೀರ ಎಳೆಯರು ಕೊಟ್ಟ ಸಲಹೆ–ಮಾಡಿದ ಸೂಚನೆ ಈ ಉಕ್ಕಿನ ಮೂರ್ತಿ ಸಂತೋಷದಿಂದ ಸ್ವೀಕರಿಸುವುದುಂಟು. ಮೌಲಾನಾ 'ಶಾಪಾದಪಿ ಶರಾದಪಿ' ಎಂಬ ಹಾದಿಯಲ್ಲಿ ಕಲ್ಲಿಗಿಂತ ಕಠಿನ. 'ಸಕೃದೇವ ಪ್ರಪನ್ನಾಯ' ಎಂಬ ವ್ರತದಲ್ಲಿ ಬೆಣ್ಣೆಗಿಂತೆ ಮಿದು. ಈ ಸಾಮರಸ್ಯವೇ ಅವರ ವ್ಯಕ್ತಿತ್ವದ ಅಡಿಗಲ್ಲು. ಅದೇ ಅವರ ಬಾಳುಗುಡಿಯ ಗೋಪುರ.

ಸಾದರಸ್ವೀಕಾರ

೧೨೧. **ಬೆಳಗಾಂವಿಯ ನಾಡಹಬ್ಬದ ವರದಿ** (೧೯೩೯). ಕಳುಹಿಸಿದವರು ಶ್ರೀ. ಬಿ. ಕೆ. ಬಂಲಿರ್, ಎಲ್‌ಎಲ್. ಬಿ, ಬೆಳಗಾಂವಿ.

೧೨೨. **ಅಧ್ಯಾಪಕರ ಪತ್ರಿಕೆ** (ಬೆಂಗಳೂರ್ ಎಜ್ಯುಕೇಶನ್ ಅಸೋಸಿಯೇಶನ್ನಿನ ಮಾಸಪತ್ರಿಕೆ) ೧೨ ಜನ ಸಂಪಾದಕರ ಮಂಡಲಿಯಿದೆ. ಮುಖ್ಯ ಸಂಪಾದಕರು ಶ್ರೀ. ಕೆ. ಸಂಪದ್ಗಿರಿರಾಯರು, ಎಂ.ಎ., ನ್ಯಾಶನಲ್ ಹೈಸ್ಕೂಲ್ ಬೆಂಗಳೂರು. ಕ್ರೌನ್ ೪ದ ೮ ಪುಟ. ಸಂಪಾದಕರೇ ಪ್ರಕಾಶಕರು.

ಅಧ್ಯಾಪಕರಿಗೆ ಉಪಯುಕ್ತವಾಗಬಹುದಾದ ಲೇಖನಗಳೂ ಪಾಠದ ಟಿಪ್ಪಣಿಗಳೂ ಇದರಲ್ಲಿ ಪ್ರಕಟವಾಗುವುವು. ಪತ್ರಿಕೆಯ ಹೊರರೂಪು P. E. N. **ಪತ್ರಿಕೆಯ ಮಾದರಿಯಲ್ಲಿದೆ.**

೧೨೩. **ಕನಸುಗಳು:—** (ಮನೋವಿಜ್ಞಾನ ವಿಷಯಕ ಗ್ರಂಥ). ಲೇಖಕರು ಶ್ರೀ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೧೭ನೆಯ ಗ್ರಂಥ. ಫ್ರೂ. ೪ದ ೬೪ ಪುಟ. ಬೆಲೆ ೦-೨-೦.

೧೨೪. **ಸಂಗೀತಕಲಾಪ್ರವೇಶ:—** (ಭಾಗ ೧-೨-೩). ಲೇಖಕರು ಶ್ರೀ. ಭಾಸ್ಕರರಾವ ಬ್ಯಾಂಕರ. ಶ್ರೀಸರಸ್ವತೀ ಸಂಗೀತ ವಿದ್ಯಾಲಯದ ಶಿಕ್ಷಕರು, ಗಣೇಶ ಪೇಟೆ, ಹುಬ್ಬಳ್ಳಿ. ಕ್ರೌ. ೮. ೮೮ ಪುಟ. ಬೆಲೆ ೦-೧೦-೦. ಲೇಖಕರೇ ಪ್ರಕಾಶಕರು.

೧೨೫. **ಕನ್ನಡದ ಮುನ್ನಡೆ:—** (ಚಿತ್ರಪಟ) ಪ್ರಕಾಶಕರು ಶ್ರೀನಿವಾಸ್ ಅ್ಯಂಡ್ ಕಂಪನಿ, ಧಾರವಾಡ.

ಇದರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ೧ನೆಯ ಅಧಿವೇಶನದಿಂದಲೂ ಮೊನ್ನೆ ತಾನೆ ಬೆಳಗಾಂವಿಯಲ್ಲಿ ಸೇರಿದ ೨೪ನೆಯ ಸಾಹಿತ್ಯ ಸಮ್ಮೇಳನದ ಅಧಿವೇಶನದ ವರೆಗಿನ ಎಲ್ಲ ಅಧ್ಯಕ್ಷರ ಛಾಯಾಚಿತ್ರಗಳನ್ನು ಅಂದವಾಗಿಯೂ ಕ್ರಮವಾಗಿಯೂ ಪ್ರಕಟಿಸಲಾಗಿದೆ. ಎಲ್ಲಕ್ಕೂ ಮೇಲೆ ಪರಿಷತ್ತಿನ ಮಹಾಪೋಷಕರಾದ ಮೈಸೂರು ಮಹಾರಾಜರ ಮತ್ತು ಪರಿಷತ್ತಿನ ಅಧ್ಯಕ್ಷರಾಗಿದ್ದ ದಿವಂಗತ ಯುವರಾಜರ ಚಿತ್ರಗಳೂ ಇವೆ. ಮಧ್ಯದಲ್ಲಿ ಸಾ. ಪರಿಷತ್ತಿನ ಕಟ್ಟಡದ ಚಿತ್ರವಿದೆ. ಪ್ರತಿಯೊಂದು ಶಾಲೆ-ಕಾಲೇಜುಗಳಲ್ಲಿಯೂ ವಾಚನಾಲಯ ಪುಸ್ತಕ ಭಾಂಡಾರಗಳಲ್ಲಿಯೂ ಕಾಯ್ದಿರಿಸಲಿಕ್ಕೆ ತಕ್ಕುದಾಗಿದೆ.

೧೨೬. **ಡೋಂಗರೇ ಬಾಲಾಮೃತದ ಕ್ಯಾಲೆಂಡರು:—** ಮಗುವನ್ನು ತೊಡೆಯ ಮೇಲಿಟ್ಟುಕೊಂಡು ಮುದ್ದುಕೊಡಬೇಕೆಂಬ ಭಂಗಿಯಲ್ಲಿರುವ ಸುಂದರಳಾದ ತರುಣಿಯೊಬ್ಬಳ ತ್ರಿವರ್ಣಚಿತ್ರದಿಂದ ಕೂಡಿದುದು. ಅಭಿವಂದನೆಗಳೊಂದಿಗೆ ಸ್ವೀಕರಿಸುವೆವು.

೧೨೭. **ವಿಶ್ವವಿದ್ಯಾನಿಲಯ ಸಂಘ ಪತ್ರಿಕೆ:—** (೧ನೆಯ ವರ್ಷದ ೧ನೆಯ ಸಂಚಿಕೆ). ಬೆಂಗಳೂರಿನ ಯುನಿವರ್ಸಿಟಿ ಯೂನಿಯನ್ನಿನ ಮುಖಪತ್ರವಿದು. ಡೆ.೮. ೮೬ ಪುಟ. ಬೆಲೆ?

ಇದೇನು ದ್ವೈಮಾಸಿಕವೊ ತ್ರೈಮಾಸಿಕವೊ ವಾರ್ಷಿಕವೊ ಯಾವುದೂ ತಿಳಿಯುವಂತಿಲ್ಲ. ಮೈಸೂರು ಯುನಿವರ್ಸಿಟಿಗೆ ಸಂಬಂಧಿಸಿದ ಅನೇಕ ಅಧಿಕಾರಿಗಳ ಹಾಗೂ ವಿದ್ಯಾರ್ಥಿವೃಂದದ ಹಲವು ಚಿತ್ರಗಳಿದರಲ್ಲಿ ಪ್ರಕಟವಾಗಿವೆ. ಕನ್ನಡ, ಇಂಗ್ಲಿಷ್, ಉರ್ದು ಈ ಮೂರು ಭಾಷೆಗಳಲ್ಲಿ ಬರೆದ ಲೇಖನಗಳಿಗೂ ಇದರಲ್ಲಿ ಎಡೆಯಿದೆ. ಕನ್ನಡಕ್ಕೆ ೬೦, ಇಂಗ್ಲಿಷಿಗೆ ೪೨, ಉರ್ದುವಿಗೆ ೪ ಹೀಗೆ ಪುಟಗಳನ್ನು ಹಂಚಿಕೊಡಲಾಗಿದೆ. ಶ್ರೀಮಾನ್ ಪುಟ್ಟಪ್ಪನವರ ಕವನವೊಂದನ್ನು ಬಿಟ್ಟರೆ ಕನ್ನಡಭಾಗದಲ್ಲಿಯ ಮಿಕ್ಕ ಲೇಖನಗಳೆಲ್ಲ ವಿದ್ಯಾರ್ಥಿಗಳೆ ಬರೆದುವಾಗಿವೆ. ಇಂಗ್ಲಿಷ್ ಲೇಖನಗಳು ಕೂಡ ಹೆಚ್ಚಿನವು ವಿದ್ಯಾರ್ಥಿಗಳು ಬರೆದುವೆ. ಹೊಸತಾದ ಉಪಕ್ರಮವಿದು. ಶ್ರೇಯಸ್ಸನ್ನು ಪಡೆಯಲಿ!

ಕಂದನ ಕಾಣಿಕೆ:— (ಶಿಶುಗೀತ ಸಂಗ್ರಹ). ಬರೆದವರು ಶ್ರೀಯುತರುಗಳಾದ ಎಂ. ಎಸ್. ಮೂರ್ತಿ, ಅ. ರಾ. ಚಂದ್ರ, ಯೋಗ ಈ ಮೂವರು. ಕ್ರೌ.೮. ೨೪ ಪುಟ. ಬೆಲೆ ೦-೧-೦. ಪ್ರಕಾಶಕರು ಮನೋಹರ ಗ್ರಂಥಭಾಂಡಾರ ಧಾರವಾಡ.

೧೨೯. **ಸಿದ್ಧಿಗಣೇಶ ವಾಚನಾಲಯದ ೯ನೆಯ ವರ್ಷದ ವರದಿ:—** ಕಳುಹಿದವರು ಮ್ಯಾನೇಜರ್ ಶ್ರೀ. ಸಿ. ಗ. ವಾಚನಾಲಯ ಗುರುವಿನಹಳ್ಳಿ, ಮೈಸೂರು ಡಿಸ್ಟ್ರಿಕ್ಟ್.

೧೩೦. **ಯದ್ವಾ-ತದ್ವಾ:—**(ಹಾಸ್ಯ-ಪ್ರಬಂಧ ಸಂಗ್ರಹ) ಬರೆದವರು ಶ್ರೀ. ಎನ್. ಕಸ್ತೂರಿ ಎಂ. ಎ., ಬಿ. ಎಲ್. ಮಹಾರಾಜಾ ಕಾಲೇಜ್, ಮೈಸೂರು. ಮಂಡ್ಯದ ಸರಸ್ವತೀಗ್ರಂಥಮಾಲೆಯ ೨ನೆಯ ಕುಸುಮ. ಕ್ರೌ. ೮. ೮೦ ಪುಟ. ಬೆಲೆ ೦-೬-೦.

೧೩೧. **ಹಳ್ಳಿಯ ಪದಗಳು:—** (ಸಂಗ್ರಹ). ಸಂಗ್ರಾಹಕರು ಶ್ರೀಯುತ ಬಿ. ಎನ್. ರಂಗಸ್ವಾಮಿ. ಮೇಲಿನ ಗ್ರಂಥಮಾಲೆಯ ೩ನೆಯ ಕುಸುಮ. ಕ್ರೌ. ೮. ೮೦ ಪುಟ. ಬೆಲೆ ೦-೮-೦.

೧೩೨. **ಸಾಧನೆಕುಟೀರ:—**(ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ 'ಭಾರತೀಸುತ' ಅವರು. ಪ್ರಕಾಶಕರು ಶ್ರೀ. ಯ. ಗು. ಕುಲಕರ್ಣಿ ಸ. ಚಂ. ನಂದನವನ ಅಗಡಿ. ಡೆ. ೮. ೧೮೦ ಪುಟ. ಬೆಲೆ ೧-೨-೦.

ದಿ ಯುನಾಯಿಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವ್ಯವಹಾರವಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಶ್ಯೂರೆನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಮೆಚ್ಚತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಹೆಣಿಗೆ–ಕಸೀದೆ ಕಲಿಯಿರಿ !

ಹೆಣ್ಣುಮಕ್ಕಳಲ್ಲಿ ಹೆಣಿಗೆ–ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು !
ಅಚ್ಚುಕಟ್ಟುತನದಿಂದ ಅವರ ಚೆಲುವು–ಚೆದುರು ಇಮ್ಮಡಿಗೊಳ್ಳುವುವು !!
ಹೆಣಿಗೆ–ಕಸೀದೆ–ಎಂಬ್ರೊಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ !

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

ಸಾದರ ಸ್ವೀಕಾರ

೧೨೧. **ಬೆಳಗಾಂವಿಯ ನಾಡ ಹಬ್ಬದ ವರದಿ** (೧೯೩೯). ಕಳುಹಿಸಿದವರು ಶ್ರೀ. ಬಿ. ಕೆ. ಬಟರ್ಲಿ, ಎಲ್‌ಎಲ್. ಬಿ., ಬೆಳಗಾಂವಿ.

೧೨೨. **ಅಧ್ಯಾಪಕರ ಪತ್ರಿಕೆ** (ಬೆಂಗಳೂರ್ ಎಜ್ಯುಕೇಶನ್ ಅಸೋಸಿಯೇಶನ್ನಿನ ಮಾಸಪತ್ರಿಕೆ) ೧೨ ಜನ ಸಂಪಾದಕರ ಮಂಡಲಿಯಿದೆ. ಮುಖ್ಯ ಸಂಪಾದಕರು ಶ್ರೀ. ಕೆ. ಸಂಪದ್ಗಿರಿರಾಯರು, ಎಂ.ಎ., ನ್ಯಾಶನಲ್ ಹೈಸ್ಕೂಲ್ ಬೆಂಗಳೂರು. ಕ್ರೌನ್ ೩ ದ ೮ ಪುಟ. ಸಂಪಾದಕರೇ ಪ್ರಕಾಶಕರು.

ಅಧ್ಯಾಪಕರಿಗೆ ಉಪಯುಕ್ತವಾಗಬಹುದಾದ ಲೇಖನಗಳೂ ಖಾರದ ಟಿಪ್ಪಣಿಗಳೂ ಇದರಲ್ಲಿ ಪ್ರಕಟವಾಗುವುವು. ಪತ್ರಿಕೆಯ ಹೊರರೂಪು P. E. N. ಪತ್ರಿಕೆಯ ಮಾದರಿಯಲ್ಲಿದೆ.

೧೨೩. **ಕನಸುಗಳು:—** (ಮನೋವಿಜ್ಞಾನ ವಿಷಯಕ ಗ್ರಂಥ). ಲೇಖಕರು ಶ್ರೀ. ಎನ್. ಎಸ್. ನಾರಾಯಣಶಾಸ್ತ್ರಿ ಎಂ. ಎ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೧೭ನೆಯ ಗ್ರಂಥ. ಫೂ. ೩ ದ ೬೪ ಪುಟ. ಬೆಲೆ ೦-೨-೦.

೧೨೪. **ಸಂಗೀತಕಲಾಪ್ರವೇಶ:—** (ಭಾಗ ೧-೨-೩). ಲೇಖಕರು ಶ್ರೀ. ಭಾಸ್ಕರರಾವ ಬ್ಯಾಂಕರ್. ಶ್ರೀಸರಸ್ವತೀ ಸಂಗೀತ ವಿದ್ಯಾಲಯದ ಶಿಕ್ಷಕರು, ಗಣೇಶ ಪೇಟೆ, ಹುಬ್ಬಳ್ಳಿ. ಕ್ರೌ. ೧. ೮೮ ಪುಟ. ಬೆಲೆ ೦-೧೦-೦. ಲೇಖಕರೇ ಪ್ರಕಾಶಕರು.

೧೨೫. **ಕನ್ನಡದ ಮುನ್ನಡೆ:—** (ಚಿತ್ರಪಟ) ಪ್ರಕಾಶಕರು ಶ್ರೀನಿವಾಸ್ ಅ್ಯಂಡ್ ಕಂಪನಿ, ಧಾರವಾಡ.

ಇದರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ೧ನೆಯ ಅಧಿವೇಶನದಿಂದಲೂ ಮೊನ್ನೆ ತಾನೆ ಬೆಳಗಾಂವಿಯಲ್ಲಿ ಸೇರಿದ ೨೪ನೆಯ ಸಾಹಿತ್ಯ ಸಮ್ಮೇಳನದ ಅಧಿವೇಶನದ ವರೆಗಿನ ಎಲ್ಲ ಅಧ್ಯಕ್ಷರ ಛಾಯಾಚಿತ್ರಗಳನ್ನು ಅಂದವಾಗಿಯೂ ಕ್ರಮವಾಗಿಯೂ ಪ್ರಕಟಿಸಲಾಗಿದೆ. ಎಲ್ಲಕ್ಕೂ ಮೇಲೆ ಪರಿಷತ್ತಿನ ಮಹಾಪೋಷಕರಾದ ಮೈಸೂರು ಮಹಾರಾಜರ ಮತ್ತು ಪರಿಷತ್ತಿನ ಅಧ್ಯಕ್ಷರಾಗಿದ್ದ ದಿವಂಗತ ಯುವರಾಜರ ಚಿತ್ರಗಳೂ ಇವೆ. ಮಧ್ಯದಲ್ಲಿ ಸಾ. ಪರಿಷತ್ತಿನ ಕಟ್ಟಡದ ಚಿತ್ರವಿದೆ. ಪ್ರತಿಯೊಂದು ಶಾಲೆ-ಕಾಲೇಜುಗಳಲ್ಲಿಯೂ ವಾಚನಾಲಯ ಪುಸ್ತಕ ಭಾಂಡಾರಗಳಲ್ಲಿಯೂ ಕಾಯ್ದಿರಿಸಲಿಕ್ಕೆ ತಕ್ಕುದಾಗಿದೆ.

೧೨೬. **ಡೋಂಗರೇ ಬಾಲಾಮೃತದ ಕ್ಯಾಲೆಂಡರು:—** ಮಗುವನ್ನು ತೊಡೆಯ ಮೇಲಿಟ್ಟುಕೊಂಡು ಮುದ್ದುಕೊಡಬೇಕೆಂಬ ಭಂಗಿಯಲ್ಲಿರುವ ಸುಂದರಳಾದ ತರುಣಿಯೊಬ್ಬಳ ತ್ರಿವರ್ಣಚಿತ್ರದಿಂದ ಕೂಡಿದುದು. ಅಭಿವಂದನೆಗಳೊಂದಿಗೆ ಸ್ವೀಕರಿಸುವೆವು.

೧೨೭. **ವಿಶ್ವವಿದ್ಯಾನಿಲಯ ಸಂಘ ಪತ್ರಿಕೆ:—** (೧ನೆಯ ವರ್ಷದ ೧ನೆಯ ಸಂಚಿಕೆ). ಬೆಂಗಳೂರಿನ ಯುನಿವರ್ಸಿಟಿ ಯೂನಿಯನ್ನಿನ ಮುಖಪತ್ರವಿದು. ಡೆ.೮. ೮೬ ಪುಟ. ಬೆಲೆ?

ಇದೇನು ದ್ವೈಮಾಸಿಕವೊ ತ್ರೈಮಾಸಿಕವೊ ವಾರ್ಷಿಕವೊ ಯಾವುದೂ ತಿಳಿಯುವಂತಿಲ್ಲ. ಮೈಸೂರು ಯುನಿವರ್ಸಿಟಿಗೆ ಸಂಬಂಧಿಸಿದ ಅನೇಕ ಅಧಿಕಾರಿಗಳ ಹಾಗೂ ವಿದ್ಯಾರ್ಥಿವೃಂದದ ಹಲವು ಚಿತ್ರಗಳಿದರಲ್ಲಿ ಪ್ರಕಟವಾಗಿವೆ. ಕನ್ನಡ, ಇಂಗ್ಲಿಷ್, ಉರ್ದು ಈ ಮೂರು ಭಾಷೆಗಳಲ್ಲಿ ಬರೆದ ಲೇಖನಗಳಿಗೂ ಇದರಲ್ಲಿ ಎಡೆಯಿದೆ. ಕನ್ನಡಕ್ಕೆ ೬೦, ಇಂಗ್ಲಿಷಿಗೆ ೪೨, ಉರ್ದುವಿಗೆ ೪ ಹೀಗೆ ಪುಟಗಳನ್ನು ಹಂಚಿಕೊಡಲಾಗಿದೆ. ಶ್ರೀಮಾನ್ ಪುಟ್ಟಪ್ಪನವರ ಕವನವೊಂದನ್ನು ಬಿಟ್ಟರೆ ಕನ್ನಡಭಾಗದಲ್ಲಿಯ ಮಿಕ್ಕ ಲೇಖನಗಳೆಲ್ಲ ವಿದ್ಯಾರ್ಥಿಗಳೆ ಬರೆದುವಾಗಿವೆ. ಇಂಗ್ಲಿಷ್ ಲೇಖನಗಳು ಕೂಡ ಹೆಚ್ಚಿನವು ವಿದ್ಯಾರ್ಥಿಗಳು ಬರೆದುವೆ. ಹೊಸತಾದ ಉಪಕ್ರಮವಿದು. ಶ್ರೇಯಸ್ಸನ್ನು ಪಡೆಯಲಿ!

ಕಂದನ ಕಾಣಿಕೆ:— (ಶಿಶುಗೀತ ಸಂಗ್ರಹ). ಬರೆದವರು ಶ್ರೀಯುತರುಗಳಾದ ಎಂ. ಎನ್. ಮೂರ್ತಿ, ಅ. ರಾ. ಚಂದ್ರ, ಯೋಗ ಈ ಮೂವರು. ಕ್ರೌ.೮. ೨೪ ಪುಟ. ಬೆಲೆ ೦-೧-೦. ಪ್ರಕಾಶಕರು ಮನೋಹರ ಗ್ರಂಥಭಾಂಡಾರ ಧಾರವಾಡ.

೧೨೯. **ಸಿದ್ಧಿಗಣೇಶ ವಾಚನಾಲಯದ ೯ನೆಯ ವರ್ಷದ ವರದಿ:—** ಕಳುಹಿದವರು ಮ್ಯಾನೇಜರ್ ಶ್ರೀ. ಸಿ. ಗ. ವಾಚನಾಲಯ ಗುರುವಿನಹಳ್ಳಿ, ಮೈಸೂರು ಡಿಸ್ಟ್ರಿಕ್ಟ್.

೧೩೦. **ಯದ್ವಾ-ತದ್ವಾ:—**(ಹಾಸ್ಯ-ಪ್ರಬಂಧ ಸಂಗ್ರಹ) ಬರೆದವರು ಶ್ರೀ. ಎನ್. ಕಸ್ತೂರಿ ಎಂ. ಎ., ಬಿ. ಎಲ್. ಮಹಾರಾಜಾ ಕಾಲೇಜ್, ಮೈಸೂರು. ಮಂಡ್ಯದ ಸರಸ್ವತೀಗ್ರಂಥಮಾಲೆಯ ೨ನೆಯ ಕುಸುಮ. ಕ್ರೌ. ೮. ೮೦ ಪುಟ. ಬೆಲೆ ೦-೬-೦.

೧೩೧. **ಹಳ್ಳಿಯ ಪದಗಳು:—** (ಸಂಗ್ರಹ). ಸಂಗ್ರಾಹಕರು ಶ್ರೀಯುತ ಬಿ. ಎನ್. ರಂಗಸ್ವಾಮಿ. ಮೇಲಿನ ಗ್ರಂಥಮಾಲೆಯ ೩ನೆಯ ಕುಸುಮ. ಕ್ರೌ. ೮. ೮೦ ಪುಟ. ಬೆಲೆ ೦-೮-೦.

೧೩೨. **ಸಾಧನಕುಟೀರ:—**(ಸಾಮಾಜಿಕ ಕಾದಂಬರಿ. ಬರೆದವರು ಶ್ರೀಮಾನ್ 'ಭಾರತೀಸುತ' ಅವರು. ಪ್ರಕಾಶಕರು ಶ್ರೀ. ಯ. ಗು. ಕುಲಕರ್ಣಿ ಸ. ಚಂ. ಆನಂದವನ ಆಗಡಿ. ಡೆ. ೮. ೧೮೦ ಪುಟ. ಬೆಲೆ ೧-೨-೦.

೯೭. ಪ್ರಬಂಧ ಪ್ರಕಾಶ

ಬರೆದವರು: ಶ್ರೀ. ಮ. ಶ್ರೀ. ದೇಶಪಾಂಡೆ, ಎಂ. ಎ., ಎಸ್. ಟಿ. ಸಿ ಅವರು.

ಲೇಖನಕಲೆಯನ್ನು ಕಲಿಸುವುದಕ್ಕಾಗಿ ಪ್ರಕಟಿಸಿದ ಗ್ರಂಥವಿದೊಂದು. ಲೇಖಕನಾಗಬೇಕೆನ್ನುವವನಲ್ಲಿ ಸಹಜ ಪ್ರತಿಭೆಯಿರಬೇಕೆಂಬುದು ದಿಟವಾದರೂ, ಸರಿಯಾದ ಅಭ್ಯಾಸವಿಲ್ಲದೆ ಹೋದರೆ ಆ ಸಹಜಪ್ರತಿಭೆ ಅಷ್ಟೊಂದು ಮೆರುಗನ್ನು ಎಂದೂ ಪಡೆಯದು. ಇಷ್ಟೇ ಅಲ್ಲ, ಲೇಖಕನಾಗಬೇಕೆನ್ನುವವನು ಉತ್ಕಟಬಯಕೆಯಿಂದ ಸತತಾಭ್ಯಾಸಕ್ಕೆ ತೊಡಗಿದರೆ, ಇಲ್ಲದ ಪ್ರತಿಭೆಯೂ ಅವನಲ್ಲಿ ಬಂದು ಮನೆಮಾಡುವುದು. ಇದಕ್ಕಾಗಿ ಅವನು ಪೂರ್ವಸೂರಿಗಳ ಗ್ರಂಥಗಳನ್ನು ಎಡೆಬಿಡದೆ ಓದಿ ಹೃದಯವನ್ನೂ ಬುದ್ಧಿಯನ್ನೂ ಹಣ್ಣಾಗಿಸಿಕೊಂಡು ದರ್ಶನವಿಶುದ್ಧಿಯನ್ನು ಪಡೆಯಬೇಕು. ಭಾವನೆಗಳ ಅರಳಿಕೆಯಲ್ಲಿ ದರ್ಶನದ ಚಿತ್ರಗಳನ್ನು ಮೂಡಿಸಿ ತೋರಿಸುವ ಸಾಮರ್ಥ್ಯ ಸಂಪಾದಿಸಬೇಕು. ವಿವಿಧ ಕಲ್ಪನೆಗಳಿಂದ ದರ್ಶನದಲ್ಲಿಯ ತಿರುಳನ್ನು ತಿಳುಹುವ ಕಲ್ಪಕಶಕ್ತಿಯನ್ನು ಕೈವಶಮಾಡಿಕೊಳ್ಳಬೇಕು. ಇದೆಲ್ಲವನ್ನೂ ಇನ್ನೊಬ್ಬರಿಗೆ ತಿಳುಹುವುದಕ್ಕೆ ಆವಶ್ಯಕವಾಗಿರುವ ಭಾಷಾಶಾಸ್ತ್ರವನ್ನೂ ಅವಗತಮಾಡಿಕೊಳ್ಳಬೇಕು. ಆರಿದ ಮಾತುಗಳು ಸರಿಯಾದ ಅರ್ಥವನ್ನು ಕೊಡುವುವೆಂಬುದರ ತಿಳವಳಿಕೆಯನ್ನು ಮಾಡಿಕೊಡಬಲ್ಲ ತರ್ಕದ ಪರಿಚಯವನ್ನೂ ಮಾಡಿಕೊಳ್ಳಬೇಕು. ಇದರಿಂದ ಯಾವುದೇ ವಿಷಯವನ್ನು ಕುರಿತು ಮಾತನಾಡಬೇಕಾಗಿರಲಿ, ಬರೆಯಬೇಕಾಗಿರಲಿ, ಹೇಗೆ ಸುಸಂಬದ್ಧವಾಗಿ-ಸುವಿದಿತವಾಗಿ-ಒಂದು ಕ್ರಮಾನುಸಾರವಾಗಿ ಮಾತನಾಡಬಹುದೆಂಬುದೂ ಬರೆಯಬಹುದೆಂಬುದೂ ಗೊತ್ತಾಗುವುದು. ವರ್ತಮಾನ ಪ್ರೌಢಭಾಷೆಗಳಲ್ಲಿ ಈ ಮಾತನಾಡುವ–ಬರೆಯುವ–ಕಲೆಗಳನ್ನು ಕುರಿತು ಬರೆದ ಗ್ರಂಥಗಳು ಬೇಕಾದಷ್ಟು ಇವೆ. ಆಧುನಿಕ ದೃಷ್ಟಿಯಿಂದ ಅಭ್ಯಾಸ ಮಾಡಿ ಬರೆದ ಆ ಮಾದರಿಯ ಕನ್ನಡ ಗ್ರಂಥ ಇದುವರೆಗೆ ಒಂದೂ ಇರಲಿಲ್ಲವೆಂದು ಯಾವ ತಡೆಯೂ ಇಲ್ಲದೆ ಹೇಳಬಹುದಾಗಿದೆ. ಶ್ರೀ. ಮ. ಶ್ರೀ. ದೇಶಪಾಂಡೆಯವರು ಆ ಕೊರತೆಯನ್ನು ಕಳೆಯುವುದಕ್ಕೆಂದು ಈ 'ಪ್ರಬಂಧ-ಪ್ರಕಾಶ'ದ ಮೂಲಕ ಪ್ರಯತ್ನಪಟ್ಟಿರುವರು.

ಶಾಲೆಯ ವಿದ್ಯಾರ್ಥಿಗಳಿಗೆ ಪ್ರಬಂಧ ಲೇಖನವಿರುವುದಿಷ್ಟೇ ಅಲ್ಲ, ಇಂದಿನ ವಿದ್ಯಾರ್ಥಿಗಳಲ್ಲಿ ತಾವೂ ಬರೆಹಗಾರರಾಗಬೇಕೆಂಬ ಹಂಬಲ ದಿನದಿನಕ್ಕೂ ಹೆಚ್ಚಲು ತೊಡಗಿದೆ. ಈ ಮಾತು ಕನ್ನಡದ ಒಳ್ಳೆಯ ಮುಂಬರುವನ್ನು ಸೂಚಿಸುವಂತಹದೇನೊ ಸರಿ! ಆದರೆ ತರುಣ ವಿದ್ಯಾರ್ಥಿಗಳ ಬರೆಯಬೇಕೆನ್ನುವ ಉತ್ಸಾಹದ ಹುಚ್ಚು-ಹೊಳೆಯು ಯಾವಬಗೆಯ ಸಂಯಮ-ನಿಯಮನಗಳಿಲ್ಲದ ಮೂಲಕ ವ್ಯರ್ಥ ಶಕ್ತಿ-ಪಾತವಾಗಿ ಪರಿಣಮಿಸುತ್ತಲಿದೆ. ಅವರ ಉತ್ಸಾಹವನ್ನು ತಿದ್ದಿ ದಾರಿ ತೋರಿಸುತ್ತ ಪ್ರಗತಿಪಥದಲ್ಲಿ ಕರೆದೊಯ್ಯಲಿಕ್ಕೆ ಈ ಗ್ರಂಥವು ಖಂಡಿತ ಸಹಕಾರವನ್ನು ನೀಡಬಹುದು.

ಕನ್ನಡನಾಡಿಗೆ ಸುಪರಿಚಿತರೂ ವಿಮರ್ಶನ ಕಲೆಯಲ್ಲಿ ಬಲ್ಲಿದರೂ ಆದ ಪ್ರೊ. ವಿ. ಕೃ. ಗೋಕಾಕ ಅವರು ಈ ಪುಸ್ತಕಕ್ಕೆ ಬರೆದ ಚಿಕ್ಕ ಮುನ್ನುಡಿಯಲ್ಲಿ ಇದರ ಪ್ರಯೋಜನವನ್ನು ಕುರಿತು ಹೀಗೆಂದು ಬರೆದಿದ್ದಾರೆ:—

"ವಾಕ್ಯರಚನೆ, ಸಾರಸಂಗ್ರಹ, ಗುಣ-ಗ್ರಹಣ, ನಿಬಂಧಲೇಖನ ಮೊದಲಾದ ಬೇರೆ ಬೇರೆ ವಿಷಯಗಳನ್ನು ನಿರೂಪಿಸುವುದರಲ್ಲಿ ಲೇಖಕರು ಪ್ರಶಂಸನಾರ್ಹವಾದ ಕೌಶಲ್ಯವನ್ನು ತೋರಿಸಿದ್ದಾರೆ. ಉದಾಹರಣೆಗಳೆಂದು ಅವರು ಎತ್ತಿಟ್ಟ ಅನೇಕ ಗದ್ಯ-ಪದ್ಯ ವಿಭಾಗಗಳು ಬಹಳ ಗಂಭೀರವಾಗಿವೆ. ಅವುಗಳಿಂದ ವಿಷಯಜ್ಞಾನವಿಷ್ಟೇ ಆಗುವುದೆಂದಲ್ಲ, ವೀರವೃತ್ತಿಯನ್ನೂ ಉದಾತ್ತರೀತಿಯನ್ನೂ ಕಲಿಸುವ ಒಂದು ಸಾಹಿತ್ಯ-ಮಾಲೆಯನ್ನು ಓದಿದ ಅನುಭವವನ್ನು 'ಪ್ರಬಂಧ ಪ್ರಕಾಶ' ದಲ್ಲಿಯ ಅವತರಣಿಕೆಗಳು ತಂದುಕೊಡುತ್ತವೆ. ಆದಕಾರಣ ಈ ಪುಸ್ತಕದ ಪ್ರಯೋಜನವು ಇಮ್ಮಡಿಯಾಗಿ ಹೆಚ್ಚಿದೆ."

ಇಂದಿನ ಪಾಠಶಾಲೆಗಳಲ್ಲಿ ಪ್ರಬಂಧ ಲೇಖನದ ವಿಷಯವಿರುವ ಪ್ರತಿಯೊ ವಿದ್ಯಾರ್ಥಿಯೂ ಈ ಪುಸ್ತಕದ ನೆರವಿನಿಂ ಲೇಖನಕಲೆಯನ್ನು ಸಾಧಿಸಿಕೊಳ್ಳಬಹುದಾಗಿದೆ. ಬೇರೆ ಬೇರೆ ಪಾಠಶಾಲೆಗಳ ಮೇಲಧಿಕಾರಿಗಳು ತಮ್ಮ ವಿದ್ಯಾರ್ಥಿಗಳ ಕೈಗೆ 'ಪ್ರಬಂಧ ಪ್ರಕಾಶ' ದೊರೆಯುವಂತೆ ತಕ್ಕ ಏರ್ಪಾಡನ್ನು ಮಾಡುವುದು ಅತ್ಯಗತ್ಯದ ವಿಷಯ.

—ಕುಂ. ವಿ.

೯೮. ಚಂದ್ರಗ್ರಹಣ ಮತ್ತು ಇತರ ಕಥೆಗಳು

(ಸಚಿತ್ರ)

ಶ್ರೀಮಾನ್ 'ಆನಂದ' ಬರೆದುದು

ಬೆಲೆ ೦–೧೦–೦

ಆನಂದರು ಆಧುನಿಕ ಕತೆಗಾರರಲ್ಲಿ ಹೆಸರು ಹೊಂದಿದವರೊಬ್ಬರು. ಈ ಸಂಗ್ರಹದಲ್ಲಿಯ 'ಚಂದ್ರಗ್ರಹಣ' ಎಂಬುದೊಂದು ಕತೆಯನ್ನು ಬಿಟ್ಟರೆ ಮಿಕ್ಕ 'ಜೊಚ್ಚಲು ಸಂಭ್ರಮ' 'ಬೇವು-ಬೆಲ್ಲ' 'ಕೊನೇ ಎಂಟಾಣೆ' ಈ ಮೂರು ಕತೆಗಳು ಈ ಮೊದಲೇ ಹಲವು ಕನ್ನಡಿಗರ ಕಣ್ಮುಂದೆ ಬಂದುವುಗಳು.

ತರುಣವಾಚಕರ ಮನಸ್ಸನ್ನು ಶ್ರೀ. ಆನಂದರ ಕತೆಗಳು ತುಂಬ ಆಕರ್ಷಿಸುವುವು. ಇದಕ್ಕೆ ಕಾರಣವೆಂದರೆ ಕಾಲೇಜು ವಿದ್ಯಾರ್ಥಿಗಳ ಜೀವನ ಅವುಗಳಲ್ಲಿ ಸಹಜವಾಗಿ ಪಡಿಮೂಡಿ ನಿಂತಿರುವುದೊಂದು. ನವ-ದಾಂಪತ್ಯದ ಕಸುಕುಪ್ರಣಯ, ಅದರಲ್ಲಿ ತುಂಬ ಬಣ್ಣಬಣ್ಣಗಳಿಂದ ಚಿತ್ರಿತವಾಗಿರುವುದೊಂದು. ಲೈಂಗಿಕ ಭಾವನೆಯನ್ನು ಜಾಗೃತಗೊಳಿಸುತ್ತಲೆ ಅದರ ಹಿನ್ನೆಲೆಯಲ್ಲಿಯೆ ಜಗತ್ತಿನ ವೈಷಮ್ಯಗಳನ್ನು ಹಿಂಜಿ ತೋರಿಸುವ ಕರುಣಾ ಚಿತ್ರಗಳನ್ನು ಬಿಡಿಸುವುದೂ ಆನಂದರ ಕತೆಗಾರಿಕೆಯದೊಂದು ರೀತಿ. ಇವರ ಕತೆಗಳಲ್ಲಿ ಕಥಾ ಸನ್ನಿವೇಶಗಳ ಓಟಕ್ಕಿಂತ ಕಥಾ ವ್ಯಕ್ತಿಗಳ ಮನಸ್ಸಿನ ಓಟಗಳನ್ನು ಹೆಚ್ಚಾಗಿ ಕಾಣಬಹುದು. ಇದರಲ್ಲಿಯ ನಾಲ್ಕು ಕತೆಗಳೂ ಆನಂದರ ಈ ಲೇಖನವೈಶಿಷ್ಟ್ಯಗಳಿಂದ ತುಂಬಿರುವುವು.

'ಚಂದ್ರಗ್ರಹಣ' ಎಂಬ ಕತೆಯಲ್ಲಿ ಗಂಡ ಹೆಂಡಿರಿಬ್ಬರ ಸವಿಬದುಕಿನ ನಡುವೆ ಕುಸಿ ದುಃಖದ ತೆರೆ ಬಂದು, ಹುಣ್ಣಿಮೆಯ ಚಂದ್ರನನ್ನು ರಾಹುವಿನ ಛಾಯೆ ಕವಿದು ಬಿಟ್ಟಂತೆ ಮಾಡುವುದು. ಆ ದುಃಖವು ನಿಷ್ಕಾರಣವೆಂಬುದು ತಿಳಿದಾಗ, ಆ ಗಂಡ-ಹೆಂಡಿರಿಬ್ಬರ ಬಾಳು ಮತ್ತೆ ರಾಹುವಿಮುಕ್ತ ಚಂದ್ರನ ಚಂದ್ರಿಕೆಯಂತಾಗುವುದು. ಮಾನವ ಜೀವನದಲ್ಲಿ ಇಲ್ಲದ ದುಃಖವನ್ನು ಎದೆಯಲ್ಲಿ ತುಂಬಿಕೊಂಡು ಕುದಿಯುತ್ತ ಕುಳಿತುಕೊಳ್ಳುವ ಸಂದರ್ಭಗಳು ಸಾಕಷ್ಟು ಬರುವುವಲ್ಲವೆ? ಇಂತಹ ದುಃಖ ತಂತವ್ಮ್ಮ ಅಜ್ಞಾನಮೂಲವೆಂಬುದು ತಿಳಿದಾಗ ನಗೆಯುಕ್ಕು ಬರುವುದು ನಮಗೆ? ಇಂತಹ ಹುಸಿ ದುಃಖದ ಸಂದರ್ಭಗಳು ಸವಿಯೂಟಕ್ಕೆಂದು ಕಟ್ಟಿದ ಬಾಯನ್ನು ಕಾರ-ಹುಳಿಗಳಿಂದ ಹೊಸ ಬಾಯನ್ನಾಗಿಸುವುವು.

'ಚೊಚ್ಚಲು ಸಂಭ್ರಮ'ದಲ್ಲಿ ಹೆಣ್ಣು ಮಕ್ಕಳಲ್ಲಿಯ ಸಂತಾನ ಪ್ರೀತಿಯ ಉತ್ಕಟತೆಯ ಶಬ್ದಚಿತ್ರವಿದೆ. ಚೊಚ್ಚಲು ಬಸಿರೆಯಾದ ಗಂಗಮ್ಮನು ಹುಟ್ಟಲಿರುವ ಗಂಡುಮಗನಿಗಾಗಿ ಮೊದಲೆ ಮಾಡಿಟ್ಟ ಸಿದ್ಧತೆಗಳ ಕತೆಯೂ, ಗಂಡ-ಹೆಂಡಿರ ಪ್ರೀತಿಯ ಕತೆಯೂ ಕತೆಯ ದುರಂತಕ್ಕೆ ಚೆನ್ನಾಗಿ ಉದ್ದೀಪಕವಾಗಿವೆ. ತಾನು ಹಡೆದ ಸತ್ತ ಮಗುವನ್ನು ಕಾಣುತ್ತಲೆ ಕೊನೆಯ ವರೆಗೆ ಕಣ್ಣನ್ನು ಮುಚ್ಚಿದ ಗಂಗಮ್ಮ ತಾಯಿ-ಅತ್ತೆ-ಗಂಡ ಇವರೆಲ್ಲರಂತೆಯೆ ವಾಚಕರನ್ನೂ ಕಳವಳಗೊಳಿಸುತ್ತಾಳೆ.

'ಬೇವು-ಬೆಲ್ಲ' ಗೆಳೆತನದ ಆಳವನ್ನು ತಿಳುಹುವಂತಹದೊಂದು ಸನ್ನಿವೇಶದಿಂದ ಕೂಡಿದ್ದು ಇದರಲ್ಲಿಯ ರಂಗಣ್ಣನಂತಹ ಗೆಳೆಯರನ್ನು ಎಲ್ಲರೂ ಬಯಸಬಹುದಾಗಿದೆ. ಕೊನೆಯ ಕತೆ ಕಲಾವಿದನೊಬ್ಬನ ದುರಂತ ಜೀವನದ ವಿಷಯವನ್ನು ಪರಿಣಾಮಕಾರಿಯಾಗಿ ಹೇಳುತ್ತಿದೆ. ಯಾವ ಗುಣವಿದ್ದರೇನು ಬಡತನವು ಎಲ್ಲ ಗುಣಗಳಿಗೂ ಪ್ರಳಯವನ್ನು ತರುವುದು. ಇಂತಹ ದುಃಖಾಂತ ಕಥೆಯಲ್ಲಿಯೂ ಲೇಖಕರು ದಾಂಪತ್ಯ ಪ್ರೇಮವನ್ನು ನೆರವಿಗೆ ಕರೆದು ಕತೆಗಾರನ ಆತ್ಮಹತ್ಯೆಯನ್ನು ಇನ್ನಿಷ್ಟು ಕರುಣೆಯಿಂದ ರಂಗಿಸಿದ್ದಾರೆ. ಇಂತಹ ಒಳ್ಳೊಳ್ಳೆಯ ಕತೆಗಳನ್ನು ಶ್ರೀ. ಆನಂದರು ಇನ್ನೂ ಹಲವು ಹಲವಾಗಿ ಒದಗಿಸುತ್ತಿರಲೆಂದು ನಮ್ಮ ಆಶೆ.

—ಕುಂ. ವಿ.

೩೧ ಪರಿವರ್ತನೆ

(ಕಥಾಸಂಗ್ರಹ)

ವಿದ್ವಾನ್ ಎಚ್. ರಾಮರಾವ ಎಮ್. ಎ., ಎಲ್. ಟಿ. ಅವರು ಬರೆದುದು.

ಬೆಲೆ ೦-೮-೦.

ಈ ಸಂಗ್ರಹದಲ್ಲಿ ಆರು ಕಥೆಗಳಿವೆ. ಗಾತ್ರದಿಂದ ಇವು ಸಣ್ಣಕತೆಗಳೆನಿಸಬಹುದಾದರೂ ಲಕ್ಷಣದಿಂದ ಇವು ನಿಡುಗತೆಗಳೆನಿಸಿಕೊಳ್ಳಲು ತಕ್ಕುವುಗಳಾಗಿವೆ. ಪ್ರತಿಯೊಂದು ಕೃತಿಯಲ್ಲಿಯೂ ಸಹಜತೆಗಿಂತ ಚಮತ್ಕೃತಿಯನ್ನೆ ಹೆಚ್ಚಾಗಿ ತೋರಿಸಬೇಕೆಂದು ಲೇಖಕರ ಉದ್ದೇಶವಿದ್ದಂತೆ ತೋರುತ್ತಲಿದೆ. ಇವುಗಳಲ್ಲಿಯ— ಕುತೂಹಲವನ್ನುಂಟು ಮಾಡುವಂತಹವಾದರೂ ಅಸ್ವಾಭಾವಿಕವೆನಿಸುವ—ಸನ್ನಿವೇಶಗಳನ್ನು ನೋಡಿದರೆ, ಎಲ್ಲ ಕತೆಗಳೂ ಪತ್ತೆದಾರೀ ಕತೆಗಳ ವರ್ಗದಲ್ಲಿ ಸೇರಿ ನಿಲ್ಲಬಹುದು. ಅಗ್ಗದ ಇಂಗ್ಲಿಷ್ ಚಲಚ್ಚಿತ್ರಗಳಲ್ಲಿಯ ಕತೆಗಳ ಪರಿಣಾಮವು ಈ ಕಥೆಗಳ ಮೇಲೆ ಸಾಕಷ್ಟು ಆದಂತಿದೆ. 'ಪರಿವರ್ತನೆ' ಎಂಬ ಕತೆಯಲ್ಲಿಯ ಲೀಲಾವತಿಯ ಪಾತ್ರವೆ ಆಗಲಿ, 'ಕರಾಳಕೃತ್ಯ' ಎಂಬ ಕತೆಯಲ್ಲಿಯ ವಿಮಲ ಆಗಲಿ, 'ಪ್ರತಿಹಿಂಸೆ'ಯ ಚಿರನೇ ಆಗಲಿ, 'ವಿತಂತು ವಿಮಲ'ಳು ಆಗಲಿ, ದೊಮಣ್ಣನೆ ಆಗಲಿ ಎಲ್ಲವೂ ಲೇಖಕರ ಕಲ್ಪನಾ ಪ್ರಪಂಚದಲ್ಲಿಯವಲ್ಲದೆ ನಮ್ಮ ಸಮಾಜದಲ್ಲಿ ನೋಡಲಿಕ್ಕೆ ದೊರೆಯುವಂತಹವಲ್ಲ. ಅರೇಬಿಯನ್ ನೈಟ್ಸ್, ಪರ್ಶಿಯನ್ ನೈಟ್ಸ್, ವಿಕ್ರಮರಾಜನ ಕಥೆಗಳು, ಸಾಧುಸಂತರ ಮಾಹಾತ್ಮ್ಯಗಳು ಇವುಗಳನ್ನೋದಿ ಮನೋರಂಜನೆ ಮಾಡಿಕೊಳ್ಳಬಲ್ಲ ಸಾಮಾನ್ಯ ವಾಚಕವೃಂದಕ್ಕೆ ಇಲ್ಲಿಯ ಎಲ್ಲ ಕತೆಗಳೂ ಖಂಡಿತವಾಗಿ ಮೆಚ್ಚುಗೆಯವೆನಿಸಬಹುದು. ಕತೆಗೊಂದರಂತೆ ಸಂದರ್ಭಚಿತ್ರಗಳಿವೆ. ಅಚ್ಚೂ ಕಟ್ಟೂ ಅಂದವಾಗಿವೆ.

೧೨೪. ಬಣ್ಣದ ಬೀಸಣಿಗೆ

ಶ್ರೀಮಾನ್. ಅ. ನ. ಕೃಷ್ಣರಾಯರು ಬರೆದ ಏಳು ಏಕಾಂಕ ನಾಟಕಗಳ ಸಂಗ್ರಹ; ಬೆಲೆ ಹನ್ನೆರಡಾಣೆ.

ಈ ಸಂಗ್ರಹದಲ್ಲಿಯ ೩ನೆಯ ಏಕಾಂಕ ನಾಟಕವಾದ 'ಅನುಗ್ರಹ' ಎಂಬುದು ವಿಜಯನಗರದ ಕಾಲದ ಒಂದು ಐತಿಹಾಸಿಕ ಸನ್ನಿವೇಶವನ್ನು ಒಳಗೊಂಡುದಾಗಿದೆ. ೬ನೆಯದಾದ 'ಪಾಲು' ಎಂಬುದು ಬರ್ನಾರ್ಡ್ ಗಿಲ್ಬರ್ಟರ 'ದಿ ಓಲ್ಡ್ ಬುಲ್' ಎಂಬ ಇಂಗ್ಲಿಷ್ ನಾಟಕದ ಅನುವಾದವಾಗಿದೆ. ಮಿಕ್ಕುವೆಲ್ಲ ಸಾಮಾಜಿಕ ಕಥಾವಸ್ತುವನ್ನೊಳಗೊಂಡ ಸ್ವತಂತ್ರ ನಿರ್ಮಿತಿಗಳು.

ಮೊದಲನೆಯ ಏಕಾಂಕ '**ಬಣ್ಣದ ಬೀಸಣಿಗೆ**' ಎಂಬುದರಲ್ಲಿ ಮನಸ್ಸು ಮೆಚ್ಚದೆ ಮದುವೆಯಾದ ಮೊದಲನೆಯ ಹೆಂಡತಿಯು ಗಂಡನನ್ನು ಬಿಟ್ಟು ಫಿಲ್ಮ್ ಕಂಪನಿಯಲ್ಲಿ ಸೇರುತ್ತಾಳೆ. ಆ ಮೇಲೆ ಅವನು ಮಾಡಿಕೊಂಡ ಎರಡನೆಯ ಹೆಂಡತಿಗೆ ಈ ವಿಷಯ ಗೊತ್ತಿರುವುದಿಲ್ಲ. ಒಂದು ದಿನ ಗಂಡ ಮನೆಯಲ್ಲಿಲ್ಲದಾಗ ಅಕಸ್ಮಾತ್ತಾಗಿ ಅವಳಿಗಿದು ಗೊತ್ತಾಗುವುದು. ಅದು ಗೊತ್ತಾದ ಸ್ವಲ್ಪ ವೇಳೆಯಲ್ಲಿಯೆ ಸಿನೇಮಾ ನಟಿಯ ಹೇಸಿ ಬದುಕಿಗೆ ಬೇಸತ್ತ ಮೊದಲನೆಯ ಹೆಂಡತಿ, ತಾನು ಹೆತ್ತ ಹಸುಗೂಸೊಂದನ್ನು ಎತ್ತಿ

ಕೊಂಡು ಸಾಯಲಾದ ಸ್ಥಿತಿಯಲ್ಲಿಯೆ ಮನೆಗೆ ಬರುವಳು. ಅಲ್ಲಿ ಇಬ್ಬರಲ್ಲಿಯೂ ಮಾತು–ಕತೆ ನಡೆದು, ತಾಯಿ ಮಲತಾಯಿಯ ಕೈಗೆ ಕೂಸನ್ನೊಪ್ಪಿಸಿ ನಿಶ್ಚಿಂತಳಾಗಿ ಪ್ರಾಣಬಿಡುವಳು. ಗಂಡ ಮನೆಗೆ ಬಂದಮೇಲೆ ಹೆಂಡತಿ ಈ ಮಾತನ್ನು ಹೇಳಲು ಆ ಕೂಸನ್ನು ಇಬ್ಬರೂ ಪ್ರೀತಿಯಿಂದ ಸಲಹಿಕೊಂಡಿರುವರು. ಎರಡನೆಯ ಹೆಂಡತಿಯ ದಾಂಪತ್ಯಪ್ರೇಮವೂ ವಿಶಾಲ ಹೃದಯವೂ ಈ ನಾಟಕದಲ್ಲಿ ಚೆನ್ನಾಗಿ ಪರಿಪುಷ್ಟಿಗೊಂಡಿದೆಯಾದರೂ ಮೊದಲನೆಯ ಹೆಂಡತಿಯ ಆಗಮನವೂ ಮರಣದ ಘಟನೆಯೂ ಅಸ್ವಾಭಾವಿಕವೆನಿಸಿ, ಅಲ್ಲಿಯವರೆಗೆ ಸುಂದರವಾಗಿ ಬೆಳೆದುಕೊಂಡು ಬಂದಿದ್ದ ನಾಟಕವನ್ನು ಅಂದಗೆಡಿಸಿಬಿಟ್ಟಿರುವುವು.

'**ಅನುಗ್ರಹ**' ಎಂಬುದರಲ್ಲಿ ವಸ್ತು ಚಮತ್ಕೃತಿಯೇನೂ ಇಲ್ಲವಾದರೂ ಚೆನ್ನನಾಯಕನೆಂಬ ಬೇಡನಾಯಕನ ಪಾತ್ರ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಮನುಷ್ಯತ್ವ ರಾಜಭಕ್ತಿಗಳೆರಡರಿಂದಲೂ ಕೂಡಿದ ಆ ನಾಯಕ, ರಾಜದ್ರೋಹಿಯೆಂದು ಸೆರೆಯಾಳಾಗಿ ಬಂದವನು, ಬುಕ್ಕರಾಯನ ಅತ್ಯಂತಿಕ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಕೃತಿ ಚಿಕ್ಕದಾದರೂ ಗುಣದ ಮೂಲಕ ವಾಚಕರ ಮನವನ್ನು ಜುಮ್ಮುದಟ್ಟಿಸುತ್ತದೆ.

'**ಜ್ವಾಲಾಮುಖಿ**' ಎಂಬ ನಾಟಕವು ಇಂದಿನ ಹಿಂದೀ ಪ್ರಚಾರದಿಂದ ಕನ್ನಡಕ್ಕಾಗುತ್ತಿರುವ ಆಘಾತವನ್ನು ಕಿರಣಚಿತ್ರಯಂತ್ರದಂತೆ ವಾಸ್ತವವಾಗಿ ರೂಪಿಸುತ್ತಿದೆ. ಇದರಲ್ಲಿಯ ಹಿಂದೀಪ್ರಚಾರಕ ಜ್ವಾಲಾಪ್ರಸಾದನು ವಕೀಲ ರಘೂತ್ತಮರಾಯರ ಹೆಂಡತಿಯನ್ನು ಓಡಿಸಿಕೊಂಡು ಹೋದ ಕಥೆಯ ಕೊನೆಯು ಅನೇಕರಿಗೆ ಸೇರದಿರಬಹುದಾದರೂ, ನಾಟಕದ ಬೆಳವಣಿಗೆಯ ರೀತಿಯನ್ನು ನೋಡಿದರೆ ಅದು ಅಸ್ವಾಭಾವಿಕವೆಂದೇನೂ ಎನಿಸುವಂತಿಲ್ಲ. ಇದರಲ್ಲಿಯ ಮೂರ್ತಿ ಕನ್ನಡಿಗರ ಅಭಿಮಾನದ ಮೂರ್ತಿಯಾಗಿ ಪರಿಪುಷ್ಟಿಗೊಂಡಿದ್ದಾನೆ.

'ಧರ್ಮಸಂಕಟ'ವು ಸರಸ್ವತಮ್ಮ (ಏಜಂಟ್)ನ ಮನೆಯಲ್ಲಿ ಸೇರಿದ ಪೋಲಿಗಳ ಬರುವಮಾತುಗಳಿಂದ ಮೊದಮೊದಲು ಬೇಸರವೆನಿಸಿದರೂ ಕಾಮುಕನಾದ ಜಾಗೀರದಾರನು ಕೋಣೆಯಲ್ಲಿ ಹೋದಾಗ, ಅಲ್ಲಿ ತನ್ನ ತಂಗಿಯನ್ನು ಕಾಣುವ ಘಟನೆ ತುಂಬ ಕುತೂಹಲಕಾರಿಯಾಗಿದೆ. ಆದರೆ ಆ ಸೀಚರಿಗೆಲ್ಲ ಒಮ್ಮೆಲೆ ಉಪರತಿಯನ್ನುಂಟುಮಾಡಿಸಿದುದು, ಕಂಪನಿಯ ನಾಟಕಗಳಲ್ಲಿಯ ಖಲಪಾತ್ರನಿಗೆ ಪಶ್ಚಾತ್ತಾಪವನ್ನುಂಟುಮಾಡಿಸುವಂತೆ ತುಂಬ ಆತುರದ್ದಾಗಿಬಿಟ್ಟಿದೆ. ಆದರೂ ಏಕಾಂಕ ನಾಟಕದ ತಂತ್ರವು ಇಲ್ಲಿ ಸಾಕಷ್ಟು ಕುಸುರುಗೊಂಡುದನ್ನು ಕಾಣಬಹುದು.

'ವಿಶ್ವಧರ್ಮ'ದಲ್ಲಿಯ ಗೋವಿಂದರಾಯನೆಂಬ ಗ್ರಂಥಕರ್ತೃವಿನ ಆದರ್ಶದ ಹುಚ್ಚು ಸ್ವಾಭಾವಿಕವಾಗಿ ರೂಪುಗೊಂಡಿದೆಯಾದರೂ ಕಥಾವಸ್ತು ಚಮತ್ಕೃತಿಯ ನೆರವು ಅದಕ್ಕೆ ಇರದುದರಿಂದ–ಇದುವರೆಗಿನ ನಾಟಕಗಳನ್ನೋದಿದವರಿಗೆಲ್ಲ ಇದು 'ಏನೊ ಕೊರತೆಯಿಂದ ಕೂಡಿದಂತಿದೆ' ಎನಿಸುವುದು ಅಸ್ವಾಭಾವಿಕವಲ್ಲ. 'ಪಾಲು' ಇಂಗ್ಲಿಷಿನ ಅನುವಾದವಾದರೂ ಅದನ್ನು ನಮ್ಮ ಸಮಾಜಕ್ಕೆ ಸಂಪೂರ್ಣ ಹೊಂದಿಕೆಯೆನಿಸುವಂತೆ ತಿರುಗಿಸಿರುವ ರೀತಿ ಪ್ರಶಂಸನೀಯವಾಗಿದೆ. ಇದರಲ್ಲಿಯ 'ದೊಡ್ಡಣ್ಣ'ನಂತಹ ಸ್ವಾರ್ಥಿಗಳನ್ನು ನಮ್ಮ ಸಮಾಜದಲ್ಲಿ ನಿತ್ಯವೂ ಹಲವು ಜನರನ್ನು ನೋಡುತ್ತೇವೆ.

ಕೊನೆಯದೂ ಎಲ್ಲವುಗಳಿಗಿಂತ ದೊಡ್ಡದೂ ಆದ "ಗುಬ್ಬಚ್ಚಿ ಗೂಡು" ತುಂಬ ಕ್ರಾಂತಿಕಾರಕ ಕಥಾವಸ್ತುವಿನಿಂದ ಕೂಡಿದೆ. ಸನಾತನ ಆಚಾರ ವಿಚಾರಗಳಲ್ಲಿ ಶ್ರದ್ಧೆಯಿದ್ದವರು ಈ ನಾಟಕವನ್ನು ಓದಿದರೆ 'ಪ್ರಲಯವು ಸಮೀಪಿಸಿತು' ಎಂದು ಗಲಭೆಯನ್ನೆಬ್ಬಿಸಿ ಬಿಡಬಹುದು. ಸರೋಜಾ ಮೈಲಾರಪ್ಪನೆಂಬ ಮುದುಕನಿಗೆ ಎರಡನೆಯ ಹೆಂಡತಿ. ಶಂಕರ ಮೈಲಾರಯ್ಯನ ಅಣ್ಣನ ಮಗ, ಪದವೀಧರನಾದ ಸುಶಿಕ್ಷಿತ ತರುಣ. ಶಂಕರ–ಸರೋಜೆಯರಲ್ಲಿ ವಿದ್ಯಾರ್ಥಿದಶೆಯಿಂದಲೂ ಪ್ರೀತಿ ಬೆಳೆದು ಬಂದಿದ್ದಿತು. ಆದರೆ ಸರೋಜೆಯ ತಂದೆ ದುಡ್ಡಿನಾಶೆಯಿಂದ ಮಗಳನ್ನು ಮೈಲಾರಯ್ಯನಿಗೆ ಕೊಟ್ಟು ಮದುವೆ ಮಾಡಿದ. ಮದುವೆಯಾದ ನಿಮಿತ್ತಕ್ಕಾಗಿಯೆ ಅವರಿಬ್ಬರೂ ಗಂಡ – ಹೆಂಡಿರು. ಕರ್ಮಧರ್ಮ ಸಂಯೋಗದಿಂದ ಶಂಕರನು ಚಿಕ್ಕಪ್ಪನೂರಿಗೆ ಬಂದು ಆತನ ಮನೆಯಲ್ಲಿಯೆ ವಾಸಮಾಡುವನು. ಮೊದಲಿನಿಂದಲೂ ಬೆಳೆದುಬಂದ ಪ್ರೀತಿ ಶಂಕರ–ಸರೋಜೆಯರನ್ನು ನಲ್ಲ–ನಲ್ಲೆಯರನ್ನಾಗಿ ಮಾಡುವುದು. ಮೊದಮೊದಲು ಮೈಲಾರಯ್ಯನಿಗಿದು ತಪ್ಪೆನಿಸಿ ಸಿಟ್ಟುಬಂದರೂ ಕೊನೆಗೆ ಅವರಿಬ್ಬರ ಪತಿ–ಪತ್ನಿತ್ವವನ್ನು ಒಪ್ಪಿಕೊಂಡು, ತನ್ನ ಆಸ್ತಿಯನ್ನೆಲ್ಲ ಅವರಿಗೆ ಒಪ್ಪಿಸಿಕೊಡುವನು. ಚಿಕ್ಕಮ್ಮ ಮಗನಿಗೆ ಹೆಂಡತಿಯಾಗುವಳು. ಯಾವ ಆಚಾರನಿಷ್ಠ ಈ ಕಥೆಯನ್ನು ಒಪ್ಪಿಕೊಳ್ಳಬಹುದು?

'ಏಳು ಏಕಾಂಕ ನಾಟಕ'ಗಳ ಸಂಗ[illegible]
ದಲ್ಲಿ ಇದೊಂದಾಗಿ ಪ್ರಕಟವಾಗ್ತಿ[illegible]
ಈ ನಾಟಕದ ವಸ್ತುವನ್ನೂ ದೃ[illegible]
ನಡೆದ ಕಾಲವನ್ನೂ ನ[illegible] ಇನ್ನೂ
ಏಕಾಂಕ ನಾಟಕದ ಒರೆಗೆ [illegible]ಹತ್ತು
ನಾಟಕವೆಂದು ಕರೆಯಿಸಿ[illegible]ಯಾಯ.
ಇದರ ಕಥಾವಸ್ತು ಇಷ್ಟೊ[illegible]ನ್ಯ
ಕಾರಿಯಾಗಿದ್ದರೂ ಅಭ[illegible]ತಾ[illegible]
ಬೆಳೆಯಿಸಿ ತೋರಿಸಿದ ಲೇಖಕ[illegible]
ಹೊಗಳತಕ್ಕಂತಹದಾಗಿದೆ. [illegible]ಸೂ
ಲ್ಲಿಯೂ ಒಂದೆರಡು ಕಡೆಗೆ [illegible]ಷ್ಟು
ಆವಶ್ಯಕವೆಂದು ಕಾಣದಿರ[illegible]ರ್ಥ[illegible]ವು
ಚರ್ಚೆಗಳು ಸಾಕಷ್ಟು ದ[illegible]ತಿವೆ. [illegible]ಇದ
ಅವು ಈ ನಾಟಕದ ಕಥಾ[illegible]ಟ
ವನ್ನು ಹಿಡಿದು ನಿಲ್ಲಿಸಿದಂತೆ [illegible]ರ [illegible]
ಸ್ವಭಾವದ ವಾಚಕರನ್ನು [illegible]ಳಿಸು
ತ್ತವೆ.

ಎಲ್ಲ ನಾಟಕಗಳ ಹಿಂದೆಯೂ ಪ್ರಚಾರಕೋದ್ದೇಶದ ಕೈಚಳಕವಿದೆಯಾದರೂ ಪಾತ್ರಸೃಷ್ಟಿ, ವಸ್ತುಪರಿಪುಷ್ಟಿ, ಸಹಜ ಸಂಭಾಷಣೆ ಅದನ್ನು ಎದ್ದುಕಾಣದಂತೆ ಮಾಡಿವೆ. ಶ್ರೀಮಾನ್ ಅ. ನ. ಕೃಷ್ಣರಾಯರ ಬರವಣಿಗೆಯ ವೈಶಿಷ್ಟ್ಯವೇ ಇದು. ಅವರ ಪರಿಪಕ್ವಗೊಳ್ಳುತ್ತಿರುವ ಲೇಖನಕಲೆ ಕನ್ನಡದೇವಿಯನ್ನು ಒಳ್ಳೊಳ್ಳೆ ಕೃತಿಗಳಿಂದ ಅಲಂಕರಿಸಲೆಂದು ಸಮ್ಮಾಶಿ

—ಟಿ. ಟಿ. ಎಸ್. ರಾವ

ನಗೀಗೆ ನೇವಿದ್ಯ

ತಾಯಂದಿರ ಮದುವೆ

ಒಬ್ಬ :— ನನ್ನ ತಾಯಿಯ ಮದುವೆ ಅವಳು ೧೪ ವರ್ಷದವಳಿದ್ದಾಗಲೆ ಆಯಿತಂತೆ!

ಇನ್ನೊಬ್ಬ :— ಅದೇನು ದೊಡ್ಡ ಆಶ್ಚರ್ಯ? ನನ್ನ ತಾಯಿಯ ಮದುವೆ ಅವಳು ೧೨ ವರ್ಷದವಳಿದ್ದಾಗಲೆ ಆಯಿತಂತೆ!

ಕೇಳಿಸಿ :— ಇದೇನು ಮಹಾ ಆಶ್ಚರ್ಯದ ... ನನ್ನ ತಾಯಿಯ ಮದುವೆ ನಾನು ...ಕಂಪ... ಂತ ಮೊದಲೇ ಆಯಿತಂತೆ!

ಏಡ ಹೆಂಡಿ

ಇನ್ನೊಬ್ಬ :— ನಿಂದೇನು ದೊಡ್ಡ ಹಶ್ಚ್ಯದ ... ಸಂಗತಿ ಹೋಗೋ, ನಮ್ಮ ...ಯಿಯ ಮದುವಿ ನಾನಲ್ಲ—ನಮ್ಮ ಅಣ್ಣ ...—ನಮ್ಮ ಹಿರಿಯ ಅಕ್ಕ ಹುಟ್ಟುವುದ ...ಕ್ಕಾ ಮೊದಲು ಆಯಿತಂತೆ!

* * *

ಸೂರ್ಯನೋ ಚಂದ್ರನೋ!

...ಬ್ಬರು ಸೆರೆಗುಡುಕರು ಹುಣ್ಣಿಮೆಯ ...ಲ್ಲಿ ಸೆರೆಕುಡಿದು ಹೊಡೆ ಕುಳಿತುಕೊಂ... ...ರಟಿದ್ದರು. ಬರುವುವ... ಮಗನs ಇಂವಗ ಚಂದಪ್ಪ ಅಜ್ಞಾನ... ಇಂವ ಸೂರ್ಯಾ ಅದಾನು, ನಗೆಯುಷು... ...ಳತೇನು?"

"ಅದ್ಯಾಂಗೋ ಹುಚ್ಚನನ್ನ ಮಗನs! ಇಂವಾ ಸೂರ್ಯಾ ಅಲ್ಲ, ಚಂದಪ್ಪ ಅದಾನು!"

ಇಬ್ಬರೂ ಜಗಳಾಡುತ್ತ ಹೊರಟಾಗ ಮೂರನೆಯವನೊಬ್ಬ ದಾರಿಯಲ್ಲಿ ಭೆಟ್ಟಿಯಾದ; ಆಗ ಅವನನ್ನು ಮೊದಲನೆಯವ ಕೇಳಿದ:

"...ವನಪಾ, ನೀನಾದರೂ ಇಂವಗ ಹೇಳೋ! ಇಂ... ಚಂದಪ್ಪನೋ ಸೂರ್ಯಾನೋ?"

ಮೂರನೆಯ ಸೆರೆಗುಡುಕ ಹೇಳಿದ:

"...ನೋ ಅಪ್ಪಾ, ನಾ ಈ ಊರಾಂವಲ್ಲ... ನನಗೂ ಮಾಯಿತ್ತಾ ಇಲ್ಲ!"

ಯಾವಾಗ ಮಾತಾಡಬೇಕು?

...ಗಂಗಾಬಾಯಿ ಶ್ರೀ. ನೆರೆಮನೆಯ ...ತುಂಗಾಬಾಯಿಗೆ ಹೇಳುತ್ತಿದ್ದಳು:

"ಕೇಳಿದಿರೇನು, ಇತ್ತೀಚೆಲಾಗ ನಮ್ಮ ಮನೀಯವರಿಗೆ ನಿದ್ದಿ ಹತ್ತಿದಾಗ ಮಾತಾಡೂ ಚಟಾ ಬಿದ್ದು ಬಿಟ್ಟೇದ...."

ಅಷ್ಟರಲ್ಲಿ ಗಂಗಾಬಾಯಿಯ ಮಗ ಗುಂಡ ತಂದೆಯ ಪಕ್ಷವಹಿಸಿ ಮಾತನಾಡಿದ:

"ಹಾಂಗಾದರ ಅಂವಾ ಮಾತಾಡಬೇಕಾರೇ ಯಾವಾಗ? ಎಚ್ಚರಿಕಿರುವಾಗಂತೂ ನೀ ಅಂವಗ ಬಾಯನs ತಗೀಗೊಡೂದಿಲ್ಲ!"

* * *

ಪ್ರಾಮಾಣಿಕ ನ್ಯಾಯಾಧೀಶರು

ಆರೋಪಿಯೊಬ್ಬನು ನ್ಯಾಯಕೋರ್ಟಿನಲ್ಲಿ ನಿಂತು ಕೂಗತೊಡಗಿದನು:

"ನ್ಯಾಯ, ನ್ಯಾಯ, ನ್ಯಾಯ! ನ್ಯಾಯ ಸಿಗಬೇಕು ನನಗ!"

ರೋಷಗೊಂಡ ನ್ಯಾಯಾಧೀಶರು, ಅವನಿಗಿಂತ ಗಟ್ಟಿಯಾಗಿ ಕೂಗಿ ಹೇಳಿದರು:

"ಹುಂ ಎಚ್ಚರಿಕೆ! ಮೂರ್ಖ ನೀನು ನ್ಯಾಯಕೋರ್ಟಿನಲ್ಲಿ ಇರುತ್ತೀ ತಿಳಿಯಿತೇನು? ಹೀಗೆಲ್ಲಾ ಇಲ್ಲದ ಸಲ್ಲದ ಒದರಾಟಾ ನಡಿಸಿದರ ನನಗೆ ತಡೆಯಲಿಕ್ಕಿಲ್ಲ ನೋಡು!"

* * *

ಇಬ್ಬರ ಜಾಣತನ

"ನೋಡು ಶೀನೂ, ನಿನಗ ನನ್ನ ಜಯಾನ್ನ ಜಾಣತನದ ಕಲ್ಪನಾ ಇಲ್ಲ. ಇಬ್ಬರ ಜಾಣತನಾ ಆಕೀ ಒಬ್ಬಾಕೀ ತಲ್ಯಾಗs ಹಾಕ್ಯಾನ ನೋಡು ದೇವರು!"

"ಹಾಂಗಿದ್ದರೆ ಏನೂ ಚಿಂತಿಲ್ಲ. ಹೊಡದು ಹಾರಿಸಿ ಬಿಡು ಮದಿವೀ! ನಿನಗ ಅಂಥಾ ಹೇಣತೀನೇ ಇರಬೇಕಾದದ್ದು ಅಗತ್ಯ ಅದ!"

ಎರಡು ಬಿಲ್ಲಿಯ ಉಳಿತಾಯ



ಆತ :— ನೋಡು, ಸಂಸಾರಾ ಅಂದಮ್ಯಾಲ ಮಿತವ್ಯಯದಿಂದ ನಡಿಸಬೇಕು. ನನ್ನ ಕಡೆಯಿಂದಾಗೂ ಕೆಲಸಕ್ಕ ಆಗಸಗ್ಯಾಕ ಎರಡು ಬಿಲ್ಲೀ ಕೊಡಬೇಕು....

ಆಕೆ :— ಸರಿ ಸರಿ! ಅಲ್ಲಿ ನೋಡ್ರಿ! ಎರಡು ಬಿಲ್ಲೀ ಉಳಿಸೂ ಉಬ್ಬಿನೊಳಗ ಎರಡು ರೂಪಾಯಿ ಶರ್ಟು ಸುಟ್ಟುಹೋಗಲಿಕ್ಕೆ ಹತ್ತೇದ....ಚೆಲೋ ಆದ ನಿಮ್ಮ ಮಿತವ್ಯಯ!



ಾಟಣಾದ ಪತಾಕೆ

ಹಿಂದುಸ್ಥಾನದ ರಾಜಕೀಯ ವಾತಾವರಣದಲ್ಲಿ, ಕಳೆದ ತಿಂಗಳು ್ಯಂತ ಮಹತ್ತ್ವದ ಅನೇಕ ಘಟನೆಗಳು ಸಂಭವಿಸಿವೆ. ರಾಮ- ೆದ ರಾಷ್ಟ್ರೀಯ ಮಹಾಸಭೆಯ ಅಧಿವೇಶನವು ತಿಂಗಳ ಕೊನೆಯ -೧೨ ದಿವಸಗಳ ವರೆಗೆ ಜನತೆಯ ಲಕ್ಷ್ಯವನ್ನು ಸೆಳೆದಿತ್ತಾದರೂ ರ ಮಹತ್ತ್ವವು ಹೆಚ್ಚಾಗಿ ತೋರಿಕೆಗಾಗಿಯೆ ಇದ್ದಿತೆಂದು ೇಳಬಹುದು. ಪಾಟಣಾದಲ್ಲಿ ಆ ಮುಂಚೆಯೆ ವರ್ಕಿಂಗ್ ಕಮಿಟಿ ಯು ಸೇರಿ ಮಹಾಧಿವೇಶನದ ಮುಂದಿಡತಕ್ಕ ಕಾರ್ಯಕ್ರಮ ನ್ನು ನಿರ್ಣಯಿಸಿ ಬಿಟ್ಟಿತ್ತು. ಇಂದಿಗೂ ರಾಜಕೀಯ ಷ್ಟಿಯಿಂದ ಮಹತ್ತ್ವದ್ದಾದ ವಿಷಯವೆಂದರೆ ಪಾಟಣಾದಲ್ಲಿ ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಸ್ವೀಕೃತವಾದ ೊತ್ತುವಳಿ. ಈ ಗೊತ್ತುವಳಿಯಾದ ನಂತರ ಅನೇಕ ಮುಂದಾಳು ು ಸಭೆಗಳಲ್ಲಿ, ಪತ್ರಿಕೆಗಳಲ್ಲಿ ಅದರ ಮುಖ್ಯ ಆಶಯಗಳನ್ನು ಷ್ಟಪಡಿಸಿದ್ದಾರೆ. ಇದಕ್ಕೂ ಮಹತ್ತ್ವದ ಸಂಗತಿ ಎಂದರೆ ಹಾತ್ಮಾ ಗಾಂಧಿಯವರು ಆ ಗೊತ್ತುವಳಿ ತಮ್ಮ ವಿಚಾರಗಳ ಲಾವಣೆಗೆ ಹೇಗೆ ದ್ಯೋತಕವಾಗಿದೆ ಎಂಬುದನ್ನು ವಿವರವಾಗಿ ಜನ ಪತ್ರಿಕೆಯಲ್ಲಿ ಬರೆದದ್ದು. ಪಾಟಣಾದ ಗೊತ್ತುವಳಿಯಿಂದ ಂಗ್ರೆಸಿನ ವಾತಾವರಣದಲ್ಲಿ ಚೈತನ್ಯ ಹೆಚ್ಚಾಗಿದೆ, ಗಾಂಧಿಯ ಕರ್ತೃತ್ವಗಾರಿಕೆಯ ಮುಂದಾಳುತನಕ್ಕೆ ಮತ್ತೆ ಕಳೆ ಏರುತ್ತ ೆ. ಕಾಂಗ್ರೆಸೇತರ ಪಕ್ಷಗಳು ದ್ವೇಷ-ಮತ್ಸರ-ಭಯಗಳಿಂದ ್ಣನಿನಾದವನ್ನು ಕೂಗುತ್ತಲಿದ್ದಾರೆ, ಆಂಗ್ಲೊ-ಇಂಡಿಯನ್ ತ್ರಿಕೆಗಳು ವಿಹ್ವಲವಾದಂತಿವೆ (ಇಲ್ಲವೆ ಕಿಂಕರ್ತವ್ಯತಾಮೂಢ ಾಗಿವೆ ಎನಬಹುದು), ಕೊನೆಯದಾಗಿ ಬ್ರಿಟಿಶ ಸರಕಾರವು ಕ್ಷ್ಯವಾಗಿ ನಿರೀಕ್ಷಿಸುತ್ತಲಿದೆ. ಇವೆಲ್ಲ ಸಂಗತಿಗಳಿಗೆ ಕಾರಣ ಗಬೇಕಾದರೆ ಪಾಟಣಾದ ಗೊತ್ತುವಳಿಯಲ್ಲಿ ಯಾವ ವೈಶಿಷ್ಟ್ಯ ೆ? 'ಪಾಟಣಾದ ಪತಾಕೆ' ಎಂದು ಹೆಸರಾಗುವಷ್ಟು ಹೊಸತನ ಿದೆ?

ೊತ್ತುವಳಿಯ ಗರ್ಭಿತಾರ್ಥ

ಗೊತ್ತುವಳಿಯು ಸುದೀರ್ಘವಾದುದಿದ್ದು (ಈ ಕಾರಣಕ್ಕಾಗಿ ದನ್ನು ಬರೆಯುವುದರಲ್ಲಿ ಪಂಡಿತ ಜವಾಹರರದೆ ಪ್ರಾಮುಖ್ಯ ದೆ ಎಂದು ಹೇಳುವುದುಂಟು) ಅದರ ಮುಖ್ಯಾಂಶಗಳು ಕೆಳಗೆ ಣಿಸಿದಂತಿವೆ :—

೧. ಸದ್ಯಕ್ಕೆ ನಡೆದ ಯುದ್ಧದಲ್ಲಿ ಬ್ರಿಟಿಶರ ರಾಜನೀತಿಯು ಸಾಮ್ರಾಜ್ಯಶಾಹಿತ್ವದ ಧೋರಣೆಯದೆಂದು ಮನಗಂಡು, ಕಾಂಗ್ರೆಸು ಈ ಸಂದರ್ಭದಲ್ಲಿ ಎಂದಿಗೂ ಬೆಂಬಲವನ್ನು ಕೊಡಲಾರದು.
೨. ವಸಾಹತ ಸ್ವರಾಜ್ಯ, ಸಾಮ್ರಾಜ್ಯಾಂತರ್ಗತ ಸ್ವರಾಜ್ಯ, ಸಾಮ್ರಾಜ್ಯಶಾಹಿತ್ವದ ಬಂಧನದಲ್ಲಿ ಸ್ವತಂತ್ರ-ಇವುಗಳಲ್ಲಿ ಒಂದೂ ಭಾರತದ ಪರಿಸ್ಥಿತಿಗಾಗಲಿ ಗೌರವಕ್ಕಾಗಲಿ ತಕ್ಕುದಲ್ಲವೆಂದು ನಂಬಿ, ಸಂಪೂರ್ಣಸ್ವಾತಂತ್ರ್ಯಕ್ಕಿಂತ ಕಡಮೆಯಾದುದಾವುದನ್ನೂ ಕಾಂಗ್ರೆಸು ಸ್ವೀಕರಿಸಲಾಗುವುದ ಸಿದ್ಧವಿಲ್ಲ.
೩. ಭಾರತದ ಘಟನೆಯನ್ನು ಸಿದ್ಧಪಡಿಸುವ ಅಧಿಕಾರವು ಭಾರತೀಯರಿಗೆಯೆ ಇದೆ ಎಂಬುದಕ್ಕಾಗಿಯೂ ಜಾ- ಮತ-ಪಂಥಗಳ ಭೇದಭಾವವನ್ನು ಕಡಮೆಯಾದರೂ ಮಾಡುವ ಉಪಾಯವಿದೆಂದೂ ಸಂವಿಧಾನಕ ಸಭೆ (Constituent Assembly) ಯಲ್ಲಿ ಕಾಂಗ್ರೆಸು ಪೂರ್ತಿಯಾದ ವಿಶ್ವಾಸವನ್ನಿಟ್ಟಿದೆ.
೪. ಈ ತನ್ನ ಧೋರಣೆಯನ್ನು ನಡೆಯಿಸುವುದರಲ್ಲಿ ಮೊದಲ ಹೆಜ್ಜೆ ಎಂದು ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆಯನ್ನು ಕೊಟ್ಟಿವೆ; ಸವಿನಯ ಶಾಸನಭಂಗ ಚಳವಳವು ಇದರಿಂದ ಕ್ರಮಪ್ರಾಪ್ತವಾದಂತೆಯೆ.
೫. ಗಾಂಧಿಜಿಯವರ ಸರ್ವಾಧಿಕಾರನೇತೃತ್ವದಲ್ಲಿ ಪೂರ್ಣ ವಿಶ್ವಾಸ ವರ್ಕಿಂಗ್ ಕಮಿಟಿಗಿದೆ.

ಹೊಸ ಹಾದಿ

ಕಾಂಗ್ರೆಸಿನ ಇದುವರೆಗಿನ ಧೋರಣೆಗಾಗಿ ಅಸಂತುಷ್ಟರಾದವರಾಗಲಿ ಕಾಂಗ್ರೆಸಿನ ಹಿತಶತ್ರುಗಳಾಗಲಿ ಮೇಲಿನ ಮಾತುಗಳಲ್ಲಿ ಕಾಂಗ್ರೆಸು ಏನೂ ಹೊಸತನ್ನು ಹೇಳಿಲ್ಲವೆಂದೂ, ಇದುವರೆಗಿನ ಅನೇಕ ಗೊತ್ತುವಳಿಗಳಲ್ಲಿದ್ದ ಬೆದರಿಕೆ ಬಢಾಯಿಗಳನ್ನೆ ಇಲ್ಲಿ ಹೆಚ್ಚು ಜಂಭದ ಭಾಷೆಯಲ್ಲಿ ಶೇಖರಿಸಿದ್ದಾರೆಂದೂ ಪ್ರತಿಪಾದಿಸುತ್ತಾರೆ. ಆದರೆ ಮೇಲಿನ ಮುಖ್ಯಾಂಶಗಳನ್ನು ಸೂಕ್ಷ್ಮವಾಗಿ ವಿವೇಚಿಸಿದಲ್ಲಿ, ಗೊತ್ತುವಳಿಯ ತರುವಾಯದಲ್ಲಿ ಅದಕ್ಕೆ ನಿಕಟವಾಗಿ ಸಂಬಂಧವುಳ್ಳ ಮುಂದಾಳುಗಳು ಕೊಟ್ಟ ಸ್ಪಷ್ಟೀಕರಣಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡಲ್ಲಿ, ಕಾಂಗ್ರೆಸು ಪೂರ್ತಿಯಾಗಿ ತನ್ನ ಧೋರಣೆಯನ್ನು ಬದಲಾಯಿಸಿದೆ ಎಂಬ ಮಾತು ಸ್ಪಷ್ಟ

ಮೇಲೆ ಕಾಣಿಸಿದ ಮೊದಲನೆಯ ಮಾತನ್ನೆ ಯುದ್ಧದ ವಿಷಯವಾಗಿ ಈವರೆಗೆ ೫-೬ ಸಲ ಬ್ರಿಟಿಶಸರಕಾರವು ತನ್ನ ಧೋರಣೆಯನ್ನು ಸಾರ ...ಟ್ಟ ಬೇಡುತ್ತಿತ್ತು; ಆದರೆ ಈಗ ಬ್ರಿಟಿಶ ಸರಕಾರದ ...ಧೋರಣೆಯು ಸಾಮ್ರಾಜ್ಯಶಾಹಿತ್ವದ ದೃಷ್ಟಿಯನ್ನೆ ...ಾಗಿದೆ ಎಂದು ಕಾಂಗ್ರೆಸು ತನ್ನ ಅಭಿಪ್ರಾಯವನ್ನು ...ಗ್ಧವಾಗಿ, ನಿರ್ಧಾರವಾಗಿ ಹೇಳಿದೆ! ಜರ್ಮನ ಮತ್ತು ... ಇವರಿಬ್ಬರಲ್ಲಿ ಜರ್ಮನರನ್ನೆ ಹೆಚ್ಚಾಗಿ ಖಂಡಿಸಿ, ಬ್ರಿಟಿಶರ ...ೋರಣೆಗಾಗಿ ಬಾಯಿಬಿಡದ ಕಾಂಗ್ರೆಸು ಇಂದು ಜರ್ಮನ ...ಂಬಂಧವನ್ನು ಮರೆತು, ಬ್ರಿಟಿಶ ಧೋರಣೆಯನ್ನೆ ಸ್ಪಷ್ಟವಾಗಿ ...ಂಡಿಸುತ್ತಿದೆ! ಇದಲ್ಲವೆ ಕಾಂಗ್ರೆಸಿನ ರಾಜಕಾರಣದೃಷ್ಟಿಯ ...ದಲಾವಣೆ? ನಾಝೀವಾದವನ್ನು ಕಾಂಗ್ರೆಸು ಸಮರ್ಥಿಸುತ್ತಿದೆ ...ಂದು ಕಾಂಗ್ರೆಸ್ ವೈರಿಗಳು ಕೂಡ ಹೇಳುವಂತಿಲ್ಲ, ಅಷ್ಟೊಂದು ಕಠೋರವಾಗಿ ಎಂದಿನಿಂದಲೂ ಕಾಂಗ್ರೆಸು ಹಿಟ್ಲರನ 'ಧೃತರಾಷ್ಟ್ರ ತನ'ವನ್ನು ಖಂಡಿಸುತ್ತ ಬಂದಿದೆ. ಬ್ರಿಟಿಶರ ಧೋರಣೆಯು ಸಾಮ್ರಾಜ್ಯಶಾಹಿತ್ವದ್ದಲ್ಲ ಎಂದು ಅನೇಕ ಕಾಂಗ್ರೆಸೇತರರು ...ಕಾಂಗ್ರೆಸಿಗೆ ಉತ್ತರವನ್ನು ಕೊಡುತ್ತಲಿದ್ದಾರೆ. ಬ್ರಿಟಿಶರ ಯುದ್ಧ ...ನೀತಿ ...ಯಾವುದು—ಎಂಬುದನ್ನು ಕಾಂಗ್ರೆಸಿನ 'ಬೆಣ್ಣೆಬುರುಕ ...ತನ್ನು ಬ... ...ಂಡಿಸುವ ಸಂದರ್ಭದಲ್ಲಿ ನಾವು ಅನೇಕಸಲ ಸೂಚಿಸಿ ...ತ್ತದ ...ಕಾಂಗ್ರೆಸು ಬ್ರಿಟಿಶ ಸರಕಾರಕ್ಕೆ ಪ್ರಶ್ನೆಯನ್ನು ಕೇಳುವುದೆ ...ಯು... ...ಕ ಎಂದೂ ಸಾಧಿಸಿದ್ದೇವೆ. ಆಗ ನಾವು ಕಾಂಗ್ರೆಸಿನ ...ರೋಧ ಪಕ್ಷದವರೆನಿಸಿದ್ದರೆ ಈಗ ಕಾಂಗ್ರೆಸೇ ನಮ್ಮ ಪಕ್ಷಕ್ಕೆ ಬಂದು ಸೇರಿದೆ ಎನಬೇಕಾಗುವುದು!

ಬ್ರಿಟಿಶರ ಯುದ್ಧನೀತಿ

...ನಿಜವಾಗಿ ನೋಡಿದರೆ ಬ್ರಿಟಿಶ ಯುದ್ಧನೀತಿಯು ಅಂದಿನಿಂದ ...ಇಂದಿನವರೆಗೆ ಸ್ಪಷ್ಟವಾಗಿ ಎದ್ದುನಿಂತಿದೆ. ಆಸ್ಟ್ರಿಯಾ, ಜೆಕೊ-...ಸ್ಲೊವಾಕಿಯಾ, ಫಿನ್‌ಲಾಂಡಗಳ ದುರವಸ್ಥೆ ಸಾಮ್ರಾಜ್ಯ-...ಶಾಹಿತ್ವ ನೀತಿಗೆ ಬುನಾದಿಯಾಗಿದೆ. ಈ ರಾಷ್ಟ್ರಗಳನ್ನು ಈ ...ದುರವಸ್ಥೆಗಿಳಿಯಗೊಟ್ಟ ನೀತಿಯು ಪ್ರಜಾಪ್ರಭುತ್ವದ ತತ್ತ್ವಕ್ಕಾಗಿ ಹೋರಾಡಲು ಸಿದ್ಧವಿದೆ, ಸ್ವಾರ್ಥಸಾಮ್ರಾಜ್ಯಸಂರಕ್ಷಣೆಗಾಗಿ ಅಲ್ಲ ಎಂದು ಹೇಳುವುದು ಭಾವನೆಯ ಅತಿರೇಕವಾಗುವುದು, ಬುದ್ಧಿಯ ಅತಿಪ್ರಸಂಗವಾಗುವುದು. ಹಿಟ್ಲರವಾದವನ್ನು ಅಡಗಿಸಿದ ಮಾತ್ರಕ್ಕೆ ನ್ಯಾಯದ ರಾಜ್ಯವನ್ನು ನಿಲ್ಲಿಸಿದಂತಾಗಲಿಲ್ಲ; ಹಿಟ್ಲರನನ್ನು ಎದುರಿಸಿದ ಕಾರಣಕ್ಕಾಗಿಯೆ ತಾವು ಸಾಮ್ರಾಜ್ಯ-ಶಾಹಿತ್ವದ ಮಠಾಧಿಪತಿಗಳಲ್ಲ ಎಂದಂತಾಗಲಿಲ್ಲ. ಇಬ್ಬರೂ ಸಾಮ್ರಾಜ್ಯವಾದಿಗಳೆ; ಇಷ್ಟೇ ಭೇದ; ಒಬ್ಬರಿಗೆ 'ಪಹಿವಾಟ'ದ ಹಕ್ಕು ಇದೆ, ಇನ್ನೊಬ್ಬರಿಗೆ ವಾರಸದಾರಿಕೆಯೆ ಇಲ್ಲ. ಆದಕಾ-ರಣ ಕಾಂಗ್ರೆಸು ಈಗ ನಿರ್ಭಯತೆಯಿಂದ ಹೇಳುತ್ತಲಿದೆ. ಈ ...ಯುದ್ಧದಲ್ಲಿ ಹಿಂದುಸ್ಥಾನದ ಹಣೆಬರೆಹವೆಂದರೆ ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ! ಹಿಟ್ಲರನು ಪಾದಾಕ್ರಾಂತನಾದರೆ ಹಿಂದು-...ಸ್ಥಾನದಲ್ಲಿ ಸ್ವಾತಂತ್ರ್ಯಕ್ರಾಂತಿಯಾಗಲೇ ಬೇಕೆಂಬುದಿಲ್ಲ.

ಇಷ್ಟೇಕೆ? ಹಿಟ್ಲರನನ್ನು ಹಣ್ಣುಮಾಡಿದ ಸಾಮರ್ಥ್ಯಾತಿರೇಕದ ಅಹಂಕಾರದಿಂದ ಬ್ರಿಟಿಶರು ಭಾರತೀಯರನ್ನು ಹೆಚ್ಚಾಗಿ ಪರತಂತ್ರರನ್ನಾಗಿ ಮಾಡಬಹುದು; ರಶಿಯಾ ಎಂಬ ಭೂತದ ಬೆದರಿಕೆಯನ್ನು ಹಾಕಿ ನಮ್ಮ ಕೈಗೆ ಸಿಲುಕುತ್ತಲಿರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದು. ಹೀಗೆ ಇಂದು ಕಾಂಗ್ರೆಸು ಎಂದಿನಂತೆ ಬ್ರಿಟಿಶರ ಉತ್ತರದ ದಾರಿಯನ್ನು ಕಾಯದೆ, ತಾತ್ತ್ವಿಕದೃಷ್ಟಿಯಿಂದ ಸಮ-ರ್ಪಕವಾದ ತನ್ನ ಉತ್ತರವನ್ನು ಧೈರ್ಯದಿಂದ, ಪ್ರಾಮಾಣಿಕತೆಯಿಂದ, ಅಧಿಕೃತವಾಗಿ ಕೊಟ್ಟದ್ದು ಇದೇ ಮೊದಲ ಸಲ.

ಧ್ಯೇಯದ ದೃಢೀಕರಣ

ಇನ್ನು ಎರಡನೆಯ ಮಾತನ್ನು ನೋಡಿದರೆ ಅದರಲ್ಲಿ ತೋರಿಕೆಗೆ ಯಾವ ಮಾತೂ ಹೊಸತೆನಿಸುವುದಿಲ್ಲ. ಕಳೆದ ೧೫ ವರ್ಷಗಳಿಂದ ಕಾಂಗ್ರೆಸು 'ಪೂರ್ಣಸ್ವರಾಜ್ಯ' ಇಲ್ಲವೆ 'ಸಂಪೂರ್ಣ ಸ್ವಾತಂತ್ರ್ಯ' (Complete Independence) ತನ್ನ ಧ್ಯೇಯ-ವೆಂದು ಘಂಟಾಘೋಷವಾಗಿ ಸಾರುತ್ತಲಿದೆ. 'ವಸಾಹತ ಸ್ವರಾಜ್ಯ' ಎಂಬುದನ್ನು ಕಡೆಗಣ್ಣಿನಿಂದ ಕೂಡ ಕಾಂಗ್ರೆಸು ನೋಡಿಲ್ಲ. ಆಗಾಗ ಕೆಲವು ಮುಂದಾಳುಗಳು ಇಲ್ಲವೆ ವಿಶಿಷ್ಟ ಸಂದರ್ಭಗಳಲ್ಲಿ ಮಹಾತ್ಮರು 'ವಸಾಹತ ಸ್ವರಾಜ್ಯ'ವೂ ಅಭಿ-ಮತವಾಗಬಹುದೆಂಬ ಅಭಿಪ್ರಾಯವನ್ನು ಕೊಟ್ಟಿರಬಹುದು. ಆದರೆ ಆ ವೈಯಕ್ತಿಕ ಅಭಿಪ್ರಾಯಗಳು ಇಲ್ಲಿ ಅನ್ವಯಿಸುವುದಿಲ್ಲ. ಕಾಂಗ್ರೆಸು, ಅಖಿಲಭಾರತ ರಾಷ್ಟ್ರಸಮಿತಿ, ಇಲ್ಲವೆ ವರ್ಕಿಂಗ್ ಕಮಿಟಿ—ಇವು ಒಮ್ಮೆ ಕೂಡ ಅಧಿಕೃತವಾಗಿ 'ವಸಾಹತ ಸ್ವರಾಜ್ಯ'ದ ಮಾತನ್ನು ಒಪ್ಪಿಕೊಂಡಿಲ್ಲ ಎಂಬುದನ್ನೂ ಯಾರೂ ಮರೆಯತಕ್ಕದ್ದಲ್ಲ. ಇದನ್ನು ಬುದ್ಧಿಪೂರ್ವಕವಾಗಿ ಮರೆತು ಇಲ್ಲವೆ ಕೇವಲ ಅಪಪ್ರಚಾರದ ಉದ್ದೇಶದಿಂದ 'ಕಾಂಗ್ರೆಸು ಕ್ಷಣಕ್ಷಣಕ್ಕೆ ತನ್ನ ಧ್ಯೇಯಗಳನ್ನೂ ಮಾತು-ಮನೋಗತಗಳನ್ನೂ ಬದಲಾಯಿಸುತ್ತಿದೆ' ಎಂಬ ಆರೋಪವನ್ನು ಹೊರಿಸುತ್ತಿದ್ದಾರೆ! ಆ ಆರೋಪ ನಿರಾಧಾರವೆಂದು ಬೇರೆ ಹೇಳಬೇಕಾಗಿಲ್ಲ. ಅದ-ಕಾಗಿ ಇಂದು ಕಾಂಗ್ರೆಸು ಈ ವಿಷಯವಾಗಿ ಬೇರೆ ಹೊಸ ಮಾತನ್ನು ಹೇಳಿಲ್ಲ ಎನಬಹುದು. ಆದರೂ 'ವಸಾಹತ ಸ್ವರಾಜ್ಯ. . . . ಭಾರತದ ಪರಿಸ್ಥಿತಿಗಾಗಲಿ ಗೌರವಕ್ಕಾಗಲಿ ತಕ್ಕುದಲ್ಲ' ಎಂಬ ಮಾತನ್ನು ಮಾತ್ರ ಕಾಂಗ್ರೆಸು ಹೊಸತಾಗಿ ಹೇಳುತ್ತಲಿದೆ. ಈ ಮಾತಿನ ಮಹತ್ತ್ವವನ್ನು ಅರಿತುಕೊಳ್ಳಬೇಕಾದರೆ ಒಂದು ಸಂದರ್ಭವನ್ನು ಲಕ್ಷ್ಯದಲ್ಲಿಡಬೇಕಾಗುವುದು. ವೆಸ್ಟಮಿನಿಸ್ಟರ ಶಾಸನಕ್ಕನ್ವಯಿಸಿದ ವಸಾಹತ ಸ್ವರಾಜ್ಯದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಘಟಕಗಳು (Substance of Independence) ಇವೆ ಎಂದು ನಾವು ಕೂಡ ಹಿಂದೊಮ್ಮೆ ವಾಚಕರಿಗಾಗಿ ವಿವರಿಸಿದ್ದೇವೆ. ಮೈಸ-ರಾಯರು ಅಂತಹ ಸ್ವರಾಜ್ಯ ಅಂತಿಮಧ್ಯೇಯ ಎಂದು ಹೇಳಿದ್ದರು; ಆ ಮಾತನ್ನೊಪ್ಪಿಕೊಂಡು ಮಹಾತ್ಮರು 'ಇಂದೇ ಭಾರತಕ್ಕೆ ವಸಹಾತ ಸ್ವರಾಜ್ಯ ಸಿಕ್ಕಿದೆ ಎಂದು ಘೋಷಿಸಿರಿ, ಯುದ್ಧಮುಗಿದ ನಂತರವೆ ಅದನ್ನು ಕಾರ್ಯದಲ್ಲಿ ತರುವಾ, ಕಾಂಗ್ರೆಸನ್ನು ಈ ಸಂಧಾನಕ್ಕೆ ನಾನು ಒಪ್ಪಿಸುವೆ' ಎಂದರು. ಆದರೆ ಅದಕ್ಕೆ ಉತ್ತರ

ಸುವ ಬದಲಾಗಿ 'ಹಿಂದುಸ್ಥಾನದಲ್ಲಿ ಕಾಂಗ್ರೆಸು ಕ್ಷವಲ್ಲ, ಅನೇಕ ಅಲ್ಪಸಂಖ್ಯಾಕ ಪಕ್ಷಗಳಿವೆ, ಅವರ ಕ್ಷಣೆ ನಮ್ಮ ಕರ್ತವ್ಯ' ಎಂದು ವೈಸರಾಯರೂ ಬ್ರಿಟಿಶ ಸರ-ಕಾರದವರು ಮಾತನ್ನು ಜಾರಿಸಿಕೊಂಡರು! ಅದಕಾಗಿಯೆ ಇಂದು ಕಾಂಗ್ರೆಸು 'ಭಾರತದ ಗೌರವಕ್ಕೆ ತಕ್ಕುದಲ್ಲ' ಎಂಬ ಶಬ್ದಗಳನ್ನು ಉಪಯೋಗಿಸಿದೆ. ಇದಲ್ಲದೆ ಭಾರತವು ಬೇರೆ ವಸಹಾತುಗಳಂತೆ ಇಲ್ಲ. ಬ್ರಿಟನ್ನಿನ ಮತ್ತು ವಸಾಹತಗಳ ಜನತೆಗಳಿಗೆ ಇತಿಹಾಸದ ದೃಷ್ಟಿಯಿಂದ ಸಂಸ್ಕೃತಿಸಂಬಂಧವಾದ, ರಕ್ತಗತವಾದ, ಭಾಷಾ-ಮೂಲಕವಾದ ಪರಸ್ಪರ ಸಂಬಂಧವಿದೆ. ವಸಾಹತುಗಳನ್ನು ಭಾರತ ವನ್ನು ಗೆದ್ದಂತೆ ಗೆದ್ದುದಿಲ್ಲ; ಭಾರತೀಯರಂತೆ ಆ ಜನರನ್ನು ದಾಸ ರಾಗಿ ನಡೆಯಿಸಿಕೊಂಡಿಲ್ಲ; ಭಾರತದಂತೆ ಅವುಗಳ ಸಂಪತ್ತನ್ನು ಸುಲಿಯುವುದೆ ರಾಜನೀತಿಯಾಗಿರಲಿಲ್ಲ. ಇದಲ್ಲದೆ ಭಾರತೀಯರೂ ಬ್ರಿಟಿಶರೂ ಪರಂಪರೆ--ಸಂಸ್ಕೃತಿ--ಧರ್ಮ--ಭಾಷೆ ಇವೆಲ್ಲವುಗಳಿಂದ ಪರಸ್ಪರ ಭಿನ್ನರಾಗಿದ್ದಾರೆ. ಅದಕಾಗಿ ಇಂದು ಕಾಂಗ್ರೆಸು 'ವಸಾಹತ ಸ್ವರಾಜ್ಯ .. ಭಾರತದ ಪರಿಸ್ಥಿತಿ(ಗೆ) ತಕ್ಕುದಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಡಕು ಹುಟ್ಟಿಸುವವರ ಒರೆಗಲ್ಲು

ಸಂವಿಧಾನಕ ಸಭೆ (Constituent Assembly) ಯಲ್ಲಿ ಕಾಂಗ್ರೆಸಿನ ಪೂರ್ತಿಯಾದ ವಿಶ್ವಾಸವಿದೆ ಎಂಬುದು ಹೊಸ ವಿಷಯ ವಲ್ಲದಿದ್ದರೂ ಅದನ್ನು ಹೇಳಿದ ರೀತಿಯು ಈ ಸಲ ಹೊಸತಲ್ಲದೆ ಮಹತ್ವದ್ದೂ ಆಗಿದೆ. ಭಾರತದ ಘಟನೆಯನ್ನು ಸಿದ್ಧಗೊಳಿಸುವ ಅಧಿಕಾರ ಬ್ರಿಟಿಶ ಪಾರ್ಲಮೆಂಟಿಗೆ ಇಲ್ಲ ಎಂದು ಕಾಂಗ್ರೆಸಿನ ಹಟ; ಆ ಅಧಿಕಾರ ಕಾಂಗ್ರೆಸಿಗೂ ಇಲ್ಲ ಎಂದು ಕಾಂಗ್ರೆಸೇತರ ಪಕ್ಷಗಳು ಹೇಳುತ್ತಲಿವೆ. ಈ ಸಂದರ್ಭದಲ್ಲಿ ಉಪಾಯವೇನು? ಉಪಾಯ ತಮಗೆ ತೋಚುವುದಿಲ್ಲವೆಂದು ಸಾಧನೆಯನ್ನೆ ಮುಂದೂಡುವುದು ಮುತ್ಸದ್ದಿತನವೆನಿಸದು. ...ಗಿ ಇಂದು ಕಾಂಗ್ರೆಸು ಹೇಳುತ್ತಲಿದೆ; ಪಕ್ಷೋಪಪಕ್ಷಗಳ ಜಂಡವಾದವನ್ನು ಬಿಟ್ಟು, ಪ್ರಾಪ್ತವಯಸ್ಕನಾದ ಪ್ರತಿಯೊಬ್ಬ ಭಾರತೀಯನಿಗೆ ಈ ಮಾತನ್ನು ಒಪ್ಪಿಸೋಣ. ಕಾಂಗ್ರೆಸಿಗಾಗಲಿ ಬೇರೆ ಯಾವುದೊಂದು ಪಕ್ಷಕ್ಕಾಗಲಿ ಘಟನೆಯನ್ನು ಸಿದ್ಧಗೊಳಿ ಸುವ ಅಧಿಕಾರವಿಲ್ಲ ಎನುವವರಲ್ಲಿ "ಭಾರತೀಯರಿಗೇ ಆ ಅಧಿಕಾರ ವಿಲ್ಲ" ಎಂದೂ ಯಾರೂ ಹೇಳಿಲ್ಲ. ಅದಕಾಗಿ ಭಾರತೀಯರಿಗಿದ್ದ ಅಧಿಕಾರವನ್ನು ನಡೆಯಿಸಲು ಇದೊಂದೇ ನ್ಯಾಯ್ಯವಾದ, ಅವಶ್ಯಕ ವಾದ ಮಾರ್ಗ; ಇದಲ್ಲದೆ ಭಾರತದಲ್ಲಿ ಪರಸ್ಪರ ವಿರುದ್ಧ ಜಾತಿ-ಮತ-ಪಂಥಗಳಿವೆ ಎಂಬ ಸಂಗತಿಗೆ ಬ್ರಿಟಿಶರು ಸಲ್ಲದ ಮಹತ್ವ ವನ್ನು ಕೊಟ್ಟಿದ್ದಾರೆ. ಆ ಜಾತಿ-ಮತ-ಪಂಥಗಳ ವಿರೋಧವನ್ನು ನಾಶವೆ ಮಾಡಬೇಕಾದರೆ ಪ್ರತಿಯೊಬ್ಬನು ತಾನು ಮೊದಲು ಭಾರತೀಯನು ಎಂದು ತಿಳಿಯತಕ್ಕುದು. ಇಂತಹ ತಿಳುವಳಿಕೆ ಜಾಗೃತವಾಗಬೇಕಾದರೆ ಸಂವಿಧಾನಕ ಸಭೆಯು ಅತ್ಯಂತ ಸಹಾ ಯಕವಾಗುವುದು. ಈ ಉಪಾಯಕ್ಕೆ ಒಪ್ಪಿಗೆಯನ್ನು ಕೊಡಬೇಕಾ ದರೆ ಭಾರತವು ಒಂದು ರಾಜ್ಯ ಎಂದು ಒಪ್ಪಲೇಬೇಕಾಗುವುದು; ಯಾರು ಹಾಗೆ ಒಪ್ಪಲು ಸಿದ್ಧರಿಲ್ಲವೊ ಅವರೇ ಸಂವಿಧಾನಕ ಸಭೆಯನ್ನು ವಿರೋಧಿಸಬೇಕಾಗುವುದು. ಹೀಗೆ ವಿಶ್ವ ಪಕ್ಷಗಳನ್ನು ಒರೆಗೆ ಹಚ್ಚುವ ಹಟದಿಂದ ಇಂದು ಕಾಂಗ್ರೆಸು 'ಸಂವಿಧಾನಕ ಸಭೆಯಲ್ಲಿ ತನ್ನದು ಪೂರ್ತಿಯಾದ ವಿಶ್ವಾಸವಿದೆ' ಎಂದು ಖಂಡ-ತುಂಡಾಗಿ ಹೇಳಿದೆ.

ಧೈರ್ಯದ ಧೋರಣೆ, ನಿಶ್ಚಯಾತ್ಮಕ ನೀತಿ

ಇವೆಲ್ಲವುಗಳಿಗಿಂತ ಮಹತ್ವದ್ದೆಂದರೆ ಮೇಲಿನ ಮುಖ್ಯಾಂಶ ಗಳಲ್ಲಿ ಕಾಣಿಸಿದ ನಾಲ್ಕನೆಯ ಮಾತು. ಇದುವರೆಗಿನ ಗೊತ್ತು ವಳಿಗಳಲ್ಲಿ ಕಾಂಗ್ರೆಸು ತನ್ನ ಧೋರಣೆಯ ಬಗ್ಗೆ ಯಾವ ನಿರ್ಣಯ ವನ್ನೂ ಹೇಳುತ್ತಿರಲಿಲ್ಲ. ಬ್ರಿಟಿಷ ಸರಕಾರಕ್ಕೆ ಒಂದು ಸವಾಲು, ತನ್ನ ಹಿಂದಿನ ಗೊತ್ತುವಳಿಗಳ ಸಮರ್ಥನೆ, ಮತ್ತೊಮ್ಮೆ ಬ್ರಿಟಿಶರ ಖಂಡನೆ ಮತ್ತೊಮ್ಮೆ ತನ್ನ ಸಮರ್ಥನೆ—ಇವುಗಳ ಹೊರತಾಗಿ ಮಾಡತಕ್ಕದ್ದೇನು ಎಂಬುದರ ವಿಷಯವಾಗಿ ಒಂದೂ ಸೂಚನೆ ಇರುತ್ತಿರಲಿಲ್ಲ. ಈ ಸಲ ಮಾತ್ರ ಎರಡು ಮಹತ್ವದ ಮಾತು ಗಳನ್ನು ವರ್ಕಿಂಗ್ ಕಮಿಟಿಯು ಸ್ಪಷ್ಟವಾಗಿ ಕಾಣಿಸಿದೆ. (೧) ಮಂತ್ರಿಮಂಡಳಿಗಳ ರಾಜಿನಾಮೆಯು ಶಾಸನಭಂಗದ ಮೊದಲ ಹೆಜ್ಜೆ; (೨) ಸದ್ಯದಲ್ಲಿ ಕ್ರಮಪ್ರಾಪ್ತವಾದ ಸಾಧನವೆಂದರೆ ಸವಿನಯ ಶಾಸನಭಂಗವೆ. ಮೊದಲನೆಯ ಮಾತೂ ಮಹತ್ವದ್ದೆಂದು ನಾವು ಹೇಳುವುದಕ್ಕೆ ವಿಶಿಷ್ಟಕಾರಣವಿದೆ. ಇಂದಿನ ಮುಂದಾಳುಗಳ ಧೋರಣೆಯೆ ಬದಲಾಯಿಸಿದೆ ಎಂಬುದರ ದ್ಯೋತಕವಿದು ಎಂದು ನಮ್ಮ ಅಭಿಪ್ರಾಯ. ಕಳೆದ ಅಕ್ಟೋಬರದಿಂದ ವರ್ಕಿಂಗ್ ಕಮಿಟಿಯ ಅಧಿವೇಶನದವರೆಗೆ ಕೆಲವು ಮುಂದಾಳುಗಳ (ವಿಶೇಷವಾಗಿ ಕಾಂಗ್ರೆಸಿನ ಮುಖ್ಯಮಂತ್ರಿಗಳ) ಭಾಷಣಗಳಲ್ಲಿ, ತೀವ್ರವೆ ಕಾಂಗ್ರೆಸು ಮತ್ತೆ ಅಧಿಕಾರಾರೂಢವಾಗುವುದು ಎಂಬ ಆಶೆಯ ಧ್ವನಿ ಕೇಳಬರುತ್ತಿದ್ದಿತು; ಅಲ್ಲಲ್ಲಿ ಗವರ್ನರರ ಅಯಾಚಿತ ಪ್ರಶಂಸಾ ಪತ್ರಿಕೆಗಳೂ ಇದಕ್ಕೇ ದನಿಗೂಡಿಸುತ್ತಿದ್ದುವು. ಇಷ್ಟೇಕೆ? ಸವಿನಯಶಾಸನಭಂಗವು ಸದ್ಯದಲ್ಲಿ ಅವ್ಯವಹಾರ್ಯ ಎಂದು ಕಾಂಗ್ರೆಸಿನ ಮುಂದಾಳುಗಳೇ ಹೇಳುತ್ತಿದ್ದರು. ಈಗಲಾದರೂ ಕೂಡಲೆ ಈ ಚಳವಳವನ್ನು ಪ್ರಾರಂಭಿಸಬೇಕೆಂಬ ಅಭಿಪ್ರಾಯ ಕಾಂಗ್ರೆಸಿಗಿಲ್ಲ ಎಂಬುದು ನಿಜ. ಆದರೂ ಸವಿನಯ ಶಾಸನಭಂಗವೆ ಒಂದೇ ಒಂದಾದ ಉಪಾಯ ಎಂದು ಹೇಳುವ ಕಾಂಗ್ರೆಸು ಅವ್ಯವಹಾರ್ಯ ಎಂದು ಇನ್ನು ಅದನ್ನು ತ್ಯಜಿಸುವಂತಿಲ್ಲ; ಅವ್ಯವಹಾರ್ಯವೆನಿಸಿದರೂ ಅದು ವ್ಯವಹಾರ್ಯವಾಗುವಂತೆ ಪರಿಸ್ಥಿತಿಯನ್ನು ಸಜ್ಜುಗೊಳಿಸುವುದು ಕಾಂಗ್ರೆಸಿಗೆ ಕ್ರಮಪ್ರಾಪ್ತ ವಾಗಿದೆ.

ಮುಂದಾಳುತನದ ಮಹತ್ವ

ಹೀಗೆ ಎಲ್ಲ ದೃಷ್ಟಿಗಳಿಂದಲೂ ಕಾಂಗ್ರೆಸು ತನ್ನ ಧೋರಣೆಯನ್ನು ಪೂರ್ತಿಯಾಗಿ ಬದಲಾಯಿಸಿದೆ, ಹೊಯ್ದಾಟದ ವೃತ್ತಿಯನ್ನು ಬಿಟ್ಟಿದೆ, ತನ್ನದೊಂದು ನಿಶ್ಚಯಕ್ಕೆ ಮುಟ್ಟಿದೆ ಎಂದು ಹೇಳಬಹುದು. ಕೊನೆಯದಾಗಿ ಮಹಾತ್ಮರ ಮುಂದಾಳುತನವನ್ನು ಒಪ್ಪಿ ಕೊಂಡುದೂ ಸಮಾಧಾನದ ಮಾತೇ ಆಗಿದೆ. ಇತ್ತಿತ್ತಲಾಗಿ ತಮ್ಮ

ಧೋರಣೆ ಹೇಗೆ ಬದಲಾಯಿಸಿದೆ ಎಂಬುದನ್ನು ಅವರು ಸ್ಪಷ್ಟವಾಗಿ ಹರಿಜನ ಪತ್ರಿಕೆಯಲ್ಲಿ ವಾರವಾರಕ್ಕೆ ಬರೆಯುತ್ತಲಿದ್ದಾರೆ. Parliamentary mentality has come to stay ಎಂಬುದರ ಬದಲಾಗಿ We are compelled to resort to our only weapon, viz. Civil disobedience ಎನ್ನುತ್ತಿದ್ದಾರೆ. ಅವರ ವೈಯಕ್ತಿಕ ಚಾರಿತ್ರ್ಯಕ್ಕಾಗಿ ಅವರ ಮುಂದಾಳುತನಕ್ಕೆ ಅಸಂಖ್ಯಾತವಾದ ಬೆಂಬಲ ದೊರಕುವುದು ಖಂಡಿತ; ಅವರಲ್ಲಿದ್ದ ಪ್ರಾಮಾಣಿಕತೆಗಾಗಿ ಅನಾವಶ್ಯಕವಾಗಿ ರಾಷ್ಟ್ರದ ಶಕ್ತಿಯು ಅಪವ್ಯಯವಾಗುವ ಸಂಭವ ಕಡಿಮೆ; ಸತ್ಯ-ಅಹಿಂಸೆಗಳ ತಮ್ಮ ತಿಳಿವಳಿಕೆಗಾಗಿ ಅನಿವಾರ್ಯವಾಗುವವರೆಗೆ ಅವರು ಜನ-ಧನ-ನಾಶಕ್ಕೆ ಉದ್ಯುಕ್ತರಾಗುವುದಿಲ್ಲವಲ್ಲದೆ ಶಕ್ಯವಾದಷ್ಟು ಸುಲಭ (ಮತ್ತು ಸತ್ಯಬದ್ಧ) ಉಪಾಯಗಳನ್ನು ಶೋಧಿಸುವರು; ಅವರ ಅಪಾರವಾದ ಧೈರ್ಯಶಕ್ತಿಯಿಂದ ರಾಷ್ಟ್ರದ ಉತ್ಸಾಹಕ್ಕೆ ಮೇರೆಮೀರುವುದರಲ್ಲಿ ಸಂದೇಹವಿಲ್ಲ.

ರಾಮಗಡದ ಅಧಿವೇಶನ

ಸದ್ಯದ ರಾಜಕೀಯ ಪರಿಸ್ಥಿತಿಯು ಮೂಲಕವಾಗಿ ರಾಮಗಡದಲ್ಲಿ ಸೇರಿದ ಕಾಂಗ್ರೆಸಿನ ೫೩ನೆಯ ಅಧಿವೇಶನಕ್ಕೆ ಹೆಚ್ಚು ಮಹತ್ವ ಬಂದಿದೆ. ಇದಲ್ಲದೆ ಫೈಜಪುರ ಅಧಿವೇಶನ (೧೯೩೬) ದ ತರುವಾಯ ಮಹಾತ್ಮಾ ಗಾಂಧಿಯವರು ಪ್ರತ್ಯಕ್ಷವಾಗಿ ಅಧಿವೇಶನಕ್ಕೆ ಬಂದುದು ಇದೇ ಮೊದಲನೆಯ ಸಲ ಎಂಬುದೂ ರಾಷ್ಟ್ರೀಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಮೂರನೆಯದಾಗಿ ಈ ಅಧಿವೇಶನದಲ್ಲಿ ವಾರ್ಕಿಂಗ್ ಕಮಿಟಿಯು ನಿರ್ಣಯಿಸಿದ ಒಂದೇ ಒಂದು ಗೊತ್ತುವಳಿ ಚರ್ಚೆಗೆ ಬರುವುದಿದ್ದಿತು. ಕಾಂಗ್ರೆಸಿನ ಇತಿಹಾಸದಲ್ಲಿಯೆ ಇದು ಅಭೂತ ಸಂಗತಿ ಎಂದು ಹೇಳಬಹುದು. ನೂರಾರು ರೂಪಾಯಿಗಳ ವೆಚ್ಚಮಾಡಿ ಇಷ್ಟು ದೂರ ವರ್ಷಕ್ಕೊಂದು ಸಲ ಸೇರುವ ಅಖಿಲ ಭಾರತೀಯ ಸಂಸ್ಥೆಯ ಅಧಿವೇಶನದಲ್ಲಿ ಒಂದೇ ಒಂದು ಗೊತ್ತುವಳಿ ಚರ್ಚೆಗೆ ಬಂದು, ಬೇರೆ ಯಾವ ಮಾತನ್ನೂ ಅದರಲ್ಲಿ ಸೇರಿಸಲು ಅಧಿಕೃತವಾದ ಸಂಭವವಿಲ್ಲ—ಎಂಬುದು ಅನೇಕ ಪ್ರತಿನಿಧಿಗಳಿಗೆ ನಿರಾಶೆಯ ಮಾತೆನಿಸಿರಲು ಸಾಕು. ಆದರೂ ಹೀಗೆ ಮಾಡುವುದರಲ್ಲಿ ಉಪಯುಕ್ತತೆಯಲ್ಲದೆ ಭಾವನಾಪ್ರಧಾನತೆಯೂ ಇದೆ ಎಂದು ಸಮಾಧಾನ ಹೇಳಲಾಗುವುದು.

ಮೌ. ಅಝಾದರ ಅಧ್ಯಕ್ಷತೆ

ಮೌ. ಅಬುಲ್ ಕಲಂ ಅಝಾದರ ಭಾಷಣವು ಭಾಪಸಗೆ ಸಾಕಷ್ಟು ಪುಷ್ಟಿಕೊಡುವಂತಿದೆ; ಇದಲ್ಲದೆ ಇಂದಿನ ಅನೇಕ ರಾಜಕೀಯ ಸಮಸ್ಯೆಗಳಿಗಾಗಿ ಅಧ್ಯಕ್ಷರು ಮುತ್ಸದ್ದಿತನದ ಮಾತುಗಳನ್ನು ಹೇಳಿದ್ದಾರೆ. ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಮಾರ್ಮಿಕವಾಗಿ ಸ್ಪಷ್ಟಗೊಳಿಸಿದ್ದಾರೆ. ಸಮಗ್ರ ಅವರ ಭಾಷಣದಲ್ಲಿ ಮೂರು ಮಾತುಗಳು ಮನನೀಯವ

೧. ಸದ್ಯದ ರಾಜಕೀಯ ಪ್ರಶ್ನೆಯನ್ನು ಕುರಿತು ಅವರು ಹೀ ಹೇಳಿದ್ದಾರೆ: ಸಂಪೂರ್ಣ ಸ್ವಾತಂತ್ರ್ಯ-ವಸಹಾತಸ್ವರಾ ಗಳಲ್ಲಿ ಯಾವುದು ಇಷ್ಟವೆಂಬುದಾಗಲಿ, ಸದ್ಯಕ್ಕೆಯೆ ಅ ಲಭಿಸಬೇಕೊ ಇಲ್ಲವೆ ಬ್ರಿಟಿಶರು ಹೇಳುವಂತೆ 'ಶಕ್ಯ ದಷ್ಟು ಸ್ವಲ್ಪ ಅವಧಿಯಲ್ಲಿ' ಲಭಿಸಬೇಕೊ ಎಂಬುದು ಸದ್ಯದ ಮಹತ್ವದ ಪ್ರಶ್ನೆಯಲ್ಲ. ಹಿಂದುಸ್ತಾನಕ್ಕೆ ಸ್ವಯ ನಿರ್ಣಯದ ಅಧಿಕಾರ ಇದೆಯೊ ಇಲ್ಲವೊ—ಎಂಬುದೆ ಒಂ ಒಂದಾದ ಮಹತ್ವದ ಪ್ರಶ್ನೆ. ಈ ಮಾತನ್ನು ಹೇ ಮೌ. ಅಝಾದರು ತಮ್ಮ ಮುತ್ಸದ್ದಿತನವನ್ನು ತೋ ದ್ದಾರೆ. ಈ ಪ್ರಶ್ನೆಗೆ ಬ್ರಿಟಿಶರು ಸಮರ್ಪಕವಾದ (ಹೌ ದೆಂದಾಗಲಿ ಅಲ್ಲವೆಂದಾಗಲಿ) ಉತ್ತರವನ್ನು ಕೊಟ್ಟ ಇಂದಿನ ರಾಜಕೀಯ ತೊಡಕು, ಪಕ್ಷಪಕ್ಷಗಳ ವಿರೋ ಇವು ಸಡಿಲಾಗುವುದರಲ್ಲಿ ಸಂದೇಹವಿಲ್ಲ.

೨. ನಾಝೀವಾದದ ಗೊಡವೆ ನಮಗಿಲ್ಲ, ಇಂದು ನಮ ಬ್ರಿಟಿಶ ಸಾಮ್ರಾಜ್ಯವಾದದ ಸಂಕೋಲೆಯೆ ತಡೆಯುದಂತ ಗಿದೆ. ಯುದ್ಧದ ಪರಿಣಾಮ-ಪರಿಸ್ಥಿತಿಗಳಿಗಿಂತ ಅದಕ್ಕೆ ಬೇಗ ಈ ಸಂಕೋಲೆಯನ್ನು ಕಡಿದೊಗೆವುದೆ ನಮ ಧ್ಯೇಯವಾಗಿದೆ ಎಂದು ಹೇಳುವ ಅಧ್ಯಕ್ಷರು ಉಗ್ರವಾ ಗಳಿಗಿಂತ ಉಗ್ರರಾಗಿದ್ದಾರೆ, ವ್ಯವಹಾರದೃಷ್ಟಿಯವರಾ ದ್ದಾರೆ. ನಾಝೀವಾದದ ನಾಶವು ಜಗತ್ತಿನ ಕ್ಷೇಮ ಅತ್ಯವಶ್ಯ, ಅದಕಾಗಿ ಅದರಲ್ಲಿ ತೊಡಗಿದ ಬ್ರಿಟಿಶ ಸಹಾಯಮಾಡುವುದು ನಿಮ್ಮ ಕರ್ತವ್ಯ ಎಂದು ಭಾರತೀ ರನ್ನು ಉಪದೇಶಿಸುವವರಿಗೆ ಇದು ಅತ್ಯಂತ ಸಮರ್ಪ ವಾದ ಉತ್ತರ.

೩. ಬೇರೆ ಬೇರೆ ಜನಾಂಗಗಳ, ಬೇರೆ ಬೇರೆ ಸಂಸ್ಕೃ ಸಂಘರ್ಷಣದಿಂದ ಹೊಸತೊಂದು ಸಂಸ್ಕೃತಿನಿರ್ಮಾ ಯೋಗ್ಯವಾದ ಸ್ಥಾನ ನಮ್ಮ ಹಿಂದುಸ್ತಾನ. ಈ ವರ್ಣನೆಯಲ್ಲಿ ಇಲ್ಲಿಯ ಮುಸಲ್ಮಾನರೂ ಸೇರಿದ್ದ ಅವರು ಸಂಸ್ಕೃತಿಯಿಂದ ತಾವು ಮೊದಲು ಭಾರತೀಯ ಎಂದು ತಿಳಿಯತಕ್ಕದ್ದು; ಇಷ್ಟಾಗಿಯೂ ತಮ್ಮ ಧ ಪರಿಗೆ ಮಹತ್ವದ್ದೆನಿಸಿದರೆ ನಾವು ಯೋಜಿಸುವ ಯಾ ಘಟನೆಯಲ್ಲಾದರೂ ಅವರು ತಾವೇ ನಿರ್ಣಯಿಸಿದ ರಕ್ಷಣಾ ಯೋಜನೆಗಳನ್ನು ಒಪ್ಪಿಕೊಳ್ಳಲು ನಾವು ಯಾವಾಗಲೂ ಸಿದ್ಧರಿದ್ದೇವೆ— ಎಂದು ಮುಸಲ್ಮಾನರೆನಿಸಿಕೊಳ್ಳುವವ ಮುಸ್ಲಿಂ ಲೀಗದಂತಹ ಸಂಸ್ಥೆಗೆ ಬುದ್ಧಿಹೇಳಿದರೆ ಹೃದಯದ ಔದಾರ್ಯ, ಬುದ್ಧಿಯ ಪ್ರಾಮಾಣಿಕ ಮತ್ತು ಉಪಾಯಚಾತುರ್ಯ ಇಡಿಯ ಅಧಿವೇಶನಕ್ಕೆ ಶೋಭೆತರುವಂತಹವು ಎಂದು ಹೇಳಬಹುದು.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾರ್ಯದ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ಸಂಪಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಮೆಚ್ಚತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಹೆಣಿಗೆ–ಕಸೀದೆ ಕಲಿಯಿರಿ !

ಹೆಣ್ಣುಮಕ್ಕಳಲ್ಲಿ ಹೆಣಿಗೆ–ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು !
ಅಚ್ಚುಕಟ್ಟುತನದಿಂದ ಅವರ ಚೆಲುವು–ಚೆದುರು ಇಮ್ಮಡಿಗೊಳ್ಳುವವು !!
ಹೆಣಿಗೆ–ಕಸೀದೆ–ಎಂಬ್ರಾಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ !

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

It is Wise to Advertise

IN

JAYANTI

Because

- ☆ Jayanti is the Leading Kannada Magazine.
- ☆ Jayanti reaches all parts of Karnatak.
- ☆ Jayanti is read in all the towns of Karnatak.
- ☆ Jayanti is the delight of all classes of readers.
- ☆ Jayanti is a Monthly run on Sound and Modern Lines.
- ★ Jayanti stands for High Quality.

For Rates & Particulars

Apply to :—

THE MANAGER, JAYANTI, DHARWAR







ಮಾನಿಷ್ಠರಿಗೆ ಆದ ಅವಮಾನ

(ಸಣ್ಣಕತೆ)

ತನಗಾವುದೂ ಗೊತ್ತಿಲ್ಲವೆಂದು ಜನ ಸುಮ್ಮಗಿರುವುದಿಲ್ಲ: ಸಂಶಯದ ಮೂಲಕವಾಗಿಯೆ ಸತ್ಯವಂತರನ್ನೂ ಸುಳ್ಳುಗಾರರನ್ನಾಗಿಸುವುದು. ರಂಗಣ್ಣನವರ ಸೌತೆಕಾಯಿಯ ವ್ಯವಹಾರದಂತಹ ವಿಪರೀತಸತ್ಯದ ಸಂಗತಿಗಳು ನಮ್ಮ ಸಮಾಜದಲ್ಲಿ ಎಷ್ಟೊಂದು ನಡೆಯುವುದಿಲ್ಲ? ಆದರೆ ಗೂಳಿ ಬಿದ್ದೆಡೆಯಲ್ಲಿ ಆಳಿಗೊಂದು ಕಲ್ಲೊಗೆಯುವ ಕುರುಡುಜನಸಮೂಹ, ಸತ್ಯವನ್ನು ಕಾಣಲು ಮನಸ್ಸನ್ನೆ ಮಾಡುವುದಿಲ್ಲ!

★

ಶ್ರೀ. " ರಾಮಣ್ಣ "

ರಂಗಣ್ಣನವರು ಮಾನಿಷ್ಠರು; ಪ್ರಾಣಕ್ಕಿಂತಲೂ ಮಾನವೆ ಹೆಚ್ಚೆಂದು ಅವರ ನಿಶ್ಚಿತವಾದ ಅಭಿಪ್ರಾಯ.

ರಂಗಣ್ಣ ಎಂದರೆ ಅವರೊಬ್ಬ ಪುಸ್ತಕ ಭಂಡಾರದ ಅಧಿಕಾರರು (Librarian). ಜೀವನಕ್ಕೆ ತೊಂದರೆಯಿಲ್ಲದೆ ನೆಮ್ಮದಿಯಾಗಿದ್ದರು. ಹೆಂಡತಿ-ಮಕ್ಕಳೊಂದಿಗೆ ಮಾನವಾಗಿ ಬದುಕಿಕೊಂಡಿದ್ದರು.

ನೆಮ್ಮದಿಯಾದ ಮನೆಯ ಹೊರಗೆ ಮತ್ತು ನಿಶ್ಶಬ್ದವಾದ ಪುಸ್ತಕ ಭಂಡಾರದ ಹೊರಗೆ ಇರುವ ಪ್ರಪಂಚದ ವ್ಯವಹಾರಗಳು ಇವರ ಮಾನದ ಮೇಲಿನ ಅಭಿಮಾನವನ್ನು ಲೆಕ್ಕಿಸುತ್ತಿರಲಿಲ್ಲ. ರಾಯರ ಆದರ್ಶಗಳಿಗನುಸಾರವಾಗಿ ಅವರಿಗೆ ಅನುಭವಜ್ಞಾನವಿರಲಿಲ್ಲ. ಆದುದರಿಂದಲೆ ರಂಗಣ್ಣನವರ ವ್ಯವಹಾರಗಳಲ್ಲಿ ಮಾನಕ್ಕೆ ಆಘಾತ ತಗಲುವ ಪ್ರಸಂಗಗಳು ಆಗಾಗ ಉಂಟಾಗುತ್ತಿದ್ದುವು. ಅವುಗಳಲ್ಲಿಯ ಒಂದನ್ನು ವಾಚಕರು ಓದಬೇಕೆಂದು ಇಲ್ಲಿ ಕೊಟ್ಟಿರುವೆನು:—

ಒಂದು ದಿನ ರಂಗಣ್ಣನವರು ಮಾರ್ಕೆಟ್ಟಿಗೆ ಹೋಗಿ ಸೌತೇಕಾಯನ್ನು ವ್ಯಾಪಾರಮಾಡಿದರು. ಬೆಲೆಯಲ್ಲಿ ಚೌಕಾಸಿಯನ್ನೇನೂ ಮಾಡಲಿಲ್ಲ. ಬೆಳೆದವರು ತಾವೇ ತಿನ್ನದೆ, ಇತರರು ಉಣ್ಣಲೆಂಬ ತ್ಯಾಗಬುದ್ಧಿಯಿಂದ ಪೇಟೆಗೆ ತಂದು ತಾವಾಗಿ ಕೊಡುತ್ತಿರುವಾಗ, ತುಚ್ಛವಾದ ಬೆಲೆಯ ವಿಚಾರದಲ್ಲಿ ಚೌಕಾಸಿಮಾಡುವುದು ನ್ಯಾಯವಲ್ಲವೆಂದು ರಂಗಣ್ಣನವರ ನಂಬಿಕೆ. ಅಲ್ಲದೆ ತರಕಾರಿ ಮಾರುತ್ತಿದ್ದವಳು ಹೆಂಗುಸು. ಹೆಂಗುಸರೊಂದಿಗೆ ದಾಕ್ಷಿಣ್ಯದಿಂದ ವ್ಯಾಪಾರಮಾಡಬೇಕು..ಎಂಬ ಉದ್ದೇಶದಿಂದ ಅವರು ಎಂಟಾಣೆಯ ನಾಣ್ಯವನ್ನು ಕೊಟ್ಟು ಎರಡು ಸೌತೇಕಾಯಿಗಳನ್ನು ತಮ್ಮ ಕೈಚೀಲದಲ್ಲಿ ಇಟ್ಟುಕೊಂಡರು. ಮಾರುವವಳೂ ಕೈಯನ್ನು ನೀಡಿ ಸಹಾಯಮಾಡಿದಳು.

" ಚಿಲ್ಲರೆ ದುಡ್ಡನ್ನು ಕೊಡುತ್ತೀಯ ಅಮ್ಮಾ ? " ಎಂದು ಕೇಳಿದರು ರಂಗಣ್ಣನವರು.

" ಯಾವ ಚಿಲ್ಲರೆ ಬುದ್ಧೀ ? " ಎಂದಳು ಮಾರುವವಳು.

" ಈಗ ಎಂಟಾಣೆ ಕೊಟ್ಟೆನಲ್ಲಾ "

" ಯಾರಿಗೆ ಕೊಟ್ರಿ ? "

" ನಿನಗೆ ! "

" ಎನ್ರೀ, ಎಷ್ಟು ದಿನದಿಂದ ಕಲಿತಿದ್ದೀರಿ ಈ ಮೋಸಾನ? "

" ಯಾಕಮ್ಮಾ ಹೀಗೆ ಹೇಳುತ್ತೀಯೆ ! ಈಗ ತಾನೇ ಎಂಟಾಣೆ ಕೊಟ್ಟಿಲ್ಲವೆ ! ದುಡ್ಡು ತೆಗೆದಿಟ್ಟು........ "

" ಏನಯ್ಯಾ, ಬೊಗಳುತ್ತೀ ನೀನು ? ಸೌತೇಕಾಯಿಗೆ ದುಡ್ಡನ್ನು ಕೊಡದೆ, ಮೇಲೆ ಎಂಟಾಣೆ ಕೊಟ್ಟೆನೆಂದು ಚಿಲ್ಲರೆ ಬೇಕೆಂದು ಕೇಳುತ್ತೀಯಾ " ಎಂದವಳೆ ಎದ್ದುನಿಂತು ರಂಗಣ್ಣನವರಿಂದ ಕೈಚೀಲವನ್ನು ಕಿತ್ತುಕೊಂಡಳು. ಇವಳ ಕೂಗಾಟವನ್ನು ಕೇಳಿ ಒಂದು ಕ್ಷಣದಲ್ಲಿ ದೊಡ್ಡದೊಂದು ಗುಂಪು ಸೇರಿತು. ರಂಗಣ್ಣನವರಿಗೆ ಒಂದೇ ಬಾರಿಗೆ ಆಶ್ಚರ್ಯ, ಕೋಪ, ಅಲ್ಲದೆ, ಅವಮಾನ. ಬಾಯಿಂದ ಮಾತೇ ಹೊರಡಲೊಲ್ಲದು.

ತರಕಾರಿಯವಳಾದರೋ ಈ ಬುದ್ಧಿಯವರ ವಂಶವನ್ನೇ ಹೀಯಾಳಿಸುತ್ತ ಅರ್ಭಟಿಸುತ್ತಿದ್ದಾಳೆ. ಅಲ್ಲಿ ಗುಂಪುಸೇರಿದ್ದವರು ಕಲಾ ಕಟ್ಟಿ ಮಾತನಾಡುತ್ತಿದ್ದರು:

" ಎಷ್ಟು ಮನೆ ಹಾಳು ಮಾಡಿದ್ದಾನೋ ! "

" ಮೋಸದಿಂದಲೇ ಹೊಟ್ಟೆ ಬೆಳಸಿದ್ದಾನೆ ! "

" ಬಿಟ್ಟೆ ಗಂಟು ಕಂಡರೆ ಬಾಯಿ ಬಿಡುತ್ತಾನೆ "

" ಈ ಭಂಡರಿಗೆ ತರಕಾರಿಯೇಕೆ ! "

" ಮಹಾ ಸತ್ಯವಂತ ! "

" ಇವರಿಗಿಂತ ಕಳ್ಳರು ಲೇಸು ! "

ಇತ್ಯಾದಿ ಮಾತುಗಳನ್ನು ಕೇಳಿ, ಮಾನದಾಶೆಯುಳ್ಳವರಾದ ರಂಗಣ್ಣನವರು ಅಲ್ಲಿ ನಿಲ್ಲಲಾರದೆ ಹೊರಡಲು ಹೆಜ್ಜೆಯಿಟ್ಟರು.

" ಲೋ, ದುಡ್ಡು ಕೊಟ್ಟು ಹೋಗು ! " ಎಂದಳು ತರಕಾರಿಯವಳು.

ತಮ್ಮ ಎಂಟಾಣೆ ಚೀಲ ಇವೆರಡೂ ಆಕೆಗೇ ದಕ್ಕಿದ್ದರೂ ಮತ್ತೂ ಸಾಲದ್ದನ್ನು ಕಂಡು, ತೀರ ತಿರಸ್ಕಾರದ ಭಾವದಿಂದ ಜೇಬಿನಲ್ಲಿದ್ದ ದುಡ್ಡನ್ನೆಲ್ಲಾ ರಂಗಣ್ಣನವರು ಅವಳ ಮೇಲೆ ಬಿಸಾಡಿ ನಡೆದೇಬಿಟ್ಟರು. ತರಕಾರಿಯವಳು "ಅವನ ಕರ್ಮ" ಎಂದಳು. ಗುಂಪಿನಲ್ಲಿದ್ದ ಅನೇಕರು ಘೊಳ್ಳೆಂದು ನ
ಪಾಪ. ಮಾನವಂತನಾದ ಸದ್ಗೃಹಸ್ಥನಿಗೆ ವಿಪರೀತ

"ಯಾವ ಚಿಲ್ಲರೆ ಬುದ್ಧೀ?" ಎಂದಳು ಮಾರುವವಳು.

ಹೊಸ ಕಾನೂನಿನ ಪ್ರಕಾರ ಟ್ರೇಡ್‌ಮಾರ್ಕುಗಳನ್ನು
ರಜಿಸ್ಟರ್ ಮಾಡಿಸುವುದು ಅನಿವಾರ್ಯವಾಗಿದೆ.
ವಿವರಗಳಿಗಾಗಿ ಕೂಡಲೆ ಬರೆಯಿರಿ.
ಸಿ. ಜಿ. ಅಸುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ವಾಯಿತು. ನೆಟ್ಟಗೆ ಮನೆಯ ಕಡೆಗೆ ಹೊರಟರು. ದಾರಿಯಲ್ಲಿ ಶಾಮಣ್ಣನವರು ಇವರನ್ನು ಕಂಡು ಕುಶಲಪ್ರಶ್ನೆ ಮಾಡಿದರು. ಶಾಮಣ್ಣ ರಂಗಣ್ಣನವರಿಗೆ ಆಪ್ತರು, ಆದ್ದರಿಂದ ನಡೆದದ್ದೆಲ್ಲವನ್ನೂ ಶಾಮಣ್ಣನವರಿಗೆ ತಿಳಿಸಿದರು.

ಆಪ್ತರಾದ ಶಾಮಣ್ಣನವರು ನಕ್ಕರು. ರಂಗಣ್ಣನವರಿಗೆ ಹುಣ್ಣಿನ ಮೇಲೆ ಚಿಗುಟಿದಂತಾಯಿತು.

ಮುಂದೆ ಛತ್ರದ ಹತ್ತಿರ ಸುಬ್ಬಣ್ಣನವರು ಸಿಕ್ಕಿದರು; ಅವರು ಸ್ನೇಹಿತರು "ಏಕೆ ಚಿಂತಾಕ್ರಾಂತರಾಗಿದ್ದೀರಿ!" ಎಂದು ರಂಗಣ್ಣನವರನ್ನು ಕೇಳಿದರು. ಇಷ್ಟವಿಲ್ಲದಿದ್ದರೂ ಹೇಳಬೇಕಾಯಿತು.

"ಪೋಲೀಸಿನವರಿಗೆ ತಿಳಿಸದಿದ್ದುದು ನಿಮ್ಮ ತಪ್ಪು" ಎಂದುಬಿಟ್ಟರು ಈ ಸ್ನೇಹಿತರು. ನೊಂದ ಮನಸ್ಸಿಗೆ ಇದರಿಂದ ಶಾಂತಿಯಾಗುತ್ತದೆಯೆ?

ಮನೆಗೆ ಬಂದು ಮಾತಿಲ್ಲದೆ ಕುಳಿತರು. ಹೆಂಡತಿ ಗಂಡನನ್ನು ನೋಡಿದೊಡನೆಯೆ ಏನೋ ವ್ಯತ್ಯಾಸವಾಗಿದೆಯೆಂದು ಊಹಿಸಿದಳು. ಆಗಲೇ ಏನೂ ಕೇಳಲಿಲ್ಲ, ಕಾಫಿಯನ್ನು ತಂದು ಪಕ್ಕದಲ್ಲಿ ನಿಂತಳು.

"ನನಗೆ ಕಾಫಿ ಬೇಡ, ಶಾರದಾ" ಎಂದರು. ಸ್ವಲ್ಪ ಸುಮ್ಮನಿದ್ದು "ಇನ್ನೇನಾದರೂ ಮಾಡಿ ತರುತ್ತೇನೆ" ಎಂದಳು ಆಕೆ.

"ಬೇಡ, ನನಗೆ ಇವತ್ತು ಏನೇನೂ ಬೇಡವಾಗಿದೆ, ಮೈಯಲ್ಲಿ ಭೂಕಂಪವಾಗುತ್ತಿದೆ. ಸಿಡಿಲು ಮಿಂಚುಗಳು ಬಡಿಯುತ್ತಿವೆ. ನನ್ನ ಅವಸ್ಥೆಯನ್ನು ಹೇಳಲಾರೆ ಶಾರದಾ; ಯಾವುದೂ ಬೇಡವಾಗಿದೆ" ಎಂದರು ರಂಗಣ್ಣ.

ಶಾರದೆಯು ಭಯಗೊಂಡಳು. ಗಂಡನ ಮೃದುಸ್ವಭಾವವನ್ನು ಆಕೆ ಅರಿತಿದ್ದಳು. ಆತನ ಷರಟಿನ ಕಾಲರನ್ನು ಮಡಿಸುತ್ತಲೂ, ಬಿಡಿಸುತ್ತಲೂ ಏನೇನೊ ಸಮಾಧಾನದ ಮಾತುಗಳನ್ನು ಹೇಳಿದಳು. ರಂಗಣ್ಣನವರಿಗೆ ಕ್ರಮೇಣ ಸಮಾಧಾನವಾಗಿ ನಡೆದ ಸಂಗತಿಯೆಲ್ಲವನ್ನೂ ತಿಳಿಸಿದರು. ಕೇಳುತ್ತಿದ್ದಂತೆಯೇ ಶಾರದೆಗೆ ಮುಖವು ಕೆಂಪೇರಿತು. ಕಣ್ಣುಗಳಲ್ಲಿ ಒಂದೆರಡು ಕಂಬನಿಗಳು ಕೆಳಕ್ಕಿಳಿದುವು. ಗಂಡನಿಗಾದ ಅಪಮಾನದಿಂದ ಹೊರಗಿನ ಪ್ರಪಂಚದ ಮೇಲೆ ಆಕೆ ಬಹಳ ಕೋಪಗೊಂಡಳು. ಹೊರಗಿನ ಜನರ ಮೇಲೆ ತಿರಸ್ಕಾರಗೊಂಡಳು. ಗಂಡನಿಗೆ ಕಾಫಿಯನ್ನು ಸ್ವಹಸ್ತದಿಂದ ಕುಡಿಸಿ ಸಮಾಧಾನ ಹೇಳಿದಳು.

"ನೀವು ಇನ್ನು ಮೇಲೆ ಹಾಳು ಮಾರ್ಕೆಟ್ಟಿಗೆ ಹೋಗಬೇಡಿ. ಮನೆಯ ಮುಂದೆ ಬರುವ ತರಕಾರಿಯನ್ನು ಇಲ್ಲೇ ತೆಗೆದುಕೊಳ್ಳೋಣ; ಇಲ್ಲಿ ಆದರೆ ಯಾವ ರಂಡೆಯ ಆಟವೂ ನಡೆಯುವುದಿಲ್ಲ. ಅಂತಹವರಿಗೆ ಪೊರಕೇ ಏಟು ಸಿದ್ಧ. ನಿಮ್ಮಂತಹ ಮರ್ಯಾದಸ್ಥರಿಗೆ ಅನ್ಯಾಯಮಾಡಿ ಅವಮಾನಪಡಿಸಿದ ಆ ರಂ..ಯ ನಾಲಗೆ ಸೇದುವುದಿಲ್ಲವೆ? ನೋಡೋಣ, ಆ ಸ್ನೇಹಿತರು ಎಂತಹವರು? ಅವರಿಗೇ ಹೀಗಾಗಿದ್ದರೆ ಏನೆನ್ನುತ್ತಿದ್ದರು? ಇದು ನಿಮಗೆ ಆದ ಅವಮಾನ ಖಂಡಿತ ಅಲ್ಲ; ಹೊರಗಿನ ಜನಗಳಿಗೂ ವ್ಯವಹಾರಕ್ಕೂ ಆದ ಅವಮಾನ! ನೀವು ಕೊರಗಬೇಡಿ. ನಾನು ನೋಡಿ ಸಹಿಸಲಾರೆ. ನನಗೋಸ್ಕರವಾದರೂ ಇದನ್ನು ಮರೆಯಿರಿ. ಎಲ್ಲಿ ಮರೆತೆನೆಂದು ಹೇಳಿ......"

ಮುಂತಾಗಿ ಹೆಂಡತಿ ಗಂಡನನ್ನು ಸಂತಯಿಸಿದಳು. ರಂಗಣ್ಣನವರಿಗೂ ಹೆಂಡತಿಯ ಮಾತು ಸಮಾಧಾನದ ಸುಧಾಪಾನವಾಗಿ ಪರಿಣಮಿಸಿತು. ಹೆಂಡತಿಯೊಂದಿಗೆ ಮಾತನಾಡತೊಡಗಿದರು:

"ಶಾರದಾ, ನಿನ್ನಂತೆ ನನಗೆ ಬೇರೆ ಹಿತಚಿಂತಕರಿಲ್ಲ. ನಿನ್ನ ಅಂತಃಕರಣದ ಪ್ರೇಮದಿಂದ ನನ್ನ ಅವಮಾನವೆಷ್ಟೆಂಬ ಅರಿವನ್ನು ಕಂಡಿದ್ದೀಯಾ! ಮಾನಕ್ಕಾಗಿ ನನಗೆಷ್ಟು ಆತಂಕವಿದೆಯೆಂಬ ಅಂಶವನ್ನು ಸರಿಯಾಗಿ ಅರಿತವಳು ನೀನೇ, ನೀನೊಬ್ಬಳೇ!"

"ಇಚ್ಛೆಯನರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ
ಸರ್ವಜ್ಞ!"



ಡೋಂಗರೆ ಇವರ ಬಾಲಾಮೃತವು
ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನಾಝೀ ಜೀವನ

ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ., ಬನಾರಸ
ಹಿಂದೂ ಯುನಿವರ್ಸಿಟಿ

★ ★

ಜಗತ್ತಿನ ಮೂಲೆಮೂಲೆಯಲ್ಲಿಯೂ ಮಾನವಬಂಧುತ್ವದ ಕಲ್ಪನೆ ಹಬ್ಬಿ ಹರಡುವುದು ಕನಸಿನ ಮಾತು. ಅದಿಲ್ಲದಿರುವಾಗ ಬೇರೆ ಬೇರೆಯ ರಾಷ್ಟ್ರಗಳೂ ಗುಂಪುಗಳೂ ತಂತಮ್ಮದೊಂದು ಆದರ್ಶವನ್ನಿಟ್ಟುಕೊಂಡು, ಅದರ ವಿಷಯದಲ್ಲಿ ಅತಿಶಯವಾದ ಅಭಿಮಾನವನ್ನು ತಾಳಿಕೊಂಡಿರಬೇಕಾಗುವುದು. ಈ ಬಗೆಯ ಅಭಿಮಾನವಿರದ ರಾಷ್ಟ್ರವೂ ಗುಂಪೂ ಪರಾಧೀನತೆಯಲ್ಲಿ ಕೊಳೆಯುವುದು ಕಟ್ಟಿಟ್ಟಮಾತು. ಹಿಟ್ಲರನ ನಾಝೀತತ್ತ್ವವು ಮೇಲಿನ ಅನುಭವವನ್ನು ಅನುಸರಿಸಿ ಹೊರಟುದಾದರೂ ಅದರ ದುಡುಕುತನವು ಪಾಶವಭಾವವನ್ನು ಜ್ಞಾಪಕಕ್ಕೆ ತಂದುಕೊಡುತ್ತಲಿದೆ.

(೨)

— ಅತಿಕ್ರಮಣದ ಫಲಿತಾಂಶ —

ಇಲ್ಲಿಯ ವರೆಗೆ ಜರ್ಮನಿಯ ನಾಝೀಪೂರ್ವ ಜನಜೀವನವನ್ನು ಹೇಳಿದುದಾಯಿತು. ಗತಮಹಾಯುದ್ಧಾಂತ್ಯದಲ್ಲಿ ಫ್ರೆಂಚರ ಅಮಾನುಷವಾದ ಸೇಡಿನ ಜ್ವಾಲೆಯಲ್ಲಿ ಬೆಂದು-ಬೆಂಡಾಗಿ, ಉಳಿದ ಅಲ್ಪ-ಸ್ವಲ್ಪ ವ್ಯಕ್ತಿತ್ತ್ವವನ್ನು ಮುಚ್ಚಿಟ್ಟುಕೊಂಡು ಜರ್ಮನರು 'ಹೂವಾರಿದ ಅಂಗಡಿಯಲ್ಲಿ ಹುಲ್ಲುಮಾರುವವರಾಗಿ' ಉಳಿದುಕೊಂಡರು. ಸನ್ ೧೯೩೦ ರಿಂದ ೧೯೩೩ ರ ವರೆಗೆ ರ್ಹ್ಯಾಯಿನ್ ಪ್ರದೇಶದ ಆಕ್ರಮಣಾಂತ ಪರಿಣಾಮವನ್ನು ಅನುಭವಿಸುತ್ತ, 'ಪಾಶ್ಚಾತ್ಯರು ಬಿಳಿಯರು' ಎಂಬ ನಾಮಾಂಕಿತವನ್ನು, ರಕ್ತವಿಲ್ಲದ ತಮ್ಮ ಬಾಳಿನಲ್ಲಿ ಕಾಣಿಸಿಕೊಂಡರು. ಈ ಲೇಖನದಲ್ಲಿ ರ್ಹ್ಯಾಯಿನ್ ಆಕ್ರಮಣದ ಫಲಿತಾಂಶವನ್ನೂ, ತದ್ದ್ವಾರಾ ಮುಂದೆ ಬಂದ ನಾಝೀಜೀವನ ವೃಕ್ಷದ ಬೇರುಗಳ ವರ್ಣನೆಯನ್ನೂ ಚಿತ್ರಿಸಲು ಯತ್ನಿಸಿದ್ದೇನೆ. ಸಾಮಾನ್ಯವಾಗಿ ಇಂದಿನ ಜರ್ಮನರ ವಿಷಯವಾಗಿ ಅನೇಕ ವಿಮರ್ಶಕರಲ್ಲಿ, ಆ ಜನಾಂಗದ ವಿಷಯವಾಗಿ ಒಂದು ಅವರ್ಣನೀಯ ದುರ್ನಿರ್ಣಯವು ಕಂಡುಬರುತ್ತಲಿದೆ. ಇದು ಕೇವಲ ಅಧುನಿಕ ಇತಿಹಾಸ ಕರ್ತರ ಅಜ್ಞಾನದ ಪರಿಣಾಮವಲ್ಲ; ಅದಕ್ಕೆ ಇನ್ನೊಂದು ಬಲವಾದ ಕಾರಣವಿದೆ. ಅದೇನೆಂದರೆ, ಯಾವುದೇ ಲೇಖಕನು ಇಂದು ಜರ್ಮನರ ವಿಷಯವಾಗಿ ಬರೆಯುವಾಗ ವಿಶೇಷತಃ ಅವನು ಜರ್ಮನಿಯ ಪರರಾಷ್ಟ್ರಾನುಭೂತ ರಾಜಕಾರಣವನ್ನಷ್ಟೇ ಅವಲೋಕಿಸುತ್ತಾನೆ. ಈ ತರದ ಅವಲೋಕನದಲ್ಲಿ ನಿಜವಾಗಿಯೂ ಜರ್ಮನರಿಂದ ಅಧುನಿಕ ಜನಶಾಂತಿಗೆ ಭಂಗ ಬಂದ ಉದಾಹರಣೆಗಳಿಗೆ ಕೊರತೆಯೇನೂ ಇಲ್ಲ. ಅದು ಕಾರಣವಾಗಿ ಜರ್ಮನರೆಂದರೆ ಜನತಾಘಾತಕರು ಎಂಬುದೊಂದು ಪಕ್ಷಪಾತ ನಿರ್ಣಯವು ಸರ್ವತ್ರ ಪ್ರಚಾರದಲ್ಲಿ ಬಂದುಬಿಟ್ಟಿದೆ. ಇದು ಸರಿಯಾದ ಅವಲೋಕನವಲ್ಲ, ಇದರಲ್ಲಿ ಸತ್ಯವಿಲ್ಲ. ನಾವು ಇಂದಿನ ನಾಝೀಜೀವನದ ಮೂಲತತ್ತ್ವಗಳನ್ನೂ, ಆ ತತ್ತ್ವಗಳ ದೈನಂದಿನದ ತರ್ಜುಮೆಗಳನ್ನೂ ತಿಳಿಯಬೇಕಾದರೆ ಪ್ರಥಮತಃ, ವಿಶೇಷತಃ, ಆ ಜನಾಂಗದ ಇಂದಿನ ಅಂತರ್ಜೀವನದಲ್ಲಿ ಹಣಿಯಿಕ್ಕಿ ನೋಡುವುದು ಅವಶ್ಯವಿದೆ. ಆ ಮಹಾರಾಷ್ಟ್ರವಾದ ಜರ್ಮನಿಯಲ್ಲಿ ಯಾವ ತರದ ವ್ಯಕ್ತಿತ್ತ್ವವಿದೆ, ಅದರ ದೈನಿಕ ಕಾರ್ಯಾವತಾರ ಯಾವ ರೀತಿಯಲ್ಲಿ ಕಂಡುಬರುತ್ತದೆ. . ಎಂಬುದನ್ನು ಕಾಣಬೇಕು. ಏಕೆಂದರೆ ಎಂತಹ ಅಮಾನುಷ ಕೃತಿ ಮಾಡಿದ ಮಾನವರಲ್ಲಿಯಾದರೂ ಜನಸಾಮಾನ್ಯವಾದ ಒಂದೆ ಬಗೆಯ ಹೃದಯ, ಒಂದೆ ಮಾದರಿಯ ಅಂತಃಕರಣಗಳ ತಾಕಲಾಟ, ಅದರಿಂದ ಜನಿಸಿದ ಜೀವನರಂಗದ ಚಿತ್ರಚ್ಛಾಯೆ ಕಂಡುಬರುತ್ತವೆ. ಅಂತೆಯೇ ಆ ಅಮಾನುಷ ವ್ಯಕ್ತಿಯಾದ 'ಹಿಟ್ಲರ'ನ ಪರರಾಷ್ಟ್ರರಾಜನೀತಿ-ನಿರ್ಬಂಧಗಳ ಇಂದ್ರಜಾಲವನ್ನು ನಾವು ಸದ್ಯ ತೊರೆದು, ಆ ಜನಾಂಗದ ಅಂತರಾತ್ಮಿಕ ಬಾಳನ್ನೂ, ಅದರ ಮಾನಸಿಕ ಜೀವನವನ್ನೂ ಅವಲೋಕಿಸೋಣ.

ಸ್ವಭಾವದಿಂದ ಜರ್ಮನರು ವಿನೋದಿಗಳಲ್ಲ; ಹಸನ್ಮುಖಿಗಳಲ್ಲ; ಆದರೂ ಒಬ್ಬ ಜರ್ಮನಿಯ ವಿದೂಷಕನು 'ಹಿಟ್ಲರ'ನು ಸರ್ವಾಧಿಕಾರಿಯಾದಾಗ ನಡೆದ ಚುನಾವಣೆಯಲ್ಲಿ ಕಂಡುಬಂದ ಒಂದು ಸಂಗತಿಯ ಅನುಭವವನ್ನು ಹೀಗೆ ಹೇಳುತ್ತಾನೆ: "ನಾನು ಹಿಟ್ಲರನ ಚುನಾವಣೆಯಾದಾಗ ನೂರಕ್ಕೇಳರಂತೆ ಅವನಿಗೆ ಮತಗಳು ದೊರೆತುವೆಂದು ಕೇಳಿದೆ; ಆದರೆ ನನಗೆ ಯಾವಾಗಲೂ ಆ ಇನ್ನುಳಿದ ಇಬ್ಬರೆ ಕನಸು-ಮನಸಿನಲ್ಲಿ ಭೆಟ್ಟಿಯಾಗುತ್ತಿದ್ದಾರೆ!"

ಇದು ನಿಜವಿರಲಿಕ್ಕೆ ಸಾಕು. ಹಿಟ್ಲರನ ಎಲ್ಲ ಚುನಾವಣೆಗಳೂ ಪೂರ್ವರಚಿತ ನಾಟಕದ ನಟನೆಗಳು. ಆದರೆ ಇದರಿಂದ ನಾವು, ಜರ್ಮನರೆಲ್ಲರೂ ಮೇಲೆ ಹೇಳಿದ ವಿದೂಷಕನಂತೆ ಅಭಿಪ್ರಾಯವುಳ್ಳವರು ಎಂದು ತಿಳಿಯಕೂಡದು. ರಾಷ್ಟ್ರದ ಪ್ರಗತಿಗಾಗಿ ಜರ್ಮನರು ಎಂತಹ ಕಷ್ಟನಷ್ಟಗಳನ್ನಾದರೂ ಲೆಕ್ಕಿಸರು. ಅದು ರ್ಹ್ಯಾಯಿನ್ ಅತಿಕ್ರಮಣದ ಕಾಲಕ್ಕೇ ವ್ಯಕ್ತವಾಗಿ ಬಂದಿದೆ. ಅದು ಮುಗಿದನಂತರ ಜರ್ಮನರಿಗೆ ಇಹಜೀವನದಲ್ಲಿ ಹೆಚ್ಚು ಅಸಹ್ಯವಾದ ನರಕ ಯಾವುದೂ ಉಳಿಯಲಿಲ್ಲ. 'ಇಳಿಯೆ ಮುಳುಗಿದ ಮೇಲೆ ಚಳಿಯೇನು ಮಳೆಯೇನು?' ಎಂಬಂತೆ ಜರ್ಮನರಿಗೆ ಆ ನರಕಯಾತನೆಯಿಂದ ಬಿಡುಗಡೆಯಾದದ್ದೇ ಒಂದು ಮಹತ್ತರವಾದ ಸ್ವರ್ಗಪ್ರಾಪ್ತಿಯಾದಂತಾಯಿತು. ೧೯೩೦ ರಲ್ಲಿ ಫ್ರೆಂಚರ ಸೈನ್ಯವು ಆಕ್ರಮಿತ ಸ್ಥಳವನ್ನು ಬಿಟ್ಟಂದಿನಿಂದ, ಹಿಟ್ಲರನಿಗೆ ತನ್ನ ಆಡಳಿತದ ಮಹತ್ತ್ವವನ್ನು ವಿಂಗಡಿಸಿ ವರ್ಣಿಸಲು ಕರೆಯೇ ಇರಲಿಲ್ಲವೆಂದೆನ್ನಬಹುದು. ವರ್ಸಾಯಿಯದೊಪ್ಪಂದವು ಜರ್ಮನಿಯನ್ನು ಜೇಡನ ಬಲೆಯಲ್ಲಿ ಸಿಕ್ಕ ಮಕ್ಷಿಕದಂತೆ ಸುತ್ತಿಬಿಟ್ಟಿತ್ತು. ರ್ಹ್ಯಾಯಿನಾತಿಕ್ರಮಣವು ಮುಂದೆ ಬಹಳ ಗಂಡಾಂತರಗಳ ಮೊದಲಿನ ಸೂಚನೆ ಮಾತ್ರವಾಗಿತ್ತು. ಇದು ಹಿಟ್ಲರನಿಗೆ ತಿಳಿಯಲಿಕ್ಕೆ ಅವಕಾಶವೇನೂ ಹಿಡಿಯಲಿಲ್ಲ. ಮಹಾಯುದ್ಧ ಮುಗಿದಂದಿನಿಂದ, ಜರ್ಮನಿಯಲ್ಲಿ ರಚಿತವಾದ ಪ್ರಜಾಸತ್ತಾತ್ಮಕ ಸರಕಾರಕ್ಕೂ ಹಿಟ್ಲರನು ಸರಿಯಾಗಿಯೆ ಬೆನ್ನುಹತ್ತಿದ್ದ. ವರ್ಸಾಯಿಯ ಸಮಾನ ಒಪ್ಪಂದಕ್ಕೆ ಒಪ್ಪಿಗೆಯಿತ್ತ ಸರಕಾರವು ಜರ್ಮನ್ ಜನರ ಮರಣಶಿಕ್ಷೆಗೂ ಸಮ್ಮತಿಕೊಡುವ ಸರಕಾರವೆಂದು ಅವನ ಮನಸ್ಸಿನಲ್ಲಿ ಮೂಡಿತ್ತು. ಈ ಕಾರಣದ್ವಯದಿಂದಲೆ ಹಿಟ್ಲರನು ಮುಖ್ಯವಾಗಿ ಆ ಒಪ್ಪಂದದ ಗೋರಿಯನ್ನು ಕಟ್ಟುವಂತೆ ತನ್ನ ಅನುಯಾಯಿಗಳಿಗೆ ಆಜ್ಞಾಪಿಸಿದನು. ಆ ಒಪ್ಪಂದದಲ್ಲಿ ಎಲ್ಲಕ್ಕೂ ಅಸಹ್ಯವಾದ ನಿರ್ಬಂಧವೆಂದರೆ ಜರ್ಮನರನ್ನು ನಿರಾಯುಧರನ್ನಾಗಿ ಮಾಡಿದ ನಿಯಮ. ಇದಕ್ಕೆ ಮೂಲ ಮತ್ತು ಮುಖ್ಯಕಾರಣ ಫ್ರೆಂಚರು. ಅವರಿಗೆ ಇನ್ನೂ ೧೮೭೦ ರ ಬಿಸ್ಮಾರ್ಕನ ಬಿಸಿಯು ಮರೆತಿರಲಿಲ್ಲ. ಹುಲಿಯೆಂದೆನಿಸಿಕೊಂಡ ಫ್ರೆಂಚ್ ಕ್ಲೆಮೆನ್‌ಕೋನು ಈ ನಿಃಶಸ್ತ್ರವಿಷಯದಲ್ಲಿ ಎಳ್ಳಷ್ಟೂ ಹಿಂದೆಗೆಯದವನಾಗಿದ್ದನು. 'ಇಂದು ನೋಕ ಜರ್ಮನಿಯು ಮುಂದೆ ಎಂದಾದರೂ ಈ ಸೇಡನ್ನು ತೀರಿಸಿಯೆ ತೀರಿಸುವುದು'—ಎಂಬ ಫ್ರೆಂಚ್ ಜನರ ಮನೋಭೀತಿಯು ಆ ನಿರಾಯುಧ ನಿರ್ಬಂಧಕ್ಕೆ ಮೂಲವಾಗಿತ್ತು. ಫ್ರೆಂಚ್ ಯುದ್ಧಸಾಹಿತ್ಯವೇನೋ ಬಲವಾಗಿಯೇ ಇತ್ತು. ಆದರೆ ಫ್ರೆಂಚರಿಗೆ ಜನಸಹಾಯವಿರಲಿಲ್ಲ. ಅಂತೆಯೆ ಅವರು ಬ್ರಿಟಿಷರಿಂದಲೋ, ರಶಿಯನರಿಂದಲೋ ಆ ಜನಸಹಾಯವನ್ನು ಬಲವಾಗಿ ಬಯಸಿದುದು. ಈ ತರದ ಫ್ರೆಂಚರ ತಂತ್ರಕ್ಕೆ ಹಿಟ್ಲರನು ಕೊಟ್ಟ ಪ್ರತ್ಯುತ್ತರವೇ ನಾಝೀಜೀವನದ ಜೀವಾಳವೆನ್ನಬಹುದು. ಏಕೆಂದರೆ ಮುಂದೆ ಬರುವ ಗಂಡಾಂತರಗಳನ್ನು ಎದುರಿಸಲಿಕ್ಕೆ ಜರ್ಮನಿಯು ಸದಾ ಯುದ್ಧಸನ್ನದ್ಧವಾಗಿರಬೇಕಾಗಿತ್ತು. ಸರ್ವಾಧಿಕಾರಿಯಾದಾಗ ಹಿಟ್ಲರನು ಜರ್ಮನಿಯ ಸೈನ್ಯದ ಅಧಿಪತಿಯಾಗಿರಲಿಲ್ಲ. ಆ ಸೈನ್ಯದಲ್ಲಿ ನುರಿತವರು ನಾಝೀ ಪೂರ್ವಸರಕಾರವನ್ನೆ ಆದರ್ಶವನ್ನಾಗಿ ಉಳ್ಳವರು; ವಯೋವೃದ್ಧರು; ಜ್ಞಾನವೃದ್ಧರು;. ಅವರಿಗೆ ಹಿಂಡನ್‌ಬರ್ಗನ ಆಧಿಪತ್ಯದಲ್ಲಿ ಶ್ರದ್ಧೆಯಿತ್ತಲ್ಲದೇ ಹಿಟ್ಲರನಲ್ಲಿದ್ದಿಲ್ಲ. ಅಂತೆಯೇ ಹಿಟ್ಲರನು ತನ್ನ ಆಡಳಿತದ ವರ್ಚಸ್ಸನ್ನು ಸ್ಥಿರಪಡಿಸಲಿಕ್ಕೆ ಜರ್ಮನಿಯ ತರುಣರಲ್ಲಿ ಮಾತ್ರ ಆಶೆಯುಳ್ಳವನಾಗಿದ್ದನು. ಅಲ್ಲದೆ ಹಿಟ್ಲರನ ಆದರ್ಶದರ್ಪಣದಲ್ಲಿ ಹಳೆಯ ಸರಕಾರದವರು ನೋಡಿಕೊಂಡಾಗ ಅವರಿಗೆ ಕಾಣಿಸಿದ ಪ್ರತಿಬಿಂಬವು ಆಶಾಜನಕವಿರಲಿಲ್ಲ. ರಾಷ್ಟ್ರೀಯ ಸಮಾಜಸತ್ತಾವಾದದ ತತ್ತ್ವವು ಕೇವಲ ತರುಣರಲ್ಲಿ ಮಾತ್ರ ಪಸರಿಸಲಿಕ್ಕೆ ಶಕ್ಯವಿತ್ತು. ಅಂತೆಯೇ ಭಾವೀಜರ್ಮನಿಯ ಜೀವನವು ಈ ತರುಣರಿಂದಲೇ ಸಾಂಗವಾಗಬೇಕಾಗಿತ್ತು. 'ಮಾನವನ ಭಾವೀಜೀವನ' (The Fate of Homo Sapiens) ಎಂಬ ಪುಸ್ತಕದಲ್ಲಿ ಎಚ್. ಜಿ. ವೆಲ್ಸ್ ಎಂಬವರು ಜರ್ಮನಿಯ ಇಂದಿನ ಜೀವನದ ಸ್ಥಿತಿಗೆ ಮೂಲಕಾರಣವನ್ನು ಹೀಗೆ ಹೇಳಿದ್ದಾರೆ: "ಮಹಾಯುದ್ಧಕ್ಕೆ ಕಳಿಸಲ್ಪಟ್ಟ ಎಲ್ಲ ಯುರೋಪದ ತರುಣಸೈನಿಕರ ಮುಂದೆ ಆಯಾ ದೇಶಗಳ ಹಿರಿಯರು ತಮ್ಮ ರಾಷ್ಟ್ರಕ್ಕೆ ಬರಲಿರುವ ಯಶಸ್ಸಿನ—ಒಂದು ಪರಿಣಾಮಕಾರಕ—ಚಿತ್ರವನ್ನು ತೀಡಿ ಇಟ್ಟಿದ್ದರು. ಆದರೆ ಯುದ್ಧಾಂತ್ಯದಲ್ಲಿ ಒದಗಿದ ನಿಜಚಿತ್ರವು ಅತಿ ಅಸಹ್ಯವಾಗಿತ್ತು." ಎಲ್ಲರಿಗಿಂತಲೂ ಜರ್ಮನಿಯ ತರುಣರಿಗೇ ಹೆಚ್ಚಿಗೆ ಹೇಯವಾದ ಚಿತ್ರವು ಕಂಡುಬಂತು. ಏಕೆಂದರೆ ಇವರಿಗೆ ಯುದ್ಧದಲ್ಲಿ ಪರಾಜಯವಾಗಿ ಮರಳಿಬಂದಾಗ, ಯಾವ ಕಾರ್ಯ ಮಾಡಬೇಕೆಂಬುದೇ ತೋರಲಿಲ್ಲ. ಇಂತಹ ಮಾನಸಿಕ ವೃತ್ತಿಯು ಅತಿ ಭೀಕರವಾದದ್ದು. ಜರ್ಮನ್ ತರುಣರಿಗೆ ಯಾವ ಜೀವನವೃತ್ತಿಯೂ ಇರಲಿಲ್ಲ; ಇದ್ದ ಅಲ್ಪ ಪಸಹಾತುಗಳನ್ನು ಗೆದ್ದವರು ಹಂಚಿಕೊಂಡು ಬಿಟ್ಟಿದ್ದರು; ಪರದೇಶಕ್ಕೆ ಹೋಗಲಿಕ್ಕೆ ಸವಲತ್ತಿರಲಿಲ್ಲ; ಎಂದಮೇಲೆ ಮಾಡುವುದೇನು! ನಿರುದ್ಯೋಗಿಗಳ ಜೀವನವೆಂದರೆ ಅದೊಂದು ಭೂತಜೀಷ್ಟಿತ ಬಾಳೆಂದು ಹೇಳುವುದುಂಟು. ಅದರ ಸತ್ಯವನ್ನು ಕಾಣಬೇಕಾದವರು ಜರ್ಮನಿಯ ಅಂದಿನ ಜೀವನದಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾಗಿತ್ತು. ಏರಿಕೆಯ ರಕ್ತದ ತರುಣರು ಕೆಲಸವಿಲ್ಲದೆ ಹುಟ್ಟಿಲ್ಲದ ಜೇನುಗಳಂತೆ ಎಲ್ಲ ಕಡೆಯಲ್ಲಿಯೂ ವ್ಯಾಪಿಸಿದರು. ಜೇನುತುಪ್ಪವನ್ನು ಕರುವ ಈ ಮಾನವಕ್ರಿಮಿಗಳು ಆಗ ವಿಷಯುಕ್ತ ವಾತಾವರಣವನ್ನು ಸೃಷ್ಟಿಸಿದುವು. ಯಾವ ರಾಷ್ಟ್ರಕ್ಕಾದರೂ ಪ್ರಗತಿ ಬೇಕಾಗಿದ್ದರೆ ಆ ರಾಷ್ಟ್ರದ ತರುಣರಿಂದ ಅದು ಲಭಿಸಲು ಶಕ್ಯವಿದೆ. ಇಂತಹ ಲಕ್ಷಾಂತರ ಜರ್ಮನ್ ಯುವಕರು ಹಿಟ್ಲರನ ಆಡಳಿತದ ಹೋಮಕ್ಕೆ ಸೌದೆಯಾಗಿ ಸಿಕ್ಕಿದರು. ಅವರಿಂದಲೇ ಹಿಟ್ಲರನು ತನ್ನ ವ್ಯಕ್ತಿತ್ವವನ್ನೂ, ಜರ್ಮನ್ ಜನಾಂಗದ ವೈಶಿಷ್ಟ್ಯವನ್ನೂ ವ್ಯಕ್ತ ಮಾಡಲು ಸಮರ್ಥನಾದನು.

ನಮಗೆ ಆಗದವರು ಏನು ಸತ್ಕಾರ್ಯಮಾಡಿದರೂ ಅದು ಹೀನವಾದದ್ದೇ ಎಂಬುದೊಂದು ತಪ್ಪುತಿಳುವಳಿಕೆಯು ಮಾನವಸ್ವಾಭಾವಿಕ ಗುಣವಾಗಿ (ಇಲ್ಲವೆ ದುರ್ಗುಣವಾಗಿ) ನಮ್ಮಲ್ಲಿ ಕಂಡುಬಂದಿದೆ. ಈ ರೀತಿಯಿಂದಲೆ ನಾಝೀಜೀವನದ ಪ್ರತಿಯೊಂದು ಕಾರ್ಯವನ್ನೂ ಕುಹಕದೃಷ್ಟಿಯಿಂದ ನೋಡುವುದು

ಫೋಟೋ ಎನ್‌ಲಾರ್ಜ್‌ಮೆಂಟ್ಸ್
ಸುಂದರವಾಗಿಯೂ ಮೆಚ್ಚುಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು !
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಆಳತೆಯದಿರ
ಬೇಕೆಂಬುದನ್ನು ಕೂಡಲೆ ತಿಳಿಸಿರಿ !
ಬಣ್ಣಬಣ್ಣದ ಏನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು !
ಬೆಲೆ ಸುಲಭ ! ★ ತೃಪ್ತಿಕರವಾದ ಕೆಲಸ !!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು !
ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಸಾಹಜಿಕವಾಗಿದೆ. ಇದು ಅಕ್ಷಮ್ಯ ದುರಾವಲೋಕನೆ. ಏಕೆಂದರೆ ಇಂದಿನ ನಾಝೀಪಂಥದ ಕೆಲವೊಂದು ಕಾರ್ಯಾದರ್ಶಗಳು ನಿಷ್ಠುರ ವಾಗಿಯೂ ನಾವೇ ನೀತಿಯಲ್ಲಿ ಮೇಲ್ಪಟ್ಟಿಯವರೆಂದು ಸ್ವನಾಮ ಘೋಷಮಾಡುವವರಿಗೆ ಪಾಠ ಕಲಿಸುವಂತಿವೆ. ಇದಕ್ಕೆ ಹಿಟ್ಲರನು ಹೂಡಿದ ಯುವಕಚಳವಳಿಯನ್ನು ಉದಾಹರಣೆಯೆಂದು ಹೇಳ ಬಹುದು. ಇಂದಿನ ಪ್ರತಿಯೊರ್ವ ಜರ್ಮನ್ ತರುಣನಲ್ಲಿ ಒಂದು ಬಗೆಯ ಅದ್ವಿತೀಯ ಐಕ್ಯಾದರ್ಶವು ಕಂಡುಬರುತ್ತಲಿದೆ. ಅವರಲ್ಲಿ ಜಾತಿ-ಕುಲ-ಸಮಾಜಪಜ್ಜಿ ಎಂಬ ಭೇದವಿಲ್ಲ. ಎಲ್ಲರಲ್ಲಿಯೂ ಒಂದೇ ಒಂದು ಬಯಕೆ; ಅದೇನೆಂದರೆ, ತುಳಿದುಳಿದ ಜರ್ಮನಿಯು ತಲೆಯೆತ್ತಿ ಜೀವಿಸಬೇಕೆಂಬ ಆಶೆ; ಅದೇ ಅವರ ಜೀವನದ ಬಲವಾದ ಬಯಕೆ. ಗತಯುದ್ಧದಲ್ಲಿ ಪರಿಣಮಿಸಿದ ಸೋಲೂ, ರ್‍ಹಾಯಿನಾತಿ. ಕ್ರಮಣದಿಂದ ಬಂದ ಅಪಜಯವೂ, ಜರ್ಮನ್ ತರುಣರಲ್ಲಿ ನಿರಾಶಾವಾದ ಹುಟ್ಟಿಸಿಲ್ಲ. ಹಿಟ್ಲರನು ಬರುವವರೆಗೆ ಅವರಿಗೆ ಕುರುಬನಿಲ್ಲದ ಕುರಿಗಳ ಅನುಭವ ಬಂದಿತ್ತು. ಗಗನದಲ್ಲಿ ಅತ್ತಿತ್ತ ಚೆದರಿ ಚಂಚಲವಾದ ಮಿಂಚಿನ ಶಕ್ತಿಯಂತೆ ಈ ತರುಣರ ಜೀವನ. ಶಕ್ತಿಯು ನಿರುದ್ಯೋಗವಾಯುವಿನಲ್ಲಿ ಬೆರತು ಮಾಯವಾಗಿತ್ತು. ಆ ಚೆದರಿದ ಚಾಂಚಲ್ಯವನ್ನು ಕೇಂದ್ರೀಕರಿಸಿ ಅದಕ್ಕೆ ಒಂದು ವಿಶಿಷ್ಟ ಕಾಲುವೆಯನ್ನೊದಗಿಸಿಕೊಟ್ಟು ಪ್ರವಹಿಸಲು ಹಚ್ಚಿದವನು ಹಿಟ್ಲರನು. ಆ ಪ್ರವಾಹವು ಪ್ರಚಂಡವಾದದ್ದು; ಅದರೆದುರಿನಲ್ಲಿ ಯಾವ ಶಕ್ತಿಗೂ ತಡೆಗಟ್ಟಿ ನಿಲ್ಲಲಿಕ್ಕೆ ಸಾಧ್ಯವಿಲ್ಲ, ಅಲ್ಲದೆ ಅದರ ವೈಶಿಷ್ಟ್ಯವೆಂದರೆ ಅದು ಕೇವಲ ಧನ-ಕನಕಾಕರ್ಷಣದಿಂದ ಜನಿತ ವಾದ ಶಕ್ತಿಯಲ್ಲ. ಒಂದುಬಗೆಯ ಆಧ್ಯಾತ್ಮಿಕ ಗುಣ; ಒಂದು ವಿಶಿಷ್ಟ ಆಂತರಿಕ ಜೀವನದ ಸೆಳವು. ಈ ವಿಷಯವನ್ನು, ಜರ್ಮನರು ತಮ್ಮ ವಸಹಾತುಗಳನ್ನು ಮರಳಿ ತೆಗೆದುಕೊಳ್ಳಲಿಕ್ಕೆ ತೋರಿಸಿದ ಕಾರಣಗಳ ಮೂಲಕ ಉದಾಹರಿಸಬಹುದು. ಅವರಿಗೆ ವಸಹಾತು ಗಳು ಬೇಕಾದದ್ದು ಕೇವಲ ತಮ್ಮ ಬೆಳೆಯುತ್ತಿರುವ ಜನಸಂಖ್ಯೆಯ ಆಹಾರ-ವಿಹಾರಕ್ಕಲ್ಲ. (ಈ ಕಾರಣವೂ ಆ ಬೇಡಿಕೆಯಲ್ಲಿ ಒಂದು ಅತ್ಯಲ್ಪ ಪ್ರಮಾಣವಾಗಿರಲಿಕ್ಕೆ ಸಾಕು.) ಆದರೆ ಅದರ ನಿಜವಾದ ಕಾರಣವನ್ನು ಮಿಸ್. ಬಾರ್ಬರಾ ವಾರ್ಡ್ ಎಂಬವಳು ತನ್ನ "ಆಂತರ ರಾಷ್ಟ್ರೀಯ ವಿಭಜನೆ" ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾಳೆ: "ಜರ್ಮನರಿಗೆ ಸದ್ಯ ಬೇಕಾದ ವಸಹಾತುಗಳಿಂದ ಅವರ ಜನಸಂಖ್ಯೆಯ ಸಮಸ್ಯೆ ಬಗೆಹರಿಯುವಂತಿಲ್ಲ, ಆದರೂ ಅವರು ಅವುಗಳನ್ನು ಬಯಸುವುದು ಕೇವಲ ಪ್ರಭುತ್ವದ ದೃಷ್ಟಿ ಯಿಂದ" ಜರ್ಮನಿಯ Labour front ದ ಮುಖ್ಯಾಧಿಕಾರಿ ಡಾಕ್ಟರ್ ಲೇ ಎಂಬವನು ಎನ್ನುವುದೂ ಇದೇ: "ಬ್ರಿಟಿಶರು ಮತ್ತು ಫ್ರೆಂಚರು ಸಣ್ಣ ರಾಷ್ಟ್ರಗಳುಳ್ಳವರಿದ್ದರೂ ದೊಡ್ಡ ದೊಡ್ಡ ವಸಹಾತುಗಳ ಪ್ರಭುಗಳಾಗಿದ್ದಾರೆ. ನಾವು (ಜರ್ಮನರು) ಅವರಿಬ್ಬರಿಗಿಂತ ದೊಡ್ಡ ರಾಷ್ಟ್ರದವರಾಗಿದ್ದರೂ ನಮಗೆ ಒಂದೂ ವಸಹಾತಿಲ್ಲ!" ಈ ಅಭಿಪ್ರಾಯಗಳು ರೇಮಂಡ್ ಪರ್ಲ್ ಎಂಬ ಲೇಖಕರ ಸಾಕ್ಷಿಯಿಂದಲೂ ಸಿದ್ಧವಾಗಿ ಪುಷ್ಟೀಕರಣ ಹೊಂದುತ್ತವೆ. "The natural history of population" ಎಂಬ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ: "ಬ್ರಿಟನ್, ಫ್ರಾನ್ಸ್, ರಶಿಯಾ ಮತ್ತು ಅಮೇರಿಕಾ ರಾಷ್ಟ್ರಗಳ ಒಟ್ಟು ಜನಸಂಖ್ಯೆಯು ಜಗತ್ತಿನ ಸಂಖ್ಯೆಯ ೧/೮ ದಷ್ಟು ಇದ್ದರೂ, ಅವುಗಳ ಕ್ಷೇತ್ರಫಲ ಜಗತ್ತಿನ ೧/೫ ದಷ್ಟು ಇದ್ದರೂ, ಅವರು ಒಟ್ಟಾಗಿ ಇಡಿ ಜಗತ್ತಿನಲ್ಲಿ ಸುಮಾರು ಅರ್ಧದಷ್ಟು ಜನರ ಮೇಲೆ ರಾಜ್ಯವಾಳುತ್ತಾರೆ, ಮತ್ತು ಜಗತ್ತಿನ ಕ್ಷೇತ್ರದ ಅರ್ಧದಷ್ಟು ಭಾಗವನ್ನು ಆಕ್ರಮಿಸಿದ್ದಾರೆ."

'ಸಂಘೇಶಕ್ತಿಃ ಕಲೌಯುಗೇ' ಎಂದು ನಾವು ಕೇವಲ ಮಾತಿನಲ್ಲಿ ಹೇಳುತ್ತೇವೆ. ಇದೊಂದು ಭಾರತೀಯರ ವೈಶಿಷ್ಟ್ಯ. ಗತವೈಭವದ ಚಿತ್ರಗಳನ್ನು ನೆನೆದು ಭಾವೀಚಿತ್ರಗಳು ಇನ್ನೂ ಇಮ್ಮಡಿಯಾಗಿ ರಾಜಿಸುವುವೆಂದು ನಾವು ಪ್ರಸ್ತುತದಲ್ಲಿ ಕನಸು ಕಾಣುತ್ತಿರುವೆವು. ಹಿಟ್ಲರನು ಕೇವಲ ಕನಸುಗಾರನಲ್ಲ. ಇದ್ದ ಅಸ್ತವ್ಯಸ್ತ ಪರಿಸ್ಥಿತಿಯಿಂದಲೆ ಭಾವೀ ವೈಭವವನ್ನು ಬೆಳಗಿಸುವ ಹವ್ಯಾಸ ಅವನದು. ಅಂತೆಯೆ ಅವನು ಮೊದಲು ಈ ಲಕ್ಷಾಂತರ ಜರ್ಮನ್ ನವಯುವಕ-ಯುವತಿಯರ ಸಂಘಸ್ಥಾಪನೆಗೆ ಮನಸ್ಸು ಹಾಕಿದ. ಭಾರತದಲ್ಲಿ ನಾವು, ನಿರುದ್ಯೋಗವನ್ನೇ ಉದ್ಯೋಗವಾಗಿ ಮಾಡಿಕೊಂಡಿರುವ ನಮ್ಮ ಲಕ್ಷಾಂತರ ಯುವಕಸೈನ್ಯಕ್ಕೆ ಕಿಂಚಿತ್ತಾದರೂ ಕಾರ್ಯತಃ ಸ್ಥಿತ್ಯಂತರವನ್ನು ಒದಗಿಸಿಕೊಡುವ ಹವ್ಯಾಸಕ್ಕೆ ಹೋಗುವುದಿಲ್ಲ. 'ಇದು ಅವರ ತಪ್ಪು, ಇವರ ತಪ್ಪು' ಎನ್ನುತ್ತ ದೀರ್ಘ ಕಂಠಶೋಷಣೆ ಮಾಡಿಕೊಂಡು ವ್ಯಾಖ್ಯಾನ ಕೊಟ್ಟುಬಿಟ್ಟರೆ ಮುಗಿಯಿತು ನಮ್ಮ ಕಾರ್ಯ. ಹಿಟ್ಲರನೂ ಅದ್ವಿತೀಯ ವಾಗ್ಮಿ; ಅಸಾಮಾನ್ಯ ವಾಚಾಲನು. ಅವನ ವಾಕ್ಚಾತುರ್ಯಕ್ಕೆ ತಲೆತೂಗದವರಿಲ್ಲ. ಆದರೂ ಕೇವಲ ಮಾತಿನಿಂದ ಸಂತುಷ್ಟನಾಗದೆ ಕರ್ಮಭೂಮಿಯಲ್ಲಿ ಆ ಮಾತುಗಳನ್ನು ತರ್ಜುಮೆ ಮಾಡಿಬಿಡುತ್ತಾನೆ. ಇದಕ್ಕೆ ಮೊದಲು (ಎಂದರೆ ೧೯೩೩ರಲ್ಲಿ) ಅವನು ತರುಣಸಂಘಗಳನ್ನು ನಿರ್ಮಾಣಮಾಡಿದ್ದೇ ಸಾಕ್ಷಿ. ಏಕೆಂದರೆ ಹಿಟ್ಲರನ ರಾಷ್ಟ್ರೀಯತೆಯ ಆದರ್ಶವು ವಿಶಿಷ್ಟವಾದದ್ದು. ಅದರಲ್ಲಿ ಜರ್ಮನ್ ಜೀವನದ ಅವ್ಯಾಹತ ಪರಿಪೂರ್ಣತೆಯೇ ಮೇಲ್ಪಟ್ಟಿಯಾಗಿದೆ. ಇಂತಹ ರಾಷ್ಟ್ರೀಯತೆಯ ಸಾಧನೆಗೆ ನವೀನ ಪೀಳಿಗೆಯಿಂದಲೇ ಬಲವು; ತಲೆ-ತಲಾಂತರಗಳಿಂದ ಜರ್ಮನಿಯಲ್ಲಿ ಈ ಬಗೆಯ ರಾಷ್ಟ್ರೀಯತೆಯ ಭಾವನೆಯು ಇದ್ದದ್ದೇನೋ ನಿಜ. ಅದಕ್ಕೆ ಬಿಸ್ಮಾರ್ಕ್, ಹಿಂಡನ್‌ಬರ್ಗ್ ಮತ್ತು ಕೈಸರನ

ತತ್ತ್ವಗಳೇ ಪ್ರಮಾಣ. ಆದರೆ ಹಿಟ್ಲರನು ಸರ್ವಾಧಿಕಾರಿಯಾದಾಗ ಈ ಹಳೆಯ ತಲೆಗಳು ಗತಯುದ್ಧದ ಸೋಲಿನಿಂದಲೂ, ರುಹರಾಕ್ರಮಣದ ದಂಗೆಯಿಂದಲೂ ಅತ್ಯಂತ ಹೀನಸ್ಥಿತಿಗೆ ಇಳಿದುದರಿಂದ, ಅದರಲ್ಲಿ ಯಾವತರದ ಜೀವನದ ಸೊಬಗೂ ಕಳೆಯೂ ಇರಲಿಲ್ಲ. ಇನ್ನು ಮುಂದೆ ಬರುವ ಮಹಾರಾಷ್ಟ್ರಜರ್ಮನಿಗೆ ಉಚಿತವಾದ ಪೀಳಿಗೆಯೊಂದನ್ನು ತಿದ್ದಿ ತೀಡಿಸಿ ಜಾಗೃತಿಪಡಿಸಬೇಕಾಗಿತ್ತು. ಆ ಕಾರ್ಯವನ್ನು ಹಿಟ್ಲರನು ಪ್ರಥಮತಃ ಜರ್ಮನ್ ತರುಣ-ತರುಣಿಯರ ಸಂಘಗಳ ಚಳವಳಿಯಿಂದ ಸಾಂಗಮಾಡಿಸಿದ. ಸೋಲಿನಿಂದ ಗೆಲುವನ್ನು ಪಡೆಯುವುದೇ ಮಾನವನ ಶ್ಲಾಘ್ಯವಾದ ಧ್ಯೇಯ; ಹುಲ್ಲುಮಾರುತ್ತಿರುವ ಜರ್ಮನರನ್ನು ಹೂವು ಮಾರುವವರನ್ನು ಮಾಡುವುದನ್ನೇ ತನ್ನ ಗುರಿಯಾಗಿಟ್ಟುಕೊಂಡು ಕಾರ್ಯಪ್ರಾರಂಭ ಮಾಡಿದ. ಇದಕ್ಕೆ ಮೊದಲು ಅವನು 'ಆರ್ಯವಂಶದವರಾದ ಜರ್ಮನರು ತಮ್ಮ ಕುಲನಿರ್ಮಲತೆಯನ್ನು ಕಾಯ್ದುಕೊಳ್ಳುವುದೇ ಎಲ್ಲಕ್ಕೂ ಹೆಚ್ಚಿನಕಾರ್ಯ, ಎಂದು ಸಾರಿದನು. ಈ ಅವನ ಆರ್ಯವಂಶ 'ಶುಚಿತ್ವ'ಕ್ಕೆ ಅನೇಕ ವಿಮರ್ಶಕರು ಅದು ಅಶಾಸ್ತ್ರೀಯವೆಂದೂ, ಅಸಮಂಜಸವೆಂದೂ, ಅಮಾನುಷವೆಂದೂ ಕೂಗಿದ್ದಾರೆ. ಆದರೆ ಹಿಟ್ಲರನು ಈ ಕೂಗು ಕೇಳಲಿಲ್ಲ; ಕೇಳಲು ಬಯಸಲಿಲ್ಲ; ಕೇಳಿದರೂ ಪ್ರತಿಯಾಗಿ ತನ್ನ ಆದರ್ಶದ ಸಮರ್ಥನೆ ಮಾಡಿರುತ್ತಾನೆ. ಭಾರತೀಯರು ಕೂಡ ಅವನ ಆರ್ಯತತ್ತ್ವಾದರ್ಶಕ್ಕೆ ಹೊಂದದ ಜನರಂತೆ! ಇದು ಮರ್ಯಾದೆ ಮೀರಿದ ವಿಚಾರಸರಣಿಯೇನೋ ನಿಜ; ಅತಿಶಯೋಕ್ತಿಯೂ ಇರುವುದು. ಆದರೆ ಒಂದು ಮಾತನ್ನು ಮಾತ್ರ ನಾವು ನೆನಪಿಡಬೇಕು: ಹಿಟ್ಲರನು ಪ್ರಚಾರಕವೀರ; ಅವನ ಸರ್ವ ರಾಜನೈತಿಕ ಕಾರ್ಯಕ್ಕೂ ಈ ವಿಚಾರಪ್ರಸರಣ ಸಾಮರ್ಥ್ಯವೇ ಒತ್ತುಗಂಬವಾಗಿದೆ. ಇಂತಹ ಪ್ರಚಾರಕ ಕಾರ್ಯದಲ್ಲಿ ಅತಿಶಯೋಕ್ತಿಯು ಕೇವಲ ಸಾಹಜಿಕ ಮಾತು. ಯಾವುದಾದರೂ ಆದರ್ಶವನ್ನು ಜನಮನದಲ್ಲಿ ಮೂಡಿಸಬೇಕಾದರೆ ಅದನ್ನು ಬಲವಾಗಿ ಒತ್ತಿ ಹೇಳಬೇಕು; ಸತತ ಸುತ್ತಿಗೆಯಿಂದ ಬಡಿದು ದೃಢೀಕರಿಸಬೇಕು; ಕಟ್ಟಿಯನ್ನು ಗುಟ್ಟಮಾಡಿದರೆಯೆ ಆ ಕಾರ್ಯಕ್ಕೆ ಬಲ. ಅಂತೆಯೆ ಸತ್ಯಾಂಶವನ್ನು ಅತಿಶಯೋಕ್ತಿ ಮಾಡುವುದರಲ್ಲಿ ಒಂದು ರೀತಿಯ ವೈಚಿತ್ರ್ಯವಿದೆ. ಈ ವಂಶನೈರ್ಮಲ್ಯದ ಹಿಟ್ಲರನ ಹುಚ್ಚು ಇಂತಹ ವಿಚಾರಸರಣಿಯ ಪರಿಣಾಮ. ಈ ಸರಣಿಸೂತ್ರದಿಂದ ಅವನು ಜರ್ಮನ್ ಜನಾಂಗದ ಸ್ವಪ್ನಜಾಲವನ್ನು ನೇಯುತ್ತಿದ್ದಾನೆ. ಅದು ಪರರಿಗೆ ಇಂದ್ರಜಾಲದಂತೆ ಭಾಸವಾಗುತ್ತಿರುವುದು ಸಾಹಜಿಕ. ಆದರೆ ಇತರರು ಅವನ ಜಾಗೆಯಲ್ಲಿದ್ದರೆ ಅದನ್ನೇ ಮಾಡುತ್ತಿದ್ದರು. ಅಲ್ಲದೆ ಇಂದಿನ ಬ್ರಿಟಿಷರೂ, ಅಮೇರಿಕನ್ನರೂ ತಮ್ಮ ತಮ್ಮ ಕುಲಶ್ರೇಷ್ಠತೆಯ ಕಲ್ಪನೆಯಲ್ಲಿ ಕನಿಷ್ಠರಿಲ್ಲ. ಅವರ ವರ್ಣಭೇದತತ್ತ್ವವು ನಮಗೆ ಹೊಸದಾದ ಅನುಭವವಲ್ಲ. 'ಸಂಕರೋ ನರಕಾಯೈವ' ಎಂದು ನಾವು ಉದ್ಘೋಷಿಸಿದರೂ ನಮಗಿಂತ ಹೆಚ್ಚಿನ ವರ್ಣಭೇದ ಪೀಡಿತರು ಪಾಶ್ಚಾತ್ಯರು. ಹೀಗಿದ್ದಮೇಲೆ ಹಿಟ್ಲರನ ವರ್ಣತತ್ತ್ವಕ್ಕೆ ಮೂಗುಮುರಿಯುವುದು ಸಮಂಜಸವಲ್ಲ. ಇದು ಏನೇ ಇದ್ದರೂ ಹಿಟ್ಲರನ ರಾಷ್ಟ್ರೀಯತೆಯಾದರ್ಶಕ್ಕೆ ಅವನ ಆರ್ಯತ್ವದ ತತ್ತ್ವವು ಬೆಂಬಲವಾಗಿದೆ. ಅಂತೆಯೇ ಇಂದಿನ ನಾಝೀಜೀವನದ ಪೀಳಿಗೆಯಲ್ಲಿ ಅವನು ಹೊಸ ರಕ್ತ ತುಂಬಿದ್ದಾನೆ. ಇದನ್ನು ಅವನು ನಿರ್ಮಿಸಿದ 'ಹಿಟ್ಲರ ತರುಣಸಂಘ' 'ಯುವಕ ಸಭೆ' 'ಯುವತಿಯರ ಹಿಂಡು'ಗಳಲ್ಲಿ ಕಾಣಬಹುದು. ಇವೆಲ್ಲವುಗಳಲ್ಲಿ ಹೆಚ್ಚಿನದಾದ ಸಂಘವೆಂದರೆ **ಹಿಟ್ಲರನ ಸ್ವರಕ್ಷಣೆಯ ದಂಡು.** ಅದಕ್ಕೆ 'Household Brigade' ಎಂದು ಕರೆಯುವುದುಂಟು. ಇದರಲ್ಲಿ ಹತ್ತು ಸಾವಿರ ಯುವಕರಿದ್ದಾರೆ. ಇದರಲ್ಲಿಯ ತರುಣರು ೧೮ ರಿಂದ ೨೨ ರ ವರೆಗೆ ವಯಸ್ಸಿನವರು. ಆರಡಿ ಎತ್ತರವಾದ ದೇಹಿಗಳು; ಯಾವರೀತಿಯಿಂದಲೂ ಇವರನ್ನು ಟೀಕಿಸುವಂತಿಲ್ಲ. ಮಾನವನ ಪರಿಪೂರ್ಣತೆಯ ಚಿತ್ರವನ್ನು ಕಾಣಬೇಕಾದರೆ ಈ ತರುಣರಲ್ಲಿ ಅದರ ಪ್ರಥಮ ಹೊಳಪನ್ನು ಕಾಣಬಹುದು. ಇಂತಹ ಯುವಕ ಪೀಳಿಗೆಯನ್ನು ತಯಾರಿಸುವುದು ಹಿಟ್ಲರನ ಕರ್ತವ್ಯವಾಗಿದೆ. ಜರ್ಮನಿಗೆ ನೈಸರ್ಗಿಕ ಮೇರೆಗಳಿಂದ ರಕ್ಷಣೆಯಿಲ್ಲ. ಎಂದಿನಿಂದಾದರೂ ಜರ್ಮನಿಯು ಯುದ್ಧರಂಗವಾಗಿದೆ. ಇಂದಂತೂ ಅದನ್ನು ಸಾರ್ವತ್ರಿಕ-ಸರ್ವಕಾಲ-ರಣರಂಗವೆಂದು ಎನ್ನಬಹುದು. ರುಹರಾಕ್ರಮಣದ ನಂತರ ಫ್ರೆಂಚರು ಅನೇಕ ಪರರಾಷ್ಟ್ರಗಳ ಸಹಾಯವನ್ನು ಬಯಸಿ ಒಪ್ಪಂದಗಳನ್ನು ಮಾಡಿಕೊಂಡರು. ಜರ್ಮನಿಯ ಪೂರ್ವಕ್ಕೆ ಫ್ರೆಂಚರಿಂದ ಬೆಂಬಲಗೊಂಡ ಪೋಲಂಡ್; ಅದರ ಹಿಂದೆ ರಶಿಯದ ದಕ್ಷಿಣದಲ್ಲಿ ರುಮಾನಿಯಾ, ಜೆಕೋಸ್ಲೋವಾಕಿಯಾ ಮತ್ತು ಯುಗೋಸ್ಲೋವಿಯಾ; ಎತ್ತ ನೋಡಿದರೂ ಜರ್ಮನಿಗೆ ರಕ್ಷಣೆಯಿಲ್ಲ. ಇದರಿಂದಲೇ ಜರ್ಮನ್ ಜನಾಂಗವು ಎಂದಿನಿಂದಾದರೂ ಯೋಧರ ತವರುಮನೆಯಾಗಿದೆ; ಇಂದು ಅದೇ ಕಾರಣದಿಂದ ಇನ್ನೂ ಮೀರಿದ ಸೈನಿಕಸಮೂಹವಾಗಿದೆ.

ಹಿಟ್ಲರನು ಅಧಿಕಾರಹೊಂದಿದನಂತರ ಜರ್ಮನಿಯನ್ನು ಮಹಾರಾಷ್ಟ್ರವನ್ನಾಗಿ ಮಾಡಲು ಉದ್ಯುಕ್ತಿಸಿದ. ಆದಕ್ಕೆ ಬೇಕಾದ ಜನತೆಯ ಸೌದೆಗೆ ಅತ್ತಿತ್ತ ನೋಡುವಾಗ, ಅವನಿಗೆ ನಿರುದ್ಯೋಗ ಪೀಡಿತ ಯುವಕ-ಯುವತಿಯರ ಸೈನ್ಯವು ಕಂಡುಬಂತು. ಹಿರಿಯ (ಹಳೆಯ) ಜರ್ಮನರಲ್ಲಿ ನಿರಾಶಾವಾದದ ವಿಷವಾಯು ಹೊಕ್ಕು ಅವರನ್ನು ಕೇವಲ ಮೃತಪ್ರಾಣರನ್ನಾಗಿ ಮಾಡಿತ್ತು. ೧೯೩೩ರಲ್ಲಿ ಜರ್ಮನಿಗೆ ಹೋದ ಅನೇಕ ಪ್ರವಾಸಿಕರ ವರ್ಣನೆಗಳಲ್ಲಿಯ ಈ ರೀತಿಯ ಅಲ್ಲಿಯ ಜೀವನವನ್ನು ಸಾಕ್ಷಿಯಾಗಿ ತೆಗೆದುಕೊಳ್ಳ

ಕೊಲ್ಹಾಪುರದಲ್ಲಿಯ

ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು

ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್

ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.

※ ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವುವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ಒಮ್ಮೆ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಬಹುದು. ಬ್ರಿಟಿಶರೆ ಪಕ್ಷದವರೇ ಹೇಳುವಂತೆ ಜರ್ಮನರನ್ನು ಇಪ್ಪತ್ತು ವರ್ಷಗಳವರೆಗೆ ತುಳಿದು ಮೆಟ್ಟಿ, ಅನ್ನಗೇಡುಮಾಡಿ, ಅಮಾನುಷ ಬಾಳುವೆಗೆ ಹಚ್ಚಿದವರು ಯುರೋಪ್ಯರೇ, ಹಿಟ್ಲರನ ಪಂಥದವರಲ್ಲ. ಆ ಮೃತಜೀವನದಿಂದ ಹೊಸ ಜೀವನ ತಂದ ತಂತ್ರಗಾರನು ಹಿಟ್ಲರನು. ನಾಝೀಜೀವನವು ಕೇವಲ ಮಾನಸಿಕ, ಆಂತರಿಕ ಕಾರಣಗಳಿಂದ ಉದ್ಭವಿಸಿದ ಜೀವನ. ಆ ಜೀವನಕ್ಕೆ ಕೀಳುತನದ ತೊಡಕಿನಲ್ಲಿ ಸಿಕ್ಕವರ ಉದಾಹರಣೆ ಕೊಡಬಹುದು. ಆ ಹೀನ ಸ್ಥಿತಿಯಲ್ಲಿ ಬೆಳೆದ ಅವರ ಮನೋವಿಕಾರವೇ ಇಂದಿನ ಅವರ ಜೀವನಕ್ಕೆ ಕಾರಣವಾಗಿದೆ. ಮಾನವನಿಗೆ ಎಲ್ಲಕ್ಕೂ ಪ್ರೀತಿಯ ವಸ್ತು ಭದ್ರತೆ; ನಿರ್ಭಯತೆ. ಸದಾಭೀತ ಮಾನವನು ಪಶುವೃತ್ತಿಯವನಾಗುವನು; ಅಮಾನುಷನಾಗುವನು; ಆಕಸ್ಮಿಕವಾಗಿ ಮಾನವ ಪ್ರಾಧಾನ್ಯತೆಯನ್ನು ಹೊಂದಬಹುದು. ಇಂತಹ ಪ್ರಾಧಾನ್ಯತೆಯೇ ಇಂದಿನ ನಾಝೀಜೀವನದ ಗುಟ್ಟು. ಅದು ಜನಿಸಿದ ಕಾರಣವು ಭೀತಿಯಾಗಿದ್ದರೂ ಅದರ ಇಂದಿನ ಪರಿಣಾಮವು ಭೀತಿಭಿನ್ನವಾಗಿದೆ. ಕತ್ತಲೆಯಲ್ಲಿ, ಕಾಡಿನಲ್ಲಿ ನಡೆಯುತ್ತಿರುವ ವ್ಯಕ್ತಿಯು ಸಿಳ್ಳುಹಾಕುತ್ತ ಧೈರ್ಯ ತಂದುಕೊಳ್ಳುವಂತೆ, ಇಂದಿನ ಜರ್ಮನರು ತಮ್ಮ ವ್ಯಕ್ತಿತ್ವದ ಡಂಗುರದಿಂದ ಜಗತ್ತಿನಲ್ಲೆಲ್ಲ ಗದ್ದಲವೆಬ್ಬಿಸಿದ್ದಾರೆ. ಇಂದು ಅವರಿಗೆ ಯಾವ ಭೀತಿಯೂ ಇಲ್ಲವೆನ್ನಬಹುದು. ಇಂತಹ ನಿರ್ಭಯತೆಯನ್ನು ತಂದುಕೊಟ್ಟವನು ಹಿಟ್ಲರನು. ಅದಕ್ಕೆಂದೇ ಅವನ ಸಾವಿರಾರು ಅಕ್ಷಮ್ಯ ಅಪರಾಧಗಳನ್ನೂ ಲೆಕ್ಕಿಸದೆ ಇಂದು ಜರ್ಮನಿಯು ಏಕಮುಖವಾಗಿ, ಏಕನಾದದಲ್ಲಿ, ಅವನ ಅನುಯಾಯಿಯಾಗಿದೆ. ಹಿಟ್ಲರನು ಈ ನಿರ್ಭಯತೆಯನ್ನು ಯಾವ ಕಾರ್ಯರೂಪದಿಂದ ತಂದುಕೊಟ್ಟನೆಂಬುದನ್ನೂ, ಅದರ ಇಂದಿನ ಪರಾಕಾಷ್ಠತೆಯು ಯಾವರೀತಿಯಲ್ಲಿ ವ್ಯಕ್ತವಾಗಿರುತ್ತದೆಂಬುದನ್ನೂ ಮುಂದಿನ ಲೇಖಾಂಕದಲ್ಲಿ ವರ್ಣಿಸುವುದಿದೆ. ಇದರಲ್ಲಿ ಜರ್ಮನಿಯ ಇಂದಿನ ಜೀವನಕ್ಕೆ ಕಾರಣವಾದ ವಸ್ತುಗತ ಯುದ್ಧದ ಸೋಲು ಮಾತ್ರವಲ್ಲ; ಆ ಸೋಲಿನನಂತರ ಆ ಜನಾಂಗದ ಆಂತರಿಕ ನಿರಾಶೆಯೇ ಕಾರಣವೆಂದು ಹೇಳಿದ್ದಾಗಿದೆ. ನಾಝೀ ಪಂಥದವರು ಜರ್ಮನರಿಂದ ಭಿನ್ನರು ಎಂದು ಸಾರುವ ವಿಮರ್ಶಕರು ತಪ್ಪುತಿಳಿವಳಿಕೆಯವರು. ನಿಜಸ್ಥಿತಿಯೆಂದರೆ ನಾಝೀಪಂಥವೇ ಜರ್ಮನಿಯ ರಾಷ್ಟ್ರವ್ಯಕ್ತಿತ್ವದ ಸ್ವಾಭಾವಿಕವಾದ ಪರಿಣಾಮವಾಗಿದೆ. ನಾಝೀ ಮನೋವೃತ್ತಿಯನ್ನು ಹುಟ್ಟಿಸಿದವರು ಇನ್ನುಳಿದ ಪಾಶ್ಚಾತ್ಯರೇ; ಬಂಧುಬಳಗದವರೇ ಎನ್ನಬಹುದು. ಹಿಟ್ಲರನು ಈಗ ಆ ಬಾಂಧವರ ಅಮಾನುಷ ನಡತೆಗೆ ಬಲವಾದ ಪ್ರತ್ಯುತ್ತರ ಕೊಡಹತ್ತಿದ್ದಾನೆ. ಪರರಾಷ್ಟ್ರಗಳ ಮೇಲೆ ಅವಲಂಬನಮಾಡಿ ಜೀವಿಸುವುದು ಕೇವಲ ಆತ್ಮಹತ್ಯದ ರೀತಿಯೆಂದು ಜರ್ಮನರಿಗೆ ಇಂದು ಬಲವಾಗಿ ಕಂಡುಬಂದಿದೆ. ಅಂತೆಯೇ ನಾಝೀ ಪಂಥದವರು ಮೊದಲು ಜರ್ಮನಿಯನ್ನು 'ಸ್ವರಾಜ್ಯ'ವನ್ನಾಗಿ 'ಸ್ವದೇಶಿ'ವನ್ನಾಗಿ ಮಾಡಲು ಯತ್ನಿಸಿದ್ದಾರೆ. ಭಾರತಕ್ಕೂ, ಜರ್ಮನಿಗೂ ಒಂದು ವಿಶಿಷ್ಟ ಸಾಮ್ಯತೆಯಿದೆ. ಅದೇನೆಂದರೆ, ಪರರಾಷ್ಟ್ರಾವಲಂಬನದ ಬಾಳು. ಎಂದರೆ ಜರ್ಮನರು ದಾಸ್ಯಜೀವಿಗಳಲ್ಲ; ಆ ಪದವಿಯು ನಮ್ಮದು. ಆದರೆ ರಾಜಕಾರಣದ ಬಣ್ಣದಿಂದ ಮುಚ್ಚಿದ ಬಾಹ್ಯರೂಪವನ್ನು ತೊಳೆದು ನೋಡಿದರೆ ಭಾರತ ಜೀವನಕ್ಕೂ, ನಾಝೀಜೀವನಕ್ಕೂ ಹೆಚ್ಚು ಅಂತರವಿಲ್ಲ. ಎಲ್ಲಿಯವರೆಗೆ ಜರ್ಮನಿಯು 'ಹೊಟ್ಟೆ-ಬಟ್ಟೆಗಾಗಿ' ಪರರಾಷ್ಟ್ರಾವಲಂಬಿಯಾಗಿರುವುದೋ ಅಲ್ಲಿಯವರೆಗೆ ಯಾವ ಸರಕಾರವಿದ್ದರೇನು ಅದು ದಾಸ್ಯರಾಷ್ಟ್ರವೆಂದೇ ಹೇಳಬಹುದು. ಅದರ ಪರಿಣಾಮಕ್ಕೂ ಭಾರತದ ಇಂದಿನ ಪರಿಣಾಮಕ್ಕೂ ಸಾಮ್ಯವಿದೆ. ಆದರೆ ಜರ್ಮನರು ಇಂದು 'ಸ್ವದೇಶೀ' ಚಳವಳಿಯನ್ನು ಕರ್ಮಭೂಮಿಯಲ್ಲಿ ತರಹತ್ತಿದ್ದಾರೆ. ಅದು ದುಡುಕಿನ 'ಸ್ವದೇಶಿತ್ವ' ಕಲಹಪ್ರಿಯತೆಯ 'ಸ್ವರಾಜ್ಯ' ಧ್ಯೇಯ. ಹಂಚಿಹೋದ ಜನಾಂಗವನ್ನು ಮಹಾರಾಷ್ಟ್ರವನ್ನಾಗಿ ಮಾಡುವುದೇ ನಾಝೀ ಪಂಥದ ಬಲವಾದ ಧ್ಯೇಯ. ಇನ್ನು ಮುಂದೆ ಯಾವ ಪ್ರಸಂಗದಲ್ಲಿಯೂ ಪರಾವಲಂಬನೆಯಲ್ಲಿರಕೂಡದೆಂಬ ಬಯಕೆಯೇ ಅವರ ಬಡಿದಾಟಕ್ಕೆ ಉರುವಲಾಗಿದೆ. ಇಂತಹ 'ಸಂಕುಚಿತ' ರಾಷ್ಟ್ರೀಯತೆಯ ಆದರ್ಶವು ಕುಹಕವೆಂದು ಹೀಯಾಳಿಸಬಹುದು. ಆದರೆ ಅನುಭವಜನ್ಯ ಜೀವನದಲ್ಲಿ 'ಮಾನವಕುಲದ ರಾಷ್ಟ್ರ', 'ಜನತೆಯ ಧರ್ಮ' ಎಂಬ ಕನಸುಗಳು ಕೆಲಸದುವಲ್ಲ. ಅಂತರ ರಾಷ್ಟ್ರೀಯತೆಯೂ, ಸರ್ವಮಾನವರ ಐಕ್ಯಾದರ್ಶವೂ ಕೇವಲ ಕನಸುಗಳು; ಇಂದು ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಪುಷ್ಟೀಕರಣದಲ್ಲಿಯೇ ಮೈಮರೆತುಕೊಂಡಿರುವಾಗ, ವಸ್ತುಸ್ಥಿತಿಯ ಅನುಭವವನ್ನು ಹಿಟ್ಲರನು ಮರೆತಿಲ್ಲ. ಎಂದಿನ ತನಕ ಎಲ್ಲ ಜನಾಂಗಗಳೂ ಆ ಭಾವೀ ಮಾನವನ ಏಕೀಕರಣದ ಕನಸನ್ನು ಕರ್ಮಭೂಮಿಯಲ್ಲಿ ಇಳಿಸಲು ಮನಸ್ಸು ಮಾಡುವುದಿಲ್ಲವೋ ಅಂದಿನವರೆಗೆ ಸ್ವರಾಜ್ಯ ಮತ್ತು ಸ್ವದೇಶ ಜೀವನ ರೀತಿಯು ಸಿದ್ಧವಾದದ್ದೇ; ಇದಿಲ್ಲದಿದ್ದರೆ ದಾಸ್ಯ, ಮೃತಜೀವನ, ಹೀನಮಾನವಾವನತಿ ಕಟ್ಟಿಟ್ಟದ್ದೇ; ಅಂತೆಯೇ ನಾಝೀಪಂಥದವರು ತಮಗೆ ಅಲೌಕಿಕವಾಗಿ ಕಾಣುವಂತಹ ಜೀವನವನ್ನು ಅನುಭವಿಸಹತ್ತಿದ್ದಾರೆ. ಅದು ಎಷ್ಟರ ಮಟ್ಟಿಗೆ ಸಾಧ್ಯವೋ ನೋಡೋಣ!

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!

ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಮೆಚ್ಚಿನ ಕೆಲಸ!

೮ ಆಣೆಗೆ ೧೦ ಬ್ಲೇಡು!

ಮಾಯಾಮಾಧುರಿ

★

ಶ್ರೀ. ಶ್ರೀಧರಶರ್ಮ

೧

ಮಾಧುರಿ, ಮನವನು ಗುರಿಯೆಡೆಗೆಳೆವ ಕ-
ಲೋದರಿ, ಹರಿಸದ ಹಣ್ಣು !
ಆದರದಲಿ ಕರೆದರೆ ಮುಂದೋಡುವ-
ಳಾ ದರಹಾಸದ ಹೆಣ್ಣು !

೨

ಬಾಗಿಲಿನೊಳಗಡೆ ಬಳುಕುತ ನಿಲುವಳು;
ಬಾಗಿದೊಡನೆ ಮನದೊಲವು,
ರಾಗವ ಸೂಸುವ ಕಂಗಳು ಲಜ್ಜಾ-
ಯೋಗದಿ ಮರೆಯಾಗುವುವು !

೩

ಶೃಂಗಾರದ ಭ್ರೂಭಂಗವ ನೋಡುತ
ಕಂಗಳೊಡನೆ ಒಳಹೊಗಲು,
ಬಂಗಾರದ ಮಿಂಚಾದವಳೊಮ್ಮೆಲೆ
ಚಂಗನೆ ಸಿಡಿದೋಡುವಳು !

೪

'ಅಂಬರದಲಿ ತೇಲುವ ತಾರಗೆ ಬಾ'
ಎಂಚಿನೆ? ನಿರುಕಿಸ ಬರಲು,
ತುಂಬಿದ ಕಾರ್ಗಾಲದಿ ತೋರುವ ಕಾ-
ದಂಬಿನಿಯೊಳಗಡಗುವಳು !

೫

ಪರ್ವತದಾ ನಸುನೀಲಿಮೆಯಾಗಿ ಸು-
ಗರ್ವಿತೆ ಮೈದೋರುವಳು;
ನಿರ್ವೃತಿಗಾಶಿಸಿ ನೋಡೆ ದಿಗಂತದ
ನಿರ್ವರ್ಣತೆಗೆಯ್ದುವಳು !

೬

ವಿಟಪಿಗಳಲಿ ಕುಕಿಲುವುದನು ಕೇಳುತ
ತಟದಾಗಮನದಿ ಬರಲು,
ವಿಟಪಾಶ್ರಯವನು ಕಳೆದೊಮ್ಮೆಗೆ ದಿ-
ಕ್ತಟಗಳ ಮೇಲ್ಹಾಯುವಳು !

೭

ತಂಗೊಳದಲಿ ಕಳಹಂಸೆಯ ರೂಪದಿ
ತಂಗಿಹಳೆಂದೀಕ್ಷಿಸಲು,
ವಿಹಂಗಳವೊಲು ತಳದೋರ್ಡುವಳಿಂತಹ
ಅಂಗನೆಯೆಲ್ಲಿಯು ಸಿಗಳು !

೮

ಕುಸುಮದ ಕೋರಕವನು ಕಂಡಿದಕೋ
ಮುಸಗಿಹಳಿಲ್ಲೆನೆ, ಮಲ್ಲಿ
ದೆಸೆ ದೆಸೆಗಳ ದಿಟ್ಟಿಸುತಿರೆ ದಳಗಳು
ಹುಸಿಯಿರವೆನಿಸುವಳಲ್ಲಿ !

೯

ಬಂಡುಣ ಬರೆ ಗುಂಜಾರವದಿಂದರೆ
ಕಂಡೆನೆನಲು, ದನಿಯಾಟ
ಕುಂದಿಲ್ಲದ ವನರಾಜಿಯ ವಲ್ಲೀ-
ಮಂಡಪದಲಿ ನುಸುಳ್ದೋಟ !

೧೦

ಮುಂಬೆಳಗಿನ ಸೋಗಾಂತೇಂ ಬಂದಳೊ
ಎಂಚಿನೆ? ಎಂದೆಚ್ಚಟ್ಟೆ,
ತಂಬೆಲರೇರಿ ತಿರೋಗತಿವಿಡಿವಳು
ತುಂಬಿದ ಸೊಬಗಿನ ದಿಟ್ಟೆ !

೧೧

ಭೋರ್ಗರೆಯುವ ನಿರ್ಝರಿಯಾಗಿರಲು ನಿ-
ರರ್ಗಳ ಕಾಲವಿದೆಂದು,
ಮಾರ್ಗದಿ ಬರೆ ಕಂಡೋಡುವಳವಳಪ-
ವರ್ಗದ ತೀರಕ್ಕೆಂದು !

೧೨

ಎಂತಹ ಮಾದರಿ, ರಸಮಯಮಾಧುರಿ !
ಚಿಂತಾಗೋಚರೆಯಿವಳು !
ಎಂತಾದೊಡನೆಮ್ಮೆಲವಿನ ಬಳ್ಳಿಯ-
ನಂತ್ಯದುಸಿರಿಗೆಳೆಯುವಳು !

ಬರೆಹಗಾರನ ಭಗವದ್ಗೀತೆ

★ ಇಲ್ಲವೆ ★

ಕೈಬರೆಹದ ಕುರುಕ್ಷೇತ್ರ

★ (ಒಂದು ವಿನೋದ ದೃಶ್ಯ) ★

★ **ಪಾತ್ರಗಳು :** ★

ಅಪಾರ್ಥ-ಅರ್ಜುನ ಕೃಷ್ಣ-ಸರಸ್ವತಿ

[ತೆರೆ ಮೇಲಕ್ಕೇಳಲು ಒಂದು ಮನೆಯೊಳಗಿನ ಕೋಣೆಯ ದೃಶ್ಯ. ಆದರೆ ಸದ್ಯಕ್ಕೆ ಒಳಗಿನಿಂದಲೂ ಹೊರಗಿನಿಂದಲೂ ಒಂದೇ ಸವನೆ ನಡೆದ ಅಲ್ಲೋಲಕಲ್ಲೋಲಕ್ಕಾಗಿ ನಮ್ಮ ಲಕ್ಷ್ಯ ಬೇರೆಕಡೆ ಹೋಗುವಂತಿಲ್ಲ. ಒಳಗೆ ಕೂಗಾಟ, ಚೀರಾಟ, ನಗೆ, ಅಳುವ ದನಿ, ' ಹೆಣ ಎತ್ತು, ಬೆಂಕಿ ಹಚ್ಚು' ಎಂಬ ಗದ್ದರಿಕೆಯ ಮಾತುಗಳಿಗೆ ಪ್ರಾಸಬದ್ಧವಾಗಿ ಹೊಡೆವ ಸದ್ದು; ಹೊರಗೆ ' ನಾ ಮುಂದೆ, ನಾ ಮುಂದೆ, ಇಂದು ಮುಗಿಸೇ ತೀರುವೆ, ಹೇ, ಹೋ, ಯಾರು, ಬರ್‍ರಿಲ್ಲಿ, ಎದುರಾಗಿರಿ' ಮುಂತಾದ ಆಹ್ವಾನದ ಕರೆಗಳ ಕಂಠನಿನಾದ. ರಂಗಭೂಮಿಯಲ್ಲಿ ಕಾಣುವ ಕೋಣೆಯ ಒಂದು ಮೂಲೆಯಲ್ಲಿ ಒಂದು ಕುರ್ಚಿ, ಒಂದು ಟೇಬಲ್; ಟೇಬಲ್ಲಿನಮೇಲೆ ಕಾಗದ ಚೆಲ್ಲಾಪಿಲ್ಲಿಯಾಗಿ ಹರಡಿದೆ. ಪೆನ್ಸಿಲ್-ಟಾಕು-ಮಸಿದೌತಿಗಳು ಮೊಂಡಾಗಿ, ಬರಿದಾಗಿ, ಅಸ್ತವ್ಯಸ್ತವಾಗಿ ಬಯಲುಬೇಲಿಶವ ಗಿಡಗಳಂತೆ ನಿಂತಿವೆ. ಟೇಬಲಿನ ಬಲಬದಿಗೆ ಕಾಗದದ ತಲೆ-ಕೂದಲುಗಳನ್ನೂ, ಬ್ಲಾಟಿಂಗ್‌ಪೇಪರಿನ ವಸ್ತ್ರಗಳನ್ನೂ, ಒಂದು ಟಾಕಿನಂತಹ ಒಂದು ಪೆನ್ಸಿಲ್‌ದಂತಹ ಕೈಗಳನ್ನೂ, ತಲೆಯಂತೆ ಕಾಣುವ ಹೊಟ್ಟೆಯನ್ನೂ, ಅಕ್ಷರಮಯವಾಗಿ ಕಾಣುವ ಕಾಲ್ಗಳನ್ನೂ ಧರಿಸಿದ ಒಂದು ವ್ಯಕ್ತಿ ನಿಂತಿದೆ. ಕುರ್ಚಿ-ಟೇಬಲುಗಳ ನಡುವೆ ಮುತ್ತು ಮೊದಲಿನ ವ್ಯಕ್ತಿಯ ಎಡಬದಿಗೆ ತೋಳನ್ನೇರಿಸಿದ, ಬರಿಯ ಶರ್ಟನ್ನು ತೊಟ್ಟ, ಪಂಚೆಯನ್ನು ಇಳಿಬಿಟ್ಟ, ಟಾಕು ಪೆನ್ಸಿಲುಗಳನ್ನು ಕಿವಿಗಳಲ್ಲಿಟ್ಟ, ಮುಂಗೈಯ ವರೆಗೆ ಮಸಿಯಿಂದ ಕಟ್ಟ ಇನ್ನೊಂದು ವ್ಯಕ್ತಿ ನಿಂತಿದೆ. ಒಂದೆರಡು ನಿಮಿಷಗಳ ವರೆಗೆ ಎರಡನೆಯ ವ್ಯಕ್ತಿಯು ಸುತ್ತಲೂ ನೋಡಲು ಗಲಭೆ ಶಾಂತವಾಗುವುದು. ಎರಡನೆಯ ವ್ಯಕ್ತಿಯು ಕಿವಿಗಳೊಳಗಿನ ಟಾಕು-ಪೆನ್ಸಿಲುಗಳನ್ನು ಕೈಗಳಿಂದೆತ್ತಿ ಹಿಡಿದು....]

೨ನೆಯ ವ್ಯಕ್ತಿ:— ಎಲೈ ಅಕ್ಷರಚ್ಯುತನಾದ ಕೃಷ್ಣ-ಸರಸ್ವತಿಯೆ—

೧ನೆಯ ವ್ಯಕ್ತಿ:—ಏನೆಂದೆ, ಭೋ ಅಪಾರ್ಥಾ ಅರ್ಜುನಾ—?

ಅ. ಅರ್ಜುನ:— ಟಾಕೇಶವಾ, ಎರಡೂ ಸೈನ್ಯಗಳ ನಡುವೆ ನನ್ನ ಕುರ್ಚಿ-ಟೇಬಲುಗಳನ್ನು ಇಡುವಂತಹನಾಗು. (ಕೃ. ಸ.ಯು ಹಾಗೆ ಮಾಡುತ್ತಿರುವಾಗ) ನನ್ನನ್ನು ಹೊರಗಿನಿಂದ ಎದುರಿಸಲು ಬಂದವರದಾರು— ಎಂಬುದನ್ನು ನೋಡುವ ಆಕಾಂಕ್ಷೆ ಇದೆ ನನಗೆ. ಈ ಮರಣಸಮುದ್ಯಮದಲ್ಲಿ ಯಾರೊಡನೆ ನಾನು ಹೋರಾಡಬೇಕಾಗಿದೆ— ಎಂಬುದನ್ನು ನಿರೀಕ್ಷಿಸಲು ಕಾತರನಾಗಿದ್ದೇನೆ. ನಮ್ಮ ದೇಶದ ದುರ್ಬುದ್ಧಿಯಾದ ಧೂರ್ತರಾಷ್ಟ್ರಜನಕ್ಕೆ ಪ್ರಿಯವನ್ನು ಮಾಡಬಂದವರದಾರು— ಅದನ್ನೂ ನೋಡುವೆ.

ಕೃ. ಸರಸ್ವತಿ:— (ಇಷ್ಟರಲ್ಲಿ ಕುರ್ಚಿ ಟೇಬಲುಗಳನ್ನು ರಂಗದ ನಡುವೆ ಕಂಡಿಟ್ಟು) ಅಪಾರ್ಥಾ, ನೋಡುವಂತಹನಾಗು. ಹೊರಗೆ ನಿನ್ನ ಎದುರಾಗಿ ನಿಂತವರು ನಿನ್ನ ವೈರಿಗಳು.

ಅ. ಅರ್ಜುನ:— ಅವರದಾರಾರು ಎಂಬುದನ್ನು ಸ್ಪಷ್ಟೀಕರಿಸುವೆಯಾ, ಮಸಿಮರ್ದನವೈರಿಯುವನೆ?

ಕೃ. ಸರಸ್ವತಿ:— ಗರಿಯ ಗಾಂಡೀವೀ, ಗಮನಿಸುವಂತಹನಾಗು. ಇವನು ಬಾಲ್ಯದಿಂದ ನಿಮ್ಮನ್ನು ಪೋಷಿಸಿ ಬೆಳೆಸಿದ ಪಿತಾಮಹನಂತಹ ಪ್ರಕಾಶಕನು; ಇನ್ನಿವನು— ಬರೆದದ್ದನ್ನು ಮತ್ತೆ ಮತ್ತೆ ತಿದ್ದಲು ಹಚ್ಚಿ ವಿದ್ಯೆಕಲಿಸುವ ಆಚಾರ್ಯನಂತಹ ಪ್ರಿಂಟರನು; ಕಾಗದದ ಕಲಿಯೆ, ಕೇಳುವಂತಹನಾಗು; ಇವನು ಬಾಲ್ಯದಿಂದ ನಿಮ್ಮನ್ನು ಅಹ್ವಾನಿಸಿ, ವನವಾಸಕ್ಕೆ ಕಳುಹಿಸಿ, ಇಲ್ಲದ್ದನ್ನು ಕೇಳುವಂತಹ ಲಂಬಕರ್ಣನಾದ ನಿನ್ನ ಕಡುವೈರಿಯಾದ ವಿಮರ್ಶಕ; ಇನ್ನಿವರು ಹಣಕ್ಕಾಗಿ ಹೆಣವಾಗಬಯಸುವ ವಾಚಕರು. ಇದಲ್ಲದೆ ಅತ್ತ ಪೃಥಕ್ ಪೃಥಕ್ಕಾಗಿ ಶಂಖನಾದ ಮಸ್ಫೋಟಿಸಿದ ಹುದ್ದರಿಗಳೆಂದರೆ, ಸಾಕ್ಷಾತ್ ನಿನ್ನ ಉದ್ದರಿಗಳು.

ಅ. ಅರ್ಜುನ:— (ಒಳಗೆ ನೋಡುತ್ತ) ಕೃಷ್ಣಸರಸ್ವತಿಯೆ, ಇತ್ತ ನಿಂತವರು ಯಾರು ?

ಕೃ. ಸರಸ್ವತಿ:— (ಆಶ್ಚರ್ಯದಿಂದ) ಇವರು ! ಇದೊ— ಈ ಅನಂತ ವಿಜಯಶಂಖವನ್ನೂದುವ ವ್ಯಕ್ತಿ ನಿನ್ನ ಹೃದಯದಲ್ಲಿಯೆ ಸ್ಥಿರವಾದ ನಿನ್ನ ಹೆಂಡತಿ. ಈ ಸುಘೋಷ ಶಂಖನಾದಕ್ಕೆ ಕಾರಣೀಭೂತವಾದ ವ್ಯಕ್ತಿ ನಿನ್ನ ಕುಲವರ್ಧನನಾದ ನಿನ್ನ ಹಿರಿಯ ಮಗ. ದೇವನೂ ಸಹಿಸದಂತಹ ದನಿಪುಷ್ಪಕ ಶಂಖಸ್ವರವನ್ನು ಹೊರಡಿಸುವ ಈ ವ್ಯಕ್ತಿ— ಇದು ನಿನ್ನ ಚಿಕ್ಕಮಗು.

ಅ. ಅರ್ಜುನ:— (ಎರಡೂ ಬದಿಗಳನ್ನು ಮತ್ತೊಮ್ಮೆ ನಿರೀಕ್ಷಿಸಿ) ಕೃಷ್ಣ ಸರಸ್ವತಿಯೇ, ನಾನು ಬರೆಯಲಾರೆ (ಎಂದು ಹತಾಶನಂತೆ ಕೂಡುವನು.)



ಕೃ. ಸರಸ್ವತಿ:— (ಆಶ್ಚರ್ಯದಿಂದ) ಇದೇನು ! ಪಾಂಡವಾ ಪೆನ್ಸಿಲ್ ತಾಂಡವಾ, ನಿನಗೇಕೆ ಇಂತಹ ಹೇಡಿತನ ?

ಅ. ಅರ್ಜುನ:—ಭೋ ಕಂಸಗಳ ಕಂಟಕಾ, ಇದು ಹೇಡಿತನ ವಲ್ಲ. ಇಂತಹ ಘೋರಪಾಪವನ್ನು ನಾನು ಕೈಕೊಳ್ಳಲಾರೆ.

ಕೃ. ಸರಸ್ವತಿ:— ಈಗ ಬರೆಯುವುದೆಂದರೆ ಘೋರಪಾಪವೆ ?

ಅ. ಅರ್ಜುನ:—ನಾನು ಬರೆದರೆ ಇವರೆಲ್ಲರೂ ಸಾಯುವರು. ಆ ಪಾಪವನ್ನು ನಾನು ಮಾಡಲಾರೆ.

ಕೃ. ಸರಸ್ವತಿ:— (ತಿರಸ್ಕಾರದ ನಗೆಯಿಂದ) ಎಲೈ ಅಪಾರ್ಥಾ, ನೀನು ಬರೆಯದಿದ್ದರೂ ಇವರು ಸಾಯುವರು. ಇದಲ್ಲದೆ ಬರೆಯದಿದ್ದರೆ ನೀನೇ ಸಾಯುವೆ, ಆಗ ಆತ್ಮಹತ್ಯೆಯ ಪಾಪ ನಿನಗೆ ತಟ್ಟುವುದಿಲ್ಲವೆ ?

ಅ. ಅರ್ಜುನ:— ಇವರಿಗಾಗಿ ನಾನು ಸತ್ತರೆ ಅಡ್ಡಿ ಇಲ್ಲ, ಇವರನ್ನು ಮಾತ್ರ ನಾನು ಕೊಲ್ಲಲಾರೆ.

ಕೃ. ಸರಸ್ವತಿ:— ಇವರನ್ನು ನೀನೇ ಕೊಲ್ಲುವೆ ಎಂಬ ನಿಶ್ಚಯ ವಿದೆಯೆ ?

ಅ. ಅರ್ಜುನ:— ಬ್ಲಾಟಿಂಗ ಬ್ರಹ್ಮನೆ, ಇದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ನನ್ನ ಪ್ರಕಾಶಕ, ನನ್ನ ಪ್ರಿಂಟರ್, ನನ್ನ ವಿಮರ್ಶಕ, ನನ್ನ ವಾಚಕ— ಇವರೆಲ್ಲರೂ ನನ್ನವರೇ. ಪ್ರಕಾಶಕನು ಕೊಟ್ಟ ಹಣ, ಪ್ರಿಂಟರನು ಕೊಟ್ಟ ಬಿಲ್ (Bill)ಉ ಎದ್ಯೆ,—ಇದರ ಭಾರ ಈಗಾಗಲೇ ಹೆಚ್ಚಿದೆ. ನಾನು ಮತ್ತೂ ಬರೆದರೆ ಇವರು ಸಾಯು-ವುದು ಖಂಡಿತ. ವಿಮರ್ಶಕ-ವಾಚಕರು ಈಗಾಗಲೆ ತುರಿಸಿದ ತಲೆ ಗಳಿಂದ ಇನ್ನು ಮಾಂಸ ಮತ್ತು ಜೀವ ಇವೆರಡೇ ಹೊರಬೀಳುವುದು ಉಳಿದಿದೆ; ಅದೂ ಖಂಡಿತ. ಆದರೂ ನನ್ನವರು— ಇವರೆಲ್ಲರೂ ನನ್ನವರೇ ! ಈ ಸ್ವಜನರನ್ನು ನೋಡಿ ನನ್ನ ಅವಯವಗಳು ಮುಗ್ಗುವುವು, ಬಾಯಿ ಬತ್ತುವುದು, ಮೈ ನಡುಗುವುದು, ಕಿಸೆ ತತ್ತರಿಸುವುದು, ಟಾಕು ತತ್ತರಿಸುವುದು, ಕಾಗದ ಕುಣಿಯುವುದು, ದೌತಿ ಮಣಿಯುವುದು.

ಕೃ. ಸರಸ್ವತಿ:— (ನಕ್ಕು) ಅಪಾರ್ಥಾ, ನೀನು ಅನಾರ್ಯರಂತೆ ವರ್ತಿಸುತ್ತಿರುವೆ !

ಅ. ಅರ್ಜುನ:— ಅಲ್ಲ, ಇದೇ ಆರ್ಯರ ಹಾದಿ. ಲೋಕ-ಮಾನ್ಯರೂ ಪಂಡಿತರೂ ದೇಶಗೌರವರೂ ಇವರೆಲ್ಲರೂ ಮನೆಯ ಸೆರೆಯಲ್ಲಿ ಬರೆಯದೆ ಸೆರೆಮನೆಯಲ್ಲಿ ಬರೆಯಲಿಲ್ಲವೆ ? ಅಕ್ಷರ-ಮಾಯಾವೀ, ನಾನೂ ಅದೇ ತರದ ಸಂನ್ಯಾಸವನ್ನು ಸ್ವೀಕರಿಸುವೆ—

ಕೃ. ಸರಸ್ವತಿ:— (ನಗೆಯಿಂದ) ನಿನ್ನ ಮುಖಲಕ್ಷಣದಲ್ಲಿ ಶವದ ಸಂನ್ಯಾಸದಂತಹ ಕಳೆ ಇದೆ !

ಅ. ಅರ್ಜುನ:— ನನ್ನ ಮುಖಲಕ್ಷಣವೇನೆ ಇರಲಿ, ಹೊರಗೆ ಅಶುಭ ಲಕ್ಷಣಗಳನ್ನು ನಾನು ಕಾಣುತ್ತಿರುವೆ. ಬರೆಯಲು ನಿರುಪಯೋಗಿಯಾದ ಎಡಗೈ ಹಾರುತ್ತಿದೆ ! ಅದೊ ! ಕಾಗೆಯ ಸದ್ದು ! ಎಡಕ್ಕೆ ಹಾರಿತು. !

ಕೃ. ಸರಸ್ವತಿ:— (ಜುಗುಪ್ಸೆಯಿಂದ) ನಿನಗೆ ನರಕದ ದಾರಿಯನ್ನು ತೋರಿಸುತ್ತಿದೆ ! ನೀನು ಕೇವಲ ಹೇಡಿತನದ್ದಲ್ಲದೆ ಪಾಪದ ವಿಚಾರಗಳಿಗೂ ಆಸ್ಪದವನ್ನು ಕೊಡುತ್ತಿರುವೆ. ಪಂಡುಕುಮಾರಾ ಪುಂಡ ವಿಚಾರಾ.

ಅ. ಅರ್ಜುನ:— (ಒಮ್ಮೆಲೆ ಎದ್ದು ತಲೆ ಹಿಡಿದುಕೊಂಡು ಆವೇಶದಿಂದ ಅತ್ತಿಂದಿತ್ತ ಅಡ್ಡಾಡುತ್ತ) ಪಾಪ ! ನರಕ ! ಆದರೆ ಈ ಸ್ಥಿತಿಯಲ್ಲಿ ನಾನು ಬರೆಯುವುದೆ ಪಾಪವಲ್ಲವೆ ? ಯಾರನ್ನು ತಪ್ಪಿಸಿ ನಾನು ಬರೆಯಬೇಕಾಗಿತ್ತೊ ಅವರೆಲ್ಲರೂ ಇಲ್ಲಿಯೆ ಇದಿರಾಗಿ ಬಂದು ನಿಂತಿದ್ದಾರೆ ! ನಾನು ಬರೆಯಲಾರೆ, ಬರೆದು ಇವರನ್ನು ಕೊಲ್ಲಲಾರೆ ! ಎಲೈ, ಮಸಿಸೂದನಾ, ಇವರನ್ನು ಕೊಂದು ಪಾಪವನ್ನು ಕಟ್ಟಿಕೊಳ್ಳಲಾರೆ. ಬೇಕಾದರೆ ಇವರೇ ಬರೆದು ನನ್ನನ್ನು ಕೊಲ್ಲಲಿ; ನಾನು ಮಾತ್ರ ಬರೆಯುವುದಿಲ್ಲ, ಇವರನ್ನು ಕೊಲ್ಲುವುದಿಲ್ಲ. ಇದೊ, ನನ್ನ ಲೆಕ್ಕಣಿಕೆ (ಎಂದು ಕಿವಿಗೆ ತೂಗಿದ ಟಾಕು-ಪೆನ್ಸಿಲುಗಳನ್ನು ಕೆಳಗೊಗೆದು ಬಂದು ಕುರ್ಚಿಯ ಮೇಲೆ ದೊಪ್ಪೆಂದು ಬಿದ್ದುಕೊಳ್ಳುವನು).

ಕೃ. ಸರಸ್ವತಿ:— (ಮುಂದೆ ಸರಿದು ಅವನನ್ನು ತಿರಸ್ಕಾರದಿಂದ ನೋಡಿ) ಛೀ ! ಅಪಾರ್ಥಾ ! ಅರ್ಜುನಾ ! ಇದೆಲ್ಲಿಯ ಹೇಡಿತನ ! ಏಳು, ಲೆಕ್ಕಣಿಕೆಯನ್ನು ಎತ್ತಿ ಹಿಡಿ.

ಅ. ಅರ್ಜುನ:— ಮಸಿಸೂದನಾ, ಪಿತಾಮಹನಂತಿದ್ದ ಈ ಪ್ರಕಾಶಕನನ್ನು, ಪ್ರೇಮದ ಗುರುವಿನಂತಿದ್ದ ಈ ಪ್ರಿಂಟರನನ್ನು ಹೇಗೆ ಕೊಲ್ಲಲಿ ?

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರ ಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಾಂಗವಾಯು, ಕೈ-ಕಾಲು-ಮೋರೆ ನಡುಗುವುದು,
ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳು
ನಿರಾಶರಾಗದೆ ಒಮ್ಮೆ ಉಪಯೋಗಿಸಿರಿ;
ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್
ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್ ಧಸವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಖಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಕೃ. ಸರಸ್ವತಿ:— ಬರೆಯುವುದು ನಿನ್ನ ಕೆಲಸ, ಸಾಯುವುದು ಅವರ ಕೆಲಸ. ಹೇ, ಸವ್ಯಸಾಚಿಯೆ, ಎಂತಹ ತತ್ತ್ವಗಳನ್ನು ಹೇಳುವೆ! ಎಲೈ, ಬಡಬಡಾಕೇಶನೆ, ನಾನಾಗಲಿ ನೀನಾಗಲಿ ಇವರಾಗಲಿ ಯಾರಾಗಲಿ ಹಿಂದೆ ಎಂದೂ ಬರೆದಿಲ್ಲ, ಮುಂದೆ ಎಂದೂ ಬರೆಯುವಂತಿಲ್ಲ ಎಂದು ತಿಳಿದಿರುವೆಯಾ! ಮನುಷ್ಯನಿಗೆ ಎಳೆ-ಬೆಳೆ-ಇಳಿ ವಯಸ್ಸುಗಳಿದ್ದಂತೆ ಬರೆಯುವುದು ಅಚ್ಚು ಹಾಕುವುದು ಮರೆಯುವುದು ಇದ್ದೇ ಇದೆ. ಬರೆಯುವುದೆಂಬುದು ಕೇವಲ ಮಾತ್ರಾಸ್ಪರ್ಶ. ಅದನ್ನು ಅಚ್ಚು ಹಾಕುವುದು ಎಂಬ ಹುಚ್ಚು ವಿಚಾರ ನಿನಗೇಕೆ? ಏಳು, ಜ್ಞಾನಿಯಾಗು. ಯಾರು ಇವನು ಅಚ್ಚು ಹಾಕುವನೆನ್ನುವರೊ ಯಾರು ಇವನನ್ನೆ ಅಚ್ಚು ಹಾಕುವುದೆಂದು ತಿಳಿಯುವರೊ ಅವರಿಬ್ಬರೂ ಅಜ್ಞರು. ಯಾರು ಇವನು ಓದುವನೆಂದು ತಿಳಿಯುವರೊ, ಯಾರು ಇವನನ್ನೆ ಓದುವುದು ಎಂದು ತಿಳಿಯುವರೊ ಅವರೂ ಅಜ್ಞರು. ಇವನು ಅಚ್ಛೇದ್ಯನು ಎಂದರೆ ಅಚ್ಚು ಗೆದ್ದವನು—

ಅ. ಅರ್ಜುನ:— (ಆಶ್ಚರ್ಯಚಕಿತದೃಷ್ಟಿಯಿಂದ ಕೃ. ಸ. ಯನ್ನು ನೋಡುತ್ತ) ವಾರ್ಷ್ಣೇಯಾ ಬರಿಸಮ್ಮೆಯಾ, ಬರೆಯಬೇಕು ಎನ್ನುವೆ, ಆದರೂ ಅಚ್ಚು ಹಾಕಬಾರದು ಎನ್ನುವೆ. ಅಚ್ಚು ಹಾಕಬಾರದೇ ಆಗಿದ್ದರೆ ನನ್ನನ್ನು ಬರೆಯುವ ಬವಣೆಯಲ್ಲಿ ಯಾಕೆ ನೂಕುವೆ?

ಕೃ. ಸರಸ್ವತಿ:—(ನಕ್ಕು) ಯಾಕೆ? ಯಾಕೆಂದರೆ ಬರೆಯದೆ ನಿನ್ನಿಂದ ಇರುವುದಾದೀತೆ?

ಅ. ಅರ್ಜುನ:— ನಾನು ಬರೆದುದಕ್ಕೆ ಇವರು ಸಾಯುವರಾದ್ದರಿಂದ ನಾನು ಬರೆಯುವುದೇ ಇಲ್ಲ.

ಕೃ. ಸರಸ್ವತಿ:— 'ಬರೆಯುವುದೇ ಇಲ್ಲ!' ಹಾಗೆನ್ನುವುದು ನಿನ್ನ ಅಹಂಕಾರ ಮಾತ್ರ. ಮಲಗುವಾಗ, ಮಾತನಾಡುವಾಗ, ಕುಳಿತಾಗ, ಕೂಸು ಅಳುವಾಗ, ಮನಸು ಬಂದಾಗ, ಮಡದಿ ಬೈದಾಗ—ಒಂದು ನಿಮಿಷವಾದರೂ ಬರೆಯದೆ ಜೀವಿಸುವುದಾದೀತೇ ನಿನ್ನಿಂದ? ಆದ್ದರಿಂದ ಏಳು, ನನ್ನ ಮಾತನ್ನು ಕೇಳು, ಕಾಗದವನ್ನು ಸೀಳು, ಸ್ವಧರ್ಮವನ್ನು ನೋಡಿಯಾದರೂ ಧೈರ್ಯ ತಾಳು. ಬರೆಯದೆ ಹೋದರೆ ಈ ನಿನ್ನ ಬಾಳು ಹಾಳು!

ಅ. ಅರ್ಜುನ:— ಓದುವವರೆಲ್ಲ ಸತ್ತುಹೋಗುವಂತಿದ್ದರೆ ಯಾರಿಗಾಗಿ ಬರೆಯುವುದು?

ಕೃ. ಸರಸ್ವತಿ:— ಲೋಕಸಂಗ್ರಹಕ್ಕಾಗಿ!

ಅ. ಅರ್ಜುನ:— (ಆಶ್ಚರ್ಯದಿಂದ) ರೊಕ್ಕಸಂಗ್ರಹಕ್ಕಾಗಿ! ಆದರೆ ಎಲ್ಲರೂ ಸತ್ತರೆ ರೊಕ್ಕವನ್ನು—

ಕೃ. ಸರಸ್ವತಿ:— (ನಡುವೆಯೆ) ರೊಕ್ಕಸಂಗ್ರಹ ಅಲ್ಲ, ಧನಂಜಯಾ, ಲೋಕಸಂಗ್ರಹ.

ಅ. ಅರ್ಜುನ:— (ತಿಳಿಯದೆ) ಎಂದರೆ?

ಕೃ. ಸರಸ್ವತಿ:—(ಬಿಡಿಸಿ ಹೇಳುತ್ತ) ಲೋ-ಕ-ಸಂ-ಗ-ರ-ಹ—ಎಂದರೆ ಲೋಕ—ಸಂಗ—ರಹಿತ ಎಂದರೆ ಯಾವ ಸಂಗವೂ ಇಲ್ಲದ್ದಕ್ಕಾಗಿ.

ಅ. ಅರ್ಜುನ:— (ಚಕಿತನಾಗಿ) ಬರೆಯುವವನಿಗೆ ಯಾರ ಸಂಗವೂ ಇಲ್ಲದಿರುವುದೆ?

ಕೃ. ಸರಸ್ವತಿ:— ಇಲ್ಲವಾದರೆ ಸ್ಥಿತಪ್ರಜ್ಞನಾಗುವುದು ಹೇಗೆ? ಜನರ ಸಹವಾಸದಿಂದ ಜ್ಞಾನ ಬದಲಾಯಿಸುತ್ತ ಹೋಗುವುದು. ಆದರೆ ಸ್ಥಿತಪ್ರಜ್ಞ ಎಂದರೆ ಬುದ್ಧಿ ನಿಂತಲ್ಲಿಯೇ ನಿಂತಿರಬೇಕಾಗುವುದು. ಅವನು ಸ್ಥಿತಪ್ರಜ್ಞ. ಆದ್ದರಿಂದ ನೀನೂ ಸ್ಥಿತಪ್ರಜ್ಞನಾಗು. ಏಳು, ನನ್ನನ್ನು ನೋಡು, ಲೆಕ್ಕಣಿಕೆಗೆ ಕೈ ನೀಡು, ಕುರ್ಚಿಯ ಮೇಲೆ ಕೂಡು, ಮತಿಗೆ ಮನಸ್ಸನ್ನು ಹೂಡು, ಸ್ಥಿತಪ್ರಜ್ಞನಾಗಿ ಮುಂದೂಡು. ಲೆಕ್ಕಣಿಕೆಯ ಕ್ಷತ್ರಿಯ ನೀನು. ಬರೆಯುವುದು ನಿನ್ನ ಧರ್ಮ. ಓದಲಿ ಬಿಡಲಿ, ಬರೆಯುವುದನ್ನು ಮಾತ್ರ ಬಿಡದಿರಲಿ.

ಅ. ಅರ್ಜುನ:— ಟಾಕೇಶವಾ, ನನಗೊಂದು ಸಂಶಯ ಬಂದಿದೆ (ಎದ್ದು ನಿಲ್ಲುವನು).

ಕೃ. ಸರಸ್ವತಿ:— ಬರೆಸತ್ತವಾ, ಕೇಳುವಂತಹನಾಗು.

ಅ. ಅರ್ಜುನ:— (ತಿರುಗಾಡುತ್ತ) ಬರೆಯಲೇ ಬೇಕು ಎಂದೆ, ಅಚ್ಚು ಹಾಕಬಾರದು ಎಂದೆ. ಮಾತಿನ ಮುರಾರೀ, ಇದರರ್ಥವೇನು?

ಕೃ. ಸರಸ್ವತಿ:— ಇದಕ್ಕೇ ಯೋಗವೆನ್ನುವರು. ಯೋಗಃ ಕರ್ಮಣಿ ಕೌಶಲಂ. ಈ ಕುಶಲವಾದ ಯೋಗವು ನಿರಂತರವೂ

ಉಪಯೋಗಕ್ಕೆ ಬರುವುದೆಂದು ಇದಕ್ಕೆ 'ನಿರುಪಯೋಗ' ಎಂದೂ ಹೆಸರಿದೆ.

ಅ. ಅರ್ಜುನ:— ಈ ಯೋಗಸಿದ್ಧಿಗೆ ಅಧಿಕಾರ ಯಾರಿಗಿದೆ ?

ಕೃ. ಸರಸ್ವತಿ:— ಅಪಾರ್ಥಾ, ನನ್ನ ಯೋಗದ ಆಶ್ರಯದಿಂದ ಪಾಪಿಷ್ಠರೂ ಪಾರಾಗುವರು. ಸ್ತ್ರೀಯರೂ, ವೈಶ್ಯರೂ, ಶೂದ್ರರೂ,' ಕಲಿತವರೂ, ಕಲಿಯದವರೂ—ಬೇಕಾದವರು ಈ ಯೋಗವನ್ನು ಸಾಧಿಸಿಕೊಳ್ಳಬಹುದು. ಯಾರು ಸಾಧಿಸಿಕೊಂಡರೂ ಕೊನೆಗೆ ನನಗೆಯೆ ಸಲ್ಲುವುದು ಅವರ ಬರೆಹ. ಇದನ್ನೆಲ್ಲ ಚೆನ್ನಾಗಿ ಅರಿತವನೆಂದರೆ, ನನ್ನ ಯೋಗದ ಭಕ್ತಶ್ರೇಷ್ಠನೆಂದರೆ ಸ್ಥಿತಪ್ರಜ್ಞನೊಬ್ಬನೆ.

ಅ. ಅರ್ಜುನ:— ಕಾಗದಕೇಶವಾ, ಸ್ಥಿತಪ್ರಜ್ಞನ ಭಾಷೆ ಯಾವುದು ?

ಕೃ. ಸರಸ್ವತಿ:— ಮಂದಿಗೆ ಎಂದಿಗೂ ತಿಳಿಯಲಾರದಂತಹದು. ಮಿಕ್ಕವರ ಹಗಲು ಇವನಿಗೆ ರಾತ್ರಿ, ಇವನ ಹಗಲು ಮಿಕ್ಕವರಿಗೆ ರಾತ್ರಿ.

ಅ. ಅರ್ಜುನ:— ಸ್ಥಿತಪ್ರಜ್ಞನು ಕೂಡುವುದೆಲ್ಲಿ? ನಡೆಯುವುದೆಂತು ?

ಕೃ. ಸರಸ್ವತಿ:— ಕೂಡುವುದು ಕುರ್ಚಿಯಲ್ಲಿ. ನಡೆಯುವುದು ಜಗತ್ತಿನಲ್ಲಿ. ಇವನು ನೋಡುವಾಗ ಜನರು ಮಲಗಿರುವರು; ಜನರು ನೋಡುವಾಗ ಇವನು ಮಲಗಿರುವನು. ಅದಕಾಗಿ ಒಬ್ಬರೊಬ್ಬರ ಪರಿಚಯವಿಲ್ಲ; ಪರಿವೆ ಇಲ್ಲ. ನೀನೂ ಸ್ಥಿತಪ್ರಜ್ಞನಾಗು. ಯಾರ ಪರಿಚಯ ಬೇಡ; ಯಾರ ಪರಿವೆ ಬೇಡ. ಕಣ್ಣುತೆರೆ, ಮತ್ತೂ-ಬರೆ.

ಅ. ಅರ್ಜುನ:— ಯಾರದೂ ಪರಿಚಯ ಇಲ್ಲವೆ ಪರಿವೆ ಬೇಕಿಲ್ಲ ಎಂದರೆ ಅದು ಸರಸ್ವತಿಯ ಸಂನ್ಯಾಸವಲ್ಲವೆ? ಹೀಗಿದ್ದೂ ಮತ್ತೆ ಬರೆ ಎನ್ನುವೆಯಲ್ಲ! ಹೇ ಕಾಗದಬ್ರಹ್ಮಾ, ಇವೆರಡರೊಳಗೆ ಯಾವುದು ಶ್ರೇಷ್ಠ ?

ಕೃ. ಸರಸ್ವತಿ:— ಕಾಗದವೂ ಶ್ರೇಷ್ಠ, ಬ್ರಹ್ಮವೂ ಶ್ರೇಷ್ಠ.

ಅ. ಅರ್ಜುನ:— ಅದಲ್ಲ; ಬರೆಯುವುದರಲ್ಲಿ ಮತ್ತು ಸರಸ್ವತಿಯ ಸಂನ್ಯಾಸದಲ್ಲಿ—ನಾನು ಕೇಳುವುದು.

ಕೃ. ಸರಸ್ವತಿ:— ಭೋ ಕೌರವಾ ಕಾಗದರೌರವಾ, ಬರೆಯುವುದರಲ್ಲಿ ಎರಡು ಮಾರ್ಗಗಳಿವೆ. (ಟೇಬಲಿನ ತುದಿಗೆ ಒಂದು ಕಾಲನ್ನು ನೆಲಕ್ಕೂರಿ ಕುಳಿತು)- ಎರಡು ಮಾರ್ಗಗಳಿವೆ. ಒಂದು ಜ್ಞಾನದಿಂದ ಬರೆಯುವುದು, ಇನ್ನೊಂದು ಬರೆದದ್ದೆ ಜ್ಞಾನವೆನ್ನುವುದು. ಇವೆರಡರಲ್ಲಿ ಯಾವ ಮಾರ್ಗವನ್ನನುಸರಿಸಿದರೂ ಜಗತ್ತಿನ ಪರಿವೆ ಪರಿಚಯಗಳು ಬೇಡ. ಹಾಗೆ ನೋಡಿದರೆ ಜ್ಞಾನಿಗೆ ಬರೆಯುವ ಆವಶ್ಯಕತೆಯೆ ಇಲ್ಲ. ಆದರೂ ನನ್ನನ್ನೆ ನೋಡು. ನಾನು ಬರೆಯದಿದ್ದರೆ ಜಗತ್ತು ನಡೆಯುತ್ತಿತ್ತೆ? ಅವರವರ ಗುಣ-ಕರ್ಮಗಳಿಗನುಸರಿಸಿ ಪ್ರಕಾಶಕ—ಪ್ರಿಂಟರ—ವಾಚಕ—ವಿಮರ್ಶಕ ಎಂದು ನಾಲ್ಕು ವರ್ಣಗಳನ್ನು ನಿರ್ಮಿಸಿದ್ದೇನೆ. ನಾನು ಬರೆಯದಿದ್ದರೆ ಇವುಗಳಲ್ಲಿ ವರ್ಣಸಂಕರವಾಗಿ ಲೋಕವೆ ಹಾಳಾಗುತ್ತಿತ್ತು. ಇಷ್ಟೇಕೆ? ಎಷ್ಟೋ ಸಲ ಇವರು ಬರೆಯುವುದೆ ಕರಿ-ಬಿಳಿ ವರ್ಣಸಂಕರವಾಗುವುದು. ಹೀಗೆ ವರ್ಣಸಂಕರವಾಗಿ ಲೋಕ ಅಧೋಗತಿಗಿಳಿದಾಗ ನಾನು ಅವತಾರ ತಾಳುವೆ– (ಎಂದು ಮೈಮುರಿದೆದ್ದು ಆಕಳಿಸುವನು.)

ಅ. ಅರ್ಜುನ:— (ಸಂಶಯದಿಂದ) ಈಗ ಸದ್ಯಕ್ಕೆ ನೀನು ತಾಳಿದ್ದು ಅವತಾರವೆ ಅಲ್ಲವೆ !

ಕೃ. ಸರಸ್ವತಿ:— (ಬೆನ್ನಿಗೆ ಕೈಕಟ್ಟಿಕೊಂಡು ತಿರುಗಾಡುತ್ತ) ಅಹುದು. ಈಗ ವರ್ಣಸಂಕರವಾಗಿದೆ. ವಾಚಕರು ಪ್ರಕಾಶಕರಾಗಿದ್ದಾರೆ, ವಿಮರ್ಶಕರು ಪ್ರಿಂಟರರಾಗಿದ್ದಾರೆ.

ಅ. ಅರ್ಜುನ:— ಹಾಗಾದರೆ, ಪೆನ್ಸಿಲ್‌ಪತಿಯೆ, ನೀನೇ ಬರೆಯುವುದನ್ನು ಬಿಟ್ಟು, ನನ್ನನ್ನೇಕೆ ಈ ಕಾರ್ಯಕ್ಕೆ ನೂಕುವೆ?

ಕೃ. ಸರಸ್ವತಿ:— (ತಿರುಗಿ ನಿಂತು ನಕ್ಕು) ನಾನು ಬರೆಯುವುದನ್ನು ಬಿಟ್ಟಿರುವೆನೆ? ಇದೊ-ನೋಡಿಲ್ಲಿ. (ಹೆಚ್ಚಾಗಿ ಬಾಯ್ದೆರೆದು ಆಕಳಿಸುವನು.)

ಅ. ಅರ್ಜುನ:— (ಸಂಶಯದಿಂದ) ಮಹಿಮಾಯಾವೀ, ಇದೇನು ಹೀಗೆ ಪೇಲಿಂದ ಮೇಲೆ ಆಕಳಿಸುವೆ ?

ಕೃ. ಸರಸ್ವತಿ:— (ಬೇಜಾರದಿಂದ) ಇದೇ ಉಪದೇಶವನ್ನು ವಿವಸ್ವಂತನಿಗೆ ಹೇಳಿರುವೆ, ಅವನು ಮನುವಿಗೆ ಹೇಳಿದನು, ಮನುವು

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ **ಚಮನ** ಟ್ರಾ.ಕ. ೯ ಅ.

CHAMAN

ಇದರಿಂದ ಹಸಿವೆಯಾಗಿ ಪಚನಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟ ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ, ಅಪಚನ, ಕೆಮ್ಮು, ದಮ್ಮು, ಕಫ ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಿದೆ.

ಸ್ಟಾರ್ ಕಂಪನಿ, ಬೆಳಗಾಂವ

ಇಕ್ಷ್ವಾಕುವಿಗೆ ಹೇಳಿದನು, ಇಕ್ಷ್ವಾಕು ಶ್ರೀರಂಗಬ್ರಹ್ಮನಿಗೆ ಹೇಳಿದನು, ಶ್ರೀರಂಗಬ್ರಹ್ಮನು ಮತ್ತೆ ನನಗೆ ಹೇಳಿದನು, ನಾನು ಮತ್ತೆ ನಿನಗೆ ಹೇಳುತ್ತಿರುವೆ. ಹೀಗೆ ಸಂತತವಾಗಿ ನಡೆದುದರಿಂದ ಬಾಯಿಗೆ ಬೇಜಾರವಾಗಿ ಆಕಳಿಕೆ ಬರುವುದು; ಆದರೂ, ಅನಾಥಾರ್, ನನ್ನ ಬಾಯಿಯೊಳಗೆ ನೋಡು (ಎಂದು ಮತ್ತೆ ಬಾಯ್ದೆರೆದು ನಿಲ್ಲುವನು).

[ಅ. ಅ. ನು ಹತ್ತಿರ ಬಂದು ದಿಟ್ಟಿಸಿ ನೋಡುವನು; ಬಾಯಿಯಲ್ಲಿ ಹಣಿಕಿಕ್ಕುವನು.]

ಕೃ. ಸರಸ್ವತಿ:— ನಿನಗೆ ಚೆನ್ನಾಗಿ ಕಾಣಲೆಂದು ದಿವ್ಯಚಕ್ಷುಗಳನ್ನು ಕೊಡುವೆ (ದುರ್ಬೀನನ್ನು ಕೊಡುವನು).

[ಅ. ಅ. ನು ದುರ್ಬೀನಿನ ಸಹಾಯದಿಂದ ನೋಡುತ್ತ, ಮೆಲ್ಲನೆ ತನ್ನ ಬಾಯ್ದೆರೆಯುತ್ತ, ಮೈ ನಡುಗುತ್ತ ಹಿಂದೆ ಸರಿಯುತ್ತಿರುವನು. ಯಾಕೆಂದರೆ ಇಷ್ಟರಲ್ಲಿ ಕಣ್ಣು ತುಂಬುವಷ್ಟು ದೂಳು ಏಳುವುದು. ಬೆಳಕು ಮಸಕಾಗುವುದು. ಅ. ಅ. ನು ಕಣ್ಣುತಿಕ್ಕಿಕೊಂಡು ತರುವಾಯ ಮೆಲ್ಲನೆ ಕಣ್ದೆರೆಯುತ್ತ ನೋಡಲಾಗಿ—ಕೃ. ಸರಸ್ವತಿ ಮಾಯವಾಗಿದ್ದಾನೆ! ಅವನು ನಿಂತಲ್ಲಿ ಈಗ ಭೂಮಿ-ಆಕಾಶಗಳನ್ನು ಮುಟ್ಟುವಂತಹ Shelf (ಶೆಲ್ಫ್) ನಿಂತಿದೆ. ಅದರ ಮೇಲೆ ಸಾಲುಸಾಲಾಗಿ, ಚಿತ್ರವಿಚಿತ್ರವಾಗಿ ಲಕ್ಷಗಟ್ಟಲೆಯಾಗಿ ಮಣ್ಣಿನ ಪುಸ್ತಕಗಳು ನಿಂತಿವೆ.]

ಅ. ಅರ್ಜುನ:— (ಹೆದರಿಕೆಯಿಂದ ಕೈಮುಗಿದು) ಭಗವಂತಾ, ಬರೆವವರ ಅಂತಾ. ಇದೇನು ಬರಿಯೆ ಬಾಯಿಯೊ ಮಹಾಪಾಯೆಯೊ! ನೋಡಿದರೆ ಹದಿನಾಲ್ಕು ಲೋಕಗಳು ಇಲ್ಲಿವೆ! ಅಥವಾ ಹದಿನಾಲ್ಕು ಲೋಕಗಳೆಲ್ಲ ಗ್ರಂಥಮಯವಾದಂತಿವೆ. ಅದೇನು ಗ್ರಂಥರಾಶಿ! ಕೆಲವು ತೆರೆದಿವೆ—ಕೆಲವು ಮುರಿದಿವೆ—ಕೆಲವು ಹರಿದಿವೆ! ಬರಿದಾದ ತಲೆ ಇದೆ, ಜೇಡಹುಳದ ಬಲೆ ಇದೆ! ಕನಸಿನ ಕವಿತೆ ಇದೆ—ಕಾಣದ ಕತೆ ಇದೆ—ನೋಡದ ನಾಟಕ ಇದೆ! ಇದೇನು? ಬೆಂಕಿಯೂ ಇದೆ! ಹೇ ಜಗನ್ನಿವಾಸಾ, ಶಿಲ್ಪಸಂನಿವೇಶಾ, ಈ ನಿನ್ನ ಉಗ್ರಸ್ವರೂಪ ಯಾವುದು? ಅರಿಂದಮಾ, ಬುದ್ಧಿಯ ಭ್ರಮಾ, ಯಾರು ನೀನು?

ಕೃ. ಸರಸ್ವತಿ:— (ದನಿ ಮಾತ್ರ ಕೇಳುವುದು) ಕಾಲ ಎಂಬ ಕಲಿ ನಾನು, ಕಾಗದದ ಗೆದ್ದಲಿ ನಾನು. ಎಲ್ಲರನ್ನೂ ನಾನು ಹೀಗೆ ಈ ಮೊದಲೇ ಕೊಂದಿದ್ದೇನೆ. ಸವ್ಯ-ಅಕ್ಷರನೆ, ನೀನು ಕೇವಲ ನಿಮಿತ್ತ ಮಾತ್ರನಾಗು.

ಅ. ಅರ್ಜುನ :— ಹೇ ಯಾದವಾ, ಎಲ್ಲರ ಕೊಂದವಾ, ಜಗತ್ತು ನಿನಗೆ ಹೆದರುವುದರಲ್ಲಿ ಆಶ್ಚರ್ಯವಿಲ್ಲ. ಭಕ್ತಿಯಿಂದ ಬೇಡುವೆ, ಭಯದಿಂದ ಕೈ ನೀಡುವೆ, ಮೈ ಜುಮ್ಮೆನಿಸುವ ಈ ಅನಂತಸ್ವರೂಪವನ್ನು ಬಿಟ್ಟು ಮತ್ತೆ ನಿನ್ನ ಮೊದಲಿನ ರೂಪವನ್ನು ತಾಳು!

ಕೃ. ಸರಸ್ವತಿ :— (ದನಿ ಮಾತ್ರ) ಈಗಾದರೂ ತಿಳಿಯಿತೆ ನಾನು ಯಾರೆಂಬುದು? ಬರೆದದ್ದನ್ನು ನನಗೆ ಅರ್ಪಿಸು, ನಿನಗೆ ಯಾವ ಪಾಪವೂ ತಟ್ಟುವುದಿಲ್ಲ. ನನ್ನನ್ನು ಭಜಿಸಿ ಯಾರ ಬಾಳೂ ಬರಿದಾಗಿಲ್ಲ.

ಅ. ಅರ್ಜುನ— ಆದಿಕವಿಯ ಆದಿ ನೀನು! ವಲ್ಮೀಕಿ ನೀನು! ಹೇ ಕವಿಗಳ ಕವಿಯೆ, ಮಾತಿನ ಸವಿಯೆ, ನಿನ್ನನ್ನು ಭಜಿಸುವವರು ಯಾರು? ಅವರಲ್ಲಿ ಯಾರು ಉತ್ತಮರು? ಹೇಳು, ನನ್ನನ್ನು ಅನುಗ್ರಹಿಸು (ಕೈ ಮುಗಿದು ಮೊಣಕಾಲೂರಿ ತಲೆಬಾಗುವನು).

ಕೃ. ಸರಸ್ವತಿ:— (ದನಿ ಮಾತ್ರ) ನಾಲ್ಕುತರದ ಭಕ್ತರು ನನಗೆ. ಆರ್ತ-ಜಿಜ್ಞಾಸು-ಅರ್ಥಾರ್ಥಿ-ಜ್ಞಾನಿ. ತಲೆ ಕೆಟ್ಟು ತಿಳಿಯದೆ ಬರೆವವ ಆರ್ತ, ಬರೆದು ತಲೆ ಕೆಡಿಸಿಕೊಳ್ಳುವವ ಜಿಜ್ಞಾಸು, ತಿಳಿದೂ ಕೆಟ್ಟು ಬರೆವವ ಅರ್ಥಾರ್ಥಿ, ಕೆಡುವವರೆಗೆ ಬರೆವವ ಜ್ಞಾನಿ.

ಅ. ಅರ್ಜುನ :— ಹೇ ಪುಸ್ತಕಪುರುಷೋತ್ತಮನೆ, ಈ ಗೂಢವನ್ನು ನನಗೆ ತಿಳುಹಿಸು.

ಕೃ. ಸರಸ್ವತಿ:— (ದನಿ ಮಾತ್ರ) ಅರ್ಥಾತ್ ತಲೆ ಕೆಟ್ಟು ಕಾವ್ಯ ಬರೆವವ ಆರ್ತ, ತನಗೆ ತಲೆ ಇದೆಯೊ ಇಲ್ಲವೆ ಎಂದು ತಿಳಿದುಕೊಳ್ಳಲು ಓದುವ ವಾಚಕ ಜಿಜ್ಞಾಸು, 'ವಾಹವ್ವಾ' ಎಂದು ಬರೆದು ವಿತ್ತಗಳಿಸ ಬಯಸುವ ವಿಮರ್ಶಕ ಅರ್ಥಾರ್ಥಿ,—ಇದನ್ನೆಲ್ಲ ಅರಿತೂ ಮತ್ತೆ ಬರೆವವ ಜ್ಞಾನಿ. ಇವರೆಲ್ಲರೂ ಕೊನೆಗೆ ನನ್ನನ್ನೆ ಸೇರುವವರಾದರೂ 'ಜ್ಞಾನಿ'ಯೆ ನನಗೆ ಉತ್ತಮ ಎನಿಸುವ.

ಅ. ಅರ್ಜುನ:— ಜ್ಞಾನಿಯೆ ಉತ್ತಮನೆ?

ಕೃ. ಸರಸ್ವತಿ:— (ದನಿ ಮಾತ್ರ) ಪಾಂಡವಾ ಪೆನ್ಸಿಲ್ ತಾಂಡವಾ, ನಿನಗೆ ಸಂಶಯ ಬೇಡ. ಜ್ಞಾನಿಯು ತನ್ನ ಸರ್ವಸ್ವವನ್ನು ನನಗೆ ಅರ್ಪಿಸುವುದರಿಂದ, ನನ್ನ ಈ ನಿಜವಾದ ಸ್ವರೂಪವನ್ನು ಜ್ಞಾನಿಯೆ ಅರಿತುದರಿಂದ ಅವನಿಗಿಂತ ಹೆಚ್ಚಾಗಿ ನನಗೆ ಯಾರೂ ಪ್ರಿಯರಿಲ್ಲ. ಅದಕಾಗಿ ನಿನ್ನ ಮನದ ಸಂಶಯವನ್ನು ಬಿಡು, ವಿಹಿತಕರ್ಮವನ್ನು ಮಾಡು. ಬರೆದುದನ್ನೆಲ್ಲ ನನಗೆ ಒಪ್ಪಿಸು, ಏನೂ ಉಳಿಯದಂತೆ ಜಪ್ಪಿಸು. ವಾಚಕರನ್ನು ಮರೆ, ವಿಮರ್ಶಕರನ್ನು ತೊರೆ, ಪ್ರಿಂಟರನಿಗಾಗಿ ಕಣ್ದೆರೆ, ಪ್ರಕಾಶಕನನ್ನು ಕರೆ. ಸ್ಮರಿಸು ನನ್ನನ್ನು, ಸುರಿಸು ನಿನ್ನ ಬರೆಹವನು.

ಅ. ಅರ್ಜುನ :— (ಆವೇಶದಿಂದ ಸಿಡಿದೆದ್ದು) ಹೇ ನಿರುಪಯೋಗೇಶ್ವರಾ ಬಗೆಹರಿಯದ ಬಾಯಿಸ್ವರಾ, ನನ್ನ ಮೋಹ ಕಂದಿತು, ಸ್ಮೃತಿ ಬಂದಿತು, ಹಿಂದಿನದು ಹೊಳೆಯಿತು, ಮುಂದಿನದಕ್ಕೆ ಎಳೆಯಿತು. ನೀನು ಹೇಳಿದಂತೆ ಬರೆಯುವೆ, ನಿನಗಾಗಿಯೆ ಬರೆಯುವೆ.

[ಎಂದು ಕುರ್ಚಿಯ ಮೇಲೆ ಕುಳಿತು ಪೆನ್ಸಿಲ್ ತುದಿಯನ್ನು ಬಾಯಲ್ಲಿ ಇಟ್ಟುಕೊಳ್ಳುವನು.]

(ತೆರೆ)

ಮುಗಿದುದು, ಮುಗಿದುದು, ಮುಗಿದುದು.

ಇತಿಹಾಸ ಜ್ಞಾನದಲ್ಲಿ ಭಾರತೀಯರ ಸ್ಥಾನ

★

ಶ್ರೀ. ವಿಂಜೀ ಅಣ್ಣಾರಾಯರು ಸೇಡಬಾಳ

"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"
(ಯಾಜ್ಞವಲ್ಕ್ಯ ಸ್ಮೃತಿ)

"ಇತಿಹಾಸ ಪ್ರದೀಪೇನ ಮೋಹಾವರಣ ಘಾತಿನಾ"
"ಲೋಕಗರ್ಭಗೃಹಂ ಕೃತ್ಸ್ನಂ ಯಥಾ ವತ್ಸಂ ಪ್ರಕಾಶಿತಂ"
(ಮಹಾಭಾರತ)

ಇತಿಹಾಸದ ಮಹತ್ತ್ವವನ್ನು ತಿಳುಹುವ ಹೆಗ್ಗುರುತುಗಳಿವು. ಹಿಂದುಳಿದ ನಾಡಿನ ನಾಡಿಗಳನ್ನು, ಹಿರಿಯರ ಹಿರಿಮೆಯ ಕತೆಗಳಿಂದ ಹುರಿದುಂಬಿಸುವ ಹುರುಳುನುಡಿಯೆಂದರೆಯೆ ಇತಿಹಾಸ! ನಮ್ಮ ಮೊದಲಿಗರ ಪರಾಕ್ರಮ, ರಾಜಚಾತುರ್ಯ, ಧರ್ಮಕ್ರಾಂತಿ, ವೈಭವ, ಸಂಸ್ಕೃತಿ, ಶೌರ್ಯ, ವೀರ್ಯ ಅಲ್ಲದೆ ಇನ್ನೂ ಎಷ್ಟೋ ಮಹತ್ತ್ವದ ಸಂಗತಿಗಳನ್ನು ಮುಂದಿಡುವ ಚಿತ್ರಪಟವೆಂದರೆಯೆ ಇತಿಹಾಸ. ಈ ಚಿತ್ರಪಟ ಯಾವ ಪ್ರದೇಶಕ್ಕೆ ಇಲ್ಲವೊ ಅದಕ್ಕೆ ಸರಿಯಾದ ಉಳಿಬಾಳೇ ಇರದು. ಯಾವ ನಾಡಿನ ಇತಿಹಾಸವು ಪ್ರಖರವಿದ್ದು ಜನರ ಸಂಕುಚಿತಭಾವನೆಯ ಸಂಕೋಲೆಯನ್ನು ಹರಿಯಲು ಹೊಣೆಹೊತ್ತಿರುವುದೋ ಆ ನಾಡೆ ಜಗತ್ತಿಗೆ ಆದರ್ಶ! ಪಾರತಂತ್ರ್ಯದಲ್ಲಿ ಹೊರಳಾಡುವ ರಾಷ್ಟ್ರಕ್ಕೆ, ಯಾವ ಬೆಲೆಯೂ ಇಲ್ಲದಂತೆ ಹರಿದು ಹಂಚಿಹೋದ ನಾಡಿಗೆ— ಇತಿಹಾಸಾಮೃತವು ದೊರೆತದ್ದಾದರೆ ಆ ರಾಷ್ಟ್ರವೂ ಆ ನಾಡೂ ತನ್ನ ಹೋದ ಹೊನ್ನನ್ನು ಹೊಂದಿ, ಜನರಿಗೆ ಅಚ್ಚುಮೆಚ್ಚಿನದಾಗಿ ಉಚ್ಚತರಗತಿಗೆ ಹೋಗದೆ ಇರದು. ಇತಿಹಾಸವು ಸ್ವಾತಂತ್ರ್ಯ-ಸಂಗ್ರಾಮದ ರಣದುಂದುಭಿಧ್ವಾನವು.

ನಾಡಿನ ಇತಿಹಾಸವನ್ನು ಉಜ್ವಲಗೊಳಿಸುವ ಹೊರೆಹೊತ್ತ ಐತಿಹಾಸಿಕ ಮಹಾತ್ಮರನ್ನು, ನಮ್ಮ ಆರ್ಯ ಸಂಸ್ಕೃತಿಯು ಪ್ರಾಚೀನಕಾಲದಿಂದಲೂ ನಮಗೆ ಒದಗಿಸುತ್ತ ಬಂದಿದೆ. ಆದರಿಂದಲೆ ತನ್ನ ಥಳಕುಬೆಳಕು ಆಚಂದ್ರಾರ್ಕ ಉಳಿಯುವಂತೆ ಹೆಣಗಿದೆ. ಮೊದಲಿನ ಆರ್ಯಘಟಕಗಳು ಇತಿಹಾಸದ ಪ್ರದೇಶವನ್ನು ಸಂಕುಚಿತವಾಗಿರಿಸದೆ ಅತ್ಯಂತ ವಿಸ್ತೃತವಾಗಿಟ್ಟಿವೆ. ಆದ್ದರಿಂದ ನಮ್ಮ ಧರ್ಮದ ಚಿತ್ರ— ನಮ್ಮ ಆರ್ಯಧರ್ಮದ ಉದಾತ್ತಚಿತ್ರ—ನಮ್ಮ ಪ್ರಾಚೀನ ಇತಿಹಾಸದಲ್ಲಿ ನೋಡಲಿಕ್ಕೆ ಹೇಗೆ ಸಿಗುವುದೋ ಹಾಗೆಯೆ ನಮ್ಮ ರಾಜಕೀಯ ಆಂದೋಲನಗಳ ರೋಮಾಂಚಕಾರಿಯಾದ ಶೌರ್ಯಪರಿಪೂರ್ಣ ಚಿತ್ರಪಟವೂ ವಿಶದವಾಗಿ ನೋಡಲಿಕ್ಕೆ ಸಿಕ್ಕುತ್ತದೆ. ನಮ್ಮ ಪ್ರಾಚೀನ ಇತಿಹಾಸವು ಸರ್ವಾಂಗ ಸಂಪೂರ್ಣವಾಗಿರುವುದರಿಂದಲೆ ಆರ್ಯ-ಸಂಸ್ಕೃತಿಯು ಜಗದ್ವಂದ್ಯವಾಗಿದೆ. ಅದರಂತೆಯೆ ನಮ್ಮಲ್ಲಿಯ ವಿಶ್ವಸ್ಮಾರಕುಟಮಣಿಗಳ ಪ್ರಭೆ ಸುತ್ತಲೂ ಇಡುಗಿದೆ. ಇತಿಹಾಸ-ಲೇಖನದಲ್ಲಿ ಇರಬೇಕಾದ ಸತ್ಯನಿಷ್ಠೆ, ನಿಃಪಕ್ಷಪಾತಿತ್ವ, ಸ್ಪಷ್ಟೋಕ್ತಿ, ಶೋಧಕಬುದ್ಧಿ ಮೊದಲಾದ ಸುಗುಣಗಳು ನಮ್ಮಲ್ಲಿ ಇದ್ದುವು. ಅಂತೆಯೆ ಭಾರತೀಯರಿಗೆ ದೊರೆಯಬೇಕನ್ನು ಶ್ರೇಯಸ್ಸು ದೊರೆತೇ ದೊರೆಯಿತು. ಅದಕ್ಕೆ ರಾಜತರಂಗಿಣಿಯ ಈ ಶ್ಲೋಕವೇ ಸಾಕ್ಷಿಯಾಗಿದೆ:—

"ಶ್ಲಾಘ್ಯಃ ಸ ಏವ ಗುಣವಾನ್ ರಾಗದ್ವೇಷ ವಿವರ್ಜಿತಃ"
"ಭೂತಾರ್ಥ ಕಥನೇ ಯಸ್ಯ ಸ್ಥೇಯಸ್ಯೇವ ಸರಸ್ವತೀ"

ಈ ರೀತಿಯ ಲೇಖನವ್ಯವಸಾಯದಲ್ಲಿ ನಮ್ಮ ವೇದವಿದ್ಯಾಮಹಿತರು ಪರಿಪೂರ್ಣ ಪರಿಣತಿಯನ್ನು ಹೊಂದಿದ್ದರಲ್ಲದೆ ಅದರ

★

ಸರಿಯಾದ ಇತಿಹಾಸ ಬರೆಯುವ ಪದ್ಧತಿ ನಮ್ಮ ಮೊದಲಿಗರಲ್ಲಿ ಇರಲಿಲ್ಲವೆಂದು ಅನೇಕರು—ನಮ್ಮ ಜನರೆ— ಮುಖವನ್ನು ಮುದುರಿಸುತ್ತಾರೆ. ಆದರೆ ಇತಿಹಾಸ ಲೇಖನದ ಬಗೆಗೆ ನಮ್ಮ ಪ್ರಾಚೀನ ವಾಙ್ಮಯದಲ್ಲಿ ಸಾಕಷ್ಟು ಚರ್ಚೆಯಾಗಿರುವುದು ಕಂಡುಬರುವುದಲ್ಲದೆ, ತನ್ನದಾಗಿಯೆ ಇರುವ ತಂತ್ರವೊಂದನ್ನು ಅದಕ್ಕಾಗಿ ರಚಿಸಿಕೊಂಡಿದ್ದಾರೆ.

★

ಅಂಗೋಪಾಂಗಗಳ ರಚನೆಯನ್ನು ಕೂಡ ಮಾಡಿದ್ದರೆಂಬುದು ಹಳೆಯ ಹೊತ್ತಗೆಗಳಿಂದ ಕಂಡುಬರುವುದು.

"ಅಥರ್ವಾಂಗಿರಸೋ ಬ್ರಾಹ್ಮಣಾನಿತಿಹಾಸಾನ್ಪುರಾಣಾನಿಕಲ್ಪಾನ್
ಗಾಥಾನಾರಾಶಂಸೀಃಪ್ರೀಣಾತಿ"
(ಆ. ಗೃ. ಸೂ. ೪)

ಇದರ ಮೇಲಿಂದ ನಮ್ಮ ಪೂರ್ವಿಕರು ಇತಿಹಾಸದಲ್ಲಿ ೧. ಗಾಥಾ ೨. ಪುರಾಣ ೩. ನಾರಾಶಂಸಿ ಮೊದಲಾದ ಅಂಗೋಪಾಂಗಗಳನ್ನು ಕಲ್ಪಿಸಿದ್ದರೆಂಬುದನ್ನು ಕಾಣಬಹುದು. '**ಇತಿಹಾಸ**' ಈ ಶಬ್ದವನ್ನು ವಿಂಗಡಿಸಿದರೆ '**ಇತಿ+ಹ+ಆಸ**' ಎಂದರೆ 'ಈ ಪ್ರಕಾರ ಆಯಿತು' ಎಂದು ಅರ್ಥವಾಗುತ್ತದೆ. ಅದಕ್ಕೆಂತಲೆ ಇತಿಹಾಸವು ಗತಕಾಲದ ಚಿತ್ರಪಟವೆಂದು ಹೇಳುವುದು.

ಇನ್ನು ಇತಿಹಾಸದ ಮೊದಲನೆಯ ಅಂಗವಾದ 'ಗಾಥಾ' ಎಂಬುದರ ಅರ್ಥವನ್ನು ಸ್ಪಷ್ಟೀಕರಿಸಿ ಹೇಳಬೇಕಾದರೆ ಈ ಪ್ರಕಾರ ಹೇಳಬಹುದು. ಒಂದು ವಿಶಿಷ್ಟ ಮತ್ತು ವಿಶಿಷ್ಟವಾದಂತಹ ಹಾಗೂ ಮನನೀಯವೂ, ಆಚರಣೀಯವೂ ಆದಂತಹ ಅದ್ಭುತ ಪ್ರಸಂಗದ ವರ್ಣನವು ಗಾಥಾ. ಎರಡನೆಯ ಅಂಗವಾದ 'ಪುರಾಣ'ವು ಪ್ರಾಚೀನ ಐತಿಹ್ಯದ ಆದರ್ಶಚಿತ್ರವಾಗಿರತಕ್ಕದ್ದು. ಆದರೆ ಅವುಗಳಲ್ಲಿಯ ವರ್ಣನೆಗಳು ಮೂಲಸ್ಥಿತಿಯಲ್ಲಿ ಉಳಿಯದೆ ಅನೇಕ ಹಾದಿಹೋಕರಿಂದ ಕಟ್ಟುಕಥೆಗಳಾಗಿ ಪರಿಣಮಿಸಿದುವು. ಆದರೂ ಒಂದು ಕಾಲದಲ್ಲಿ ಪುರಾಣವು, ಇತಿಹಾಸದ ವಿಸ್ತೀರ್ಣವಾದ ಕ್ಷಿತಿಜದ ಮೇಲೆಯೆ ಥಳಥಳಿಸುವ ಶುಕ್ರಗ್ರಹವಾಗಿತ್ತು ಎಂಬುದಕ್ಕೆ ಪುರಾಣದ ಈ ಲಕ್ಷಣವೇ ಆಧಾರವು.

"ಸರ್ಗಶ್ಚ ಪ್ರತಿ ಸರ್ಗಶ್ಚ ವಂಶೋ ಮನ್ವಂತರಾಣಿಚ |
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ ||

(ವಿಷ್ಣುಪುರಾಣ)

ಇನ್ನು ಇತಿಹಾಸದ ಮೂರನೆಯ ಅಂಗವಾದ 'ನಾರಾಶಂಸಿ'ಯ ಬಗೆಗೆ ಈ ಪ್ರಕಾರ ಹೇಳಬಹುದು. 'ಯಾವನಾದರೊಬ್ಬ ಐತಿಹಾಸಿಕ ಪ್ರಸಿದ್ಧ ಪುರುಷನ ಉದಾತ್ತಚರಿತ್ರೆಗೆ ವೈಯಕ್ತಿಕ ಮಹಾತ್ಮ್ಯವನ್ನು ಅಚ್ಚಳಿಯದೆ ಇಟ್ಟು ಬರೆದದ್ದು ನಾರಾಶಂಸಿಯು. ಇದರಲ್ಲಿ ಒಮ್ಮೊಮ್ಮೆ ವಂಶಾವಳಿಯ ಪ್ರಕಥನವೂ ಬರುವುದು. ಇವೆಲ್ಲ ಅಂಗೋಪಾಂಗಗಳು ಒಂದಕ್ಕಿಂತಲೂ ಒಂದು ಸಂಕುಚಿತವೂ, ಮರ್ಯಾದಿತವೂ ಆಗಿವೆಯಾದರೂ ಇತಿಹಾಸದ ಕಕ್ಷೆಯಲ್ಲಿಯೆ ತಿರುಗುತ್ತವೆಯೆಂಬುದನ್ನು ಮರೆಯಕೂಡದು.

ಕ್ರಿ. ಶ. ಪೂ. ೪೨೦ ರಲ್ಲಿ ಆಗಿ ಹೋದ 'ಹಿರೋಡೊಟಸ್' ಎಂಬವನ ನಂತರ ಕೆಲವು ದಿವಸಗಳಲ್ಲಿಯೆ ಹೆಸರಿಗೆ ಬಂದ 'ಥುಸೀಡಾಯಡೀಜ್' ಮೊದಲಾದ ಪಾಶ್ಚಾತ್ಯ ಸುಪ್ರಸಿದ್ಧ ಇತಿಹಾಸಕಾರರು—'ಇತಿಹಾಸದ ಸ್ವರೂಪವು ನಮ್ಮ ಸಾಮಾನ್ಯ ಕಲ್ಪನೆಗಿಂತ ಅತಿ ವಿಸ್ತೃತವಾದದ್ದು. ಅದರಲ್ಲಿ ಜಗತ್ತಿನೊಳಗಿನ ಎಲ್ಲ ಘಟನೆಗಳ ಸಮಾವೇಶವಾಗುವುದು' ಎಂದು ಪ್ರತಿಪಾದಿಸಿರುವರು. ಆದರೆ ಈ ತಿರುಳನ್ನು ಮೊದಲು ತಿಳಿದವರು ನಮ್ಮ ಭಾರತೀಯರು. ಈ ನುಡಿಗೆ ಶುಕ್ರನೀತಿಯು ಹೀಗೆಂದು ಪುಷ್ಟಿಯನ್ನು ಕೊಡುತ್ತದೆ.

"ಪ್ರಾಕ್‌ವೃತ್ತ ಕಥನಂಚೈಕರಾಜಕೃತ್ಯಮಿಷಾದಿತಃ !
ಯಸ್ಮಿನ್ ಸ ಇತಿಹಾಸಃ ಸ್ಯಾತ್ ಪುರಾ ವೃತ್ತಃ ಸ ಏವಹಿ"

"ಒಬ್ಬ ಸುಪ್ರಸಿದ್ಧ ರಾಜನ ಇತಿಹಾಸ ಹೇಳುವ ನಿಮಿತ್ತದಿಂದ ತತ್ಕಾಲದ ಮತ್ತು ಪೂರ್ವಕಾಲದ ಅನೇಕ ಕ್ಷೇತ್ರದೊಳಗಿನ ಘಟನೆಗಳನ್ನು ಸಂದರ್ಭಾನುಸಾರ ಪ್ರತಿಪಾದಿಸುವುದೆ ಇತಿಹಾಸ" ಈ ಪ್ರಕಾರ ನಮ್ಮ ವೇದ ವಿದ್ಯಾಮಹಿತರು ಇತಿಹಾಸದ ವ್ಯಾಪಕ ವ್ಯಾಖ್ಯೆಯನ್ನು ನಿರ್ದಿಷ್ಟಪಡಿಸಿದ್ದರು. ಇದರ ಸತ್ಯತೆಯ ಸಲುವಾಗಿ ಮಹಾಭಾರತವೇ ಮೊದಲಾದ ಗ್ರಂಥಗಳನ್ನು ನೋಡಬಹುದು.

ಇನ್ನು ಇತಿಹಾಸವನ್ನು ಕಾಲಮಾನದಿಂದ ಮೂರು ಭಾಗಗಳನ್ನಾಗಿ ಮಾಡಬಹುದು. (೧) ಪ್ರಾಚೀನ ಇತಿಹಾಸ. ಇದು ಋಷಿಗಳ ವಚನಗಳು, ಪುರಾಣದೊಳಗಿನ ಬರೆಹಗಳು ಇವುಗಳಿಂದ ಕೂಡಿದ್ದು; ಆದರೆ ಇಂತಹ ಬರೆಹಗಳಲ್ಲಿ ಈಗ ನಮಗೆ ಬಿಚ್ಚಲಾರದ ಎಷ್ಟೋ ಕಗ್ಗಂಟುಗಳಿರುವುವು. ಅವುಗಳನ್ನು ಬಿಚ್ಚಿದಾಗ ನಮ್ಮ ಪೂರ್ವಿಕರು ಅವುಗಳಲ್ಲಿ ಅಡುಗಿಸಿಟ್ಟ ಹೆಗ್ಗುರುತುಗಳು ಹೊರಬೀಳುವವು. ನಮ್ಮ ಪೂರ್ವಾಚಾರ್ಯರು ಅತಿಸತ್ಯ, ಅತ್ಯುದಾತ್ತ ಸಂಗತಿಗಳನ್ನು ಹೇಳುವಾಗ ಇಂತಹ ಕಗ್ಗಂಟು ಹೆಣೆಯುವುದರಲ್ಲಿ ಬಹಳ ಜಾಣರು. ಆದರೆ ಈ ಕಗ್ಗಂಟಿನಲ್ಲಿ ಒಂದು ಕೊರತೆಯೂ ಉಂಟು. ಈ ಕಗ್ಗಂಟಿನ ತೊಡಕುಬಲೆಯನ್ನು ಅರಿತವನೇ ಅರಿತ. ಅರಿತವರ ಪರಂಪರೆಯು ಅಳಿಯುತ್ತಹೋದಂತೆ ಆ ಲೇಖನವು ನಿರರ್ಥಕ, ಅರ್ಥವಿಹೀನ, ಕಾಡಿನೊಳಗಿನ ಕೋತಿಗಳ ಬರೆಹ ಎನಿಸುವುದು. ಇನ್ನು ಎರಡನೆಯದಾದ ಮಧ್ಯಕಾಲದ ಇತಿಹಾಸ. ಇದು ಶಿಲಾಲೇಖ, ತಾಮ್ರಪಟ, ಜಯಸ್ತಂಭ, ಗುಡ್ಡದೊಳಗಿನ ಕೊರೆದ ಗುಡಿ, ಸ್ಥಳಕಾಲಗಳ ಸೂಕ್ಷ್ಮನಿರೀಕ್ಷಣೆ ಇವೇ ಮೊದಲಾದ ಪ್ರಬಲ ಆಧಾರಗಳಿಂದ ಕೂಡಿದುದಾಗಿದೆ. ಕೊನೆಯದಾದ ಅರ್ವಾಚೀನ ಇತಿಹಾಸವೆಂದರೆ ಬಖರು, ತವಾರೀಖು, ಆತ್ಮವೃತ್ತ ಇವುಗಳಿಂದ ಕೂಡಿರುವುದು. ಈ ಪ್ರಕಾರ ಪ್ರಾಚೀನಾರ್ವಾಚೀನ ಇತಿಹಾಸಗಳಲ್ಲಿ ಸ್ಥಿತ್ಯಂತರಗಳಿವೆ.

ಇನ್ನು ಕಡೆಯ ಮಾತೆಂದರೆ ನಮ್ಮ ಪೂರ್ವಜರ ಇತಿಹಾಸದಲ್ಲಿ ಮಾನವನ ಬುದ್ಧಿಗೆ ನಿಲುಕದಂತಹ, ಚರ್ಮಚಕ್ಷುವಿಗೆ ಗೋಚರಿಸದಂತಹ, ಎಷ್ಟೋ ತತ್ತ್ವಗಳೂ, ಕ್ಷೇತ್ರಗಳ ವರ್ಣನೆಗಳೂ ಅಡಕವಾಗಿವೆ. ಇತ್ತೀಚಿನ ಪಾಶ್ಚಿಮಾತ್ಯ ತತ್ತ್ವವೇತ್ತರು, ಭೂಮಿಯು ವಾಯು-ಜಲ-ಘನ ರೂಪಗಳನ್ನು ಹೊಂದಿತೆಂದುದಕ್ಕೆ ವಿಕಾಸತತ್ತ್ವದ ಆಧಾರ ಹುಡುಕಿ ಹೇಳಿದರಲ್ಲವೆ ? ಅದನ್ನು ನಮ್ಮ ನಾಡಿಗರು ಎಂದೋ ಗೊತ್ತು ಹಿಡಿದಿದ್ದರೆಂಬುದು ಪುರಾಣದೊಳಗಿನ ಈ ಕಗ್ಗಂಟನ್ನು ಬಿಚ್ಚಿದಾಗ ಹೊರಬೀಳುವುದು. "ಹಂಸಃ ಕೂರ್ಮ ವರಾಹೋ ನಾರಸಿಂಹಶ್ಚ" ಈ ಕ್ರಮವೂ ಪಾಶ್ಚಿಮಾತ್ಯರ ವಿಚಾರಸರಣಿಯನ್ನೇ ಸೂಚಿಸುತ್ತದೆಂಬುದು ಸ್ವಲ್ಪ ವಿಚಾರಿಸಿದರೆ ತಿಳಿಯುವುದು. ನಾವು ತಿಳಿಸುವ ತಿರುಳು ಪ್ರಾಚೀನ ಕಾಲದಿಂದಲೂ ಭಾರತೀಯರು ಇತಿಹಾಸ ಸಾಮ್ರಾಜ್ಯದ ಸಮ್ರಾಟರಿದ್ದರೆಂಬುದು. ಇದಕ್ಕೆ ಪಾಶ್ಚಿಮಾತ್ಯ ವಿದ್ವಾಂಸರೂ ಒಪ್ಪಿರುವರೆಂದು ಸಾಕ್ಷಿಹೇಳುವ ಸಾಹಸವು ಬೇಕಿಲ್ಲವೆಂಬುದು ನನ್ನ ಮತವು.

ಕನ್ನಡಿಯೆದುರು ಕುಳಿತು ಬಾಚಿ ಮುಡಿ ಕಟ್ಟಿಕೊಂಡಳು.

ಮುಯ್ಯಿಗೆ ಮುಯ್ಯಿ

(ಸಣ್ಣ ಕತೆ)

★

ಶ್ರೀ. "ದಯಾನಾಥ"

★

ದಾಂಪತ್ಯದ ಪ್ರೀತಿಜೀವನದಲ್ಲಿಯೂ ಮುಯ್ಗೆ ಮುಯ್ಯನ್ನು ಹೇಗೆ ತೀರಿಸಲು ಬರುತ್ತದೆ? ಗೋಪು ಶಾಂತಿಯ ಮನಸ್ಸಿಗೆ ಮುಳ್ಳುಚುಚ್ಚಿದ. ಶಾಂತಾ ಗೋಪುವಿನ ಹೃದಯಕ್ಕೆ ಹೊಯ್ದಾಟದ ರೋಗವನ್ನೇ ಹಚ್ಚಿದಳು. ಇಂತಹ ಮಸಾಲೆ ಬಾಳಿನಲ್ಲಿ ಇಲ್ಲದಿದ್ದರೆ ಅದರಿಂದ ಮಾನವರಿಗೆ ಹೊಸ ಹೊಸ ರುಚಿ ಸಿಕ್ಕುವುದೆಂತು?

★

"ಏನೂಂದ್ರೆ ಈವೊತ್ತು ಖಂಡಿತ ಕರೆದುಕೊಂಡು ಹೋಗಬೇಕು."

"ಎಲ್ಲಿಗೆ? ......" ಎಂದು ರಾಗವೆಳೆಯುತ್ತಲೇ ಗೋಪು ಕೇಳಿದ.

"ಇನ್ನು ಹೀಗೆಲ್ಲಾ ಹೇಳಿದರೆ ಕೋಪ ಬರುತ್ತೆ ನೋಡಿ" ಎಂದು ಮುಗುಳ್ನಗೆಯ ಸಹಿತ ಸಿಡುಕಿನ ರೀತಿಯಲ್ಲಿ ಪತಿಯ ಕಣ್ಣುಗಳನ್ನೀಕ್ಷಿಸುತ್ತಾ ಶಾಂತಾ ಹೇಳಿದಳು.

ಗೋಪುವಿಗೆ ಗೊತ್ತು ಅವಳ ಪ್ರಕೃತಿ. ಆದರೂ ಅವಳ ತಾಳ್ಮೆಯನ್ನು ಪರೀಕ್ಷಿಸಲು "ನೀನು ಹೇಳಿದ್ದು ನನಗೆ ಗೊತ್ತಾಗಲಿಲ್ಲ. ನಿಶ್ಚಯವಾಗಿಯೂ!" ಎಂದ.

"ಇನ್ನು ರೇಗಿದರೆ ......" ಎಂದಷ್ಟಕ್ಕೆ ಶಾಂತಾ ನಿಲ್ಲಿಸಿದಳು.

"ಗೊತ್ತಾಗಲಿಲ್ಲಾ ಅಂದರೆ ಏನೋ ರೇಗತ್ತಂತೆ!" ಎಂದು ಹೇಳುತ್ತ ಗೋಪು ಹಸನ್ಮುಖನಾದ.

"ದೇವರಾಣೆ?" ಶಾಂತಳ ಧ್ವನಿಯು ಬದಲಾಯಿಸಿರಲಿಲ್ಲ.

ಗೋಪುವು ಸ್ವಲ್ಪ ಹೊತ್ತು ಸುಮ್ಮನಾದ. ಆ ಮೇಲೆ ತಡೆಯಲಾರದೆ ನಗೆಯು ಹೊರಬಿತ್ತು.

"ಈವೊತ್ತು ಬೇಡ" ಎಂದು ಹೇಳಿ ಅಷ್ಟಕ್ಕೇ ಸುಮ್ಮನಾದ.

ಶಾಂತಳ ಕೋಪವು ಸ್ವಲ್ಪ ಇಳಿದು, "ಮತ್ತೆ ಇನ್ಯಾವತ್ತು? ಪ್ರತಿಸಲವೂ ಹೀಗೆಯೇ ಹೇಳುತ್ತಿದ್ದೀರಿ. ಅಂಥಾದ್ದು ಏನು ಈವೊತ್ತು ಕೊಳ್ಳೋಗೋದು?"

"ಇಲ್ಲ. ಈವೊತ್ತಾಗೋಲ್ಲ. ನಾನು ಟೀ ಪಾರ್ಟಿಗೆ ಹೋಗಬೇಕಾಗಿದೆ."

"ಹಾಗಾದರೆ ನಾಳೆ ಖಂಡಿತ ಕರೆದುಕೊಂಡು ಹೋಗಬೇಕು, ಹ್ಯಾಗೂ ಮ್ಯಾಟಿನಿ ಆಟವಿದೆ."

ಗೋಪು 'ಬೀಸೊ ದೊಣ್ಣೆ ತಪ್ಪಿದರೆ ಸಾವಿರ ವರುಷ ಆಯುಸ್ಸು' ಎಂದುಕೊಂಡು, ಸ್ವಲ್ಪ ಹೊತ್ತು ಯೋಚನೆ ಮಾಡಿ ಮನಸ್ಸಿಗೇನೊ ಹೊಳೆಯಲು "ಆಗಲಿ ಶಾಂತಾ, ನಾಳೆ ಖಂಡಿತ ಕರೆದುಕೊಂಡು ಹೋಗುತ್ತೇನೆ" ಎಂದು ಅವಳ ಕೋಪವನ್ನು ಶಮನ ಮಾಡಿದ.

* * *

ಗೋಪು ಮತ್ತು ಶಾಂತಾ ಇವರ ಪರಿಚಯ ಕೊಂಚ ಮಾಡಿಕೊಡೋಣ. ಗೋಪುವಿನ ತಂದೆ ದಾರಿದ್ರ್ಯದಲ್ಲಿ ಹುಟ್ಟಿ ದಾರಿದ್ರ್ಯದಲ್ಲಿ ಬೆಳೆದು, ಮುಂದೆ ಇನ್ನೇನು ತಮ್ಮ ಮಗನು ದೊಡ್ಡವನಾಗಿ

ಬಾಳುವುದನ್ನು ನೋಡಬೇಕೆನ್ನುವಾಗಲೇ ಪರಂಧಾಮನ್ನೈದಿದರು. ಗೋಪುವು ತನ್ನ ತಂದೆಯ ಹತ್ತಿರವಿರುವವರೆಗೂ ತನ್ನ ಜವಾಬ್ದಾರಿ ತನಗೆ ತೋರಿರಲಿಲ್ಲ. ಆ ಊರಿನಲ್ಲಿ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಗಳ ಮಟ್ಟಿಗೆ ಇದ್ದುದರಿಂದ, ಅಲ್ಲಿಯ ವಿದ್ಯಾಭ್ಯಾಸವು ಪೂರಯಿಸಿದ ಮೇಲೆ, ಇಪ್ಪತ್ತು ಮೈಲಿ ದೂರದಲ್ಲಿದ್ದ ಬೆಂಗಳೂರಿಗೇ ಬಂದು ಸೇರಿದನು. ಇಲ್ಲಿಯಾದರೂ ತನಗೆ ಎರಡು ಹೊತ್ತು ಸುಖಭೋಜನವನ್ನು ಹಾಕುವವರಾರು ? ಇದೀಗ ಅವನಲ್ಲಿ ಪ್ರಪಂಚದ ವ್ಯವಹಾರಜ್ಞಾನವು ಮೂಡಿತು. ಇನ್ನು ತಾನು ಜೀವನಮಾರ್ಗವನ್ನು ಹುಡುಕಬೇಕೆಂದು ಕಾತರನಾದನು. ಆದರೂ ಬಾಲಕನು ಬಾಲಕನೇ. ಸಾಲದ್ದಕ್ಕೆ ಅವನಿಗೆ ಬೆಂಗಳೂರು ಹೊಸದು. 'ಎಲ್ಲಿಗೆ ಹೋಗಬೇಕು ? ಏನು ಮಾಡಬೇಕು?' ಇವು ಯಾವುವೂ ಅವನಿಗೆ ಮೊದಲು ತೋಚಲಿಲ್ಲ. ಇವನ ತಂದೆಯೇ ಕೆಲವು ದೊಡ್ಡ ಮನುಷ್ಯರನ್ನು ಕಂಡು, ತನ್ನ ಮಗನಿಗೆ ವಾರಕ್ಕೆ ಗೊತ್ತುಮಾಡಿದರು. ಆದರೆ ಶುಕ್ರವಾರ ಮತ್ತು ಭಾನುವಾರಗಳೆರಡು ದಿನ ಗೊತ್ತಾಗಿರಲಿಲ್ಲ. ಹಾಗೆಯೇ ಗೋಪು ಒಂದು ವರುಷ ಕಳೆದ. ಇನ್ನೊಂದು ವರುಷ ಮೊದಲಿನಷ್ಟು ತಾಪತ್ರಯವಿರಲಿಲ್ಲ. ಅವನ ಹೈಸ್ಕೂಲಿನ ಮೂರನೆಯ ವರ್ಷದ ಓದೇ ಮುಖ್ಯವಾದುದು. ಯಾಕೆಂದರೆ ಈ ಸಲವೇ ಅವನ ಹಳೆಯ ಹೆಡ್‌ಮಾಸ್ಟರಿಗೆ ವರ್ಗವಾಗಿ ಹೊಸ ಹೆಡ್‌ಮಾಸ್ಟರು ಬಂದರು. ಅವರಿಗೆ ಮಕ್ಕಳಿಲ್ಲದಿದ್ದುದರಿಂದ, ಹೋದ ಕಡೆಯಲ್ಲೆಲ್ಲಾ ವಿದ್ಯಾರ್ಥಿಗಳನ್ನಿಟ್ಟುಕೊಳ್ಳುವ ಪದ್ಧತಿ ಅವರದು. ಹಾಗೆಯೇ ಇಲ್ಲೂ ಗೋಪುವನ್ನಿಟ್ಟುಕೊಂಡಿದ್ದರು. ಆ ವರುಷವೇ ಗೋಪುವು S. S. L. C. ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದ. ಆದರೆ ಬಡವರಿಗೆಂದಿಗೂ ಸುಖವಿಲ್ಲ. ಈ ವಿಚಾರ ತಿಳಿಯುವುದಕ್ಕೆ ಎಂಟು ದಿನಗಳ ಹಿಂದೆಯೆ, ಇನ್ನೂ ಗೋಪುವನ್ನು ಪರದೇಶಿಯನ್ನಾಗಿ ಮಾಡದೆ ಇದ್ದ ಅವನ ತಂದೆಯೂ ಇಹಲೋಕದ ವ್ಯಾಪಾರವನ್ನು ತ್ಯಜಿಸಿದ್ದರು. ಗೋಪುವಿಗೆ ದಿಕ್ಕೇ ತೋಚಲಿಲ್ಲ. ಇದು ನಡೆದ ಮೇಲೆ ಹೆಡ್‌ಮಾಸ್ಟರು ಅವನನ್ನು ಮಗನ ಹಾಗೆ ನೋಡಿಕೊಂಡು ಮನೆಯಲ್ಲೆ ಇಟ್ಟುಕೊಂಡರು. ನೋಡಿದಿರಾ 'ದೇವರ ಮಾಯೆ' 'ವಿಧಿನಿಯಮ' ಮತ್ತು ಇನ್ನೂ ಏನೇನೆಂದು ಕೂಗುವುದು ಇದನ್ನಲ್ಲವೇ. ಪ್ರತಿಯೊಂದು ದೇಶಕ್ಕೂ, ಜನಾಂಗಕ್ಕೂ ಏರಿಳಿತಗಳಿರುವ ಹಾಗೆ ಪ್ರತಿಯೊಬ್ಬ ಮನುಷ್ಯನ ಜೀವನಚರಿತ್ರೆಯಲ್ಲೂ ಏರು-ತಗ್ಗುಗಳಿವೆ. ದೃಷ್ಟಾಂತಕ್ಕೆ ಗೋಪುವಿನ ಜೀವನವೇ ಸಾಲದೆ ? ಅವನ ತಂದೆ ಸತ್ತಾಗ ಎಲ್ಲರಿಗೂ 'ಗೋಪುವಿನ ಕಥೆಯು ಮುಗಿಯಿತು' ಎನ್ನಿಸಿರಬಹುದು. ಆದರೆ ಈಗ ಅವನೇ ದೇವರ ಸಹಾಯದಿಂದ ಹತ್ತು ಜನಗಳಿಗೆ ಅನ್ನ ಹಾಕುವಷ್ಟು ಶಕ್ತಿಯುಳ್ಳವನಾಗಿದ್ದಾನೆ.

ಇತ್ತ ಗೋಪುವು ಇಂಟರ್‌ಮೀಡಿಯೆಟ್ ತರಗತಿಯಲ್ಲೂ ಪ್ರಶಸ್ತಿಯಿಂದ ತೇರ್ಗಡೆಹೊಂದಿ ಬಿ. ಎಸ್‌ಸಿ. (Hons.) ಓದಲು ಉದ್ಯುಕ್ತನಾದ. ಇದರ ಮಧ್ಯದಲ್ಲಿ ಹೆಡ್‌ಮಾಸ್ಟರ ತಮ್ಮಂದಿರಾದ ಅಸಿಸ್ಟೆಂಟ್ ಎಂಜಿನಿಯರ್ ಮಾಧವರಾಯರು ಬೆಂಗಳೂರಿಗೆ ವರ್ಗಾಯಿಸಿದುದರಿಂದ ಅದೇ ಮನೆಯಲ್ಲೇ ವಾಸಿಸುತ್ತಿದ್ದರು. ಇವರ ಒಬ್ಬಳೇ ಮಗಳಾದ ಶಾಂತೆಯು ತಕ್ಕಮಟ್ಟಿಗೆ ರೂಪವತಿಯಾಗಿಯೂ ವಿದ್ಯಾವತಿಯಾಗಿಯೂ ಇದ್ದಳು. ಗೋಪುವು ಡಿಗ್ರಿಯನ್ನು ತೆಗೆಯುವ ಹೊತ್ತಿಗೆ ಶಾಂತೆಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ಯಾಸಾದಳು. ಇಷ್ಟು ಓದಿದ ಹುಡುಗನಿಗೆ ಇನ್ನು ಶಾಂತಳು ದೊರೆತದ್ದೇನೂ ಆಶ್ಚರ್ಯವಲ್ಲ. ಆದರೆ ಹೆಡ್‌ಮಾಸ್ಟರು ಮತ್ತು ಅವರ ಪತ್ನಿಯವರು ಗೋಪುವಿನ ವಿದ್ಯಾರ್ಜನೆಯಲ್ಲಿ ಆಸಕ್ತಿಗೊಂಡಿದ್ದುದು ಅಭಿನಂದನೀಯವಾದ ಸಂಗತಿಯೆಸರಿ.

* * *

ಗೋಪುವು ಈಗ ಕಾಲೇಜಿನಲ್ಲಿ ಲೆಕ್ಚರರ್ (ಉಪನ್ಯಾಸಕ) ಆಗಿದ್ದಾನೆ. ಅವನ ಹಿಂದಿನ ಜೀವನವು ಅವನಿಗೆ ಸ್ವಪ್ನದ ಹಾಗೆ ಇತ್ತು. ಆದರೂ ಮಾತ್ರ ಅವನಿಗೆ ಸಾಸುವೆಕಾಳಿನಷ್ಟೂ ಮದವೆಂಬುದಿರಲಿಲ್ಲ. ಬಡ ವಿದ್ಯಾರ್ಥಿಗಳಿಗೆ ಆದಷ್ಟು ಸಹಾಯನೀಡುತ್ತಿದ್ದನು. ಇಷ್ಟಾದರೂ ಅವನು ಸಿನಿಮಾಗಳಿಗೆ ಹೋಗುವ ಪದ್ಧತಿಯನ್ನಿಟ್ಟಿರಲಿಲ್ಲ. ಅವನ ಪತ್ನಿ ಶಾಂತಳಿಗೆ ಅದನ್ನು ಕಂಡರೆ ಅಷ್ಟೂ ಪ್ರೀತಿ. ಪ್ರಾಯಶಃ ಸಿನಿಮಾಗಳು ಸಮಾಜಕ್ಕೆ ದುರ್ನಡತೆಗಳನ್ನು ಕಲಿಸುವುವೆಂದು ಹೇಳುವವರ ಗುಂಪಿಗೆ ಸೇರಿದ್ದವನಿರಬಹುದು ಗೋಪು. ಆದುದರಿಂದಲೇ ಪತ್ನಿಯನ್ನು ಹೋಗಗೊಡಿಸದೆ ಯಾವುದೊ ಒಂದು ನೆಪದಿಂದ ತಪ್ಪಿಸಿಕೊಳ್ಳುತ್ತಿದ್ದನು. ಈ ಸಲ ಮಾತ್ರ ಶಾಂತೆಯ ತಾಳ್ಮೆಯನ್ನು ಪರೀಕ್ಷಿಸುವಹಾಗಿದ್ದಿತು. ಇದು ಗೋಪುವಿಗೆ ಗೊತ್ತಾಗದೆ ಇರಲಿಲ್ಲ. ಆದರೂ ಏನೋ ಯುಕ್ತಿಯನ್ನು ಹೂಡಿದ್ದ. ಮರುದಿವಸವೂ ಬಂದಿತು. ಮಧ್ಯಾಹ್ನವಾಗುತ್ತಲೇ ಶಾಂತಳು ಶೃಂಗರಿಸಿಕೊಳ್ಳುವುದಕ್ಕೆ ಅನುವಾದಳು. ಕನ್ನಡಿಯೆದುರು ಕುಳಿತು ಬಾಚಿ ಅಂದವಾಗಿ ಮುಡಿಕಟ್ಟಿಕೊಂಡಳು. ಅಚ್ಚುಕಟ್ಟಿನ ಉಡುಗೆ-ತೊಡಿಗೆ ಮಾಡಿಕೊಂಡಳು. ಎಲ್ಲವೂ ಮುಗಿಯುವ ಹೊತ್ತಿಗೆ ಎರಡೂವರೆ ಘಂಟೆ ಹೊಡೆಯಿತು. ಗೋಪುವಿನ ರೂಮಿನಕಡೆಗೆ ಹೊರಟಳು.

"ಏನೂಂದ್ರೆ, ಆಗಲೆ ಎರಡೂವರೆ ಘಂಟೆ ಹೊಡೆಯಿತು. ಏಳಿ, ಮುಖ ತೊಳೆದುಕೊಂಡು, ತಿಂಡಿ-ಕಾಫಿ ತಿಂದು, ಡ್ರೆಸ್‌ಹಾಕಿಕೊಳ್ಳುವವೇಳೆಗೆ ಮೂರು ಘಂಟೆ ಆಗೇ ಆಗುತ್ತದೆ!"

"ಹಾಗಾದರೆ ಈಹೊತ್ತು ಹೋಗಲೇಬೇಕೂ ಅನ್ನು." ಎಂದು ಮಲಗಿಯೇ ನುಡಿದ ಗೋಪು. ಶಾಂತೆಗೆ ಇದ್ದಕ್ಕಿದ್ದಹಾಗೆಯೆ ಕೋಪವೇರಿತು. "ಇಲ್ಲ, ಇಲ್ಲ. ಬೆಳಗಾಗುವವರೆಗೂ ಹಾಗೆಯೆ ನಿದ್ರಿಸಬಹುದು." ಎಂದು ಏನೋ ಮನಸ್ಸಿಗೆ ತೋಚಿದುದನ್ನು ಹೇಳಿ, ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಮುಖ ಸಿಂಡರಿಸಿಕೊಂಡು ದಪ್ಪನೆ ಕೂತಳು. ಕೊಂಚ ಹೊತ್ತಿನ ಮೇಲೆ "ಏನೂಂದ್ರೆ, ಏಳುತ್ತೀರೊ ಇಲ್ಲವೊ?" ಎಂದಳು.

ಗೋಪುವು ನಗೆಯನ್ನು ತಡೆಯಲಾರದೆ ಟವೆಲಿನಿಂದ ಬಾಯಿ ಮುಚ್ಚಿಕೊಂಡು, ಸರ್ರನೆ ಎದ್ದು ಹೊರಗೆಹೋಗಿ, ಗಟ್ಟಿಯಾಗಿ ನಗುವುದಕ್ಕಾರಂಭಿಸಿದ. ಶಾಂತೆಗೆ ಪತಿಯು ಜಾಗಬಿಟ್ಟದ್ದು ಸಂತೋಷವನ್ನುಂಟುಮಾಡಿ, ಕಾಫಿ ತಿಂಡಿ ತರಲು ಒಳಗೆ ಹೋದಳು.

ಸರಿ; ಎಲ್ಲವೂ ಆಗಿ, ಗೋಪುವೂ ಶೃಂಗರಿಸಿಕೊಂಡು ಹೊರಡುವು ದಕ್ಕೆ ಮೂರುಕಾಲು ಘಂಟೆಯಾಯಿತು. ಶಾಂತಳಿಗೆ ಬಲಗಣ್ಣು ಅದುರಲು ಪ್ರಾರಂಭಿಸಿತು. ಇದನ್ನು ಹೇಳಿದರೆ ಹೊರಡುವುದು ಎಲ್ಲಿ ನಿಂತುಹೋಗುವುದೊ ಎಂದು, ಏನನೂ ಹೇಳದೆ ಸುಮ್ಮ ನಾದಳು. ಡ್ರೈವರಿಗೆ ಕಾರನ್ನು ತರಹೇಳಿ ತಾವು ಹೊರಕ್ಕೆ ಬಂದರು. ಶಾಂತಳು ಕಾಲವಿಾರಿಹೋಯಿತಲ್ಲಾ ಎಂಬ ಆತುರದಲ್ಲಿ, ಹೊಸಲನ್ನು ಎಡಹಿದಳು. ಅದನ್ನು ಲಕ್ಷ್ಯಮಾಡದೆ ಕಾರಿನೊಳಗೆ ಬಂದು ಕೂತಳು. ಗೋಪುವು ಡ್ರೈವರನ್ನು ಮನೆಯಲ್ಲಿರುವ ಹಾಗೆ ಹೇಳಿ ತಾನೆ ಡ್ರೈವ್‌ಮಾಡುವುದಕ್ಕೆ ಬಂದನು. ಶಾಂತಳು, " ನೀವು ಬೇಡೀಂದ್ರೆ, ನಿಮಗೆ ಬೇಗನೆ ಬಿಡುವುದಕ್ಕೆ ಬರುವು ದಿಲ್ಲ. ಡ್ರೈವರೇ ಬಿಡಲಿ " ಎಂದಳು. 'ಬೇಡ' ಎಂದು ಕೂತನು. ಹೀಗೆಯೇ ಬೇಡ, ಬೇಡ ಎನ್ನುವುದರಲ್ಲಿಯೆ ಗಂಡ-ಹೆಂಡಿರ ಚಿಕ್ಕ ವ್ಯಾಜ್ಯವು ಡ್ರೈವರಿನ ಮುಂದೆ ನಡೆದುಹೋಗಿದ್ದಿತು. ಇನ್ನು ಮ್ಯಾಟಿನಿ ಆಟ ಪ್ರಾರಂಭವಾಗುವುದಕ್ಕೆ ಐದೇ ನಿಮಿಷಗಳಿದ್ದುವು. ಆದ್ದರಿಂದ ಹೆಚ್ಚು ಕಾಲವಿಳಂಬಮಾಡದೆ ಸುಮ್ಮನಾದಳು. ಇನ್ನೇನು ಕಾರು ಹೊರಡಬೇಕು. ಡರ್‌ರ್‌ರ್..ಎಂದು ಸ್ವಲ್ಪ ಹೊತ್ತಿನಲ್ಲಿಯೇ ನಿಂತಿತು. ಅದರಲ್ಲಿ ಪೆಟ್ರೋಲ್ ಇರಲಿಲ್ಲವೆಂದು ಗೋಪುವಿಗೆ ಗೊತ್ತಿತ್ತಾದರೂ, ಡ್ರೈವರಿನ ಮೇಲೆ ರೇಗಿಬಿದ್ದವನ ಹಾಗೆ ಶಾಂತೆಯ ಮುಂದೆ ನಟಿಸಿದ. ಅಂತೂ ಶಾಂತೆಗೆ ಆಗಬೇಕಾಗಿದ್ದ ಅಪಶಕುನಗಳೆಲ್ಲಾ ಆದುವು. ಪೆಟ್ರೋಲ್ ಹಾಕಿ ಎಲ್ಲವೂ ಸಜ್ಜಾದ ತರುವಾಯ ಗಂಡ-ಹೆಂಡಿರಿಬ್ಬರೂ ಹೊರಟರು. ಮಧ್ಯೆ ಮಧ್ಯೆ ಗೋಪುವಿಗೆ ಇದ್ದಕ್ಕಿದ್ದ ಹಾಗೆ ನಗು ಬರುತ್ತಿತ್ತು. ಶಾಂತಾ 'ಯಾಕದು' ಎಂದರೆ 'ಯಾಕೂ ಇಲ್ಲ' ಎಂದುಬಿಟ್ಟು ಸುಮ್ಮನಾಗುತ್ತಿದ್ದನು. ಸಿನಿಮಾ ಮಂದಿರದ ಹತ್ತಿರ ಬರುತ್ತಲೆ ಏನನ್ನೊ ಜ್ಞಾಪಿಸಿಕೊಂಡವನ ಹಾಗೆ " ಅರ್‍ರೆರ್‍ರೆ.. " ಎಂದ.

ಶಾಂತಳಿಗೆ ಗಾಬರಿಯಾಗಿ " ಏನೂಂದ್ರೆ, ಏನೂಂದ್ರೆ?" ಎಂದಳು.

" ಸುಮ್ಮನೆ ನಿನ್ನನ್ನು ಕರೆದುಕೊಂಡು ಬಂದಹಾಗಾಯ್ತಲ್ಲೆ. ಶನೀಶ್ವರದ್ದು ನನಗೆ ಮರೆವು ಜಾಸ್ತಿ. ನೆನ್ನೇನೇ ರಾಮೂ ತಿಳಿಸಿದ್ದ: ಈವೊತ್ತು ಮ್ಯಾಟಿನಿ ಆಟಗಳಿಲ್ಲವೆಂತ. ಲೈಟು ಆಫೀಸಿನವರು ಕೂಡ ಪೇಪರಿನಲ್ಲಿ ಪ್ರಕಟಿಸಿದ್ದನ್ನು ಕಂಡೆ."

ಶಾಂತಳಿಗೆ ಹೇಗಾಯಿತೆಂಬುದನ್ನು ಹೇಳುವುದಕ್ಕಿಂತ ಅದನ್ನು ನೀವೇ ಅನುಭವಿಸಿದರೆ ವಾಸಿ ಎಂತ ಕಾಣುತ್ತೆ.

ಪುನಃ ಶಾಂತಳು ಸಿನಿಮಾಸಮಾಚಾರವನ್ನೆತ್ತಲಿಲ್ಲ. ಗೋಪುವೇ ಅವಳಿಗೆ ಸ್ಥಿರಮನಸ್ಸಿನಿಂದ " ಸಿನಿಮಾಗೆ ಹೋಗೋಣ " ಎಂದರೂ " ನಾನೇನೂ ಬರೋಲ್ಲ; ನೀವೇ ಹೋಗಿ " ಎನ್ನುತ್ತಿದ್ದಳು. ಗೋಪುವು ತನ್ನ ಪತ್ನಿಗೆ ಸಿನಿಮಾದ ಹುಚ್ಚನ್ನು ತಪ್ಪಿಸಿದೆನೆಂದುಕೊಂಡ. ಇದು ನಡೆದು ಆಗಲೇ ಒಂದೂವರೆ ತಿಂಗಳು ಕಳೆದೂ ಹೋಯಿತು. ಗೋಪುವು ಅಷ್ಟಕ್ಕೇ ಈ ವಿಷಯವನ್ನು ಮರೆತುಬಿಟ್ಟ. ಆದರೆ ಶಾಂತಾಗೆ ಮಾತ್ರ ಅಂದು ಆವಳಿಗಾದ ಅವಮಾನವನ್ನು ಮರೆಯಲಿಕ್ಕಾಗಲಿಲ್ಲವೆಂದು ಸದ್ಯ ನಿಮಗೆ ಹೇಳಬಲ್ಲೆ.

* * *

" ಏನು ಗೋಪು, ಈ ಸಲ ದಸರಾಗೆ ಬರೋದಿಲ್ವೊ ! " ಎಂದೆ ನಾನು.

"ಎಲ್ಲಿಗೂ ಇಲ್ಲವಪ್ಪಾ " ಎಂದು ಉಸುರ್ಗರೆದ ಗೋಪು.

" ಪ್ರತಿಸಲವೂ ದಸರಾ ರಜ ಪ್ರಾರಂಭವಾಗುವುದಕ್ಕೆ ಮುಂಚೆಯೇ ನನಗೆ ಹೇಳಿಕಳುಹಿಸುತ್ತಿದ್ದೆ. ಈಗ ದಸರಾ ಪ್ರಾರಂಭವಾಗಿದ್ದರೂ ಏನೂ ಸಮಾಚಾರವಿಲ್ಲ ! "

"ಏನು ಮಾಡಲಿ ರಾಮೂ, ಪ್ರತಿಸಲವೂ ಸರ್‍ರನೆ ಒಪ್ಪಿಕೊಳ್ಳುತ್ತಿದ್ದ ಶಾಂತಾ, ಈ ಸಲ ಆದೇನೋ ಹಿಂತೆಗೆಯುತ್ತಿದ್ದಾಳೆ. ಅದಿರಲಿ, ಪ್ರಕಾಶ ಯಾರು ನಿನಗೆ ಗೊತ್ತಿದೆಯೆ ?"

" ನನಗೆ ಯಾರೂ ಆ ಹೆಸರಿನವರು ಗೊತ್ತಿಲ್ಲವೆ. ಯಾಕೆ ? "

" ಏನೂ ಇಲ್ಲ. ಅವನ ಸಮಾಚಾರ ಸ್ವಲ್ಪ ಬೇಕಾಗಿದ್ದಿತು."

" ಈ ಊರಿನಲ್ಲಿರೋ ಹಾಗೆ ಬೇರೆ ನಾ ಕಾಣೆ " ಎಂದೆ.

ಅಷ್ಟಕ್ಕೇ ನಮ್ಮ ಸಂಭಾಷಣೆ ಮುಗಿಯಿತು. ನಾನು ತಂಗಿಯಾದ ಶಾಂತೆಯ ಹತ್ತಿರ ಸರಸವಾಗಿದ್ದಷ್ಟು ಇನ್ನಾರ ಹತ್ತಿರವೂ ಇರಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಅವಳು ನನ್ನ ಮನಸ್ಸಿಗೆ ಸ್ತ್ರೀವ್ಯಕ್ತಿಯಲ್ಲ; ಏನೋ ಒಬ್ಬ ಸ್ನೇಹಿತ ಇದ್ದಹಾಗೆ—ಇಷ್ಟು ಮಾತ್ರಕ್ಕೇ ನೀವು ನಿಮ್ಮ ಬುದ್ಧಿಯನ್ನೆಲ್ಲಾ ಉಪಯೋಗಿಸಿ, 'ಹಾಗಾದರೆ ಶಾಂತಾ ಅಮೆಜಾನ್ ಆಗಿದ್ದಳೊ' ಎಂದು ಲಾಯರ್ ಪಾಯಿಂಟ್ ತೆಗೆ ಹಾಕಬೇಡಿ. ಅದಕ್ಕೆ ನನ್ನ ಉತ್ತರ ವಿಷ್ಟೆ: ಸ್ತ್ರೀಗೆ ಸಹಜವಾದ ನಾಚಿಗೆ, ಗಂಭೀರತೆ, ಮಿತವಾದ

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

" ರಜಿಸ್ಟರ್ಡ "

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ಭಾಷಣ ಇವೆಲ್ಲವನ್ನು ನೋಡಿದ ಪಕ್ಷದಲ್ಲಿ, ಅವಳು ಸ್ತ್ರೀ-ಪ್ರಪಂಚಕ್ಕೆ ಅಲಂಕಾರಪ್ರಾಯಳಾಗಿರುವಳು ಎಂಬುದನ್ನು ಒತ್ತಿ ಒತ್ತಿ ಹೇಳಬೇಕಾಗಿದೆ—ಆದುದರಿಂದಲೇ ಗೋಪು ನನ್ನ ಹತ್ತಿರ ಸೌಹಾರ್ದತೆಯಿಂದ ಇರುತ್ತಿದ್ದ. ಇವನ ಮನೆ ಎಂದರೆ ಅಲ್ಲೇ ಊಟ. ಇಲ್ಲಾ ಗೊತ್ತೇ ಇದೇ ನಮ್ಮ ಮನೆ. ಒಂದು ಸಲವೂ ಅವನು ಹೇಳಿದ್ದಕ್ಕೆ 'ನಾಸ್ತಿ' ಎಂದ ದಿವಸವಿಲ್ಲ. ಗೋಪುವಿಗೂ ನನ್ನನ್ನು ಬಿಟ್ಟು ಬಿಟ್ಟು ಎಲ್ಲಿ ಹೋಗುವುದಕ್ಕೂ ಮನಸ್ಸು ಬಾರದು. ಇದರಿಂದಲೇ ಪ್ರತಿಸಲವೂ ನನಗೆ ದಸರಾ ರಜ ಬರುವುದಕ್ಕೆ ಮುಂಚೆ ಮೈಸೂರಿಗೆ ಹೊರಡಲು ಆಹ್ವಾನ ಬರುತ್ತಿತ್ತು. ಆದರೆ ಈ ಸಲ ಮಾತ್ರ ಅದರ ಮಾತೇ ಇಲ್ಲ. ಕೇಳಿದ್ದಕ್ಕೆ ಯಾರೋ ಪ್ರಕಾಶನ ಮಾತೆತ್ತಿದ್ದ. ಅವನ ಆಗು-ಹೋಗುಗಳನ್ನು ಆಲೋಚಿಸಲಿಕ್ಕೆ ನನ್ನ ಮನಸ್ಸು ಹೋದುದು ಸಹಜವೇ. ಇಷ್ಟಾದರೂ ಪ್ರಕಾಶನಾರು ಎಂಬುದೇ ಗೊತ್ತಾಗಲಿಲ್ಲ. ಇನ್ನೆರಡು ದಿವಸ ಬಿಟ್ಟು ಗೋಪುವೇ ಸಿಕ್ಕಿದ.

"ಏನು ಸಮಾಚಾರ?" ಎಂದೆ.

"ಅದೇ ನೋಡು, ಹಾಳು; ಆ ಪ್ರಕಾಶನ ವಿಚಾರ ತಿಳಿದರೆ ಸಾಕು, ಎಲ್ಲವೂ ಸರಿ ಹೋಗುತ್ತೆ. ನಾನು ೧೫ ದಿನಗಳ ಹಿಂದೆಯೇ ಶಾಂತಾಗೆ ಮೈಸೂರಿಗೆ ಹೊರಡುವುದಕ್ಕೆ ಸಿದ್ಧಳಾಗೆಂದು ಹೇಳಿದ್ದೆ. ಅವಳು ಸುಮ್ಮನೆ ಇದ್ದುಬಿಟ್ಟಳು. ಅದಕ್ಕೆ ನಾನೂ ಸುಮ್ಮನಿದ್ದು, ಈಗ ನಿನಗೆ ಯಾವುದೂ ಖಂಡಿತವಾಗಿ ತಿಳಿಸೋಣವೆಂದು ಅವಳನ್ನು ತಿರುಗಿ ಕೇಳಿದೆ. 'ಪ್ರಕಾಶನಿಂದ ಪ್ರೇರಿತಳಾದೆನಲ್ಲದೆ ಏನೂ ಹೇಳುವಹಾಗಿಲ್ಲ' ಎಂದುಬಿಟ್ಟಳು. ಇದಕ್ಕೇನು ಮಾಡೋಣ ಎಂದಾಲೋಚಿಸುತ್ತಿದ್ದೇನೆ."

"ಪ್ರಕಾಶನು ಎಷ್ಟು ಹೊತ್ತಿಗೆ ಬರುತ್ತಾನೆಂಬುದು ಗೊತ್ತಿದೆಯೆ?" ಕೊಂಚ ಆಲೋಚಿಸಿ ಕೇಳಿದೆ.

"ಅಷ್ಟು ಗೊತ್ತಾಗಿದ್ದರೆ ನಿನ್ನನ್ನು ಕೇಳುವ ಸಂಭವವೇ ಇರಲಿಲ್ಲ. ಮದುವೆಯಾದಾರಭ್ಯ ಹೀಗೆ ಆಡದೆ ಇದ್ದವಳು ಈಗಿನ ಈ ನಡತೆಗೆ ಕಾರಣವೇನು? ಆಗಲಿ ಈಪೊತ್ತೇನು ಹೇಳುವಳೋ ನೋಡುತ್ತೇನೆ. ನೀನೂ ಬಾ ಈಪೊತ್ತು!"

ಸರಿ, ನಾನೂ ಹೊರಟೆ. ಊಟ ಮಾಡುತ್ತಿದ್ದಾಗ ಮಧ್ಯೆ "ಏನು ಶಾಂತಾ, ಈ ಸಲ ದಸರಾಗೆ ಹೋಗೋದನ್ನ ಇಟ್ಟು-ಕೊಂಡಿಲ್ಲಾಂತ ಕಾಣುತ್ತೆ" ಎಂದೆ.

"ನಂದೀಗೆ ಹೋಗೋಣಾಂತೆನಿಸುತ್ತಿದೆ. ಅಲ್ಲಿ ಇದ್ದವರಿಗೆ ತಿರುಗಿ ಈ ಕಡೆಗೆ ಬರಲೇಬೇಕೆನ್ನಿಸುವುದಿಲ್ಲವಂತೆ. ಆ ಎತ್ತರವಾದ ಶಿಖರದ ಮೇಲೆ ನಿಂತು, ಸುತ್ತುಮುತ್ತಲಿರುವ ಹಸುರುಹುಲ್ಲು ಮೈದಾನಗಳನ್ನೂ ಅಲ್ಲಲ್ಲಿ ಚೆದರಿದಂತಿರುವ ಕೆರೆ-ಕುಂಟೆಗಳನ್ನೂ ನೋಡುತ್ತಿದ್ದರೆ ಆ ದೃಶ್ಯವು ಆಹ್ಲಾದಕರವಾಗಿರುತ್ತಂತೆ ನೋಡು."

"ಸರಿಯಮ್ಮಾ ಹಾಗಾದರೆ, ನಿನ್ನ ಚಿತ್ತ!"

ಅವಳು ಪ್ರಕಾಶನ ಸಮಾಚಾರವೆತ್ತದೆ ಇದ್ದುದರಿಂದ ನಾನು ಸಂಭಾಷಣೆಯನ್ನು ಅಷ್ಟಕ್ಕೇ ನಿಲ್ಲಿಸಿದೆ. ಮಲಗುವುದಕ್ಕೆ ಮುಂಚೆ ನಾನೂ ಗೋಪುವೂ ಕೂಲಂಕಷವಾಗಿ ಮುಂದಿನ ಏರ್ಪಾಡನ್ನು ಕುರಿತು ಚರ್ಚಿಸಿದೆವು. ಕೊನೆಗೆ ಗೋಪುವು ಮರುದಿನ ಕಾಲೇಜಿಗೆ ರಜಕ್ಕಾಗಿ ಬರೆದು ಹಾಕಿ, ತಾನು ರೂಮಿನೊಳಗೆ ಸೇರಿಕೊಂಡು ಪ್ರಕಾಶನ ಬರುವಿಕೆಯನ್ನು ಎದುರುನೋಡುತ್ತಿರಬೇಕೆಂದು ಗೊತ್ತಾಯಿತು. ಹಾಗೆಯೇ ಮರುದಿನ ಕಾಲೇಜಿಗೆ ರಜಕ್ಕೆ ಬರೆದು ಹಾಕಿದನಲ್ಲದೆ, ಯಥಾಪ್ರಕಾರ ಹತ್ತು ಘಂಟೆಗೆ ಊಟ ಮಾಡಿ, ನನ್ನ ಕೈಯಲ್ಲಿ ಬೀಗದಕೈಯನ್ನು ಕೊಟ್ಟು ರೂಮಿನೊಳಕ್ಕೆ ಸೇರಿದನು (ಡ್ರೆಸ್ ಹಾಕಿಕೊಂಡ ನಂತರವೆ). ನಾನು ಹೊರಗಡೆ ಬೀಗಹಾಕಿದೆ. ಶಾಂತಾ ಆದರ ಶಬ್ದವನ್ನು ಗ್ರಹಿಸಿದವಳೇ ಆಗಲೆ ಹೊರಕ್ಕೆ ಬಂದಳು. ಬಹಳ ಚುರುಕು ಬುದ್ಧಿ ಅವಳಿಗೆ. ಸುತ್ತಲೂ ನೋಡಿ "ಯಾಕೆ ಆ ರೂಮಿಗೆ ಬೀಗ ಹಾಕಿದೆ?" ಎಂದಳು. "ಇಲ್ಲ, ಕಾಲೇಜಿಗೆ ಸಂಬಂಧಪಟ್ಟ ಹಣವನ್ನಿಟ್ಟಿರುವುದರಿಂದ ಅವನೇ ಅದಕ್ಕೆ ಬೀಗ ಹಾಕಿ ಹೋದ." ಎಂದವನೇ "ನಾನೂ ಬರುತ್ತೇನೆ" ಎಂದು ಹೊರಟುಹೋದೆ. ಶಾಂತಾ ಇರಬಹುದೆಂದುಕೊಂಡು ಸುಮ್ಮನಾದಳು.

ಗೋಪುವು ಮನೆಗೆ ಹಿಂತಿರುಗುವ ಹೊತ್ತಿಗೆ ಪುನಃ ನಾನು ಹೋಗಿ, ಶಾಂತಾ ಒಳಗಿರುವುದನ್ನು ನೋಡಿಕೊಂಡೇ ಬೀಗ ತೆಗೆದೆ. ಗೋಪು ಸಡಗರದಿಂದ ಹೊರಕ್ಕೆ ಬಂದು ಡ್ರೆಸ್ಸನ್ನು ಬಿಚ್ಚಿದವನೇ 'ಉಶ್ಯಪ್ಪಾ' ಎಂದು ಗಾಳಿಬೀಸಿಕೊಳ್ಳುತ್ತಾ ಕೂತುಕೊಂಡ. ನಾನು ಅಷ್ಟು ನಗುವನ್ನು ಬಿಗಿಹಿಡಿದುಕೊಂಡೇ ಇದ್ದೆ. ಆ ಮೇಲೆ ಇಬ್ಬರೂ ಗಾಳೀಸವಾರಿಗೆ ಹೊರಟೆವು. ಆಗ ಮೆಲ್ಲಗೆ ಕೇಳಿದೆ: "ಏನಾದರೂ ಗುರುತು ಹಿಡಿದೆಯಾ." "ಊಹೂ.. ಏನೂ ಪ್ರಯೋಜನವಾಗಲಿಲ್ಲ" ಎಂದ.

ಇದನ್ನು ಕೇಳಿ ನನಗೂ ಸ್ಥೈರ್ಯ ಕಡಿಮೆಯಾಯಿತು. ತಿರುಗಿ ನಾವಿಬ್ಬರೂ ಮಾತನಾಡಲಿಲ್ಲ. "ಆಗಲಿ ನೋಡೋಣ. ರಾತ್ರಿ ಅವಳನ್ನೇ ಕೇಳಿದರೆ ತಿಳಿದುಹೋಗುತ್ತೆ" ಎಂದು ನಾನೇ ಕೊನೆಗೆ ಹೇಳಿ, ಅದಿಬ್ಬರಿಗೂ ಸಮ್ಮತವಾಗಿದ್ದುದರಿಂದ ಮನೆಯ ಕಡೆಗೆ ಹೊರಟೆವು. ಇಬ್ಬರೂ ರಾತ್ರಿ ಊಟಕ್ಕೆ ಕುಳಿತೆವು. ಒಬ್ಬರೂ ಮಾತನಾಡಲಿಲ್ಲ. ಎಲ್ಲೆಲ್ಲೂ ನೀರವ. ಗೋಪುವೇ ಆ ನಿಶ್ಶಬ್ದತೆಯನ್ನು ಭೇದಿಸುತ್ತ ಹೇಳಿದ:

"ತಿರುಗಿ ಮನಸ್ಸನ್ನೇನಾದರೂ ಬದಲಾಯಿಸಿದ್ದಿಯೋ ಇಲ್ಲಾ ನಂದಿಗೆ ಹೋಗಬೇಕೆಂದಿದ್ದೀಯೋ?" "ಭದ್ರಾವತಿಗೆ ಹೋಗಿ ಅಲ್ಲಿ ಕಬ್ಬಿಣತೆಗೆಯುವ ಕ್ರಮವನ್ನು ನೋಡಿಕೊಂಡು, ಹಾಗೆಯೇ ಬಹಳ ಎತ್ತರದಿಂದ ಬೀಳುತ್ತಿರುವ ಜೋಗ್ ಜಲಪಾತವನ್ನು ನೋಡಬೇಕೆನಿಸುತ್ತದೆ." ಗೋಪುವು ನನ್ನೆದುರಿನಲ್ಲಿ ಪ್ರಕಾಶನ ಮಾತೆತ್ತಿ ಶಾಂತಳ ಮನಸ್ಸನ್ನು ನೋಯಿಸಬಾರದೆಂದುಕೊಂಡಿದ್ದ. ಆದ್ದರಿಂದ ತಾವಿಬ್ಬರೇ ಇದ್ದಾಗ ಆ ಮಾತನ್ನೆತ್ತೋಣವೆಂದು ಸುಮ್ಮನಾದ. ಅವಳನ್ನು ಆ ಕಡೆಗೆ ಹೋಗುವಂತೆ ಪ್ರೇರೇಪಿಸಿದವನು ಪ್ರಕಾಶನು ಇರಬೇಕು ತಾನೆ; ಇಲ್ಲದಿದ್ದರೆ ಅವಳಿಗೆ ಹೇಗೆ ಅದು ತೋರಬೇಕು! ಅಂತೂ ನಾವಿಬ್ಬರೂ ಒಬ್ಬರನ್ನೊಬ್ಬರ ಮುಖವನ್ನು ನೋಡುತ್ತಾ ಕುಳಿತೆವು. ರೂಮಿನಲ್ಲಿ ಸೇರಿಕೊಂಡದ್ದು ಅಪ್ರಯೋಜನಕರವಾಯಿತೆಂದೆನಿಸಿತು ಗೋಪುವಿಗೆ. ನಾನು ಮನೆಯ ಕಡೆಗೆ ಆಪೊತ್ತೆಲ್ಲಾ ಹೋಗದೆ ಇದ್ದುದರಿಂದ, ಮನೆಗೆ ಹೊರಟೆ.

ನಾನು ಮರುದಿನ ಗೋಪುವಿಗೆ ಸಿಕ್ಕದೆ ಇರಲಿಲ್ಲ. ಆದರ ಸಮಾಚಾರವೇ ನನ್ಮನ್ನಾವರಿಸಿತ್ತು. "ಆಗ ನಂದಿಗೆಂದು ಹೇಳಿದ್ದಳು. ಆ ಮೇಲೆ ನಿನ್ನ ಮುಂದೆಯೇ ಜೋಗಿಗೆ ಹೋಗೋಣವೆಂದು ಹೇಳಿದಳು. ಈವೊತ್ತು ಅವೆರಡಕ್ಕೂ ಹೋಗುವುದಕ್ಕೆ ಇಷ್ಟವಿಲ್ಲವಂತೆ, ನೋಡು. 'ಹೋಗಲಿ, ಮೈಸೂರಿಗೆ ಈವೊತ್ತು ಹೋಗೋಣ. ನಾನು ಮತ್ತು ಕಾಲೇಜು ಅಧ್ಯಾಪಕರೆಲ್ಲಾ ಈವೊತ್ತು ರಾತ್ರಿ ನಡೆಯುವ ಬೆಳದಿಂಗಳೂಟಕ್ಕೆ ಹಾಜರಿರಬೇಕು. ಸ ರಿ ಹೋ ಗು ತ್ತೆ' ಎಂದು ಹೇಳಿದರೆ 'ಈವೊತ್ತಾಗೋಲ್ಲ' ಎಂದಳು. ಆ ಪ್ರಕಾಶನೇನು ಹೇಳಿಬಿಟ್ಟಿದ್ದಾನೊ! ಇನ್ನು ಸುಮ್ಮನಿರುವುದಿಲ್ಲ. ನಿನ್ನೆದುರಿಗೇ ಆ ಪ್ರಕಾಶನ ಮಾತೆತ್ತಿ ಅವಳಿಗೆ ಅವಮಾನಮಾಡದೆ ಇದ್ದರೆ ವಿಧಿಯೇ ಇಲ್ಲ!" ಎಂದ.

"ನಾನೇನೋ ಬೆಳಿಗ್ಗೆ ಮೈಸೂರಿಗೆ ಹೊರಡುತ್ತೇನೆ. ನೀವೂ ಬರುವುದಾಗಿದ್ದರೆ ಸ್ಟೇಷನ್‌ನಲ್ಲಿಯೇ ನಾವೆಲ್ಲಾ ಸೇರೋಣ. ಇಲ್ಲದಿದ್ದರೆ ಈಗಲೇ ಹೇಳಿರುತ್ತೇನೆ, ಗುಡ್‌ಬೈ" ಎಂದೆ. "ನೋಡೋಣ" ಎಂದು ಅವನೂ ಹೊರಟುಬಿಟ್ಟ.

* * *

ನಾನು ಸ್ಟೇಷನ್ನಿಗೆ ರೈಲುಹೊರಡುವುದಕ್ಕೆ ಕಾಲುಘಂಟೆ ಮುಂಚಿತವಾಗಿಯೇ ಹೋಗಿದ್ದೆ. ಅಲ್ಲಿ ಕೇಳಬೇಕೇ, ಬೇಕಾದಷ್ಟು ಸ್ನೇಹಿತರು ಸಿಕ್ಕುತ್ತಿದ್ದರು. ಅವರ ಹತ್ತಿರ ಮಾತಾಡುತ್ತಿರುವಾಗಲೆ ಯಾರೋ ಹಿಂದಿನಿಂದ ಬಂದು ನನ್ನ ಬೆನ್ನ ಮೇಲೆ ಏಟು ಕೊಟ್ಟರು. ಹಿಂತಿರುಗಿ ನೋಡಿ "ಹಲೊ ಗೋಪೂ" ಎಂದು ಅಲ್ಲಿದ್ದ ಸ್ನೇಹಿತರನ್ನು ಬೀಳ್ಕೊಟ್ಟು ಅವನನ್ನು ಹಿಂಬಾಲಿಸಿದೆ. ಗೋಪು ಸೀದಾ ಶಾಂತಾ ಹತ್ತಿರ ಕರೆದುಕೊಂಡು ಬಂದು ನಿಲ್ಲಿಸಿದ. ಅವಳನ್ನು ಕಂಡು ನನಗೆ ಆಶ್ಚರ್ಯವಾಯಿತು.

"ಅದೇನು ಮೈಸೂರಿಗೇ ಕೊನೆಗೆ ಹೋಗಬೇಕೆನ್ನಿಸಿತೇನು?" ಎಂದೆ.

"ಹೌದು, ನೆನ್ನೆ ಮಧ್ಯಾಹ್ನವೆ ಮೈಸೂರಿಗೆ ಹೋಗೋಣವೆಂದು ಅವರ ಹತ್ತಿರ ಹೇಳಿದ್ದೆ. ಅವರು ನಿನಗೆ ತಿಳಿಸಲಿಲ್ಲವೇನು?"

"ಇಲ್ಲಾ, ನನಗೆ ಗೊತ್ತಾಗಲಿಲ್ಲ!"

ತನ್ನ ಮೇಲೆ ತಪ್ಪು ಹೊರಿಸಿದ್ದ ಕಾರಣ ಗೋಪುವು ಕೋಪಿಸಿಕೊಂಡು "ನನಗೆ ಹೇಗೆ ಗೊತ್ತಾಗಬೇಕು? ನೀನು ಒಂದು ಸಲ ನಂದೀಗೆ, ಇನ್ನೊಂದು ಸಲ ಜೋಗಿಗೆ.. ಎಂತ ಹೇಳುತ್ತಿರು. ಮುಂದೆ ಇನ್ನೆಲ್ಲಿಗೇಂತ ಹೇಳುತ್ತೀಯೊ ಎಂದು ಸುಮ್ಮನಿದ್ದೆ, ಅಷ್ಟೇ! ಅವನಿಗೆ ಮುಂಚೆಯೇ ತಿಳಿಸಿ ನಾನೇಕೆ ಕೆಟ್ಟವನಾಗಬೇಕು?" ಎಂದ.

"ಹೌದು, ಹೌದು, ಪಾಪ, ಪಾಪ." ಎಂದಳು ಶಾಂತಾ.

"ಆ ಪ್ರಕಾಶ ಬಹುಶಃ ನಿನಗೆ ತಿರುಗಿ ಸಿಕ್ಕಲಿಲ್ಲಾ ಅಂತ ಕಾಣುತ್ತೆ. ಬಂದಿದ್ದರೆ ಏನೇನು ಹೇಳಿ ಬಿಡುತ್ತಿದ್ದನೊ ಯಾರಿಗೆ ಗೊತ್ತು?"

"ಯಾರೂಂದ್ರೇ ಪ್ರಕಾಶ? ಸಿಕ್ಕಾಪಟ್ಟೆ ಹಾಗೆಲ್ಲಾ ಮಾತಾಡಿ ನನ್ನನ್ನು ರೇಗಿಸಬೇಡಿ. ನಾನು ಯಾವ ಪರಪುರುಷನ ಹತ್ತಿರವೂ ಇದುವರೆಗೂ ಮಾತಾಡಿಲ್ಲ ಮತ್ತು ನೋಡಿಲ್ಲ. ಏನು, ಆವೊತ್ತು ಸಿನಿಮಾಗೆ ಕರೆದುಕೊಂಡು ಹೋದ ರೀತಿ ಈವೊತ್ತೂ ಮಾಡಬೇಕೆಂದು ನಿಮ್ಮ ಅಭಿಪ್ರಾಯವೊ?" ಎಂದು ಸಿಡುಕಿನ ರೀತಿಯಲ್ಲಿ ಎಂದಳು ಶಾಂತಾ.

ಇನ್ನು ಇಷ್ಟು ಹೇಳಿದ ಮೇಲೆ ಗೋಪುವಿಗೆ ರೇಗದೆ ಇರುತ್ತದೆಯೆ! "ಹಾಗಾದರೆ ನೀನು ಪ್ರಕಾಶನ ಮೇಲೆ ಎಲ್ಲವೂ ಹಾಕುತ್ತಿದ್ದುದು ನಿಜವಲ್ಲವೊ?" ಎಂದು ಕಣ್ಣನ್ನು ಕೆಂಪಗೆ ಮಾಡಿಕೊಂಡು ಕೇಳಿದ. ಶಾಂತಾ ಅವನ ಸ್ವಭಾವವನ್ನರಿತವಳಾಗಿ "ಅದೀಗ ನಿಜ. ಅವನ ಮೇಲೆ ಹಾಕಿದ್ದುಂಟು. ನೋಡಿ!" ಎಂದು ಗೋಡೆಯ ಮೇಲೆ ದೊಡ್ಡದಾಗಿ ನೋಟೀಸುಗಳನ್ನು ಅಂಟಿಸಿದ್ದ ಕಡೆಗೆ ತೋರಿಸಿ, "ಹೇಗೆ ಆ ಚಿತ್ರಪಟದಲ್ಲಿ ನಂದಿಯ ಪ್ರದೇಶದ ಪ್ರಕೃತಿಯ ಸೊಬಗನ್ನು ಕಲಾವಿದನಾದ ಪ್ರಕಾಶನು ಎತ್ತಿ ತೋರಿಸಿದ್ದಾನೆ! ಇನ್ನೊಂದರಲ್ಲಿ ನೋಡಿ, ಜೋಗದ ಜಲಪಾತವನ್ನು. ನೋಡುವುದಕ್ಕೆ ಹತ್ತು ಕಣ್ಣು ಸಾಲದು! ಆ ಮೂರನೆಯ ಪಟವನ್ನು ನೋಡಿ. ಮಹಾರಾಜರ ಮೆರೆವಣಿಗೆ ಹೇಗೆ ಚಿತ್ರಿಸಲ್ಪಟ್ಟಿದೆ! ಅದನ್ನು ನೋಡಿಯೇ ಅಲ್ಲಿಗೆ ಹೋಗಬೇಕೆಂದು ನನಗೆ ಅನ್ನಿಸಿತು" ಎಂದು ಸೆರಗಿನಿಂದ ಬಾಯಿಮುಚ್ಚಿಕೊಂಡು ಒಳಗೊಳಗೇ ನಕ್ಕಳು.

ನಾವಿಬ್ಬರೂ ಆ ಚಿತ್ರಪಟಗಳ ಕಡೆಗೆ ತಿರುಗಿ ನೋಡಿದೆವು. ಅವುಗಳಲ್ಲಿ 'ಪ್ರಕಾಶನಿಂದ (by Prakash)' ಎಂದಿತ್ತು. ಗೋಪುವು ಅವಾಕ್ಕಾದ. ನಾನು ಮನಸ್ಸಿನಲ್ಲೇ 'ಬೇಸ್ತುಬಿದ್ದೆ' ಎಂದುಕೊಂಡೆ. ಅಷ್ಟರಲ್ಲೇ ಮೈಸೂರು ಗಾಡಿಯು ಬರಲು, ಗೋಪುವು ನಮ್ಮೆಲ್ಲರಿಗೂ ಸೆಕೆಂಡ್‌ಕ್ಲಾಸ್ ಟಿಕೇಟನ್ನು ತೆಗೆದುಕೊಂಡು ಬಂದಮೇಲೆ ರೈಲಿನೊಳಗೆ ಕುಳಿತೆವು. ಗೋಪುವಿಗೆ ಶಾಂತಳ ಮೇಲೆ ಕೋಪ ಬರುವುದಕ್ಕೆ ಬದಲಾಗಿ ಅವಳ ಬುದ್ಧಿಕುಶಲತೆಯನ್ನು ಜ್ಞಾಪಿಸಿಕೊಂಡ ಹಾಗೆ ಸಂತೋಷವುಕ್ಕಿಬರುತ್ತಿತ್ತು. ರೈಲು–ಸ್ಟೇಷನನ್ನು ಬಿಟ್ಟಮೇಲೆ ನಾನು ಗೋಪುವನ್ನು "ಶಾಂತಾ ಸಿನೇಮಾ ಸಮಾಚಾರವೆತ್ತಿದಳಲ್ಲಾ, ಅದಾವುದು?" ಎಂದು ಕೇಳಿದೆ. ಅವನು ನಡೆದುದೆಲ್ಲವನ್ನೂ ಹೇಳಿದ. ಬಳಿಕ "ನೋಡು, ಅದು ನಡೆದು ಕೆಲವು ದಿವಸಗಳು ಕಳೆದರೂ ಅವಳು ಅದನ್ನು ಮರೆಯಲಿಲ್ಲ. ಅವಳು ತಿರುಗಿ ಸಿನಿಮಾಗೆ ಕೂಗಿದರೆ ಬರುವುದಿಲ್ಲವೆಂದು ಹೇಳಿದರೆ, ಅವಳಿಗೆ ನಾನು ಬುದ್ಧಿ ಕಲಿಸಿದೆ ಎಂದುಕೊಂಡಿದ್ದರೆ, ಅವಳ ಹಟವನ್ನವಳು ಸಾಧಿಸಿಬಿಟ್ಟಳಲ್ಲ! ಹೇಗೂ ನಾರೀ-ಹೃದಯ. 'ಮುಯ್ಯಿಗೆ ಮುಯ್ಯಿ' ತೀರಿಸಿಕೊಳ್ಳದೆ ಬಿಡರು. ಅಂತೂ ನನಗೆ ನೆನ್ನೆ ಬೆಳದಿಂಗಳೂಟ ತಪ್ಪಿಸಿಬಿಟ್ಟಳು ನೋಡು. ಅದಕ್ಕೇ ಈ ಸಲ ತಪ್ಪಿಸಿಕೊಳ್ಳಲೆ ಕೂಡದೆಂದು ಒಂದು ತಿಂಗಳಿಂದ ಹೇಳುತ್ತಿದ್ದೆ" ಎಂದ.

ಪಂಚಾಂಗ-ಜಾತಕ

ವಿದ್ವಾನ್ ಎಂ. ಜಿ. ವೆಂಕಟೇಶಯ್ಯ ಎಂ. ಎ., ಬಳ್ಳಾರಿ.

★

ಇಂದು ಹಲವು ಪತ್ರಿಕೆಗಳಲ್ಲಿ ಅಂಕಣ ತುಂಬಿ ತುಂಬಿ ಬರುವ ಭವಿಷ್ಯಗಳನ್ನು ಅನೇಕರು ಆಶೆಪಟ್ಟು ಓದುವ-ರಾದರೂ ಆ ಭವಿಷ್ಯಕಥನಕ್ಕೆ ಯಾವುದು ಮೂಲವೆಂಬ ಮಾತು ಅವರಿಗೆ ಗೊತ್ತಿರುವುದಿಲ್ಲ. ಈ ಲೇಖನ ಮಾಲೆ ಅದನ್ನು ತಿಳುಹಿಕೊಡಲೆಂದು ಅಭ್ಯಾಸಪೂರ್ವಕ ಬರೆದುದಾಗಿದೆ. ಜಾತಕವೆಂದರೇನು? ಓದಿ ತಿಳಿದುಕೊಳ್ಳಿರಿ!

★

ಹಿಂದೆ ಪಂಚಾಂಗದ ವಿಚಾರವನ್ನು ಹೇಳಿದ್ದಾಯಿತು. ಇನ್ನು ಜಾತಕದ ವಿಚಾರ. ಜಾತಕವೆಂದರೆ ಏನು? ಹುಟ್ಟಿದ ಹೊತ್ತು, ದಿನ ಇವುಗಳಿಂದ ಪಂಚಾಂಗದ ಮೂಲಕ ಗ್ರಹಗಳ ಸ್ಥಾನ-ಲಗ್ನಾದಿಗಳನ್ನು ರಚಿಸಿರುವುದಕ್ಕೆ ಜಾತಕವೆನ್ನುತ್ತಾರೆ. ೧೨ **ರಾಶಿಗಳು, ೯ ಗ್ರಹಗಳು, ಲಗ್ನ** ಇವು ಅದರ ಮುಖ್ಯಾಂಶಗಳು. **ಲಗ್ನ**ವೆಂದರೆ—ಹುಟ್ಟಿದ ಕಾಲದಲ್ಲಿ ಪೂರ್ವದಿಕ್ಕಿನಲ್ಲಿ ದಿಗಂತದಲ್ಲಿ ಇರುವ ರಾಶಿ.

ಉದಾಹರಣೆಗಾಗಿ ೧೯೨೪ ನೆಯ ಎಪ್ರಿಲ್ ೧೪ ನೆಯ ತಾರೀಖಿನ ದಿನ ರಾತ್ರಿ ೧೦-೩೦ ಕ್ಕೆ ಒಂದು ಗಂಡುಮಗು ಹುಟ್ಟಿತೆನ್ನೋಣ. ಅದರ ಜಾತಕ ಹೀಗಿರುತ್ತದೆ:—

	ರವಿ ಬುಧ	ಶುಕ್ರ	
ಕೇತು	ರಾಶಿ		
ಕುಜ			ಚಂದ್ರ ರಾಹು
ಲಗ್ನ	ಗುರು	ಶನಿ	

ಎಂದರೆ—ಹುಟ್ಟಿದ ಸಮಯದಲ್ಲಿ ಪೂರ್ವದಿಕ್ಕಿನಲ್ಲಿ ದಿಗಂತದಲ್ಲಿ ಧನುರ್‍ರಾಶಿ ಇತ್ತು. ರವಿ-ಬುಧರು ಮೇಷರಾಶಿಯಲ್ಲಿದ್ದರು. ಶುಕ್ರ ವೃಷಭದಲ್ಲಿ. ಚಂದ್ರ-ರಾಹು ಸಿಂಹದಲ್ಲಿ......ಇತ್ಯಾದಿ. ಇದಕ್ಕೆ ರಾಶಿಚಕ್ರವೆಂದು ಹೆಸರು.

ಇದಕ್ಕೆ **ಭಾವಲಗ್ನ**ವೆಂಬ ಹೆಸರೂ ಉಂಟು. ಇದರಂತೆಯೆ **ದ್ರೇಕ್ಕಾಣ, ನವಾಂಶ, ದ್ವಾದಶಾಂಶ, ತ್ರಿಂಶಾಂಶಾ**ದಿಗಳನ್ನು ಮಾಡಿ, ಗ್ರಹ-ರಾಶಿಗಳನ್ನು ಹಾಕಿ, ಆಯಾಯ ಚಕ್ರಗಳನ್ನೇರ್ಪಡಿಸಿದ ಮೇಲೆ ಮಗುವಿನ ಆಯುರ್ದಾಯಾದಿಗಳನ್ನು ನೋಡಿ, ಮುಂದಾಗುವುದನ್ನು ಹೇಳಲು ಪ್ರಯತ್ನಪಡುತ್ತಾರೆ. ಈ ರಾಶಿ, ಅಂಶ ಮುಂತಾದುವುಗಳನ್ನು ಏರ್ಪಡಿಸುವು-ದಕ್ಕೇ ಸಿದ್ಧಾಂತದ ಉಪಯೋಗ.

ಜಾತಕದಲ್ಲೇನಿದೆ? ಒಂದೊಂದು ರಾಶಿ (ಭಾಗ) ಒಂದೊಂದು ವಿಚಾರವನ್ನು ಹೇಳುತ್ತದೆಂಬುದು ಜ್ಯೋತಿಷ್ಕರ ಮತ. ಲಗ್ನ ಎಂದರೆ ೧ನೆಯ ಸ್ಥಾನ ತನುವಿನ ವಿಚಾರ; ೨ನೇಯದು ಧನ; ೩ ನೆಯದು ಸಹೋದರ, ಪರಾಕ್ರಮಾದಿಗಳು; ೪ ನೆಯದು ಮನೆ, ವಾಹನಾದಿಗಳು; ೫ ನೆಯದು ಮಕ್ಕಳು; ೬ ನೆಯದು ಶತ್ರು-ರೋಗಾದಿಗಳು; ೭ ನೆಯದು ಕಳತ್ರ; ೮ ನೆಯದು ಆಯುಸ್ಸು; ೯ ನೆಯದು ಸ್ಥಿರ ಆಸ್ತಿ-ತಂದೆ ಇತ್ಯಾದಿ; ೧೦ ನೆಯದು ಕರ್ಮ; ೧೧ ನೆಯದು ಲಾಭ; ೧೨ ನೆಯದು ನಷ್ಟ. ರವಿಯು ಜಾತಕನ ಆತ್ಮ; ಚಂದ್ರನು ಮನಸ್ಸು; ಕುಜ ಭ್ರಾತೃ; ಗುರು ಮಕ್ಕಳು; ಬುಧ ಜ್ಞಾನ; ಶುಕ್ರ ಕಳತ್ರ ಮತ್ತು ಶನಿ ಆಯುಸ್ಸು. ಇವುಗಳ ಸಂಕಲನ-ಸಂಯೋಗಗಳಿಂದ ಜಾತಕನ ತನು-ಮನ-ಧನಾದಿಗಳ ವಿಚಾರವು ಜಾತಕದಲ್ಲಿರುವುದು. ಆದರೆ 'ನನಗೆಷ್ಟು ರೂಪಾಯಿ ಸಂಬಳ ಬರತ್ತೆ?' ಎಂದರೆ, ರೂ. ಆ. ಪೈಗಳನ್ನು ಹೇಳಲಿಕ್ಕಾಗುವುದಿಲ್ಲ.

ಹೀಗೆಂದ ಮೇಲೆ **ಜಾತಕದಲ್ಲಿ ಹೇಳಬಹುದಾದ ವಿಚಾರವೇನು?** ಸಾಮಾನ್ಯವಾಗಿ ಮಾನವನ ಜೀವಮಾನದಲ್ಲಿ, ಅವನಿಗೂ ವಾತಾವರಣಕ್ಕೂ ಪ್ರತಿಕ್ಷಣಕ್ಕೂ 'ಕಲಹ'ವಿದ್ದಂತೆಯೆ ತೋರಿಬರುತ್ತದೆ. ಕೆಲವರು ತಮ್ಮ ವಾತಾವರಣವನ್ನು ಗೆದ್ದು ಮುಂದುವರಿಯುತ್ತಾರೆ; ಮತ್ತೆ ಕೆಲವರು ಅದೇ ವಾತಾವರಣದಲ್ಲಿ ಸಿಕ್ಕಿ ಒದ್ದಾಡಿ ಮಾಯವಾಗುತ್ತಾರೆ. ಅನುಕೂಲವಾದ ವಾತಾ-ವರಣವಿದ್ದರೂ ಒಂದೊಂದು ಸಲ ವ್ಯಕ್ತಿಯು ಅಧೋಗತಿಯ ದಾರಿಯನ್ನು ಹಿಡಿದಿರುವುದನ್ನು ನೋಡುತ್ತಲಿದ್ದೇವೆ. ಬಹಳ ಒಳ್ಳೆಯವನಾದರೂ ಇಲ್ಲದ ತೊಂದರೆಗೆ ಗುರಿಯಾಗಿ ನೊಂದಿರುವುದನ್ನು ಎಷ್ಟೋಸಲ ನೋಡಿದ್ದೇವೆ. ಇವುಗಳಿಗೆಲ್ಲಾ ಕಾರಣಗಳನ್ನು ಹುಡುಕುವುದಕ್ಕೆ ಹೊರಟಿದ್ದೇವೆ. ಕಾರಣಗಳಿಲ್ಲದ ಕಡೆ ಎಂದರೆ ನಮ್ಮ ದೃಷ್ಟಿಗೆ ಗೋಚರವಾಗದ ಕಡೆ—'ಅವರ ಕರ್ಮ' ಎಂದಿದ್ದೇವೆ ಈ ಕರ್ಮದ ಒಂದು ರೀತಿಯೆ ಜಾತಕದಲ್ಲಿ ಕಾಣುವುದೆಂದರೆ ಅತಿಶಯೋಕ್ತಿಯಲ್ಲ. ವಿಶೇಷವಾದ ಕೀರ್ತಿ-ಧನಾದಿಗಳು ಕಂಡುಬರುವ ಜಾತಕಗಳು **ರಾಜಯೋಗ ಜಾತಕ**-

ಗಳಿಂದೂ, ವಿಶೇಷವಾದ ತೊಂದರೆಗಳೇ ಪ್ರಧಾನವಾಗಿ ಕಂಡು ಬರುವ ಜಾತಕಗಳು ಅರಿಷ್ಟಯೋಗಜಾತಕಗಳೆಂದೂ ರೂಢವಾಗಿವೆ. ಜಾತಕಗಳನ್ನು ಅನೇಕ ಪಂಗಡಗಳನ್ನಾಗಿ ವಿಂಗಡಿಸಿದ್ದಾರೆ—ಆದರೆ ಪ್ರಕೃತ ಅವುಗಳಲ್ಲಿ ಇಷ್ಟು ಗೋಚರವಾಗುತ್ತವೆ ಎಂದರೆ ಸಾಕು:— **ದರಿದ್ರ ಜಾತಕ**—ಎಂತಹ ವಾತಾವರಣದಲ್ಲಿ ಹುಟ್ಟಿದರೂ ಅವನನ್ನು ದರಿದ್ರನನ್ನಾಗಿ ಮಾಡಿ, ಇಲ್ಲದ ತೊಂದರೆಗಳಿಗೆ ಗುರಿಮಾಡುವುದು. **ಸಾಮಾನ್ಯಜಾತಕ**— ಅನುಕೂಲವಾದ ವಾತಾವರಣದಲ್ಲ ಎಲ್ಲವೂ ಸರಿಯಾಗಿ ನಡೆಯುವುದು. ಹುಟ್ಟಿದ ಕುಲದ ಮಾನ-ಮರ್ಯಾದೆಗಳಿಗೆ ಕುಂದಿಲ್ಲ. **ಉತ್ತಮ ಜಾತಕ**—ಎಂತಹ ಹೀನಸ್ಥಿತಿಯಲ್ಲಿ ಜನನವಾದರೂ ಕಾಲಕ್ರಮೇಣ ವೃದ್ಧಿಹೊಂದಿ, ನಾಡಿನಲ್ಲಿ ಶ್ರೇಷ್ಠತೆಯನ್ನು ಪಡೆಯುವುದು. ಎಂತಹ ತೊಂದರೆಗಳೊದಗಿದರೂ ಧೈರ್ಯವು ಕುಂದದೆ ದಿನಕ್ರಮೇಣ ಕೀರ್ತಿ-ಧನಾದಿಗಳು ಸೇರುವುವು.

ದಶಾದಿಗಳು

ಯಾವ ಯಾವ ಕಾಲವು ಜಾತಕನಿಗೆ ಅನುಕೂಲ, ಯಾವ ಯಾವ ಕಾಲವು ಪ್ರತಿಕೂಲ ಎಂಬುದನ್ನು ಹೇಳುವ ರೀತಿಗೆ ದಶೆಗಳೆಂದು ಕರೆಯುತ್ತಾರೆ. ಪ್ರತಿಯೊಂದು ಜಾತಕಕ್ಕೂ ದಶೆಗಳುಂಟು; ಈ ದಶೆಗಳ ಮೂಲಕವೇ ಮುಂದೆ ನಡೆಯುವುದನ್ನು ಜ್ಯೋತಿಷ್ಕನು ಹೇಳುವುದು. ಸಾಮಾನ್ಯವಾಗಿ ನಾವು ಎಷ್ಟೋ ಸಲ ಕೇಳಿದ್ದೇವೆ; ಯಾರಿಗಾದರೂ ಅನುಕೂಲವಾದಾಗ 'ಅವನಿಗೇನಪ್ಪ ಶುಕ್ರಮಹರ್ದಶೆ ಇದ್ದ ಹಾಗಿದೆ' ಎಂತ. ಈ ಕಾಲ-ನಿರ್ಣಯವನ್ನು ಅನೇಕ ರೀತಿಯಿಂದ ಮಾಡುತ್ತಾರೆ.

(೧) ಗೋಳದಲ್ಲಿ ಗ್ರಹಗಳು ತಿರುಗುತ್ತಿವೆ. ಎಂದರೆ ಮೇಷ ರಾಶಿ ಮೊದಲುಗೊಂಡು ಮೀನರಾಶಿಯ ವರೆಗೆ ೧೨ಗ್ರಹಗಳು ಕಾಲಕ್ರಮೇಣ ತಮ್ಮ ತಮ್ಮ ಸ್ಥಳಗಳನ್ನು ಬದಲಾಯಿಸಿದ ಹಾಗೆಲ್ಲಾ ಜಾತಕನ ಪರಿಸ್ಥಿತಿಗಳು ಬದಲಾಯಿಸುತ್ತವೆಂದು ಒಂದು ಮತ. ಈ ಮತದ ಮೇರೆಗೆ ಗುರುಬಲ, ಶನಿಬಲ ಇವುಗಳನ್ನು ನೋಡುವುದು. ಇದೇ ಮತದ ಮೇಲೆ ಎಲ್ಲಾ ಗ್ರಹಗಳ ಬಲಗಳನ್ನೂ ನೋಡುವುದಕ್ಕೆ ಅಷ್ಟಕವರ್ಗ ಎಂದು ಹೆಸರು. ಗುರುಬಲ, ಶನಿಬಲಗಳು ಗೋಚಾರಕ್ಕೆ ಸಂಬಂಧಪಟ್ಟವುಗಳು. ಜಾತಕದ ವಿಚಾರ ಏನೂ ತಿಳಿಯದೆ ಇದ್ದವರು ಇದನ್ನು ಉಪಯೋಗಿಸುವುದು.

(೨) **ಪರಾಶರ ದಶಾಭುಕ್ತಿ** :— ಇದು ಪರಾಶರೋಕ್ತ; ಆದಕ್ಕಾಗಿಯೆ ಆ ಋಷಿಯ ಹೆಸರನ್ನೇ ಇದಕ್ಕೆ ಇಟ್ಟಿದ್ದಾರೆ. ಸಪ್ತಗ್ರಹಗಳಿಗೂ, ರಾಹುಕೇತುಗಳಿಗೂ ಈ ಮತದ ಮೇರೆಗೆ ಹಲವು ವರ್ಷಗಳನ್ನು ನಿರ್ಧರಿಸಿದ್ದಾರೆ. ಇದಕ್ಕೆ ಯಾವ ಆಧಾರವೆಂಬುದು-ಇನ್ನೂ ಸ್ಪಷ್ಟವಾಗಿಲ್ಲ. ಆದರೆ ರೂಢಿಯಲ್ಲಿ ಉಪಯೋಗದಿಂದ ಇದರ ನಿಜಾಂಶವನ್ನು ಅರಿಯಬೇಕಾಗಿದೆ. ರವಿ ೬, ಚಂದ್ರ ೧೦, ಕುಜ ೭, ರಾಹು ೧೮, ಗುರು ೧೬, ಶನಿ ೧೯, ಬುಧ ೧೭, ಕೇತು ೭ ಮತ್ತು ಶುಕ್ರ ೨೦ ವರ್ಷಗಳೆಂದು ತೀರ್ಮಾನಿಸಿದ್ದಾರೆ. ಒಟ್ಟು ೧೨೦ ವರ್ಷ. ಪರಮಾವಧಿ ೧೨೦ ವರ್ಷವೆಂದು ಮತವಿದ್ದರೂ ಇರಬಹುದು. ಇದನ್ನು ವಿಮರ್ಶಿಸಿ, ಚರ್ಚಿಸಿ ಅನೇಕ ವಿಚಾರಗಳನ್ನು ಡಾ|| ರೀಸ್ ಮುಂತಾದವರು ಬರೆದಿದ್ದಾರೆ. *

(೩) ಕಾಲಚಕ್ರ ಹೋರಾಗ್ರಂಥದಲ್ಲಿ ಸವ್ಯಾಪಸವ್ಯ ದಶೆಗಳೂ ಮಂಡೂಕಾದಿ ಗತಿಗಳೂ ಮುಂತಾದುವುಗಳಿಂದ ಕಾಲ-ನಿರ್ಣಯಮಾಡಿರುವರು. ಇದು ದಕ್ಷಿಣದೇಶಗಳಲ್ಲಿ ಹಲವು ಕಡೆ ರೂಢಿಯಲ್ಲಿದೆ. ಸಾಕಾದಷ್ಟು ಇದರಲ್ಲಿ ಕೆಲಸ ನಡೆದಿಲ್ಲ. ಇರುವ ಗ್ರಂಥದಲ್ಲಿ ಕೆಲವು ಭಾಗಗಳು ಹೋದಂತೆ ಕಾಣುತ್ತದೆ. ಇದಕ್ಕೆ ಕಾಲಚಕ್ರದಶೆ ಎನ್ನುತ್ತಾರೆ.

(೪) ಶೂಲ, ಭೋಗ, ಪಾಕ, ಯೋಗಾರ್ಧ, ದೃಕ್, ಮತ್ತು ತ್ರಿಕೋಣಾದಿ ದಶೆಗಳು ಜೈಮಿನಿಸೂತ್ರಗಳಲ್ಲಿವೆ. ಇವುಗಳನ್ನು ಬಹಳ ಮಂದಿ ರೂಢಿಗೆ ತಂದಿಲ್ಲ. ಇದಕ್ಕೆ ಕಾರಣ ಸೂತ್ರಗಳ ಪರಿಭಾಷೆ, ಅಲ್ಲದೆ ಕೆಲವು ಕಡೆ ಸಂದೇಹಗಳು ಹೆಚ್ಚಾಗುತ್ತವೆಯೆ ಹೊರತು ಕಡಿಮೆಯಾಗುವಂತೆ ತೋರಲಿಲ್ಲ. ಅನುಭವ ಹೆಚ್ಚಾಗಿದ್ದವರು ಈ ದಶೆಗಳನ್ನು ಪಯೋಗಿಸಿ ಅವುಗಳಿಂದ ಅತಿಶಯವಾದ ವಿಷಯಗಳನ್ನು ತಿಳಿದುಕೊಳ್ಳಬಹುದು. ಶೂಲ-

* ಇದರ ಚರ್ಚೆಯನ್ನು ಭಾರತಿ (ಮುಲ್ಕಿ) ೧೯೩೭-೧೯೩೮ ಸಂಚಿಕೆಗಳಲ್ಲಿ ನನ್ನ " ಜ್ಯೋತಿಷ " ಪ್ರಬಂಧಗಳಲ್ಲಿ ನೋಡಿರಿ.

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ

ರಜಿಸ್ಟರ್ಡ್

ಗೋವಾ ಮಲಮು

GOA OINTMENT

ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವ

ದಶೆಯ ಮೂಲಕವಾಗಿ ತಂದೆ, ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಇವರ ನಿಧನಕಾಲವನ್ನು ಕಂಡುಹಿಡಿಯಬಹುದು.

[ಆದರೆ ಪಾದ ೪ ಅಧ್ಯಾಯ ೨ ಸೂತ್ರ ೨೭ಕ್ಕೆ ಸರಿಯಾದ ಅರ್ಥ ಟೀಕಾದಿಗಳಿಲ್ಲದಿರುವುದರಿಂದ ಆ ಭಾಗವೇ ಅರ್ಥವಾಗದೆ ಲೋಪವಾಗಿದೆ.]

(೫) ಎಷ್ಟೋಸಲ ಸಾಮಾನ್ಯ ರಾಜಯೋಗಜಾತಕಗಳೆಂದು ಕಂಡುಬರುವ (ಸ್ಥೂಲ ರೀತಿಯಲ್ಲಿ) ಜಾತಕಗಳು, ವಾಸ್ತವವಾಗಿ ಹಣವಿಲ್ಲದೆ ಪೇಚಾಡುತ್ತಿರುವುದನ್ನು ಅನೇಕ ಜ್ಯೋತಿಷ್ಕರು ನೋಡಿರುತ್ತಾರೆ. ಪರಾಶರ ದಶಾಭುಕ್ತಿಯ ಪ್ರಕಾರವಾಗಿ ಪ್ರತಿಯೊಂದು ಮಹರ್ದಶೆಗೂ ಎಲ್ಲಾ ಗ್ರಹಗಳ ಭುಕ್ತಿ ಬರುತ್ತದೆ. ರಾಜಯೋಗವು ಪ್ರಾಪ್ತವಾಗುವುದಕ್ಕೆ ಒಂದು ಗ್ರಹದ ದಶೆ ಮತ್ತೊಂದು ಗ್ರಹಭುಕ್ತಿ ಬರಬೇಕು. ಇದು ಪರಾಶರದಶೆಯ ರೀತಿಯಾಗಿ ನಮಗೆ ಬಂದಂತೆ ತೋರಿದರೂ ಜಾತಕನ ವಾತಾವರಣವಾಗಲಿ, ಅವನ ಆಸ್ತಿಯಾಗಲಿ ವೃದ್ಧಿಯಾದಂತೆ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಆ ಜಾತಕಕ್ಕೆ ಪರಾಶರ ದಶಾಭುಕ್ತಿಯನ್ನು ಹೊಂದಿಸಿ ಬರೆದವರ ತಪ್ಪೇ ಹೊರತು ಜಾತಕದ ತಪ್ಪಲ್ಲ. ಇಂತಹ ಜಾತಕಗಳಿಗೆ ಬೃಹಜ್ಜಾತಕದಲ್ಲಿ ಹೇಳಿರುವ ಪಿಂಡಾಯುರ್ದಾಯ, ನೈಸರ್ಗಿಕಾಯುರ್ದಾಯ ಮುಂತಾದುವುಗಳನ್ನು ರಚಿಸಿ, ಆ ದಶಾಭುಕ್ತಿಗಳನ್ನು ಲೆಕ್ಕಮಾಡಿ ಜಾತಕನ ಭವಿಷ್ಯವನ್ನು ಹೇಳಬೇಕು. ಇದು ಸಾಮಾನ್ಯ ಜ್ಯೋತಿಷ್ಕನ ಕೈಯಿಂದ ಕಷ್ಟಸಾಧ್ಯ. ಸಾಕಾದಷ್ಟು ಲೆಕ್ಕ-ಪಕ್ಕಗಳು (Mathematics) ಅವನಿಗೆ ಬಂದಿರಬೇಕು. ರವಿಗೆ ಹೆಚ್ಚಾದ ಷಡ್ಬಲವಿದ್ದರೆ ಪಿಂಡಾಯುರ್ದಾಯ; ಚಂದ್ರನಿಗೆ ಹೆಚ್ಚಾದ ಷಡ್ಬಲವಿದ್ದರೆ ನೈಸರ್ಗಿಕಾಯುರ್ದಾಯ; ಶುಕ್ರನಿಗೆ ಹೆಚ್ಚಾಗಿದ್ದರೆ ಚಕ್ರಾಯುರ್ದಾಯ; ಬುಧನಿಗೆ ಹೆಚ್ಚಾಗಿದ್ದರೆ ರಾಶ್ಮೀಜ ಆಯುರ್ದಾಯ.. ಯಾವ ಗ್ರಹಕ್ಕೂ ಹೆಚ್ಚಾದ ಷಡ್ಬಲವಿಲ್ಲದಿದ್ದರೆ ಜೀವಶರ್ಮಾಯುರ್ದಾಯ ಇತ್ಯಾದಿ. ಈ ವಿಚಾರಗಳನ್ನು ಬೃಹಜ್ಜಾತಕ, ಬೃಹತ್-ಪರಾಶರ ಹೋರಾಶಾಸ್ತ್ರ, ಸಾರಾವಳಿ ಮುಂತಾದ ಗ್ರಂಥಗಳಿಂದ ತಿಳಿಯಬಹುದು. ಈ ರೀತಿಯು ಶಾಸ್ತ್ರೋಕ್ತ. ಉತ್ತರದಲ್ಲಿ ಕೇಶವ ಪದ್ಧತಿ; ದಕ್ಷಿಣದಲ್ಲಿ ಶ್ರೀಪತಿಪದ್ಧತಿ. ಇವುಗಳನ್ನನುಸರಿಸಿ ಹಿಂದೆ ಕೆಲಸ ಮಾಡುತ್ತಿದ್ದಂತೆ ತೋರುತ್ತದೆ.

(೬) **ನಾಡೀಗ್ರಂಥಗಳು:—** ಕೆಲವು ಸಂದರ್ಭಗಳಲ್ಲಿ ರೀತಿಯನ್ನು (Method of working) ಹೇಳದೆ ಜಾತಕ ಫಲಗಳನ್ನು ಬರೆದಿಟ್ಟಿದ್ದಾರೆ. ಇಂತಹ ಗ್ರಂಥಗಳು ಬೇರೆ ಬೇರೆ ಹೆಸರಿನಿಂದ ಪ್ರಚಾರದಲ್ಲಿವೆ. ವಿಚಾರತ್ತಿನಲ್ಲಿ 'ಭೃಗುಸಂಹಿತಾ' ಎಂದು ಕರೆಯಲ್ಪಡುವ ಒಂದು ಗ್ರಂಥದಲ್ಲಿ ಈ ರೀತಿಯಾಗಿ ಫಲಗಳನ್ನು ಬರೆದಿಟ್ಟ ಕೆಲವು ಜಾತಕಗಳಿವೆ. ಕುಂಡಲಿಗಳಲ್ಲಿ ಚಂದ್ರ–ಲಗ್ನಗಳಿಲ್ಲ. ಮಿಕ್ಕ ಗ್ರಹಗಳ ರಾಶಿಗಳನ್ನು ನೋಡಿ ಕುಂಡಲಿಯನ್ನು ಕಂಡುಹಿಡಿದರೆ, ಆ ಕುಂಡಲಿಯ ಫಲವೇ ಜಾತಕನ ಫಲ. ಕೆಲವು ಸಂದರ್ಭದಲ್ಲಿ ಸರಿ ಹೋಗಿದೆ. ಅನೇಕ ಸಂದರ್ಭಗಳಲ್ಲಿ ಫಲಕ್ಕೂ ನಿಜಸ್ಥಿತಿಗೂ ಬಹಳ ವ್ಯತ್ಯಾಸ.

ಇದರಂತೆ ಶುಕ್ರನಾಡಿ ಗ್ರಂಥಗಳು ಮೈಸೂರು ಓರಿಯೆಂಟ್ ಲೈಬ್ರೆರಿಯಲ್ಲಿವೆ. ಒಂದು ಗ್ರಂಥದಲ್ಲಿ 'ರಾಶಿ-ಲಗ್ನಗಳನ್ನು '೧೫೦ ಭಾಗವಾಗಿ ವಿಂಗಡಿಸಿದಂತೆ ಕಾಣುತ್ತದೆ. ಯಾವ ಜಾತಕದ ಫಲವನ್ನು ನೋಡಬೇಕಾದರೂ ಇದರಂತೆಯೇ ೧೫೦ ಭಾಗವನ್ನು ಮಾಡಿ, ಆಯಾಯ ರಾಶಿ–ಗ್ರಹಗಳ ಕುಂಡಲಿಗಳನ್ನು ಹುಡುಕಬೇಕು. ಬಹಳ ಹಳೆಯ ಗ್ರಂಥವದು. ಕೆಲವುಕಡೆಗೆ ಹೆಸರು ಹೋಗಿಬಿಟ್ಟಿದೆ. ಇದರಲ್ಲಿ ಸ್ವಲ್ಪಮಟ್ಟಿಗೆ ಪರಿಶ್ರಮವಿರುವವರಿಗೆ ರುಚಿಸಲೆಂದು ಆ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ– ೧ ವರುಧಾಂಶ ೨ ವೈಷ್ಣವಿ ೩ ಬ್ರಾಹ್ಮ್ಯ ೪ ಕಾಲಕೂಟ ೫ ಶಂಕರಾಂಶ. ೬ ಪೂರ್ವಕರಿ. ೭ ಸಾಮಾಂಶ. ೮ ಸಾಮ್ಯಾಂಶ ೯ ಶೂರಾಂಶ ೧೦ ಮಾಯಾ. ೧೧ ಮನೋಹರಾಂಶ. ೧೨ ಮಾಧವಿ ೧೩ ಮಂಜುಸ್ವಾನಾಂಶ ೧೪ ಘೋರಾಂಶ ೧೫ ಕುಂಭಿನಿ ೧೬ ಕುಟಿಲ ೧೭ ಪ್ರಭಾಂಶ ೧೮ ಪರಾಂಶ ೧೯ ಪಯಸ್ವಿನಿ ೨೦ ಮಾತಾಂಶ ೨೧ ಚತನಿ ೨೨ ಭರ್ಜರ ೨೩ ಧ್ರುವ ೨೪ ಮುಸಲ ೨೫ ಪಾಶಾ ೨೬ ಮುದ್ಗರಾಂಶ ೨೭ ಚಂತಕಾಂಶ ೨೮ ಮೇದಿನಿ ೨೯ ಮಹೀ ೩೦ ಕಲುಷ ೩೧ ಕಮಲ ೩೨ ಕಂಠಾಂಶ ೩೩ ಕಾಟಾ ೩೪ ಕರಿಕರ ೩೫ ಕ್ಷಮ ೩೬ ದುರ್ಧರ ೩೭ ಮುದ್ಗಾರ ೩೮ ವಿಶ್ವೇಶ ೩೯ ವಿಚ್ಛಿನ್ನ ೪೦ ವಿಕಟ ೪೧ ಅವಿಮ ೪೨ ವಿಭ್ರಮ ೪೩ ಸುಖದಾ ೪೪ ಸ್ನಿಗ್ಧ ೪೫ ಸೋದರ ೪೬ ಸುರ ಸುಂದರಿ ೪೭ ಅಮೃತಪ್ಲಲ ೪೮ ಕಳಾಂಶ ೪೯ ಕಾಮುದ್ರಿಕ ೫೦ ಕರವೀರಣಿ ೫೧ ಗಹ್ವರಾಂಶ ೫೨ ಕುಟ್ಟಿಕ ೫೩. . . . . . ೫೪ ವಿಷಕ್ರಿ ೫೫. ವಿಷನಾಶಿನಿ. ೫೬ ಚರ್ಮದ ೫೭ ಶೀತಳ ೫೮ ನಿಮ್ನಾಂಶ ೫೯ ಪ್ರೀತ್ಯಂಶ ೬೦ ಕ್ರಿಯಾವರ್ಧಿನಿ ೬೧. . . . . . ೬೨ ದುರ್ಭಾಗ ೬೩ ಚಿತ್ರಾಂಶ ೬೪ ಚಿತ್ರಿಣಿ ೬೫ ಚಿರಜೀವಿನಿ. ೬೬ ನವಾಂಶ ೬೭ ಗಹ್ವರ್ಯಾಂಶ ೬೮ ನಾಳಾಂಶ ೬೯ ಮಂಹಿನೀ ೭೦ ನಿರ್ಮಲ ೭೧. . . . . . ೭೨ ಸುಧಾಮೃತಾಂಶ ಕರ್ಣ ೭೩ ಹಾಲಾಹಲ ವಿಷಂಬರ ೭೪ ತ್ರಿಲೋಕ್ಯ ಮೋಹನ ೭೫ ಮಹಾಮಾರಿ. ೭೬ ಸುಸೀತಲ ೭೭ ಸುಖದಾ ೭೮ ಸುಪ್ರಭಾ ೭೯. . . . . . ೮೦. . . . . . ೮೧ ಶಿವದ ೮೨ ಶಿವ ೮೩ ಖಿತ ೮೪ ಅಖಿತ ೮೫ ಗದ ೮೬ ಸೌಧ ೮೭ ನೂತನ ೮೮ ಸುಮನಾಂಕ ೮೯ ಸಿತಾಂಶ ೯೦ ಸೋಮವಲ್ಲಿ ೯೧ ಸೋಮಲತ ೯೨ ಮಂಗಳ ೯೩ ಮುದ್ರಿಕಾ ೯೪ ಕ್ಷುಧಾ ೯೫ ಮೇಳವಗಾ ೯೬ ಅಶ್ವಲಯಾಂಶ ೯೭ ನವನೀತಾ ೯೮ ನಿಶಾಪದಾ ೯೯ ನಿವರ್ತಿನೀ ೧೦೦ ನವದಂಶ ೧೦೧ ಸಾರಾ ೧೦೨ ಸಾಮಗಾ ೧೦೩ ಸಮದಾಂಶ ೧೦೪ . . . . . . ೧೦೫ ವಿಶ್ವಂಭರ ೧೦೬ ಕುಮಾರಿ ೧೦೭ ಕೋಕಿತ ೧೦೮ ಕುಂಚಲಕೃತಿ ೧೦೯ ಇಂದ್ರ ೧೧೦ ಸ್ವಹಾ ೧೧೧ ಸ್ವದಾಂಶ ೧೧೨ ವಹ್ನಿ ೧೧೩ ಪ್ರೇತಾ ೧೧೪ ರಕ್ಷಾಂಶ ೧೧೫ ಚಲದೃಹ ೧೧೬ ವಾರುಣೀ ೧೧೭ ಮಂದಿರಾ ೧೧೮ ಮೈತ್ರೀ ೧೧೯. . . . . .೧೨೦. . . . . .

ಇದಲ್ಲದೆ 'ದೇವಕೇರಳೀಯ' 'ಬುಧನಾಡಿ' ಮುಂ. ಗ್ರಂಥಗಳು

ಹಿಂದಿನ ಕಾಲದಲ್ಲಿದ್ದುವೆಂದು ತಿಳಿದುಬಂದಿದೆ. ಈಗಲೂ ಅಲ್ಲಲ್ಲಿ ಓಲೆಗರಿಯಲ್ಲಿ ಬರೆದ ಕೆಲವು ಗ್ರಂಥಗಳು ಕೆಲವರಲ್ಲಿವೆ.

(೭) ಸಾಮುದ್ರಿಕಶಾಸ್ತ್ರಕ್ಕೂ ಜ್ಯೋತಿಷ್ಯಕ್ಕೂ ಸಂಬಂಧವಿದೆ ಎಂಬುದು ನಮಗೆ ಗೋಚರವಾಗಬೇಕಾದರೆ ರೇಖಾಶಾಸ್ತ್ರವನ್ನು ನೋಡಬೇಕು. ಇದು ಹಳೆಯ ತಮಿಳು ಭಾಷೆಯಲ್ಲಿದೆ ಎಂದು ರೇಖಾಶಾಸ್ತ್ರದ ಪಂಡಿತರೊಬ್ಬರು ಹೇಳಿದರು. ಬೆಂಗಳೂರಿನಲ್ಲಿ ಸಾವಿರಾರು ಜಾತಕಗಳು ಈ ಶಾಸ್ತ್ರದ ಮೂಲಕ ಬರೆಯಲ್ಪಟ್ಟುವು. ಕೈಯನೋಡಿ, ಕೈಯಲ್ಲಿಯ ರೇಖೆಗಳನ್ನು ನೋಡಿ, ಆ ರೇಖೆಗಳನ್ನೇ ಒಂಗೊಂಡ ಹಲವು ರೇಖೆಗಳನ್ನೂ ನೋಡಿ, ಅವನ ಜಾತಕವನ್ನು ಹೇಳಿದ್ದನ್ನು ಕೇಳಿದ್ದೇವೆ. ಸುಮಾರು ನಲವತ್ತು ಜಾತಕಗಳನ್ನು ಅಲ್ಲಿಯೆ ಗುಣಿಸಿ ನೋಡಿದುದೂ ಆಗಿದೆ. ಒಂದು ಸಲವಾದರೂ ಗ್ರಹಗಳ ರಾಶಿ ಮುಂತಾದುವುಗಳಲ್ಲಿ ವ್ಯತ್ಯಾಸ ಬರಲಿಲ್ಲ. ತಂದೆಯ ಹೆಸರು ಅಕ್ಕ-ತಂಗಿಯರ ಹೆಸರು, ಜಾತಕನ ಹೆಸರು ಮುಂತಾದುವುಗಳನ್ನೆಲ್ಲಾ ಅದರಲ್ಲೇ ಒಂದು ರೀತಿಯಲ್ಲಿ ಬರೆದಿರುತ್ತಾರೆ. ಹಿಂದೆ ನಡೆದದ್ದೆಲ್ಲಾ ಸರಿಯಾಗಿದ್ದಂತೆ ತೋರುತ್ತದೆ. ಮುಂದಿನ ವಿಚಾರ (ಭವಿಷ್ಯ) ಬಹಳ ಜಾತಕಗಳಲ್ಲಿ ಸರಿಯಾಗಿ ಬರಲಿಲ್ಲ. ಹಸ್ತಸಾಮುದ್ರಿಕಕ್ಕೂ ಜಾತಕಕ್ಕೂ ಸಂಬಂಧವುಂಟೆಂದು ಯುರೋಪಿನಲ್ಲೂ ಪ್ರತೀತಿಯುಂಟು. ಕಲ್ಕತ್ತಾದಲ್ಲಿ ಕಿರೋಲಾಜಿಕಲ್ ಸೊಸೈಟಿ (Chirological Society, Amhcrst Row) ಯವರು ಈ ವಿಚಾರವಾಗಿ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ.

ಈ ನಾಡೀಗ್ರಂಥಗಳಿಂದ ಭವಿಷ್ಯವನ್ನು ಹೇಳುವವರಲ್ಲಿ ಒಂದು ದೊಡ್ಡ ಗುಣ. ಅವರು ಶಾಸ್ತ್ರವಾದಕ್ಕೆ ಇಳಿಯುವುದಿಲ್ಲ. ತಮಗೆ ಸಾಮಾನ್ಯವಾಗಿರುವ ಜ್ಯೋತಿಷದ ಭಾಗವು ಹೆಚ್ಚಾಗಿ ತಿಳಿದಿಲ್ಲವೆಂದು ಅವರೇ ಒಪ್ಪಿಕೊಳ್ಳುತ್ತಾರೆ. ಆ ಗ್ರಂಥದಲ್ಲಿ ಜಾತಕ ಸಿಕ್ಕರೆ ಫಲ, ಇಲ್ಲದಿದ್ದರೆ ಇಲ್ಲ. ಇದರಿಂದ ಗ್ರಂಥವನ್ನು ಬಹಳ ಜೋಪಾನಮಾಡುವ ರೀತಿಯಲ್ಲಿರುತ್ತಾರೆ. ಹತ್ತಾರು ಭವಿಷ (Readings) ತೆಗೆದುಕೊಂಡು, ಅದರಲ್ಲಿಯ ರೀತಿಯನ್ನು ಕಂಡು ಹಿಡಿಯಲು ಇನ್ನೂ ಯಾರೂ ಪ್ರಯತ್ನಪಟ್ಟಂತೆ ಕಾಣುವುದಿಲ್ಲ.

'ಭೃಗುಸಂಹಿತೆ' ಎಂಬ ನಾಡೀಗ್ರಂಥದ ಭಾಷೆ-ರೀತಿಗಳು ಹೇಗಿರುತ್ತವೆಂಬುದನ್ನು ತೋರಿಸಲು ಆ ಗ್ರಂಥದ ಒಂದು ಪುಟವನ್ನು ಇಲ್ಲಿ ಬರೆಯಲಾಗಿದೆ:

ಶ್ರೀ ಗಣೇಶಾಯನಮಃ ಏವಂ ಗ್ರಹಸ್ಥಾಪಿತ್ವಾ ಬಹು ಭಾಗೀಚ ಬಾಲಕಃ ಸತ್ಯವಾದೀ ಭವೇತ್ಪಾಲೋ ಭೃಗುಣಾ ಪರಿಭಾಷಿತಃ ಪರಮಾರ್ಥಾ ಸವಿಜ್ಞೇಯೋ ಪ್ರಮಾದೀ ಪ್ರಸವಃ ಪುಮಾನ್ ದೇವದ್ವಿಜರತೋ ನಿತ್ಯಂ ಪ್ರಿಯವಕ್ತಾಸು ಪುತ್ರವಾನ್ ಬುದ್ಧಿ ದೀರ್ಘ ಆಯುಸ್ಥಾದಶ ಕೀರ್ತಿ ಕುಲವರ್ಧನಃ ಸುಂದರೋ ಗುರು ಭಕ್ತಶ್ಚ ನವೀ.... ತಪನಂ ಕೃತ್ವೆ. ಚಂದ್ರಮಿತ್ರ ಪರಂ ಪ್ರೀತಿ ಚಿತ್ತವೃತ್ತಿ ಅಶಕ್ತಯಾ ದೀರ್ಘ ಕಾರ್ಯಾಪಿ ಆಗತ್ವಾ ಸರ್ವಸುಖಂ ವ್ಯತೀಪಾತಃ............

* * *

"ವ್ಯೋಮವೇದ ಮಿತೇ ವರ್ಷೆ ವಾಣವೇದ ಮಿತೇತಥಾ ದೇಹಕಷ್ಟ ವಿಜಾನೀಯಾತ್ ಪಿತೃಪೀಡಾಚ ದಶ್ಯತೆ, ಮಾನಸೀ ವಿವಿಧಾ ಚಿಂತಾ ನವೀನೋ ತಪನಂ ಕೃತೇ ವೈದ್ಯೋಪಾಯಕಂ ಕೃತ್ವಾ ಭಂತ್ರದಾನಷ್ಚ ಶಾಂತಯೆ. ಅಕಸ್ಮಾತ್ ಉಪದ್ರೋವ ಜೀವ ಚಿಂತಾಚ ಪ್ರಾಪ್ತ್ಯಯೆ ಶಸ್ತ್ರವಿಘ್ನ ಉಪಾಧೀಚ ಕಿಂಚಿತ್ಕಾಲ ಶಾಂತಯೆ. ಧನಂ ವ್ಯಯ ವೃಥಾ ಜೀವ ಗುಪ್ತ ಚಿಂತಾ ಶರೀರಜಮ್ ಅಲ್ಪಕಷ್ಟ ಚ ಪ್ರಾಪ್ನೋತಿ ಪಿತೃಪೀಡಾ ಚಗುಪ್ತತಾ | ಶುಕ್ರೋವಾಚ || ಕೇನ್ವಚಾಪ್ಯೇನ ದಾನೇನ ಕಷ್ಟಂ ನಶಯತಿ ಭೋಮುನೇ || ಭೃಗುವಾಚ || ಸ್ವರ್ಣಸ್ಯ ಪ್ರತಿಮಾಕಾರ್ಯ ಶ್ರದ್ಧಾ ಮಾತ್ರ ಪ್ರಮಾಣಕೀ ತನ್ಮಧ್ಯೇಚ ಲಿಖೇನ್ಮೂರ್ತಿ ವಿಪ್ರವಾಲಸ್ಯ ಭಾರ್ಗವಃ ಸಂಪುಟಂ ಕಾಯ ಜೀವೇನ ಮಂತ್ರಭಾಗತ್ರತಾ ಚರೇತ್ ಏಕಾದಶಾ ಸಹಸ್ರಶ್ಚ ಮಂತ್ರ ಚಾಪ್ಯಂಚ ಕಾರಯೇತ್...................... ಚಂದ್ರಷ್ಟಮಿತೇಬ್ದೇಚ ವ್ಯೋಮ ಸಪ್ತಮಿತೇ ತಥಾ ಮಧ್ಯಗಾಥಾಚ ಕತ್ಯಂತೇ ಭೃಗುಣಾ ಪರಿಭಾಷಿತ ಪೌತ್ರಜನ್ಮನ ಸಂದೇಹೋ ತಥಾ ಮಾತ್ರ ವಿವಾಹಕಮ್ ಮಂಗಳಂ ಗ್ರಹಮಧ್ಯೇಚ ನೃತ್ಯಗೀತಾದಿಕಂಭವೇತ್. ಚಂದ್ರಸಪ್ತಗತೇವರ್ಷೇ ಬಹುಪೀಡಾ ಚ ಪ್ರಾಪ್ಯತೇ ವೈದ್ಯೋಪಾಯಕಂ ಕೃತ್ವಾ ಪ್ರಾಣಗಮನೋನಸಂಶಯಃ ||

(೧) ಅನೇಕ ವ್ಯಾಕರಣ ದೋಷಗಳು ಇದರಲ್ಲಿ ಅಡಗಿರುತ್ತವೆ. ಅವನ್ನು ಸರಿಮಾಡಿಕೊಂಡು ಓದಲು ಸ್ವಲ್ಪ ಅಭ್ಯಾಸ ಬೇಕು.

(೨) ಪಾರಿಭಾಷಿಕ ಶಬ್ದಗಳು. ಉದಾ: 'ಚಂದ್ರಸಪ್ತಗತೇವರ್ಷೇ' ಎಂಬುದಕ್ಕೆ ಆ ಪಾರಿಭಾಷಿಕ ಶಬ್ದಗಳನ್ನು ಬಲ್ಲವರೇ ಅರ್ಥ ಮಾಡಬೇಕು. ಚಂದ್ರ = ೧. ಸಪ್ತ = ೭. ಚಂದ್ರಸಪ್ತ ಎಂದರೆ ೧೭; ಇದನ್ನು ಬದಲಾಯಿಸಿ ೭೧ ವರ್ಷವೆಂದು ಅರ್ಥ ಮಾಡಬೇಕು ಕೆಲವು ಗ್ರಂಥಗಳಲ್ಲಿ ವರ್ಣಗಳನ್ನು ಸಂಖ್ಯೆಗಳ ಬದಲಾಗಿ ಉಪಯೋಗಿಸಿರುತ್ತಾರೆ. ಉದಾ: ಜೈಮಿನಿ ಸೂತ್ರಗಳಲ್ಲಿ **ಪಂಚಮೂಷಕ ಮಾರ್ಜಾರಾಃ** ಪಂಚ = ೧. ಮತ್ಸ್ಯ ೬. (ಏತಕ್ಕೆಂದರೆ ಕಟಪಯಾದಿ ಸೂತ್ರದಿಂದ ಇದಕ್ಕೆ ಅರ್ಥ ಮಾಡಬೇಕು.) ಇದನ್ನು ಬದಲಾಯಿಸಿ ಬರೆದರೆ ೬೧. ಅದನ್ನು ೧೨ ರಿಂದ ಭಾಗಿಸಿದರೆ ಶೇಷ = ೧. ಈ ಸೂತ್ರದ ಪ್ರಕಾರ ಆತ್ಮಕಾರಕನು ಮೇಷನವಾಂಶದಲ್ಲಿದ್ದರೆ ಜಾತಕನಿಗೆ ಮೂಷಕ ಮಾರ್ಜಾರಾದಿಗಳಿಂದ ತೊಂದರೆ ಎಂದರ್ಥ ಮಾಡಬೇಕಾಗಿದೆ.

(೩) ಅಲ್ಲಲ್ಲೇ ಗುರು-ಶಿಷ್ಯರ ಸಂವಾದ ಕಂಡುಬರುತ್ತದೆ. ಜಾತಕನು ಜೋಯಿಸನಿಗೆ ಕೇಳಬೇಕಾದ ಪ್ರಶ್ನೆಯನ್ನು ಶಿಷ್ಯನು ಗುರುವನ್ನು ಕೇಳುತ್ತಾನೆ. ಇಲ್ಲಿ ಕೊಟ್ಟಿರುವ ಉದಾಹರಣೆಯಲ್ಲಿ ಶುಕ್ರನು ಭೃಗುವನ್ನು ಕೇಳುತ್ತಾನೆ. ಇದಕ್ಕೆ ಉತ್ತರ ಭೃಗುಮಹರ್ಷಿ ಹೇಳುತ್ತಾನೆ ಎಂದರ್ಥ.

ಜೋತಿಷದಲ್ಲಿ ಜಾತಕಭಾಗವು ನಮ್ಮಲ್ಲಿ ಎಷ್ಟಿದೆ ಎಂಬುದು ಇದರಿಂದ ಸ್ಥೂಲವಾಗಿ ತಿಳಿಯುತ್ತದೆ.

ಜಯರಾಮದಾಸ ದೌಲತ್‌ರಾಂ

'ಹರಟೆಯ ಮಲ್ಲ'

★

ಸಿಂಧವು ಮುಸ್ಲಿಮ್ ಬಹುಸಂಖ್ಯಾಕರ ಪ್ರಾಂತ; ಅಲ್ಲಿಯ ಆಡಳಿತದಲ್ಲಿ ಮುಖ್ಯಾಧಿಕಾರವೆಲ್ಲ ಮುಸಲ್ಮಾನರ ಕೈಯಲ್ಲಿ; ಆದರೂ ಅಲ್ಲಿ ಮುಸ್ಲಿಂಲೀಗಿನ ಕೈವಾಡಕ್ಕೆ ಆಸ್ಪದವಿಲ್ಲ. ಆ ಕೈವಾಡಕ್ಕೆ ಸಿಕ್ಕಿಕೊಂಡ ಮಂತ್ರಿಮಂಡಲ ತಲೆಕೆಳಗಾಗಿ ಹೋಯಿತು. ಇದೆಲ್ಲಕ್ಕೂ ಕಾರಣವೇನಾದರೂ ಇದ್ದರೆ ಅದು ಜಯರಾಮದಾಸರ ದಿವ್ಯವ್ಯಕ್ತಿತ್ವ.

★

'ನಾ ಹೆಚ್ಚೋ ನಿನ್ನ ತವರ್ಹೆಚ್ಚೋ' ಎಂದು ದುಃಖಿತಳಾಗಿದ್ದ ಗರತಿಯನ್ನು, ಹಳ್ಳಿಯ ನಲ್ಲನೊಬ್ಬನು ಒಳಗೆ ಹೋಗಿ ಕೇಳಿದನಂತೆ. ಜನಪದಸಾಹಿತ್ಯದಲ್ಲಿ ಬರುವ ಈ ಚಿತ್ರ ಜಗತ್ತಿನ ಕೌಟುಂಬಿಕ ಜೀವನದ ಅಸಾಧ್ಯನಂತವಾದ ಕೂಟಪ್ರಶ್ನೆಯೊಂದನ್ನು ಸಹಜಮಧುರವಾಗಿ ಚಿತ್ರಿಸುತ್ತದೆ. ತವರಿನ ಮಮತೆ ಎಂಥ ಹೆಣ್ಣಿಗೂ ತಪ್ಪಿದ್ದಲ್ಲ. ತಪ್ಪಬೇಕಾದ ಅಗತ್ಯವೂ ಕಾಣುವುದಿಲ್ಲ. ಪತಿಯ ಪ್ರೇಮವಂತೂ ಹೊಸ ಲೋಕವನ್ನೇ ತೆರೆದು ಕೊಟ್ಟಿದೆ. ಜೀವನಪ್ರವಾಹಕ್ಕೆ ಎರಡೂ ಎರಡು ದಂಡೆಗಳು. 'ಅದು ಹೆಚ್ಚು ಇದು ಹೆಚ್ಚು' ಎಂಬ ತರ್ಕಕ್ಕೆ ಅಲ್ಲಿ ಸ್ಥಾನವಿಲ್ಲ. ಹೀಗಿದ್ದರೂ ಗರತಿಗೆ ತವರಿಗಿಂತ ಪತಿಗೃಹ ಹೆಚ್ಚೇ. ಮಡದಿಯ ಒಲವಿನ ಬಾಳಿನಲ್ಲಿ ಇಂಥ ವಿಚಿತ್ರಪ್ರಶ್ನೆಯು ಕೂಡ ಮಗಳ ಮಮತೆಯೊಡನೆ ಮುಳುಗಿಹೋಗುತ್ತದೆ. ಪತಿಯ ಈ ಪ್ರಶ್ನೆಗೆ ಸತಿಯ ಮೌನ—ಸ್ಪಷ್ಟವಾಗಿಯೇ ನೀರವವಾಗಿ ಕೇಳಿಸುವ ಮೆಲುನಗೆಗಳಿಗೆ ಬೇರೆ ಅರ್ಥವಿಲ್ಲ.

ಜೀವನದ ಅನೇಕ ರಂಗಗಳಲ್ಲಿ ಇಂಥ ಸಮಸ್ಯೆಗಳು ಮಾನವನ ಕಣ್ಣಮುಂದೆ ಬಂದು ನಿಲ್ಲುತ್ತವೆ: ಸಮರಸ ಜೀವನದ ತೂಕ ತಪ್ಪಿದರೆ ಕಾರ್ಪಣ್ಯದ ಪಾಲಾಗಿ ಧರ್ಮಸಮ್ಮೂಢರಾಗುವುದು ಇಂಥ ಸಂದರ್ಭದಲ್ಲಿ ಸಹಜ. ಸಾಧಾರಣ ಜನರಲ್ಲಿ ಆ ತೂಕವಿರದೆ ಆ ಸಮರಸಜೀವನದ ನೆಲೆಯಿರದೆ ಬಾಳು ಕಹಿಯಾಗಿ ಹೋಗುತ್ತದೆ; ತಪ್ಪುಗಂಟಾಗುತ್ತದೆ. ತತ್ತ್ವಕ್ಷೇತ್ರದಲ್ಲಿ, ರಾಜಕೀಯ ರಂಗದಲ್ಲಿ, ವ್ಯವಹಾರದಲ್ಲಿ ಇಂಥ ಪ್ರಶ್ನೆಗಳು ತಿಳಿಗಣ್ಣವರಿಗೆ ಸದಾ ಬರುತ್ತಿರುತ್ತವೆ.

ಒಮ್ಮೊಮ್ಮೆ ಇಂಥ ಪ್ರಶ್ನೆಗಳಿಗೆ ಒಬ್ಬೊಬ್ಬರು ಧೀರೋದಾತ್ತರು ಕೊಟ್ಟ ಉತ್ತರ, ಇಂಥ ಸಂದರ್ಭಗಳಲ್ಲಿ ಅವರು ನಡೆದುಕೊಂಡ ರೀತಿ ದೇಶದ–ಜನಾಂಗದ—ಹೊಸ ಇತಿಹಾಸಕ್ಕೇ ಕಾರಣವಾಗಬಹುದು.

ಹಿಂದುಸ್ಥಾನದ ಸದ್ಯದ ರಾಜಕೀಯ ಜೀವನದಲ್ಲಿ ಇಂಥದೊಂದು ಕಠಿನ ಸಮಸ್ಯೆ ಅಡಿಯ ಕೆಸರೊಳಗಿಂದ ಕೇಳಿಬಂದಿದೆ. ಪರಿಸ್ಥಿತಿಗೆ ಅನುಸಾರವಾಗಿ ಬೇರೆ ಬೇರೆ ರೂಪಗಳಿಂದ ಕಂಡು ಬಂದರೂ ಎಲ್ಲ ಕಡೆಯೂ ವ್ಯಾಪಿಸಿದೆ. 'ರಾಷ್ಟ್ರೀಯತೆ ಹೆಚ್ಚೋ ಜಾತಿನಿಷ್ಠೆಯು ಹೆಚ್ಚೋ?' ಎಂಬ ಸಂದೇಹ ಎಲ್ಲೆಡೆಯಲ್ಲೂ ಹಬ್ಬಿದೆ. ಮಹಮ್ಮದೀಯರಲ್ಲಿ ಈ ಸಂಶಯ ಇನ್ನೂ ಬೆಳೆದಿಲ್ಲವಾಗಲಿ, ಹಿಂದುಗಳಲ್ಲಿ ಎಲ್ಲರೂ ತಮತಮಗೆ ತೋರಿದಂತೆ ಈ ಪ್ರಶ್ನೆ ಬಿಡಿಸುತ್ತಿದ್ದಾರೆ. ಹಿಂದೂಜನ ಬಹು ಸಂಖ್ಯಾಕರಾಗಿಯೂ ಬಲಿಷ್ಠರಾಗಿಯೂ ಇದ್ದರೆ ರಾಷ್ಟ್ರೀಯತೆ ಸಹಜವಾಗಿಯೇ ಬರುತ್ತದೆ. ಬಹುಸಂಖ್ಯಾಕರಾಗಿದ್ದೂ ದುರ್ಬಲರಾಗಿರುವೆಡೆ, ಬಲಿಷ್ಠರಾಗಿದ್ದರೂ ಅಲ್ಪಸಂಖ್ಯಾಕರಾಗಿರುವೆಡೆ ಜಾತಿನಿಷ್ಠೆ ಕೊಂಚವಾದರೂ ಇರುವುದು ಸಹಜವಾಗಿದೆ.

ಶ್ರೀ. ಜಯರಾಮದಾಸ್ ದೌಲತ್‌ರಾಮ್ ಅಂಥದೊಂದು ಪ್ರಾಂತಕ್ಕೆ ಸೇರಿದವರು. ಅವರ ಸಿಂಧಪ್ರಾಂತದಲ್ಲಿ ಹಿಂದೂ ಜನ ಅತಿ ಕಡಿಮೆ ಪ್ರಮಾಣದಲ್ಲಿದ್ದಾರೆ; ಮಹಮ್ಮದೀಯರು ಬಹಳ ಹೆಚ್ಚಿಗೆ ಇದ್ದಾರೆ. ಅವರ ಪ್ರಾಬಲ್ಯವೂ ಚೆನ್ನಾಗಿದೆ. ಪ್ರಬಲರಾದವರ ತುಳಿತಕ್ಕೆ ಸಿಕ್ಕಿ ದುರ್ಬಲರಾದವರ ಹಕ್ಕು–ಬಾಧ್ಯತೆಗಳಿಗಾಗಿ ಹೋರಾಡುವದು ಎಂಥವರಿಗೂ ಸಹಜ. ಅಂದರಲ್ಲೂ ಸ್ವಜಾತಿಯ ವಿಷಯ. ಜಯರಾಮದಾಸರು ಜನತೆಯ ಸೇವೆಗೆ ಮೊದಲಿಟ್ಟಾಗ ಸ್ವಾಭಾವಿಕವಾಗಿಯೇ ಮೇಲಿನ ಕೂಟಪ್ರಶ್ನೆ ಪ್ರತ್ಯಕ್ಷವಾಯಿತು. ೧೯೧೭ ರಲ್ಲಿ ಆನಿ ಬೆಸೆಂಟಮ್ಮನ ಹೋಂ-ರೂಲು ಲೀಗಿನ ಚಳುವಳಿಗೆ ಸೇರಿದಾಗಲೂ, ಮುಂದೆ ಮೂರು ವರ್ಷದ ಮೇಲೆ ಕಾಂಗ್ರೆಸ್ಸಿನ ಮಹಾಸಮುದ್ರದಲ್ಲಿ ಮುಳುಗು ಹಾಕಿದಾಗಲೂ ಜಯರಾಮದಾಸರ ಮನಸಿನಲ್ಲಿ ಸಂದೇಹಸಮರ ನಡೆದೇ ಇತ್ತು. ೧೯೨೦ ರಿಂದ ೧೯೨೪ರ ವರೆಗೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯತೆಯ ಉಗ್ರಜ್ವಾಲೆ ಉರಿಯಿತು. ಆಗ ಆ ಕಠೋರ ತಪಸ್ಸಿನ ಏಕಾಗ್ರತೆಯಲ್ಲಿ ಗುಪ್ತಗಾಮಿಯಾಗಿ ಹರಿಯುತ್ತಿದ್ದ ಈ ಸಂದೇಹದಲ್ಲಿ, ಜಾತಿನಿಷ್ಠೆ ತನ್ನ ಪ್ರಭಾವವನ್ನು ಬೀರಿತು. ೧೯೨೫ರಲ್ಲಿ ಲಾಲಾ ಲಜಪತರಾಯರು ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ಸರಿ; ಜಯರಾಮದಾಸರು ಹಿಂದೂ ಮಹಾ

ಶ್ರೀಮಾನ್ ಜಯರಾಮ್‌ದಾಸ ದೌಲತರಾಮ್ ಅವರು

ಸಭೆಯ ಕಾರ್ಯದರ್ಶಿಯಾದರು. ಮೂರು ವರ್ಷ ಹಾಗೆಯೆ ಕಳೆಯಿತು.

ಆ ಮೂರು ವರ್ಷಗಳ ಮಥನದಲ್ಲಿ ಜಯರಾಮದಾಸರ 'ಕಸ್ಮೈ ದೇವಾಯ?'ದ ಉತ್ತರ ದೊರೆಯಿತು. ಜಾತಿ ತವರು, ರಾಷ್ಟ್ರ ಪತಿಯಮನೆ. ಜೀವನದ ವಿರಾಟ್‌ಸ್ವರೂಪದಲ್ಲಿ ದೇಶವು ಪ್ರಕೃತಿಯಾದರೆ, ಜಾತಿ-ರಾಷ್ಟ್ರಗಳು ಪುರುಷ-ಪುರುಷೋತ್ತಮರಿದ್ದಂತೆ; ಇದು ಅವರು ತಿಳಿದುಕೊಂಡ ಸತ್ಯ. ಮೂರನೆಯ ವರ್ಷವೇ ಜಯರಾಮದಾಸರು ಪೂರ್ಣಮನಸ್ಸಿನಿಂದ ಕಾಂಗ್ರೆಸ್ಸಿನಲ್ಲಿ ಸಮರಸರಾದರು.

ಹತ್ತು ಹನ್ನೆರಡು ವರ್ಷ ಎಡೆಬಿಡದೆ ದುಡಿದು ಸುರಿತಿದ್ದ ಬಂಟಆಳು. ೧೯೨೮ ರಲ್ಲಿ ಕಾಂಗ್ರೆಸಿನಲ್ಲಿ ಪೂರ್ಣ ಶ್ರದ್ಧೆಯಿಂದ ತೊಡಗಿದುದೇ ತಡ, ಹೊಣೆಗಾರಿಕೆಯ ಕೆಲಸಗಳು ಅವರ ಪಾಲಿಗೆ ಕೂಡಲೆ ಬಂದುವು. ಕಲ್ಕತ್ತೆಯ ಕಾಂಗ್ರೆಸಿನಲ್ಲಿ ಪರದೇಶೀ ವಸ್ತ್ರ-ಬಹಿಷ್ಕಾರಸಮಿತಿಯೊಂದು ಸರ್ವಾನುಮತಿಯಿಂದ ನಿರ್ಮಿತವಾಯಿತು. ಗಾಂಧೀಜಿಯೇ ಅದಕ್ಕೆ ಅಧ್ಯಕ್ಷರು. ಜಯರಾಮ-ದಾಸರು ಅದರ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಬೇರೆ ಬೇರೆ ಪ್ರಾಂತಗಳಲ್ಲಿ ತಿರುಗಾಡಿ ಸಮಿತಿಯ ಕೆಲಸವನ್ನು ಸಮರ್ಪಕವಾಗಿ ಮಾಡಿದರು. ಕೈಕೊಂಡ ಈ ಕೆಲಸಕ್ಕೆ ಯಾವ ವಿಧವಾದ ಅಡಚಣೆಯೂ ಬರಬಾರದೆಂದು ಮುಂಬಯಿಯ ಶಾಸನಸಭೆಯ ಸದಸ್ಯತ್ವವನ್ನೂ ಬಿಟ್ಟುಕೊಟ್ಟರು. ಎರಡು ವರ್ಷದ ಈ ಅವಿ-ಶ್ರಾಂತ ಪರಿಶ್ರಮದ ಫಲವಾಗಿ ೧೯೩೦ ರಲ್ಲಿ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆರಿಸಲ್ಪಟ್ಟರು.

ಜಯರಾಮದಾಸರದು ಶಾಂತಸ್ವಭಾವ; ಮಾತು ಸ್ವಲ್ಪ ಕಡಮೆಯೇ. ಈಚೆಗೆ ಕೊಂಚ ಹೆಚ್ಚಾಗಿಯೇ ಬೇನೆ ಬಿದ್ದಿದ್ದರೂ ಮೊದಲಿನಿಂದಲೂ ದೃಢಕಾಯರು. ಧೈರ್ಯ-ಸಾಹಸದಲ್ಲಿ ಅವರ ಸರಿಸಾಟಿಯ ಜನ ಸಿಗುವುದು ಅಪರೂಪ. ದೇಶನಾಯಕರ ಪ್ರಥಮ-ಶ್ರೇಣಿಯಲ್ಲಿ ಅವರ ಹಾಗೆ ಸಿಡಿಗುಂಡನ್ನು ಎದುರಿಸಿದವರೂ ಹುಲಿಯ ಬಾಯಲ್ಲಿ ಕೊರಳನ್ನು ಕೊಟ್ಟವರೂ ಮತ್ತೊಬ್ಬರಿಲ್ಲ. ನಿಜವಾಗಿಯೂ ಸಿಡಿಗುಂಡನ್ನು ಎದುರಿಸಿದ್ದಾರೆ ಜಯರಾಮದಾಸರು. ೧೯೩೦ ರ ಸತ್ಯಾಗ್ರಹದಲ್ಲಿ ಒಮ್ಮೆ 'ಕೆಲವರು ಸತ್ಯಾ-ಗ್ರಹಿಗಳ ವಿಚಾರಣೆ ನಡೆದಾಗ' ನ್ಯಾಯಸ್ಥಾನದ ಮುಂದೆ ಜನರು ಗುಂಪಾಗಿ ಸೇರಿ ತಮ್ಮ ಭಕ್ತಿಪ್ರದರ್ಶನವನ್ನು ಮಾಡಿದರು. ಅಪರಾಧಿಗಳಿಗೆ ತಮ್ಮ ಕಣ್ಣೆದಿರೇ ಈ ಗೌರವವೆ? ಅಧಿಕಾರಿಗಳಿಗೆ ಇದು ಸಹನವಾಗಲಿಲ್ಲ; ಹೀಗಾದರೆ ರಾಜ್ಯತಂತ್ರ ಹೇಗೆ ನಡೆಯಬೇಕು? ಜನರಿಗೆ ಅಲ್ಲಿಂದ ಹೊರಟುಹೋಗಲು ಕಟ್ಟಪ್ಪಣೆಯಾಯಿತು. ಜನ ಚದರಲಿಲ್ಲ, ಕದಲಲೇ ಇಲ್ಲ. ಈ ಅವಿಧೇಯತೆಗೆ ಗುಂಡಿನೇಟೇ ಉಪಾಯವೆಂದು ರೋಷದಿಂದ ತೀರ್ಮಾನಿಸಿದರು. ಕೂಡಲೆ ನಿಃಶಸ್ತ್ರರೂ ರಕ್ಷಣೋಪಾಯರಹಿತರೂ ಆದ ಜನರ ಮೇಲೆ ಗುಂಡಿನ ಸುರಿಮಳೆಯಾಯಿತು. ಆ ಗುಂಪಿನಲ್ಲಿ ಜಯರಾಮದಾಸರೂ ಇದ್ದರು. ಅವರಿಗೂ ಗುಂಡಿನೇಟು ಒಂದು ತಗುಲಿತು; ಅಲ್ಲಿಯವರೆಗೂ ಅವರೇನು ಸ್ಥಳ ಬಿಡಲಿಲ್ಲ. ಏಟು ತಗಲಿ ಕೆಳಗೆ ಬಿದ್ದಮೇಲೆ ಹತ್ತಿರವಿದ್ದವರು ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಮತ್ತೊಮ್ಮೆ ಮುಂಬಯಿಯಲ್ಲಿ ತಿಲಕರ ಜನ್ಮದಿನೋತ್ಸವಕ್ಕಾಗಿ ನಡೆಯಿಸಿದ್ದ ಮೆರವಣಿಗೆಯೊಂದರ ಗುಂಪಿನಮೇಲೆ ಪೋಲೀಸರ ಲಾಠೀ ಪ್ರಯೋಗವಾಯಿತು. ಸೈಮನ್‌ಸಮಿತಿಯ ಬಹಿಷ್ಕಾರದ ಸಂದರ್ಭದಲ್ಲಿ ಲಾಹೋರಿನಲ್ಲಿ ಲಜಪತರಾಯರು ಶಾಂತಚಿತ್ತದಿಂದ ಲಾಠೀಪ್ರಯೋಗವನ್ನು ಎದುರಿಸಿದಂತೆ ಜಯರಾಮದಾಸರೂ ಸಾವಧಾನತೆಯಿಂದ ಅದನ್ನು ಎದುರುಗೊಂಡರು. ಸತ್ಯಾಗ್ರಹ-ಯುದ್ಧದ ಸಂಗ್ರಾಮಸಿಂಹರು ಅವರು.

ಮೊನ್ನೆ ಮೊನ್ನೆಯ ರಾಷ್ಟ್ರೀಯರಂಗದಲ್ಲಿ ಹೆಸರುವಾಸಿಯಾಗಿದ್ದರೂ ಜಯರಾಮದಾಸರು ೧೯೧೯ರಲ್ಲೇ-೨೦ ವರ್ಷದ ಕೆಳಗೆ-ಕಾಂಗ್ರೆಸು ಸೇರಿದರು. ಆಗಲೇ ರೌಲೆಟ್ ಶಾಸನ ಸತ್ಯಾಗ್ರಹವನ್ನು ಗಾಂಧೀಜೀ ಮೊದಲು ಮಾಡಿದ್ದು. ಜಯರಾಮದಾಸರು ವೃತ್ತಿಯಿಂದ ವಕೀಲರು. ೧೯೧೪-೧೫ರಲ್ಲಿ ವಕೀಲಿ ಪ್ರಾರಂಭಿಸಿದ್ದರು. ನಾಲ್ಕು ವರ್ಷ ಆ ವೃತ್ತಿ ನಡೆಯಿಸುವುದರೊಳಗಾಗಿಯೇ ಗಾಂಧೀಜಿಯ ರಣದುಂದುಭಿ ಕೇಳಬಂತು. ಇನ್ನೂ ಹರೆಯವಾದರೂ ವಕೀಲಿಯನ್ನೂ ಸುಖಜೀವನವನ್ನೂ ಬಿಟ್ಟುಕೊಟ್ಟು ಸತ್ಯಾಗ್ರಹದಲ್ಲಿ ಧುಮುಕಿದರು; ಮುಖ್ಯಪಾತ್ರವೊಂದನ್ನು ವಹಿಸಿದರು.

ಅಲ್ಲಿಂದ ಮುಂದೆ ಪತ್ರಿಕಾನಿರ್ವಹಣಕ್ಕೆ ತೊಡಗಿದರು. ದೇಶಭಾಷೆಯಲ್ಲಿ '**ಭಾರತವಾಸಿ**' '**ಹಿಂದು**' '**ವಂದೇ ಮಾತರಂ**'

ಪತ್ರಿಕೆಗಳನ್ನು ನಡೆಯಿಸಿದರು. ೧೯೨೧ ರಲ್ಲಿ ಅಸಹಕಾರ ಚಳುವಳಿ ಬಂದಾಗ, ಇವರಿಗೆ ಎರಡು ವರ್ಷ ಶಿಕ್ಷೆಯಾಯಿತು. ಅದರ ಪರಿಣಾಮವಾಗಿ ಇವರ ಪತ್ರಿಕಾನಿರ್ವಹಣದ ಕಾರ್ಯ ನಿಂತುಹೋಯಿತಾಗಲಿ ಮುಂದೆ ದೆಹಲಿಯ 'ಹಿಂದುಸ್ಥಾನ್ ಟೈಮ್ಸ್' ಪತ್ರದ ಸಂಪಾದಕರಾಗಿ ಕೆಲಕಾಲ ಕೆಲಸ ಮಾಡಿದರು. ಜನನಾಯಕರಲ್ಲಿ ವಕೀಲರೇ ಹೆಚ್ಚು; ವಕೀಲರೇ ನಾಯಕರಾಗಬಲ್ಲವರು ಎಂಬ ಪ್ರಸಿದ್ಧಿ ಒಂದು ಕಾಲದಲ್ಲಿ ಇತ್ತು. ನಮ್ಮ ದೇಶದಲ್ಲಿ ಗಾಂಧೀಯುಗದಲ್ಲಿ ವಕೀಲಿ ಎಂಬುದು ಸನಾತನಿಗಳಲ್ಲಿ ನಟವೃತ್ತಿಯಿದ್ದಂತೆ; ಕೊಂಚ ಗೌಣ. ಆದರೆ ಈಗ ಇನ್ನೊಂದು ಸೂತ್ರ ಹುಟ್ಟಿದ ಹಾಗೆ ಇದೆ. ಪತ್ರಿಕಾವ್ಯವಸಾಯವು ನಾಯಕರ ಮುಖ್ಯಲಕ್ಷಣಗಳಲ್ಲಿ ಒಂದಾಗಿದೆ. ಮಹಾನಾಯಕಾಚಾರ್ಯನೇ ಆ ಉದ್ಯೋಗದಲ್ಲಿ ಎತ್ತಿದ ಕೈಯಲ್ಲವೆ? ಜಯರಾಮದಾಸರಿಗೆ ಈ ಗುಣವೂ ಇದೆ.

ಸೆರೆಮನೆಯನ್ನು ಹಲವು ಸಾರಿ ಕಾಣಬೇಕಾಯಿತು ಇವರು. ೧೯೩೦ ರಲ್ಲಿ ತಿಲಕಜನ್ಮ ದಿನದ ಸತ್ಯಾಗ್ರಹದಲ್ಲಿ ಜೈಲಿಗೆ ಹೋದವರು ೧೯೩೨ರಲ್ಲಿ ಮತ್ತೆ ನಡೆದರು. ಎರಡು ವರ್ಷದ ಮೇಲೆ ಬಿಡುಗಡೆಯಾದಾಗ ಕಾಂಗ್ರೆಸ್ಸು ಶಾಸನಸಭೆಯ ಕಾರ್ಯಕ್ರಮಗಳನ್ನು ಸ್ವೀಕರಿಸಿತ್ತು. ಕೂಡಲೇ ಆ ಕೆಲಸಕ್ಕೆ ಹೆಗಲು ಕೊಟ್ಟು ನಿಂತರು. ಅಷ್ಟು ಹೊತ್ತಿಗೆ ಸಿಂಧಪ್ರಾಂತವು ಮುಂಬಯಿಯಿಂದ ಬೇರೆಯಾಗಿ ಸ್ವತಂತ್ರ ಆಡಳಿತವಾಗಿತ್ತು. ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷದ ಮುಂದಾಳುತನ ಸಹಜವಾಗಿಯೇ ಇವರದಾಯಿತು.

ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಬಲವಾದುದಲ್ಲ; ಅದಕ್ಕೆ ಸೇರಿದವರ ಸಂಖ್ಯೆ ಬಹಳ ಕಡಮೆ. 'ಸಂಖ್ಯಾಬಲಕ್ಕಿಂತ ಐಕಮತ್ಯ ಬಲವೇ ಹಿರಿದು, ಬಲ ಅದರಲ್ಲಿಲ್ಲ ಇದರಲ್ಲಿದೆ' ಎಂಬುದನ್ನು ಸಿಂಧ ಕಾಂಗ್ರೆಸ್ ಪಕ್ಷ ಇಂದು ಹಿಂದುಸ್ಥಾನಕ್ಕೆ ತೋರುತ್ತಿದೆ. ಸಿಂಧ ಮುಸ್ಲಿಮ್ ಪ್ರಾಂತ. ಅಲ್ಲಿಯ ಮಂತ್ರಿಮಂಡಳದಲ್ಲಿ ಮುಸ್ಲಿಮರೇ ಮುಖ್ಯರು. ಮುಸ್ಲಿಂ ಲೀಗಿಗೆ ಪಂಜಾಬು-ಬಂಗಾಳಗಳಂತೆ ಆ ಪ್ರಾಂತವೂ ಆಧಾರವಾಗಬೇಕಾದುದು ಸಹಜವೇ ಆಗಿತ್ತು. ಭಾರತ ಮುಸ್ಲಿಮ್ ನಾಯಕರಾದ ಜಿನ್ನಾ ಆ ಬಗ್ಗೆ ಬಹಳ ಪ್ರಯತ್ನ ನಡೆಯಿಸಿದರು. ಕರಾಚಿಯಲ್ಲಿ ಮುಖ್ಯವಾದ ಸಂಧಾನ-ಸಭೆಗಳನ್ನು ನಡೆಯಿಸಿದರು. ಸಿಂಧಪ್ರಾಂತದ ಪ್ರಧಾನ ಪೀರ್ ಇಲಾಹಿ ಅಲ್ಲಾಭಕ್ಷರು ಮುಸ್ಲಿಂ ಲೀಗಿನ ಸಂಧಾನಜಾಲದಲ್ಲಿ ಹದಿನಾಲ್ಕಾಣೆ ಭಾಗ ಸಿಕ್ಕಿಹೋಗಿದ್ದರು. ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಜಾಗರೂಕವಾಗಿರದಿದ್ದರೆ ಗಾಂಭೀರ್ಯದಿಂದ ನಡೆಯದಿದ್ದರೆ ಜಿನ್ನಾರ ಪ್ರಯತ್ನ ಹಣ್ಣಾಗುವುದರಲ್ಲಿ ಸಂದೇಹವೇ ಇರಲಿಲ್ಲ. ತುತ್ತು ಕೈಗೆ ಬಂದಿತ್ತು. ಸಿಂಧ ಕಾಂಗ್ರೆಸಿನ ಪಕ್ಷಕ್ಕೊ ಅದೊಂದು ವಿಷಮ ಪರೀಕ್ಷೆ. ಅಲ್ಲಾಭಕ್ಷರನ್ನು ಕೈಬಿಟ್ಟರೆ ಮುಸ್ಲಿಂ ಲೀಗಿಗೆ ಪ್ರಾಂತವನ್ನು ಆಹುತಿ ಕೊಟ್ಟಂತೆ; ಅವರ ಕೈ ಹಿಡಿದರೆ ಗವರ್ನರರ ನಿರಂಕುಶತೆಗೆ ಹಾದಿ ಮಾಡಿದಂತೆ. ಮೊದಲನೆಯದು ಕನಸಿನಲ್ಲೂ ಸಾಧ್ಯವಿಲ್ಲ; ಎರಡನೆಯದಕ್ಕೆ ಇಷ್ಟವಿಲ್ಲ; ಏಕೆಂದರೆ ಅಲ್ಲಾಭಕ್ಷರು ಗವರ್ನರರ ಮುಂದೆ ಇಲಿ. ಸಂದರ್ಭ ಅತ್ಯಂತ ವಿಷಮವಾದುದು; ಸಂಧಾನ ಅತಿ ಸೂಕ್ಷ್ಮವಾದುದು.

ಪತ್ರಿಕೆಗಳಲ್ಲಿ ಕಾಂಗ್ರೆಸ್ಸುನಾಯಕರಿಗೂ ಅಲ್ಲಾಭಕ್ಷರಿಗೂ ನಡುವೆ ನಡೆದ ಸಂಧಾನದ ಸುದ್ದಿ ಕೆಲ ದಿನ ಬರಹತ್ತಿದುವು ಒಂದೇ ಸಮನೆ. ವರ್ಧಾದಲ್ಲಿ ಚರ್ಚೆ-ವಿಚಾರಗಳಾದುವು. ಕಾಂಗ್ರೆಸ್ಸು ಮಂತ್ರಿಮಂಡಲದ ಕೈ ಹಿಡಿಯಲಿಲ್ಲ. ಆದರೆ ಮುಸ್ಲಿಂ ಲೀಗಿನ ಕೈ ಹಿಡಿಯದಿರಲಿಲ್ಲ. ಅಂತೂ ಇಂತೂ ಮಂತ್ರಿಮಂಡಲ ಉಳಿಯಿತು.

ಜಯರಾಮದಾಸರ ಸಂಧಾನಕೌಶಲವೂ ಸಿಂಧ ಕಾಂಗ್ರೆಸ್ ಪಕ್ಷದ ಐಕಮತ್ಯಗಳೂ ಆ ಪವಾಡದ ಕಾರಣ. ಸಿಂಧ ಮಂತ್ರಿಮಂಡಳ ಕಾಂಗ್ರೆಸ್ ಪಕ್ಷದ್ದಲ್ಲ. ಆದರೂ ಕಾಂಗ್ರೆಸ್ಸಿನ ವರ್ಚಸ್ಸು ಅಲ್ಲಿ ಕಾಣುತ್ತದೆ. ಕಾಂಗ್ರೆಸ್ಸಿನ ಪೂರ್ಣ ಕಾರ್ಯಕ್ರಮವನ್ನು ಅವರು ಅನುಸರಿಸುವುದು ಸಾಧ್ಯವಿಲ್ಲದಿದ್ದರೂ ಕಾಂಗ್ರೆಸ್ಸಿನ ಬಗ್ಗೆ ಸಹಾನುಭೂತಿ ಮಾತ್ರ ಸ್ಪಷ್ಟವಾಗಿಯೇ ಒಡೆದು ಕಾಣುತ್ತದೆ. ಜಯರಾಮದಾಸರ ಪುಣ್ಯ ಫಲವಿದು!

ಪರದೇಶೀ ವಸ್ತ್ರದ ಬಹಿಷ್ಕಾರಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದಾಗಿನಿಂದ ಗಾಂಧೀಜಿಗೆ ಇವರ ಮೇಲೆ ವಿಶ್ವಾಸ ಹೆಚ್ಚು. ೧೯೩೦ ರಲ್ಲಿ ಮಹಾನಾಯಕರೆಲ್ಲ ಸೆರೆಮನೆಯಲ್ಲಿದ್ದಾಗ ತೇಜ ಬಹಾದ್ದೂರ್ ಸಪ್ರೂ ಮತ್ತು ಜಯಕರರು ಶಾಂತಿಸಂಧಾನ ನಡೆಯಿಸಿದರಷ್ಟೆ. ಯರವಡಾ ಸೆರೆಮನೆಯಲ್ಲಿ ಗಾಂಧೀಜಿಯೊಡನೆ ಅವರು ಆ ಮಾತುಕತೆ ನಡೆಯಿಸಿದಾಗ, ಮುಖ್ಯರಾದ ಕೆಲವರು ನಾಯಕರು ಗಾಂಧೀಜಿಯ ಆಲೋಚನಾಮಂಡಲಿಯಾಗಿದ್ದರು. ಜಯರಾಮದಾಸರಿಗೂ ಅದರಲ್ಲಿ ಸ್ಥಳವಿತ್ತು. ಈ ಮಾತು-ಕತೆಗಳ ಪರಿಣಾಮವೇ ಗಾಂಧೀ ಇರ್ವಿನ್ ಒಪ್ಪಂದ. ೧೯೩೪ ರಲ್ಲಿ ಮತ್ತೆ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದರು. ತರುವಾಯ ವರ್ಕಿಂಗ್ ಕಮಿಟಿಯ ಸದಸ್ಯರಾದರು. ಈಗಲೂ ಆಗಿದ್ದಾರೆ.

ಜಯರಾಮದಾಸರ ಪ್ರಾಯ ೪೭ ಕ್ಕೆ ಮೀರಿಲ್ಲ. ಶಕ್ತಿಯೂ ಉಡುಗಿಲ್ಲ. ಭಾರತದ ರಾಜಕಾರಣದಲ್ಲಿ ಮುಂದೆ ಅವರು ಮಾಡಬಹುದಾದ ಮಾಡಬೇಕಾದ ಸೇವೆ ಇನ್ನೂ ಮಹತ್ತರವಾದುದಾಗಲಿ ಎಂದು ಹಾರಯಿಸಲು ಬೇಕಾದಷ್ಟು ಅವಕಾಶವಿದೆ.

ವಿ ರ ಹಿ ಣಿ

'ಆನಂದಕಂದ'ರ ಕವನಸಂಗ್ರಹ

ಉತ್ತಮ ಪ್ರತಿಗೆ ೧-೦-೦] [ಸಾದಾ ಪ್ರತಿಗೆ ೦-೧೦-೦

'ಭಾವ-ಭಾಷೆಗಳ ಸುಂದರ ಸಾಮರಸ್ಯವನ್ನು ನೋಡಬೇಕೆನ್ನುವವರು ವಿರಹಿಣಿಯಲ್ಲಿಯ ಕವನಗಳನ್ನು ಓದಬೇಕು!' ಎಂದು ಸುಪ್ರಸಿದ್ಧ ವಿಮರ್ಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಓದಿದರೆ ಮನಸ್ಸು-ಹೃದಯಗಳನ್ನು ಹಿಗ್ಗಿಸುವ ಕವಿತೆಗಳು! ಹಾಡಿದರೆ ವೀಣೆಯ ನುಡಿಯಂತೆ ಇಂಚರಗೊಡುವ ಗೀತಗಳು!

ಒಮ್ಮೆ ತರಿಸಿ ಓದಿನೋಡಿರಿ!

ಬೇಕಾದವರು 'ಜಯಂತಿ'ಯ ಕಾರ್ಯಾಲಯಕ್ಕೆ ಬರೆಯಿರಿ!

ಗುಟ್ಟಳ್ಳಿ ಖೂನಿಯ ಸಮಸ್ಯೆ* (ಪತ್ತೇದಾರಿ ಕಥೆ)

ಶ್ರೀ. ಎನ್. ಸೂರಪ್ಪ ಚಿತ್ರದುರ್ಗ

ಲೋಕವೆಲ್ಲಾ ನಾಗೇಂದ್ರನೇ ಕೊಲೆಪಾತಕನೆಂದು ಒಪ್ಪುತ್ತಿರುವಾಗ ಅಲ್ಲವೆಂದು ವಿರೋಧಿಸಿ ನಿಂತವನು ಪ್ರಕಾಶನೊಬ್ಬನೆ. ಅವನ ಒಳಗಣ್ಣು ಎಂತಹವೊ! ಸಂದರ್ಭಗಳ ಮರೆಯಲ್ಲಿ ಹುದುಗಿ ನಿಂತಿದ್ದ ಸತ್ಯವನ್ನು ಕಂಡು ಹೊರಕ್ಕೆ ಎಳೆದೇ ಬಿಡುವನು. ಅವನಿಲ್ಲದಿದ್ದರೆ ನಾಗೇಂದ್ರನಿಗೆ ಮರಣದಂಡನೆ ತಪ್ಪುತ್ತಿರಲಿಲ್ಲ!



ಏನನ್ನೋ ಯೋಚಿಸುತ್ತಿರುವಷ್ಟರಲ್ಲಿ ನಮ್ಮ ಕೋಣೆಯನ್ನು ಒಬ್ಬ ಯುವಕನೂ ಒಬ್ಬ ಯುವತಿಯೂ ಪ್ರವೇಶಿಸಿದರು.

ಪ್ರಕಾಶನು ಈ ಮೂರು ವರ್ಷಗಳಲ್ಲಿ ತನಿಖೆಮಾಡಿದ ಸಮಸ್ಯೆಗಳಲ್ಲಿ ಗುಟ್ಟಳ್ಳಿಯ ಕೊಲೆಯ ಸಮಾಪ್ತಿಯುಅವನ ಮೇಧಾಶಕ್ತಿಯನ್ನು ವಿಶೇಷವಾಗಿ ಹೊರಗೆಡಹುತ್ತದೆಯೆಂದು ನನಗೆನಿಸುತ್ತಲಿದೆ.

ಸುಮಾರು ಒಂದು ತಿಂಗಳಾಗಿದ್ದೀತು; ಒಂದು ದಿವಸ ನಾನು ಟೆನ್ನಿಸ್ ಆಡಿಕೊಂಡು ಮನೆಗೆ ಬಂದಕೂಡಲೆ, ಮೇಜಿನ ಮೇಲಿದ್ದ ಒಂದು ಚೀಟಿ ನನ್ನ ಕಣ್ಣಿಗೆ ಬಿದ್ದಿತು. ಅದರಲ್ಲಿ "ಪ್ರಭೂ, ಇಂದು ಭಾನುವಾರ. ನಿನಗೆ ವಿರಾಮವಿರುವುದೆಂದು ತಿಳಿದುಕೊಂಡಿದ್ದೇನೆ. ನನ್ನ ಊಹೆಯು ಸರಿಯಾಗಿದ್ದರೆ, ಕೂಡಲೆ ಇಲ್ಲಿಗೆ ಬರುವುದು. ಹೊಸದಾದ ಒಂದು ಸಮಸ್ಯೆಯ ಪರಿಹಾರವು ನನ್ನ ಕೈಗೆ

---

* Sir A. Connon Doyle ರವರ "The Boscombe Valley Mystery" ಎಂಬ ಕತೆಯ ಅನುಸರಣೆ.

ಬಂದಿದೆ-- ಪ್ರಕಾಶ" ಎಂದಿತ್ತು. ಕೂಡಲೆ ಕಾಫಿಯನ್ನು ಕುಡಿದು ಮಲ್ಲೇಶ್ವರಕ್ಕೆ ಹೊರಟೆನು.

ಮಹಡಿಯ ಕೋಣೆಯಲ್ಲಿದ್ದು, ನನ್ನ ಆಗಮನವನ್ನೇ ನಿಡು-ನೋಟದಿಂದ ನಿರೀಕ್ಷಿಸುತ್ತ, ಸಿಗರೇಟಿನ ಹೊಗೆಯ ನಡುವೆ ಅಲ್ಲಿಂದಿಲ್ಲಿಗೆ ತಾರಾಡುತ್ತಿದ್ದ ನನ್ನ ಭಾವ ಕಣ್ಣಿಗೆ ಬಿದ್ದ. ನನ್ನ ತಂಗಿಯೊಡನೆ ಕೆಲವು ಮಾತನ್ನಾಡಿ ಮಹಡಿಯ ಮೇಲಕ್ಕೆ ಹೋದೆ. ಪ್ರಕಾಶನು ನನ್ನನ್ನು ನೋಡಿ "ಪ್ರಭೂ, ನೀನು ಕೂಡಲೆ ಬರುವೆ ಯೆಂದು ನನಗೆ ಗೊತ್ತಿತ್ತು. ನೀನು ಇಲ್ಲದಿದ್ದರೆ ನನಗೆ ಬಲಗೈ ಮುರಿದಂತೆ ಆಗುತ್ತದೆ" ಎಂದು ಜೇಬಿನಿಂದ ಸಿಗರೇಟ್ ಪ್ಯಾಕನ್ನು ತೆಗೆದು ನನ್ನ ಮುಂದೆ ಎಸೆದ. ನಾನು ಒಂದು ಸಿಗರೇಟನ್ನು ತೆಗೆದುಕೊಂಡು "ಪ್ರಕಾಶ, ಏನು ಸಮಾಚಾರ? ಕೇಸು ಯಾವುದು?" ಎಂದೆ. ಅದಕ್ಕೆ ಅವನು ಮುಗುಳ್ನಗೆಯನ್ನು ಸೂಸುತ್ತ "ಪ್ರಭು, ನನ್ನ ಕೇಸುಗಳ ವಿಚಾರದಲ್ಲಿ ನೀನು ತೋರಿಸುವಷ್ಟು ಶ್ರದ್ಧೆ-ಉತ್ಸಾಹಗಳನ್ನು, ಅದರಿಂದ ಪ್ರತಿಫಲ ವನ್ನು ಹೊಂದಿದವರು ಕೂಡ ಪ್ರಕಟಗೊಳಿಸುವದಿಲ್ಲ. ಕೇಸಿನಲ್ಲಿ ಏನೂ ಕಷ್ಟವಿದ್ದಂತೆ ತೋರುವುದಿಲ್ಲ. ಆದರೆ ನಿನಗೆ ಗೊತ್ತೇ ಇದೆ, ಸನ್ನಿವೇಶಗಳು ಸುಲಭವಾಗಿದ್ದಂತೆಲ್ಲಾ ಜನರು ಕೇಸನ್ನು ಅಗಾಧವಾದುದೆಂದು ಅಭಿಪ್ರಾಯಪಡುತ್ತಿರುತ್ತಾರೆ!" ಎಂದ. ನಾನು ಉತ್ಸುಕತೆಯಿಂದ "ನೀನು ಹೇಳುವುದು ಒಳ್ಳೆ ತಮಾಷೆ ಯಾಗಿದೆಯಲ್ಲಾ!" ಎಂದೆ. "ಮತ್ತೆ ತಮಾಷೆಯಲ್ಲದೆ ಇನ್ನೇನು? ಎಲ್ಲಿ ಜನರು ಸಾಧ್ಯವಿರುವ ಸನ್ನಿವೇಶಗಳನ್ನು ಬಿಟ್ಟು, ಅಸಾಧ್ಯ ವಾಗಿರುವ ಸನ್ನಿವೇಶಗಳಿಂದ ತಪ್ಪಿತಸ್ಥರಲ್ಲದವರನ್ನು ಶಿಕ್ಷೆಗೆ ಗುರಿ-ಮಾಡಿ, ಕೆಲವು ವೇಳೆ ಮರಣದಂಡನೆಯನ್ನು ಕೂಡ ವಿಧಿಸುತ್ತಾರೋ ಅಂತಹದು ಕೇವಲ ತಮಾಷೆಯಲ್ಲದೆ ಮತ್ತೇನು? ಈಗ ಈ ಸಮಸ್ಯೆಯಲ್ಲೂ ಅಷ್ಟೆ; ಕೊಲೆಯಾಗಿರುವವನ ಮಗನನ್ನೇ ಕೊಲೆಪಾತಕನೆಂದು ಸೆರೆಯಲ್ಲಿಟ್ಟಿದ್ದಾರೆ" ಎಂದು ಸಿಗರೇಟನ್ನು ಪ್ಯಾಕಿನ ಮೇಲೆ ಹೊಡಿಯುತ್ತಾ ಹೇಳಿದ ಪ್ರಕಾಶ.

"ಹಾಗಾದರೆ ಇದೊಂದು ಕೊಲೆಯೇನು?" ನಾನು ಕೇಳಿದೆ.

"ಕೊಲೆಯೆಂದು ಭಾವಿಸಿದ್ದಾರೆ. ಈ ವಿಷಯದಲ್ಲಿ ಸ್ಥಳಕ್ಕೆ ಹೋಗಿ ನೋಡುವವರೆಗೂ ಹೆಚ್ಚಿಗೆ ಏನನ್ನೂ ಹೇಳಲಿಕ್ಕೆ ಬರುವಂತಿಲ್ಲ!"

"ಯಾರ ಕೊಲೆಯಾಗಿದೆ? ನಿನ್ನ ಸಹಾಯವನ್ನು ಯಾರು ಕೇಳಿದ್ದಾರೆ?"

"ಕೊಲೆಯಾದುದು ಗುಟ್ಟಹಳ್ಳಿಯ ನಿವಾಸಿಗಳಾದ ನಾಗೇಶ-ರಾಯರದು. ನನ್ನ ಸಹಾಯವನಪೇಕ್ಷಿಸಿರುವವರು ಒಬ್ಬ ಯುವತಿ ಮತ್ತು ಆಕೆಯ ಅಣ್ಣ. ಮೊದಲು ನಿನಗೆ ಆ ಸ್ಥಳದ ಮತ್ತು ಅಲ್ಲಿ ನಡೆದ ವಿಷಯಗಳನ್ನು- ನಾನು ತಿಳಿದು ಕೊಂಡಿರುವಮಟ್ಟಿಗೂ ಹೇಳುತ್ತೇನೆ; ಅನಂತರ ನಾವು ಗುಟ್ಟಹಳ್ಳಿಗೆ ಹೋಗೋಣ. ಮುಂದೆ ಏನೇನು ಆಗುತ್ತದೆಯೆನ್ನುವು ದನ್ನು ಈಗಲೆ ಹೇಳಲಾರೆ."

ಪ್ರಕಾಶ ತನ್ನ ಮಾತನ್ನು ಹೀಗೆ ಮುಂದುವರಿಸಿದ:

"ಗುಟ್ಟಹಳ್ಳಿ, ಬಹಳ ರಮ್ಯವಾದ ಸ್ಥಳ ಎನ್ನುವುದು ನಿನಗೆ ಗೊತ್ತೇ ಇದೆ. ಅಲ್ಲಿಗೆ ಈಗ ಆಸ್ತಿ-ಪಾಸ್ತಿಗಳಲ್ಲಿಯೂ ಮತ್ತು ಗೌರವ-ಘನತೆಗಳಲ್ಲಿಯೂ ಹೆಸರುವಾಸಿಯಾಗಿರುವವರು ನಾರಾ-ಯಣರಾಯರೆಂಬ ಜಮೀನ್ದಾರರು. ಅವರು ತಮ್ಮ ಬಾಲ್ಯವನ್ನೆಲ್ಲಾ ಪುದುಚೇರಿಯಲ್ಲಿ ಕಳೆದು, ಗುಟ್ಟಹಳ್ಳಿಗೆ ಬಂದು ನೆಲಸಿ ಈಗ ಸುಮಾರು ೨೦ ವರ್ಷಗಳಾಗಿರಬಹುದು. ಅವರ ತೋಟಗಳಲ್ಲಿಯ ಕೆಲವನ್ನು ನಾಗೇಶರಾಯರೆಂಬ ತಮ್ಮ ಮಿತ್ರರೊಬ್ಬರಿಗೆ ಕೊಟ್ಟಿದ್ದರು. ನಾಗೇಶರಾಯರೂ ನಾರಾಯಣರಾಯರೂ ಬಾಲ್ಯದಿಂದಲೂ ಸ್ನೇಹಿತರು. ಪುದುಚೇರಿಯಲ್ಲೂ ಒಟ್ಟಿಗೆ ಇದ್ದರಂತೆ. ನಾಗೇಶರಾಯರು ತಮ್ಮ ಮಿತ್ರರಿಂದ ಜಮೀನುಗಳನ್ನೂ, ತೋಟ ಗಳನ್ನೂ, ಮನೆಯನ್ನೂ ಪಡೆದಿದ್ದರು. ಇಬ್ಬರೂ ಒಂದೇ ಅಂತಸ್ತಿನವರಂತೆ ವರ್ತಿಸುತ್ತಿದ್ದರಂತೆ. ನಾರಾಯಣರಾಯರಿಗೆ ಇಪ್ಪತ್ತು ವರ್ಷದ ರಾಮರಾವ್ ಎಂಬ ಒಬ್ಬ ಮಗನೂ, ಹದಿನೆಂಟು ವರುಷದ ಸುಶೀಲೆ ಎಂಬ ಮಗಳೂ ಇದ್ದಾರೆ. ನಾಗೇಶರಾಯರಿಗೆ ನಾಗೇಂದ್ರನೆಂದು ಒಬ್ಬನೇ ಮಗ. ಸ್ನೇಹಿತರಿಬ್ಬರಿಗೂ ಹೆಂಡತಿಯಿಲ್ಲ. ನಾಗೇಶರಾಯರ ಮನೆಯಲ್ಲಿ ಕೇವಲ ಇಬ್ಬರೇ ಜವಾನರಿರುವರು. ನಾರಾಯಣರಾಯರು ಐಶ್ವರ್ಯವಂತರಾಗಿ

೧-೪-೦ ಗಳಲ್ಲಿ ಮೂರು ವಾಚುಗಳು ಅಲ್ಲದೆ ೯೭೫ ಬೆಡಗಿನ ಬಹುಮಾನಗಳು!



ನಮ್ಮ ಮಧುರವಾದ ವಾಸನೆಯುಳ್ಳ 'ಓಟೋರೋಜ್' ಅತ್ತರಿನ ೧೨ ಬಾಟ್ಲಿಗಳನ್ನೂ ಗಜಕರ್ಣದ ಮುಲಾಮಿನ ೧೨ ಬಾಟ್ಲಿಗಳನ್ನೂ ೧-೪-೦ ಗಳಿಗೆ ಕೊಳ್ಳುವವರಿಗೆ ಕೆಳಗೆ ಹೇಳಿದ ಒಡವೆಗಳನ್ನು ಉಚಿತವಾಗಿ ಸಲ್ಲಿಸಲಾಗುವುದು.

ರೈಲ್ವೇ ಟೈಂ ಡಮ್ಮಿ ಪಾಕೆಟ್ ವಾಚ್ ೧, ಬಂಗಾರದ ಗಿಲಿಟಿನ ಡಮ್ಮಿ ರಿಸ್ಟ್ ವಾಚ್ (ಪಟ್ಟಿಸಹಿತ) ೧, ಜಿಲೆಟ್‌ಸೇಫ್ಟೀ ರೇಝರ್ ೧, ಶೇವಿಂಗ್ ಸೋಪು ೧, ಶೇವಿಂಗ್ ಬ್ರಶ್ ೧, ಬಾಚಣಿಗೆ ೧, ಕನ್ನಡಿ ೧, ಪೌಡರಿನ ಪಾಕೇಟು ೧, ರೋಲ್ಡ್ ಗೋಲ್ಡ್ ಬಟನ್ನಿನ ಸೆಟ್ ೧, ಕರವಸ್ತ್ರ ೧, ನಿಬ್ಬು ಸಹಿತ ಫೌಂಟೆನ್‌ಪೆನ್ ೧, ಬಂಗಾರದ ಗಿಲಿಟಿನ ಉಂಗುರ ೧, ಐನೂರು ಫೂಟಿನ ಫೋಕಸ್ಸುಳ್ಳ ಟಾರ್ಚ್‌ಲೈಟ್ ೧ ಅಥವಾ ಗಟ್ಟಿಮುಟ್ಟಾದ ಯಂತ್ರ ಸಾಮಗ್ರಿಯುಳ್ಳ ೫ ವರ್ಷದ ಗ್ಯಾರಂಟಿಯ ಜರ್ಮನ್ 'ಟಿ' ಟೈಂಪೀಸ್ ೧.

ಪ್ಯಾಕಿಂಗು ಮತ್ತು ಪೋಸ್ಟೇಜುಗಳಿಗಾಗಿ ೦-೧೨-೦ ಪ್ರತ್ಯೇಕ

The National Watch Co. Post Box No. 12210, Calcutta.

ರುವುದರಿಂದ ಬೇಕಾದ ಹಾಗೆ ಆಳುಗಳೂ, ಅನಾಥರೂ ಮನೆಯಲ್ಲಿದ್ದಾರೆ. ಇಷ್ಟು ಗುಟ್ಟಳ್ಳಿ ಮತ್ತು ಅಲ್ಲಿಯ ಸ್ಥಿತಿಗತಿಗಳ ವಿಷಯ. ಇನ್ನು ಘಟನೆಗಳ ವಿಷಯಕ್ಕೆ ತಿರುಗೋಣ." ಪ್ರಕಾಶ ಮುಂದೆ ಹೇಳತೊಡಗಿದ :

" ಮೊನ್ನೆ ಬುಧವಾರ ಎಂದರೆ ೨ ನೆಯ ತಾರೀಖು, ನಾಗೇಶರಾಯರು ತಮ್ಮ ಮನೆಯನ್ನು ಸಾಯಂಕಾಲ ಸುಮಾರು ೬ ಘಂಟೆಯ ಹೊತ್ತಿನಲ್ಲಿ ಬಿಟ್ಟು, ಗುಟ್ಟಳ್ಳಿಯ ಕಾಲುವೆಯ ಹತ್ತಿರಕ್ಕೆ ಹೋದವರು ಪುನಃ ಹಿಂದಿರುಗಲೆ ಇಲ್ಲ. ಕಾಲುವೆಯು ನಾರಾಯಣರಾಯರ ಮತ್ತು ನಾಗೇಶರಾಯರ ತೋಟಗಳ ನಡುವೆ ಇದೆ. ನಾಗೇಶರಾಯರ ಮನೆಯಿಂದ ಕಾಲುವೆಗೆ ಸುಮಾರು ಅರ್ಧ ಮೈಲಿಯ ಅಂತರವಿದೆ. ಅವರು ಕಾಲುವೆಯ ದಾರಿಯಲ್ಲಿ ಹೋಗುತ್ತಿದ್ದುದನ್ನು ಇಬ್ಬರೂ ನೋಡಿದ್ದಾರೆ. ಅವರಿಬ್ಬರೂ ' ನಾಗೇಶರಾಯರೊಬ್ಬರೇ, ಅವಸರದಿಂದ, ತಲೆಯನ್ನು ತಗ್ಗಿಸಿಕೊಂಡು ಕಾಲುವೆಯ ಕಡೆ ಹೋಗುತ್ತಿದ್ದರು ' ಎಂದು ಸಾಕ್ಷಿಕೊಟ್ಟಿದ್ದಾರೆ. ಅವರಿಬ್ಬರ ಅಲ್ಲದೆ ಮತ್ತೊಬ್ಬ ಸಾಕ್ಷಿಯು ' ನಾಗೇಶರಾಯರು ತೋಟದಲ್ಲಿ ಹೋಗುತ್ತಿದ್ದುದನ್ನು ನಾನು ನೋಡಿದೆ. ಅವರು ತೋಟದ ಮರಗಳ ನಡುವೆ ಕಾಲುಹಾದಿಯಲ್ಲಿ ಹೋದ ಸ್ವಲ್ಪ ಹೊತ್ತಿನಲ್ಲಿಯೆ, ಅವರ ಮಗನು ಒಂದು ಕೊಡತಿ (Club) ಯನ್ನು ಕೈಯಲ್ಲಿ ತಿರುಗಿಸುತ್ತ ಹೋಗುತ್ತಿದ್ದ. ನನಗೆ ತಿಳಿದಿರುವ ಮಟ್ಟಿಗೂ, ತಂದೆ ಮಗನಿಗೆ ಕಾಣಿಸುವಷ್ಟು ದೂರದಲ್ಲಿಯೆ ಹೋಗುತ್ತಿದ್ದರು. ನಾನು ಮುಂದೆ, ರಾತ್ರಿ ನಾಗೇಶರಾಯರ ಖೂನಿಯ ವಿಷಯ ಕೇಳಿದೆನೇ ವಿನಾ ಇನ್ನೇನೂ ನನಗೆ ತಿಳಿಯದು' ಎಂದು ತಾನು ನೋಡಿದುದನ್ನು ಹೇಳಿದ್ದಾನೆ.

ಅಲ್ಲಿಂದ ಮುಂದಕ್ಕೆ, ಅದೇ ತೋಟದ ಕಾಲುವೆಯ ಹತ್ತಿರ ತಂದೆ-ಮಕ್ಕಳಿಬ್ಬರೂ ಬಿರುಸಾಗಿ ಮಾತನಾಡುತ್ತ ಒಬ್ಬರನ್ನೊಬ್ಬರು ಹೊಡೆಯುವಂತೆ ಕೋಪಗೊಂಡು ವರ್ತಿಸುತ್ತಿದ್ದರೆಂಬುದನ್ನು, ಆ ತೋಟದ ಕೂಲಿಕಾರನ ಹೆಂಡತಿಯು ಸಾಕ್ಷಿಕೊಟ್ಟಿದ್ದಾಳೆ. ಅವಳು ತಂದೆ–ಮಕ್ಕಳ ಜಗಳವನ್ನು ದೂರದಿಂದ ನೋಡಿ, ತನ್ನ ಗಂಡನಿಗೆ ತಿಳಿಸೋಣವೆಂದು—ಕಾಲುವೆಗೆ ಸುಮಾರು ೧೦೦ ಗಜ ದೂರದಲ್ಲಿರುವ—ಗುಡಿಸಿಲಿಗೆ ಹೋದಳಂತೆ. ಅವಳು ವರ್ತಮಾನವನ್ನು ತನ್ನ ಗಂಡನಿಗೆ ತಿಳಿಸಿದ ಸ್ವಲ್ಪ ಹೊತ್ತಿನಲ್ಲಿಯೆ (ಎಂದರೆ ೪–೫ ನಿಮಿಷಗಳಿರಬಹುದು) ನಾಗೇಂದ್ರನು ಗಾಬರಿಯಿಂದ ಓಡಿಬಂದು, " ತಂದೆಯವರು ಕಾಲುವೆಯ ಹತ್ತಿರ ಕೊಲೆಗೊಂಡಿದ್ದಾರೆ, ಬೇಗ ಬಾ " ಎಂದು ಜವಾನನನ್ನು ಕೂಗಿದನಂತೆ. ಆಗ ಅವನ ಕೈಯಲ್ಲಿ ಕೊಡತಿ ಇರಲಿಲ್ಲವೆಂದು ಜವಾನನು ಹೇಳಿದ್ದಾನೆ. ಜವಾನನ ಹೆಂಡತಿಯು ' ಅವರು ನಮ್ಮ ಗುಡಿಸಿಲಿಗೆ ತುಂಬಾ ಭಯಪಟ್ಟು ಓಡಿ ಬಂದಿದ್ದರು. ಕೈಯಲ್ಲಿ ಏನೂ ಇರಲಿಲ್ಲ. ಆದರೆ ಮೈಮೇಲೆ ಮತ್ತು ಕೈಗಳ ಮೇಲೆ ರಕ್ತದ ಕಲೆಯಿತ್ತು ' ಎಂದು ನುಡಿದಿದ್ದಾಳೆ. ನಾಗೇಂದ್ರನ ಹಿಂದೆಯೆ ತೋಟದ ಜವಾನನು ಹೋಗಿ ನೋಡಲು, ನಾಗೇಶರಾಯರು ಕಾಲುವೆಯ ಹತ್ತಿರ ಸತ್ತು ಬಿದ್ದಿದ್ದರಂತೆ. ತಲೆಯೆಲ್ಲಾ ಜಜ್ಜಿ ಹೋಗಿದ್ದಿತಂತೆ. ಈ ಸನ್ನಿವೇಶಗಳಲ್ಲಿ ಅನುಮಾನವು ಸಹಜವಾಗಿ ನಾಗೇಂದ್ರನ ಮೇಲೆ ಬಂದು, ಅವನನ್ನು ಪೋಲಿಸಿನವರು ಸೆರೆಹಿಡಿದು ವಿಚಾರಣೆಗೆ ಹಾಕಿದ್ದಾರೆ. ಇಷ್ಟು ನಡೆದ ವಿಷಯಗಳು " ಎಂದು ಪ್ರಕಾಶನು, ಗುಟ್ಟಳ್ಳಿಯಲ್ಲಿ ಆದ ಕೊಲೆಯ ವಿಷಯವನ್ನು ಆಮೂಲಾಗ್ರವಾಗಿ ತಿಳಿಸಿದ.

ನಾನು ಕೆಲವು ದಿವಸಗಳಿಂದ ವೃತ್ತಪತ್ರಿಕೆಗಳನ್ನು ನೋಡದೆ ಇದ್ದುದರಿಂದ, ಈ ಕೊಲೆಯ ವಿಷಯವು ಮೊದಲು ಪ್ರಕಾಶನ ಬಾಯಿಂದಲೇ ನನಗೆ ತಿಳಿದುದು, ಅವನು ಹೇಳಿದುದನ್ನೆಲ್ಲಾ ಸ್ವಲ್ಪ ಹೊತ್ತು ಯೋಚಿಸಿ, " ಪ್ರಕಾಶ, ಇದಕ್ಕಿಂತ ಸುಲಭವಾದ ಕೇಸು ಯಾವುದೂ ಇರಲಾರದು. ಕೊಲೆಪಾತಕನನ್ನು ಕಂಡುಹಿಡಿಯಲು ಬೇಕಾದ ದೃಷ್ಟಾಂತಗಳೆಲ್ಲಾ ಇಲ್ಲಿ ಇದ್ದೇ ಇವೆ " ಎಂದೆ.

ಪ್ರಕಾಶನು ನಗುತ್ತಾ " ಪ್ರಭೂ, ನಿನ್ನ ದೃಷ್ಟಾಂತಗಳು ಬಹಳ ವಿಚಿತ್ರಗುಣವುಳ್ಳವು. ಅವು ಒಮ್ಮೆ ಒಬ್ಬನನ್ನು ಕೊಲೆಪಾತಕನೆಂದು ತೋರಿಸಿದರೆ, ಸ್ವಲ್ಪ ಯೋಚಿಸಿ, ಸನ್ನಿವೇಶಗಳನ್ನೆಲ್ಲಾ ಕರತಲಾಮಲಕ ಮಾಡಿಕೊಂಡು ನೋಡಿದರೆ, ಅವೇ 'ದೃಷ್ಟಾಂತಗಳು ಇನ್ನೊಬ್ಬನಮೇಲೆ ಅಷ್ಟೇ ಬಲವಾಗಿ ಅಪಾದನೆಯನ್ನು ಹೊರಿಸುತ್ತವೆ. ಇಲ್ಲಿ ನಾಗೇಂದ್ರನ ಮೇಲೆ ಕೇಸೇನೋ ಬಲವಾಗಿಯೆ ಇದೆ. ಆದರೂ ಕೆಲವು ಜನ ಗುಟ್ಟಳ್ಳಿಯ ನಿವಾಸಿಗಳು, ಅದರಲ್ಲಿ ನಾರಾಯಣರಾಯರ ಮಗ ರಾಮರಾವ್ ಮತ್ತು ಮಗಳು ಸುಶೀಲೆ ಇಬ್ಬರೂ, ನಾಗೇಂದ್ರನು ಈ ಕೆಲಸ ಮಾಡುವವನಲ್ಲವೆಂದು ದೃಢವಾಗಿ ನಂಬಿಕೊಂಡು, ನನ್ನ ಸಹಾಯವನ್ನು ಕೋರಿದ್ದಾರೆ. ಗುಟ್ಟಳ್ಳಿಯ ಪೋಲಿಸ್ ಇನ್ಸ್‌ಪೆಕ್ಟರಾದ ಶಿವರಾಮನು ಕೇಸನ್ನು ತೆಗೆದುಕೊಂಡು ನಡಿಸುತ್ತಿದ್ದಾನೆ. ಶಿವರಾಮನ ವಿಷಯ ನಿನಗೆ ಗೊತ್ತೇ ಇದೆ. ಎಷ್ಟೋ ವೇಳೆ ಅವನಿಗೂ ನನಗೂ ಒಂದೇ ಕೇಸಿನಲ್ಲಿ ಕೆಲಸಮಾಡುವ ಸಂಭವವು ಬಂದು, ಅವನು ನಿಷ್ಕರ್ಷಿಸಿದ್ದ ನಿರ್ಧಾರಗಳೆಲ್ಲವನ್ನೂ ತಪ್ಪೆಂದು ಎತ್ತಿ ತೋರಿಸಿದ್ದೇನೆ." ಎಂದು ಹೇಳಿದ.

ನಾನು ಪ್ರಕಾಶನ ಮುಖವನ್ನೇ ನೋಡುತ್ತಾ " ಇದಕ್ಕಿಂತ ಸಾಕ್ಷಿಗಳು ಮತ್ತು ಸನ್ನಿವೇಶಗಳು ಏನು ಬೇಕು ? ಈ ಕೇಸಿನಲ್ಲಿ ನೀನು ಹೇಗೆ ಜಯವನ್ನು ಹೊಂದುತ್ತೀಯೊ ಎಂಬ ಅನುಮಾನ ನನಗೆ ಇದ್ದೇ ಇದೆ " ಎಂದೆ. ಅವನು ನಗುತ್ತಾ " ಪ್ರಭೂ, ನಿನ್ನ ಅನುಮಾನಗಳು ಹಾಗಿರಲಿ; ಶಿವರಾಮನು ಕೂಡ, ನಾಗೇಂದ್ರನೇ ಅಪಾದಿತನೆಂದು ನಿರ್ಧರಿಸಿದ್ದಾನೆ. ಹಿಂದೆ ಅನೇಕ ವೇಳೆ ಮಾಡಿರುವ ಹಾಗೆ ಈಗಲೂ ನಾನು, ಶಿವರಾಮನು ಕಾಣದೆ ಇರುವ ಕಾರಣಗಳಿಂದ, ಅವನು ಈಗ ನಿರ್ಧರಿಸಿರುವುದನ್ನು ಸುಳ್ಳೆಂದು ತೋರಿಸಿದರೂ ತೋರಿಸಬಹುದೆಂದು ತಿಳಿದುಕೊಂಡಿದ್ದೇನೆ " ಎಂದು ಹೇಳಿ, ತನ್ನ ಕೋಟನ್ನು ಬಿಚ್ಚಿ ಗೂಟಕ್ಕೆ ತಗುಲಿ ಹಾಕಿ, ಯೋಚಿಸುತ್ತಾ ಕುಳಿತಿದ್ದ ನನ್ನ ಹತ್ತಿರಕ್ಕೆ ಬಂದು, ಬೆನ್ನು ತಟ್ಟಿ " ಪ್ರಭೂ, ಗುಟ್ಟಳ್ಳಿಯ ಕೇಸಿನ ವಿಷಯ ಇಷ್ಟೇ ಅಲ್ಲ. ನಾಗೇಂದ್ರನನ್ನು ಕೊಲೆಯಾದ ಸ್ಥಳದಲ್ಲಿ ಬಂಧಿಸಲಿಲ್ಲವಂತೆ. ಮೂರನೆಯ ದಿವಸ ತನ್ನ ಮನೆಯಲ್ಲೇ ಬಂಧಿತನಾದನಂತೆ. ಪೋಲಿಸಿನವರು ಹೋಗಿ ' ನೀವು ದಸ್ತಗಿರಿಯಾಗಿರುವಿರಿ ' ಎಂದು

ಕೊಕ್ಕೋಕ ಕಳಾಶಾಸ್ತ್ರ

64 ರಹಸ್ಯ ಚಿತ್ರಪಠಗಳು ಸಹ ರೂ. 1. ಇದರಲ್ಲಿ ಸ್ತ್ರೀ

ಪುರುಷರನ್ನು ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನ ಮಾಡುವ ರೀತಿಗಳು, ಕನ್ಯೆಯರ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಶೃಂಗಾರ ರಹಸ್ಯಗಳು ನಕ್ಷೆಗಳು ಸಹ ಹೇಳಿದೆ. ಬಹಿರಂಗವಾಗಿ ಇಂಥ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ. 264 ಪುಟಗಳುಳ್ಳ ದೊಡ್ಡ ರಹಸ್ಯ ಕನ್ನಡ ಪುಸ್ತಕ ಕ್ರಯ ರು. 1 ಪೋಸ್ಟೇಜ್ 5 ಆಣೆ.

ಸರಸ್ವತಿ ಬುಕ್ ಡಿಪೋ,

ಅರುಣಾಚಲ ಮೊದಲಿ ಬೀದಿ, ಜಿ. ಟಿ. ಮದಾರಾಸು.

ರಿಜಿಸ್ಟರ್ ಲೀವರ್ ಇಲ್ಲವೆಂದು ತಿಳಿಯುಪಡಿಸುವವರಿಗೆ ಹಣ ಪರತ

ಕೆಂಪುಗಳು ಕೆತ್ತಲ್ಪಟ್ಟ ರಿಜಿಸ್ಟರ್ ಲೀವರ್, ರೋಲ್ಡು ಗೋಲ್ಡು ಪ್ಲೇಟ್,ರಿಸ್ಟು ಗಡಿಯಾರ ದೃಢವಾದದ್ದು ಮತ್ತು ಅಂದವಾದದ್ದು.

5 ಸಂವತ್ಸರ ಗ್ಯಾರಂಟಿ ಸಹಾ ಬೆಲೆ ರೂ. 5-8-0.

ರಾಜನ್ ವಾಚ್ ಕಂಪೆನಿ.

27ನೇ ಬೀಟ್ ಜಿ. ಓ. ಓ. ಮದರಾಸು.

ಹೇಳಿ ಆರ್ಡರ (Order) ನ್ನು ತೋರಿಸಲು, ಅವನು ಯಾವ ರೀತಿಯ ಭಯವನ್ನಾಗಲಿ, ಮುಖ ಭಾವವನ್ನಾಗಲಿ ವ್ಯಕ್ತಪಡಿಸದೆ ' ನನಗೆ ಅದು ತಿಳಿದೇ ಇದೆ ' ಎಂದು, ಅವರ ಹಿಂದೆ ಮರು-ಮಾತನಾಡದೆ ಹೋದನಂತೆ '' ಎಂದ.

'' ಪ್ರಕಾಶ್, ಇನ್ನೇನು ಬೇಕು ? ಅವನೇ ಸಮ್ಮತಿಸಿದಂತೆ ಆಗಲಿಲ್ಲವೇ? ಒಂದು ವೇಳೆ ಅವನು ನಿರಪರಾಧಿಯಾಗಿದ್ದರೆ ಹಾಗೆಂದು ಹೇಳುತ್ತಿದ್ದನೆ ? ''

ನನ್ನ ಮಾತುಗಳನ್ನು ಕೇಳಿ, ಪ್ರಕಾಶನು, ಇನ್ನೊಂದು ಸಿಗರೇಟನ್ನು ಹಚ್ಚುತ್ತಾ '' ಪ್ರಭೂ, ನೀನು ಅವನ ಮೇಲೆ ಅಪಾದನೆ ಹೊರಿಸಲು ಬಹಳ ಶ್ರಮಪಡುತ್ತಿರುವಂತೆ ಕಾಣುತ್ತದೆ. ನೀನು ಹೇಳಿದ ಪ್ರಕಾರ ಪೋಲಿಸಿನವರು ಬಂಧಿಸಲು ಬಂದಾಗ, ಅವನು ನಿರಪರಾಧಿಯೆಂದು ಹೇಳಿದ್ದರಾಗಲಿ ಅಥವಾ ಏನೂ ತಿಳಿಯದವನಂತೆ ನಟಿಸಿದ್ದರಾಗಲಿ, ನನಗೆ ಅವನ ಮೇಲೆ ಖಂಡಿತವಾಗಿ ಅನುಮಾನ ಬರುತ್ತಿತ್ತು. ಈಗ ಅವನಿದ್ದ ಸನ್ನಿವೇಶಗಳಲ್ಲಿ, ಕೊಲೆಯು ತನ್ನ ಮೇಲೇ ಆರೋಪಿಸಲ್ಪಡುವುದೆಂಬುದು, ಅವನಿಗೆ ಚೆನ್ನಾಗಿ ಗೊತ್ತು. ದೃಷ್ಟಾಂತಗಳೂ ಹಾಗೆಯೆ ಇವೆ. ಸಾಕ್ಷಿಗಳೂ ಅದರಂತೆ ನುಡಿದಿದ್ದಾರೆ. ಆದುದರಿಂದ ತಾನು ಏನು ಹೇಳಿಯೂ ಪ್ರಯೋಜನವಿಲ್ಲವೆಂದು ತನ್ನ ಸ್ಥಿತಿಯನ್ನರಿತು ಬಂದಿಯಾಗಿದ್ದಾನೆ. '' ಎಂದು ಹೇಳಿದ. ಅಲ್ಲಿ ನಡೆದಿರುವ ಸಂಗತಿಗಳೂ, ಪ್ರಕಾಶನು ಹೇಳುವ ರೀತಿಯೂ, ಒಂದಕ್ಕೊಂದು ವ್ಯತಿರಿಕ್ತವಾಗಿ ಇದ್ದುದರಿಂದ ನನಗೆ ಯೋಚನೆ ಮಾಡಲು ಸಾಧ್ಯವೆ ಇಲ್ಲದೆ ಹೋಯಿತು. ನಾನು ಹೇಗೆ ಆಲೋಚಿಸಿದರೂ ಅದಕ್ಕೆ ಸಮಾಧಾನವನ್ನು ಪ್ರಕಾಶನು ಹೇಳುತ್ತಿದ್ದುದರಿಂದ, ನನಗೆ ಒಂದು ಸಾರಿ ಪ್ರಕಾಶನ ಊಹೆಗಳೆ ಸರಿಯೆಂದೂ, ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ನಾಗೇಂದ್ರನನ್ನು ಬಂಧಿಸಿರುವ ಶಿವರಾಮನ ಕಾರ್ಯಗಳೇ ಸರಿಯೆಂದೂ ತೋರುತ್ತಿತ್ತು. ಆದುದರಿಂದ '' ಪ್ರಕಾಶ್, ನಾಗೇಂದ್ರನು ಕೋರ್ಟಿನಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾನೆಯೆ ? ವಿಚಾರಣೆ ಹೇಗೆ ನಡೆದಿದೆ ? '' ಎಂದು ಪ್ರಶ್ನಿಸಿದೆ. ಅವನು ಒಂದು ವೃತ್ತ-ಪತ್ರಿಕೆಯನ್ನು ನನ್ನ ಕೈಗೆ ಕೊಟ್ಟು '' ನೋಡು ಇದರಲ್ಲಿ ನಾಗೇಂದ್ರನ ಹೇಳಿಕೆ, ಕೋರ್ಟಿನಲ್ಲಿ ನಡೆದ ವಿದ್ಯಮಾನಗಳೆಲ್ಲಾ ವಿಶದವಾಗಿವೆ. ನೀನೇ ಓದು, ಅಷ್ಟರಲ್ಲಿ ಸ್ವಲ್ಪ ಕಾಫಿ ಮಾಡಿಸುತ್ತೇನೆ '' ಎಂದು ಹೇಳಿ ಒಳಗೆ ಹೋದ. ನಾನು ಕುತೂಹಲದಿಂದ ಪತ್ರಿಕೆಯನ್ನು ನೋಡಲು, ಅದರಲ್ಲಿ ಈ ರೀತಿಯಿತ್ತು:—

" ನಾಗೇಶರಾಯರ ಕೊಲೆಯ ವಿಷಯದಲ್ಲಿ
ಕೊಲೆಪಾತಕನಾದ ನಾಗೇಂದ್ರನು ಕೊಟ್ಟ
ಹೇಳಿಕೆ ಮತ್ತು ನ್ಯಾಯಾಧೀಶರ ಪ್ರಶ್ನೆಗಳು

ನಾಗೇಂದ್ರನ ಹೇಳಿಕೆ:— ನಾಗೇಶರಾಯರ ಒಬ್ಬನೇ ಮಗನಾದ ನಾಗೇಂದ್ರನೆಂದು ಕರೆಯಲ್ಪಡುವ, ನಾನು ಹೇಳುವುದೇನೆಂದರೆ:—

ಖೂನಿಯಾಗುವುದಕ್ಕೆ ಮೂರು ದಿವಸಗಳ ಮುಂಚೆ ನಾನು ಮೈಸೂರಿಗೆ ಹೋಗಿ, ಆ ದಿವಸವೆ ೬ ಘಂಟೆಗೆ ರೈಲಿನಲ್ಲಿ ಹಿಂದಿರುಗಿದೆ. ನಮ್ಮ ಮನೆಯ ಜವಾನನು, ತಂದೆಯವರು ಎಲ್ಲಿಗೊ ಹೋಗಿರುವರೆಂದು ತಿಳಿಸಿದ. ನಾನು ಊರಿಗೆ ಮರಳಿ ಬಂದ ವಿಚಾರ, ನನ್ನ ತಂದೆಯವರಿಗೆ ತಿಳಿದಿರಲಿಲ್ಲ. ಸಾಯಂಕಾಲವಾಗಿದ್ದುದರಿಂದ, ಕೈ-ಕಾಲುಗಳನ್ನು ತೊಳೆದುಕೊಂಡು, ಕಾಫಿ ಕುಡಿದು, ನನ್ನ ಕೊಡತಿಯೊಡನೆ ಎಂದಿನಂತೆ ಸಾಧನೆಮಾಡಲು ನಮ್ಮ ತೋಟದ ಕಡೆ ಹೊರಟೆ. ದಾರಿಯಲ್ಲಿ, ಸಾಕ್ಷಿ ಕೊಟ್ಟಿರುವ ಮೂರು ಜನರನ್ನೂ ನೋಡಿದೆ. ಆದರೆ ಅದರಲ್ಲಿ ಒಬ್ಬನು ಹೇಳಿರುವ ಪ್ರಕಾರ, ನನ್ನ ತಂದೆಯವರು ಅದೇ ದಾರಿಯಲ್ಲಿ—ಅದೂ ಕೇವಲ ೧೦೦ ಗಜಗಳ ಮುಂದೆ— ಹೋಗುತ್ತಿದ್ದರೆನ್ನುವುದು ನನಗೆ ತಿಳಿಯದು. ಮರಗಳು, ಗಿಡಗಳು ಹೇರಳವಾಗಿರುವುದರಿಂದ ನನಗೆ ಅವರು ಕಾಣಿಸಲಿಲ್ಲ. ಕಾಲುವೆಗೆ ಸುಮಾರು ೫೦ ಗಜಗಳ ದೂರದಲ್ಲಿ ನಾನು ಹೋಗುತ್ತಿರುವಾಗ " **ಬಾಬೂ** " ಎಂದು ಕೂಗಿದ ಹಾಗೆ ಕೇಳಿಸಿತು. ಆ ಹೆಸರು ನನ್ನ ತಂದೆಯವರು ನನಗೆ ಇಟ್ಟಿದ್ದ ಅಡ್ಡ ಹೆಸರಾದುದರಿಂದ, ನಾನು ತತ್‌ಕ್ಷಣ ಕೂಗಿದ ಕಡೆಗೆ ಓಡಿಹೋದೆ. ನನ್ನ ತಂದೆಯವರು ಕಾಲುವೆಯ ಬಳಿ ಅಲ್ಲಿಂದಿಲ್ಲಿಗೆ ಹ್ವಾರಾಡುತ್ತಿದ್ದರು. ನಾನು ಬಂದುದನ್ನು ನೋಡಿ ಅವರು ಚಕಿತರಾಗಿ ' ನೀನ್ಯಾಕೆ ಬಂದೆ ! ' ಎಂದು ಕೇಳಿದರು. ಹಾಗೆಯೇ ಮಾತನಾಡುತ್ತ, ನನ್ನ ತಂದೆಯವರು ನನ್ನ ವಿರೋಧ-ವೃತ್ತಿಯನ್ನು ನೋಡಿ ಕೋಪಗೊಂಡು ಎರಡು ಏಟುಗಳನ್ನೂ ಹೊಡೆದರು. ಸ್ವಭಾವತಃ ಅವರು ಬಹಳ ಮುಂಗೋಪಿಗಳು.

ಏಟುಗಳೂ, ಬೈಗಳೂ ಧಾರಾಳವಾಗಿ ಬೀಳುತ್ತಿದ್ದುವು. ಅವರು ನನ್ನನ್ನು ಪುನಃ ಎಲ್ಲಿ ಹೊಡೆಯುವರೋ ಎಂದು ಎಡಗೈಯನ್ನು ಅಡ್ಡವಾಗಿ ಎತ್ತಿ ಹಿಡಿದುಕೊಂಡೆ. ಸ್ವಲ್ಪ ಹೊತ್ತಾದ ಮೇಲೂ ಅವರ ಕೋಪವು ಸ್ತಿಮಿತಕ್ಕೆ ಬಾರದೆ ಇರುವುದನ್ನು ನೋಡಿ, ನಾನು ಆ ಸ್ಥಳವನ್ನು ಬಿಟ್ಟು, ಸಾಧನೆಯ ಪ್ರದೇಶಕ್ಕೆಂದು ಹೊರಟುಹೋದೆ. ಕಾಲುವೆಯಿಂದ ಸುಮಾರು ೧೫೦ ಗಜಗಳ ದೂರದಲ್ಲಿ ನಾನು ಹೋಗುತ್ತಿರುವಾಗ 'ಅಯ್ಯೋ ಅಯ್ಯೋ' ಎಂಬ ಆರ್ತಧ್ವನಿಯು ಕೇಳಿಸಿತು. ತಂದೆಯವರಿಗೆ ಏನಾಯಿತೋ ಎಂದು ಕಾಲುವೆಯ ಕಡೆಗೆ ಓಡಿದೆ. ನನ್ನ ತಂದೆಯವರು ಕೆಳಗೆ ಬಿದ್ದಿದ್ದರು. ತಲೆಯೆಲ್ಲಾ ಜಜ್ಜಿ ಹೋಗಿ ಬಹಳ ರಕ್ತ ಸುರಿಯು ತ್ತಿತ್ತು. ಮುಖ ಕೆಳಗಾಗಿ ಬಿದ್ದಿದ್ದರು. ಅವರನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡೆ. ಅನಂತರ ಕಾವಲುಗಾರನ ಮನೆಗೆ ಸಹಾಯಕ್ಕೆಂದು ಓಡಿದೆ. ನನಗೆ ಗೊತ್ತಿರುವ ಮಟ್ಟಿಗೂ, ತಂದೆಯವರಿಗೆ ಶತ್ರುಗಳಾರೂ ಇರಲಿಲ್ಲ. ಈ ವಿಷಯದಲ್ಲಿ ಇದಕ್ಕಿಂತ ಹೆಚ್ಚಾಗಿ ನನಗೇನೂ ತಿಳಿಯದು.

ನ್ಯಾಯಾಧೀಶರು:— ಸಾಯುವ ಮುನ್ನ ನಿಮ್ಮ ತಂದೆಯವರು ಏನನ್ನಾದರೂ ಹೇಳಿದರೋ?

ನಾಗೇಂದ್ರ:— ಏನೇನನೋ ಹೇಳುತ್ತಿದ್ದರು. ಅಸ್ಪಷ್ಟವಾಗಿ ಇದ್ದುದರಿಂದ ನನಗೆ ತಿಳಿಯಲಿಲ್ಲ. 'ಚೇರಿ, ಚೇರಿ' ಎಂದು ಹೇಳಿ ಪ್ರಾಣ ಬಿಟ್ಟ ಹಾಗೆ ಜ್ಞಾಪಕ.'

ನ್ಯಾಯಾಧೀಶರು:— ಆ ಪದಗಳಿಂದ ನಿಮಗೇನು ಅರ್ಥವಾಯಿತು?

ನಾಗೇಂದ್ರ:—ಏನೂ ಅರ್ಥವಾಗಲಿಲ್ಲ. ಕೇವಲ ಪ್ರಜ್ಞಾಹೀನ ಸ್ಥಿತಿಯಲ್ಲಿ ಹೇಳಿದ ಮಾತುಗಳಿರಬಹುದು.

ನ್ಯಾಯಾಧೀಶರು:— ನೀವೂ ನಿಮ್ಮ ತಂದೆಯವರೂ ಜಗಳವಾಡಲು ಕಾರಣವೇನು?

ನಾಗೇಂದ್ರ:— ಈ ಪ್ರಶ್ನೆಗೆ ಉತ್ತರವನ್ನು ಹೇಳಲಾರೆ.

ನ್ಯಾಯಾಧೀಶರು :— ಹೇಳಲೇಬೇಕೆಂದು ಒತ್ತಾಯಪಡಿಸುತ್ತೇನೆ.

ನಾಗೇಂದ್ರ :— ಆದರೂ ಹೇಳಲಾರೆ. ನಮ್ಮ ಜಗಳಕ್ಕೂ ಈ ಕೊಲೆಗೂ ಏನೇನೂ ಸಂಬಂಧವಿಲ್ಲವೆಂದು ಮಾತ್ರ ದೃಢವಾಗಿ ಹೇಳಬಲ್ಲೆ.

ನ್ಯಾಯಾಧೀಶರು :—ಅದನ್ನು ನ್ಯಾಯಾಸ್ಥಾನವು ನಿಷ್ಕರ್ಷಿಸಬೇಕು. ನೀವು ಕಾರಣವನ್ನು ಹೇಳದಿದ್ದರೆ ನಿಮ್ಮ ಮೇಲೆ ಕೇಸು ಇನ್ನೂ ಬಲವಾಗುತ್ತದೆ.

ನಾಗೇಂದ್ರ :— ಈ ವಿಷಯದಲ್ಲಿ ನನ್ನ ಪರಿಣಾಮವು ಹೇಗಾದರೂ ನಾನು ಒಂದಕ್ಷರವನ್ನೂ ಹೇಳಲಾರೆ.

ನ್ಯಾಯಾಧೀಶರು :— 'ಬಾಬು' ಎನ್ನುವುದು ನಿಮ್ಮ ಅಡ್ಡ ಹೆಸರೇ?

ನಾಗೇಂದ್ರ :— ಹೌದು!

ನ್ಯಾಯಾಧೀಶರು :— ಮತ್ತೆ ನೀವು ಊರಲ್ಲಿಲ್ಲವೆಂದು ತಿಳಿದಿದ್ದರೂ, ಮೇಲಾಗಿ ಆ ಪ್ರದೇಶದಲ್ಲಿ ನಿಮ್ಮ ಸುಳಿವನ್ನು ಅರಿಯದೆ ಇರುವಾಗ ನಿಮ್ಮ ತಂದೆಯವರು ನಿಮ್ಮ ಅಡ್ಡ ಹೆಸರನ್ನು ಕೂಗಿದರೆಂದರೆ ಆಶ್ಚರ್ಯವಲ್ಲವೇ?

ನಾಗೇಂದ್ರ :— ಈ ವಿಷಯವು ನನಗೂ ಆಶ್ಚರ್ಯವನ್ನುಂಟುಮಾಡುತ್ತಿದೆ. ನನ್ನ ಹೆಸರನ್ನು ಕೂಗಿ, ನಾನು ಅವರಲ್ಲಿಗೆ ಹೋದಮೇಲೆ 'ನೀನ್ಯಾಕೆ ಬಂದೆ!' ಎಂದು ಚಕಿತರಾಗಿ ಪ್ರಶ್ನಿಸಿದರು.

ನ್ಯಾಯಾಧೀಶರು :— ಆ ಸ್ಥಳದಲ್ಲಿ ನಿಮಗೆ ಅನುಮಾನವಾಗುವಂತಹ ವಸ್ತುಗಳನ್ನೇನಾದರೂ ಕಂಡಿರಾ?

ನಾಗೇಂದ್ರ :— ಏನೂ ಇಲ್ಲ. ಘಟನೆಯಿಂದ ತುಂಬಾ ಗಾಬರಿಗೊಂಡಿದ್ದೆ. ಆದರೂ ನಾನು ಓಡಿ ಹೋದಾಗ ನಮ್ಮ ತಂದೆಯವರು ಬಿದ್ದಿದ್ದ ಸ್ಥಳಕ್ಕೆ ಸುಮಾರು ೧೫-೨೦ ಗಜಗಳ ದೂರದಲ್ಲಿ, ಯಾವುದೋ ಒಂದು ಹಳದಿ ಬಣ್ಣದ ಬಟ್ಟೆಯು ಬಿದ್ದಿದ್ದಂತೆ ಭಾಸವಾಯ್ತು. ಬಹುಶಃ ಒಂದು ವಸ್ತ್ರವೋ, ರುಮಾಲವೋ ಇರಬಹುದು. ನಾನು ತಂದೆಯವರನ್ನು ನೆಲದ ಮೇಲೆ ಮಲಗಿಸಿ ಪುನಃ ನೋಡಲಾಗಿ ಅದು ಅಲ್ಲಿ ಇರಲಿಲ್ಲ.

ನ್ಯಾಯಾಧೀಶರು :— ಹಾಗಾದರೆ ನೀವು ಕಾವಲುಗಾರನ ಮನೆಗೆ ಸಹಾಯಕ್ಕೆಂದು ಹೋಗುವ ಮುಂಚೆಯೆ ಅದು ಮಾಯವಾಗಿರಬೇಕು!

ನಾಗೇಂದ್ರ:— ಹೌದು.

ನ್ಯಾಯಾಧೀಶರು:— ನೀವು ಅಲ್ಲಿರುವಾಗಲೇ ಅದು ಮಾಯವಾಗಿವೆ ಎಂದು ಹೇಳುತ್ತೀರಾ?

ನಾಗೇಂದ್ರ:— ಹೌದು. ಆದರೆ ನಾನು, ಅದು ಬಿದ್ದಿದ್ದ ದಿಕ್ಕಿಗೆ ಬೆನ್ನು ಮಾಡಿಕೊಂಡು ಕುಳಿತಿದ್ದೆ.

ಇಲ್ಲಿಗೆ ನಾಗೇಂದ್ರನ ವಿಚಾರಣೆ ಮುಗಿಯಿತು. "

ನಾನು ಎಲ್ಲವನ್ನೂ ಸಾವಕಾಶವಾಗಿ ಓದಿ, "ಪ್ರಕಾಶ, ನ್ಯಾಯಾಧೀಶರು ಪಾಟೀಸವಾಲು ಮಾಡಿಬಿಟ್ಟಿದ್ದಾರೆ. ಅಪಾದಿತನನ್ನು ಹೀಗೆ ನ್ಯಾಯಾಧೀಶರು ಪ್ರಶ್ನಿಸುವುದು ತುಂಬಾ ಆಶ್ಚರ್ಯಕರವಾದ ಸಂಗತಿ" ಎಂದೆ. ಅಷ್ಟು ಹೊತ್ತಿಗೆ ಒಳಗೆ ಬಂದ ನನ್ನ ತಂಗಿಯ ಕೈಯಿಂದ ಕಾಫಿ ಲೋಟಾವನ್ನು ತೆಗೆದುಕೊಂಡು ಪ್ರಕಾಶನು ಒಂದು ಗುಟುಕು ಕುಡಿದು "ಏನೆಂದೆ ಪ್ರಭೂ?" ಎಂದ. "ನಾಗೇಂದ್ರನು ಬಹಳ ಒರಟಾಗಿ ಉತ್ತರಗಳನ್ನು ಕೊಟ್ಟಿದ್ದಾನೆ; ಹಾಗೆ ವರ್ತಿಸಿದುದರಿಂದ ಅವನ ಮೇಲೆ ಕೇಸು ಇನ್ನೂ ಬಲವಾಗುವುದಿಲ್ಲವೆ?" ಎಂದೆ. ಮೇಜಿನ ಮೇಲಿಟ್ಟಿದ್ದ ಕಾಪಿಯನ್ನು ತೆಗೆದುಕೊಳ್ಳುವಂತೆ ನನಗೆ ಸೂಚಿಸಿ ಪ್ರಕಾಶನು "ನೀನು ಮತ್ತು ನ್ಯಾಯಾಧೀಶರು ನಾಗೇಂದ್ರನೇ ಕೊಲೆಮಾಡಿದನೆಂದು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಪ್ರಯತ್ನಪಡುತ್ತಿರುವಂತೆ ತೋರುತ್ತದೆ. ನಾಗೇಂದ್ರನ ಉತ್ತರಗಳು ನನ್ನ ಮನಸ್ಸಿಗೇನೋ ಬಹಳ ಸಮಂಜಸವಾಗಿಯೂ, ಸರಿಯಾಗಿಯೂ ಇವೆ. ಅವನ ಗುಣವನ್ನೂ ಧೈರ್ಯವನ್ನೂ ಕೊಂಡಾಡಲೇಬೇಕು.

ನಾಗೇಂದ್ರನು ಹೇಳಿರುವಂತೆ, ಅವನ ತಂದೆಯು ಸಾಯುವಮುನ್ನ "ಚೇರಿ, ಚೇರಿ" ಎಂದು ಹೇಳಿದ ಪದವೂ, ಅಲ್ಲಿ ಬಿದ್ದಿದ್ದ ಬಟ್ಟೆಯೂ ನಾಗೇಂದ್ರನು ನಿರಪರಾಧಿಯೆಂದು ತೋರಿಸಿದರೂ ತೋರಿಸಬಹುದು. ನೀವು ನಾಗೇಂದ್ರನೇ ಅಪರಾಧಿ ಎಂದು ತಳಪಾಯವನ್ನು ಹಾಕಿಕೊಂಡು ಕೆಲಸಮಾಡಿದರೆ, ನಾನು ಅವನು ಕೊಟ್ಟಿರುವ ಹೇಳಿಕೆಯೇ ಸರಿಯೆಂದೂ,ಅವನು ನಿರಪರಾಧಿಯೆಂದೂ ದೃಢವಾಗಿ ತಿಳಿದುಕೊಂಡು, ಅದರಮೇಲೆ ತನಿಖೆ ಮಾಡುತ್ತೇನೆ. ನೋಡೋಣ. ಕಟ್ಟಡವು ಈ ಊಹೆಯಮೇಲೆ ಎಲ್ಲಿಯವರೆಗೂ ಹೋಗುತ್ತದೆಯೊ! ಮೊದಲು ಈಗ ಗುಟ್ಟಳ್ಳಿಗೆ ಹೋಗಿ ಸ್ಥಿತಿಗತಿಗಳನ್ನೂ, ಸನ್ನಿವೇಶಗಳನ್ನೂ ಪರೀಕ್ಷಿಸೋಣ. ನಮಗಾಗಿ ರಾಮರಾವ್ ಮತ್ತು ಅವನ ತಂಗಿ ಕಾಯುತ್ತಿರುತ್ತಾರೆ" ಎಂದು ಹೇಳಿ ಕೋಟನ್ನು ಹಾಕಿಕೊಂಡು, ನನಗೂ ಬರುವಂತೆ ಹೇಳಿ ಕೆಳಗೆ ಇಳಿದು ಬಂದ.

ನಾವು ಗುಟ್ಟಳ್ಳಿಗೆ ಹೋಗುವಷ್ಟು ಹೊತ್ತಿಗೆ ಸಂಜೆಯ ೭ ಗಂಟೆಯಾಗಿತ್ತು. ನಾವು ಹೋಗುವ ಕಾಲಕ್ಕೆ ಸರಿಯಾಗಿ ಶಿವರಾಮನು ಪೋಲಿಸ್ ಠಾಣೆಯಿಂದ ಹೊರಗೆ ಬಂದ. ಪ್ರಕಾಶ ನನ್ನು ನೋಡಿದೊಡನೆಯೆ ಶಿವರಾಮನು "ಬಾ ಪ್ರಕಾಶ, ನಾನು ೩ ದಿವಸಗಳಿಂದ ಪತ್ತೆತರದೂದು ನಡೆಯಿಸಿದ್ದೇನೆ. ಸುಶೀಲಾ ದೇವಿ ಮತ್ತು ಆಕೆಯ ಅಣ್ಣ ಈ ಕೆಲಸಕ್ಕೆ ತಮ್ಮ ಪರವಾಗಿ ನಿನ್ನ ಸಹಾಯವನ್ನು ಬೇಡಿರುವರೆಂದು ತಿಳಿಯಿತು" ಎಂದ. ಪ್ರಕಾಶನು ಅವನ ಕೈಯನ್ನು ಕುಲುಕಿಸುತ್ತಾ "ಮಿಸ್ಟರ್ ಶಿವರಾವ್, ಪುನಃ ಈ ಕೇಸಿನಲ್ಲೂ ನಮ್ಮಿಬ್ಬರ ಬುದ್ಧಿಯೂ ಓಡಬೇಕಾಗಿ ಬಂದಿರುವುದಕ್ಕೆ ಸಂತೋಷ. ನಿನ್ನ ಅಭಿಪ್ರಾಯವೇನು?" ಎಂದು ಪ್ರಶ್ನಿಸಿದ. ಶಿವರಾಮನು ಪೋಲಿಸ್‌ಆಫೀಸಿನೊಳಗಿನ ತನ್ನ ಸುಸಜ್ಜಿತ ಕೊಟಡಿಗೆ ನಮ್ಮನ್ನು ಕರೆದುಕೊಂಡು ಹೋಗಿ, ಕುಳಿತುಕೊಳ್ಳುವಂತೆ ಕುರ್ಚಿಗಳನ್ನು ತೋರಿಸಿ "ಪ್ರಕಾಶ, ನಾನೆಲ್ಲವನ್ನೂ ಪೂರ್ತಿಗೊಳಿಸಿದ್ದೇನೆ. ನಾನು ವಿಮರ್ಶೆಮಾಡಿ ನೋಡದಿರುವ ಕಾರ್ಯವಾವುದೂ ಇಲ್ಲ. 'ನೀನು ಬಂದರೂ ಹೆಚ್ಚಿಗೆ ಏನನ್ನೂ ಮಾಡಲಾರೆ' ಎಂದು ಎಷ್ಟು ವಿಧವಾಗಿ ಹೇಳಿದರೂ ರಾಮರಾಯರು ನಂಬದೆ ನಿನ್ನ ಸಹಾಯವನ್ನು ಕೋರಿದ್ದಾನೆ. ನಾನೇನೋ ನಾಗೇಂದ್ರನೇ ಕೊಲೆಪಾತಕನೆಂದು ನಿರ್ಧರಿಸಿದ್ದೇನೆ" ಎಂದು ಹೇಳಿ, ತನ್ನ ಜೇಬಿನಿಂದ ಒಂದು ಸಿಗರೇಟಿನ ಡಬ್ಬಿಯನ್ನು ತೆಗೆದು ಮೇಜಿನ ಮೇಲಿಟ್ಟ. ನಾನೊಂದು ಸಿಗರೇಟನ್ನು ತೆಗೆದುಕೊಂಡ ಮೇಲೆ ಪ್ರಕಾಶನೂ ಒಂದನ್ನು ತೆಗೆದುಕೊಂಡು, ಬೆಂಕಿಯ ಪೊಟ್ಟಣದ ಮೇಲೆ ಹೊಡೆಯುತ್ತಾ ಏನನ್ನೊ ಯೋಚಿಸುತ್ತಿರುವಷ್ಟರಲ್ಲಿ, ನಮ್ಮ ಕೋಣೆಯನ್ನು ಒಬ್ಬ ಯುವತಿಯೂ ಒಬ್ಬ ಯುವಕನೂ ಪ್ರವೇಶಿಸಿದರು. ಶಿವರಾಮನು ಎದ್ದು "ಬನ್ನಿ, ಬನ್ನಿ, ಪ್ರಕಾಶನು ಕೂಡ ನಿಮಗಾಗಿ ಕಾದಿರುವಂತಿದೆ" ಎಂದು ಪಕ್ಕದಲ್ಲಿದ್ದ ಕುರ್ಚಿಗಳ ಮೇಲೆ ಕುಳಿತುಕೊಳ್ಳುವಂತೆ ಹೇಳಿದ. ರಾಮರಾಯನು ನಮಗೆ ವಂದಿಸಿ "ಮಿಸ್ಟರ್ ಪ್ರಕಾಶ, ಇವಳೇ ನನ್ನ ತಂಗಿ, ಸುಶೀಲಾದೇವಿ! ತಮ್ಮ ಕಾರ್ಯ-ಕೌಶಲಗಳನ್ನು ಅನೇಕಸಾರಿ ಕೇಳಿದ್ದೇವೆ. ನನ್ನ ತಂಗಿಯ ಒತ್ತಾಯದಿಂದಲೂ ನಾಗೇಂದ್ರನ ಮೇಲಿರುವ ನನ್ನ ಪ್ರೀತಿಯಿಂದಲೂ ನಿಮಗೆ ತನಿಖೆ ಮಾಡುವ ತೊಂದರೆಯನ್ನು ಕೊಟ್ಟಿದ್ದೇನೆ. ನನಗೆ ನಾಗೇಂದ್ರನು ಬಾಲ್ಯದಿಂದಲೂ ಗೊತ್ತು. ಮತ್ತು ನನ್ನ ಜೊತೆಯಲ್ಲಿಯೆ ಎಂ. ಎ. ಗೆ ಓದುತ್ತಿದ್ದಾನೆ. ಅವನು ಈ ಕೆಲಸವನ್ನು ಖಂಡಿತವಾಗಿಯೂ ಮಾಡಿರಲಾರ. ಒಂದು ಕ್ರಿಮಿಯನ್ನು ನೋಯಿಸಲು ಕೂಡ ಅವನಿಗೆ ಮನಸ್ಸು ಬರುವುದಿಲ್ಲ" ಎಂದ. ಪ್ರಕಾಶನು ರಾಮರಾಯನನ್ನುದ್ದೇಶಿಸಿ "ನಾಗೇಂದ್ರನ ಮೇಲೆ ಬಂದಿರುವ ಅಪಾದನೆಯನ್ನು ತಪ್ಪಿಸಲು ಕಷ್ಟವಾಗುವುದಿಲ್ಲವೆಂದು ನನಗೆ ತೋರುತ್ತಿದೆ" ಎಂದುಹೇಳಿದ ಕೂಡಲೆ ಸುಶೀಲೆಯು ದುಃಖದಿಂದ ಕುಂದಿದ್ದ ಮುಖವನ್ನು ಪ್ರಪುಲ್ಲಿತವಾಗಿ ಮಾಡಿ "ಇನ್ಸ್‌ಪೆಕ್ಟರೆ, ನೋಡಿದಿರಾ, ಪತ್ತೇದಾರರು ಭರವಸೆಯನ್ನಿತ್ತಿದ್ದಾರೆ. ಅವರು ಹೇಳಿದುದು ಎಂದೆಂದಿಗೂ ಅಸತ್ಯವಾಗುವುದಿಲ್ಲ" ಎಂದಳು. ಶಿವರಾಮನು ಪ್ರಕಾಶನ ಬೆನ್ನುತಟ್ಟುತ್ತಾ "ಸುಮ್ಮನೆ ಯಾತಕ್ಕೆ ಭರವಸೆ ಕೊಡುತ್ತೀಯೆ? ಅದರಿಂದ ಇನ್ನೂ ಅವರಿಗೆ ದುಃಖ ಹೆಚ್ಚಾಗುತ್ತಿದೆ" ಎಂದು ಹೇಳಿ, ನನ್ನ ಕಡೆಗೆ ಕಣ್ಣುಸಂಜ್ಞೆ ಮಾಡಿದ. ಪ್ರಕಾಶನು ಶಿವರಾಮನ ಮಾತುಗಳನ್ನು ಲಕ್ಷ್ಯ ಮಾಡದೆ "ರಾಮರಾಯರೆ, ನೀವೂ ನಾಗೇಂದ್ರನೂ ಸಹಪಾಠಿಗಳೆಂದು ಹೇಳಿದಿರಿ, ನಿಮಗೆ ಅವರ ನಡತೆ ಮತ್ತು ಗುಣಾವಗುಣಗಳ ವಿಷಯವಾಗಿ ಖಚಿತವಾಗಿ ಏನಾದರೂ ತಿಳಿದಿದೆಯೇ?" ಎಂದು ಪ್ರಶ್ನಿಸಿದ. ರಾಮರಾಯನು ತತ್‌ಕ್ಷಣ "ಮಿಸ್ಟರ್ ಪ್ರಕಾಶ, ನಾನೂ ಅವನೂ ಪರಮಮಿತ್ರರು. ನಮ್ಮ ತಂದೆಯವರು ಗುಟ್ಟಳ್ಳಿಗೆ ಬಂದು ನೆಲಸಿದ ಮೇಲೆಯೆ ನಾನು ಜನಿಸಿದುದು. ನಾಗೇಂದ್ರನು ನನಗಿಂತ ಕೇವಲ ಎರಡು ವರ್ಷಕ್ಕೆ ದೊಡ್ಡವನು. ಅವನದು ಬಹಳ ಸರಳಸ್ವಭಾವ. ಹೆಚ್ಚಿಗೆ ಮಾತನಾಡುವ ಪ್ರಕೃತಿಯೂ ಅತನದಲ್ಲ. ಒಂದು ಮಾತಿನಲ್ಲಿ ಅವನ ಗುಣಗಳನ್ನು ಹೇಳುವುದಾದರೆ, ಅವನೆಂದಿಗೂ ಪಾಪಕೃತ್ಯಗಳಿಗೆ ಹೋಗುವವನಲ್ಲ" ಎಂದು ಹೇಳಿದ.

ಪ್ರಕಾಶನು ಸ್ವಲ್ಪ ಹೊತ್ತು ಯೋಚಿಸಿ "ಅದು ಸರಿ, ಆದರೆ ನ್ಯಾಯಾಧೀಶರ ಪ್ರಶ್ನೆಗಳಲ್ಲಿ ಕೆಲವಕ್ಕೆ ಅವನು ಒರಟಾಗಿ ಉತ್ತರಗಳನ್ನು ಕೊಟ್ಟಂತೆ ಕಾಣುವುದಿಲ್ಲವೇ? ತಂದೆ–ಮಕ್ಕಳಲ್ಲಿ ಜಗಳ ವಿರಲು ಕಾರಣವೇನು?" ಎಂದು ಪ್ರಶ್ನಿಸಿದ. ರಾಮರಾಯನು ಸುಶೀಲೆಯ ಕಡೆಗೆ ನೋಡಿ "ಪತ್ತೆದಾರರೆ, ಕಾರಣವನ್ನು ತಿಳಿಸದೆ ಇರುವುದರ ವಿಷಯ ನನ್ನ ತಂಗಿಗೆ ಸಂಬಂಧ ಪಟ್ಟದ್ದು. ಇವಳನ್ನು ವಿವಾಹವಾಗಲೇ ಬೇಕು ಎಂದು ನಾಗೇಶರಾಯರು ಒತ್ತಾಯ ಪಡಿಸುತ್ತಿದ್ದರಂತೆ. ಇವನು ಅವರ ಹಣದಾಶೆಯನ್ನು ನೋಡಿ, ಬೇಸರದಿಂದ, ತಿರಸ್ಕರಿಸಿದ್ದನಂತೆ" ಎಂದು ಹೇಳಿ "ನಾವು ಇನ್ನು ಈಗ ಹೊರಡಬಹುದೇ? ತಂದೆಯವರಿಗೆ ಔಷಧಿ ಕೊಡುವ ಹೊತ್ತಾಯಿತು" ಎಂದು ಕೈಗಡಿಯಾರವನ್ನು ನೋಡಿದ. ಪ್ರಕಾಶನು ಆಶ್ಚರ್ಯದಿಂದ "ಏನು ನಾರಾಯಣರಾಯರಿಗೆ ಮೈಯಲ್ಲಿ ಸರಿಯಾಗಿಲ್ಲವೇ" ಎಂದ. ಸುಶೀಲೆಯು ಎದ್ದು ನಿಂತುಕೊಂಡು ಕೂಡಲುದ್ಯುಕ್ತಳಾಗಿ "ತಂದೆಯವರಿಗೆ ಈಗ ಬಹಳ ದಿವಸಗಳಿಂದಲೂ ಆರೋಗ್ಯ ಕೆಟ್ಟಿದೆ. ಅದೂ ಅಲ್ಲದೆ ಅವರ ಸ್ನೇಹಿತರಾದ ನಾಗೇಶರಾಯರ ಕೊಲೆಯಾಗಿ ಅವರ ಮಗನು ಜೈಲಿನಲ್ಲಿರುವ

ಸಮಾಚಾರವು ತಿಳಿದ ಮೇಲಂತೂ ಅವರು ಬಹಳ ಇಳಿದು ಹೋಗಿದ್ದಾರೆ '' ಎಂದು ಹೇಳಿ, ನಮಗೆಲ್ಲಾ ವಂದಿಸಿ, ಕಾರಿನಲ್ಲಿ ಹೊರಟು ಹೋದರು.

ಸ್ವಲ್ಪ ಹೊತ್ತು ಪ್ರಕಾಶನು ಸಿಗರೇಟನ್ನು ಸೇದಿ, "ಶಿವರಾಮ್, ನಾಗೇಂದ್ರನು ಅಪಾದಿತನೆನ್ನುವುದಕ್ಕೆ ನಿನ್ನ ಕಾರಣಗಳೇನು ? '' ಎಂದು ಪ್ರಶ್ನಿಸಿದ. ಅವನು ಗಂಭೀರ ಭಾವದಿಂದ '' ನನಗೆ ಸನ್ನಿವೇಶಗಳೆಲ್ಲಾ ಗೊತ್ತು. ಖೂನಿಯಾದ ತತ್‌ಕ್ಷಣ ಸ್ಥಳಕ್ಕೆ ಹೋದೆ. ಸಾಕ್ಷಿಗಳು ಅಲ್ಲಿಯೆ ಇದ್ದರು. ಅವರು ಹೇಳಿರುವಂತೆ, ತಂದೆ-ಮಕ್ಕಳು ಏನು ಕಾರಣದಿಂದಲೋ ಜಗಳವಾಡಿದ್ದಾರೆ. ಮಗ ಬಲಿಷ್ಠನಾಗಿರುವುದರಿಂದ ತಂದೆಯನ್ನು ಹೊಡೆದಿದ್ದಾನೆ. ಹೊಡೆದ ಆಯುಧ ಅಲ್ಲಿ ಇರಲಿಲ್ಲ. ಕೊಡತಿಯು ಕಾಲುವೆಯಲ್ಲಿ ಸಿಕ್ಕಿತು. ನೀರಿನಲ್ಲಿ ಬಿದ್ದುದರಿಂದ ರಕ್ತದ ಕಲೆಗಳಿರಲಿಲ್ಲ. ಇವೆಲ್ಲಾ ನಾಗೇಂದ್ರನೆ ಅಪರಾಧಿಯೆಂಬುದನ್ನು ತೋರಿಸುತ್ತವೆ. ಪ್ರಮಾಣಗಳೂ ಹಾಗೆಯೆ ಇವೆ '' ಎಂದ. ಪ್ರಕಾಶನು ಸಿಗರೇಟಿನ ತುಂಡನ್ನು ಬಿಸಾಡಿ '' ಶಿವರಾಮ, ಎಲ್ಲಾ ಸರಿ, ನಾಳೆ ಬೆಳಗಿನಲ್ಲಿ ಆ ಸ್ಥಳಕ್ಕೆ ಹೋಗೋಣ. ನೀನೂ ಬರಬೇಕು '' ಎಂದು, ಅಲ್ಲಿಂದ ಎದ್ದು ಹೊರಕ್ಕೆ ಬಂದ.

* * * *

ಮಾರನೆಯ ದಿವಸ ಬೆಳಗಿನ ೮ ಘಂಟೆಯ ಹೊತ್ತಿಗೆ ಕೊಲೆ ನಡೆದ ಸ್ಥಳಕ್ಕೆ ಹೋದೆವು. ಶಿವರಾಮನು ತನ್ನ ಮಾತಿನಂತೆ ನಮಗಾಗಿ ಕಾದಿದ್ದ. ಶಿವರಾಮನೇ ನಮ್ಮನ್ನು ಕಾಲುವೆಯ ಬಳಿ ಕರೆದುಕೊಂಡು ಹೋಗಿ '' ಇದೇ ಹೆಣ ಬಿದ್ದಿದ್ದ ಸ್ಥಳ '' ಎಂದು ತೋರಿಸಿದ. ಪ್ರಕಾಶನು ತಾನು ಧರಿಸಿದ್ದ ಸರ್ಜ ಕೋಟನ್ನು ಬಿಚ್ಚಿ ನನ್ನ ಕೈಗೆ ಕೊಟ್ಟು, ಸಿಗರೇಟನ್ನು ಹಚ್ಚಿಕೊಂಡು, '' ಕೊಲೆಯಾದಂದಿನಿಂದ ಮಳೆ ಬಾರದಿರುವುದು ತುಂಬಾ ಅನುಕೂಲವಾಗಿದೆ. ಕಾಲಿನ ಹೆಜ್ಜೆಯ ಗುರುತುಗಳೆಲ್ಲಾ ಸ್ಪಷ್ಟವಾಗಿವೆ '' ಎಂದು ಹೇಳಿ, ಜೇಬಿನಿಂದ ಭೂತಕನ್ನಡಿಯನ್ನು ತೆಗೆದು ನೆಲವನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾ, ನಮ್ಮನ್ನು ಅಲ್ಲಿಯೆ ಇರುವಂತೆ ಹೇಳಿದ.

ನಾನೂ ಶಿವರಾಮನೂ ಅವನ ಇಂಗಿತವನ್ನರಿತುಕೊಂಡು, ಅಲ್ಲಿಯೇ ಇದ್ದ ಕಲ್ಲುಬೆಂಚಿನ ಮೇಲೆ ಕುಳಿತುಕೊಂಡೆವು. ಸುಮಾರು ಅರ್ಧಘಂಟೆಯ ನಂತರ, ಪ್ರಕಾಶನು ಒಂದು ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡು ನಮ್ಮ ಹತ್ತಿರಕ್ಕೆ ಬಂದು '' ಇದರಿಂದಲೇ ಕೊಲೆ ನಡೆದದ್ದು '' ಎಂದ. ಶಿವರಾಮನು ನಗುತ್ತಾ '' ಪ್ರಕಾಶ, ಇಂತಹ ಕಲ್ಲುಗಳು ತೋಟದಲ್ಲಿ ಸಾವಿರಾರು ಇವೆ '' ಎಂದು ಹಾಸ್ಯಮಾಡಿದ. ಶಿವರಾಮನ ವ್ಯಂಗ್ಯೋಕ್ತಿಗಳಿಗೆ ಗಮನ ಕೊಡದೆ ಪ್ರಕಾಶನು '' ಪ್ರಭೂ, ನಾವು ಇನ್ನು ಹೊರಡೋಣ '' ಎಂದು ತನ್ನ ಕೋಟನ್ನು ತೆಗೆದುಕೊಂಡ. ಶಿವರಾಮನು "ಏನು ಪತ್ತೆದಾರರೇ, ತಮ್ಮ ಕೆಲಸ ಪೂರ್ತಿಮಾಡದೆ ಹೊರಡುವಿರಾ ? '' ಎಂದ. ಅವನ ಮಾತಿಗೆ ಪ್ರಕಾಶನು '' ಇನ್ಸ್‌ಪೆಕ್ಟರೇ, ನನ್ನ ಕೆಲಸ ಪೂರ್ತಿಯಾಯಿತು. '' ಎಂದು ಉತ್ತರವಿತ್ತ. ಶಿವರಾಮನು ಕೌತುಕದಿಂದ '' ಕೊಲೆಪಾತಕನಾರು ? '' ಎಂದು ಪ್ರಶ್ನಿಸಲಾಗಿ '' ಕೊಲೆಪಾತಕ, ಒಬ್ಬ ಸ್ಥೂಲಕಾಯದ, ಸುಮಾರು ೪೦-೪೫ ವರ್ಷ ವಯಸ್ಸಿನ ಮನುಷ್ಯ. ಗೋಲ್ಡ್‌ಫ್ಲೇಕ್ ಸಿಗರೇಟನ್ನು ಸೇದುತ್ತಾನೆ. ಎತ್ತರ ಸುಮಾರು ೫ ಅಡಿ ೮ ಇಂಚಿರಬಹುದು. ಎಡಗಾಲು ಸ್ವಲ್ಪ ಕುಂಟು. ಉಬ್ಬಸರೋಗವಿದೆ. ಡಿಂಡಿಗಲ್ ಚಪ್ಪಲಿಗಳನ್ನು ಉಪಯೋಗಿಸುತ್ತಾನೆ. ಹಳದಿ ಬಣ್ಣದ ಶಾಲನ್ನು ಹೊದೆಯುತ್ತಾನೆ '' ಎಂದ. ಶಿವರಾಮನು ಗಟ್ಟಿಯಾಗಿ ನಕ್ಕು '' ಪತ್ತೆದಾರ ಮಹಾಶಯಾ, ನಿನ್ನ ಊಹೆಗಳು ಬಹಳ ಸೊಗಸಾಗಿವೆ. ನೀನು ಹೇಳಿದ ಕುಂಟ, ದಪ್ಪ ಮನುಷ್ಯನನ್ನು ಹುಡುಕುವುದು ಹೇಗೆ ? ಕೊಲೆಪಾತಕನು ಪ್ರಮಾಣಗಳೊಡನೆ, ಅನುಮಾನವೇ ಇಲ್ಲದ ಹಾಗೆ ಸಿಕ್ಕಿರುವಾಗ, ನೀನು ಹೇಳಿದ ಮನುಷ್ಯನನ್ನು ಹುಡುಕಿಕೊಂಡು ಹೋದರೆ ಜನರು ನಕ್ಕಾರು '' ಎಂದ. ಪ್ರಕಾಶನೂ ನಗುತ್ತ '' ಶಿವರಾಮ್, ನಿನ್ನ ಪ್ರಮಾಣ ನಿನಗೇ ಇರಲಿ. ನನಗೆ ಈಗ ಸ್ವಲ್ಪ ಕೆಲಸವಿದೆ. ಪುನಃ ನಿನ್ನನ್ನು ಸಾಯಂಕಾಲ ನೋಡುತ್ತೇನೆ. ನಿನ್ನ ಸಹಾಯಕ್ಕಾಗಿ ವಂದನೆಗಳು '' ಎಂದು ಹೇಳಿ ನನ್ನನ್ನೂ ಕರೆದುಕೊಂಡು ಸಾಹುಕಾರ್ ನಾರಾಯಣರಾಯರ ಮನೆಯ ಹತ್ತಿರಕ್ಕೆ ಬಂದ. ರಾಮರಾವ್ ಮತ್ತು ಸುಶೀಲೆ ಇಬ್ಬರೂ ವಿನಯದಿಂದ ನಮ್ಮನ್ನು ಒಳಗೆ ಕರೆದುಕೊಂಡು ಹೋಗಿ, ಕುರ್ಚಿಗಳಮೇಲೆ ಕುಳಿತುಕೊಳ್ಳುವಂತೆ ಸೂಚಿಸಿದರು. ಸ್ವಲ್ಪ ಹೊತ್ತು ಆ ಮಾತೂ ಈ ಮಾತೂ ಆಡಿ,

ಮೋಲ್ತರಗತಿಯ

ಹಳಕು (Concentreted) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪಾಗ್ ಲಿಮಿಟೆಡ್

ಪೊ. ಬಾ. ಪಿ ಬಿ. ನಂ. ೨೧೦, ಮುಂಬಯಿ.

ಟೀ ಕುಡಿದನಂತರ ಪ್ರಕಾಶನು ಎದ್ದು "ಪ್ರಭೂ, ನೀನು ಇಲ್ಲಿಯೆ ಮಾತನಾಡುತ್ತಾ ಇರು. ಒಂದು ನಿಮಿಷದಲ್ಲಿ ಬರುತ್ತೇನೆ" ಎಂದು ಹೇಳಿ ಹೊರಗೆ ಹೋಗಿ, ತನ್ನ ಮಾತಿನಂತೆ ಸ್ವಲ್ಪ ಹೊತ್ತಿನಲ್ಲಿಯೆ ಹಿಂದಿರುಗಿದ. ಸುಶೀಲೆಯು "ವಿಚಾರವೇನಾಯಿತು, ಪತ್ತೆದಾರರೇ ?" ಎಂದು ಉತ್ಸುಕತೆಯಿಂದ ಕೇಳಿದಳು. ಪ್ರಕಾಶನು ಪ್ಯಾಕಿನಿಂದ ಸಿಗರೇಟನ್ನು ತೆಗೆದು, ಬೆಂಕಿಯನ್ನು ಹಚ್ಚಿ "ನೀವು ಆ ವಿಚಾರದಲ್ಲಿ ಯೋಚಿಸಬೇಡಿ ; ನಾಗೇಂದ್ರನು ಅಪರಾಧಿಯಲ್ಲ" ಎಂದು ಭರವಸೆಯನ್ನಿತ್ತು "ನಿಮ್ಮ ತಂದೆಯವರಿಗೆ ಈಗ ಹೇಗಿದೆ?" ಎಂದು ಪ್ರಶ್ನಿಸಿದ. "ನಮ್ಮ ತಂದೆಯವರು ಈಗ ತಿರುಗಾಡುವ ಹಾಗೆ ಆಗಿದ್ದಾರೆ. ಆದರೂ ಉಬ್ಬಸ ರೋಗದಿಂದ ಕೃಶರಾಗಿದ್ದಾರೆ" ಎಂದಳು. ಪ್ರಕಾಶನು ಅಲ್ಲಿಂದ ಎದ್ದು, ಪುನಃ ಸಾಯಂಕಾಲ ಬರುವುದಾಗಿ ಅವರಿಗೆ ತಿಳಿಸಿ ಮನೆಯ ಕಡೆಗೆ ಹೊರಟ. ದಾರಿಯಲ್ಲಿ ಸ್ವಲ್ಪಹೊತ್ತು ನಿಂತು ಯೋಚಿಸಿ "ಪ್ರಭೂ, ನಾನು ಜೇಲಿಗೆ ಹೋಗಿಬರುತ್ತೇನೆ; ನೀನು ಮನೆಗೆ ಹೋಗಿ ಊಟಮಾಡು. ನನಗಾಗಿ ಕಾಯಬೇಡ" ಎಂದು ನಾಗೇಂದ್ರನನ್ನು ನೋಡುವುದಕ್ಕಾಗಿ ಸೆಂಟ್ರಲ್ ಜೈಲಿನ ಕಡೆಗೆ ತಿರುಗಿದ.

ಪ್ರಕಾಶನು ಮನೆಗೆ ಬರುವಷ್ಟು ಹೊತ್ತಿಗೆ ಸುಮಾರು ೨ ಘಂಟೆಯಾಗಿತ್ತು. ಮೊದಲಿನಿಂದಲೂ ನನ್ನ ಭಾವನ ಜೊತೆಯಲ್ಲಿಯೆ ಇದ್ದರೂ, ಅವನ ಮೆದುಳಿನ ಶಕ್ತಿಯೇ ಬೇರೆ, ನನ್ನದೇ ಬೇರೆಯಾಗಿರುವುದರಿಂದ, ನಾಗೇಂದ್ರನು ನಿರಪರಾಧಿಯೆಂದು ಧೈರ್ಯವಾಗಿ ಹೇಳಲು ಅವನು ಕಂಡ ಕಾರಣಗಳು ಯಾವುವು ಎಂಬುದು ನನ್ನ ತಲೆಗೆ ಹೊಳೆಯಲೇ ಇಲ್ಲ. ಅದೂ ಅಲ್ಲದೆ ಇವನೇ ಕೊಲೆಪಾತಕನೆಂದು ಒಬ್ಬ ಮನುಷ್ಯನ ಗುಣಾವಗುಣ, ಎತ್ತರ, ಅಗಲ ಮುಂತಾದುವುಗಳನ್ನು ಕಂಡಂತೆ ವರ್ಣಿಸಿ ಚಹರೆಪಟ್ಟಿಯನ್ನು ಕೊಟ್ಟಿದ್ದ. ಇವೆಲ್ಲಾ ಆಶ್ಚರ್ಯವಾಗುವಂತಹ ವಿಷಯಗಳಾದುದರಿಂದ, ಎಲ್ಲವನ್ನೂ ಅವನು ಊಟಮಾಡಿದನಂತರ ಕೇಳೋಣವೆಂದು ನನ್ನ ಕುತೂಹಲವನ್ನು ಅಡಗಿಸಿಟ್ಟೆ. ಊಟ ಮಾಡಿ ಎಲೆ-ಅಡಿಕೆಯನ್ನು ಹಾಕಿಕೊಳ್ಳುತ್ತಿರುವಾಗ ಪ್ರಕಾಶನನ್ನು ಪ್ರಶ್ನಿಸಿದೆ. ಅವನು ನಗುತ್ತಾ "ಪ್ರಭೂ, ಎಲ್ಲವೂ ತಿಳಿಯುತ್ತೆ." ಎಂದು ಕೈಗಡಿಯಾರವನ್ನು ನೋಡಿ "ಓಹೋ ಆಗಲೇ ೩॥ ಘಂಟೆಯಾಯಿತು. ಪ್ರಭೂ, ನಡೆ, ಕೊಲೆಪಾತಕನನ್ನು ತೋರಿಸುತ್ತೇನೆ" ಎಂದು ಗಡಿಬಿಡಿಯಿಂದ ಎದ್ದು ಕೋಟನ್ನು ಹಾಕಿಕೊಂಡು, ಕಾರನ್ನು ಷೆಡ್ಡಿನೊಳಗಿಂದ ಹೊರಗೆ ತಂದ. ನನಗೆ ಏನೂ ತೋಚಲೆ ಇಲ್ಲ. ಸುಮ್ಮನೆ ಅವನೊಡನೆ ಕುಳಿತಿದ್ದೆ. ಪ್ರಕಾಶನು ಮೋಟಾರನ್ನು ಗುಟ್ಟಹಳ್ಳಿಯ ನಾರಾಯಣರಾಯರ ಮನೆಯ ಹತ್ತಿರ ನಿಲ್ಲಿಸಿದ. ಮನೆಯ ಜವಾನನು ನಮ್ಮನ್ನು ನೋಡಿ "ರಾಯರೆ, ಅಮ್ಮಾವ್ರು, ರಾಯ್ರು ಸಿನಿಮಾಕ್ಕೆ ಹೋಗಿದ್ದಾರೆ" ಎಂದ. ಪ್ರಕಾಶನು "ಪರವಾ ಇಲ್ಲ. ಜಮೀನ್ದಾರರು ವಿರಾಮವಾಗಿದ್ದರೆ, ಸ್ವಲ್ಪ ತೋಟಕ್ಕೆ ಕಳುಹಿಸು. ಮಾತನಾಡಬೇಕಾಗಿದೆ" ಎಂದು ಕಾರಿನಿಂದ ಇಳಿದ. ನಾವು, ಕೊಲೆಯ ವಿಷಯವಾಗಿ ಮಾತನಾಡುತ್ತಾ ಸನ್ನಿವೇಶಗಳನ್ನು ವಿಮರ್ಶೆಮಾಡುತ್ತಾ ಬಂದು, ತೋಟದಲ್ಲಿದ್ದ ಬೆಂಚಿನ ಮೇಲೆ ಕುಳಿತುಕೊಂಡ ೫-೬ ನಿಮಿಷಗಳಲ್ಲಿಯೆ, ಸುಮಾರು ೪೫ ವರ್ಷದ ಗಂಭೀರವದನದ ಶ್ರೀಮಂತರೊಬ್ಬರು, ಸ್ವಲ್ಪ ಕುಂಟುತ್ತಾ, ಸಿಗರೇಟನ್ನು ಎಡಗೈಯಲ್ಲಿ ಹಿಡಿದುಕೊಂಡು ನಮ್ಮ ಕಡೆಗೆ ಬರುತ್ತಿರುವುದು ಕಾಣಿಸಿತು. ಪ್ರಕಾಶನ ಸಂಜ್ಞೆಯಂತೆ ಇವರೇ ಜಮೀನ್ದಾರ್ ನಾರಾಯಣರಾಯರೆಂದು ತಿಳಿದುಕೊಂಡೆ. ನಾರಾಯಣರಾಯರು ನಮಗೆ ವಂದಿಸಿ, ಎದುರಿಗಿದ್ದ ಬೆಂಚಿನ ಮೇಲೆ ಕುಳಿತುಕೊಂಡು "ವಿಚಾರವೇನಾಯಿತು?" ಎಂದರು. ಪ್ರಕಾಶನು ಸ್ವಲ್ಪಹೊತ್ತು ತೀಕ್ಷ್ಣದೃಷ್ಟಿಯಿಂದ ಅವರನ್ನು ಕೆಳಗಿಂದ ಮೇಲಿನವರೆಗೂ ನೋಡಿ "ರಾಯರೇ, ನಾನು ಸಮಸ್ಯೆಯನ್ನು ಪೂರ್ಣಗೊಳಿಸಿದ್ದೇನೆ. ಕೊಲೆಪಾತಕನಿಂತಹವನೇ ಎಂಬುದನ್ನು ಸರಿಯಾದ ಕಾರಣಗಳಿಂದ ನಿರ್ಧರಿಸಿದುದೂ ಆಗಿದೆ" ಎಂದ. ಈ ಮಾತುಗಳು ನಾರಾಯಣರಾಯರ ಕಿವಿಗೆ ಬೀಳುತ್ತಲೂ, ಮುಖದಮೇಲೆ ಒಂದು ಬಗೆಯ ಭಯವೂ, ಕಳವಳವೂ ಕಂಡುಬಂದಿತು. ಆದರೂ ಚೆಮ್ಮುತ್ತಾ "ಕೊಲೆಪಾತಕನು ಯಾರು ?" ಎಂದು ಪ್ರಶ್ನಿಸಿದರು. ಪ್ರಕಾಶನು "ರಾಯರೇ, ಇನ್ನೂ ಯಾಕೆ ಮುಚ್ಚುಮರೆ ಮಾಡುತ್ತೀರಿ ? ನಡೆದ ವಿಷಯಗಳೆಲ್ಲವನ್ನೂ, ಖೂನಿಗೆ ಕಾರಣಗಳನ್ನೂ ವಿಶದವಾಗಿ ಹೇಳಿ; ಇಲ್ಲದಿದ್ದರೆ, ನಾನು ಮುಂದಿನ ಕೆಲಸಗಳನ್ನು ಮಾಡಬೇಕಾಗುತ್ತದೆ. ಆಗ ನಿಮಗೆ ವಿಪರೀತ ತೊಂದರೆಯಾಗುವುದರಲ್ಲಿ ಸಂದೇಹವಿಲ್ಲ" ಎಂದ. ನಾರಾಯಣರಾಯರು "ಅಯ್ಯೋ ದೇವರೆ" ಎಂದು ನಿಟ್ಟುಸಿರನ್ನು ಬಿಟ್ಟು "ಹೌದು.... ನಾನೇ ಖೂನಿ....ಮಾಡಿದವನು" ಎಂದರು. ನನಗೆ ಹೇಳಲಾರದಷ್ಟು ಆಶ್ಚರ್ಯವಾಯಿತು. ಪ್ರಕಾಶನು "ರಾಯರೆ, ನೀವು ನಡೆದ ವಿಷಯಗಳನ್ನು ಮರೆಮಾಚದೆ ಹೇಳಿ, ಏನೂ ಭಯವಿಲ್ಲ!' ಎಂದು ಹೇಳಿದ. ಅವರು ಸ್ವಲ್ಪ ಚೇತರಿಸಿಕೊಂಡು "ನಾನೇನೂ ಬಹಳ ದಿವಸ ಬದುಕುವುದಿಲ್ಲ. ಆದರೆ ನಾನು ಬದುಕಿರುವವರೆಗೂ ಇಂತಹ ನೀಚಕೃತ್ಯ ಮಾಡಿದೆನೆಂದು ನನ್ನ ಮಕ್ಕಳಿಗೂ, ಇತರರಿಗೂ ತಿಳಿಯದೆ ಇದ್ದರೆ ಸಾಕು. ನನ್ನ ಬಾಲ್ಯದ ಜೀವನದ ವಿಷಯವಾಗಿ ಕೂಡ ನನ್ನ ಮಕ್ಕಳಿಗೆ ಏನೂ ತಿಳಿಯದು. ನಾಗೇಶನನ್ನು ಕೊಲ್ಲುವಾಗ ನಾನು ಯೋಚಿಸಿದ್ದೇ ಒಂದು, ಅದರ ಪರಿಣಾಮವೇ ಒಂದು ಆಯಿತು. ಏನೂ ಅರಿಯದ ನಾಗೇಂದ್ರನು ಜೇಲಿನಲ್ಲಿರುವುದು ನನ್ನ ಮನಸ್ಸಿನಲ್ಲಿ ಕೊರೆಯುತ್ತಿದೆ." ಎಂದು ಹೇಳಿದರು. ಪ್ರಕಾಶನು "ರಾಯರೇ, ನೀವು ಅಂತಹ ಕೆಲಸ ಮಾಡಬೇಕಾದರೆ ಬಲವಾದ ಕಾರಣವಿರಬೇಕು. ನಾನೇನು ಪೋಲೀಸಿನವನಲ್ಲ. ಈ ವಿಷಯ ನನ್ನ ಹೊರತು ಇನ್ನಾರಿಗೂ ತಿಳಿಯದು. ತಿಳಿಯುವ ಸಂಭವವೂ ಇಲ್ಲ. ಆದುದರಿಂದ ನೀವು ಎಲ್ಲವನ್ನೂ ಹೇಳಿದರೆ, ನಾಗೇಂದ್ರನನ್ನು ಬಿಡಿಸಿ, ನಿಮ್ಮ ಗೌರವಕ್ಕೆ ಕುಂದುಬಾರದ ಹಾಗೆ ಮಾಡಬಹುದು" ಎಂದು ಭರವಸೆಯನ್ನಿತ್ತ ಮೇಲೆ, ನಾರಾಯಣರಾಯರು "ನಾಗೇಶನೂ ನಾನೂ ಬಾಲ್ಯದಿಂದಲೂ ಸ್ನೇಹಿತರು. ವಿದ್ಯೆಯು ಸರಿಯಾಗಿ ನಡೆಯದೆ ಕೆಟ್ಟವರ ಸ್ನೇಹಕ್ಕೆ ಸಿಕ್ಕಿ ನಾವು ಪುಂಡರಾದೆವು. ನಮಗೆ ೨೦ ವರ್ಷ ವಯಸ್ಸಾಗಿರುವಾಗಲೇ ಪುದುಚೇರಿಗೆ ಹೋಗಿ ದರೋಡೆಯ

ಕಸುಬನ್ನು ಪ್ರಾರಂಭಿಸಿದೆವು. ಆಗ ನನಗೆ ನಮ್ಮ ಗುಂಪಿನವರು “ ಭಾಬೂರಾಃಪ್ ” ಎಂದು ಹೆಸರಿಟ್ಟಿದ್ದರು. ಹೀಗೆ ಕೆಲವು ವರ್ಷಗಳು ಜೀವನವನ್ನು ತಳ್ಳಿದ ಮೇಲೆ ಒಂದು ದಿವಸ ನಾನೂ ನಾಗೇಶನೂ ಒಬ್ಬ ಭಾರಿ ಸಾಹುಕಾರನ ಮನೆಗೆ ಕನ್ನಹಾಕಿ ದರೋಡೆ ಮಾಡಿದೆವು. ಸುಮಾರು ೨ ಲಕ್ಷ ರೂಪಾಯಿಗಳ ಹಣ-ನಗಗಳು ಸಿಕ್ಕಿದುವು. ನಾನು ನನ್ನ ಪಾಲನ್ನು ತೆಗೆದುಕೊಂಡು, ಆ ಕೆಟ್ಟ ಜೀವನವನ್ನು ತೊರೆದು ಸುಖವಾಗಿರೋಣವೆಂದು ಬೆಂಗಳೂರಿಗೆ ಬಂದು ನೆಲಸಿದೆ. ಅನಂತರ ಇಲ್ಲಿಯೇ ಮದುವೆ ಮಾಡಿಕೊಂಡು ಒಬ್ಬ ಗಣ್ಯ ಮನುಷ್ಯನಾದೆ. ಹೀಗೆ ನನ್ನಲ್ಲಿ ಒಂದು ಮಹತ್ತಾದ ಬದಲಾವಣೆಯುಂಟಾಗಿದ್ದುದರಿಂದ, ಮಾನ, ಗೌರವ, ಘನತೆಗಳೆಲ್ಲ ತನ್ನಷ್ಟಕ್ಕೆ ತಾನೇ ಬಂದಿತು. ಸುಮಾರು ೧೦ ವರ್ಷಗಳು ಹೀಗೆ ಸುಖವಾಗಿ ಕಳೆದುವು. ಅಷ್ಟರಲ್ಲಿ ನಾನು ಅನೇಕ ವ್ಯಾಪಾರಗಳನ್ನು ಮಾಡಿ, ಬೇಕಾದ ಹಾಗೆ ಮನೆಗಳನ್ನೂ, ಜಮೀನುಗಳನ್ನೂ, ತೋಟಗಳನ್ನೂ ತೆಗೆದುಕೊಂಡೆ.

ನನ್ನಿಂದ ಪಾಲನ್ನು ತೆಗೆದುಕೊಂಡು ಹೋದ ನಾಗೇಶನು ಏನಾದನೆಂಬುದು ನನಗೆ ಗೊತ್ತೇ ಇರಲಿಲ್ಲ. ಉಳಿದ ಮಿತ್ರರು ಸಣ್ಣ ಪುಟ್ಟ ದರೋಡೆಗಳಲ್ಲೇ ಸಿಕ್ಕಿಬಿದ್ದು ಕಾರಾಗೃಹದಲ್ಲಿರುವರೆಂದು ನನಗೆ ವರ್ತಮಾನ ತಿಳಿಯಿತು. ಹೀಗೆ ಪಾಪಿಷ್ಠರಾದ ಸ್ನೇಹಿತರೆಲ್ಲಾ ದೂರವಾದರೆಂದು ಸಂತೋಷದಿಂದ ಕಾಲ ಕಳೆಯುತ್ತಿರುವಾಗ, ನನ್ನನ್ನು ತಪ್ಪುದಾರಿಗೆ ಸಂಪೂರ್ಣವಾಗಿ ಎಳೆದು ನಾಶಮಾಡಿದ್ದ ನಾಗೇಶನೇ ಪುನಃ ಒಂದು ದಿವಸ ಮಾರ್ಕೆಟ್ಟಿಗೆ ಹೋಗಿರುವಾಗ ನನ್ನ ಬೆನ್ನನ್ನು ಹತ್ತಿದ. ಹಿಂದಿನ ಅಡ್ಡಹೆಸರನ್ನು ಹಿಡಿದು ಕೂಗಿ, ತನ್ನ ಹಣವು ಹಾಳಾಯಿತೆಂದೂ, ತನಗೂ ತನ್ನ ಚಿಕ್ಕ ಮಗನಿಗೂ ಸಹಾಯ ಮಾಡಬೇಕೆಂದೂ, ಇಲ್ಲದಿದ್ದರೆ ಪೋಲಿಸಿನವರಿಗೆ ಹಿಂದೆ ನಡೆದ ವಿಷಯಗಳನ್ನು ತಿಳಿಸಿ, ಮಾನ ಕಳೆಯುವೆನೆಂದೂ ಹೆದರಿಸಿದ. ಮಾನಕ್ಕೆ ಅಂಜಿ, ನಾನು ಅವನಿಗೆ ಬೇಕಾದುದೆಲ್ಲವನ್ನೂ ಕೊಟ್ಟೆ. ಮನೆ, ಜಮೀನು, ಎಲ್ಲಾ ಕೊಟ್ಟು ನನ್ನ ನರಿಸಮಾನನಂತೆ ಅವನನ್ನು ನೋಡುತ್ತಿದ್ದೆ. ಆದರೆ ಅವನ ದುರಾಶೆ ದಿನದಿನಕ್ಕೂ ಹೆಚ್ಚಾಗುತ್ತಿತ್ತೇ ವಿನಾ ಉಪಕಾರವನ್ನು ಸ್ಮರಿಸಲಿಲ್ಲ. ರಾತ್ರಿ ಹಗಲೂ ಈ ಪಿಶಾಚಿಯ ಕೈಯಿಂದ ಪಾರಾಗುವ ಬಗೆ ಹೇಗೆಂದು ಪರಿತಪಿಸಿದೆ. ಕೊನೆಗೆ ನನ್ನ ಮಗಳು ದೊಡ್ಡವಳಾದುದನ್ನು ನೋಡಿ, ಹಣದಾಶೆಯಿಂದ ತನ್ನ ಮಗನಿಗೇ ಅವಳನ್ನು ಕೊಡುವಂತೆ ಬಲಾತ್ಕರಿಸಿದ; ಮೊದಲಿನಂತೆಯೆ ಹೆದರಿಸಿದ. ಅವನು ಕೇಳಿದುದೆಲ್ಲವನ್ನು ಕೊಟ್ಟರೂ, ಈ ವಿಷಯ ಕೇಳಿದಾಗ ಮಾತ್ರ ನನ್ನ ರಕ್ತವು ಕೆರಳಿತು. ಪಾಪಾತ್ಮನಾದ, ಮತ್ತು ಕ್ರೂರಿಯಾದ ಅವನ ಹೀನವಂಶಕ್ಕೆ ನನ್ನ ಮಗಳನ್ನು ಕೊಡಲು ನಾನು ಒಪ್ಪಲಿಲ್ಲ. ಕೊನೆಗೆ ಈ ವಿಷಯವಾಗಿ ಮಾತನಾಡಲು ಆ ದಿನ ಕಾಲುವೆಯ ಹತ್ತಿರ ಇಬ್ಬರೂ ಭೇಟಿಯಾಗಬೇಕೆಂದು ನಿರ್ಧರಿಸಿದೆವು. ನಾನು ಸ್ವಲ್ಪ ಮುಂಚೆಯೇ ಹೋದೆ. ಅನಂತರ ನಾಗೇಶನು ಬಂದ. ಅವನ ಹಿಂದೆಯೇ ಅವನ ಮಗನೂ ಬರುತ್ತಿರುವುದನ್ನು ನೋಡಿ, ನಾನು ಒಂದು ದೊಡ್ಡ ಮರದ ಪಕ್ಕದಲ್ಲಿ ನಿಂತುಕೊಂಡು, ತಂದೆ-ಮಕ್ಕಳ ಸಂಭಾಷಣೆಯನ್ನು ಕೇಳಿದೆ. ಅವರ ಮಾತುಗಳನ್ನು ಕೇಳಿ ನನಗೆ ಜ್ಞಾನವೇ ತಪ್ಪಿಹೋದಹಾಗಾಯಿತು. ನಾಗೇಂದ್ರನು ಹೊರಟು ಹೋದನಂತರ, ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲಿನಿಂದ ನಾಗೇಶನನ್ನು ಹೊಡೆದೆ. ಅವನು ಕೂಗಿಕೊಂಡು ಕೆಳಕ್ಕೆ ಬಿದ್ದ. ನಾನು ಹಿಂದೆ ಓಡಿಹೋಗುವ ಅವಸರದಲ್ಲಿ ನನ್ನ ಶಾಲು ಬಿದ್ದುಹೋಯಿತು. ನಾಗೇಂದ್ರನು ಹೆಣವನ್ನು ತೊಡೆಯ ಮೇಲೆ ಹಾಕಿಕೊಂಡಿರುವ ಸಮಯವನ್ನು ನೋಡಿ ಧೈರ್ಯದಿಂದ ಮೆಲ್ಲಗೆ ನನ್ನ ಶಾಲನ್ನು ತೆಗೆದುಕೊಂಡು ಮನೆಗೆ ಹಿಂದಿರುಗಿದೆ. ” ಎಂದು ನಡೆದುದನ್ನು ಹೇಳಿದರು. ಪ್ರಕಾಶನು ಎಲ್ಲವನ್ನೂ ಕೇಳಿ “ ತಂದೆ-ಮಕ್ಕಳು ಏನು ಮಾತನಾಡುತ್ತಿದ್ದರು? ನಿಮಗೆ ಅಷ್ಟು ಕೋಪ ಬರಲು ಕಾರಣವೇನು?” ಎಂದು ಪ್ರಶ್ನಿಸಿದ. ನಾರಾಯಣರಾಯರು “ ಆ ಮಾತುಗಳು ಕಿವಿಯ ಮೇಲೆ ಬೀಳುತ್ತಲೇ ನನಗೆ ಕೋಪವುಂಟಾಯಿತು. ನಾಗೇಶನು, ನನ್ನ ಮಗಳನ್ನು ನಾಗೇಂದ್ರನೇ ಮದುವೆಯಾಗಬೇಕೆಂದು ಒತ್ತಾಯಪಡಿಸುತ್ತಿದ್ದ. ಅವನ ಮಾತುಗಳಲ್ಲಿ ನನ್ನ ಮಗಳು ಒಬ್ಬ ಭಿಕಾರಿಣಿಯೆಂದೂ ಮತ್ತು ನಾನು ಅವನ ಕೈಕೆಳಗಿನ ಆಳೆಂದೂ ತನ್ನ ಮಾತನ್ನು ನಾನು ಎಂದಿಗೂ ಮೀರುವುದಿಲ್ಲವೆಂದೂ, ಇನ್ನೂ ಏನೇನೋ ಹೇಳುತ್ತಿದ್ದ ” ಎಂದರು. ಪ್ರಕಾಶನು ಕತೆಯಂತೆ ಎಲ್ಲವನ್ನೂ ಉತ್ಸುಕತೆಯಿಂದ ಕೇಳಿ, ಸ್ವಲ್ಪ ಹೊತ್ತು ಏನನ್ನೋ ಒಂದು ಕಾಗದದ ಮೇಲೆ ಬರೆದು “ ರಾಯರೇ, ತಾವು ಇದಕ್ಕೆ ರುಜು ಮಾಡಿ; ಪ್ರಭು ಸಾಕ್ಷಿಯಾಗುತ್ತಾನೆ. ನಾಗೇಂದ್ರನನ್ನು ಬಿಡಿಸಲು ಪ್ರಯತ್ನಿಸುತ್ತೇನೆ. ಒಂದು ವೇಳೆ ಅದು ಸಾಧ್ಯವಿಲ್ಲದೆ ಅವನ ಪ್ರಾಣಕ್ಕೆ ಅಪಾಯವುಂಟಾಗುವಂತಿದ್ದರೆ ಮಾತ್ರ ಇದನ್ನು ಹೊರಗೆ ತೆಗೆಯುತ್ತೇನೆ. ಇಲ್ಲದಿದ್ದರೆ ಪ್ರಪಂಚದಲ್ಲಿ ನನ್ನ ಮತ್ತು ಪ್ರಭುವಿನ ಹೊರತು ಯಾರಿಗೂ ತಿಳಿಯುವುದಿಲ್ಲ. ನೀವು ಧೈರ್ಯವಾಗಿರಿ ” ಎಂದು ಅವರ ಕೈಗೆ ಕಾಗದವನ್ನು ಕೊಟ್ಟ. ಅವರು ಅದನ್ನು ಓದಿ, ರುಜು ಮಾಡಿ ಹಿಂದಿರುಗಿ ಕೊಟ್ಟು “ ನನ್ನ ಪಾಪ-ಪೂರಿತ ಕತೆ ನನ್ನ ಮಕ್ಕಳಿಗೆ ತಿಳಿಯದಿದ್ದರೆ ಸರಿ. ಒಂದು ವೇಳೆ ನಾಗೇಂದ್ರನಿಗೆ ಅಪಾಯವಾಗುವಂತಿದ್ದರೆ ನನ್ನ ಪ್ರಾಣಹೋದರೂ ಚಿಂತೆಯಿಲ್ಲ. ” ಎಂದು ಹೇಳಿ, ಕೆಮ್ಮುತ್ತಾ ಎದ್ದು ಹೊರಟುಹೋದರು.

* * *

ಜಮೀನ್ದಾರ್ ನಾರಾಯಣರಾಯರು ಈ ಕೆಲಸವನ್ನು ಮಾಡಿರುವರೆಂದು ನಾನು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಅವರಿದ್ದ ಸನ್ನಿವೇಶಗಳನ್ನು ನೋಡಿದರೆ, ನಿಜವಾಗಿಯೂ ಅವರು ತಮ್ಮ ಮಿತ್ರನ ಕೊಲೆಗಾಗಿ ಬಹಳ ಸಂಕಟಪಡುವಂತೆ ಇದ್ದಿತು. ಮೇಲಾಗಿ ಆತನ ಮಕ್ಕಳೇ ಕೊಲೆಯ ಪತ್ತೆ ತರದೂದು ನಡೆಯಿ-ಸುತ್ತಿದ್ದಮೇಲೆ, ನನಗೆ ಎಳ್ಳಷ್ಟೂ ಸಂಶಯ ಬಂದಿರಲಿಲ್ಲ. ಆದರೂ ಪ್ರಕಾಶನು ತನ್ನ ಮೊದಲಿನ ನಿರ್ಧಾರದ ಮೇಲೆ ಕೆಲಸ ಮಾಡಿ, ಕೊಲೆಯನ್ನು ಮಾಡಿದ್ದವರ ಬಾಯಿಂದಲೇ ಎಲ್ಲವನ್ನೂ ಸವಿಸ್ತಾರವಾಗಿ ಹೊರಡಿಸಿದ. ಅವನ ಬುದ್ಧಿಶಕ್ತಿಯು ಎಷ್ಟಿರಬೇಕೆಂದು ಯಾರಿಗೂ ಊಹಿಸಲು ಕೂಡ ಸಾಧ್ಯವಾಗಲಾರದೆನ್ನುವುದರಲ್ಲಿ

ಸಂಶಯವಿಲ್ಲ. ಮನೆಗೆ ಹಿಂದಿರುಗುತ್ತಾ ದಾರಿಯಲ್ಲಿ ಅದನ್ನೇ ಕೇಳಿದೆ. ಅವನು ಸಿಗರೇಟನ್ನು ಹಚ್ಚಿ ಹೊಗೆಯನ್ನು ಬಿಡುತ್ತಾ

ಪ್ರಭೂ, ಸನ್ನಿವೇಶಗಳೂ, ವಿಷಯಗಳೂ ನಿನಗೂ ಗೊತ್ತಿವೆ. ಆದರೆ ತರ್ಕಮಾಡುವುದಿಲ್ಲ, ಯೋಚಿಸುವುದಿಲ್ಲ. ನಾಗೇಂದ್ರನು ಕೊಲೆಪಾತಕನಲ್ಲವೆಂದು ನನಗೆ ಮೊದಲೇ ಗೊತ್ತಾಯಿತು. ಯಾಕೆಂದರೆ ಸುಶೀಲೆ, ರಾಮರಾಯನ ಮಾತಿನಂತೆ ಅವನು ಬಹಳ ಮೃದುಸ್ವಭಾವದವನು. ಅದೂ ಅಲ್ಲದೆ ತಂದೆಗೆ ಮಗನು ಊರಲ್ಲಿಲ್ಲವೆಂದು ಗೊತ್ತಿದ್ದರೂ ಅವನ ಹೆಸರನ್ನು ಹಿಡಿದು ಕೂಗಲು ಕಾರಣವೇನು ? ನಾಗೇಶರಾಯರಿಗೆ ಬುದ್ಧಿಯೇನೂ ಕೆಟ್ಟಿರಲಿಲ್ಲ. ಎಂದಮೇಲೆ ಅದೇ ಹೆಸರಿನ ಬೇರೆ ಒಬ್ಬ ವ್ಯಕ್ತಿಯನ್ನು ಆತನು ಅದೇ ಸ್ಥಳದಲ್ಲಿ ನಿರೀಕ್ಷಿಸುತ್ತಿದ್ದಿರಬೇಕು. ಎರಡನೆಯದಾಗಿ 'ನಾಗೇಶರಾಯರು ಸಾಯುವ ಮುನ್ನ 'ಚೇರಿ, ಚೇರಿ' ಎಂದರು' ಎಂದು ನಾಗೇಂದ್ರನು ಹೇಳಿಕೆ ಕೊಟ್ಟಿದ್ದಾನೆ. ಅದರಲ್ಲಿ ಅರ್ಥವಿದ್ದೇ ಇರಬೇಕು. ಹೀಗೆ ಆಕಸ್ಮಿಕವಾಗಿ ಅಪಾಯಕ್ಕೆ ಸಿಕ್ಕಿದವರೆಂದಿಗೂ ಬುದ್ಧಿಶೂನ್ಯರಾಗುವುದಿಲ್ಲ. ಬಹುಶಃ ತನ್ನನ್ನು ಇಂತಹ ಊರಿನ ಮನುಷ್ಯನು ಹೊಡೆದನೆಂದು ಹೇಳಿರಬೇಕೆಂದು ಆಲೋಚಿಸಿದೆ. ಮಾತುಗಳು ಅಸ್ಪಷ್ಟವಾಗಿದ್ದುದರಿಂದ 'ಚೇರಿ' ಎನ್ನುವುದು ಮಾತ್ರ ಮಗನಿಗೆ ಕೇಳಿಸಿ ಅರ್ಥವಾಗಲಿಲ್ಲ. ಈ ಕಾರಣಗಳಿಂದ ಚೇರಿ ಎನ್ನುವುದು ಪುದುಚೇರಿ ಇದ್ದರೂ ಇರಬಹುದೇ ಎಂದು ಅನುಮಾನಿಸಿದೆ. ಇನ್ನು ಸ್ಥಳಕ್ಕೆ ಹೋಗಿ ಪರೀಕ್ಷಿಸಿದ ಮೇಲೆ, ನಾಗೇಶರಾಯರದು, ನಾಗೇಂದ್ರನದು ಮತ್ತು ಅನಂತರ ಬಂದ ಜನಗಳ ಹಜ್ಜೆ ಗುರುತು ಮಾತ್ರವಲ್ಲದೆ ಒಂದು ಗುರುತು, ಕಾಲುವೆಯಿಂದ ಬೇರೆ ಕಡೆಗೆ ಹೋಗಿ ಬಂದಿರುವುದು ಸ್ಪಷ್ಟವಾಗಿ ತಿಳಿಯಿತು. ಆ ಗುರುತುಗಳನ್ನೆ ಹಿಂಬಾಲಿಸಿಕೊಂಡು ಹೋದೆ. ಅದರ ಮೇಲೆ ಮನುಷ್ಯನ ಗುಣಾವಗುಣಗಳನ್ನು ಹೇಳಿದೆ'' ಎಂದ.

''ಅಲ್ಲಯ್ಯಾ, ಹೆಜ್ಜೆ ಗುರುತು ನೋಡಿದರೆ, ಅವನ ಎತ್ತರ, ಅಗಲ ಹೇಳಲು ಸಾಧ್ಯವೇ ?'' ಎಂದು ಪ್ರಶ್ನಿಸಿದೆ. ಅದಕ್ಕೆ ಅವನು ನಗುತ್ತಾ '' ಪ್ರಭೂ, ಬಹಳ ಸುಲಭ; ಪಾದದ ಅಳತೆಯಿಂದಲೂ ಒಂದು ಹೆಜ್ಜೆಯಿಂದ ಇನ್ನೊಂದು ಹೆಜ್ಜೆಗಿರುವ ಅಂತರದ ಮೇಲೂ ಎತ್ತರವನ್ನು ಹೇಳಬಹುದು. ಅವನ ಎಡಗಾಲಿನ ಗುರುತು ಅಸ್ಪಷ್ಟವಾಗಿದ್ದುದರಿಂದ ಕುಂಟೆಂದು ಹೇಳಿದೆ. ಅವನು ಮರದ ಹಿಂದೆ ನಿಂತಿದ್ದ ಸ್ಥಳದಲ್ಲಿ, ಗಿಡದ ಎಲೆಗಳ ಮೇಲೆ ಸಿಗರೇಟಿನ ಬೂದಿಯು ಇನ್ನೂ ಹಾಗೆಯೆ ಇತ್ತು. ನಿನಗೆ ಗೊತ್ತಿರುವಂತೆ ಒಂದೊಂದು ಸಿಗರೇಟಿನ ಬೂದಿ ಒಂದೊಂದು ರೀತಿಯಿರುತ್ತೆ. ಇನ್ನು ಅವನು ಉಗಿದಿದ್ದ ಜಾಗದಲ್ಲಿ ಶ್ಲೇಷ್ಮವು ಗಟ್ಟಿಕಟ್ಟಿಕೊಂಡಿದ್ದುದರಿಂದ ಉಬ್ಬಸ ರೋಗವೆಂದು ಭಾವಿಸಿದೆ. ಅವನು ಹೊಡೆದ ಕಲ್ಲನ್ನು ಸಹ ಪರೀಕ್ಷಿಸಿದೆ. ಆ ಕಲ್ಲಿನ ಕೆಳಗೆ ಹುಲ್ಲು ಬೆಳೆದಿದ್ದುದರಿಂದ ಅದು ಅಲ್ಲಿ ಬಿದ್ದು ೪-೫ ದಿವಸಗಳಾಗಿರಬಹುದೆಂದು ಭಾವಿಸಲು ಕಷ್ಟವಾಗಲಿಲ್ಲ. ಈ ಸನ್ನಿವೇಶಗಳನ್ನೆಲ್ಲಾ ಒಟ್ಟುಮಾಡಿ, ಚೇರಿ ಎನ್ನುವುದು 'ಪುದುಚೇರಿ' ಎಂದು ಭಾವಿಸಿದರೆ, ಸ್ನೇಹಿತರು, ನಾಗೇಶರಾಯರು ಮತ್ತು ನಾರಾಯಣರಾಯರು. ಅವರು ಮೇಲೆ ಮಿತ್ರತ್ವದಿಂದ ಇದ್ದರೂ ಒಳಗೆ ಅವರಲ್ಲಿ ದ್ವೇಷವಿರಬೇಕೆಂದು ಊಹಿಸಿದೆ. ಅದೂ ಅಲ್ಲದೆ ನಾಗೇಶರಾಯರನ್ನು ಸರಿಸಮಾನತೆಯಿಂದ ದೊಡ್ಡ ಗೌರವಸ್ಥರಂತೆ ಭಾವಿಸಲು ಏನು ಕಾರಣ ? ಹೀಗೆ ಸ್ವಲ್ಪ ಅನುಮಾನ ಬಂದುದರಿಂದ ಅದನ್ನೇ ಅನುಸರಿಸಿದೆ. ನಾರಾಯಣರಾಯರ ಮನೆಯಲ್ಲಿ, ಟೀ ಕುಡಿಯುತ್ತಿರುವಾಗ ಎದ್ದುಹೋಗಿ ಅವರ ಪಾದರಕ್ಷೆಗಳನ್ನು ನೋಡಿ ಬಂದೆ. ಹೆಜ್ಜೆಯ ಗುರುತೂ, ಈ ಪಾದರಕ್ಷೆಯ ಅಳತೆಯೂ ಒಂದೇ ಆಗಿತ್ತು. ಅನಂತರ ಜೇಲಿಗೆ ಹೋಗಿ ನಾಗೇಂದ್ರನನ್ನು ನೋಡಿದೆ. ಅವನೂ ಕೊಲೆಪಾತಕನಾರೆಂಬುದನ್ನು ತಿಳಿಯದೆ ಕಳವಳಗೊಂಡಿದ್ದ. ಜಗಳಕ್ಕೆ ಕಾರಣ ಸುಶೀಲೆಯ ಮದುವೆಯ ವಿಚಾರ. ನಾಗೇಂದ್ರನಿಗೆ ಅವಳ ಮೇಲೆ ಪ್ರೇಮವಿದ್ದರೂ, ತಂದೆಯ ಹಣದಾಶೆಯನ್ನು ನೋಡಿ, ಅವನ ಮಾತನ್ನು ತಿರಸ್ಕರಿಸಿದನಂತೆ. ಇದನ್ನೆಲ್ಲಾ ನೋಡಿದರೆ ನಾರಾಯಣರಾಯರ ಮೇಲೆ ಸ್ವಲ್ಪ ಅನುಮಾನ ಬರುತ್ತದೆ. ನಾಗೇಂದ್ರ ಅಪರಾಧಿಯಲ್ಲವೆನ್ನುವುದಕ್ಕೆ ಹೆಣವನ್ನು ಪರೀಕ್ಷಿಸಿದ ಡಾಕ್ಟರ ಅಭಿಪ್ರಾಯವೊಂದೇ ಸಾಕು. ಏಟು ತಲೆಯ ಹಿಂಭಾಗಕ್ಕೆ ಬಿದ್ದಿದೆ. ಎಂದಮೇಲೆ ಹಿಂದಿನಿಂದ ಯಾರೋ ಹೊಡೆದಿರಬೇಕು. ಅದು ನಾಗೇಶರಾಯರಿಗೆ ತಿಳಿಯದೆ ಇರುವಂತೆ ಹಿಂಭಾಗದಿಂದ ಹೊಡೆದಿರಬೇಕು. ನಾಗೇಂದ್ರನು ಕೊಡತಿಯನ್ನು ಅವಸರದಲ್ಲಿ ಕಾಲುವೆಯೊಳಗೆ ಹಾಕಿದನೇ ವಿನಾ ಬೇಕೆಂದು ಹಾಕಿಲ್ಲ'' ಎಂದು ತರ್ಕಮಾಡುತ್ತಾ ಮಾಡುತ್ತಾ ಬಹಳ ಸುಲಭವಾಗಿ ಅರ್ಥವಾಗುವಂತೆ ಹೇಳಿದ.

* * *

ಸುಮಾರು ಒಂದು ತಿಂಗಳನಂತರ ನಾರಾಯಣರಾಯರು ಉಬ್ಬಸರೋಗದಿಂದಲೇ ಮೃತಪಟ್ಟರು. ಪ್ರಕಾಶನು ವಕೀಲರ ಮುಖಾಂತರ ಹಾಕಿಸಿದ ಕೆಲವು ಪ್ರಶ್ನೆಗಳಿಗೆ ಪೋಲಿಸಿನವರು ಸಮರ್ಪಕವಾಗಿ ಉತ್ತರ ಕೊಡದೆ ಹೋದುದುದರಿಂದ, ನಾಗೇಂದ್ರನು ನಿರಪರಾಧಿಯೆಂದು ಬಿಡುಗಡೆಯಾಯಿತು. ಈಚೆಗೆ ಸುಶೀಲೆಯು ನಾಗೇಂದ್ರನನ್ನೇ ವಿವಾಹವಾದಳಂತೆ.

ಹೆಂಗುಸರಿಗಾಗಿ ವ್ಯಾಯಾಮಕ್ರಮ

ಶ್ರೀ. ತ್ರೀ. ಜ. ಬಾಪಟ, ಬಿ. ಪಿಎಚ್. ಸಿ.

★

೧ನೆಯ ಬರೆಹ

ಇಂದಿನ ಹೆಣ್ಣುಮಕ್ಕಳ ಆರೋಗ್ಯವಿಮರ್ಶೆ

ಇತ್ತೀಚೆಯ ನಮ್ಮ ಸ್ತ್ರೀಸಮಾಜದಲ್ಲಿ ಪ್ರಕೃತಿಸ್ವಾಸ್ಥ್ಯವು ತೀರ ಕೀಳುಮಟ್ಟಕ್ಕಿಳಿದುದು ಕಂಡುಬರುತ್ತಲಿದೆ. ಹೆಂಗುಸರ ಮೈ-ಮನಗಳು ಸ್ವಾಭಾವಿಕವಾಗಿ ಇರಬೇಕಾದಷ್ಟು ಸುಂದರವೂ ಸುದೃಢವೂ ಇಲ್ಲ. ದೈಹಿಕವ್ಯಾಧಿಗಳೂ ಮಾನಸಿಕ ಆಧಿಗಳೂ ಅವರನ್ನು ಮುತ್ತಿ ಮುಸುಕಿ, ಅವರ ಆರೋಗ್ಯಕ್ಕೂ, ಸಾಮರ್ಥ್ಯಕ್ಕೂ, ಶರೀರ ಸೌಷ್ಟವಕ್ಕೂ, ಉತ್ಸಾಹಕ್ಕೂ, ದೇಹದಲ್ಲಿರಬಹುದಾದ ಚಟುವಟಿಕೆಗೂ, ಅಲ್ಲದೆ ದೇಹದ ಅತ್ಯಂತ ಅವಶ್ಯಕವಾದ ಅಂಗಾಂಗಗಳಿಗೂ ಭಂಗ-ಬಾಧೆಗಳನ್ನು ತಂದೊಡ್ಡುತ್ತಲಿವೆ. ನಮ್ಮ ಹೆಣ್ಣುಮಕ್ಕಳು ಈ ದುಸ್ಥಿತಿಯಿಂದ ಮುಕ್ತರಾಗಿ ಸುವ್ಯಸ್ಥಿತರಾಗುವುದಕ್ಕೂ ದೈಹಿಕಸ್ವಾಸ್ಥ್ಯವನ್ನು ಉತ್ತಮ ರೀತಿಯಿಂದ ಸಾಧಿಸುವುದಕ್ಕೂ ಸದ್ಯ ನಮಗೆ ಕಾಣುತ್ತಿರುವ ಒಂದೆ ಒಂದು ಖಂಡಿತೋಪಾಯವೆಂದರೆ ಅವರು ಶಾರೀರಿಕಶಿಕ್ಷಣ (ವ್ಯಾಯಾಮ ಶಿಕ್ಷಣ)ವನ್ನು ಪಡೆಯುವುದು; ಆದುದರಿಂದಲೆ ಅವರು ಪಡೆಯಬೇಕಾದ ಶಾರೀರಿಕ ಶಿಕ್ಷಣವೆಂತಹದಿರಬೇಕು?.. ಅದರ ರೀತಿ-ನೀತಿಗಳಾವುವು?..ಎಂಬುದರ ವಿಚಾರವನ್ನು ಮಾತ್ರ ನಾವು ಈ ಲೇಖಾಂಕಗಳಲ್ಲಿ ಮಾಡಬೇಕೆಂದಿದ್ದೇವೆ.

ನಮ್ಮ ಇಂದಿನ ಸಮಾಜದ ಹೆಣ್ಣುಮಕ್ಕಳನ್ನು ನಾವು ಸ್ಥೂಲವಾಗಿ ಮೂರು ತರಗತಿಗಳಲ್ಲಿ ವಿಭಾಗಿಸಬಹುದು. ಮೊದಲನೆಯ ತರಗತಿ ಸಿರಿವಂತರ ಹೆಣ್ಣುಮಕ್ಕಳದು, ಎರಡನೆಯ ತರಗತಿ ಮಧ್ಯಮಸ್ಥಿತಿಯ ಹೆಣ್ಣುಮಕ್ಕಳದು, ಮೂರನೆಯ ತರಗತಿ ಬಡತನದಿಂದ ಬಾಳುವ ಹೆಣ್ಣುಮಕ್ಕಳಿಂದ ತುಂಬಿದುದು. ಈ ತರಗತಿಗಳನ್ನು ಅವರವರ ಆರ್ಥಿಕಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿ ಮಾಡಿದೆಯಾದರೂ ಅವರವರ ಆರೋಗ್ಯದ ವಿಶಿಷ್ಟತೆಗಳ ಪರಿಸ್ಥಿತಿಯೂ ಈ ಆರ್ಥಿಕ ತರಗತಿಗಳನ್ನೆ ಅವಲಂಬಿಸಿ ಇರುವುದೆಂಬುದು ಸ್ಪಷ್ಟವಿದೆ.

ಮೊದಲನೆಯ ತರಗತಿಗೆ ಸೇರಿದ ಸಿರಿವಂತ ಹೆಂಗುಸರ ಆರೋಗ್ಯದ ಪ್ರಮಾಣವನ್ನು ನೋಡಿದರೆ, ಅದು ತೀರ ಕೆಳಗಿನ ಮಟ್ಟಕ್ಕಿಳಿದಿರುವುದೆಂಬುದು ಕಂಡುಬರುವುದು. ಹೀಗೆಂದ ಮಾತ್ರಕ್ಕೆ ಆ ತರಗತಿಗೆ ಸೇರಿದ ಎಲ್ಲ ಹೆಣ್ಣುಮಕ್ಕಳೂ ರೋಗಿಗಳಾಗಿರುತ್ತಾರೆಂದು ನಮ್ಮ ಅಭಿಪ್ರಾಯವಲ್ಲ. ರೋಗಿಗಳಾಗಿರದಿದ್ದರೂ ಅವರ ಪ್ರಕೃತಿ ತೀರ ಸೂಕ್ಷ್ಮವಾಗಿರುತ್ತದೆಂಬುದು ದಿಟದ ಸಂಗತಿ. ಮಧ್ಯಮಸ್ಥಿತಿಯವರಾದ ಹೆಣ್ಣುಮಕ್ಕಳ ಆರೋಗ್ಯಪ್ರಮಾಣವು ಸಾಮಾನ್ಯವಾಗಿ ಮೇಲೆ ಹೇಳಿದ ೧ನೆಯ ತರಗತಿಯವರಿಗಿಂತ ಮೇಲುಮಟ್ಟಕ್ಕೇರಿದುದಿರುತ್ತದೆ. ಬಡತನದಲ್ಲಿ ಬೆಳೆದು ಬಾಳುವ ಹೆಂಗುಸರ ಆರೋಗ್ಯವು ಮೇಲಿನ ಎರಡು ತರಗತಿಯವರಿಗಿಂತಲೂ ಹೆಚ್ಚು ಒಳ್ಳೆಯದಾಗಿರುತ್ತದೆ. ಸಾಮಾನ್ಯನಿರೀಕ್ಷಣೆಯಿಂದ ಕಂಡುಹಿಡಿದು ಕಟ್ಟಿದ ನಿಯಮವಿದು; ಆದುದರಿಂದ ಈ ನಿಯಮಕ್ಕೆ ಅಪವಾದಗಳಿರುವುದೂ ಸ್ವಾಭಾವಿಕ.

ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಶಾರೀರಿಕಶಿಕ್ಷಣದ ಅತ್ಯಂತ ಆವಶ್ಯಕತೆ ಯಾರಿಗಾದರೂ ಇದ್ದರೆ ಅದು ನಮ್ಮಲ್ಲಿಯ ಮಧ್ಯಮಸ್ಥಿತಿಯ ಹೆಣ್ಣುಮಕ್ಕಳಿಗೇ ಇದೆಯೆಂದು ಖಂಡಿತವಾಗಿ ಹೇಳಬಹುದು. ಏಕೆಂದರೆ ಈ ತರಗತಿಯವರ ಪರಿಸ್ಥಿತಿ ತುಂಬ ವಿಲಕ್ಷಣವಾದುದೂ ಬಿಕ್ಕಟ್ಟಿನದೂ ಆಗಿರುವುದು. ಆರೋಗ್ಯ ಸಂರಕ್ಷಣೆಗಾಗಿ ಸಿರಿವಂತರು ಮಾಡುವ ಉಪಾಯಗಳು ಇವರಿಗೆ ಅಸಾಧ್ಯವಾಗಿರುವುವು; ಅದರಂತೆಯೆ ಬಡತನದ ಬಾಳಿನ ಕಷ್ಟಜೀವನವು ಅಸಹನೀಯವೆನಿಸುವುದು. ಹೀಗಾಗಿ ಇತ್ತೊಡಕಿನಲ್ಲಿ ಸಿಕ್ಕಂತೆ ಇವರ ಬಾಳು ಇರುವುದು. ಸಿರಿವಂತರಿಗೆ ತಮ್ಮ ಹಣದ ಬಲದಿಂದ ಬೇಕಾದ ಆರೋಗ್ಯಸಾಧನಗಳನ್ನೆಲ್ಲ ಕೈವಶಮಾಡಿಕೊಳ್ಳಲಿಕ್ಕಾಗುತ್ತದೆ. ಆದುದರಿಂದಲೆ ಅವರನ್ನು ಈ ಇಪ್ಪತ್ತನೆಯ ಶತಮಾನದ ಸುಧಾರಣೆಯ ಸಿಡುಗು ಅಷ್ಟೊಂದು ಬಾಧಿಸುತ್ತಿಲ್ಲ. ಬಡವರಾದ ಹೆಣ್ಣುಮಕ್ಕಳ ಆರೋಗ್ಯವನ್ನು ಕುರಿತು ವಿಚಾರಮಾಡಿದರೆ ತಂತಮ್ಮ ಹೊಟ್ಟೆ-ಬಟ್ಟೆಯ ಪ್ರಶ್ನೆಯೆ ಅವರ ಜೀವನವನ್ನೆಲ್ಲ ವ್ಯಾಪಿಸಿಕೊಂಡಿದ್ದು ಮಿಕ್ಕ ವಿಚಾರಗಳಿಗಾಗಿ ಅವರ ಬಾಳಿನಲ್ಲಿ ಬಿಡುವೇ ಇರುವುದಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುವುದು.

ಮಧ್ಯಮಸ್ಥಿತಿಯ ಹೆಣ್ಣುಮಕ್ಕಳ ಪರಿಸ್ಥಿತಿ ಇವರಿಬ್ಬರಿಗಿಂತ ತೀರಭಿನ್ನವಾಗಿರುವುದು. ಹಣವಂತರಂತೆ ಬೇಕಾದ ಅನುಕೂಲತೆಗಳು ಇವರಿಗಿರದಿದ್ದರೂ ಬಡವರಂತೆ ಕೇವಲ ಹೊಟ್ಟೆ-ಬಟ್ಟೆಗಳಿಗಾಗಿಯೆ ತಮ್ಮ ಜೀವನವನ್ನು ಸವೆಯಿಸಬೇಕಾಗುವುದಿಲ್ಲ. ಇವರಿಗೆ ದುಡಿತ ಕಡಿಮೆ, ಬಿಡುವು ಹೆಚ್ಚು. ಆದುದರಿಂದಲೆ ಮಧ್ಯಮಸ್ಥಿತಿಯ ಹೆಣ್ಣುಮಕ್ಕಳು ಸೋಂಬೇರಿ (ಸೋಮಾರಿ) ಗಳಾಗುವರು; ಅದರಿಂದ ಅವರ ದೇಹಾರೋಗ್ಯಕ್ಕೆ ಬಾಧೆಬರುವುದು. ಅದಕ್ಕಾಗಿಯೆ ನಾವು ಒತ್ತಿ ಒತ್ತಿ ಹೇಳುವುದೆಂದರೆ ಮಧ್ಯಮ-

ಸ್ಥಿತಿಯವರಿಗೇ ಶಾರೀರಿಕ ಶಿಕ್ಷಣ (ವ್ಯಾಯಾಮ) ದ ಆವಶ್ಯಕತೆ ಹೆಚ್ಚಾಗಿರುವುದೆಂದು. ಮಿಕ್ಕವರಿಗೆ ಅದರ ಆವಶ್ಯಕತೆ ಇಲ್ಲವೆ ಇಲ್ಲವೆಂದು ನಮ್ಮ ಅಭಿಪ್ರಾಯವಲ್ಲ, ಎಲ್ಲರಿಗೂ ಅದು ಬೇಕಿದ್ದರೂ ಮಧ್ಯಮಸ್ಥಿತಿಯವರಷ್ಟು ತೀವ್ರವಾದ ಆವಶ್ಯಕತೆ ಮಿಕ್ಕವರಿಗಿಲ್ಲವಷ್ಟೆ!

ಮಧ್ಯಮವರ್ಗದ ಸ್ತ್ರೀಯರಮೇಲೆ ಅದರಲ್ಲಿಯೂ ಇಂದಿನ ಸುಶಿಕ್ಷಿತ ಸ್ತ್ರೀಯರಮೇಲೆ ಪ್ರಸ್ತುತ ಪರಿಸ್ಥಿತಿಯು ಎಷ್ಟೊಂದು ವಿಪರೀತ ಪರಿಣಾಮವನ್ನುಂಟುಮಾಡಿದೆಯೆಂಬುದು ಬಹುಜನರಿಗೆ ತಿಳಿದ ಸಂಗತಿ. ಸಾಮಾನ್ಯವಾಗಿ ಇಂದಿನ ಕಲಿತ ಹೆಣ್ಣುಮಕ್ಕಳು ಎಷ್ಟೊಂದು ದುರ್ಬಲರೂ ಕೆಲಸಕ್ಕೆ ಬಾರದವರೂ ಆಗಿದ್ದಾರೆಂಬುದನ್ನೂ, ಇದರ ದುಷ್ಪರಿಣಾಮವು ನಮ್ಮ ಮುಂದಿನ ಪೀಳಿಗೆಯ ಮೇಲೆ—ತದ್ವಾರಾ ನಮ್ಮ ರಾಷ್ಟ್ರದಮೇಲೆ—ಎಷ್ಟೊಂದು ಭೀಕರವಾಗಬಹುದೆಂಬುದನ್ನೂ ವಿಮರ್ಶಿಸಿ ನೋಡಿದರೆ, ನಮ್ಮ ಮನಸ್ಸು ಕಂಗೆಟ್ಟು ಗೊಂದಲದಲ್ಲಿ ಬಿದ್ದುಬಿಡುವದು. ಇಂದಿನ ಸುಶಿಕ್ಷಿತ ತರುಣಿಯರೆಂದರೆ ನಮ್ಮರಾಷ್ಟ್ರದ ಬರಲಿರುವ ಪೀಳಿಗೆಯ ತಾಯಂದಿರು. ಇವರ ಸುಸ್ಥಿತಿ–ಸುದೃಢತೆ–ಶರೀರಸ್ವಾಸ್ಥ್ಯಗಳನ್ನೆ ನಮ್ಮ ರಾಷ್ಟ್ರದ ಶುಭಭವಿಷ್ಯ ಅವಲಂಬಿಸಿ ಇರುವುದು. ಅಂತಹವರೇ ಈಗ ಹೀನಾರೋಗ್ಯರೂ ಕೆಲಸಕ್ಕೆ ಬಾರದವರೂ ಆಗುತ್ತ ಹೊರಟರೆ, ನಮ್ಮ ಉದ್ಧಾರಕ್ಕೆ—ಅದು ದೈಹಿಕವಾದುದೇ ಇರಲಿ ರಾಜಕೀಯವೆ ಇರಲಿ—ದಾರಿಯೆಲ್ಲಿದೆ? ನಮ್ಮ ಉದ್ಧಾರದ ವಿಚಾರ ಬರಿ ಕನಸಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲವೆಂದು ಎನಿಸಿದರೆ ಅದರಲ್ಲಿ ಆತಿಶಯವೇನಿದೆ?

ಮೇಲೆ ಮಾಡಿದ ನಮ್ಮ ವಿಧಾನವನ್ನು ಓದಿ 'ನಮ್ಮಲ್ಲಿಯ ಹೆಂಗಸರ ಆರೋಗ್ಯ ಮಾತ್ರ ಚೆನ್ನಾಗಿಲ್ಲ, ಗಂಡಸರ ಆರೋಗ್ಯ ನಾಕಷ್ಟು ಚೆನ್ನಾಗಿದೆ' ಎಂದು ಯಾರೂ ಅರ್ಥಮಾಡಿಕೊಳ್ಳುವ ಕಾರಣವಿಲ್ಲ. ಏಕೆಂದರೆ ನಮ್ಮಲ್ಲಿಯ ಗಂಡಸರೂ ಹೆಂಗಸರ ಪ್ರಮಾಣದಲ್ಲಿಯೆ ಆರೋಗ್ಯಹೀನರೂ, ನಿರ್ಬಲರೂ, ಕೆಲಸಕ್ಕೆ ಬಾರದವರೂ ಆಗಿದ್ದಾರೆ. ಆದುದರಿಂದಲೆ ಆರೋಗ್ಯವಿಷಯಕವಾದ ಎಲ್ಲ ತೊಂದರೆಗಳಿಂದಲೂ ಪಾರಾಗಿಸಿ ನಮಗೆ ಸ್ವಾಸ್ಥ್ಯಲಾಭವನ್ನೊದಗಿಸಿಕೊಡುವ ಉಪಾಯವೆಂದರೆ ಶಾರೀರಿಕ ಶಿಕ್ಷಣ (ಶರೀರ ವ್ಯಾಯಾಮ ಶಿಕ್ಷಣ) ವೊಂದೇ ಒಂದು.

ಹೆಣ್ಣುಮಕ್ಕಳಿಗೆ ಆವಶ್ಯಕವಾಗಿ ಕೊಡಬಹುದಾದ ಶಾರೀರಿಕ ಶಿಕ್ಷಣದ ವಿಚಾರಚರ್ಚೆಯು ನಮಗೀಗ ಕ್ರಮಪ್ರಾಪ್ತವೆಂದಾಯಿತು. ಹೆಂಗಸರು ಗಂಡಸರು ಇಬ್ಬರಿಗೂ ಶಾರೀರಿಕ ಶಿಕ್ಷಣದ ಆವಶ್ಯಕತೆಯಿರುವುದಾದರೂ, ನಾವೀಗ ಹೆಂಗಸರಿಗೆ ಕೊಡಬಹುದಾದ ಶಾರೀರಿಕ ಶಿಕ್ಷಣವನ್ನೆ ಕಣ್ಣೆದುರಿಗಿಟ್ಟುಕೊಂಡುದರಿಂದ, ಅವರಿಬ್ಬರ ಪ್ರಕೃತಿಯಲ್ಲಿಯ—ಪರಿಸ್ಥಿತಿಯಲ್ಲಿಯ—ಹೆಚ್ಚುಕಡಿಮೆಗಳನ್ನು ಅರಿತುಕೊಂಡು, ಹೆಂಗಸರಿಗಷ್ಟೆ ಯೋಗ್ಯವೆನಿಸಬಹುದಾದ ವ್ಯಾಯಾಮಕ್ರಮವನ್ನು ಎಂದರೆ ಶಾರೀರಿಕ ಶಿಕ್ಷಣಕ್ರಮವನ್ನು ನಾವಿಲ್ಲಿ ನಿರ್ಣಯಿಸಿ ಕೊಡಬೇಕಾಗಿದೆ. ಸ್ತ್ರೀ–ಪುರುಷರಿಬ್ಬರ ವ್ಯಾಯಾಮಕ್ರಮವು ಒಂದೆ ಬಗೆಯದಾಗಿದ್ದರೆ ನಡೆಯುವಂತಿಲ್ಲ. ಆದುದರಿಂದಲೆ ಅವರಿಬ್ಬರ ಪ್ರಕೃತಿ ವಿಷಯಕವಾದ ಸೂಕ್ಷ್ಮ ತಾರತಮ್ಯಗಳನ್ನರಿತು, ಆ ಕ್ರಮದಲ್ಲಿ ಆವಶ್ಯಕವಾದ ಹೆಚ್ಚುಕಡಿಮೆಗಳನ್ನು ಮಾಡುವುದು ಅಗತ್ಯದ ಸಂಗತಿ. ನಿಜವಾಗಿ ನೋಡಿದರೆ ಜಗತ್ತಿನಲ್ಲಿ ಬಂದು ಹೆಣ್ಣುಬಾಳು ಮಾಡುವ ಕಾರ್ಯವೆ ಬೇರೆ; ಗಂಡುಬಾಳು ಮಾಡಬೇಕಾದ ಕಾರ್ಯವೆ ಬೇರೆ. ಆದುದರಿಂದಲೆ ಆ ಆ ಕಾರ್ಯಗಳಿಗೆ ತಕ್ಕಂತೆ ಆ ಆ ಶರೀರವನ್ನು ಸಂಘಟಿಸಬೇಕಾಗುವುದು; ಆ ಸಂಘಟನೆಗೆ ತಕ್ಕಂತೆ ಶಾರೀರಿಕ ಶಿಕ್ಷಣಕ್ರಮವನ್ನು ನಿರ್ಮಿಸಬೇಕಾಗುವುದು.

ಸ್ತ್ರೀಯರಿಗೆ ಕೊಡಬೇಕಾದ ವ್ಯಾಯಾಮಶಿಕ್ಷಣವನ್ನು ಕುರಿತು ವಿಚಾರಮಾಡುವುದಕ್ಕಿಂತ ಮೊದಲು, ಅವರ ದೇಹವನ್ನೂ ಅವರು ಮಾಡಬೇಕಾಗುವ ಬೇರೆಬೇರೆಯ ಕೆಲಸಗಳನ್ನೂ ನಾವು ಪರಿಚಯ ಮಾಡಿಕೊಳ್ಳಬೇಕಾದುದು ಅಗತ್ಯ. ಅದರಂತೆಯೆ ಅವರ ದೇಹದಲ್ಲಿಯ ಕಾರ್ಯಕ್ಷಮತೆಯೂ ಸಾಮರ್ಥ್ಯವೂ ಏತಕ್ಕಾಗಿ—ಹೇಗೆ ಹೇಗೆ—ಕಡಮೆಯಾಗುತ್ತಿರುವುದೆಂಬುದನ್ನು ತಿಳಿದುಕೊಳ್ಳುವುದೂ ಆವಶ್ಯಕ. ಆದುದರಿಂದ ಮೊದಲು ನಾವು ಆ ಮಾತನ್ನೇ ಚರ್ಚೆಗೆ ತೆಗೆದುಕೊಳ್ಳೋಣ!

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು

ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಪ್ರಸವ, ಅಪತ್ಯಪರಿಪಾಲನ ಇವೆರಡು ಹೆಂಗುಸಿನ ಶರೀರದ ಮುಖ್ಯಕಾರ್ಯಗಳು. ಯಾವ ಬಗೆಯ ಶಾರೀರಿಕ ಶಿಕ್ಷಣದಿಂದ ಇವೆರಡೂ ಕಾರ್ಯಗಳು ಸುಲಭಸಾಧ್ಯವಾಗುವುವೊ ಆ ಬಗೆಯ ಶಿಕ್ಷಣವೆ ಹೆಂಗುಸರಿಗೆ ಯೋಗ್ಯವಾದುದೆಂದು ಹೇಳಬಹುದು. ಆದರೆ ಇದೇ ಸಂದರ್ಭದಲ್ಲಿಯೆ ಪ್ರಸವ-ಅಪತ್ಯಪರಿಪಾಲನ ಕಾರ್ಯಗಳೆರಡೂ ಸುಲಭವಾಗದಿರುವುದು ಯಾವ ಕಾರಣಗಳ ಮೂಲಕವೆಂಬುದನ್ನೂ ನಾವು ತಿಳಿದುಕೊಳ್ಳಬೇಕಾಗಿದೆ.

ನಮ್ಮ ನಾಡಿನಲ್ಲಿಯ ಇಂದಿನ ಸುಶಿಕ್ಷಿತ ಸ್ತ್ರೀಸಮೂಹದಲ್ಲಿ ಇಷ್ಟೊಂದು ಶರೀರಬಲ ಮನೋಬಲಗಳ ಹ್ರಾಸವುಂಟಾಗುವುದಕ್ಕೆ ಕಾರಣವಿಶೇಷಗಳೇನಾದರೂ ಇದ್ದರೆ ಅವು ಈ ರೀತಿಯವಾಗಿವೆ:—

೧. ಇಂದಿನ ಸುಶಿಕ್ಷಿತ ತರುಣಿಯರು ಸ್ವಂತದ ಆರೋಗ್ಯಕ್ಕಿಂತ ಶಾಲೆ-ಕಾಲೇಜುಗಳ ಅಭ್ಯಾಸದ ಕಡೆಗೇ ಹೆಚ್ಚಿಗೆ ಲಕ್ಷ್ಯವನ್ನು ಕೊಡುತ್ತಿರುತ್ತಾರೆ.

೨. ತಾವು ಕಲಿತವರೆಂಬ ಅಹಂಕಾರ-ಬುದ್ಧಿ ಇಂದಿನ ತರುಣಿಯರನ್ನು ಮನೆಗೆಲಸ ಮುಂತಾದ ಶಾರೀರಿಕಕಷ್ಟದ ಕಾರ್ಯಗಳನ್ನು ಮಾಡಗೊಡುವುದಿಲ್ಲ. ಶಾರೀರಿಕ ಕಷ್ಟದ ಕಾರ್ಯಮಾಡುವುದು ಅವರಿಗೆ ಕೀಳುತನದ್ದಾಗಿ ಕಾಣುವುದಲ್ಲದೆ, ತಲೆಹೊರೆಯೆಂದು ಎನಿಸತೊಡಗುವುದು. ಮಾನಸಿಕ ಪ್ರಗಲ್ಭತೆಯಷ್ಟೇ ಸುಶಿಕ್ಷಿತತೆಯ ಸಾರ-ಸರ್ವಸ್ವವೆಂಬ ತಪ್ಪು ತಿಳಿವಳಿಕೆ ಇವರಲ್ಲಿ ನೆಲೆಮಾಡತೊಡಗುವುದು.



೩. ಸೌಂದರ್ಯದ ಹುಸಿಕಲ್ಪನೆಗಳೂ ಸಾಮಾಜಿಕ ಆಂದೋಲನ ವಿಷಯದಲ್ಲಿರುವ ಹೆಂಗುಸರ ವಿಶಿಷ್ಟವಿಚಾರಗಳೂ ಅವರನ್ನು ಇಲ್ಲದ ಬುದ್ಧಿವಂತರನ್ನಾಗಿ ಮಾಡುತ್ತವೆ.

೪. ಇಂದಿನ ಸುಧಾರಣೆಯ ದಿನಗಳಲ್ಲಿ ಸಾಮಾಜಿಕ ವಿಚಾರಗಳ ತಿಕ್ಕಾ-ಮುಕ್ಕಾಟಗಳ ಆಘಾತ-ಪ್ರತ್ಯಾಘಾತಗಳನ್ನು ಸಹನೆಮಾಡಿಕೊಳ್ಳುವುದಕ್ಕೆ ನಮ್ಮ ಹೆಣ್ಣುಮಕ್ಕಳ ನರಮಂಡಲದಲ್ಲಿ ಎರಡು ಬಗೆಯ ಪ್ರವರ್ಧಮಾನವಾದ ಕಾರ್ಯಕ್ಷಮತೆಯ ಶಕ್ತಿ ಇರಬೇಕಾಗುವುದು. ಆದರೆ ಇಂದಿನ ಹೆಣ್ಣುಮಕ್ಕಳಲ್ಲಿ ಆ ಶಕ್ತಿಯು ಸಂಪೂರ್ಣ ಲುಪ್ತವಾಗಿಬಿಟ್ಟಿದೆ.

ಮೇಲೆ ಹೇಳಿದ ಮುಖ್ಯ ಕಾರಣಗಳೂ ಅಲ್ಲದೆ ಬೇರೆ ಕೆಲವು ಗೌಣಕಾರಣಗಳೂ ಸೇರಿ ನಮ್ಮ ಸ್ತ್ರೀವರ್ಗಕ್ಕೆ ಸರಿಯಾದ ಆರೋಗ್ಯಲಾಭವನ್ನು ಸಾಧಿಸಗೊಡವಾಗಿವೆ. ಈಗ ನಮ್ಮೆದುರು ಬಂದು ನಿಂತ ಪ್ರಶ್ನೆಯಾವುದೆಂದರೆ 'ಸರಿಯಾದ ಆರೋಗ್ಯ ಎಂದರೆ ಯಾವುದು?' ಎಂಬುದೆ. ಆದುದರಿಂದ ನಾವೀಗ ಅದರ ಬಗೆಗೆ ವಿಚಾರಮಾಡಿ, ಅದರ ಕೂಲಂಕಷ ಜ್ಞಾನವನ್ನು ಪಡೆಯುವುದೂ ಅಗತ್ಯದ ಸಂಗತಿಯಾಗಿದೆ. 'ಸರಿಯಾದ ಆರೋಗ್ಯ' ಎಂಬುದರಲ್ಲಿ ಅನೇಕ ಸಂಗತಿಗಳು ಸಮಾವಿಷ್ಟವಾಗುವುವು. ಆ ಅನೇಕ ಸಂಗತಿಗಳಲ್ಲಿ ನಾವೀಗ ಮುಂದೆ ಕ್ರಮಕ್ರಮವಾಗಿ ಹೇಳಲಿರುವ ಸಂಗತಿಗಳು ಪ್ರಾಮುಖ್ಯವಾದುವುಗಳು.



೯೧. ತೊರವೆ ರಾಮಾಯಣ ಸಾರಸಂಗ್ರಹ

ಶ್ರೀ. ವಿ. ಬಿ. ಬಿಳೇಅಂಗಡಿ ಎಲ್‌ಎಲ್. ಬಿ. ಹುಬ್ಬಳ್ಳಿ

ನಮ್ಮ ಹಳೆಯ ಕನ್ನಡ ಗ್ರಂಥಗಳ ಸಾರಸಂಗ್ರಹಗಳು ದಿನ-ದಿನಕ್ಕೆ ಹೆಚ್ಚುಹೆಚ್ಚಾಗಿ ಹೊರಕ್ಕೆ ಬರುತ್ತಿರುವುದು ಒಳ್ಳೆಯ ಚಿಹ್ನೆಯಾಗಿದೆ. ನಮ್ಮ ಹಳೆಯ ಗ್ರಂಥಗಳೆಲ್ಲ ಹೆಚ್ಚಾಗಿ 'ಧರ್ಮಮುಮಂ ಕಾವ್ಯಧರ್ಮಮುಮಂ' ಒಳಗೊಂಡುವು. ಅವುಗಳಲ್ಲಿಯ 'ಧರ್ಮ' ಎಂಬುದು ಮಾನವಕುಲಕ್ಕೆಲ್ಲ ಸಾಮಾನ್ಯವೆನಿಸಬಹುದಾದ ಸಹಜಧರ್ಮವಿರದೆ ಬೇರೆ ಬೇರೆ ಮತಾಚಾರ್ಯರು ಬೇರೆ ಬೇರೆಯ ಕಾಲದಲ್ಲಿ ಸಾರಿದ ಮತಧರ್ಮವಾಗಿದೆ. ಆದರೆ ಅವುಗಳಲ್ಲಿಯ ಕಾವ್ಯಧರ್ಮವು ಮಾತ್ರ ಸ್ವಾಭಾವಿಕವಾದುದಿದ್ದು ತ್ರಿಕಾಲದಲ್ಲಿಯೂ ಸರ್ವಜನಮಾನ್ಯವಾಗಿ ಮೆರೆಯುವಂತಿದೆ. ಆದುದರಿಂದಲೆ ಆ ಸಹಜಧರ್ಮದ ದೃಷ್ಟಿಯಿಂದ ನಮ್ಮ ಪ್ರಾಚೀನ ಕಾವ್ಯಗಳ ಸಾರಗಳನ್ನಾಯ್ದು ಸಂಗ್ರಹಿಸಬೇಕಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆಯಲ್ಲಿ ಈಗಾಗಲೆ ಹೊರಟಿರುವ ೪–೬ ಕಾವ್ಯಸಂಗ್ರಹಗಳು ಅದೇ ದೃಷ್ಟಿಯಿಂದ ಸಂಗ್ರಹಿತವಾಗಿದ್ದು ಸರ್ವರಿಗೂ ಆದರಣೀಯವಾಗಿವೆ.

ಪ್ರಸ್ತುತ ತೊರವೆ ರಾಮಾಯಣದ ಈ ಸಾರಸಂಗ್ರಹವನ್ನು ನೋಡಿದರೆ, ಮೇಲೆ ಹೇಳಿದ ಸಂಗ್ರಹಗಳ ಮಾಲಿಕೆಯಲ್ಲಿ ಇದಕ್ಕೆ ಸ್ಥಾನಸಿಕ್ಕುವುದು ಎಂತಹ ಮಾತೊ ! ಏಕೆಂದರೆ ಈ ಸಂಗ್ರಹದ ಉದ್ದೇಶ ಹೆಚ್ಚಾಗಿ ಪಠ್ಯಪುಸ್ತಕವಾಗಬೇಕೆಂಬುದರ ಕಡೆಗೆ ಇದೆ. 'ಮೊದಲ ನುಡಿ' ಯಲ್ಲಿ ಗ್ರಂಥಕರ್ತರು ತಮ್ಮ ಉದ್ದೇಶವನ್ನು ಸ್ಪಷ್ಟವಾಗಿ ಹೀಗೆಂದು ತಿಳಿಸಿದ್ದಾರೆ:

"ಈ ಸಂಗ್ರಹವು ಕನ್ನಡ ಪ್ರಾಥಮಿಕ ಶಾಲೆಯ ೪ ರಿಂದ ೭ ಈಯತ್ತೆಯ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಕನ್ನಡವನ್ನು ತಕೊಳ್ಳುವವರಿಗೂ ಉಪಯುಕ್ತವಾಗಿದೆ ಎಂದು ಸಂಗ್ರಾಹಕನು ತಿಳಿದಿರುವನು."

ಪಠ್ಯಪುಸ್ತಕವೇ ಸಂಗ್ರಾಹಕರ ಕಣ್ಣೆದುರಿಗಿದ್ದುದರಿಂದ, ತೊರವೆ ರಾಮಾಯಣದಲ್ಲಿಯ 'ಕಾವ್ಯಧರ್ಮ' ವನ್ನು ವಿಶದವಾಗಿ ಸಂಗ್ರಹಿಸುವ ಗೋಜಿಗೆ ಇವರು ಹೋಗಿಲ್ಲ. ಎಂತಲೆ ಈ ಸಂಗ್ರಹದಿಂದ ರಾಮಾಯಣದ ಸಮಗ್ರಕಥೆಯ ಕಲ್ಪನೆಯೂ ಬರುವಂತಿಲ್ಲ; ಕೆಲವೊಂದು ಪಾತ್ರಗಳನ್ನಾದರೂ ಪರಿಪೋಷಿಸಿ ತೋರಿಸಿದ್ದಾರೆಯೆ . . ಎಂದರೆ ಅದೂ ಇಲ್ಲ. ಅಲ್ಲಿಯಿಲ್ಲಿಯ ಒಂದೊಂದು ಸನ್ನಿವೇಶಗಳೊಳಗಿನ ಕೆಲವೊಂದು ಪದ್ಯಗಳನ್ನಾಯ್ದು ಹದಿನೈದು ಭಾಗಗಳಲ್ಲಿ ಸಂಗ್ರಹಿಸಿದ್ದಾರೆ. ಆದುದರಿಂದ ತೊರವೆ ರಾಮಾಯಣದ ಕಥನರೀತಿಯನ್ನು ಪೂರ್ಣವಾಗಿ ಅರಿತುಕೊಳ್ಳಬೇಕೆಂಬ ಪ್ರೌಢ ವಾಚಕರ ಆಕಾಂಕ್ಷೆಯನ್ನಿದು ಪೂರಯಿಸಲಾರದು. ಅದರಂತೆಯೆ ಕುಮಾರವಾಲ್ಮೀಕಿಯ ಪಾತ್ರನಿರ್ಮಿತಿಯ ಮಾದರಿಯೂ ಜಿಜ್ಞಾಸುಗಳಿಗೆ ಸಿಕ್ಕಲಾರದು.

ಇನ್ನು ಪಠ್ಯಪುಸ್ತಕವಾಗಲು ಇದು ತಕ್ಕುದಾಗಿದೆಯೆ ಎಂಬ ದೃಷ್ಟಿಯಿಂದ ನೋಡಿದರೆ ಆಗಲೂ ನಮಗೆ ನಿರಾಶೆಯೆ ಎನಿಸುವುದು. ಮೊದಲನೆಯದಾಗಿ ಸಂಗ್ರಹಕಾರರಿಗೆ ಶುದ್ಧ ಪ್ರತಿಯೆ ಸಿಕ್ಕದುದರಿಂದ ಇಲ್ಲಿಯ ಹಲವು ಪದ್ಯಗಳು ಅಶುದ್ಧವಾಗಿಯೆ ಮುದ್ರಿತವಾಗಿರುವುವು. ಅನೇಕಪದ್ಯಗಳಲ್ಲಿ ಶಬ್ದಗಳು ಬಿಟ್ಟು ಹೋದುದರಿಂದ ಅಲ್ಲಲ್ಲಿ ಛಂದೋದೋಷಗಳು ಕಾಣುತ್ತಿರುವುವು. ಪುಸ್ತಕದ ಕೊನೆಗೆ ಮೂರು ಪುಟಗಳ ಶುದ್ಧಾಶುದ್ಧಪತ್ರಕವಿದೆಯಾದರೂ ಅದಕ್ಕೆ ಸೇರಿಸಬೇಕಾದ ಮುದ್ರಣದೋಷಗಳು ಇನ್ನೂ ಎಣಿಕೆಯಿಲ್ಲದಷ್ಟು ಕಣ್ಣು ತಪ್ಪಿಸಿ ಉಳಿದಿವೆ. ಶಬ್ದಶುದ್ಧಿಯ ಕಡೆಗೆ ಸಂಗ್ರಾಹಕರ ಲಕ್ಷ್ಯವೆ ಇದ್ದಂತಿಲ್ಲ. ಮುದ್ರಣದಲ್ಲಿ ಪದಗಳನ್ನು ಸಿಕ್ಕಸಿಕ್ಕಲ್ಲಿ ಮುರಿದುದು ಅರ್ಥಗ್ರಹಣಕ್ಕೆ ತುಂಬ ತಡೆಯೆನಿಸುತ್ತಲಿದೆ. ಉದಾಹರಣೆಗಾಗಿ 'ಧರಣಿ ಜೇಶನ (ಪುಟ ೧)' 'ಕೋಧಿ ಸೈಲೇಸಾಗಿ (ಪುಟ ೨)' 'ಪಿತೃವಚನೋದಯುವ ನೆಲೆ (ಪುಟ೨)' 'ಮೆಲಣ ವರಾರೀಕ್ಷಿಸು (ಪುಟ ೨)' 'ನೋಲ ಲಹುದೇ (ಪುಟ೨).' ಈ ರೀತಿಯನ್ನು ಪುಸ್ತಕದುದ್ದಕ್ಕೂ ನೋಡಬಹುದು.

ಸಂಗ್ರಹವನ್ನು ಕೊಟ್ಟಾದ ಬಳಿಕ ಸಂಗ್ರಾಹಕರು 'ಕಠಿಣ ಶಬ್ದಗಳ ಅರ್ಥ' ವನ್ನೂ ಕೊಟ್ಟಿರುವರು. ಅವರಿಗೆ ದೊರೆತ ಅಶುದ್ಧ ಪ್ರತಿಯ ಮೂಲಕವೊ ಏನೊ, ಅನೇಕ ಪದಗಳ ಸರಿಯಾದ ಸಂದರ್ಭಾರ್ಥ ಸಂಗ್ರಾಹಕರಿಗೆ ಗೊತ್ತಾಗಿಲ್ಲ. ಉದಾಹರಣೆಗಾಗಿ ಮೊದಲನೆಯ ಪಾಠದ ೮ ನೆಯ ಪದ್ಯದಲ್ಲಿಯ 'ದುರುಳತನ ಬೇಕಧಿಕೃತರು ನಾವ್ಮೈಸಲೇ?' ಎಂಬಲ್ಲಿಯ 'ನಾವ್ಮೈಸಲೇ? ಎಂಬ ಪದಕ್ಕೆ 'ನಾವಷ್ಟೇ ಹಿರಿದು' ಎಂದು ಅರ್ಥ ಬರೆದಿದ್ದಾರೆ. 'ಐಸಲೆ' ಎಂದರೆ 'ಅಲ್ಲವೇ?' ಎಂದಿಷ್ಟೇ ಅರ್ಥ. 'ಬೀಳ್ಕೊಡೆ' ಎಂದರೆ 'ಅಪ್ಪಣೆ ಕೇಳಲು' ಎಂದಲ್ಲ (ಪುಟ ೧೦೩); 'ಅಪ್ಪಣೆ ಕೊಡಲು' ಎಂದಾಗುವುದು. 'ಕೌಳಿಕವ' ಎಂದರೆ 'ಕಟುಕರವನಾಗಿ' ಎಂದು ಹೇಗೆ ಆಗುವುದು? 'ಕೌಳಿಕ' ಎಂದರೆ ನೀಚತನ ಕಟುಕತನ, ಮೋಸಗಾರಿಕೆ ಎಂದು ಮಾತ್ರ ಆಗುವುದು. ೭ನೆಯ ಭಾಗದ ಎಂಟನೆಯ ಪದ್ಯದಲ್ಲಿ 'ತಗಡು ತನ' ಎಂದಿಲ್ಲ. 'ಅಗಡುತನ' ಎಂದು ಅಲ್ಲಿ ಬಿಡಿಸಿ ಅರ್ಥಮಾಡಬೇಕಾಗುವುದು. ಇದರಂತೆಯೆ ೮ ನೆಯ ಪಾಠದ ಮೂರನೆಯ ಪದ್ಯದಲ್ಲಿಯೂ ಪದಚ್ಛೇದದ ದೋಷವಾಗಿ ಅಲ್ಲಿ ಅರ್ಥಕ್ಕೆ ಅನರ್ಥವನ್ನುಂಟುಮಾಡಿದೆ.

"ಕಾಕಕೊಡಗವಿಂಡು ಪೊಗಳಿದ–
ಡಾಕುಳಿಗೆ ಹುಲಿಯಂಜುವುದೆ? ...."

ಇಲ್ಲಿ 'ಕಾಕುಕೊಡಗವಿಂಡು ಹೊಗಳಿದಡೆ ಆಕಳಿಗೆ ಹುಲಿಯಂಜುವುದೆ?' ಎಂದು ಸುಂದರವಾದ ಅರ್ಥವಿದೆ. ಅದನ್ನು ಬಿಟ್ಟು 'ಡಾಕುಳಿಗೆ' ಎಂಬ ಪದವನ್ನು ಕಲ್ಪಿಸಿ ಅದಕ್ಕೆ ಅರ್ಥ

ಹಚ್ಚುವ ವ್ಯರ್ಥ ಪ್ರಯತ್ನವನ್ನು ಸಂಗ್ರಾಹಕರು ಮಾಡಿದ್ದಾರೆ. 'ಗೋಷ್ಪದ' ಎಂದರೆ 'ಆಕಳ ದಡ್ಡಿ' ಯಲ್ಲ; ಕೆಸರಲ್ಲಿ ಮೂಡಿದ 'ಆಕಳ ಹಜ್ಜೆ'. 'ಸೇವಣ' ಎಂದರೆ ಹಗ್ಗವಲ್ಲ 'ಕೊರಳ ಸರ'. ಹೀಗೆಯೆ ಈ ಪಟ್ಟಿಯನ್ನು ಸಾಕಷ್ಟು ಒಳೆಯಿಸಿ ತೋರಿಸಬಹುದು. ಆದರೆ ಸ್ಥಳದ ಸಂಕೋಚ ತಡೆಯೊಡ್ಡುತ್ತಲಿದೆ.

— ಬಿ. ಸಿ. ಎಸ್. ರಾವ್.

೧೨೮. ಕನ್ನಡಕ

ಶ್ರೀಮಾನ್ 'ಅರುಣ' (ಎಚ್. ಎಸ್. ಪಾಟೀಲ ಎಂ. ಎ.) ಅವರು ಬರೆದುದು. ಬೆಲೆ ೦—೪—೦.

ಇದರಲ್ಲಿ ೧೨ ಕಿರುಗತೆಗಳು ಸಂಗ್ರಹಗೊಂಡಿವೆ. ಇವೆಲ್ಲವುಗಳಿಗೂ ನಮ್ಮ ಮಧ್ಯಮತರಗತಿಯ ಕೌಟುಂಬಿಕ ಜೀವನವೆ ವಸ್ತುಗಳನ್ನು ಒದವಿಸಿ ಕೊಟ್ಟಿದೆ. ವಸ್ತುಗಳೆಲ್ಲವೂ—ಕುಟುಂಬಗಳಲ್ಲಿ ತಮ್ಮ ಕೈಚಳಕ ತೋರಿಸುತ್ತ ಆಟ ನಡೆಯಿಸುತ್ತಿರುವ ಒಂದೊಂದು ಬಗೆಯ—ತೊಡಕನ್ನು ಎತ್ತಿ ತೋರಿಸುವಂತಹವು. ಇಲ್ಲಿ ತೋರಿಸಿದ ತೊಡಕುಗಳೆಲ್ಲವೂ ಹೆಚ್ಚಾಗಿ ಹೆಣ್ಣುಮಕ್ಕಳ ಬಾಳಿನಲ್ಲಿ ಬರುವಂತಹವೆ ಆಗಿವೆ. ಆದುದರಿಂದಲೆ ಇಲ್ಲಿಯ ಯಾವ ಕತೆ ತೆಗೆದುಕೊಂಡರೂ ಅದರಲ್ಲಿ ನಮ್ಮ ಕಣ್ಣೆದುರಿಗೆ ಕಾಣುವ ಪಾತ್ರಗಳು ಹೆಂಗುಸರವೇ ಇರುವುವು. ಮೊದಲನೆಯ ಕತೆಯಲ್ಲಿ ಕಲಿಯದ ಹೆಂಡತಿ 'ಅಂಜನಿ' ಮುಖ್ಯ ಪಾತ್ರ. ಎರಡನೆಯದರಲ್ಲಿ ಅತ್ತೆ 'ಮಧುರಕ್ಕ' ಸೊಸೆ 'ನೀರಾ' ಮುಖ್ಯ ಪಾತ್ರಗಳು. ಮೂರನೆಯದರಲ್ಲಿ ಭಿನ್ನಭಿನ್ನ ರುಚಿಯ ಅಕ್ಕ-ತಂಗಿಯರಾದ ಶೀತಲೆ-ಚಂದಲೆಯರು ನಾಯಕಿಯರು. ನಾಲ್ಕನೆಯದರಲ್ಲಿ ನೆರೆಹೊರೆಯಲ್ಲಿ ವಾಸ ಮಾಡಿಕೊಂಡಿರುವ 'ಚೆಲುವತಿ' ಎಂಬ ಸಕೇಶಾ ವಿಧವೆ ಮತ್ತು 'ರತ್ನಾಂಗಿ' ಎಂಬ ಗಂಡಸುಳ್ಳ ಗರತಿ ಇವರಿಬ್ಬರ ಮಧ್ಯೆ ಬಂದ ತೊಡಕೊಂದರ ಸುಂದರ ಚಿತ್ರವಿದೆ. ಐದನೆಯದರಲ್ಲಿ ಶಾಲೆಗೆ ಹೋಗುತ್ತಿರುವ 'ರಂಜನಿ-ಶುಭಾಂಗಿ-ರಂಜನಿಯ ತಂಗಿ' ಇವರ ಕೆಳೆತನದ ಕತೆಯಿದೆ. ಆರನೆಯದರಲ್ಲಿ ಇಂದಿನ ಸಿರಿವಂತಿಕೆಯಲ್ಲಿ ಕಾಣುವ ತಾಯಿಯ ಹೃದಯದ ಕೊರತೆಯನ್ನು ಕಾಶಿ-ಲತಿಕೆಯರ ಮಾತುಗಳಿಂದ ಚಿತ್ರಿಸಲಾಗಿದೆ. ಹೀಗೆಯೆ ಮುಂದಿನ ಕತೆಗಳಲ್ಲಿ 'ಜಾಣ ಮಾತೆಯರು ಬೇಕು', ತಾಯಿ-ತಂದೆಗಳ ಪ್ರೇಮದ ತಾರ-ತಮ್ಯ, ಆರ್ಥಿಕ ಸ್ವಾವಲಂಬನ ಮೊದಲಾದ ತೊಡಕುಗಳನ್ನು ಕುರಿತು ಹೇಳುವುದಕ್ಕೆ ತಕ್ಕ-ಪಾತ್ರಗಳನ್ನು ಲೇಖಕರು ನಿರ್ಮಿಸಿಕೊಂಡಿದ್ದಾರೆ. 'ಒಂದೆ ದಿನದ ಗುರುತು' 'ಪತ್ರ-ಚಿತ್ರ' 'ತನ್ನ ಕಾಲ ಮೇಲೆ' 'ಒಳ ಒಕ್ಕಲು' ಈ ಕತೆಗಳು ಕಲೆಯ ದೃಷ್ಟಿಯಿಂದಲೂ ಒಳ್ಳೆಯವೆಂದು ನಿಲ್ಲುವಂತಹವಾಗಿವೆ. ರೂಢಿಯ ಪದಗಳನ್ನೆ ಹೆಚ್ಚಾಗಿ ಬಳಸಿದುದರಿಂದ ಭಾಷಾಶುದ್ಧಿಯನ್ನಪೇಕ್ಷಿಸುವವರು ಈ ಪುಸ್ತಕದ ಭಾಷೆಯ ಬಗೆಗೆ ಆಕ್ಷೇಪವನ್ನೆತ್ತಬಹುದು. ಭಾಷೆಯ ದೃಷ್ಟಿಯಿಂದ ಅಲ್ಲಿಯಲ್ಲಿ ಕೈಯಾಡಿಸಿದರೆ ಈ ಪುಸ್ತಕ ಕನ್ನಡ ಶಾಲೆಯ ೫-೬ ನೆಯ ತರಗತಿಯ ವಿದ್ಯಾರ್ಥಿನಿಯರಿಗೂ ಮಾಧ್ಯಮಿಕ ಶಾಲೆಯ ೧-೨-೩ನೆಯ ತರಗತಿಯ ವಿದ್ಯಾರ್ಥಿನಿಯರಿಗೂ ಪಠ್ಯಪುಸ್ತಕವಾಗಲು ತಕ್ಕುದಾಗಬಹುದು. ತನ್ನ ಮೊದಲನೆಯ ಗೊಂಚಲವನ್ನಾಗಿ ಈ ಪುಸ್ತಕವನ್ನು ಪ್ರಕಟಿಸಿದ 'ರಂಗ-ಮಂಗ ರಂಜನೋದ್ಯಾನ (ಧಾರವಾಡ)' ವು ಇನ್ನೂ ಇಂತಹ ಹಲವು ಗೊಂಚಲುಗಳನ್ನು ಹೊರಡಿಸಿ ತನ್ನ ಸಂಕಲ್ಪದ ಸಿದ್ಧಿಯನ್ನು ಪಡೆಯಲೆಂದು ನಮ್ಮ ಹಾರಯಿಕೆ.

೧೨೪. ಸಂಗೀತ ಕಲಾಪ್ರವೇಶ

ಶ್ರೀ. ಭಾಸ್ಕರರಾವ ಬ್ಯಾಂಕರ್, ಶಿಕ್ಷಕರು ಶ್ರೀ ಸರಸ್ವತೀ ಸಂಗೀತ ವಿದ್ಯಾಲಯ, ಹುಬ್ಬಳ್ಳಿ ಅವರಿಂದ ರಚಿತವಾದುದು.

ಈ ಪುಸ್ತಕವು ಮೂರು ಭಾಗಗಳಲ್ಲಿ ವಿಭಾಗಿತವಾಗಿದ್ದು, ಮೊದಲನೆಯ ಭಾಗದಲ್ಲಿ ಸಂಗೀತಕಲೆಯ ಪರಿಚಯ ಮಾಡಿಕೊಟ್ಟಾದ ಮೇಲೆ ತಾಳ-ಸ್ವರಗಳ ಜ್ಞಾನವನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಸೂಚಿಸಲಾಗಿದೆ. ಬಳಿಕ ಹಾರ್ಮೋನಿಯಂ ಬಾರಿಸತಕ್ಕ ನಿಯಮಗಳನ್ನು—ತೀರ ಅಪರಿಚಿತರಿಗೆ ಕೂಡ ಬೋಧೆಯಾಗುವಂತೆ—ವಿವರ ವಿವರವಾಗಿ ಸುಲಭ ಭಾಷೆಯಲ್ಲಿ ಹೇಳಲಾಗಿದೆ. ಬಳಿಕ ಆರಂಭದ ಪಾಠಗಳಿಂದ ೯ ಪಾಠಗಳಲ್ಲಿ ಸ್ವರಗಳನ್ನು ಆವೃತ್ತಿ ಆವೃತ್ತಿಯಾಗಿ ಆರೋಹಣಾವರೋಹಣಕ್ರಮದಲ್ಲಿ ನುಡಿಸುವ ರೀತಿಯನ್ನು ವಿವರಿಸಲಾಗಿದೆ. ಮಿಕ್ಕ 'ಹಾರ್ಮೋನಿಯಂ ಶಿಕ್ಷಕ' ಗಳಿಗಿಂತ ಈ ಪುಸ್ತಕದಲ್ಲಿರುವ ಒಂದು ವೈಶಿಷ್ಟ್ಯವೆಂದರೆ ಯಾವಯಾವ ಸ್ವರಸ್ಥಾನ (ರೀಡ್) ಗಳನ್ನು ಯಾವ ಯಾವ ಬೆರಳುಗಳಿಂದ ನುಡಿಸಬೇಕೆಂಬುದನ್ನೂ ಕೊಟ್ಟಿರುವುದು. ಇದರಿಂದ ಹಾರ್ಮೋನಿಯಮಿನ ಪ್ರಥಮಪರಿಚಯ ಮಾಡಿಕೊಳ್ಳಲಿಕ್ಕೆ ತುಂಬ ಅನುಕೂಲವಾಗಿರುವುದು.

ಎರಡನೆಯ ಭಾಗದಲ್ಲಿ ೧ ಸತಾರ ಕಲಿಯತಕ್ಕ ನಿಯಮಗಳು (ಮತ್ತು ಅದರ ಕೆಲವು ಗತಿಗಳು), ೨ ಕೊಳಲು ಕಲಿಯತಕ್ಕ ನಿಯಮಗಳು, ೩ ದಿಲ್‌ರುಬಾ ಕಲಿಯತಕ್ಕ ನಿಯಮಗಳು, ೪ ಫಿಡಲ್ ಕಲಿಯತಕ್ಕ ನಿಯಮಗಳು, ೫ ಜಲತರಂಗ ಕಲಿಯತಕ್ಕ ನಿಯಮಗಳು ಇವುಗಳನ್ನೆಲ್ಲ ಸುಬೋಧವಾಗುವಂತೆ ವಿವರಿಸಲಾಗಿದೆಯಲ್ಲದೆ ಕೆಲವೊಂದು ಗೀತಸ್ವರಪ್ರಸ್ತಾರ (ನೋಟೆಶನ್) ಗಳನ್ನೂ ಕೊಡಲಾಗಿದೆ.

ಮೂರನೆಯ ಭಾಗದಲ್ಲಿ ಮೃದಂಗ–ತಬಲಾ ಬಾರಿಸತಕ್ಕ ನಿಯಮಗಳೂ ಬೇರೆ ಬೇರೆ ತಾಳಗತಿಗಳ ಅಕ್ಷರ (ಬೋಲ್) ಗಳೂ ಇವೆಯಲ್ಲದೆ, ಕೊನೆಗೆ ಅನೇಕ ಕನ್ನಡ–ಹಿಂದುಸ್ಥಾನಿ–ಮರಾಟಿ ಹಾಡುಗಳನ್ನು ಸ್ವರಪ್ರಸ್ತಾರ, ತಾಳಪ್ರಸ್ತಾರಗಳೊಂದಿಗೆ ಕೊಡಲಾಗಿದೆ. ಬೇರೆ ಬೇರೆ ವಾದ್ಯಗಳನ್ನು ಉಪಯೋಗಾರಂಭದಲ್ಲಿ ಹೇಗೆ ಹೇಗೆ ಕೂಡಿಸಿಕೊಳ್ಳಬೇಕೆಂಬ ವಿಧಾನವನ್ನೂ ಅಲ್ಲಲ್ಲಿ ಹೇಳಲಾಗಿದೆ. ಕುಂದಗೋಳದ ಶ್ರೀ. ಸವಾಯಿಗಂಧರ್ವರೂ, ಶಿವಯೋಗಮಂದಿರದ ಗಾನವಿಶಾರದ ಶ್ರೀ. ಪಂಚಾಕ್ಷರಿ ಗವಾಯಿಗಳೂ, ಹಾವೇರಿಯ ಸಂಗೀತವಿದ್ವಾನ್ ಜಯದೇವಸ್ವಾಮಿಗಳೂ ಧಾರವಾಡದ ಪ್ರಸಿದ್ಧ ಸಂಗೀತಪಟುಗಳಾದ ಶ್ರೀ. ಪಿತ್ರೇ ವಕೀಲರೂ ಈ ಪುಸ್ತಕವನ್ನು ಮನಸಾರೆ ಪ್ರಶಂಸಿಸಿದ್ದಾರೆ. ಸಂಗೀತ ಕಲಿಯಲು ಆಶಿಸುವವರೆಲ್ಲ ಈ ಪುಸ್ತಕದಿಂದ ತಕ್ಕ ಪ್ರಯೋಜನ ಪಡೆಯಬೇಕೆಂದು ನಮ್ಮ ಆಶೆ.

—ಸಂ. . . . . ಕ.

ನಾಳಿಯ ತಾಯಂದಿರು

ಉಪನ್ಯಾಸಕನೊಬ್ಬ ನಿಂತು ಸ್ತ್ರೀಶಿಕ್ಷಣವನ್ನು ಕುರಿತು ಮಾತನಾಡುತ್ತಿರುವಾಗ ಹೀಗೆ ಹೇಳತೊಡಗಿದ್ದ :

"ಸ್ತ್ರೀಯರಿಗೆ ಕೊಡಬೇಕಾದ ಶಿಕ್ಷಣ ಎಂಥಾದಿರಬೇಕಂಬೂದರ ಬಗ್ಗೆ....ನಾವು ಭಾಳ ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಬೇಕಾಗತ್ತದ. ಯಾಕಂದರೆ ಇಂದಿನ ಹುಡುಗಿಯರ ನಾಳೆ ತಾಯಂದಿರಾಗುವವರು......."

ತುಂಟನಾದ ಸಭಿಕನೊಬ್ಬ ಕೂಗಿ ಹೇಳಿದ :

"ನಾನು ವಿಶ್ವಾಸದಿಂದ ಹೇಳಬಲ್ಲೆ. ಈಗ ನೀವು ಹೇಳಿದಷ್ಟು ಕಡಿಮೆ ಅವಧಿಯಲ್ಲೇನೂ ಅವರು ತಾಯಂದಿರಾಗುವ ಸಂಭವವಿಲ್ಲ. ನೀವು ಅಷ್ಟೊಂದು ಯೋಚನೆಯನ್ನು ಮಾಡಬೇಕಾದ ಕಾರಣವೂ ಇಲ್ಲ!"

* * *

ಉದ್ಯೋಗದ ವಿವರಣೆ

"ಅಲ್ರೀ, ನಿಮ್ಮ ತಮ್ಮ ಗೋವಿಂದ ಈಗ ಯಾವ ಉದ್ಯೋಗ ಕೈಕೊಂಡಾನ?"

"ಗೋವಿಂದನ್ನ ಕೇಳಿದಿರಾ? ಅಂವ ನೋಡ್ರೆಪಾ ಸಾಹಿತ್ಯ-ನಿರ್ಮಾಣದ ಕೆಲಸಾ ಕೈಕೊಂಡಾನ!"

"ಮತ್ತ ಇನ್ನೊಬ್ಬ ತಮ್ಮ ಗೋಪಾಲ ಏನು ಮಾಡತಾನ?"

"ಅಂವಾ ರಾಜಕಾರ್ಯದ ಕೆಲಸಾ ಹಿಡದಾನ"

"ನಿಮ್ಮ ಆ ಮಾಧವ ಇದ್ದಾನಲಾ—ಅಂವ ಯಾವ ಕೆಲಸಾ ಮಾಡತಾನ?"

"ಅಂವs? ತಾಲೂಕ ಕಚೇರಿಯೊಳಗ ಉಮೇದವಾರಿಕೀ ಮಾಡತಾನ!"

"ಸರಿ; ನೀವೇನು ಮಾಡತೀರಿ?"

"ಒಕ್ಕಲತನಾ ಮಾಡತೀನಿ; ಗೋವಿಂದ, ಗೋಪಾಲ, ಮಾಧವ ಇವರೆಲ್ಲರದೂ ಹೊಟ್ಟೀ ಬಟ್ಟೀ ವ್ಯವಸ್ಥಾ ನೋಡತಿರತೀನಿ!"

* * *

ಗುಂಡನ ಉತ್ತರ

ಮಾಸ್ತರ್ :— ಏ ಗುಂಡ್ಯಾ ಹೇಳಪಾ, ನಿನ್ನನ್ನು ಉಂಟು ಮಾಡಿದವರು ಯಾರು?

ಗುಂಡ :— ನನಗ ಗೊತ್ತಿಲ್ಲರಿ ಮಾಸ್ತರ್!

ಮಾಸ್ತರ್ :— ಥೂ ಮೂರ್ಖಾ! ಹಾಂಗಾದರ ಹೇಳು....ನಿಮ್ಮ ಮನೀ ಮುಂದಿರುವ ಸುಂದರವಾದ ಹೂವಿನ ಗಿಡಗಳನ್ನು ಯಾರು ಉಂಟು ಮಾಡಿದರು?

ಗುಂಡ :— ನಾವು ಆ ಮನೀಗೆ ಮೊನ್ನೆ ಮೊನ್ನೇ ಬಂದಿದ್ದೀವಿರಿ ಮಾಸ್ತರ್!

* * *

ಈಗs ಹೊಡೆದು ಬಿಡು

ತಾಯಿ :— ಇಲ್ನೋಡು, ನೀನು ಇನ್ನೆಂದೂ ಚುಟ್ಟಾ ಸೇದೂದಿಲ್ಲಾ ಅಂದರ ಈಗ ಹೊಡಿಯೂದಿಲ್ಲ ತಿಳೀತs!

ಮಗ :— ಈಗs ಹೊಡೆದs ಬಿಡವ್ವಾ, ಸುಳ್ಯಾಕ ಮತ್ತ!

* * *

ಭೂಗೋಲ ಪಾಠ

ಅಧ್ಯಾಪಕ :— ಭೂಮಿ ದುಂಡಗಿದೆಯೆಂಬುದನ್ನು ನೀನು ಹೇಗೆ ಹೇಳತೀಯಪ್ಪಾ ಗುಂಡ್ಯಾ!

ಗುಂಡ :— ನಾ ಹಾಂಗ ಹೇಳೂದೇ ಇಲ್ಲರಿ ಮಾಸ್ತರs!

* * *

ಮಾಸ್ತರಿಗೆ ಗೊತ್ತೇ ಇಲ್ಲ!

ಗುಂಡ :— ಅಲ್ಲಪಾ ಅಪ್ಪಾ, ತನಗಿಂತಾ ಸಣ್ಣವರನ್ನ ಹೊಡೀಬಾರದೂ ಅಂತ ನೀ ಹೇಳತಿರತೀಯಲ್ಲs ಮ್ಯಾಲಿಂದ ಮ್ಯಾಲೆ!

ತಂದೆ :— ಹೌದು ಮಗೂ, ಹಾಂಗ ಹೊಡಿಯೂದು ಭಾಳ ಕೆಟ್ಟದು.

ಗುಂಡ :— ಹಾಂಗಾದರ ನಮ್ಮ ಸಾಲಿಗೆ ಬಂದು, ಮಾಸ್ತರಿಗೆ ಈ ಮಾತು ನೀ ಹೇಳಬಾರದs? ಅವರಿಗಿದು ಗೊತ್ತೇ ಇಲ್ಲಾಂತ ಕಾಣಸತದ!

* * *

ಯಾರು ದುರ್ದೈವಿಗಳು?

"ಏನಪಾ, ಸಾಲ ಕೊಟ್ಟವರು ದಿನದಿನಾ ನಿನ್ನ ಮನೀಗೆ ಎಡತಾಕೂದಾಗೇದ. ನಿಜವಾಗಿಯೂ ದುರ್ದೈವಿ ನೋಡು ನೀನು!"

"ಅಲ್ಲೋ, ದಿನದಿನಾ ಜೋಡಿನ ಪರಿವಿ ಇಲ್ಲದ ಎಡತಾಕತಿರುವವರು ದುರ್ದೈವಿಗಳೋ, ರಾಜನ್ಹಾಂಗ ಮನ್ಯಾಗ ಕೂತಿರುವ ನಾನು ದುರ್ದೈವಿಯೋ?

* * *

ಒಳ್ಳೇ ಗಿರಾಕಿ

"ನಾನು ತಮ್ಮ ಅಂಗಡಿಯಿಂದ ನಿನ್ನೆ ಈ ಪುಸ್ತಕ ಕೊಂಡು-ಕೊಂಡು ಒಯ್ದಿದ್ದೆ. ಈಗ ಇದನ್ನು ತೆಗೆದುಕೊಂಡು ನಮ್ಮ ಹಣ ನನಗೆ ತಿರುಗಿ ಕೊಟ್ಟು ಬಿಡ್ರಿ!"

"ಯಾಕ್ರೀ ಏನಾಗೇದ ಆ ಪುಸ್ತಕಕ್ಕ?"

"ಇನ್ನೇನಾಗಬೇಕು? ಇಡಿಯ ಪುಸ್ತಕ ಎಲ್ಲಾ ಓದಿ ನೋಡಿದೆ. ಬರೇ ಪತ್ತೇದಾರಿ ಕಾದಂಬರಿಯಿಂದsನs ತುಂಬೇದ! ಪತ್ತೇದಾರೀ ಕಾದಂಬರೀ ಹತ್ತರಿಟುಕೊಂಡsರೇ ಏನು ಮಾಡೋದು?



ನಾರ್ವೆಯಲ್ಲಿ ನಾಝಿ ನರಕ

ಕಳೆದ ಎಂಟು ತಿಂಗಳುಗಳಿಂದ ಯುರೋಪದಲ್ಲಿ ನಡೆದ ಯುದ್ಧವು ಅನೇಕ ರೀತಿಗಳಿಂದ ಹಿಟ್ಲರನ ವಿಶ್ವವಿನಾಶರೂಪ ದರ್ಶನವನ್ನು ಕೊಡುತ್ತಿದೆ. ಆಸ್ಟ್ರಿಯಾ, ಜೆಕೊಸ್ಲೊವಾಕಿಯಾ ಮತ್ತು ಪೋಲಾಂಡ ದೇಶಗಳನ್ನು ಕಪಟತನದಿಂದ, ಕ್ರೌರ್ಯದಿಂದ, ಶಕ್ತಿಯ ಸೊಕ್ಕಿನಿಂದ ನುಂಗಿದ ಹಿಟ್ಲರನಿಗೂ ಇನ್ನೂ ಸಮಾಧಾನವಾದಂತಿಲ್ಲ. ಅನೇಕ ವರ್ಷಗಳಿಂದ ವಸಾಹತುಗಳಿಗಾಗಿ ಬೇಡಿಕೆಗಳನ್ನು ಒಡ್ಡುತ್ತಿದ್ದ ನಾಝೀನಾಯಕನು ಕೇವಲ ಸುತ್ತುಮುತ್ತಲಿನ ಸಣ್ಣ ರಾಷ್ಟ್ರಗಳನ್ನು ನುಂಗುವುದರಲ್ಲಿಯೆ ತೊಡಗಿದ್ದೊಂದು ಆಶ್ಚರ್ಯ. ಈ ನಿರರ್ಥಕವೆನಿಸುವ ಈ ಜನ-ಧನನಾಶವು ಇಂದು ಎರಡೂ ಪಕ್ಷದವರಿಗೆ ಅನಿವಾರ್ಯವೆನಿಸಿದೆ ! ಸದ್ಯಕ್ಕೆ ಇಂಗ್ಲೆಂಡಿನ ಸಾಮ್ರಾಜ್ಯಶಾಹಿತ್ವದ ಕಳಸವನ್ನು ಕೆಡಹುವುದಷ್ಟೆ ಹಿಟ್ಲರನ ಉದ್ದೇಶ, ಹಿಟ್ಲರನನ್ನು ಹಣ್ಣುಮಾಡುವುದು ಬ್ರಿಟಿಶರ ಉದ್ದೇಶ ಎಂಬುದಿಷ್ಟೆ ಢಾಳವಾಗಿ ಕಾಣುತ್ತಿದೆ. ಫ್ರಾನ್ಸ್-ಜರ್ಮನಿಗಳ ನಡುವೆ ಇದುವರೆಗೆ ಯಾವ ರೀತಿಯಿಂದಲೂ ಕದನದ ಪ್ರಸಂಗಗಳೆ ಘಟಿಸಿಲ್ಲ ! ಅಂತೂ ಉಚ್ಚತರಗತಿಯದೆಂದು ಹೇಳಿಕೊಳ್ಳುವ ಪಾಶ್ಚಾತ್ಯಸಂಸ್ಕೃತಿಯಲ್ಲಿ ಪಾಶವೀವೃತ್ತಿಯೆ ಎದ್ದುನಿಂತಿದೆ ಎಂದು ಹೇಳಬಹುದೆ ! ಇಲ್ಲವಾದರೆ ನಾರ್ವೆ ದೇಶದಲ್ಲಿ ನಡೆದ ನಿರರ್ಥಕ ಹಾವಳಿಯ ಮರ್ಮವೇನು ? ರಶಿಯಾ ಫಿನ್ಲಾಂದಿನೊಡನೆ ಒಪ್ಪಂದಮಾಡಿಕೊಂಡಾಕ್ಷಣ ಇಂದಿನ ಪ್ರಸಂಗವು ಅನಿವಾರ್ಯವಾಯಿತು. ಉತ್ತರಸಮುದ್ರದಲ್ಲಿ ಜರ್ಮನಿಗೆ ಸಂಚಾರವಾಗಲಿ ವ್ಯೂಹಸ್ಥಾನ (Stratagic points)ಗಳಾಗಲಿ ದೊರಕದಂತಾಯಿತು. ಜರ್ಮನಿಗೆ ಸರಕುಗಳನ್ನು ಮುಟ್ಟಿಸುವುದು—ಬ್ರಿಟಿಶ್ ನೌಕಾಬಲದ ವಿರೋಧಕ್ಕಾಗಿ—ಅಶಕ್ಯವಾಯಿತು. ಆ ಸೌಕರ್ಯವನ್ನೂ ಸಾಮರ್ಥ್ಯವನ್ನೂ ದೊರಕಿಸಲು ಜರ್ಮನಿಗೆ ಡೆನ್ಮಾರ್ಕ್ ಮತ್ತು ನಾರ್ವೆ ದೇಶಗಳನ್ನು ಆಕ್ರಮಿಸುವುದು 'ಅನಿವಾರ್ಯ' (!) ಎನಿಸಿತು.

ಶಕ್ತಿ ಮತ್ತು ಶಾಂತಿ

ಇಪ್ಪತ್ತು ವರ್ಷಗಳ ಹಿಂದೆ ರಾಷ್ಟ್ರಸಂಘವನ್ನು ಅಸ್ತಿತ್ವದಲ್ಲಿ ತಂದಾಗ ಇಂತಹ ಬಕಾಸುರವೃತ್ತಿಯ ರಾಜನೀತಿಯು ತಲೆದೋರೀತೆಂಬುದು ಅಸಂಭವನೀಯವೆನಿಸಿದ್ದಿತು. ಆದರೂ ಇಂದು ಅಂತಹ ರಾಜನೀತಿಗಾಗಿ ಜಗತ್ತಿನಲ್ಲಿ ಕೊಲೆ-ಸುಲಿಗೆಗಳ ರಾಜ್ಯ ನಡೆದಿದೆ. ಯುದ್ಧದಲ್ಲಿ ಜರುಗಬಹುದಾದ ಪ್ರಾಣಹಾನಿಗಿಂತಲೂ ಘಾತುಕವಾದ ಸಂಗತಿ ಈ ಯುದ್ಧದ 'ತತ್ತ್ವ'ದಲ್ಲಿ ಅಡಕವಾಗಿದೆ. ಇದುವರೆಗೆ ಹಿಟ್ಲರನು ಜನಾಂಗವಾದದ ಪ್ರಚಾರವನ್ನು ಮಾಡುತ್ತಿದ್ದನು. ಇಂದು ಆ ಪ್ರಚಾರವನ್ನು ಬಿಟ್ಟು 'ಜಟ್ಟಿಗಳೆ ಜನಾಂಗ' ಎಂಬ ಹೊಸ 'ತತ್ತ್ವ'ವನ್ನು ಸಾರುತ್ತಲಿದ್ದಾನೆ. ಈ ಹಿಟ್ಲರವಾದದ ಅತಿರೇಕವಾದರೆ ಜಗತ್ತಿನಲ್ಲಿ ಜರ್ಮನರಲ್ಲದೆ ಬೇರೆ ಯಾರೂ ಇರುವಂತಿಲ್ಲ ಎಂಬ ಸ್ಥಿತಿ ಬರುವುದು; ಅತಿರೇಕವಾಗದಿದ್ದರೆ ಕಸುವಿದ್ದವನು ಕಸುವಿಲ್ಲದವನನ್ನು ಕಿವುಚಿಡುವುದೆ ನ್ಯಾಯವೆನಿಸುವುದು. ಹಿಟ್ಲರನು ಗೆದ್ದರೆ ಜಗತ್ತಿಗೆ ಶಾಂತಿ ಇಲ್ಲ ಎಂಬುದಂತೂ ಖಂಡಿತ; ಹಿಟ್ಲರನು ಸೋತರೂ ಜಗತ್ತಿನಲ್ಲಿ ಶಾಂತಿ ಸಾಮ್ರಾಜ್ಯದ ಸ್ಥಾಪನೆಯಾದೀತೇ ಎಂಬುದು ಸಂದೇಹ. ಯಾಕೆಂದರೆ ಹಿಟ್ಲರನನ್ನು ಹಣ್ಣುಮಾಡಲು ಸಾಕಾಗುವಷ್ಟು ಸಾಮರ್ಥ್ಯವನ್ನು ಯಾರು ಗಳಿಸುವರೊ ಅವರು ಕೂಡಲೆ ಇನ್ನೊಬ್ಬರ ಅಸೂಯೆಗೆ, ತನ್ಮೂಲಕ ದ್ವೇಷಕ್ಕೆ ಪ್ರೇರಕರಾಗುವರು. ಶಕ್ತಿ-ಸಾಮ್ರಾಜ್ಯದ ಚಕ್ರವು ಹೀಗೆ ನಿರಂತರ ತಿರುಗಿದರೆ ಶಾಂತಿ-ಸಾಮ್ರಾಜ್ಯವು ಭೂಲೋಕವನ್ನು ಬಿಟ್ಟು ಕೈಲಾಸವಾಸಿಯಾದಂತೆಯೆ.

ಬೇಗೆ ಹಬ್ಬುವುದೆ ?

ಯುರೋಪದ ಸದ್ಯಃಸ್ಥಿತಿಯನ್ನು ನೋಡಿದರೆ ತೀವ್ರದಲ್ಲಿಯೆ ಎಂಕ್ಕರಾಷ್ಟ್ರಗಳೂ ಪಕ್ಷಾಪಕ್ಷತೆಯನ್ನು ವಹಿಸಬಹುದೆಂದೂ, ಯುದ್ಧವು ಜಾಗತಿಕ ಸ್ವರೂಪವನ್ನು ತಾಳಬಹುದೆಂದೂ ತೋರುವುದು. ಪ್ರತಿಯೊಂದು ರಾಷ್ಟ್ರಕ್ಕೂ ಯುದ್ಧದಲ್ಲಿ ಧುಮುಕಲು ಆದೇ ಮತ್ತು ಒಂದೇ ನೆವವಿದೆ. ಉತ್ತರಸಮುದ್ರದಲ್ಲಿ ಯಾರು ಪ್ರಬಲರಾದರೂ ತನ್ನ ಸುರಕ್ಷಿತತೆಗೆ ಧಕ್ಕೆ ತಗಲುವುದು ಎಂಬ ನೆವ ರಶಿಯಾಕ್ಕೆ; ಭೂಮಧ್ಯ ಸಮುದ್ರದಲ್ಲಿ ಬೇರೆ ಹಡಗುಪಡೆಯ ಸುಳಿದಾಟ ಹೆಚ್ಚಿದರೆ ತನ್ನ ಸ್ವಾಸ್ಥ್ಯಕ್ಕೆ ಧಕ್ಕೆ ತಗಲುವುದೆಂಬ ನೆವ ಇಟಲಿಗೆ: ಡಚ್ ಈಸ್ಟ ಇಂಡಿಯಾದಲ್ಲಿ ಬೇರೊಬ್ಬರ ಆಕ್ರಮಣವಾದರೆ ತನ್ನ ಅಸ್ತಿತ್ವಕ್ಕೆ ಧಕ್ಕೆ ತಗಲುವುದೆಂಬ ನೆವ ಜಪಾನಿಗೆ;

ಗ್ರೀನ್‌ಲಾಂಡನ್ನು ಯಾರು ಆಕ್ರಮಿಸಿದರೂ ತನ್ನ ಅಧಿಕಾರಕ್ಕೆ ಧಕ್ಕೆ ತಗಲುವುದೆಂಬ ನೆವ ಅಮೇರಿಕೆಗೆ. ಪ್ರತಿಯೊಂದು ರಾಷ್ಟ್ರವೂ ತನ್ನ ನೆವವನ್ನು ಮುಂದೊಡ್ಡಿ, ಪರಸ್ಪರ ಅವಿಶ್ವಾಸದ ವಾತಾವರಣವನ್ನು ಹರಡಿಸಿ ಯುದ್ಧದ ಅತಿರೇಕಕ್ಕೆ ಕಾರಣವಾಗಬಹುದು. ರಶಿಯಾದೇಶವು ಸ್ವೀಡನ್‌ದೇಶವನ್ನು ಇದುವರೆಗೆ ಯಾಕೆ ಆಕ್ರಮಿಸಿಲ್ಲ ಎಂಬುದು ಸೋಜಿಗದ ಮಾತಾಗಿದೆ. ಜರ್ಮನಿಗಾಗಿ ತೋರಿಸುತ್ತಿರುವ ಗೆಳೆತನಕ್ಕಾಗಿಯಾದರೂ ಇಟಲಿಯು ಭೂಮಧ್ಯಸಮುದ್ರದಲ್ಲಿ ಕಾಲು ಕೆದರಿ ಜಗಳ ಹೂಡಬಹುದಾಗಿದೆ; ಹಾಗೆ ಮಾಡಿದರೆ ಇಂಗ್ಲೆಂಡಿಗೆ ತನ್ನ ಹಡಗುಪಡೆಯ ವಿಶೇಷಭಾಗವನ್ನು ಉತ್ತರಸಮುದ್ರದಲ್ಲಿ ಶೇಖರಿಸುವುದು ಅಶಕ್ಯವಾಗಿ ಹಿಟ್ಲರನ ಮೇಲೆನಡೆಯಿಸಿದ ದಾಳಿಯನ್ನು ಸಡಿಲಿಸಬೇಕಾಗುವುದು. ಅಂತಹ ಪ್ರಸಂಗದಲ್ಲಿ ಗ್ರೀನ್‌ಲಾಂಡಿನ ಆಕ್ರಮಣಕ್ಕಾಗಿ ಇಂಗ್ಲೆಂಡ್-ಜರ್ಮನಿಗಳಲ್ಲಿ ಸ್ಪರ್ಧೆಯಾಗುವುದು ಖಂಡಿತ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಯುದ್ಧಕ್ಕೆ ತೀವ್ರದಲ್ಲಿಯೆ ಹೆಚ್ಚು ಭೀಕರವಾದ ಮತ್ತು ಜಾಗತಿಕ ಸ್ವರೂಪ ಪ್ರಾಪ್ತವಾಗುವುದು 'ಅನಿವಾರ್ಯ'ವಾಗಿದೆ.

ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ

ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಬೇರೆ ಶಬ್ದಗಳಿಂದ ಸೂಚಿಸುವಂತೆಯೆ ಇಲ್ಲ. ತನ್ನ ಬೇಡಿಕೆಗಳನ್ನು ಮನ್ನಿಸದಿದ್ದರೆ ಸವಿನಯ ಶಾಸನಭಂಗವನ್ನು ಹೂಡಲು ಕಾಂಗ್ರೆಸು ಆತುರವಾಗಿದೆ; ಕಾಂಗ್ರೆಸಿನ ಬೇಡಿಕೆಗಳನ್ನು ಮನ್ನಿಸಿದರೆ ವಿರೋಧ ಚಳವಳವನ್ನೆಬ್ಬಿಸುವ ಹೆದರಿಕೆಯನ್ನು ಮುಸ್ಲಿಂ ಲೀಗವು ತೋರಿಸುತ್ತಲಿದೆ; ತಮಗೆ ಸ್ಥಾನ-ಸಂರಕ್ಷಣೆಗಳಿಲ್ಲದ ಯಾವ ಘಟನೆಗೂ ತಮ್ಮ ಒಪ್ಪಿಗೆ ಇಲ್ಲ ಎಂದು ಸಂಸ್ಥಾನಿಕರು 'ಕಿರಿಕಿರಿ' ಮಾಡುತ್ತಲಿದ್ದಾರೆ. ಇವರೆಲ್ಲರ ಧೋರಣೆಯೂ ದೇಶಕ್ಕೆ ಘಾತುಕವಾಗಿದೆ ಎಂದು ಪ್ರಾಗತಿಕ (?) ಪಕ್ಷದವರು ಹರಿತಸವನ್ನು ನಡೆಯಿಸಿದ್ದಾರೆ. ಬಾಗಿಲುಮುಚ್ಚಿಕೊಂಡು, ಮನೆಯೊಳಗೆಯೆ ಇದ್ದುಕೊಂಡು ನೆರೆಮನೆಯವರೊಡನೆ ವಾದನಡೆಯಿಸುವಂತಹ ನಿಷ್ಪ್ರಯೋಜಕ ಪರಿಸ್ಥಿತಿ ಈ ಬೇರೆ ಬೇರೆ ಪಕ್ಷಗಳ ಧೋರಣೆಯಿಂದ ಪ್ರಾಪ್ತವಾಗಿದೆ. ಒಬ್ಬರೊಬ್ಬರು ಇದಿರಾಗಿ ಮಾತನಾಡಿದರೆ ವಾದ ಮುಂದೆ ಸಾಗಬಹುದಾಗಿದೆ. ಆದರೆ ಒಳಗಿನಿಂದ ತಮ್ಮಷ್ಟಕ್ಕೆ ಮಾತನಾಡುವಾಗ ಎಲ್ಲರೂ ಏಕಕಾಲಕ್ಕೆ ಮಾತನಾಡಿಯಾಗಲಿ, ಒಬ್ಬರೊಬ್ಬರ ಮಾತಿಗೆ ಸಂಬಂಧವೆ ಇಲ್ಲದಂತಾಗಿಯಾಗಲಿ ಪರಿಸ್ಥಿತಿ ನಿಂತಲ್ಲಿಯೆ ನಿಲ್ಲುವುದು; ಇಂದು ನಿಂತುದಾದರೂ ಹಾಗೆಯೆ.

ಮುಸ್ಲಿಂ ಲೀಗಿನ ಮನೆಮುರುಕತನ

ಕಾಂಗ್ರೆಸಿನ ಬೇಡಿಕೆಯನ್ನೂ ಧೋರಣೆಯನ್ನೂ ಈ ಮೊದಲೇ ಊಹಾಪೋಹವಾಗಿ ಚರ್ಚಿಸಿದ್ದೇವೆ. ಅನೇಕ ವರ್ಷಗಳಿಂದ ತಾನಿಟ್ಟುಕೊಂಡ ಧ್ಯೇಯಕ್ಕಾಗಿಯೆ ಕಾಂಗ್ರೆಸು ಬೇಡಿಕೆಯನ್ನು ಹೂಡಿದೆ, ಇದರಲ್ಲಿ ಅನಿಶ್ಚಿತವಾದುದಾಗಲಿ ವಿಸಂಗತವಾದುದಾಗಲಿ ಯಾವುದೂ ಇಲ್ಲ ಎಂಬುದನ್ನೂ ವಿವರಿಸಿದ್ದೇವೆ. ನಿಜವಾಗಿ ನೋಡಿದರೆ ಮುಸ್ಲಿಂ ಲೀಗಿನ ಧೋರಣೆಯೆ ಅನಿಶ್ಚಿತವಾಗಿದೆ, ವಿಸಂಗತವಾಗಿದೆ. ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೆ ಧ್ಯೇಯವೆಂದು ಮೊದಲು, ಹಿಂದುಸ್ಥಾನದ ಸ್ವಾತಂತ್ರ್ಯವೆಂದರೆ ಮುಸಲ್ಮಾನರ ಹಕ್ಕುಬಾಧ್ಯತೆಗಳ ಸಂರಕ್ಷಣೆ ಎಂದು ಮತ್ತೊಮ್ಮೆ, ಮುಸಲ್ಮಾನರ ಸಂರಕ್ಷಣೆ ಎಂದರೆ ಮುಸಲ್ಮಾನರಿಗಾಗಿ ದೇಶವನ್ನೆ ವಿಭಾಗ ಮಾಡುವುದು ಎಂದು ಈಗ ಕೊನೆಗೆ ಹಿಂದುಸ್ಥಾನದ ಸ್ವಾತಂತ್ರ್ಯ ಎಂದರೆ ಹಿಂದುಸ್ಥಾನದಲ್ಲಿ ಮುಸಲ್ಮಾನರ ಪ್ರಾಬಲ್ಯ ಎಂದು ಇನ್ನು ಮುಂದೆ; ಹೀಗೆ ಜಿನ್ನಾಸಾಹೇಬರು ಗಾಳಿಬಿಟ್ಟಂತೆ ತಮ್ಮ ಮನಃಪಟವನ್ನು ಹಾರಿಸುತ್ತಿದ್ದಾರೆ. ಹೀಗಿರುವಾಗ ಇವರೊಡನೆ ಮಾತುಕತೆ ಇಲ್ಲವೆ ಸಂಧಾನ ಶಕ್ಯವಾಗಬಹುದೆ? 'ನಮ್ಮ ಧ್ಯೇಯಗಳನ್ನೂ ಸ್ಥಾನಮಾನಗಳನ್ನೂ ನೀವು ಮೊದಲು ಒಪ್ಪಿಕೊಂಡರೆ ನಾನು ನಿಮ್ಮೊಡನೆ ಮಾತು-ಕತೆಗೆ ಮುಂದಾಗುವೆ' ಎಂಬ ಜಿನ್ನಾಸಾಹೇಬರ ವಿಪರ್ಯಸ್ತತರ್ಕವೆ ಅವರ ಅನಿಶ್ಚಿತತೆಯನ್ನು ಸೂಚಿಸುತ್ತಿದೆ. ಲಾಹೋರದಲ್ಲಿ ನೆರೆದ ಮುಸ್ಲಿಂ ಲೀಗದ ಅಧಿವೇಶನದಲ್ಲಿ ಹಿಂದುಸ್ಥಾನವನ್ನು ಹಿಂದು-ಮುಸಲ್ಮಾನರಲ್ಲಿ ಹಂಚುವುದೆ ಯೋಗ್ಯ ಮತ್ತು ತಮ್ಮ ಧ್ಯೇಯ ಎಂದು ಮುಸಲ್ಮಾನರು ಸಾರಿದ್ದಾರೆ! ಕೂಸು ತನ್ನದು, ತನ್ನದು ಎಂದು ಕಡಿದಾಡುವ ಇಬ್ಬರು ತಾಯಂದಿರಲ್ಲಿ ಕೂಸನ್ನು ಸರಿಯಾಗಿ ಕಡಿದು ಹಂಚುವ ನಿರ್ಣಯವನ್ನು ಒಪ್ಪಿಕೊಂಡ ತಾಯಿಗೆ ಮುಸ್ಲಿಂ ಲೀಗನ್ನು ಶ್ರೀ. ರಾಜಗೋಪಾಲಾಚಾರಿಯರು ಹೋಲಿಸಿದ್ದು ಸಂದರ್ಭಕ್ಕೆ ಅತ್ಯಂತ ಸಮಂಜಸವೆಂದೇ ಹೇಳಬಹುದಲ್ಲವೆ?

ಯಾರಿಗೆ ಬೇಕಾಗಿದೆ?

ಹಿಂದು-ಮುಸಲ್ಮಾನರು ಹಿಂದುಸ್ಥಾನದಲ್ಲಿ ಒಂದಕ್ಕೊಂದು ಹೊಂದದ ಜನಾಂಗಗಳೆಂದೂ ಆದಕಾರಣ ದೇಶವನ್ನು ಇವೆರಡು ಜನಾಂಗಗಳಲ್ಲಿ ವಿಭಾಗಿಸುವುದಗತ್ಯವೆಂದೂ ಜೀನಾಸಾಹೇಬರ ನೇತೃತ್ವದಲ್ಲಿ ಮುಸ್ಲಿಂ ಲೀಗು ಅಭಿಪ್ರಾಯಪಟ್ಟಿದೆ. ಹಿಂದುಸ್ಥಾನದ ಜಾತಿಸಮಸ್ಯೆಯನ್ನು ಬಿಡಿಸಲು ಅದೊಂದೇ ಉಪಾಯವೆಂದೂ ಅದನ್ನು ಮೊದಲು ಕಂಡುಹಿಡಿದು ತೋರಿಸಿದ ಧೈರ್ಯ ತಮ್ಮದೆಂದೂ ಜಿನ್ನಾಸಾಹೇಬರಿಗೆ ಅಭಿಮಾನವಿದೆ! ಆದರೆ ಬ್ಯಾರಿಸ್ಟರ್ ಜಿನ್ನಾ ಅವರ ಮಾತಿಗೆ ಮರುಳಾದ, ಇಲ್ಲವೆ ಸ್ವತಂತ್ರ ವಿಚಾರಶಕ್ತಿ ಇಲ್ಲದ, ಇಲ್ಲವೆ ಕೇವಲ ಜಾತಿ ದುರಭಿಮಾನಪ್ರೇರಿತ ಕೆಲವು ಮುಸಲ್ಮಾನರನ್ನು ಬಿಟ್ಟರೆ, ಬೇರೆ ಯಾರಿಗೂ ಈ ವಿಭಾಗ ಯೋಜನೆಯು ಅಭಿಮತವಿಲ್ಲ. ಇಷ್ಟೇಕೆ! ಎಲ್ಲರೂ ರಾಷ್ಟ್ರದೃಷ್ಟಿಯಿಂದ ಅದು ದೇಶದ ಪ್ರಗತಿಗೆ ವಿಘಾತುಕವಾಗಿದೆ ಎಂದೇ ಸ್ಪಷ್ಟವಾಗಿ ಹೇಳಿದ್ದಾರೆ. ಮುಸ್ಲಿಂಲೀಗಿನೊಳಗಿನ ಕೆಲವು ಪ್ರಮುಖರು, ಲೀಗಿನ ಹೊರಗಿದ್ದ ಎಲ್ಲ ಮುಸಲ್ಮಾನ ಮುಂದಾಳುಗಳು, ಪ್ರಾಗತಿಕ ಪಕ್ಷದವರು, ಹಿಂದುಸ್ಥಾನದ ಎಲ್ಲ ಬ್ರಿಟಿಶ ಪತ್ರಿಕೆಗಳು——ಇವರೆಲ್ಲರೂ ಈ ಯೋಜನೆಯನ್ನು ನಿಷೇಧಿಸಿದ್ದಾರೆ. ಕಳೆದ ತಿಂಗಳ ಪಾರ್ಲಮೆಂಟಿನಲ್ಲಿ ಚರ್ಚೆಯಾದಾಗ ಭಾರತ-ಮಂತ್ರಿಗಳಾದ ಲಾರ್ಡ ಝೆಟ್‌ಲಂಡರೂ, ಆ ಚರ್ಚೆಯ ವಿಷಯವಾಗಿ ಬರೆಯುವಾಗ ಲಂಡನ್ ಟೈಮ್ಸ ಪತ್ರಿಕೆಯೂ ಈ ಯೋಜನೆ

ಯನ್ನು ಖಂಡಿಸಿದ್ದಾರೆ. ಹಿಂದು-ಮಹಾಸಭೆ ಮತ್ತು ಕಾಂಗ್ರೆಸ್ ಸಂಸ್ಥೆಗಳು ತಂತಮ್ಮ ದೃಷ್ಟಿಯಿಂದ ಇದನ್ನು ಪ್ರತಿಭಟಿಸಿರುವುವು. ಹೀಗಿರುವಾಗ ಈ ಯೋಜನೆ ಯಾರಿಗೆ ಬೇಕಾಗಿದೆ?

ಗತಿಗಾಣದೆ ಮತಿಗೆಟ್ಟಂತೆ

ಯಾರಿಗೆ ಬೇಕಾಗಿದೆ— ಎಂಬ ಪ್ರಶ್ನೆಗೆ ಜಿನಾಸಾಹೇಬರೂ ಮುಷ್ಟಿಮಾತ್ರರಾದ ಅವರ ಅನುಯಾಯಿಗಳೂ ಉತ್ತರವನ್ನು ಕೊಡಬಹುದು. ಆದರೆ ಅದಕ್ಕಿಂತ ಮಹತ್ವದ ಪ್ರಶ್ನೆ ಎಂದರೆ **ಯಾಕೆ ಬೇಕಾಗಿದೆ?**—ಎಂಬುದು. ಹಿಂದುಗಳೂ ಮುಸಲ್ಮಾನರೂ ಪರಸ್ಪರ ವಿರೋಧಕ ಧರ್ಮಗಳ ಅನುಯಾಯಿಗಳೆಂದು ಹೇಳಿದರೆ, ಕ್ರೈಸ್ತಮತೀಯರೂ ಹಿಂದುಗಳೂ ಪರಸ್ಪರ ವಿರೋಧಕರೆಂದೇ ಹೇಳಬಹುದಲ್ಲವೆ? ಅಸ್ಪೃಶ್ಯರೂ ಅದೇ ವರ್ಗದಲ್ಲಿ ಯಾಕೆ ಸೇರಬಾರದು! ಹಾಗಾದರೆ ಮುಸಲ್ಮಾನರಂತೆ ಕ್ರೈಸ್ತರಿಗೂ ಅಸ್ಪೃಶ್ಯರಿಗೂ ದೇಶದ ಒಂದೊಂದು ತುಣುಕನ್ನು ಯಾಕೆ ಕೊಡಬಾರದು? ಇವರಿಬ್ಬರಿಗಿಂತ ಮುಸಲ್ಮಾನರ ಸಂಖ್ಯೆ ತೀರ ದೊಡ್ಡದಿದೆ ಎಂದು ಜಿನಾಸಾಹೇಬರಿಗೆ ಹೇಳುವ ಅಧಿಕಾರವಿಲ್ಲ. ಯಾಕೆಂದರೆ, ಸಂಖ್ಯೆಗನುಸರಿಸಿ ಅಧಿಕಾರವನ್ನು ಒಪ್ಪಿಕೊಳ್ಳುವುದಾದರೆ ಹಿಂದು ಜನರ ಪಾಲು ತೀರ ದೊಡ್ಡದಾಗುವುದು, ಅದು ಸಾಹೇಬರಿಗೆ ಸಮ್ಮತವಿಲ್ಲ! ಇದಲ್ಲದೆ ಧರ್ಮಕ್ಕನುಸರಿಸಿ ದೇಶವನ್ನು ವಿಭಾಗಿಸುವಾಗ ಬ್ಯಾರಿಸ್ಟರ ಜಿನಾ ಇವರು ಇತಿಹಾಸವನ್ನು—ವಿಶೇಷವಾಗಿ ಭಾರತದ ಇತಿಹಾಸವನ್ನು—ಮರೆತಿದ್ದಾರೆ. ರಾಷ್ಟ್ರ ಬೇರೆ, ಜನಾಂಗ ಬೇರೆ. ಭಾಷೆ-ಧರ್ಮ-ಜನಾಂಗ ಇವು ಪರಸ್ಪರ ಭಿನ್ನವಾಗಿಯೂ ಒಂದೇ ರಾಷ್ಟ್ರದಲ್ಲಿ ಕೂಡಿರುವ ಉದಾಹರಣೆಗಳಿವೆ; ಇಲ್ಲವಾದರೆ ಮಾನವಪ್ರಪಂಚ ಬೆಳೆಯುವುದೆ ಸಾಧ್ಯವಿರುತ್ತಿರಲಿಲ್ಲ. ಕಳೆದ ನೂರು ವರ್ಷಗಳಿಂದ ರಾಷ್ಟ್ರೀಯತಾಭಾವನೆ ಬೆಳೆಯುತ್ತಲಿದೆ; ಇಂದಿನ ಜಗತ್ತಿನಲ್ಲಿ ಇಡಿಯ ಹಿಂದುಸ್ಥಾನವು ಒಂದೇ ಒಂದು ರಾಷ್ಟ್ರವಾದರೆ ಅದಕ್ಕೆ ಉಳಿಯುವ, ಬೆಳೆಯುವ ಸಾಮರ್ಥ್ಯ ಬರುವುದು. ಸದ್ಯಕ್ಕೆ ಹಿಟ್ಲರ ಹೋಮಕುಂಡದಲ್ಲಿ ಸುಡುತ್ತಲಿರುವ ಸಣ್ಣ ರಾಷ್ಟ್ರಗಳೇ ಇದಕ್ಕೆ ಸಾಕ್ಷಿ. ಒಂದು ವೇಳೆ ಹಿಂದುಗಳೂ ಮುಸಲ್ಮಾನರೂ ಎಂದಿಗೂ ಪರಸ್ಪರ ಹೊಂದದ ಜನಾಂಗಗಳಾದದ್ದೆ ನಿಜವಿದ್ದರೂ ಮೇಲಿನ ಕಾರಣಗಳಿಗಾಗಿ ಅವು ಒಂದುಗೂಡುವುದಗತ್ಯವಿದೆ. ಈ ಐಕ್ಯಸಾಧನೆ ಕೆಲವು ವರ್ಷಗಳ ಮುಂಚೆ ಜಿನಾಸಾಹೇಬರಿಗೆ ಬೇಡವಾಗಿದ್ದಿಲ್ಲ. ಆದರೆ ಇಂದು ಆ ಐಕ್ಯಸಾಧನೆ ತಮ್ಮಿಂದ ಶಕ್ಯವಾಗದ್ದಕ್ಕಾಗಿ, ಗತಿಗಾಣದಂತಾಗಿ 'ಐಕ್ಯವೇ ಅಗತ್ಯವಿಲ್ಲ, ವಿಭಾಗವೇ ಸರಿಯಾದುದು' ಎಂದು ಹತಾಶೆಯ ಹಂಬಲವನ್ನೆ ತಪ್ಪಾಗಿ ತತ್ತ್ವವೆಂದು ತಿಳಿದಿದ್ದಾರೆ!

ಧರ್ಮ ಮತ್ತು ರಾಜಕೀಯ ಜೀವನ

ಹಿಂದು-ಮುಸಲ್ಮಾನರ ಐಕ್ಯವಾಗದ್ದಕ್ಕೆ ಧರ್ಮವೂ ಕಾರಣವಲ್ಲ, ರಾಜಕೀಯ ಜೀವನವೂ ಕಾರಣವಲ್ಲ ಎಂಬುದು ಸೂಕ್ಷ್ಮವಾಗಿ ವಿಚಾರ ಮಾಡಿದಲ್ಲಿ ತಿಳಿದುಬರುವುದು. ಒಬ್ಬರ ಧರ್ಮವನ್ನು ಒಬ್ಬರು ಹೀಯಾಳಿಸಿದರೆ ನಿತ್ಯಜೀವನದಲ್ಲಿ ವಿರೋಧಬರುವುದು; ಅಂತಹ ಚಟುವಟಿಕೆಗಳು **ಸಾಂಘಿಕವಾಗಿಯಾಗಲಿ ಸಾರ್ವಜನಿಕವಾಗಿಯಾಗಲಿ** ಇಂದಿಗೂ ಹಿಂದುಸ್ಥಾನದಲ್ಲಿ ನಡೆದಿಲ್ಲ. ಅದರಂತೆಯೆ ರಾಜಕೀಯ ಜೀವನದಲ್ಲೂ ವಿರೋಧವಿಲ್ಲ; ಜಿನಾಸಾಹೇಬರಿಗೂ ಜವಾಹರರಂತೆ ಹಿಂದುಸ್ಥಾನದ ಸ್ವಾತಂತ್ರ್ಯವೇ ಧ್ಯೇಯವಾಗಿದೆ. ಹಾಗಾದರೆ ಹಿಂದು-ಮುಸಲ್ಮಾನರಲ್ಲಿ ಐಕ್ಯವಾಗದ್ದಕ್ಕೆ ಕಾರಣವೇನು? ನಿಜವಾಗಿ ನೋಡಿದರೆ ಅನೈಕ್ಯ (= ವಿರೋಧ) ಇದೆ, ಇರಬೇಕಾಗಿದೆ ಎಂಬ ಕಲ್ಪನೆಯೆ ಕಾರಣ. ಆ ಕಲ್ಪನೆ ಅಳಿಯುವ ವರೆಗೆ, ಇದ್ದ ಐಕ್ಯದ ಅರಿವಾಗುವಂತಿಲ್ಲ; ಅದು ಕಲ್ಪನೆಯಾದುದರಿಂದ ಅಳಿಯುವುದೂ ಸುಲಭವಲ್ಲ. ಸ್ಥೂಲದೃಷ್ಟಿಯಿಂದ ಹೇಳುವುದಾದರೆ ದೇಶದ ಆಡಳಿತದಲ್ಲಿ (ವಿಶೇಷವಾಗಿ ಅಧಿಕಾರಸ್ಥಾನಗಳಲ್ಲಿ) ನಾಕಷ್ಟು ಅವಕಾಶ ಮೊದಲು ಮುಸಲ್ಮಾನರಿಗೆ ದೊರೆಯಲಿಲ್ಲ; ಅದಕ್ಕೆ ಅವರು ಮೊದಲು ಶಿಕ್ಷಣದಲ್ಲಿ ಹಿಂದುಳಿದುದೆ ಕಾರಣ. ಆ ಕಾರಣಕ್ಕೆ ಮಹತ್ತ್ವಕೊಟ್ಟು ಅವರಲ್ಲಿ ಶಿಕ್ಷಣಪ್ರಸಾರವನ್ನು ಮಾಡುವುದನ್ನುಳಿದು, ಶಿಕ್ಷಣವಿರಲಿ ಇಲ್ಲದಿರಲಿ ಇಂತಿಷ್ಟು ಪ್ರಮಾಣ ಇವರಿಗಿರಬೇಕೆಂಬ, ಮುಂದೆ ಜಾತಿಮೂಲಕ ಮತದಾರ ಸಂಘಗಳ ರೂಢಿಯನ್ನು ಹಾಕಿ ಸರಕಾರವೆ ಜಾತಿಭಾವನೆಯನ್ನು ಮೊದಲು ಹುಟ್ಟಿಸಿತೆನ್ನಬಹುದು. ಹೊಲಸಿಗಾಗಿ ಹುಳು ನೆರೆಯುವಂತೆ ಈ ಘಾತಕಭಾವನೆಗಾಗಿ ಸ್ವಾರ್ಥಸಾಧುಗಳು ಮುಂದಾಗಿ ಇಂದಿನ ಶೋಚನೀಯ ಸ್ಥಿತಿಗೆ ಕಾರಣರಾಗಿದ್ದಾರೆ. ಮುಸ್ಲಿಂ ಲೀಗ್ ಮತ್ತು ಹಿಂದು ಮಹಾಸಭೆ ಇವೆರಡೂ ವಿಷಗಳೆ. ಇದರಲ್ಲಿ ಶರೀರದ ವಿಷ ಯಾವುದು ಔಷಧಿಯ ವಿಷ ಯಾವುದು ಎಂಬುದನ್ನು ಎರಡೂ ಸಂಸ್ಥೆಗಳವರು ತಮತಮಗೆ ಅನುಕೂಲವಾಗುವಂತೆ ಹೇಳುತ್ತಾರೆ.

ಝೆಟ್‌ಲಂಡರ ಜಂಭ

ಜಾತಿಸಮಸ್ಯೆಯನ್ನು ಬಿಡಿಸಬೇಕೆನುವವರು ಮೇಲಿನ ನಿಷ್ಪಕ್ಷಪಾತ ವಿಚಾರಸರಣಿಯನ್ನು ಲಕ್ಷ್ಯದಲ್ಲಿಡಬೇಕಾಗುವುದು. 'ಹಿಂದು-ಮುಸಲ್ಮಾನರಲ್ಲಿ ಐಕ್ಯಘಟಿಸುವಂತೆ ಬೇಕಾದ್ದನ್ನು ಮಾಡಲು ನಾನು ಸಿದ್ಧನಿರುವೆ. ಆದರೆ ನನ್ನಿಂದಲೆ ನೀಗುವಂತಿಲ್ಲ. ಕಾಂಗ್ರೆಸಿಗಾಗಿ ಮುಸಲ್ಮಾನರ ಅವಿಶ್ವಾಸ ಬೆಳೆದುದರಿಂದ ಮೊದಲು ಆ ಅವಿಶ್ವಾಸದ ವಾತಾವರಣವನ್ನು ಶುದ್ಧಗೊಳಿಸುವ ಹೊಣೆಗಾರಿಕೆ ಕಾಂಗ್ರೆಸಿನದು' ಎಂದು ಲಾರ್ಡ ಝೆಟ್ಲಂಡರು ಮೊನ್ನೆ ಮೊನ್ನೆ ಪಾರ್ಲಮೆಂಟಿನಲ್ಲಿ ಹೇಳಿದ್ದಾರೆ. ಅವಿಶ್ವಾಸಕ್ಕೆ ಮೂಲಕಾರಣ ತಾವಾಗಿ ಈಗ ಇಂತಹ ಬುದ್ಧಿವಾದ ಹೇಳಬೇಕೆಂಬರೆ ಜಂಭದ ವೃತ್ತಿಯೆ ಸರಿ. ಹಾಗೆ ನೋಡಿದರೆ ಕೇವಲ ರಾಷ್ಟ್ರೀಯ ದೃಷ್ಟಿಯಿಂದಲೆ ಸಂಘಟನೆಯನ್ನು ಮಾಡುತ್ತಲಿದ್ದ ಕಾಂಗ್ರೆಸ್ಸು ಅಂದಿನಿಂದ ಇಂದಿನವರೆಗೆ ಜಾತೀಯ ಅವಿಶ್ವಾಸವನ್ನು ಕಡಮೆಮಾಡುತ್ತಲೇ ಬಂದಿದೆ ಎಂದು ಧೈರ್ಯವಾಗಿ ಹೇಳಬಹುದು. ಇಂದು ಕಾಂಗ್ರೆಸ್ಸು ಮುಸಲ್ಮಾನರೊಡನೆ ವಿಶಿಷ್ಟ ರೀತಿಯಿಂದ ವರ್ತಿಸಿದರ ಹಿಂದೆ ಬ್ರಿಟಿಶ ಸರಕಾರವು ಮಾಡಿದ

ತಪ್ಪನ್ನೆ ಕಾಂಗ್ರೆಸೂ ಮಾಡಿದಂತಾಗುವುದು. ವ್ಯಕ್ತಿಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಇವೆರಡು ತತ್ತ್ವಗಳನ್ನು ಯಾರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವರೊ ಅವರಿಗೆ ಕಾಂಗ್ರೆಸಿನ ಧೋರಣೆಯು ಸರಿ ಎನಿಸುವುದರಲ್ಲಿ ಸಂದೇಹವಿಲ್ಲ. ಆದರೆ ಹಿಂದುಸ್ಥಾನದ ವಿಷಯದಲ್ಲಿ ವ್ಯಕ್ತಿಸ್ವಾತಂತ್ರ್ಯದ ಇಲ್ಲವೆ ಪ್ರಜಾಪ್ರಭುತ್ವದ ತತ್ತ್ವವನ್ನು ಒಪ್ಪಲು ಭಾರತಮಂತ್ರಿಗಳಿಗೆ ಧೈರ್ಯವಿದೆ ಎಂಬುದು ಅವರ ಮೊನ್ನೆಯ ಹೇಳಿಕೆಯಿಂದ ಸ್ಪಷ್ಟವಾಗುವುದು. ಪರಸ್ಪರವಿರೋಧಕವಾದ ಧ್ಯೇಯಗಳುಳ್ಳ ರಾಜಕೀಯ ಪಕ್ಷಗಳಿದ್ದ ದೇಶವು ಪ್ರಜಾಪ್ರಭುತ್ವಕ್ಕೆ ಅರ್ಹವೆನಿಸಿದಾಗ ಕಾಂಗ್ರೆಸು-ಮುಸ್ಲಿಂಲೀಗ-ಸಂಸ್ಥಾನಿಕ ಎಂಬ ಪಕ್ಷಗಳುಳ್ಳ ದೇಶವು ಯಾಕೆ ಅನರ್ಹವಾಗಬೇಕು ?

ಕಾಂಗ್ರೆಸಿನ ನಿರ್ಣಯ

ಹೋದ ತಿಂಗಳು ವರ್ಧಾದಲ್ಲಿ ಸೇರಿದ ವರ್ಕಿಂಗ್‌ಕಮಿಟಿಯು ಇಂತಹ ವಿಚಾರಗಳನ್ನೆ ಮುಂದೆಮಾಡಿ ತನ್ನ ಧೋರಣೆಯನ್ನು ಬದಲಾಯಿಸಿಲ್ಲ; ಇದು ನಿಜವಾಗಿಯೂ ಅಭಿನಂದನೀಯವಾದುದು. ಈಗ ಕಾಂಗ್ರೆಸಿಗೆ ಶಾಸನಭಂಗವೊಂದೇ ಉಪಾಯ ಉಳಿದಿದೆ ಎಂದೂ ಅಂತಹ ಚಳವಳದಿಂದ ದೇಶಕ್ಕೆ ಅಪಾರ ಹಾನಿಯಾಗುವುದೆಂದೂ ಎಲ್ಲರೂ ಹಿರಿತನವನ್ನು ನಡೆಯಿಸಿದ್ದಾರೆ. ಆದರೆ ಆ ಮಾತು ಕಾಂಗ್ರೆಸಿಗೆ ತಿಳಿದಿಲ್ಲವೆ? ಎಲ್ಲರಿಗಿಂತಲೂ ಹೆಚ್ಚಾಗಿ ಕಾಂಗ್ರೆಸಿಗೆ ಆ ಮನವರಿಕೆ ಇದೆ; ದೇಶದಲ್ಲಿ ಎಲ್ಲಕ್ಕೂ ಮಿಗಿಲಾದ ರಾಜಕೀಯ ಪಕ್ಷವೆಂಬ ಹೊಣೆಗಾರಿಕೆಯೂ ಕಾಂಗ್ರೆಸಿಗಿದೆ; ಆದರೇನು ? ಮೊದಲು ವಿಷವನ್ನು ಚುಚ್ಚಿ ತರುವಾಯ ಅದನ್ನು ತೆಗೆಯಬೇಕೆನ್ನುವ ಡಾಕ್ಟರನನ್ನು ಪೂರ್ತಿಯಾಗಿ ಬಿಟ್ಟುಕೊಡದೆ ಉಪಾಯವಿಲ್ಲ ಎಂದು ಕಾಂಗ್ರೆಸು ಹೇಳುವುದು. ಮೈಯಲ್ಲಿ ಚುಚ್ಚಿದ ವಿಷದ ವಿಕಾರಗಳೇ ಈ ಜಾತೀಯಸಂಸ್ಥೆಗಳು ಎಂದೂ ಕಾಂಗ್ರೆಸಿನ ಹೇಳಿಕೆ. ಆದರೆ ತಾನು ಡಾಕ್ಟರನೆಂಬ ಅಧಿಕಾರದಿಂದ ರೋಗಿಗೆ ಹುಚ್ಚು ಹಿಡಿದಿದೆ ಎಂಬ ಅಪಪ್ರಚಾರ ನಡೆಯಿಸಿದಂತಿದೆ ಸರಕಾರವು. ನಿಜವಾಗಿ ನೋಡಿದರೆ ಎಲ್ಲ ಪಕ್ಷದವರಿಗೂ ತಾವು ಆಡುವ ಮಾತಿನಲ್ಲಿ ತಮ್ಮದೇ ವಿಶ್ವಾಸವಿದ್ದರೆ ಶಾಸನಭಂಗವೂ ಬೇಕಿಲ್ಲ, ಶಾಸನದಂಗೆಯೂ ಬೇಕಿಲ್ಲ.

ಸೊಲ್ಲಾಪುರದಲ್ಲಿ ಕನ್ನಡ ಸಮ್ಮೇಳನಗಳು

ಸೊಲ್ಲಾಪುರವು ಒಂದು ಕಾಲದಲ್ಲಿ ಕನ್ನಡಿಗರ ಸಂಸ್ಕೃತಿಯ ಕೇಂದ್ರವಾಗಿದ್ದಿತು. ರಾಜಕೀಯ ಮಹತ್ತ್ವ ಅದಕ್ಕಿದ್ದಂತೆ ಧಾರ್ಮಿಕ ಮಹತ್ತ್ವವೂ ಐತಿಹಾಸಿಕ ಕಾಲದಲ್ಲಿ ಸೊಲ್ಲಾಪುರಕ್ಕೆ ಇದ್ದಿತು. ಕನ್ನಡನಾಡಿನ ಹಲವು ಜನ ಶಿವಶರಣರ ಲೀಲಾಭೂಮಿ 'ಸೊನ್ನಲಾಪುರ' ವೆ. ಆದರೆ ಕನ್ನಡಿಗರ ವಿಪರೀತ ದೈವ ಬಳ್ಳಾರಿ ಜಿಲ್ಲೆಯನ್ನು ತೆಲುಗರಿಗೆ ಒಪ್ಪಿಸಿರುವಂತೆ ಸೊಲ್ಲಾಪುರ ಜಿಲ್ಲೆಯನ್ನು ಮರಾಟಿಗರಿಗೆ ಒಪ್ಪಿಸಿಕೊಟ್ಟಿದೆ. ಕನ್ನಡನಾಡಿಗೆ ಸೇರಿದುದು ಅಹುದೋ ಅಲ್ಲವೊ ಎಂದು ಇಂದು ಸಂಶಯಪಡುವಂತಹ ಸ್ಥಿತಿಯಲ್ಲಿರುವ 'ಪಂಢರಪುರ' ವು ಎಂದರೆ ಕನ್ನಡಿಗರ ಪಂಡರಿಗೆಯು ಕರ್ನಾಟಕಕ್ಕೆ ಸೇರಿದುದೆಂಬುದನ್ನು ಕ್ರಿ. ಶ. ೧೩ನೆಯ ಶತಮಾನದಲ್ಲಿ ಬದುಕಿ ಬಾಳಿದ ಮಹಾರಾಷ್ಟ್ರ ಕವಿ 'ಜ್ಞಾನೇಶ್ವರ' ನೆ ಒಪ್ಪಿಕೊಂಡು ಬಿಟ್ಟಿದ್ದಾನೆ. ಈಗಲೂ ಸೊಲ್ಲಾಪುರ ಜಿಲ್ಲೆಯ ಹಲವು ಭಾಗದಲ್ಲಿ ಜನಸಾಮಾನ್ಯರ ಭಾಷೆ ಕನ್ನಡ. ಮುಂದುವರಿದ ಜನರ ಭಾಷೆ ಮಹಾರಾಷ್ಟ್ರವಾಗಿದ್ದರೂ ಅವರ ವೇಷ-ಭೂಷಣ ಮನೆತನತನದ ರೀತಿ-ನಡತೆ ಇವೆಲ್ಲ ಕನ್ನಡಿಗರ ತೆರದುವೆ ಆಗಿವೆ. ಎಂತಲೆ ಸೊಲ್ಲಾಪುರದ ಮರಾಟಿಗರನ್ನು ಮಿಕ್ಕ ಮರಾಟಿಗರು ಅಷ್ಟೊಂದು ಆತ್ಮೀಯಭಾವದಿಂದ ನೋಡುತ್ತಿಲ್ಲವಷ್ಟೇ ಅಲ್ಲ, ಅವರ ರೀತಿ-ನಡತೆಗಳ ಬಗೆಗೆ ಅಣಕವಾಡುವರು. ಸದ್ಯದ ಸೊಲ್ಲಾಪುರವು ವ್ಯಾಪಾರದ ಕೇಂದ್ರವಾಗಿದ್ದುದರಿಂದ, ಬೇರೆ ಬೇರೆ ಪ್ರಾಂತಗಳಿಂದ ಅಲ್ಲಿ ಬಂದು ನೆಲಸಿದ ಜನಸಂಖ್ಯೆ ಹೆಚ್ಚಾಗಿದೆ. ಆದುದರಿಂದಲೆ ಸೊಲ್ಲಾಪುರದ ಪೇಟೆಯ ಭಾಷೆಯ ಸ್ಥಾನವನ್ನು ಕನ್ನಡವು ಕಳೆದುಕೊಂಡಿದೆ. ಆದರೆ ಸೊಲ್ಲಾಪುರನಗರದ ಮೂಲ ನಿವಾಸಿಗಳನ್ನಷ್ಟೆ ಬೇರೆಮಾಡಿ ನೋಡಿದರೆ ಅವರೆಲ್ಲ ಕನ್ನಡಿಗರೆ ಇರುವರೆಂಬುದು ಸ್ಪಷ್ಟವಾಗಿ ಕಂಡುಬಾರದೇ ಇರದು. ಇಷ್ಟೆ ಅಲ್ಲದೆ ಸೊಲ್ಲಾಪುರದ ಸುತ್ತುಮುತ್ತಣ ಹಳ್ಳಿಗಳಿಗೆ ಹೋಗಿ ನೋಡಿದರೆ ಅವೆಲ್ಲ ಅಚ್ಚಕನ್ನಡದುವಾಗಿರುವುವು. ವಸ್ತುಸ್ಥಿತಿಯಿದಾದರೂ ಕನ್ನಡ ಭಾಷೆಯ ಚಳವಳಿಯ ಕೂಗು ಬಹುಕಾಲದವರೆಗೆ ಸೊಲ್ಲಾಪುರ ಜಿಲ್ಲೆಯ ಕನ್ನಡಿಗರ ಕಿವಿಗೆ ಸೋಂಕಿರಲಿಲ್ಲ. ಕರ್ನಾಟಕ ಏಕೀಕರಣದ ಕಲ್ಪನೆ ಅವರ ಬಗೆಯಲ್ಲಿ ಸುಳಿದಿರಲಿಲ್ಲ. ಹೀಗಾಗುವುದಕ್ಕೆ ಕಾರಣರೆಂದರೆ ಅಲ್ಲಿಯ ಸುಶಿಕ್ಷಿತರು. ಅವರೆಲ್ಲ ಮರಾಟಿಭಾಷೆಯನ್ನೇ ಕಲಿತವರಾದುದರಿಂದ ಕನ್ನಡಿಗರ ಅಭಿಪ್ರಾಯವೆ ಅವರಿಗೆ ಗೊತ್ತಾಗುತ್ತಿರಲಿಲ್ಲ. ಇಷ್ಟೇ ಅಲ್ಲದೆ ಮಹಾರಾಷ್ಟ್ರೀಯರ ಸುಸಂಘಟಿತವಾದ ಚಳವಳಿಯ ಪ್ರಭಾವದ ಕೆಳಗೆ ಅವರು ಸಿಕ್ಕಿಕೊಂಡು ಸ್ವಸ್ವರೂಪವನ್ನೆ ಮರೆತುಬಿಟ್ಟಿದ್ದರು. ಈಗ ಬ್ಯಾರಿಸ್ಟರ್ ಸರದಾರ್, ಶ್ರೀ. ಕಡಾದಿ ಮೊದಲಾದ ಕನ್ನಡ ಮುಂದಾಳುಗಳ ಸತತ ಪ್ರಯತ್ನದಿಂದ ಕನ್ನಡತನ ಅಲ್ಲಿಯೂ ಜಾಗೃತಗೊಂಡಿದೆ. ಆ ಜಾಗೃತಿಯ ಗುರುತೇ ಮೊನ್ನೆ ಮೊನ್ನೆ ಸೊಲ್ಲಾಪುರದಲ್ಲಿ ಸೇರಿದ ಕನ್ನಡ ಸಮ್ಮೇಲನ-ಪರಿಷತ್ತುಗಳು. ಶ್ರೀ. ಮುದುವೀಡು ಕೃಷ್ಣರಾಯರ ನೇತೃತ್ವದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ, ಡಾ. ನಾಗನಗೌಡರ ಅಧ್ಯಕ್ಷತೆಯಲ್ಲಿ ಏಕೀಕರಣ ಪರಿಷತ್ತು, ಡಾ. ಕೃಷ್ಣಾಬಾಯಿಯವರ ಸಭಾಧಿಪತ್ಯದಲ್ಲಿ ಕನ್ನಡಿತಿಯರ ಸಮ್ಮೇಳನ ಇವೆಲ್ಲ ಯಶಸ್ವಿಯಾಗಿ ನೆರವೇರಿದುವು. ಹೊಸ ಜನಗಣನೆ ಬೇಗನೆ ಆಗಲಿದೆ. ಈಗ ಕನ್ನಡದ ಗಡಿಗಳಲ್ಲಿ ಪ್ರಚಂಡವಾದ ಪ್ರಚಾರಕಾರ್ಯ ನಡೆಯಬೇಕಾಗಿದೆ. ಆ ಕಾರ್ಯವನ್ನು ಈ ಸಮ್ಮೇಳನ ಪರಿಷತ್ತುಗಳ ಮೂಲಕ ಪ್ರಾರಂಭಿಸಿ ಸೊಲ್ಲಾಪುರದ ಕನ್ನಡ ಮುಂದಾಳುಗಳು ಮಿಕ್ಕ ಗಡಿನಾಡಿನ ಕನ್ನಡಿಗರಿಗೆ ಮಾದರಿ ಹಾಕಿಕೊಟ್ಟಿದ್ದಾರೆ. ಅದಕ್ಕಾಗಿ ಬ್ಯಾರಿಸ್ಟರ್ ಸರದಾರ್ ಪ್ರಭೃತಿ ಸೊಲ್ಲಾಪುರದ ಕನ್ನಡಿಗರನ್ನು ನಾವು ಮನಸಾರೆ ಅಭಿನಂದಿಸುತ್ತಿದ್ದೇವೆ.

ಹೊಸದಾಗಿ ಮೈಸೂರ ಯೌವರಾಜ್ಯ ಪಟ್ಟಕ್ಕೆ ಬಂದಿರುವ

ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು

ಪರಿವಿಡಿ ಮೇಲ್ಹೊದಿಕೆಯ ೩ನೆಯ ಪುಟದಲ್ಲಿ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ. ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ ಎಲ್ಲರ ಸಂಪಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಎಂಬ್ರೋಸಿಯಾದಿಂದಲೆ ನನ್ನ ಆರೋಗ್ಯ ಸುಧಾರಿಸಿತು !

ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಹೆಂಗುಸರ ವಿಕಾರಗಳ ಮೇಲೆ ಉತ್ಕೃಷ್ಟವಾದ ಔಷಧಿಯೆಂದು ಪ್ರಸಿದ್ಧಿಯುದ್ದು ಹಲವು ಜನ ಡಾಕ್ಟರರು ಈ ಔಷಧವನ್ನು ಕುರಿತು ಮುಕ್ತ ಕಂಠದಿಂದ ಹೊಗಳಿ ಹಾಡಿರುವರು. ಎಂಬ್ರೋಸಿಯಾದ ನಿಯಮಿತ ಸೇವನೆಯಿಂದ ಅವ್ಯವಸ್ಥಿತವಾಗಿ ಮುಟ್ಟಾಗುವುದು, ಅದರ ಮೂಲಕ ಕೆಳಹೊಟ್ಟೆಯಲ್ಲಿ ಅಸಹನೀಯವಾದ ವೇದನೆಯಾಗುವುದು, ಪ್ರದರ, ಹಿಸ್ಟೇರಿಯಾ, ಹೊಟ್ಟೆ ತೊಳಸುವುದು, ತಲೆನೋಯುವುದು ಮೊದಲಾದ ವಿಕಾರಗಳು ಕೂಡಲೆ ಇಲ್ಲದಂತಾಗುವುವು. ಎಲ್ಲೆಲ್ಲಿಯೂ ಸಿಕ್ಕುವುದು. ಸಿಕ್ಕದಿದ್ದರೆ "ಶ್ರೀ. ರಾಮ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬೈ" ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಹಣಿಗೆ-ಕಸೀದೆ ಕಲಿಯಿರಿ !

ಹೆಣ್ಣುಮಕ್ಕಳಲ್ಲಿ ಹಣಿಗೆ-ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು !

ಅಚ್ಚುಕಟ್ಟುತನದಿಂದ ಅವರ ಚೆಲುವು-ಚೆಂದು ಇಮ್ಮಡಿಗೊಳ್ಳುವವು !!

ಹಣಿಗೆ-ಕಸೀದೆ--ಎಂಬ್ರಾಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು

ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ !

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

Printed by V. Y. Jathar, B. Sc. Karnatak Printing Works, Dwr. Edited and published by M. G. Patil at Jayanti Office, Dharwar.